ಭಗವಾನ್ ಶ್ರೀವೇದವ್ಯಾಸ ಪ್ರಣೀತ

ಮಹಾಭಾರತ

ಸಮಗ್ರ ಶ್ಲೋಕಗಳ ಕನ್ನಡಾನುವಾದ

ಶ್ರೀಮದಾನಂದತೀರ್ಥಭಗವತ್ಪಾದರ ತಾತ್ಪರ್ಯನಿರ್ಣಯ ಹಾಗೂ

ಶ್ರೀವಾದಿರಾಜಗುರುಸಾರ್ವಭೌಮರ ಲಕ್ಷ್ಮಾಲಂಕಾರದೊಂದಿಗೆ

ಭಾಗ–33

ಅನುಶಾಸನಪರ್ವ

ಪ್ರಕಾಶಕರು:

ತತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

॥ ಶ್ರೀರಾಮಶ್ರೀ ॥

॥ ಶ್ರೀವೇದವ್ಯಾಸೋ ವಿಜಯತೇ ॥

ಭಗವಾನ್ ಶ್ರೀವೇದವ್ಯಾಸ ಪ್ರಣೀತ

ಮಹಾಭಾರತ

ಭಾಗ-೩೩

ಅನುಶಾಸನಪರ್ವ

ಸಮಗ್ರ ಶ್ಲೋಕಗಳ ಕನ್ನಡಾನುವಾದ

(ಶ್ರೀಮದಾನಂದತೀರ್ಥರ ತಾತ್ಪರ್ಯನಿರ್ಣಯ ಶ್ರೀವಾದಿರಾಜಗುರುಸಾರ್ವಭೌಮರ

ಲಕ್ಷಾಲಂಕಾರದೊಂದಿಗೆ)

ಅನುಗ್ರಹ :

ಪರಮಪೂಜ್ಯ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು

ಶ್ರೀಹೃಷೀಕೇಶತೀರ್ಥಸಂಸ್ಥಾನಂ, ಪಲಿಮಾರು ಮಠ, ಉಡುಪಿ

ಅನುವಾದಕರು :

ವಿದ್ವಾನ್ ಪಿ.ಎಸ್. ಶೇಷಗಿರಿ ಆಚಾರ್ಯ, ಮೈಸೂರು.

ಪ್ರಕಾಶಕರು :

ತತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

ಮಹಾಭಾರತ ಅನುಶಾಸನಪರ್ವ-ಭಾರತತಾತ್ಪರ್ಯನಿರ್ಣಯ- ಲಕ್ಷಾಲಂಕಾರ ಕನ್ನಡಾನುವಾದದ ಸಮಗ್ರ ಯೋಜನೆಯ ಈ ಕೃತಿಯು ತ್ರೈಲೋಕ್ಯಾಚಾರ್ಯ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರಿಂದ ಪ್ರತಿಷ್ಠಿತನಾದ ಉಡುಪಿ ಶ್ರೀಕೃಷ್ಣನ ಸನ್ನಿಧಾನದಲ್ಲಿ ಪರಮಪೂಜ್ಯ ಶ್ರೀ ಶ್ರೀವಿದ್ಯಾಧೀಶತೀರ್ಥ ಶ್ರೀಪಾದರ ದ್ವಿತೀಯ ಪರ್ಯಾಯದ ಶುಭಸಂದರ್ಭದಲ್ಲಿ ಅನೇಕ ಪೀಠಾಧಿಪತಿಗಳ ಮತ್ತು ಸಾಧಕರ ಸಮಕ್ಷಮದಲ್ಲಿ ಅನಾವರಣಗೊಂಡಿತು.

ಅನುಶಾಸನಪರ್ವ - ಭಾಗ ೩೩

© ತತ್ತ್ವಸಂಶೋಧನ ಸಂಸತ್ (ರಿ.), ಪಲಿಮಾರು ಮಠ, ಉಡುಪಿ.

ISBN : 978-93-88813-37-2

ಈ ಗ್ರಂಥವು ಕರ್ನಾಟಕ ಸರ್ಕಾರದ ಆರ್ಥಿಕ ನೆರವಿನಿಂದ ಮುದ್ರಿತವಾಗಿದೆ

ಪುಟಗಳು	-	X + 596 = 606
ಮುದ್ರಿತ ಪ್ರತಿಗಳು	-	1000
ಬೆಲೆ	-	**ರೂ. 500/-**
ಅನುವಾದಕರು	-	ವಿದ್ವಾನ್ ಪಿ.ಎಸ್. ಶೇಷಗಿರಿ ಆಚಾರ್ಯ, ಮೈಸೂರು.
ಪ್ರಕಾಶಕರು	-	ತತ್ತ್ವಸಂಶೋಧನಸಂಸತ್, ಪಲಿಮಾರು ಮಠ, ಉಡುಪಿ.
ಸಂಸ್ಕೃತ ಶ್ಲೋಕ ಲಿಪ್ಯಂತರ	-	ಶ್ರೀ ಸುಬ್ಬಣ್ಣ ಬೆಂಗಳೂರು
ಪುಟ ಸಂಯೋಜನೆ ಮತ್ತು ಅಕ್ಷರ ಜೋಡಣೆ	-	ಎಂ. ಶರತ್ ಚಂದ್ರ, ಪವನ್ ಗ್ರಾಫಿಕ್ಸ್ ಮತ್ತು ಪ್ರಿಂಟರ್ಸ್ ಮೈಸೂರು. ಮೊ : 7899779255
ಮುದ್ರಕರು	-	**ಪವನ್ ಪ್ರಿಂಟರ್ಸ್**, ಚಾಮರಾಜಪೇಟೆ, ಬೆಂಗಳೂರು ಮೊ : 9686489131
ಗ್ರಂಥಪ್ರಾಪ್ತಿ	-	ಪಲಿಮಾರು ಮಠ, ಉಡುಪಿ.



ವಾಸಿಷ್ಠಕೃಷ್ಣ ಮಮ ದೇಹಿ ಕರಾವಲಂಬಮ್



ನವನವಗುಣಸಾಂದ್ರಂ ನೌಮಿ ಮಧ್ವಾಖ್ಯಚಂದ್ರಮ್



ಶ್ರೀಮದ್ವಾದಿರಾಜಕೇಸರಿಣೇ ನಮಃ



ವಿದ್ಯಾಮಾನ್ಯಾನ್ಮನೀನ್ವಮಃ

ವಿಷಯಾನುಕ್ರಮಣಿಕೆ

ಮಹಾಭಾರತ - ಭಾಗ- ೩೩

ಅನುಶಾಸನ ಪರ್ವ

	ಪುಟ ಸಂ.
132. ಶ್ರಾದ್ಧದಲ್ಲಿ ಪಾಂಕ್ತೇಯರ ವಿಚಾರ	1
133. ಶ್ರಾದ್ಧ ವಿಧಿಯಲ್ಲಿ ಅತ್ರಿಗಳ ಅಭಿಪ್ರಾಯ	13
134. ಶ್ರಾದ್ಧದಲ್ಲಿ ಅಗ್ನಿಕರಣಾದಿ ವಿಧಿ	22
135. ಉಪವಾಸಾದಿ ವ್ರತವಿಶೇಷಗಳು	27
136. ಪ್ರತಿಗ್ರಹದ ದೋಷಗಳು	31
137. ಪ್ರಚ್ಛನ ವೇಷದಿಂದ ಬಂದ ಇಂದ್ರನಿಂದ ಯಾತುಧಾನಿಯ ವಿನಾಶ	42
138. ಋಷಿಗಳಿಂದ ಶಪಥ ನಿಮಿತ್ತದಿಂದ ಧರ್ಮೋಪದೇಶ	61
139. ಛತ್ರಿ ಮತ್ತು ಪಾದರಕ್ಷೆಗಳ ಉತ್ಪತ್ತಿ	76
140. ಛತ್ರಿ ಮತ್ತು ಪಾದರಕ್ಷೆಗಳ ದಾನ	82
141. ಶೂದ್ರಧರ್ಮಗಳು, ತ್ರಿವರ್ಣಿಕರ ಸೇವಾ	86
142. ಶೂದ್ರ ಶುಶ್ರೂಷೆಯ ಪ್ರಕಾರ ಕಥನ	100
143. ಶೂದ್ರಶುಶ್ರೂಷಾ	106
144. ಶೂದ್ರ ಶುಶ್ರೂಷಾ	110
145. ಧರ್ಮಿಷ್ಠನಾದ ಶೂದ್ರನಿಗೆ ಕ್ರಮವಾಗಿ ವೈಶ್ಯ-ಕ್ಷತ್ರಿಯ ಧರ್ಮಪ್ರಾಪ್ತಿ	115
146. ಬ್ರಾಹ್ಮಣ ಜನ್ಮ ಪ್ರಾಪ್ತಿ ಮತ್ತು ಅದರ ಅನುಷ್ಠಾನ	122
147. ಶೂದ್ರನ ಬ್ರಹ್ಮಪ್ರಾಪ್ತಿ ಕಥನ	129
148. ನಮಸ್ಕಾರಾರ್ಹರಾದವರ ವಿಷಯದಲ್ಲಿ ಇಂದ್ರ-ಮಾತಲಿಗೆ ಸಂವಾದ	137
149. ತಟಾಕ-ವನಗಳ ನಿರ್ಮಾಣ ಫಲ	140
150. ವೈಶ್ವದೇವ, ಬಲಿಪ್ರದಾನಾದಿ ಗೃಹಸ್ಥಧರ್ಮ	147

151. ದೀಪಾದಿ ದಾನವಿಧಿ 153
152. ದೀಪಾದಿ ದಾನೋಪಯೋಗಿಯಾದ ನಹುಷಾಖ್ಯಾನ ಪ್ರಾರಂಭ 167
153. ನಹುಷನ ಪತನ. ದೀಪಾದಿ ದಾನ ಪುಣ್ಯದಿಂದ ಪುನಃ ಸದ್ಗತಿ ಪ್ರಾಪ್ತಿ 173
154. ಬ್ರಹ್ಮಸ್ವಹರಣ ಫಲ – ಕ್ಷತ್ರಿಯ–ಚಂಡಾಲ ಸಂವಾದ 181
155. ಪುಣ್ಯಫಲಕಥನೋದ್ದೇಶದಿಂದ ಶಕ್ರ–ಗೌತಮ ಸಂವಾದ ಕಥನ 187
156. ಉಪವಾಸದ ಮಹಾತ್ಮೆ 206
157. ದೀರ್ಘಾಯುಷ್ಯ ಮತ್ತು ಅಲ್ಪಾಯುಷ್ಯಕ್ಕೆ ಕಾರಣಗಳ ನಿರೂಪಣೆ 217
158. ಜ್ಯೇಷ್ಠ–ಕನಿಷ್ಠ ವೃತ್ತಿಗಳು 249
159. ಉಪವಾಸವಿಧಿ 254
160. ಉಪವಾಸ ಫಲ 268
161. ಶೌಚ ಪ್ರಕಾರಗಳು 293
162. ದುಷ್ಕರ್ಮ ಫಲವಾದ ನೀಚಯೋನಿಗಳು 298
163. ಅನ್ನದಾನ ಫಲ 321
164. ಅಹಿಂಸೆಯ ಪ್ರಶಂಸೆ 327
165. ಅಹಿಂಸಾ ಪ್ರಕಾರಗಳು 330
166. ಅಹಿಂಸಾದಿಗಳಿಗೆ ಶ್ರೇಯಸ್ತ್ವವನ್ನು ನಿರೂಪಿಸುದುದು 334
167. ಮಾಂಸಭಕ್ಷಣ ಪ್ರಕರಣದ ಉಪಸಂಹಾರ 350
168. ಕೀಟೋಪಾಖ್ಯಾನ ಪ್ರಾರಂಭ 359
169. ಕೀಟಕ್ಕೆ ವ್ಯಾಸರು ಮಾಡಿದ ಅನುಗ್ರಹ 365
170. ಕೀಟದ ಬ್ರಾಹ್ಮಣ ಜನ್ಮ ಪ್ರಾಪ್ತಿ ಮತ್ತು ಸದ್ಗತಿ 371
171. ವ್ಯಾಸ ಮೈತ್ರೇಯರ ಸಂವಾದ 374
172. ವ್ಯಾಸ ಮೈತ್ರೇಯರ ಸಂವಾದ 380
173. ವ್ಯಾಸ ಮೈತ್ರೇಯರ ಸಂವಾದ 383

174. ಪತಿವ್ರತಾ ಧರ್ಮ- ಸುಮನ ಶಾಂಡಿಲಿ ಸಂವಾದ 388

175. ನಾರಾಯಣ ಸರ್ವೋತ್ತಮತ್ವ ಕಥನ 392

176. ಸಾಮೋಪಾಯ ಪ್ರಶಂಸೆ 398

177. ಶ್ರಾದ್ಧ ರಹಸ್ಯ ಮತ್ತು ಧರ್ಮರಹಸ್ಯಗಳು 406

178. ದೇವತೆಗಳಿಂದ ಶ್ರಾದ್ಧಾದಿ ಧರ್ಮೋಪದೇಶ 423

179. ಅಗ್ನ್ಯಾದಿ ದೇವತೆಗಳಿಂದ ಧರ್ಮೋಪದೇಶ 434

180. ಲೋಮಶರಿಂದ ಧರ್ಮೋಪದೇಶ 440

181. ಅರುಂಧತಿ ಮೊದಲಾದವರಿಂದ ಧರ್ಮೋಪದೇಶ 444

182. ಪ್ರಮಥರ ಉಪದೇಶ 452

183. ದಿಗ್ದೇವತೆಗಳಿಂದ ಧರ್ಮೋಪದೇಶ 454

184. ಮಹೇಶ್ವರನ ಧರ್ಮೋಪದೇಶ 458

185. ಸ್ಕಂದನ ಉಪದೇಶ ಮತ್ತು ವಿಷ್ಣುವಿನಿಂದ ಸರ್ವಧರ್ಮಗಳ ಅನುಮೋದನೆ 460

186. ಭೋಜ್ಯಾಭೋಜ್ಯವಿವೇಕ 464

187. ಪ್ರತಿಗ್ರಹದ ಪ್ರಾಯಶ್ಚಿತ್ತ ವಿಧಿಗಳು 468

188. ದಾನವನ್ನು ಮಾಡಿ ಸದ್ಗತಿಯನ್ನು ಪಡೆದವರ ಕೀರ್ತನೆ 473

189. ದಾನದ ಪ್ರಭೇದಗಳು 480

190. ಕೃಷ್ಣನ ದೇಹದಿಂದ ಪ್ರದ್ಯುಮ್ನನ ನಿಷ್ಕ್ರಮಣ ಮತ್ತು ಪುನಃ ಪ್ರವೇಶ 483

191. ಋಷಿಗಳಿಂದ ಪ್ರವಚನ ಮಾಡುವಂತೆ ನಾರದರಿಗೆ ಒತ್ತಾಯ 494

192. ನಾರದರಿಂದ ಉಮಾ-ಮಹೇಶ್ವರ ಸಂವಾದದ ಅನುವಾದ.
ರುದ್ರನ ತೃತೀಯ ನೇತ್ರೋತ್ಪತ್ತಿ 498

193. ಉಮಾಮಹೇಶ್ವರ ಸಂವಾದ. ಶಿವನಿಂದ ತಾನು ಚತುರ್ಮುಖನಾಗುವುದಕ್ಕೆ,
ನೀಲಕಂಠನಾಗುವುದಕ್ಕೆ, ಪಿನಾಕಿಯಾಗುವುದಕ್ಕೆ ಮತ್ತು
ವೃಷಭಧ್ವಜನಾಗುವುದಕ್ಕೆ ಕಾರಣ ಕಥನ 510

194. ಶಿವನಿಂದ ಸ್ಮಶಾನ ವಾಸ ಮಾಡುವುದಕ್ಕೆ ಮತ್ತು ಭಯಂಕರ ರೂಪವನ್ನು ಧರಿಸಿರುವುದಕ್ಕೆ ಕಾರಣ ಕಥನ 518

195. ಉಮಾ-ಮಹೇಶ್ವರ ಸಂವಾದ. ವರ್ಣಾಶ್ರಮಧರ್ಮ ಕಥನ 527

196. ಉಮಾಮಹೇಶ್ವರ ಸಂವಾದ. ಋಷಿಧರ್ಮ ಕಥನ 538

197. ಉಮಾ-ಮಹೇಶ್ವರ ಸಂವಾದ. ವಾನಪ್ರಸ್ಥರ ಮತ್ತು ವಿಧವೆಯರ ಧರ್ಮ ಕಥನ 546

198. ಉಮಾ-ಮಹೇಶ್ವರ ಸಂವಾದ. ಸಾಧಾರಣಧರ್ಮ ಕಥನ 556

199. ಉಮಾ-ಮಹೇಶ್ವರ ಸಂವಾದ. ರಾಜಧರ್ಮಗಳು 568

200. ಉಮಾ-ಮಹೇಶ್ವರ ಸಂವಾದ. ಗೃಹಸ್ಥರ ಜೀವನೋಪಾಯ 583

★ ★ ★ ★ ★

॥ ಶ್ರೀಮದ್ಧನುಮದ್ಭೀಮಮಧ್ವಾಂತರ್ಗತನರಹರಿರಾಮಕೃಷ್ಣವೇದವ್ಯಾಸಾಯ ನಮಃ ॥

ಮಹಾಭಾರತ

ಅನುಶಾಸನ ಪರ್ವ

ನೂರ ಮೂವತ್ತೆರಡನೆಯ ಅಧ್ಯಾಯ

ಶ್ರಾದ್ಧದಲ್ಲಿ ಪಾಂಕ್ತೇಯರ ವಿಚಾರ.

ಯುಧಿಷ್ಠಿರಃ

ಕೀದೃಶೇಭ್ಯಃ ಪ್ರದಾತವ್ಯಂ ಭವೇಚ್ಛ್ರಾದ್ಧಂ ಪಿತಾಮಹ ।
ದ್ವಿಜೇಭ್ಯಃ ಕುರುಶಾರ್ದೂಲ ತನ್ಮೇ ವ್ಯಾಖ್ಯಾತುಮರ್ಹಸಿ ॥೧॥

ಯುಧಿಷ್ಠಿರ– ಪಿತಾಮಹನೇ, ಕುರುಶಾರ್ದೂಲನೇ, ಶ್ರಾದ್ಧದಲ್ಲಿ ಎಂತಹ ಬ್ರಾಹ್ಮಣರನ್ನು ನಿಮಂತ್ರಿಸಬೇಕು ಎಂದು ನನಗೆ ಹೇಳಬೇಕು.

ಭೀಷ್ಮಃ

ಬ್ರಾಹ್ಮಣಾನ್ನ ಪರೀಕ್ಷೇತ ಕ್ಷತ್ರಿಯೋ ದಾನಧರ್ಮವಿತ್ ।
ದೈವೇ ಕರ್ಮಣಿ ಪಿತ್ರ್ಯೇ ತು ನ್ಯಾಯ್ಯಮಾಹುಃ ಪರೀಕ್ಷಣಮ್ ॥೨॥

ಭೀಷ್ಮ– ದಾನ-ಧರ್ಮವನ್ನು ಆರಿತ ಕ್ಷತ್ರಿಯನು ದೈವ-ಪಿತೃಕರ್ಮಗಳನ್ನು ಬಿಟ್ಟು ಉಳಿದ ದಾನಗಳಲ್ಲಿ ಬ್ರಾಹ್ಮಣನನ್ನು ಪರೀಕ್ಷಿಸಬಾರದು. ದೈವ-ಪಿತೃ ಕಾರ್ಯಗಳಲ್ಲಿ ಪರೀಕ್ಷಿಸುವುದು ನ್ಯಾಯವಾಗುತ್ತದೆ ಎಂದು ಹೇಳುತ್ತಾರೆ (ಲಕ್ಷಾಲಂಕಾರ).

ದೇವತಾಃ ಪೂಜಯಂತೀಹ ದೈವೇನೈವೇಹ ತೇಜಸಾ ।
ಉಪೇತ್ಯ ತಸ್ಮಾದ್ ದೇವೇಭ್ಯಃ ಸರ್ವೇಭ್ಯೋ ದಾಪಯೇನ್ನರಃ ॥೩॥

ದೈವೇಚ್ಛೆಯಿಂದ ಲಬ್ಧವಾದ ಧನದಿಂದ ದೇವತೆಗಳನ್ನು ಪೂಜಿಸುತ್ತಾರೆ. ಆದ್ದರಿಂದ ದೇವತೆಗಳ ಅನುಗ್ರಹದಿಂದ ಧನವನ್ನೂ (ದ್ರವ್ಯವನ್ನೂ) ಪಡೆದು. ಎಲ್ಲರಿಗೂ ದಾನ ಮಾಡಬೇಕು.

ಶ್ರಾದ್ಧೇ ತ್ವಥ ಮಹಾರಾಜ ಪರೀಕ್ಷೇದ್ ಬ್ರಾಹ್ಮಣಾನ್ ಬುಧಃ ।
ಕುಲಶೀಲವಯೋರೂಪೈರ್ವಿದ್ಯಯಾऽಭಿಜನೇನ ಚ ॥೪॥

ಎಲೈ ಮಹಾರಾಜನೇ, ವಿವೇಕಿಯಾದವನು ಶ್ರಾದ್ಧದಲ್ಲಿ ಬ್ರಾಹ್ಮಣರ ಗುಣ-ಶೀಲ-ವಯೋ-ರೂಪ-ವಿದ್ಯೆ ಮತ್ತು ಜನ್ಮಗಳನ್ನು ಪರೀಕ್ಷಿಸಬೇಕು.

ಏಷಾಮನ್ಯೇ ಪಂಕ್ತಿದೂಷಾಸ್ತಥಾನ್ಯೇ ಪಂಕ್ತಿಪಾವನಾಃ ।
ಅಪಾಂಕ್ತೇಯಾಸ್ತು ಯೇ ರಾಜನ್ ಕೀರ್ತಯಿಷ್ಯಾಮಿ ತಾನ್ ಶೃಣು ॥೫॥

ಎಲೈ ರಾಜನೇ, ಈ ಬ್ರಾಹ್ಮಣರಲ್ಲಿ ಕೆಲವರು ಪಂಕ್ತಿದೂಷಕರು, ಕೆಲವರು ಪಂಕ್ತಿ ಪಾವನರು, ಕೆಲವರು ಅಪಾಂಕ್ತೇಯರು (ಪಂಕ್ತಿಗೆ ಅನರ್ಹರು) ಇರುತ್ತಾರೆ. ಅವರನ್ನು ಹೇಳುವೆನು ಕೇಳು.

ಕಿತವೋ ಭ್ರೂಣಹಾ ಯಕ್ಷ್ಮೀ ಪಶುಪಾಲೋ ನಿರಾಕೃತಿಃ ।
ಗ್ರಾಮಪ್ರೇಷ್ಯೋ ವಾರ್ಧುಷಿಕೋ ಗಾಯನಃ ಸರ್ವವಿಕ್ರಯೀ ॥೬॥

ಅಗಾರದಾಹೀ ಗರದಃ ಕುಂಡಾಶೀ ಸೋಮವಿಕ್ರಯೀ ।
ಸಾಮುದ್ರಿಕೋ ರಾಜಭೃತ್ಯಸ್ಸೈಲಿಕಃ ಕೂಟಕಾರಕಃ ॥೭॥

ಪಿತ್ರಾ ವಿವದಮಾನಶ್ಚ ಯಸ್ಯ ಚೋಪಪತಿರ್ಗೃಹೇ ।
ಅಭಿಶಸ್ತಸ್ತಥಾ ಸ್ತೇನಃ ಶಿಲ್ಪಂ ಯಶ್ಚೋಪಜೀವತಿ ॥೮॥

ಪರ್ವಕಾರಶ್ಚ ಸೂಚೀ ಚ ಮಿತ್ರಧ್ರುಕ್ ಪಾರದಾರಿಕಃ ।
ಅವ್ರತಾನಾಮುಪಾಧ್ಯಾಯಃ ಕಾಂಡಪೃಷ್ಠಸ್ತಥೈವ ಚ ॥೯॥

ಶ್ವಭಿರ್ಯಶ್ಚ ಪರಿಕ್ರಾಮೇದ್ ಯಃ ಶುನಾ ದಷ್ಟ ಏವ ಚ ।
ಪರಿವಿತ್ತಿಶ್ಚ ಯಶ್ಚ ಸ್ಯಾದ್ ದುಶ್ಚರ್ಮಾ ಗುರುತಲ್ಪಗಃ ।
ಕುಶೀಲವೋ ದೇವಲಕೋ ನಕ್ಷತ್ರೈರ್ಯಶ್ಚ ಜೀವತಿ ॥೧೦॥

ಈದೃಶೈರ್ಬ್ರಾಹ್ಮಣೈರ್ಭುಕ್ತಮಪಾಂಕ್ತೇಯೈರ್ಯುಧಿಷ್ಠಿರ ।
ರಕ್ಷಾಂಸಿ ಗಚ್ಛತೇ ಹವ್ಯಮಿತ್ಯಾಹುರ್ಬ್ರಹ್ಮವಾದಿನಃ ॥೧೧॥

ಮೋಸಗಾರ, ಭ್ರೂಣಘಾತಕ, ತೊನ್ನುರೋಗಿ, ಪಶುಪಾಲ, ವಿದ್ಯಾಹೀನ, ಗ್ರಾಮ ಸೇವಕ, ಬಡ್ಡಿಯಿಂದ ಜೀವನ ಮಾಡುವವನು, ಸಂಗೀತಗಾರ, ಎಲ್ಲ ವಸ್ತುಗಳನ್ನು ಮಾರುವವನು, ಮನೆಗೆ ಬೆಂಕಿಯನ್ನು ಹಚ್ಚಿದವನು, ವಿಷವನ್ನು ಕೊಟ್ಟವನು, ಮಣ್ಣಿನ ಪಾತ್ರೆಯಲ್ಲಿ ಭೋಜನ ಮಾಡುವವನು, ಸೋಮಲತೆಯನ್ನು ಮಾರುವವನು, ಸಮುದ್ರ ಯಾನವನ್ನು ಮಾಡಿದವನು, ರಾಜಸೇವಕ, ಎಣ್ಣೆಯನ್ನು ಮಾರುವವನು, ಸುಳ್ಳು ಸಾಕ್ಷಿಯನ್ನು ಹೇಳುವವನು, ತಂದೆಯ ಜೊತೆಯಲ್ಲಿ ಜಗಳ ಮಾಡುವವನು, ಪತ್ನಿಗೆ ಉಪಪತಿಯನ್ನು ಹೊಂದಲು ಅವಕಾಶ ನೀಡಿದವನು, ನಿಂದಿತನಾದವನು, ಕಳ್ಳ, ಶಿಲ್ಪವಿದ್ಯೆಯಿಂದ ಜೀವಿಸುವವನು, ಪರ್ವಕಾಲದಲ್ಲಿ ಪತ್ನಿಯ ಸಮಾಗಮವನ್ನು ಮಾಡುವವನು, ಚಾಡಿಕೋರ, ಮಿತ್ರದ್ರೋಹಿ, ಪರಪತ್ನಿಯ ಸಂಬಂಧವನ್ನು ಹೊಂದಿದವನು, ವ್ರತಹೀನರಿಗೆ ಉಪದೇಶ ಮಾಡುವವನು, ಯಾವಾಗಲೂ ಆಯುಧವನ್ನು ಹಿಡಿದವನು (ಆಯುಧವನ್ನು ತಯಾರಿಸುವವನು), ನಾಯಿಗಳ ಜೊತೆಯಲ್ಲಿ ಸಂಚರಿಸುವವನು, ನಾಯಿಯಿಂದ ಕಚ್ಚಲ್ಪಟ್ಟವನು, ಅಣ್ಣನ ವಿವಾಹವಾಗದೆ ವಿವಾಹ ಮಾಡಿಕೊಂಡವನು, ಚರ್ಮರೋಗಿ, ಗುರುತಲ್ಪಗಾಮಿ, ನಾಟಕಗಳಲ್ಲಿ ಪಾತ್ರವಹಿಸುವವನು, ಸಂಬಳಕ್ಕಾಗಿ ದೇವರಪೂಜೆಯನ್ನು ಮಾಡುವವನು, ನಕ್ಷತ್ರಫಲಗಳನ್ನು ಹೇಳಿ ಜೀವಿಸುವವನು - ಎಲೈ ಯುಧಿಷ್ಠಿರನೇ, ಇಂತಹ ಬ್ರಾಹ್ಮಣರು ಭೋಜನವನ್ನು ಮಾಡಿದರೆ ಆ ಹವ್ಯವು ರಾಕ್ಷಸರನ್ನು ಸೇರುತ್ತದೆ ಎಂದು ಬ್ರಹ್ಮವಾದಿಗಳು ಹೇಳುತ್ತಾರೆ.

ಶ್ರಾದ್ಧಂ ಭುಕ್ತ್ವಾ ತ್ವಧೀಯೀತ ವೃಷಲೀತಲ್ಪಗಶ್ಚ ಯಃ ।
ಪುರೀಷೇ ತಸ್ಯ ತಂ ಮಾಸಂ ಪಿತರಸ್ತಸ್ಯ ಸೇವತೇ ॥೧೨॥

ಯಾವನು ಶ್ರಾದ್ಧಭೋಜನವನ್ನು ಮಾಡಿ ವೇದಾಧ್ಯಯನವನ್ನು ಮಾಡುತ್ತಾನೆಯೋ ಶೂದ್ರಸ್ತ್ರೀ ಸಂಪರ್ಕವನ್ನು ಮಾಡುತ್ತಾನೆಯೋ ಅಂತಹವನಿಗೆ ಶ್ರಾದ್ಧದಾನವನ್ನು ಮಾಡಿದರೆ ಯಜಮಾನನ ಪಿತೃಗಳು ಒಂದು ತಿಂಗಳುಗಳ ಕಾಲ ಅಮೇಧ್ಯದಲ್ಲಿ ವಾಸಿಸುತ್ತಾರೆ.

ಸೋಮವಿಕ್ರಯಿಣೇ ವಿಪ್ರಾ ಭಿಷಜೇ ಪೂಯಶೋಣಿತಮ್ ।
ನಷ್ಟಂ ದೇವಲಕೇ ದತ್ತಮಪ್ರತಿಷ್ಠಂ ಚ ವಾರ್ಧುಷೇ ॥೧೩॥

ಸೋಮವನ್ನು ಮಾರುವವನಿಗೆ ಶ್ರಾದ್ಧ ದಾನವನ್ನು ಮಾಡಿದರೆ ಮಲದಲ್ಲಿಯೂ, ವೈದ್ಯನಿಗೆ ಮಾಡಿದರೆ ಕೀವು ರಕ್ತಗಳಲ್ಲಿಯೂ ಪಿತೃಗಳು ವಾಸ ಮಾಡುತ್ತಾರೆ. ದೇವಲಕನಿಗೆ (ಸಂಬಳಕ್ಕಾಗಿ ದೇವರ ಪೂಜೆಯನ್ನು ಮಾಡುವವನಿಗೆ) ನೀಡಿದ ಶ್ರಾದ್ಧವು ನಷ್ಟವಾಗುತ್ತದೆ. ಬಡ್ಡಿಯಿಂದ ಜೀವನ ಮಾಡುವವನಿಗೆ ಕೊಟ್ಟ ಶ್ರಾದ್ಧದ ಫಲವು ಬೇಗ ನಾಶವನ್ನು ಹೊಂದುತ್ತದೆ.

ಯತ್ತು ವಾಣಿಜಕೇ ದತ್ತಂ ನೇಹ ನಾಮುತ್ರ ತದ್ಭವೇತ್ ।
ಭಸ್ಮನೀವ ಹುತಂ ಹವ್ಯಂ ತಥಾ ಪೌನರ್ಭವೇ ದ್ವಿಜೇ ॥೧೪॥

ವ್ಯಾಪಾರವನ್ನು ಮಾಡುವವನಿಗೆ ಕೊಟ್ಟ ದಾನವು ಈ ಲೋಕದಲ್ಲಾಗಲೀ, ಪರಲೋಕದಲ್ಲಾಗಲೀ ಫಲವನ್ನು ಕೊಡುವುದಿಲ್ಲ. ಎರಡನೆಯ ಮದುವೆಯನ್ನು ಮಾಡಿಕೊಂಡವಳ ಪುತ್ರನಿಗೆ ದಾನವನ್ನು ಮಾಡಿದರೆ ಹವ್ಯವು ಭಸ್ಮದಲ್ಲಿ ಹೋಮ ಮಾಡಿದಂತೆ ಆಗುತ್ತದೆ.

ಯೇ ತು ಧರ್ಮವ್ಯಪೇತೇಷು ಚಾರಿತ್ರಾಪಗತೇಷು ಚ ।
ಹವ್ಯಂ ಕವ್ಯಂ ಪ್ರಯಚ್ಛಂತಿ ತೇಷಾಂ ತತ್ ಪ್ರೇತ್ಯ ನಶ್ಯತಿ ॥೧೫॥

ಧರ್ಮಹೀನರಾದವರಿಗೂ, ಚಾರಿತ್ರಹೀನರಾದವರಿಗೂ ಹವ್ಯ-ಕವ್ಯಗಳನ್ನು ದಾನ ಮಾಡಿದರೆ ಅವರು ಮರಣವನ್ನು ಹೊಂದಿದ ಮೇಲೆ ಯಾವ ಫಲವನ್ನೂ ಪಡೆಯುವುದಿಲ್ಲ.

ಜ್ಞಾನಪೂರ್ವಂ ತು ಯೇ ತೇಭ್ಯಃ ಪ್ರಯಚ್ಛಂತ್ಯೇಲ್ಪಬುದ್ಧಯಃ ।
ಪುರೀಷಂ ಭುಂಜತೇ ತಸ್ಯ ಪಿತರಃ ಪ್ರೇತ್ಯ ನಿಶ್ಚಯಃ ॥೧೬॥

ಅಲ್ಪಬುದ್ಧಿಯುಳ್ಳವರು ಜ್ಞಾನಪೂರ್ವಕವಾಗಿ ಅಂತಹವರಿಗೆ ಶ್ರಾದ್ಧದಾನವನ್ನು ಮಾಡಿದರೆ ಅವರ ಪಿತೃಗಳು ಅಮೇಧ್ಯವನ್ನು ಭಕ್ಷಿಸುವುದರಲ್ಲಿ ಸಂಶಯವಿಲ್ಲ.

ಏತಾನಿಹ ವಿಜಾನೀಯಾದಪಾಂಕ್ತೇಯಾನ್ ದ್ವಿಜಾಧಮಾನ್ ।
ಶೂದ್ರಾಣಾಮುಪದೇಶಂ ಚ ಯೇ ಕುರ್ವಂತ್ಯಲ್ಪಚೇತಸಃ ॥೧೭॥

ಈ ದ್ವಿಜಾಧಮರನ್ನು ಪಂಕ್ತಿಗೆ ಅನರ್ಹರಾದವರು ಎಂದು ತಿಳಿಯಬೇಕು. ಶೂದ್ರರಿಗೆ ಉಪದೇಶವನ್ನು ಮಾಡುವ ಅಲ್ಪಚೇತನರು ಪಂಕ್ತಿಗೆ ಅನರ್ಹರು.

ಷಷ್ಟಿಂ ಕಾಣಃ ಶತಂ ಷಂಢಃ ಶ್ವಿತ್ರೀ ಯಾವತ್ ಪ್ರಪಶ್ಯತಿ ।
ಪಂಕ್ತ್ಯಾಂ ಸಮುಪವಿಷ್ಟಾಯಾಂ ತಾವದ್ ದೂಷಯತೇ ನೃಪ ॥೧೮॥

ಒಂದು ಕಣ್ಣು ಕುರುಡನಾದವನು ಪಂಕ್ತಿಯಲ್ಲಿರುವ ಅರವತ್ತು ಜನರನ್ನೂ, ನಪುಂಸಕನು ನೂರು ಜನರನ್ನೂ, ತೊನ್ನು ರೋಗಿಯು ಪಂಕ್ತಿಯಲ್ಲಿ ಕುಳಿತ ತಾನು ನೋಡುವ ಎಲ್ಲರನ್ನೂ ದೂಷಿಸುತ್ತಾನೆ.

ಯದ್ ವೇಷ್ಟಿತಶಿರಾ ಭುಂಕ್ತೇ ಯದ್ ಭುಂಕ್ತೇ ದಕ್ಷಿಣಾಮುಖಃ ।
ಸೋಪಾನತ್ಕಶ್ಚ ಯದ್‌ಭುಂಕ್ತೇ ಸರ್ವಂ ವಿದ್ಯಾತ್ ತದಾಸುರಮ್ ॥೧೯॥

ತಲೆಗೆ ಬಟ್ಟೆಯನ್ನು ಕಟ್ಟಿಕೊಂಡು ಅಥವಾ ದಕ್ಷಿಣಾಭಿಮುಖವಾಗಿ ಅಥವಾ ಪಾದರಕ್ಷೆಗಳನ್ನು ಧರಿಸಿ ಮಾಡಿದ ಭೋಜನವೆಲ್ಲವೂ ಅಸುರರನ್ನು ಸೇರುತ್ತದೆ.

ಅಸೂಯತಾ ಚ ಯದ್ದತ್ತಂ ಯಚ್ಚ ಶ್ರದ್ಧಾವಿವರ್ಜಿತಮ್ ।
ಸರ್ವಂ ತದಸುರೇಂದ್ರಾಯ ಬ್ರಹ್ಮಾ ಭಾಗಮಕಲ್ಪಯತ್ ॥೨೦॥

ಅಸೂಯೆಯಿಂದ ನೀಡಿದ ದಾನ, ಶ್ರದ್ಧೆಯಿಲ್ಲದೆ ನೀಡಿದ ದಾನ ಎಲ್ಲವೂ ಅಸುರ ಶ್ರೇಷ್ಠನಿಗೆ ಹೋಗುತ್ತದೆ ಎಂದು ಬ್ರಹ್ಮದೇವರು ಅವರ ಭಾಗವಾಗಿ ಕಲ್ಪಿಸಿದ್ದಾರೆ.

ಶ್ವಾನಶ್ಚ ಪಂಕ್ತಿದೂಷಾಶ್ಚ ನಾವೇಕ್ಷೇರನ್ ಕಥಂಚನ ।
ತಸ್ಮಾತ್ ಪರಿವೃತೇ ದದ್ಯಾತ್ ತಿಲಾಂಶ್ಚಾನ್ವವಕೀರಯೇತ್ ॥೨೧॥

ನಾಯಿಗಳು ಮತ್ತು ಪಂಕ್ತಿದೂಷಕರಾದವರು ಪಂಕ್ತಿಯನ್ನು ಎಂದೂ ನೋಡಬಾರದು. ಆದ್ದರಿಂದ ನಾಯಿಗಳು ನೋಡಲಾರದ ಆವರಣಯುಕ್ತವಾದ ಸ್ಥಳದಲ್ಲಿ ತಿಲಗಳನ್ನು ಎರಚಿ ಶ್ರಾದ್ಧವನ್ನು ಮಾಡಬೇಕು.

ತಿಲಾದಾನೇ ಚ ಕ್ರವ್ಯಾದಾ ಯೇ ಚ ಕ್ರೋಧವಶಾ ಗಣಾಃ ।
ಯಾತುಧಾನಾಃ ಪಿಶಾಚಾಶ್ಚ ವಿಪ್ರಲುಂಪಂತಿ ತದ್ಧವಿಃ ॥೨೨॥

ತಿಲಗಳನ್ನು ಕೊಡದಿದ್ದರೆ ರಾಕ್ಷಸರು, ಕ್ರೋಧವಶದೈತ್ಯರು, ಯಾತುಧಾನರು, ಪಿಶಾಚಿಗಳು ಆ ಶ್ರಾದ್ಧವನ್ನು ಕೆಡಿಸುತ್ತಾರೆ.

ಯಾವದ್ಧ್ಯಪಂಕ್ತಿಃ ಪಂಕ್ತ್ಯಾಂ ವೈ ಭುಂಜಾನಾನನುಪಶ್ಯತಿ ।
ತಾವತ್ಫಲಾದ್ ಭ್ರಂಶಯತಿ ದಾತಾರಂ ತಸ್ಯ ಬಾಲಿಶಮ್ ॥೨೩॥

ಪಂಕ್ತಿಯಲ್ಲಿ ಕುಳಿತ ಅಪಾಂಕ್ತೇಯನು ಭೋಜನವನ್ನು ಮಾಡುವ ಎಷ್ಟು ಜನರನ್ನು ನೋಡುತ್ತಾನೆಯೋ ಯಜಮಾನನು ಅಷ್ಟು ಫಲಗಳಿಂದ ಹೀನನಾಗುತ್ತಾನೆ.

ಇಮೇ ತು ಭರತಶ್ರೇಷ್ಠ ವಿಜ್ಞೇಯಾಃ ಪಂಕ್ತಿಪಾವನಾಃ ।
ಯೇ ತ್ವತಸ್ತಾನ್ ಪ್ರವಕ್ಷ್ಯಾಮಿ ಪರೀಕ್ಷಸ್ವೇಹ ತಾನ್ ದ್ವಿಜಾನ್ ॥೨೪॥

ಎಲೈ ಭರತಶ್ರೇಷ್ಠನೇ, ನಾನು ಮುಂದೆ ಹೇಳುವ ಬ್ರಾಹ್ಮಣರು ಪಂಕ್ತಿಪಾವನರೆಂದು ತಿಳಿಯಬೇಕು. ಅಂತಹ ಬ್ರಾಹ್ಮಣರನ್ನು ಪರೀಕ್ಷಿಸಿ ಅವರಿಗೆ ಶ್ರಾದ್ಧವನ್ನು ಕೊಡಬೇಕು.

ವೇದವಿದ್ಯಾವ್ರತಸ್ನಾತಾ ಬ್ರಾಹ್ಮಣಾಃ ಸರ್ವ ಏವ ಹಿ ।
ಪಾಂಕ್ತೇಯಾನ್ ಯಾಂಸ್ತು ವಕ್ಷ್ಯಾಮಿ ಜ್ಞೇಯಾಸ್ತೇ ಪಂಕ್ತಿಪಾವನಾಃ ॥೨೫॥

ವೇದವಿದ್ಯಾಸ್ನಾತರಾದ ಮತ್ತು ವ್ರತಸ್ನಾತರಾದ ಬ್ರಾಹ್ಮಣರೆಲ್ಲರೂ ಪಾಂಕ್ತೇಯರು. ಅವರನ್ನು ಪಂಕ್ತಿಪಾವನರೆಂದು ತಿಳಿಯಬೇಕು.

ತ್ರಿಣಾಚಿಕೇತಃ ಪಂಚಾಗ್ನಿಸ್ತ್ರಿಸುಪರ್ಣಃ ಷಡಂಗವಿತ್ ।
ಬ್ರಹ್ಮದೇವಾನುಸಂತಾನಶ್ಛಂದೋಗೋ ಜ್ಯೇಷ್ಠಸಾಮಗಃ ॥೨೬॥

ಮಾತಾಪಿತ್ರೋರ್ಯಶ್ಚ ವಶ್ಯಃ ಶ್ರೋತ್ರಿಯೋ ದಶಪೂರುಷಃ ।
ಋತುಕಾಲಾಭಿಗಾಮೀ ಚ ಧರ್ಮಪತ್ನೀಷು ಯಃ ಸದಾ ।

ವೇದವಿದ್ಯಾವ್ರತಸ್ನಾತೋ ವಿಪ್ರಃ ಪಂಕ್ತಿಂ ಪುನಾತ್ಯುತ ॥೨೭॥

ಅಥರ್ವಶಿರಸೋಽಧ್ಯೇತಾ ಬ್ರಹ್ಮಚಾರೀ ಯತವ್ರತಃ ।
ಸತ್ಯವಾದೀ ಧರ್ಮಶೀಲಃ ಸ್ವಕರ್ಮನಿರತಶ್ಚ ಯಃ ॥೨೮॥

ಯೇ ಚ ಪುಣ್ಯೇಷು ತೀರ್ಥೇಷು ಅಭಿಷೇಕಕೃತಶ್ರಮಾಃ ।
ಮಖೇಷು ಚ ಸಮಂತ್ರೇಷು ಭವಂತ್ಯೇವಭೃಥಾಪ್ಲುತಾಃ ॥೨೯॥

ಅಕ್ರೋಧನಾ ಅಚಪಲಾಃ ಕ್ಷಾಂತಾ ದಾಂತಾ ಜಿತೇಂದ್ರಿಯಾಃ ।
ಸರ್ವಭೂತಹಿತಾ ಯೇ ಚ ಶ್ರಾದ್ಧೇಷ್ವೇತಾನ್ ನಿಮಂತ್ರಯೇತ್ ।
ಏತೇಷು ದತ್ತಮಕ್ಷಯ್ಯಮೇತೇ ವೈ ಪಂಕ್ತಿಪಾವನಾಃ ॥೩೦॥

ಮೂರು ಬಾರಿ ನಾಚಿಕೇತಾಗ್ನಿಯನ್ನು ಆಧಾನ ಮಾಡಿದವರು, ಗಾರ್ಹಪತ್ಯ, ಆಹವನೀಯ ಮೊದಲಾದ ಪಂಚಾಗ್ನಿಗಳನ್ನು ಪೂಜಿಸಿದವರು, ಆರು ವೇದಾಂಗಗಳನ್ನು ತಿಳಿದವರು, ವೇದನಿಷ್ಠರಾದ ಬ್ರಾಹ್ಮಣರ ಕುಲದಲ್ಲಿ ಜನಿಸಿದವರು, ಸಾಮಗಾನ ಮಾಡುವವರು, ಜ್ಯೇಷ್ಠ ಸಾಮವನ್ನು ಗಾನ ಮಾಡುವವರು, ಮಾತಾ-ಪಿತೃಗಳಿಗೆ ಅಧೀನರಾಗಿರುವವರು, ಹತ್ತು ತಲೆಮಾರಿನಿಂದ ಶ್ರೋತ್ರಿಯರಾಗಿರುವವರು, ಋತುಕಾಲದಲ್ಲಿ ಧರ್ಮಪತ್ನಿಯನ್ನು ಗಮನ ಮಾಡುವವರು, ಅಥರ್ವವೇದವನ್ನು ಅಧ್ಯಯನ ಮಾಡುವವರು, ಬ್ರಹ್ಮಚಾರಿಗಳು, ವ್ರತನಿಷ್ಠರು, ಸತ್ಯವಾದಿಗಳು, ಧರ್ಮಶೀಲರು, ತಮ್ಮ ಕರ್ಮಗಳಲ್ಲಿ ನಿರತರಾದವರು, ಪುಣ್ಯತೀರ್ಥಗಳಲ್ಲಿ ಸ್ನಾನ ಮಾಡುವವರು, ಯಾಗಗಳಲ್ಲಿ ಅವಭೃಥಸ್ನಾನ ಮಾಡಿದವರು, ಕ್ರೋಧವಿಲ್ಲದವರು, ಚಾಂಚಲ್ಯವಿಲ್ಲದವರು, ಸಹನೆಯುಳ್ಳವರು, ಇಂದ್ರಿಯಜಯವನ್ನು ಹೊಂದಿದವರು, ಸರ್ವಭೂತಗಳಲ್ಲಿ ಹಿತಬುದ್ಧಿಯುಳ್ಳವರು ಇಂತಹವರನ್ನು ಶ್ರಾದ್ಧದಲ್ಲಿ ನಿಮಂತ್ರಿಸಬೇಕು. ಇವರಿಗೆ ನೀಡಿದ ದಾನವು ಅಕ್ಷಯವಾಗುತ್ತದೆ. ಇವರೇ ಪಂಕ್ತಿಪಾವನರು.

ಇಮೇ ಪರೇ ಮಹಾರಾಜ ವಿಜ್ಞೇಯಾಃ ಪಂಕ್ತಿಪಾವನಾಃ ।
ಯತಯೋ ಮೋಕ್ಷಧರ್ಮಜ್ಞಾ ಯೋಗಾಃ ಸುಚರಿತವ್ರತಾಃ ॥೩೧॥

ಎಲೈ ಮಹಾರಾಜನೇ, ಮೋಕ್ಷಧರ್ಮವನ್ನು ಅನುಸರಿಸುವ ಯತಿಗಳು, ಒಳ್ಳೆಯ ವ್ರತವನ್ನು ನಡತೆಯನ್ನು ಹೊಂದಿದ ಯೋಗಿಗಳು ಪಂಕ್ತಿಪಾವನರೆಂದು ತಿಳಿಯಬೇಕು.

ಯೇ ಚೇತಿಹಾಸಂ ಪ್ರಯತಾಃ ಶ್ರಾವಯಂತಿ ದ್ವಿಜೋತ್ತಮಾನ್ ।
ಯೇ ಚ ಭಾಷ್ಯವಿದಃ ಕೇಚಿದ್ ಯೇ ಚ ವ್ಯಾಕರಣೇ ರತಾಃ ॥೩೨॥

ಅಧೀಯತೇ ಪುರಾಣಂ ಯೇ ಧರ್ಮಶಾಸ್ತ್ರಾಣ್ಯಥಾಪಿ ಚ ।
ಅಧೀತ್ಯ ಚ ಯಥಾನ್ಯಾಯಂ ವಿಧಿವತ್ ತಸ್ಯ ಕಾರಿಣಃ ॥೩೩॥

ಉಪಪನ್ನೋ ಗುರುಕುಲೇ ಸತ್ಯವಾದೀ ಸಹಸ್ರದಃ ।
ಅಗ್ರ್ಯಃ ಸರ್ವೇಷು ವೇದೇಷು ಸರ್ವಪ್ರವಚನೇಷು ಚ ॥೩೪॥

ಯಾವದೇತೇ ಪ್ರಪಶ್ಯಂತಿ ಪಂಕ್ತ್ಯಾಸ್ತಾವತ್ ಪುನಂತ್ಯುತ ।
ತತೋ ಹಿ ಪಾವನಾತ್ ಪಂಕ್ತ್ಯಾಃ ಪಂಕ್ತಿಪಾವನ ಉಚ್ಯತೇ ॥೩೫॥

ಬ್ರಾಹ್ಮಣರಿಗೆ ಶ್ರದ್ಧೆಯಿಂದ ಭಾರತ ಇತಿಹಾಸವನ್ನು ಪ್ರವಚನ ಮಾಡುವವರು, ವೇದಭಾಷ್ಯವನ್ನು ತಿಳಿದವರು, ವ್ಯಾಕರಣ ಶಾಸ್ತ್ರದಲ್ಲಿ ನಿರತರಾದವರು, ಪುರಾಣ ಮತ್ತು ಧರ್ಮಶಾಸ್ತ್ರಗಳ ಅಧ್ಯಯನವನ್ನು ಮಾಡುವವರು, ಅಧ್ಯಯನವನ್ನು ಮಾಡಿ ಶಾಸ್ತ್ರೋಕ್ತ ರೀತಿಯಲ್ಲಿ ಕರ್ಮಗಳನ್ನು ಮಾಡುವವರು, ಗುರುಕುಲವಾಸವನ್ನು ಮಾಡಿದವರು, ಸತ್ಯವನ್ನು ನುಡಿಯುವವರು, ಸಹಸ್ರ ದಕ್ಷಿಣೆಯನ್ನು ಕೊಡುವವರು, ಎಲ್ಲವೇದಪ್ರಚನಕಾರರಲ್ಲಿಮತ್ತು ಶಾಸ್ತ್ರಪ್ರವಚನಕಾರರಲ್ಲಿಶ್ರೇಷ್ಠರಾದವರು - ಇವರು ಪಂಕ್ತಿಯಲ್ಲಿರುವ ಎಷ್ಟು ಜನರನ್ನು ನೋಡುತ್ತಾರೆಯೋ ಅಷ್ಟು ಜನರನ್ನು ಪವಿತ್ರೀಕರಿಸುತ್ತಾರೆ. ಪಂಕ್ತಿಯನ್ನು ಪವಿತ್ರೀಕರಿಸುವ ಕಾರಣದಿಂದ ಇವರನ್ನು ಪಂಕ್ತಿಪಾವನರೆಂದು ಹೇಳುತ್ತಾರೆ.

ಕ್ರೋಶಾದರ್ಧಂ ತೃತೀಯಾತ್ತು ಪಾವಯೇದೇಕ ಏವ ಹಿ ।
ಬ್ರಹ್ಮದೇಯಾನುಸಂತಾನ ಇತಿ ಬ್ರಹ್ಮವಿದೋ ವಿದುಃ ॥೩೬॥

ವೇದಾಧ್ಯಯನಕ್ಕೆ ಅನುಕೂಲವಾದ ಸಂತತಿಯಲ್ಲಿ ಬಂದವರು ತಾವು ಮೂರು ಕ್ರೋಶಗಳವರೆಗೆ ನೋಡುವ ಪಂಕ್ತಿಯಲ್ಲಿ ಅರ್ಧಭಾಗವನ್ನು ಪವಿತ್ರೀಕರಿಸುತ್ತಾರೆ.

ಅನೃತ್ವಿಗನುಪಾಧ್ಯಾಯಃ ನ ಚೇದಗ್ರಾಸನಂ ವ್ರಜೇತ್ ।
ಋತ್ವಿಗ್ಭಿರನನುಜ್ಞಾತಃ ಪಂಕ್ತ್ಯಾ ಹರತಿ ದುಷ್ಕೃತಮ್ ॥೩೭॥

ಋತ್ವಿಜನಲ್ಲದವನು, ಉಪಾಧ್ಯಾಯನಲ್ಲದವನು ಅಗ್ರಾಸನದಲ್ಲಿ ಕುಳಿತುಕೊಳ್ಳದಿದ್ದರೆ, ಋತ್ವಿಜನಿಂದ ಅನುಮತಿಯನ್ನು ಪಡೆಯದವನು ಪಂಕ್ತಿಯಲ್ಲಿ ಕುಳಿತುಕೊಳ್ಳದಿದ್ದರೆ ಪಂಕ್ತಿದೋಷಗಳು ಪರಿಹಾರಗೊಳ್ಳುತ್ತವೆ.

ಅಥ ಚೇದ್ ವೇದವಿತ್ ಸರ್ವೈಃ ಪಂಕ್ತಿದೋಷೈರ್ವಿವರ್ಜಿತಃ ।
ನ ಚ ಸ್ಯಾತ್ ಪತಿತೋ ರಾಜನ್ ಪಂಕ್ತಿಪಾವನ ಏವ ಸಃ ॥೩೮॥

ಪಂಕ್ತಿದೋಷರಹಿತನಾಗಿ ಪತಿತನಾಗದಿದ್ದರೆ ವೇದವನ್ನು ತಿಳಿದ ಬ್ರಾಹ್ಮಣನು ಪಂಕ್ತಿಪಾವನನೇ ಆಗುತ್ತಾನೆ.

ತಸ್ಮಾತ್ ಸರ್ವಪ್ರಯತ್ನೇನ ಪರೀಕ್ಷ್ಯಮಂತ್ರೇಯೇದ್ ದ್ವಿಜಾನ್ ।
ಸ್ವಕರ್ಮನಿರತಾನ್ ದಾಂತಾನ್ ಕುಲೇ ಜಾತಾನ್ ಬಹುಶ್ರುತಾನ್ ॥

ಆದ್ದರಿಂದ ಸರ್ವಪ್ರಯತ್ನದಿಂದಲೂ ಸ್ವಕರ್ಮನಿರತರಾದ, ಜಿತೇಂದ್ರಿಯರಾದ, ಸತ್ಕುಲಪ್ರಸೂತರಾದ, ವಿದ್ಯಾವಂತರಾದ ಬ್ರಾಹ್ಮಣನನ್ನು ಪರೀಕ್ಷಿಸಿ ನಿಮಂತ್ರಿಸಬೇಕು.

ಯಸ್ಯ ಮಿತ್ರಪ್ರಧಾನಾನಿ ಶ್ರಾದ್ಧಾನಿ ಚ ಹವೀಂಷಿ ಚ ।
ನ ಪ್ರೀಣಾತಿ ಪಿತೄನ್ ದೇವಾನ್ ಸ್ವರ್ಗಂ ಚ ನ ಸ ಗಚ್ಛತಿ ॥೪೦॥

ಯಾವನ ಶ್ರಾದ್ಧಗಳು ಮತ್ತು ದೇವತಾಕಾರ್ಯಗಳು ಮಿತ್ರಪ್ರಧಾನವಾಗಿರುತ್ತವೆಯೋ ಅವನು ಮಾಡಿದ ಕರ್ಮವು ದೇವತೆಗಳಿಗಾಗಲೀ, ಪಿತೃಗಳಿಗಾಗಲೀ ಸಂತೋಷವನ್ನು ಕೊಡುವುದಿಲ್ಲ. ಅಂತಹ ಯಜಮಾನನು ಸ್ವರ್ಗವನ್ನು ಪಡೆಯುವುದಿಲ್ಲ.

ಯಸ್ತು ಶ್ರಾದ್ಧೇ ಕುರುತೇ ಸಂಗತಾನಿ
ನ ದೇವಯಾನೇನ ಪಥಾ ಸ ಯಾತಿ ।
ಸ ವೈ ಯುಕ್ತಃ ಪಿಪ್ಪಲಬಂಧನಾದ್ವಾ
ಸ್ವರ್ಗಾಲ್ಲೋಕಾಚ್ಚ್ಯವತೇ ಶ್ರಾದ್ಧಮಿತ್ರಃ ॥೪೧॥

ಯಾರು ಶ್ರಾದ್ಧದಲ್ಲಿ ಮಿತ್ರರನ್ನು ಆಹ್ವಾನಿಸುತ್ತಾನೆಯೋ ಅವನು ದೇವಯಾನದಿಂದ ಸ್ವರ್ಗಕ್ಕೆ ಹೋಗುವುದಿಲ್ಲ. ದೇಹಸಂಬಂಧವುಳ್ಳವರನ್ನೇ ಶ್ರಾದ್ಧಕ್ಕೆ ನಿಮಂತ್ರಿಸುವವನು

ಅಥವಾ ತಾನು ಮಾಡುವ ಶ್ರಾದ್ಧದಲ್ಲಿ ಮಿತ್ರನಿಗೆ ಭೋಜನವನ್ನು ಮಾಡಿಸಿ, ಮಿತ್ರನ ಮನೆಯಲ್ಲಿ ಶ್ರಾದ್ಧವಾದಾಗ ತಾನು ಭೋಜನವನ್ನು ಮಾಡುವವನು ಅಂತಹ ಶ್ರಾದ್ಧ ಮಿತ್ರನು ಸ್ವರ್ಗಲೋಕದಿಂದ ಚ್ಯುತನಾಗುತ್ತಾನೆ.

ತಸ್ಮಾನ್ನಿತ್ರಂ ಶ್ರಾದ್ಧಕೃನ್ನಾದ್ರಿಯೇತ
ದದ್ಯಾನ್ನಿತ್ರೇಭ್ಯಃ ಸಂಗ್ರಹಾರ್ಥಂ ಧನಾನಿ ।
ಯಂ ಮನ್ಯತೇ ನೈವ ಶತ್ರುಂ ನ ಮಿತ್ರಂ
ತಂ ಮಧ್ಯಸ್ಥಂ ಭೋಜಯೇದ್ದವ್ಯಕವ್ಯೇ ॥೪೨॥

ಆದ್ದರಿಂದ ಶ್ರಾದ್ಧದಲ್ಲಿ ಮಿತ್ರರನ್ನು ಪುರಸ್ಕರಿಸಬಾರದು. ಮಿತ್ರರಿಗೆ ಧರ್ಮಕ್ಕಾಗಿ ಧನವನ್ನು ಕೊಡಬಹುದು. ಯಾವನು ಶತ್ರುವೂ ಅಲ್ಲವೋ, ಮಿತ್ರನೂ ಅಲ್ಲವೋ ಅಂತಹ ಮಧ್ಯಸ್ಥನನ್ನು ಹವ್ಯಕವ್ಯಗಳಲ್ಲಿ ಆಹ್ವಾನಿಸಿ ಭೋಜನವನ್ನು ನೀಡಬೇಕು.

ಯಥೋಷರೇ ಬೀಜಮುಪ್ತಂ ನ ರೋಹೇತ್
ನ ಚಾಸ್ಯೋಪ್ತಾ ಪ್ರಾಪ್ನುಯಾದ್ ಬೀಜಭಾಗಮ್ ।
ಏವಂ ಶ್ರಾದ್ಧಂ ಭುಕ್ತಮನರ್ಹಮಾರ್ಯೈಃ
ನ ಚೇಹ ನಾಮುತ್ರ ಫಲಂ ದದಾತಿ ॥೪೩॥

ಮರುಭೂಮಿಯಲ್ಲಿ ಬಿತ್ತಿದ ಬೀಜವು ಹೇಗೆ ಬೆಳೆಯುವುದಿಲ್ಲವೋ, ಬೀಜವನ್ನು ಬಿತ್ತಿದವನು ಬೀಜದಷ್ಟು ಫಲವನ್ನು ಪಡೆಯುವುದಿಲ್ಲವೋ ಹಾಗೆ ಅನರ್ಹರಾದವರು ಭೋಜನವನ್ನು ಮಾಡಿದರೆ ಶ್ರಾದ್ಧವು ಈ ಲೋಕದಲ್ಲಾಗಲೀ, ಪರಲೋಕದಲ್ಲಾಗಲೀ ಫಲವನ್ನು ಕೊಡುವುದಿಲ್ಲ.

ಬ್ರಾಹ್ಮಣೋ ಹ್ಯನಧೀಯಾನಸ್ತೃಣಾಗ್ನಿರಿವ ಶಾಮ್ಯತಿ ।
ತಸ್ಮೈ ಶ್ರಾದ್ಧಂ ನ ದಾತವ್ಯಂ ನ ಹಿ ಭಸ್ಮನಿ ಹೂಯತೇ ॥೪೪॥

ಅಧ್ಯಯನವನ್ನು ಮಾಡದಿರುವ ಬ್ರಾಹ್ಮಣನು ಹುಲ್ಲುಕಡ್ಡಿಯ ಬೆಂಕಿಯಂತೆ ಬೇಗ ಆರಿಹೋಗುತ್ತಾನೆ. ಅಂತಹವನಿಗೆ ಶ್ರಾದ್ಧವನ್ನು ಕೊಡಬಾರದು. ಬೂದಿಯಲ್ಲಿ ಹೋಮವನ್ನು ಮಾಡುವುದಿಲ್ಲವಷ್ಟೆ?

ಸಂಭೋಜನೀ ನಾಮ ಪಿಶಾಚಭಿಕ್ಷಾ
ಸಾ ನೈವ ದೇವಾನ್ನ ಪಿತೄನುಪೈತಿ ।
ಇಹೈವ ಸಾ ಭ್ರಾಮ್ಯತಿ ಕ್ಷೀಣಪುಣ್ಯಾ
ಶಾಲಾಂತರೇ ಗೌರಿವ ನಷ್ಟವತ್ಸಾ ॥೪೫॥

ಹಿಂದೆ ಹೇಳಿದ ಮಿತ್ರಶ್ರಾದ್ಧವು ಪಿಶಾಚಿಗಳಿಗೆ ಸೇರುತ್ತದೆ. ಅದು ದೇವತೆಗಳನ್ನಾಗಲೀ, ಪಿತೃಗಳನ್ನಾಗಲೀ ತಲುಪುವುದಿಲ್ಲ. ಹಾಗೆ ಮಾಡುವ ಯಜಮಾನನು ಪುಣ್ಯವನ್ನು ಕಳೆದುಕೊಂಡು ಕರುವನ್ನು ಕಳೆದುಕೊಂಡ ಹಸುವು ಕೊಟ್ಟಿಗೆಯಲ್ಲಿ ತಿರುಗುವಂತೆ ಇದೇ ಸಂಸಾರದಲ್ಲಿ ತಿರುಗುತ್ತಿರುತ್ತಾನೆ.

ಯಥಾऽಗ್ನೌ ಶಾಂತೇ ಘೃತಮಾಜುಹೋತಿ
ತನ್ನೈವ ದೇವಾನ್ನ ಪಿತೄನುಪೈತಿ ।
ತಥಾ ದತ್ತಂ ನರ್ತನೇ ಗಾಯನೇ ಚ
ಯಾಂ ಚಾನೃಚೇ ದಕ್ಷಿಣಾಮಾವೃಣೋತಿ ॥೪೬॥

ಹೇಗೆ ಶಾಂತವಾದ ಅಗ್ನಿಯಲ್ಲಿ ಹೋಮಮಾಡಿದ ಘೃತವು ಪಿತೃಗಳನ್ನಾಗಲೀ, ದೇವತೆಗಳನ್ನಾಗಲೀ ತಲುಪುವುದಿಲ್ಲವೋ ಅದರಂತೆ ನರ್ತನವನ್ನು ಮಾಡುವವನಿಗೆ, ಗಾಯನದಿಂದ ಜೀವನವನ್ನು ಮಾಡುವವನಿಗೆ ಮತ್ತು ವೇದಾಧ್ಯಯನವನ್ನು ಮಾಡದವನಿಗೆ ನೀಡಿದ ದಕ್ಷಿಣೆಯು ನಷ್ಟವಾಗುತ್ತದೆ.

ಉಭೌ ಹಿನಸ್ತಿ ನ ಭುನಕ್ತಿ ಚೈಷಾ
ಯಾ ಚಾನೃಚೇ ದಕ್ಷಿಣಾ ದೀಯತೇ ವೈ ।
ಆಘಾತನೀ ಗರ್ಹಿತೈಷಾ ಪತಂತೀ
ತೇಷಾಂ ಪ್ರೇತಾನ್ ಪಾತಯೇದ್ ದೇವಯಾನಾತ್ ॥೪೭॥

ವೇದಹೀನನಾದವನಿಗೆ ನೀಡಿದ ದಕ್ಷಿಣೆಯು ಯಜಮಾನನನ್ನು ಮತ್ತು ದಕ್ಷಿಣೆಯನ್ನು ತೆಗೆದುಕೊಳ್ಳುವವನನ್ನು ಇಬ್ಬರನ್ನೂ ರಕ್ಷಿಸುವುದಿಲ್ಲ. ಅದು ನಿಂದಿತವಾದುದು. ಪಿತೃಗಳಿಗೆ ಹಿಂಸೆಯನ್ನು ಮಾಡುವಂತಹದು. ಆ ದಕ್ಷಿಣೆಯು ಯಜಮಾನನ ಪಿತೃಗಳನ್ನು ದೇವಯಾನದಿಂದ ಕೆಳಗೆ ಬೀಳಿಸುತ್ತದೆ.

ಋಷೀಣಾಂ ಸಮಯಂ ನಿತ್ಯಂ ಯೇ ಚರಂತಿ ಯುಧಿಷ್ಠಿರ ।
ನಿಶ್ಚಿತಾಃ ಸರ್ವಧರ್ಮಜ್ಞಾಸ್ತಾನ್ ದೇವಾ ಬ್ರಾಹ್ಮಣಾನ್ ವಿದುಃ ॥೪೮॥

ಎಲೈ ಯುಧಿಷ್ಠಿರನೇ, ಯಾರು ಋಷಿಗಳು ಹಾಕಿದ ನಿಯಮವನ್ನು ಯಾವಾಗಲೂ ಪಾಲಿಸುತ್ತಾರೆಯೋ, ಸರ್ವಧರ್ಮಗಳನ್ನು ತಿಳಿದಿರುತ್ತಾರೆಯೋ ಅಂತಹವರನ್ನು ದೇವತೆಗಳು ಬ್ರಾಹ್ಮಣರೆಂದು ತಿಳಿಯುತ್ತಾರೆ.

ಸ್ವಾಧ್ಯಾಯನಿಷ್ಠಾ ಋಷಯೋ ಜ್ಞಾನನಿಷ್ಠಾಸ್ತಥೈವ ಚ ।
ತಪೋನಿಷ್ಠಾಶ್ಚ ಬೋದ್ಧವ್ಯಾಃ ಕರ್ಮನಿಷ್ಠಾಶ್ಚ ಭಾರತ ॥೪೯॥

ಎಲೈ ಭಾರತನೇ, ಸ್ವಾಧ್ಯಾಯನಿಷ್ಠರಾದ ಬ್ರಾಹ್ಮಣರನ್ನೂ, ಋಷಿಗಳನ್ನೂ ಹಾಗೆಯೇ ಜ್ಞಾನನಿಷ್ಠರಾದವರನ್ನೂ, ತಪೋನಿಷ್ಠರಾದವರನ್ನೂ, ಧರ್ಮನಿಷ್ಠರಾದವರನ್ನೂ ತಿಳಿಯಬೇಕು.

ಕವ್ಯಾನಿ ಜ್ಞಾನನಿಷ್ಠೇಭ್ಯಃ ಪ್ರತಿಷ್ಠಾಪ್ಯಾನಿ ಭಾರತ ।
ತತ್ರ ಯೇ ಬ್ರಾಹ್ಮಣಾಃ ಕೇಚಿತ್ ನ ನಿಂದಂತಿ ಹಿ ತೇ ವರಾಃ ॥೫೦॥

ಎಲೈ ಭಾರತನೇ, ಜ್ಞಾನನಿಷ್ಠರಾದವರಿಗೆ ಶ್ರಾದ್ಧಗಳಲ್ಲಿ ದಾನವನ್ನು ಮಾಡಬೇಕು. ಅವರಲ್ಲಿಯೂ ಇನ್ನೊಬ್ಬರನ್ನು ನಿಂದಿಸದವರು ಶ್ರೇಷ್ಠರಾದವರು.

ಯೇ ತು ನಿಂದಂತಿ ಜಲ್ಪೇಷು ನ ತಾನ್ ಶ್ರಾದ್ಧೇಷು ಭೋಜಯೇತ್ ।
ಬ್ರಾಹ್ಮಣಾ ನಿಂದಿತಾ ರಾಜನ್ ಹನ್ಯುಸ್ತ್ರಿಪುರುಷಂ ಕುಲಮ್ ॥೫೧॥

ಮಾತನಾಡುವಾಗ ಇನ್ನೊಬ್ಬರನ್ನು ನಿಂದಿಸುವವರನ್ನು ಶ್ರಾದ್ಧದಲ್ಲಿ ಭೋಜನಕ್ಕೆ ನಿಮಂತ್ರಿಸಬಾರದು. ಎಲೈ ರಾಜನೇ, ನಿಂದಿಸುವ ಬ್ರಾಹ್ಮಣರು ಆ ಕುಲದ ಮೂರು ಪುರುಷರನ್ನು ಕೊಲ್ಲುತ್ತಾರೆ (ಘಾಸಿಗೊಳಿಸುತ್ತಾರೆ).

ವೈಖಾನಸಾನಾಂ ವಚನಮೃಷೀಣಾಂ ಶ್ರೂಯತೇ ನೃಪ ।
ದೂರಾದೇವ ಪರೀಕ್ಷೇತ ಬ್ರಾಹ್ಮಣಾನ್ ವೇದಪಾರಗಾನ್ ।
ಪ್ರಿಯಾನ್ ವಾ ಯದಿ ವಾ ದ್ವೇಷ್ಯಾಂಸ್ತೇಷು ತಚ್ಛ್ರಾದ್ಧಮಾವಪೇತ್ ॥

ಎಲೈ ರಾಜನೇ, ವೇದಪಾರಂಗತರಾದ ಬ್ರಾಹ್ಮಣರನ್ನು ಅವರು ಪ್ರಿಯರೇ ಅಥವಾ ಶತ್ರುಗಳೇ ಎಂದು ದೂರದಿಂದಲೇ ಪರೀಕ್ಷೆಯನ್ನು ಮಾಡಿ ಅವರಿಗೆ ಶ್ರಾದ್ಧವನ್ನು ಕೊಡಬೇಕು ಎಂಬ ವೈಖಾನಸ ಋಷಿಗಳ ವಚನವು ಕೇಳಿಬರುತ್ತದೆ.

ಯಃ ಸಹಸ್ರಂ ಸಹಸ್ರಾಣಾಂ ಭೋಜಯೇದನೃಚಾಂ ನರಃ ।
ಏಕಸ್ತಾನ್ ಮಂತ್ರವಿತ್ ಪ್ರೀತಃ ಸರ್ವಾನರ್ಹತಿ ಭಾರತ ॥೫೩॥

ಎಲೈ ಭಾರತನೇ, ಮನುಷ್ಯನು ವೇದಾಧ್ಯಯನ ಸಂಪನ್ನರಲ್ಲದ ಒಂದು ಲಕ್ಷಜನರ ಭೋಜನವನ್ನು ಮಾಡಿಸುವುದಕ್ಕಿಂತಲೂ, ವೇದಮಂತ್ರ ಅಭಿಜ್ಞನಾದ ಒಬ್ಬ ಬ್ರಾಹ್ಮಣನನ್ನು ಪೂಜಿಸಿ ಅವನನ್ನು ಪ್ರಸನ್ನಗೊಳಿಸುವುದಾದರೆ ಅಂತಹ ಮಂತ್ರಜ್ಞನಾದವನು ಎಲ್ಲ ದಾನಗಳಿಗೂ ಅರ್ಹನಾಗುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ಶ್ರಾದ್ಧವಿಕಲ್ಪೇ ಪಾಂಕ್ತೇಯವಿಭಾಗೋ ನಾಮ ದ್ವಾತ್ರಿಂಶತ್ಯಧಿಕಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಮೂವತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಮೂವತ್ಮೂರನೆಯ ಅಧ್ಯಾಯ

ಶ್ರಾದ್ಧವಿಧಿಯಲ್ಲಿ ಅತ್ರಿಗಳ ಅಭಿಪ್ರಾಯ.

ಯುಧಿಷ್ಠಿರಃ

ಕೇನ ಸಂಕಲ್ಪಿತಂ ಶ್ರಾದ್ಧಂ ಕಸ್ಮಿನ್‌ಕಾಲೇ ಕಿಮಾತ್ಮಕಮ್ ।
ಭೃಗ್ವಂಗಿರಸಕೇ ಕಾಲೇ ಮುನಿನಾ ಕತರೇಣ ವಾ ॥೧॥

ಯುಧಿಷ್ಠಿರ– ಭೃಗು-ಅಂಗಿರಸರು ಪ್ರವೃತ್ತಿ ಮಾಡುತ್ತಿದ್ದ ಕಾಲದಲ್ಲಿ ಯಾವ ಋಷಿಗಳಿಂದ ಯಾವ ಕಾಲದಲ್ಲಿ ಯಾವ ರೀತಿಯಲ್ಲಿ ಶ್ರಾದ್ಧವು ಸಂಕಲ್ಪಿಸಲ್ಪಟ್ಟಿತು?

ಕಾನಿ ಶ್ರಾದ್ಧೇಷು ವರ್ಜ್ಯಾನಿ ತಥಾ ಮೂಲಫಲಾನಿ ಚ ।
ಧಾನ್ಯಜಾತಿಶ್ಚ ಕಾ ವರ್ಜ್ಯಾ ತನ್ಮೇ ಬ್ರೂಹಿ ಪಿತಾಮಹ ॥೨॥

ಶ್ರಾದ್ಧದಲ್ಲಿ ವರ್ಜಿಸಬೇಕಾದುದು ಯಾವುವು? ವರ್ಜಿಸಬೇಕಾದ ಮೂಲಫಲಗಳು ಯಾವುವು? ಎಲೈ ಪಿತಾಮಹನೇ, ಶ್ರಾದ್ಧಕಾಲದಲ್ಲಿ ವರ್ಜಿಸಬೇಕಾದ ಧಾನ್ಯ ಜಾತಿಗಳನ್ನು ನನಗೆ ಹೇಳು.

ಭೀಷ್ಮಃ

ಯಥಾ ಶ್ರಾದ್ಧಂ ಸಂಪ್ರವೃತ್ತಂ ಯಸ್ಮಿನ್ ಕಾಲೇ ಯದಾತ್ಮಕಮ್ ।
ಯೇನ ಸಂಕಲ್ಪಿತಂ ಚೈವ ತನ್ಮೇ ಶೃಣು ಜನಾಧಿಪ ॥೩॥

ಭೀಷ್ಮ– ಎಲೈ ಜನಾಧಿಪನೇ, ಯಾವ ಕಾಲದಲ್ಲಿ ಯಾವ ರೀತಿಯಲ್ಲಿ ಶ್ರಾದ್ಧವು ಹೇಗೆ ಸಂಕಲ್ಪಿತವಾಗಿ ಪ್ರವೃತ್ತವಾಯಿತೆಂದು ನನ್ನಿಂದ ಕೇಳು.

ಸ್ವಾಯಂಭುವೋಽತ್ರಿಃ ಕೌರವ್ಯ ಪರಮರ್ಷಿಃ ಪ್ರತಾಪವಾನ್ ।
ತಸ್ಯ ವಂಶೇ ಮಹಾರಾಜ ದತ್ತಾತ್ರೇಯ ಇತಿ ಸ್ಮೃತಃ ॥೪॥

ಎಲೈ ಕೌರವ್ಯನೇ, ಪ್ರತಾಪಶಾಲಿಗಳೂ, ಶ್ರೇಷ್ಠ ಋಷಿಗಳೂ ಆದ ಅತ್ರಿಗಳು ಬ್ರಹ್ಮದೇವರ ಪುತ್ರರು. ಎಲೈ ಮಹಾರಾಜನೇ, ಆ ವಂಶದಲ್ಲಿ ದತ್ತಾತ್ರೇಯರು ಪ್ರಸಿದ್ಧರಾಗಿ ಬಂದರು.

ದತ್ತಾತ್ರೇಯಸ್ಯ ಪುತ್ರೋಽಭೂನ್ನಿಮಿರ್ನಾಮ ತಪೋಧನಃ ।
ನಿಮೇಶ್ಚಾಪ್ಯಭವತ್ ಪುತ್ರಃ ಶ್ರೀಮಾನ್ನಾಮ ಶ್ರಿಯಾ ವೃತಃ ॥೫॥

ನಿಮಿ ಎಂಬ ತಪೋಧನನು ದತ್ತಾತ್ರೇಯರ ಪುತ್ರನು. ನಿಮಿಗೆ ಶ್ರೀಮಂತನೆಂಬ ಕಾಂತಿಯುಕ್ತನಾದ ಪುತ್ರನು ಜನಿಸಿದನು.

ಪೂರ್ಣೇ ವರ್ಷಸಹಸ್ರಾಂತೇ ಸ ಕೃತ್ವಾ ದುಷ್ಕರಂ ತಪಃ ।
ಕಾಲಧರ್ಮಪರೀತಾತ್ಮಾ ನಿಧನಂ ಸಮುಪಾಗತಃ ॥೬॥

ಆ ಶ್ರೀಮಂತನು ದುಷ್ಕರವಾದ ತಪಸ್ಸನ್ನು ಮಾಡಿ ಸಹಸ್ರ ವರ್ಷಗಳು ಪೂರ್ಣವಾಗಲು ಕಾಲಧರ್ಮಕ್ಕೆ ವಶನಾಗಿ ನಿಧನವನ್ನು ಹೊಂದಿದನು.

ನಿಮಿಸ್ತು ಕೃತ್ವಾ ಶೌಚಾನಿ ವಿಧಿದೃಷ್ಟೇನ ಕರ್ಮಣಾ ।
ಸಂತಾಪಮಗಮತ್ ತೀವ್ರಂ ಪುತ್ರಶೋಕಪರಾಯಣಃ ॥೭॥

ನಿಮಿಯಾದರೂ ಶಾಸ್ತ್ರದೃಷ್ಟವಾದ ರೀತಿಯಲ್ಲಿ ಶುದ್ಧಿಕರ್ಮಗಳನ್ನು ಮಾಡಿ ಪುತ್ರಶೋಕಪರಾಯಣನಾಗಿ ತೀವ್ರವಾದ ಸಂತಾಪವನ್ನು ಹೊಂದಿದನು.

ಅಥ ಕೃತ್ವೋಪಹಾರ್ಯಾಣಿ ಚತುರ್ದಶ್ಯಾಂ ಮಹಾಮತಿಃ ।
ತಮೇವ ಗಣಯನ್ ಶೋಕಂ ವಿರಾತ್ರೇ ಪ್ರತ್ಯಬುಧ್ಯತ ॥೮॥

ಮಹಾಮತಿಯಾದ ಅವನು ಚತುರ್ದಶಿಯ ದಿವಸ ಪೂಜೆಗಳನ್ನು ಮಾಡಿ ಮಗನನ್ನೇ ಚಿಂತಿಸಿ ಶೋಕಪಡುತ್ತಾ ಅಪರಾತ್ರಿಯಲ್ಲಿ ಎಚ್ಚರಗೊಂಡನು.

ತಸ್ಯಾಸೀತ್ ಪ್ರತಿಬುದ್ಧಸ್ಯ ಶೋಕೇನ ಪಿಹಿತಾತ್ಮನಃ ।
ಮನಃ ಸಂಹೃತ್ಯ ವಿಷಯೇ ಬುದ್ಧಿರ್ವಿಸ್ತರಗಾಮಿನೀ ॥೯॥

ಶೋಕದಿಂದ ಆವೃತವಾದ ಮನಸ್ಸುಳ್ಳವನಾಗಿ ಅವನು ಎಚ್ಚರಗೊಂಡು ಮನಸ್ಸನ್ನು ವಿಷಯಗಳಿಂದ ಹಿಂದೆ ಸೆಳೆದು ವಿಶಾಲವಾದ ಬುದ್ಧಿಯನ್ನು ಹೊಂದಿದನು.

ತತಃ ಸಂಚಿಂತಯಾಮಾಸ ಶ್ರಾದ್ಧಕಲ್ಪಂ ಸಮಾಹಿತಃ ।
ಯಾನಿ ತಸ್ಯೈವ ಭೋಜ್ಯಾನಿ ಮೂಲಾನಿ ಚ ಫಲಾನಿ ಚ ॥೧೦॥

ಅನಂತರ ಸಮಾಧಾನವನ್ನು ಹೊಂದಿ ಶ್ರಾದ್ಧಕಲ್ಪವನ್ನು ಚಿಂತಿಸಿದನು. ತನ್ನ ಪುತ್ರನಿಗೆ ಇಷ್ಟವಾದ ಭೋಜ್ಯಗಳನ್ನೂ, ಮೂಲಫಲಗಳನ್ನೂ ಚಿಂತಿಸಿದನು.

ಉಕ್ತಾನಿ ಯಾನಿ ಚಾನ್ಯಾನಿ ಯಾನಿ ಚೇಷ್ಟಾನಿ ತಸ್ಯ ಹ ।
ತಾನಿ ಸರ್ವಾಣಿ ಮನಸಾ ವಿನಿಶ್ಚಿತ್ಯ ತಪೋಧನಃ ॥೧೧॥

ಅಮಾವಾಸ್ಯಾಂ ಮಹಾಪ್ರಾಜ್ಞ ವಿಪ್ರಾನಾನಾಯ್ಯ ಪೂಜಿತಾನ್ ।
ದಕ್ಷಿಣಾವರ್ತಿಕಾಃ ಸರ್ವಾ ಬೃಸೀಃ ಸ್ವಯಮಥಾಕರೋತ್ ॥೧೨॥

ಅವನಿಗೆ ಇಷ್ಟವಾದ ಮತ್ತು ಶಾಸ್ತ್ರವಿಹಿತವಾದ ವಸ್ತುಗಳನ್ನು ಯೋಚಿಸಿ ತಪೋಧನನಾದ ಅವನು ಮನಸ್ಸಿನಲ್ಲಿ ಎಲ್ಲವನ್ನೂ ನಿಶ್ಚಯಿಸಿ, ಮಹಾಪ್ರಾಜ್ಞನಾದ ಅವನು ಅಮಾವಾಸ್ಯೆಯಂದು ಪೂಜ್ಯರಾದ ವಿಪ್ರರನ್ನು ಕರೆಸಿ ದಕ್ಷಿಣಕ್ಕೆ ತಿರುಗಿಸಿ, ತಯಾರಿಸಿದ ದರ್ಭೆಯ ಚಾಪೆಗಳನ್ನು ಸ್ವತಃ ತಾನೇ ಮಾಡಿದನು.

ಸಪ್ತ ವಿಪ್ರಾಂಸ್ತತೋ ಭೋಜ್ಯೇ ಯುಗಪತ್ ಸಮುಪಾನಯತ್ ।
ಋತೇ ಚ ಲವಣಂ ಭೋಜ್ಯಂ ಶ್ಯಾಮಾಕಾನ್ನಂ ದದೌ ಪ್ರಭುಃ ॥೧೩॥

ಪ್ರಭುವಾದ ಅವನು ಒಟ್ಟಿಗೆ ಭೋಜನಕ್ಕಾಗಿ ಏಳು ಬ್ರಾಹ್ಮಣರನ್ನು ಕರೆಸಿ ಲವಣವನ್ನು ಬಿಟ್ಟು ಶ್ಯಾಮಕಾನ್ನವನ್ನು ಆಹಾರವಾಗಿ ನೀಡಿದನು.

ದಕ್ಷಿಣಾಗ್ರಾಸ್ತತೋ ದರ್ಭಾ ವಿಪ್ಟರೇಷು ನಿವೇಶಿತಾಃ ।
ಪಾದಯೋಶ್ಚೈವ ವಿಪ್ರಾಣಾಂ ಯೇ ತನ್ನಮುಪಭುಂಜತೇ ॥೧೪॥

ಆಗ ಅವನು ದಕ್ಷಿಣಕ್ಕೆ ತುದಿಯುಳ್ಳ ದರ್ಭೆಗಳನ್ನು ಭೋಜನ ಮಾಡುವ ಬ್ರಾಹ್ಮಣರ ಆಸನಗಳಲ್ಲಿಯೂ ಮತ್ತು ಪಾದಗಳಲ್ಲಿಯೂ ಇರಿಸಿದನು.

ಕೃತ್ವಾ ಚ ದಕ್ಷಿಣಾಗ್ರಾನ್ ವೈ ದರ್ಭಾನ್ ಸುಪ್ರಯತಃ ಶುಚಿಃ ।
ಪ್ರದದೌ ಶ್ರೀಮತೇ ಪಿಂಡಂ ನಾಮಗೋತ್ರಮುದಾಹರನ್ ॥೧೫॥

ಅವನು ಶುಚಿಯಾಗಿ ನಿಯಮದಿಂದ ಕೂಡಿ ದಕ್ಷಿಣಾಗ್ರವಾದ ದರ್ಭೆಗಳನ್ನು ಹರಡಿ ಅದರ ಮೇಲೆ ನಾಮಗೋತ್ರಗಳನ್ನು ಉಚ್ಚರಿಸಿ ಶ್ರೀಮಂತನಿಗೆ ಪಿಂಡಪ್ರದಾನವನ್ನು ಮಾಡಿದನು.

ತತ್‌ಕೃತ್ವಾ ಸ ಮುನಿಶ್ರೇಷ್ಠೋ ಧರ್ಮಸಂಕರಮಾತ್ಮನಃ ।
ಪಶ್ಚಾತ್ತಾಪೇನ ಮಹತಾ ತಪ್ಯಮಾನೋಽಭ್ಯಚಿಂತಯತ್ ॥೧೬॥

ಅದನ್ನು ಮಾಡಿದ ಆ ಮುನಿಶ್ರೇಷ್ಠನು ನಾನು ಧರ್ಮಸಂಕರವನ್ನು ಮಾಡಿದ್ದೇನೆ ಎಂಬ ಶಂಕೆಗೆ ಒಳಗಾಗಿ ಬಹಳ ಪಶ್ಚಾತ್ತಾಪಪಟ್ಟು ಚಿಂತಾಪರನಾದನು.

ಅಕೃತಂ ಮುನಿಭಿಃ ಪೂರ್ವಂ ಕಿಂ ಮಯೈತದನುಷ್ಠಿತಮ್ ।
ಕಥಂ ನು ಶಾಪೇನ ನ ಮಾಂ ದಹೇಯುರ್ಬ್ರಾಹ್ಮಣಾ ಇತಿ ॥೧೭॥

ಹಿಂದೆ ಯಾವ ಋಷಿಗಳೂ ಮಾಡದಿದ್ದ ಈ ಕರ್ಮವನ್ನು ನಾನು ಏಕೆ ಮಾಡಿದೆ? ಬ್ರಾಹ್ಮಣರು ನನಗೆ ಶಾಪವನ್ನು ಕೊಟ್ಟು ಏಕೆ ನನ್ನ ದಹಿಸಲಾರರು? (ಎಂದು ಚಿಂತಿಸಿದನು).

ತತಃ ಸಂಚಿಂತಯಾಮಾಸ ವಂಶಕರ್ತಾರಮಾತ್ಮನಃ ।
ಧ್ಯಾತಮಾತ್ರಸ್ತಥಾ ಚಾತ್ರಿರಾಜಗಾಮ ತಪೋಧನಃ ॥೧೮॥

ಆಗ ಅವನು ತನ್ನ ವಂಶದ ಮೂಲಪುರುಷರಾದ ತಪೋಧನರಾದ ಅತ್ರಿಗಳನ್ನು ಚಿಂತಿಸಿದನು. ಅವನು ಚಿಂತಿಸಿದ ತಕ್ಷಣವೇ ಅತ್ರಿಗಳು ಬಂದರು.

ಅಥಾತ್ರಿಸ್ತಂ ತಥಾ ದೃಷ್ಟ್ವಾ ಪುತ್ರಶೋಕೇನ ಕರ್ಶಿತಮ್ ।
ಭೃಶಮಾಶ್ವಾಸಯಾಮಾಸ ವಾಗ್ಭಿರಿಷ್ಟಾಭಿರವ್ಯಯಃ ॥೧೯॥

ಅನಂತರ ಅವ್ಯಯರಾದ ಅತ್ರಿಗಳು ಪುತ್ರಶೋಕದಿಂದ ಬಳಲಿದ ಅವನನ್ನು ನೋಡಿ ಪ್ರಿಯವಾದ ಮಾತುಗಳಿಂದ ಅವನನ್ನು ಚೆನ್ನಾಗಿ ಸಮಾಧಾನಗೊಳಿಸಿದರು.

ಅತ್ರಿ

ನಿಮೇ ಸಂಕಲ್ಪಿತಸ್ತೇಽಯಂ ಪಿತೃಯಜ್ಞಸ್ತಪೋಧನ ।
ಮಾ ತೇ ಭೂದ್ಭೀಃ ಪೂರ್ವದೃಷ್ಟೋ ಧರ್ಮೋಽಯಂ ಬ್ರಹ್ಮಣಾ ಸ್ವಯಮ್ ॥

ಅತ್ರಿ– ಎಲೈ ನಿಮಿಯೇ, ತಪೋಧನನಾದ ನೀನು ಈ ಪಿತೃಯಜ್ಞವನ್ನು ಸಂಕಲ್ಪಿಸಿದ್ದೀಯೆ, ಭಯಪಡಬೇಡ. ಬ್ರಹ್ಮದೇವರೇ ಈ ವಿಧಾನವನ್ನು ಮೊದಲೇ ಕಂಡುಕೊಂಡಿದ್ದಾರೆ.

ಸೋಽಯಂ ಸ್ವಯಂಭುವಿಹಿತೋ ಧರ್ಮಃ ಸಂಕಲ್ಪಿತಸ್ತ್ವಯಾ ।
ಋತೇ ಸ್ವಯಂಭುವಃ ಕೋಽನ್ಯಃ ಶ್ರಾದ್ಧೇಯಂ ವಿಧಿಮಾಹರೇತ್ ॥೨೧॥

ಬ್ರಹ್ಮದೇವರಿಂದ ವಿಹಿತವಾದ ಈ ಧರ್ಮದ ವಿಷಯದಲ್ಲಿ ನೀನು ಸಂಕಲ್ಪವನ್ನು ಮಾಡಿದ್ದೀಯೆ. ಬ್ರಹ್ಮದೇವರನ್ನು ಬಿಟ್ಟು ಬೇರೆ ಯಾರು ತಾನೇ ಶ್ರಾದ್ಧವಿಧಿಯನ್ನು ಹೇಳಬಲ್ಲರು?

ಆಖ್ಯಾಸ್ಯಾಮಿ ಚ ತೇ ಭೂಯಃ ಶ್ರಾದ್ಧೇಯಂ ವಿಧಿಮುತ್ತಮಮ್ ।
ಸ್ವಯಂಭುವಿಹಿತಂ ಪುತ್ರ ತತ್ಪುರುಷ್ವ ನಿಬೋಧ ಮೇ ॥೨೨॥

ಎಲೈ ಪುತ್ರನೇ, ಬ್ರಹ್ಮದೇವರು ವಿಧಾನ ಮಾಡಿದ ಶ್ರೇಷ್ಠವಾದ ಶ್ರಾದ್ಧವಿಧಿಯನ್ನು ನಿನಗೆ ಇನ್ನೂ ಹೇಳುತ್ತೇನೆ. ಅದನ್ನು ತಿಳಿದು ಅದರಂತೆ ಮಾಡು.

ಕೃತ್ವಾऽಗ್ನಿಕರಣಂ ಪೂರ್ವಂ ಮಂತ್ರಪೂರ್ವಂ ತಪೋಧನ ।
ತತೋऽರ್ಯಮ್ಣೇ ಚ ಸೋಮಾಯ ವರುಣಾಯ ಚ ನಿತ್ಯಶಃ ॥೨೩॥

ವಿಶ್ವೇದೇವಾಶ್ಚ ಯೇ ನಿತ್ಯಂ ಪಿತೃಭಿಃ ಸಹ ಗೋಚರಾಃ ।
ತೇಭ್ಯಃ ಸಂಕಲ್ಪಿತಾ ಭಾಗಾಃ ಸ್ವಯಮೇವ ಸ್ವಯಂಭುವಾ ॥೨೪॥

ಎಲೈ ತಪೋಧನನೇ, ಮೊದಲು ಮಂತ್ರಪೂರ್ವಕವಾಗಿ ಅಗ್ನಿಮುಖವನ್ನು ಮಾಡಿ ಅನಂತರ ಪಿತೃಗಳ ಜೊತೆಯಲ್ಲಿ ಇರುವ ಅರ್ಯಮನಿಗೂ, ಸೋಮನಿಗೂ, ವರುಣನಿಗೂ, ವಿಶ್ವೇದೇವತೆಗಳಿಗೂ ಭಾಗಗಳನ್ನು ಬ್ರಹ್ಮದೇವರೇ ಸ್ವತಃ ಕಲ್ಪಿಸಿದ್ದಾರೆ.

ಸ್ತೋತವ್ಯಾ ಚೇಹ ಪೃಥಿವೀ ನಿವಾಪಸ್ಯೇಹ ಧಾರಿಣೀ ।
ವೈಷ್ಣವೀ ಕಾಶ್ಯಪೀ ಚೇತಿ ತಥೈವೇಹಾಕ್ಷಯೇತಿ ಚ ॥೨೫॥

ಶ್ರಾದ್ಧಕ್ಕೆ ಆಧಾರವಾದ ಭೂಮಿಯನ್ನು ವೈಷ್ಣವೀ, ಕಾಶ್ಯಪೀ, ಅಕ್ಷಯ ಎಂದು ಸ್ತೋತ್ರ ಮಾಡಬೇಕು.

ಉದಕಾನಯನೇ ಚೈವ ಸ್ತೋತವ್ಯೋ ವರುಣೋ ವಿಭುಃ ।
ತತೋऽಗ್ನಿಶ್ಚೈವ ಸೋಮಶ್ಚ ಆಪ್ಯಾಯ್ಯಾವಿಹ ತೇऽನಘ ॥೨೬॥

ಎಲೈ ಅನಘನೇ, ಅರ್ಚನೋದಕಪಾತ್ರದಲ್ಲಿ ವಿಭುವಾದ ವರುಣನನ್ನು ಸ್ತೋತ್ರ ಮಾಡಬೇಕು. ಅನಂತರ ಅಗ್ನಿಯನ್ನು ಮತ್ತು ಸೋಮನನ್ನು ಪೂಜಿಸಬೇಕು.

ದೇವಾಸ್ತು ಪಿತರೋ ನಾಮ ನಿರ್ಮಿತಾ ವೈ ಸ್ವಯಂಭುವಾ ।
ಊಷ್ಮಪಾಃ ಸುಮಹಾಭಾಗಾಸ್ತೇಷಾಂ ಭಾಗಾಃ ಪ್ರಕಲ್ಪಿತಾಃ ॥೨೭॥

ಬ್ರಹ್ಮದೇವರು ಊಷ್ಮಪರು ಎಂಬ ಮಹಾನುಭಾವರಾದ ದೇವಪಿತೃಗಳನ್ನು ಕಲ್ಪಿಸಿದ್ದಾರೆ. ಅವರಿಗೆ ಭಾಗಗಳನ್ನು ಕೊಡಬೇಕು.

ತೇ ಶ್ರಾದ್ಧೇನಾರ್ಚ್ಯಮಾನಾ ವೈ ವಿಮುಚ್ಯಂತೇ ಹ ಕಿಲ್ಬಿಷಾತ್ ।
ಸಪ್ತಕಃ ಪಿತೃವಂಶಸ್ತು ಪೂರ್ವದೃಷ್ಟಃ ಸ್ವಯಂಭುವಾ ॥೨೮॥

ಶ್ರಾದ್ಧವಿಧಿಯಿಂದ ಅವರನ್ನು ಪೂಜಿಸುವವರು ತಮ್ಮ ದೋಷಗಳಿಂದ ಮುಕ್ತರಾಗುತ್ತಾರೆ. ಪಿತೃವಂಶದಲ್ಲಿ ಅಗ್ನಿಷ್ವಾತ್ತಾದಿ ಸಪ್ತ ಪಿತೃಗಳನ್ನು ಬ್ರಹ್ಮದೇವರು ಮೊದಲೇ ಸೃಷ್ಟಿಸಿದ್ದಾರೆ.

ವಿಶ್ವೇ ಚಾಗ್ನಿಮುಖಾ ದೇವಾಃ ಸಂಖ್ಯಾತಾಃ ಪೂರ್ವಮೇವ ತೇ ।
ತೇಷಾಂ ನಾಮಾನಿ ವಕ್ಷ್ಯಾಮಿ ಭಾಗಾರ್ಹಾಣಾಂ ಮಹಾತ್ಮನಾಮ್ ॥

ಅಗ್ನಿಮುಖ ದೇವತೆಗಳ ಸಂಖ್ಯೆಯನ್ನು ಮತ್ತು ವಿಶ್ವೇದೇವತೆಗಳ ಸಂಖ್ಯೆಯನ್ನು ನಿನಗೆ ಮೊದಲೇ ಹೇಳಿದ್ದೇನೆ. ಶ್ರಾದ್ಧಭಾಗಕ್ಕೆ ಅರ್ಹರಾದ ಮಹಾನುಭಾವರಾದ ಅವರ ಹೆಸರುಗಳನ್ನು ಹೇಳುವೆನು.

ಸಹಃ ಕೃತಿರ್ವಿಪಾಪ್ಮಾ ಚ ಪುಣ್ಯಕೃತ್ ಪಾವನಸ್ತಥಾ ।
ಗ್ರಾಮ್ಣಿಃ ಕ್ಷೇಮಃ ಸಮೂಹಶ್ಚ ದಿವ್ಯಸಾನುಸ್ತಥೈವ ಚ ॥೩೦॥

ವಿವಸ್ವಾನ್ ವೀರ್ಯವಾನ್ ಹ್ರೀಮಾನ್ ಕೀರ್ತಿಮಾನ್ ಕೃತ ಏವ ಚ ।
ವಿಪೂರ್ವಃ ಸೋಮಪೂರ್ವಶ್ಚ ಸೂರ್ಯಶ್ರೀಶ್ಚೇತಿ ನಾಮತಃ ॥೩೧॥

ಸೋಮಪಃ ಸೂರ್ಯಸಾವಿತ್ರೋ ದತ್ತಾತ್ಮಾ ಪುಷ್ಕರೀಯಕಃ ।
ಉಷ್ಣೀನಾಭೋ ನಭೋದಶ್ಚ ವಿಶ್ವಾಯುರ್ದೀಪ್ತಿರೇವ ಚ ॥೩೨॥

ಚಮೂಹರಃ ಸುವೇಷಶ್ಚ ವ್ಯೋಮಾರಿಃ ಶಂಕರೋ ಭವಃ ।
ಈಶಃ ಕರ್ತಾ ಕೃತಿರ್ದಕ್ಷೋ ಭುವನೋ ದಿವ್ಯಕರ್ಮಕೃತ್ ॥೩೩॥

ಗಣಿತಃ ಪಂಚವೀರ್ಯಶ್ಚ ಆದಿತ್ಯೋ ರಶ್ಮಿಮಾಂಸ್ತಥಾ ।
ಸಪ್ತಕೃತ್ ಸೋಮವರ್ಚಾಶ್ಚ ವಿಶ್ವಕೃತ್ ಕವಿರೇವ ಚ ॥೩೪॥

ಅನುಗೋಪ್ತಾ ಸುಗೋಪ್ತಾ ಚ ನಪ್ತಾ ಚೇಶ್ವರ ಏವ ಚ ।
ಜಿತಾತ್ಮಾ ಮುನಿವೀರ್ಯಶ್ಚ ದೀಪ್ತಲೋಮಾ ಭಯಂಕರಃ ॥೩೫॥

ಅತಿಕರ್ಮಾ ಪ್ರತೀತಶ್ಚ ಪ್ರದಾತಾ ಚಾಂಶುಮಾಂಸ್ತಥಾ ।
ಶೈಲಾಭಃ ಪರಮಕ್ರೋಧೀ ಧೀರೋಷ್ಣೀ ಭೂಪತಿಸ್ತಥಾ ॥೩೬॥

ಸ್ರಜೀ ವಜ್ರೀ ವರೀ ಚೈವ ವಿಶ್ವೇದೇವಾಃ ಸನಾತನಾಃ ।
ಕೀರ್ತಿತಾಸ್ತೇ ಮಹಾಭಾಗಾಃ ಕಾಲಸ್ಯ ಗತಿಗೋಚರಾಃ ॥೩೭॥

ಸಹ, ಕೃತಿ, ವಿಪಾಪ್ಮ, ಪುಣ್ಯಕೃತ್, ಪಾವನ, ಗ್ರಾಮ್ಣಿ, ಕ್ಷೇಮ, ಸಮೂಹ, ದಿವ್ಯಸಾನು, ವಿವಸ್ವಾನ್, ವೀರ್ಯವಾನ್, ಹ್ರೀಮಾನ್, ಕೀರ್ತಿಮಾನ್, ಕೃತ, ವಿಪೂರ್ವ, ಸೋಮಪೂರ್ವ, ಸೂರ್ಯಶ್ರೀ, ಸೋಮಪ, ಸೂರ್ಯಸಾವಿತ್ರ, ದತ್ತಾತ್ಮ, ಪುಷ್ಕರೀಯಕ, ಉಷ್ಣೀನಾಭ, ನಭೋದ, ವಿಶ್ವಾಯು, ದೀಪ್ತಿ, ಚಮೂಹರ,

ಸುವೇಷ, ವ್ಯೋಮಾರಿ, ಶಂಕರ, ಭವ, ಈಶ, ಕರ್ತಾ, ಕೃತಿ, ದಕ್ಷ, ಭುವನ, ದಿವ್ಯಕರ್ಮಕೃತ್, ಗಣಿತ, ಪಂಚವೀರ್ಯ, ಆದಿತ್ಯ, ರಶ್ಮಿಮಾನ್, ಸಪ್ತಕೃತ್, ಸೋಮವರ್ಚಾ, ವಿಶ್ವಕೃತ್, ಕವಿ; ಅನುಭೋಕ್ತಾ, ಸುಭೋಕ್ತಾ, ನಕ್ತಾ, ಈಶ್ವರ, ಜಿತಾತ್ಮ, ಮುನಿವೀರ್ಯ, ದೀಪ್ತಲೋಮ, ಭಯಂಕರ, ಅತಿಕರ್ಮಾ, ಪ್ರತೀತ, ಪ್ರದಾತಾ, ಅಂಶುಮಾನ್, ಶೈಲಾಭ, ಪರಮಕ್ರೋಧೀ, ಧೀರೋಷ್ಣೀ, ಭೂಪತಿ, ಸ್ರಜೀ, ವಜ್ರೀ, ವರೀ - ಇವರು ಸನಾತನರೂ, ಮಹಾನುಭಾವರೂ ಆದ ವಿಶ್ವೇದೇವತೆಗಳು. ಕಾಲಗತಿಯನ್ನು ತಿಳಿದ ಇವರೆಲ್ಲರನ್ನೂ ನಿನಗೆ ಹೇಳಿದ್ದೇನೆ.

ಅಶ್ರಾದ್ಧೇಯಾನಿ ಧಾನ್ಯಾನಿ ಕೋದ್ರವಾಃ ಪುಲಕಾಸ್ತಥಾ ।
ಹಿಂಗು ದ್ರವ್ಯೇಷು ಶಾಕೇಷು ಪಲಾಂಡುಂ ಲಶುನಂ ತಥಾ ॥೩೮॥

ಶ್ರಾದ್ಧದಲ್ಲಿ ಉಪಯೋಗಿಸಬಾರದಾದ ಧಾನ್ಯಗಳು ಹಾರಕ ಮತ್ತು ಕ್ಷುದ್ರ ಧಾನ್ಯಗಳು (ಜೋಳ, ರಾಗಿ ಮೊದಲಾದವು). ದ್ರವ್ಯಗಳಲ್ಲಿ ಇಂಗನ್ನೂ, ಶಾಕಗಳಲ್ಲಿ ಈರುಳ್ಳಿ ಮತ್ತು ಬೆಳುಳ್ಳಿಗಳನ್ನೂ ಉಪಯೋಗಿಸಬಾರದು.

ಪಲಾಂಡುಃ ಸೌಭಂಜನಕಸ್ತಥಾ ಗೃಂಜನಕಾದಯಃ ।
ಕೂಷ್ಮಾಂಡಜಾತ್ಯಲಾಬುಂ ಚ ಕೃಷ್ಣಂ ಲವಣಮೇವ ಚ ॥೩೯॥

ಗ್ರಾಮ್ಯಂ ವಾರಾಹಮಾಂಸಂ ಚ ಯಚ್ಚೈವಾಪ್ಯೋಕ್ಷಿತಂ ಭವೇತ್ ।
ಕೃಷ್ಣಾಜಾಜೀ ವಿಡಶ್ಚೈವ ಶೀತಪಾಕೀ ತಥೈವ ಚ ।
ಅಂಕುರಾದ್ಯಾಸ್ತಥಾ ವರ್ಜ್ಯಾ ಇಹ ಶೃಂಗಾಟಕಾನಿ ಚ ॥೪೦॥

ಈರುಳ್ಳಿ, ಕೆಂಚನಾಳದ ಕಾಯಿ ಮೊದಲಾದವುಗಳು, ಸೋರೆಕಾಯಿ, ಕಪ್ಪಾದ ಉಪ್ಪು, ಗ್ರಾಮವಾಸಿಯಾದ ಹಂದಿಯ ಮಾಂಸ, ಶುದ್ಧಿಪಡಿಸದ ಯಾವುದೇ ಒಂದು ವಸ್ತು, ಕರೀ ಜೀರಿಗೆ, ನಿಂಬೆಯ ಉಪ್ಪು, ಶೀತಪಾಕಿ ಎಂಬ ತರಕಾರಿ, ಮೊಳಕೆ ಬಂದ ಧಾನ್ಯಗಳು, ಶೃಂಗಾಟಕಗಳು ಇವೆಲ್ಲವೂ ವರ್ಜ್ಯವಾದವುಗಳು.

ವರ್ಜಯೇಲ್ಲವಣಂ ಸರ್ವಂ ತಥಾ ಜಂಬೂಫಲಾನಿ ಚ ।
ಅವಕ್ಷುತಾವರುದಿತಂ ತಥಾ ಶ್ರಾದ್ಧೇಷು ವರ್ಜಯೇತ್ ॥೪೧॥

ಶ್ರಾದ್ಧದಲ್ಲಿ ಎಲ್ಲ ರೀತಿಯ ಲವಣಗಳನ್ನು ಮತ್ತು ನಿಂಬೆಹಣ್ಣನ್ನು ವರ್ಜಿಸಬೇಕು. ಕ್ಷುತದಿಂದ (ಸೀನಿನಿಂದ) ಮತ್ತು ರೋದನದಿಂದ ಉಂಟಾದ ಕಣ್ಣೀರಿನಿಂದ ಮಿಶ್ರವಾದ ಪದಾರ್ಥಗಳನ್ನು ಶ್ರಾದ್ಧದಲ್ಲಿ ವರ್ಜಿಸಬೇಕು.

ನಿವಾಪೇ ಹವ್ಯಕವ್ಯೇ ವಾ ಗರ್ಹಿತಂ ಚ ಶ್ವದರ್ಶನಮ್ ।
ಪಿತರಶ್ಚೈವ ದೇವಾಶ್ಚ ನಾಭಿನಂದಂತಿ ತದ್ಧವಿಃ ॥೪೨॥

ಹವ್ಯಕವ್ಯಗಳಲ್ಲಿ ಮತ್ತು ಶ್ರಾದ್ಧದಲ್ಲಿ ನಾಯಿಗಳ ದರ್ಶನವು ನಿಂದನೀಯವಾದುದು. ನಾಯಿಗಳು ನೋಡಿದ ಹವಿಸ್ಸನ್ನು ಪಿತೃಗಳಾಗಲೀ, ದೇವತೆಗಳಾಗಲೀ ಅಭಿನಂದಿಸುವುದಿಲ್ಲ.

ಚಂಡಾಲಶ್ವಪಚೌ ವರ್ಜ್ಯೌ ನಿವಾಪೇ ಸಮುಪಸ್ಥಿತೇ ।
ಕಾಷಾಯವಾಸೀ ಕುಷ್ಠೀ ವಾ ಪತಿತೋ ಬ್ರಹ್ಮಹಾಪಿ ವಾ ॥೪೩॥

ಸಂಕೀರ್ಣಯೋನಿರ್ವಿಪ್ರಶ್ಚ ಸಂಬಂಧೀ ಪತಿತಶ್ಚ ಯಃ ।
ವರ್ಜನೀಯಾ ಬುಧೈರೇತೇ ನಿವಾಪೇ ಸಮುಪಸ್ಥಿತೇ ॥೪೪॥

ಶ್ರಾದ್ಧಕಾಲದಲ್ಲಿ ಚಂಡಾಲ ಮತ್ತು ಶ್ವಪಚರನ್ನೂ, ಹಾಗೆಯೇ ಕಾವಿಯನ್ನು ಧರಿಸಿದವರನ್ನೂ, ಕುಷ್ಠರೋಗಿಯನ್ನೂ, ಪತಿತನನ್ನೂ, ಬ್ರಹ್ಮಹತ್ಯೆ ಮಾಡಿದವನನ್ನೂ ವರ್ಜಿಸಬೇಕು. ಕುಲಶುದ್ಧಿ ಇಲ್ಲದ ಬ್ರಾಹ್ಮಣನನ್ನೂ, ಸಂಬಂಧಿಯನ್ನೂ, ಪತಿತನನ್ನೂ ವಿವೇಕಿಗಳಾದವರು ಶ್ರಾದ್ಧಕಾಲದಲ್ಲಿ ವರ್ಜಿಸಬೇಕು.

ಇತ್ಯೇವಮುಕ್ತ್ವಾ ಭಗವಾನ್ ಸ್ವವಂಶಜಮೃಷಿಂ ಪುರಾ ।
ಪಿತಾಮಹಸಭಾಂ ದಿವ್ಯಾಂ ಜಗಾಮಾತ್ರಿಸ್ತಪೋಧನಃ ॥೪೫॥

ಹೀಗೆ ತಪೋಧನರಾದ ಪೂಜ್ಯರಾದ ಅತ್ರಿಗಳು ತಮ್ಮ ವಂಶದಲ್ಲಿ ಜನಿಸಿದ ಋಷಿಯಾದ ನಿಮಿಗೆ ಉಪದೇಶವನ್ನು ಮಾಡಿ ದಿವ್ಯವಾದ ಬ್ರಹ್ಮದೇವರ ಸಭೆಗೆ ಹೊರಟುಹೋದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಶ್ರಾದ್ಧಧರ್ಮೇ ಅತ್ರಿಮತಂ ನಾಮ
ತ್ರಯಸ್ತ್ರಿಂಶೋತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಮೂವತ್ಮೂರನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಮೂವತ್ನಾಲ್ಕನೆಯ ಅಧ್ಯಾಯ

ಶ್ರಾದ್ಧದಲ್ಲಿ ಅಗ್ನಿಕರಣಾದಿ ವಿಧಿ

ಭೀಷ್ಮಃ

ತಥಾ ವಿಧೌ ಪ್ರವೃತ್ತೇ ತು ಸರ್ವ ಏವ ಮಹರ್ಷಯಃ ।
ಪಿತೃಯಜ್ಞಾನಕುರ್ವಂತ ವಿಧಿದೃಷ್ಟೇನ ಕರ್ಮಣಾ ॥೧॥

ಭೀಷ್ಮ– ಶ್ರಾದ್ಧದ ವಿಧಿಯು ಈ ರೀತಿಯಲ್ಲಿ ಪ್ರವೃತ್ತವಾಗುತ್ತಿರಲು ಎಲ್ಲ ಮಹರ್ಷಿಗಳು ವಿಧಿಗೆ ಅನುಗುಣವಾಗಿ ಪಿತೃಯಜ್ಞಗಳನ್ನು ಮಾಡಿದರು.

ಋಷಯೋ ಧರ್ಮನಿತ್ಯಾಸ್ತು ಕೃತ್ವಾ ನಿವಪನಾನ್ಯುತ ।
ತರ್ಪಣಂ ಚಾಪ್ಯಕುರ್ವಂತ ತೀರ್ಥಾಂಭೋಭಿರ್ಯತವ್ರತಾಃ ॥೨॥

ನಿಯತವ್ರತರೂ, ನಿತ್ಯವೂ ಧರ್ಮಾನುಷ್ಠಾನ ಮಾಡುವವರೂ ಆದ ಋಷಿಗಳು ಪಿಂಡಪ್ರದಾನವನ್ನು ಮಾಡಿ ತೀರ್ಥಜಲದಿಂದ ತರ್ಪಣವನ್ನೂ ನೀಡಿದರು.

ನಿವಾಪ್ಯೆರ್ದೀಯಮಾನೈಶ್ಚ ಚಾತುರ್ವರ್ಣ್ಯೇನ ಭಾರತ ।
ತರ್ಪಿತಾಃ ಪಿತರೋ ದೇವಾಸ್ತೇ ನಾನ್ನಂ ಜರಯಂತಿ ವೈ ॥೩॥

ಎಲೈ ಭಾರತನೇ, ನಾಲ್ಕುವರ್ಣದ ಪುರುಷರಿಂದ ಕೊಡಲ್ಪಟ್ಟ ಪಿಂಡಪ್ರದಾನದಿಂದ ತೃಪ್ತಿಹೊಂದಿದ ಪಿತೃಗಳಿಗೆ ಮತ್ತು ದೇವತೆಗಳಿಗೆ ಆ ಅನ್ನವು ಅರಗಲಿಲ್ಲ.

ಅಜೀರ್ಣೇನಾಭಿಹನ್ಯಂತೇ ತೇ ದೇವಾಃ ಪಿತೃಭಿಃ ಸಹ ।
ಸೋಮಮೇವಾಭ್ಯಪದ್ಯಂತ ನಿವಾಪಾನ್ನಾಭಿಪೀಡಿತಾಃ ॥೪॥

ಆಗ ಅಜೀರ್ಣದಿಂದ ಪೀಡಿತರಾದ ದೇವತೆಗಳು ಪಿತೃಗಳ ಜೊತೆಯಲ್ಲಿ ಚಂದ್ರನ ಬಳಿಗೆ ಹೋದರು.

ತೇಽಬ್ರುವನ್ ಸೋಮಮಾಸಾದ್ಯ ಪಿತರೋಽಜೀರ್ಣಪೀಡಿತಾಃ ।
ನಿವಾಪಾನ್ನೇನ ಪೀಡ್ಯಾಮಃ ಶ್ರೇಯೋ ನೋಽತ್ರ ವಿಧೀಯತಾಮ್ ॥೫॥

ಅಜೀರ್ಣಪೀಡಿತರಾದ ಪಿತೃಗಳು ಸೋಮನ ಬಳಿಗೆ ಹೋಗಿ ನಾವು ನಿವಾಪಾನ್ನದಿಂದ ಪೀಡಿತರಾಗಿದ್ದೇವೆ. ನಮಗೆ ಶ್ರೇಯಸ್ಸನ್ನು ಮಾಡು ಎಂದು ಕೇಳಿದರು.

ತಾನ್ ಸೋಮಃ ಪ್ರತ್ಯುವಾಚಾಥ ಶ್ರೇಯಶ್ಚೇದೀಪ್ಸಿತಂ ಸುರಾಃ ।
ಸ್ವಯಂಭೂಸದನಂ ಯಾತ ಸ ವಃ ಶ್ರೇಯೋ ವಿಧಾಸ್ಯತಿ ॥೬॥

ಚಂದ್ರನು ಅವರನ್ನು ಕುರಿತು- 'ಎಲೈ ದೇವತೆಗಳೇ, ನಿಮಗೆ ಶ್ರೇಯಸ್ಸು ಬೇಕಾದರೆ ಬ್ರಹ್ಮದೇವರ ಸದನಕ್ಕೆ ಹೋಗಿ. ಅವರು ನಿಮಗೆ ಶ್ರೇಯಸ್ಸನ್ನು ಉಂಟುಮಾಡುವರು' ಎಂದು ಹೇಳಿದನು.

ತೇ ಸೋಮವಚನಾದ್ ದೇವಾಃ ಪಿತೃಭಿಃ ಸಹ ಭಾರತ ।
ಮೇರುಶೃಂಗೇ ಸಮಾಸೀನಂ ಪಿತಾಮಹಮುಪಾಗಮನ್ ॥೭॥

ಎಲೈ ಭಾರತನೇ, ಚಂದ್ರನ ವಚನದಂತೆ ಪಿತೃಗಳ ಜೊತೆಯಲ್ಲಿ ದೇವತೆಗಳು ಹೊರಟು ಮೇರುಶೃಂಗದಲ್ಲಿ ಆಸೀನರಾಗಿದ್ದ ಬ್ರಹ್ಮದೇವರ ಬಳಿಗೆ ಬಂದರು.

ಪಿತರಃ

ನಿವಾಪಾನ್ನೇನ ಭಗವನ್ ಭೃಶಂ ಪೀಡ್ಯಾಮಹೇ ವಯಮ್ ।
ಪ್ರಸಾದಂ ಕುರು ನೋ ದೇವ ಶ್ರೇಯೋ ನಃ ಸಂವಿಧೀಯತಾಮ್ ॥೮॥

ಪಿತೃಗಳು– ಪೂಜ್ಯನೇ, ನಿವಾಪಾನ್ನದಿಂದ ಬಹಳವಾಗಿ ಪೀಡಿತರಾಗಿದ್ದೇವೆ. ದೇವನೇ ಅನುಗ್ರಹವನ್ನು ಮಾಡು. ನಮಗೆ ಶ್ರೇಯಸ್ಸನ್ನು ಕರುಣಿಸು.

ಇತಿ ತೇಷಾಂ ವಚಃ ಶ್ರುತ್ವಾ ಸ್ವಯಂಭೂರಿದಮಬ್ರವೀತ್ ।
ಏಷ ಮೇ ಪಾರ್ಶ್ವತೋ ವಹ್ನಿರ್ಯುಷ್ಮಚ್ಛ್ರೇಯೋ ವಿಧಾಸ್ಯತಿ ॥೯॥

ಅವರ ಮಾತನ್ನು ಕೇಳಿದ ಬ್ರಹ್ಮದೇವರು ನನ್ನ ಪಕ್ಕದಲ್ಲಿಯೇ ಈ ಅಗ್ನಿ ಇದ್ದಾನೆ. ಅವನು ನಿಮಗೆ ಶ್ರೇಯಸ್ಸನ್ನು ಉಂಟುಮಾಡುವನು ಎಂದು ಹೇಳಿದರು.

ಅಗ್ನಿಃ

ಸಹಿತಾಸ್ತಾತ ಭೋಕ್ಷ್ಯಾಮೋ ನಿವಾಪೇ ಸಮುಪಸ್ಥಿತೇ ।
ಜರಯಿಷ್ಯಥ ಚಾಪ್ಯನ್ನಂ ಮಯಾ ಸಾರ್ಧಂ ನ ಸಂಶಯಃ ॥೧೦॥

ಅಗ್ನಿ– ಎಲೈ ಪ್ರೀತಿಪಾತ್ರರೇ, ನಿವಾಪಾನ್ನವನ್ನು ನೀಡಿದಾಗ ನಾವು ಜೊತೆಯಲ್ಲಿಯೇ ಭೋಜನವನ್ನು ಮಾಡೋಣ. ನನ್ನ ಜೊತೆಯಲ್ಲಿ ಭೋಜನವನ್ನು ಮಾಡುವಾಗ ನೀವು ಅನ್ನವನ್ನು ಅರಗಿಸಿಕೊಳ್ಳುವಿರಿ ಎಂಬ ವಿಷಯದಲ್ಲಿ ಸಂಶಯವಿಲ್ಲ.

ಏತಚ್ಛ್ರುತ್ವಾ ತು ಪಿತರಸ್ತತಸ್ತೇ ವಿಜ್ವರಾಭವನ್ ।
ಏತಸ್ಮಾತ್‌ಕಾರಣಾಚ್ಚಾಗ್ನೇಃ ಪ್ರಾಕ್ತನಂ ದೀಯತೇ ನೃಪ ॥೧೧॥

ಈ ಮಾತನ್ನು ಕೇಳಿದ ಪಿತೃಗಳು ನಿಶ್ಚಿಂತರಾದರು. ಎಲೈ ರಾಜನೇ, ಈ ಕಾರಣದಿಂದ ಅಗ್ನಿಗೆ ಮೊದಲನೆಯ ಹವಿರ್ಭಾಗವು ಕೊಡಲ್ಪಡುತ್ತದೆ.

ನಿವಪ್ತೇ ಚಾಗ್ನಿಪೂರ್ವೇ ವೈ ನಿವಾಪೇ ಪುರುಷರ್ಷಭ ।
ನ ಬ್ರಹ್ಮರಾಕ್ಷಸಾಸ್ತಂ ವೈ ನಿವಾಪಂ ಧರ್ಷಯಂತ್ಯುತ ।
ರಕ್ಷಾಂಸಿ ಚಾಪವರ್ತಂತೇ ಸ್ಥಿತೇ ದೇವೇ ವಿಭಾವಸೌ ॥೧೨॥

ಎಲೈ ಪುರುಷಶ್ರೇಷ್ಠನೇ, ಅಗ್ನಿಗೆ ಮೊದಲನೆಯ ಭಾಗವನ್ನು ಸಮರ್ಪಿಸಿದರೆ ಆ ಶ್ರಾದ್ಧವನ್ನು ಬ್ರಹ್ಮರಾಕ್ಷಸರು ವಿನಾಶ ಮಾಡುವುದಿಲ್ಲ. ಅಗ್ನಿದೇವನು ಅಲ್ಲಿರುವಾಗ ರಾಕ್ಷಸರು ಹಿಂದಕ್ಕೆ ಹೋಗುತ್ತಾರೆ.

ಪೂರ್ವಂ ಪಿಂಡಂ ಪಿತುರ್ದದ್ಯಾತ್ ತತೋ ದದ್ಯಾತ್ ಪಿತಾಮಹೇ ।
ಪ್ರಪಿತಾಮಹಾಯ ಚ ತತ ಏಷ ಶ್ರಾದ್ಧವಿಧಿಃ ಸ್ಮೃತಃ ॥೧೩॥

ಮೊದಲನೆಯ ಪಿಂಡವನ್ನು ಪಿತೃವಿಗೂ, ಎರಡನೆಯ ಪಿಂಡವನ್ನು ಪಿತಾಮಹನಿಗೂ, ಮೂರನೆಯ ಪಿಂಡವನ್ನು ಪ್ರಪಿತಾಮಹನಿಗೂ ಕೊಡಬೇಕು. ಇದು ಶ್ರಾದ್ಧವಿಧಿ ಎಂದು ಹೇಳಲಾಗಿದೆ.

ಬ್ರೂಯಾಚ್ಛ್ರಾದ್ಧೇ ಚ ಸಾವಿತ್ರೀಂ ಪಿಂಡೇ ಪಿಂಡೇ ಸಮಾಹಿತಃ ।
ಸೋಮಾಯೇತಿ ಚ ವಕ್ತವ್ಯಂ ತಥಾ ಪಿತೃಮತೇತಿ ಚ ॥೧೪॥

ಶ್ರಾದ್ಧದಲ್ಲಿ ಪ್ರತಿ ಪಿಂಡವನ್ನು ಕೊಡುವಾಗಲೂ ಗಾಯತ್ರಿಯನ್ನು ಉಚ್ಚರಿಸಬೇಕು. 'ಸೋಮಾಯ ಪಿತೃಮತೇ ಸ್ವಾಹಾ' ಎಂದು ಎರಡನೆಯ ಭಾಗವನ್ನು ಕೊಡಬೇಕು. (ಮೊದಲನೆಯ ಹವ್ಯಭಾಗವನ್ನು 'ಅಗ್ನಯೇ ಹವ್ಯವಾಹನಾಯ ಸ್ವಾಹಾ' ಎಂದು ಅಗ್ನಿಗೆ ಕೊಡಬೇಕು).

ರಜಸ್ವಲಾ ಚ ಯಾ ನಾರೀ ವ್ಯಂಗಿತಾ ಕರ್ಣಯೋಶ್ಚ ಯಾ ।
ನಿವಾಪೇ ನೋಪತಿಷ್ಠೇತ ಸಂಗ್ರಾಹ್ಯಾ ನಾನ್ಯವಂಶಜಾಃ ॥೧೫॥

ಶ್ರಾದ್ಧ ಪ್ರದೇಶದಲ್ಲಿ ರಜಸ್ವಲೆಯಾದ ನಾರಿಯೂ, ಕಿವುಡಿಯಾದವಳೂ ಇರಬಾರದು. ಹಾಗೆಯೇ ಬೇರೆ ವಂಶಕ್ಕೆ ಸೇರಿದ ಸ್ತ್ರೀಯರೂ ಇರಬಾರದು.

ಜಲಂ ಪ್ರತರಮಾಣಶ್ಚ ಕೀರ್ತಯೇತ ಪಿತಾಮಹಾನ್ ।
ನದೀಮಾಸಾದ್ಯ ಕುರ್ವೀತ ಪಿತೄಣಾಂ ಪಿಂಡತರ್ಪಣಮ್ ॥೧೬॥

ನೀರನ್ನು ದಾಟುವಾಗ ಪಿತಾಮಹರ ಹೆಸರನ್ನು ಹೇಳಬೇಕು. ನದಿಗೆ ಹೋಗಿ ಪಿತೃಗಳಿಗೆ ಪಿಂಡ, ತರ್ಪಣವನ್ನು ಕೊಡಬೇಕು.

ಪೂರ್ವಂ ಸ್ವವಂಶಜಾನಾಂ ತು ಕೃತ್ವಾऽದ್ಭಿಸ್ತರ್ಪಣಂ ಪುನಃ ।
ಸುಹೃತ್ಸಂಬಂಧಿವರ್ಗಾಣಾಂ ತತೋ ದದ್ಯಾಜ್ಜಲಾಂಜಲಿಮ್ ॥೧೭॥

ಮೊದಲು ತನ್ನ ವಂಶದವರಿಗೂ, ಅನಂತರ ತನ್ನ ಸಂಬಂಧಿಗಳಿಗೂ, ಅನಂತರ ಸುಹೃದರಿಗೂ ಜಲಾಂಜಲಿಯನ್ನು ಕೊಡಬೇಕು.

ಕುಲ್ಮಾಷಗೋಯುಗೇನಾಥ ಯುಕ್ತಂ ತತ್ರ ರಸಾಜಲಮ್ ।
ಪಿತರೋऽಭಿಲಷಂತೇ ವೈ ನಾವಂ ಚಾಪ್ಯಧಿರೋಹತಃ ।
ಸದಾ ನಾವಂ ಜಲಂ ತಜ್ಜ್ಞಾಃ ಪ್ರಯಚ್ಛಂತಿ ಸಮಾಹಿತಾಃ ॥೧೮॥

ಕುಲ್ಮಾಷ ಎಂದರೆ ವನ್ಯಮಾಷ (ಕಾಡುದ್ದು), ಗೋಯುಗವೆಂದರೆ ಮಂತ್ರರೂಪವಾದ ಗೋವು ಮತ್ತು ದೃಷ್ಟಿರೂಪವಾದ ಗೋವು. ಜಲವನ್ನು ಪವಿತ್ರೀಕರಿಸುವುದಕ್ಕೆ ಒಂದು ಮಂತ್ರ ಮತ್ತು ಜಲವನ್ನು ಶೋಧಿಸುವುದಕ್ಕೆ ದೃಷ್ಟಿ ಎಂದು ತಿಳಿಯಬೇಕು. ಅಥವಾ ಗೋಯುಗ ಎಂದರೆ ಪಿತ್ರಾದಿ ಅಂತರ್ಗತವಾದ ಪ್ರದ್ಯುಮ್ನಾದಿ ನಾಮ ಎಂದು ಅಭಿಪ್ರಾಯ. ರಸಾಜಲವೆಂದರೆ ಭೂಮಿಯಲ್ಲಿ ಹರಿಯುತ್ತಿರುವ ನೀರು - ನದಿ. ಮೇಲಕ್ಕೆತ್ತಿದ ನೀರಿನಿಂದ ತರ್ಪಣವನ್ನು ಕೊಡಬಾರದು. ವನ್ಯಮಾಷದಿಂದ ಪಿಂಡಪ್ರದಾನವನ್ನು ಮಾಡಿ, ನದಿಗೆ ಹೋಗಿ ಮಂತ್ರಪೂರ್ವಕವಾಗಿ ಜಲವನ್ನು ಸ್ಪರ್ಶ ಮಾಡಿ ದೃಷ್ಟಿಯಿಂದ ಅದನ್ನು ಪವಿತ್ರೀಕರಿಸಿ ಆ ಹರಿಯುವ ನೀರಿನಲ್ಲಿ ತರ್ಪಣವನ್ನು ಕೊಡಬೇಕು ಎಂದು ಅಭಿಪ್ರಾಯ. ಅಂತಹ ತರ್ಪಣವನ್ನು ಪಿತೃಗಳು ಅಪೇಕ್ಷಿಸುತ್ತಾರೆ. ಆಗ ಪಿತೃಗಳು ಸ್ವರ್ಗ ಮಾರ್ಗದಲ್ಲಿ ಹೋಗಲು ನಾವೆಯನ್ನು ಹತ್ತುತ್ತಾರೆ. ಇದನ್ನು ತಿಳಿದವರು ಸಮಾಧಾನದಿಂದ ಒಂಬತ್ತು ತರ್ಪಣಗಳನ್ನು ಕೊಡಬೇಕು. 'ಸೋಮಃ,

ಪಿತೃಮಾನ್, ಅಂಗೀರಸ್ವಾನ್, ಅಗ್ನಿಃ, ಕವ್ಯವಾಹನಾದಯ ಯೇ ಪಿತರಃ ತಾನ್ ಪಿತ್ಲಾಂಸ್ತರ್ಪಯಾಮಿ, ಭೂಃ ಪಿತ್ಲಾಂಸ್ತರ್ಪಯಾಮಿ, ಭುವಃ ಪಿತ್ಲಾಂಸ್ತರ್ಪಯಾಮಿ, ಸ್ವಃ ಪಿತ್ಲಾಂಸ್ತರ್ಪಯಾಮಿ, ಭೂರ್ಭುವಃಸ್ವಃ ಪಿತ್ಲಾಂಸ್ತರ್ಪಯಾಮಿ, ಸರ್ವಾನ್ ಪಿತ್ಲಾಂಸ್ತರ್ಪಯಾಮಿ, ಸರ್ವಪಿತೃಪತ್ನೀಸ್ತರ್ಪಯಾಮಿ, ಸರ್ವಪಿತೃಪುತ್ರಾಂಸ್ತರ್ಪಯಾಮಿ, ಸರ್ವಪಿತೃಗಣಾಂಸ್ತರ್ಪಯಾಮಿ' ಎಂದು ಒಂಬತ್ತು ಜನ ಪಿತೃಸಂಬಂಧಿಯಾದವರಿಗೆ ಜಲಾಂಜಲಿಯನ್ನು ಕೊಡಬೇಕು. ನಾವಂ ಎನ್ನುವುದಕ್ಕೆ ನವಸಂಬಂಧಿ ಎಂದೂ, ಹೊಸದಾದ ಎಂದೂ ಅರ್ಥ. ಈ ಒಂಬತ್ತು ಪಿತೃಗಳಿಗೆ ಹೊಸ ಜಲದಿಂದ ಕೊಡುವ ಜಲಾಂಜಲಿಯನ್ನು ಪಿತೃಗಳು ನಿರೀಕ್ಷಿಸುತ್ತಾರೆ ಎಂದು ಅಭಿಪ್ರಾಯ - ಲಕ್ಷಾಲಂಕಾರ.

ಮಾಸಾರ್ಧೇ ಕೃಷ್ಣಪಕ್ಷಸ್ಯ ಕುರ್ಯಾನ್ನಿವಪನಾನಿ ವೈ ।
ಪುಷ್ಟಿರಾಯುಸ್ತಥಾ ವೀರ್ಯಂ ಶ್ರೇಶ್ಚೈವ ಪಿತೃವರ್ತಿನಃ ॥೧೯॥

ಕೃಷ್ಣಪಕ್ಷದ ಅಮಾವಾಸ್ಯೆಯಂದು ಪಿಂಡಪ್ರದಾನಾದಿಗಳನ್ನು ಮಾಡಬೇಕು. ಈ ರೀತಿಯಲ್ಲಿ ಪಿತೃಯಜ್ಞವನ್ನು ಮಾಡುವವನಿಗೆ ಪುಷ್ಟಿ, ಆಯುಸ್ಸು, ವೀರ್ಯ ಮತ್ತು ಸಂಪತ್ತು ಉಂಟಾಗುತ್ತದೆ.

ಪಿತಾಮಹಃ ಪುಲಸ್ತ್ಯಶ್ಚ ವಸಿಷ್ಠಃ ಪುಲಹಸ್ತಥಾ ।
ಅಂಗಿರಾಶ್ಚ ಕ್ರತುಶ್ಚೈವ ಕಶ್ಯಪಶ್ಚ ಮಹಾನೃಷಿಃ ।
ಏತೇ ಕುರುಕುಲಶ್ರೇಷ್ಠ ಮಹಾಯೋಗೇಶ್ವರಾಃ ಸ್ಮೃತಾಃ ॥೨೦॥

ಎಲೈ ಕುರುಕುಲಶ್ರೇಷ್ಠನೇ, ಬ್ರಹ್ಮದೇವರು, ಪುಲಸ್ತ್ಯ, ವಸಿಷ್ಠ, ಪುಲಹ, ಅಂಗಿರಸ, ಕ್ರತು, ಮಹರ್ಷಿಗಳಾದ ಕಶ್ಯಪರು ಇವರು ಮಹಾಯೋಗೇಶ್ವರರೆಂದು ಹೇಳಲ್ಪಡುತ್ತಾರೆ.

ಏತೇ ಚ ಪಿತರೋ ರಾಜನ್ನೇಷ ಶ್ರಾದ್ಧವಿಧಿಃ ಪರಃ ।
ಪ್ರೇತಾಸ್ತು ಪಿಂಡಸಂಬಂಧಾನ್ಮುಚ್ಯಂತೇ ತೇನ ಕರ್ಮಣಾ ॥೨೧॥

ಎಲೈ ರಾಜನೇ, ಇವರೂ ಸಹ ಪಿತೃಗಳು. ನಾನು ಹೇಳಿದುದೇ ಶ್ರೇಷ್ಠವಾದ ಶ್ರಾದ್ಧವಿಧಿ. ಪಿಂಡಪ್ರದಾನವನ್ನು ಮಾಡಿದ ತಕ್ಷಣ ಪಿಂಡದ ಸಂಬಂಧದಿಂದ ಮೃತರಾದ ಪಿತೃಗಳು ತಮ್ಮ ಕರ್ಮದಿಂದ ಉಂಟಾದ ಪ್ರೇತತ್ವದ ವಿಮುಕ್ತಿಯನ್ನು ಹೊಂದುತ್ತಾರೆ.

ಇತ್ಯೇಷಾ ಪುರುಷಶ್ರೇಷ್ಠ ಶ್ರಾದ್ಧೋತ್ಪತ್ತಿರ್ಯಥಾಗಮಮ್ ।
ಖ್ಯಾಪಿತಾ ಪೂರ್ವನಿರ್ದಿಷ್ಟಾ ದಾನಂ ವಕ್ಷ್ಯಾಮ್ಯತಃ ಪರಮ್ ॥೨೨॥

ಎಲೈ ಪುರುಷಶ್ರೇಷ್ಠನೇ, ಇದು ಶಾಸ್ತ್ರಕ್ಕೆ ಅನುಸಾರಿಯಾದ ಶ್ರಾದ್ಧೋತ್ಪತ್ತಿವಿಧಿ. ಇದು ಬ್ರಹ್ಮದೇವರಿಂದ ಮೊದಲೇ ನಿರ್ದಿಷ್ಟವಾಗಿದೆ. ಇದನ್ನು ನಿನಗೆ ಹೇಳಿದ್ದೇನೆ. ಇನ್ನು ಮುಂದೆ ದಾನವನ್ನು ಹೇಳುವೆನು.

॥ ಇತಿ ದಾನಧರ್ಮೇ ಶ್ರಾದ್ಧೇ ಅಗ್ನಿಕರಣಾದಿವಿಧಿನಿರೂಪಣಂ ನಾಮ ಚತುಸ್ತ್ರಿಂಶೋತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಮೂವತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಮೂವತ್ತೈದನೆಯ ಅಧ್ಯಾಯ

ಉಪವಾಸಾದಿ ವ್ರತವಿಶೇಷಗಳು

ಯುಧಿಷ್ಠಿರಃ

ದ್ವಿಜಾತಯೋ ವ್ರತೋಪೇತಾ ಹವಿಸ್ತೇ ಯದಿ ಭುಂಜತೇ ।
ಅನ್ನಂ ಬ್ರಾಹ್ಮಣಕಾಮಾಯ ಕಥಮೇತತ್ ಪಿತಾಮಹ ॥೧॥

ಯುಧಿಷ್ಠಿರ– ಎಲೈ ಪಿತಾಮಹನೇ, ಬ್ರಾಹ್ಮಣರಿಗೆ ಅನ್ನದಾನವನ್ನು ಮಾಡಿ ಕಾಮ್ಯಫಲವನ್ನು ಬಯಸುವ ಯಜಮಾನನ ಹವಿಸ್ಸನ್ನು ವ್ರತನಿಷ್ಠರಾದ ದ್ವಿಜರು ಭುಂಜಿಸಿದರೆ ಏನು ಫಲ ಉಂಟಾಗುತ್ತದೆ?

ಭೀಷ್ಮಃ

ಅವೇದೋಕ್ತವ್ರತಾಶ್ಚೈವ ಭುಂಜಾನಾಃ ಕಾರ್ಯಕಾರಿಣಃ ।
ವೇದೋಕ್ತೇಷು ತು ಭುಂಜಾನಾ ವ್ರತಲುಪ್ತಾ ಯುಧಿಷ್ಠಿರ ॥೨॥

ಭೀಷ್ಮ– ವೇದವಿಹಿತವಲ್ಲದ ವ್ರತಗಳನ್ನು ಧರಿಸಿದವರು ಅಂತಹ ಬ್ರಾಹ್ಮಣನ ಅನ್ನವನ್ನು ಭೋಜನ ಮಾಡಿದರೆ ಬ್ರಾಹ್ಮಣನ ಆಸೆಯು ಫಲಿಸುತ್ತದೆ. ಎಲೈ

ಯುಧಿಷ್ಠಿರನೇ, ವೇದೋಕ್ತವ್ರತವನ್ನು ಧರಿಸಿ ಭೋಜನವನ್ನು ಮಾಡುವವನು ವ್ರತಲೋಪವನ್ನು ಹೊಂದುತ್ತಾರೆ.

ಯುಧಿಷ್ಠಿರಃ

ಯದಿದಂ ತಪ ಇತ್ಯಾಹುರುಪವಾಸಂ ಪೃಥಗ್ಜನಾಃ ।
ತಪಃ ಸ್ಯಾದೇತದಿಹ ವೈ ತಪೋಽನ್ಯದ್ವಾಪಿ ಕಿಂ ಭವೇತ್ ॥೩॥

ಯುಧಿಷ್ಠಿರ– ಸಾಮಾನ್ಯಜನರು ಉಪವಾಸವನ್ನೇ ತಪಸ್ಸು ಎಂದು ಹೇಳುತ್ತಾರಷ್ಟೆ? ಇದೇ ತಪಸ್ಸೋ ಅಥವಾ ಇದಕ್ಕಿಂತ ಬೇರೆಯಾದ ತಪಸ್ಸಿದೆಯೋ?

ಭೀಷ್ಮಃ

ಮಾಸಾರ್ಧಮಾಸೌ ನೋಪವಸೇದ್ ಯತ್ತಪೋ ಮನ್ಯತೇ ಜನಃ ।
ಆತ್ಮತಂತ್ರೋಪಘಾತೀ ಯೋ ನ ತಪಸ್ವೀ ನ ಧರ್ಮವಿತ್ ॥೪॥

ಭೀಷ್ಮ– ತಪಸ್ಸು ಎಂದು ತಿಳಿದು ಒಂದು ತಿಂಗಳು ಅಥವಾ ಹದಿನೈದು ದಿವಸಗಳ ಕಾಲ ಉಪವಾಸವನ್ನು ಮಾಡಬಾರದು. ಅಂತಹವನು ತನ್ನ ಶರೀರಯಾತ್ರೆಯನ್ನೇ ಹಾಳು ಮಾಡಿಕೊಳ್ಳುತ್ತಾನೆ. ಅವನು ತಪಸ್ವಿಯೂ ಅಲ್ಲ, ಧರ್ಮಜ್ಞನೂ ಅಲ್ಲ.

ತ್ಯಾಗಸ್ಯಾಪಿ ಚ ಸಂಪತ್ತಿಃ ಶಿಷ್ಯತೇ ತಪ ಉತ್ತಮಮ್ ।
ಸದೋಪವಾಸೀ ಚ ಭವೇದ್ ಬ್ರಹ್ಮಚಾರೀ ತಥೈವ ಚ ॥೫॥

ತ್ಯಾಗವನ್ನು ಮಾಡುವುದು ಶ್ರೇಷ್ಠವಾದ ತಪಸ್ಸೆಂದು ಹೇಳಲ್ಪಡುತ್ತದೆ. ತಪಸ್ಸನ್ನು ಮಾಡುವವನು ಯಾವಾಗಲೂ ಉಪವಾಸವನ್ನು ಮಾಡಿ ಬ್ರಹ್ಮಚಾರ್ಯದಿಂದ ಇರಬೇಕು.

ಮುನಿಶ್ಚ ಸ್ಯಾತ್ ಸದಾ ವಿಪ್ರೋ ದೇವಾಂಶ್ಚೈವ ಸದಾ ಯಜೇತ್ ।
ಕುಟುಂಬಿಕೋ ಧರ್ಮಕಾಮಃ ಸದಾಽಸ್ವಪ್ನಶ್ಚ ಭಾರತ ॥೬॥

ಯಾವಾಗಲೂ ಮನನಶೀಲನಾಗಿರಬೇಕು. ದೇವತೆಗಳನ್ನು ಯಾವಾಗಲೂ ಅರ್ಚಿಸಬೇಕು. ಎಲೈ ಭಾರತನೇ, ಗೃಹಸ್ಥನಾಗಿ ಧರ್ಮವನ್ನು ಬಯಸುವವನು ಯಾವಾಗಲೂ ಅಸ್ವಪ್ನನಾಗಿರಬೇಕು.

ಅಮೃತಾಶೀ ಸದಾ ಚ ಸ್ಯಾತ್ ಪವಿತ್ರೀ ಚ ಸದಾ ಭವೇತ್ ।
ಋತವಾದೀ ಸದಾ ಚ ಸ್ಯಾನ್ನಿಯತಶ್ಚ ಸದಾ ಭವೇತ್ ॥೭॥

ಅಮೃತಾಶಿಯಾಗಿರಬೇಕು, ಪವಿತ್ರಿಯಾಗಿರಬೇಕು, ಋತವಾದಿಯಾಗಿರಬೇಕು, ನಿಯಮಬದ್ಧನಾಗಿರಬೇಕು.

ವಿಘಸಾಶೀ ಸದಾ ಚ ಸ್ಯಾತ್ ಸದಾ ಚೈವಾತಿಥಿಪ್ರಿಯಃ ।
ಅಮಾಂಸಾಶೀ ಸದಾ ಚ ಸ್ಯಾತ್ ಪವಿತ್ರೀ ಚ ಸದಾ ಭವೇತ್ ॥೮॥

ವಿಘಸಾಶಿಯಾಗಿರಬೇಕು, ಅತಿಥಿಪ್ರಿಯನಾಗಿರಬೇಕು, ಮಾಂಸವನ್ನು ತಿನ್ನಬಾರದು ಮತ್ತು ಯಾವಾಗಲೂ ಪವಿತ್ರನಾಗಿರಬೇಕು.

ಯುಧಿಷ್ಠಿರಃ

ಕಥಂ ಸದೋಪವಾಸೀ ಸ್ಯಾದ್ ಬ್ರಹ್ಮಚಾರೀ ಚ ಪಾರ್ಥಿವ ।
ವಿಘಸಾಶೀ ಕಥಂ ಚ ಸ್ಯಾತ್ ಕಥಂ ಚೈವಾತಿಥಿಪ್ರಿಯಃ ॥೯॥

ಯುಧಿಷ್ಠಿರ– ಎಲೈ ರಾಜನೇ, ಸದಾ ಉಪವಾಸಿಯಾಗಿರುವುದು ಹೇಗೆ? ಸದಾ ಬ್ರಹ್ಮಚಾರಿಯಾಗಿರುವುದು ಹೇಗೆ? ವಿಘಸಾಶಿಯಾಗುವುದು ಹೇಗೆ? ಮತ್ತು ಅತಿಥಿ ಪ್ರಿಯನಾಗುವುದು ಹೇಗೆ?

ಭೀಷ್ಮಃ

ಅಂತರಾ ಸಾಯಮಾಶಂ ಚ ಪ್ರಾತರಾಶಂ ತಥೈವ ಚ ।
ಸದೋಪವಾಸೀ ಭವತಿ ಯೋ ನ ಭುಂಕ್ತೇऽಂತರಾ ಪುನಃ ॥೧೦॥

ಭೀಷ್ಮ– ಪ್ರಾತಃಕಾಲದ ಭೋಜನ ಮತ್ತು ಸಾಯಂಕಾಲದ ಭೋಜನಗಳ ಮಧ್ಯೆ ಯಾವ ಆಹಾರವನ್ನೂ ಸೇವಿಸದವನು ಸದೋಪವಾಸಿಯಾಗುತ್ತಾನೆ.

ಭಾರ್ಯಾಂ ಗಚ್ಛನ್ ಬ್ರಹ್ಮಚಾರೀ ಸದಾ ಭವತಿ ಚೈವ ಹ ।
ಋತವಾದೀ ಸದಾ ಚ ಸ್ಯಾದ್ ದಾನಶೀಲಶ್ಚ ಮಾನವಃ ॥೧೧॥

ಋತುಕಾಲದಲ್ಲಿ ಮಾತ್ರ ಭಾರ್ಯಾಸಂಗವನ್ನು ಮಾಡುವವನು ಸದಾ ಬ್ರಹ್ಮಚಾರಿಯಾಗುತ್ತಾನೆ. ದಾನಶೀಲನಾದ ಮಾನವನು ಯಾವಾಗಲೂ ಸತ್ಯವನ್ನೇ ನುಡಿಯಬೇಕು (ಅವನು ಋತವಾದಿ ಎನಿಸುತ್ತಾನೆ).

ಅಭಕ್ಷಯನ್ ವೃಥಾ ಮಾಂಸಮಮಾಂಸಾಶೀ ಭವತ್ಯುತ ।
ದಾನಂ ದದತ್ ಪವಿತ್ರೀ ಸ್ಯಾದಸ್ವಪ್ನಶ್ಚ ದಿವಾऽಸ್ವಪನ್ ॥೧೨॥

ವ್ಯರ್ಥವಾಗಿ ಮಾಂಸವನ್ನು ಭಕ್ಷಿಸದವನು (ಶ್ರಾದ್ಧಾದಿ ವಿಶೇಷ ಸಂದರ್ಭವನ್ನು ಬಿಟ್ಟು ಬೇರೆ ಸಮಯದಲ್ಲಿ ಮಾಂಸಭಕ್ಷಣೆಯನ್ನು ಮಾಡದವನು) ಅಮಾಂಸಾಶಿ ಆಗುತ್ತಾನೆ. ದಾನವನ್ನು ಕೊಡುವವನು ಪವಿತ್ರನಾಗುತ್ತಾನೆ. ಹಗಲು ನಿದ್ರೆಯನ್ನು ಮಾಡದವನು ಅಸ್ವಪ್ನನಾಗುತ್ತಾನೆ.

ಭೃತ್ಯಾತಿಥಿಷು ಯೋ ಭುಂಕ್ತೇ ಭುಕ್ತವತ್ಸು ನರಃ ಸದಾ ।
ಅಮೃತಂ ಕೇವಲಂ ಭುಂಕ್ತೇ ಇತಿ ವಿದ್ಧಿ ಯುಧಿಷ್ಠಿರ ॥೧೩॥

ಎಲೈ ಯುಧಿಷ್ಠಿರನೇ, ಅತಿಥಿಗಳು ಮತ್ತು ಭೃತ್ಯರು ಭೋಜನವನ್ನು ಮಾಡಿದ ಮೇಲೆ ಯಾವ ಮನುಷ್ಯನು ಸದಾ ಭೋಜನವನ್ನು ಮಾಡುತ್ತಾನೆಯೋ ಅವನು ಕೇವಲ ಅಮೃತವನ್ನು ಭೋಜನವನ್ನು ಮಾಡುತ್ತಾನೆಂದು ತಿಳಿ.

ಅಭುಕ್ತವತ್ಸು ನಾಶ್ನಾತಿ ಬ್ರಾಹ್ಮಣೇಷು ತು ಯೋ ನರಃ ।
ಅಭೋಜನೇನ ತೇನಾಸ್ಯ ಜಿತಃ ಸ್ವರ್ಗೋ ಭವತ್ಯುತ ॥೧೪॥

ಬ್ರಾಹ್ಮಣರು ಊಟಮಾಡುವುದಕ್ಕಿಂತ ಮೊದಲು ಯಾವ ಮನುಷ್ಯನು ಭೋಜನವನ್ನು ಮಾಡುವುದಿಲ್ಲವೋ ಅವನು ಅದರಿಂದ ಸ್ವರ್ಗವನ್ನು ಜಯಿಸುತ್ತಾನೆ.

ದೇವೇಭ್ಯಶ್ಚ ಪಿತೃಭ್ಯಶ್ಚ ಭೃತ್ಯೇಭ್ಯೋऽತಿಥಿಭಿಃ ಸಹ ।
ಅವಶಿಷ್ಟಾನಿ ಯೋ ಭುಂಕ್ತೇ ತಮಾಹುರ್ವಿಘಸಾಶಿನಮ್ ॥೧೫॥

ದೇವತೆಗಳಿಗೂ, ಪಿತೃಗಳಿಗೂ, ಭೃತ್ಯರಿಗೂ, ಅತಿಥಿಗಳಿಗೂ ಅನ್ನವನ್ನು ನೀಡಿ ಉಳಿದ ಅನ್ನವನ್ನು ಸೇವಿಸುವವನು ವಿಘಸಾಶಿ ಎನಿಸುತ್ತಾನೆ.

ತೇಷಾಂ ಲೋಕಾ ಹ್ಯಪರ್ಯಂತಾಃ ಸದನೇ ಬ್ರಹ್ಮಣಃ ಸ್ಮೃತಾಃ ।
ಉಪಸ್ಥಿತಾ ಹ್ಯಪ್ಸರೋಭಿರ್ಗಂಧರ್ವೈಶ್ಚ ಜನಾಧಿಪ ॥೧೬॥

ಎಲೈ ಜನಾಧಿಪನೇ, ಅವರಿಗೆ ಬ್ರಹ್ಮಲೋಕದಲ್ಲಿ ಗಂಧರ್ವರಿಂದಲೂ, ಅಪ್ಸರೆಯರಿಂದಲೂ ಸಹಿತವಾದ ಕೊನೆಯೇ ಇಲ್ಲದ ಲೋಕಗಳು ಸಿದ್ಧವಾಗಿವೆ.

ದೇವತಾತಿಥಿಭಿಃ ಸಾರ್ಧಂ ಪಿತೃಭಿಶ್ಚೋಪಭುಂಜತೇ ।
ರಮಂತೇ ಪುತ್ರಪೌತ್ರೈಶ್ಚ ತೇಷಾಂ ಗತಿರನುತ್ತಮಾ ॥೧೭॥

ದೇವತಾತಿಥಿಗಳ ಜೊತೆಯಲ್ಲಿ ಅಥವಾ ಪಿತೃಗಳ ಜೊತೆಯಲ್ಲಿ ಯಾರು ಆಹಾರವನ್ನು ಸ್ವೀಕರಿಸುತ್ತಾರೆಯೋ ಅವರು ಪುತ್ರ-ಪೌತ್ರರ ಜೊತೆಯಲ್ಲಿ ಸಂತೋಷಪಡುತ್ತಾನೆ. ಮರಣವನ್ನು ಹೊಂದಿದ ಅವರಿಗೆ ಶ್ರೇಷ್ಠವಾದ ಗತಿ ಉಂಟಾಗುತ್ತದೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಉಪವಾಸಾದಿವ್ರತಕಥನಂ ನಾಮ
ಪಂಚತ್ರಿಂಶೋತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಮೂವತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಮೂವತ್ತಾರನೆಯ ಅಧ್ಯಾಯ

ಪ್ರತಿಗ್ರಹದ ದೋಷಗಳು

ಯುಧಿಷ್ಠಿರಃ

ಬ್ರಾಹ್ಮಣೇಭ್ಯಃ ಪ್ರಯಚ್ಛಂತಿ ದಾನಾನಿ ವಿವಿಧಾನಿ ಚ ।
ದಾತೃಪ್ರತಿಗ್ರಹೀತ್ರೋರ್ವಾ ಕೋ ವಿಶೇಷಃ ಪಿತಾಮಹ ॥೧॥

ಯುಧಿಷ್ಠಿರ– ಎಲೈ ಪಿತಾಮಹನೇ, ಬ್ರಾಹ್ಮಣರಿಗೆ ವಿವಿಧ ದಾನಗಳನ್ನು ಕೊಡುತ್ತಾರೆ. ಅಲ್ಲಿ ದಾತೃಗಳಿಗೂ ಮತ್ತು ಸ್ವೀಕಾರ ಮಾಡುವವರಿಗೂ ಯಾವ ವಿಶೇಷವು ಉಂಟಾಗುತ್ತದೆ.

ಭೀಷ್ಮಃ

ಸಾಧೋರ್ಯಃ ಪ್ರತಿಗೃಹ್ಣೀಯಾತ್ ತಥೈವಾಸಾಧುತೋ ದ್ವಿಜಃ ।
ಗುಣವತ್ಯಲ್ಪದೋಷಃ ಸ್ಯಾನ್ನಿರ್ಗುಣೇ ತು ನಿಮಜ್ಜತಿ ॥೨॥

ಭೀಷ್ಮ– ಸಜ್ಜನರಿಂದ ಸ್ವೀಕಾರ ಮಾಡಬಹುದು ಅಥವಾ ಬ್ರಾಹ್ಮಣನು ದುಷ್ಟರಿಂದಲೂ ಸ್ವೀಕಾರ ಮಾಡಬಹುದು. ಸಜ್ಜನರಿಂದ ದಾನವನ್ನು ಸ್ವೀಕಾರ ಮಾಡಿದರೆ ಸ್ವೀಕಾರ ಮಾಡಿದವನಿಗೆ ಅಲ್ಪದೋಷವುಂಟಾಗುತ್ತದೆ. ದುರ್ಜನರಿಂದ ದಾನವನ್ನು ಸ್ವೀಕಾರ ಮಾಡಿದರೆ ಸ್ವೀಕಾರ ಮಾಡಿದವನು ಮುಳುಗಿ ಹೋಗುತ್ತಾನೆ.

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ವೃಷಾದರ್ಭೇಶ್ಚ ಸಂವಾದಂ ಸಪ್ತರ್ಷೀಣಾಂ ಚ ಭಾರತ ॥೩॥

ಎಲೈ ಭಾರತನೇ, ಈ ವಿಷಯದಲ್ಲಿಯೂ ಸಹ ವೃಷಾದರ್ಭಿಗೂ ಮತ್ತು ಸಪ್ತರ್ಷಿಗಳಿಗೂ ನಡೆದ ಸಂವಾದರೂಪವಾದ ಪುರಾತನ ಇತಿಹಾಸವನ್ನು ಹೇಳುತ್ತಾರೆ.

ಕಶ್ಯಪೋऽತ್ರಿರ್ವಸಿಷ್ಠಶ್ಚ ಭರದ್ವಾಜೋऽಥ ಗೌತಮಃ ।
ವಿಶ್ವಾಮಿತ್ರೋ ಜಮದಗ್ನಿಃ ಸಾಧ್ವೀ ಚೈವಾಪ್ಯರುಂಧತೀ ॥೪॥

ಸರ್ವೇಷಾಮಥ ತೇಷಾಂ ತು ಗಂಡಾऽಭೂತ್ಕರ್ಮಕಾರಿಕಾ ।
ಶೂದ್ರಃ ಪಶುಸಖಶ್ಚೈವ ಭರ್ತಾ ಚಾಸ್ಯಾ ಬಭೂವ ಹ ॥೫॥

ಕಶ್ಯಪ, ಅತ್ರಿ, ವಸಿಷ್ಠ, ಭರದ್ವಾಜ, ಗೌತಮ, ವಿಶ್ವಾಮಿತ್ರ, ಜಮದಗ್ನಿ, ಸಾಧ್ವಿಯಾದ ಅರುಂಧತಿ - ಇವರೆಲ್ಲರಿಗೂ ಗಂಡಾ ಎಂಬ ಹೆಸರಿನ ಶೂದ್ರವನಿತೆಯು ಸೇವಕಿಯಾಗಿದ್ದಳು. ಅವಳಿಗೆ ಪಶುಸಖನೆಂಬ ಪತಿಯಿದ್ದನು.

ತೇ ವೈ ಸರ್ವೇ ತಪಸ್ಯಂತಃ ಪುರಾ ಚೇರುರ್ಮಹೀಮಿಮಾಮ್ ।
ಸಮಾಧಿನೋಪಶಿಕ್ಷಂತೋ ಬ್ರಹ್ಮಲೋಕಂ ಸನಾತನಮ್ ॥೬॥

ಆ ಸಪ್ತರ್ಷಿಗಳೆಲ್ಲರೂ ತಪಸ್ಸನ್ನು ಮಾಡುತ್ತಾ ಸಮಾಧಿಯಿಂದ ಸನಾತನವಾದ ಬ್ರಹ್ಮಲೋಕವನ್ನು ಪಡೆಯಲು ಇಚ್ಛಿಸುತ್ತಾ ಈ ಭೂಮಿಯಲ್ಲಿ ಸಂಚರಿಸಿದರು.

ಅಥಾಭವದನಾವೃಷ್ಟಿರ್ಮಹತೀ ಕುರುನಂದನ ।
ಕೃಚ್ಛ್ರಪ್ರಾಣೋऽಭವದ್ ಯತ್ರ ಲೋಕೋऽಯಂ ವೈ ಕ್ಷುಧಾನ್ವಿತಃ ॥೭॥

ಎಲೈ ಕುರುನಂದನನೇ, ಒಮ್ಮೆ ದೊಡ್ಡ ಅನಾವೃಷ್ಟಿಯುಂಟಾಯಿತು. ಲೋಕದಲ್ಲಿ ಎಲ್ಲರೂ ಹಸಿವಿನಿಂದ ಬಳಲಿ ಪ್ರಾಣವನ್ನು ಉಳಿಸಿಕೊಳ್ಳುವುದೇ ಕಷ್ಟವಾಯಿತು.

ಕಸ್ಮಿಂಶ್ಚಿಚ್ಚ ಪುರಾ ಯಜ್ಞೇ ಯಾಜ್ಯೇನ ಶಿಬಿಸೂನುನಾ ।
ದಕ್ಷಿಣಾರ್ಥೇಽಥ ಋತ್ವಿಗ್ಭ್ಯೋ ದತ್ತಃ ಪುತ್ರೋ ನಿಜಃ ಕಿಲ ॥೮॥

ಹಿಂದೆ ಒಮ್ಮೆ ಶಿಬಿಪುತ್ರನಾದ ವೃಷಾದರ್ಭಿಯು ಒಂದು ಯಾಗದ ಸಂದರ್ಭದಲ್ಲಿ ಋತ್ವಿಜರಿಗೆ ದಕ್ಷಿಣಾರೂಪವಾಗಿ ತನ್ನ ಸ್ವಂತ ಪುತ್ರನನ್ನೇ ಕೊಟ್ಟಿದ್ದನಷ್ಟೆ?

ತಸ್ಮಿನ್‌ಕಾಲೇಽಥ ಸೋಽಲ್ಪಾಯುರ್ದಿಷ್ಟಾಂತಮಗಮತ್ ಪ್ರಭೋ ।
ತೇ ತಂ ಕ್ಷುಧಾಭಿಸಂತಪ್ತಾಃ ಪರಿವಾಯ್ರ್ಯೋಪತಸ್ಥಿರೇ ॥೯॥

ಎಲೈ ಪ್ರಭುವೇ, ಆ ಕಾಲದಲ್ಲಿ ಅವನು ಅಲ್ಪಾಯುವಾದ ಕಾರಣದಿಂದ ಮರಣವನ್ನು ಹೊಂದಿದನು. ಆ ಸಪ್ತರ್ಷಿಗಳೆಲ್ಲರೂ ಹಸಿವಿನಿಂದ ತಪ್ತರಾಗಿ ಆ ಶವವನ್ನು ಸುತ್ತುಗಟ್ಟಿ ನಿಂತರು.

ಯಾಜ್ಯಾತ್ಮಜಮಥೋ ದೃಷ್ಟ್ವಾ ಗತಾಸುಮೃಷಿಸತ್ತಮಾಃ ।
ಅಪಚಂತ ತದಾ ಸ್ಥಾಲ್ಯಾಂ ಕ್ಷುಧಾರ್ತಾಃ ಕಿಲ ಭಾರತ ॥೧೦॥

ಎಲೈ ಭಾರತನೇ, ಹಿಂದೆ ಯಾಜ್ಯ ಎಂಬ ಋಷಿಗೆ ದಕ್ಷಿಣೆರೂಪವಾಗಿ ಕೊಟ್ಟ ಕಾರಣದಿಂದ ಯಾಜ್ಯ ಪುತ್ರನೆನಿಸಿಕೊಂಡ ಆ ರಾಜಕುಮಾರನು ಮರಣವನ್ನು ಹೊಂದಿದುದನ್ನು ನೋಡಿ ಆ ಋಷಿಶ್ರೇಷ್ಠರು ಹಸಿವಿನಿಂದ ಬಳಲಿ ಒಂದು ಪಾತ್ರೆಯಲ್ಲಿ ಅವನ ಮಾಂಸವನ್ನು ಬೇಯಿಸಿದರು.

ನಿರಾದ್ಯೇ ಮರ್ತ್ಯಲೋಕೇಽಸ್ಮಿನ್ನಾತ್ಮಾನಂ ತೇ ಪರೀಪ್ಸವಃ ।
ಕೃಚ್ಛ್ರಮಾಪೇದಿರೇ ವೃತ್ತಿಮನ್ನಹೇತೋಸ್ತಪಸ್ವಿನಃ ॥೧೧॥

ಲೋಕದಲ್ಲಿ ಎಲ್ಲೂ ಅನ್ನವೇ ದೊರೆಯದಿದ್ದಾಗ ತಮ್ಮ ದೇಹವನ್ನು ಉಳಿಸಿಕೊಳ್ಳುವ ಸಲುವಾಗಿ ತಪಸ್ವಿಗಳಾದ ಅವರು ತಿನ್ನಬಾರದ ವಸ್ತುವನ್ನು ತಿನ್ನುವ ಇಂತಹ ಕೆಟ್ಟ ವೃತ್ತಿಯನ್ನು ಮಾಡಬೇಕಾಯಿತು.

ಅಟಮಾನೋಽಥ ತಾನ್ ಮಾರ್ಗೇ ಪಚಮಾನಾನ್ ಮಹೀಪತಿಃ ।
ರಾಜಾ ಶೈಬ್ಯೋ ವೃಷಾದರ್ಭಿಃ ಕ್ಲಿಶ್ಯಮಾನಾನ್ ದದರ್ಶ ಹ ॥೧೨॥

ರಾಜನಾದ ವೃಷಾದರ್ಭಿಯು ಸಂಚಾರ ಮಾಡುತ್ತಾ ಮಾರ್ಗದಲ್ಲಿ ಕ್ಲೇಶಪಡುತ್ತಾ ಮಾಂಸವನ್ನು ಬೇಯಿಸುತ್ತಿದ್ದ ಆ ಋಷಿಗಳನ್ನು ನೋಡಿದನು.

ವೃಷಾದರ್ಭಿಃ

ಪ್ರತಿಗ್ರಹಸ್ತಾರಯತಿ ಪುಷ್ಟಿರ್ವೈ ಪ್ರತಿಗ್ರಹ್ಣತಾಮ್ ।
ಮಯಿ ಯದ್ ವಿದ್ಯತೇ ವಿತ್ತಂ ತಚ್ಛೃಣುಧ್ವಂ ತಪೋಧನಾಃ ॥೧೩॥

ವೃಷಾದರ್ಭಿ– ಪ್ರತಿಗ್ರಹವು ಸಂಕಟದಿಂದ ಪಾರುಮಾಡುತ್ತದೆ. ಪ್ರತಿಗ್ರಹ ಮಾಡುವವರಿಗೆ ಪುಷ್ಟಿಯುಂಟಾಗುತ್ತದೆ. ಎಲೈ ತಪೋಧನರೇ, ನನ್ನಲ್ಲಿರುವ ಧನವನ್ನು ನೀಡುತ್ತೇನೆ. ಅದನ್ನು ಕೇಳಿ.

ಪ್ರಿಯೋ ಹಿ ಮೇ ಬ್ರಾಹ್ಮಣೋ ಯಾಚಮಾನೋ
ದದ್ಯಾಮಹಂ ವೋಽಶ್ವತರೀಸಹಸ್ರಮ್ ।
ಏಕೈಕಶಃ ಸವೃಷಾಃ ಸಂಪ್ರಸೂತಾಃ
ಸರ್ವೇಷಾಂ ವೈ ಶೀಘ್ರಗಾಃ ಶ್ವೇತಲೋಮಾಃ ॥೧೪॥

ನನಗೆ ಯಾಚಿಸುವ ಬ್ರಾಹ್ಮಣನು ಪ್ರಿಯನಾದವನು. ನಾನು ಅವನಿಗೆ ಸಹಸ್ರ ಹೇಸರಗತ್ತೆಗಳನ್ನು ಕೊಟ್ಟೇನು. ನಿಮ್ಮಲ್ಲಿ ಪ್ರತಿಯೊಬ್ಬರಿಗೂ ಒಂದೇ ಕರುವನ್ನು ಹಾಕಿರುವ ಹೋರಿಯಿಂದ ಕೂಡಿರುವ ಬಿಳಿಯ ಬಣ್ಣದ ಲೋಮವುಳ್ಳ, ಶೀಘ್ರವಾಗಿ ಸಂಚರಿಸುವ ಗೋವುಗಳನ್ನೂ ಕೊಡುತ್ತೇನೆ.

ಕುಲಂಭರಾನನಡುಹಃ ಶತಾನ್‌ಶತಾನ್
ಧುರ್ಯಾನ್ ಶುಭಾನ್ ಸರ್ವಶೋಽಹಂ ದದಾನಿ ।
ಪ್ರಷ್ಠೌಹೀನಾಂ ಪೀವರಾಂಶ್ಚೈವ ತಾವತ್
ಅಗ್ರ್ಯಾ ಗೃಷ್ಟ್ಯೋ ಧೇನವಃ ಸುವ್ರತಾಶ್ಚ ॥೧೫॥

ಕುಲವನ್ನು ಪೋಷಿಸುವ, ಭಾರವನ್ನು ಹೊರುವ, ಗಾಡಿಗೆ ಕಟ್ಟಲು ಯೋಗ್ಯವಾದ, ಶುಭವಾದ ನೂರು-ನೂರು ಎತ್ತುಗಳನ್ನು ಎಲ್ಲರಿಗೂ ಕೊಟ್ಟೇನು. ಚಿಕ್ಕವಯಸ್ಸಿನಲ್ಲೇ ಗರ್ಭವನ್ನು ಧರಿಸಿದ, ಪುಷ್ಟವಾದ, ಶ್ರೇಷ್ಠವಾದ, ಒಳ್ಳೆಯ ನಡತೆಯಿಂದ ಕೂಡಿದ, ಒಂದೇ ಬಾರಿ ಕರುವನ್ನು ಹಾಕಿರುವ ಧೇನುಗಳನ್ನೂ ಕೊಟ್ಟೇನು.

ವರಾನ್ ಗ್ರಾಮಾನ್ ವ್ರೀಹಿಯವಂ ರಸಾಂಶ್ಚ
ರತ್ನಂ ಚಾನ್ಯದ್ ದುರ್ಲಭಂ ಕಿಂ ದದಾನಿ ।
ಮಾ ಸ್ಮಭಕ್ಷ್ಯೇ ಭಾವಮೇವಂ ಕುರುಧ್ವಂ
ಪುಷ್ಟ್ಯರ್ಥಂ ವೈ ಕಿಂ ಪ್ರಯಚ್ಛಾಮ್ಯಹಂ ವಃ ॥೧೬॥

ಶ್ರೇಷ್ಠವಾದ ಗ್ರಾಮಗಳನ್ನೂ, ವ್ರೀಹಿಯವಗಳನ್ನೂ, ರಸಗಳನ್ನೂ ಮತ್ತು ರತ್ನಗಳನ್ನೂ ಕೊಡುವೆನು. ದುರ್ಲಭವಾದ ಬೇರೆ ಏನನ್ನು ಕೊಡಲಿ? ನೀವು ದೇಹವನ್ನು ಪೋಷಿಸುವುದಕ್ಕಾಗಿ ಅಭಕ್ಷ್ಯವಾದ ನರಮಾಂಸದಲ್ಲಿ ಇಚ್ಛೆಯನ್ನು ಹೊಂದಬೇಡಿ. ನಿಮಗೆ ಏನು ಕೊಡಲಿ ಎಂದು ಹೇಳಿ.

ಋಷಯಃ

ರಾಜನ್ ಪ್ರತಿಗ್ರಹೋ ರಾಜ್ಞೋ ಮಧ್ವಾಸ್ವಾದೋ ವಿಷೋಪಮಃ ।
ತಜ್ಜಾನಮಾನಃ ಕಸ್ಮಾತ್ ತ್ವಂ ಕುರುಷೇ ನಃ ಪ್ರಲೋಭನಮ್ ॥೧೭॥

ಋಷಿಗಳು– ಎಲೈ ರಾಜನೇ, ರಾಜನಿಂದ ಸ್ವೀಕರಿಸುವುದು ಮೇಲೆ ನೋಡಲು ಜೇನುತುಪ್ಪವಿದ್ದಂತೆ ಆದರೆ ಪರಿಣಾಮದಲ್ಲಿ ಅದು ವಿಷಪ್ರಾಯವಾದುದು. ಅದನ್ನು ತಿಳಿದ ನೀನು ಏಕೆ ನಮ್ಮನ್ನು ಪ್ರಲೋಭನಗೊಳಿಸುತ್ತಿದ್ದೀಯೆ?

ಕ್ಷತ್ರಂ ಹಿ ದೈವತಮಿವ ಬ್ರಾಹ್ಮಣಂ ಸಮುಪಾಶ್ರಿತಮ್ ।
ಅಮಲೋ ಹ್ಯೇಷ ತಪಸಾ ಪ್ರೀತಃ ಪ್ರೀಣಾತಿ ದೇವತಾಃ ॥೧೮॥

ಕ್ಷತ್ರಿಯರು ಬ್ರಾಹ್ಮಣರನ್ನು ದೇವತೆಯಂತೆ ಆಶ್ರಯಿಸಿರುತ್ತಾರೆ. ನಮ್ಮ ಈ ಋಷಿವರ್ಗವು ತಪಸ್ಸಿನಿಂದ ಯುಕ್ತರಾಗಿ ದೇವತೆಗಳನ್ನು ತೃಪ್ತಿಪಡಿಸುತ್ತಿದೆ (ಲಕ್ಷಾಲಂಕಾರ).

ಅಹ್ನಾಪೀಹ ತಪೋ ಜಾತು ಬ್ರಾಹ್ಮಣಸ್ಯೋಪಜಾಯತೇ ।
ತದ್ ದಾವ ಇವ ನಿರ್ದಹ್ಯಾತ್ ಪ್ರಾಪ್ತೋ ರಾಜಪ್ರತಿಗ್ರಹಃ ॥೧೯॥

ಬ್ರಾಹ್ಮಣರ ತಪಸ್ಸು ತಕ್ಷಣದಲ್ಲಿಯೇ ಫಲವನ್ನು ಕೊಡುತ್ತದೆ. ಆದರೆ ರಾಜನಿಂದ ಸ್ವೀಕಾರ ಮಾಡುವುದು (ರಾಜಪ್ರತಿಗ್ರಹವು) ಅದು ದಾವಾಗ್ನಿಯಂತೆ ದಹಿಸುತ್ತದೆ.

ಕುಶಲಂ ಸಹ ದಾನೇನ ರಾಜನ್ನಸ್ತು ಸದಾ ತವ ।
ಅರ್ಥಿಭ್ಯೋ ದೀಯತಾಂ ಸರ್ವಮಿತ್ಯುಕ್ತ್ವಾ ತೇ ತತೋ ಯಯುಃ ॥

ಎಲೈ ರಾಜನೇ, ನಿನಗೂ ಮತ್ತು ನಿನ್ನ ದಾನಗಳಿಗೂ ಕ್ಷೇಮವಾಗಲಿ. ಅದನ್ನು ಬಯಸುವವರಿಗೆ ಅದೆಲ್ಲವನ್ನೂ ಕೊಡು ಎಂದು ಹೇಳಿ ಆ ಋಷಿಗಳು ಅಲ್ಲಿಂದ ಹೊರಟರು.

ಅಪಕ್ವಮೇವ ತನ್ಮಾಂಸಮಭೂತ್ ತೇಷಾಂ ಚ ಧೀಮತಾಮ್ ।
ಅಥ ಹಿತ್ವಾ ಯಯುಃ ಸರ್ವೇ ವನಮಾಹಾರಕಾಂಕ್ಷಿಣಃ ॥೨೧॥

ಮೇಧಾವಿಗಳಾದ ಅವರು ಆ ಮಾಂಸವನ್ನು ಇನ್ನೂ ಪೂರ್ಣವಾಗಿ ಬೆಂದಿರಲಿಲ್ಲ. ಅವರೆಲ್ಲರೂ ಅದನ್ನು ಬಿಟ್ಟು ಕಾಡಿನಲ್ಲಿ ಸಿಗುವ ಆಹಾರವನ್ನು ಹುಡುಕುತ್ತಾ ಹೊರಟರು.

ತತಃ ಪ್ರಚೋದಿತಾ ರಾಜ್ಞಾ ವನಂ ಗತ್ವಾಽಸ್ಯ ಮಂತ್ರಿಣಃ ।
ಪ್ರಚೀಯೋದುಂಬರಾಣೀ ಸ್ಮ ದಾನಂ ದಾತುಂ ಪ್ರಚಕ್ರಮುಃ ॥೨೨॥

ಅನಂತರ ರಾಜನಿಂದ ಪ್ರೇರಿತರಾದ ಮಂತ್ರಿಗಳು ಕಾಡಿಗೆ ಹೋಗಿ ಅತ್ತಿ ಹಣ್ಣುಗಳನ್ನು ತೆಗೆದುಕೊಂಡು ಅದನ್ನು ದಾನವಾಗಿ ಕೊಡಲು ಉಪಕ್ರಮಿಸಿದರು.

ಉದುಂಬರಾಣ್ಯಥಾನ್ಯಾನಿ ಹೇಮಗರ್ಭಾಣ್ಯುಪಾಹರನ್ ।
ಭೃತ್ಯಾಸ್ತೇಷಾಂ ತತಸ್ತಾನಿ ಪ್ರಗ್ರಾಹಿತುಮುಪಾದ್ರವನ್ ॥೨೩॥

ಅತ್ತಿಹಣ್ಣುಗಳೊಳಗೆ ಚಿನ್ನವನ್ನಿಟ್ಟು ಭೃತ್ಯರು ತರುತ್ತಿರಲು ಮಂತ್ರಿಗಳು ಅದನ್ನು ಋಷಿಗಳಿಗೆ ಕೊಡಲು ಧಾವಿಸಿದರು.

ಗುರೂಣೇತಿ ವಿದಿತ್ವಾಥ ನ ಗ್ರಾಹ್ಯಾಣ್ಯತ್ರಿರಬ್ರವೀತ್ ।
ನ ಸ್ಮಹೇ ಮೂಢವಿಜ್ಞಾನಾ ನ ಸ್ಮಹೇ ಮಂದಬುದ್ಧಯಃ ।
ಹೈಮಾನೀಮಾನಿ ಜಾನೀಮಃ ಪ್ರತಿಬುದ್ಧಾಃ ಸ್ಮ ಜಾಗೃಮಃ ॥೨೪॥

ಅವು ಭಾರವಾಗಿದೆ ಎಂದು ತಿಳಿದ ಅತ್ರಿಗಳು ಇದನ್ನು ಸ್ವೀಕರಿಸಬಾರದು. ನಾವು ಜ್ಞಾನಶೂನ್ಯರಾಗುವುದು ಬೇಡ. ಮಂದಬುದ್ಧಿಗಳಾಗುವುದು ಬೇಡ. ಈ ಹಣ್ಣುಗಳು ಸುವರ್ಣದಿಂದ ಕೂಡಿವೆ ಎಂದು ನಾವು ತಿಳಿದಿದ್ದೇವೆ. ನಾವು ಎಚ್ಚರವಾಗಿದ್ದೇವೆ ಎಂದು ಹೇಳಿದರು.

ಇಹ ಹ್ಯೇತದುಪಾದತ್ತಂ ಪ್ರೇತ್ಯ ಸ್ಯಾತ್ ಕಟುಕೋದಯಮ್ ।
ಅಪ್ರತಿಗ್ರಾಹ್ಯಮೇವೈತತ್ ಪ್ರೇತ್ಯ ಚೇಹ ಸುಖೇಪ್ಸುನಾ ॥೨೫॥

ಇಲ್ಲಿ ಇದನ್ನು ಸ್ವೀಕರಿಸಿದರೆ ಮರಣಾನಂತರದಲ್ಲಿ ದುಃಖಫಲವುಂಟಾಗುತ್ತದೆ. ಮರಣಾನಂತರದಲ್ಲಿ ಸುಖವನ್ನು ಬಯಸುವವನು ಇದನ್ನು ಸ್ವೀಕರಿಸಲೇಬಾರದು (ಎಂದು ಹೇಳಿದರು).

ವಸಿಷ್ಠಃ

ಶತೇನ ನಿಷ್ಕಂ ಗಣಿತಂ ಸಹಸ್ರೇಣ ಚ ಸಮ್ಮಿತಮ್ ।
ಯಥಾ ಬಹು ಪ್ರತೀಚ್ಛನ್ ಹಿ ಪಾಪಿಷ್ಠಾಂ ಲಭತೇ ಗತಿಮ್ ॥೨೬॥

ಸಾವಿರ ನಿಷ್ಕಗಳನ್ನು ನೂರು ಎಂದು ಎಣಿಸಿ ಕೊಡಲಾಗುತ್ತಿದೆ. ಹೆಚ್ಚು ಹೆಚ್ಚು ಪ್ರತಿಗ್ರಹ ಮಾಡಿದಂತೆಲ್ಲಾ ಹೆಚ್ಚು ಹೆಚ್ಚು ಪಾಪದ ಗತಿಯನು ಹೊಂದಬೇಕಾಗುತ್ತದೆ.

ಕಶ್ಯಪಃ

ಯತ್ ಪೃಥಿವ್ಯಾಂ ವ್ರೀಹಿಯವಂ ಹಿರಣ್ಯಂ ಪಶವಃ ಸ್ತ್ರಿಯಃ ।
ಸರ್ವಂ ತನ್ನಾಲಮೇಕಸ್ಯ ತಸ್ಮಾದ್ ವಿದ್ವಾನ್ ಶಮಂ ವ್ರಜೇತ್ ॥೨೭॥

ಕಶ್ಯಪ– ಭೂಮಿಯಲ್ಲಿ ಎಷ್ಟು ಹಿರಣ್ಯವಿದೆಯೋ, ಎಷ್ಟು ಪಶುಗಳು ಮತ್ತು ಸ್ತ್ರೀಯರಿದ್ದಾರೆಯೋ ಅವರೆಲ್ಲರೂ ಒಬ್ಬನ ಭೋಗಕ್ಕೆ ಸಾಕಾಗುವುದಿಲ್ಲ (ಒಬ್ಬನಿಗೆ ತೃಪ್ತಿಯನ್ನುಂಟು ಮಾಡುವುದಿಲ್ಲ). ಆದ್ದರಿಂದ ವಿದ್ವಾಂಸನಾದವನು ವೈರಾಗ್ಯವನ್ನು ಹೊಂದಬೇಕು.

ಭರದ್ವಾಜಃ

ಉತ್ಪನ್ನಸ್ಯ ರುರೋಃ ಶೃಂಗಂ ವರ್ಧಮಾನಸ್ಯ ವರ್ಧತೇ ।
ಪ್ರಾರ್ಥನಾ ಪುರುಷಸ್ಯೇವ ತಸ್ಯ ಮಾತ್ರಾ ನ ವಿದ್ಯತೇ ॥೨೮॥

ಭರದ್ವಾಜರು– ರುರುವಿನ ಮರಿಯು ಜನಿಸಿದ ಮೇಲೆ ಅದು ಬೆಳೆದಂತೆ ಅದರ ಕೊಂಬು ಬೆಳೆಯುತ್ತದೆ. ಪುರುಷನ ಆಸೆಯೂ ಹಾಗೆಯೇ. ಅದಕ್ಕೆ ಒಂದು ಮಿತಿಯಿಲ್ಲ.

ಗೌತಮಃ

ನ ತಲ್ಲೋಕೇ ದ್ರವ್ಯಮಸ್ತಿ ಯಲ್ಲೋಕಂ ಪ್ರತಿಪೂರಯೇತ್ ।
ಸಮುದ್ರಕಲ್ಪಃ ಪುರುಷೋ ನ ಕದಾಚನ ಪೂರ್ಯತೇ ॥೨೯॥

ಗೌತಮರು– ಲೋಕವನ್ನು ಪೂರ್ಣಗೊಳಿಸುವಂತಹ ದ್ರವ್ಯವು ಲೋಕದಲ್ಲಿ ಯಾವುದೂ ಇಲ್ಲ. ಪುರುಷನು ಸಮುದ್ರದಂತೆ ಎಂದೂ ತುಂಬುವುದಿಲ್ಲ.

ವಿಶ್ವಾಮಿತ್ರಃ

ಕಾಮಂ ಕಾಮಯಮಾನಸ್ಯ ಯದಾ ಕಾಮಃ ಸಮೃಧ್ಯತೇ ।
ಅಥೈನಮಪರಃ ಕಾಮಸ್ತೃಷ್ಣಾ ವಿಧ್ಯತಿ ಬಾಣವತ್ ॥೩೦॥

ವಿಶ್ವಾಮಿತ್ರ– ವಿಷಯಗಳನ್ನು ಅಪೇಕ್ಷಿಸುವ ಮನುಷ್ಯನಿಗೆ ಯಾವಾಗ ಆ ಅಪೇಕ್ಷಿತ ವಿಷಯಗಳ ಸಮೃದ್ಧಿಯುಂಟಾಗುತ್ತದೆಯೋ ಆಗ ಅವನಿಗೆ ಇನ್ನೊಂದು ಆಸೆಯು ಬಾಣದಂತೆ ಅವನ ಮನಸ್ಸಿನಲ್ಲಿ ನಾಟಿ ಗಾಯಗೊಳಿಸುತ್ತದೆ.

ಜಮದಗ್ನಿಃ

ಪ್ರತಿಗ್ರಹೇ ಸಂಯಮೋ ವೈ ತಪೋ ಧಾರಯತೇ ಧ್ರುವಮ್ ।
ತದ್ ಧನಂ ಬ್ರಾಹ್ಮಣಸ್ಯೇಹ ಲುಭ್ಯಮಾನಸ್ಯ ವಿಸ್ರವೇತ್ ॥೩೧॥

ಜಮದಗ್ನಿ– ಪ್ರತಿಗ್ರಹವನ್ನು ಮಾಡದಿರುವುದು ತಪಸ್ಸನ್ನು ನಿಶ್ಚಿತವಾಗಿ ಉಳಿಸುತ್ತದೆ. ತಪಸ್ಸೇ ಈ ಲೋಕದಲ್ಲಿ ಬ್ರಾಹ್ಮಣನ ಧನ. ಆಸೆಯನ್ನು ಮಾಡುವವನಿಗೆ ಆ ಧನವು ಸೋರಿ ಹೋಗುತ್ತದೆ.

ಅತ್ರಿಃ

ನ ಜಾತು ಕಾಮಃ ಕಾಮಾನಾಮುಪಭೋಗೇನ ಶಾಮ್ಯತಿ ।
ಹವಿಷಾ ಕೃಷ್ಣವರ್ತ್ಮೇವ ಭೂಯಸೇವಾಭಿವರ್ಧತೇ ॥೩೨॥

ಅತ್ರಿ– ಆಸೆಯು ಆಶಿಸಿದ ಪದಾರ್ಥಗಳ ಭೋಗದಿಂದ ಎಂದೂ ಉಪಶಮನವನ್ನು ಹೊಂದುವುದಿಲ್ಲ. ಹವಿಸ್ಸನ್ನು ಹಾಕಿದ ಅಗ್ನಿಯಂತೆ ಪುನಃ ಅಭಿವೃದ್ಧಿಯನ್ನೇ ಹೊಂದುತ್ತದೆ.

ಅರುಂಧತೀ

ಧರ್ಮಾರ್ಥಂ ಸಂಚಯೋ ಯೋ ವೈ ದ್ರವ್ಯಾಣಾಂ ಪಕ್ಷಸಮ್ಮತಃ ।
ತಪಃಸಂಚಯ ಏವೇಹ ವಿಶಿಷ್ಟೋ ದ್ರವ್ಯಸಂಚಯಾತ್ ॥೩೩॥

ಅರುಂಧತೀ– ಧರ್ಮಾರ್ಥವಾಗಿ ದ್ರವ್ಯಸಂಚಯವು ಒಂದು ಪಕ್ಷದವರಿಗೆ ಮಾತ್ರ ಸಮ್ಮತವಾದುದು. ಈ ಲೋಕದಲ್ಲಿ ದ್ರವ್ಯಸಂಚಯಕ್ಕಿಂತಲೂ ತಪಸ್ಸಿನ ಸಂಚಯವೇ ಶ್ರೇಷ್ಠವಾದುದು.

ಗಂಡಾ

ಉಗ್ರಾದಿತೋ ಭಯಾದ್ ಯಸ್ಮಾದ್ ಬಿಭ್ಯತೀಮೇ ಮಮೇಶ್ವರಾಃ ।
ಬಲೀಯಾಂಸೋ ದುರ್ಬಲವದ್ ಬಿಭೇಮ್ಯಹಮತಃ ಪರಮ್ ॥೩೪॥

ಗಂಡಾ– ನನ್ನ ಪ್ರಭುಗಳಾದ ಈ ಋಷಿಗಳು ತಪೋಬಲವನ್ನು ಹೊಂದಿದ್ದರೂ ತೀವ್ರವಾದ ಈ ಪ್ರತಿಗ್ರಹದ ಭಯದಿಂದ ದುರ್ಬಲರಂತೆ ಭಯಪಡುತ್ತಿದ್ದಾರೆ. ಆದ್ದರಿಂದ ನಾನೂ ಪ್ರತಿಗ್ರಹಕ್ಕೆ ಭಯಪಡುತ್ತೇನೆ.

ಪಶುಸಖಃ

ಯದ್ಧ್ಯೇ ಧರ್ಮೇ ಪರಂ ನಾಸ್ತಿ ಬ್ರಾಹ್ಮಣಾಸ್ತದ್ ಧನಂ ವಿದುಃ ।
ವಿನಯಾರ್ಥಂ ಸುವಿದ್ವಾಂಸಮುಪಾಸೇಯಂ ಯಥಾತಥಮ್ ॥೩೫॥

ಪಶುಸಖ– ಧರ್ಮದ ವಿಷಯದಲ್ಲಿ ಯಾವುದಕ್ಕಿಂತ ಇನ್ನೊಂದು ಶ್ರೇಷ್ಠವಾದುದಿಲ್ಲವೋ ಅಂತಹದನ್ನೇ ಬ್ರಾಹ್ಮಣರು ಧನವೆಂದು ತಿಳಿಯುತ್ತಾರೆ. ನಾನೂ ಸಹ ಅಂತಹ ಯಥಾರ್ಥವಾದ ಜ್ಞಾನವನ್ನು ಸಂಪಾದಿಸಿ ಈ ವಿದ್ವಾಂಸರ ಸೇವೆಯನ್ನು ಮಾಡಲು ಬಯಸುತ್ತೇನೆ.

ಋಷಯಃ

ಕುಶಲಂ ಸಹ ದಾನಾಯ ತಸ್ಮೈ ಯಸ್ಯ ಪ್ರಜಾ ಇಮಾಃ ।
ಫಲಾನ್ಯುಪಧಿಯುಕ್ತಾನಿ ಯ ಏವಂ ನಃ ಪ್ರಯಚ್ಛಸಿ ॥೩೬॥

ಋಷಿಗಳು– ಯಾವ ರಾಜನ ಭೃತ್ಯರು ಹೀಗೆ ಸುವರ್ಣದಿಂದ ಕೂಡಿದ ಫಲಗಳನ್ನು ನಮಗೆ ಕೊಡಲು ಬಯಸುತ್ತಿದ್ದಾರೆಯೋ ಅಂತಹ ರಾಜನಿಗೂ, ಅವನ ದಾನಕ್ಕೂ ಸಹ ಕ್ಷೇಮವಿರಲಿ.

ಭೀಷ್ಮಃ

ಇತ್ಯುಕ್ತ್ವಾ ಹೇಮಗರ್ಭಾಣಿ ಹಿತ್ವಾ ತಾನಿ ಫಲಾನಿ ತೇ ।
ಋಷಯೋ ಜಗ್ಮುರನ್ಯತ್ರ ಸರ್ವ ಏವ ಧೃತವ್ರತಾಃ ॥೩೭॥

ಭೀಷ್ಮ– ಹೀಗೆ ಹೇಳಿ ಹೇಮಗರ್ಭವುಳ್ಳ ಫಲಗಳನ್ನು ತ್ಯಜಿಸಿ ವ್ರತವನ್ನು ಧರಿಸಿದ ಎಲ್ಲ ಋಷಿಗಳೂ ಬೇರೆ ಸ್ಥಳಕ್ಕೆ ಹೋದರು.

ಮಂತ್ರಿಣಃ

ಉಪಧಿಂ ಶಂಕಮಾನಾಸ್ತೇ ಹಿತ್ವೇಮಾನಿ ಫಲಾನಿ ವೈ ।
ತತೋಽನ್ಯೇನೈವ ಗಚ್ಛಂತಿ ವಿದಿತಂ ತೇಽಸ್ತು ಪಾರ್ಥಿವ ॥೩೮॥

ಮಂತ್ರಿಗಳು– ಈ ಫಲಗಳಲ್ಲಿ ಏನೋ ಮೋಸವಿದೆ ಎಂದು ಶಂಕಿಸಿದ ಈ ಋಷಿಗಳು ಬೇರೆ ಮಾರ್ಗದಲ್ಲೇ ಹೋಗುತ್ತಿದ್ದಾರೆ. ರಾಜನೇ, ಈ ವಿಷಯವು ನಿನಗೆ ತಿಳಿದಿರಲಿ.

ಇತ್ಯುಕ್ತಃ ಸ ತು ಭೃತ್ಯೈಸ್ತೈರ್ವೃಷಾದರ್ಭಿಶ್ಚುಕೋಪ ಹ ।
ತೇಷಾಂ ಸಂಪ್ರತಿಕರ್ತುಂ ಚ ಸರ್ವೇಷಾಮಗಮದ್ ಗೃಹಮ್ ॥೩೯॥

ಭೃತ್ಯರಾದ ಆ ಮಂತ್ರಿಗಳ ಮಾತನ್ನು ಕೇಳಿ ವೃಷಾದರ್ಭಿಯು ಕೋಪಗೊಂಡನು. ಅವನು ಅವರೆಲ್ಲರಿಗೂ ಚೆನ್ನಾಗಿ ಪ್ರತೀಕಾರವನ್ನು ಮಾಡಲು ತನ್ನ ಅರಮನೆಗೆ ಹೋದನು.

ಸ ಗತ್ವಾಽಹವನೀಯೇಽಗ್ನೌ ತೀವ್ರಂ ನಿಯಮಮಾಸ್ಥಿತಃ ।
ಜುಹಾವ ಸಂಸೃತಾಂ ಮಂತ್ರೈರೇಕೈಕಾಮಾಹುತಿಂ ನೃಪಃ ॥೪೦॥

ಅವನು ಅರಮನೆಗೆ ಹೋಗಿ ತೀವ್ರವಾದ ನಿಯಮವನ್ನು ಪಾಲಿಸಿ ಆಹವನಾಗ್ನಿಯಲ್ಲಿ ಮಂತ್ರಪೂತವಾದ ಒಂದೊಂದು ಆಹುತಿಯನ್ನು ಕೊಡಲು ಪ್ರಾರಂಭಿಸಿದನು.

ತಸ್ಮಾದಗ್ನೇಃ ಸಮುತ್ತಸ್ಥೌ ಕೃತ್ಯಾ ಲೋಕಭಯಂಕರೀ ।
ತಸ್ಯಾ ನಾಮ ವೃಷಾದರ್ಭಿರ್ಯಾತುಧಾನೀತ್ಯಥಾಕರೋತ್ ॥೪೧॥

ಆ ಅಗ್ನಿಯಿಂದ ಲೋಕಭಯಂಕರನಾದ ಒಂದು ಭೂತವು ಎದ್ದುಬಂದಿತು. ಅದಕ್ಕೆ ವೃಷಾದರ್ಭಿಯು ಯಾತುಧಾನೀ ಎಂದು ನಾಮಕರಣವನ್ನು ಮಾಡಿದನು.

ಸಾ ಕೃತ್ಯಾ ಕಾಲರಾತ್ರೀವ ಕೃತಾಂಜಲಿರುಪಸ್ಥಿತಾ ।
ವೃಷಾದರ್ಭಿಂ ನರಪತಿಂ ಕಿಂ ಕರೋಮೀತಿ ಚಾಬ್ರವೀತ್ ॥೪೨॥

ಕಾಲರಾತ್ರಿಯಂತಿದ್ದ ಆ ಭೂತವು ಕೈಗಳನ್ನು ಮುಗಿದು ವೃಷಾದರ್ಭಿಯ ಸಮೀಪದಲ್ಲಿನಿಂತು ರಾಜನಾದ ಅವನನ್ನು ಕುರಿತು ಏನು ಮಾಡಲಿ ಎಂದು ಕೇಳಿತು.

ವೃಷಾದರ್ಭಿಃ

ಋಷೀಣಾಂ ಗಚ್ಛ ಸಪ್ತಾನಾಮರುಂಧತ್ಯಾಸ್ತಥೈವ ಚ ।
ದಾಸೀಭರ್ತುಶ್ಚ ದಾಸ್ಯಾಶ್ಚ ಮನಸಾ ನಾಮ ಧಾರಯ ॥೪೩॥

ವೃಷಾದರ್ಭಿ– ಸಪ್ತರ್ಷಿಗಳ ಮತ್ತು ಅರುಂಧತಿಯ ಮತ್ತು ಸೇವಕಿಯ ಮತ್ತು ಸೇವಕಿಯ ಪತಿಯ ಸಮೀಪಕ್ಕೆ ಹೋಗು. ಅವರ ಹೆಸರುಗಳನ್ನು ಮನಸ್ಸಿನಲ್ಲಿಯೇ ಚೆನ್ನಾಗಿ ಇಟ್ಟುಕೋ.

ಜ್ಞಾತ್ವಾ ನಾಮಾನಿ ಚೈತೇಷಾಂ ಸರ್ವಾನೇತಾನ್ ವಿನಾಶಯ ।
ವಿನಷ್ಟೇಷು ಯಥಾ ಸ್ವೈರಂ ಗಚ್ಛ ಯತ್ರೇಪ್ಸಿತಂ ತವ ॥೪೪॥

ಅವರ ಹೆಸರುಗಳನ್ನು ತಿಳಿದು ಅವರೆಲ್ಲರನ್ನೂ ವಿನಾಶಗೊಳಿಸು. ಅವರು ವಿನಾಶವನ್ನು ಹೊಂದಿದ ಮೇಲೆ ನಿನ್ನ ಮನಸ್ಸಿಗೆ ಬಂದಂತೆ ನೀನು ಹೋಗು.

ಸಾ ತಥೇತಿ ಪ್ರತಿಶ್ರುತ್ಯ ಯಾತುಧಾನೀ ಸ್ವರೂಪಿಣೀ ।
ಜಗಾಮ ತದ್ವನಂ ಯತ್ರ ವಿಚೇರುಸ್ತೇ ಮಹರ್ಷಯಃ ॥೪೫॥

ಆ ಭೂತವು ಹಾಗೆಯೇ ಆಗಲಿ ಎಂದು ಹೇಳಿ ತನ್ನ ನಿಜರೂಪವನ್ನೇ ತೆಗೆದುಕೊಂಡು ಆ ಮಹರ್ಷಿಗಳು ಸಂಚರಿಸುತ್ತಿದ್ದ ವನಕ್ಕೆ ಹೋಯಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಪ್ರತಿಗ್ರಹದೂಷಣಂ ನಾಮ
ಷಟ್‌ತ್ರಿಂಶೋತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಮೂವತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಮೂವತ್ತೇಳನೆಯ ಅಧ್ಯಾಯ

ಪ್ರಚ್ಛನ್ನವೇಷದಿಂದ ಬಂದ ಇಂದ್ರನಿಂದ ಯಾತುಧಾನಿಯ ವಿನಾಶ.

ಭೀಷ್ಮಃ

ಅಥಾತ್ರಿಪ್ರಮುಖಾ ರಾಜನ್ ವನೇ ತಸ್ಮಿನ್ ಮಹರ್ಷಯಃ ।
ವ್ಯಚರನ್ ಭಕ್ಷಯಂತೋ ವೈ ಮೂಲಾನಿ ಚ ಫಲಾನಿ ಚ ॥೧॥

ಭೀಷ್ಮ- ಎಲೈ ರಾಜನೇ, ಅನಂತರ ಅತ್ರಿ ಮೊದಲಾದ ಮಹರ್ಷಿಗಳು ಆ ವನದಲ್ಲಿ ಗೆಡ್ಡೆ-ಗೆಣಸುಗಳನ್ನು ಭಕ್ಷಿಸುತ್ತಾ ಸಂಚರಿಸಿದರು.

ಅಥಾಪಶ್ಯನ್ ಸುಪೀನಾಂಸಪಾಣಿಪಾದಮುಖೋದರಮ್ ।
ಪರಿವ್ರಜಂತಂ ಸ್ಥೂಲಾಂಗಂ ಪರಿವ್ರಾಜಂ ಶುನಃಸಖಿಮ್ ॥೨॥

ಆಗ ಅವರು ಅತ್ಯಂತ ಪುಷ್ಟವಾದ ಭುಜ, ಪಾಣಿ, ಮುಖ, ಉದರಗಳನ್ನು ಹೊಂದಿದ್ದ, ಸ್ಥೂಲಶರೀರವನ್ನು ಧರಿಸಿ ಸಂಚರಿಸುತ್ತಿದ್ದ ನಾಯಿಯ ಸಖನಾದ ಒಬ್ಬ ಪರಿವ್ರಾಜಕನನ್ನು ನೋಡಿದರು. (ಋಷಿಗಳ ರಕ್ಷಣೆಗಾಗಿ ಇಂದ್ರನು ತ್ರಿದಂಡೀ ಸಂನ್ಯಾಸಿ ವೇಷದಲ್ಲಿ ಅಲ್ಲಿಗೆ ಬಂದನೆಂದು ತಿಳಿಯಬೇಕು) - ಲಕ್ಷಾಲಂಕಾರ.

ಅರುಂಧತೀ ತು ತಂ ದೃಷ್ಟ್ವಾ ಸರ್ವಾಂಗೋಪಚಿತಂ ಶುಭಾ ।
ಭವಿತಾರೋ ಭವಂತೋ ವೈ ನೈವಮಿತ್ಯಬ್ರವೀದೃಷೀನ್ ॥೩॥

ಶುಭಳಾದ ಅರುಂಧತಿಯು ಸರ್ವಾಂಗಗಳಲ್ಲಿಯೂ ಪುಷ್ಟನಾದ ಅವನನ್ನು ನೋಡಿ ನೀವು ಹೀಗೆ ಆಗುವುದಿಲ್ಲ ಎಂದು ಆ ಋಷಿಗಳಿಗೆ ಹೇಳಿದಳು.

ವಸಿಷ್ಠಃ

ನೈತಸ್ಯೇಹ ಯಥಾಽಸ್ಮಾಕಮಗ್ನಿಹೋತ್ರಮನಿರ್ಹೃತಮ್ ।
ಸಾಯಂ ಪ್ರಾತಶ್ಚ ಹೋತವ್ಯಂ ತೇನ ಪೀವಾನ್ ಶುನಃಸಖಿಃ ॥೪॥

ವಸಿಷ್ಠ- ನಮಗಿರುವಂತೆ ಸಾಯಂಕಾಲ ಮತ್ತು ಪ್ರಾತಃಕಾಲದಲ್ಲಿ ಇವನಿಗೆ ಅಗ್ನಿಹೋತ್ರವನ್ನು ಮಾಡಲಿಲ್ಲ, ಮಾಡಬೇಕು ಎಂಬ ಚಿಂತೆಯಿಲ್ಲ. ಆದ್ದರಿಂದ ಶುನಃಸಖನಾದ ಇವನು ಪುಷ್ಟನಾಗಿದ್ದಾನೆ.

ಅತ್ರಿಃ

ನೈತಸ್ಯೇಹ ಯಥಾಽಸ್ಮಾಕಂ ಕ್ಷುಧಾ ವೀರ್ಯಂ ಸಮಾಹತಮ್ ।
ಕೃಚ್ಛ್ರಾಧೀತಂ ಪ್ರನಷ್ಟಂ ಚ ತೇನ ಪೀವಾನ್ ಶುನಃಸಖಃ ॥೫॥

ಅತ್ರಿ– ನಮ್ಮಂತೆ ಇವನಿಗೆ ಹಸಿವಿನಿಂದ ಸಾಮರ್ಥ್ಯವು ನಾಶಹೊಂದಿ ಕಷ್ಟಪಟ್ಟು ಮಾಡಿದ ಅಧ್ಯಯನವು ನಾಶವನ್ನು ಹೊಂದಿಲ್ಲ. ಆದ್ದರಿಂದ ಶುನಃಸಖನು ಪುಷ್ಟನಾಗಿದ್ದಾನೆ.

ವಿಶ್ವಾಮಿತ್ರಃ

ನೈತಸ್ಯೇಹ ಯಥಾಽಸ್ಮಾಕಂ ಶಶ್ವಚ್ಛಾಸ್ತ್ರಂ ಜರದ್ಗವಃ ।
ಅಲಸಃ ಕ್ಷುತ್ಪರೋ ಮೂರ್ಖಸ್ತೇನ ಪೀವಾನ್ ಶುನಃಸಖಃ ॥೬॥

ವಿಶ್ವಾಮಿತ್ರ– ನಮ್ಮಂತೆ ಇವನಿಗೆ ಶಾಸ್ತ್ರವು ಅಪ್ರಯೋಜಕವಾಗಿಲ್ಲ. ಜೊತೆಗೆ ಇವನು ಆಲಸ್ಯವುಳ್ಳವನು, ಹಸಿವಿನ ನಿವಾರಣೆಯಲ್ಲಿಯೇ ಪ್ರಯತ್ನಶೀಲನಾದವನು ಮತ್ತು ಮೂರ್ಖ. ಆದ್ದರಿಂದ ಶುನಃಸಖನು ಪುಷ್ಟನಾಗಿದ್ದಾನೆ.

ಜಮದಗ್ನಿಃ

ನೈತಸ್ಯೇಹ ಯಥಾಽಸ್ಮಾಕಂ ಭಕ್ತಮಿಂಧನಮೇವ ಚ ।
ಸಂಚಿಂತ್ಯಂ ವಾರ್ಷಿಕಂ ಕಿಂಚಿತ್ ತೇನ ಪೀವಾನ್ ಶುನಃಸಖಃ ॥೭॥

ಜಮದಗ್ನಿ– ನಮ್ಮಂತೆ ಇವನು ಒಂದು ವರ್ಷಕ್ಕಾಗುವಷ್ಟು ಆಹಾರ ಮತ್ತು ಕಟ್ಟಿಗೆಯನ್ನು ಸಂಗ್ರಹ ಮಾಡಿ ಇಡಬೇಕಾಗಿಲ್ಲ. ಆದ್ದರಿಂದ ಶುನಃಸಖನು ಪುಷ್ಟನಾಗಿದ್ದಾನೆ.

ಕಶ್ಯಪಃ

ನೈತಸ್ಯೇಹ ಯಥಾಽಸ್ಮಾಕಂ ಚತ್ವಾರಶ್ಚ ಸಹೋದರಾಃ ।
ದೇಹಿದೇಹೀತಿ ಭಿಕ್ಷಂತಿ ತೇನ ಪೀವಾನ್ ಶುನಃಸಖಃ ॥೮॥

ಕಶ್ಯಪರು– ನಮ್ಮಂತೆ ಇವನಿಗೆ ನಾಲ್ಕು ಜನ ಸಹೋದರರು ದೇಹಿ-ದೇಹಿ ಎಂದು ಕಾಡುವುದಿಲ್ಲ. ಆದ್ದರಿಂದ ಶುನಃಸಖನು ಪುಷ್ಟನಾಗಿದ್ದಾನೆ.

ಭರದ್ವಾಜಃ

ನೈತಸ್ಯೇಹ ಯಥಾऽಸ್ಮಾಕಂ ಬ್ರಹ್ಮಬಂಧೋರಚೇತಸಃ ।
ಶೋಕೋ ಭಾರ್ಯಾಪವಾದೇನ ತೇನ ಪೀವಾನ್ ಶುನಃಸಖಿಃ ॥೯॥

ನಮ್ಮಂತೆ ಬ್ರಹ್ಮಬಂಧುವೂ, ಚೇತನ ಹೀನನೂ ಆದ ಇವನಿಗೆ ಪತ್ನಿಯ ಅಪವಾದದಿಂದ ಶೋಕವಿಲ್ಲ. ಆದ್ದರಿಂದ ಶುನಃಸಖನು ಪುಷ್ಟನಾಗಿದ್ದಾನೆ.

ಗೌತಮಃ

ನೈತಸ್ಯೇದ್ಯ ಯಥಾऽಸ್ಮಾಕಂ ತ್ರಿಕಾಲೋಹ್ಯಂ ಹಿ ರಾಂಕವಮ್ ।
ಏಕೈಕಂ ಹಿ ತ್ರಿಚರ್ಮೀಯಂ ತೇನ ಪೀವಾನ್ ಶುನಃಸಖಿಃ ॥೧೦॥

ಗೌತಮರು– ನಮ್ಮಂತೆ ಇವನು ಮೂರು-ಮೂರು ಕೃಷ್ಣಚರ್ಮವನ್ನು ಒಟ್ಟಿಗೆ ಮಾಡಿದ. ಮೂರುಚರ್ಮಗಳನ್ನು ಮೂರು ಕಾಲದಲ್ಲಿಯೂ ಹೊರಬೇಕಾಗಿಲ್ಲ. ಆದ್ದರಿಂದ ಶುನಃಸಖನು ಪುಷ್ಟನಾಗಿದ್ದಾನೆ.

ಭೀಷ್ಮಃ

ಅಥ ದೃಷ್ಟ್ವಾ ಪರಿವ್ರಾಟ್ ಸ ತಾನ್ ಮಹರ್ಷೀನ್ ಶುನಃಸಖಿಃ ।
ಅಭಿಗಮ್ಯ ಯಥಾನ್ಯಾಯಂ ಪಾಣಿಸ್ಪರ್ಶಮಥಾऽಚರತ್ ॥೧೧॥

ಭೀಷ್ಮ– ಆಗ ಶುನಃಸಖನಾದ ಆ ಪರಿವ್ರಾಜಕನು ಆ ಮಹರ್ಷಿಗಳನ್ನು ನೋಡಿ ಅವನ ಬಳಿಗೆ ಹೋಗಿ ನ್ಯಾಯಾನುಗುಣವಾಗಿ ಅವರನ್ನು ತನ್ನ ಹಸ್ತದಿಂದ ಸ್ಪರ್ಶಿಸಿದನು.

ಪರಿಚರ್ಯಾಂ ವನೇ ತಾಂ ತು ಕ್ಷುತ್ತೃಷ್ಣಾತಕಾರಿಕಾಮ್ ।
ಅನ್ಯೋನ್ಯೇನ ನಿವೇದ್ಯಾಥ ಪ್ರಾತಿಷ್ಠಂತ ಸಹೈವ ತೇ ॥೧೨॥

ಅವರು ಕಾಡಿನಲ್ಲಿ ಹಸಿವನ್ನು ಇಂಗಿಸಿಕೊಳ್ಳಲು ತಿರುಗಾಡುತ್ತಿರುವುದನ್ನು ಪರಸ್ಪರವಾಗಿ ಮಾತನಾಡಿಕೊಂಡು ಅಲ್ಲಿಂದ ಶುನಃಸಖನ ಜೊತೆಯಲ್ಲಿ ಎಲ್ಲರೂ ಹೊರಟರು.

ಏಕನಿಶ್ಚಯಕಾರ್ಯಾಶ್ಚ ವ್ಯಚರಂತ ವನಾನಿ ತೇ ।
ಆದದಾನಾಃ ಸಮುದ್ಧೃತ್ಯ ಮೂಲಾನಿ ಚ ಫಲಾನಿ ಚ ॥೧೩॥

ಒಂದೇ ನಿರ್ಧಾರ ಮತ್ತು ಒಂದೇ ಉದ್ದೇಶವನ್ನು ಹೊಂದಿದ ಅವರು ಕಾಡುಗಳಲ್ಲಿ ಮೂಲಫಲಗಳನ್ನು ತೆಗೆದುಕೊಳ್ಳುತ್ತಾ ಸಂಚರಿಸಿದರು.

ಕದಾಚಿದ್ ವಿಚರಂತಸ್ತೇ ವೃಕ್ಷೈರವಿರಲೈರ್ವೃತಾಮ್ ।
ಶುಚಿವಾರಿಪ್ರಸನ್ನೋದಾಂ ದದೃಶುಃ ಪದ್ಮಿನೀಂ ಶುಭಾಮ್ ॥೧೪॥

ಬಾಲಾದಿತ್ಯವಪುಃಪ್ರಖ್ಯೈ ಃ ಪುಷ್ಕರೈರುಪಶೋಭಿತಾಮ್ ।
ವೈಡೂರ್ಯವರ್ಣಸದೃಶೈಃ ಪದ್ಮಪತ್ರೈರಥಾವೃತಾಮ್ ॥೧೫॥

ನಾನಾವಿಧೈಶ್ಚ ವಿಹಗೈರ್ಜಲಪ್ರಕರಸೇವಿಭಿಃ ।
ಏಕದ್ವಾರಾಮನಾದೇಯಾಂ ಸೂಪತೀರ್ಥಾಮಕರ್ದಮಾಮ್ ॥೧೬॥

ಹೀಗೆ ತಿರುಗಾಡುತ್ತಾ ಅವರು ನಿಬಿಡವಾದ ವೃಕ್ಷಗಳಿಂದ ಸುತ್ತುವರಿಯಲ್ಪಟ್ಟ ಶುಚಿಯಾದ ಮತ್ತು ಪ್ರಸನ್ನವಾದ ಜಲವನ್ನು ಹೊಂದಿದ ಶುಭವಾದ ಪದ್ಮಸರೋವರ ಒಂದನ್ನು ನೋಡಿದರು. ಅದು ಉದಯಿಸುವ ಸೂರ್ಯನ ಶರೀರದ ಕಾಂತಿಯನ್ನು ಹೊಂದಿದ್ದ ಕಮಲಗಳಿಂದ ಶೋಭಿತವಾಗಿ ವೈಡೂರ್ಯವರ್ಣಕ್ಕೆ ಸಮಾನವಾದ ಪದ್ಮಪತ್ರಗಳಿಂದ ಆವೃತವಾಗಿದ್ದಿತು. ನಾನಾವಿಧವಾದ ಜಲಪಕ್ಷಿಗಳಿಂದ ಸೇವಿತವಾಗಿದ್ದಿತು. ಅದಕ್ಕೆ ಒಂದೇ ಪ್ರವೇಶದ್ವಾರವು ಇದ್ದಿತು. ಅಲ್ಲಿಂದ ಯಾರೂ ಏನನ್ನೂ ತೆಗೆದುಕೊಳ್ಳುವಂತಿರಲಿಲ್ಲ. ಕೆಸರಿರಲಿಲ್ಲ. ಸುತ್ತಲೂ ಸಣ್ಣಸಣ್ಣ ಒಳ್ಳೆಯ ತೀರ್ಥಗಳಿದ್ದವು.

ವೃಷಾದರ್ಭಿಪ್ರಯುಕ್ತಾ ತು ಕೃತ್ಯಾ ವಿಕೃತದರ್ಶನಾ ।
ಯಾತುಧಾನೀತಿ ವಿಖ್ಯಾತಾ ಪದ್ಮಿನೀಂ ತಾಮರಕ್ಷತ ॥೧೭॥

ವೃಷಾದರ್ಭಿಯಿಂದ ನಿರ್ಮಿಸಲ್ಪಟ್ಟ ವಿಕೃತರೂಪವನ್ನು ಹೊಂದಿದ ಯಾತುಧಾನಿ ಎಂಬ ಹೆಸರಿನ ಭೂತವು ಆ ಪದ್ಮಸರೋವರವನ್ನು ರಕ್ಷಿಸುತ್ತಿದ್ದಿತು.

ಶುನಃಸಖಿಸಹಾಯಾಸ್ತು ಬಿಸಾರ್ಥಂ ತೇ ಮಹರ್ಷಯಃ ।
ಪದ್ಮಿನೀಮಭಿಜಗ್ಮುಸ್ತೇ ಸರ್ವೇ ಕೃತ್ಯಾಭಿರಕ್ಷಿತಾಮ್ ॥೧೮॥

ಶುನಃಸಖನ ಸಹಾಯವುಳ್ಳ ಆ ಮಹರ್ಷಿಗಳು ಎಲ್ಲರೂ ಕಮಲದ ದಂಟುಗಳನ್ನು ತೆಗೆದುಕೊಳ್ಳಲು ಆ ಭೂತದಿಂದ ರಕ್ಷಿತವಾದ ಪದ್ಮಸರೋವರಕ್ಕೆ ಬಂದರು.

ತತಸ್ತೇ ಯಾತುಧಾನೀಂ ತಾಂ ದೃಷ್ಟ್ವಾ ವಿಕೃತದರ್ಶನಾಮ್ ।
ಸ್ಥಿತಾಂ ಕಮಲಿನೀತೀರೇ ಕೃತ್ಯಾಮೂಚುರ್ಮಹರ್ಷಯಃ ॥೧೯॥

ಆಗ ಆ ಮಹರ್ಷಿಗಳು ಸರೋವರದ ಜಲದಲ್ಲಿ ವಿಕೃತರೂಪವನ್ನು ಹೊಂದಿ ನಿಂತಿದ್ದ ಯಾತುದಾನನನ್ನು ನೋಡಿ ಮಾತನಾಡಿದರು.

ಏಕಾ ತಿಷ್ಠಸಿ ಕಾ ನು ತ್ವಂ ಕಸ್ಯಾರ್ಥೇ ಕಿಂ ಪ್ರಯೋಜನಮ್ ।
ಪದ್ಮಿನೀತೀರಮಾಶ್ರಿತ್ಯ ಬ್ರೂಹಿ ತ್ವಂ ಕಿಂ ಚಿಕೀರ್ಷಸಿ ॥೨೦॥

ನೀನೊಬ್ಬಳೇ ನಿಂತಿದ್ದೀಯೆ. ನೀನು ಯಾರು? ನಿನ್ನ ಉದ್ದೇಶವೇನು? ಪದ್ಮಸರೋವರದ ತೀರದಲ್ಲಿ ನಿಂತು ಏನನ್ನು ಮಾಡಲು ಬಯಸುತ್ತಿದ್ದೀಯೆ ಎಂದು ಹೇಳು (ಎಂದು ಕೇಳಿದರು).

ಯಾತುಧಾನೀ

ಯಾಽಸ್ಮಿ ಸಾಽಸ್ಮ್ಯನುಯೋಗೋ ಮೇ ನ ಕರ್ತವ್ಯಃ ಕಥಂಚನ ।
ಆರಕ್ಷಿಣೀಂ ಮಾಂ ಪದ್ಮಿನ್ಯಾ ವಿತ್ತ ಸರ್ವೇ ತಪೋಧನಾಃ ॥೨೧॥

ಯಾತುಧಾನಿ– ನಾನು ಯಾವಳೋ ಅವಳೇ ಆಗಿದ್ದೇನೆ. ನನ್ನನ್ನು ಯಾವ ರೀತಿಯಿಂದಲೂ ಪ್ರಶ್ನೆ ಮಾಡಬಾರದು. ಎಲೈ ತಪೋಧನರೇ, ನಾನು ಈ ಪದ್ಮಸರೋವರದ ರಕ್ಷಕಿ ಎಂದು ನೀವೆಲ್ಲರೂ ತಿಳಿಯಿರಿ.

ಋಷಯಃ

ಸರ್ವ ಏವ ಕ್ಷುಧಾರ್ತಾಃ ಸ್ಮ ನ ಚಾನ್ಯತ್ ಕಿಂಚಿದಸ್ತಿ ನಃ ।
ಭವತ್ಯಾಃ ಸಮ್ಮತೇ ಸರ್ವೇ ಗೃಹ್ಣೀಮಹಿ ಬಿಸಾನ್ಯುತ ॥೨೨॥

ಋಷಿಗಳು– ನಾವೆಲ್ಲರೂ ಹಸಿವಿನಿಂದ ಪೀಡಿತರಾಗಿದ್ದೇವೆ. ನಮ್ಮ ಬಳಿ ಬೇರೆ ಏನೂ ಇಲ್ಲ. ನಿನ್ನ ಅನುಮತಿಯಿಂದ ನಾವೆಲ್ಲರೂ ಕಮಲದ ದಂಟುಗಳನ್ನು ತೆಗೆದುಕೊಳ್ಳುತ್ತೇವೆ.

ಯಾತುಧಾನೀ

ಸಮಯೇನ ಬಿಸಾನೀತೋ ಗೃಹ್ಣೀಧ್ವಂ ಕಾಮಕಾರತಃ ।
ಏಕೈಕೋ ನಾಮ ಮೇ ಪ್ರೋಕ್ತ್ವಾ ತತೋ ಗೃಹ್ಣೀತ ಮಾಚಿರಮ್ ॥೨೩॥

ಯಾತುಧಾನಿ- ಒಂದು ಷರತ್ತಿನ ಮೇಲೆ ಇಲ್ಲಿಂದ ನಿಮ್ಮ ಇಚ್ಛೆಯಂತೆ ಕಮಲದ ದಂಟುಗಳನ್ನು ತೆಗೆದುಕೊಳ್ಳಬಹುದು. ಒಬ್ಬೊಬ್ಬರೂ ನನಗೆ ನಿಮ್ಮ ನಾಮಗಳನ್ನು ಹೇಳಿ ಅನಂತರ ಶೀಘ್ರವಾಗಿ ತೆಗೆದುಕೊಳ್ಳಿ.

ಭೀಷ್ಮಃ

ವಿಜ್ಞಾಯ ಯಾತುಧಾನೀಂ ತಾಂ ಕೃತ್ಯಾಮೃಷಿವಧೈಷಿಣೀಮ್ ।
ಅತ್ರಿಃ ಕ್ಷುಧಾಪರೀತಾತ್ಮಾ ತತೋ ವಚನಮಬ್ರವೀತ್ ॥೨೪॥

ಭೀಷ್ಮ- ಅವಳು ಋಷಿಗಳನ್ನು ಕೊಲ್ಲಲು ಬಯಸುವ ಯಾತುಧಾನಿ ಎಂದು ತಿಳಿದ ಹಸಿವಿನಿಂದ ಪೀಡಿತರಾದ ಅತ್ರಿಗಳು ಅವಳನ್ನು ಕುರಿತು ಹೇಳಿದರು.

ಅರಾತ್ರಿರತ್ರೇಃ ಸಾ ರಾತ್ರಿರ್ಯಾಂ ನಾಧೀತೇ ತ್ರಿರದ್ಯ ವೈ ।
ಅರಾತ್ರಿರತ್ರಿರಿತ್ಯೇವ ನಾಮ ಮೇ ವಿದ್ಧಿ ಶೋಭನೇ ॥೨೫॥

ಯಾವ ರಾತ್ರಿಯಲ್ಲಿ (ದಿನದಲ್ಲಿ) ಮೂರು ಬಾರಿ ಅಧ್ಯಯನವನ್ನು ಮಾಡುವುದಿಲ್ಲವೋ ಆ ರಾತ್ರಿಯನ್ನು ಅರಾತ್ರಿ ಎಂದು ತಿಳಿ. ಎಲೌ ಶೋಭನೆಯೇ, ನನ್ನ ಹೆಸರು. ಅರಾತ್ರಿರತ್ರಿ ಎಂಬುದಾಗಿ ತಿಳಿ.

ಯಾತುಧಾನೀ

ಯಥೋದಾಹೃತಮೇತತ್ ತೇ ಮಯಿ ನಾಮ ಮಹಾಮುನೇ ।
ದುರ್ಧಾರ್ಯಮೇತನ್ಮನಸಾ ಗಚ್ಛಾವತರ ಪದ್ಮಿನೀಮ್ ॥೨೬॥

ಯಾತುಧಾನಿ- ಮಹಾಮುನಿಯೇ, ನೀನು ನನಗೆ ಹೇಳಿದಂತೆ ನಿನ್ನ ಹೆಸರನ್ನು ಮನಸ್ಸಿನಲ್ಲಿ ಧರಿಸುವುದು (ಅರ್ಥಮಾಡಿಕೊಳ್ಳುವುದು) ದುಸ್ಸಾಧ್ಯವಾದುದು. ನೀನು ಹೋಗಿ ಪದ್ಮಸರೋವರದಲ್ಲಿ ಇಳಿ.

ವಸಿಷ್ಠಃ

ವಸಿಷ್ಠೋಽಸ್ಮಿ ವರಿಷ್ಠೋಽಸ್ಮಿ ವಸೇ ವಾಸಂ ಗೃಹೇಷ್ವಪಿ ।
ವರಿಷ್ಠತ್ವಾಚ್ಚ ವಾಸಾಚ್ಚ ವಸಿಷ್ಠ ಇತಿ ವಿದ್ಧಿ ಮಾಮ್ ॥೨೭॥

ವಸಿಷ್ಠರು– ನಾನು ವಸಿಷ್ಠನಾಗಿದ್ದೇನೆ (ವಾಸಮಾಡುವವರಲ್ಲಿ ಶ್ರೇಷ್ಠನಾಗಿದ್ದೇನೆ). ಶ್ರೇಷ್ಠನಾಗಿದ್ದೇನೆ. ಗೃಹಗಳಲ್ಲಿಯೂ ವಾಸಮಾಡುತ್ತೇನೆ. ಶ್ರೇಷ್ಠನಾದುದರಿಂದ ಮತ್ತು ವಾಸಮಾಡುವುದರಿಂದ ನನ್ನನ್ನು ವಸಿಷ್ಠ ಎಂದು ತಿಳಿ.

ಯಾತುಧಾನೀ

ನಾಮನ್ಯೈರುಕ್ತಮೇತತ್ ತೇ ದುಃಖವ್ಯಾಭಾಷಿತಾಕ್ಷರಮ್ ।
ನೈತದ್ ಧಾರಯಿತುಂ ಶಕ್ಯಂ ಗಚ್ಛಾವತರ ಪದ್ಮಿನೀಮ್ ॥೨೮॥

ಯಾತುಧಾನಿ– ನೀನು ಹೇಳಿದ ನಿನ್ನ ನಾಮದ ಅಕ್ಷರಗಳ ಅರ್ಥವನ್ನು ತಿಳಿಯಲು ಬಹಳ ಕಷ್ಟವಾದುದು. ಅದನ್ನು ಅರ್ಥಮಾಡಿಕೊಳ್ಳಲಾರೆ. ಹೋಗಿ ಪದ್ಮಸರೋವರದಲ್ಲಿ ಇಳಿ.

ಕಶ್ಯಪಃ

ಕುಲಾತ್ ಕುಲಂ ಚ ಗಚ್ಛಾಮಿ ಕುಪಯಃ ಕಶ್ಯಪೋ ದ್ವಿಜಃ ।
ಕಾಶ್ಯಃ ಕಾಶನಿಕಾಶತ್ವಾದೇತನ್ಮೇ ನಾಮ ಧಾರಯ ॥೨೯॥

ಕಶ್ಯಪರು– ನಾನು ಒಂದು ಕುಲದಿಂದ ಒಂದು ಕುಲಕ್ಕೆ ಹೋಗುತ್ತೇನೆ. ಕಾಶ ದರ್ಭೆಯ ಕಾಂತಿಯನ್ನು ಹೊಂದಿರುವುದರಿಂದ ನಾನು ಕಾಶ್ಯ. ಆದ್ದರಿಂದ ನನ್ನ ನಾಮವನ್ನು ಕಶ್ಯಪರೆಂದು ತಿಳಿ.

ಕಾಶ್ಯ ಎಂದರೆ ಪ್ರಕಾಶಯೋಗ್ಯವಾದ ಕುಲ. ಕಶ್ಯಪರು ದೇವಕುಲದಿಂದ ದೈತ್ಯ-ನಾಗ-ಸರ್ಪಾದಿ ಕುಲಕ್ಕೆ ಹೋಗುತ್ತಾರೆ. ಕಾಶ್ಯರೂಪವಾದ ಕುಲವನ್ನು ಪಾಲನೆ ಮಾಡುವುದರಿಂದ ಕಾಶ್ಯಪ ಎಂದು ಹೆಸರು- ಲಕ್ಷಾಲಂಕಾರ.

ಯಾತುಧಾನೀ

ಯಥೋದಾಹೃತಮೇತತ್ ತೇ ಮಯಿ ನಾಮ ಮಹಾಮುನೇ ।
ದುರ್ಧಾರ್ಯಮೇತನ್ಮನಸಾ ಗಚ್ಛಾವತರ ಪದ್ಮಿನೀಮ್ ॥೩೦॥

ಯಾತುಧಾನಿ– ಎಲೈ ಮಹಾಮುನಿಯೇ, ನೀನು ಹೇಳಿದಂತೆ ನಿನ್ನ ನಾಮವನ್ನು ನನ್ನ ಮನಸ್ಸಿನಲ್ಲಿ ಧರಿಸಲಾರೆ. ಹೋಗಿ ಪದ್ಮಸರೋವರದಲ್ಲಿ ಇಳಿ.

ಭರದ್ವಾಜಃ

ಭರೇ ಸುತಾನ್ ಭರೇ ಶಿಷ್ಯಾನ್ ಭರೇ ದೇವಾನ್ ಭರೇ ದ್ವಿಜಾನ್ ।
ಭರೇ ಭಾರ್ಯಾಮನವ್ಯಾಜೋ ಭರದ್ವಾಜೋಽಸ್ಮಿ ಶೋಭನೇ ॥೩೧॥

ಭರದ್ವಾಜರು– ಪುತ್ರರನ್ನು ಭರಿಸುತ್ತೇನೆ, ಶಿಷ್ಯರನ್ನು ಭರಿಸುತ್ತೇನೆ, ದೇವತೆಗಳನ್ನು ಭರಿಸುತ್ತೇನೆ, ದ್ವಿಜರನ್ನು ಭರಿಸುತ್ತೇನೆ, ಒಂದು ನಿಮಿತ್ತದಿಂದಾಗಿ ಭಾರ್ಯೆಯನ್ನು ಭರಿಸುತ್ತೇನೆ. ಎಲೌ ಶೋಭನೆಯೇ, ನಾನು ಭರದ್ವಾಜನಾಗಿದ್ದೇನೆ.

ಯಾತುಧಾನೀ

ನಾಮನೈರುಕ್ತಮೇತತ್ ತೇ ದುಃಖಿವ್ಯಾಭಾಷಿತಾಕ್ಷರಮ್ ।
ನೈತದ್ ಧಾರಯಿತುಂ ಶಕ್ಯಂ ಗಚ್ಛಾವತರ ಪದ್ಮಿನೀಮ್ ॥೩೨॥

ಯಾತುಧಾನಿ– ನೀನು ಹೇಳಿದ ನಿನ್ನ ನಾಮನಿರ್ವಚನವನ್ನು ಕಷ್ಟಪಟ್ಟರೂ ನನ್ನ ಮನಸ್ಸಿನಲ್ಲಿ ಧರಿಸಲಾರೆ. ಹೋಗಿ ಪದ್ಮಿನಿಯಲ್ಲಿ ಇಳಿ.

ಗೌತಮಃ

ಗೋದಮೋ ದಮಗೋಽಧೂಮೋಽದಮೋ ದುರ್ದರ್ಶನಶ್ಚ ತೇ ।
ವಿದ್ಧಿ ಮಾಂ ಗೌತಮಂ ಕೃತ್ಯೇ ಯಾತುಧಾನಿ ನಿಬೋಧ ಮೇ ॥೩೩॥

ಗೌತಮರು– ನಾನು ಗೋವುಗಳನ್ನು ನಿಯಂತ್ರಿಸುತ್ತೇನೆ. ನಾನು ಧೂಮವಿಲ್ಲದ ಅಗ್ನಿಯಂತಿದ್ದೇನೆ. ನಿನಗೆ ಅದಮ್ಯನಾಗಿಯೂ ನೋಡಲು ಅಸಾಧ್ಯವಾಗಿಯೂ ಇದ್ದೇನೆ. ಆದ್ದರಿಂದ ಎಲೌ ಯಾತುಧಾನಿಯೇ, ನನ್ನನ್ನು ಗೌತಮನೆಂದು ತಿಳಿ.

ಯಾತುಧಾನೀ

ಯಥೋದಾಹೃತಮೇತತ್ ತೇ ಮಯಿ ನಾಮ ಮಹಾಮುನೇ ।
ನೈತದ್ ಧಾರಯಿತುಂ ಶಕ್ಯಂ ಗಚ್ಛಾವತರ ಪದ್ಮಿನೀಮ್ ॥೩೪॥

ಯಾತುಧಾನಿ– ಎಲೈ ಮಹಾಮುನಿಯೇ, ನೀನು ಹೇಳಿದಂತೆ ನಿನ್ನ ನಾಮವನ್ನು ನಾನು ಧರಿಸಲಾರೆ. ಹೋಗಿ ಪದ್ಮಿನಿಯೊಳಗೆ ಇಳಿ.

ವಿಶ್ವಾಮಿತ್ರಃ

ವಿಶ್ವೇದೇವಾಶ್ಚ ಮೇ ಮಿತ್ರಂ ಮಿತ್ರಮಸ್ಮಿ ಗವಾಂ ತಥಾ ।
ವಿಶ್ವಾಮಿತ್ರಮಿತಿ ಖ್ಯಾತಂ ಯಾತುಧಾನಿ ನಿಬೋಧ ಮೇ ॥೩೫॥

ವಿಶ್ವಾಮಿತ್ರ– ವಿಶ್ವೇದೇವತೆಗಳು ನನ್ನ ಮಿತ್ರರು. ನಾನು ಗೋವುಗಳಿಗೆ ಮಿತ್ರನಾಗಿದ್ದೇನೆ. ಎಲೌ ಯಾತುಧಾನಿಯೇ, ನಾನು ವಿಶ್ವಾಮಿತ್ರನೆಂದು ಪ್ರಖ್ಯಾತನಾದವನೆಂದು ತಿಳಿ.

ಯಾತುಧಾನೀ

ನಾಮನೈರುಕ್ತಮೇತತ್ ತೇ ದುಃಖಿವ್ಯಾಭಾಷಿತಾಕ್ಷರಮ್ ।
ನೈತದ್ ಧಾರಯಿತುಂ ಶಕ್ಯಂ ಗಚ್ಛಾವತರ ಪದ್ಮಿನೀಮ್ ॥೩೬॥

ಯಾತುಧಾನಿ– ನೀನು ಹೇಳಿದ ನಿನ್ನ ನಾಮನಿರ್ವಚನವು ಬಹಳ ಕ್ಲಿಷ್ಟವಾದ ಅಕ್ಷರಗಳಿಂದ ಕೂಡಿದೆ. ಇದನ್ನು ನಾನು ಧರಿಸಲಾರೆ. ಹೋಗಿ ಪದ್ಮಿನಿಯಲ್ಲಿ ಇಳಿ.

ಜಮದಗ್ನಿಃ

ಜಾಜಮದ್ಯಜನಾಯಾಗ್ನೇರ್ಜಿಹಾನೀಹ ಜಿಜಾಯಿಷೇ ।
ಜಮದಗ್ನಿರಿತಿ ಖ್ಯಾತಮತೋ ಮಾಂ ವಿದ್ಧಿ ಶೋಭನೇ ॥೩೭॥

ಜಮದಗ್ನಿ– ನಾನು ಅಗ್ನಿಯ ಪೂಜೆಗಾಗಿ ಗೃಹದಲ್ಲಿ ಜನಿಸಿದ ದಧಿಯನ್ನೂ, ಸುತ್ತಲೂ ಜನಿಸಿದ ಅರಣಿರೂಪವಾದ ದಾರುವನ್ನೂ ಮಥನ ಮಾಡುತ್ತೇನೆ. ಅಗ್ನಿಯನ್ನು ಉದ್ದೇಶಿಸಿ ಎರಡನ್ನೂ ಮಥನ ಮಾಡುವುದರಿಂದ ನನಗೆ ಜಮದಗ್ನಿ ಎಂದು ಹೆಸರು. ಹಾಗೆಯೇ ಅಗ್ನಿಯನ್ನು ಪೂಜಿಸುವುದಕ್ಕೋಸ್ಕರವಾಗಿ ನಾನು ದಿನೇ ದಿನೇ ಉಂಟಾದ ಪಾಪವನ್ನು ಪ್ರಾಣಾಯಾಮಾದಿಗಳಿಂದ ದಹಿಸುತ್ತೇನೆ. ಅದರಿಂದ ಅಗ್ನಿಯನ್ನು ಉದ್ದೇಶಿಸಿ ಜಾತವಾದ ಪಾಪವನ್ನು ಮಥನ ಮಾಡುವುದರಿಂದ ಜಮದಗ್ನಿ ಎಂದು ಹೆಸರು. ಎಲೌ ಶೋಭನೆಯೇ, ಯಾತುಧಾನಿಯೇ, ನನ್ನನ್ನು ಜಮದಗ್ನಿ ಎಂದು ತಿಳಿ.

ಯಾತುಧಾನೀ

ಯಥೋದಾಹೃತಮೇತತ್ ತೇ ಮಯಿ ನಾಮ ಮಹಾಮುನೇ ।
ನೈತದ್ ಧಾರಯಿತುಂ ಶಕ್ಯಂ ಗಚ್ಛಾವತರ ಪದ್ಮಿನೀಮ್ ॥೩೮॥

ಯಾತುಧಾನಿ– ಎಲೈ ಮಹಾಮುನಿಯೇ, ನೀನು ಹೇಳಿದಂತೆ ನಿನ್ನ ನಾಮವನ್ನು ನನ್ನ ಮನಸ್ಸಿನಲ್ಲಿ ಧರಿಸಲಾರೆ. ಹೋಗಿ ಪದ್ಮಿನಿಯಲ್ಲಿ ಇಳಿ.

ಅರುಂಧತೀ

ಧರಾಂ ಧರಿತ್ರೀಂ ವಸುಧಾಂ ಭರ್ತುಸ್ತಿಷ್ಠಾಮ್ಯನಂತರಮ್ ।
ಮನೋऽನುರುಂಧತೀ ಭರ್ತುರಿತಿ ಮಾಂ ವಿದ್ಧ್ಯರುಂಧತೀಮ್ ॥೩೯॥

ಅರುಂಧತೀ– ನಾನು ಭೂಮಿಯಲ್ಲಿ ಪತಿಯ ಮನಸ್ಸನ್ನು ಅನುಸರಿಸುತ್ತಾ ಪತಿಯ ಜೊತೆಯಲ್ಲಿಯೇ ಇರುತ್ತೇನೆ. ನನ್ನನ್ನು ಅರುಂಧತಿ ಎಂದು ತಿಳಿ.

ಧತಿ ಎಂದರೆ ಧರಿತ್ರೀ -ಭೂಮಿ. ಅರು ಎಂದರೆ ಅರೋಚಮಾನ ಇಷ್ಟಪ್ರದಗಳು. ಪತಿ ಇಲ್ಲದೆ ಧರಿತ್ರಿಯನ್ನು ಅರು ಇಷ್ಟಪಡುವುದಿಲ್ಲವಾದ ಕಾರಣ ನನಗೆ ಅರುಂಧತೀ ಎಂದು ಹೆಸರು - **ಲಕ್ಷಾಲಂಕಾರ.**

ಯಾತುಧಾನೀ

ನಾಮನೈರುಕ್ತಮೇತತ್ ತೇ ದುಃಖವ್ಯಾಭಾಷಿತಾಕ್ಷರಮ್ ।
ನೈತದ್ ಧಾರಯಿತುಂ ಶಕ್ಯಂ ಗಚ್ಛಾವತರ ಪದ್ಮಿನೀಮ್ ॥೪೦॥

ಯಾತುಧಾನಿ– ನಿನ್ನ ಹೆಸರಿನ ಅಕ್ಷರಗಳನ್ನು ಬಹಳ ಕಷ್ಟಪಡುವಂತೆ ಹೇಳಿದ್ದೀಯೆ. ಇದನ್ನು ನಾನು ಮನಸ್ಸಿನಲ್ಲಿ ಧರಿಸಲಾರೆ. ಹೋಗಿ ಪದ್ಮಿನಿಯಲ್ಲಿ ಇಳಿ.

ಗಂಡಃ

ಗಂಡಂ ಗಂಡಂ ಗತವತೀ ಗಂಡಗಂಡೇತಿ ಸಂಜ್ಞಿತಾ ।
ಗಂಡಗಂಡೇವ ಗಂಡೇತಿ ವಿದ್ಧಿ ಮಾऽನಲಸಂಭವೇ ॥೪೧॥

ಗಂಡ– ಸ್ಥೂಲವಾದ ಕಪೋಲವುಳ್ಳ ನಾರಿಗೆ ಗಂಡಗಂಡ ಎಂದು ಹೆಸರು. ಎಲೌ ಅಗ್ನಿಜಾತೆಯೇ ಅಂತಹ ಗಂಡಗಂಡಳಂತಿರುವ ನನ್ನನ್ನು ಗಂಡಾ ಎಂದು ತಿಳಿ.

ಯಾತುಧಾನೀ

ನಾಮನೈರುಕ್ತಮೇತತ್ ತೇ ದುಃಖವ್ಯಾಭಾಷಿತಾಕ್ಷರಮ್ ।
ನೈತದ್ ಧಾರಯಿತುಂ ಶಕ್ಯಂ ಗಚ್ಛಾವತರ ಪದ್ಮಿನೀಮ್ ॥೪೨॥

ಯಾತುಧಾನಿ– ನಿನ್ನ ನಾಮದ ನಿರ್ವಚನವು ಕಷ್ಟಕರವಾದ ಅಕ್ಷರಗಳಿಂದ ಕೂಡಿದೆ. ಇದನ್ನು ನಾನು ಮನಸ್ಸಿನಲ್ಲಿ ಧರಿಸಲಾರೆ. ಹೋಗಿ ಪದ್ಮಿನಿಯಲ್ಲಿ ಇಳಿ.

ಪಶುಸಖಿಃ

ಸಖಾ ಸಖೇ ಯಃ ಸಖ್ಯೇಯಃ ಪಶೂನಾಂ ಚ ಸಖಾ ಸದಾ ।
ಗೌಣಂ ಪಶುಸಖೇತ್ಯೇವಂ ವಿದ್ಧಿ ಮಾಮಗ್ನಿಸಂಭವೇ ॥೪೩॥

ಪಶುಸಖಿ– ನಾನು ಪಶುಗಳನ್ನು ನೋಡಿ ಸಂತೋಷಪಡುತ್ತೇನೆ. ಅವುಗಳನ್ನು ಸಂತೋಷಪಡಿಸುತ್ತೇನೆ. ಪಶುಗಳಿಗೆ ಯಾವಾಗಲೂ ಸ್ನೇಹಿತನಾಗಿರುತ್ತೇನೆ. ನನ್ನ ಈ ಗುಣದಿಂದ ಎಲೌ ಅಗ್ನಿಸಂಭವೆಯೇ, ನನ್ನನ್ನು ಪಶುಸಖಿನೆಂದು ತಿಳಿ.

ಯಾತುಧಾನೀ

ನಾಮನ್ಯೈರುಕ್ತಮೇತತ್ ತೇ ದುಃಖಿವ್ಯಾಭಾಷಿತಾಕ್ಷರಮ್ ।
ನೈತದ್ ಧಾರಯಿತುಂ ಶಕ್ಯಂ ಗಚ್ಛಾವತರ ಪದ್ಮಿನೀಮ್ ॥೪೪॥

ಯಾತುಧಾನಿ– ನಿನ್ನ ಈ ನಾಮನಿರ್ವಚನವು ತಿಳಿಯಲು ಕಷ್ಟಸಾಧ್ಯವಾದ ಅಕ್ಷರಗಳಿಂದ ಕೂಡಿದೆ. ಇದನ್ನು ನಾನು ಧರಿಸಲಾರೆ. ಹೋಗಿ ಪದ್ಮಿನಿಯಲ್ಲಿ ಇಳಿ.

ಶುನಃಸಖಿಃ

ಏಭಿರುಕ್ತಂ ಯಥಾ ನಾಮ ನಾಹಂ ವಕ್ತುಮಿಹೋತ್ಸಹೇ ।
ಶುನಃಸಖಿಸಖಾಯಂ ಮಾಂ ಯಾತುಧಾನ್ಯುಪಧಾರಯ ॥೪೫॥

ಶುನಃಸಖಿ– ಇವರು ಹೆಸರುಗಳನ್ನು ಹೇಳಿದಂತೆ ನಾನು ಹೇಳಲಾರೆ. ಎಲೌ ಯಾತುಧಾನಿಯೇ, ನನ್ನನ್ನು ಶುನಃಸಖಿಸಖಾ ಎಂದು ತಿಳಿ.

ಯಾತುಧಾನೀ

ನಾಮ ತೇऽವ್ಯಕ್ತಮುಕ್ತಂ ವೈ ವಾಕ್ಯಂ ಸಂದಿಗ್ಧಯಾ ಗಿರಾ ।
ತಸ್ಮಾತ್ ಸಕೃದಿದಾನೀಂ ತ್ವಂ ಬ್ರೂಹಿ ಯನ್ನಾಮ ತೇ ದ್ವಿಜ ॥೪೬॥

ಯಾತುಧಾನಿ– ನೀನು ನಿನ್ನ ನಾಮವನ್ನು ಅಸ್ಪಷ್ಟವಾಗಿ ಹೇಳಿದ್ದೀಯೆ. ಸಂದಿಗ್ಧವಾದ ಮಾತುಗಳಿಂದ ಹೇಳಿದ್ದೀಯೆ. ಎಲೈ ಬ್ರಾಹ್ಮಣನೇ, ಆದ್ದರಿಂದ ನೀನು ಒಮ್ಮೆ ನಿನ್ನ ನಾಮವನ್ನು ಸರಿಯಾಗಿ ಹೇಳು.

ಶುನಃಸಖಃ

ಸಕೃದುಕ್ತಂ ಮಯಾ ನಾಮ ನ ಗೃಹೀತಂ ಯದಾ ತ್ವಯಾ ।
ತಸ್ಮಾತ್ ತ್ರಿದಂಡಾಭಿಹತಾ ಗಚ್ಛ ಭಸ್ಮೇತಿ ಮಾಚಿರಮ್ ॥೪೭॥

ಶುನಃಸಖಿ– ಒಂದು ಬಾರಿ ನಾನು ನಮ್ಮ ನಾಮವನ್ನು ಹೇಳಿದೆ. ನೀನು ಅದನ್ನು ಗ್ರಹಿಸಲಿಲ್ಲ. ಆದ್ದರಿಂದ ನನ್ನ ತ್ರಿದಂಡದಿಂದ ಅಭಿಹತಳಾಗಿ ನೀನು ಶೀಘ್ರವಾಗಿ ಭಸ್ಮವಾಗಿ ಹೋಗು.

ಭೀಷ್ಮಃ

ಸಾ ಬ್ರಹ್ಮದಂಡಕಲ್ಪೇನ ತೇನ ಮೂರ್ಧ್ನಿ ಹತಾ ತದಾ ।
ಕೃತ್ಯಾ ಪಪಾತ ಮೇದಿನ್ಯಾಂ ಭಸ್ಮಸಾಚ್ಚ ಜಗಾಮ ಹ ॥೪೮॥

ಭೀಷ್ಮ– ಆಗ ಅವಳು ಬ್ರಹ್ಮದಂಡದಂತಿದ್ದ ಆ ಸಂನ್ಯಾಸಿಯ ತ್ರಿದಂಡದಿಂದ ತಲೆಯ ಮೇಲೆ ಹೊಡೆಯಲ್ಪಟ್ಟಳು. ಆ ಯಾತುಧಾನಿಯು ಭೂಮಿಯಲ್ಲಿ ಬಿದ್ದು ಭಸ್ಮವಾಗಿ ಹೋದಳು.

ಶುನಃಸಖಶ್ಚ ಹತ್ವಾ ತಾಂ ಯಾತುಧಾನೀಂ ಮಹಾಬಲಾಮ್ ।
ಭುವಿ ತ್ರಿದಂಡಂ ವಿಷ್ಟಭ್ಯ ಶಾದ್ವಲೇ ಸಮುಪಾವಿಶತ್ ॥೪೯॥

ಶುನಃಸಖನಾದರೂ ಮಹಾಬಲಳಾದ ಆ ಯಾತುಧಾನಿಯನ್ನು ಸಂಹರಿಸಿ ತನ್ನ ದಂಡವನ್ನು ಭೂಮಿಯಲ್ಲಿ ನೆಟ್ಟು ಮೃದುವಾದ ಭೂಮಿಯಲ್ಲಿ ಕುಳಿತುಕೊಂಡನು.

ತತಸ್ತೇ ಮುನಯಃ ಸರ್ವೇ ಪುಷ್ಕರಾಣಿ ಬಿಸಾನಿ ಚ ।
ಯಥಾಕಾಮಮುಪಾದಾಯ ಸಮುತ್ತಸ್ಥುರ್ಮುದಾನ್ವಿತಾಃ ॥೫೦॥

ಅನಂತರ ಆ ಋಷಿಗಳೆಲ್ಲರೂ ಕಮಲಪುಷ್ಪಗಳನ್ನು ಮತ್ತು ದಂಟುಗಳನ್ನು ತಮ್ಮ ಮನಸ್ಸಿಗೆ ಬಂದಂತೆ ತೆಗೆದುಕೊಂಡು ಸಂತೋಷದಿಂದ ಮೇಲೆದ್ದರು.

ಶ್ರಮೇಣ ಮಹತಾ ಯುಕ್ತಾಸ್ತೇ ಬಿಸಾನಿ ಕಲಾಪಶಃ ।
ತೀರೇ ನಿಕ್ಷಿಪ್ಯ ಪದ್ಮಿನ್ಯಾಸ್ತರ್ಪಣಂ ಚಕ್ರುರಂಭಸಾ ॥೫೧॥

ಬಹಳ ಶ್ರಮದಿಂದ ಕೂಡಿದ ಅವರು ಕಮಲ ದಂಟುಗಳನ್ನು ಪದ್ಮಿನಿಯ ತೀರದಲ್ಲಿ ಬೇರೆ ಬೇರೆಯಾಗಿಟ್ಟು ನೀರಿನಿಂದ ತರ್ಪಣವನ್ನು ನೀಡಿದರು.

ಅಥೋತ್ಥಾಯ ಜಲಾತ್ ತಸ್ಮಾತ್ ಸರ್ವೇ ತೇ ವೈ ಸಮಾಗಮನ್ ।
ನಾಪಶ್ಯಂಶ್ಚಾಪಿ ತೇ ತಾನಿ ಬಿಸಾನಿ ಪುರುಷರ್ಷಭ ॥೫೨॥

ಅನಂತರ ನೀರಿನಿಂದ ಎದ್ದುಬಂದು ನೋಡಿದಾಗ ಎಲೈ ಪುರುಷಶ್ರೇಷ್ಠನೇ, ಅವರು ತಾವು ಇರಿಸಿದ್ದ ಕಮಲದ ದಂಟುಗಳನ್ನು ಕಾಣಲಿಲ್ಲ.

ಋಷಯಃ

ಕೇನ ಕ್ಷುಧಾಭಿಭೂತಾನಾಮಸ್ಮಾಕಂ ಪಾಪಕರ್ಮಣಾ ।
ನೃಶಂಸೇನಾಪನೀತಾನಿ ಬಿಸಾನ್ಯಾಹಾರಕಾಂಕ್ಷಿಣಾಮ್ ॥೫೩॥

ಋಷಿಗಳು– ಹಸಿವಿನಿಂದ ಪೀಡಿತರಾದ ಬಿಸರೂಪವಾದ ಆಹಾರವನ್ನು ಬಯಸಿದ ನಮ್ಮ ಬಿಸಗಳನ್ನು ಯಾವ ಕ್ರೂರಿಯು, ಪಾಪಕರ್ಮಿಯೂ ಆದವನು ಅಪಹರಿಸಿದ್ದಾನೆ?

ತೇ ಶಂಕಮಾನಾಸ್ತ್ವನ್ಯೋನ್ಯಂ ಪಪ್ರಚ್ಛುರ್ದ್ವಿಜಸತ್ತಮಾಃ ।
ತ ಊಚುಃ ಶಪಥಂ ಸರ್ವೇ ಕುರ್ಮ ಇತ್ಯರಿಕರ್ಶನ ॥೫೪॥

ಎಲೈ ಶತ್ರುಕರ್ಶನನೇ, ಆ ದ್ವಿಜಶ್ರೇಷ್ಠರು ಪರಸ್ಪರವಾಗಿ ಶಂಕಿಸಿ ಎಲ್ಲರೂ ಹಾಗಾದರೆ ನಾವು ಶಪಥ(ಪ್ರಮಾಣ)ವನ್ನು ಮಾಡೋಣ ಎಂದು ನಿಶ್ಚಯಿಸಿದರು.

ತ ಉಕ್ತ್ವಾ ಬಾಢಮಿತ್ಯೇವ ಸರ್ವ ಏವ ಶುನಃಸಖಿಮ್ ।
ಕ್ಷುಧಾರ್ತಾಃ ಸುಪರಿಶ್ರಾಂತಾಃ ಶಪಥಾಯೋಪಚಕ್ರಮುಃ ॥೫೫॥

ಅವರೆಲ್ಲರೂ ಹಾಗೆಯೇ ಆಗಲಿ ಎಂದು ಒಪ್ಪಿ ಹಸಿವಿನಿಂದ ಪೀಡಿತರಾಗಿ ಬಹಳ ದಣಿದು ಶಪಥವನ್ನು ಮಾಡಲು ಶುನಃಸಖನ ಬಳಿಗೆ ಬಂದರು.

ಅತ್ರಿಃ

ಸ ಗಾಂ ಸ್ಪೃಶತು ಪಾದೇನ ಸೂರ್ಯಂ ಚ ಪ್ರತಿಮೇಹತು ।
ಅನಧ್ಯಾಯೇಷ್ವಧೀಯೀತ ಬಿಸಸ್ಯೈನ್ಯಂ ಕರೋತಿ ಯಃ ॥೫೬॥

ಅತ್ರಿ– ಬಿಸಸ್ಯೈನ್ಯವನ್ನು ಮಾಡಿದವನು ಗೋವನ್ನು ಪಾದದಿಂದ ಒದೆಯಲಿ. ಸೂರ್ಯನಿಗೆ ಎದುರಾಗಿ ಮೂತ್ರವಿಸರ್ಗವನ್ನು ಮಾಡಲಿ. ಅನಧ್ಯಯನತಿಥಿಳಲ್ಲಿ ಅಧ್ಯಯನವನ್ನು ಮಾಡಲಿ.

ವಸಿಷ್ಠಃ

ಅನಧ್ಯಾಯಪರೋ ಲೋಕೇ ಶುನಃ ಸ ಪರಿಕರ್ಷತು ।
ಪರಿವ್ರಾಟ್ ಕಾಮವೃತ್ತೋಽಸ್ತು ಬಿಸಸ್ಯೈನ್ಯಂ ಕರೋತಿ ಯಃ ॥೫೭॥

ಶರಣಾಗತಂ ಹಂತು ಮಿತ್ರಂ ಸ್ವಸುತಾಂ ಚೋಪಜೀವತು ।
ಅರ್ಥಾನ್ ಕಾಂಕ್ಷತು ಕೀನಾಶಾದ್ ಬಿಸಸ್ಯೈನ್ಯಂ ಕರೋತಿ ಯಃ ॥೫೮॥

ವಸಿಷ್ಠರು– ಬಿಸಸ್ಯೈನ್ಯವನ್ನು ಮಾಡಿದವನು ಲೋಕದಲ್ಲಿ ಅಧ್ಯಯನ ವಿಮುಖನಾಗಿ ನಾಯಿಗಳನ್ನು ಎಳೆದುಕೊಂಡು ಓಡಾಡಲಿ. ಪರಿವ್ರಾಜಕನಾದವನು ಕಾಮದ ನಡತೆಯನ್ನು ಹೊಂದಲಿ. ಶರಣಾಗತನಾದ ಮಿತ್ರನನ್ನು ವಧೆ ಮಾಡಲಿ. ತನ್ನ ಮಗಳ ದ್ರವ್ಯದಿಂದ ಜೀವಿಸಲಿ. ದರಿದ್ರನಿಂದ ಧನವನ್ನು ಅಪೇಕ್ಷಿಸಲಿ.

ಕಶ್ಯಪಃ

ಸರ್ವತ್ರ ಸರ್ವಂ ಪಣತು ನ್ಯಾಸಲೋಪಂ ಕರೋತು ಚ ।
ಕೂಟಸಾಕ್ಷಿತ್ವಮಭ್ಯೇತು ಬಿಸಸ್ಯೈನ್ಯಂ ಕರೋತಿ ಯಃ ॥೫೯॥

ವೃಥಾಮಾಂಸಂ ಸಮಶ್ನಾತು ವೃಥಾದಾನಂ ಕರೋತು ಚ ।
ಯಾತು ಸ್ತ್ರಿಯಂ ದಿವಾ ಚೈವ ಬಿಸಸ್ಯೈನ್ಯಂ ಕರೋತಿ ಯಃ ॥೬೦॥

ಕಶ್ಯಪರು– ಬಿಸಸ್ಯೈನ್ಯವನ್ನು ಮಾಡಿದವನು ಜೂಜಿನಲ್ಲಿ ಎಲ್ಲವನ್ನೂ ಪಣವಾಗಿ ಇಡಲಿ. ನ್ಯಾಸವಾಗಿಟ್ಟ ವಸ್ತುವನ್ನು ಅಪಹರಿಸಲಿ. ಸುಳ್ಳು ಸಾಕ್ಷಿಯನ್ನು ಹೇಳಲಿ. ವ್ಯರ್ಥವಾಗಿ ಮಾಂಸವನ್ನು ತಿನ್ನಲಿ. ವ್ಯರ್ಥವಾದ ದಾನವನ್ನು ಮಾಡಲಿ. ಹಗಲಿನಲ್ಲಿ ಸ್ತ್ರೀಸಂಗವನ್ನು ಮಾಡಲಿ.

ಭರದ್ವಾಜಃ

ನೃಶಂಸಸ್ಯಕೃತಧರ್ಮಾಽಸ್ತು ಸ್ತ್ರೀಷು ಜ್ಞಾತಿಷು ಗೋಷು ಚ ।
ಬ್ರಾಹ್ಮಣಂ ಚಾಪಿ ಜಯತಾಂ ಬಿಸಸ್ಯೈನ್ಯಂ ಕರೋತಿ ಯಃ ॥೬೧॥

ಉಪಾಧ್ಯಾಯಮಧಃ ಕೃತ್ವಾ ಋಚೋಽಧ್ಯೇತು ಯಜೂಂಷಿ ಚ ।
ಜುಹೋತು ಚ ಸ ಕಕ್ಷಾಗ್ನೌ ಬಿಸಸ್ಯೈನ್ಯಂ ಕರೋತಿ ಯಃ ॥೬೨॥

ಭರದ್ವಾಜರು– ಬಿಸಸ್ಯೈನ್ಯವನ್ನು ಮಾಡಿದ ಕ್ರೂರಿಯು, ಸ್ತ್ರೀಯರ, ಜ್ಞಾತಿಗಳ ಮತ್ತು ಗೋವುಗಳ ವಿಷಯದಲ್ಲಿ ಧರ್ಮತ್ಯಾಗಿಯಾಗಲಿ. ಬ್ರಾಹ್ಮಣರನ್ನು ಜಯಿಸಲಿ. ಉಪಾಧ್ಯಾಯರನ್ನು ತಿರಸ್ಕರಿಸಿ ಋಗ್ವೇದವನ್ನು ಮತ್ತು ಯಜುರ್ವೇದವನ್ನು ಅಧ್ಯಯನ ಮಾಡಲಿ. ಹುಲ್ಲಿನಿಂದ ಮಾಡಿದ ಅಗ್ನಿಯಲ್ಲಿ ಹೋಮವನ್ನು ಮಾಡಲಿ.

ಜಮದಗ್ನಿಃ

ಪುರೀಷಮುತ್ಸೃಜತ್ವಪ್ಸು ಹಂತು ಗಾಂ ಚಾಪಿ ದೋಹಿನೀಮ್ ।
ಅನೃತೌ ಮೈಥುನಂ ಯಾತು ಬಿಸಸ್ಯೈನ್ಯಂ ಕರೋತಿ ಯಃ ॥೬೩॥

ದ್ವೇಷ್ಯೋ ಭಾರ್ಯೋಪಜೀವೀ ಸ್ಯಾದ್ ದೂರಬಂಧುಶ್ಚ ವೈರವಾನ್ ।
ಅನ್ಯೋನ್ಯಸ್ಯಾತಿಥಿಶ್ಚಾಸ್ತು ಬಿಸಸ್ಯೈನ್ಯಂ ಕರೋತಿ ಯಃ ॥೬೪॥

ಜಮದಗ್ನಿ– ಬಿಸಸ್ಯೈನ್ಯವನ್ನು ಮಾಡಿದವನು ನೀರಿನಲ್ಲಿ ಮಲವಿಸರ್ಜನೆಯನ್ನು ಮಾಡಲಿ. ಹಾಲುಕರೆಯುವ ಹಸುವನ್ನು ವಧೆ ಮಾಡಲಿ. ಋತುಕಾಲವಲ್ಲದ ಸಮಯದಲ್ಲಿ ಮೈಥುನವನ್ನು ಮಾಡಲಿ. ಎಲ್ಲರಿಂದಲೂ ದ್ವೇಷ್ಯನಾಗಲಿ. ಭಾರ್ಯೆಯನ್ನು ಉಪಜೀವಿಸಿಕೊಂಡು ಬದುಕಲಿ. ಬಂಧುಗಳನ್ನು ದೂರ ಮಾಡಲಿ. ಎಲ್ಲರ ಜೊತೆಯಲ್ಲೂ ವೈರವನ್ನು ಮಾಡಲಿ. ಪರಸ್ಪರ ಆತಿಥ್ಯವನ್ನು ಹೊಂದಲಿ.

ಗೌತಮಃ

ಅಧೀತ್ಯ ವೇದಾಂಸ್ತ್ಯಜತು ತ್ರೀನಗ್ನೀನಪವಿಧ್ಯತು ।
ವಿಕ್ರೀಣಾತು ತಥಾ ಸೋಮಂ ಬಿಸಸ್ಯೈನ್ಯಂ ಕರೋತಿ ಯಃ ॥೬೫॥

ಉದಪಾನಪ್ಲವೇ ಗ್ರಾಮೇ ಬ್ರಾಹ್ಮಣೋ ವೃಷಲೀಪತಿಃ ।
ತಸ್ಯ ಸಾಲೋಕ್ಯತಾಂ ಯಾತು ಬಿಸಸ್ಯೈನ್ಯಂ ಕರೋತಿ ಯಃ ॥೬೬॥

ಗೌತಮರು– ಬಿಸಸ್ಯೈನ್ಯವನ್ನು ಮಾಡಿದವನು ವೇದಾಧ್ಯಯನವನ್ನು ಮಾಡಿ ವೇದವನ್ನು ಪರಿತ್ಯಜಿಸಲಿ. ಮೂರು ಅಗ್ನಿಗಳನ್ನು ನಾಶಗೊಳಿಸಲಿ. ಸೋಮವಿಕ್ರಯವನ್ನು ಮಾಡಲಿ. ನೀರನ್ನು ದಾಟಿಸುವ ತೆಪ್ಪದಂತೆ ಗ್ರಾಮಸ್ಥರೆಲ್ಲರನ್ನೂ ರಕ್ಷಿಸುವ ಒಂದೇ

ಬಾವಿಯಿರುವ ಗ್ರಾಮದಲ್ಲಿ ವೃಷಲೀಪತಿಯಾದ ಬ್ರಾಹ್ಮಣನಿಗೆ ಉಂಟಾಗುವ ಲೋಕವು ಅವನಿಗೆ ಆಗಲಿ.

ವಿಶ್ವಾಮಿತ್ರಃ

ಜೀವತೋ ವೈ ಗುರೂನ್ ಭೃತ್ಯಾನ್ ಭರಂತ್ವಸ್ಯ ಪರೇ ಜನಾಃ ।
ಅಗತಿರ್ಬಹುಪುತ್ರಃ ಸ್ಯಾದ್ ಬಿಸಸ್ಯೈನ್ಯಂ ಕರೋತಿ ಯಃ ॥೬೭॥

ಅಶುಚಿರ್ಬ್ರಹ್ಮಕೂಟೋಽಸ್ತು ಋದ್ಧ್ಯಾ ಚೈವಾಪ್ಯಹಂಕೃತಃ ।
ಕರ್ಷಕೋ ಮತ್ಸರೀ ಚಾಸ್ತು ಬಿಸಸ್ಯೈನ್ಯಂ ಕರೋತಿ ಯಃ ॥೬೮॥

ವರ್ಷಾನ್ ಕರೋತು ಭೃತಕೋ ರಾಜ್ಞಶ್ಚಾಸ್ತು ಪುರೋಹಿತಃ ।
ಅಯಾಜ್ಯಸ್ಯ ಭವೇದೃತ್ವಿಗ್ ಬಿಸಸ್ಯೈನ್ಯಂ ಕರೋತಿ ಯಃ ॥೬೯॥

ವಿಶ್ವಾಮಿತ್ರ– ಬಿಸಸ್ಯೈನ್ಯವನ್ನು ಮಾಡಿದವನು ತಾನು ಬದುಕಿರುವಾಗ ಅವನ ಹಿರಿಯರನ್ನು ಮತ್ತು ಭೃತ್ಯರನ್ನು ಇನ್ನೊಬ್ಬರು ಪೋಷಿಸಲಿ. ಜೀವನೋಪಾಯವಿಲ್ಲದೆ ಬಹುಪುತ್ರನಾಗಲಿ. ವೇದಗಳ ರಾಶಿಗೆ ಆಶ್ರಯನಾಗಿದ್ದರೂ ಅಶುಚಿಯಾಗಲಿ. ಸಂಪತ್ತಿನಿಂದ ಅಹಂಕಾರವನ್ನು ಹೊಂದಲಿ. ಕೃಷಿಕರನೂ, ಮತ್ಸರಿಯೂ ಆಗಲಿ. ಅನೇಕ ವರ್ಷಗಳ ಕಾಲ ಸಂಬಳವನ್ನು ತೆಗೆದುಕೊಂಡು ಕೆಲಸವನ್ನು ಮಾಡಲಿ. ರಾಜನಿಗೆ ಪುರೋಹಿತನಾಗಲಿ. ಯಾಗವನ್ನು ಮಾಡಲು ಯೋಗ್ಯತೆ ಇಲ್ಲದವನಿಗೆ ಯಾಗವನ್ನು ಮಾಡಿಸುವ ಋತ್ವಿಜನಾಗಲಿ.

ಅರುಂಧತೀ

ನಿತ್ಯಂ ಪರಿವದೇಚ್ಚ್ವಶ್ರ್ಯಾಂ ಭರ್ತುರ್ಭವತು ದುರ್ಮನಾಃ ।
ಏಕಾ ಸ್ವಾದು ಸಮಶ್ನಾತು ಬಿಸಸ್ಯೈನ್ಯಂ ಕರೋತಿ ಯಾ ॥೭೦॥

ಜ್ಞಾತೀನಾಂ ಗೃಹಮಧ್ಯಸ್ಥಾ ಸಕ್ತೂನತ್ತು ದಿನಕ್ಷಯೇ ।
ಅಭಾಗ್ಯಾಽವೀರಸೂರಸ್ತು ಬಿಸಸ್ಯೈನ್ಯಂ ಕರೋತಿ ಯಾ ॥೭೧॥

ಅರುಂಧತೀ– ಬಿಸಸ್ಯೈನ್ಯವನ್ನು ಮಾಡಿದವಳು ನಿತ್ಯವೂ ಅತ್ತೆಯ ಜೊತೆಯಲ್ಲಿ ಜಗಳವಾಡಲಿ. ಪತಿಗೆ ವಿರೋಧ ಮಾಡುವವಳಾಗಲಿ. ಒಬ್ಬಳೇ ಒಳ್ಳೆಯ ಅಡುಗೆಯನ್ನು ಊಟಮಾಡುವವಳಾಗಲಿ. ಜ್ಞಾತಿಗಳ ಗೃಹಮಧ್ಯದಲ್ಲಿ

ಸಾಯಂಕಾಲದಲ್ಲಿ ಕೇವಲ ಹಿಟ್ಟನ್ನು ತಿನ್ನುವಷ್ಟು ದರಿದ್ರಳಾಗಲಿ. ಭಾಗ್ಯಹೀನಳಾಗಲಿ. ವೀರರಾದ ಮಕ್ಕಳನ್ನು ಪಡೆಯದಿರಲಿ.

ಗಂಡಾ

ಅನೃತಂ ಭಾಷತು ಸದಾ ಸಾಧುಭಿಶ್ಚ ವಿರುಧ್ಯತು ।
ದದಾತು ಕನ್ಯಾಂ ಶುಲ್ಕೇನ ಬಿಸಸ್ಯೈನ್ಯಂ ಕರೋತಿ ಯಾ ॥೭೨॥

ಸಾಧಯಿತ್ವಾ ಸ್ವಯಂ ಪ್ರಾಶೇದ್ ದಾಸ್ಯೇ ಜೀವತು ಚೈವ ಹ ।
ವಿಕರ್ಮಣಾ ಪ್ರಮೀಯೇತ ಬಿಸಸ್ಯೈನ್ಯಂ ಕರೋತಿ ಯಾ ॥೭೩॥

ಗಂಡಾ– ಬಿಸಸ್ಯೈನ್ಯವನ್ನು ಮಾಡಿದವಳು ಯಾವಾಗಲೂ ಅನೃತವನ್ನು ಮಾತನಾಡಲಿ. ಸಜ್ಜನರ ಜೊತೆಯಲ್ಲಿ ವಿರೋಧವನ್ನು ಮಾಡಲಿ. ಕನ್ಯೆಯನ್ನು ಹಣಕ್ಕಾಗಿ ಮಾರಿಕೊಳ್ಳಲಿ. ಅಡುಗೆಯನ್ನು ಮಾಡಿ ತಾನೊಬ್ಬಳೇ ಊಟವನ್ನು ಮಾಡಲಿ. ಯಾವಾಗಲೂ ದಾಸಿಯಾಗಿಯೇ ಜೀವಿಸಲಿ. ದುಷ್ಕರ್ಮವನ್ನು ಮಾಡಿ ಮರಣವನ್ನು ಹೊಂದಲಿ.

ಪಶುಸಖಿಃ

ದಾಸ್ಯ ಏವ ಪ್ರಜಾಯೇತ ಸೋಽಪ್ರಸೂತಿರಕಿಂಚನಃ ।
ದೈವತೇಷ್ವನಮಸ್ಕಾರೋ ಬಿಸಸ್ಯೈನ್ಯಂ ಕರೋತಿ ಯಃ ॥೭೪॥

ಪಶುಸಖಿ– ಬಿಸಸ್ಯೈನ್ಯವನ್ನು ಮಾಡಿದವನು ದಾಸ್ಯದಲ್ಲಿಯೇ ಜನಿಸಲಿ. ಅವನಿಗೆ ಮಕ್ಕಳಿಲ್ಲದೆ ದರಿದ್ರನಾಗಲಿ. ದೇವತೆಗಳಿಗೆ ನಮಸ್ಕಾರವನ್ನು ಮಾಡದಿರಲಿ.

ಶುನಃಸಖಿಃ

ಅಧ್ವರ್ಯವೇ ದುಹಿತರಂ ದದಾತು
ಚ್ಛಂದೋಗೇ ವಾ ಚರಿತಬ್ರಹ್ಮಚರ್ಯೇ ।
ಆಥರ್ವಣಂ ವೇದಮಧೀತ್ಯ ವಿಪ್ರಃ
ಸ್ನಾಯೀತ ಯೋ ವೈ ಹರತೇ ಬಿಸಾನಿ ॥೭೫॥

ಶುನಃಸಖಿ– ಬಿಸವನ್ನು ಅಪಹರಿಸಿದವನು ಅಧ್ವರ್ಯುವಿಗೆ ಮಗಳನ್ನು ಕೊಡಲಿ. ಬ್ರಹ್ಮಚರ್ಯವನ್ನು ಆಚರಿಸಿದ ಸಾಮವೇದ ಪಾಠಕನಿಗಾದರೂ ಮಗಳನ್ನು ಕೊಡಲಿ. ಅಥವಾ ಅಥರ್ವಣ ವೇದವನ್ನು ಓದಿ ಸ್ನಾತಕನಾದವನಿಗಾದರೂ ಕನ್ಯೆಯನ್ನು ಕೊಡಲಿ.

ಋಷಯಃ

ಇಷ್ಟಮೇತದ್ ದ್ವಿಜಾತೀನಾಂ ಯೋಽಯಂ ತೇ ಶಪಥಃ ಕೃತಃ ।
ತ್ವಯಾ ಕೃತಂ ಬಿಸಸ್ಯೈನ್ಯಂ ಸರ್ವೇಷಾಂ ನಃ ಶುನಃಸಖ ॥೭೬॥

ಋಷಿಗಳು– ಎಲೈ ಶುನಃಸಖನೇ, ನೀನು ಮಾಡುತ್ತಿರುವ ಶಪಥವು ಬ್ರಾಹ್ಮಣರಿಗೆ ಪ್ರಿಯವಾದುದು. ಆದ್ದರಿಂದ ನಮ್ಮೆಲ್ಲರ ಬಿಸಗಳನ್ನು ನೀನೇ ಕದ್ದಿದ್ದೀಯೆ.

ಶುನಃಸಖಿಃ

ನ್ಯಸ್ತಮಾದ್ಯಮಪಶ್ಯದ್ಭಿರ್ಯದುಕ್ತಂ ಕೃತಕರ್ಮಭಿಃ ।
ಸತ್ಯಮೇತನ್ನ ಮಿಥ್ಯೈತದ್ ಬಿಸಸ್ಯೈನ್ಯಂ ಕೃತಂ ಮಯಾ ॥೭೭॥

ಶುನಃಸಖಿ– ನಿಮ್ಮ ಆಹ್ನಿಕಕಾರ್ಯಗಳನ್ನು ಮುಗಿಸಿ ತೀರದಲ್ಲಿಟ್ಟಿದ್ದ ಬಿಸರೂಪವಾದ ಆಹಾರವನ್ನು ಕಾಣದೆ ನೀವು ಹೇಳಿದ ಮಾತು ಸತ್ಯವಾದುದು, ಸುಳ್ಳಲ್ಲ. ಬಿಸಗಳನ್ನು ಕದ್ದವನು ನಾನು.

ಮಯಾ ಹ್ಯಂತರ್ಹಿತಾನೀಹ ಬಿಸಾನೀಮಾನಿ ಪಶ್ಯತ ।
ಪರೀಕ್ಷಾರ್ಥಂ ಭಗವತಾಂ ಕೃತಮೇತನ್ಮಯಾऽನಘಾಃ ।
ರಕ್ಷಣಾರ್ಥಂ ಚ ಸರ್ವೇಷಾಂ ಭವತಾಮಹಮಾಗತಃ ॥೭೮॥

ನಾನು ಅದೃಶ್ಯಗಳನ್ನಾಗಿ ಮಾಡಿದ ಈ ಬಿಸಗಳನ್ನು ನೋಡಿ. ಎಲೈ ಅನಘರೇ, ಪೂಜ್ಯರಾದ ನಿಮ್ಮನ್ನು ಪರೀಕ್ಷೆ ಮಾಡಲು ನಾನು ಈ ಕಾರ್ಯವನ್ನು ಮಾಡಿದೆ ಮತ್ತು ನಿಮ್ಮೆಲ್ಲರನ್ನೂ ರಕ್ಷಿಸುವ ಸಲುವಾಗಿ ನಾನು ಇಲ್ಲಿಗೆ ಬಂದೆನು.

ಯಾತುಧಾನೀ ಹ್ಯತಿಕ್ರುದ್ಧಾ ಕೃತ್ಯೈಷಾ ವೋ ವಧೈಷಿಣೀ ।
ವೃಷಾದರ್ಭಿಪ್ರಯುಕ್ತೈಷಾ ನಿಹತಾ ಮೇ ತಪೋಧನಾಃ ॥೭೯॥

ವೃಷಾದರ್ಭಿಯು ಸೃಷ್ಟಿ ಮಾಡಿದ ಈ ಯಾತುಧಾನಿಯೂ ಬಹಳ ಕೋಪ ಉಳ್ಳವಳಾಗಿ ನಿಮ್ಮನ್ನು ಕೊಲ್ಲಲು ಬಯಸಿದಳು. ಎಲೈ ತಪೋಧನರೇ, ನಾನು ಅವಳನ್ನು ಸಂಹರಿಸಿದೆ.

ದುಷ್ಟಾ ಹಿಂಸ್ಯಾದಿಯಂ ಪಾಪಾ ಯುಷ್ಮಾನ್ ಪ್ರತ್ಯಗ್ನಿಸಂಭವಾ ।
ತಸ್ಮಾದಸ್ಮ್ಯಾಗತೋ ವಿಪ್ರಾ ವಾಸವಂ ಮಾಂ ನಿಬೋಧತ ॥೮೦॥

ಎಲೈ ಬ್ರಾಹ್ಮಣರೇ, ದುಷ್ಪಳೂ, ಪಾಪಿಯೂ, ಅಗ್ನಿಸಂಭವಳೂ ಆದ ಇವಳು ನಿಮ್ಮನ್ನು ಹಿಂಸಿಸಬಹುದು ಎಂದು ನಾನು ಇಲ್ಲಿಗೆ ಬಂದೆ. ಬ್ರಾಹ್ಮಣರೇ, ನನ್ನನ್ನು ಇಂದ್ರನೆಂದು ತಿಳಿಯಿರಿ.

ಅಲೋಭಾದಕ್ಷಯಾ ಲೋಕಾಃ ಪ್ರಾಪ್ತಾ ವಃ ಸಾರ್ವಕಾಮಿಕಾಃ ।
ಉತ್ತಿಷ್ಠಧ್ವಮಿತಃ ಕ್ಷಿಪ್ರಂ ತಾನವಾಪ್ನುತ ವೈ ದ್ವಿಜಾಃ ॥೮೧॥

ಲೋಭವನ್ನು ತ್ಯಜಿಸಿದುದರಿಂದ ಸರ್ವಕಾಮಪ್ರದವಾದ ಅಕ್ಷಯ ಲೋಕಗಳನ್ನು ನೀವು ಜಯಿಸಿದ್ದೀರಿ. ಬ್ರಾಹ್ಮಣರೇ, ಎದ್ದು ಇಲ್ಲಿಂದ ಶೀಘ್ರವಾಗಿ ಆ ಲೋಕವನ್ನು ಹೊಂದುವವರಾಗಿ.

ಭೀಷ್ಮಃ

ತತೋ ಮಹರ್ಷಯಃ ಪ್ರೀತಾಸ್ತಥೇತ್ಯುಕ್ತ್ವಾ ಪುರಂದರಮ್ ।
ಸಹೈವ ತ್ರಿದಶೇಂದ್ರೇಣ ಸರ್ವೇ ಜಗ್ಮುಸ್ತ್ರಿವಿಷ್ಟಪಮ್ ॥೮೨॥

ಭೀಷ್ಮ- ಆಗ ಆ ಮಹರ್ಷಿಗಳು ಸಂತೋಷಗೊಂಡು ಇಂದ್ರನಿಗೆ ಹಾಗೆಯೇ ಆಗಲಿ ಎಂದು ಹೇಳಿ ಇಂದ್ರನ ಜೊತೆಯಲ್ಲಿ ಎಲ್ಲರೂ ಸ್ವರ್ಗಕ್ಕೆ ಹೋದರು.

ಏವಮೇತೇ ಮಹಾತ್ಮಾನೋ ಭೋಗೈರ್ಬಹುವಿಧೈರಪಿ ।
ಕ್ಷುಧಾ ಪರಮಯಾ ಯುಕ್ತಾಶ್ಚಂದ್ಯಮಾನಾ ಮಹಾತ್ಮಭಿಃ ।
ನೈವ ಲೋಭಂ ತದಾ ಚಕ್ರುಸ್ತತಃ ಸ್ವರ್ಗಮವಾಪ್ನುವನ್ ॥೮೩॥

ಹೀಗೆ ಈ ಮಹಾತ್ಮರು ತೀವ್ರವಾದ ಹಸಿವಿನಿಂದ ಕೂಡಿದ್ದರೂ ಮಹಾತ್ಮರಿಂದ ಬಹುವಿಧ ಭೋಗಗಳಿಂದ ಪ್ರಲೋಭನಗೊಳಿಸಲ್ಪಟ್ಟರೂ ಲೋಭವನ್ನು ಮಾಡಲಿಲ್ಲ. ಆದ್ದರಿಂದ ಸ್ವರ್ಗವನ್ನು ಹೊಂದಿದರು.

ತಸ್ಮಾತ್ ಸರ್ವಾಸ್ವವಸ್ಥಾಸು ನರೋ ಲೋಭಂ ವಿವರ್ಜಯೇತ್ ।
ಏಷ ಧರ್ಮಃ ಪರೋ ರಾಜನ್ ಅಲೋಭ ಇತಿ ವಿಶ್ರುತಃ ॥೮೪॥

ಆದ್ದರಿಂದ ಮನುಷ್ಯನು ಯಾವ ಅವಸ್ಥೆಯಲ್ಲಿಯೂ ಲೋಭವನ್ನು ಮಾಡಬಾರದು. ಎಲೈ ರಾಜನೇ, ಅಲೋಭ ಎಂದು ವಿಖ್ಯಾತವಾದ ಇದು ಶ್ರೇಷ್ಠವಾದ ಧರ್ಮ.

ಇದಂ ನರಃ ಸಚ್ಚರಿತಂ ಸಮವಾಯೇಷು ಕೀರ್ತಯೇತ್ ।
ಸುಖಭಾಗೀ ಚ ಭವತಿ ನ ಚ ದುರ್ಗಾಣ್ಯವಾಪ್ನುತೇ ॥೮೫॥

ಈ ಸಚ್ಚರಿತೆಯನ್ನು ಮಾನವನು ಸಜ್ಜನ ಸಮೂಹದಲ್ಲಿ ಹೇಳಬೇಕು. ಅಂತಹವನು ಸುಖಭಾಗಿಯಾಗುತ್ತಾನೆ ಮತ್ತು ಕಷ್ಟಗಳನ್ನು ಹೊಂದುವುದಿಲ್ಲ.

ಪ್ರೀಯಂತೇ ಪಿತರಶ್ಚಾಸ್ಯ ಋಷಯೋ ದೇವತಾಸ್ತಥಾ ।
ಯಶೋಧರ್ಮಾರ್ಥಭಾಗೀ ಚ ಭವತಿ ಪ್ರೇತ್ಯ ಮಾನವಃ ॥೮೬॥

ಅಂತಹ ಮನುಷ್ಯನಿಗೆ ಪಿತೃಗಳು, ಋಷಿಗಳು ಮತ್ತು ದೇವತೆಗಳು ಪ್ರಸನ್ನರಾಗುತ್ತಾರೆ. ಅವನು ಮರಣವನ್ನು ಹೊಂದಿದ ಮೇಲೆ ಕೀರ್ತಿಗೂ, ಧರ್ಮಕ್ಕೂ, ಶುಭವಾದ ಅರ್ಥಗಳಿಗೂ ಭಾಜನನಾಗುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ದಾನಕಥನೇ ಸಪ್ತರ್ಷಿವ್ಯಷಾದರ್ಭಿಸಂವಾದೋ ನಾಮ ಸಪ್ತತ್ರಿಂಶೋತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಮೂವತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಮೂವತ್ತೆಂಟನೆಯ ಅಧ್ಯಾಯ

ಋಷಿಗಳಿಂದ ಶಪಥನಿಮಿತ್ತದಿಂದ ಧರ್ಮೋಪದೇಶ

ಭೀಷ್ಮಃ

ಅತ್ರೈವೋದಾಹರಂತೀಮಮಿತಿಹಾಸಂ ಪುರಾತನಮ್ ।
ಯದ್ ವೃತ್ತಂ ತೀರ್ಥಯಾತ್ರಾಯಾಂ ಶಪಥಂ ಪ್ರತಿ ತಚ್ಛೃಣು ॥೧॥

ಭೀಷ್ಮ- ಶಪಥವನ್ನು ಮಾಡಿ (ಪ್ರಮಾಣವನ್ನು ಮಾಡಿ) ಧರ್ಮವನ್ನು ಉಪದೇಶ ಮಾಡುವ ಈ ವಿಷಯದಲ್ಲಿ ಹಿಂದೆ ತೀರ್ಥಯಾತ್ರೆಯ ಸಮಯದಲ್ಲಿ ನಡೆದ ಶಪಥ ರೂಪವಾದ ಪುರಾತನವಾದ ಇತಿಹಾಸವನ್ನು ಕೇಳು.

ಪುಷ್ಕರಾರ್ಥಂ ಕೃತಂ ಸೈನ್ಯಂ ಪುರಾ ಭರತಸತ್ತಮ ।
ರಾಜರ್ಷಿಭಿರ್ಮಹಾರಾಜ ತಥೈವ ಚ ದ್ವಿಜರ್ಷಿಭಿಃ ॥೨॥

ಎಲೈ ಭರತಶ್ರೇಷ್ಠನೇ, ಮಹಾರಾಜನೇ, ಹಿಂದೆ ರಾಜರ್ಷಿಗಳಿಂದಲೂ ಮತ್ತು ವಿಪ್ರರ್ಷಿಗಳಿಂದಲೂ ಕಮಲಗಳ ಸಲುವಾಗಿ ಕಳ್ಳತನವು ಮಾಡಲ್ಪಟ್ಟಿತು.

ಋಷಯಃ ಸಮೇತಾಃ ಪಶ್ಚಿಮೇ ವೈ ಪ್ರಭಾಸೇ
ಸಮಾಗತಾ ಮಂತ್ರಮಮಂತ್ರಯಂತ ।
ಚರಾಮ ಸರ್ವೇ ಪೃಥಿವೀಂ ಪುಣ್ಯತೀರ್ಥಾಂ
ತನ್ನಃ ಕಾರ್ಯಂ ಹಂತ ಗಚ್ಛಾಮ ಸರ್ವೇ ॥೩॥

ಋಷಿಗಳು ಪಶ್ಚಿಮಪ್ರಭಾಸ ಕ್ಷೇತ್ರದಲ್ಲಿ ಒಟ್ಟಿಗೆ ಸೇರಿ ನಾವೆಲ್ಲರೂ ಪುಣ್ಯತೀರ್ಥವನ್ನು ಹೊಂದಿರುವ ಭೂಮಿಯಲ್ಲಿ ತೀರ್ಥಯಾತ್ರೆಯನ್ನು ಮಾಡೋಣ. ಅದು ನಾವು ಮಾಡಬೇಕಾದ ಕಾರ್ಯ. ಆದ್ದರಿಂದ ಎಲ್ಲರೂ ಹೊರಡೋಣ ಎಂದು ಮಂತ್ರಾಲೋಚನೆಯನ್ನು ಮಾಡಿದರು.

ಶುಕ್ರೋಽಂಗಿರಾಶ್ಚೈವ ಕವಿಶ್ಚ ವಿದ್ವಾಂ-
ಸ್ತಥಾಽಗಸ್ತ್ಯೋ ನಾರದಪರ್ವತೌ ಚ ।
ಭೃಗುರ್ವಸಿಷ್ಠಃ ಕಶ್ಯಪೋ ಗೌತಮಶ್ಚ
ವಿಶ್ವಾಮಿತ್ರೋ ಜಮದಗ್ನಿಶ್ಚ ರಾಜನ್ ॥೪॥

ಋಷಿಸ್ತಥಾ ಗಾಲವೋಽಥಾಷ್ಟಕಶ್ಚ
ಭರದ್ವಾಜೋಽರುಂಧತೀ ವಾಲಖಿಲ್ಯಾಃ ।
ಶಿಬಿರ್ದಿಲೀಪೋ ನಹುಷೋಽಂಬರೀಷೋ
ರಾಜಾ ಯಯಾತಿರ್ಧುಂಧುಮಾರೋಽಥ ಪೂರುಃ ॥೫॥

ಜಗ್ಮುಃ ಪುರಸ್ಕೃತ್ಯ ಮಹಾನುಭಾವಂ
ಶತಕ್ರತುಂ ವೃತ್ರಹಣಂ ನರೇಂದ್ರ ।
ತೀರ್ಥಾನಿ ಸರ್ವಾಣಿ ಪರಿಕ್ರಮಂತೋ
ಮಾಘ್ಯಾಂ ಯಯುಃ ಕೌಶಿಕೀಂ ಪುಣ್ಯತೀರ್ಥಾಮ್ ॥೬॥

ಎಲೈ ನರೇಂದ್ರನೇ, ಶುಕ್ರ, ಅಂಗಿರಸ, ಕವಿ, ಅಗಸ್ತ್ಯ, ನಾರದ, ಪರ್ವತ, ಭೃಗು, ವಸಿಷ್ಠ, ಕಶ್ಯಪ, ಗೌತಮ, ವಿಶ್ವಾಮಿತ್ರ, ಜಮದಗ್ನಿ, ಗಾಲವ, ಅಷ್ಟಕ, ಭರದ್ವಾಜ, ಅರುಂಧತೀ, ವಾಲಖಿಲ್ಯರು, ಶಿಬಿ, ದಿಲೀಪ, ನಹುಷ, ಅಂಬರೀಶ, ಯಯಾತಿ, ಧುಂಧುಮಾರ, ಪುರು - ಇವರೆಲ್ಲರೂ ಮಹಾನುಭಾವನೂ, ಶತಕ್ರತುವೂ, ವೃತಸಂಹಾರಕನೂ ಆದ ಇಂದ್ರನನ್ನು ಮುಂದೆ ಮಾಡಿಕೊಂಡು ಎಲ್ಲಾ ತೀರ್ಥಗಳಲ್ಲಿ ಸಂಚಾರ ಮಾಡುತ್ತಾ ಮಾಘಮಾಸದಲ್ಲಿ ಪುಣ್ಯತೀರ್ಥವಾದ ಕೌಶಿಕೀ ನದಿಗೆ ಬಂದರು.

ಸರ್ವೇಷು ತೀರ್ಥೇಷ್ವಥ ಧೂತಪಾಪಾ
ಜಗ್ಮುಸ್ತತೋ ಬ್ರಹ್ಮಸರಃ ಸುಪುಣ್ಯಮ್ ।
ದೇವಸ್ಯ ತೀರ್ಥೇ ಜಲಮಗ್ನಿಕಲ್ಪಾ
ವಿಗಾಹ್ಯ ತೇ ಭುಕ್ತಬಿಸಪ್ರಸೂನಾಃ ॥೭॥

ಎಲ್ಲ ತೀರ್ಥಗಳಲ್ಲಿಯೂ ತಮ್ಮ ಪಾಪಗಳನ್ನು ಕಳೆದುಕೊಂಡು ಅನಂತರ ಬಹಳ ಪುಣ್ಯಪ್ರದವಾದ ಬ್ರಹ್ಮಸರೋವರಕ್ಕೆ ಬಂದರು. ಅಗ್ನಿಸದೃಶರಾದ ಅವರು ಬ್ರಹ್ಮದೇವರ ಆ ತೀರ್ಥದಲ್ಲಿ ಸ್ನಾನವನ್ನು ಮಾಡಿ ಕಮಲದ ದಂಟುಗಳನ್ನು ಆಹಾರವಾಗಿ ಸೇವಿಸಿದರು.

ಕೇಚಿದ್ ಬಿಸಾನ್ಯಖನಂಸ್ತತ್ರ ರಾಜನ್
ಅನ್ಯೇ ಮೃಣಾಲಾನ್ಯಖನಂಸ್ತತ್ರ ವಿಪ್ರಾಃ ।
ಅಥಾಪಶ್ಯನ್ ಪುಷ್ಕರಂ ತೇ ಹ್ರಿಯಂತಂ
ಹ್ರದಾದಗಸ್ತ್ಯೇನ ಸಮುದ್ಧೃತಂ ವೈ ॥೮॥

ಎಲೈ ರಾಜನೇ, ಅಲ್ಲಿ ಕೆಲವು ಋಷಿಗಳು ಕಮಲಗಳನ್ನೂ, ಇನ್ನು ಕೆಲವು ಋಷಿಗಳು ಕಮಲದ ನಾಳಗಳನ್ನೂ ತೀರದಲ್ಲಿ ಹುಗಿದಿಟ್ಟರು. ಅನಂತರ ಅಗಸ್ತ್ಯರು ತಂದಿಟ್ಟಿದ್ದ ಕಮಲಗಳು ಕಳುವಾಗಿರುವುದನ್ನು ನೋಡಿದರು.

ತಾನಾಹ ಸರ್ವಾನೃಷಿಮುಖ್ಯಾನಗಸ್ತ್ಯಃ
ಕೇನಾದತ್ತಂ ಪುಷ್ಕರಂ ಮೇ ಸುಜಾತಮ್ ।
ಯುಷ್ಮಾನ್ ಶಂಕೇ ದೀಯತಾಂ ಪುಷ್ಕರಂ ಮೇ
ನ ವೈ ಭವಂತೋ ಹರ್ತುಮರ್ಹಂತಿ ಪದ್ಮಮ್ ॥೯॥

ಅಗಸ್ತ್ಯರು ಆ ಎಲ್ಲ ಋಷಿಶ್ರೇಷ್ಠರನ್ನು ಕುರಿತು- 'ನಾನು ಸಂಗ್ರಹಿಸಿಟ್ಟಿದ್ದ ಒಳ್ಳೆಯ ಕಮಲಗಳನ್ನು ಯಾರು ಕದ್ದಿದ್ದೀರಿ? ನಿಮ್ಮ ಮೇಲೆಯೇ ನನಗೆ ಸಂಶಯವಿದೆ. ನನ್ನ ಕಮಲಗಳನ್ನು ಕೊಟ್ಟುಬಿಡಿ. ನೀವು ಕಮಲವನ್ನು ಕದಿಯುವುದು ಯೋಗ್ಯವಲ್ಲ' ಎಂದು ಹೇಳಿದರು.

ಶೃಣೋಮಿ ಕಾಲೋ ಹಿಂಸತೇ ಧರ್ಮವೀರ್ಯಂ
ಸೇಯಂ ಪ್ರಾಪ್ತಾ ವರ್ಧತೇ ಧರ್ಮಪೀಡಾ ।
ಪುರಾऽಧರ್ಮೋ ವರ್ಧತೇ ನೇಹ ಯಾವತ್
ತಾವದ್ ಗಚ್ಛಾಮಿ ಪರಲೋಕಂ ಚಿರಾಯ ॥೧೦॥

ಕಾಲವು ಧರ್ಮದ ಸಾಮರ್ಥ್ಯವನ್ನು ನಾಶಮಾಡುತ್ತದೆ ಎಂದು ಕೇಳಿದ್ದೇನೆ. ಈಗ ಅಂತಹ ಧರ್ಮಪೀಡೆಯು ಪ್ರಾಪ್ತವಾಗಿ ಹೆಚ್ಚಾಗುತ್ತಿದೆ. ಇಲ್ಲಿ ಅಧರ್ಮವು ಹೆಚ್ಚಾಗುವುದಕ್ಕಿಂತ ಮೊದಲೇ ನಾನು ಶಾಶ್ವತವಾಗಿ ಪರಲೋಕಕ್ಕೆ ಹೋಗುತ್ತೇನೆ.

ಪುರಾ ವೇದಾನ್ ಬ್ರಾಹ್ಮಣಾ ಗ್ರಾಮಮಧ್ಯೇ
ಘುಷ್ಟಸ್ವರಾ ವೃಷಲಾನ್ ಶ್ರಾವಯಂತಿ ।
ಪುರಾ ರಾಜಾ ವ್ಯವಹಾರಾನಧರ್ಮ್ಯಾನ್
ಪಶ್ಯತ್ಯಹಂ ಪರಲೋಕಂ ವ್ರಜಾಮಿ ॥೧೧॥

ಗ್ರಾಮಮಧ್ಯದಲ್ಲಿ ಕುಳಿತು ಉಚ್ಚಸ್ವರದಲ್ಲಿ ವೇದಗಳನ್ನು ಶೂದ್ರರಿಗೆ ಕೇಳಿಸುವುದಕ್ಕಿಂತ ಮೊದಲೇ, ರಾಜನು ಶುದ್ಧವಾದ ವ್ಯವಹಾರಗಳನ್ನು ಅನ್ಯಾಯದ ವ್ಯವಹಾರಗಳೆಂದು ನೋಡುವುದಕ್ಕಿಂತ ಮೊದಲೇ, ನಾನು ಪರಲೋಕಕ್ಕೆ ಹೋಗುತ್ತೇನೆ.

ಪುರಾ ವರಾನ್ ಪ್ರತ್ಯವರಾನ್ ಗರೀಯಸೋ
ಯಾವನ್ನರಾ ನಾವಮಂಸ್ಯಂತಿ ಸರ್ವೇ ।
ತಮೋತ್ತರಂ ಯಾವದಿದಂ ನ ವರ್ತತೇ
ತಾವದ್ ವ್ರಜಾಮಿ ಪರಲೋಕಂ ಚಿರಾಯ ॥೧೨॥

ನೀಚರಾದ ಜನರು ಶ್ರೇಷ್ಠರಾದ ಮತ್ತು ಹಿರಿಯರಾದವರನ್ನು ಅವಮಾನ ಮಾಡುವುದಕ್ಕಿಂತ ಮೊದಲೇ ಈ ಪ್ರಪಂಚದಲ್ಲಿ ತಮೋಗುಣವು ಅಭಿವೃದ್ಧಿಯನ್ನು ಹೊಂದುವುದಕ್ಕಿಂತ ಮೊದಲೇ ನಾನು ಪರಲೋಕಕ್ಕೆ ಹೋಗುತ್ತೇನೆ.

ಪುರಾ ಪ್ರಪಶ್ಯಾಮಿ ಪರೇಣ ಮರ್ತ್ಯಾನ್
ಬಲೀಯಸಾ ದುರ್ಬಲಾನ್ ಭುಜ್ಯಮಾನಾನ್ ।
ತಸ್ಮಾದ್ ಯಾಸ್ಯಾಮಿ ಪರಲೋಕಂ ಚಿರಾಯ
ನ ಹ್ಯುತ್ಸಹೇ ದ್ರಷ್ಟುಮೀದೃಙ್ ನೃಲೋಕೇ ॥೧೩॥

ಬಲಿಷ್ಠರಾದ ಮನುಷ್ಯರು ದುರ್ಬಲರನ್ನು ವಶಪಡಿಸಿಕೊಂಡು ಅವರಿಂದ ದುಡಿಸಿಕೊಳ್ಳುವುದನ್ನು ನೋಡುವುದಕ್ಕಿಂತ ಮೊದಲೇ ನಾನು ಪರಲೋಕಕ್ಕೆ ಹೋಗುವೆನು. ಮನುಷ್ಯಲೋಕದಲ್ಲಿ ಇಂತಹ ದೃಶ್ಯವನ್ನು ನಾನು ನೋಡಲಾರೆ (ಎಂದು ಹೇಳಿದರು).

ಭೀಷ್ಮಃ

ತಮಾಹುರಾರ್ತಾ ಋಷಯೋ ಮಹರ್ಷಿಂ
ನ ತೇ ವಯಂ ಪುಷ್ಕರಂ ಚೋರಯಾಮಃ ।
ಮಿಥ್ಯಾಭಿಷಂಗೋ ಭವತಾ ನ ಕಾರ್ಯಃ
ಶಪಾಮ ತೀಕ್ಷ್ಣಾನ್ ಶಪಥಾನ್ ಮಹರ್ಷೇ ॥೧೪॥

ಭೀಷ್ಮ– ಆರ್ತರಾದ ಋಷಿಗಳು ಮಹರ್ಷಿಗಳಾದ ಅಗಸ್ತ್ಯರನ್ನು ಕುರಿತು ನಾವು ನಿಮ್ಮ ಕಮಲವನ್ನು ಕದ್ದಿಲ್ಲ. ನೀವು ಸುಳ್ಳು ಆರೋಪವನ್ನು ಮಾಡಬಾರದು. ಎಲೈ ಮಹರ್ಷಿಗಳೇ, ಬೇಕಾದರೆ ತೀಕ್ಷ್ಣವಾದ ಶಪಥಗಳನ್ನು (ಪ್ರಮಾಣಗಳನ್ನು) ಮಾಡಿಯೇವು ಎಂದು ಹೇಳಿದರು.

ತೇ ನಿಶ್ಚಿತಾಸ್ತತ್ರ ಮಹರ್ಷಯಸ್ತು
ಸಮ್ಮನ್ಯಂತೋ ಧರ್ಮಮೇವಂ ನರೇಂದ್ರ ।
ತತೋಽಶಪನ್ ಶಪಥಾನ್ ಪರ್ಯಯೇಣ
ಸಹೈವ ತೇ ಪಾರ್ಥಿವ ಪುತ್ರಪೌತ್ರೈಃ ॥೧೫॥

ಎಲೈ ನರೇಂದ್ರನೇ, ಆ ಮಹರ್ಷಿಗಳು ಹೀಗೆ ಮಾಡುವುದು ಧರ್ಮವೆಂದು ನಿಶ್ಚಯಿಸಿ ಒಬ್ಬರ ಆನಂತರ ಇನ್ನೊಬ್ಬರು ತಮ್ಮ ಪುತ್ರಪೌತ್ರರನ್ನೂ ಸೇರಿಸಿ ಕ್ರೂರವಾದ ಪ್ರಮಾಣಗಳನ್ನು ಮಾಡಿದರು (ಶಪಥವನ್ನು ಮಾಡಿ ತಮ್ಮನ್ನೇ ಶಪಿಸಿಕೊಂಡರು).

ಭೃಗುಃ

ಪ್ರತ್ಯಾಕ್ರೋಶೇದಿಹಾಕ್ರುಷ್ಟಸ್ತಾಡಿತಃ ಪ್ರತಿತಾಡಯೇತ್ ।
ಖಾದೇಚ್ಚ ಪೃಷ್ಠಮಾಂಸಾನಿ ಯಸ್ತೇ ಹರತಿ ಪುಷ್ಕರಮ್ ॥೧೬॥

ಭೃಗು– ನಿಮ್ಮ ಕಮಲವನ್ನು ಕದ್ದವನು ದೊಡ್ಡವರು ನಿಂದಿಸಿದಾಗ ಅವರನ್ನು ಪ್ರತಿಯಾಗಿ ಕಿರುಚಿ ನಿಂದಿಸಲಿ. ಅವರು ಹೊಡೆದಾಗ ಪ್ರತಿಯಾಗಿ ಹೊಡೆಯಲಿ. ಪ್ರಾಣಿಗಳ ಪೃಷ್ಠಮಾಂಸವನ್ನು ತಿನ್ನಲಿ.

ವಸಿಷ್ಠಃ

ಅಸ್ವಾಧ್ಯಾಯಪರೋ ಲೋಕೇ ಶ್ವಾನಂ ಚ ಪರಿಕರ್ಷತು ।
ಪುರೇ ಚ ಭಿಕ್ಷುರ್ಭವತು ಯಸ್ತೇ ಹರತಿ ಪುಷ್ಕರಮ್ ॥೧೭॥

ನಿನ್ನ ಕಮಲವನ್ನು ಕದ್ದವನು ಲೋಕದಲ್ಲಿ ಸ್ವಾಧ್ಯಾಯವನ್ನು ತ್ಯಜಿಸಿ ನಾಯಿಗಳನ್ನು ಎಳೆದುಕೊಂಡು ತಿರುಗಲಿ. ಪಟ್ಟಣದಲ್ಲಿ ವಾಸಿಸುವ ಸಂನ್ಯಾಸಿಯಾಗಲಿ.

ಕಶ್ಯಪಃ

ಸರ್ವತ್ರ ಸರ್ವಂ ಪಣತು ನ್ಯಾಸೇ ಲೋಭಂ ಕರೋತು ಚ ।
ಕೂಟಸಾಕ್ಷಿತ್ವಮಭ್ಯೇತು ಯಸ್ತೇ ಹರತಿ ಪುಷ್ಕರಮ್ ॥೧೮॥

ಕಶ್ಯಪ– ನಿಮ್ಮ ಕಮಲವನ್ನು ಕದ್ದವನು ಜೂಜಿಲ್ಲಿ ಎಲ್ಲವನ್ನೂ ಪಣವಾಗಿ ಒಡ್ಡಲಿ. ಇನ್ನೊಬ್ಬರು ರಕ್ಷಣೆಗಾಗಿ ತಂದು ಇಟ್ಟಿದ್ದ ಪದಾರ್ಥದಲ್ಲಿ ಆಸೆಯನ್ನು ಹೊಂದಲಿ. ಸುಳ್ಳು ಸಾಕ್ಷಿಯನ್ನು ಹೇಳಲಿ.

ಗೌತಮಃ

ಜೀವತ್ವಹಂಕೃತೋ ಬುದ್ಧ್ಯಾ ವಿಪಣತ್ವಧಮೇನ ಸಃ ।
ಕರ್ಷಕೋ ಮತ್ಸರೀ ಚಾಸ್ತು ಯಸ್ತೇ ಹರತಿ ಪುಷ್ಕರಮ್ ॥೧೯॥

ಗೌತಮರು– ನಿಮ್ಮ ಕಮಲವನ್ನು ಕದ್ದವನು ಅಹಂಕಾರ ಬುದ್ಧಿಯಿಂದ ಜೀವಿಸಲಿ. ಅಧಮರ ಜೊತೆಯಲ್ಲಿ ವ್ಯವಹಾರವನ್ನು ಮಾಡಲಿ. ಭೂವ್ಯವಸಾಯವನ್ನು ಮಾಡುವವನಾಗಿ ಮಾತ್ಸರ್ಯದಿಂದ ಕೂಡಿರಲಿ.

ಅಂಗಿರಾಃ

ಅಶುಚಿರ್ಬ್ರಹ್ಮಕೂಟೋಽಸ್ತು ಶ್ವಾನಂ ಚ ಪರಿಕರ್ಷತು ।
ಬ್ರಹ್ಮಹಾನಿಕೃತಿಶ್ಚಾಸ್ತು ಯಸ್ತೇ ಹರತಿ ಪುಷ್ಕರಮ್ ॥೨೦॥

ಅಂಗಿರಸರು– ನಿಮ್ಮ ಕಮಲವನ್ನು ಕದ್ದವನು ವೇದಗಳ ರಾಶಿಗೆ ಆಶ್ರಯನಾಗಿ ಅಶುಚಿಯಾಗಲಿ. ನಾಯಿಗಳನ್ನು ಎಳೆದುಕೊಂಡು ಓಡಾಡಲಿ. ಬ್ರಹ್ಮಹತ್ಯೆಯನ್ನು ಮಾಡುವವನಾಗಲಿ.

ಧುಂಧುಮಾರಃ

ಅಕೃತಜ್ಞೋಽಸ್ತು ಮಿತ್ರಾಣಾಂ ಶೂದ್ರಾಯಾಂ ತು ಪ್ರಜಾಯತು ।
ಏಕಃ ಸಂಪನ್ನಮಶ್ನಾತು ಯಸ್ತೇ ಹರತಿ ಪುಷ್ಕರಮ್ ॥೨೧॥

ಧುಂಧುಮಾರ– ನಿಮ್ಮ ಕಮಲವನ್ನು ಕದ್ದವನು ಮಿತ್ರರಿಗೆ ಕೃತಘ್ನನಾಗಲಿ. ಶೂದ್ರಸ್ತ್ರೀಯಲ್ಲಿ ಮಕ್ಕಳನ್ನು ಪಡೆಯಲಿ. ಒಬ್ಬನೇ ಕುಳಿತು ಒಳ್ಳೆಯ ಊಟವನ್ನು ಮಾಡಲಿ.

ಪೂರುಃ

ಚಿಕಿತ್ಸಾಯಾಂ ಪ್ರಚರತು ಭಾರ್ಯಯಾ ಚೈವ ಪುಷ್ಯತು ।
ಶ್ವಶುರಾತ್ತಸ್ಯ ವೃತ್ತಿಃ ಸ್ಯಾದ್ ಯಸ್ತೇ ಹರತಿ ಪುಷ್ಕರಮ್ ॥೨೨॥

ಪೂರು– ನಿಮ್ಮ ಕಮಲವನ್ನು ಕದ್ದವನು ವೈದ್ಯವೃತ್ತಿಯಿಂದ ಜೀವನ ಮಾಡಲಿ. ಭಾರ್ಯೆಯಿಂದ ಪೋಷಿಸಲ್ಪಡಲಿ. ಮಾವನಿಂದ ಜೀವನೋಪಾಯವನ್ನು ಸಂಪಾದಿಸಲಿ.

ದಿಲೀಪಃ

ಉದಪಾನಪ್ಲವೇ ಗ್ರಾಮೇ ಬ್ರಾಹ್ಮಣೋ ವೃಷಲೀಪತಿಃ ।
ತಸ್ಯ ಲೋಕಾನ್ ಸ ವ್ರಜತು ಯಸ್ತೇ ಹರತಿ ಪುಷ್ಕರಮ್ ॥೨೩॥

ದಿಲೀಪ– ನಿಮ್ಮ ಕಮಲವನ್ನು ಕದ್ದವನಿಗೆ ನೀರನ್ನು ದಾಟಿಸುವ ತೆಪ್ಪದಂತೆ ಎಲ್ಲ ಜನರನ್ನೂ ರಕ್ಷಿಸುವ ಒಂದೇ ಬಾವಿ ಇರುವ ಗ್ರಾಮದಲ್ಲಿ ವಾಸ ಮಾಡುವ ಶೂದ್ರ ಸ್ತ್ರೀಪತಿಯಾದ ಬ್ರಾಹ್ಮಣನಿಗೆ ಉಂಟಾಗುವ ಲೋಕಗಳು ಉಂಟಾಗಲಿ.

ಶುಕ್ರಃ

ಪೃಷ್ಠಮಾಂಸಂ ಸಮಶ್ನಾತು ದಿವಾ ಗಚ್ಛತು ಮೈಥುನಮ್ ।
ಪ್ರೇಷ್ಯೋ ಭವತು ರಾಜ್ಞಶ್ಚ ಯಸ್ತೇ ಹರತಿ ಪುಷ್ಕರಮ್ ॥೨೪॥

ಶುಕ್ರ– ನಿಮ್ಮ ಕಮಲವನ್ನು ಕದ್ದವನು ಪೃಷ್ಠಮಾಂಸವನ್ನು ತಿನ್ನಲಿ. ಹಗಲಿನಲ್ಲಿ ಮೈಥುನವನ್ನು ಮಾಡಲಿ. ರಾಜನ ಸೇವಕನಾಗಲಿ.

ಜಮದಗ್ನಿಃ

ಅನಧ್ಯಾಯೇಷ್ವಧೀಯೀತ ಮಿತ್ರಂ ಶ್ರಾದ್ಧೇ ಚ ಭೋಜಯೇತ್ ।
ಶ್ರಾದ್ಧೇ ಶೂದ್ರಸ್ಯ ಚಾಶ್ನೀಯಾದ್ ಯಸ್ತೇ ಹರತಿ ಪುಷ್ಕರಮ್ ॥೨೫॥

ಜಮದಗ್ನಿ– ನಿಮ್ಮ ಕಮಲವನ್ನು ಕದ್ದವನು ಅನಧ್ಯಾಯನದ ದಿನಗಳಲ್ಲಿ ಅಧ್ಯಯನವನ್ನು ಮಾಡಲಿ. ಶ್ರಾದ್ಧದಲ್ಲಿ ಮಿತ್ರನಿಗೆ ಭೋಜನವನ್ನು ಮಾಡಿಸಲಿ. ಶೂದ್ರನು ಮಾಡುವ ಶ್ರಾದ್ಧದಲ್ಲಿ ತಾನು ಭೋಜನವನ್ನು ಮಾಡಲಿ.

ಶಿಬಿಃ

ಅನಾಹಿತಾಗ್ನಿರ್ಮ್ರಿಯತಾಂ ಯಜ್ಞೇ ವಿಘ್ನಂ ಕರೋತು ಚ ।
ತಪಸ್ವಿಭಿರ್ವಿರುಧ್ಯೇತ ಯಸ್ತೇ ಹರತಿ ಪುಷ್ಕರಮ್ ॥೨೬॥

ಶಿಬಿ– ನಿಮ್ಮ ಕಮಲವನ್ನು ಕದ್ದವನು ಅಗ್ನ್ಯಾಧಾನವನ್ನು ಮಾಡದೆ ಮರಣವನ್ನು ಹೊಂದಲಿ. ಯಜ್ಞಗಳಿಗೆ ವಿಘ್ನವನ್ನು ಉಂಟುಮಾಡಲಿ. ತಪಸ್ವಿಗಳ ಜೊತೆಯಲ್ಲಿ ಜಗಳವಾಡಲಿ.

ಯಯಾತಿಃ

ಅನೃತೌ ಜಟೀ ವ್ರತಿನ್ಯಾಂ ವೈ ಭಾರ್ಯಾಯಾಂ ಸಂಪ್ರಜಾಯತು ।
ನಿರಾಕರೋತು ವೇದಾಂಶ್ಚ ಯಸ್ತೇ ಹರತಿ ಪುಷ್ಕರಮ್ ॥೨೭॥

ಯಯಾತಿ– ನಿಮ್ಮ ಕಮಲವನ್ನು ಕದ್ದವನು ಋತುಕಾಲವಲ್ಲದ ಕಾಲದಲ್ಲಿ ಶಿಖೆಯನ್ನು ಕಟ್ಟಿ ವ್ರತವನ್ನು ಧರಿಸಿದ ಪತ್ನಿಯ ಸಮಾಗಮವನ್ನು ಮಾಡಲಿ. ವೇದಗಳನ್ನು ತಿರಸ್ಕರಿಸಲಿ.

ನಹುಷಃ

ಅತಿಥಿಂ ಗೃಹಸ್ಥೋ ನುದತು ಕಾಮವೃತ್ತೋಽಸ್ತು ದೀಕ್ಷಿತಃ ।
ವಿದ್ಯಾಂ ಪ್ರಯಚ್ಛತು ಭೃತೋ ಯಸ್ತೇ ಹರತಿ ಪುಷ್ಕರಮ್ ॥೨೮॥

ನಹುಷ– ನಿಮ್ಮ ಕಮಲವನ್ನು ಕದ್ದ ಗೃಹಸ್ಥನು ಅತಿಥಿಯನ್ನು ದೂರ ತಳ್ಳಲಿ. ದೀಕ್ಷೆಯನ್ನು ಹೊಂದಿ ಸ್ವೇಚ್ಛಾಚಾರಿಯಾಗಲಿ. ಸಂಬಳಕ್ಕಾಗಿ ವಿದ್ಯಾದಾನವನ್ನು ಮಾಡಲಿ.

ಅಂಬರೀಷಃ

ನೃಶಂಸಸ್ಯಕೃತಧರ್ಮೋಽಸ್ತು ಸ್ತ್ರೀಷು ಜ್ಞಾತಿಷು ಗೋಷು ಚ ।
ಬ್ರಾಹ್ಮಣಂ ಚಾಪಿ ಜಹತು ಯಸ್ತೇ ಹರತಿ ಪುಷ್ಕರಮ್ ॥೨೯॥

ಅಂಬರೀಷ– ನಿಮ್ಮ ಕಮಲವನ್ನು ಕದ್ದವನು ಕ್ರೂರಿಯಾಗಲಿ. ಸ್ತ್ರೀಯರ ವಿಷಯದಲ್ಲಿ, ಜ್ಞಾತಿಗಳ ವಿಷಯದಲ್ಲಿ ಮತ್ತು ಗೋವುಗಳ ವಿಷಯದಲ್ಲಿ ಧರ್ಮವನ್ನು ತ್ಯಜಿಸಲಿ. ತನ್ನನ್ನು ಆಶ್ರಯಿಸಿದ ಬ್ರಾಹ್ಮಣನನ್ನು ಪರಿತ್ಯಜಿಸಲಿ.

ನಾರದಃ

ಗೂಢೋಽಜ್ಞಾನೀ ಬಹಿಃ ಶಾಸ್ತ್ರಂ ಪಠತಾಂ ವಿಸ್ವರಂ ಪದಮ್ ।
ಗರೀಯಸೋಽವಜಾನಾತು ಯಸ್ತೇ ಹರತಿ ಪುಷ್ಕರಮ್ ॥೩೦॥

ನಾರದ– ನಿಮ್ಮ ಕಮಲವನ್ನು ಕದ್ದವನು ಅಜ್ಞಾನಿಯಾಗಿ ಗೂಢನಾಗಿ ಬಾಹ್ಯ ಪ್ರದೇಶದಲ್ಲಿ ಅಪಸ್ವರ ಮತ್ತು ಅಪಪದಗಳಿಂದ ಶಾಸ್ತ್ರಪಾರಾಯಣವನ್ನು ಮಾಡಲಿ. ದೊಡ್ಡವರನ್ನು ಅವಮಾನ ಮಾಡಲಿ.

ನಾಭಾಗಃ

ಅನೃತಂ ಭಾಷತು ಸದಾ ಸದ್ಭಿಶ್ಚೈವ ವಿರುಧ್ಯತು ।
ಶುಲ್ಕೇನ ಕನ್ಯಾಂ ದದತು ಯಸ್ತೇ ಹರತಿ ಪುಷ್ಕರಮ್ ॥೩೧॥

ನಾಭಾಗ– ನಿಮ್ಮ ಕಮಲವನ್ನು ಕದ್ದವರು ಯಾವಾಗಲೂ ಸುಳ್ಳು ಮಾತನಾಡಲಿ. ಸಜ್ಜನರ ಜೊತೆಯಲ್ಲಿ ವಿರೋಧವನ್ನು ಮಾಡಲಿ. ಶುಲ್ಕವನ್ನು ತೆಗೆದುಕೊಂಡು ಕನ್ಯಾದಾನವನ್ನು ಮಾಡಲಿ.

ಕವಿಃ

ಪದಾ ಸ ಗಾಂ ತಾಡಯತು ಸೂರ್ಯಂ ಚ ಪ್ರತಿಮೇಹತು ।
ಶರಣಾಗತಂ ಚ ತ್ಯಜತು ಯಸ್ತೇ ಹರತಿ ಪುಷ್ಕರಮ್ ॥೩೨॥

ಕವಿ– ನಿಮ್ಮ ಕಮಲವನ್ನು ಕದ್ದವನು ಕಾಲಿನಿಂದ ಗೋವನ್ನು ಒದೆಯಲಿ. ಸೂರ್ಯನಿಗೆ ಎದುರಾಗಿ ಮೂತ್ರವಿಸರ್ಜನೆಯನ್ನು ಮಾಡಲಿ. ಶರಣಾಗತನಾದವನನ್ನು ಪರಿತ್ಯಜಿಸಲಿ.

ವಿಶ್ವಾಮಿತ್ರಃ

ಕರೋತು ಭೃತಕೋಽವರ್ಷಾಂ ರಾಜ್ಞಶ್ಚಾಸ್ತು ಪುರೋಹಿತಃ ।
ಋತ್ವಿಗಸ್ತು ಹ್ಯಯಾಜ್ಯಸ್ಯ ಯಸ್ತೇ ಹರತಿ ಪುಷ್ಕರಮ್ ॥೩೩॥

ವಿಶ್ವಾಮಿತ್ರ– ನಿಮ್ಮ ಕಮಲವನ್ನು ಕದ್ದವನು ಕೃಷೀವಲನಾಗಿ ಮಳೆಯನ್ನು ತಡೆಯಲಿ. ರಾಜನಿಗೆ ಪುರೋಹಿತನಾಗಲಿ. ಯಾಗವನ್ನು ಮಾಡಲು ಯೋಗ್ಯತೆ ಇಲ್ಲದವನಿಗೆ ಯಾಗವನ್ನು ಮಾಡಿಸುವ ಋತ್ವಿಜನಾಗಲಿ.

ಪರ್ವತಃ

ಗ್ರಾಮೇ ಚಾಧಿಕೃತಃ ಸೋಽಸ್ತು ಖರಯಾನೇನ ಗಚ್ಛತು ।
ಶುನಃ ಕರ್ಷತು ವೃತ್ಯರ್ಥೇ ಯಸ್ತೇ ಹರತಿ ಪುಷ್ಕರಮ್ ॥೩೪॥

ಪರ್ವತ– ನಿಮ್ಮ ಕಮಲವನ್ನು ಕದ್ದವನು ಗ್ರಾಮಾಧಿಕಾರಿಯಾಗಲಿ. ಕತ್ತೆಯ ವಾಹನದಲ್ಲಿ ಸಂಚರಿಸಲಿ. ಜೀವನೋಪಾಯಕ್ಕಾಗಿ ನಾಯಿಗಳನ್ನು ಎಳೆದುಕೊಂಡು ತಿರುಗಲಿ.

ಭರದ್ವಾಜಃ

ಸರ್ವಪಾಪಸಮಾದಾನಂ ನೃಶಂಸೇ ಚಾನೃತೇ ಚ ಯತ್ ।
ತತ್ ತಸ್ಯಾಸ್ತು ಸದಾ ಪಾಪಂ ಯಸ್ತೇ ಹರತಿ ಪುಷ್ಕರಮ್ ॥೩೫॥

ಭರದ್ವಾಜರು– ಕ್ರೂರಿಯೂ ಮತ್ತು ಅನೃತಭಾಷಿಯಾದವನಲ್ಲಿ ಎಷ್ಟು ಪಾಪಗಳಿವೆಯೋ ನಿಮ್ಮ ಕಮಲವನ್ನು ಕದ್ದವನಿಗೆ ಅಷ್ಟು ಪಾಪಗಳು ಉಂಟಾಗಲಿ.

ಸದಾ ವಸತು ಸನ್ನ್ಯಾಸೀ ಗ್ರಾಮೇ ವಾ ನಗರೇಪಿ ವಾ ।
ಬಂಧುಭಿಃ ಸಹವಾಸೋಸ್ತು ಯಸ್ತೇ ಹರತಿ ಪುಷ್ಕರಮ್ ॥೩೬॥

ನಿಮ್ಮ ಕಮಲವನ್ನು ಕದ್ದವನು ಸಂನ್ಯಾಸಿಯಾಗಿ ಯಾವಾಗಲೂ ಗ್ರಾಮದಲ್ಲಿ ಅಥವಾ ಪಟ್ಟಣದಲ್ಲಿ ವಾಸಮಾಡಲಿ. ಅವನು ಬಂಧುಗಳ ಜೊತೆಯಲ್ಲಿ ವಾಸ ಮಾಡುವವನಾಗಲಿ.

ಅಷ್ಟಕಃ

ಸ ರಾಜಾಸ್ತ್ವ ಕೃತಪ್ರಜ್ಞಃ ಕಾಮವೃತ್ತಿಶ್ಚ ಪಾಪಕೃತ್ ।
ಅಧರ್ಮೇಣಾನುಶಾಸ್ತೂರ್ವೀಂ ಯಸ್ತೇ ಹರತಿ ಪುಷ್ಕರಮ್ ॥೩೭॥

ಅಷ್ಟಕ– ನಿಮ್ಮ ಕಮಲವನ್ನು ಕದ್ದವನು ಅವಿವೇಕಿಯಾದ ರಾಜನಾಗಲಿ. ಪಾಪವನ್ನು ಮಾಡುವವನಾಗಿ ಸ್ವೇಚ್ಛಾಚಾರಿಯಾಗಲಿ. ಅಧರ್ಮದಿಂದ ಭೂಮಿಯನ್ನು ಆಳಲಿ.

ಗಾಲವಃ

ಪಾಪಿಷ್ಠೇಭ್ಯಸ್ತ್ವನರ್ಘಾರ್ಹಃ ಸ ನರೋಽಸ್ತು ಸ್ವಪಾಪಕೃತ್ ।
ದತ್ತ್ವಾ ದಾನಂ ಕೀರ್ತಯತು ಯಸ್ತೇ ಹರತಿ ಪುಷ್ಕರಮ್ ॥೩೮॥

ಗಾಲವರು– ನಿಮ್ಮ ಕಮಲವನ್ನು ಕದ್ದವನು ಪಾಪಿಷ್ಠರಿಂದ ಪೂಜಿಸಲ್ಪಡಲಿ. ಸ್ವತಃ ಪಾಪವನ್ನು ಮಾಡುವವನಾಗಲಿ. ದಾನವನ್ನು ಮಾಡಿ ಅದನ್ನು ಹೇಳಿಕೊಳ್ಳಲಿ.

ಅರುಂಧತೀ

ಶ್ವಶ್ಶ್ವಾಽಪವಾದಂ ವದತು ಭರ್ತುರ್ಭವತು ದುರ್ಮನಾಃ ।
ಏಕಾ ಸ್ವಾದು ಸಮಶ್ನಾತು ಯಾ ತೇ ಹರತಿ ಪುಷ್ಕರಮ್ ॥೩೯॥

ಅರುಂಧತೀ– ನಿಮ್ಮ ಕಮಲವನ್ನು ಕದ್ದವಳು ಅತ್ತೆಯ ಜೊತೆಯಲ್ಲಿ ಯಾವಾಗಲೂ ಜಗಳವಾಡಲಿ. ಗಂಡನ ಮೇಲೆ ಕೋಪಿಸಿಕೊಳ್ಳಲಿ. ಒಬ್ಬಳೇ ವಿಚಿತ್ರವಾದ ಊಟವನ್ನು ಮಾಡಲಿ.

ವಾಲಖಿಲ್ಯಾಃ

ಏಕಪಾದೇನ ವೃತ್ಯರ್ಥಂ ಗ್ರಾಮದ್ವಾರೇ ಸ ತಿಷ್ಠತು ।
ಧರ್ಮಜ್ಞಸ್ಯುಕ್ತಧರ್ಮೋಽಸ್ತು ಯಸ್ತೇ ಹರತಿ ಪುಷ್ಕರಮ್ ॥೪೦॥

ವಾಲಖಿಲ್ಯರು– ನಿಮ್ಮ ಕಮಲವನ್ನು ಕದ್ದವನು ಗ್ರಾಮದ್ವಾರದಲ್ಲಿ ಜೀವನೋಪಾಯಕ್ಕಾಗಿ ಒಂದು ಕಾಲಿನಲ್ಲಿನಿಲ್ಲಲಿ (ನಿಂತು ಬೇಡಲಿ). ಧರ್ಮವನ್ನು ತಿಳಿದು ಧರ್ಮತ್ಯಾಗವನ್ನು ಮಾಡುವವನಾಗಲಿ.

ಪಶುಸಖಿಃ

ಅಗ್ನಿಹೋತ್ರಮನಾದೃತ್ಯ ಸುಖಂ ಸ್ವಪತು ಸ ದ್ವಿಜಃ ।
ಪರಿವ್ರಾಟ್ ಕಾಮವೃತ್ತೋಽಸ್ತು ಯಸ್ತೇ ಹರತಿ ಪುಷ್ಕರಮ್ ॥೪೧॥

ಪಶುಸಖಿ– ನಿಮ್ಮ ಕಮಲವನ್ನು ಕದ್ದ ಬ್ರಾಹ್ಮಣನು ಅಗ್ನಿಹೋತ್ರ ಸಮಯದಲ್ಲಿ ಅಗ್ನಿಹೋತ್ರವನ್ನು ತಿರಸ್ಕರಿಸಿ ಸುಖವಾಗಿ ನಿದ್ರೆಯನ್ನು ಮಾಡಲಿ. ಸಂನ್ಯಾಸಿಯಾಗಿ ಸ್ವೇಚ್ಛಾಚಾರಿಯಾಗಲಿ.

ಸುರಭೀ

ಬಾಲ್ವಜೇನ ನಿದಾನೇನ ಕಾಂಸ್ಯಂ ಭವತು ದೋಹನಮ್ ।
ದುಹ್ಯೇತ ಪರವತ್ಸೇನ ಯಾ ತೇ ಹರತಿ ಪುಷ್ಕರಮ್ ॥೪೨॥

ಸುರಭೀ– ನಿಮ್ಮ ಕಮಲವನ್ನು ಕದ್ದವನು ಬಲ್ವಜ ಎಂಬ ಹಗ್ಗದಿಂದ ಹಸುವಿನ ಕಾಲುಗಳನ್ನು ಕಟ್ಟಿ ಕಂಚಿನ ಪಾತ್ರೆಯಲ್ಲಿ ಬೇರೆ ಹಸುವಿನ ಕರುವಿನಿಂದ ಹಾಲನ್ನು ಕರೆಯುವವನಾಗಲಿ.

ಭೀಷ್ಮಃ

ತತಸ್ತು ತೈಃ ಶಪಥೈಃ ಶಪ್ಯಮಾನೈಃ
ನಾನಾವಿಧೈರ್ಬಹುಭಿಃ ಕೌರವೇಂದ್ರ ।
ಸಹಸ್ರಾಕ್ಷೋ ದೇವರಾಟ್ ಸಂಪ್ರಹೃಷ್ಟಃ
ಸಮೀಕ್ಷ್ಯ ತಂ ಕೋಪನಂ ವಿಪ್ರಮುಖ್ಯಮ್ ॥೪೩॥

ಭೀಷ್ಮ– ಎಲೈ ಕೌರವೇಂದ್ರನೇ, ಆ ಋಷಿಗಳು ನಾನಾವಿಧವಾಗಿ ಅನೇಕ ಶಪಥಗಳನ್ನು ಮಾಡುತ್ತಿರಲು ದೇವರಾಜನಾದ ಸಹಸ್ರಾಕ್ಷನಾದ ಇಂದ್ರನು ಬಹಳ ಸಂತೋಷಗೊಂಡು ಕೋಪಗೊಂಡಿದ್ದ ದ್ವಿಜಶ್ರೇಷ್ಠರಾದ ಅಗಸ್ತ್ಯರನ್ನು ನೋಡಿ ಮಾತನಾಡಿದನು.

ಅಥಾಬ್ರವೀನ್ಮಘವಾ ಪ್ರತ್ಯಯಂ ಸ್ವಂ
ಸಮಾಭಾಷ್ಯ ತಮೃಷಿಂ ಜಾತರೋಷಮ್ ।
ಬ್ರಹ್ಮರ್ಷಿದೇವರ್ಷಿನೃಪರ್ಷಿಮಧ್ಯೇ
ಯತ್ ತನ್ನಿಬೋಧೇಹ ಮಮಾದ್ಯ ರಾಜನ್ ॥೪೩॥

ಆಗ ಇಂದ್ರನು ತನ್ನ ನಿರ್ಧಾರವನ್ನು ಹೇಳುತ್ತಾ ಕೋಪಗೊಂಡ ಆ ಋಷಿಗಳನ್ನು ಸಂಬೋಧಿಸಿ ಬ್ರಹ್ಮರ್ಷಿಗಳ, ದೇವರ್ಷಿಗಳ ಮತ್ತು ಮನುಷ್ಯ ಋಷಿಗಳ ಮಧ್ಯದಲ್ಲಿ ಏನು ಹೇಳಿದನೆಂದು ಎಲೈ ರಾಜನೇ, ನನ್ನಿಂದ ಕೇಳು.

ಶಕ್ರಃ

ಅಧ್ವರ್ಯವೇ ದುಹಿತರಂ ದದಾತು
ಚ್ಛಂದೋಗೇ ವಾ ಚರಿತಬ್ರಹ್ಮಚರ್ಯೇ ।
ಆಥರ್ವಣಂ ವೇದಮಧೀತ್ಯ ವಿಪ್ರಃ
ಸ್ನಾಯೀತ ಯಃ ಪುಷ್ಕರಮಾದದಾತಿ ॥೪೪॥

ಶಕ್ರ– ನಿಮ್ಮ ಕಮಲವನ್ನು ಅಪಹರಿಸಿದವನು ತನ್ನ ಮಗಳನ್ನು ಅಧ್ವರ್ಯುವಿಗೆ ದಾನ ಮಾಡಲಿ ಅಥವಾ ಬ್ರಹ್ಮಚರ್ಯವ್ರತವನ್ನು ಆಚರಿಸಿದ ಛಂದೋಗನಿಗೆ (ಸಾಮವೇದವನ್ನು ಕಲಿತ ಉದ್ಗಾತೃವಿಗೆ) ದಾನವನ್ನು ಮಾಡಲಿ. ಅಥರ್ವಣ ವೇದವನ್ನು ಅಧ್ಯಯನ ಮಾಡಿ ವೇದಸ್ನಾತನಾಗಲಿ.

ಸರ್ವಾನ್ ವೇದಾನಧೀಯೀತ ಪುಣ್ಯಶೀಲೋಽಸ್ತು ಧಾರ್ಮಿಕಃ ।
ಬ್ರಹ್ಮಣಃ ಸದನಂ ಯಾತು ಯಸ್ತೇ ಹರತಿ ಪುಷ್ಕರಮ್ ॥೪೫॥

ನಿಮ್ಮ ಕಮಲವನ್ನು ಕದ್ದವನು ಎಲ್ಲ ವೇದಗಳನ್ನು ಅಧ್ಯಯನ ಮಾಡಲಿ. ಧಾರ್ಮಿಕನೂ, ಪುಣ್ಯಶೀಲನೂ ಆಗಲಿ. ಅವನು ಬ್ರಹ್ಮಲೋಕಕ್ಕೆ ಹೋಗುವವನಾಗಲಿ.

ಅಗಸ್ತ್ಯಃ

ಆಶೀರ್ವಾದಸ್ತ್ವಯಾ ಪ್ರೋಕ್ತಃ ಶಪಥೋ ಬಲಸೂದನ ।
ದೀಯತಾಂ ಪುಷ್ಕರಂ ಮಹ್ಯಮೇಷ ಧರ್ಮಃ ಸನಾತನಃ ॥೪೬॥

ಅಗಸ್ತ್ಯರು– ಎಲೈ ಬಲಸೂದನನೇ, ನಿನ್ನ ಶಪಥವು ಆಶೀರ್ವಾದರೂಪವಾಗಿದೆ (ಆದ್ದರಿಂದ ನೀನೇ ಕಮಲಗಳನ್ನು ಅಪಹರಿಸಿದವನು). ನನ್ನ ಕಮಲಗಳನ್ನು ನನಗೇ ಕೊಟ್ಟುಬಿಡು. ಇದು ಸನಾತನವಾದ ಧರ್ಮ.

ಇಂದ್ರಃ

ನ ಮಯಾ ಭಗವನ್ ಲೋಭಾದ್ ಹೃತಂ ಪುಷ್ಕರಮದ್ಯ ವೈ ।
ಧರ್ಮಂ ತು ಶ್ರೋತುಕಾಮೇನ ಹೃತಂ ನ ಕ್ರೋದ್ಧುಮರ್ಹಸಿ ॥೪೭॥

ಧರ್ಮಃ ಶ್ರುತಃ ಸಮುತ್ಕರ್ಷೋ ಧರ್ಮಸೇತುರನಾಮಯಃ ।
ಆರ್ಷೋ ವೈ ಶಾಶ್ವತೋ ನಿತ್ಯಮವ್ಯಯೋಽಯಂ ಮಯಾ ಶ್ರುತಃ ॥

ತದಿದಂ ಗೃಹ್ಯತಾಂ ವಿದ್ವನ್ ಪುಷ್ಕರಂ ಮುನಿಸತ್ತಮ ।
ಅತಿಕ್ರಮಂ ಮೇ ಭಗವನ್ ಕ್ಷಂತುಮರ್ಹಸ್ಯನಿಂದಿತ ॥೪೯॥

ಇಂದ್ರ– ಪೂಜ್ಯನೇ, ಕಮಲದ ಮೇಲಿನ ಆಸೆಯಿಂದ ನಾನು ಈ ದಿನ ನಿಮ್ಮ ಕಮಲವನ್ನು ಅಪಹರಿಸಲಿಲ್ಲ. ನಿಮ್ಮ ಮುಖದಿಂದ ಧರ್ಮವನ್ನು ಕೇಳುವ ಆಸೆಯಿಂದ ಅಪಹರಿಸಿದೆ. ಕೋಪವನ್ನು ಮಾಡಬೇಡಿ. ಉತ್ಕೃಷ್ಟವಾದ ಧರ್ಮವನ್ನು ಕೇಳಿದ್ದಾಯಿತು. ಧರ್ಮಸೇತುವೆಗಳು ನಿರ್ದುಷ್ಟವಾಗಿವೆ. ಋಷಿಸಮ್ಮತವೂ, ಶಾಶ್ವತವೂ, ಅವ್ಯಯವೂ ಆದ ಈ ಧರ್ಮವನ್ನು ನಾನು ಕೇಳಿದ್ದಾಯಿತು. ವಿದ್ವಾಂಸರೇ, ಮುನಿಶ್ರೇಷ್ಠರೇ, ಈ ನಿಮ್ಮ ಕಮಲವನ್ನು ತೆಗೆದುಕೊಳ್ಳಿ. ಪೂಜ್ಯರೇ, ಅನಿಂದಿತರೇ, ನನ್ನ ಅಪರಾಧವನ್ನು ಕ್ಷಮಿಸಿ.

ಭೀಷ್ಮಃ

ಇತ್ಯುಕ್ತಃ ಸ ಮಹೇಂದ್ರೇಣ ತಪಸ್ವೀ ಕೋಪನೋ ಭೃಶಮ್ ।
ಜಗ್ರಾಹ ಪುಷ್ಕರಂ ಧೀಮಾನ್ ಪ್ರಸನ್ನಶ್ಚಾಭವನ್ಮುನಿಃ ॥೫೦॥

ಭೀಷ್ಮ– ಮಹೇಂದ್ರನಿಂದ ಹೀಗೆ ಹೇಳಲ್ಪಟ್ಟ ಬಹಳ ಕೋಪಶೀಲರಾದ ತಪಸ್ವಿಗಳಾದ, ಮೇಧಾವಿಗಳಾದ ಅಗಸ್ತ್ಯರು ಕಮಲಗಳನ್ನು ತೆಗೆದುಕೊಂಡು ಪ್ರಸನ್ನರಾದರು.

ಪ್ರಯಯುಸ್ತೇ ತತೋ ಭೂಯಸ್ತೀರ್ಥಾನಿ ವನಗೋಚರಾಃ ।
ಪುಣ್ಯತೀರ್ಥೇಷು ಚ ತಥಾ ಗಾತ್ರಾಣ್ಯಾಪ್ಲಾವಯಂತಿ ತೇ ॥೫೧॥

ಅವರು ಪುನಃ ಅಲ್ಲಿಂದ ಹೊರಟು ಕಾಡಿನಲ್ಲಿ ಸಂಚಾರ ಮಾಡುತ್ತಾ ಪುಣ್ಯ ತೀರ್ಥಗಳಲ್ಲಿ ಸ್ನಾನವನ್ನು ಮಾಡಿದರು.

ಆಖ್ಯಾನಂ ಯ ಇದಂ ಯುಕ್ತಃ ಪಠೇತ್ ಪರ್ವಣಿಪರ್ವಣಿ ।
ನ ಮೂರ್ಖಂ ಜನಯೇತ್ ಪುತ್ರಂ ನ ಭವೇಚ್ಚ ನಿರಾಕೃತಿಃ ॥೫೨॥

ಈ ಆಖ್ಯಾನವನ್ನು ಯಾವನು ಶ್ರದ್ಧಾಯುಕ್ತನಾಗಿ ಪರ್ವಪರ್ವಗಳಲ್ಲಿ ಪಠಿಸುತ್ತಾನೋ ಅವನ ಪುತ್ರನು ಮೂರ್ಖನಾಗುವುದಿಲ್ಲ. ಅವನು ಯಾರಿಂದಲೂ ತಿರಸ್ಕರಿಸಲ್ಪಡುವುದಿಲ್ಲ.

ನ ತಮಾಪತ್ ಸ್ಪೃಶೇತ್ ಕಾಚಿನ್ನ ಜ್ವರೋ ನ ರುಜಶ್ಚ ಹ ।
ವಿರಜಾಃ ಶ್ರೇಯಸಾ ಯುಕ್ತಃ ಪ್ರೇತ್ಯ ಸ್ವರ್ಗಮವಾಪ್ನುಯಾತ್ ॥೫೩॥

ಅವನಿಗೆ ಆಪತ್ತಾಗಲೀ, ಜ್ವರವಾಗಲೀ, ಬೇರೆ ರೋಗವಾಗಲೀ ಬರುವುದಿಲ್ಲ. ದೋಷದೂರನಾಗಿ ಶ್ರೇಯೋಭಾಗಿಯಾಗಿ ಮರಣವನ್ನು ಹೊಂದಿದ ಮೇಲೆ ಸ್ವರ್ಗವನ್ನು ಪಡೆಯುತ್ತಾನೆ.

ಯಶ್ಚ ಶಾಸ್ತ್ರಮನುಧ್ಯಾಯೇದೃಷಿಭಿಃ ಪರಿಪಾಲಿತಮ್ ।
ಸ ಗಚ್ಛೇದ್ ಬ್ರಹ್ಮಣೋ ಲೋಕಮವ್ಯಯಂ ಚ ನರೋತ್ತಮ ॥೫೪॥

ಋಷಿಗಳಿಂದ ಪರಿಪಾಲಿತವಾದ ಈ ಧರ್ಮೋಪದೇಶ ರೂಪವಾದ ಶಾಸ್ತ್ರವನ್ನು ಅಧ್ಯಯನ ಮಾಡುವವನು ಎಲೈ ನರೋತ್ತಮನೇ, ಶಾಶ್ವತವಾದ ಬ್ರಹ್ಮಲೋಕಕ್ಕೆ ಹೋಗುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಪುಷ್ಕರಸ್ಯೈನ್ಯಕಥನಂ ನಾಮ
ಅಷ್ಟತ್ರಿಂಶೋತ್ತರಶತತಮೋऽಧ್ಯಾಯಃ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಮೂವತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಅಗಸ್ತ್ಯರು– ಎಲೈ ಬಲಸೂದನನೇ, ನಿನ್ನ ಶಪಥವು ಆಶೀರ್ವಾದರೂಪವಾಗಿದೆ (ಆದ್ದರಿಂದ ನೀನೇ ಕಮಲಗಳನ್ನು ಅಪಹರಿಸಿದವನು). ನನ್ನ ಕಮಲಗಳನ್ನು ನನಗೇ ಕೊಟ್ಟುಬಿಡು. ಇದು ಸನಾತನವಾದ ಧರ್ಮ.

ಇಂದ್ರಃ

ನ ಮಯಾ ಭಗವನ್ ಲೋಭಾದ್ ಹೃತಂ ಪುಷ್ಕರಮದ್ಯ ವೈ ।
ಧರ್ಮಂ ತು ಶ್ರೋತುಕಾಮೇನ ಹೃತಂ ನ ಕ್ರೋದ್ಧುಮರ್ಹಸಿ ॥೪೭॥

ಧರ್ಮಃ ಶ್ರುತಃ ಸಮುತ್ಕರ್ಷೋ ಧರ್ಮಸೇತುರನಾಮಯಃ ।
ಆರ್ಷೋ ವೈ ಶಾಶ್ವತೋ ನಿತ್ಯಮವ್ಯಯೋಽಯಂ ಮಯಾ ಶ್ರುತಃ ॥

ತದಿದಂ ಗೃಹ್ಯತಾಂ ವಿದ್ವನ್ ಪುಷ್ಕರಂ ಮುನಿಸತ್ತಮ ।
ಅತಿಕ್ರಮಂ ಮೇ ಭಗವನ್ ಕ್ಷಂತುಮರ್ಹಸ್ಯನಿಂದಿತ ॥೪೯॥

ಇಂದ್ರ– ಪೂಜ್ಯನೇ, ಕಮಲದ ಮೇಲಿನ ಆಸೆಯಿಂದ ನಾನು ಈ ದಿನ ನಿಮ್ಮ ಕಮಲವನ್ನು ಅಪಹರಿಸಲಿಲ್ಲ. ನಿಮ್ಮ ಮುಖದಿಂದ ಧರ್ಮವನ್ನು ಕೇಳುವ ಆಸೆಯಿಂದ ಅಪಹರಿಸಿದೆ. ಕೋಪವನ್ನು ಮಾಡಬೇಡಿ. ಉತ್ಕೃಷ್ಟವಾದ ಧರ್ಮವನ್ನು ಕೇಳಿದ್ದಾಯಿತು. ಧರ್ಮಸೇತುವೆಗಳು ನಿರ್ದುಷ್ಟವಾಗಿವೆ. ಋಷಿಸಮ್ಮತವೂ, ಶಾಶ್ವತವೂ, ಅವ್ಯಯವೂ ಆದ ಈ ಧರ್ಮವನ್ನು ನಾನು ಕೇಳಿದ್ದಾಯಿತು. ವಿದ್ವಾಂಸರೇ, ಮುನಿಶ್ರೇಷ್ಠರೇ, ಈ ನಿಮ್ಮ ಕಮಲವನ್ನು ತೆಗೆದುಕೊಳ್ಳಿ. ಪೂಜ್ಯರೇ, ಅನಿಂದಿತರೇ, ನನ್ನ ಅಪರಾಧವನ್ನು ಕ್ಷಮಿಸಿ.

ಭೀಷ್ಮಃ

ಇತ್ಯುಕ್ತಃ ಸ ಮಹೇಂದ್ರೇಣ ತಪಸ್ವೀ ಕೋಪನೋ ಭೃಶಮ್ ।
ಜಗ್ರಾಹ ಪುಷ್ಕರಂ ಧೀಮಾನ್ ಪ್ರಸನ್ನಶ್ಚಾಭವನ್ಮುನಿಃ ॥೫೦॥

ಭೀಷ್ಮ– ಮಹೇಂದ್ರನಿಂದ ಹೀಗೆ ಹೇಳಲ್ಪಟ್ಟ ಬಹಳ ಕೋಪಶೀಲರಾದ ತಪಸ್ವಿಗಳಾದ, ಮೇಧಾವಿಗಳಾದ ಅಗಸ್ತ್ಯರು ಕಮಲಗಳನ್ನು ತೆಗೆದುಕೊಂಡು ಪ್ರಸನ್ನರಾದರು.

ಪ್ರಯಯುಸ್ತೇ ತತೋ ಭೂಯಸ್ತೀರ್ಥಾನಿ ವನಗೋಚರಾಃ ।
ಪುಣ್ಯತೀರ್ಥೇಷು ಚ ತಥಾ ಗಾತ್ರಾಣ್ಯಾಪ್ಲಾವಯಂತಿ ತೇ ॥೫೧॥

ಅವರು ಪುನಃ ಅಲ್ಲಿಂದ ಹೊರಟು ಕಾಡಿನಲ್ಲಿ ಸಂಚಾರ ಮಾಡುತ್ತಾ ಪುಣ್ಯ ತೀರ್ಥಗಳಲ್ಲಿ ಸ್ನಾನವನ್ನು ಮಾಡಿದರು.

ಆಖ್ಯಾನಂ ಯ ಇದಂ ಯುಕ್ತಃ ಪಠೇತ್ ಪರ್ವಣಿಪರ್ವಣಿ ।
ನ ಮೂರ್ಖಂ ಜನಯೇತ್ ಪುತ್ರಂ ನ ಭವೇಚ್ಚ ನಿರಾಕೃತಿಃ ॥೫೨॥

ಈ ಆಖ್ಯಾನವನ್ನು ಯಾವನು ಶ್ರದ್ಧಾಯುಕ್ತನಾಗಿ ಪರ್ವಪರ್ವಗಳಲ್ಲಿ ಪಠಿಸುತ್ತಾನೋ ಅವನ ಪುತ್ರನು ಮೂರ್ಖನಾಗುವುದಿಲ್ಲ. ಅವನು ಯಾರಿಂದಲೂ ತಿರಸ್ಕರಿಸಲ್ಪಡುವುದಿಲ್ಲ.

ನ ತಮಾಪತ್ ಸ್ಪೃಶೇತ್ ಕಾಚಿನ್ನ ಜ್ವರೋ ನ ರುಜಶ್ಚ ಹ ।
ವಿರಜಾಃ ಶ್ರೇಯಸಾ ಯುಕ್ತಃ ಪ್ರೇತ್ಯ ಸ್ವರ್ಗಮವಾಪ್ನುಯಾತ್ ॥೫೩॥

ಅವನಿಗೆ ಆಪತ್ತಾಗಲೀ, ಜ್ವರವಾಗಲೀ, ಬೇರೆ ರೋಗವಾಗಲೀ ಬರುವುದಿಲ್ಲ. ದೋಷದೂರನಾಗಿ ಶ್ರೇಯೋಭಾಗಿಯಾಗಿ ಮರಣವನ್ನು ಹೊಂದಿದ ಮೇಲೆ ಸ್ವರ್ಗವನ್ನು ಪಡೆಯುತ್ತಾನೆ.

ಯಶ್ಚ ಶಾಸ್ತ್ರಮನುಧ್ಯಾಯೇದೃಷಿಭಿಃ ಪರಿಪಾಲಿತಮ್ ।
ಸ ಗಚ್ಛೇದ್ ಬ್ರಹ್ಮಣೋ ಲೋಕಮವ್ಯಯಂ ಚ ನರೋತ್ತಮ ॥೫೪॥

ಋಷಿಗಳಿಂದ ಪರಿಪಾಲಿತವಾದ ಈ ಧರ್ಮೋಪದೇಶ ರೂಪವಾದ ಶಾಸ್ತ್ರವನ್ನು ಅಧ್ಯಯನ ಮಾಡುವವನು ಎಲೈ ನರೋತ್ತಮನೇ, ಶಾಶ್ವತವಾದ ಬ್ರಹ್ಮಲೋಕಕ್ಕೆ ಹೋಗುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಪುಷ್ಕರಸೈನ್ಯಕಥನಂ ನಾಮ
ಅಷ್ಟತ್ರಿಂಶೋತ್ತರಶತತಮೋऽಧ್ಯಾಯಃ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಮೂವತ್ತೆಂಟನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಮೂವತ್ತೊಂಬತ್ತನೆಯ ಅಧ್ಯಾಯ

ಛತ್ರಿ ಮತ್ತು ಪಾದರಕ್ಷೆಗಳ ಉತ್ಪತ್ತಿ

ಯುಧಿಷ್ಠಿರಃ

ಯದಿದಂ ಶ್ರಾದ್ಧಧರ್ಮೇಷು ದೀಯತೇ ಭರತರ್ಷಭ ।
ಛತ್ರಂ ಚೋಪಾನಹೌ ಚೈವ ಕೇನೈತತ್ ಸಂಪ್ರವರ್ತಿತಮ್ ।
ಕಥಂ ಚೈತತ್ ಸಮುತ್ಪನ್ನಂ ಕಿಮರ್ಥಂ ಚ ಪ್ರದೀಯತೇ ॥೧॥

ನ ಕೇವಲಂ ಶ್ರಾದ್ಧಧರ್ಮೇ ಪುಣ್ಯಕೇಷ್ವಪಿ ದೀಯತೇ ।
ಏತದ್ ವಿಸ್ತರತೋ ರಾಜನ್ ಶ್ರೋತುಮಿಚ್ಛಾಮಿ ತತ್ತ್ವತಃ ॥೨॥

ಯುಧಿಷ್ಠಿರ– ಎಲೈ ಭರತಶ್ರೇಷ್ಠನೇ, ಶ್ರಾದ್ಧವಿಧಿಗಳಲ್ಲಿ ಛತ್ರಿ ಮತ್ತು ಪಾದರಕ್ಷೆಗಳು ದಾನ ಮಾಡಲ್ಪಡುತ್ತವೆಯಷ್ಟೆ? ಇದು ಯಾರಿಂದ ಪ್ರವರ್ತಿತವಾಯಿತು? ಇದು ಹೇಗೆ ಉತ್ಪತ್ತಿಯನ್ನು ಹೊಂದಿತು? ಕೊಡುವುದರಿಂದ ಉಂಟಾಗುವ ಪ್ರಯೋಜನವೇನು? ಕೇವಲ ಶ್ರಾದ್ಧವಿಧಿಗಳಲ್ಲಿಯಲ್ಲ ಪುಣ್ಯಕಾರ್ಯಗಳಲ್ಲಿಯೂ ಇವು ಕೊಡಲ್ಪಡುತ್ತವೆ. ಎಲೈ ರಾಜನೇ, ಇದನ್ನು ವಿಸ್ತಾರವಾಗಿ ಸರಿಯಾಗಿ ತಿಳಿದುಕೊಳ್ಳಲು ಬಯಸುತ್ತೇನೆ.

ಭೀಷ್ಮಃ

ಶೃಣು ರಾಜನ್ನವಹಿತಶ್ಛತ್ರೋಪಾನಹವಿಸ್ತರಮ್ ।
ಯಥೈತತ್ ಪ್ರಥಿತಂ ಲೋಕೇ ಯೇನ ಚೈತತ್ ಪ್ರವರ್ತಿತಮ್ ॥೩॥

ಭೀಷ್ಮ– ರಾಜನೇ, ಛತ್ರಿ-ಪಾದರಕ್ಷೆಗಳು ಹೇಗೆ ಲೋಕದಲ್ಲಿ ಪ್ರಸಿದ್ಧವಾದವು. ಯಾರು ಇದನ್ನು ಪ್ರವರ್ತಿಸಿದರು ಎಂಬುದನ್ನು ವಿಸ್ತಾರವಾಗಿ ಹೇಳುತ್ತೇನೆ, ಅವಧಾನದಿಂದ ಕೇಳು.

ಯಥಾ ಚಾಕ್ಷಯ್ಯತಾಂ ಪ್ರಾಪ್ತಂ ಪುಣ್ಯತಾಂ ಚ ಯಥಾ ಗತಮ್ ।
ಸರ್ವಮೇತದಶೇಷೇಣ ಪ್ರವಕ್ಷ್ಯಾಮಿ ಜನಾಧಿಪ ॥೪॥

ಎಲೈ ಜನಾಧಿಪನೇ, ಹೇಗೆ ಅದು ಅಕ್ಷಯಫಲವನ್ನೂ, ಪುಣ್ಯಫಲವನ್ನೂ ಹೊಂದಿತು ಎಂಬುದನ್ನು ಪೂರ್ಣವಾಗಿ ಹೇಳುತ್ತೇನೆ.

ಇತಿಹಾಸಂ ಪುರಾವೃತ್ತಮಿಮಂ ಶೃಣು ನರಾಧಿಪ ।
ಜಮದಗ್ನೇಶ್ಚ ಸಂವಾದಂ ಸೂರ್ಯಸ್ಯ ಚ ಮಹಾತ್ಮನಃ ॥೫॥

ಎಲೈ ರಾಜನೇ, ಮಹಾತ್ಮನಾದ ಸೂರ್ಯನಿಗೂ ಮತ್ತು ಜಮದಗ್ನಿಗೂ ಹಿಂದೆ ನಡೆದ ಸಂವಾದರೂಪವಾದ ಇತಿಹಾಸವನ್ನು ಕೇಳು.

ಪುರಾ ಸ ಭಗವಾನ್ ಸಾಕ್ಷಾದ್ ಧನುಷಾऽಕ್ರೀಡತ ಪ್ರಭೋ ।
ಸಂಧಾಯ ಸಂಧಾಯ ಶರಾನ್ ಚಿಕ್ಷೇಪ ಕಿಲ ಭಾರ್ಗವಃ ॥೬॥

ಎಲೈ ಪ್ರಭುವೇ, ಹಿಂದೆ ಪೂಜ್ಯರೂ ಭಾರ್ಗವರೂ ಆದ ಜಮದಗ್ನಿಗಳು ಧನುಸ್ಸಿನಿಂದ ಆಟವಾಡುತ್ತಾ ಬಾಣಗಳನ್ನು ಮತ್ತೆ ಮತ್ತೆ ಹೂಡಿ ಪ್ರಯೋಗಿಸುತ್ತಿದ್ದರು.

ತಾನ್ ಕ್ಷಿಪ್ತಾನ್ ರೇಣುಕಾ ಸರ್ವಾಂಸ್ತಸ್ಯೇಷೂನ್ ದೀಪ್ತತೇಜಸಃ ।
ಆನಾಯ್ಯ ಸಾ ತದಾ ತಸ್ಮೈ ಪ್ರಾದಾದಸಕೃದಚ್ಯುತ ॥೭॥

ಎಲೈ ಅಚ್ಯುತನೇ, ಈ ದೀಪ್ತವಾದ ತೇಜಸ್ಸನ್ನು ಹೊಂದಿದ ಅವರು ಪ್ರಯೋಗಿಸಿದ ಬಾಣಗಳೆಲ್ಲವನ್ನೂ ರೇಣುಕೆಯು ಅನೇಕ ಬಾರಿ ತಂದು ಅವರಿಗೆ ಕೊಡುತ್ತಿದ್ದಳು.

ಅಥ ತೇನ ಸ ಶಬ್ದೇನ ಜ್ಯಾತಳಸ್ಯ ಶರಸ್ಯ ಚ ।
ಪ್ರಹೃಷ್ಟಃ ಸಂಪ್ರಚಿಕ್ಷೇಪ ಸಾ ಚ ಪ್ರತ್ಯಾಜಹಾರ ತಾನ್ ॥೮॥

ಜಮದಗ್ನಿಗಳು ಹೆದೆಯ ಶಬ್ದದಿಂದಲೂ, ಪ್ರಯೋಗಿಸುವ ಬಾಣಗಳ ಶಬ್ದದಿಂದಲೂ ಸಂತೋಷಗೊಂಡು ಪುನಃ ಅವುಗಳನ್ನು ಪ್ರಯೋಗಿಸುತ್ತಿದ್ದರು. ರೇಣುಕೆಯಾದರೂ ಪುನಃ ಅವುಗಳನ್ನು ತಂದುಕೊಡುತ್ತಿದ್ದಳು.

ತತೋ ಮಧ್ಯಾಹ್ನಮಾರೂಢೇ ಜ್ಯೇಷ್ಠಾಮೂಲೇ ದಿವಾಕರೇ ।
ಸ ಸಾಯಕಾನ್ ದ್ವಿಜೋ ವಿದ್ವಾ್ ರೇಣುಕಾಮಿದಮಬ್ರವೀತ್ ॥೯॥

ಗಚ್ಛಾನಯ ವಿಶಾಲಾಕ್ಷಿ ಶರಾನೇತಾನ್ ಧನುಶ್ಚ್ಯುತಾನ್ ।
ಯಾವದೇತಾನ್ ಪುನಃ ಸುಭ್ರು ಕ್ಷಿಪಾಮೀತಿ ಜನಾಧಿಪ ॥೧೦॥

ಅನಂತರ ಒಮ್ಮೆ ಜ್ಯೇಷ್ಠಾನಕ್ಷತ್ರದಲ್ಲಿ ಸೂರ್ಯನು ಮಧ್ಯಾಹ್ನಕಾಲಕ್ಕೆ ಬಂದಿರುವಾಗ ಆ ಜ್ಞಾನಿಗಳು ಬಾಣಗಳನ್ನು ಪ್ರಯೋಗಿಸಿ ರೇಣುಕೆಯನ್ನು ಕುರಿತು- 'ಎಲೌ

ವಿಶಾಲಾಕ್ಷಿಯೇ, ನನ್ನ ಧನುಸ್ಸಿನಿಂದ ಹೊರಹೊಮ್ಮಿದ ಈ ಬಾಣಗಳನ್ನು ತೆಗೆದುಕೊಂಡು ಬಾ. ಎಲೌ ಸುಭ್ರುವೇ, ನಾನು ಆ ಬಾಣಗಳನ್ನು ಪುನಃ ಪ್ರಯೋಗಿಸುತ್ತೇನೆ' ಎಂದು ಹೇಳಿದರು.

ಸಾ ಗಚ್ಛತ್ಯಂತರಾ ಛಾಯಾವೃಕ್ಷಮಾಶ್ರಿತ್ಯ ಭಾಮಿನೀ ।
ತಸ್ಯೌ ತಸ್ಯಾ ಹಿ ಸಂತಪ್ತಂ ಶಿರಃ ಪಾದೌ ತಥೈವ ಚ ॥೧೧॥

ಸುಂದರಿಯಾದ ರೇಣುಕೆಯು ಹೋಗುತ್ತಾ ಮಧ್ಯದಲ್ಲಿ ಒಂದು ಮರದ ನೆರಳನ್ನು ಆಶ್ರಯಿಸಿ ನಿಂತಳು. ಅವಳ ಶಿರಸ್ಸು ಮತ್ತು ಪಾದಗಳು ಸೂರ್ಯನ ಶಾಖದಿಂದ ಕಾದುಹೋಗಿದ್ದವು.

ಸ್ಥಿತಾ ಸಾ ತು ಮುಹೂರ್ತಂ ವೈ ಭರ್ತುಃ ಶಾಪಭಯಾಚ್ಛುಭಾ ।
ಯಯಾವಾನಯಿತುಂ ಭೂಯಃ ಸಾಯಕಾನಸಿತೇಕ್ಷಣಾ ।
ಪ್ರತ್ಯಾಜಗಾಮ ಚ ಶರಾಂಸ್ತಾನಾದಾಯ ಯಶಸ್ವಿನೀ ॥೧೨॥

ಒಂದು ಮುಹೂರ್ತದ ಕಾಲ ಅಲ್ಲಿಯೇ ನಿಂತ ಶುಭಳಾದ ಅವಳು ಪತಿಯ ಶಾಪದ ಭಯದಿಂದ ಪುನಃ ಬಾಣಗಳನ್ನು ತರಲು ಹೊರಟಳು. ಕಪ್ಪಾದ ಕಣ್ಣುಳ್ಳವಳೂ, ಯಶಸ್ವಿನಿಯೂ ಆದ ಅವಳು ಆ ಬಾಣಗಳನ್ನು ತೆಗೆದುಕೊಂಡು ಹಿಂದೆ ಬಂದಳು.

ಸಾ ಪ್ರಸ್ವಿನ್ನಾ ಸುಚಾರ್ವಂಗೀ ಪದ್ಭ್ಯಾಂ ದುಃಖಂ ನಿಯಚ್ಛತೀ ।
ಉಪಾಜಗಾಮ ಭರ್ತಾರಂ ಭಯಾದ್ ಭರ್ತುಃ ಪ್ರವೇಪತೀ ॥೧೩॥

ಅತ್ಯಂತ ಸುಂದರಿಯಾದ ಅವಳು ಮೈಯೆಲ್ಲಾ ಬೆವರಿ ಕಾಲಿಗೆ ಉಂಟಾಗುತ್ತಿದ್ದ ವೇದನೆಯನ್ನು ತಡೆದುಕೊಂಡು ಪತಿಯ ಭಯದಿಂದ ನಡುಗುತ್ತಾ ಪತಿಯ ಸಮೀಪಕ್ಕೆ ಬಂದಳು.

ಸ ತಾಮೃಷಿಸ್ತತಃ ಕ್ರುದ್ಧೋ ವಾಕ್ಯಮಾಹ ಶುಭಾನನಾಮ್ ।
ರೇಣುಕೇ ಕಿಂ ಚಿರೇಣ ತ್ವಮಾಗತೇತಿ ಪುನಃ ಪುನಃ ॥೧೪॥

ಆಗ ಋಷಿಗಳು ಕ್ರುದ್ಧರಾಗಿ ಶುಭಾನನೆಯಾದ ಅವಳನ್ನು ಕುರಿತು- 'ಎಲೌ ರೇಣುಕೆಯೇ, ಏಕೆ ತಡವಾಗಿ ಬಂದೆ?' ಎಂದು ಪುನಃ ಪುನಃ ಕೇಳಿದರು.

ರೇಣುಕಾ

ಶಿರಸ್ತಾವತ್ ಪ್ರದೀಪ್ತಂ ಮೇ ಪಾದೌ ಚೈವ ತಪೋಧನ ।
ಸೂರ್ಯತೇಜೋನಿರುದ್ಧಾऽಹಂ ವೃಕ್ಷಚ್ಛಾಯಾಮುಪಾಶ್ರಿತಾ ॥೧೫॥

ಏತಸ್ಮಾತ್ ಕಾರಣಾದ್ ಬ್ರಹ್ಮನ್ ಚಿರಮೇತತ್ ಕೃತಂ ಮಯಾ ।
ಏತಜ್ಞಾತ್ವಾ ಮಮ ವಿಭೋ ಮಾ ಕ್ರುಧಸ್ತ್ವಂ ತಪೋಧನ ॥೧೬॥

ರೇಣುಕಾ– ಎಲೈ ತಪೋಧನರೇ, ನನ್ನ ಶಿರಸ್ಸು ಮತ್ತು ಪಾದಗಳು ಕಾದು ಹೋದವು. ಸೂರ್ಯನ ತೇಜಸ್ಸಿನಿಂದ ತಡೆಯಲ್ಪಟ್ಟ ನಾನು ಒಂದು ವೃಕ್ಷದ ನೆರಳನ್ನು ಆಶ್ರಯಿಸಿದೆ. ಪೂಜ್ಯರೇ, ಈ ಕಾರಣದಿಂದ ನಾನು ಬರುವುದು ತಡವಾಯಿತು. ಎಲೈ ವಿಭುವೇ, ತಪೋಧನರೇ, ಇದನ್ನು ತಿಳಿದು ನನ್ನ ಮೇಲೆ ಕೋಪವನ್ನು ಮಾಡಬೇಡಿ.

ಜಮದಗ್ನಿಃ

ಅದ್ಯೈನಂ ದೀಪ್ತಕಿರಣಂ ರೇಣುಕೇ ತವ ದುಃಖಿದಮ್ ।
ಶರೈರ್ನಿಪಾತಯಿಷ್ಯಾಮಿ ಸೂರ್ಯಮಸ್ತ್ರಾಗ್ನಿತೇಜಸಾ ॥೧೭॥

ಜಮದಗ್ನಿ– ಎಲೌ ರೇಣುಕೆಯೇ, ನಿನಗೆ ದುಃಖವನ್ನು ನೀಡಿದ ತೀಕ್ಷ್ಣವಾದ ಕಿರಣಗಳುಳ್ಳ ಈ ಸೂರ್ಯನನ್ನು ನನ್ನ ಅಸ್ತ್ರಗಳೆಂಬ ಅಗ್ನಿತೇಜಸ್ಸಿನಿಂದ ಕೂಡಿದ ಬಾಣಗಳಿಂದ ಈಗ ಹೊಡೆದು ಉರುಳಿಸುತ್ತೇನೆ.

ಭೀಷ್ಮಃ

ಸ ವಿಸ್ಫಾರ್ಯ ಧನುರ್ದಿವ್ಯಂ ಗೃಹೀತ್ವಾ ಚ ಬಹೂನ್ ಶರಾನ್ ।
ಅತಿಷ್ಠತ್ ಸೂರ್ಯಮಭಿತೋ ಯತೋ ಯಾತಿ ತತೋಮುಖಃ ॥೧೮॥

ಭೀಷ್ಮ– ಅವರು ತಮ್ಮ ದಿವ್ಯವಾದ ಧನುಸ್ಸನ್ನು ಎಳೆದು ಅನೇಕ ಬಾಣಗಳನ್ನು ಹಿಡಿದು ಸೂರ್ಯನು ಎಲ್ಲೆಲ್ಲಿ ಹೋಗುತ್ತಾನೆಯೋ ಅಲ್ಲಲ್ಲಿ ಅವನಿಗೆ ಅಭಿಮುಖವಾಗಿ ನಿಂತರು.

ಅಥ ತಂ ಪ್ರಹರಿಷ್ಯಂತಂ ಸೂರ್ಯೋऽಭ್ಯೇತ್ಯ ವಚೋऽಬ್ರವೀತ್ ।
ದ್ವಿಜರೂಪೇಣ ಕೌಂತೇಯ ಕಿಂ ತೇ ಸೂರ್ಯೋऽಪರಾಧ್ಯತೇ ॥೧೯॥

ಎಲೈ ಕೌಂತೇಯನೇ, ಹೊಡೆಯುವುದರಲ್ಲಿದ್ದ ಅವರ ಬಳಿಗೆ ಸೂರ್ಯನು ಬ್ರಾಹ್ಮಣ ರೂಪದಿಂದ ಬಂದು ಸೂರ್ಯನು ನಿಮಗೆ ಯಾವ ಅಪರಾಧವನ್ನು ಮಾಡಿದ್ದಾನೆ ಎಂದು ಕೇಳಿದನು.

ಆದತ್ತೇ ರಶ್ಮಿಭಿಃ ಸೂರ್ಯೋ ದಿವಿ ವಿದ್ವನ್ ತತಸ್ತತಃ ।
ರಸಂ ಸ ತಂ ವೈ ವರ್ಷಾಸು ಪ್ರವರ್ಷತಿ ದಿವಾಕರಃ ॥೨೦॥

ಎಲೈ ವಿದ್ವಾಂಸರೇ, ಹಗಲಿಗೆ ಕಾರಣನಾದ ಸೂರ್ಯನು ಅಲ್ಲಲ್ಲಿರುವ ರಸವನ್ನು ಎಳೆದುಕೊಂಡು ಅದನ್ನು ಮಳೆಗಾಲದಲ್ಲಿ ಮಳೆಯ ರೂಪದಲ್ಲಿ ಹಿಂದೆ ಕೊಡುತ್ತಾನೆ.

ತತೋಽನ್ನಂ ಜಾಯತೇ ವಿಪ್ರ ಮನುಷ್ಯಾಣಾಂ ಸುಖಾವಹಮ್ ।
ಅನ್ನಂ ಪ್ರಾಣಾ ಇತಿ ಯಥಾ ವೇದೇಷು ಪರಿಪಠ್ಯತೇ ॥೨೧॥

ಎಲೈ ಬ್ರಾಹ್ಮಣರೇ, ಅದರಿಂದ ಮನುಷ್ಯರಿಗೆ ಸುಖಪ್ರದವಾದ ಅನ್ನವು ಉತ್ಪತ್ತಿಯಾಗುತ್ತದೆ. ಅನ್ನವೇ ಪ್ರಾಣ ಎಂದು ಯಥಾರ್ಥವಾಗಿ ವೇದಗಳಲ್ಲಿ ಹೇಳಲ್ಪಟ್ಟಿದೆ.

ಅಥಾಭ್ರೇಷು ನಿಗೂಢಶ್ಚ ರಶ್ಮಿಭಿಃ ಪರಿವಾರಿತಃ ।
ಸಪ್ತ ದ್ವೀಪಾನಿಮಾನ್ ಬ್ರಹ್ಮನ್ ವರ್ಷೇಣಾಭಿಪ್ರವರ್ಷತಿ ॥೨೨॥

ಎಲೈ ಬ್ರಾಹ್ಮಣರೇ, ಅನಂತರದಲ್ಲಿ ಮೋಡಗಳಲ್ಲಿ ಅವಿತುಕೊಂಡು ಕಿರಣಗಳಿಂದ ಪರಿವೃತನಾಗಿ ಈ ಏಳು ದ್ವೀಪಗಳನ್ನೂ ಮಳೆಯಿಂದ ನೆನೆಸುತ್ತಾನೆ.

ತತಸ್ತದೌಷಧೀನಾಂ ಚ ವೀರುಧಾಂ ಪತ್ರಪುಷ್ಪಜಮ್ ।
ಸರ್ವಂ ವರ್ಷಾಭಿನಿರ್ವೃತ್ತಮನ್ನಂ ಸಂಭವತಿ ಪ್ರಭೋ ॥೨೩॥

ಎಲೈ ಪ್ರಭುವೇ, ಅನಂತರ ಉಂಟಾದ ಮಳೆಯಿಂದ ತೃಪ್ತವಾದ ಓಷಧಿ ಮತ್ತು ಲತೆಗಳ ಪತ್ರ-ಪುಷ್ಪಗಳಲ್ಲಿ ಅನ್ನವುಂಟಾಗುತ್ತದೆ.

ಜಾತಕರ್ಮಾಣಿ ಸರ್ವಾಣಿ ವ್ರತೋಪನಯನಾನಿ ಚ ।
ಗೋದಾನಾನಿ ವಿವಾಹಾಶ್ಚ ತಥಾ ಯಜ್ಞಸಮೃದ್ಧಯಃ ॥೨೪॥

ಸತ್ರಾಣಿ ದಾನಾನಿ ತಥಾ ಸಂಯೋಗಾ ವಿತ್ತಸಂಚಯಾಃ ।
ಅನ್ನತಃ ಸಂಪ್ರವರ್ತಂತೇ ಯಥಾ ತ್ವಂ ವೇತ್ಥ ಭಾರ್ಗವ ॥೨೫॥

ಜಾತಕರ್ಮಗಳು, ವ್ರತೋಪನಯನಗಳು, ಗೋದಾನಗಳು, ವಿವಾಹಗಳು, ಸಮೃದ್ಧವಾದ ಯಜ್ಞಗಳು, ಸತ್ರಗಳು, ವಿವಿಧ ದಾನಗಳು, ಸಮಾಗಮಗಳು, ಧನಸಂಗ್ರಹ ಎಲ್ಲವೂ ಎಲೈ ಭಾರ್ಗವರೇ, ನೀವು ತಿಳಿದಿರುವಂತೆ ಅನ್ನದಿಂದಲೇ ಉಂಟಾಗುತ್ತವೆ.

ರಮಣೀಯಾನಿ ಯಾವಂತಿ ಯಾವದಾರಂಭಕಾಣಿ ಚ ।
ಸರ್ವಮನ್ನಾತ್ ಪ್ರಭವತಿ ವಿದಿತಂ ಕೀರ್ತಯಾಮಿ ತೇ ॥೨೬॥

ಸರ್ವಂ ಹಿ ವೇತ್ಥ ವಿಪ್ರ ತ್ವಂ ಯದೇತತ್ ಕೀರ್ತಿತಂ ಮಯಾ ।
ಪ್ರಸಾದಯೇ ತ್ವಾ ವಿಪ್ರರ್ಷೇ ಕಿಂ ತೇ ಸೂರ್ಯೋ ನಿಪಾತ್ಯತೇ ॥೨೭॥

ರಮಣೀಯವಾದ ವಸ್ತುಗಳು ಎಷ್ಟಿವೆಯೋ ಮತ್ತು ಉತ್ಪತ್ತಿ ಹೊಂದುವ ವಸ್ತುಗಳು ಎಷ್ಟಿವೆಯೋ ಅವೆಲ್ಲವೂ ಅನ್ನದಿಂದಲೇ ಉಂಟಾಗುತ್ತವೆ. ನಿಮಗೆ ತಿಳಿದಿರುವುದನ್ನೇ ನಾನು ಹೇಳುತ್ತಿದ್ದೇನೆ. ಎಲೈ ಬ್ರಾಹ್ಮಣರೇ, ನಾನು ಹೇಳುವುದೆಲ್ಲವನ್ನೂ ನೀವು ತಿಳಿದಿದ್ದೀರಿ. ಎಲೈ ವಿಪ್ರರ್ಷಿಗಳೇ, ನಿಮ್ಮನ್ನು ಪ್ರಸನ್ನರಾಗಿ ಎಂದು ಕೇಳುತ್ತಿದ್ದೇನೆ. ನೀವು ಏತಕ್ಕೆ ಸೂರ್ಯನನ್ನು ಕೆಡವುತ್ತಿದ್ದೀರಿ?

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಅನ್ನಪ್ರಶಂಸಾ ನಾಮ
ಏಕೋನಚತ್ವಾರಿಂಶೋತ್ತರಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಮೂವತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ನಲವತ್ತನೆಯ ಅಧ್ಯಾಯ

ಛತ್ರಿ ಮತ್ತು ಪಾದರಕ್ಷೆಗಳ ದಾನ

ಯುಧಿಷ್ಠಿರಃ

ಏವಂ ತದಾ ಪ್ರಯಾಚಂತಂ ಭಾಸ್ಕರಂ ಮುನಿಸತ್ತಮಃ ।
ಜಮದಗ್ನಿರ್ಮಹಾತೇಜಾಃ ಕಿಂ ಕಾರ್ಯಂ ಪ್ರತ್ಯಪದ್ಯತ ॥೧॥

ಯುಧಿಷ್ಠಿರ– ಹಾಗೆ ಯಾಚನೆಯನ್ನು ಮಾಡುತ್ತಿದ್ದ ಸೂರ್ಯನ ವಿಷಯದಲ್ಲಿ ಮುನಿಶ್ರೇಷ್ಠರೂ, ಮಹಾತೇಜಸ್ವಿಗಳೂ ಆದ ಜಮದಗ್ನಿಗಳು ಏನು ಮಾಡಿದರು?

ಭೀಷ್ಮಃ

ತಥಾ ಪ್ರಯಾಚಮಾನಸ್ಯ ಮುನಿರಗ್ನಿಸಮಪ್ರಭಃ ।
ಜಮದಗ್ನಿಃ ಶಮಂ ನೈವ ಜಗಾಮ ಕುರುನಂದನ ॥೨॥

ಭೀಷ್ಮ– ಎಲೈ ಕುರುನಂದನನೇ, ಸೂರ್ಯನು ಆ ರೀತಿಯಲ್ಲಿ ಯಾಚಿಸುತ್ತಿದ್ದರೂ ಅಗ್ನಿಗೆ ಸಮಾನವಾದ ತೇಜಸ್ಸುಳ್ಳ ಜಮದಗ್ನಿಗಳು ಶಾಂತರಾಗಲಿಲ್ಲ.

ತತಃ ಸೂರ್ಯೋ ಮಧುರಯಾ ವಾಚಾ ತಮಿದಮಬ್ರವೀತ್ ।
ಕೃತಾಂಜಲಿರ್ವಿಪ್ರರೂಪೀ ಪ್ರಣಮ್ಯೇದಂ ವಿಶಾಂಪತೇ ॥೩॥

ಎಲೈ ರಾಜನೇ, ಆಗ ವಿಪ್ರರೂಪವನ್ನು ಧರಿಸಿದ್ದ ಸೂರ್ಯನು ನಮಸ್ಕಾರವನ್ನು ಮಾಡಿ ಕೈಗಳನ್ನು ಮುಗಿದು ಮಧುರವಾದ ಮಾತುಗಳಿಂದ ಹೀಗೆ ಹೇಳಿದನು.

ಚಲಂ ನಿಮಿತ್ತಂ ವಿಪ್ರರ್ಷೇ ಸದಾ ಸೂರ್ಯಸ್ಯ ಗಚ್ಛತಃ ।
ಕಥಂ ಚಲಂ ವೇತ್ಸ್ಯಸಿ ತ್ವಂ ಸದಾ ಯಾಂತಂ ದಿವಾಕರಮ್ ॥೪॥

ಎಲೈ ವಿಪ್ರರ್ಷಿಯೇ, ಸದಾ ಚಲಿಸುವ ಸೂರ್ಯನ ಗುರಿಯು ಚಂಚಲವಾದುದು. ಸದಾ ಚಲಿಸುವ ಸೂರ್ಯನನ್ನು ನೀವು ಬಾಣದಿಂದ ಹೇಗೆ ಹೊಡೆಯುವಿರಿ?

ಜಮದಗ್ನಿಃ

ಸ್ಥಿರಂ ವಾಪಿ ಚಲಂ ವಾಪಿ ಜಾನೇ ತ್ವಾಂ ಜ್ಞಾನಚಕ್ಷುಷಾ ।
ಅವಶ್ಯಂ ವಿನಯಾಧಾನಂ ಕಾರ್ಯಮದ್ಯ ಮಯಾ ತವ ॥೫॥

ಅಪರಾಹ್ಣೇ ನಿಮೇಷಾರ್ಧಂ ತಿಷ್ಠಸಿ ತ್ವಂ ದಿವಾಕರ ।
ತತ್ರ ವೇತ್ಸ್ಯಾಮಿ ಸೂರ್ಯ ತ್ವಾಂ ನ ಮೇಽತ್ರಾಸ್ತಿ ವಿಚಾರಣಾ ॥೬॥

ಜಮದಗ್ನಿ– ನೀನು ಸ್ಥಿರವಾಗಿರು ಅಥವಾ ಚಲಿಸುತ್ತಿರು. ನೀನು ಯಾರೆಂದು ನಾನು ಜ್ಞಾನದೃಷ್ಟಿಯಿಂದ ತಿಳಿದಿದ್ದೇನೆ. ನಾನು ನಿನಗೆ ಈ ದಿನ ಅವಶ್ಯವಾಗಿ ವಿನಯದ ಪಾಠವನ್ನು ಕಲಿಸಬೇಕಾಗಿದೆ. ಎಲೈ ದಿವಾಕರನೇ, ನೀನು ಅಪರಾಹ್ಣದಲ್ಲಿ ಅರ್ಧ ನಿಮಿಷದ ಕಾಲ ಸ್ಥಿರವಾಗಿ ನಿಲ್ಲುತ್ತೀಯೆ. ಆಗ ನಿನಗೆ ಸರಿಯಾಗಿ ಹೊಡೆಯುವೆನು. ಇದರಲ್ಲಿ ಬೇರೆ ವಿಚಾರವೇ ಇಲ್ಲ.

ಸೂರ್ಯಃ

ಅಸಂಶಯಂ ಮಾಂ ವಿಪ್ರರ್ಷೇ ವೇತ್ಸ್ಯಸೇ ಧನ್ವಿನಾಂ ವರ ।
ಅಪಕಾರಿಣಂ ತು ಮಾಂ ವಿದ್ಧಿ ಭಗವನ್ ಶರಣಾಗತಮ್ ॥೭॥

ಸೂರ್ಯ– ಎಲೈ ಧನುರ್ಧಾರಿಗಳಲ್ಲಿ ಶ್ರೇಷ್ಠರೇ, ವಿಪ್ರರ್ಷಿಗಳೇ, ನಿಸ್ಸಂಶಯವಾಗಿ ನೀವು ನನ್ನನ್ನು ಹೊಡೆಯುವಿರಿ. ಆದರೆ ಪೂಜ್ಯರೇ, ಅಪಕಾರವನ್ನು ಮಾಡಿದ ನಾನು ನಿಮಗೆ ಶರಣಾಗತನಾಗಿದ್ದೇನೆಂದು ತಿಳಿಯಿರಿ.

ಭೀಷ್ಮಃ

ತತಃ ಪ್ರಹಸ್ಯ ಭಗವಾನ್ ಜಮದಗ್ನಿರುವಾಚ ತಮ್ ।
ನ ಭೀಃ ಸೂರ್ಯ ತ್ವಯಾ ಕಾರ್ಯಾ ಪ್ರಣಿಪಾತಗತೋ ಹ್ಯಸಿ ॥೮॥

ಭೀಷ್ಮ– ಆಗ ಪೂಜ್ಯರಾದ ಜಮದಗ್ನಿಗಳು ನಕ್ಕು ಅವನನ್ನು ಕುರಿತು- 'ನೀನು ನಮಸ್ಕರಿಸಿದ್ದೀಯೆ. ಹೆದರಬೇಕಾದ ಅವಶ್ಯಕತೆ ಇಲ್ಲ.

ಬ್ರಾಹ್ಮಣೇಷ್ವಾರ್ಜವಂ ಯಚ್ಚ ಸ್ಥೈರ್ಯಂ ಚ ಧರಣೀತಳೇ ।
ಸೌಮ್ಯತಾಂ ಚೈವ ಸೋಮಸ್ಯ ಗಾಂಭೀರ್ಯಂ ವರುಣಸ್ಯ ಚ ॥೯॥

ದೀಪ್ತಿಮಗ್ನೇಃ ಪ್ರಭಾಂ ಮೇರೋಃ ಪ್ರತಾಪಂ ತಪನಸ್ಯ ಚ ।
ಏತಾನ್ಯತಿಕ್ರಮೇದ್ ಯೋ ವೈ ಸ ಹನ್ಯಾಚ್ಛರಣಾಗತಮ್ ॥೧೦॥

ಬ್ರಾಹ್ಮಣರ ಆರ್ಜವ, ಭೂಮಿಯ ಸ್ಥೈರ್ಯ, ಚಂದ್ರನ ಸೌಮ್ಯತೆ, ವರುಣನ ಗಾಂಭೀರ್ಯ, ಅಗ್ನಿಯ ಪ್ರಕಾಶ, ಮೇರುವಿನ ಕಾಂತಿ, ಸೂರ್ಯನ ತಾಪ ಇವುಗಳನ್ನು ಯಾವನು ಬದಲಾಯಿಸುವನೋ ಅವನು ಶರಣಾಗತನನ್ನು ಕೊಂದಾನು.

ಭವೇತ್ ಸ ಗುರುತಲ್ಪೀ ಚ ಬ್ರಹ್ಮಹಾ ಚ ತಥಾ ಭವೇತ್ ।
ಸುರಾಪಾನಂ ಚ ಕುರ್ಯಾತ್ ಸ ಯೋ ಹನ್ಯಾಚ್ಛರಣಾಗತಮ್ ॥೧೧॥

ಶರಣಾಗತನನ್ನು ಕೊಲ್ಲುವವನು (ಹಿಂಸಿಸುವವನು) ಗುರುತಲ್ಪಗಾಮಿಯಾದಾನು. ಬ್ರಹ್ಮಹತ್ಯೆಯನ್ನು ಮತ್ತು ಸುರಾಪಾನವನ್ನು ಮಾಡಿಯಾನು.

ಏತಸ್ಯ ತ್ವಪನೀತಸ್ಯ ಸಮಾಧಿಂ ತಾತ ಚಿಂತಯ ।
ಯಥಾ ಸುಖಗಮಃ ಪಂಥಾ ಭವೇತ್ ತ್ವದ್ರಶ್ಮಿತಾಪಿತಃ ॥೧೨॥

ಎಲೈ ಪ್ರೀತಿಪಾತ್ರನೇ, ನೀನು ಮಾಡಿದ ಈ ಅಪಚಾರಕ್ಕೆ ಪರಿಹಾರವನ್ನು ಚಿಂತಿಸು. ನಿನ್ನ ಕಿರಣಗಳಿಂದ ತಪ್ತವಾದ ಮಾರ್ಗವು ಹೇಗೆ ಸುಖವಾಗಿ ಸಂಚರಿಸಲು ಯೋಗ್ಯವೋ ಹಾಗೆ ಮಾಡು'.

ಭೀಷ್ಮಃ

ಏತಾವದುಕ್ತ್ವಾ ಸ ತದಾ ತೂಷ್ಣೀಮಾಸೀದ್ ಭೃಗೂದ್ವಹಃ ।
ಅಥ ಸೂರ್ಯೋ ದದೌ ತಸ್ಮೈ ಛತ್ರೋಪಾನಹಮಾಶು ವೈ ॥೧೩॥

ಭೀಷ್ಮ– ಭೃಗೂದ್ವಹರಾದ ಜಮದಗ್ನಿಗಳು ಇಷ್ಟು ಮಾತನ್ನು ಹೇಳಿ ಸುಮ್ಮನಾದರು. ಆಗ ಸೂರ್ಯನು ಅವರಿಗೆ ಶೀಘ್ರವಾಗಿ ಛತ್ರಿ ಮತ್ತು ಪಾದರಕ್ಷೆಗಳನ್ನು ಕೊಟ್ಟನು.

ಸೂರ್ಯಃ

ಮಹರ್ಷೇ ಶಿರಸಸ್ತ್ರಾಣಂ ಛತ್ರಂ ಮದ್ರಶ್ಮಿವಾರಣಮ್ ।
ಪ್ರತಿಗೃಹ್ಣೀಷ್ವ ಪದ್ಭ್ಯಾಂ ಚ ತ್ರಾಣಾರ್ಥಂ ಚರ್ಮಪಾದುಕೇ ॥೧೪॥

ಅದ್ಯಪ್ರಭೃತಿ ಚೈವೈತಲ್ಲೋಕೇ ಸಂಪ್ರಚರಿಷ್ಯತಿ ।
ಪುಣ್ಯದಾನೇಷು ಸರ್ವೇಷು ಪರಮಕ್ಷಯ್ಯಮೇವ ಚ ॥೧೫॥

ಸೂರ್ಯ– ಮಹರ್ಷಿಗಳೇ, ಶಿರಸ್ಸಿನ ತ್ರಾಣರೂಪವಾಗಿರುವ ಈ ಛತ್ರಿಯು ನನ್ನ ಕಿರಣಗಳನ್ನು ನಿವಾರಿಸುವುದು. ಪಾದಗಳ ರಕ್ಷಣೆಗಾಗಿ ಈ ಚರ್ಮದಿಂದ ಮಾಡಿದ ಪಾದುಕೆಗಳಿವೆ. ಇವುಗಳನ್ನು ಸ್ವೀಕರಿಸು. ಇಂದಿನಿಂದ ಪ್ರಾರಂಭಿಸಿ ಲೋಕದಲ್ಲಿ ಎಲ್ಲ ಪ್ರಾಣಿಗಳಲ್ಲಿಯೂ ಛತ್ರಿ ಮತ್ತು ಪಾದರಕ್ಷೆಗಳ ದಾನವು ಪ್ರವೃತ್ತವಾಗುತ್ತದೆ. ಅದು ಅಕ್ಷಯವಾದ ಫಲವನ್ನು ಕೊಡುವಂತಹದ್ದು.

ಭೀಷ್ಮಃ

ಉಪಾನಚ್ಛತ್ರಮೇತದ್ ವೈ ಸೂರ್ಯೇಣೇಹ ಪ್ರವರ್ತಿತಮ್ ।
ಪುಣ್ಯಮೇತದಭಿಖ್ಯಾತಂ ತ್ರಿಷು ಲೋಕೇಷು ಭಾರತ ॥೧೬॥

ಭೀಷ್ಮ– ಎಲೈ ಭಾರತನೇ, ಪಾದುಕೆ ಮತ್ತು ಛತ್ರಿಗಳು ಸೂರ್ಯನಿಂದ ಪ್ರವರ್ತಿತವಾದವು. ಅದರ ದಾನವು ಮೂರುಲೋಕಗಳಲ್ಲಿಯೂ ಪುಣ್ಯಪ್ರದವೆಂದು ಹೇಳಲ್ಪಡುತ್ತದೆ.

ತಸ್ಮಾತ್ ಪ್ರಯಚ್ಛ ವಿಪ್ರೇಭ್ಯಶ್ಛತ್ರೋಪಾನಹಮುತ್ತಮಮ್ ।
ಧರ್ಮಸ್ತೇ ಸುಮಹಾನ್ ಭಾವೀ ನ ಮೇಽತ್ರಾಸ್ತಿ ವಿಚಾರಣಾ ॥೧೭॥

ಆದ್ದರಿಂದ ಬ್ರಾಹ್ಮಣರಿಗೆ ಶ್ರೇಷ್ಠವಾದ ಛತ್ರಿ ಮತ್ತು ಪಾದುಕೆಗಳನ್ನು ಕೊಡು. ನಿನಗೆ ಬಹಳ ದೊಡ್ಡ ಧರ್ಮವುಂಟಾಗುವುದು. ಇದರಲ್ಲಿ ನಿನಗೆ ಯಾವ ಸಂಶಯವೂ ಇಲ್ಲ.

ಛತ್ರಂ ಹಿ ಭರತಶ್ರೇಷ್ಠ ಯಃ ಪ್ರದದ್ಯಾದ್ ದ್ವಿಜಾತಯೇ ।
ಶುಭ್ರಂ ಶತಶಲಾಕಂ ವೈ ಸ ಪ್ರೇತ್ಯ ಸುಖಮೇಧತೇ ॥೧೮॥

ಎಲೈ ಭರತಶ್ರೇಷ್ಠನೇ, ಯಾವನು ದ್ವಿಜರಿಗೆ ನೂರುಕಡ್ಡಿಗಳಿರುವ ಶುಭವಾದ ಛತ್ರಿಯನ್ನು ದಾನ ಮಾಡುತ್ತಾನೆಯೋ ಅವನು ಮರಣವನ್ನು ಹೊಂದಿದ ಮೇಲೆ ಸುಖವನ್ನು ಅನುಭವಿಸುತ್ತಾನೆ.

ಸ ಶಕ್ರಲೋಕೇ ವಸತಿ ಪೂಜ್ಯಮಾನೋ ದ್ವಿಜಾತಿಭಿಃ ।
ಅಪ್ಸರೋಭಿಶ್ಚ ಸತತಂ ದೇವೈಶ್ಚ ಭರತರ್ಷಭ ॥೧೯॥

ಎಲೈ ಭರತಶ್ರೇಷ್ಠನೇ, ಅವನು ಇಂದ್ರಲೋಕದಲ್ಲಿ ದೇವತೆಗಳಿಂದಲೂ, ಅಪ್ಸರೆಯರಿಂದಲೂ ಮತ್ತು ದ್ವಿಜರಿಂದಲೂ ಪೂಜಿತನಾಗಿ ವಾಸಮಾಡುತ್ತಾನೆ.

ದಹ್ಯಮಾನಾಯ ವಿಪ್ರಾಯ ಯಃ ಪ್ರಯಚ್ಛತ್ಯುಪಾನಹೌ ।
ಸ್ನಾತಕಾಯ ಮಹಾಬಾಹೋ ಸಂಶಿತಾಯ ದ್ವಿಜಾತಯೇ ॥೨೦॥

ಸೋಽಪಿ ಲೋಕಾನವಾಪ್ನೋತಿ ದೈವತೈರಭಿಪೂಜಿತಾನ್ ।
ಗೋಲೋಕೇ ಸ ಮುದಾ ಯುಕ್ತೋ ವಸತಿ ಪ್ರೇತ್ಯ ಭಾರತ ॥೨೧॥

ಎಲೈ ಮಹಾಬಾಹುವೇ, ಬಿಸಿಲಿನಿಂದ ಶಿರಸ್ಸು ಮತ್ತು ಪಾದಗಳು ಸುಡುವ ಸ್ನಾತಕನಾದ ಶ್ರೇಷ್ಠವ್ರತಧಾರಿಯಾದ ದ್ವಿಜನಿಗೆ ಯಾವನು ಛತ್ರಿ ಮತ್ತು ಪಾದುಕೆಗಳನ್ನು ಕೊಡುತ್ತಾನೆಯೋ ಅವನೂ ಸಹ ದೇವತೆಗಳಿಂದ ಪೂಜಿತವಾದ ಲೋಕಗಳನ್ನು ಪಡೆಯುತ್ತಾನೆ. ಎಲೈ ಭಾರತನೇ, ಮರಣವನ್ನು ಹೊಂದಿದ ಮೇಲೆ ಅವನು ಗೋಲೋಕದಲ್ಲಿ ಸಂತೋಷದಿಂದ ವಾಸಿಸುತ್ತಾನೆ.

ಏತತ್ತೇ ಭರತಶ್ರೇಷ್ಠ ಮಯಾ ಕಾರ್ತ್ಸ್ನ್ಯೇನ ಕೀರ್ತಿತಮ್ ।
ಛತ್ರೋಪಾನಹದಾನಸ್ಯ ಫಲಂ ಭರತಸತ್ತಮ ।
ಸೂರ್ಯೇಣ ವಿಹಿತಂ ಪೂರ್ವಮೃಷಯೇ ಜಮದಗ್ನಯೇ ॥೨೨॥

ಎಲೈ ಭರತಶ್ರೇಷ್ಠನೇ, ಸೂರ್ಯನಿಂದ ಪ್ರವರ್ತಿತವಾದ ಮೊದಲು ಜಮದಗ್ನಿ ಋಷಿಗಳಿಗೆ ಕೊಡಲ್ಪಟ್ಟ ಈ ಛತ್ರಿ ಮತ್ತು ಪಾದುಕೆಗಳ ದಾನದ ಫಲವನ್ನು ನಾನು ನಿನಗೆ ಪೂರ್ಣವಾಗಿ ಹೇಳಿದ್ದೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ಇತಿ ದಾನಧರ್ಮೇ ಛತ್ರೋಪಾನಹದಾನಫಕಥನಂ ನಾಮ ಚತ್ವಾರಿಂಶೋತ್ತರಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ನಲವತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ನಲವತ್ತೊಂದನೆಯ ಅಧ್ಯಾಯ

ಪರಾಶರಗೀತೆ - ಶೂದ್ರಧರ್ಮಗಳು, ತ್ರೈವರ್ಣಿಕರ ಸೇವಾ.

ಯುಧಿಷ್ಠಿರಃ

ಶೂದ್ರಾಣಾಮಿಹ ಶುಶ್ರೂಷಾ ನಿತ್ಯಮೇವಾನುವರ್ಣಿತಾ ।
ಕೈಃ ಕಾರಣೈಃ ಕತಿವಿಧಾ ಶುಶ್ರೂಷಾ ಸಮುದಾಹೃತಾ ॥೧॥

ಕೇ ಚ ಶುಶ್ರೂಷಯಾ ಲೋಕಾ ವಿಹಿತಾ ಭರತರ್ಷಭ ।
ಶೂದ್ರಾಣಾಂ ಭರತಶ್ರೇಷ್ಠ ಬ್ರೂಹಿ ಮೇ ಧರ್ಮಲಕ್ಷಣಮ್ ॥೨॥

ಯುಧಿಷ್ಠಿರ– ಶೂದ್ರರು ನಿತ್ಯವೂ ತ್ರೈವರ್ಣಿಕರ ಸೇವೆಯನ್ನು ಮಾಡಬೇಕೆಂದು ಹೇಳಲಾಯಿತು. ಯಾವ ಸಾಧನೆಗಳಿಂದ ಎಷ್ಟು ವಿಧವಾಗಿ ಆ ಸೇವೆಯು ಹೇಳಲ್ಪಡುತ್ತದೆ? ಎಲೈ ಭರತರ್ಷಭನೇ, ಭರತಶ್ರೇಷ್ಠನೇ, ಶುಶ್ರೂಷೆಯಿಂದ ಶೂದ್ರರಿಗೆ ಲಭಿಸುವ ಲೋಕಗಳು ಯಾವುವು? ಅವರ ಧರ್ಮಸ್ವರೂಪವನ್ನು ನನಗೆ ಹೇಳು.

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಶೂದ್ರಾಣಾಮನುಕಂಪಾರ್ಥಂ ಯದುಕ್ತಂ ಬ್ರಹ್ಮವಾದಿನಾ ॥೩॥

ಭೀಷ್ಮ– ಈ ವಿಷಯದಲ್ಲಿಯೂ ಸಹ ಬ್ರಹ್ಮವಾದಿಗಳಾದ ಪರಾಶರರು ಶೂದ್ರರ ಮೇಲಿನ ಅನುಕಂಪದಿಂದ ಹೇಳಿದ ಧರ್ಮಗಳ ಪುರಾತನವಾದ ಇತಿಹಾಸವನ್ನು ಹೇಳುತ್ತಾರೆ.

ವೃದ್ಧಃ ಪರಾಶರಃ ಪ್ರಾಹ ಧರ್ಮಂ ಶುಭ್ರಮನಾಮಯಮ್ ।
ಅನುಗ್ರಹಾರ್ಥಂ ವರ್ಣಾನಾಂ ಶೌಚಾಚಾರಸಮನ್ವಿತಮ್ ॥೪॥

ವೃದ್ಧ ಪರಾಶರರು ಎಲ್ಲ ವರ್ಣದವರಿಗೂ ಅನುಗ್ರಹ ಮಾಡಲು ಶೌಚಾಚಾರ ಸಹಿತವಾದ ನಿರ್ದೋಷವಾದ ಮತ್ತು ಶುದ್ಧವಾದ ಧರ್ಮವನ್ನು ಹೇಳಿದರು.

ಧರ್ಮೋಪದೇಶಮಖಿಲಂ ಯಥಾವದನುಪೂರ್ವಶಃ ।
ಶಿಷ್ಯಾನಧ್ಯಾಪಯಾಮಾಸ ಶಾಸ್ತ್ರಮರ್ಥವದರ್ಥವಿತ್ ॥೫॥

ಎಲ್ಲ ವಿಷಯವನ್ನೂ ತಿಳಿದ ಅವರು ಗ್ರಂಥರೂಪದಲ್ಲಿದ್ದ ತಮ್ಮ ಉಪದೇಶ ರೂಪವಾದ ಶಾಸ್ತ್ರವೆಲ್ಲವನ್ನೂ ಕ್ರಮವಾಗಿ ಶಿಷ್ಯರಿಗೆ ಬೋಧಿಸಿದರು.

ಕ್ಷಾಂತೇಂದ್ರಿಯೇಣ ಮಾನೇನ ಶುಚಿನಾऽಚಾಪಲೇನ ವೈ ।
ಅದುರ್ಬಲೇನ ಧೀರೇಣ ನೋತ್ತರೋತ್ತರವಾದಿನಾ ॥೬॥

ಅಲುಬ್ಧೇನಾನೃಶಂಸೇನ ಋಜುನಾ ಬ್ರಹ್ಮವಾದಿನಾ ।
ಚಾರಿತ್ರತತ್ಪರೇಣೈವ ಸರ್ವಭೂತಹಿತಾತ್ಮನಾ ॥೭॥

ಅರಯಃ ಷಡ್ ವಿಜೇತವ್ಯಾ ನಿತ್ಯಂ ಸ್ವಂ ದೇಹಮಾಶ್ರಿತಾಃ ।
ಕಾಮಕ್ರೋಧೌ ಚ ಲೋಭಶ್ಚ ಮಾನಮೋಹೌ ಮದಸ್ತಥಾ ॥೮॥

ಇಂದ್ರಿಯ ನಿಯಂತ್ರಣವನ್ನು ಹೊಂದಿ, ಮಾನವನ್ನು ಹೊಂದಿ, ಶುಚಿಯಾಗಿ, ಚಾಂಚಲ್ಯವನ್ನು ಬಿಟ್ಟು, ದೌರ್ಬಲ್ಯವನ್ನು ತ್ಯಜಿಸಿ, ಧೀರನಾಗಿ, ಹಿರಿಯರ ಮಾತಿಗೆ ಮೇಲೆ ಮೇಲೆ ಉತ್ತರವನ್ನು ಕೊಡದೆ, ಲೋಭವನ್ನು ಬಿಟ್ಟು, ಕೌರ್ಯವನ್ನು ಬಿಟ್ಟು, ಆರ್ಜವವನ್ನು ಹೊಂದಿ, ಬ್ರಹ್ಮವಾದಿಯಾಗಿ, ಶೀಲವನ್ನು ರಕ್ಷಿಸಿಕೊಂಡು, ಸರ್ವಭೂತಗಳಿಗೆ ಹಿತವನ್ನು ಮಾಡಿ ತನ್ನ ದೇಹದಲ್ಲೇ ಯಾವಾಗಲೂ ಇರುವ ಕಾಮ-ಕ್ರೋಧ-ಲೋಭ-ಮೋಹ-ಅಹಂಕಾರ ಮತ್ತು ಮದಗಳೆಂಬ ಆರು ಶತ್ರುಗಳನ್ನು ಗೆಲ್ಲಬೇಕು.

ವಿಧಿನಾ ಧೃತಿಮಾಸ್ಥಾಯ ಶುಶ್ರೂಷುರನಹಂಕೃತಃ ।
ವರ್ಣತ್ರಯಸ್ಯಾನುಮತೋ ಯಥಾಶಕ್ತಿ ಯಥಾಬಲಮ್ ॥೯॥

ಕರ್ಮಣಾ ಮನಸಾ ವಾಚಾ ಚಕ್ಷುಷಾ ಚ ಚತುರ್ವಿಧಮ್ ।
ಆಸ್ಥಾಯ ನಿಯಮಂ ಧೀಮಾನ್ ಶಾಂತೋ ದಾಂತೋ ಜಿತೇಂದ್ರಿಯಃ ॥

ರಕ್ಷೋಯಕ್ಷಜನದ್ವೇಷೀ ಶೇಷಾನ್ನಕೃತಭೋಜನಃ ।
ವರ್ಣತ್ರಯಂ ಮಧು ಯಥಾ ಭ್ರಮರೋ ಧರ್ಮಮಾಚರೇತ್ ॥೧೧॥

ಶೂದ್ರನಾದವನು ಧೈರ್ಯವನ್ನು ವಹಿಸಿ, ಅಹಂಕಾರವನ್ನು ತ್ಯಜಿಸಿ, ವಿಧಿಗೆ ಅನುಗುಣವಾಗಿ ತನ್ನ ಶಕ್ತಿಗೆ ಮತ್ತು ಬಲಕ್ಕೆ ಅನುಗುಣವಾಗಿ ತ್ರೈವರ್ಣಿಕರ ಅನುಮತಿಯನ್ನು ಪಡೆದು ಕರ್ಮದಿಂದಲೂ, ಮನಸ್ಸಿನಿಂದಲೂ, ಮಾತಿನಿಂದಲೂ, ಚಕ್ಷುಸ್ಸಿನಿಂದಲೂ ನಾಲ್ಕು ವಿಧವಾದ ನಿಯಮಗಳನ್ನು ಹೊಂದಿ, ಶಾಂತನೂ, ದಾಂತನೂ, ಜಿತೇಂದ್ರಿಯನೂ ಆಗಿ ರಾಕ್ಷಸ ಮತ್ತು ಯಕ್ಷರನ್ನು ಪೂಜಿಸುವ ಜನರನ್ನು ದ್ವೇಷಿಸಿ, ಶೇಷಾನ್ನ ಭೋಜನವನ್ನು ಮಾಡಿ ಮಧುವನ್ನು ಅನುಸರಿಸಿ ಭ್ರಮರವು ಪುಷ್ಪಗಳನ್ನು ಸೇವಿಸುವಂತೆ ಧರ್ಮವನ್ನು ಅನುಸರಿಸಿ ವರ್ಣತ್ರಯದವರ ಪರಿಚರ್ಯವನ್ನು ಮಾಡಬೇಕು.

ಯದಿ ಶೂದ್ರಸ್ತಪಃ ಕುರ್ಯಾದ್ ವೇದದೃಷ್ಟೇನ ಕರ್ಮಣಾ ।
ಇಹ ಚಾಸ್ಯ ಪರಿಕ್ಲೇಶಃ ಪ್ರೇತ್ಯ ಚಾಸ್ಯಾಶುಭಾ ಗತಿಃ ॥೧೨॥

ಶೂದ್ರನು ಒಂದು ಪಕ್ಷ ವೇದೋಕ್ತ ಮಾರ್ಗದಿಂದ ತಪಸ್ಸನ್ನು ಮಾಡಿದರೆ ಈ ಲೋಕದಲ್ಲಿ ಕ್ಲೇಶವೂ, ಮರಣಾನಂತರದಲ್ಲಿ ಅಶುಭವಾದ ಗತಿಯೂ ಉಂಟಾಗುತ್ತದೆ.

ಅಧರ್ಮ್ಯಮಯಶಸ್ಯಂ ಚ ತಪಃ ಶೂದ್ರೇ ಪ್ರತಿಷ್ಠಿತಮ್ ।
ಅಮಾರ್ಗೇಣ ತಪಸ್ತಪ್ತ್ವಾ ಮ್ಲೇಚ್ಛೇಷು ಫಲಮಶ್ನುತೇ ॥೧೩॥

ಶೂದ್ರನನ್ನು ಆಶ್ರಯಿಸಿದ ತಪಸ್ಸು ಧರ್ಮಬಾಹಿರವಾದುದು ಮತ್ತು ಅಕೀರ್ತಿಕರವಾದುದು. ಅಮಾರ್ಗದಿಂದ ತಪಸ್ಸನ್ನು ಮಾಡಿದರೆ ಮ್ಲೇಚ್ಛಯೋನಿಯಲ್ಲಿ ಜನ್ಮವುಂಟಾಗುತ್ತದೆ.

ಅನ್ಯಥಾ ವರ್ತಮಾನೋ ಹಿ ನ ಶೂದ್ರೋ ಧರ್ಮಮರ್ಹತಿ ।
ಅಮಾರ್ಗೇಣ ಪ್ರಯಾತಾನಾಂ ಪ್ರತ್ಯಕ್ಷಾದುಪಲಭ್ಯತೇ ।
ಚಾತುರ್ವರ್ಣ್ಯವ್ಯಪೇತಾನಾಂ ಜಾತಿಮೂರ್ತಿಪರಿಗ್ರಹಃ ॥೧೪॥

ಬೇರೆ ರೀತಿಯಲ್ಲಿ ಬದುಕುವ ಶೂದ್ರನಿಗೆ ಧರ್ಮಾನುಷ್ಠಾನ ಯೋಗ್ಯತೆ ಇಲ್ಲ. ಅಮಾರ್ಗದಿಂದ ಹೋಗುವವರಿಗೆ ಚಾತುರ್ವರ್ಣ್ಯದಿಂದ ಹೊರಗಿರುವ ಮ್ಲೇಚ್ಛಾದಿ ಜಾತಿಯೂ, ಅಂತಹ ಆಕಾರವೂ ಪ್ರತ್ಯಕ್ಷದಿಂದಲೇ ಕಂಡುಬರುತ್ತದೆ.

ತಥಾ ತೇ ಹಿ ಶಕಾಶ್ಚೀನಾಃ ಕಾಂಬೋಜಾಃ ಪಾರದಾಸ್ತಥಾ ।
ಶಬರಾಃ ಪಪ್ಲವಾಶ್ಚೈವ ತುಷಾರಯವನಾಸ್ತಥಾ ॥೧೫॥

ದಾರ್ವಾಶ್ಚ ದರದಾಶ್ಚೈವ ಉಜ್ಜಿಹಾನಾಸ್ತಥೇತರಾಃ ।
ವೇಣಾಶ್ಚ ಕಂಕಣಾಶ್ಚೈವ ಸಿಂಹಲಾ ಮದ್ರಕಾಸ್ತಥಾ ॥೧೬॥

ಕಿಷ್ಕಿಂಧಕಾಃ ಪುಳಿಂದಾಶ್ಚ ಕಹ್ವಾಶ್ಚಾಂಧ್ರಾಃ ಸನೀರಗಾಃ ।
ಗಂಧಿಕಾ ದ್ರಮಿಡಾಶ್ಚೈವ ಬರ್ಬರಾಶ್ಚೂಚುಕಾಸ್ತಥಾ ॥೧೭॥

ಕಿರಾತಾಃ ಪಾರ್ವತೇಯಾಶ್ಚ ಕೋಲಾಶ್ಚೋಳಾಃ ಸಖಾಷಕಾಃ ।
ಆರೂಕಾಶ್ಚೈವ ದೋಹಾಶ್ಚ ಯಾಶ್ಚಾನ್ಯಾ ಮ್ಲೇಚ್ಛಜಾತಯಃ ॥೧೮॥

ವಿಕೃತಾ ವಿಕೃತಾಚಾರಾ ದೃಶ್ಯಂತೇ ಕ್ರೂರಬುದ್ಧಯಃ ।
ಅಮಾರ್ಗೇಣಾಶ್ರಿತಾ ಧರ್ಮಂ ತತೋ ಜಾತ್ಯಂತರಂ ಗತಾಃ ॥೧೯॥

ಹಾಗೆಯೇ ಶಕರೂ, ಚೀನರೂ, ಕಾಂಬೋಜರೂ, ಪಾರದರೂ, ಶಬರರೂ, ಪಪ್ಲವರೂ, ತುಷಾರರೂ, ಯವನರೂ, ದಾರ್ವರೂ, ದರದರೂ, ಉಜ್ಜಿಹಾನರೂ ಮತ್ತು ಉಳಿದ ವೀರರೂ, ಕಂಕಣರೂ, ಸಿಂಹಲರೂ, ಮದ್ರಕರೂ, ಕಿಷ್ಕಿಂಧಕರೂ, ಪುಳಿಂದರೂ, ಕಹ್ವರೂ, ಆಂಧ್ರರೂ, ನೀರದರೂ, ಗಂಧಿಕರೂ, ದ್ರವಿಡರೂ, ಬರ್ಬರರೂ, ಚೂಚುಕರೂ, ಕಿರಾತರೂ, ಪಾರ್ವತೇಯರೂ, ಕೋಲರೂ, ಚೋಳರೂ, ಖಾಷಕರೂ, ಆರೂಕರೂ, ದೋಹರೂ ಮತ್ತು ಉಳಿದ ಮ್ಲೇಚ್ಛ ಜಾತಿಯವರೂ ವಿಕಾರವಾದ ರೂಪವನ್ನೂ, ವಿಕಾರವಾದ ಆಕಾರವನ್ನು ಹೊಂದಿ ಕ್ರೂರ ಬುದ್ಧಿಯವರಾಗಿ ಕಂಡುಬರುತ್ತಾರೆ. ಅಮಾರ್ಗದಿಂದ ಧರ್ಮವನ್ನು ಸಾಧಿಸಲು ಹೋದ ಅವರು ಆ ಕಾರಣದಿಂದ ಹೀನಯೋನಿಗಳಲ್ಲಿ ಜನಿಸಿದರು.

ಅಮಾರ್ಗೋಪಾರ್ಜಿತಸ್ಯೈತತ್ ತಪಸೋ ವಿದಿತಂ ಫಲಮ್ ।
ನ ನಶ್ಯತಿ ಕೃತಂ ಕರ್ಮ ಶುಭಂ ವಾ ಯದಿ ವಾऽಶುಭಮ್ ॥೨೦॥

ಅಮಾರ್ಗದಿಂದ ಗಳಿಸಿದ ತಪಸ್ಸಿಗೆ ಇಂತಹ ಫಲವು ಪ್ರಸಿದ್ಧವಾಗಿದೆ. ಮಾಡಿದ ಕರ್ಮವು ಶುಭವಾಗಲೀ ಅಥವಾ ಅಶುಭವಾಗಲೀ ಅದು ಫಲವನ್ನು ಕೊಡದೆ ನಾಶವನ್ನು ಹೊಂದುವುದಿಲ್ಲ.

ಅತ್ರಾಪ್ಯೇತೇ ವಸು ಪ್ರಾಪ್ಯ ವಿಕರ್ಮತಪಸಾರ್ಜಿತಮ್ ।
ಪಾಷಂಡಾನರ್ಚಯಿಷ್ಯಂತಿ ಧರ್ಮಕಾಮಾ ವೃಥಾಶ್ರಮಾಃ ॥೨೧॥

ಇಂದಿಗೂ ಕೂಡ ಇಂತಹವರು ವಿಕರ್ಮರೂಪವಾದ ತಪಸ್ಸಿನಿಂದ ಗಳಿಸಿದ ಧನದಿಂದ ಧರ್ಮವನ್ನು ಗಳಿಸಲು ಬಯಸಿ ವ್ಯರ್ಥಶ್ರಮವನ್ನು ಪಟ್ಟು ಪಾಷಂಡರನ್ನು ಪೂಜಿಸುತ್ತಾರೆ.

ಏವಂ ಚತುರ್ಣಾಂ ವರ್ಣಾನಾಮಾಶ್ರಮಾಣಾಂ ಚ ಪಾರ್ಥಿವ ।
ವಿಪರೀತಂ ವರ್ತಮಾನಾ ಮ್ಲೇಚ್ಛಾ ಜಾಯಂತೇऽಬುದ್ಧಯಃ ॥೨೨॥

ಎಲೈ ರಾಜನೇ, ಹೀಗೆ ನಾಲ್ಕು ವರ್ಣದವರೂ ಮತ್ತು ಆಶ್ರಮದವರೂ ತಮ್ಮ ವರ್ಣಾಶ್ರಮಗಳಿಗೆ ವಿರುದ್ಧವಾಗಿ ನಡೆದುಕೊಂಡರೆ ಅವಿವೇಕಿಗಳಾಗಿ ಮ್ಲೇಚ್ಛರಾಗಿ ಜನಿಸುತ್ತಾರೆ.

ಅಧ್ಯಾಯಧನಿನೋ ವಿಪ್ರಾಃ ಕ್ಷತ್ರಿಯಾಣಾಂ ಬಲಂ ಧನಮ್ ।
ವಣಿಕೃಷಿಶ್ಚ ವೈಶ್ಯಾನಾಂ ಶೂದ್ರಾಣಾಂ ಪರಿಚಾರಿಕಾ ॥೨೩॥

ವಿಪ್ರರಿಗೆ ಅಧ್ಯಯನವೇ ಧನ. ಕ್ಷತ್ರಿಯರಿಗೆ ಬಲವೇ ಧನ. ವೈಶ್ಯರಿಗೆ ವಾಣಿಜ್ಯ ಮತ್ತು ಕೃಷಿಯೂ, ಶೂದ್ರರಿಗೆ ಪರಿಚರ್ಯೆಯೂ ಧನ.

ವ್ಯುಚ್ಛೇದಾತ್ ತಸ್ಯ ಧರ್ಮಸ್ಯ ನಿರಯಾಯೋಪಪದ್ಯತೇ ।
ತತೋ ಮ್ಲೇಚ್ಛಾ ಭವಂತ್ಯೇತೇ ನಿರ್ಘೃಣಾ ಧರ್ಮವರ್ಜಿತಾಃ ।
ಪುನಶ್ಚ ನಿರಯಸ್ತೇಷಾಂ ತಿರ್ಯಗ್ಯೋನಿಶ್ಚ ಶಾಶ್ವತೀ ॥೨೪॥

ಆ ಧರ್ಮವನ್ನು ಲೋಪ ಮಾಡುವುದರಿಂದ ನರಕಪ್ರಾಪ್ತಿಯಾಗುತ್ತದೆ. ಅನಂತರ ಅವರು ದಯಾರಹಿತರೂ, ಧರ್ಮವರ್ಜಿತರೂ ಆದ ಮ್ಲೇಚ್ಛರಾಗಿ ಜನಿಸುತ್ತಾರೆ. ಅವರಿಗೆ ಪುನಃ ನರಕವೂ ಮತ್ತು ಪುನಃ ಶಾಶ್ವತವಾದ ತಿರ್ಯಗ್ಯೋನಿಯೂ ಉಂಟಾಗುತ್ತದೆ.

ಯೇ ತು ಸತ್ಪಥಮಾಸ್ಥಾಯ ವರ್ಣಾಶ್ರಮಕೃತಂ ಪುರಾ ।
ಸರ್ವಾನ್ ವಿಮಾರ್ಗಾನುತ್ಸೃಜ್ಯ ಸ್ವಧರ್ಮವಿಧಿಮಾಶ್ರಿತಾಃ ॥೨೫॥

ಸರ್ವಭೂತದಯಾವಂತೋ ದೈವತದ್ವಿಜಪೂಜಕಾಃ ।
ಶಾಸ್ತ್ರದೃಷ್ಟೇನ ವಿಧಿನಾ ಶ್ರದ್ಧಯಾ ಜಿತಮನ್ಯವಃ ॥೨೬॥

ತೇಷಾಂ ವಿಧಿಂ ಪ್ರವಕ್ಷ್ಯಾಮಿ ಯಥಾವದನುಪೂರ್ವಶಃ ।
ಉಪಾದಾನವಿಧಿಂ ಕೃತ್ಸ್ನಂ ಶುಶ್ರೂಷಾಧಿಗಮಂ ತಥಾ ॥೨೭॥

ಯಾರು ವರ್ಣಾಶ್ರಮಗಳಿಗೆ ವಿಹಿತವಾದ ಸನ್ಮಾರ್ಗವನ್ನು ಅವಲಂಬಿಸಿ, ಎಲ್ಲ ದುರ್ಮಾರ್ಗಗಳನ್ನೂ ಪರಿತ್ಯಜಿಸಿ ತಮ್ಮ ಧರ್ಮವಿಧಿಯನ್ನೇ ಆಶ್ರಯಿಸಿ, ಎಲ್ಲ ಪ್ರಾಣಿಗಳಲ್ಲಿಯೂ ದಯೆಯನ್ನು ಹೊಂದಿ, ಶಾಸ್ತ್ರದೃಷ್ಟವಿಧಾನದಿಂದ ದೇವ-ಬ್ರಾಹ್ಮಣ ಪೂಜಕರಾಗಿ ಶ್ರದ್ಧೆಯಿಂದ ಕೂಡಿ ಕೋಪವನ್ನು ಜಯಿಸಿರುತ್ತಾರೆಯೋ ಅಂತಹವರಿಗೆ ಧರ್ಮದ ವಿಧಿಯನ್ನು ಕ್ರಮವಾಗಿ ಹೇಳುವೆನು. ಅಂತಹವರನ್ನು ಶಿಷ್ಯರಾಗಿ ಸ್ವೀಕಾರ ಮಾಡುವ ಪ್ರಕಾರವನ್ನೂ ಮತ್ತು ಅವರಿಂದ ಪರಿಚರ್ಯವನ್ನು ಪಡೆಯುವ ವಿಧಾನವನ್ನೂ ಹೇಳುವೆನು.

ಶಿಷ್ಟೋಪನಯನಂ ಚೈವ ಮಂತ್ರಾಣಿ ವಿವಿಧಾನಿ ಚ ।
ತಥಾ ಶಿಷ್ಯಪರೀಕ್ಷಾಂ ಚ ಶಾಸ್ತ್ರಪ್ರಾಮಾಣ್ಯದರ್ಶನಾತ್ ॥೨೮॥

ಪ್ರವಕ್ಷ್ಯಾಮಿ ಯಥಾತತ್ವಂ ಯಥಾವದನುಪೂರ್ವಶಃ ।
ಶೌಚಕೃತ್ಯಸ್ಯ ಶೌಚಾರ್ಥಾನ್ಸರ್ವಾನೇವ ವಿಶೇಷತಃ ॥೨೯॥

ಶಿಷ್ಯಪರೀಕ್ಷೆ, ಶಿಷ್ಯನಿಗೆ ಉಪನಯನ, ಶಿಷ್ಯನಿಗೆ ಮಾಡುವ ಮಂತ್ರೋಪದೇಶ ಎಲ್ಲವನ್ನೂ ಕ್ರಮವಾಗಿ ಶಾಸ್ತ್ರಪ್ರಾಮಾಣ್ಯಕ್ಕೆ ಅನುಸಾರವಾಗಿ ಹೇಳುವೆನು. ಶೌಚಕೃತ್ಯಕ್ಕೆ ಸಂಬಂಧಪಟ್ಟ ಎಲ್ಲ ವಿಷಯಗಳನ್ನೂ ವಿಶೇಷವಾಗಿ ಹೇಳುವೆನು.

ಮಹಾಶೌಚಪ್ರಭೃತಯೋ ದೃಷ್ಟಾಸ್ತತ್ತ್ವಾರ್ಥದರ್ಶಿಭಿಃ ।
ತತ್ರಾಪಿ ಶೂದ್ರೋ ಭಿಕ್ಷೂಣಾಮಿದಂ ಶೇಷಂ ಚ ಕಲ್ಪಯೇತ್ ॥೩೦॥

ಮಹಾಶೌಚ ಮೊದಲಾದವುಗಳು ತತ್ತ್ವದರ್ಶಿಗಳಿಂದ ದೃಷ್ಟವಾಗಿವೆ. ಶೂದ್ರನು ಯತಿಗಳಿಗೆ ಆ ವಿಷಯದಲ್ಲಿಯೂ ಮತ್ತು ಬೇರೆ ವಿಷಯದಲ್ಲಿಯೂ ಪರಿಚರ್ಯೆಯನ್ನು ಮಾಡಬೇಕು.

ಭಿಕ್ಷುಭಿಃ ಸುಕೃತಪ್ರಜ್ಞೈಃ ಕೇವಲಂ ಧರ್ಮಮಾಶ್ರಿತೈಃ ।
ಸಮ್ಯಗ್ ದರ್ಶನಸಂಪನ್ನೈರ್ಗತಾಧ್ವನಿ ಹಿತಾರ್ಥಿಭಿಃ ।
ಅವಕಾಶಮಿಮಂ ಮೇಧ್ಯಂ ನಿರ್ಮಿತಂ ಕಾಮವೀರುಧಮ್ ॥೩೧॥

ಒಳ್ಳೆಯ ಪ್ರಜ್ಞೆಯುಳ್ಳವರೂ, ಕೇವಲ ಧರ್ಮವನ್ನು ಆಶ್ರಯಿಸಿದವರೂ, ದಿವ್ಯ ಜ್ಞಾನವನ್ನು ಹೊಂದಿದವರೂ, ಜೀವರ ಹಿತವನ್ನು ಬಯಸುವವರೂ ಆದ ಭಿಕ್ಷುಗಳಿಂದ (ಯತಿಗಳಿಂದ) ನಡೆದ ಮಾರ್ಗದಲ್ಲಿ ಈ ಶುಭವಾದ, ಕೇಳಿದ ಕಾಮವೆಲ್ಲವನ್ನೂ ಕೊಡುವ, ಅವಕಾಶವು ನಿರ್ಮಿತವಾಗಿದೆ.

ನಿರ್ಜನಂ ಸಂವೃತಂ ಬುದ್ಧ್ವಾ ನಿಯತಾತ್ಮಾ ಜಿತೇಂದ್ರಿಯಃ ।
ಸಜಲಂ ಭಾಜನಂ ಸ್ಥಾಪ್ಯ ಮೃತ್ತಿಕಾಂ ಚ ಪರೀಕ್ಷಿತಾಮ್ ॥೩೨॥

ಪರೀಕ್ಷ್ಯ ಭೂಮಿಂ ಮೂತ್ರಾರ್ಥೀ ತತ ಆಸೀತ ವಾಗ್ಯತಃ ।
ಉದಙ್ಮುಖೋ ದಿವಾ ಕುರ್ಯಾದ್ ರಾತ್ರೌ ಚೇದ್ ದಕ್ಷಿಣಾಮುಖಃ ॥

ನಿರ್ಜನವಾದ, ಮರೆಯಾಗಿರುವ ಸ್ಥಳವನ್ನು ನೋಡಿ ಜಿತೇಂದ್ರಿಯನೂ, ಮನೋನಿಗ್ರಹವುಳ್ಳವನೂ ಆದವನು ಜಲಪೂರ್ಣವಾದ ಪಾತ್ರೆಯನ್ನೂ ಮತ್ತು ಪರೀಕ್ಷಿತವಾದ ಮೃತ್ತಿಕೆಯನ್ನೂ ಸ್ವಲ್ಪ ದೂರದಲ್ಲಿಟ್ಟು ಭೂಮಿಯನ್ನು ಪರೀಕ್ಷಿಸಿ ಅಲ್ಲಿ ಮೂತ್ರ ವಿಸರ್ಜನೆಯನ್ನು ಮಾಡಲು ಮೌನವಾಗಿ ಕುಳಿತುಕೊಳ್ಳಬೇಕು. ಹಗಲಿನಲ್ಲಿ ಉತ್ತರಾಭಿಮುಖವಾಗಿಯೂ, ರಾತ್ರಿಯಲ್ಲಿ ದಕ್ಷಿಣಾಭಿಮುಖವಾಗಿಯೂ ಕುಳಿತುಕೊಳ್ಳಬೇಕು.

ಅಂತರ್ಹಿತಾಯಾಂ ಭೂಮೌ ತು ಅಂತರ್ಹಿತಶಿರಾಸ್ತಥಾ ।
ಅಸಮಾಪ್ತೇ ತಥಾ ಶೌಚೇ ನ ವಾಚಂ ಕಿಂಚಿದೀರಯೇತ್ ॥೩೪॥

ಭೂಮಿಯನ್ನು ತೃಣಪರ್ಣಗಳಿಂದ ಮುಚ್ಚಿ, ತನ್ನ ಶಿರಸ್ಸನ್ನು ವಸ್ತ್ರದಿಂದ ಆಚ್ಛಾದಿಸಿ ಶೌಚ ಮುಗಿಯುವವರೆಗೂ ಮಾತನಾಡಬಾರದು.

ಕೃತಕೃತ್ಯಸ್ತಥಾऽऽಚಮ್ಯ ಗಚ್ಛನ್ನೋದೀರಯೇದ್ ವಚಃ ।
ಶೌಚಾರ್ಥಮುಪವಿಷ್ಟಸ್ತು ಮೃದ್ಭಾಜನಪುರಸ್ಕೃತಃ ॥೩೫॥

ಸರ್ವೇ ಕಮಂಡಲುಂ ಗೃಹ್ಯ ಪಾರ್ಶ್ವೇ ದಿಗ್ಭ್ಯೋಮವಾಂತರಮ್ ।
ಶೌಚಂ ಕುರ್ಯಾಚ್ಚನೈರ್ವೀರೋ ಬುದ್ಧಿಪೂರ್ವಮಸಂಕರಮ್ ॥೩೬॥

ಕಾರ್ಯವು ಮುಗಿದ ಮೇಲೆ ಆಚಮನ ಮಾಡಿ ಹೋಗುತ್ತಾ ಮಾತನಾಡಬಹುದು. ಶೌಚಾರ್ಥವಾಗಿ ಕುಳಿತವನು ಮೃತ್ತಿಕೆ ಮತ್ತು ಜಲಪೂರ್ಣವಾದ ಪಾತ್ರೆಯನ್ನು ಪಾರ್ಶ್ವದಲ್ಲಿ ಇಟ್ಟು ಅವಾಂತರ ದಿಕ್ಕುಗಳಿಗೆ ಅಭಿಮುಖವಾಗಿ ಬುದ್ಧಿಪೂರ್ವಕವಾಗಿ ಏನೂ ಸಿಡಿಸಿಕೊಳ್ಳದೆ ಶೌಚವನ್ನು ಮಾಡಬೇಕು. ಪ್ರಧಾನ ದಿಕ್ಕುಗಳಾದ ಉತ್ತರ ಮತ್ತು ದಕ್ಷಿಣ ದಿಕ್ಕುಗಳಿಗೆ ಅಭಿಮುಖವಾಗಿ ಮಾಡಬಾರದು. ವಿದಿಕ್ಕುಗಳಾದ ಈಶಾನ್ಯ, ನೈಋತ್ಯಗಳಿಗೆ ತಿರುಗಿ ಮಾಡಬೇಕು ಎಂದು ಅಭಿಪ್ರಾಯ (ಲಕ್ಷಾಲಂಕಾರ).

ಪಾಣಿನಾ ಶುದ್ಧಮುದಕಂ ಸಂಗೃಹ್ಯ ವಿಧಿಪೂರ್ವಕಮ್ ।
ವಿಪ್ರುಷಶ್ಚ ಯಥಾ ನ ಸ್ಯುರ್ಯಥಾ ಚೋರೂ ನ ಸಂಸ್ಪೃಶೇತ್ ॥೩೭॥

ಹಸ್ತದಿಂದ ಶುದ್ಧವಾದ ನೀರನ್ನು ವಿಧಿಪೂರ್ವಕವಾಗಿ ತೆಗೆದುಕೊಂಡು ಸಣ್ಣ ಹನಿಗಳು ಹಾರಿ ತೊಡೆಗಳಿಗೆ ತಾಕದಂತೆ ಶೌಚವನ್ನು ಮಾಡಬೇಕು.

ಅಪಾನೇ ಮೃತ್ತಿಕಾಸ್ತಿಸ್ರಃ ಪ್ರದೇಯಾಸ್ತ ನುಪೂರ್ವಶಃ ।
ಹಸ್ತಾಭ್ಯಾಂ ಚ ತಥಾ ವಿಪ್ರೋ ಹಸ್ತಂ ಹಸ್ತೇನ ಸಂಸ್ಪೃಶೇತ್ ॥೩೮॥

ಅಪಾನ ದ್ವಾರದಲ್ಲಿ ಮೂರು ಬಾರಿ ಮೃತ್ತಿಕೆಗಳನ್ನು ಒಂದಾದ ಮೇಲೆ ಒಂದರಂತೆ ಕೊಡಬೇಕು. ಹಾಗೆ ಹಸ್ತದಿಂದ ಉಜ್ಜಿ ಅಲ್ಲಿಯೂ ಮೂರು ಮೃತ್ತಿಕೆಗಳನ್ನು ಕೊಡಬೇಕು.

ಅಪಾನೇ ನವ ದೇಯಾಃ ಸ್ಯುರಿತಿ ವೃದ್ಧಾನುಶಾಸನಮ್ ।
ಮೃತ್ತಿಕಾ ದೀಯಮಾನಾ ಹಿ ಶೋಧಯೇದ್ ದೇಶಮಂಜಸಾ ॥೩೯॥

ಅಪಾನ ದ್ವಾರದಲ್ಲಿ ಒಂಬತ್ತು ಮೃತ್ತಿಕೆಗಳನ್ನು ಕೊಡಬೇಕು ಎಂದು ಹಿರಿಯರ ಆದೇಶವಿದೆ. ಮೃತ್ತಿಕೆಯನ್ನು ಲೇಪಿಸುವುದರಿಂದ ಆ ಭಾಗವು ಶುದ್ಧವಾಗುತ್ತದೆ (ಒಂದು ಮೃತ್ತಿಕೆ ಎಂದರೆ ನೆಲ್ಲಿಕಾಯಿ ಪ್ರಮಾಣದ ಒಂದು ಸಣ್ಣ ಮಣ್ಣಿನ ಮುದ್ದೆ).

ತಸ್ಮಾತ್ ಪಾಣಿತಳೇ ದೇಯಾ ಮೃತ್ತಿಕಾಸ್ತು ಪುನಃ ಪುನಃ ।
ಬುದ್ಧಿಪೂರ್ವಂ ಪ್ರಯತ್ನೇನ ಯಥಾ ನೈವ ಸ್ಪೃಶೇತ್ ಸ್ಫಿಜೌ ॥೪೦॥

ಅನಂತರ ಪಾಣಿತಳದಲ್ಲಿ ಪುನಃ ಪುನಃ ಪ್ರಯತ್ನಪೂರ್ವಕವಾಗಿ, ಬುದ್ಧಿಪೂರ್ವಕವಾಗಿ ಪೃಷ್ಠಗಳಿಗೆ ತಾಕದಂತೆ ಮೃತ್ತಿಕೆಯನ್ನು ಕೊಡಬೇಕು.

ಯಥೋದ್ಧೃತೋ ಹಿ ನ ಭವೇತ್ ಕ್ಲೇದಜಃ ಪರಿಧಾನಕೇ ।
ತಥಾ ಗುದಂ ಪ್ರಮಾರ್ಜೇತ ಶೌಚಾರ್ಥಂ ತು ಪುನಃಪುನಃ ॥೪೧॥

ಗುದ ಪ್ರಕ್ಷಾಳನೆಯನ್ನು ಮಾಡಿದ ನೀರು ಕಟಿಗಳನ್ನಾಗಲೀ ಅಥವಾ ವಸ್ತ್ರವನ್ನಾಗಲೀ ಸ್ಪರ್ಶ ಮಾಡದಂತೆ ಎಚ್ಚರಿಕೆಯಿಂದ ಪುನಃ ಪುನಃ ಮೃತ್ತಿಕೆ ಮತ್ತು ಜಲದಿಂದ ಶುದ್ಧಿಯನ್ನು ಮಾಡಬೇಕು.

ಪ್ರತಿಪಾದಂ ತತಸ್ಕೃತ್ವಾ ಶೌಚಮುತ್ಥಾಯ ಕಾರಯೇತ್ ।
ಸವ್ಯೇ ದ್ವಾದಶ ದೇಯಾಃ ಸ್ಯುಃ ತಿಸ್ರಸ್ತಿಸ್ರಃ ಪುನಃ ಪುನಃ ।
ದೇಯಾ ಕೂರ್ಪರಕೇ ಹಸ್ತೇ ಪೃಷ್ಠೇ ಬಂಧೇ ಪುನಃ ಪನಃ ॥೪೨॥

ಅನಂತರ ಎದ್ದು ಪ್ರತಿ ಪಾದವನ್ನು ಶುದ್ಧ ಮಾಡಬೇಕು. ಒಂದೊಂದು ಬಾರಿಗೆ ಮೂರರಂತೆ ಎಡಭಾಗಕ್ಕೆ ಹನ್ನೆರಡು ಮೃತ್ತಿಕೆಗಳನ್ನು ಕೊಡಬೇಕು. ಹಸ್ತದಲ್ಲಿ

ಮೊಣಕೈಯಿಂದ ಹಿಡಿದು ಮಣಿಬಂಧದವರೆಗೆ ಮತ್ತು ಹಸ್ತದ ಅಗ್ರ ಮತ್ತು ಪೃಷ್ಠ ಭಾಗದಲ್ಲಿ ಪುನಃ ಪುನಃ ಮೃತ್ತಿಕೆಯನ್ನು ಕೊಡಬೇಕು.

ತಥೈವ ದಶಕೇ ತ್ವರ್ಧಚತಸ್ರಸ್ತೂಭಯೋರಪಿ ।
ಉಭಯೋರ್ಹಸ್ತಯೋಃ ಸರ್ವಾಸ್ತತ್ರ ಸಪ್ತ ಪ್ರಭಾವಯೇತ್ ॥೪೩॥

ಹಾಗೆಯೇ ವಾಮಹಸ್ತದಲ್ಲಿ ಹತ್ತರ ಅರ್ಧ ಮತ್ತು ನಾಲ್ಕು ಎಂದರೆ ಒಂಬತ್ತು ಮೃತ್ತಿಕೆಗಳನ್ನು ಕೊಡಬೇಕು. ಅನಂತರ ಎರಡು ಕೈಗಳಿಗೂ ಏಳೇಳು ಮೃತ್ತಿಕಾ ಪಿಂಡಗಳಿಂದ ಮೊಣಕೈಯಿಂದ ಹಿಡಿದು ಅಂಗೈಯವರೆಗೆ ಹಸ್ತಗಳನ್ನು ಶುಚೀಕರಿಸಬೇಕು (ಲಕ್ಷಾಲಂಕಾರ).

ತತೋಽನ್ಯಾಂ ಮೃತ್ತಿಕಾಂ ಗೃಹ್ಯ ಕಾರ್ಯಂ ಶೌಚಂ ಪುನಸ್ತಯೋಃ ।
ಹಸ್ತಯೋರೇವಮೇತದ್ಧಿ ಮಹಾಶೌಚಂ ವಿಧೀಯತೇ ।
ತತೋಽನ್ಯಥಾ ನ ಕುರ್ಯಾತ ವಿಧಿರೇಷ ಸನಾತನಃ ॥೪೪॥

ಅನಂತರ ಮೊದಲು ಇಟ್ಟಿದ್ದ ಮೃತ್ತಿಕೆಯನ್ನು ಬಿಟ್ಟು ಬೇರೆ ಮೃತ್ತಿಕೆಯನ್ನು ತೆಗೆದುಕೊಂಡು ಪುನಃ ಎರಡು ಹಸ್ತಗಳಿಗೆ ಶೌಚವನ್ನು ಮಾಡಬೇಕು. ಇದು ಮಹಾಶೌಚವೆಂದು ವಿಧಿಸಲ್ಪಡುತ್ತದೆ. ಇದು ಸನಾತನವಾದ ವಿಧಿ. ಈ ಕ್ರಮವನ್ನು ಬಿಟ್ಟು ಬೇರೆ ಕ್ರಮದಲ್ಲಿ ಮಾಡಬಾರದು.

ಉಪಸ್ಥೇ ಮೂತ್ರಶೌಚಂ ಸ್ಯಾದತ ಊರ್ಧ್ವಂ ವಿಧೀಯತೇ ।
ಅತೋಽನ್ಯಥಾ ತು ಯಃ ಕುರ್ಯಾತ್ ಪ್ರಾಯಶ್ಚಿತ್ತೀಯತೇ ತು ಸಃ ॥

ಮೂತ್ರವಿಸರ್ಜನೆಯನ್ನು ಮಾಡಿದರೂ ಉಪಸ್ಥಕ್ಕೆ ಇಂತಹ ಶೌಚವು ಹೇಳಲ್ಪಡುತ್ತದೆ. ಇದನ್ನು ಬಿಟ್ಟು ಬೇರೆ ರೀತಿಯಲ್ಲಿ ಮಾಡುವವರಿಗೆ ಪ್ರಾಯಶ್ಚಿತ್ತವು ವಿಧಿಸಲ್ಪಟ್ಟಿದೆ.

ಮಲೋಪಹತತಾ ಚೇತ್ ಸ್ಯಾತ್ ದ್ವಿಗುಣಂ ತು ವಿಧೀಯತೇ ।
ಸಹಪಾದಮಥೋರುಭ್ಯಾಂ ಹಸ್ತಶೌಚಮಸಂಶಯಮ್ ॥೪೬॥

ಹಸ್ತ-ಪಾದಗಳಿಗೆ ಮಲದ ನೇರ ಸಂಪರ್ಕ ಉಂಟಾದರೆ ಇದಕ್ಕೆ ಎರಡರಷ್ಟು ಮೃತ್ತಿಕೆಯಿಂದ ಶುದ್ಧಿಯನ್ನು ಮಾಡಬೇಕು. ಮೊದಲು ತೊಡೆಯವರೆಗೂ ಪಾದಗಳನ್ನು ಶುದ್ಧಿಮಾಡಿ ಅನಂತರ ಹಸ್ತಶುದ್ಧಿಯನ್ನು ಮಾಡಬೇಕು ಎಂಬುದರಲ್ಲಿ ಸಂಶಯವಿಲ್ಲ.

ಅವಧೀರಯಮಾಣಸ್ಯ ಸಂಯೋಗ ಉಪಜಾಯತೇ ।
ಯಥಾಯಥಾ ವಿಶುದ್ಧ್ಯೇತ ತತ್ತಥಾ ತದುಪಕ್ರಮೇತ್ ॥೪೭॥

ಶೌಚವಿಧಿಯನ್ನು ನಿರಾಕರಿಸುವವರಿಗೆ ಮಲಸಂಯೋಗ ಉಂಟಾಗುತ್ತದೆ (ಅವರು ಮಾಡಿದ ಯಾವ ಸತ್ಕಾರ್ಯವೂ ಫಲವನ್ನು ಕೊಡುವುದಿಲ್ಲ). ಮುಖ್ಯವಾಗಿ ಶುದ್ಧವಾಗುವವರೆಗೆ ಮೃತ್ತಿಕಾ ಜಲಗಳಿಂದ ಶೋಧನೆ ಮಾಡಬೇಕು.

ಸಕರ್ದಮಾಶುಭಾದ್ಭ್ಯಾಸು ಗೃಹ್ಯಮಾವಿಶ್ಯ ಸಂಕಟಮ್ ।
ಹಸ್ತಯೋರ್ಮೃತ್ತಿಕಾಸ್ತಿಸ್ರಃ ಪಾದಯೋಃ ಷಟ್ ಪ್ರದಾಪಯೇತ್ ॥೪೮॥

ಶೌಚ ಪಾತ್ರೆಗೆ ಮಲಸಂಪರ್ಕವಾಗಿ ಹಸಿಯಾದರೆ ಗ್ರಹಣ ಯೋಗ್ಯವಾದ ಆ ಪಾತ್ರೆಯನ್ನು ತೆಗೆದುಕೊಂಡು ಶುದ್ಧ ಮಾಡಿ ಅನಂತರ ಹಸ್ತಗಳನ್ನು ಮೂರು ಮೃತ್ತಿಕೆಗಳಿಂದಲೂ, ಪಾದಗಳನ್ನು ಆರು ಮೃತ್ತಿಕೆಗಳಿಂದಲೂ ಶೋಧಿಸಬೇಕು (ಲಕ್ಷಾಲಂಕಾರ).

ವಾಮೇ ಕೃತ್ವಾ ಗುದೇ ದದ್ಯಾತ್ ತಿಸ್ರಃ ಪದ್ಭ್ಯಾಂ ತಥೈವ ಚ ।
ಹಸ್ತಶೌಚಂ ಪ್ರಕರ್ತವ್ಯಂ ಮೂತ್ರಶೌಚವಿಧೇಸ್ತಥಾ ॥೪೯॥

ಮೊದಲು ಎಡಗಾಲಿಗೆ ಶೌಚವನ್ನು ಮಾಡಿ, ಅನಂತರ ಗುದಕ್ಕೆ ಮೂರು ಬಾರಿ ಮೃತ್ತಿಕಾಶೌಚವನ್ನು ಮಾಡಿ ಅನಂತರ ಎರಡು ಪಾದಗಳಿಗೂ ಮೃತ್ತಿಕಾ ಶೌಚವನ್ನು ಮಾಡಿ, ಅನಂತರ ಹಸ್ತಗಳಿಗೆ ಶೌಚವನ್ನು ಮಾಡಬೇಕು. ಇದು ಮೂತ್ರ ಶೌಚವಿಧಿಗೆ ಅನುಗುಣವಾದುದು.

ಮೂತ್ರಶೌಚೇ ತಥಾ ಹಸ್ತೌ ಪಾದಾಭ್ಯಾಂ ಚಾನುಪೂರ್ವಶಃ ।
ನೈಷ್ಠಿಕೇ ಸ್ನಾನಶೌಚೇ ತು ಮಹಾಶೌಚಂ ವಿಧೀಯತೇ ॥೫೦॥

ಮೂತ್ರಶೌಚದಲ್ಲಿ ಈ ರೀತಿಯಾಗಿ ಕ್ರಮವಾಗಿ ಹಸ್ತಪಾದಗಳನ್ನು ಮೃಜ್ಜಲಗಳಿಂದ ಶುದ್ಧೀಕರಿಸಬೇಕು. ನೈಷ್ಠಿಕವಾದ ಸ್ನಾನಶೌಚವಾದರೆ ಇದಕ್ಕಿಂತ ದೊಡ್ಡ ಶೌಚವು ವಿಧಿಸಲ್ಪಡುತ್ತದೆ.

ಕ್ಷಾರೌಷರಾಭ್ಯಾಂ ವಸ್ತ್ರಸ್ಯ ಕುರ್ಯಾಚ್ಛೌಚಂ ಮೃದಾ ಸಹ ।
ಲೇಪಗಂಧಾಪನಯನಮಮೇಧ್ಯಸ್ಯ ವಿಧೀಯತೇ ॥೫೧॥

ವಸ್ತ್ರಕ್ಕೆ ಮಲಸಂಪರ್ಕವಾದರೆ ಉಪ್ಪು, ಮರಳು ಮತ್ತು ಮಣ್ಣುಗಳಿಂದ ಲೇಪ ಗಂಧವು ನಾಶವನ್ನು ಹೊಂದುವವರೆಗೂ ಶೌಚವು ವಿಧಿಸಲ್ಪಡುತ್ತದೆ.

ಸ್ನಾನಶಾಟ್ಯಾಂ ಮೃದಸ್ತಿಸ್ರೋ ಹಸ್ತಾಭ್ಯಾಂ ಚಾನುಪೂರ್ವಶಃ ।
ಶೌಚಂ ಪ್ರಯತ್ನತಃ ಕೃತ್ವಾ ಕಂಪಮಾನಃ ಸಮುದ್ಧರೇತ್ ॥೫೨॥

ಸ್ನಾನಶಾಟಿಯಲ್ಲಿ (ಉಟ್ಟ ವಸ್ತ್ರದಲ್ಲಿ ಅಂತಹ ಸಂದರ್ಭದಲ್ಲಿ) ಮೂರು ಮೃತ್ತಿಕೆಗಳನ್ನು ಮತ್ತು ಹಸ್ತಗಳಿಗೆ ಕ್ರಮವಾಗಿ ಮೂರು ಮೃತ್ತಿಕೆಗಳನ್ನು ಕೊಟ್ಟು ಪ್ರಯತ್ನ ಪೂರ್ವಕವಾಗಿ ಶುದ್ಧ ಮಾಡಿ ವಸ್ತ್ರವನ್ನು ಜಾಡಿಸಿ ಮೇಲಕ್ಕೆತ್ತಬೇಕು.

ದೇಯಾಶ್ಚತಸ್ರಸ್ತಿಸ್ರೋ ವಾ ದ್ವೇ ವಾऽಪ್ಯೇಕಾಂ ತಥಾऽऽಪದಿ ।
ಕಾಲಮಾಸಾದ್ಯ ದೇಶಂ ಚ ಶೌಚಸ್ಯ ಗುರುಲಾಘವಮ್ ॥೫೩॥

ಶೌಚದ ಗೌರವಲಾಘವಗಳನ್ನು ತಿಳಿದುಕೊಂಡು, ಕಾಲದ ಮಿತಿಯನ್ನು ತಿಳಿದುಕೊಂಡು ಕೆಲವೊಮ್ಮೆ ನಾಲ್ಕು, ಕೆಲವೊಮ್ಮೆ ಮೂರು, ಕೆಲವೊಮ್ಮೆ ಎರಡು, ಆಪತ್ತಿನಲ್ಲಿ ಒಂದು ಹೀಗೆ ಮೃತ್ತಿಕೆಯನ್ನುಪಯೋಗಿಸಿ ಶೌಚವನ್ನು ಮಾಡಬೇಕು.

ವಿಧಿನಾऽನೇನ ಶೌಚಂ ತು ನಿತ್ಯಂ ಕುರ್ಯಾದತಂದ್ರಿತಃ ।
ಅವಿಪ್ರೇಕ್ಷನ್ನಸಮ್ಭ್ರಾಂತಃ ಪಾದೌ ಪ್ರಕ್ಷಾಲ್ಯ ತತ್ಪರಃ ॥೫೪॥

ಸೋಮಾರಿತನವಿಲ್ಲದೆ ದಿಕ್ಕುಗಳನ್ನು ನೋಡದೆ, ಗಾಬರಿಗೊಳ್ಳದೆ ಈ ರೀತಿಯಿಂದ ಶೌಚವನ್ನು ಮಾಡಿ, ಶೌಚದಲ್ಲೇ ತಾತ್ಪರ್ಯವುಳ್ಳವನಾಗಿ ಪಾದಗಳನ್ನು ತೊಳೆದುಕೊಳ್ಳಬೇಕು.

ಅಪ್ರಕ್ಷಾಲಿತಪಾದಸ್ತು ಪಾಣಿನಾऽऽಪಾದಬಂಧನಾತ್ ।
ಅಧಸ್ತಾದುಪರಿಷ್ಟಾಚ್ಚ ತತಃ ಪಾಣಿಮುಪಸ್ಪೃಶೇತ್ ॥೫೫॥

ಪಾದಗಳನ್ನು ತೊಳೆದುಕೊಳ್ಳದಿದ್ದವನು ಮೊದಲು ಹಸ್ತದಿಂದ ಗುಳ್ಫದವರೆಗೂ (ಮಣಿಗಂಟಿನವರೆಗೂ) ಶೋಧಿಸಿಕೊಂಡು ಅನಂತರ ಹಸ್ತಗಳನ್ನು ಅಧೋಭಾಗದಲ್ಲಿಯೂ ಮತ್ತು ಊರ್ಧ್ವಭಾಗದಲ್ಲಿಯೂ ಶೋಧಿಸಬೇಕು.

ಮನೋಗತಾಸ್ತು ನಿಶ್ಶಬ್ದಾ ನಿಶ್ಶಬ್ದಂ ತ್ರಿರಪಃ ಪಿಬೇತ್ ।
ದ್ವಿರ್ಮುಖಂ ಪರಿಮೃಜ್ಯಾಚ್ಚ ಖಾನಿ ಚೋಪಸ್ಪೃಶೇದ್ ಬುಧಃ ॥೫೬॥

ಮನಸ್ಸಿನಲ್ಲಿಯೇ ಹೇಳುವ ಮಂತ್ರಗಳು (ವಿದ್ಯೆಗಳು) ನಿಶ್ಶಬ್ದವಾಗಿರುತ್ತವೆ. ಹಾಗೆಯೇ ನಿಶ್ಶಬ್ದವಾಗಿ ಮೂರು ಬಾರಿ ನೀರನ್ನು ಕುಡಿಯಬೇಕು (ಆಚಮನವನ್ನು ಮಾಡಬೇಕು). ಎರಡು ಬಾರಿ ಮುಖವನ್ನು ಒರೆಸಿಕೊಂಡು ವಿವೇಕಿಯಾದವನು ಇಂದ್ರಿಯಗಳನ್ನು ಸ್ಪರ್ಶಿಸಬೇಕು.

ಋಗ್ವೇದಂ ತೇನ ಪ್ರೀಣಾತಿ ಪ್ರಥಮಂ ಯಃ ಪಿಬೇದಪಃ ।
ದ್ವಿತೀಯಂ ತು ಯಜುರ್ವೇದಂ ತೃತೀಯಂ ಸಾಮ ಏವ ಚ ॥೫೭॥

ಮೊದಲನೆಯ ಜಲಪಾನದಿಂದ ಅವನು ಋಗ್ವೇದವನ್ನು ಸಂತೋಷಪಡಿಸುತ್ತಾನೆ. ದ್ವಿತಿಯ ಜಲಪಾನದಿಂದ ಯಜುರ್ವೇದವನ್ನೂ, ತೃತೀಯ ಜಲಪಾನದಿಂದ ಸಾಮವೇದವನ್ನೂ ಸಂತೋಷಪಡಿಸುತ್ತಾನೆ.

ಮೃಜ್ಯತೇ ಪ್ರಥಮಂ ತೇನ ಅಥರ್ವಾ ಪ್ರೀತಿಮಾಪ್ನುಯಾತ್ ।
ದ್ವಿತೀಯೇನೇತಿಹಾಸಂ ಚ ಪುರಾಣಸ್ಮೃತಿದೇವತಾಃ ॥೫೮॥

ಮೊದಲನೆಯ ಹಸ್ತಪ್ರಕ್ಷಾಳನೆಯನ್ನು ಮಾಡಿಕೊಳ್ಳುವುದರಿಂದ ಅಥರ್ವವೇದವನ್ನು ಸಂತೋಷಪಡಿಸುತ್ತಾನೆ. ಎರಡನೆಯ ಬಾರಿ ಮಾಡುವುದರಿಂದ ಇತಿಹಾಸ- ಪುರಾಣ ಮತ್ತು ದೇವತೆಗಳನ್ನು ಸಂತೋಷಪಡಿಸುತ್ತಾನೆ.

ಯಚ್ಚಕ್ಷುಷಿ ಸಮಾಧತ್ತೇ ತೇನಾದಿತ್ಯಂ ತು ಪ್ರೀಣಯೇತ್ ।
ಪ್ರೀಣಾತಿ ವಾಯುಂ ಘ್ರಾಣಂ ಚ ದಿಶಶ್ಚಾಪ್ಯಥ ಶ್ರೋತ್ರಯೋಃ ॥೫೯॥

ಕಣ್ಣುಗಳಿಗೆ ನೀರನ್ನು ಹಚ್ಚಿಕೊಳ್ಳುವುದರಿಂದ ಸೂರ್ಯನನ್ನು ಸಂತೋಷ ಪಡಿಸುತ್ತಾನೆ. ಘ್ರಾಣಕ್ಕೆ ಹಚ್ಚಿಕೊಳ್ಳುವುದರಿಂದ ವಾಯುವನ್ನೂ, ಶ್ರೋತ್ರಕ್ಕೆ ಹಚ್ಚಿಕೊಳ್ಳುವುದರಿಂದ ದಿಗ್ದೇವತೆಗಳನ್ನೂ ಸಂತೋಷಪಡಿಸುತ್ತಾನೆ.

ಬ್ರಹ್ಮಾಣಂ ತೇನ ಪ್ರೀಣಾತಿ ಯನ್ಮೂರ್ಧ್ನಿ ಸಮಾಪಯೇತ್ ।
ಸಮುತ್ಕ್ಷಿಪತಿ ಚಾಪೋರ್ಧ್ವಮಾಕಾಶಂ ತೇನ ಪ್ರೀಣಯೇತ್ ॥೬೦॥

ಶಿರಸ್ಸನ್ನು ಸ್ಪರ್ಶ ಮಾಡುವುದರಿಂದ ಬ್ರಹ್ಮದೇವರನ್ನು ಸಂತೋಷ ಪಡಿಸುತ್ತಾನೆ. ಜಲವನ್ನು ಮೇಲ್ಮುಖವಾಗಿ ಎರಚುವುದರಿಂದ ಆಕಾಶವನ್ನು ಸಂತೋಷಪಡಿಸುತ್ತಾನೆ.

ಪ್ರೀಣಾತಿ ವಿಷ್ಣುಂ ಪದ್ಭ್ಯಾಂ ತು ಸಲಿಲಂ ವೈ ಸಮಾದಧತ್ ।
ಪ್ರಾಙ್ಮುಖೋದಙ್ಮುಖೋ ವಾऽಪಿ ಅಂತರ್ಜಾನುರುಪಸ್ಪೃಶೇತ್ ॥೬೧॥

ಪಾದಗಳಿಗೆ ನೀರನ್ನು ಸ್ಪರ್ಶಿಸುವುದರಿಂದ ವಿಷ್ಣುವನ್ನು ಸಂತೋಷ ಪಡಿಸುತ್ತಾನೆ. ಆಚಮನವನ್ನು ಮಾಡುವವನು ಪೂರ್ವಾಭಿಮುಖವಾಗಿ ಅಥವಾ ಉತ್ತರಾಭಿಮುಖವಾಗಿ ಕುಳಿತು ಮಂಡಿಗಳ ಮಧ್ಯೆ ಕೈಯನ್ನು ತಂದು ಆಚಮನ ಮಾಡಬೇಕು.

ವ್ಯಾಖ್ಯಾನ ವಿಶೇಷ– ಈ ಆಚಮನ ಕ್ರಮವು ಉಡುಪಿಯ ಕಡೆಯಲ್ಲಿ ಮಾಡುವ ಆಚಮನ ಕ್ರಮಕ್ಕೆ ಸರಿ ಹೊಂದುವುದಾಗಿದೆ. ಆ ಆಚಮನ ಕ್ರಮವು ಹೀಗಿದೆ– **'ಋಗ್ವೇದಾಯ ಸ್ವಾಹಾ । ಯಜುರ್ವೇದಾಯ ಸ್ವಾಹಾ । ಸಾಮವೇದಾಯ ಸ್ವಾಹಾ ।'** ಎಂದು ಹೇಳಿ ಮೂರು ಬಾರಿ ನೀರಿನ ಪ್ರಾಶನ. **'ಅಥರ್ವಣ ವೇದಾಯ ನಮಃ । ಇತಿಹಾಸ-ಪುರಾಣೇಭ್ಯೋ ನಮಃ'** ಎಂದು ಕರತಲ ಕರಪೃಷ್ಠಗಳಿಗೆ ನೀರಿನಿಂದ ಮಾರ್ಜನ. **'ಅಗ್ನಯೇ ನಮಃ ಅಗ್ನಯೇ ನಮಃ'** ಎಂದು ಮುಖ, **'ವಾಯವೇ ನಮಃ ವಾಯವೇ ನಮಃ'** ಎಂದು ನಾಸಿಕ, **'ಸೂರ್ಯಾಯ ನಮಃ, ಚಂದ್ರಾಯ ನಮಃ'** ಎಂದು ಕಣ್ಣುಗಳು, **'ದಿಗ್ಭ್ಯೋ ನಮಃ ದಿಗ್ಭ್ಯೋ ನಮಃ'** ಎಂದು ಶ್ರೋತ್ರಗಳು, **'ಇಂದ್ರಾಯ ನಮಃ ಇಂದ್ರಾಯ ನಮಃ'** ಎಂದು ಹಸ್ತಗಳು, **'ವಿಷ್ಣವೇ ನಮಃ ವಿಷ್ಣವೇ ನಮಃ'** ಎಂದು ಜಾನುಗಳು, **'ಪೃಥಿವ್ಯೈ ನಮಃ ಪೃಥಿವ್ಯೈ ನಮಃ'** ಎಂದು ಪಾದಗಳು, **'ಆತ್ಮನೇ ನಮಃ ಅಂತರಾತ್ಮನೇ ನಮಃ ಪರಮಾತ್ಮನೇ ನಮಃ'** ಎಂದು ನಾಭಿ, ಹೃದಯ ಮತ್ತು ಶಿರಸ್ಸನ್ನು ಸ್ಪರ್ಶಿಸುವುದು. ಈ ರೀತಿ ಇಲ್ಲಿ ಹೇಳಿದ ಕ್ರಮಕ್ಕೆ ಸ್ವಲ್ಪ ವ್ಯತ್ಯಾಸದಿಂದ ಅನುಗುಣವಾಗಿದೆ.

ಸರ್ವತ್ರ ವಿಧಿರಿತ್ಯೇಷ ಭೋಜನಾದಿಷು ನಿತ್ಯಶಃ ।
ಅನ್ನೇಷು ದಂತಲಗ್ನೇಷು ಉಚ್ಛಿಷ್ಟಃ ಪುನರಾಚಮೇತ್ ॥೬೨॥

ಭೋಜನಾದಿಗಳಲ್ಲಿಯೂ ಸಹ ಯಾವಾಗಲೂ ಇದೇ ವಿಧಿಯಿದೆ. ಆಹಾರ ಪದಾರ್ಥಗಳು ಹಲ್ಲಿನಲ್ಲಿ ಸಿಕ್ಕಿಕೊಂಡಿದ್ದರೆ ಅದು ಉಚ್ಛಿಷ್ಟವಾಗುತ್ತದೆ. ಅದನ್ನು ಉಗುಳಿ ಬಾಯನ್ನು ಶುದ್ಧ ಮಾಡಿಕೊಂಡು ಪುನಃ ಆಚಮನ ಮಾಡಬೇಕು.

ವಿಧಿರೇಷ ಸಮುದ್ದಿಷ್ಟಃ ಶೌಚೇ ಚಾಭ್ಯುಕ್ಷಣಂ ಸ್ಮೃತಮ್ ।
ಶೂದ್ರಸ್ಯೈಷ ವಿಧಿರ್ದ್ಯಷ್ಟೋ ಗೃಹಾನ್ನಿಷ್ಕ್ರಮತಸ್ತತಃ ॥೬೩॥

ಇದು ಶೌಚದಲ್ಲಿ ಹೇಳಲ್ಪಟ್ಟ ವಿಧಿ. ನೀರನ್ನು ಚುಮುಕಿಸುವುದು ಶೌಚದಲ್ಲಿ ಹೇಳಲ್ಪಡುತ್ತದೆ. ಈ ವಿಧಿಯು ಶೂದ್ರನಿಗೂ ಮತ್ತು ಗೃಹಸ್ಥಾಶ್ರಮವನ್ನು ತೊರೆದ ಯತಿಗೂ ಸಮಾನವಾಗಿದೆ.

ನಿತ್ಯಂ ತ್ವಲುಪ್ತಶೌಚೇನ ವರ್ತಿತವ್ಯಂ ಕೃತಾತ್ಮನಾ ।
ಯಶಸ್ಕಾಮೇನ ಭಿಕ್ಷುಭ್ಯಃ ಶುದ್ರೇಣಾತ್ಮಹಿತಾರ್ಥಿನಾ ॥೬೪॥

ಯತಿಗಳಿಂದ ತನ್ನ ಹಿತವನ್ನು ಬಯಸಿ ಕೀರ್ತಿಯನ್ನು ಬಯಸುವ ಶೂದ್ರನು ನಿತ್ಯವೂ ಶೌಚವನ್ನು ಬಿಡದೆ ಶರೀರವನ್ನು ಶೋಧಿಸಿಕೊಂಡು ಇರಬೇಕು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ಏಕಚತ್ವಾರಿಂಶೋತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ನಲವತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ನಲವತ್ತೆರಡನೆಯ ಅಧ್ಯಾಯ

ಪರಾಶರಗೀತೆ- ಶೂದ್ರಶುಶ್ರೂಷೆಯ ಪ್ರಕಾರಕಥನ

ಪರಾಶರಃ

ಕ್ಷತ್ರಾ ಆರಂಭಯಜ್ಞಾಸ್ತು ವೀರ್ಯಯಜ್ಞಾ ವಿಶಃ ಸ್ಮೃತಾಃ ।
ಶೂದ್ರಾ ಪರಿಚರಾಯಜ್ಞಾ ಜಪಯಜ್ಞಾಸ್ತು ಬ್ರಾಹ್ಮಣಾಃ ॥೧॥

ಪರಾಶರ- ಕ್ಷತ್ರಿಯರು ಆರಂಭ ಯಜ್ಞವುಳ್ಳವರು (ದುಷ್ಟಶಿಕ್ಷಣ, ಶಿಷ್ಟರಕ್ಷಣೆಯೇ ಕ್ಷತ್ರಿಯರ ಯಜ್ಞ). ವೈಶ್ಯರು ವೀರ್ಯಯಜ್ಞರು, ಶೂದ್ರರು ಪರಿಚಾರಯಜ್ಞರು, ಬ್ರಾಹ್ಮಣರು ಜಪಯಜ್ಞರು.

ಶುಶ್ರೂಷಾಜೀವಿನಃ ಶೂದ್ರಾ ವೈಶ್ಯಾ ವಿಪಣಿಜೀವಿನಃ ।
ಅನಿಷ್ಟನಿಗ್ರಹಃ ಕ್ಷತ್ರಾ ವಿಪ್ರಾಃ ಸ್ವಾಧ್ಯಾಯಜೀವಿನಃ ॥೨॥

ಶೂದ್ರರು ಶುಶ್ರೂಷೆಯಿಂದ ಜೀವಿಸುವವರು. ವೈಶ್ಯರು ವ್ಯಾಪಾರದಿಂದ ಜೀವಿಸುವವರು. ಕ್ಷತ್ರಿಯರು ದುಷ್ಟನಿಗ್ರಹದಿಂದ ಜೀವಿಸುವವರು. ಬ್ರಾಹ್ಮಣರು ವೇದಶಾಸ್ತ್ರಾಧ್ಯಯನದಿಂದ ಜೀವಿಸುವವರು.

ತಪಸಾ ಶೋಭತೇ ವಿಪ್ರೋ ರಾಜನ್ಯಃ ಪಾಲನಾದಿಭಿಃ ।
ಆತಿಥ್ಯೇನ ತಥಾ ವೈಶ್ಯಃ ಶೂದ್ರೋ ದಾಸ್ಯೇನ ಶೋಭತೇ ॥೩॥

ಬ್ರಾಹ್ಮಣನು ತಪಸ್ಸಿನಿಂದ ಶೋಭಿಸುತ್ತಾನೆ, ಕ್ಷತ್ರಿಯನು ಪಾಲನದಿಂದ ಶೋಭಿಸುತ್ತಾನೆ, ವೈಶ್ಯನು ಆತಿಥ್ಯದಿಂದ ಶೋಭಿಸುತ್ತಾನೆ, ಶೂದ್ರನು ದಾಸ್ಯದಿಂದ ಶೋಭಿಸುತ್ತಾನೆ.

ಯತಾತ್ಮನಾ ತು ಶೂದ್ರೇಣ ಶುಶ್ರೂಷಾ ನಿತ್ಯಮೇವ ಚ ।
ಕರ್ತವ್ಯಾ ತ್ರಿಷು ವರ್ಣೇಷು ಪ್ರಾಯೇಣಾಶ್ರಮವಾಸಿಷು ॥೪॥

ಮನೋಜಯವುಳ್ಳ ಶೂದ್ರನು ಯಾವಾಗಲೂ ಮೂರು ವರ್ಣದವರ ಅದರಲ್ಲಿಯೂ ಆಶ್ರಮವಾಸಿಗಳ ಸೇವೆಯನ್ನು ಮಾಡಬೇಕು.

ಅಶಕ್ತೇನ ತ್ರಿವರ್ಗಸ್ಯ ಸೇವ್ಯಾ ಹ್ಯಾಶ್ರಮವಾಸಿನಃ ।
ಯಥಾಶಕ್ಯಂ ಯಥಾಪ್ರಜ್ಞಂ ಯಥಾಧರ್ಮಂ ಯಥಾಶ್ರುತಮ್ ॥೫॥

ವಿಶೇಷೇಣೈವ ಕರ್ತವ್ಯಾ ಶುಶ್ರೂಷಾ ಭಿಕ್ಷುಕಾಶ್ರಮೇ ॥೬॥

ಸ್ವತಃ ಧರ್ಮಾರ್ಥಕಾಮರೂಪವಾದ ತ್ರಿವರ್ಗವನ್ನು ಸಂಪಾದಿಸಲು ಅಶಕ್ತನಾದವನು ಆಶ್ರಮವಾಸಿಗಳನ್ನು ತನ್ನ ಶಕ್ತಿಗೆ, ತನ್ನ ಬುದ್ಧಿಗೆ, ತನ್ನ ಧರ್ಮಕ್ಕೆ, ತನ್ನ ವಿದ್ಯೆಗೆ ಅನುಗುಣವಾಗಿ ಸೇವಿಸಬೇಕು. ವಿಶೇಷವಾಗಿ ಸಂನ್ಯಾಸಿಗಳ ಆಶ್ರಮದಲ್ಲಿ ಸೇವೆಯನ್ನು ಮಾಡಬೇಕು.

ಆಶ್ರಮಾಣಾಂ ತು ಸರ್ವೇಷಾಂ ಚತುರ್ಣಾಂ ಭಿಕ್ಷುಕಾಶ್ರಮಮ್ ।
ಪ್ರಧಾನಮಿತಿ ವರ್ಣ್ಯಂತೇ ಶಿಷ್ಟಾಃ ಶಾಸ್ತ್ರವಿನಿಶ್ಚಯೇ ॥೭॥

ನಾಲ್ಕು ಆಶ್ರಮಗಳಲ್ಲಿ ಸಂನ್ಯಾಸಾಶ್ರಮವೇ ಶ್ರೇಷ್ಠವಾದುದೆಂದು ಶಿಷ್ಟರು ಶಾಸ್ತ್ರ ನಿರ್ಣಯದಿಂದ ಹೇಳಿರುತ್ತಾರೆ.

ಯಚ್ಚೋಪದಿಶ್ಯತೇ ಶಿಷ್ಟೈಃ ಶ್ರುತಿಸ್ಮೃತಿವಿಧಾನತಃ ।
ತಥಾ ಸ್ಥೇಯಮಶಕ್ತೇನ ಸ ಧರ್ಮ ಇತಿ ನಿಶ್ಚಿತಃ ॥೮೪॥

ತಾನೇ ತಿಳಿಯಲು ಅಸಮರ್ಥನಾದವನು ಶಿಷ್ಟರು ಶ್ರುತಿ-ಸ್ಮೃತಿಗೆ ಅನುಸಾರವಾಗಿ ಏನು ಉಪದೇಶವನ್ನು ಮಾಡಿದ್ದಾರೋ ಅದರಂತೆ ಇರುವುದು ಧರ್ಮ ಎಂದು ಸಿದ್ಧವಾಗಿದೆ.

ಅತೋಽನ್ಯಥಾ ತು ಕುರ್ವಾಣಃ ಶ್ರೇಯೋ ನಾಪ್ನೋತಿ ಮಾನವಃ ।
ತಸ್ಮಾದ್ ಭಿಕ್ಷುಷು ಶೂದ್ರೇಣ ಕಾರ್ಯಮಾತ್ಮಹಿತಂ ಸದಾ ॥೯॥

ಮನುಷ್ಯನು ಬೇರೆ ರೀತಿಯಲ್ಲಿನಡೆದುಕೊಂಡರೆ ಶ್ರೇಯಸ್ಸನ್ನು ಹೊಂದುವುದಿಲ್ಲ. ಆದ್ದರಿಂದ ಶೂದ್ರನು ಯತಿಗಳ ಸೇವೆಯನ್ನು ಮಾಡಿ ತನ್ನ ಹಿತವನ್ನು ಮಾಡಿಸಿಕೊಳ್ಳಬೇಕು.

ಇಹ ಯತ್ ಕುರುತೇ ಶ್ರೇಯಸ್ತತ್ ಪ್ರೇತ್ಯ ಸಮುಪಾಶ್ನುತೇ ।
ತಚ್ಚಾನಸೂಯತಾ ಕಾರ್ಯಂ ಕರ್ತವ್ಯಂ ಯದ್ಧಿ ಮನ್ಯತೇ ।
ಅಸೂಯತಾ ಕೃತಸ್ಯೇಹ ಫಲಂ ದುಃಖಾದವಾಪ್ಯತೇ ॥೧೦॥

ಈ ಲೋಕದಲ್ಲಿ ಯಾವ ಸತ್ಕಾರ್ಯವನ್ನು ಮಾಡುತ್ತಾನೆಯೋ ಅದರ ಫಲವನ್ನು ಮರಣಾನಂತರದಲ್ಲಿ ಅನುಭವಿಸುತ್ತಾನೆ. ತಾನು ಏನು ಮಾಡಬೇಕೆಂದು ಇಚ್ಛಿಸುತ್ತಾನೆಯೋ ಅದನ್ನು ಅಸೂಯೆ ಪಡದೆ ಮಾಡಬೇಕು. ಅಸೂಯೆಯಿಂದ ಮಾಡಿದ ಕರ್ಮದ ಫಲವು ದುಃಖದಿಂದ ಪ್ರಾಪ್ತವಾಗುತ್ತದೆ.

ಪ್ರಿಯವಾದೀ ಜಿತಕ್ರೋಧೋ ವೀತತಂದ್ರಿರಮತ್ಸರಃ ॥೧೧॥

ಕ್ಷಮಾವಾನ್ ಶೀಲಸಂಪನ್ನಃ ಸತ್ಯಧರ್ಮಪರಾಯಣಃ ।
ಆಪದ್ಭಾವೇನ ಕುರ್ಯಾದ್ಧಿ ಶುಶ್ರೂಷಾಂ ಭಿಕ್ಷುಕಾಶ್ರಮೇ ॥೧೨॥

ಪ್ರಿಯವನ್ನು ಮಾತನಾಡುವವನಾಗಿ, ಕ್ರೋಧವನ್ನು ಜಯಿಸಿ, ಆಲಸ್ಯ ಮತ್ತು ಮಾತ್ಸರ್ಯದಿಂದ ರಹಿತನಾಗಿ, ಕ್ಷಮಾಶೀಲ ಸಂಪನ್ನನಾಗಿ, ಸತ್ಯಧರ್ಮ ಪರಾಯಣನಾಗಿ, ಆಪತ್ತು ಒದಗಿದಾಗ ಮಾಡುವಂತೆ ಯತಿಗಳ ಆಶ್ರಮದಲ್ಲಿ ಸೇವೆಯನ್ನು ಮಾಡಬೇಕು.

ಅಯಂ ಮೇ ಪರಮೋ ಧರ್ಮಸ್ತ್ವನೇನೇಮಂ ಸುದುಸ್ತರಮ್ ।
ಸಂಸಾರಸಾಗರಂ ಘೋರಂ ತರಿಷ್ಯಾಮಿ ನ ಸಂಶಯಃ ॥೧೩॥

ವಿಭಯೋ ದೇಹಮುತ್ಸೃಜ್ಯ ಯಾಸ್ಯಾಮಿ ಪರಮಾಂ ಗತಿಮ್ ।
ನಾತಃ ಪರಂ ಮಮಾಪ್ಯನ್ಯ ಏಷ ಧರ್ಮಃ ಸನಾತನಃ ॥೧೪॥

ಏವಂ ಸಂಚಿಂತ್ಯ ಮನಸಾ ಶೂದ್ರೋ ಬುದ್ಧಿಸಮಾಧಿನಾ ।
ಕುರ್ಯಾದವಿಮನಾ ನಿತ್ಯಂ ಶುಶ್ರೂಷಾಧರ್ಮಮುತ್ತಮಮ್ ॥೧೫॥

ಇದು ನನ್ನ ಶ್ರೇಷ್ಠವಾದ ಧರ್ಮ. ದಾಟಲು ಅಸಾಧ್ಯವಾದ ಘೋರವಾದ ಸಂಸಾರ ಸಾಗರವನ್ನು ಇದರಿಂದ ದಾಟುವೆನು. ಇದರಲ್ಲಿ ಸಂಶಯವಿಲ್ಲ. ನಾನು ಭಯವಿಲ್ಲದೆ ದೇಹವನ್ನು ತ್ಯಜಿಸಿ ಶ್ರೇಷ್ಠವಾದ ಗತಿಯನ್ನು ಹೊಂದುವೆನು. ನನಗೆ ಇದಕ್ಕಿಂತ ಭಿನ್ನವಾದ ಶ್ರೇಷ್ಠವಾದ ಸನಾತನ ಧರ್ಮವಿಲ್ಲ - ಹೀಗೆ ಸಮಾಧಾನದಿಂದ ಮನಸ್ಸಿನಲ್ಲಿ ಚಿಂತಿಸಿ ಶೂದ್ರನು ಬೇಸರಗೊಳ್ಳದೆ ನಿತ್ಯವೂ ಶ್ರೇಷ್ಠವಾದ ಶುಶ್ರೂಷಾ ಧರ್ಮವನ್ನು ಆಚರಿಸಬೇಕು.

ಶುಶ್ರೂಷಾನಿಯಮೇನೇಹ ಭಾವ್ಯಂ ಶಿಷ್ಟಾಶಿನಾ ಸದಾ ।
ಶಮಾನ್ವಿತೇನ ದಾಂತೇನ ಕಾರ್ಯಾಕಾರ್ಯವಿದಾ ಸದಾ ॥೧೬॥

ಸೇವೆಯ ನಿಯಮವನ್ನು ಹೊಂದಿದವನು, ಅನಿಷಿದ್ಧ ಭೋಜನವನ್ನು ಮಾಡಿ ಯಾವಾಗಲೂ ಶಾಂತನೂ, ದಾಂತನೂ, ಕಾರ್ಯಾಕಾರ್ಯವನ್ನು ತಿಳಿದವನೂ ಆಗಿರಬೇಕು.

ಸರ್ವಕಾರ್ಯೇಷು ಕೃತ್ಯಾನಿ ಕೃತಾನ್ಯೇವ ತು ದರ್ಶಯೇತ್ ।
ಯಥಾ ಪ್ರಿಯೋ ಭವೇದ್ ಭಿಕ್ಷುಸ್ತಥಾ ಕಾರ್ಯಂ ಪ್ರಸಾಧಯೇತ್ ॥

ಅವನು ಎಲ್ಲ ಕಾರ್ಯಗಳಲ್ಲಿಯೂ ತಾನು ಮುಗಿಸಿದ ಕಾರ್ಯಗಳನ್ನೇ ಯತಿಗಳಿಗೆ ತೋರಿಸಬೇಕು. ಯತಿಗೆ ಸಂತೋಷವಾಗುವಂತೆ ಕಾರ್ಯಗಳನ್ನು ಮಾಡಬೇಕು.

ಯದಕಲ್ಯಂ ಭವೇದ್ ಭಿಕ್ಷೋರ್ನ ತತ್ಕಾರ್ಯಂ ಸಮಾಚರೇತ್ ।
ಯಥಾऽऽಶ್ರಮಸ್ಯಾವಿರುದ್ಧಂ ಧರ್ಮಮಾತ್ರಾಭಿಸಂಹಿತಮ್ ॥೧೮॥

ತತ್ಕಾರ್ಯಮವಿಚಾರೇಣ ನಿತ್ಯಮೇವ ಶುಭಾರ್ಥಿನಾ ।
ಮನಸಾ ಕರ್ಮಣಾ ವಾಚಾ ನಿತ್ಯಮೇವ ಪ್ರಸಾಧಯೇತ್ ॥೧೯॥

ಯತಿಗಳಿಗೆ ಇಷ್ಟವಾಗದುದ್ದನ್ನು ಮಾಡಬಾರದು. ಶುಭವನ್ನು ಬಯಸುವ ಶೂದ್ರನು ಆಶ್ರಮಕ್ಕೆ ವಿರುದ್ಧವಾದ ಧರ್ಮಕ್ಕೆ ಅನುಗುಣವಾದ ಕಾರ್ಯವನ್ನು ನಿತ್ಯವೂ ಸಂಶಯ ಪಡದೆ ಮಾಡಬೇಕು. ಮನಸ್ಸಿನಿಂದಲೂ, ಕರ್ಮದಿಂದಲೂ ಮತ್ತು ಮಾತಿನಿಂದಲೂ ನಿತ್ಯವೂ ಅಂತಹ ಕಾರ್ಯವನ್ನು ಸಾಧಿಸಬೇಕು.

ಸ್ಥಾತವ್ಯಂ ತಿಷ್ಠಮಾನೇಷು ಗಚ್ಛಮಾನಾನನುವ್ರಜೇತ್ ।
ಆಸೀನೇಷ್ವಾಸಿತವ್ಯಂ ಚ ನಿತ್ಯಮೇವಾನುವರ್ತತಾ ॥೨೦॥

ಯತಿಗಳನ್ನು ಅನುಸರಿಸುವವನು ಅವರು ನಿಂತಾಗ ನಿಲ್ಲಬೇಕು, ನಡೆದಾಗ ಹಿಂಬಾಲಿಸಬೇಕು. ಅವರು ಕುಳಿತುಕೊಂಡಾಗ ಕುಳಿತುಕೊಳ್ಳಬೇಕು.

ಧರ್ಮಲಬ್ಧೇನ ಸ್ನೇಹೇನ ಪಾದೌ ಸಂಪೀಡಯೇತ್ ಸದಾ ।
ಉದ್ವರ್ತನಾದೀಂಶ್ಚ ತಥಾ ಕುರ್ಯಾದಪ್ರತಿಚೋದಿತಃ ॥೨೧॥

ಧರ್ಮಲಬ್ಧವಾದ ತೈಲದಿಂದ ಅವರಿಗೆ ಅಚೋದಿತನಾಗಿ (ಹೇಳಿಸಿಕೊಳ್ಳದೆ) ಪಾದ ಮೊದಲಾದ ಶರೀರಭಾಗದ ಉದ್ವರ್ತನೆಯನ್ನು ಮಾಡಬೇಕು.

ನೈಶಕಾರ್ಯಾಣಿ ಕೃತ್ವಾ ತು ನಿತ್ಯಂ ಚೈವಾನುಚೋದಿತಃ ।
ಯಥಾವಿಧಿರುಪಸ್ಪೃಶ್ಯ ಸನ್ನ್ಯಸ್ಯ ಜಲಭಾಜನಮ್ ॥೨೨॥

ಭಿಕ್ಷೂಣಾಂ ನಿಲಯಂ ಗತ್ವಾ ಪ್ರಣಮ್ಯ ವಿಧಿಪೂರ್ವಕಮ್ ।
ಬ್ರಹ್ಮಪೂರ್ವಾನ್ ಗುರೂಂಸ್ತತ್ರ ಪ್ರಣಮ್ಯ ನಿಯತೇಂದ್ರಿಯಃ ॥೨೩॥

ರಾತ್ರಿಯ ಕಾರ್ಯಗಳನ್ನು ಮುಗಿಸಿ ನಿತ್ಯವೂ ಹೇಳಿಸಿಕೊಳ್ಳದೆ ವಿಧಿಗೆ ಅನುಸಾರವಾಗಿ ಮುಖಪ್ರಕ್ಷಾಳನಾದಿಗಳನ್ನು ಮಾಡಿ, ಜಲಪಾತ್ರೆಯನ್ನು ದೂರದಲ್ಲಿಟ್ಟು ಯತಿಗಳ ನಿವಾಸಕ್ಕೆ ಹೋಗಿ ವಿಧಿಪೂರ್ವಕವಾಗಿ ನಿಯತೇಂದ್ರಿಯನಾಗಿ ಅಲ್ಲಿ ಬ್ರಾಹ್ಮಣ ಪೂರ್ವಕರಾದ ಗುರುಗಳನ್ನು ನಮಸ್ಕರಿಸಬೇಕು.

ತಥಾऽऽಚಾರ್ಯಪುರೋಗಾಣಾಮನುಕುರ್ಯಾನ್ನಮಸ್ಕ್ರಿಯಾಮ್ ।
ಸ್ವಧರ್ಮಚಾರಿಣಾಂ ಚಾಪಿ ಸುಖಂ ಪೃಷ್ಟ್ವಾऽಭಿವಾದ್ಯ ಚ ॥೨೪॥

ತಮ್ಮ ಧರ್ಮಾಚರಣೆಯನ್ನು ಮಾಡುವ ಆಶ್ರಮವಾಸಿಗಳ ಸುಖವನ್ನು ವಿಚಾರಿಸಿ (ಕುಶಲಪ್ರಶ್ನೆಯನ್ನು ಮಾಡಿ) ನಮಸ್ಕರಿಸಿ ಆಚಾರ್ಯ ಮೊದಲಾದವರಿಗೂ ನಮಸ್ಕಾರ ಮಾಡಬೇಕು.

ಯೋ ಭವೇತ್ ಪೂರ್ವಸಂಸಿದ್ಧಸ್ತುಲ್ಯಕರ್ಮಾ ಭವೇತ್ ಸದಾ ।
ತಸ್ಮೈ ಪ್ರಣಾಮಃ ಕರ್ತವ್ಯೋ ನೇತರೇಷು ಕದಾಚನ ॥೨೫॥

ತನಗಿಂತ ಮೊದಲಿನಿಂದ ಸೇವಾ ಕರ್ಮದಲ್ಲಿ ನಿರತನಾದ ಶೂದ್ರನಿಗೂ ನಮಸ್ಕಾರವನ್ನು ಮಾಡಬೇಕು. ಉಳಿದವರಿಗೆ ನಮಸ್ಕಾರವನ್ನು ಮಾಡಬಾರದು.

ಅನುಕ್ತ್ವಾ ತೇಷು ಚೋತ್ಥಾಯ ನಿತ್ಯಮೇವ ಯತವ್ರತಃ ।
ಸಮ್ಮಾರ್ಜನಮಥೋ ಗತ್ವಾ ಕೃತ್ವಾ ಚಾಪ್ಯುಪಲೇಪನಮ್ ॥೨೬॥

ತತಃ ಪುಷ್ಪಬಲಿಂ ದದ್ಯಾತ್ ಪುಷ್ಪಾಣ್ಯಾದಾಯ ಧರ್ಮತಃ ।
ನಿಷ್ಕ್ರಮ್ಯಾವಸಥಾತ್ ತೂರ್ಣಮನ್ಯತ್ ಕರ್ಮ ಸಮಾಚರೇತ್ ॥೨೭॥

ಮಾತನಾಡದೆ ಅಲ್ಲಿಂದ ಎದ್ದು ವ್ರತಧಾರಿಯಾದ ಶೂದ್ರನು ಸಮ್ಮಾರ್ಜನ, ಅನುಲೇಪನವನ್ನು ಮಾಡಿ ಧರ್ಮಕ್ಕೆ ಅನುಸಾರವಾಗಿ ಪುಷ್ಪಗಳನ್ನು ತೆಗೆದುಕೊಂಡು ಬಂದು ಪುಷ್ಪಗಳನ್ನು ಸಮರ್ಪಿಸಬೇಕು. ಅನಂತರ ನಿವಾಸದಿಂದ (ಆಶ್ರಮದಿಂದ) ಹೊರಗೆ ಬಂದು ಶೀಘ್ರವಾಗಿ ಬೇರೆ ಕಾರ್ಯವನ್ನು ಮಾಡಬೇಕು.

ಯಥೋಪಘಾತೋ ನ ಭವೇತ್ ಸ್ವಾಧ್ಯಾಯೇऽऽಶ್ರಮಿಣಾಂ ತಥಾ ।
ಉಪಘಾತಂ ತು ಕುರ್ವಾಣ ಏನಸಾ ಸಂಪ್ರಯುಜ್ಯತೇ ।
ತಥಾऽऽತ್ಮಾ ಪ್ರಣಿಧಾತವ್ಯೋ ಯಥಾ ತೇ ಪ್ರೀತಿಮಾಪ್ನುಯುಃ ॥೨೮॥

ಸ್ವಾಧ್ಯಾಯವನ್ನು ಮಾಡುವ ಆಶ್ರಮವಾಸಿಗಳಿಗೆ ತೊಂದರೆಯಾಗದಂತೆ ತನ್ನ ಕಾರ್ಯವನ್ನು ಮಾಡಬೇಕು. ಸ್ವಾಧ್ಯಾಯಕ್ಕೆ ತೊಂದರೆ ಉಂಟಾದರೆ ಪಾಪ ಉಂಟಾಗುತ್ತದೆ. ಯತಿಗಳು ತನ್ನ ಮೇಲೆ ಪ್ರೀತಿಯನ್ನು ಹೊಂದುವಂತೆ ತನ್ನನ್ನು ನಡೆಸಿಕೊಳ್ಳಬೇಕು.

ಪರಿಚಾರಕೋऽಹಂ ವರ್ಣಾನಾಂ ತ್ರಯಾಣಾಂ ಧರ್ಮತಃ ಸ್ಮೃತಃ ।
ಕಿಮುತಾಶ್ರಮವೃದ್ಧಾನಾಂ ಯಥಾಲಬ್ಧೋಪಜೀವಿನಾಮ್ ॥೨೯॥

ಭಿಕ್ಷೂಣಾಂ ಗತರಾಗಾಣಾಂ ಕೇವಲಂ ಜ್ಞಾನದರ್ಶಿನಾಮ್ ।
ವಿಶೇಷೇಣ ಮಯಾ ಕಾರ್ಯಾ ಶುಶ್ರೂಷಾ ನಿಯತಾತ್ಮನಾ ॥೩೦॥

ತೇಷಾಂ ಪ್ರಸಾದಾತ್ ತಪಸಾ ಪ್ರಾಪ್ಸ್ಯಾಮೀಷ್ಟಾಂ ಶುಭಾಂ ಗತಿಮ್ ।
ಏವಮೇತದ್ ವಿನಿಶ್ಚಿತ್ಯ ಯದಿ ಸೇವೇತ ಭಿಕ್ಷುಕಾನ್ ।
ವಿಧಿನಾ ಸ್ವೋಪದಿಷ್ಟೇನ ಪ್ರಾಪ್ನೋತಿ ಪರಮಾಂ ಗತಿಮ್ ॥೩೧॥

ನಾನು ಧರ್ಮದ ದೃಷ್ಟಿಯಿಂದ ಮೂರು ವರ್ಣದವರಿಗೂ ಪರಿಚಾರಕನಾದವನು. ಇನ್ನು ಆಶ್ರಮವಾಸಿಗಳಾದ ದೇವಲಬ್ಧ ಆಹಾರದಿಂದ ಜೀವಿಸುವ ರಾಗಾದಿ-ದೋಷ ರಹಿತರಾದ, ಜ್ಞಾನನಿಷ್ಠರಾದ, ಭಿಕ್ಷುಗಳ ಪರಿಚರ್ಯೆಯನ್ನು ನಿಯಂತ್ರಿತವಾದ ಮನಸ್ಸಿನಿಂದ ನಾನು ವಿಶೇಷವಾಗಿ ಮಾಡಬೇಕೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಅವರ ಅನುಗ್ರಹದಿಂದಲೂ ಮತ್ತು ತಪಸ್ಸಿನಿಂದಲೂ ನಾನು ಇಷ್ಟವಾದ ಶುಭಗತಿಯನ್ನು ಹೊಂದಬೇಕು- ಹೀಗೆ ನಿಶ್ಚಯಿಸಿ ತನಗೆ ವಿಹಿತವಾದ ಮಾರ್ಗದಿಂದ ಯತಿಗಳ ಸೇವೆಯನ್ನು ಮಾಡುವವನು ಶ್ರೇಷ್ಠವಾದ ಗತಿಯನ್ನು ಹೊಂದುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಶೂದ್ರಸ್ಯ ಭಿಕ್ಷುಶುಶ್ರೂಷಾನಾಮ
ದ್ವಿಚತ್ವಾರಿಂಶೋತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ನಲವತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ನಲವತ್ಮೂರನೆಯ ಅಧ್ಯಾಯ

ಪರಾಶರಗೀತೆ- ಶೂದ್ರಶುಶ್ರೂಷಾ

ಪರಾಶರಃ

ನ ತಥಾ ಸಂಪ್ರದಾನೇನ ನೋಪವಾಸಾದಿಭಿಸ್ತಥಾ ।
ಇಷ್ಟಾಂ ಗತಿಮವಾಪ್ನೋತಿ ಯಥಾ ಶುಶ್ರೂಷಕರ್ಮಣಾ ॥೧॥

ಪರಾಶರ– ಶುಶ್ರೂಷಾ ಕರ್ಮದಿಂದ ಪಡೆಯಬಹುದಾದ ಅಭೀಷ್ಟವಾದ ಗತಿಯನ್ನು ದಾನದಿಂದಾಗಲೀ ಅಥವಾ ಉಪವಾಸಾದಿಗಳಿಂದಾಗಲೀ ಪಡೆಯಲು ಸಾಧ್ಯವಿಲ್ಲ.

ಯಾದೃಶೇನ ತು ತೋಯೇನ ಶುದ್ಧಿಂ ಪ್ರಕುರುತೇ ನರಃ ।
ತಾದೃಗ್‌ಭವತಿ ತದ್ದೌತಮುದಕಸ್ಯ ಪ್ರಭಾವತಃ ॥೨॥

ಮನುಷ್ಯನು ಎಂತಹ ಜಲದಿಂದ ಶುದ್ಧಿಮಾಡುತ್ತಾನೆಯೋ ತೊಳೆಯಲ್ಪಟ್ಟ ವಸ್ತುವು ಅಂತಹ ಗುಣವನ್ನೇ ಹೊಂದುತ್ತದೆ.

ಶೂದ್ರೋಪ್ಯೇತೇನ ಮಾರ್ಗೇಣ ಯಾದೃಶಂ ಸೇವತೇ ಜನಮ್ ।
ತಾದೃಗ್‌ಭವತಿ ಸಂಸರ್ಗಾದಚಿರೇಣ ನ ಸಂಶಯಃ ॥೩॥

ಶೂದ್ರನೂ ಸಹ ಇದೇ ರೀತಿಯಲ್ಲಿ ಎಂತಹ ಗುರುವನ್ನು ಸೇವಿಸುತ್ತಾನೆಯೋ ಅವರ ಸಂಸರ್ಗದಿಂದ ಶೀಘ್ರವಾಗಿ ಅಂತಹ ಗುಣವನ್ನು ಹೊಂದುವುದರಲ್ಲಿ ಸಂಶಯವಿಲ್ಲ.

ತಸ್ಮಾತ್ ಪ್ರಯತ್ನತಃ ಸೇವ್ಯಾ ಭಿಕ್ಷವೋ ನಿಯತಾತ್ಮನಾ ।
ಉದಕಗ್ರಹಣಾದ್ಯೇನ ಸ್ನಪನೋದ್ವರ್ತನೈಸ್ತಥಾ ॥೪॥

ಆದ್ದರಿಂದ ನೀರನ್ನು ತರುವುದು, ಸ್ನಾನವನ್ನು ಮಾಡಿಸುವುದು, ದೇಹವನ್ನು ಒತ್ತುವುದು ಮೊದಲಾದ ಕರ್ಮಗಳಿಂದ ಶೂದ್ರನು ಪ್ರಯತ್ನಪೂರ್ವಕವಾಗಿ ಮನೋಜಯವನ್ನು ಹೊಂದಿ ಯತಿಗಳ ಸೇವೆಯನ್ನು ಮಾಡಬೇಕು.

ಅಧ್ವನಾ ಕರ್ಶಿತಾನಾಂ ಚ ವ್ಯಾಧಿತಾನಾಂ ತಥೈವ ಚ ।
ಶುಶ್ರೂಷಾಂ ನಿಯತಂ ಕುರ್ಯಾತ್ ತೇಷಾಮಾಪದಿ ಯತ್ನತಃ ॥೫॥

ಮಾರ್ಗಾಯಾಸದಿಂದ ಬಳಲಿದ ಮತ್ತು ವ್ಯಾಧಿಗ್ರಸ್ತರಾದವರ ಮತ್ತು ಆಪತ್ತಿನಲ್ಲಿ ಸಿಲುಕಿದವರ ಸೇವೆಯನ್ನು ವಿಶೇಷವಾಗಿ ಮಾಡಬೇಕು.

ದರ್ಭಾಜಿನಾನ್ಯವೇಕ್ಷೇತ ಭೈಕ್ಷಭಾಜನಮೇವ ಚ ।
ಯಥಾಕಾಮಂ ಚ ಕಾರ್ಯಾಣಿ ಸರ್ವಾಣ್ಯೇವೋಪಸಾಧಯೇತ್ ।
ಪ್ರಾಯಶ್ಚಿತ್ತಂ ಯಥಾ ನ ಸ್ಯಾತ್ ತಥಾ ಸರ್ವಂ ಸಮಾಚರೇತ್ ॥೬॥

ಅವರ ದರ್ಭಾಜಿನಗಳನ್ನು ನೋಡಿಕೊಳ್ಳಬೇಕು. ಭಿಕ್ಷಾಪಾತ್ರೆಗಳನ್ನೂ ನೋಡಿಕೊಳ್ಳಬೇಕು. ಅವರಿಗೆ ಇಷ್ಟವಾಗುವಂತೆ ಎಲ್ಲ ಕಾರ್ಯಗಳನ್ನೂ ಮಾಡಬೇಕು. ಎಲ್ಲಾದರೂ ಅವರ ನಿಯಮಕ್ಕೆ ತೊಂದರೆಯುಂಟಾಗಿ ಅವರು ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳದಂತೆ ಎಲ್ಲಾ ಕಾರ್ಯಗಳನ್ನೂ ಸಾಧಿಸಬೇಕು.

ವ್ಯಾಧಿತಾನಾಂ ತು ಪ್ರಯತಶ್ಚೈಲಪ್ರಕ್ಷಾಲನಾದಿಭಿಃ ।
ಪ್ರತಿಕರ್ಮಕ್ರಿಯಾ ಕಾರ್ಯಾ ಭೇಷಜಾನಯನೈಸ್ತಥಾ ॥೭॥

ಅವರು ವ್ಯಾಧಿಗ್ರಸ್ತರಾದರೆ ಅವರ ವಸ್ತ್ರಗಳನ್ನು ಒಗೆದು, ಔಷಧಿಗಳನ್ನು ತಂದು ಪರಿಹಾರಕಾರ್ಯವನ್ನು ಮಾಡಬೇಕು.

ಪಿಂಷಣಾಲೇಪನಂ ಚೂರ್ಣಂ ಕಷಾಯಮಥ ಸಾಧನಮ್ ।
ನಾನ್ಯಸ್ಯ ಪ್ರತಿಚಾರೇಷು ಸುಖಾರ್ಥಮುಪಪಾದಯೇತ್ ॥೮॥

ಅರೆಯುವುದು, ಲೇಪನ ಮಾಡುವುದು, ಚೂರ್ಣವನ್ನು ಮಾಡುವುದು, ಕಷಾಯವನ್ನು ತಯಾರಿಸುವುದು ಅಥವಾ ಬೇರೆ ಏನಾದರೂ ಸಾಧನವನ್ನು ಮಾಡುವುದು ಇವುಗಳನ್ನು ಮಾಡಬೇಕು. ಅಂತಹ ಸಂದರ್ಭದಲ್ಲಿ ತಿರುಗಾಡುತ್ತಾ ಇನ್ನೊಬ್ಬರ ಸುಖಾರ್ಥವಾಗಿ ಪ್ರಯತ್ನವನ್ನು ಪಡಬಾರದು.

ಭಿಕ್ಷಾಟನೋಽಭಿಗಚ್ಛೇತ ಭಿಷಜಶ್ಚ ವಿಪಶ್ಚಿತಃ ।
ತತೋ ವಿನಿಷ್ಕ್ರಿಯಾರ್ಥಾನಿ ದ್ರವ್ಯಾಣಿ ಸಮುಪಾರ್ಜಯೇತ್ ॥೯॥

ಭಿಕ್ಷಾಟನೆಯನ್ನು ಮಾಡಿ ವೈದ್ಯರ ಮತ್ತು ಜ್ಞಾನಿಗಳ ಮನೆಗೆ ಹೋಗಿ ಅಲ್ಲಿಂದ ವಸ್ತುಗಳನ್ನು ಸಂಪಾದಿಸಬೇಕು.

ಯಶ್ಚ ಪ್ರೀತಮನಾ ದದ್ಯಾದಾದದ್ಯಾದ್ ಭೇಷಜಂ ನರಃ ।
ಅಶ್ರದ್ಧಯಾ ಹಿ ದತ್ತಾನಿ ತಾನ್ಯಭೋಕ್ಷ್ಯಾಣಿ ಭಿಕ್ಷುಭಿಃ ॥೧೦॥

ಪ್ರೀತಿಯಿಂದ ಕೊಟ್ಟ ಔಷಧವನ್ನು ಮಾತ್ರ ಮನುಷ್ಯನು (ಯತಿಯು) ತೆಗೆದುಕೊಳ್ಳಬೇಕು. ಅಶ್ರದ್ಧೆಯಿಂದ ಕೊಟ್ಟುದನ್ನು ಭಿಕ್ಷುಗಳು ತೆಗೆದುಕೊಳ್ಳಬಾರದು.

ಶ್ರದ್ಧಯಾ ಯದುಪಾದತ್ತಂ ಶ್ರದ್ಧಯಾ ಚೋಪಪಾದಿತಮ್ ।
ತಸ್ಯೋಪಭೋಗಾದ್ ಧರ್ಮಃ ಸ್ಯಾದ್ ವ್ಯಾಧಿಭಿಶ್ಚ ನಿವರ್ತ್ಯತೇ ॥೧೧॥

ಶ್ರದ್ಧೆಯಿಂದ ಸಂಪಾದನೆ ಮಾಡಿ, ಶ್ರದ್ಧೆಯಿಂದ ನೀಡಿದರೆ ಯತಿಗಳು ಅದನ್ನು ಸ್ವೀಕರಿಸುವುದರಿಂದ ಧರ್ಮವುಂಟಾಗುತ್ತದೆ ಮತ್ತು ವ್ಯಾಧಿಯೂ ನಾಶವಾಗುತ್ತದೆ.

ಆ ದೇಹಪತನಾದೇವಂ ಶುಶ್ರೂಷೇದ್ ವಿಧಿಪೂರ್ವಕಮ್ ।
ನ ತ್ವೇವಂ ಧರ್ಮಮುತ್ಸೃಜ್ಯ ಕುರ್ಯಾತ್ ತೇಷಾಂ ಪ್ರತಿಕ್ರಿಯಾಮ್ ॥

ಶೂದ್ರನು ದೇಹಪಾತವಾಗುವವರೆಗೂ ಹೀಗೆ ವಿಧವಿಧವಾಗಿ ಸೇವೆಯನ್ನು ಮಾಡಬೇಕೇ ಹೊರತು ಧರ್ಮವನ್ನು ಬಿಟ್ಟು ಅವರಿಗೆ ಪ್ರತೀಕಾರವನ್ನು ಮಾಡಬಾರದು.

ಸ್ವಭಾವತೋ ಹಿ ದ್ವಂದ್ವಾನಿ ವಿಪ್ರಯಾಂತ್ಯುಪಯಾಂತಿ ಚ ।
ಸ್ವಭಾವತಃ ಸರ್ವಭಾವಾ ಭವಂತಿ ನ ಭವಂತಿ ಚ ।
ಸಾಗರಸ್ಯೋರ್ಮಿಸದೃಶಾ ವಿಜ್ಞಾತವ್ಯಾ ಗುಣಾತ್ಮಕಾಃ ॥೧೩॥

ಶೀತೋಷ್ಣ ಸುಖ-ದುಃಖ ಮೊದಲಾದ ದ್ವಂದ್ವಗಳು ಸ್ವಾಭಾವಿಕವಾಗಿ ಬರುತ್ತವೆ ಮತ್ತು ಹೋಗುತ್ತವೆ. ಎಲ್ಲವಸ್ತುಗಳೂ ಹೀಗೆಯೇ ಬಂದು ಹೋಗುವಂತಹವುಗಳು. ಗುಣಕಾರ್ಯವಾದ ವಸ್ತುಗಳು ಸಾಗರದ ಅಲೆಗಳಂತೆ ಯಾವಾಗಲೂ ಬಂದು-ಹೋಗುವಂತಹವುಗಳು ಎಂದು ತಿಳಿಯಬೇಕು.

ವಿದ್ಯಾದೇವಂ ಹಿ ಯೋ ಧೀಮಾಂಸ್ತತ್ತ್ವವಿತ್ತತ್ತ್ವದರ್ಶನಃ ।
ನ ಸ ಲಿಪ್ಯೇತ ಪಾಪೇನ ಪದ್ಮಪತ್ರಮಿವಾಂಭಸಾ ॥೧೪॥

ಯಾವ ಮೇಧಾವಿಯು ತತ್ತ್ವಜ್ಞಾನವನ್ನು ಹೊಂದಿ ಹೀಗೆ ತಿಳಿಯುತ್ತಾನೆಯೋ ಅವನು ಪದ್ಮಪತ್ರವು ನೀರಿನ ಲೇಪವನ್ನು ಹೊಂದದಂತೆ ಪಾಪದ ಲೇಪವನ್ನು ಹೊಂದಲಾರ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ತ್ರಿಚತ್ವಾರಿಂಶೋತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ನಲವತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ನಲವತ್ನಾಲ್ಕನೆಯ ಅಧ್ಯಾಯ

ಪರಾಶರಗೀತೆ-ಶೂದ್ರಶುಶ್ರೂಷಾ

ಪರಾಶರಃ

ಏವಂ ಪ್ರಯತಿತವ್ಯಂ ಹಿ ಶುಶ್ರೂಷಾರ್ಥಮತಂದ್ರಿತೈಃ ।
ಸರ್ವಾಭಿರೂಪಸೇವಾಭಿಸ್ತುಷ್ಯಂತಿ ಯತಯೋ ಯಥಾ ॥೧॥

ಪರಾಶರ– ಈ ರೀತಿಯಲ್ಲಿ ಆಲಸ್ಯವನ್ನು ಬಿಟ್ಟು ಯತಿಗಳು ಸಂತೋಷಪಡುವಂತೆ ಎಲ್ಲಾ ರೀತಿಯಲ್ಲೂ ಅನುರೂಪವಾದ ಎಲ್ಲಾ ಸೇವೆಯನ್ನೂ ಮಾಡಬೇಕು.

ನಾಪರಾಧ್ಯೇತ ಭಿಕ್ಷೋಸ್ತು ನ ಚೈನಮವಧೀರಯೇತ್ ।
ಉತ್ತರಂ ಚ ನ ಸಂದದ್ಯಾತ್ ಕ್ರುದ್ಧಂ ಚೈವ ಪ್ರಸಾದಯೇತ್ ॥೨॥

ಯತಿಗಳಿಗೆ ಅಪರಾಧವನ್ನು ಮಾಡಬಾರದು. ಅವರನ್ನು ತಿರಸ್ಕರಿಸಬಾರದು. ಎದುರು ಮಾತನಾಡಬಾರದು. ಅವರು ಕೋಪಗೊಂಡರೆ ಪ್ರಸನ್ನೀಕರಿಸಿಕೊಳ್ಳಬೇಕು.

ಶ್ರೇಯ ಏವಾಭಿಧಾತವ್ಯಂ ಕರ್ತವ್ಯಂ ಚ ಪ್ರಹೃಷ್ಟವತ್ ।
ತೂಷ್ಣೀಂಭಾವೇನ ವೈ ತತ್ರ ನ ಕ್ರುದ್ಧಮಭಿಸಂವದೇತ್ ॥೩॥

ಅವರಿಗೆ ಹಿತವಾದುದನ್ನೇ ಮಾತನಾಡಬೇಕು. ಎಲ್ಲ ಕಾರ್ಯಗಳನ್ನು ಸಂತೋಷದಿಂದ ಮೌನವಾಗಿ ಮಾಡಬೇಕು. ಯತಿಗಳು ಕೋಪಗೊಂಡಿದ್ದಾಗ ಎದುರು ಮಾತನಾಡಬಾರದು.

ನಾದದೀತ ಪರಸ್ವಾನಿ ನ ಗೃಹ್ಣೀಯಾದಯಾಚಿತಮ್ ।
ಲಬ್ಧಾಲಬ್ಧೇನ ಜೀವೇತ ತಥೈವ ಪರಿತೋಷಯೇತ್ ॥೪॥

ಇನ್ನೊಬ್ಬರ ಪದಾರ್ಥವನ್ನು ತೆಗೆದುಕೊಳ್ಳಬಾರದು. ಕೇಳದೆಯೂ ಯಾವ ಪದಾರ್ಥವನ್ನು ತೆಗೆದುಕೊಳ್ಳಬಾರದು. ನ್ಯಾಯವಾಗಿ ಲಬ್ಧವಾದುದರಿಂದ ಅಥವಾ ದೈವಲಬ್ಧವಾದುದರಿಂದ ಜೀವಿಸಿ ಇನ್ನೊಬ್ಬರನ್ನು ಸಂತೋಷಪಡಿಸಬೇಕು.

ಕೋಪಿನಂ ತು ನ ಯಾಚೇತ ಜ್ಞಾನವಿದ್ವೇಷಕಾರಿತಃ ।
ಸ್ಥಾವರೇಷು ದಯಾಂ ಕುರ್ಯಾಜ್ಜಂಗಮೇಷು ಚ ಪ್ರಾಣಿಷು ॥೫॥

ಕೋಪಗೊಂಡವನನ್ನು ಹಾಗೆಯೇ ಜ್ಞಾನವಿದ್ವೇಷಿಯನ್ನು ಯಾಚಿಸಬಾರದು. ಸ್ಥಾವರ-ಜಂಗಮ ಪ್ರಾಣಿಗಳಲ್ಲಿ ದಯೆಯನ್ನು ಮಾಡಬೇಕು.

ಯಥಾऽऽತ್ಮನಿ ತಥಾऽನ್ಯೇಷು ಸಮಾಂ ದೃಷ್ಟಿ ನಿಪಾತಯೇತ್ ।
ಸರ್ವಭೂತೇಷು ಚಾತ್ಮಾನಂ ಸರ್ವಭೂತಾನಿ ಚಾತ್ಮನಿ ।
ಸಂಪಶ್ಯಮಾನೋ ವಿಚರನ್ ಬ್ರಹ್ಮಭೂಯಾಯ ಕಲ್ಪತೇ ॥೬॥

ತನ್ನಂತೆಯೇ ಇನ್ನೊಬ್ಬರನ್ನು ಸಮಾನ ದೃಷ್ಟಿಯಿಂದ ನೋಡಬೇಕು. ಎಲ್ಲ ಜೀವರಲ್ಲಿಯೂ ಪರಮಾತ್ಮನನ್ನೂ, ಪರಮಾತ್ಮನಲ್ಲಿ ಎಲ್ಲ ಜೀವರನ್ನೂ ಅನುಸಂಧಾನ ಮಾಡುತ್ತಾ ಸಂಚರಿಸುವವನು ಜೀವನ್ಮುಕ್ತನಾಗುವನು.

ಹಿಂಸಾಂ ವಾ ಯದಿ ವಾऽಹಿಂಸಾಂ ನ ಕುರ್ಯಾದಾತ್ಮಕಾರಣಾತ್ ।
ಯತ್ರೇತರೋ ಭವೇನ್ನಿತ್ಯಂ ದೋಷಂ ತತ್ರ ನ ಕಾರಯೇತ್ ॥೭॥

ತನ್ನ ಸಲುವಾಗಿ ಹಿಂಸೆಯನ್ನಾಗಲೀ, ಅಹಿಂಸೆಯನ್ನಾಗಲೀ ಮಾಡಬಾರದು (ಹಿಂಸೆಯಿಂದಾಗಲೀ, ಅಹಿಂಸೆಯಿಂದಾಗಲೀ ತನಗಾಗಿ ಏನನ್ನೂ ಸಂಪಾದಿಸಬಾರದು) ಇನ್ನೊಬ್ಬರಿಂದ ದುಷ್ಪಕಾರ್ಯವನ್ನು ಮಾಡಿಸಬಾರದು (?)

ಏವಂ ಸ ಮುಚ್ಯತೇ ದೋಷಾತ್ ಪರಾನಾಶ್ರಿತ್ಯ ವರ್ತಯನ್ ।
ಆತ್ಮಾಶ್ರಯೇಣ ದೋಷೇಣ ಲಿಪ್ಯತೇ ಹ್ಯಲ್ಪಬುದ್ಧಿಮಾನ್ ॥೮॥

ಹೀಗೆ ಮಾಡಿದರೆ ಇನ್ನೊಬ್ಬರನ್ನು ಆಶ್ರಯಿಸಿ ಜೀವಿಸುವವನು ದೋಷದಿಂದ ನಿರ್ಮುಕ್ತನಾಗುತ್ತಾನೆ. ವಿವೇಕವಿಲ್ಲದವನು ತನ್ನ ದೋಷದಿಂದ ಲಿಪ್ತನಾಗುತ್ತಾನೆ.

ಜರಾಯುಜಾಂಡಜಾಶ್ಚೈವ ಉದ್ಭಿಜ್ಜಾಃ ಸ್ವೇದಜಾಶ್ಚ ಯೇ ।
ಅವಧ್ಯಾಃ ಸರ್ವ ಏವೈತೇ ಬುಧೈಃ ಸಮನುವರ್ಣಿತಾಃ ॥೯॥

ಜರಾಯುಜ, ಅಂಡಜ, ಉದ್ಭಿಜ ಮತ್ತು ಸ್ವೇದಜ - ಈ ನಾಲ್ಕು ವಿಧವಾದ ಪ್ರಾಣಿಗಳು ಅವಧ್ಯವೆಂದು ಜ್ಞಾನಿಗಳು ಹೇಳಿದ್ದಾರೆ.

ನಿಶ್ಚಯಾರ್ಥಂ ವಿಬುದ್ಧಾನಾಂ ಪ್ರಾಯಶ್ಚಿತ್ತಂ ವಿಧೀಯತೇ ।
ಹಿಂಸಾ ಯಥಾऽನ್ಯಾವಿಹಿತಾ ತಥಾ ದೋಷಂ ಪ್ರಯೋಜಯೇತ್ ॥

ಹಿಂಸೆಯನ್ನು ಮಾಡಿ ಪಶ್ಚಾತ್ತಾಪ ಪಡುವವರಿಗೆ ಪ್ರಾಯಶ್ಚಿತ್ತವು ಹೇಳಲ್ಪಡಲ್ಪಡುತ್ತದೆ. ಅವಿಹಿತವಾದ ಬೇರೆ ಹಿಂಸೆಯು ದೋಷವನ್ನುಂಟು ಮಾಡುತ್ತದೆ.

ತಥೋಪದಿಷ್ಟಂ ಗುರುಣಾ ಶಿಷ್ಯಸ್ಯ ಚರತೋ ವಿಧಿಮ್ ।
ನ ಹಿ ಲೋಭಃ ಪ್ರಭವತಿ ಹಿಂಸಾ ವಾಽಪಿ ತದಾತ್ಮಿಕಾ ।
ಶಾಸ್ತ್ರದರ್ಶನಮೇತದ್ಧಿ ವಿಹಿತಂ ವಿಶ್ವಯೋನಿನಾ ॥೧೧॥

ಗುರುಗಳು ಹೇಳಿದಂತೆ ನಡೆದುಕೊಳ್ಳುವ ಶಿಷ್ಯನಿಗೆ ಲೋಭವಾಗಲೀ, ಹಿಂಸಾ ದೋಷವಾಗಲೀ ಬರುವುದಿಲ್ಲ. ಇದು ಶಾಸ್ತ್ರಸಿದ್ಧವಾದುದು ಮತ್ತು ಬ್ರಹ್ಮದೇವರಿಂದ ವಿಹಿತವಾದುದು.

ಯದ್ಯೇತದೇವಂ ಮನ್ಯೇತ ಶೂದ್ರೋ ಹ್ಯಪಿ ಚ ಬುದ್ಧಿಮಾನ್ ।
ಕೃತಂ ಕೃತವತಾಂ ಗಚ್ಛೇತ್ ಕಿಂಪುನರ್ಯೋ ನಿಷೇವತೇ ॥೧೨॥

ಬುದ್ಧಿವಂತನಾದ ಶೂದ್ರನೂ ಹೀಗೆ ತಿಳಿದರೆ ಅವನು ಕೃತಕೃತ್ಯರಲ್ಲಿ ಶ್ರೇಷ್ಠನಾಗುತ್ತಾನೆ. ಇನ್ನು ತಿಳಿದು ಸೇವೆಯನ್ನು ಮಾಡುವವನ ವಿಷಯದಲ್ಲಿ ಏನು ಹೇಳಬೇಕು?

ನ ಶೂದ್ರಃ ಪತತೇ ಕಶ್ಚಿನ್ನ ಚ ಸಂಸ್ಕಾರಮರ್ಹತಿ ।
ನಾಸ್ಯಾಧಿಕಾರೋ ಧರ್ಮೇಽಸ್ತಿ ನ ಧರ್ಮಾತ್ ಪ್ರತಿಷೇಧನಮ್ ॥೧೩॥

ಶೂದ್ರನು ಪತನವನ್ನು ಹೊಂದುವುದಿಲ್ಲ. ಅವನಿಗೆ ಯಾವ ಸಂಸ್ಕಾರವೂ ಇಲ್ಲ. ಧರ್ಮದಲ್ಲಿ ಅಧಿಕಾರವಿಲ್ಲ. ನಿಷೇಧವೂ ಇಲ್ಲ.

ಅನುಗ್ರಹಾರ್ಥಂ ಮನುನಾ ಸರ್ವವರ್ಣೇಷು ವರ್ಣಿತಮ್ ।
ಯದೋಪಯಾತಂ ತು ಭವೇತ್ ಸ್ತ್ರೀಕೃತಃ ಪರಿಚಾರಕೇ ॥೧೪॥

ಅನ್ನಾವಕಾಶಶಯನಂ ತಸ್ಯ ಸಂವತ್ಸರಂ ಸ್ಮೃತಮ್ ।
ತೇನ ತಸ್ಯ ಭವೇಚ್ಛಾಂತಿಸ್ತತೋ ಭೂಯೋಽಪ್ಯುಪಾವ್ರಜೇತ್ ॥೧೫॥

ಸರ್ವವರ್ಣಗಳ ಅನುಗ್ರಹಕ್ಕೋಸ್ಕರ ಮನುವು ಹೀಗೆ ಹೇಳಿದ್ದಾನೆ. ಪರಿಚಾರಕನು, ಪರಿಸ್ಥಿತಿಯ ಬಲಾತ್ಕಾರದಿಂದ ಸ್ತ್ರೀ ಸಹವಾಸವನ್ನು ಮಾಡಿದರೆ ಅವನಿಗೆ ಒಂದು

ವರ್ಷದ ಕಾಲ ಅಲ್ಪಾಹಾರವನ್ನು ಕೊಟ್ಟು ಅವನನ್ನು ನೆಲದ ಮೇಲೆ ಮಲಗುವಂತೆ ಮಾಡಬೇಕು. ಅದರಿಂದ ಅವನಿಗೆ ಪಾಪ ಪರಿಹಾರವಾಗುತ್ತದೆ. ಅನಂತರ ಅವನು ಪುನಃ ತನ್ನ ಸೇವೆಯನ್ನು ಮುಂದುವರಿಸಬೇಕು (ಲಕ್ಷಾಲಂಕಾರ).

ಸವರ್ಣಾಯಾ ಭವೇದೇತದ್ ಹೀನಾಯಾಸ್ತ್ವರ್ಧಮರ್ಹತಿ ।
ವರ್ಷತ್ರಯಂ ತು ವೈಶ್ಯಾಯಾಃ ಕ್ಷತ್ರಿಯಾಯಾಸ್ತು ಷಟ್ ಸಮಾಃ ।
ಬ್ರಾಹ್ಮಣ್ಯಾ ತು ಸಮೇತಸ್ಯ ಸಮಾ ದ್ವಾದಶ ಕೀರ್ತಿತಾಃ ॥೧೬॥

ತನ್ನ ವರ್ಣದವಳ ಸಮಾಗಮವನ್ನು ಹೊಂದಿದರೆ ಶೂದ್ರನಿಗೆ ಇದು ಪ್ರಾಯಶ್ಚಿತ್ತ, ಹೀನಳಾದವಳ ಸಮಾಗಮವನ್ನು ಹೊಂದಿದರೆ ಇದರ ಅರ್ಧದಷ್ಟು ಪ್ರಾಯಶ್ಚಿತ್ತ. ವೈಶ್ಯ ಸ್ತ್ರೀ ಸಮಾಗಮವಾದರೆ ಮೂರು ವರ್ಷಗಳ ಕಾಲ, ಕ್ಷತ್ರಿಯ ಸ್ತ್ರೀ ಸಮಾಗಮವಾದರೆ ಆರು ವರ್ಷಗಳ ಕಾಲ, ಬ್ರಾಹ್ಮಣ ಸ್ತ್ರೀ ಸಮಾಗಮವಾದರೆ ಹನ್ನೆರಡು ವರ್ಷಗಳ ಕಾಲ ಈ ಪ್ರಾಯಶ್ಚಿತ್ತವು ಹೇಳಲ್ಪಟ್ಟಿದೆ.

ಕಟಾಗ್ನಿನಾ ವಾ ದಗ್ಧವ್ಯಸ್ತಸ್ಮಿನ್ನೇವ ಕ್ಷಣೇ ಭವೇತ್ ।
ಶಿಶ್ನಾವಪಾತನಾದ್ ವಾऽಪಿ ವಿಶುದ್ಧಿಂ ಸಮವಾಪ್ನುಯಾತ್ ॥೧೭॥

ಅಥವಾ ಅವನನ್ನು ಆ ಕ್ಷಣದಲ್ಲಿಯೇ ಚಿತಾಗ್ನಿಯಲ್ಲಿ ದಹಿಸಬೇಕು ಅಥವಾ ಶಿಶ್ನವನ್ನು ಕತ್ತರಿಸಬೇಕು. ಇದರಿಂದ ಅವನಿಗೆ ಶುದ್ಧಿಯಾಗುತ್ತದೆ.

ಅನಸ್ಥಿಬಂಧಮೇಕಂ ತು ಯದಿ ಪ್ರಾಣೈರ್ವಿಯೋಜಯೇತ್ ।
ಉಪೋಷ್ಯೈಕಾಹಮಾದದ್ಯಾತ್ ಪ್ರಾಣಾಯಾಮಾಂಸ್ತು ದ್ವಾದಶ ॥೧೮॥

ತ್ರಿಃ ಸ್ನಾನಮುದಕೇ ಕೃತ್ವಾ ತಸ್ಮಾತ್ ಪಾಪಾತ್ ಪ್ರಮುಚ್ಯತೇ ।
ಅಸ್ಥಿಬಂಧೇಷು ದ್ವಿಗುಣಂ ಪ್ರಾಯಶ್ಚಿತ್ತಂ ವಿಧೀಯತೇ ॥೧೯॥

ಅಸ್ಥಿಶೂನ್ಯವಾದ ಪ್ರಾಣಿಯನ್ನು ಕೊಂದರೆ ಒಂದು ದಿವಸ ಉಪವಾಸವನ್ನು ಮಾಡಿ ಹನ್ನೆರಡು ಪ್ರಾಣಾಯಾಮವನ್ನು ಮಾಡಬೇಕು. ನಂತರ ನೀರಿನಲ್ಲಿ ಮೂರು ಸ್ನಾನವನ್ನು ಮಾಡಿ ಆ ಪಾಪದಿಂದ ಮುಕ್ತನಾಗುತ್ತಾನೆ. ಅಸ್ಥಿ ಇರುವ ಪ್ರಾಣಿಗಳ ವಿಷಯದಲ್ಲಿ ಇದರ ಎರಡರಷ್ಟು ಪ್ರಾಯಶ್ಚಿತ್ತವು ಹೇಳಲ್ಪಡುತ್ತದೆ.

ಅನೇನ ವಿಧಿನಾ ವಾऽಪಿ ಸ್ಥಾವರೇಷು ನ ಸಂಶಯಃ ।
ಕಾಯೇನ ಪದ್ಭ್ಯಾಂ ಹಸ್ತಾಭ್ಯಾಮಪರಾಧಾತ್ ತು ಮುಚ್ಯತೇ ॥೨೦॥

ಇದೇ ರೀತಿಯಲ್ಲಿ ಸ್ಥಾವರಗಳ ವಿಷಯದಲ್ಲಿಯೂ ಕೂಡ ಎಂಬುದರಲ್ಲಿ ಸಂಶಯವಿಲ್ಲ. ಹೀಗೆ ಪ್ರಾಯಶ್ಚಿತ್ತವನ್ನು ಮಾಡಿಕೊಂಡರೆ ದೇಹದಿಂದ, ಪಾದದಿಂದ ಅಥವಾ ಹಸ್ತದಿಂದ ಮಾಡಿದ ಪಾಪವು ನಾಶವನ್ನು ಹೊಂದುತ್ತದೆ.

ಅದುಷ್ಟಂ ಕ್ಷಪಯೇದ್ ಯಸ್ತು ಸರ್ವವರ್ಣೇಷು ವಾಚಯೇತ್ ।
ತಸ್ಯಾಪ್ಯಷ್ಟಗುಣಂ ವಿದ್ಯಾತ್ ಪ್ರಾಯಶ್ಚಿತ್ತಂ ತದೇವ ತು ॥೨೧॥

ಚತುರ್ಗುಣಂ ಕರ್ಮಕೃತೇ ದ್ವಿಗುಣಂ ವಾಕ್ಪ್ರದೂಷಿತೇ ।
ಕೃತ್ವಾ ತು ಮಾನಸಂ ಪಾಪಂ ತಥೈವೈಕಗುಣಂ ಸ್ಮೃತಮ್ ॥೨೨॥

ಅದುಷ್ಟ ಪ್ರಾಣಿಯನ್ನು ಕೊಂದರೆ ಅವನು ಎಲ್ಲ ವರ್ಣದವರಿಗೂ ಅದನ್ನು ಹೇಳಬೇಕು. ಅವನಿಗೂ ಹಿಂದೆ ಹೇಳಿದ ಪ್ರಾಯಶ್ಚಿತ್ತದ ಎಂಟು ಪಟ್ಟು ಪ್ರಾಯಶ್ಚಿತ್ತವೆಂದು ತಿಳಿಯಬೇಕು. ಕರ್ಮವನ್ನು ಮಾಡಿದರೆ ನಾಲ್ಕುಪಟ್ಟು ಪ್ರಾಯಶ್ಚಿತ್ತ, ಕೇವಲ ವಾಕ್ಯದಿಂದ ಹೇಳಿದರೆ ಎರಡರಷ್ಟು ಪ್ರಾಯಶ್ಚಿತ್ತ, ಮನಸ್ಸಿನಿಂದ ಮಾಡಿದರೆ ಒಂದರಷ್ಟು ಪ್ರಾಯಶ್ಚಿತ್ತ ಎಂದು ಹೇಳಲ್ಪಡುತ್ತದೆ.

ತಸ್ಮಾದೇತಾನಿ ಸರ್ವಾಣಿ ವಿದಿತ್ವಾ ನ ಸಮಾಚರೇತ್ ।
ಸರ್ವಭೂತಹಿತಾರ್ಥಂ ಹಿ ಕುಶಲಾನಿ ಸಮಾಚರೇತ್ ॥೨೩॥

ಆದ್ದರಿಂದ ಇವುಗಳೆಲ್ಲವನ್ನೂ ತಿಳಿದು ಅಂತಹ ಅಪರಾಧವನ್ನು ಮಾಡಬಾರದು. ಎಲ್ಲ ಪ್ರಾಣಿಗಳ ಹಿತಕ್ಕಾಗಿ ಶುಭವಾದುದನ್ನೇ ಮಾಡಬೇಕು.

ಏವಂ ಸಮಾಹಿತಮನಾಃ ಸೇವತೇ ಯದಿ ಸತ್ತಮಾನ್ ।
ತದ್ಗತಿಸ್ತತ್ಸಮಾಚಾರಸ್ತನ್ಮನಾಸ್ತತ್ಪರಾಯಣಃ ॥೨೪॥

ಹೀಗೆ ಮನಸ್ಸಮಾಧಾನದಿಂದ ಅವರಲ್ಲೇ ಮನಸ್ಸನ್ನಿಟ್ಟು, ಅವರನ್ನೇ ಮನಸ್ಸಿನಿಂದ ಶ್ರೇಷ್ಠವಾದ ಆಶ್ರಯವೆಂದು ತಿಳಿದು ಶ್ರೇಷ್ಠ ಪುರುಷರ ಸೇವೆಯನ್ನು ಮಾಡಿದರೆ ಅವರು ಮಾಡುವ ಆಚಾರವನ್ನೇ ಮಾಡುವವನಾಗಿ ಅವರು ಹೊಂದುವ ಗತಿಯನ್ನೇ ಹೊಂದುತ್ತಾನೆ.

ನಾಭಿನಂಧೇತ ಮರಣಂ ನಾಭಿನಂಧೇತ ಜೀವಿತಮ್ ।
ಕಾಲಮೇವ ಪ್ರತೀಕ್ಷೇತ ನಿರ್ದೇಶಂ ಭೃತಕೋ ಯಥಾ ॥೨೫॥

ಮರಣವನ್ನು ಅಭಿನಂದಿಸಬಾರದು, ಜೀವನವನ್ನೂ ಅಭಿನಂದಿಸಬಾರದು. ಕೂಲಿ ಮಾಡುವವನು ಸಂಬಳವನ್ನು ನಿರೀಕ್ಷಿಸುವ ಹಾಗೆ ಕಾಲವನ್ನು ನಿರೀಕ್ಷಿಸಬೇಕು.

ಏವಂ ಪ್ರವರ್ತಮಾನಸ್ತು ವಿನೀತಃ ಪ್ರಯತಾತ್ಮವಾನ್ ।
ನಿರ್ಣಯಂ ಪುಣ್ಯಪಾಪಾಭ್ಯಾಮಚಿರೇಣೋಪಗಚ್ಛತಿ ॥೨೬॥

ಹೀಗೆ ಮನೋನಿಗ್ರಹವನ್ನು ಹೊಂದಿ ನಿರ್ಣಯದಿಂದ ಪ್ರವೃತ್ತನಾಗುವವನು ಪುಣ್ಯ-ಪಾಪಗಳಿಂದ ನಿರ್ಲಿಪ್ತನಾಗಿ ಶೀಘ್ರವಾಗಿ ಮುಕ್ತಿಸ್ಥಾನವನ್ನು ಪಡೆಯುತ್ತಾನೆ (ಲಕ್ಷಾಲಂಕಾರ).

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ಪರಾಶರಗೀತಾಯಾಂ ಚತುಶ್ಚತ್ವಾರಿಂಶೋತ್ತರಶತತಮೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ನಲವತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ನಲವತ್ತೈದನೆಯ ಅಧ್ಯಾಯ

ಪರಾಶರಗೀತೆ- ಧರ್ಮಿಷ್ಠನಾದ ಶೂದ್ರನಿಗೆ ಕ್ರಮವಾಗಿ ವೈಶ್ಯ-ಕ್ಷತ್ರಿಯ ಜನ್ಮಪ್ರಾಪ್ತಿ.

ಪರಾಶರಃ

ಶುಶ್ರೂಷಾನಿರತೋ ನಿತ್ಯಮರಿಷ್ಟಾನ್ಯುಪಲಕ್ಷಯೇತ್ ।
ತ್ರೈವಾರ್ಷಿಕಂ ದ್ವಿವಾರ್ಷಿಕಂ ವಾ ವಾರ್ಷಿಕಂ ವಾ ಸಮುತ್ಥಿತಮ್ ॥೧॥

ಪರಾಶರ- ಶುಶ್ರೂಷಾನಿರತನಾದವನು ಮೂರು ವರ್ಷ, ಎರಡು ವರ್ಷ ಅಥವಾ ಒಂದು ವರ್ಷ ನಂತರದಲ್ಲಿ ಒದಗುವ ಅರಿಷ್ಟಗಳನ್ನು ಯಾವಾಗಲೂ ಮೊದಲೇ ಗಮನಿಸಬೇಕು.

ಷಾಣ್ಮಾಸಿಕಂ ಮಾಸಿಕಂ ವಾ ಸಾಪ್ತರಾತ್ರಿಕಮೇವ ವಾ ।
ಸರ್ವಾಂಸ್ತದರ್ಥಾನ್ ವಾ ವಿದ್ಯಾತ್ ತೇಷಾಂ ಚಿಹ್ನಾನಿ ಲಕ್ಷಯೇತ್ ॥

ಆರು ತಿಂಗಳುಗಳಲ್ಲಿ ಒಂದು ತಿಂಗಳಿನಲ್ಲಿ ಅಥವಾ ಏಳು ದಿನಗಳಲ್ಲಿ ಒದಗುವ ಅರಿಷ್ಟಗಳ ಎಲ್ಲಾ ಚಿಹ್ನೆಗಳನ್ನೂ ಗಮನಿಸಬೇಕು.

ಪುರುಷಂ ಹಿರಣ್ಮಯಂ ಯಸ್ತು ತಿಷ್ಠಂತಂ ದಕ್ಷಿಣಾಮುಖಿಮ್ ।
ಲಕ್ಷಯೇದುತ್ತರೇಣೈವ ಮೃತ್ಯುಸ್ತ್ರೈವಾರ್ಷಿಕೋ ಭವೇತ್ ॥೩॥

ತಾನು ಉತ್ತರದಲ್ಲಿ ನಿಂತು ದಕ್ಷಿಣಾಭಿಮುಖವಾಗಿ ನಿಂತಿರುವ ಹಿರಣ್ಮಯ ಪುರುಷನನ್ನು ಸ್ವಪ್ನದಲ್ಲಿ ನೋಡಿದರೆ ಮೂರು ವರ್ಷಗಳಲ್ಲಿ ಮೃತ್ಯುವೆಂದು ತಿಳಿಯಬೇಕು.

ಶುದ್ಧಮಂಡಲಮಾದಿತ್ಯಮರಶ್ಮಿಂ ಸಂಪ್ರಪಶ್ಯತಃ ।
ಸಂವತ್ಸರದ್ವಯೇನೈವ ತಸ್ಯ ಮೃತ್ಯುಂ ಸಮಾದಿಶೇತ್ ॥೪॥

ರಶ್ಮಿರಹಿತನಾದ, ಶುದ್ಧವಾದ ಸೂರ್ಯಮಂಡಲವನ್ನು ನೋಡಿದರೆ ಎರಡು ವರ್ಷಗಳಲ್ಲಿ ಮೃತ್ಯುವೆಂದು ನಿರ್ದೇಶಿಸಬೇಕು.

ಜ್ಯೋತ್ಸ್ನಾಯಾಮಾತ್ಮನಶ್ಛಾಯಾಂ ಸಚ್ಛಿದ್ರಾಂ ಯಃ ಪ್ರಪಶ್ಯತಿ ।
ಮೃತ್ಯುಂ ಸಂವತ್ಸರೇಣೈವ ಜಾನೀಯಾತ್ ಸುವಿಚಕ್ಷಣಃ ॥೫॥

ಬೆಳುದಿಂಗಳಿನಲ್ಲಿ ತನ್ನ ನೆರಳಿನಲ್ಲಿ ಛಿದ್ರವನ್ನು ನೋಡಿದರೆ ಕುಶಲನಾದವನು ಒಂದು ವರ್ಷದಲ್ಲಿ ಮೃತ್ಯುವೆಂದು ತಿಳಿಯಬೇಕು.

ವಿಶಿರಸ್ಕಾಂ ಯದಾ ಛಾಯಾಂ ಪಶ್ಯೇತ್ ಪುರುಷ ಆತ್ಮನಃ ।
ಜಾನೀಯಾದಾತ್ಮನೋ ಮೃತ್ಯುಂ ಷಾಣ್ಮಾಸೇನೇಹ ಬುದ್ಧಿಮಾನ್ ॥೬॥

ಹಗಲಿನಲ್ಲಿ ತನ್ನ ಛಾಯೆಯಲ್ಲಿ ಶಿರಸ್ಸು ಕಾಣದಿದ್ದರೆ ಮೇಧಾವಿಯಾದ ಪುರುಷನು ಆರು ತಿಂಗಳಿನಲ್ಲಿ ತನ್ನ ಮೃತ್ಯುವಿದೆ ಎಂದು ತಿಳಿಯಬೇಕು.

ಕರ್ಣೌ ಪಿಧಾಯ ಹಸ್ತಾಭ್ಯಾಂ ಶಬ್ದಂ ನ ಶೃಣುತೇ ಯದಿ ।
ಜಾನೀಯಾದಾತ್ಮನೋ ಮೃತ್ಯುಂ ಮಾಸೇನೈವ ವಿಚಕ್ಷಣಃ ॥೭॥

ಹಸ್ತಗಳಿಂದ ಕಿವಿಗಳನ್ನು ಮುಚ್ಚಿಕೊಂಡು ಶಬ್ದವು ಕೇಳದಿದ್ದರೆ ವಿಚಕ್ಷಣನಾದವನು ಒಂದು ತಿಂಗಳಿನಲ್ಲಿ ತನ್ನ ಮೃತ್ಯುವಿದೆ ಎಂದು ತಿಳಿಯಬೇಕು.

ಶವಗಂಧಮುಪಾಘ್ರಾತಿ ಅನ್ಯದ್ವಾऽಸುರಭಿಂ ನರಃ ।
ದೇವತಾಯತನಸ್ಥೋ ವೈ ಸಪ್ತರಾತ್ರೇಣ ಮೃತ್ಯುಭಾಕ್ ॥೮॥

ದೇವಾಲಯದಲ್ಲಿ ಇರುವ ಪುರುಷನು ಶವಗಂಧವನ್ನಾಗಲೀ ಅಥವಾ ಬೇರೆ ದುರ್ಗಂಧವನ್ನಾಗಲೀ ಆಘ್ರಾಣಿಸಿದರೆ ಏಳು ದಿವಸಗಳಲ್ಲಿ ಮೃತ್ಯುವನ್ನು ಹೊಂದುವನು.

ಕರ್ಣನಾಸಾಪನಯನಂ ದಂತದೃಷ್ಟಿರಿವಾಗತಾ ।
ಲುಪ್ತಸಂಜ್ಞಂ ಹಿ ಕರಣಂ ಸದ್ಯೋ ಮೃತ್ಯುಂ ಸಮಾದಿಶೇತ್ ॥೯॥

ಕರ್ಣ-ನಾಸಿಕಗಳ ಅಭಾವ, ಕಳೆದು ಹೋದ ದಂತ ಮತ್ತು ದೃಷ್ಟಿಗಳ ಪುನರಾಗಮನ, ಕರಣಗಳಲ್ಲಿ ತಮ್ಮ ವ್ಯಾಪಾರ ಇಲ್ಲದಿರುವಿಕೆ ಇವುಗಳು ಉಂಟಾದರೆ ಸದ್ಯದಲ್ಲಿಯೇ ಮೃತ್ಯುವಿದೆ ಎಂದು ತಿಳಿಯಬೇಕು.

ಏವಮೇಷಾಮರಿಷ್ಟಾನಾಂ ಪಶ್ಯೇದನ್ಯತಮಂ ಯದಿ ।
ನ ತಂ ಕಾಲಂ ಪರೀಕ್ಷೇತ ಯಥಾऽರಿಷ್ಟಂ ಪ್ರಕಲ್ಪಿತಮ್ ॥೧೦॥

ಇಂತಹ ಅನಿಷ್ಟಗಳಲ್ಲಿ ಯಾವುದನ್ನಾದರೂ ನೋಡಿದರೆ ಸೂಚಿತವಾದ ಕಾಲದವರೆಗೂ ಕಾಯಬಾರದು.

ಅಭ್ಯಾಶೇನ ತು ಕಾಲಸ್ಯ ಗಚ್ಛೇತ ಪುಲಿನಂ ಶುಚಿ ।
ತತ್ರ ಪ್ರಾಣಾನ್ ಪ್ರಮುಂಚೇತ ತಮೀಶಾನಮನುಸ್ಮರನ್ ॥೧೧॥

ಕಾಲವು ಸಮೀಪದಲ್ಲಿದೆ ಎಂದು ತಿಳಿದು ಒಂದು ನದಿಯ ತೀರಕ್ಕೆ ಹೋಗಿ ಶುಚಿಯಾಗಿ ದೇವರಸ್ಮರಣೆಯನ್ನು ಮಾಡುತ್ತಾ ಪ್ರಾಣವನ್ನು ತ್ಯಜಿಸಬೇಕು.

ತತೋऽನ್ಯಂ ದೇಹಮಾಸಾದ್ಯ ಗಾಂಧರ್ವಂ ಸ್ಥಾನಮಾಪ್ನುಯಾತ್ ।
ತತ್ರಸ್ಥೋ ವಸತೇ ವಿಂಶತ್ ಪದ್ಮಾನಿ ಸ ಮಹಾದ್ಯುತಿಃ ॥೧೨॥

ಆಗ ಅವನು ಇನ್ನೊಂದು ದೇಹವನ್ನು ಪಡೆದು ಗಂಧರ್ವಲೋಕಕ್ಕೆ ಹೋಗುತ್ತಾನೆ. ಅಲ್ಲಿ ಮಹಾಕಾಂತಿಯಿಂದ ಕೂಡಿದವನಾಗಿ ಇಪ್ಪತ್ತು ಪದ್ಮ ವರ್ಷಗಳ ಕಾಲ ವಾಸ ಮಾಡುತ್ತಾನೆ.

ಗಂಧರ್ವೈಶ್ಚಿತ್ರಸೇನಾದ್ಯೈಃ ಸಹಿತಃ ಸತ್ಕೃತಸ್ತಥಾ ।
ನೀಲವೈಡೂರ್ಯವರ್ಣೇನ ವಿಮಾನೇನಾವಭಾಸಯನ್ ॥೧೩॥

ನಭಸ್ಥಲಮದೀನಾತ್ಮಾ ಸಾರ್ಧಮಪ್ಸರಸಾಂ ಗಣೈಃ ।
ಛಂದಕಾಮಾನುಸಾರೀ ಚ ತತ್ರತತ್ರ ಮಹೀಯತೇ ॥೧೪॥

ಚಿತ್ರಸೇನ ಮೊದಲಾದ ಗಂಧರ್ವರಿಂದ ಪೂಜಿತನಾಗಿ ಮತ್ತು ಸಹಿತನಾಗಿ ನೀಲ ವೈಡೂರ್ಯಬಣ್ಣದ ವಿಮಾನದಿಂದ ಆಕಾಶವನ್ನು ಬೆಳಗುತ್ತಾ ಯಾವ ಧೈರ್ಯವನ್ನೂ ಹೊಂದದೆ, ಅಪ್ಸರೆಯರ ಸಮೂಹದ ಜೊತೆಯಲ್ಲಿ ತನ್ನ ಮನಸ್ಸಿಗೆ ಬಂದಂತೆ ಸಂಚಾರ ಮಾಡುತ್ತಾ ಅಲ್ಲಲ್ಲಿ ಪೂಜಿಸಲ್ಪಡುತ್ತಾನೆ.

ಮೋದತೇಽಮರತುಲ್ಯಾತ್ಮಾ ಸದಾಽಮರಗಣೈಃ ಸಹ ।
ಪತಿತಶ್ಚ ಕ್ಷಯೇ ಕಾಲೇ ಕ್ಷಣೇನ ವಿಮಲದ್ಯುತಿಃ ॥೧೫॥

ವೈಶ್ಯಸ್ಯ ಬಹುವಿತ್ತಸ್ಯ ಕುಲೇಽಗ್ರ್ಯೇ ಬಹುಗೋಧನೇ ।
ಅವಾಪ್ಯ ತತ್ರ ವೈ ಜನ್ಮ ಸ ಪೂತೋ ದೇವಕರ್ಮಣಾ ॥೧೬॥

ಛಂದಸಾ ಜಾಗತೇನೈವ ಪ್ರಾಪ್ತೋಪನಯನಂ ತತಃ ।
ಕ್ಷೌಮವಸ್ತ್ರೋಪಕರಣಂ ದ್ವಿಜತ್ವಂ ಸಮವಾಪ್ಯ ತು ॥೧೭॥

ಅಧೀಯಮಾನೋ ವೇದಾರ್ಥಾನ್ ಗುರುಶುಶ್ರೂಷಣೇ ರತಃ ।
ಬ್ರಹ್ಮಚಾರೀ ಜಿತಕ್ರೋಧಸ್ತಪಸ್ವೀ ಜಾಯತೇ ತತಃ ॥೧೮॥

ದೇವತೆಗಳಿಗೆ ಸದೃಶನಾಗಿ ದೇವತೆಗಳ ಜೊತೆಯಲ್ಲಿ ಸಂತೋಷಪಡುತ್ತಾನೆ. ಪುಣ್ಯವು ಕ್ಷಯವಾದಾಗ ವಿಮಲದ್ಯುತಿಯನ್ನು ಹೊಂದಿದ ಅವನು ಒಂದು ಕ್ಷಣದಲ್ಲಿ ಪತಿತನಾಗಿ ಶ್ರೀಮಂತನಾದ, ಬಹುಗೋಧನವನ್ನು ಹೊಂದಿದ ವೈಶ್ಯರ ಶ್ರೇಷ್ಠವಾದ ಕುಲದಲ್ಲಿ ಜನ್ಮವನ್ನು ತಾಳಿ ದೇವಕಾರ್ಯಗಳಿಂದ ಅಲ್ಲಿ ಪವಿತ್ರನಾಗುತ್ತಾನೆ. ಜಗತೀ ಛಂದಸ್ಸಿನ ಮಂತ್ರಗಳಿಂದ ಉಪನಯನವನ್ನು ಹೊಂದಿ ರೇಶ್ಮೆಯ ವಸ್ತ್ರಗಳನ್ನು ಧರಿಸಿ ದ್ವಿಜತ್ವವನ್ನು ಹೊಂದಿ, ವೇದಾಧ್ಯಯನವನ್ನು ಮಾಡಿ ಗುರುಶುಶ್ರೂಷಾರತನಾಗುತ್ತಾನೆ. ಬ್ರಹ್ಮಚಾರಿಯಾಗಿ ಕ್ರೋಧವನ್ನು ಜಯಿಸಿ ತಪಸ್ವಿಯಾಗುತ್ತಾನೆ.

ಅಧೀತ್ಯ ದಕ್ಷಿಣಾಂ ದತ್ತ್ವಾ ಗುರವೇ ವಿಧಿಪೂರ್ವಕಮ್ ।
ಕೃತದಾರಃ ಸಮುಪೈತಿ ಗೃಹಸ್ಥವ್ರತಮುತ್ತಮಮ್ ॥೧೯॥

ಅಧ್ಯಯನವನ್ನು ಮುಗಿಸಿ, ಗುರುಗಳಿಗೆ ವಿಧಿಪೂರ್ವಕವಾಗಿ ದಕ್ಷಿಣೆಯನ್ನು ನೀಡಿ ವಿವಾಹವನ್ನು ಮಾಡಿಕೊಂಡು ಶ್ರೇಷ್ಠವಾದ ಗೃಹಸ್ಥಾಶ್ರಮವ್ರತವನ್ನು ಅನುಷ್ಠಾನ ಮಾಡುತ್ತಾನೆ.

ದದಾತಿ ಯಜತೇ ಚೈವ ಯಜ್ಞೈರ್ವಿಪುಲದಕ್ಷಿಣೈಃ ।
ಅಗ್ನಿಹೋತ್ರಮುಪಾಸನ್ ವೈ ಜುಹ್ವಚ್ಚೈವ ಯಥಾವಿಧಿ ॥೨೦॥

ಧರ್ಮಂ ಸಂಚಿನುತೇ ನಿತ್ಯಂ ಮೃದುಗಾಮೀ ಜಿತೇಂದ್ರಿಯಃ ।
ಸ ಕಾಲಪರಿಣಾಮಾತ್ ತು ಮೃತ್ಯುನಾ ಸಂಪ್ರಯುಜ್ಯತೇ ॥೨೧॥

ದಾನವನ್ನು ಮಾಡುತ್ತಾನೆ. ವಿಪುಲದಕ್ಷಿಣೆಗಳನ್ನು ಕೊಟ್ಟು ಯಜ್ಞಗಳನ್ನು ಮಾಡುತ್ತಾನೆ. ವಿಧಿಗೆ ಅನುಗುಣವಾಗಿ ಅಗ್ನಿಹೋತ್ರವನ್ನು ಮಾಡಿ ಧರ್ಮವನ್ನು ಗಳಿಸುತ್ತಾನೆ. ನಿತ್ಯವೂ ಜಿತೇಂದ್ರಿಯನಾಗಿಯೂ, ಮೃದುವಾಗಿಯೂ ಇದ್ದು, ಕಾಲ ಪರಿಣಾಮದಿಂದ ಮೃತ್ಯುವನ್ನು ಹೊಂದುತ್ತಾನೆ.

ಸಂಸೃತಶ್ಚಾಗ್ನಿಹೋತ್ರೇಣ ಕೃತಪಾತ್ರೋಪಧಾನವಾನ್ ।
ಸಂಸೃತೋ ದೇಹಮುತ್ಸೃಜ್ಯ ಮರುದ್ಭಿರುಪಪದ್ಯತೇ ॥೨೨॥

ತಾನು ಮಾಡಿದ ಅಗ್ನಿಹೋತ್ರದಿಂದಲೂ, ಪಾತ್ರರಿಗೆ ಕೊಟ್ಟ ದಾನದಿಂದಲೂ ಉಂಟಾದ ಪುಣ್ಯದಿಂದ ಕೂಡಿದವನಾಗಿ ದೇಹವನ್ನು ತ್ಯಜಿಸಿ ಮರುತ್ತುಗಳ ಜೊತೆಯಲ್ಲಿ ಸೇರುತ್ತಾನೆ.

ಮರುದ್ಭಿಃ ಸಹಿತಶ್ಚಾಪಿ ತುಲ್ಯತೇಜಾ ಮಹಾದ್ಯುತಿಃ ।
ಬಾಲಾರ್ಕಸಮವರ್ಣೇನ ವಿಮಾನೇನ ವಿರಾಜತಾ ॥೨೩॥

ಸುಖಂ ಚರತಿ ತತ್ರಸ್ಥೋ ಗಂಧರ್ವಾಪ್ಸರಸಾಂ ಗಣೈಃ ।
ವಿರಜೋಂಬರಸಂವೀತಸ್ತಪ್ತಕಾಂಚನಭೂಷಣಃ ॥೨೪॥

ಛಂದಕಾಮಾನುಸಾರೀ ಚ ದ್ವಿಗುಣಂ ಕಾಲಮಾವಸೇತ್ ।
ಸನ್ನಿವರ್ತೇತ ಕಾಲೇನ ಸ್ಥಾನಾತ್ ತಸ್ಮಾತ್ ಪರಿಚ್ಯುತಃ ॥೨೫॥

ಅವಿತೃಪ್ತವಿಹಾರಾಥೋ೯ ದಿವ್ಯಭೋಗಾನ್ ವಿಹಾಯ ತು ।
ಸ ಜಾಯತೇ ನೃಪಕುಲೇ ಗಜಾಶ್ವರಥಸಂಕುಲೇ ॥೨೬॥

ಮರುತ್ತುಗಳಿಗೆ ಸಮಾನವಾದ ತೇಜಸ್ಸು ಮತ್ತು ಕಾಂತಿಯನ್ನು ಹೊಂದಿ ಮರುತ್ತುಗಳ ಜೊತೆಯಲ್ಲಿ ಬಾಲಸೂರ್ಯನ ವರ್ಣವನ್ನು ಹೊಂದಿರುವ ಶೋಭಿಸುವ ವಿಮಾನದಲ್ಲಿ ಗಂಧರ್ವ-ಅಪ್ಸರೆಯರ ಗಣಗಳ ಜೊತೆಯಲ್ಲಿ ಸಂಚರಿಸುತ್ತಾನೆ. ಧೂಳಿಲ್ಲದ ವಸ್ತ್ರಗಳನ್ನು ಧರಿಸಿ ಸುವರ್ಣಾಭರಣ ಭೂಷಿತನಾಗಿ ತನ್ನ ಮನಸ್ಸಿಗೆ ಬಂದ ಸುಖಗಳನ್ನು ಅನುಭವಿಸುತ್ತಾ ಮೊದಲಿನ ಎರಡು ಪಟ್ಟು ಕಾಲ (ನಲವತ್ತು ಪದ್ಮ ವರ್ಷಗಳ ಕಾಲ) ವಾಸ ಮಾಡುತ್ತಾನೆ. ಆ ಕಾಲವು ಮುಗಿದ ಮೇಲೆ ಆ ಸ್ಥಾನದಿಂದ ಭ್ರಷ್ಟನಾಗಿ ಸುಖವಿಹಾರಗಳಲ್ಲಿ ತೃಪ್ತಿಯನ್ನು ಹೊಂದದೆ ದಿವ್ಯಭೋಗಗಳನ್ನು ಬಿಟ್ಟು ಪುನಃ ಭೂಮಿಗೆ ಬರುತ್ತಾನೆ. ಅವನು ಗಜಾಶ್ವ-ರಥಗಳಿಂದ ಸಮೃದ್ಧವಾದ ರಾಜಕುಲದಲ್ಲಿ ಜನಿಸುತ್ತಾನೆ.

ಪಾರ್ಥಿವೀಂ ಶ್ರಿಯಮಾಪನ್ನಃ ಶ್ರೀಮಾನ್ ಧರ್ಮಪತಿರ್ಯಥಾ ।
ಜನ್ಮಪ್ರಭೃತಿ ಸಂಸ್ಕಾರಂ ಚೌಲೋಪನಯನಾನಿ ಚ ॥೨೭॥

ಪ್ರಾಪ್ಯ ರಾಜಕುಲೇ ತತ್ರ ಯಥಾವದ್ ವಿಧಿಪೂರ್ವಕಮ್ ।
ಛಂದಸಾ ತ್ರೈಷ್ಟುಭೇನೇಹ ದ್ವಿಜತ್ವಮುಪನೀಯತೇ ॥೨೮॥

ರಾಜಕುಲದಲ್ಲಿ ಜನಿಸಿ ಧರ್ಮಪತಿಯಂತೆ ಕಾಂತಿಯುಕ್ತನೂ, ಸಂಪದ್ಯುಕ್ತನೂ ಆಗಿ ಜಾತಕರ್ಮಾದಿ ಸಂಸ್ಕಾರಗಳನ್ನೂ, ಚೌಲೋಪನಯನಾದಿ ಸಂಸ್ಕಾರಗಳನ್ನೂ ಪಡೆದು ಅದೇ ರಾಜಕುಲದಲ್ಲಿ ತ್ರಿಷ್ಟುಪ್ಛಂದಸ್ಸಿನ ಮಂತ್ರಗಳಿಂದ ಉಪನಯನವನ್ನು ಹೊಂದಿ ದ್ವಿಜನಾಗುತ್ತಾನೆ.

ಅಧೀತ್ಯ ವೇದಮಖಿಲಂ ಧನುರ್ವೇದಂ ಚ ಮುಖ್ಯಶಃ ।
ಸಮಾವೃತ್ತಸ್ತತಃ ಪಿತ್ರಾ ಯೌವರಾಜ್ಯೇSಭಿಷಿಚ್ಯತೇ ॥೨೯॥

ಸಮಗ್ರವಾದ ವೇದವನ್ನು ಮತ್ತು ಮುಖ್ಯವಾಗಿ ಧನುರ್ವೇದವನ್ನು ಅಧ್ಯಯನವನ್ನು ಮಾಡಿ ಮನೆಗೆ ಹಿಂದಿರುಗಿ ತಂದೆಯಿಂದ ಯೌವರಾಜ್ಯದಲ್ಲಿ ಸ್ಥಾಪಿಸಲ್ಪಡುತ್ತಾನೆ.

ಕೃತದಾರಕ್ರಿಯಃ ಶ್ರೀಮಾನ್ ರಾಜ್ಯಂ ಸಂಪ್ರಾಪ್ಯ ಧರ್ಮತಃ ।
ಪ್ರಜಾಃ ಪಾಲಯತೇ ಸಮ್ಯಕ್ ಷಡ್‌ಭಾಗಕೃತಸಂವಿಧಿಃ ॥೩೦॥

ಸಂಪದ್ಯುಕ್ತನಾದ ಅವನು ವಿವಾಹವನ್ನು ಮಾಡಿಕೊಂಡು ಧರ್ಮದಿಂದ ರಾಜ್ಯವನ್ನು ಪಡೆದು ಪ್ರಜೆಗಳನ್ನು ಧರ್ಮದಿಂದ ಪಾಲಿಸಿ ಪ್ರಜೆಗಳ ಆದಾಯದ ಆರನೆಯ ಒಂದು ಭಾಗದ ಕರದಿಂದ ಜೀವಿಸುತ್ತಾನೆ.

ಯಜ್ಞೈರ್ಬಹುಭಿರೀಜಾನಃ ಸಮ್ಯಗಾಪ್ತಾರ್ಥದಕ್ಷಿಣೈಃ ।
ಪ್ರಶಾಸತಿ ಮಹೀಂ ಶ್ರೀಮಾನ್ ರಾಜ್ಯಮಿಂದ್ರಸಮದ್ಯುತಿಃ ॥೩೧॥

ಬಹುದಕ್ಷಿಣೆಗಳನ್ನು ನೀಡಿದ ಅನೇಕ ವಿಧವಾದ ಯಜ್ಞಗಳನ್ನು ಚೆನ್ನಾಗಿ ಅನುಷ್ಠಾನ ಮಾಡಿ ಸಂಪದ್ಯುಕ್ತನಾದ ಅವನು ಇಂದ್ರನಿಗೆ ಸಮಾನವಾದ ಕಾಂತಿಯನ್ನು ಹೊಂದಿ ಭೂಮಿಯ ರಾಜ್ಯವನ್ನು ಆಳುತ್ತಾನೆ.

ಸ್ವಧರ್ಮನಿರತೋ ನಿತ್ಯಂ ಪುತ್ರಪೌತ್ರಸಹಾಯವಾನ್ ।
ಕಾಲಸ್ಯ ವಶಮಾಪನ್ನಃ ಪ್ರಾಣಾಂಸ್ತ್ಯಜತಿ ಸಂಯುಗೇ ॥೩೨॥

ಸ್ವಧರ್ಮನಿರತನಾಗಿ, ಪುತ್ರಪೌತ್ರಾದಿ ಸಂಪತ್ತನ್ನು ಪಡೆದು ಪುನಃ ಕಾಲಕ್ಕೆ ವಶನಾಗಿ ಯುದ್ಧದಲ್ಲಿ ಅಥವಾ ಬೇರೆ ರೀತಿಯಲ್ಲಿ ಪ್ರಾಣಗಳನ್ನು ತ್ಯಜಿಸುತ್ತಾನೆ.

ದೇವರಾಜಸ್ಯ ಭವನಮಿಂದ್ರಲೋಕಮವಾಪ್ನುತೇ ।
ಸಂಪೂಜ್ಯಮಾನಸ್ತ್ರಿದಿವೈರ್ವಿಚಚಾರ ಯಥಾಸುಖಮ್ ॥೩೩॥

ಅವನು ಇಂದ್ರಲೋಕದಲ್ಲಿ ದೇವರಾಜನಾದ ಇಂದ್ರನ ಭವನವನ್ನು ಹೊಂದಿ ದೇವತೆಗಳಿಂದ ಪೂಜಿಸಲ್ಪಟ್ಟು ಸುಖವಾಗಿ ಸಂಚರಿಸುತ್ತಾನೆ.

ರಾಜರ್ಷಿಭಿಃ ಪುಣ್ಯಕೃದ್ಭಿರ್ಯಥಾ ದೇವಪತಿಸ್ತಥಾ ।
ತೈಃ ಸ್ತೂಯತೇ ಬಂದಿಭಿಸ್ತು ನಾನಾವಾದ್ಯೈಃ ಪ್ರಬೋಧ್ಯತೇ ॥೩೪॥

ದೇವತೆಯಾದ ಇಂದ್ರನಂತೆ ಪುಣ್ಯವಂತರಾದ ರಾಜರ್ಷಿಗಳಿಂದ ಪೂಜಿಸಲ್ಪಟ್ಟು ಬಂಧುಗಳಿಂದಲೂ, ಸ್ತ್ರೀಯರಿಂದಲೂ ಮತ್ತು ನಾನಾವಿಧವಾದ ವಾದ್ಯಘೋಷದಿಂದಲೂ ನಿದ್ರೆಯಿಂದ ಎಚ್ಚರಗೊಳಿಸಲ್ಪಡುತ್ತಾನೆ.

ದಿವ್ಯಜಾಂಬೂನದಮಯಂ ಭ್ರಾಜಮಾನಂ ಸಮಂತತಃ ।
ವರಾಪ್ಸರೋಭಿಃ ಸಂಪೂರ್ಣಂ ದೇವಗಂಧರ್ವಸೇವಿತಮ್ ॥೩೫॥

ಯಾನಮಾರುಹ್ಯ ವಿಚರೇದ್ ಯಥಾ ಶಕ್ರಃ ಶಚೀಪತಿಃ ।
ಸ ತತ್ರ ವಸತೇ ಷಷ್ಟಿಂ ಪದ್ಮಾನೀಹ ಮುದಾನ್ವಿತಃ ॥೩೬॥

ಸರ್ವಾಲ್ಲೋಕಾನನುಚರನ್ ಮಹದ್ಧಿಮವಭಾಸಯನ್ ।
ಅಥ ಪುಣ್ಯಕ್ಷಯಾತ್ ತಸ್ಮಾತ್ ಸ್ಥಾಪ್ಯತೇ ಭುವಿ ಭಾರತ ।
ಜಾಯತೇ ಚ ದ್ವಿಜಕುಲೇ ವೇದವೇದಾಂಗಪಾರಗೇ ॥೩೭॥

ದಿವ್ಯಜಾಂಬೂನದಮಯವಾದ, ಎಲ್ಲ ಕಡೆಯಲ್ಲಿಯೂ ಪ್ರಕಾಶಿಸುವ, ಅಪ್ಸರೆಯರಿಂದ ಪೂಜಿತವಾದ, ದೇವಗಂಧರ್ವರಿಂದ ಸೇವಿತವಾದ, ಯಾನವನ್ನು ಏರಿ ಶಚೀಪತಿಯಾದ ಶಕ್ರನಂತೆ ಸಂಚರಿಸುತ್ತಾನೆ. ಅಲ್ಲಿ ಅವನು ಸಂತೋಷದಿಂದ ಕೂಡಿ ಅರವತ್ತು ಪದ್ಮ ವರ್ಷಗಳ ಕಾಲ ಎಲ್ಲ ಲೋಕಗಳಲ್ಲಿಯೂ ಸಂಚರಿಸುತ್ತಾ ತನ್ನ ಮಹಾಭಾಗ್ಯವನ್ನು ಪ್ರದರ್ಶಿಸುತ್ತಾ ವಾಸ ಮಾಡುತ್ತಾನೆ. ಅನಂತರ ಪುಣ್ಯವು ನಾಶವನ್ನು ಹೊಂದಿದ ಮೇಲೆ ಆ ಸ್ಥಾನದಿಂದ ಭೂಮಿಗೆ ಬಂದು ವೇದವೇದಾಂಗ ಪಾರಂಗತರಾದ ಬ್ರಾಹ್ಮಣರ ಕುಲದಲ್ಲಿ ಜನ್ಮವನ್ನು ಪಡೆಯುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಪರಾಶರಗೀತಾಯಾಂ
ಪಂಚಚತ್ವಾರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ನಲವತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ನಲವತ್ತಾರನೆಯ ಅಧ್ಯಾಯ

ಪರಾಶರಗೀತೆ–ಬ್ರಾಹ್ಮಣಜನ್ಮಪ್ರಾಪ್ತಿ ಮತ್ತು ಅದರ ಅನುಷ್ಠಾನ.

ಪರಾಶರಃ

ತತಃ ಶ್ರುತಿಸಮಾಪನ್ನಃ ಸಂಸ್ಕೃತಶ್ಚ ಯಥಾವಿಧಿ ।
ಚೌಲೋಪನಯನಂ ತಸ್ಯ ಯಥಾವತ್ ಕ್ರಿಯತೇ ದ್ವಿಜೈಃ ॥೧॥

ಪರಾಶರ– ಅನಂತರ ಅವನು ವೇದಸಂಪನ್ನನಾಗುತ್ತಾನೆ. ಬ್ರಾಹ್ಮಣರಿಂದ ಅವನಿಗೆ ವಿಧಿಗೆ ಅನುಸಾರವಾಗಿ ಚೌಲೋಪನಯನವು ಮಾಡಲ್ಪಡುತ್ತದೆ.

ತತೋऽಷ್ಟಮೇ ಸ ವರ್ಷೇ ತು ವ್ರತೋಪನಯನಾದಿಭಿಃ ।
ಕ್ರಿಯಾಭಿರ್ವಿಧಿದೃಷ್ಟಾಭಿರ್ಬ್ರಹ್ಮತ್ವಮುಪನೀಯತೇ ॥೨॥

ಅನಂತರ ಎಂಟನೆಯ ವರ್ಷದಲ್ಲಿ ಶಾಸ್ತ್ರದೃಷ್ಟವಾದ ವ್ರತ-ಉಪನಯನಾದಿ ಕ್ರಿಯೆಗಳಿಂದ ಅವನು ಬ್ರಾಹ್ಮಣ್ಯವನ್ನು ಪಡೆಯುತ್ತಾನೆ.

ಗಾಯತ್ರೇಣ ಛಂದಸಾ ತು ಸಂಸ್ಕೃತಶ್ಚರಿತವ್ರತಃ।
ಅಧೀಯಮಾನೋ ಮೇಧಾವೀ ಶುದ್ಧಾತ್ಮಾ ನಿಯತವ್ರತಃ ॥೩॥

ಅಚಿರೇಣೈವ ಕಾಲೇನ ಸಾಂಗಾನ್ ವೇದಾನವಾಪ್ನುತೇ ।
ಸಮಾವೃತ್ತಃ ಸ ಧರ್ಮಾತ್ಮಾ ಸಮಾವೃತ್ತಿಕ್ರಿಯಸ್ತಥಾ ॥೪॥

ಯಾಜನಾಧ್ಯಾಪನರತಃ ಕುಶಲೇ ಕರ್ಮಣಿ ಸ್ಥಿತಃ ।
ಅಗ್ನಿಹೋತ್ರಪರೋ ನಿತ್ಯಂ ದೇವತಾತಿಥಿಪೂಜಕಃ ॥೫॥

ಯಜತೇ ವಿವಿಧೈರ್ಯಜ್ಞೈರ್ಜಪಯಜ್ಞೈಸ್ತಥೈವ ಚ ।
ನ್ಯಾಯಾಗತಧನಾನ್ವೇಷೀ ನ್ಯಾಯವೃತ್ತಸ್ತಪೋಧನಃ ॥೬॥

ಗಾಯತ್ರಿಮಂತ್ರದಿಂದ ಸಂಸ್ಕೃತನಾಗಿ ಒಳ್ಳೆಯ ವ್ರತವನ್ನು ಮಾಡುತ್ತಾ, ಅಧ್ಯಯನ ಶೀಲನಾಗಿ, ಮೇಧಾವಿಯೂ, ಶುದ್ಧಾಂತಃಕರಣನೂ, ವ್ರತನಿಷ್ಠನೂ ಆಗಿ, ಅಲ್ಪಕಾಲದಲ್ಲಿಯೇ ಅಂಗಸಹಿತವಾದ ವೇದಗಳನ್ನು ಹೊಂದುತ್ತಾನೆ. ಸಮಾವರ್ತನ ಕ್ರಿಯೆಯನ್ನು ಮಾಡಿ ಗುರುಗಳಿಂದ ಮನೆಗೆ ಹಿಂದಿರುಗಿ ಧರ್ಮಾತ್ಮನಾದ ಅವನು ಯಾಜನ, ಅಧ್ಯಾಪನ, ಕುಶಲ ಕರ್ಮಗಳಲ್ಲಿ ನಿರತನಾಗುತ್ತಾನೆ. ನಿತ್ಯವೂ ಅಗ್ನಿಹೋತ್ರವನ್ನು ಮಾಡುವವನಾಗಿ, ದೇವತಾ ಪೂಜೆಯನ್ನು ಮಾಡಿ ವಿವಿಧ ಯಜ್ಞಗಳಿಂದಲೂ, ಜಪಯಜ್ಞದಿಂದಲೂ ದೇವತೆಗಳನ್ನು ಆರಾಧಿಸುತ್ತಾನೆ. ತಪೋಧನನಾದ ಅವನು ನ್ಯಾಯದಿಂದ ಪಡೆಯುವ ಧನವನ್ನು ಅನ್ವೇಷಣೆ ಮಾಡುತ್ತಾ ನ್ಯಾಯರೂಪವಾದ ನಡತೆಯನ್ನು ಹೊಂದುವವನಾಗುತ್ತಾನೆ.

ಸರ್ವಭೂತಹಿತಶ್ಚೈವ ಸರ್ವಶಾಸ್ತ್ರವಿಶಾರದಃ ।
ಸ್ವದಾರಪರಿತುಷ್ಟಾತ್ಮಾ ಋತುಗಾಮೀ ಜಿತೇಂದ್ರಿಯಃ ॥೭॥

ಪರಾಪವಾದವಿರತಃ ಸತ್ಯವ್ರತಪರಃ ಸದಾ ।
ಸ ಕಾಲಪರಿಣಾಮಾತ್ತು ಸಂಯುಕ್ತಃ ಕಾಲಧರ್ಮಣಾ ॥೮॥

ಸಂಸ್ಕೃತಶ್ಚಾಗ್ನಿಹೋತ್ರೇಣ ಯಥಾವದ್ ವಿಧಿಪೂರ್ವಕಮ್ ।
ಸೋಮಲೋಕಮವಾಪ್ನೋತಿ ದೇಹನ್ಯಾಸಾನ್ನ ಸಂಶಯಃ ॥೯॥

ಸರ್ವಪ್ರಾಣಿಗಳ ಹಿತದಲ್ಲಿ ರತನಾಗಿ, ಸರ್ವಶಾಸ್ತ್ರಗಳಲ್ಲಿ ವಿಶಾರದನಾಗಿ, ತನ್ನ ಪತ್ನಿಯಲ್ಲಿಯೇ ಋತುಗಾಮಿಯಾಗಿ ತೃಪ್ತನಾಗಿ, ಜಿತೇಂದ್ರಿಯನಾಗಿ, ಇನ್ನೊಬ್ಬರನ್ನು ದೂಷಿಸದೆ ಯಾವಾಗಲೂ ಸತ್ಯವ್ರತಪರನಾಗಿದ್ದು ಕಾಲಕ್ರಮದಲ್ಲಿ ಮರಣವನ್ನು ಹೊಂದಿ ಅಗ್ನಿಹೋತ್ರಾಗ್ನಿಯಿಂದ ವಿಧಿಪೂರ್ವಕವಾಗಿ ಸಂಸ್ಕಾರವನ್ನು ಹೊಂದಿ ದೇಹ ತ್ಯಾಗವನ್ನು ಮಾಡಿದ ಮೇಲೆ ಚಂದ್ರಲೋಕಕ್ಕೆ ಹೋಗುತ್ತಾನೆ. ಇದರಲ್ಲಿ ಸಂಶಯವಿಲ್ಲ.

ತತ್ರ ಸೋಮಪ್ರಭೈರ್ದೇವೈರಗ್ನಿಷ್ವಾತ್ತೈಶ್ಚ ಭಾಸ್ವರೈಃ ।
ತಥಾ ಬರ್ಹಿಷದೈಶ್ಚೈವ ದೇವೈರಾಂಗಿರಸೈರಪಿ ॥೧೦॥

ವಿಶ್ವೇಭಿಶ್ಚೈವ ದೇವೈಶ್ಚ ತಥಾ ಬ್ರಹ್ಮರ್ಷಿಭಿಃ ಪುನಃ ।
ದೇವರ್ಷಿಭಿಶ್ಚಾಪ್ರತಿಮೈಸ್ತಥೈವಾಪ್ಸರಸಾಂ ಗಣೈಃ ।
ಸಾಧ್ಯೈಃ ಸಿದ್ಧೈಶ್ಚ ಸತತಂ ಸತೃತಸ್ತತ್ರ ಮೋದತೇ ॥೧೧॥

ಅಲ್ಲಿ ಚಂದ್ರನ ಕಾಂತಿಯನ್ನು ಹೊಂದಿದ ದೇವತೆಗಳಿಂದಲೂ, ಪ್ರಕಾಶಮಾನರಾದ ಅಗ್ನಿಷ್ವಾತ್ತ ವೊದಲಾದ ಪಿತೃಗಳಿಂದಲೂ, ಬರ್ಹಿಷದರಿಂದಲೂ, ಅಂಗಿರಸರಿಂದಲೂ, ವಿಶ್ವೇದೇವತೆಗಳಿಂದಲೂ, ಬ್ರಹ್ಮರ್ಷಿಗಳಿಂದಲೂ, ಅಸದೃಶರಾದ ದೇವರ್ಷಿಗಳಿಂದಲೂ, ಹಾಗೆಯೇ ಅಪ್ಸರೆಯರ ಗಣದಿಂದಲೂ, ಸಾಧ್ಯರಿಂದಲೂ, ಸಿದ್ಧರಿಂದಲೂ ಸತತವಾಗಿ ಪೂಜಿತನಾಗಿ ಸುಖವನ್ನು ಅನುಭವಿಸುತ್ತಾನೆ.

ಜಾತರೂಪಮಯಂ ದಿವ್ಯಮರ್ಕತುಲ್ಯಂ ಮನೋಜವಮ್ ।
ದೇವಗಂಧರ್ವಸಂಕೀರ್ಣಂ ವಿಮಾನಮಧಿರೋಹತಿ ॥೧೨॥

ಸುವರ್ಣಮಯವಾದ, ಸೂರ್ಯದ್ಯುತಿಯನ್ನು ಹೊಂದಿದ, ಮನೋಜಯವನ್ನು ಹೊಂದಿದ, ದೇವಗಂಧರ್ವರಿಂದ ತುಂಬಿದ ದಿವ್ಯವಾದ ವಿಮಾನವನ್ನು ಏರಿ ಸಂಚರಿಸುತ್ತಾನೆ.

ಸೌಮ್ಯರೂಪಾ ಮನಃಕಾಂತಾಸ್ತಪ್ತಕಾಂಚನಭೂಷಣಾಃ ।
ಸೋಮಕನ್ಯಾ ವಿಮಾನಸ್ಥಂ ರಮಯಂತಿ ಮುದಾನ್ವಿತಾಃ ॥೧೩॥

ಸೌಮ್ಯರೂಪವನ್ನು ಧರಿಸಿದ, ಮನೋಹರರಾದ, ಸುವರ್ಣಾಭರಣ ಭೂಷಿತರಾದ ಚಂದ್ರಕನ್ಯೆಯರು ಸಂತೋಷಭರಿತರಾಗಿ ವಿಮಾನದಲ್ಲಿ ಕುಳಿತ ಅವನನ್ನು ಸಂತೋಷಪಡಿಸುತ್ತಾರೆ.

ಸ ತತ್ರ ರಮತೇ ಪ್ರೀತಃ ಸಹ ದೇವೈಃ ಸಹರ್ಷಿಭಿಃ ।
ಲೋಕಾನ್ ಸರ್ವಾನನುಚರನ್ ದೀಪ್ತತೇಜಾ ಮನೋಜವಃ ॥೧೪॥

ಅಲ್ಲಿ ಅವನು ದೀಪ್ತವಾದ ತೇಜಸ್ಸನ್ನು ಹೊಂದಿ, ಮನೋಜಯವನ್ನು ಹೊಂದಿ, ಋಷಿಗಳ ಜೊತೆಯಲ್ಲಿ ಎಲ್ಲ ಲೋಕಗಳಲ್ಲಿಯೂ ಸಂಚರಿಸುತ್ತಾ ದೇವತೆಗಳ ಜೊತೆಯಲ್ಲಿ ಸಂತೋಷದಿಂದ ಇರುತ್ತಾನೆ.

ಸಭಾಂ ಕಾಮಜವೀಂ ಚಾಪಿ ನಿತ್ಯಮೇವಾಭಿಗಚ್ಛತಿ ।
ಸರ್ವಲೋಕೇಶ್ವರಮೃಷಿಂ ನಮಸೃತ್ಯ ಪಿತಾಮಹಮ್ ॥೧೫॥

ಪರಮೇಷ್ಠಿನಮನಂತಶ್ರೀರ್ಲೋಕಾನಾಂ ಪ್ರಭವಾಪ್ಯಯಃ ।
ಯತಃ ಸರ್ವಾಃ ಪ್ರವರ್ತಂತೇ ಸರ್ಗಪ್ರಲಯವಿಕ್ರಿಯಾಃ ।
ಸ ತತ್ರ ವರ್ತತೇ ಶ್ರೀಮಾನ್ ದ್ವಿಶತಂ ದ್ವಿಜಸತ್ತಮಃ ॥೧೬॥

ಕಾಮಜವವುಳ್ಳ ಸಭೆಯನ್ನು ನಿತ್ಯವೂ ಪ್ರವೇಶಿಸುತ್ತಾನೆ. ಸರ್ವಲೋಕೇಶ್ವರರೂ, ಋಷಿಗಳೂ, ಸರ್ವಜೀವೋತ್ತಮರೂ, ಅನಂತಸಂಪತ್ತನ್ನು ಹೊಂದಿದವರೂ, ಎಲ್ಲ ಲೋಕಗಳ ಸೃಷ್ಟಿ, ಪ್ರಳಯಗಳಿಗೆ ಕಾರಣರಾದವರೂ ಆದ ಪಿತಾಮಹರಾದ ಬ್ರಹ್ಮದೇವರಿಗೆ ನಮಸ್ಕರಿಸಿ ಅಲ್ಲಿ ಆ ದ್ವಿಜಶ್ರೇಷ್ಠನು ಎರಡು ನೂರು ಪದ್ಮವರ್ಷಗಳ ಕಾಲ ವಾಸ ಮಾಡುತ್ತಾನೆ.

ಅಥ ಕಾಲಕ್ಷಯಾತ್ ತಸ್ಮಾತ್ ಸ್ಥಾನಾದಾವರ್ತತೇ ಪುನಃ ।
ಜಾತಿಧರ್ಮಾಂಸ್ತಥಾ ಸರ್ವಾನ್ ಸರ್ಗಾದಾವರ್ತನಾನಿ ಚ ॥೧೭॥

ಅಶಾಶ್ವತಮಿದಂ ಸರ್ವಮಿತಿ ಚಿಂತ್ಯೋಪಲಭ್ಯ ಚ ।
ಶಾಶ್ವತಂ ದಿವ್ಯಮಚಲಮದೀನಮಪುನರ್ಭವಮ್ ॥೧೮॥

ಆಸ್ಥಾಸ್ಯತ್ಯಭಯಂ ನಿತ್ಯಂ ಯತ್ರಾವೃತ್ತಿರ್ನ ವಿದ್ಯತೇ ।
ಯತ್ರ ಗತ್ವಾ ನ ಮ್ರಿಯತೇ ಜನ್ಮ ಚಾಪಿ ನ ವಿದ್ಯತೇ ॥೧೯॥

ಅನಂತರ ಕಾಲಕ್ರಮದಲ್ಲಿ ಪುಣ್ಯಕ್ಷಯವಾದ ಮೇಲೆ ಆ ಸ್ಥಾನದಿಂದ ಇಲ್ಲಿಗೆ ಹಿಂದಿರುಗಿ ಬರುತ್ತಾನೆ. ಬೇರೆ ಬೇರೆ ಜಾತಿಯ ಧರ್ಮಗಳನ್ನೂ, ಸ್ವರ್ಗದಿಂದ ಹಿಂದಿರುಗುವುದನ್ನೂ ನೋಡಿ ಅವನು ಇವೆಲ್ಲವೂ ಅಶಾಶ್ವತವೆಂದು ಚಿಂತಿಸಿ, ಸ್ವತಃ ಅನುಭವಿಸಿ, ಶಾಶ್ವತವೂ, ದಿವ್ಯವೂ, ಅಚಲವೂ, ದೈನ್ಯರಹಿತವೂ ಆದ ಮೋಕ್ಷವನ್ನು ಉದ್ದೇಶಿಸಿ, ಎಲ್ಲಿ ಹೋದರೆ ಪುನರಾವೃತ್ತಿ ಇಲ್ಲವೋ, ಮರಣವಿಲ್ಲವೋ, ಜನ್ಮವಿಲ್ಲವೋ ಅಂತಹ ಮೋಕ್ಷಕ್ಕಾಗಿ ಪ್ರಯತ್ನಪಡುತ್ತಾನೆ.

ಗರ್ಭಕ್ಲೇಶಾಮಯಾಃ ಪ್ರಾಪ್ತಾ ಜಾಯತಾ ಚ ಪುನಃ ಪುನಃ ।
ಕಾಯಕ್ಲೇಶಾಶ್ಚ ವಿವಿಧಾ ದ್ವಂದ್ವಾನಿ ವಿವಿಧಾನಿ ಚ ॥೨೦॥

ಶೀತೋಷ್ಣಸುಖದುಃಖಾನಿ ಈರ್ಷ್ಯಾದ್ವೇಷಕೃತಾನಿ ಚ ।
ತತ್ರತತ್ರೋಪಭುಕ್ತಾನಿ ನ ಕ್ವಚಿಚ್ಛಾಶ್ವತೀ ಸ್ಥಿತಿಃ ॥೨೧॥

ಅವನು ಪುನಃ ಪುನಃ ಹುಟ್ಟಿ ಗರ್ಭವಾಸ ದುಃಖಗಳನ್ನೂ ಮತ್ತು ಅನೇಕ ದುಃಖಗಳನ್ನೂ ಹೊಂದಿದವನಾಗಿ, ಅನೇಕ ವಿಧವಾದ ಶರೀರ ಕ್ಲೇಶಗಳನ್ನೂ, ವಿಧವಿಧವಾದ ಶೀತೋಷ್ಣಸುಖದುಃಖಾದಿ ದ್ವಂದ್ವಗಳನ್ನೂ, ದ್ವೇಷಾಸೂಯೆಗಳಿಂದ ಉಂಟಾದ ದ್ವಂದ್ವಗಳನ್ನೂ ಅಲ್ಲಲ್ಲಿ ಅನುಭವಿಸಿದನು. ಇವುಗಳಲ್ಲಿ ಯಾವುದೂ ಸ್ಥಿರವಾದುದಲ್ಲ.

ಏವಂ ಸ ನಿಶ್ಚಯಂ ಕೃತ್ವಾ ನಿರ್ಮುಚ್ಯ ಗೃಹಬಂಧನಾತ್ ।
ಛಿತ್ತ್ವಾ ಭಾರ್ಯಾಮಯಂ ಪಾಶಂ ತಥೈವಾಪತ್ಯಸಂಭವಮ್ ॥೨೨॥

ಯತಿಧರ್ಮಮುಪಾಶ್ರಿತ್ಯ ಗುರುಶುಶ್ರೂಷಣೇ ರತಃ ।
ಅಚಿರೇಣೈವ ಕಾಲೇನ ಶ್ರೇಯಃ ಸಮಧಿಗಚ್ಛತಿ ॥೨೩॥

ಈ ರೀತಿಯಲ್ಲಿ ನಿಶ್ಚಯಿಸಿ ಅವನು ಗೃಹಬಂಧನವನ್ನು ಕಳೆದುಕೊಂಡು ಪತ್ನಿ ಎಂಬ ಪಾಶವನ್ನೂ, ದುಃಖವೆಂಬ ಪಾಶವನ್ನೂ ಕತ್ತರಿಸಿ ಯತಿಧರ್ಮವನ್ನು ಆಶ್ರಯಿಸಿ ಗುರು ಶುಶ್ರೂಷೆಯಲ್ಲಿ ರತನಾಗುತ್ತಾನೆ. ಅಲ್ಪವಾದ ಕಾಲದಲ್ಲಿಯೇ ಅವನು ಶ್ರೇಯಸ್ಸನ್ನು ಹೊಂದುತ್ತಾನೆ.

ಯೋಗಶಾಸ್ತ್ರಂ ಚ ಸಾಂಖ್ಯಂ ಚ ವಿದಿತ್ವಾ ಸೋಽರ್ಥತತ್ತ್ವತಃ ।
ಅನುಜ್ಞಾತಶ್ಚ ಗುರುಣಾ ಯಥಾಶಾಸ್ತ್ರಮವಸ್ಥಿತಃ ॥೨೪॥

ಪುಣ್ಯತೀರ್ಥಾನುಸೇವೀ ಚ ನದೀನಾಂ ಪುಲಿನಾಶ್ರಯಃ ।
ಶೂನ್ಯಾಗಾರನಿಕೇತಶ್ಚ ವನವೃಕ್ಷಗುಹಾಶಯಃ ॥೨೫॥

ಯೋಗಶಾಸ್ತ್ರ, ಸಾಂಖ್ಯಶಾಸ್ತ್ರ ಅವುಗಳ ಅರ್ಥವನ್ನು ಸರಿಯಾಗಿ ತಿಳಿದು ಗುರುವಿನ ಅನುಮತಿಯನ್ನು ಪಡೆದು, ಶಾಸ್ತ್ರಾನುಸಾರ ಆಚಾರವುಳ್ಳವನಾಗಿ, ಪುಣ್ಯತೀರ್ಥಗಳನ್ನು ಸೇವಿಸುತ್ತಾ , ನದಿಗಳ ತೀರದಲ್ಲಿಯೂ, ಶೂನ್ಯಾಗಾರಗಳಲ್ಲಿಯೂ, ವನ-ವೃಕ್ಷಗಳು ಮತ್ತು ಗುಹೆಗಳಲ್ಲಿಯೂ ವಾಸ ಮಾಡುತ್ತಾನೆ.

ಅರಣ್ಯಾನುಚರೋ ನಿತ್ಯಂ ದೇವಾರಣ್ಯನಿಕೇತನಃ ।
ಏಕರಾತ್ರಂ ದ್ವಿರಾತ್ರಂ ವಾ ನ ಕ್ವಚಿತ್ ಸಜ್ಜತೇ ದ್ವಿಜಃ ॥೨೬॥

ದೇವಾರಣ್ಯಗಳಲ್ಲಿ ವಾಸಿಸುವವನಾಗಿ, ಅರಣ್ಯಸಂಚಾರಿಯಾಗಿ ಆ ಬ್ರಾಹ್ಮಣನು ಒಂದು ಸ್ಥಳದಲ್ಲಿ ಒಂದು ರಾತ್ರಿ ಅಥವಾ ಎರಡು ರಾತ್ರಿಯಾಗಲೀ ಇರುವುದಿಲ್ಲ.

ಶೀರ್ಣಪರ್ಣಪುಟೇ ಚಾಪಿ ವ್ಯಹ್ನೇ ಚರತಿ ಭಿಕ್ಷುಕಃ ।
ನ ಭೋಗಾರ್ಥಮನುಪ್ರೇತ್ಯ ಯಾತ್ರಾಮಾತ್ರಂ ಸಮಶ್ನುತೇ ॥೨೭॥

ಒಣಗಿದ ಎಲೆಯ ಹರಿದ ದೊನ್ನೆಯಲ್ಲಿ ಭಿಕ್ಷೆಯನ್ನು ಬೇಡುತ್ತಾನೆ. ಅದು ಭೋಗಾರ್ಥವಾಗಿ ಅಲ್ಲ. ಸಂಚರಿಸಿ ಶರೀರಯಾತ್ರೆಗೆ ಮಾತ್ರ ಆಹಾರವನ್ನು ಸ್ವೀಕರಿಸುತ್ತಾನೆ.

ಧರ್ಮಲಬ್ಧಂ ಸಮಶ್ನಾತಿ ನ ಕಾಮಾತ್ ಕಿಂಚಿದಶ್ನುತೇ ।
ಯುಗಮಾತ್ರದೃಗಧ್ವಾನಂ ಕ್ರೋಶಾದೂರ್ಧ್ವಂ ನ ಗಚ್ಛತಿ ॥೨೮॥

ಧರ್ಮಲಬ್ಧವಾದುದನ್ನು ಮಾತ್ರ ಭುಂಜಿಸುತ್ತಾನೆ. ಆಸೆಯಿಂದ ಯಾವುದನ್ನೂ ಭುಂಜಿಸುವುದಿಲ್ಲ. ಎರಡು ಹೆಜ್ಜೆ ಮಾತ್ರದಷ್ಟು ಭೂಮಿಯನ್ನು ಪರೀಕ್ಷಿಸಿ ಮುಂದೆ ಸಾಗುತ್ತಾನೆ. ಒಂದು ಕ್ರೋಶಕ್ಕಿಂತ ಹೆಚ್ಚಿನ ದೂರವನ್ನು ನಡೆಯುವುದಿಲ್ಲ.

ಸಮೋ ಮಾನಾವಮಾನಾಭ್ಯಾಂ ಸಮಲೋಷ್ಟಾಶ್ಮಕಾಂಚನಃ ।
ಸರ್ವಭೂತಾಭಯಕರಸ್ತಥೈವಾಭಯದಕ್ಷಿಣಃ ॥೨೯॥

ನಿರ್ದ್ವಂದ್ವೋ ನಿರ್ನಮಸ್ಕಾರೋ ನಿರಾನಂದಪರಿಗ್ರಹಃ ।
ನಿರ್ಮಮೋ ನಿರಹಂಕಾರಃ ಸರ್ವಭೂತನಿರಾಶ್ರಯಃ ॥೩೦॥

ಮಾನಾವಮಾನಗಳಲ್ಲಿ, ಲೋಷ್ಟಾಶ್ಮಕಾಂಚನದಲ್ಲಿಯೂ ಸಮಾನನಾಗಿರುತ್ತಾನೆ. ಸರ್ವಭೂತಗಳಿಗೂ ಅಭಯವನ್ನು ಕೊಡುತ್ತಾನೆ ಮತ್ತು ಆ ಅಭಯವೇ ಅವನು ಕೊಡುವ ದಕ್ಷಿಣೆಯಾಗಿರುತ್ತದೆ. ದ್ವಂದ್ವಾತೀತನಾಗಿ ಯಾರಿಗೂ ನಮಸ್ಕಾರವನ್ನು ಮಾಡದೆ ಪರಿಗ್ರಹದಲ್ಲಿ ಸುಖವನ್ನು ಹೊಂದದೆ, ಅಹಂಕಾರ-ಮಮಕಾರಗಳನ್ನು ತ್ಯಜಿಸಿ, ಯಾವ ಪ್ರಾಣಿಗಳನ್ನೂ ಆಶ್ರಯಿಸದೆ ಇರುತ್ತಾನೆ.

ಪರಿಸಂಖ್ಯಾನತತ್ತ್ವಜ್ಞಸ್ತದಾ ಸತ್ಯರತಃ ಸದಾ ।
ಊರ್ಧ್ವಂ ನಾಧೋ ನ ತಿರ್ಯಕ್ಚ ನ ಕಿಂಚಿದಭಿಕಾಮಯೇತ್ ॥೩೧॥

ತತ್ತ್ವಪರಿಸಂಖ್ಯಾನಕುಶಲನಾಗಿ, ಯಾವಾಗಲೂ ಸತ್ಯದಲ್ಲಿ ರತನಾಗಿ, ಊರ್ಧ್ವ ಲೋಕದಲ್ಲಿ ಅಧೋಲೋಕದಲ್ಲಿ ಅಥವಾ ಎಡಬಲಗಳಲ್ಲಿರುವ ಯಾವ ವಿಷಯವನ್ನೂ ಆಶಿಸುವುದಿಲ್ಲ.

ಏವಂ ಹಿ ರಮಮಾಣಸ್ತು ಯತಿಧರ್ಮಂ ಯಥಾವಿಧಿ ।
ಕಾಲಸ್ಯ ಪರಿಣಾಮಾತ್ತು ಯಥಾ ಪಕ್ವಫಲಂ ತಥಾ ॥೩೨॥

ಸ ವಿಸೃಜ್ಯ ಸ್ವಕಂ ದೇಹಂ ಪ್ರವಿಶೇದ್ ಬ್ರಹ್ಮ ಶಾಶ್ವತಮ್ ।
ನಿರಾಮಯಮನಾದ್ಯಂತಂ ಗುಣಸೌಮ್ಯಮಚೇತನಮ್ ॥೩೩॥

ಹೀಗೆ ಶಾಸ್ತ್ರಸಮ್ಮತವಾದ ರೀತಿಯಲ್ಲಿ ಯತಿಧರ್ಮವನ್ನು ಆಚರಿಸಿ ಸಂತೋಷ ಪಡುತ್ತಾ ಕಾಲಪರಿಣಾಮದಿಂದ ಪಕ್ವವಾದ ಫಲದಂತೆ ತನ್ನ ದೇಹವನ್ನು ಪರಿತ್ಯಾಗ ಮಾಡಿ ಶಾಶ್ವತನೂ, ನಿರಾಮಯನೂ, ಆದ್ಯಂತರಹಿತನೂ, ಗುಣಪರಿಪೂರ್ಣನೂ, ಪ್ರಾಕೃತ ಜ್ಞಾನರಹಿತನೂ ಆದ ಬ್ರಹ್ಮನನ್ನು ಪ್ರವೇಶಿಸುತ್ತಾನೆ.

ನಿರಕ್ಷರಮಬೀಜಂ ಚ ನಿರಿಂದ್ರಿಯಮಜಂ ತಥಾ ।
ಅಜಯ್ಯಮಕ್ಷಯಂ ಯತ್ ತದಭೇದ್ಯಂ ಸೂಕ್ಷ್ಮಮೇವ ಚ ॥೩೪॥

ನಿರ್ಗುಣಂ ಚ ಪ್ರಕೃತಿಮನ್ನಿರ್ವಿಕಾರಂ ಚ ಸರ್ವಶಃ ।
ಭೂತಭವ್ಯಭವಿಷ್ಯಸ್ಯ ಕಾಲಸ್ಯ ಪರಮೇಶ್ವರಮ್ ।
ಅವ್ಯಕ್ತಂ ಪುರುಷಂ ಕ್ಷೇತ್ರಮಾನಂತ್ಯಾಯ ಪ್ರಪದ್ಯತೇ ॥೩೫॥

ಶಬ್ದಗಳನ್ನು ಮೀರಿದ, ಕಾಲಶೂನ್ಯನಾದ, ಪ್ರಾಕೃತದಿಂದ ರಹಿತನಾದ, ಜನನ ರಹಿತನಾದ, ಅಜೇಯನಾದ, ಅಕ್ಷಯನಾದ, ಸೂಕ್ಷ್ಮನಾದ, ಅಭೇದ್ಯನಾದ, ಪ್ರಾಕೃತ ಗುಣರಹಿತನಾದ, ಪ್ರಕೃತಿಗೆ ಸ್ವಾಮಿಯಾದ, ಸರ್ವಥಾ ನಿರ್ವಿಕಾರನಾದ, ಭೂತ-ವರ್ತಮಾನ-ಭವಿಷ್ಯತ್ ಕಾಲಗಳಿಗೆ ಒಡೆಯನಾದ, ಅವ್ಯಕ್ತನಾದ, ಎಲ್ಲದಕ್ಕೂ ಆಶ್ರಯನಾದ ಪರಮಪುರುಷನನ್ನು ಪಡೆದು ಅನಂತ ಕಾಲದಲ್ಲಿ ಅಲ್ಲಿಯೇ ಇರುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಷತ್ವಾರಿಂಶೋತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ನಲವತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ನಲವತ್ತೇಳನೆಯ ಅಧ್ಯಾಯ

ಪರಾಶರಗೀತೆ-ಶೂದ್ರನ ಬ್ರಹ್ಮಪ್ರಾಪ್ತಿಕಥನ.

ಪರಾಶರಃ

ಏವಂ ಸ ಭಿಕ್ಷುರ್ನಿರ್ವಾಣಂ ಪ್ರಾಪ್ನುಯಾದ್ ದಗ್ಧಕಿಲ್ಬಿಷಃ ।
ಇಹಸ್ಥೋ ದೇಹಮುತ್ಸೃಜ್ಯ ನೀಡಂ ಶಕುನಿವದ್ ಯಥಾ ॥೧॥

ಪರಾಶರ– ಹೀಗೆ ಶೂದ್ರಜನ್ಮದಿಂದ ಕ್ರಮವಾಗಿ ಮೇಲೆ ಬಂದ ಆ ಯತಿಯು ತನ್ನ ದೋಷಗಳನ್ನೆಲ್ಲ ಕಳೆದುಕೊಂಡು ಪಕ್ಷಿಯು ಗೂಡನ್ನು ಬಿಡುವಂತೆ ಈ ದೇಹವನ್ನು ತ್ಯಜಿಸಿ ಮೋಕ್ಷವನ್ನು ಪಡೆಯುತ್ತಾನೆ.

ಸತ್ಪಥಾಲಂಬನಾದೇವ ಶೂದ್ರಃ ಪ್ರಾಪ್ನೋತಿ ಸದ್ಗತಿಮ್ ।
ಬ್ರಹ್ಮಣಃ ಸ್ಥಾನಮಚಲಂ ಸ್ಥಾನಾತ್ ಸ್ಥಾನಮವಾಪ್ನುಯಾತ್ ॥೨॥

ಸನ್ಮಾರ್ಗವನ್ನು ಆಶ್ರಯಿಸುವುದರಿಂದಲೇ ಶೂದ್ರನು ಒಂದು ಸ್ಥಾನದಿಂದ ಮತ್ತೊಂದು ಉನ್ನತವಾದ ಸ್ಥಾನಕ್ಕೆ ಹೋಗಿ ಸದ್ಗತಿಯನ್ನು ಹೊಂದಿ ಪರಮಾತ್ಮನ ಅಚಲವಾದ ಸ್ಥಾನವನ್ನು ಪಡೆಯುತ್ತಾನೆ.

ಯಥಾ ಖನನ್ ಖನಿತ್ರೇಣ ಜಾಂಗಲೇ ವಾರಿ ವಿಂದತಿ ।
ಅನಿರ್ವೇದಾತ್ ತತಃ ಸ್ಥಾನಮೀಪ್ಸಿತಂ ಪ್ರತಿಪದ್ಯತೇ ॥೩॥

ಹೇಗೆ ಭೂಮಿಯನ್ನು ಅಗೆಯುವವನು ಬೇಸರಗೊಳ್ಳದೆ ಗುದ್ದಲಿಯಿಂದ ಅಗೆಯುವುದರಿಂದ ನೀರನ್ನು ಪಡೆಯುತ್ತಾನೆಯೋ ಅದರಂತೆ ಕ್ಷುದ್ರನಾಗಿದ್ದವನೂ ಸಹ ಬೇಸರಗೊಳ್ಳದೆ ಸಾಧನೆಯನ್ನು ಮಾಡುವುದರಿಂದ ಅಭೀಷ್ಟವಾದ ಸ್ಥಾನವನ್ನು ಪಡೆಯುತ್ತಾನೆ.

ಸೈಷಾ ಗತಿರನಾದ್ಯಂತಾ ಸರ್ವೈರಪ್ಯುಪಧಾರಿತಾ ।
ತಸ್ಮಾಚ್ಛೂದ್ರೈರನಿರ್ವೇದಾತ್ ಶ್ರದ್ದಧಾನೈಸ್ತು ನಿತ್ಯದಾ ।
ವರ್ತಿತವ್ಯಂ ಯಥಾಶಕ್ತ್ಯಾ ಯಥಾ ಪ್ರೋಕ್ತಂ ಮನೀಷಿಭಿಃ ॥೪॥

ಯತ್ಕರೋತಿ ತದಶ್ನಾತಿ ಶುಭಂ ವಾ ಯದಿ ವಾऽಶುಭಮ್ ।
ನಾಕೃತಂ ಭುಜ್ಯತೇ ಕರ್ಮ ನ ಕೃತಂ ನಶ್ಯತೇ ಫಲಮ್ ॥೫॥

ಇಂತಹ ಪ್ರಾಪ್ತಿಯು ಆದ್ಯಂತರಹಿತವಾದುದೆಂದು ಎಲ್ಲರೂ ನಿರ್ಧರಿಸಿದ್ದಾರೆ. ಆದ್ದರಿಂದ ಶೂದ್ರರು ಬೇಸರಗೊಳ್ಳದೆ ಯಾವಾಗಲೂ ಶ್ರದ್ಧಾಯುಕ್ತರಾಗಿ ಜ್ಞಾನಿಗಳು ಹೇಳಿದಂತೆ ತಮ್ಮ ಶಕ್ತಿಗೆ ಅನುಸಾರವಾಗಿ ನಡೆದುಕೊಳ್ಳಬೇಕು. ಶುಭವಾಗಲೀ ಅಥವಾ ಅಶುಭವಾಗಲೀ ಏನು ಮಾಡುತ್ತಾನೋ ಅಥವಾ ಏನು ಭೋಗಿಸುತ್ತಾನೆಯೋ ಅದಕ್ಕೆ

ಕಾರಣವಾದ ಕರ್ಮವನ್ನು ಮಾಡದೆ ಭೋಗಿಸುವುದಿಲ್ಲ. ಮಾಡಿದ ಕರ್ಮಕ್ಕೆ ಫಲವೂ ನಷ್ಟವಾಗುವುದಿಲ್ಲ.

ತಥಾ ಶುಭಸಮಾಚಾರಃ ಶುಭಮೇವಾಪ್ನುತೇ ಫಲಮ್ ।
ತಥಾऽಶುಭಸಮಾಚಾರೋ ಹ್ಯಶುಭಂ ಸಮವಾಪ್ನುತೇ ॥೬॥

ಆದ್ದರಿಂದ ಶುಭಾಚಾರವುಳ್ಳವನು ಶುಭಫಲವನ್ನೇ ಹೊಂದುತ್ತಾನೆ. ಅಶುಭಾಚಾರ ಉಳ್ಳವನು ಅಶುಭಫಲವನ್ನೇ ಹೊಂದುತ್ತಾನೆ.

ತಥಾ ಶುಭಸಮಾಚಾರೋ ಹ್ಯಶುಭಾನಿ ವಿವರ್ಜಯೇತ್ ।
ಶುಭಾನ್ಯೇವ ಸಮಾದದ್ಯಾದ್ ಯ ಇಚ್ಛೇದ್ ಭೂತಿಮಾತ್ಮನಃ ॥೭॥

ಆದ್ದರಿಂದ ಯಾವನು ತನಗೆ ಶ್ರೇಯಸ್ಸನ್ನು ಅಪೇಕ್ಷಿಸುತ್ತಾನೆಯೋ ಅವನು ಶುಭಾಚಾರದಿಂದ ಕೂಡಿದ್ದು ಅಶುಭವೆಲ್ಲವನ್ನೂ ಪರಿತ್ಯಜಿಸಬೇಕು. ಶುಭವಾದುದನ್ನೇ ಸ್ವೀಕರಿಸಬೇಕು.

ಭೂತಿಶ್ಚ ನಾನ್ಯತಃ ಶಕ್ಯಾ ಶೂದ್ರಾಣಾಮಿತಿ ನಿಶ್ಚಯಃ ।
ಋತೇ ಯತೀನಾಂ ಶುಶ್ರೂಷಾಮಿತಿ ಸಂತೋ ವ್ಯವಸ್ಥಿತಾಃ ॥೮॥

ತಸ್ಮಾದಾಗಮಸಂಪನ್ನೋ ಭವೇತ್ ಸುನಿಯತೇಂದ್ರಿಯಃ ।
ಶಕ್ಯತೇ ಹ್ಯಾಗಮಾದೇವ ಗತಿಂ ಪ್ರಾಪ್ತುಮನಾಮಯಾಮ್ ॥೯॥

ಶೂದ್ರರಿಗೆ ಯತಿಗಳ ಶುಶ್ರೂಷೆಯನ್ನು ಬಿಟ್ಟು ಬೇರೆ ಮಾರ್ಗದಿಂದ ಶ್ರೇಯಸ್ಸು ಲಭ್ಯವಾಗುವುದಿಲ್ಲವೆಂದು ಸಜ್ಜನರು ನಿರ್ಧರಿಸಿದ್ದಾರೆ. ಆದ್ದರಿಂದ ವೇದಸಂಪನ್ನನಾಗಿ ಇಂದ್ರಿಯಜಯವನ್ನು ಹೊಂದಿದವನಾಗಿರಬೇಕು. ವೇದಶಾಸ್ತ್ರಗಳಿಂದ ನಿರ್ದುಷ್ಟವಾದ ಗತಿಯನ್ನು ಹೊಂದಲು ಸಾಧ್ಯವಾಗುತ್ತದೆ.

ಪರಾ ಚೈಷಾಂ ಗತಿರ್ದೃಷ್ಟಾ ಯಾಮನ್ವೇಷಂತಿ ಸಾಧವಃ ।
ಯತ್ರಾಮೃತತ್ವಂ ಲಭತೇ ತ್ಯಕ್ತ್ವಾ ದುಃಖಮನಂತಕಮ್ ॥೧೦॥

ಸಾಧುಗಳು ಯಾವ ಗತಿಯನ್ನು ಹುಡುಕುತ್ತಾರೆಯೋ (ಅಪೇಕ್ಷಿಸುತ್ತಾರೆಯೋ), ಎಲ್ಲಿ ಮರಣವಿಲ್ಲವೋ, ಅನಂತವಾದ ದುಃಖವಿಲ್ಲವೋ ಅಂತಹ ಪರಗತಿಯು ಶೂದ್ರನಿಗೂ ಲಭಿಸುವುದು ಕಂಡಿದೆ.

ಇಮಂ ಹಿ ಧರ್ಮಮಾಸ್ಥಾಯ ಯೇಪಿ ಸ್ಯುಃ ಪಾಪಯೋನಯಃ ।
ಸ್ತ್ರಿಯೋ ವೈಶ್ಯಾಶ್ಚ ಶೂದ್ರಾಶ್ಚ ಪ್ರಾಪ್ನುಯುಃ ಪರಮಾಂ ಗತಿಮ್ ।
ಕಿಂ ಪುನರ್ಬ್ರಾಹ್ಮಣೋ ವಿದ್ವಾನ್ ಕ್ಷತ್ರಿಯೋ ವಾ ಬಹುಶ್ರುತಃ ॥೧೧॥

ಈ ಧರ್ಮವನ್ನು ತಿಳಿದವರು ಪಾಪಯೋನಿಯಲ್ಲಿ ಜನಿಸಿದರೂ ತಮಗೆ ಯೋಗ್ಯವಾದ ಧರ್ಮವನ್ನು ಮಾಡಿದರೆ ಅವರು ಸ್ತ್ರೀಯರಾಗಲೀ, ವೈಶ್ಯರಾಗಲೀ ಅಥವಾ ಶೂದ್ರರಾಗಲೀ ಅವರು ಶ್ರೇಷ್ಠವಾದ ಗತಿಯನ್ನು ಹೊಂದುವರು. ಇನ್ನು ವಿದ್ವಾಂಸನಾದ ಬ್ರಾಹ್ಮಣನೂ, ಬಹುಶ್ರುತನಾದ ಕ್ಷತ್ರಿಯನೂ ಶ್ರೇಷ್ಠವಾದ ಗತಿಯನ್ನು ಪಡೆಯುವುದರಲ್ಲಿ ಏನು ಆಶ್ಚರ್ಯವಿದೆ?

ನ ಚಾಪ್ಯಕ್ಷೀಣಪಾಪಸ್ಯ ಜ್ಞಾನಂ ಭವತಿ ದೇಹಿನಃ ।
ಜ್ಞಾನೋಪಲಬ್ಧಿರ್ಭವತಿ ಕೃತಕೃತ್ಯೋ ಯದಾ ಭವೇತ್ ॥೧೨॥

ಪಾಪಪರಿಹಾರವನ್ನು ಹೊಂದದ ಜೀವನಿಗೆ ಜ್ಞಾನವುಂಟಾಗುವುದಿಲ್ಲ. ಜ್ಞಾನವು ಲಭ್ಯವಾಗಬೇಕಾದರೆ ತನ್ನ ಧರ್ಮವನ್ನು ಸರಿಯಾಗಿ ಆಚರಿಸಬೇಕು.

ಉಪಲಭ್ಯ ತ್ರಿಭಿರ್ಜ್ಞಾನಂ ಜ್ಞಾನಂ ವಾऽಪ್ಯನಸೂಯಕಃ ।
ತಥೈವ ವರ್ತೇದ್ ಗುರುಷು ಭೂಯಾಂಸಂ ವಾ ಸಮಾಹಿತಃ ॥೧೩॥

ಮೂರುವೇದಗಳಿಂದ ಜ್ಞಾನವನ್ನು ಪಡೆದು ದೊಡ್ಡವರಲ್ಲಿ ಅಸೂಯೆಯನ್ನು ಮಾಡದೆ ಗುರುಗಳಲ್ಲಿ ವಿನಯದಿಂದ ವರ್ತಿಸಬೇಕು. ದೊಡ್ಡವರನ್ನು ಆಶ್ರಯಿಸಬೇಕು.

ಅಥಾವಮನ್ಯೇತ ಗುರುಂ ತಥಾ ತೇಷು ಪ್ರವರ್ತತೇ ।
ವ್ಯರ್ಥಮಸ್ಯ ಶ್ರುತಂ ಭವತಿ ಜ್ಞಾನಮಜ್ಞಾನತಾಂ ವ್ರಜೇತ್ ॥೧೪॥

ಹಾಗಿಲ್ಲದೆ ಗುರುಗಳನ್ನು ಅವಮಾನ ಮಾಡಿ ಅವರಲ್ಲಿ ನಡೆದುಕೊಂಡರೆ ಅವನ ವಿದ್ಯೆಯು ವ್ಯರ್ಥವಾಗುತ್ತದೆ ಮತ್ತು ಅವನ ಜ್ಞಾನವು ಅಜ್ಞಾನವಾಗುತ್ತದೆ.

ಗತಿಂ ಚಾಪ್ಯಶುಭಾಂ ಗಚ್ಛೇತ್ ನಿರಯಾಯ ನ ಸಂಶಯಃ ।
ಪ್ರಕ್ಷೀಯತೇ ತಸ್ಯ ಪುಣ್ಯಂ ಜ್ಞಾನಮಸ್ಯ ವಿರುದ್ಧ್ಯತೇ ॥೧೫॥

ಅವನು ಅಶುಭವಾದ ಗತಿಯನ್ನು ಹೊಂದಿ ನರಕಕ್ಕೆ ಹೋಗುವುದರಲ್ಲಿ ಸಂಶಯವಿಲ್ಲ. ಅವನ ಪುಣ್ಯವು ನಾಶಹೊಂದುತ್ತದೆ. ಅವನ ಜ್ಞಾನವು ಅವನಿಗೇ ವಿರೋಧಿಯಾಗುತ್ತದೆ.

ಅದೃಷ್ಟಪೂರ್ವಕಲ್ಯಾಣೋ ಯಥಾ ದೃಷ್ಟ್ವಾ ನಿಧಿಂ ನರಃ ।
ಉತ್ಸೇಕಾನ್ಮೋಹಮಾಪದ್ಯ ತತ್ತ ಜ್ಞಾನಂ ನ ಚಾಪ್ತವಾನ್ ॥೧೬॥

ಏವಮೇವ ಹಿ ನೋತ್ಸೇಕಃ ಕರ್ತವ್ಯೋ ಜ್ಞಾನಸಂಭವಃ ।
ಫಲಂ ಜ್ಞಾನಸ್ಯ ಹಿ ಶಮಃ ಪ್ರಶಮಾಯ ಯತೇತ್ ಸದಾ ॥೧೭॥

ಮೊದಲು ಭಾಗ್ಯವನ್ನು ನೋಡದಿದ್ದ ಮನುಷ್ಯನು ನಿಧಿಯನ್ನು ನೋಡಿ ಪಡೆದು ಅಹಂಕಾರಕ್ಕೆ ಒಳಗಾಗಿ, ಮೋಹವನ್ನು ಹೊಂದಿ ಹೇಗೆ ತತ್ತ ಜ್ಞಾನವನ್ನು ಪಡೆಯುವುದಿಲ್ಲವೋ ಹಾಗೆಯೇ ಜ್ಞಾನವನ್ನು ಪಡೆದು ಅಹಂಕಾರಕ್ಕೆ ಒಳಗಾದರೆ ಆ ಜ್ಞಾನದ ಫಲವನ್ನು ಪಡೆಯುವುದಿಲ್ಲ. ವಿನಯವು ಜ್ಞಾನದ ಫಲ. ಆ ವಿನಯವನ್ನು ಸಂಪಾದಿಸಲು ಯಾವಾಗಲೂ ಪ್ರಯತ್ನಿಸಬೇಕು.

ಉಪಶಾಂತೇನ ದಾಂತೇನ ಕ್ಷಮಾಯುಕ್ತೇನ ಸರ್ವದಾ ।
ಶುಶ್ರೂಷಾ ಪ್ರತಿಪತ್ತವ್ಯಾ ನಿತ್ಯಮೇವಾನಸೂಯತಾ ॥೧೮॥

ಉಪಶಾಂತನೂ, ಇಂದ್ರಿಯನಿಗ್ರಹವುಳ್ಳವನೂ, ಕ್ಷಮಾಗುಣವುಳ್ಳವನೂ ಆದವನು ಯಾವಾಗಲೂ ಅಸೂಯೆಯನ್ನು ಪಡದೆ ಹಿರಿಯರ ಶುಶ್ರೂಷೆಯನ್ನು ಮಾಡಬೇಕು.

ಧೃತ್ಯಾ ಶಿಶ್ನೋದರಂ ರಕ್ಷೇತ್ ಪಾಣಿಪಾದಂ ಚ ಚಕ್ಷುಷಾ ।
ಇಂದ್ರಿಯಾರ್ಥಾಂಶ್ಚ ಮನಸಾ ಮನೋ ಬುದ್ಧ್ಯೌ ಸಮಾದಧೇತ್ ॥೧೯॥

ಧೈರ್ಯವನ್ನು ಅವಲಂಬಿಸಿ ಶಿಶ್ನೋದರಗಳನ್ನು ರಕ್ಷಿಸಬೇಕು. ಕಣ್ಣಿನ ದೃಷ್ಟಿಯಿಂದ ಪಾಣಿಪಾದಗಳನ್ನು ರಕ್ಷಿಸಬೇಕು. ಮನಸ್ಸಿನಿಂದ ಇಂದ್ರಿಯಾರ್ಥಗಳನ್ನು ರಕ್ಷಿಸಬೇಕು. ಮನಸ್ಸನ್ನು ಬುದ್ಧಿಗೆ ಅಧೀನವನ್ನಾಗಿ ಮಾಡಬೇಕು.

ಧೃತ್ಯಾSSಸೀತ ತತೋ ಗತ್ವಾ ಶುದ್ಧದೇಶಂ ಸುಸಂವೃತಮ್ ।
ಲಬ್ಧಾಸನಂ ಯಥಾ ದೃಷ್ಟಂ ವಿಧಿಪೂರ್ವಂ ಸಮಾಚರೇತ್ ॥೨೦॥

ಆದ್ದರಿಂದ ದೇಹತ್ಯಾಗವನ್ನು ಮಾಡುವ ಅಂತಹ ಯತಿಯು ಏಕಾಂತವಾದ ಶುದ್ಧ ದೇಶಕ್ಕೆ ಹೋಗಿ ಧೈರ್ಯವನ್ನು ಹೊಂದಿ ಒಂದು ಆಸನದಲ್ಲಿ ಕುಳಿತು ಹಿಂದೆ ಶಾಸ್ತ್ರದಲ್ಲಿ ನೋಡಿದಂತೆ ಆಚರಿಸಬೇಕು.

ಜ್ಞಾನಯುಕ್ತಸ್ತಥಾ ದೇವಂ ಹೃದಿಸ್ಥಮುಪಲಕ್ಷಯೇತ್ ।
ಆದೀಪ್ಯಮಾನಂ ವಪುಷಾ ವಿಧೂಮಮನಲಂ ಯಥಾ ॥೨೧॥

ಶಾಸ್ತ್ರದಲ್ಲಿ ಹೇಳಲ್ಪಟ್ಟಂತಹ ಜ್ಞಾನದಿಂದ ಯುಕ್ತನಾಗಿ ಹೃದಯದಲ್ಲಿರುವ ತನ್ನ ದೇಹದಿಂದ ಧೂಮರಹಿತವಾದ ಅಗ್ನಿಯಂತೆ ಬೆಳಗುತ್ತಿರುವ ದೇವನನ್ನು ನೋಡಬೇಕು.

ರಶ್ಮಿಮಂತಮಿವಾದಿತ್ಯಂ ವೈದ್ಯುತಾಗ್ನಿಮಿವಾಂಬರೇ ।
ಸಂಸ್ಥಿತಂ ಹೃದಯೇ ಪಶ್ಯೇದೀಶಂ ಶಾಶ್ವತಮವ್ಯಯಮ್ ॥೨೨॥

ಕಿರಣಗಳಿಂದ ಕೂಡಿದ ಸೂರ್ಯನಂತೆ, ಆಕಾಶದಲ್ಲಿ ಕಾಣುವ ಮಿಂಚಿನ ಅಗ್ನಿಯಂತೆ ಹೃದಯದಲ್ಲಿ ಸ್ಥಿತನಾದ ಶಾಶ್ವತನೂ, ಅವ್ಯಯನೂ ಆದ ಪ್ರಭುವನ್ನು ನೋಡಬೇಕು.

ನ ಚಾಯುಕ್ತೇನ ಶಕ್ಯೇತ ದ್ರಷ್ಟುಂ ದೇಹೇ ಮಹೇಶ್ವರಃ ।
ಯುಕ್ತಸ್ತು ಪಶ್ಯತೇ ಬುದ್ಧ್ಯಾ ಸನ್ನಿವೇಶ್ಯ ಮನೋ ಹೃದಿ ॥೨೩॥

ಯೋಗರಹಿತನಾದವನು ದೇಹದಲ್ಲಿ ಹೃದಯದಲ್ಲಿ ಆ ಮಹೇಶ್ವರನನ್ನು ಕಾಣಲು ಸಾಧ್ಯವಿಲ್ಲ. ಅಧ್ಯಾತ್ಮಯೋಗಯುಕ್ತನಾದವನು ಮಾತ್ರ ತನ್ನ ಬುದ್ಧಿಯನ್ನು ಹೃದಯದಲ್ಲಿ (ಹೃನ್ನಾಮಕ ಪರಮಾತ್ಮನಲ್ಲಿ) ನೆಲೆಸಿ ಬುದ್ಧಿಯಿಂದ ಅವನನ್ನು ನೋಡುತ್ತಾನೆ.

ಅಥ ತ್ವೇವಂ ನ ಶಕ್ನೋತಿ ಕರ್ತುಂ ಹೃದಯಧಾರಣಮ್ ।
ಯಥಾಸಾಂಖ್ಯಮುಪಾಸೀತ ಯಥಾವದ್ ಯೋಗಮಾಸ್ಥಿತಃ ॥೨೪॥

ಹೀಗೆ ಧ್ಯಾನವನ್ನು ಮಾಡಿ ಹೃದಯದಲ್ಲಿ ಪರಮಾತ್ಮನ ರೂಪವನ್ನು ಧರಿಸಲು ಸಾಧ್ಯವಾಗದಿದ್ದರೆ ಯೋಗವನ್ನು ಆಶ್ರಯಿಸಿ ಸಾಂಖ್ಯಶಾಸ್ತ್ರದಲ್ಲಿ ಹೇಳಿದಂತೆ ಯಥಾರ್ಥವಾಗಿ ಪರಮಾತ್ಮನನ್ನು ಚಿಂತಿಸಬೇಕು.

ಪಂಚ ಬುದ್ಧೀಂದ್ರಿಯಾಣೀಹ ಪಂಚ ಕರ್ಮೇಂದ್ರಿಯಾಣಿ ವೈ ।
ಪಂಚ ಭೂತವಿಶೇಷಾಶ್ಚ ಮನಶ್ಚೈವ ತು ಷೋಡಶ ॥೨೫॥

ಐದು ಜ್ಞಾನೇಂದ್ರಿಯಗಳು, ಐದು ಕರ್ಮೇಂದ್ರಿಯಗಳು, ಐದು ಮಹಾಭೂತಗಳು ಮತ್ತು ಮನಸ್ಸು ಸೇರಿ ಹದಿನಾರು ತತ್ತ್ವಗಳಾಗುತ್ತವೆ.

ತನ್ಮಾತ್ರಾಣ್ಯಪಿ ಪಂಚೈವ ಮನೋಽಹಂಕಾರ ಏವ ಚ ।
ಅಷ್ಟಮಂ ಚಾಪ್ಯಥಾವ್ಯಕ್ತಮೇತಾಃ ಪ್ರಕೃತಿಸಂಜ್ಞಿತಾಃ ।
ಏತಾಃ ಪ್ರಕೃತಯಶ್ಚಾಷ್ಟೌ ವಿಕಾರಾಶ್ಚಾಪಿ ಷೋಡಶ ॥೨೬॥

ಇಂದ್ರಿಯಗಳ ವಿಷಯಗಳಾದ ಶಬ್ದ-ಸ್ಪರ್ಶ-ರೂಪ-ರಸ-ಗಂಧಗಳು ಐದು. ಮನಸ್ಸು-ಅಹಂಕಾರ ಮತ್ತು ಎಂಟನೆಯದ್ದಾದ ಅವ್ಯಕ್ತತತ್ತ್ವ ಇವೆಲ್ಲವೂ ಪ್ರಕೃತಿ ಎಂದು ಕರೆಸಿಕೊಳ್ಳುತ್ತವೆ. ಇವು ಎಂಟು ಪ್ರಕೃತಿಗಳು ಹಿಂದೆ ಹೇಳಿದ ಹದಿನಾರು ವಿಕಾರಗಳು.

ಏವಮೇತದಿಹಸ್ಥೇನ ವಿಜ್ಞೇಯಂ ತತ್ತ್ವಬುದ್ಧಿನಾ ।
ಏವಂ ವರ್ಷ್ಮ ಸಮುತ್ತೀರ್ಯ ತೀರ್ಣೋ ಭವತಿ ನಾನ್ಯಥಾ ।
ಪರಿಸಂಖ್ಯಾನಮೇವೈತನ್ಮಂತವ್ಯಂ ಜ್ಞಾನಬುದ್ಧಿನಾ ॥೨೭॥

ತತ್ತ್ವಬುದ್ಧಿಯುಳ್ಳ ಪುರುಷನು ಇಲ್ಲಿಯೇ ಇದ್ದು ಈ ಇಪ್ಪತ್ನಾಲ್ಕು ತತ್ತ್ವಗಳನ್ನು ಸರಿಯಾಗಿ ತಿಳಿಯಬೇಕು. ಹಾಗೆ ಮಾಡಿದಲ್ಲಿ ಈ ದೇಹವನ್ನು ತ್ಯಜಿಸಿ ಸಂಸಾರದಿಂದ ದಾಟುತ್ತಾನೆ. ಬೇರೆ ರೀತಿಯಲ್ಲಿ ದಾಟಲು ಸಾಧ್ಯವಿಲ್ಲ. ಈ ತತ್ತ್ವಗಳ ಪರಿಸಂಖ್ಯಾನವನ್ನು ಜ್ಞಾನನಿಷ್ಠನಾಗಿ ಮನನ ಮಾಡಬೇಕು.

ಅಹನ್ಯಹನಿ ಶಾಂತಾತ್ಮಾ ಪಾವನಾಯ ಹಿತಾಯ ಚ ।
ಏವಮೇವ ಪ್ರಸಂಖ್ಯಾಯ ತತ್ತ್ವಬುದ್ಧಿರ್ವಿಮುಚ್ಯತೇ ।
ನಿಷ್ಕಲಂ ಕೇವಲಂ ಭವತಿ ಶುದ್ಧತತ್ತ್ವಾರ್ಥತತ್ತ್ವವಿತ್ ॥೨೮॥

ಪ್ರತಿದಿವಸವೂ ಶಾಂತನಾಗಿ, ಪವಿತ್ರವಾದ ಮತ್ತು ಹಿತವಾದ ಮುಂದಿನ ಗತಿಗೋಸ್ಕರ ಹೀಗೆಯೇ ತತ್ತ್ವವನ್ನು ಎಣಿಸುವವನು ಮೋಕ್ಷವನ್ನು ಪಡೆಯುತ್ತಾನೆ. ಶುದ್ಧತತ್ತ್ವಾರ್ಥ ಜ್ಞಾನವುಳ್ಳ ಅವನು ಪ್ರಾಕೃತವಾದ ಹದಿನಾರು ಕಲೆಗಳಿಂದ ರಹಿತನಾಗಿ, ಜಡ-ಅಮಿಶ್ರನಾಗಿ ಶುದ್ಧ ಚೇತನನಾಗುತ್ತಾನೆ.

ಭಿಕ್ಷುಕಾಶ್ರಮಮಾಸ್ಥಾಯ ಶುಶ್ರೂಷಾನಿರತೋ ಬುಧಃ ।
ಶೂದ್ರೋ ನಿರ್ಮುಚ್ಯತೇ ಸತ್ತ್ವಸಂಸರ್ಗಾದೇವ ನಾನ್ಯಥಾ ॥೨೯॥

ಹೀಗೆ ಕ್ರಮವಾಗಿ ಉನ್ನತಸ್ಥಾನಕ್ಕೆ ಬಂದ ಶೂದ್ರನು ವಿವೇಕಿಯಾಗಿ, ಶುಶ್ರೂಷಾ ನಿರತನಾಗಿ ಯತಿಯಾಶ್ರಮವನ್ನು ಆಶ್ರಯಿಸಿ ಸದ್ಗುಣಗಳ ಸಂಪತ್ತಿನಿಂದಲೇ ಮೋಕ್ಷವನ್ನು ಪಡೆಯುತ್ತಾನೆ. ಬೇರೆಯ ಮಾರ್ಗವಿಲ್ಲ.

ಸತ್ಸನ್ನಿಕರ್ಷೇ ಪರಿವರ್ತಿತವ್ಯಂ
ವಿದ್ಯಾಧಿಕಾಶ್ಚಾಪಿ ನಿಷೇವಿತವ್ಯಾಃ ।
ಸವರ್ಣತಾಂ ಗಚ್ಛತಿ ಸನ್ನಿಕರ್ಷಾತ್
ನೀಲಃ ಖಗೋ ಮೇರುಮಿವಾಶ್ರಯನ್ ವೈ ॥೩೦॥

ಆದ್ದರಿಂದ ಸಜ್ಜನರ ಸಂಪರ್ಕದಲ್ಲಿಯೇ ಇರಬೇಕು. ಅಧಿಕ ವಿದ್ಯೆಯನ್ನು ಗಳಿಸಿದವರನ್ನು ಸೇವಿಸಬೇಕು. ಕಪ್ಪಾದ ಪಕ್ಷಿಯು ಮೇರುವಿನ ಸಂಪರ್ಕದಿಂದ ಮೇರುವಿನ ಬಣ್ಣವನ್ನು ಹೊಂದಿದಂತೆ ಸಜ್ಜನರನ್ನು ಆಶ್ರಯಿಸಿದರೆ ಪುರುಷನು ಅವರ ಸಮಾನಶೀಲವುಳ್ಳವನಾಗುತ್ತಾನೆ.

ಭೀಷ್ಮಃ

ಇತ್ಯೇವಮಾಖ್ಯಾಯ ಮಹಾಮುನಿಸ್ತದಾ
ಚತುರ್ಷು ವರ್ಣೇಷು ವಿಧಾನಮರ್ಥವಿತ್ ।
ಶುಶ್ರೂಷಯಾ ವೃತ್ತಗತಿಂ ಸಮಾಧಿನಾ
ಸಮಾಧಿಯುಕ್ತಃ ಪ್ರಯಯೌ ಸ್ವಮಾಶ್ರಮಮ್ ॥೩೧॥

ಭೀಷ್ಮ– ಮಹಾಮುನಿಗಳಾದ ಪರಾಶರರು ನಾಲ್ಕು ವರ್ಣಗಳ ವಿಧಿಗಳನ್ನು ಮತ್ತು ಅದರ ಪ್ರಯೋಜನವನ್ನು ತಿಳಿದವರಾಗಿ ಈ ರೀತಿಯಲ್ಲಿ ಶುಶ್ರೂಷೆಯಿಂದ ಉಂಟಾಗುವ ಗತಿಯನ್ನು ಸಮಾಧಿ ಭಾಷೆಯಿಂದ ಹೇಳಿ ತಾವೂ ಸಮಾಧಾನದಿಂದ ಕೂಡಿದವರಾಗಿ ತಮ್ಮ ಆಶ್ರಮಕ್ಕೆ ಹೋದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಸಪ್ತಚತ್ವಾರಿಂಶೋತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರಅರವತ್ತೇಳನೆಯ ಅಧ್ಯಾಯ ಮುಗಿಯಿತು.

॥ ಪರಾಶರಗೀತಾ ಸಮಾಪ್ತಾ ॥

★ ★ ★ ★ ★

ನೂರ ಅರವತ್ತೆಂಟನೆಯ ಅಧ್ಯಾಯ

ನಮಸ್ಕಾರಾರ್ಹರಾದವರ ವಿಷಯದಲ್ಲಿ ಇಂದ್ರ-ಮಾತಲಿಯ ಸಂವಾದ

ಯುಧಿಷ್ಠಿರಃ

ಕೇಷಾಂ ದೇವಾ ಮಹಾಭಾಗಾಃ ಸನ್ನಮಂತೇ ಮಹಾತ್ಮನಾಮ್ ।
ಲೋಕೇಽಸ್ಮಿನ್ ತಾನೃಷೀನ್ ಸರ್ವಾನ್ ಶ್ರೋತುಮಿಚ್ಛಾಮಿ ಸತ್ತಮ॥೧॥

ಯುಧಿಷ್ಠಿರ– ಎಲೈ ಸಜ್ಜನರಲ್ಲಿ ಶ್ರೇಷ್ಠನೇ, ಮಹಾಭಾಗ್ಯವಂತರಾದ ದೇವತೆಗಳು ಈ ಲೋಕದಲ್ಲಿ ಯಾವ ಮಹಾತ್ಮರಾದವರಿಗೆ ನಮಸ್ಕಾರವನ್ನು ಮಾಡುತ್ತಾರೆ? ಅಂತಹ ಎಲ್ಲ ಋಷಿಗಳನ್ನು ಕೇಳಲು ಬಯಸುತ್ತೇನೆ.

ಭೀಷ್ಮಃ

ಇತಿಹಾಸಮಿಮಂ ವಿಪ್ರಾಃ ಕೀರ್ತಯಂತಿ ಪುರಾವಿದಃ ।
ಅಸ್ಮಿನ್ನರ್ಥೇ ಮಹಾಪ್ರಾಜ್ಞಾಸ್ತಂ ನಿಬೋಧ ಯುಧಿಷ್ಠಿರ ॥೨॥

ಭೀಷ್ಮ– ಎಲೈ ಯುಧಿಷ್ಠಿರನೇ, ಪುರಾಣವನ್ನು ತಿಳಿದ ಮಹಾಪ್ರಾಜ್ಞರಾದ ಬ್ರಾಹ್ಮಣರು ಈ ವಿಷಯದಲ್ಲಿ ಈ ಇತಿಹಾಸವನ್ನು ಹೇಳುತ್ತಾರೆ. ಅದನ್ನು ಕೇಳು.

ವೃತ್ರಂ ಹತ್ವಾಽಪ್ಯುಪಾವೃತ್ತಂ ತ್ರಿದಶಾನಾಂ ಪುರಸ್ಕೃತಮ್ ।
ಮಹೇಂದ್ರಮನುಸಂಪ್ರಾಪ್ತಂ ಸ್ತೂಯಮಾನಂ ಮಹರ್ಷಿಭಿಃ ॥೩॥

ಶ್ರಿಯಾ ಪರಮಯಾ ಯುಕ್ತಂ ರಥಸ್ಥಂ ಹರಿವಾಹನಮ್ ।
ಮಾತಲಿಃ ಪ್ರಾಂಜಲಿರ್ಭೂತ್ವಾ ದೇವಮಿಂದ್ರಮುವಾಚ ಹ ॥೪॥

ನಮಸ್ಕೃತಾನಾಂ ಸರ್ವೇಷಾಂ ಭಗವಂಸ್ತ್ವಂ ಪುರಸ್ಕೃತಃ ।
ಯೇಷಾಂ ಲೋಕೇ ನಮಸ್ಕುರ್ಯಾತ್ ತಾನ್ ಬ್ರವೀತು ಭವಾನ್ ಮಮ ॥

ವೃತ್ರಾಸುರನನ್ನು ಕೊಂದು ಹಿಂದಿರುಗಿ, ದೇವತೆಗಳಿಂದ ಪೂಜಿತನಾದ ಮಹರ್ಷಿಗಳಿಂದ ಸ್ತೋತ್ರ ಮಾಡಲ್ಪಡುತ್ತಿದ್ದ, ಪರಮವೈಭವದಿಂದ ಕೂಡಿದ, ರಥದಲ್ಲಿ ಕುಳಿತ, ಹರಿವಾಹನನಾದ ದೇವೇಂದ್ರನನ್ನು ಕುರಿತು ಅವನ ಸಾರಥಿಯಾದ ಮಾತಲಿಯು ಕೈಗಳನ್ನು ಮುಗಿದು ಲೋಕದಲ್ಲಿ ಯಾರಿಗೆ ನಮಸ್ಕಾರವನ್ನು ಮಾಡಬೇಕು ಅಂತಹವರನ್ನು ನನಗೆ ಹೇಳು ಎಂದು ಕೇಳಿದನು.

ಭೀಷ್ಮಃ

ತಸ್ಯ ತದ್ವಚನಂ ಶ್ರುತ್ವಾ ದೇವರಾಜಃ ಶಚೀಪತಿಃ ।
ಯಂತಾರಂ ಪರಿಪೃಚ್ಛಂತಂ ತಮಿಂದ್ರಃ ಪ್ರತ್ಯುವಾಚ ಸಃ ॥೬॥

ಭೀಷ್ಮ- ಅವನ ಆ ಮಾತುಗಳನ್ನು ಕೇಳಿ ದೇವರಾಜನೂ, ಶಚೀಪತಿಯೂ ಆದ ಇಂದ್ರನು ಪ್ರಶ್ನೆಯನ್ನು ಕೇಳಿದ ಆ ಸಾರಥಿಯನ್ನು ಕುರಿತು ಉತ್ತರವನ್ನು ಹೇಳಿದನು.

ಧರ್ಮಂ ಚಾರ್ಥಂ ಚ ಕಾಮಂ ಚ ಯೇಷಾಂ ಚಿಂತಯತಾಂ ಮತಿಃ ।
ನಾಧರ್ಮೇ ವರ್ತತೇ ನಿತ್ಯಂ ತಾನ್ ನಮಸ್ಯಾಮಿ ಮಾತಲೇ ॥೭॥

ಯಾರ ಬುದ್ಧಿಯು ಧರ್ಮಾರ್ಥಕಾಮಗಳನ್ನೇ ಚಿಂತಿಸುತ್ತದೆಯೋ, ಅಧರ್ಮದ ಕಡೆಗೆ ಹೋಗುವುದಿಲ್ಲವೋ ಎಲೈ ಮಾತಲಿಯೇ, ಅಂತಹವರನ್ನು ನಾನು ನಮಸ್ಕರಿಸುವೆನು.

ಯೇ ರೂಪಗುಣಸಂಪನ್ನಾಃ ಪ್ರಮದಾಹೃದಯಂಗಮಾಃ ।
ನಿವೃತ್ತಾಃ ಕಾಮಭೋಗೇಷು ತಾನ್ ನಮಸ್ಯಾಮಿ ಮಾತಲೇ ॥೮॥

ಯಾರು ರೂಪಗುಣಸಂಪನ್ನರಾಗಿದ್ದರೂ, ಸ್ತ್ರೀಯರಿಗೆ ಹೃದಯಾಂಗಮರಾಗಿದ್ದರೂ ಕಾಮಭೋಗಗಳಿಂದ ನಿವೃತ್ತರಾಗಿರುತ್ತಾರೆಯೋ ಅಂತಹವರನ್ನು ನಮಸ್ಕರಿಸುವೆನು.

ಸ್ವೇಷು ಭೋಗೇಷು ಸಂತುಷ್ಟಾಃ ಸುವಾಚೋ ವಚನಕ್ಷಮಾಃ ।
ಅಮಾನಕಾಮಾಶ್ಚಾರ್ಘಾರ್ಹಾಃ ತಾನ್ ನಮಸ್ಯಾಮಿ ಮಾತಲೇ ॥೯॥

ತಮ್ಮ ಭೋಗಗಳಲ್ಲಿ ತೃಪ್ತಿಯನ್ನು ಹೊಂದಿ ಒಳ್ಳೆಯ ಮಾತನ್ನಾಡುವ ಸನ್ಮಾನವನ್ನು ಅಪೇಕ್ಷಿಸದಿರುವ, ಪೂಜಾರ್ಹರಾಗಿರುವವರನ್ನು ಎಲೈ ಮಾತಲಿಯೇ ನಾನು ನಮಸ್ಕರಿಸುವೆನು.

ಧನಂ ವಿದ್ಯಾಸ್ತಥೈಶ್ವರ್ಯಂ ಯೇಷಾಂ ನ ಚಲಯೇನ್ಮತಿಮ್ ।
ಚಲಿತಾಂ ಯೇ ನಿಗೃಹ್ಣಂತಿ ತಾನ್ನಿತ್ಯಂ ಪೂಜಯಾಮ್ಯಹಮ್ ॥೧೦॥

ಧನ, ವಿದ್ಯೆ ಮತ್ತು ಐಶ್ವರ್ಯಗಳು ಯಾರನ್ನು ಅಲುಗಾಡಿಸುವುದಿಲ್ಲವೋ ಅಥವಾ ಅಲುಗಾಡಿದರೂ ಯಾರು ನಿಗ್ರಹಿಸುತ್ತಾರೋ ಅಂತಹವರನ್ನು ನಿತ್ಯವೂ ಪೂಜಿಸುತ್ತೇನೆ.

ಇಷ್ಟೈರ್ದಾರೈರುಪೇತಾನಾಂ ಶುಚೀನಾಮಗ್ನಿಹೋತ್ರಿಣಾಮ್ ।
ಚತುಷ್ಪಾದಕುಟುಮ್ಬಾನಾಂ ಮಾತಲೇ ಪ್ರಣಮಾಮ್ಯಹಮ್ ॥೧೧॥

ಎಲೈ ಮಾತಲಿಯೇ, ಇಷ್ಟರಾದ ಪತ್ನಿಯರನ್ನು ಹೊಂದಿ, ಶುಚಿಗಳಾಗಿ, ಅಗ್ನಿಹೋತ್ರಿಗಳಾಗಿ, ಗೋವುಗಳನ್ನು ತಮ್ಮ ಕುಟುಂಬದಲ್ಲಿ ಪೋಷಿಸುವವರನ್ನು ನಾನು ನಮಸ್ಕರಿಸುತ್ತೇನೆ.

ಮಹತಸ್ತಪಸಾ ಪ್ರಾಪ್ತೌ ಧನಸ್ಯ ವಿಪುಲಸ್ಯ ಚ ।
ತ್ಯಾಗಸ್ತಸ್ಯ ನ ವೈ ಕಾರ್ಯೋ ಯೋಽತ್ಮಾನಂ ನಾವಬುಧ್ಯತೇ ॥೧೨॥

ದೊಡ್ಡ ತಪಸ್ಸಿನಿಂದ ವಿಪುಲವಾದ ಧನದ ಪ್ರಾಪ್ತಿಯಾದರೂ ತನ್ನನ್ನು ತಿಳಿದವನು ಆ ತಪಸ್ಸನ್ನು ತ್ಯಾಗ ಮಾಡಬಾರದು.

ಯೇಷಾಮರ್ಥಸ್ತಥಾ ಕಾಮೋ ಧರ್ಮಮೂಲವಿವರ್ಧಿತಃ ।
ಧರ್ಮಾರ್ಥೌ ತಸ್ಯ ನಿಯತೌ ತಾನ್ ನಮಸ್ಯಾಮಿ ಮಾತಲೇ ॥೧೩॥

ಯಾರ ಅರ್ಥ-ಕಾಮಗಳು ಧರ್ಮಮೂಲವಾಗಿ ಅಭಿವೃದ್ಧಿಯನ್ನು ಹೊಂದುತ್ತವೆಯೋ, ಯಾರ ಧರ್ಮಾರ್ಥಗಳು ನಿಯತವಾಗಿವೆಯೋ ಎಲೈ ಮಾತಲಿಯೇ ಅವರನ್ನು ನಮಸ್ಕರಿಸುವೆನು.

ಧರ್ಮಮೂಲಾರ್ಥಕಾಮಾನಾಂ ಬ್ರಾಹ್ಮಣಾನಾಂ ಗವಾಮಪಿ ।
ಪತಿವ್ರತಾನಾಂ ನಾರೀಣಾಂ ಪ್ರಣಾಮಂ ಪ್ರಕರೋಮ್ಯಹಮ್ ॥೧೪॥

ಧರ್ಮಮೂಲವಾದ ಅರ್ಥಕಾಮಗಳನ್ನು ಹೊಂದಿರುವ ಬ್ರಾಹ್ಮಣರಿಗೂ, ಗೋವುಗಳಿಗೂ, ಪತಿವ್ರತೆಯರಾದ ಸ್ತ್ರೀಯರಿಗೂ ನಾನು ನಮಸ್ಕಾರವನ್ನು ಮಾಡುತ್ತೇನೆ.

ಯೇ ಭುಕ್ತ್ವಾ ಮಾನುಷಾನ್ ಭೋಗಾನ್ ಪೂರ್ವೇ ವಯಸಿ ಮಾತಲೇ।
ತಪಸಾ ಸ್ವರ್ಗಮಾಯಾಂತಿ ಶಶ್ವತ್ ತಾನ್ ಪೂಜಯಾಮ್ಯಹಮ್ ॥೧೫॥

ಎಲೈ ಮಾತಲಿಯೇ ಯಾರು ಪೂರ್ವವಯಸ್ಸಿನಲ್ಲಿ ಮಾನುಷ ಭೋಗಗಳನ್ನು ಭೋಗಿಸಿ ಅನಂತರ ತಪಸ್ಸನ್ನು ಮಾಡಿ ಸ್ವರ್ಗಕ್ಕೆ ಹೋಗುತ್ತಾರೆಯೋ ಅವರನ್ನು ಯಾವಾಗಲೂ ನಮಸ್ಕರಿಸುತ್ತೇನೆ.

ಅಸಂಭೋಗಾನ್ನ ಚಾಸಕ್ತಾನ್ ಧರ್ಮನಿತ್ಯಾನ್ ಜಿತೇಂದ್ರಿಯಾನ್ ।
ಸನ್ನ್ಯಸ್ತಾನಚಲಪ್ರಖ್ಯಾನ್ ಮನಸಾ ಪೂಜಯಾಮಿ ತಾನ್ ॥೧೬॥

ಯಾರು ಸಂಭೋಗವನ್ನು ತ್ಯಜಿಸಿ, ವಿಷಯಗಳಲ್ಲಿ ಆಸಕ್ತರಾಗದೆ, ನಿತ್ಯವೂ ಧರ್ಮಾನುಷ್ಠಾನ ಮಾಡುತ್ತಾ, ಜಿತೇಂದ್ರಿಯರಾಗಿ ಸಂನ್ಯಾಸವನ್ನು ಸ್ವೀಕರಿಸಿ ಪರ್ವತದಂತೆ ಸ್ಥಿರವಾಗಿರುತ್ತಾರೆಯೋ ಅಂತಹವರನ್ನು ಮನಸ್ಸಿನಿಂದಲೇ ಪೂಜಿಸುತ್ತೇನೆ.

ಜ್ಞಾನಪ್ರಸನ್ನವಿದ್ಯಾನಾಂ ನಿರೂಢಂ ಧರ್ಮಮೀಪ್ಸಿತಮ್ ।
ಪರೈಃ ಕೀರ್ತಿತಶೌಚಾನಾಂ ಮಾತಲೇ ತಾನ್ ನಮಾಮ್ಯಹಮ್ ॥೧೭॥

ಜ್ಞಾನವಿದ್ಯೆಗಳಿಂದ ಪ್ರಸನ್ನರಾದ, ಸ್ಥಿರವಾದ ಧರ್ಮವನ್ನು ಅಪೇಕ್ಷಿಸುವ, ಇನ್ನೊಬ್ಬರಿಂದ ಶ್ಲಾಘಿತವಾದ ಶೌಚವನ್ನು ಹೊಂದಿದ ಪುರುಷರನ್ನು ಎಲೈ ಮಾತಲಿಯೇ ನಾನು ನಮಸ್ಕರಿಸುತ್ತೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ಅಷ್ಟಚತ್ವಾರಿಂಶೋತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಅರವತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ನಲವತ್ತೊಂಬತ್ತನೆಯ ಅಧ್ಯಾಯ

ತಟಾಕ-ವನಗಳ ನಿರ್ಮಾಣಫಲ.

ಯುಧಿಷ್ಠಿರಃ

ಆರಾಮಾಣಾಂ ತಡಾಗಾನಾಂ ಯತ್ಫಲಂ ಕುರುನಂದನ ।
ಸಂಸೃತಾನಾಂ ಯಥಾಕಾಮಂ ತತ್ಫಲಂ ಬ್ರೂಹಿ ಸತ್ತಮ ।
ತದಹಂ ಶ್ರೋತುಮಿಚ್ಛಾಮಿ ತ್ವತ್ತೋऽದ್ಯ ಭರತರ್ಷಭ ॥೧॥

ಯುಧಿಷ್ಠಿರ– ಎಲೈ ಕುರುನಂದನನೇ, ಸಜ್ಜನರಲ್ಲಿ ಶ್ರೇಷ್ಠನೇ, ವನಗಳನ್ನು ಮತ್ತು

ತಟಾಕಗಳನ್ನು ನಿರ್ಮಾಣ ಮಾಡಿದ ಸುಸಂಸ್ಕೃತರಾದ ಪುರುಷರಿಗೆ ಏನು ಫಲವೆಂದು ಹೇಳು. ಎಲೈ ಭರತಶ್ರೇಷ್ಠನೇ, ಈ ದಿನ ಅದನ್ನು ನಿನ್ನಿಂದ ಕೇಳಲು ಬಯಸುತ್ತೇನೆ.

ಭೀಷ್ಮಃ

ಸುಪ್ರದರ್ಶಾ ವನವತೀ ಚಿತ್ರಧಾತುವಿಭೂಷಿತಾ ।
ಉಪೇತಾ ಸರ್ವಬೀಜೈಶ್ಚ ಶ್ರೇಷ್ಠಾ ಭೂಮಿರಿಹೋಚ್ಯತೇ ॥೨॥

ಭೀಷ್ಮ- ನೋಡಲು ಸುಂದರವಾದ ವೃಕ್ಷಗಳು ಬೆಳೆದ, ವಿಚಿತ್ರವಾದ ಧಾತುಗಳಿಂದ ವಿಭೂಷಿತವಾದ ಮತ್ತು ಸರ್ವಬೀಜಗಳಿಂದ ಕೂಡಿದ ಭೂಮಿಯು ಶ್ರೇಷ್ಠವೆಂದು ಹೇಳಲ್ಪಡುತ್ತದೆ.

ತಸ್ಯಾಃ ಕ್ಷೇತ್ರವಿಶೇಷಂ ಚ ತಡಾಗಾನಾಂ ನಿವೇಶನಮ್ ।
ಔದಕಾನಿ ಚ ಸರ್ವಾಣಿ ಪ್ರವಕ್ಷ್ಯಾಮ್ಯನುಪೂರ್ವಶಃ ॥೩॥

ಆ ಭೂಮಿಯ ಕ್ಷೇತ್ರ ವಿಶೇಷಗಳನ್ನು, ತಟಾಕಗಳ ನಿರ್ಮಾಣವನ್ನು, ಎಲ್ಲಾ ಜಲಾಶಯಗಳ ನಿರ್ಮಾಣವನ್ನು ಕುರಿತು ಕ್ರಮವಾಗಿ ಹೇಳುತ್ತೇನೆ.

ತಡಾಗಾನಾಂ ಚ ವಕ್ಷ್ಯಾಮಿ ಕೃತಾನಾಂ ಚಾಪಿ ಯೇ ಗುಣಾಃ ।
ತ್ರಿಷು ಲೋಕೇಷು ಸರ್ವತ್ರ ಪೂಜಿತೋ ಯಸ್ತಡಾಗವಾನ್ ॥೪॥

ತಟಾಕ ನಿರ್ಮಾಣ ಮಾಡುವುದರಿಂದ ಉಂಟಾಗುವ ಗುಣಗಳನ್ನು ಹೇಳುವೆನು. ತಟಾಕ ನಿರ್ಮಾಣವನ್ನು ಮಾಡಿದವನು ಮೂರು ಲೋಕಗಳಲ್ಲಿ ಎಲ್ಲ ಕಡೆಯಲ್ಲಿಯೂ ಪೂಜಿಸಲ್ಪಡುತ್ತಾನೆ.

ಅಥವಾ ಮಿತ್ರಸದನಂ ಮೈತ್ರಂ ಮಿತ್ರವಿವರ್ಧನಮ್ ।
ಕೀರ್ತಿಸಂಜನನಂ ಶ್ರೇಷ್ಠಂ ತಡಾಗಾನಾಂ ನಿವೇಶನಮ್ ॥೫॥

ಮತ್ತು ತಟಾಕವು ಮಿತ್ರರಿಗೆ ಆಶ್ರಯವಾಗುತ್ತದೆ. ಮಿತ್ರರನ್ನು ಹೆಚ್ಚಿಸುತ್ತದೆ ಮತ್ತು ತಟಾಕವು ಶ್ರೇಷ್ಠವಾದ ಕೀರ್ತಿಯನ್ನು ಉಂಟುಮಾಡಿಕೊಡುತ್ತದೆ.

ಧರ್ಮಸ್ಯಾರ್ಥಸ್ಯ ಕಾಮಸ್ಯ ಫಲಮಾಹುರ್ಮನೀಷಿಣಃ ।
ತಡಾಗಂ ಸುಕೃತಂ ದೇಶೇ ಕ್ಷೇತ್ರಮೇವ ಮಹಾಶ್ರಯಮ್ ॥೬॥

ಧರ್ಮಾರ್ಥ ಕಾಮಗಳಿಗೆ ಫಲವೆಂದರೆ ವ್ಯವಸಾಯವನ್ನು ಮಾಡುವ ದೊಡ್ಡ ಭೂಮಿಗೆ ಆಶ್ರಯವಾದ ತಟಾಕವನ್ನು ಒಳ್ಳೆಯ ಪ್ರದೇಶದಲ್ಲಿ ನಿರ್ಮಿಸುವುದೆಂದು ಜ್ಞಾನಿಗಳು ಹೇಳುತ್ತಾರೆ.

ಚತುರ್ವಿಧಾನಾಂ ಭೂತಾನಾಂ ತಡಾಗಮುಪಲಕ್ಷಯೇತ್ ।
ತಡಾಗಾನಿ ಚ ಸರ್ವಾಣಿ ದಿಶಂತಿ ಶ್ರಿಯಮುತ್ತಮಾಮ್ ॥೭॥

ತಟಾಕ ನಿರ್ಮಾಣ ಮಾಡುವವನು ಜರಾಯುಜಾದಿ ನಾಲ್ಕು ವಿಧವಾದ ಪ್ರಾಣಿಗಳನ್ನು ಗಮನಿಸಬೇಕು. ಎಲ್ಲಾ ತಟಾಕಗಳೂ ಶ್ರೇಷ್ಠವಾದ ಸಂಪತ್ತನ್ನು ಕೊಡುತ್ತವೆ.

ದೇವಾ ಮನುಷ್ಯಾ ಗಂಧರ್ವಾಃ ಪಿತರೋರಗರಾಕ್ಷಸಾಃ ।
ಸ್ಥಾವರಾಣಿ ಚ ಭೂತಾನಿ ಸಂಶ್ರಯಂತಿ ಜಲಾಶಯಮ್ ॥೮॥

ದೇವತೆಗಳು, ಮನುಷ್ಯರು, ಗಂಧರ್ವರು, ಪಿತೃಗಳು, ಸರ್ಪಗಳು, ರಾಕ್ಷಸರು, ವೃಕ್ಷಗಳು ಎಲ್ಲರೂ ಜಲಾಶಯವನ್ನು ಆಶ್ರಯಿಸುತ್ತಾರೆ.

ತಸ್ಮಾತ್ ತಾಂಸ್ತೇ ಪ್ರವಕ್ಷ್ಯಾಮಿ ತಡಾಗೇ ಯೇ ಗುಣಾಃ ಸ್ಮೃತಾಃ ।
ಯಾ ಚ ತತ್ರ ಫಲಾವಾಪ್ತಿರ್ಋಷಿಭಿಃ ಸಮುದಾಹೃತಾ ॥೯॥

ಆದ್ದರಿಂದ ತಟಾಕ ನಿರ್ಮಾಣದಲ್ಲಿ ಯಾವ ಗುಣಗಳಿದೆ ಮತ್ತು ಅವುಗಳಿಂದ ಉಂಟಾಗುವ ಫಲಪ್ರಾಪ್ತಿಯು ಏನೆಂಬುದನ್ನು ಋಷಿಗಳು ಹೇಳಿರುವಂತೆ ನಿನಗೆ ಹೇಳುವೆನು.

ವರ್ಷಮಾತ್ರೇ ತಡಾಗೇ ತು ಸಲಿಲಂ ಯಸ್ಯ ತಿಷ್ಠತಿ ।
ಅಗ್ನಿಹೋತ್ರಫಲಂ ತಸ್ಯ ಫಲಮಾಹುರ್ಮನೀಷಿಣಃ ॥೧೦॥

ಯಾವನು ನಿರ್ಮಿಸಿದ ತಟಾಕದಲ್ಲಿ ಮಳೆಗಾಲದಲ್ಲಿ ಮಾತ್ರ ನೀರಿರುತ್ತದೆಯೋ ಅವನು ಅಗ್ನಿಹೋತ್ರ ಫಲವನ್ನು ಪಡೆಯುವನೆಂದು ಜ್ಞಾನಿಗಳು ಹೇಳುತ್ತಾರೆ.

ಶರತ್ಕಾಲೇ ತು ಸಲಿಲಂ ತಡಾಗೇ ಯಸ್ಯ ತಿಷ್ಠತಿ ।
ಗೋಸಹಸ್ರಸ್ಯ ಸ ಪ್ರೇತ್ಯ ಲಭತೇ ಫಲಮುತ್ತಮಮ್ ॥೧೧॥

ಯಾವನ ತಟಾಕದಲ್ಲಿ ಶರತ್ಕಾಲದಲ್ಲಿ ಜಲವಿರುತ್ತದೆಯೋ ಅವನು ಮರಣವನ್ನು ಹೊಂದಿದ ಮೇಲೆ ಸಹಸ್ರ ಗೋವುಗಳನ್ನು ದಾನ ಮಾಡಿದ ಶ್ರೇಷ್ಠವಾದ ಫಲವನ್ನು ಹೊಂದುತ್ತಾನೆ.

ಹೇಮಂತಕಾಲೇ ಸಲಿಲಂ ತಡಾಗೇ ಯಸ್ಯ ತಿಷ್ಠತಿ ।
ಸ ವೈ ಬಹುಸುವರ್ಣಸ್ಯ ಯಜ್ಞಸ್ಯ ಲಭತೇ ಫಲಮ್ ॥೧೨॥

ಯಾವನ ತಟಾಕದಲ್ಲಿ ಹೇಮಂತಕಾಲದಲ್ಲಿ ಜಲವಿರುತ್ತದೆಯೋ ಅವನು ಬಹು ಸುವರ್ಣದಾನ ಮಾಡಿ ಆಚರಿಸಿದ ಯಜ್ಞಫಲವನ್ನು ಹೊಂದುತ್ತಾನೆ.

ಯಸ್ಯ ವೈ ಶೈಶಿರೇ ಕಾಲೇ ತಡಾಗೇ ಸಲಿಲಂ ಭವೇತ್ ।
ಅಗ್ನಿಷ್ಟೋಮಸ್ಯ ಯಜ್ಞಸ್ಯ ಫಲಮಾಹುರ್ಮನೀಷಿಣಃ ॥೧೩॥

ಯಾರ ತಟಾಕದಲ್ಲಿ ಶಿಶಿರ ಕಾಲದಲ್ಲಿ ಜಲವಿರುತ್ತದೆಯೋ ಅವನು ಅಗ್ನಿಷ್ಟೋಮಯಾಗ ಫಲವನ್ನು ಹೊಂದುತ್ತಾನೆಂದು ಜ್ಞಾನಿಗಳು ಹೇಳುತ್ತಾರೆ.

ತಡಾಗಂ ಸುಕೃತಂ ಯಸ್ಯ ವಸಂತೇ ತು ಮಹಾಶ್ರಯಮ್ ।
ಅತಿರಾತ್ರಸ್ಯ ಯಜ್ಞಸ್ಯ ಫಲಂ ಸ ಸಮುಪಾಶ್ನುತೇ ॥೧೪॥

ಚೆನ್ನಾಗಿ ನಿರ್ಮಿಸಿದ ಯಾರ ತಟಾಕದಲ್ಲಿ ವಸಂತ ಕಾಲದಲ್ಲಿ ನೀರಿರುತ್ತದೆಯೋ ಅಂತಹವನು ಅತಿರಾತ್ರಯಾಗದ ಫಲವನ್ನು ಹೊಂದುತ್ತಾನೆ.

ನಿದಾಘಕಾಲೇ ಪಾನೀಯಂ ತಡಾಗೇ ಯಸ್ಯ ತಿಷ್ಠತಿ ।
ವಾಜಪೇಯಸಮಂ ತಸ್ಯ ಫಲಂ ವೈ ಮುನಯೋ ವಿದುಃ ॥೧೫॥

ಯಾರ ತಟಾಕದಲ್ಲಿ ಬೇಸಿಗೆಯ ಕಾಲದಲ್ಲಿ ನೀರಿರುತ್ತದೆಯೋ ಅವನು ವಾಜಪೇಯ ಯಾಗದ ಫಲವನ್ನು ಹೊಂದುತ್ತಾನೆಂದು ಋಷಿಗಳು ಹೇಳುತ್ತಾರೆ.

ಸ ಕುಲಂ ತಾರಯೇತ್ ಸರ್ವಂ ಯಸ್ಯ ಖಾತೇ ಜಲಾಶಯೇ ।
ಗಾವಃ ಪಿಬಂತಿ ಪಾನೀಯಂ ಸಾಧವಶ್ಚ ನರಾಃ ಸದಾ ॥೧೬॥

ಯಾವನು ನಿರ್ಮಾಣ ಮಾಡಿದ ಜಲಾಶಯದಲ್ಲಿ ಗೋವುಗಳು ಮತ್ತು ಸಜ್ಜನರು ಯಾವಾಗಲೂ ಜಲಪಾನ ಮಾಡುತ್ತಾರೆಯೋ ಅಂತಹವನು ನಿರ್ಮಿಸಿದ ಜಲಾಶಯವು ಅವನ ಕುಲವನ್ನೆಲ್ಲಾ ಉದ್ಧರಿಸುತ್ತದೆ.

ತಡಾಗೇ ಯಸ್ಯ ಗಾವಸ್ತು ಪಿಬಂತಿ ತೃಷಿತಾ ಜಲಮ್ ।
ಮೃಗಪಕ್ಷಿಮನುಷ್ಯಾಶ್ಚ ಸೋಽಶ್ವಮೇಧಫಲಂ ಲಭೇತ್ ॥೧೭॥

ಯಾವನ ತಟಾಕದಲ್ಲಿ ಬಾಯಾರಿದ ಗೋವುಗಳು, ಮೃಗ-ಪಕ್ಷಿ-ಮನುಷ್ಯರು ಜಲಪಾನ ಮಾಡುತ್ತಾರೆಯೋ ಅವನು ಅಶ್ವಮೇಧ ಫಲವನ್ನು ಹೊಂದುತ್ತಾನೆ.

ಯತ್ ಪಿಬಂತಿ ಜಲಂ ತತ್ರ ಸ್ನಾಯಂತೇ ವಿಶ್ರಮಂತಿ ಚ ।
ತಡಾಗದಸ್ಯ ತತ್ ಸರ್ವಂ ಪ್ರೇತ್ಯಾನಂತ್ಯಾಯು ಕಲ್ಪತೇ ॥೧೮॥

ತಟಾಕದಲ್ಲಿ ಜಲಪಾನ ಮಾಡುವುದು, ಸ್ನಾನ ಮಾಡುವುದು, ವಿಶ್ರಾಂತಿಯನ್ನು ತೆಗೆದುಕೊಳ್ಳುವುದು ಇವೆಲ್ಲವೂ ತಟಾಕ ನಿರ್ಮಾಣ ಮಾಡಿದವನಿಗೆ ಮರಣಾನಂತರದಲ್ಲಿ ಅನಂತ ಸುಖಪ್ರಾಪ್ತಿಗೆ ಕಾರಣವಾಗುತ್ತವೆ.

ದುರ್ಲಭಂ ಸಲಿಲಂ ತಾತ ವಿಶೇಷೇಣ ಪರತ್ರ ವೈ ।
ಪಾನೀಯಸ್ಯ ಪ್ರದಾನೇನ ಪ್ರೀತಿರ್ಭವತಿ ಶಾಶ್ವತೀ ॥೧೯॥

ಎಲೈ ಪ್ರೀತಿಪಾತ್ರನೇ, ಈ ಲೋಕದಲ್ಲಿ ಜಲವು ದುರ್ಲಭವಾದುದು. ವಿಶೇಷವಾಗಿ ಪರಲೋಕದಲ್ಲಿ ಇನ್ನೂ ದುರ್ಲಭವಾದುದು. ಆದ್ದರಿಂದ ಜಲದಾನದಿಂದ ಶಾಶ್ವತವಾದ ಸಂತೋಷವುಂಟಾಗುತ್ತದೆ.

ತಿಲಾನ್ ದದತ ಪಾನೀಯಂ ದೀಪಾನ್ ದದತ ಜಾಗ್ರತ ।
ಜ್ಞಾತಿಭಿಃ ಸಹ ಮೋದಧ್ವಮೇತತ್ ಪ್ರೇತೇಷು ದುರ್ಲಭಮ್ ॥೨೦॥

ತಿಲಗಳನ್ನು ದಾನ ಮಾಡಿ. ಎಚ್ಚರಿಕೆಯಿಂದ ದೀಪವನ್ನು ದಾನ ಮಾಡಿ. ಬಂಧುಗಳ ಜೊತೆಯಲ್ಲಿ ಸಂತೋಷದಿಂದಿರಿ. ಮರಣ ಹೊಂದಿದ ಮೇಲೆ ಇವೆಲ್ಲವೂ ದುರ್ಲಭವಾದವುಗಳು.

ಸರ್ವದಾನೈರ್ಗುರುತರಂ ಸರ್ವದಾನೈರ್ವಿಶಿಷ್ಯತೇ ।
ಪಾನೀಯಂ ನರಶಾರ್ದೂಲ ತಸ್ಮಾದ್ ದಾತವ್ಯಮೇವ ಹಿ ॥೨೧॥

ಎಲೈ ನರಶಾರ್ದೂಲನೇ, ಜಲದಾನವು ಸರ್ವದಾನಗಳಿಗಿಂತಲೂ ದೊಡ್ಡದು ಮತ್ತು ಸರ್ವದಾನಗಳಿಗಿಂತಲೂ ಶ್ರೇಷ್ಠವಾದುದು. ಆದ್ದರಿಂದ ಜಲದಾನವನ್ನು ಮಾಡಲೇಬೇಕು.

ಏವಮೇತತ್ ತಡಾಗೇಷು ಕೀರ್ತಿತಂ ಫಲಮುತ್ತಮಮ್ ।
ಅತ ಊರ್ಧ್ವಂ ಪ್ರವಕ್ಷ್ಯಾಮಿ ವೃಕ್ಷಾಣಾಮಪಿ ರೋಪಣೇ ॥೨೨॥

ಈ ರೀತಿಯಲ್ಲಿ ತಟಾಕನಿರ್ಮಾಣದ ಶ್ರೇಷ್ಠವಾದ ಫಲವನ್ನು ಹೇಳಿದ್ದೇನೆ. ಇನ್ನು ಮುಂದೆ ವೃಕ್ಷಗಳನ್ನು ನೆಡುವುದರಿಂದ ಉಂಟಾಗುವ ಫಲಗಳನ್ನು ಹೇಳುವೆನು.

ಸ್ಥಾವರಾಣಾಂ ಚ ಭೂತಾನಾಂ ಜಾತಯಃ ಷಟ್‌ಪ್ರಕೀರ್ತಿತಾಃ ।
ವೃಕ್ಷಗುಲ್ಮತಾವಲ್ಲ್ಯಸ್ತ ತ್ವಕ್ಸಾರಾಸ್ತೃಣಜಾತಯಃ ॥೨೩॥

ಸ್ಥಾವರ ಜಾತಿಗಳು, ವೃಕ್ಷ, ಗುಲ್ಮ, ಲತಾ, ಬಳ್ಳಿ, ತ್ವಕ್ಸಾರ, ತೃಣ ಎಂದು ಆರು ವಿಧ.

ಏತಾ ಜಾತ್ಯಸ್ತು ವೃಕ್ಷಾಣಾಂ ತೇಷಾಂ ರೋಪೇ ಗುಣಾಸ್ತಿ ತ್ವಮೇ ।
ಕೀರ್ತಿಶ್ಚ ಮಾನುಷೇ ಲೋಕೇ ಪ್ರೇತ್ಯ ಚೈವ ಫಲಂ ಶುಭಮ್ ॥೨೪॥

ಇವು ವೃಕ್ಷಜಾತಿಗಳು. ಇವುಗಳನ್ನು ನೆಡುವುದರಿಂದ ಮನುಷ್ಯಲೋಕದಲ್ಲಿ ಕೀರ್ತಿ, ಮರಣಾನಂತರದಲ್ಲಿ ಶುಭಫಲ. ಈ ಗುಣಗಳು ಉಂಟಾಗುತ್ತವೆ.

ಲಭತೇ ನಾಮ ಲೋಕೇ ಚ ಪಿತೃಭಿಶ್ಚ ಮಹೀಯತೇ ।
ದೇವಲೋಕಗತಸ್ಯಾಪಿ ನಾಮ ತಸ್ಯ ನ ನಶ್ಯತಿ ॥೨೫॥

ಲೋಕದಲ್ಲಿ ಅವನ ನಾಮವು ನಾಶವನ್ನು ಹೊಂದುವುದಿಲ್ಲ. ಅವನು ಪಿತೃಗಳಿಂದ ಪೂಜಿಸಲ್ಪಡುತ್ತಾನೆ. ದೇವಲೋಕಕ್ಕೆ ಹೋದರೂ ಅವನ ಕೀರ್ತಿಯು ನಾಶವನ್ನು ಹೊಂದುವುದಿಲ್ಲ.

ಅತೀತಾನಾಗತೇ ಚೋಭೇ ಪಿತೃವಂಶಂ ಚ ಭಾರತ ।
ತಾರಯೇದ್ ವೃಕ್ಷರೋಪೀ ಚ ತಸ್ಮಾದ್ ವೃಕ್ಷಾನ್ ಪ್ರರೋಪಯೇತ್ ॥

ಎಲೈ ಭಾರತನೇ, ವೃಕ್ಷಗಳನ್ನು ನೆಡುವವನು ಹಿಂದೆ ಬಂದ ಮತ್ತು ಮುಂದೆ ಬರಲಿರುವ ತನ್ನ ಪಿತೃವಂಶವನ್ನು ದಾಟಿಸುತ್ತಾನೆ. ಆದ್ದರಿಂದ ಮರಗಳನ್ನು ನೆಡಬೇಕು.

ತಸ್ಯ ಪುತ್ರಾ ಭವಂತ್ಯೇತೇ ಪಾದಪಾ ನಾತ್ರ ಸಂಶಯಃ ।
ಪರಲೋಕಗತಃ ಸ್ವರ್ಗಂ ಲೋಕಾಂಶ್ಚಾಪ್ನೋತಿ ಸೋಽವ್ಯಯಾನ್ ॥೨೭॥

ಈ ವೃಕ್ಷಗಳು ಅವನ ಪುತ್ರರಾಗುತ್ತವೆ. ಅವು ಅವನ ಪುತ್ರರೇ ಎಂಬುದರಲ್ಲಿ ಸಂಶಯವಿಲ್ಲ. ಅಂತಹವನು ಪರಲೋಕಕ್ಕೆ ಹೋಗಿ ಸ್ವರ್ಗವನ್ನೂ, ಶಾಶ್ವತವಾದ ಲೋಕವನ್ನೂ ಹೊಂದುತ್ತಾನೆ.

ಪುಷ್ಪೈಃ ಸುರಗಣಾನ್ ವೃಕ್ಷಾಃ ಫಲೈಶ್ಚಾಪಿ ತಥಾ ಪಿತ್ರ್ಯಾನ್ ।
ಛಾಯಯಾ ಚಾತಿಥೀಂಸ್ತಾತ ಪೂಜಯಂತಿ ಮಹೀರುಹಾಃ ॥೨೮॥

ಎಲೈ ಪ್ರೀತಿಪಾತ್ರನೇ, ವೃಕ್ಷಗಳು ಪುಷ್ಪಗಳಿಂದ ಸುರಗಣಗಳನ್ನೂ, ಫಲಗಳಿಂದ ಪಿತೃಗಳನ್ನೂ, ಛಾಯೆಯಿಂದ ಅತಿಥಿಗಳನ್ನೂ ಪೂಜಿಸುತ್ತವೆ.

ಕಿನ್ನರೋರಗರಕ್ಷಾಂಸಿ ದೇವಗಂಧರ್ವಮಾನವಾಃ ।
ತಥಾ ಋಷಿಗಣಾಶ್ಚೈವ ಸಂಶ್ರಯಂತಿ ಮಹೀರುಹಾನ್ ॥೨೯॥

ಕಿನ್ನರೋರಗ-ರಾಕ್ಷಸರು, ದೇವ-ಗಂಧರ್ವ-ಮಾನವರು ಮತ್ತು ಋಷಿಗಣಗಳು ವೃಕ್ಷಗಳನ್ನು ಆಶ್ರಯಿಸುತ್ತಾರೆ.

ಪುಷ್ಪಿತಾಃ ಫಲವಂತಶ್ಚ ತರ್ಪಯಂತೀಹ ಮಾನವಾನ್ ।
ವೃಕ್ಷದಂ ಪುತ್ರವದ್ ವೃಕ್ಷಾಸ್ತಾರಯಂತಿ ಪರತ್ರ ಚ ॥೩೦॥

ವೃಕ್ಷಗಳು ಪುಷ್ಪ-ಫಲಗಳನ್ನು ನೀಡಿ ಮಾನವರನ್ನು ತೃಪ್ತಿಪಡಿಸುತ್ತವೆ. ವೃಕ್ಷಗಳು ತಮ್ಮನ್ನು ಬೆಳೆಸಿದವನನ್ನು ಈ ಲೋಕದಲ್ಲಿಯೂ ಮತ್ತು ಪರಲೋಕದಲ್ಲಿಯೂ ಪುತ್ರರಂತೆ ಕಷ್ಟದಿಂದ ಪಾರು ಮಾಡುತ್ತವೆ.

ತಸ್ಮಾತ್ ತಡಾಗೇ ವೃಕ್ಷಾ ವೈ ರೋಪ್ಯಾಃ ಶ್ರೇಯೋರ್ಥಿನಾ ಸದಾ ।
ಪುತ್ರವತ್ ಪರಿಪಾಲ್ಯಾಶ್ಚ ಪುತ್ರಾಸ್ತೇ ಧರ್ಮತಃ ಸ್ಮೃತಾಃ ॥೩೧॥

ಆದ್ದರಿಂದ ಶ್ರೇಯಸ್ಕಾಮಿಯಾದವನು ತಟಾಕದಲ್ಲಿ ವೃಕ್ಷಗಳನ್ನೂ ನೆಡಬೇಕು. ಅವುಗಳನ್ನು ಪುತ್ರರಂತೆ ಪರಿಪಾಲಿಸಬೇಕು. ಧರ್ಮದ ದೃಷ್ಟಿಯಿಂದ ವೃಕ್ಷಗಳು ಪುತ್ರರೇ ಸರಿ.

ತಡಾಗಕೃದ್ ವೃಕ್ಷರೋಪೀ ಇಷ್ಟಯಜ್ಞಶ್ಚ ಯೋ ದ್ವಿಜಃ ।
ಏತೇ ಸ್ವರ್ಗೇ ಮಹೀಯಂತೇ ಯೇ ಚಾನ್ಯೇ ಸತ್ಯವಾದಿನಃ ॥೩೨॥

ತಟಾಕ ನಿರ್ಮಾಣ ಮಾಡಿದ, ವೃಕ್ಷಗಳನ್ನೂ ನೆಟ್ಟ, ಯಜ್ಞಗಳನ್ನು ಮಾಡಿದ ಈ ದ್ವಿಜರು ಸ್ವರ್ಗಲೋಕದಲ್ಲಿ ಪೂಜಿಸಲ್ಪಡುತ್ತಾರೆ. ಹಾಗೆಯೇ ಸತ್ಯವಾದಿಗಳೂ ಪೂಜಿಸಲ್ಪಡುತ್ತಾರೆ.

ತಸ್ಮಾತ್ ತಡಾಗಂ ಕುರ್ವೀತ ಆರಾಮಾಂಶ್ಚೈವ ರೋಪಯೇತ್ ।
ಯಜೇಚ್ಚ ವಿವಿಧೈರ್ಯಜ್ಞೈಃ ಸತ್ಯಂ ಚ ಸತತಂ ವದೇತ್ ॥೩೩॥

ಆದ್ದರಿಂದ ತಟಾಕವನ್ನು ನಿರ್ಮಾಣ ಮಾಡಬೇಕು. ಉದ್ಯಾನಗಳನ್ನು ಬೆಳೆಸಬೇಕು. ವಿವಿಧ ಯಜ್ಞಗಳನ್ನು ಆಚರಿಸಬೇಕು ಮತ್ತು ಸತತವಾಗಿ ಸತ್ಯವನ್ನು ನುಡಿಯಬೇಕು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ಆರಾಮತಡಾಗಾದಿನಿರ್ಮಾಣಫಕಥನಂ ನಾಮ ಏಕೋನಪಂಚಾಶದಧಿಕಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ನಲವತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಐವತ್ತನೆಯ ಅಧ್ಯಾಯ

ವೈಶ್ವದೇವ, ಬಲಿಪ್ರದಾನಾದಿ ಗೃಹಸ್ಥಧರ್ಮ

ಯುಧಿಷ್ಠಿರಃ

ಗಾರ್ಹಸ್ಥ್ಯಂ ಧರ್ಮಮಖಿಲಂ ಪ್ರಬ್ರೂಹಿ ಭರತರ್ಷಭ ।
ಋದ್ಧಿಮಾಪ್ನೋತಿ ಕಿಂ ಕೃತ್ವಾ ಮನುಷ್ಯ ಇಹ ಪಾರ್ಥಿವ ॥೧॥

ಯುಧಿಷ್ಠಿರ– ಎಲೈ ಭರತರ್ಷಭನೇ, ಗೃಹಸ್ಥಾಶ್ರಮ ಧರ್ಮವೆಲ್ಲವನ್ನೂ ನನಗೆ ಹೇಳು. ಎಲೈ ಪಾರ್ಥಿವನೇ, ಮನುಷ್ಯನು ಇಲ್ಲಿ ಏನನ್ನು ಮಾಡಿ ಸಮೃದ್ಧಿಯನ್ನು ಪಡೆಯುತ್ತಾನೆ?

ಭೀಷ್ಮಃ

ಅತ್ರ ತೇ ವರ್ತಯಿಷ್ಯಾಮಿ ಪುರಾವೃತ್ತಂ ಜನಾಧಿಪ ।
ವಾಸುದೇವಸ್ಯ ಸಂವಾದಂ ಪೃಥಿವ್ಯಾಶ್ಚೈವ ಭಾರತ ॥೨॥

ಈ ವೃಕ್ಷಗಳು ಅವನ ಪುತ್ರರಾಗುತ್ತವೆ. ಅವು ಅವನ ಪುತ್ರರೇ ಎಂಬುದರಲ್ಲಿ ಸಂಶಯವಿಲ್ಲ. ಅಂತಹವನು ಪರಲೋಕಕ್ಕೆ ಹೋಗಿ ಸ್ವರ್ಗವನ್ನೂ, ಶಾಶ್ವತವಾದ ಲೋಕವನ್ನೂ ಹೊಂದುತ್ತಾನೆ.

ಪುಷ್ಪೈಃ ಸುರಗಣಾನ್ ವೃಕ್ಷಾಃ ಫಲೈಶ್ಚಾಪಿ ತಥಾ ಪಿತ್ರ್ಯಾನ್ ।
ಛಾಯಯಾ ಚಾತಿಥೀಂಸ್ತಾತ ಪೂಜಯಂತಿ ಮಹೀರುಹಾಃ ॥೨೮॥

ಎಲೈ ಪ್ರೀತಿಪಾತ್ರನೇ, ವೃಕ್ಷಗಳು ಪುಷ್ಪಗಳಿಂದ ಸುರಗಣಗಳನ್ನೂ, ಫಲಗಳಿಂದ ಪಿತೃಗಳನ್ನೂ, ಛಾಯೆಯಿಂದ ಅತಿಥಿಗಳನ್ನೂ ಪೂಜಿಸುತ್ತವೆ.

ಕಿನ್ನರೋರಗರಕ್ಷಾಂಸಿ ದೇವಗಂಧರ್ವಮಾನವಾಃ ।
ತಥಾ ಋಷಿಗಣಾಶ್ಚೈವ ಸಂಶ್ರಯಂತಿ ಮಹೀರುಹಾನ್ ॥೨೯॥

ಕಿನ್ನರೋರಗ-ರಾಕ್ಷಸರು, ದೇವ-ಗಂಧರ್ವ-ಮಾನವರು ಮತ್ತು ಋಷಿಗಣಗಳು ವೃಕ್ಷಗಳನ್ನು ಆಶ್ರಯಿಸುತ್ತಾರೆ.

ಪುಷ್ಪಿತಾಃ ಫಲವಂತಶ್ಚ ತರ್ಪಯಂತೀಹ ಮಾನವಾನ್ ।
ವೃಕ್ಷದಂ ಪುತ್ರವದ್ ವೃಕ್ಷಾಸ್ತಾರಯಂತಿ ಪರತ್ರ ಚ ॥೩೦॥

ವೃಕ್ಷಗಳು ಪುಷ್ಪ-ಫಲಗಳನ್ನು ನೀಡಿ ಮಾನವರನ್ನು ತೃಪ್ತಿಪಡಿಸುತ್ತವೆ. ವೃಕ್ಷಗಳು ತಮ್ಮನ್ನು ಬೆಳೆಸಿದವನನ್ನು ಈ ಲೋಕದಲ್ಲಿಯೂ ಮತ್ತು ಪರಲೋಕದಲ್ಲಿಯೂ ಪುತ್ರರಂತೆ ಕಷ್ಟದಿಂದ ಪಾರು ಮಾಡುತ್ತವೆ.

ತಸ್ಮಾತ್ ತಡಾಗೇ ವೃಕ್ಷಾ ವೈ ರೋಪ್ಯಾಃ ಶ್ರೇಯೋರ್ಥಿನಾ ಸದಾ ।
ಪುತ್ರವತ್ ಪರಿಪಾಲ್ಯಾಶ್ಚ ಪುತ್ರಾಸ್ತೇ ಧರ್ಮತಃ ಸ್ಮೃತಾಃ ॥೩೧॥

ಆದ್ದರಿಂದ ಶ್ರೇಯಸ್ಕಾಮಿಯಾದವನು ತಟಾಕದಲ್ಲಿ ವೃಕ್ಷಗಳನ್ನೂ ನೆಡಬೇಕು. ಅವುಗಳನ್ನು ಪುತ್ರರಂತೆ ಪರಿಪಾಲಿಸಬೇಕು. ಧರ್ಮದ ದೃಷ್ಟಿಯಿಂದ ವೃಕ್ಷಗಳು ಪುತ್ರರೇ ಸರಿ.

ತಡಾಗಕೃದ್ ವೃಕ್ಷರೋಪೀ ಇಷ್ಟಯಜ್ಞಶ್ಚ ಯೋ ದ್ವಿಜಃ ।
ಏತೇ ಸ್ವರ್ಗೇ ಮಹೀಯಂತೇ ಯೇ ಚಾನ್ಯೇ ಸತ್ಯವಾದಿನಃ ॥೩೨॥

ತಟಾಕ ನಿರ್ಮಾಣ ಮಾಡಿದ, ವೃಕ್ಷಗಳನ್ನೂ ನೆಟ್ಟ, ಯಜ್ಞಗಳನ್ನು ಮಾಡಿದ ಈ ದ್ವಿಜರು ಸ್ವರ್ಗಲೋಕದಲ್ಲಿ ಪೂಜಿಸಲ್ಪಡುತ್ತಾರೆ. ಹಾಗೆಯೇ ಸತ್ಯವಾದಿಗಳೂ ಪೂಜಿಸಲ್ಪಡುತ್ತಾರೆ.

ತಸ್ಮಾತ್ ತಡಾಗಂ ಕುರ್ವೀತ ಆರಾಮಾಂಶ್ಚೈವ ರೋಪಯೇತ್ ।
ಯಜೇಚ್ಚ ವಿವಿಧೈರ್ಯಜ್ಞೈಃ ಸತ್ಯಂ ಚ ಸತತಂ ವದೇತ್ ॥೩೩॥

ಆದ್ದರಿಂದ ತಟಾಕವನ್ನು ನಿರ್ಮಾಣ ಮಾಡಬೇಕು. ಉದ್ಯಾನಗಳನ್ನು ಬೆಳೆಸಬೇಕು. ವಿವಿಧ ಯಜ್ಞಗಳನ್ನು ಆಚರಿಸಬೇಕು ಮತ್ತು ಸತತವಾಗಿ ಸತ್ಯವನ್ನು ನುಡಿಯಬೇಕು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ಆರಾಮತಡಾಗಾದಿನಿರ್ಮಾಣಫಕಥನಂ ನಾಮ ಏಕೋನಪಂಚಾಶದಧಿಕಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ನಲವತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಐವತ್ತನೆಯ ಅಧ್ಯಾಯ

ವೈಶ್ವದೇವ, ಬಲಿಪ್ರದಾನಾದಿ ಗೃಹಸ್ಥಧರ್ಮ

ಯುಧಿಷ್ಠಿರಃ

ಗಾರ್ಹಸ್ಥ್ಯಂ ಧರ್ಮಮಖಿಲಂ ಪ್ರಬ್ರೂಹಿ ಭರತರ್ಷಭ ।
ಋದ್ಧಿಮಾಪ್ನೋತಿ ಕಿಂ ಕೃತ್ವಾ ಮನುಷ್ಯ ಇಹ ಪಾರ್ಥಿವ ॥೧॥

ಯುಧಿಷ್ಠಿರ– ಎಲೈ ಭರತರ್ಷಭನೇ, ಗೃಹಸ್ಥಾಶ್ರಮ ಧರ್ಮವೆಲ್ಲವನ್ನೂ ನನಗೆ ಹೇಳು. ಎಲೈ ಪಾರ್ಥಿವನೇ, ಮನುಷ್ಯನು ಇಲ್ಲಿ ಏನನ್ನು ಮಾಡಿ ಸಮೃದ್ಧಿಯನ್ನು ಪಡೆಯುತ್ತಾನೆ?

ಭೀಷ್ಮಃ

ಅತ್ರ ತೇ ವರ್ತಯಿಷ್ಯಾಮಿ ಪುರಾವೃತ್ತಂ ಜನಾಧಿಪ ।
ವಾಸುದೇವಸ್ಯ ಸಂವಾದಂ ಪೃಥಿವ್ಯಾಶ್ಚೈವ ಭಾರತ ॥೨॥

ಸಂಸ್ತೂಯ ಪೃಥಿವೀಂ ದೇವೀಂ ವಾಸುದೇವಃ ಪ್ರತಾಪವಾನ್ ।
ಪಪ್ರಚ್ಛ ಭರತಶ್ರೇಷ್ಠ ಯದೇತತ್ಪೃಚ್ಛಸೇಽದ್ಯ ಮಾಮ್ ॥೩॥

ಭೀಷ್ಮ– ಎಲೈ ಜನಾಧಿಪನೇ, ಭಾರತನೇ, ಈ ವಿಷಯದಲ್ಲಿ ಹಿಂದೆ ವಾಸುದೇವನಿಗೂ ಮತ್ತು ಪೃಥಿವಿಗೂ ನಡೆದ ಸಂವಾದವನ್ನು ನಿನಗೆ ಹೇಳುವೆನು. ಎಲೈ ಭರತಶ್ರೇಷ್ಠನೇ, ಪ್ರತಾಪಶಾಲಿಯಾದ ವಾಸುದೇವನು ಭೂದೇವಿಯನ್ನು ಸ್ತೋತ್ರ ಮಾಡಿ ನೀನು ನನ್ನನ್ನು ಕೇಳಿದ ಪ್ರಶ್ನೆಯನ್ನೇ ಕೇಳಿದನು.

ವಾಸುದೇವಃ

ಗಾರ್ಹಸ್ಥ್ಯಂ ಧರ್ಮಮಾಶ್ರಿತ್ಯ ಮಯಾ ವಾ ಮದ್ವಿಧೇನ ವಾ ।
ಕಿಮವಶ್ಯಂ ಧರೇ ಕಾರ್ಯಂ ಕಿಂ ವಾ ಕೃತ್ವಾ ಸುಖೀ ಭವೇತ್ ॥೪॥

ವಾಸುದೇವ– ಎಲೌ ಭೂಮಿಯೇ, ನಾನು ಅಥವಾ ನನ್ನಂತಹವನು ಗಾರ್ಹಸ್ಥ್ಯ ಧರ್ಮವನ್ನು ಅವಲಂಬಿಸಿ ಏನನ್ನು ಅವಶ್ಯವಾಗಿ ಮಾಡಬೇಕು? ಏನನ್ನು ಮಾಡಿದರೆ ಸುಖವನ್ನು ಪಡೆಯುತ್ತಾನೆ?

ಪೃಥಿವೀ

ಋಷಯಃ ಪಿತರೋ ದೇವಾ ಮನುಷ್ಯಾಶ್ಚೈವ ಮಾಧವ ।
ಇಜ್ಯಾಶ್ಚೈವಾರ್ಚನೀಯಾಶ್ಚ ಯಥಾ ಚೈವಂ ನಿಬೋಧ ಮೇ ॥೫॥

ಪೃಥಿವೀ– ಎಲೈ ಮಾಧವನೇ, ಋಷಿಗಳು, ಪಿತೃಗಳು, ದೇವತೆಗಳು ಮತ್ತು ಮನುಷ್ಯರು - ಇವರನ್ನು ಹೇಗೆ ಪೂಜಿಸಬೇಕೆಂಬುದನ್ನು ನನ್ನಿಂದ ಕೇಳು.

ಸದಾ ಯಜ್ಞೇನ ದೇವಾಂಶ್ಚ ಆತಿಥ್ಯೇನ ಚ ಮಾನವಾನ್ ।
ಛಂದತಶ್ಚ ಯಥಾನಿತ್ಯಮರ್ಹಾನ್ ಭುಂಜೀತ ನಿತ್ಯಶಃ ।
ತೇನ ಹ್ಯೃಷಿಗಣಾಃ ಪ್ರೀತಾ ಭವಂತಿ ಮಧುಸೂದನ ॥೬॥

ಸದಾ ಯಜ್ಞದಿಂದ ದೇವತೆಗಳನ್ನೂ, ಆತಿಥ್ಯದಿಂದ ಮನುಷ್ಯರನ್ನೂ, ವೇದಾಧ್ಯಯನದಿಂದ ಋಷಿಗಣಗಳನ್ನೂ, ತರ್ಪಣ ಮತ್ತು ಯೋಗ್ಯ ಬ್ರಾಹ್ಮಣ ಭೋಜನಗಳಿಂದ ಪಿತೃಗಳನ್ನೂ ಸಂತೋಷಪಡಿಸಬೇಕು. ಎಲೈ ಮಧುಸೂದನನೇ, ಅದರಿಂದ ಋಷಿಗಣಗಳು ಪ್ರಸನ್ನರಾಗುತ್ತಾರೆ.

ನಿತ್ಯಮಗ್ನಿಂ ಪರಿಚರೇದಭುಕ್ತ್ವಾ ಬಲಿಕರ್ಮ ಚ ।
ಕುರ್ಯಾತ್ ತಥೈವ ದೇವಾ ವೈ ಪ್ರೀಯಂತೇ ಮಧುಸೂದನ ॥೭॥

ಎಲೈ ಮಧುಸೂದನನೇ, ನಿತ್ಯವೂ ಏನನ್ನಾದರೂ ತಿನ್ನುವುದಕ್ಕಿಂತ ಮೊದಲೇ ಬಲಿಕರ್ಮವನ್ನು ಮತ್ತು ದೇವತಾ ಕಾರ್ಯವನ್ನು ಮಾಡಬೇಕು. ಅದರಿಂದ ದೇವತೆಗಳು ಪ್ರಸನ್ನರಾಗುತ್ತಾರೆ.

ಕುರ್ಯಾದಹರಹಃ ಶ್ರಾದ್ಧಮನ್ನಾದ್ಯೇನೋದಕೇನ ವಾ ।
ಪಯೋಮೂಲಫಲೈರ್ವಾಪಿ ಪಿತೄಣಾಂ ಪ್ರೀತಿಮಾಹರನ್ ॥೮॥

ಪಿತೃಗಳಿಗೆ ಸಂತೋಷವನ್ನುಂಟು ಮಾಡುವ ಉದ್ದೇಶದಿಂದ ಪ್ರತಿನಿತ್ಯವೂ ಅನ್ನದಿಂದಾಗಲೀ, ಉದಕದಿಂದಾಗಲೀ, ಕ್ಷೀರ-ಮೂಲ ಫಲಗಳಿಂದಾಗಲೀ ಶ್ರಾದ್ಧವನ್ನು ಮಾಡಬೇಕು.

ಸಿದ್ಧಾನ್ನಾದ್ ವೈಶ್ವದೇವಂ ವೈ ಕುರ್ಯಾದಗ್ನೌ ಯಥಾವಿಧಿ ।
ಅಗ್ನೀಷೋಮಂ ವೈಶ್ವದೇವಂ ಧಾನ್ವಂತರ್ಯಮನಂತರಮ್ ॥೯॥

ಸಿದ್ಧವಾದ ಅನ್ನದಿಂದ ಅಗ್ನಿಯಲ್ಲಿ ಶಾಸ್ತ್ರವಿಧಿಗೆ ಅನುಸಾರವಾಗಿ ವೈಶ್ವದೇವವನ್ನು ಮಾಡಬೇಕು. ಅದರಲ್ಲಿ ಅಗ್ನೀಷ್ಟೋಮರಿಗೂ, ವಿಶ್ವೇದೇವತೆಗಳಿಗೂ ಅನಂತರ ಧನ್ವಂತರಿಗೂ ಆಹುತಿಯನ್ನು ಕೊಡಬೇಕು.

ಪ್ರಜಾನಾಂ ಪತಯೇ ಚೈವ ಪೃಥಗ್ ಹೋಮೋ ವಿಧೀಯತೇ ।
ತಥೈವ ಚಾನುಪೂರ್ವ್ಯೇಣ ಬಲಿಕರ್ಮ ಪ್ರಯೋಜಯೇತ್ ॥೧೦॥

ಪ್ರಜಾಪತಿಗೂ ಸಹ ಪ್ರತ್ಯೇಕವಾದ ಹವಿಸ್ಸನ್ನು ಕೊಡಬೇಕು. ವೈಶ್ವದೇವಾಹುತಿಗಳನ್ನು ಕೊಟ್ಟಕ್ರಮದಿಂದಲೇ ಬಲಿಕರ್ಮವನ್ನೂ ಮಾಡಬೇಕು.

ದಕ್ಷಿಣಾಯಾಂ ಯಮಾಯೇಹ ಪ್ರತೀಚ್ಯಾಂ ವರುಣಾಯ ಚ ।
ಸೋಮಾಯ ಚಾಪ್ಯುದೀಚ್ಯಾಂ ವೈ ವಾಸ್ತುಮಧ್ಯೇ ದ್ವಿಜಾತಯೇ ॥೧೧॥

ದಕ್ಷಿಣ ದಿಕ್ಕಿನಲ್ಲಿ ಯಮನಿಗೂ, ಪಶ್ಚಿಮ ದಿಕ್ಕಿನಲ್ಲಿ ವರುಣನಿಗೂ, ಉತ್ತರ ದಿಕ್ಕಿನಲ್ಲಿ ಚಂದ್ರನಿಗೂ ಮತ್ತು ಗೃಹಮಧ್ಯದಲ್ಲಿ ಬ್ರಾಹ್ಮಣರಿಗೂ (ಮನುಷ್ಯರಿಗೂ) ಬಲಿಯನ್ನು ಕೊಡಬೇಕು.

ಧನ್ವಂತರೇಃ ಪ್ರಾಗುದೀಚ್ಯಾಂ ಪ್ರಾಚ್ಯಾಂ ಶಕ್ರಾಯ ಮಾಧವ ।
ಮನೋರ್ವೈ ಇತಿ ಚ ಪ್ರಾಹುರ್ಬಲಿಂ ದ್ವಾರೇ ಗೃಹಸ್ಯ ವೈ ।
ಮರುದ್ಭ್ಯೋ ದೇವತಾಭ್ಯಶ್ಚ ಬಲಿಮಂತರ್ಗೃಹೇ ಹರೇತ್ ॥೧೨॥

ಎಲೈ ಮಾಧವನೇ, ಧನ್ವಂತರಿಗೆ ಈಶಾನ್ಯದಿಕ್ಕಿನಲ್ಲಿಯೂ, ಇಂದ್ರನಿಗೆ ಪೂರ್ವ ದಿಕ್ಕಿನಲ್ಲಿಯೂ, ಗೃಹದ್ವಾರದಲ್ಲಿ ಮನುವಿಗೂ ಮತ್ತು ಗೃಹದ ಮಧ್ಯಭಾಗದಲ್ಲಿ ಮರುತ್ತುಗಳಿಗೂ ಮತ್ತು ಉಳಿದ ದೇವತೆಗಳಿಗೂ ಬಲಿಪ್ರಧಾನವನ್ನು ಮಾಡಬೇಕು.

ತಥೈವ ವಿಶ್ವೇದೇವೇಭ್ಯೋ ಬಲಿಮಾಕಾಶತೋ ಹರೇತ್ ।
ನಿಶಾಚರೇಭ್ಯೋ ಭೂತೇಭ್ಯೋ ಬಲಿಂ ನಕ್ತಂ ತಥಾ ಹರೇತ್ ॥೧೩॥

ಹಾಗೆ ವಿಶ್ವೇದೇವತೆಗಳಿಗೆ ಬಲಿಯನ್ನು ಆಕಾಶದ ಕಡೆಗೆ ತೋರಿಸಿ ಕೊಡಬೇಕು. ನಿಶಾಚರರಿಗೂ ಮತ್ತು ಭೂತಗಳಿಗೂ ರಾತ್ರಿಯ ಕಾಲದಲ್ಲಿ ಬಲಿಯನ್ನು ಕೊಡಬೇಕು.

ಏವಂ ಕೃತ್ವಾ ಬಲಿಂ ಸಮ್ಯಗ್ ದದ್ಯಾದ್ ಭಿಕ್ಷಾಂ ದ್ವಿಜಾತಯೇ ।
ಅಲಭೇ ಬ್ರಾಹ್ಮಣಸ್ಯಾಗ್ನಾವಗ್ರಮುತ್ಕ್ಷಿಪ್ಯ ನಿಕ್ಷಿಪೇತ್ ॥೧೪॥

ಹೀಗೆ ಬಲಿಹರಣವನ್ನು ಸರಿಯಾಗಿ ಮಾಡಿ ಅನಂತರ ಬ್ರಾಹ್ಮಣ ಸಂನ್ಯಾಸಿಗೆ ಭಿಕ್ಷೆಯನ್ನು ನೀಡಬೇಕು. ಅಂತಹ ಬ್ರಾಹ್ಮಣನು ದೊರೆಯದಿದ್ದರೆ ಅನ್ನದಿಂದ ಅಗ್ರಭಾಗವನ್ನು ತೆಗೆದು ಅದನ್ನು ಅಗ್ನಿಯಲ್ಲಿ ಹಾಕಬೇಕು.

ಯದಾ ಶ್ರಾದ್ಧಂ ಪಿತೃಭ್ಯಶ್ಚ ದಾತುಮಿಚ್ಛೇತ ಮಾನವಃ ।
ತದಾ ಪಶ್ಚಾತ್ ಪ್ರಕುರ್ವೀತ ನಿವೃತ್ತೇ ಶ್ರಾದ್ಧಕರ್ಮಣಿ ॥೧೫॥

ಮನುಷ್ಯನು ಪಿತೃಗಳಿಗೆ ಶ್ರಾದ್ಧವನ್ನು ಕೊಡಲು ಬಯಸಿದರೆ ಆಗ ಶ್ರಾದ್ಧ ಕರ್ಮವು ಮುಗಿದ ಮೇಲೆ ಬಲಿಹರಣವನ್ನು ಮಾಡಬೇಕು.

ಪಿತೄನ್ ಸಂತರ್ಪಯಿತ್ವಾ ತು ಬಲಿಂ ಕುರ್ಯಾದ್ ವಿಧಾನತಃ ।
ವೈಶ್ವದೇವಂ ತತಃ ಕುರ್ಯಾತ್ ಪಶ್ಚಾದ್ ಬ್ರಾಹ್ಮಣಭೋಜನಮ್ ॥೧೬॥

ವೈಶ್ವದೇವವನ್ನು ಮಾಡಿ ಅನಂತರ ಪಿತೃಗಳನ್ನು ತೃಪ್ತಿ ಪಡಿಸಿ ಅನಂತರ ವಿಧಿಗೆ ಅನುಸಾರವಾಗಿ ಬಲಿಹರಣವನ್ನು ಮಾಡಿ, ಅನಂತರ ಬ್ರಾಹ್ಮಣ ಭೋಜನವನ್ನು ಮಾಡಿಸಬೇಕು.

ತತೋಽನ್ನೇನಾವಶೇಷೇಣ ಭೋಜಯೇದತಿಥೀನಪಿ ।
ಅರ್ಚಾಪೂರ್ವಂ ಮಹಾರಾಜ ತತಃ ಪ್ರೀಣಾತಿ ಮಾನುಷಾನ್ ॥೧೭॥

ಎಲೈ ಮಹಾರಾಜನೇ, ಅತಿಥಿಗಳನ್ನು ಪೂಜಿಸಿ ಉಳಿದ ಅನ್ನಶೇಷದಿಂದ ಅವರಿಗೆ ಭೋಜನವನ್ನು ಮಾಡಿಸಬೇಕು. ಅದರಿಂದ ಮನುಷ್ಯರು ಪ್ರಸನ್ನರಾಗುತ್ತಾರೆ.

ಅನಿತ್ಯಂ ಹಿ ಸ್ಥಿತೋ ಯಸ್ಮಾತ್ ತಸ್ಮಾದತಿಥಿರುಚ್ಯತೇ ।
ಆಚಾರ್ಯಸ್ಯ ಪಿತುಶ್ಚೈವ ಸಖ್ಯುರಾಪ್ತಸ್ಯ ಚಾತಿಥೇಃ ।
ಇದಮಸ್ತಿ ಗೃಹೇ ಮಹ್ಯಮಿತಿ ನಿತ್ಯಂ ನಿವೇದಯೇತ್ ॥೧೯॥

ಅನಿತ್ಯವಾದ ಸ್ಥಿತಿ ಇರುವ ಕಾರಣದಿಂದ ಅಂತಹವನನ್ನು ಅತಿಥಿ ಎಂದು ಕರೆಯುತ್ತಾರೆ. ಗುರುಗಳಿಗೂ, ಪಿತೃಗಳಿಗೂ, ಸ್ನೇಹಿತನಿಗೂ, ಆಪ್ತನಿಗೂ ಮತ್ತು ಅತಿಥಿಗೂ ನನ್ನ ಮನೆಯಲ್ಲಿ ಇಷ್ಟು ದ್ರವ್ಯವಿದೆ ಎಂದು ನಿತ್ಯವೂ ನಿವೇದಿಸಬೇಕು.

ತೇ ಯದ್ದದೇಯುಸ್ತತ್ಕುರ್ಯಾದಿತಿ ಧರ್ಮೋ ವಿಧೀಯತೇ ।
ಗೃಹಸ್ಥಃ ಪುರುಷಃ ಕೃಷ್ಣ ಶಿಷ್ಟಾಶೀ ಚ ಸದಾ ಭವೇತ್ ॥೨೦॥

ಅವರು ಏನನ್ನು ಮಾಡಬೇಕೆಂದು ಹೇಳುತ್ತಾರೋ ಅದನ್ನು ಮಾಡುವುದು ಧರ್ಮದಲ್ಲಿ ಹೇಳಲ್ಪಡುತ್ತದೆ. ಎಲೈ ಕೃಷ್ಣನೇ, ಗೃಹಸ್ಥನಾದ ಪುರುಷನು ಯಾವಾಗಲೂ ಇಂತಹ ಅವಶಿಷ್ಟಾನ್ನವನ್ನೇ ಭುಂಜಿಸಬೇಕು.

ರಾಜರ್ತ್ವಿಜಂ ಸ್ನಾತಕಂ ಚ ಗುರುಂ ಶ್ವಶುರಮೇವ ಚ ।
ಅರ್ಚಯೇನ್ಮಧುಪರ್ಕೇಣ ಪರಿಸಂವತ್ಸರೋಷಿತಾನ್ ॥೨೧॥

ರಾಜ, ಋತ್ವಿಜರು, ಸ್ನಾತಕರು, ಗುರುಗಳು, ಮಾವ ಇವರೆಲ್ಲರೂ ಒಂದು ಸಂವತ್ಸರದಷ್ಟು ಕಾಲ ದೂರದಲ್ಲಿದ್ದರೆ (ಬಂದಿಲ್ಲದಿದ್ದರೆ) ಅವರಿಗೆ ಮಧುಪರ್ಕವನ್ನು ಕೊಟ್ಟು ಪೂಜಿಸಬೇಕು.

ಶ್ವಭ್ಯಶ್ಚ ಶ್ವಪಚೇಭ್ಯಶ್ಚ ವಯೋಭ್ಯಶ್ಚಾವಪೇದ್ ಭುವಿ ।
ವೈಶ್ವದೇವಂ ಹಿ ನಾಮೈತತ್ ಸಾಯಂಪ್ರಾತರ್ವಿಧೀಯತೇ ॥೨೨॥

ನಾಯಿಗಳಿಗೂ, ಶ್ವಪಚರಿಗೂ, ಪಕ್ಷಿಗಳಿಗೂ ಭೂಮಿಯಲ್ಲಿ ಬಲಿಯನ್ನು ಹಾಕಬೇಕು. ಇದಕ್ಕೆ ವೈಶ್ವದೇವವೆಂದು ಹೆಸರು. ಇದು ಸಾಯಂಕಾಲದಲ್ಲಿಯೂ ಮತ್ತು ಪ್ರಾತಃ ಕಾಲದಲ್ಲಿಯೂ ವಿಹಿತವಾಗಿದೆ.

ಏತಾಂಸ್ತು ಧರ್ಮಾನ್ ಗಾರ್ಹಸ್ಥ್ಯಾನ್ಯಃ ಕುರ್ಯಾದನಸೂಯಕಃ ।
ಸ ಇಹರ್ದ್ಧಿಂ ಪರಾಂ ಪ್ರಾಪ್ಯ ಪ್ರೇತ್ಯ ನಾಕೇ ಮಹೀಯತೇ ॥೨೩॥

ಯಾವ ಗೃಹಸ್ಥನು ಅಸೂಯಾ ರಹಿತನಾಗಿ ಈ ರೀತಿ ಗಾರ್ಹಸ್ಥ್ಯಧರ್ಮವನ್ನು ಅನುಷ್ಠಾನ ಮಾಡುತ್ತಾನೆಯೋ ಅವನು ಈ ಲೋಕದಲ್ಲಿ ಶ್ರೇಷ್ಠವಾದ ಸಮೃದ್ಧಿಯನ್ನು ಹೊಂದಿ ಮರಣಾನಂತರದಲ್ಲಿ ಸ್ವರ್ಗವನ್ನು ಪಡೆಯುತ್ತಾನೆ.

ಭೀಷ್ಮಃ

ಇತಿ ಭೂಮೇರ್ವಚಃ ಶ್ರುತ್ವಾ ವಾಸುದೇವಃ ಪ್ರತಾಪವಾನ್ ।
ತಥಾ ಚಕಾರ ಸತತಂ ತ್ವಮಪ್ಯೇವಂ ಸಮಾಚರ ॥೨೪॥

ಭೀಷ್ಮ– ಪ್ರತಾಪಶಾಲಿಯಾದ ವಾಸುದೇವನು ಭೂಮಿಯ ಈ ಮಾತುಗಳನ್ನು ಕೇಳಿ ಸತತವಾಗಿ ಹಾಗೆಯೇ ಮಾಡಿದನು. ನೀನೂ ಸಹ ಈ ಧರ್ಮಗಳನ್ನು ಆಚರಿಸು.

ಏವಂ ಗೃಹಸ್ಥಧರ್ಮಂ ತ್ವಂ ಚೇತಯಾನೋ ನರಾಧಿಪ ।
ಇಹಲೋಕೇ ಯಶಃ ಪ್ರಾಪ್ಯ ಪ್ರೇತ್ಯ ಸ್ವರ್ಗಮವಾಪ್ಸ್ಯಸಿ ॥೨೫॥

ಎಲೈ ನರಾಧಿಪನೇ, ಹೀಗೆ ಗ್ರಹಸ್ಥ ಧರ್ಮವನ್ನು ತಿಳಿದು, ಆಚರಿಸಿ ನೀನು ಈ ಲೋಕದಲ್ಲಿ ಕೀರ್ತಿಯನ್ನೂ ಮತ್ತು ಮರಣಾನಂತರದಲ್ಲಿ ಸ್ವರ್ಗವನ್ನೂ ಹೊಂದುವಿ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಗಾರ್ಹಸ್ಥ್ಯಧರ್ಮನಿರೂಪಣಂ ನಾಮ
ಪಂಚಾಶದಧಿಕಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಐವತ್ತನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಐವತ್ತೊಂದನೆಯ ಅಧ್ಯಾಯ

ದೀಪಾದಿದಾನವಿಧಿ

ಯುಧಿಷ್ಠಿರಃ

ಆಲೋಕದಾನಂ ನಾಮೈತತ್ ಕೀದೃಶಂ ಭರತರ್ಷಭ ।
ಕಥಮೇತತ್ ಸಮುತ್ಪನ್ನಂ ಫಲಂ ಚಾತ್ರ ಬ್ರವೀಹಿ ಮೇ ॥೧॥

ಯುಧಿಷ್ಠಿರ– ಎಲೈ ಭರತರ್ಷಭನೇ, ಅಲೋಕದಾನವೆಂದರೆ ಎಂತಹದು? ಇದು ಹೇಗೆ ಪ್ರವೃತ್ತವಾಯಿತು? ಇದರ ಫಲವನ್ನು ನನಗೆ ಹೇಳು.

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಮನೋಃ ಪ್ರಜಾಪತೇರ್ವಾದಂ ಸುವರ್ಣಸ್ಯ ಚ ಭಾರತ ॥೨॥

ಭೀಷ್ಮ– ಈ ವಿಷಯದಲ್ಲಿಯೂ ಸಹ ಎಲೈ ಭಾರತನೇ, ಪ್ರಜಾಪತಿಯಾದ ಸ್ವಾಯಂಭುವ ಮನುವಿಗೂ ಮತ್ತು ಸುವರ್ಣನೆಂಬ ತಪಸ್ವಿಗೂ ನಡೆದ ಸಂವಾದ ರೂಪವಾದ ಇತಿಹಾಸವನ್ನು ಹೇಳುತ್ತಾರೆ.

ತಪಸ್ವೀ ಕಶ್ಚಿದಭವತ್ ಸುವರ್ಣೋ ನಾಮ ನಾಮತಃ ।
ವರ್ಣತೋ ಹೇಮವರ್ಣಃ ಸ ಸುವರ್ಣ ಇತಿ ಪಪ್ರಥೇ ॥೩॥

ಸುವರ್ಣನೆಂಬ ತಪಸ್ವಿ ಇದ್ದನು. ಅವನು ಚಿನ್ನದ ಬಣ್ಣವನ್ನು ಹೊಂದಿದ್ದುದರಿಂದ ಸುವರ್ಣನೆಂದೇ ಪ್ರಸಿದ್ಧನಾದನು.

ಕುಲಶೀಲಗುಣೋಪೇತಃ ಸ್ವಾಧ್ಯಾಯೇ ಚ ಪರಂ ಗತಃ ।
ಬಹೂನ್ ಸ್ವವಂಶಪ್ರಭವಾನ್ ಸಮತೀತಃ ಸ್ವಕೈರ್ಗುಣೈಃ ॥೪॥

ಕುಲಶೀಲಗುಣಗಳಿಂದ ಕೂಡಿದ ಅವನು ಸ್ವಾಧ್ಯಾಯದಲ್ಲಿ ಪಾರಂಗತನಾಗಿ ತನ್ನ ಗುಣಗಳಿಂದ ತನ್ನ ವಂಶದ ಅನೇಕರನ್ನು ಮೀರಿದನು.

ಸ ಕದಾಚಿನ್ಮನುಂ ವಿಪ್ರೋ ದದರ್ಶೋಪಸಸರ್ಪ ಚ ।
ಕುಶಲಪ್ರಶ್ನಮನ್ಯೋನ್ಯಂ ತೌ ಚ ತತ್ರ ಪ್ರಚಕ್ರತುಃ ॥೫॥

ಅವನು ಒಮ್ಮೆ ಮನುವನ್ನು ನೋಡಿ ಅವನ ಸಮೀಪಕ್ಕೆ ಹೋದನು. ಅವರಿಬ್ಬರೂ ಪರಸ್ಪರವಾಗಿ ಕುಶಲಪ್ರಶ್ನೆಯನ್ನು ಮಾಡಿದರು.

ತತಸ್ತೌ ಸಿದ್ಧಸಂಕಲ್ಪೌ ಮೇರೌ ಕಾಂಚನಪರ್ವತೇ ।
ರಮಣೀಯೇ ಶಿಲಾಪೃಷ್ಠೇ ಸಹಿತೌ ಸನ್ನ್ಯಷೀದತಾಮ್ ॥೬॥

ಅನಂತರ ಸಂಕಲ್ಪಸಿದ್ಧಿಯುಳ್ಳ ಅವರಿಬ್ಬರೂ ಸುವರ್ಣಮಯ ಪರ್ವತವಾದ ಮೇರುವಿನಲ್ಲಿ ರಮಣೀಯವಾದ ಒಂದು ಶಿಲಾತಳದ ಮೇಲೆ ಜೊತೆಯಲ್ಲಿ ಕುಳಿತುಕೊಂಡರು.

ತತ್ರ ತೌ ಕಥಯಾಮಾಸ್ತಾಂ ಕಥಾ ನಾನಾವಿಧಾಶ್ರಯಾಃ ।
ಬ್ರಹ್ಮರ್ಷಿದೇವದೈತ್ಯಾನಾಂ ಪುರಾಣಾನಾಂ ಮಹಾತ್ಮನಾಮ್ ॥೭॥

ಅಲ್ಲಿ ಅವರು ಪ್ರಾಚೀನರಾದ, ಮಹಾತ್ಮರಾದ, ಬ್ರಹ್ಮರ್ಷಿದೇವತೆಗಳಿಗೆ ಮತ್ತು ದೈತ್ಯರಿಗೆ ಸಂಬಂಧಿಸಿದ ನಾನಾ ವಿಧವಾದ ಕಥೆಗಳನ್ನು ಹೇಳಿದರು.

ಸುವರ್ಣಸ್ತ ಬ್ರುವೀದ್ ವಾಕ್ಯಂ ಮನುಂ ಸ್ವಾಯಂಭುವಂ ಪ್ರಭುಮ್ ।
ಹಿತಾರ್ಥಂ ಸರ್ವಭೂತಾನಾಂ ಪ್ರಶ್ನಂ ಮೇ ವಕ್ತುಮರ್ಹಸಿ ॥೮॥

ಆಗ ಸುವರ್ಣನು ಪ್ರಭುವಾದ ಸ್ವಾಯಂಭುವ ಮನುವನ್ನು ಕುರಿತು ಸರ್ವಭೂತಗಳ ಹಿತಕ್ಕಾಗಿ ನನ್ನ ಪ್ರಶ್ನೆಗೆ ಉತ್ತರವನ್ನು ಕೊಡಬೇಕು ಎಂದು ಹೇಳಿದನು.

ಸುಮನೋಭಿರ್ಯದಿಜ್ಯಂತೇ ದೈವತಾನಿ ಪ್ರಜೇಶ್ವರ ।
ಕಿಮೇತತ್ ಕಥಮುತ್ಪನ್ನಂ ಫಲಯೋಗಂ ಚ ಶಂಸ ಮೇ ॥೯॥

ಎಲೈ ಪ್ರಜಾಪತಿಯೇ, ದೇವತೆಗಳು ಪುಷ್ಪಗಳಿಂದ ಪೂಜಿಸಲ್ಪಡುತ್ತಾರಷ್ಟೆ? ಇದು ಹೇಗೆ ಉತ್ಪನ್ನವಾಯಿತು ಮತ್ತು ಇದರ ಫಲವೇನು ಎಂಬುದನ್ನು ನನಗೆ ಹೇಳು (ಎಂದು ಕೇಳಿದನು).

ಮನುಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಶುಕ್ರಸ್ಯ ಚ ಬಲೇಶ್ಚೈವ ಸಂವಾದಂ ವೈ ಸಮಾಗಮೇ ॥೧೦॥

ಮನು– ಈ ವಿಷಯದಲ್ಲಿಯೂ ಸಹ ಶುಕ್ರ ಮತ್ತು ಬಲಿ ಇವರು ಸಮಾಗಮವನ್ನು ಹೊಂದಿದಾಗ ನಡೆದ ಸಂವಾದ ರೂಪವಾದ ಪ್ರಾಚೀನ ಇತಿಹಾಸವನ್ನು ಹೇಳುತ್ತಾರೆ.

ಬಲೇರ್ವೈರೋಚನಸ್ಯೇಹ ತ್ರೈಲೋಕ್ಯಮನುಶಾಸತಃ ।
ಸಮೀಪಮಾಜಗಾಮಾಶು ಶುಕ್ರೋ ಭೃಗುಕುಲೋದ್ವಹಃ ॥೧೧॥

ಭೃಗುಕುಲೋದ್ವಹರಾದ ಶುಕ್ರಾಚಾರ್ಯರು ಮೂರುಲೋಕಗಳನ್ನೂ ಆಳುತ್ತಿದ್ದಂತಹ ವಿರೋಚನ ಪುತ್ರನಾದ ಬಲಿಯ ಬಳಿಗೆ ಬಂದರು.

ತಮರ್ಘ್ಯಾದಿಭಿರಭ್ಯರ್ಚ್ಯ ಭಾರ್ಗವಂ ಸೋಽಸುರಾಧಿಪಃ ।
ನಿಷಸಾದಾಸನೇ ಪಶ್ಚಾದ್ ವಿಧಿವದ್ ಭೂರಿದಕ್ಷಿಣಃ ॥೧೨॥

ಕಥೇಯಮಭವತ್ ತತ್ರ ಯಾ ತ್ವಯಾ ಪರಿಕೀರ್ತಿತಾ ।
ಸುಮನೋಧೂಪದೀಪಾನಾಂ ಸಂಪ್ರದಾನೇ ಫಲಂ ಪ್ರತಿ ॥೧೩॥

ಅಸುರ ಶ್ರೇಷ್ಠನಾದ ಬಲಿಯು ಭಾರ್ಗವರಾದ ಶುಕ್ರಾಚಾರ್ಯರನ್ನು ಅರ್ಘ್ಯಾದಿಗಳಿಂದ ಪೂಜಿಸಿ ವಿಧಿಗೆ ಅನುಸಾರವಾಗಿ ಬಹಳ ದಕ್ಷಿಣೆಯನ್ನು ಕೊಟ್ಟು ಆಸನದಲ್ಲಿ ಕುಳಿತುಕೊಂಡನು. ಆಗ ಅಲ್ಲಿ ನೀನು ಕೇಳಿದ ಪುಷ್ಪ-ಧೂಪ-ದೀಪಗಳ ದಾನ ಮತ್ತು ಫಲದ ವಿಷಯದಲ್ಲಿ ಕಥೆಯು ನಡೆಯಿತು.

ತತಃ ಪಪ್ರಚ್ಛ ದೈತ್ಯೇಂದ್ರಃ ಕವೀಂದ್ರಂ ಪ್ರಶ್ನಮುತ್ತಮಮ್ ।
ಸುಮನೋಧೂಪದೀಪಾನಾಂ ಕಿಂ ಫಲಂ ಬ್ರೂಹ್ಯವಿತ್ತಮ ।
ಪ್ರದಾನಸ್ಯ ದ್ವಿಜಶ್ರೇಷ್ಠ ತದ್ಭವಾನ್ ವಕ್ತುಮರ್ಹತಿ ॥೧೪॥

ಆಗ ದೈತ್ಯೇಂದ್ರನಾದ ಬಲಿಯು ಕವೀಂದ್ರರಾದ ಶುಕ್ರರನ್ನು ಕುರಿತು- 'ಎಲೈ ಬ್ರಹ್ಮಜ್ಞಾನಿಗಳಲ್ಲಿ ಶ್ರೇಷ್ಠರೇ, ಎಲೈ ದ್ವಿಜಶ್ರೇಷ್ಠರೇ, ಪುಷ್ಪ-ಧೂಪ-ದೀಪಗಳ ದಾನದಿಂದ ಏನು ಫಲವೆಂದು ನೀವು ಹೇಳಬೇಕು' ಶ್ರೇಷ್ಠವಾದ ಪ್ರಶ್ನೆಯನ್ನು ಎಂದು ಕೇಳಿದನು.

ಶುಕ್ರಃ

ತಪಃ ಪೂರ್ವಂ ಸಮುತ್ಪನ್ನಂ ಧರ್ಮಸ್ತಸ್ಮಾದನಂತರಮ್ ।
ಏತಸ್ಮಿನ್ನಂತರೇ ಚೈವ ವೀರುಧೋಷಧ್ಯ ಏವ ಚ ॥೧೫॥

ಸೋಮಸ್ಯಾತ್ಮಾ ಚ ಬಹುಧಾ ಸಂಭೂತಃ ಪೃಥಿವೀತಳೇ ।
ಅಮೃತಂ ಚ ವಿಷಂ ಚೈವ ಯಾಶ್ಚಾನ್ಯಾಸ್ತುಲ್ಯಜಾತಯಃ ॥೧೬॥

ಶುಕ್ರ– ತಪಸ್ಸು ಮೊದಲು ಜನಿಸಿತು. ಅನಂತರ ಧರ್ಮವು ಜನಿಸಿತು. ಇವೆರಡರ ಮಧ್ಯದಲ್ಲಿ ಚಂದ್ರನಿಗೆ ಶರೀರದಂತಿರುವ ಓಷಧಿಗಳು ಮತ್ತು ಬಳ್ಳಿಗಳು ಭೂಮಿಯಲ್ಲಿ ಬಹಳವಾಗಿ ಜನಿಸಿದವು. ಅಮೃತ, ವಿಷ ಮತ್ತು ಇವುಗಳ ಜಾತಿಗೆ ಸಮಾನವಾದ ಜಾತಿಯ ಅನೇಕ ವಸ್ತುಗಳು ಜನಿಸಿದವು.

ಅಮೃತಂ ಮನಸಃ ಪ್ರೀತಿಂ ಸದ್ಯಃ ಪುಷ್ಟಿಂ ದದಾತಿ ಚ ।
ಮನೋ ಗ್ಲಾಪಯತೇ ತೀವ್ರಂ ವಿಷಂ ಗಂಧೇನ ಸರ್ವಶಃ ॥೧೭॥

ಅಮೃತವು ಮನಸ್ಸಿಗೆ ಸಂತೋಷವನ್ನು ಮತ್ತು ತಕ್ಷಣ ಪುಷ್ಟಿಯನ್ನೂ ಕೊಡುತ್ತದೆ. ವಿಷವು ಎಲ್ಲ ಕಡೆ ಹರಡಿ ತನ್ನ ಗಂಧದಿಂದಲೇ ಮನಸ್ಸಿಗೆ ತೀವ್ರವಾಗಿ ಸಂತಾಪವನ್ನು ಉಂಟುಮಾಡುತ್ತದೆ.

ಅಮೃತಂ ಮಂಗಳಂ ವಿದ್ಧಿ ಮಹದ್ ವಿಷಮಮಂಗಲಮ್ ।
ಓಷಧ್ಯೋ ಹ್ಯಮೃತಂ ಸರ್ವಂ ವಿಷಂ ತೇಜೋऽಗ್ನಿಸಂಭವಮ್ ॥೧೮॥

ಅಮೃತವನ್ನು ದೊಡ್ಡ ಮಂಗಳವೆಂದು ತಿಳಿ. ವಿಷವು ಅಮಂಗಳವಾದುದು. ಎಲ್ಲ ಓಷಧಿಗಳೂ ಅಮೃತ. ಅಗ್ನಿಯಿಂದ ಉಂಟಾದ ತೇಜಸ್ಸು ವಿಷರೂಪವಾದುದು.

ಮನೋ ಹ್ಲಾದಯತೇ ಯಸ್ಮಾಚ್ಚ್ರಿಯಂ ಚಾಪಿ ದಧಾತಿ ಹ ।
ತಸ್ಮಾತ್ ಸುಮನಸಃ ಪ್ರೋಕ್ತಾ ನರೈಃ ಸುಕೃತಕರ್ಮಭಿಃ ॥೧೯॥

ಪುಷ್ಪಗಳು ಮನಸ್ಸಿಗೆ ಸಂತೋಷವನ್ನುಂಟು ಮಾಡುತ್ತವೆ ಮತ್ತು ಸಂಪತ್ತನ್ನುಂಟು ಮಾಡುತ್ತವೆ. ಆದ್ದರಿಂದ ಶುಭಕರ್ಮವನ್ನು ಮಾಡುವ ಮನುಷ್ಯರು ಅವುಗಳನ್ನು ಸುಮನಸ್ ಎಂದು ಕರೆಯುತ್ತಾರೆ.

ದೇವತಾಭ್ಯಃ ಸುಮನಸೋ ಯೋ ದದಾತಿ ನರಃ ಶುಚಿಃ ।
ದೇವಾಃ ಸುಮನಸಃ ತಸ್ಮೈ ತಸ್ಮಾತ್ ಸಮುನಸಃ ಸ್ಮೃತಾಃ ॥೨೦॥

ಯಾವ ಮನುಷ್ಯನು ಶುಚಿಯಾಗಿ ದೇವತೆಗಳಿಗೆ ಪುಷ್ಪಗಳನ್ನು ಅರ್ಪಿಸುತ್ತಾನೋ ಅವನ ವಿಷಯದಲ್ಲಿ ದೇವತೆಗಳು ಒಳ್ಳೆಯ ಮನಸ್ಸನ್ನು (ಸುಮನಸ್) ಹೊಂದುತ್ತಾರೆ. ಆದ್ದರಿಂದಲೂ ಪುಷ್ಪಗಳಿಗೆ ಸುಮನಸ್ ಎಂದು ಕರೆಯುತ್ತಾರೆ.

ಯಂ ಯಮುದ್ದಿಶ್ಯ ದೀಯೇರನ್ ದೇವಂ ಸುಮನಸಃ ಪ್ರಭೋ ।
ಮಂಗಳಾರ್ಥಂ ಸ ತೇನಾಸ್ಯ ಪ್ರೀತೋ ಭವತಿ ದೈತ್ಯಪ ॥೨೧॥

ಎಲೈ ದೈತ್ಯರಾಜನೇ, ಪ್ರಭುವೇ, ಮಾಂಗಲ್ಯಕ್ಕಾಗಿ ಯಾವ ಯಾವ ದೇವತೆಗಳನ್ನು ಉದ್ದೇಶಿಸಿ ಪುಷ್ಪಗಳನ್ನು ಅರ್ಪಿಸುತ್ತಾರೆಯೋ ಅದರಿಂದ ಆ ದೇವತೆಯು ಪ್ರಸನ್ನನಾಗುತ್ತಾನೆ.

ಜ್ಞೇಯಾಸ್ತೂಗ್ರಾಶ್ಚ ಸೌಮ್ಯಾಶ್ಚ ತೇಜಸ್ವಿನ್ಯಶ್ಚ ತಾಃ ಪೃಥಕ್ ।
ಓಷಧ್ಯೋ ಬಹುವೀರ್ಯಾಶ್ಚ ಬಹುರೂಪಾಸ್ತಥೈವ ಚ ॥೨೨॥

ಓಷಧಿಗಳು (ವೃಕ್ಷ-ಲತೆಗಳು) ಕೆಲವು ಉಗ್ರವಾದವುಗಳು, ಕೆಲವು ಸೌಮ್ಯವಾದವುಗಳು ಮತ್ತು ಕೆಲವು ತೀಕ್ಷ್ಣವಾದವುಗಳು. ಅವುಗಳಿಗೆ ಬಹಳ ಸಾಮರ್ಥ್ಯವೂ ಮತ್ತು ಬಹುರೂಪವೂ ಇರುತ್ತವೆ. ಅವುಗಳನ್ನು ಬೇರೆ ಬೇರೆಯಾಗಿ ತಿಳಿಯಬೇಕು.

ಯಜ್ಞಿಯಾನಾಂ ಚ ವೃಕ್ಷಾಣಾಮಯಜ್ಞಿಯಾನ್ ನಿಬೋಧ ಮೇ ।
ಆಸುರಾಣಿ ಚ ಮಾಲ್ಯಾನಿ ದೈವತೇಭ್ಯೋ ಹಿತಾನಿ ಚ ॥೨೩॥

ಯಜ್ಞೋಪಯೋಗಿಯಾದ ವೃಕ್ಷಗಳನ್ನೂ, ಯಜ್ಞೋಪಯೋಗವಿಲ್ಲದ ವೃಕ್ಷಗಳನ್ನೂ ನನ್ನಿಂದ ತಿಳಿ. ಹಾಗೆಯೇ ದೇವತೆಗಳಿಗೆ ಪ್ರಿಯವಾದ ಮಾಲ್ಯಗಳನ್ನೂ, ಅಸುರರಿಗೆ ಪ್ರಿಯವಾದ ಮಾಲ್ಯಗಳನ್ನೂ ತಿಳಿಯುವವನಾಗು.

ರಾಕ್ಷಸಾನಾಂ ಸುರಾಣಾಂ ಚ ಯಕ್ಷಾಣಾಂ ಚ ತಥಾ ಪ್ರಿಯಾಃ ।
ಪಿತೄಣಾಂ ಮಾನುಷಾಣಾಂ ಚ ಕಾಂತಾಯಾಸ್ತ್ವನುಪೂರ್ವಶಃ ॥೨೪॥

ರಾಕ್ಷಸರಿಗೆ, ದೇವತೆಗಳಿಗೆ, ಯಕ್ಷರಿಗೆ, ಪಿತೃಗಳಿಗೆ, ಮನುಷ್ಯರಿಗೆ ಹಾಗೂ ಸ್ತ್ರೀಯರಿಗೆ ಪ್ರಿಯವಾದ ಮಾಲೆಗಳನ್ನು ಕ್ರಮವಾಗಿ ಕೇಳು.

ವನ್ಯಾ ಗ್ರಾಮ್ಯಾಶ್ಚೇಹ ತಥಾ ಕೃಷ್ಟೋಪ್ತಾಃ ಪರ್ವತಾಶ್ರಯಾಃ ।
ಅಕಂಟಕಾಃ ಕಂಟಕಿನ್ಯೋ ಗಂಧರೂಪರಸಾನ್ವಿತಾಃ ॥೨೫॥

ಕಾಡಿನಲ್ಲಿ ಬೆಳೆದ, ಗ್ರಾಮದಲ್ಲಿ ಬೆಳೆದ, ಬಿತ್ತಿ ಬೆಳೆಸಿದ ಮತ್ತು ಪರ್ವತಗಳಲ್ಲಿ ತಾನಾಗಿಯೇ ಬೆಳೆದ, ಮುಳ್ಳಿನಿಂದ ಕೂಡಿದ, ಗಂಧರೂಪ ರಸಗಳನ್ನು ಹೊಂದಿದ ಪುಷ್ಪಗಳನ್ನೂ ತಿಳಿಯುವವನಾಗು.

ದ್ವಿವಿಧೋ ಹಿ ಸ್ಮೃತೋ ಗಂಧ ಇಷ್ಟೋಽನಿಷ್ಟಶ್ಚ ಪುಷ್ಪಜಃ ।
ಇಷ್ಟಗಂಧಾನಿ ದೇವಾನಾಂ ಪುಷ್ಪಾಣೀತಿ ವಿಭಾವಯೇತ್ ॥೨೬॥

ಪುಷ್ಪದ ಗಂಧವು ಇಷ್ಟ ಮತ್ತು ಅನಿಷ್ಟ ಎಂದು ಎರಡು ವಿಧವಾದುದು. ಇಷ್ಟವಾದ ಗಂಧವುಳ್ಳ ಪುಷ್ಪಗಳು ದೇವತೆಗಳಿಗೆ ಪ್ರಿಯವಾದವುಗಳು ಎಂದು ತಿಳಿಯಬೇಕು.

ಅಕಂಟಕಾನಾಂ ವೃಕ್ಷಾಣಾಂ ಶ್ವೇತಪ್ರಾಯಾಶ್ಚ ವರ್ಣತಃ ।
ತೇಷಾಂ ಪುಷ್ಪಾಣಿ ದೇವಾನಾಮಿಷ್ಟಾನಿ ಸತತಂ ಪ್ರಭೋ ॥೨೭॥

ಮುಳ್ಳಿಲ್ಲದ ವೃಕ್ಷಗಳ, ಪ್ರಾಯಶಃ ಶ್ವೇತವರ್ಣದಿಂದ ಕೂಡಿದ ಪುಷ್ಪಗಳು, ಎಲೈ ಪ್ರಭುವೇ, ದೇವತೆಗಳಿಗೆ ಸತತವಾಗಿ ಇಷ್ಟವಾದವುಗಳು.

ಜಲಜಾನಿ ಚ ಮಾಲ್ಯಾನಿ ಪದ್ಮಾದೀನಿ ಚ ಯಾನಿ ಚ ।
ಗಂಧರ್ವನಾಗಯಕ್ಷೇಭ್ಯಸ್ತಾನಿ ದದ್ಯಾದ್ ವಿಚಕ್ಷಣಃ ॥೨೮॥

ನೀರಿನಲ್ಲಿ ಬೆಳೆದ ಪದ್ಮ, ಉತ್ಪಲ ಮೊದಲಾದ ಪುಷ್ಪಗಳನ್ನು ವಿಚಕ್ಷಣನಾದವನು ಗಂಧರ್ವರಿಗೂ, ಸರ್ಪಗಳಿಗೂ, ಯಕ್ಷರಿಗೂ ಕೊಡಬೇಕು.

ಓಷಧ್ಯೋ ರಕ್ತಪುಷ್ಪಾಶ್ಚ ಕಟುಕಾಃ ಕಂಟಕಾನ್ವಿತಾಃ ।
ಶತ್ರೂಣಾಮಭಿಚಾರಾರ್ಥಮಥರ್ವಸು ನಿದರ್ಶಿತಾಃ ॥೨೯॥

ಕೆಂಪು ಬಣ್ಣದ ಪುಷ್ಪವುಳ್ಳ ತೀಕ್ಷ್ಣವಾದ ಮುಳ್ಳಿನಿಂದ ಕೂಡಿದ ವೃಕ್ಷಗಳು ಅಥರ್ವಣ ವೇದದಲ್ಲಿ ಶತ್ರುಗಳನ್ನುದ್ದೇಶಿಸಿ ಅಭಿಚಾರ ಪ್ರಯೋಗವನ್ನು ಮಾಡಲು ಹೇಳಲ್ಪಟ್ಟಿವೆ.

ತೀಕ್ಷ್ಣವೀರ್ಯಾಸ್ತು ಭೂತಾನಾಂ ದುರಾಲಂಭಾಃ ಸಕಂಟಕಾಃ ।
ರಕ್ತಭೂಯಿಷ್ಠವರ್ಣಾಶ್ಚ ಕೃಷ್ಣಾ ರಕ್ಷೋಗಣೇಷ್ವಿಹ ॥೩೦॥

ತೀಕ್ಷ್ಣವಾದ ಸಾಮರ್ಥ್ಯವುಳ್ಳ, ಪ್ರಾಣಿಗಳು ಹತ್ತಲು ಕಷ್ಟವಾದ, ಕಂಟಕ ಸಹಿತವಾದ, ಕಡುಕೆಂಪು ಬಣ್ಣದಿಂದ ಕೂಡಿದ ಪುಷ್ಪಗಳನ್ನುಳ್ಳ, ವೃಕ್ಷಗಳ ಪುಷ್ಪಗಳನ್ನೂ ಹಾಗೂ ಕೃಷ್ಣವರ್ಣದ ಪುಷ್ಪಗಳನ್ನೂ ರಾಕ್ಷಸರ ಸಮೂಹಕ್ಕೆ ಸಮರ್ಪಿಸಬೇಕು.

ಮನೋಹೃದಯನಂದಿನ್ಯೋ ವಿಮರ್ದೇ ಮಧುರಾಶ್ಚ ಯಾಃ ।
ಚಾರುರೂಪಾಃ ಸುಮನಸೋ ಮಾನುಷ್ಯಾಂಶ್ಚ ಸ್ಮೃತಾ ವಿಭೋ ॥೩೧॥

ಎಲೈ ವಿಭುವೇ, ಮನಸ್ಸಿಗೆ ಸಂತೋಷವನ್ನು ನೀಡುವ, ಸ್ವಲ್ಪ ತೀಡಿದರೂ ಮಧುರವಾದ ಗಂಧವನ್ನು ಸೂಸುವ, ನೋಡಲು ಸುಂದರವಾಗಿ ಕಾಣುವ ಪುಷ್ಪಗಳು ಮನುಷ್ಯರಿಗೆ ಪ್ರಿಯವಾದವುಗಳು ಎಂದು ತಿಳಿ.

ನ ತು ಶ್ಮಶಾನಸಂಭೂತಾ ನ ದೇವಾಯತನೋದ್ಭವಾಃ ।
ಸನ್ನಯೇತ್ ಪುಷ್ಟಿಯುಕ್ತೇಷು ವಿವಾಹೇಷು ರಹಃಸು ಚ ॥೩೨॥

ಪೌಷ್ಟಿಕ ಕಾರ್ಯದಲ್ಲಾಗಲೀ, ವಿವಾಹದಲ್ಲಾಗಲೀ ಅಥವಾ ರಹಸ್ಯ ಕಾರ್ಯ-ಗಳಲ್ಲಾಗಲೀ ಸ್ಮಶಾನದಲ್ಲಿ ಬೆಳೆದ ಅಥವಾ ದೇವಾಲಯದಲ್ಲಿ ಬೆಳೆದ ಪುಷ್ಪಗಳನ್ನು ತರಬಾರದು.

ಗಿರಿಸಾನುರುಹಾಃ ಸೌಮ್ಯಾ ದೇವಾನಾಮುಪಪಾದಯೇತ್ ।
ಪ್ರೋಕ್ಷಿತಾಭ್ಯುಕ್ಷಿತಾಃ ಸೌಮ್ಯಾ ಯಥಾಯೋಗಂ ಯಥಾಸ್ಮೃತಿ ॥೩೩॥

ಪರ್ವತಶಿಖರಗಳಲ್ಲಿ ಬೆಳೆದ, ಸೌಮ್ಯವಾದ, ಶಾಸ್ತ್ರದ ವಿಧಿಯಂತೆ ಪ್ರೋಕ್ಷಣೆಯನ್ನು ಮಾಡಿದ ಅಥವಾ ನೀರಿನಲ್ಲಿ ತೊಳೆದ ಪುಷ್ಪಗಳನ್ನು ದೇವತೆಗಳಿಗೆ ಅರ್ಪಿಸಬೇಕು.

ಗಂಧೇನ ದೇವಾಸ್ತುಷ್ಯಂತಿ ದರ್ಶನಾದ್ ಯಕ್ಷರಾಕ್ಷಸಾಃ ।
ನಾಗಾಃ ಸಮುಪಭೋಗೇನ ತ್ರಿಭಿರೇತೈಸ್ತು ಮಾನುಷಾಃ ॥೩೪॥

ಪುಷ್ಪಗಳ ಗಂಧದಿಂದ ದೇವತೆಗಳು ಸಂತೋಷಪಡುತ್ತಾರೆ. ಪುಷ್ಪಗಳ ದರ್ಶನದಿಂದ ಯಕ್ಷ-ರಾಕ್ಷಸರು ಸಂತೋಷಪಡುತ್ತಾರೆ. ಪುಷ್ಪಗಳ ಉಪಭೋಗದಿಂದ ಸರ್ಪಗಳು ಸಂತೋಷಪಡುತ್ತವೆ. ಮನುಷ್ಯರು ಈ ಮೂರರಿಂದಲೂ ಸಂತೋಷ ಪಡುತ್ತಾರೆ.

ಸದ್ಯಃ ಪ್ರೀಣಾತಿ ದೇವಾನ್ ವೈ ತೇ ಪ್ರೀತಾ ಭಾವಯಂತ್ಯುತ ।
ಸಂಕಲ್ಪಸಿದ್ಧಿರ್ಭೂತಾನಾಂ ಪುಷ್ಪೈರ್ಭಾವ್ಯಾऽಸುರೈಃ ಸದಾ ॥೩೫॥

ಪುಷ್ಪಗಳು ದೇವತೆಗಳನ್ನು ತಕ್ಷಣದಲ್ಲಿಯೇ ಪ್ರಸನ್ನಗೊಳಿಸುತ್ತವೆ. ಆ ದೇವತೆಗಳು ಪ್ರಸನ್ನರಾಗಿ ಪೂಜಿಸುವವನನ್ನು ಶುದ್ಧಿಗೊಳಿಸುತ್ತಾರೆ ಅಥವಾ ಸಂಪದ್ಯುಕ್ತನನ್ನಾಗಿ ಮಾಡುತ್ತಾರೆ. ಅದರಿಂದ ಮನುಷ್ಯರಿಗೆ ಸಂಕಲ್ಪಸಿದ್ಧಿಯಾಗುತ್ತದೆ. ಅಂತಹ ಸಂಕಲ್ಪ ಸಿದ್ಧಿಯನ್ನು ಮನುಷ್ಯರು ಮತ್ತು ಅಸುರರು ಪುಷ್ಪಗಳಿಂದ ಯಾವಾಗಲೂ ಸಾಧಿಸಬಹುದು.

ದೇವಾಃ ಪ್ರೀಣಂತಿ ಸತತಂ ಮಾನಿತಾ ಮಾನಯಂತಿ ಚ ।
ಅವಜ್ಞಾತಾವಧೂತಾಶ್ಚ ನಿರ್ದಹಂತ್ಯಧಮಾನ್ ನರಾನ್ ॥೩೬॥

ದೇವತೆಗಳ ಪೂಜೆಯನ್ನು ಮಾಡಿದರೆ ಅವರು ಸತತವಾಗಿ ಪ್ರಸನ್ನರಾಗಿ ಪೂಜೆ ಮಾಡುವವನನ್ನು ಸನ್ಮಾನಗೊಳಿಸುತ್ತಾರೆ. ಅವರನ್ನು ಅವಮಾನ ಮಾಡಿ ತಿರಸ್ಕರಿಸುವ ಅಧಮ ಮನುಷ್ಯರನ್ನು ಅವರು ಸುಟ್ಟುಬಿಡುತ್ತಾರೆ (ನಾಶ ಮಾಡುತ್ತಾರೆ).

ಅತ ಊರ್ಧ್ವಂ ಪ್ರವಕ್ಷ್ಯಾಮಿ ಧೂಪದಾನವಿಧೌ ಫಲಮ್ ।
ಧೂಪಾಂಶ್ಚ ವಿವಿಧಾನ್ ಸಾಧೂನಸಾಧೂಂಶ್ಚ ನಿಬೋಧ ಮೇ ॥೩೭॥

ಇನ್ನು ಮುಂದೆ ಧೂಪದಾನ ವಿಧಿಯನ್ನೂ ಮತ್ತು ಅದರ ಫಲವನ್ನೂ ಹೇಳುವೆನು. ವಿಧವಿಧವಾದ ಒಳ್ಳೆಯ ಮತ್ತು ಕೆಟ್ಟಧೂಪಗಳನ್ನು ನನ್ನಿಂದ ತಿಳಿ.

ನಿರ್ಯಾಸಃ ಸಾರಿಣಶ್ಚೈವ ಕೃತ್ರಿಮಶ್ಚೈವ ತೇ ತ್ರಯಃ ।
ಇಷ್ಟಾನಿಷ್ಟೋ ಭವೇದ್ ಗಂಧಸ್ತನ್ಮೇ ವಿಸ್ತರತಃ ಶೃಣು ॥೩೮॥

ನಿರ್ಯಾಸ (ವೃಕ್ಷರಸ- ಗೋಂದು), ಸಾರಿ, ಕೃತ್ರಿಮ ಎಂದು ಗಂಧಗಳು ಮೂರು ಬಗೆಯಾದವು. ಆ ಮೂರೂ ಸಹ ಇಷ್ಟ ಮತ್ತು ಅನಿಷ್ಟ ಎಂಬ ಪ್ರಭೇದಗಳಿಂದ ಎರಡೆರಡು ಬಗೆಯಾದವು. ಅದನ್ನು ವಿಸ್ತಾರವಾಗಿ ಕೇಳು.

ನಿರ್ಯಾಸಾಃ ಸಲ್ಲಕೀವರ್ಜ್ಯಾ ದೇವಾನಾಂ ದಯಿತಾಸ್ತು ತೇ ।
ಗುಗ್ಗುಲುಃ ಪ್ರವರಸ್ತೇಷಾಂ ಸರ್ವೇಷಾಮಿತಿ ನಿಶ್ಚಯಃ ॥೩೯॥

ಸಲ್ಲಕೀ ವೃಕ್ಷ (ಆನೆಬೇಲ) ನಿರ್ಯಾಸವನ್ನು ಬಿಟ್ಟು ಉಳಿದ ನಿರ್ಯಾಸಗಳು ದೇವತೆಗಳಿಗೆ ಪ್ರಿಯವಾದವುಗಳು. ಅವೆಲ್ಲದರಲ್ಲಿ ಗುಗ್ಗುಳವು ಶ್ರೇಷ್ಠವಾದುದೆಂದು ನಿಶ್ಚಿತವಾದುದು.

ಅಗರುಃ ಸಾರಿಣಾಂ ಶ್ರೇಷ್ಠೋ ಯಕ್ಷಗಂಧರ್ವರಕ್ಷಸಾಮ್ ।
ದೈತ್ಯಾನಾಂ ಸಲ್ಲಕೀಜಶ್ಚ ಕಾಂಕ್ಷಿತೋ ಯಶ್ಚ ತದ್ವಿಧಃ ॥೪೦॥

ಸಾರಿಗಂಧಗಳಲ್ಲಿ ಅಗರು ಶ್ರೇಷ್ಠವಾದುದು. ಅದು ಯಕ್ಷ-ಗಂಧರ್ವ-ರಾಕ್ಷಸರಿಗೆ ಪ್ರಿಯವಾದುದು. ದೈತ್ಯರಿಗೆ ಸಲ್ಲಕೀ ವೃಕ್ಷದ ಗಂಧ ಮತ್ತು ಅದೇ ಜಾತಿಯ ಗಂಧಗಳು ಪ್ರಿಯವಾದವುಗಳು. (ಸಾರಿ ಎಂದರೆ ಗಟ್ಟಿಯಾದ ಮರಗಳ ಗಂಧವೆಂದು ಲಕ್ಷಾಲಂಕಾರದ ಅಭಿಪ್ರಾಯ. ಅಗ್ನಿಗೆ ಹಾಕಿದರೆ ಹರಡುವ ಗಂಧವೆಂದು ಉಳಿದ ವ್ಯಾಖ್ಯಾನಕಾರರ ಅಭಿಪ್ರಾಯ).

ಅಥ ಸರ್ಜರಸಾದೀನಿ ಗಂಧ್ಯೈಃ ಪಾರ್ಥಿವದಾರವೈಃ ।
ಫಾಣೀತಾಸವಸಂಯುಕ್ತೈರ್ಮನುಷ್ಯಾಣಾಂ ವಿಧೀಯತೇ ॥೪೧॥

ಇನ್ನು ಸರ್ಜರಸ ಮೊದಲಾದ ಗಂಧವು ಕೃತ್ರಿಮ ಎನಿಸುತ್ತದೆ. ಭೂಮಿಯಲ್ಲಿ ಸಿಗುವ ಲಾಳವೇ ಮೊದಲಾದ ಸುಗಂಧ ದ್ರವ್ಯದಿಂದ ಮತ್ತು ಚಂದನಾದಿ ವೃಕ್ಷಗಳ ಸುವರ್ಣರೂಪ ದ್ರವ್ಯಗಳಿಂದ ಮತ್ತು ಸುಗಂಧ ರಸಗಳಿಂದ ಮಿಶ್ರಿತವಾದ ಅವು ಮನುಷ್ಯರಿಗೆ ಪ್ರಿಯವಾದುದೆಂದು ಹೇಳಲ್ಪಡುತ್ತವೆ.

ದೇವದಾನವಭೂತಾನಾಂ ಸದ್ಯಸ್ತುಷ್ಟಿಕರಃ ಸ್ಮೃತಃ ।
ಯೇಽನ್ಯೇ ವೈಹಾರಿಕಾಸ್ತೇ ತು ಮಾನುಷಾಣಾಮಿತಿ ಸ್ಮೃತಾಃ ॥೪೨॥

ಮೊದಲು ಹೇಳಿದ ಗಂಧಗಳು ದೇವ-ದಾನವ-ಭೂತಗಳಿಗೆ ತಕ್ಷಣದಲ್ಲಿಯೇ ಸಂತೋಷವನ್ನುಂಟು ಮಾಡುವಂತಹವುಗಳು. ಇನ್ನು ವಿಹಾರಾದಿ ಸಮಯಗಳಲ್ಲಿ ಉಪಯೋಗಿಸುವ ಗಂಧವು ಮನುಷ್ಯರಿಗೆ ಪ್ರಿಯವಾದುದೆಂದು ತಿಳಿಯಬೇಕು.

ಯ ಏವೋಕ್ತಾಃ ಸುಮನಸಾಂ ಪ್ರದಾನೇ ಗುಣಹೇತವಃ ।
ಧೂಪೇಷ್ವಪಿ ಪರಿಜ್ಞೇಯಾಸ್ತ ಏವ ಪ್ರೀತಿವರ್ಧನಾಃ ॥೪೩॥

ಪುಷ್ಪದಾನದಲ್ಲಿ ಯಾವ ಯಾವ ಗುಣಗಳನ್ನು ಹೇಳಿದೆಯೋ ಧೂಪದಾನದಲ್ಲಿಯೂ ಅವೇ ಗುಣಗಳು ಸಂತೋಷಕ್ಕೆ ಕಾರಣಗಳೆಂದು ತಿಳಿಯಬೇಕು.

ದೀಪದಾನೇ ಪ್ರವಕ್ಷ್ಯಾಮಿ ಫಲಯೋಗಮನುತ್ತಮಮ್ ।
ಯಥಾ ಯೇನ ಯದಾ ಚೈವ ಪ್ರದೇಯಾ ಯಾದೃಶಾಶ್ಚ ತೇ ॥೪೪॥

ಇನ್ನು ದೀಪದಾನದಿಂದ ಉಂಟಾಗುವ ಶ್ರೇಷ್ಠವಾದ ಫಲಗಳನ್ನು ಹೇಳುವೆನು. ಹೇಗೆ, ಯಾರು, ಯಾವಾಗ, ಎಂತಹ ದೀಪವನ್ನು ದಾನ ಮಾಡಬೇಕೆಂಬುದನ್ನು ನಿನಗೆ ಹೇಳುವೆನು.

ಜ್ಯೋತಿಸ್ತೇಜಃ ಪ್ರಕಾಶಶ್ಚಾಪ್ಯೂರ್ಧ್ವಗಂ ಚಾಪಿ ವರ್ಣ್ಯತೇ ।
ಪ್ರದಾನಂ ತೇಜಸೋ ತಸ್ಮಾತ್ ತೇಜೋ ವರ್ಧಯತೇ ನೃಣಾಮ್ ॥

ದೀಪವನ್ನು ಜ್ಯೋತಿಸ್ಸೆಂದೂ, ತೇಜಸ್ಸೆಂದೂ, ಪ್ರಕಾಶವೆಂದೂ, ಊರ್ಧ್ವಗ (ಮೇಲ್ಮುಖವಾಗಿ ಹೋಗುವುದು) ಎಂದೂ ವರ್ಣಿಸುತ್ತಾರೆ. ಆದ್ದರಿಂದ ತೇಜಸ್ಸಿನ ದಾನವು ಮನುಷ್ಯನ ತೇಜಸ್ಸನ್ನು ಹೆಚ್ಚಿಸುತ್ತದೆ.

ಅಂಧಂ ತಮಸ್ತಮಿಸ್ರಂ ಚ ದಕ್ಷಿಣಾಯನಮೇವ ಚ ।
ಉತ್ತರಾಯಣಮೇತಸ್ಮಾಜ್ಜ್ಯೋತಿರ್ದಾನಂ ಪ್ರಶಸ್ಯತೇ ॥೪೬॥

ದಕ್ಷಿಣಾಯನ, ಅಂಧಂತಮಸ್ಸಿನ ರೂಪವಾದ ನರಕ ಎಲ್ಲವೂ ಕತ್ತಲಿನ ರೂಪವಾದುದು. ಆ ಕಾರಣದಿಂದ ಉತ್ತರಾಯಣದಲ್ಲಿ ದೀಪದಾನವು ಪ್ರಶಂಸಿಸಲ್ಪಡುತ್ತದೆ.

ಯಸ್ಮಾದೂರ್ಧ್ವಗಮೇತತ್ ತು ತಮಸಶ್ಚೈವ ಭೇಷಜಮ್ ।
ತಸ್ಮಾದೂರ್ಧ್ವಗತೇರ್ದಾತಾ ಭವೇದಿತಿ ವಿನಿಶ್ಚಯಃ ॥೪೭॥

ದೀಪಕ್ಕೆ ಊರ್ಧ್ವಮುಖವಾಗಿ ಹೋಗುವ ಸ್ವಭಾವವಿರುವುದರಿಂದ ಮತ್ತು ದೀಪವು ಅಂಧಕಾರಕ್ಕೆ ವಿನಾಶಕವಾಗಿರುವುದರಿಂದ ದೀಪದಾನವನ್ನು ಮಾಡುವವನು ಊರ್ಧ್ವಗತಿಯನ್ನು ಹೊಂದುತ್ತದೆ ಎಂಬುದು ನಿಶ್ಚಿತವಾದುದು.

ದೇವಾಸ್ತೇಜಸ್ವಿನೋ ಯಸ್ಮಾತ್ ಪ್ರಭಾವಂತಃ ಪ್ರಕಾಶಕಾಃ ।
ತಾಮಸಾ ರಾಕ್ಷಸಾಶ್ಚೇತಿ ತಸ್ಮಾದ್ ದೀಪಂ ಪ್ರದೀಪಯೇತ್ ॥೪೮॥

ದೇವತೆಗಳು ತೇಜಸ್ವಿಗಳಾದವರು. ಪ್ರಕಾಶಕರಾದವರು ಮತ್ತು ಕಾಂತಿಯುಕ್ತರಾದವರು. ರಾಕ್ಷಸರು ತಾಮಸರಾದವರು. ಆದ್ದರಿಂದ ದೀಪದಾನವನ್ನು ಮಾಡಬೇಕು.

ಆಲೋಕದಾನಾತ್ ಚಕ್ಷುಷ್ಮಾನ್ ಪ್ರಭಾಯುಕ್ತೋ ಭವೇನ್ನರಃ ।
ತಾನ್ ದತ್ತ್ವಾ ನೋಪಹಿಂಸೇತ ನ ಹರೇನ್ನೋಪನಾಶಯೇತ್ ॥೪೯॥

ದೀಪದಾನವನ್ನು ಮಾಡುವವನು ಒಳ್ಳೆಯ ಕಣ್ಣುಳ್ಳವನೂ, ಕಾಂತಿಯುಕ್ತನೂ ಆಗುತ್ತಾನೆ. ದೀಪವನ್ನು ದಾನ ಮಾಡಿ ಅದನ್ನು ಅರಿಸಬಾರದು, ಬೇರೆ ಕಡೆಗೆ ತೆಗೆದೊಯ್ಯಬಾರದು, ಅಲುಗಾಡಿಸಲೂ ಬಾರದು.

ದೀಪಹರ್ತಾ ಭವೇದಂಧಸ್ತಮೋಗತಿರಸುಪ್ರಭಃ ।
ದೀಪಪ್ರದಃ ಸ್ವರ್ಗಲೋಕೇ ದೀಪಮಾಲೀ ವಿರಾಜತೇ ॥೫೦॥

ದೀಪವನ್ನು ಕದಿಯುವವನು ಅಂಧನೂ, ಕಾಂತಿರಹಿತನೂ, ತಮೋಗತಿ ಉಳ್ಳವನೂ ಆಗುತ್ತಾನೆ. ದೀಪಪ್ರದಾನವನ್ನು ಮಾಡುವವನು ಸ್ವರ್ಗಲೋಕದಲ್ಲಿ ದೀಪಗಳ ಮಾಲೆಯನ್ನು ಹೊಂದಿ ವಿರಾಜಿಸುತ್ತಾನೆ.

ಹವಿಷಾ ಪ್ರಥಮಃ ಕಲ್ಪೋ ದ್ವಿತೀಯಸ್ತ್ವೌಷಧೀರಸೈಃ ।
ವಸಾಮೇದೋಸ್ಥಿನಿರ್ಯಾಸೈರ್ನ ಕಾರ್ಯಃ ಪುಷ್ಟಿಮಿಚ್ಛತಾ ॥೫೧॥

ಗೋಘೃತ ಮೊದಲಾದ ಹವಿಷ್ಯದ್ರವ್ಯದಿಂದ ಕೂಡಿದ ದೀಪವನ್ನು ದಾನ ಮಾಡುವುದು ಶ್ರೇಷ್ಠವಾದ ಮೊದಲನೆಯ ಕಲ್ಪ. ಎಳ್ಳು ಮೊದಲಾದ ಓಷಧಿಯ ರಸವಾದ ಎಣ್ಣೆಯಿಂದ ಯುಕ್ತವಾದ ದೀಪದಾನವು ಎರಡನೆಯ ಕಲ್ಪಕ್ಕೆ ಸೇರುತ್ತದೆ. ಪುಷ್ಟಿಯನ್ನು ಬಯಸುವವನು ವಸಾ-ಮೇದಸ್ಸು ಮತ್ತು ಮಜ್ಜೆಗಳ ದೀಪವನ್ನು ಕೊಡಬಾರದು.

ಗಿರಿಪ್ರಪಾತೇ ಗಹನೇ ಚೈತ್ಯಸ್ಥಾನೇ ಚತುಷ್ಪಥೇ ।
ದೀಪದಾತಾ ಭವೇನ್ನಿತ್ಯಂ ಯ ಇಚ್ಛೇದ್ ಭೂತಿಮಾತ್ಮನಃ ॥೫೨॥

ತನಗೆ ವೈಭವವನ್ನು ಅಪೇಕ್ಷಿಸುವವನು ಪರ್ವತದ ಪ್ರಪಾತದಲ್ಲಾಗಲೀ, ಕಾಡಿನಲ್ಲಾಗಲೀ, ದೇವಾಲಯದಲ್ಲಾಗಲೀ, ಚತುಷ್ಪಥದಲ್ಲಾಗಲೀ ನಿತ್ಯವೂ ದೀಪವನ್ನಿಡಬೇಕು.

ಕುಲೋದ್ದ್ಯೋತೋ ವಿಶುದ್ಧಾತ್ಮಾ ಪ್ರಕಾಶತ್ವಂ ಚ ಗಚ್ಛತಿ ।
ಜ್ಯೋತಿಷಾಂ ಚೈವ ಸಾಲೋಕ್ಯಂ ದೀಪದಾತಾ ನರಃ ಸದಾ ॥೫೩॥

ದೀಪವನ್ನು ದಾನ ಮಾಡುವ ನರನು ತನ್ನ ಕುಲವನ್ನು ಪ್ರಕಾಶಗೊಳಿಸುತ್ತಾನೆ. ಶುದ್ಧಮನಸ್ಸುಳ್ಳವನಾಗುತ್ತಾನೆ. ಕೀರ್ತಿಯನ್ನು ಹೊಂದುತ್ತಾನೆ ಮತ್ತು ಜ್ಯೋತಿಸ್ಸುಗಳ ಸಾಲೋಕ್ಯವನ್ನು ಹೊಂದುತ್ತಾನೆ.

ಬಲಿಕರ್ಮಸು ವಕ್ಷ್ಯಾಮಿ ಗುಣಾನ್ ಕರ್ಮಫಲೋದಯಾನ್ ।
ದೇವಯಕ್ಷೋರಗನೃಣಾಂ ಭೂತಾನಾಮಥ ರಕ್ಷಸಾಮ್ ॥೫೪॥

ಇನ್ನು ದೇವ-ಯಕ್ಷೋರಗ-ಮನುಷ್ಯರಿಗೆ ಮಾಡಿದ ಪೂಜಾಕರ್ಮದಿಂದ ಉಂಟಾಗುವ ಗುಣಗಳನ್ನು ಹೇಳುತ್ತೇನೆ. ಹಾಗೆಯೇ ರಾಕ್ಷಸರಿಗೆ ಮಾಡಿದ ಪೂಜೆಯ ಗುಣಗಳನ್ನೂ ಹೇಳುತ್ತೇನೆ.

ಯೇಷಾಂ ನಾಗ್ರಭುಜೋ ವಿಪ್ರಾ ದೇವತಾತಿಥಿಬಾಲಕಾಃ ।
ರಾಕ್ಷಸಾನೇವ ತಾನ್ ವಿದ್ಧಿ ನಿರ್ವಷಟ್‌ಕಾರಮಂಗಲಾನ್ ॥೫೫॥

ಯಾವ ಗೃಹದಲ್ಲಿ ದೇವತಾತಿಥಿ-ಬಾಲಕರು, ಬ್ರಾಹ್ಮಣರು ಮೊದಲು ಭೋಜನವನ್ನು ಮಾಡುವುದಿಲ್ಲವೋ ಅಂತಹ ಮನುಷ್ಯರು ರಾಕ್ಷಸರೆಂದೇ ತಿಳಿ. ಅವರಿಗೆ ವಷಟ್‌ಕಾರವಾಗಲೀ, ಮಂಗಳವಾಗಲೀ ಇಲ್ಲ.

ತಸ್ಮಾದಗ್ರಂ ಪ್ರಯಚ್ಛೇತ ದೇವೇಭ್ಯಶ್ಚ ಪ್ರಪೂಜಯೇತ್ ।
ಶಿರಸಾ ಪ್ರಣತಶ್ಚಾಪಿ ಹರೇದ್ ಬಲಿಮತಂದ್ರಿತಃ ॥೫೬॥

ಆದ್ದರಿಂದ ದೇವತೆಗಳನ್ನು ಪೂಜಿಸಿ, ಶಿರಸಾ ನಮಸ್ಕರಿಸಿ, ಆಲಸ್ಯವಿಲ್ಲದೆ ಅಗ್ರಭಾಗವನ್ನು ದೇವತೆಗಳಿಗೆ ಸಮರ್ಪಿಸಬೇಕು.

ಗೃಹ್ಯಾ ಹಿ ದೇವತಾ ನಿತ್ಯಮಾಶಂಸಂತಿ ಗೃಹಾನ್ ಸದಾ ।
ಬಾಹ್ಯಾಶ್ಚಾಗಂತವೋ ಯೇಽನ್ಯೇ ಯಕ್ಷರಾಕ್ಷಸಪನ್ನಗಾಃ ॥೫೭॥

ಇತೋ ದತ್ತೇನ ಜೀವಂತಿ ದೇವತಾಃ ಪಿತರಸ್ತಥಾ ।
ತೇ ಪ್ರೀತಾಃ ಪ್ರೀಣಯಂತ್ಯೇತಾನಾಯುಷಾ ಯಶಸಾ ಧನೈಃ ॥೫೮॥

ಗೃಹದೇವತೆಗಳು, ಗೃಹಕ್ಕೆ ಹೊರಗಿನಿಂದ ಬಂದವರು ಮತ್ತು ಯಕ್ಷ-ರಾಕ್ಷಸ-ಸರ್ಪಗಳು ಗೃಹವನ್ನು ಆಶ್ರಯಿಸಿರುತ್ತಾರೆ. ಅವರಿಗೆ ಬಲಿಯನ್ನು (ನೈವೇದ್ಯವನ್ನು) ಸಮರ್ಪಣೆ ಮಾಡಿದರೆ ಆ ದೇವತೆಗಳು ಮತ್ತು ಪಿತೃಗಳು ಪ್ರಸನ್ನರಾಗಿ ಪೂಜೆಯನ್ನು ಮಾಡುವವನಿಗೆ ಆಯುಸ್ಸನ್ನೂ, ಕೀರ್ತಿಯನ್ನೂ, ಧನವನ್ನೂ ಕೊಟ್ಟು ಅವನನ್ನು ಸಂತೋಷಪಡಿಸುತ್ತಾರೆ.

ಬಲಯಃ ಸಹ ಪುಷ್ಪೈಸ್ತು ದೇವಾನಾಮುಪಹಾರಯೇತ್ ।
ದಧಿದ್ರಪ್ಸಯುತಾಃ ಪುಣ್ಯಾಃ ಸುಗಂಧಾಃ ಪ್ರಿಯದರ್ಶನಾಃ ॥೫೯॥

ದೇವತೆಗಳ ಪೂಜೆಯನ್ನು ಮಾಡುವಾಗ ನೀರಾದ ಅಥವಾ ಗಟ್ಟಿಯಾದ ದಧಿ, ಪವಿತ್ರವಾದ, ಮನೋಹರವಾದ ಸುಗಂಧದ್ರವ್ಯಗಳು ಇವುಗಳನ್ನು ಪುಷ್ಪಗಳ ಜೊತೆಯಲ್ಲಿ ಪ್ರದಾನ ಮಾಡಬೇಕು.

ಕಾರ್ಯಾ ರುಧಿರಮಾಂಸಾಢ್ಯಾ ಬಲಯೋ ಯಕ್ಷರಕ್ಷಸಾಮ್ ।
ಸುರಾಸವಪುರಸ್ಕಾರಾ ಲಾಜೋಲ್ಲೇಪನಭೂಷಿತಾಃ ॥೬೦॥

ಯಕ್ಷ-ರಾಕ್ಷಸ ಪೂಜೆಯನ್ನು ಮಾಡುವಾಗ ರಕ್ತ-ಮಾಂಸಗಳಿಂದ ಕೂಡಿದ ನೈವೇದ್ಯವನ್ನು ಸಮರ್ಪಿಸಬೇಕು. ಅವು ಸುರೆ ಮತ್ತು ಆಸವಗಳನ್ನು ಪ್ರಧಾನವಾಗಿ ಹೊಂದಿದ್ದು ಅರಳುಗಳಿಂದ ಅಲಂಕರಿಸಲ್ಪಟ್ಟಿರಬೇಕು.

ನಾಗಾನಾಂ ದಯಿತಾ ನಿತ್ಯಂ ಪದ್ಮೋತ್ಪಲವಿಮಿಶ್ರಿತಾಃ ।
ತಿಲಪಿಷ್ಟಂ ಸುಸಂಪನ್ನಂ ಭೂತಾನಾಮುಪಹಾರಯೇತ್ ॥೬೧॥

ಸರ್ಪಗಳಿಗೆ ಪದ್ಮೋತ್ಪಲ ವಿಮಿಶ್ರಿತವಾದ ಪೂಜೆಯು ನಿತ್ಯವೂ ಪ್ರಿಯವಾದುದು. ಭೂತಗಳಿಗೆ ತಿಲಪಿಷ್ಟ ಸಹಿತವಾದ ಬಲಿಯನ್ನು ಸಮರ್ಪಿಸಬೇಕು.

ಅಗ್ರದಾತಾऽಗ್ರಭೋಗೀ ಸ್ಯಾದ್ ಬಲವರ್ಣಸಮನ್ವಿತಃ ।
ತಸ್ಮಾದಗ್ರಂ ಪ್ರಯಚ್ಛೇತ ದೇವಾದಿಭ್ಯಃ ಸುಪೂಜಿತಮ್ ॥೬೨॥

ಅಗ್ರಭಾಗವನ್ನು ಸಮರ್ಪಿಸುವವನು ಅಗ್ರಭೋಗಿಯೂ, ಬಲರೂಪ ಸಮನ್ವಿತನೂ ಆಗುತ್ತಾನೆ. ಆದ್ದರಿಂದ ದೇವತೆಗಳನ್ನು ಚೆನ್ನಾಗಿ ಪೂಜಿಸಿ ಅವರಿಗೆ ಅಗ್ರಭಾಗವನ್ನು ಕೊಡಬೇಕು.

ಜ್ವಲತ್ಯಹರಹೋ ವೇಶ್ಮ ಯಾಶ್ಚಾಸ್ಯ ಗೃಹದೇವತಾಃ ।
ತಾಃ ಪೂಜ್ಯಾ ಭೂತಿಕಾಮೇನ ಪ್ರಸೃತಾಗ್ರಪ್ರದಾಯಿನಾ ॥೬೩॥

ಅಗ್ರತೆಯನ್ನು ಆಶಿಸುವ ನರನು ತನ್ನ ಗೃಹದೇವತೆಗಳನ್ನು ಪೂಜಿಸಬೇಕು. ಶ್ರೇಷ್ಠವಾದ ಅಗ್ರಭಾಗವನ್ನು ದಾನ ಮಾಡುವವನ ಗೃಹವು ದಿನದಿನವೂ ಪ್ರಕಾಶಿಸುತ್ತದೆ.

ಇತ್ಯೇತದಸುರೇಂದ್ರಾಯ ಕಾವ್ಯಃ ಪ್ರೋವಾಚ ಭಾರ್ಗವಃ ।
ಸುವರ್ಣಾಯ ಮನುಃ ಪ್ರಾಹ ಸುವರ್ಣೋ ನಾರದಾಯ ಚ ॥೬೪॥

ಇದನ್ನು ಅಸುರೇಂದ್ರನಾದ ಬಲಿಗೆ ಭಾರ್ಗವ ಗೋತ್ರದ ಕವಿಪುತ್ರರಾದ ಶುಕ್ರಾಚಾರ್ಯರು ಹೇಳಿದರು. ಸ್ವಾಯಂಭುವ ಮನುವು ಸುವರ್ಣ ಋಷಿಗೆ ಹೇಳಿದನು. ಸುವರ್ಣ ಋಷಿಯು ನಾರದರಿಗೆ ಹೇಳಿದನು.

ನಾರದೋऽಪಿ ಮಯಿ ಪ್ರಾಹ ಗುಣಾನೇತಾನ್ ಮಹಾದ್ಯುತೇ ।
ತ್ವಮಪ್ಯೇತದ್ ವಿದಿತ್ವೇಹ ಸರ್ವಮಾಚರ ಪೌತ್ರಕ ॥೬೫॥

ಎಲೈ ಮಹಾದ್ಯುತಿಯೇ, ನಾರದರು ಈ ದಾನಗಳ ಗುಣಗಳನ್ನು ನನಗೆ ಹೇಳಿದರು. ಎಲೈ ಪೌತ್ರನೇ, ನೀನೂ ಸಹ ಇದೆಲ್ಲವನ್ನೂ ತಿಳಿದು ಇಂತಹ ದಾನವನ್ನು ಮಾಡುವವನಾಗು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ದೀಪಾದಿದಾನವಿಧಿಕಥನಂ ನಾಮ
ಏಕಪಂಚಾಶದುತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಐವತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಐವತ್ತೆರಡನೆಯ ಅಧ್ಯಾಯ

ದೀಪಾದಿದಾನೋಪಯೋಗಿಯಾದ ನಹುಷಾಖ್ಯಾನಪ್ರಾರಂಭ

ಯುಧಿಷ್ಠಿರಃ

ಶ್ರುತಂ ಮೇ ಭರತಶ್ರೇಷ್ಠ ಪುಷ್ಪಧೂಪಪ್ರದಾಯಿನಾಮ್ ।
ಫಲಂ ಬಲಿವಿಧಾನೇ ಚ ತದ್ಭೂಯೋ ವಕ್ತುಮರ್ಹಸಿ ॥೧॥

ಧೂಪಪ್ರದಾನಸ್ಯ ಫಲಂ ಪ್ರದೀಪಸ್ಯ ತಥೈವ ಚ ।
ಬಲಯಶ್ಚ ಕಿಮರ್ಥಂ ವೈ ಕ್ಷಿಪ್ಯಂತೇ ಗೃಹಮೇಧಿಭಿಃ ॥೨॥

ಯುಧಿಷ್ಠಿರ– ಎಲೈ ಭರತಶ್ರೇಷ್ಠನೇ, ಪುಷ್ಪ, ಧೂಪ ದಾನಗಳ ಫಲವೂ, ಪೂಜಾ ವಿಧಾನವೂ ನನ್ನಿಂದ ಕೇಳಲ್ಪಟ್ಟಿತು. ಧೂಪ ದಾನದ ಮತ್ತು ದೀಪದಾನದ ಫಲವನ್ನು ಪುನಃ ಹೇಳಬೇಕು. ಗೃಹಸ್ಥರಾದವರು ಏಕೆ ದೇವಾದಿಗಳಿಗೆ ಪೂಜೆಯನ್ನು ಮಾಡಿ ನೈವೇದ್ಯವನ್ನು ಅರ್ಪಿಸುತ್ತಾರೆ?

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ನಹುಷಂ ಪ್ರತಿ ಸಂವಾದಮಗಸ್ತ್ಯಸ್ಯ ಭೃಗೋಸ್ತಥಾ ॥೩॥

ಭೀಷ್ಮ– ಈ ವಿಷಯದಲ್ಲಿಯೂ ಸಹ ನಹುಷನ ವಿಷಯದಲ್ಲಿ ಅಗಸ್ತ್ಯರಿಗೂ ಮತ್ತು ಭೃಗುಗಳಿಗೂ ನಡೆದ ಸಂವಾದ ರೂಪವಾದ ಪುರಾತನವಾದ ಈ ಇತಿಹಾಸವನ್ನು ಹೇಳುತ್ತಾರೆ.

ನಹುಷೋ ಹಿ ಮಹಾರಾಜ ರಾಜರ್ಷಿಃ ಸುಮಹಾತಪಾಃ ।
ದೇವರಾಜ್ಯಮನುಪ್ರಾಪ್ಯ ಸುಕೃತೇನೇಹ ಕರ್ಮಣಾ ॥೪॥

ತತ್ರಾಪಿ ಪ್ರಯತೋ ರಾಜನ್ ನಹುಷಸ್ತ್ರಿದಿವೇ ವಸನ್ ।
ಮಾನುಷೀಶ್ಚೈವ ದಿವ್ಯಾಶ್ಚ ಕುರ್ವಾಣೋ ವಿವಿಧಾಃ ಕ್ರಿಯಾಃ ॥೫॥

ಎಲೈ ಮಹಾರಾಜನೇ, ರಾಜರ್ಷಿಯೂ, ಮಹಾತಪಸ್ವಿಯೂ ಆದ ನಹುಷನು ತನ್ನ ಸತ್ಕರ್ಮಗಳ ಫಲವಾಗಿ ದೇವರಾಜ್ಯವನ್ನು ಪಡೆದು ಅಲ್ಲಿಯೂ ನಿಯಮಬದ್ಧನಾಗಿ

ಸ್ವರ್ಗದಲ್ಲಿ ವಾಸಿಸುತ್ತಾ ವಿವಿಧವಾದ ಮನುಷ್ಯಲೋಕದ ಮತ್ತು ದಿವ್ಯಲೋಕದ ಕ್ರಿಯೆಗಳನ್ನು ಮಾಡಿದನು.

ಮಾನುಷ್ಯಸ್ತತ್ರ ಸರ್ವಾಃ ಸ್ಮ ಕ್ರಿಯಾಸ್ತಸ್ಯ ಮಹಾತ್ಮನಃ ।
ಪ್ರವೃತ್ತಾಸ್ತ್ರಿದಿವೇ ರಾಜನ್ ದಿವ್ಯಾಶ್ಚೈವ ಸನಾತನಾಃ ॥೬॥

ಎಲೈ ರಾಜನೇ, ಮಹಾತ್ಮನಾದ ಅವನು ಅಲ್ಲಿ ವೇದೋಕ್ತವಾದ ಮನುಷ್ಯಲೋಕದ ಕ್ರಿಯೆಗಳನ್ನೂ ಮತ್ತು ದೇವಲೋಕದ ಕ್ರಿಯೆಗಳನ್ನೂ ಮಾಡಿದನು.

ಅಗ್ನಿಕಾರ್ಯಾಣಿ ಸಮಿಧಃ ಕುಶಾಃ ಸುಮನಸಸ್ತಥಾ ।
ಬಲಯಶ್ಚಾನ್ನಲಾಜಾಭಿರ್ಧೂಪನಂ ದೀಪಕರ್ಮ ಚ ॥೭॥

ಸರ್ವಂ ತಸ್ಯ ಗೃಹೇ ರಾಜ್ಞಃ ಪ್ರಾವರ್ತತ ಮಹಾತ್ಮನಃ ।
ಜಪಯಜ್ಞಾನ್ ಮನೋಯಜ್ಞಾನ್ ತ್ರಿದಿವೇಽಪಿ ಚಕಾರ ಸಃ ॥೮॥

ಅಗ್ನಿಕಾರ್ಯಗಳು, ಸಮಿತ್ತುಗಳು, ಕುಶಗಳು, ಪುಷ್ಪಗಳು, ಅನ್ನ-ಅರಳು ಮೊದಲಾದವುಗಳ ನೈವೇದ್ಯ, ಧೂಪ-ದೀಪಗಳು ಎಲ್ಲವೂ ಆ ಮಹಾತ್ಮನಾದ ರಾಜನ ಮನೆಯಲ್ಲಿ ನಡೆದವು. ಅವನು ಸ್ವರ್ಗದಲ್ಲಿಯೂ ಜಪಯಜ್ಞಗಳನ್ನು ಮತ್ತು ಮನೋಯಜ್ಞಗಳನ್ನು ಮಾಡಿದನು.

ದೈವತಾನ್ಯರ್ಚಯಂಶ್ಚಾಪಿ ವಿಧಿವತ್ ಸ ಸುರೇಶ್ವರಃ ।
ಸರ್ವಾಣ್ಯೇವ ಯಥಾನ್ಯಾಯಂ ಯಥಾಪೂರ್ವಮರಿಂದಮ ॥೯॥

ಎಲೈ ಅರಿಂದಮನೇ, ಸುರೇಶ್ವರನಾದ ಅವನು ಮೊದಲಿನಂತೆಯೇ ವಿಧಿಗೆ ಅನುಗುಣವಾಗಿ ಎಲ್ಲಾ ದೇವತೆಗಳ ಅರ್ಚನೆಯನ್ನೂ ಮಾಡಿದನು.

ಅಥೇಂದ್ರಸ್ಯ ಭವಿಷ್ಯತ್ವಾದಹಂಕಾರಸ್ತಮಾವಿಶತ್ ।
ಸರ್ವಾಶ್ಚೈವ ಕ್ರಿಯಾಸ್ತಸ್ಯ ಪರ್ಯಹೀಯಂತ ಭೂಪತೇ ॥೧೦॥

ಅವನು ಮುಂದಿನ ಮನ್ವಂತರದಲ್ಲಿ ಇಂದ್ರನಾಗಬೇಕಾದುದರಿಂದ ಅವನಿಗೆ ಅಹಂಕಾರ ಉಂಟಾಯಿತು. ಎಲೈ ರಾಜನೇ, ಅವನ ಎಲ್ಲಾ ಕ್ರಿಯೆಗಳೂ ನಷ್ಟವಾದವು.

ಸ ಋಷೀನ್ ವಾಹಯಾಮಾಸ ವರದಾನಮದಾನ್ವಿತಃ ।
ಪರಿಹೀನಕ್ರಿಯಶ್ಚಾಪಿ ದುರ್ಬಲತ್ವಮುಪೇಯಿವಾನ್ ॥೧೧॥

ಅವನು ವರದಾನಗಳಿಂದ ದರ್ಪಿತನಾಗಿ ಋಷಿಗಳಿಂದ ತನ್ನ ವಾಹನವನ್ನು ಹೊರಿಸಿದನು. ತನ್ನ ಸತ್ಕರ್ಮಗಳ ಫಲವು ನಾಶವನ್ನು ಹೊಂದಿದುದರಿಂದ ದುರ್ಬಲನಾದನು.

ತಸ್ಯ ವಾಹಯತಃ ಕಾಲೋ ಮುನಿಮುಖ್ಯಾನ್ ತಪೋಧನಾನ್ ।
ಅಹಂಕಾರಾಭಿಭೂತಸ್ಯ ಸುಮಹಾನತ್ಯವರ್ತತ ॥೧೨॥

ಅಹಂಕಾರದಿಂದ ಕೂಡಿ ತಪೋಧನರಾದ ಋಷಿಗಳಿಂದ ತನ್ನ ವಾಹನಗಳನ್ನು ಹೊರಿಸುತ್ತಿದ್ದ ಅವನಿಗೆ ಬಹುಕಾಲವು ಕಳೆದು ಹೋಯಿತು.

ಅಥ ಪರ್ಯಾಯಶ ಋಷೀನ್ ವಾಹನಾಯೋಪಚಕ್ರಮೇ ।
ಪರ್ಯಾಯಶ್ಚಾಪ್ಯಗಸ್ತ್ಯಸ್ಯ ಸಮಪದ್ಯತ ಭಾರತ ॥೧೩॥

ಅನಂತರ ಅವನು ಋಷಿಗಳನ್ನು ಪರ್ಯಾಯದಿಂದ ತನ್ನ ವಾಹನಕ್ಕೆ ನೇಮಿಸಲು ಪ್ರಾರಂಭ ಮಾಡಿದನು. ಎಲೈ ಭಾರತನೇ, ಆ ರೀತಿಯಲ್ಲಿ ಅಗಸ್ತ್ಯರ ಪರ್ಯಾಯವು ಬಂದಿತು.

ಅಥಾಗಮ್ಯ ಮಹಾತೇಜಾ ಭೃಗುರ್ಬ್ರಹ್ಮವಿದಾಂ ವರಃ ।
ಅಗಸ್ತ್ಯಮಾಶ್ರಮಸ್ಥಂ ವೈ ಸಮುಪೇತ್ಯೇದಮಬ್ರವೀತ್ ॥೧೪॥

ಏವಂ ವಯಮಸತ್ಕಾರಂ ದೇವೇಂದ್ರಸ್ಯಾಸ್ಯ ದುರ್ಮತೇಃ ।
ನಹುಷಸ್ಯ ಕಿಮರ್ಥಂ ವೈ ಮರ್ಷಯಾಮ ಮಹಾಮುನೇ ॥೧೫॥

ಆಗ ಮಹಾತೇಜಸ್ವಿಗಳೂ, ಬ್ರಹ್ಮಜ್ಞಾನಿಗಳಲ್ಲಿ ಶ್ರೇಷ್ಠರೂ ಆದ ಭೃಗುಗಳು ಅಗಸ್ತ್ಯರ ಆಶ್ರಮಕ್ಕೆ ಬಂದು ಅಗಸ್ತ್ಯರನ್ನು ಸಮೀಪಿಸಿ ಎಲೈ ಮಹಾಮುನಿಯೇ, ನಾವು ದುರ್ಮತಿಯಾದ ದೇವೇಂದ್ರನಾದ ಈ ನಹುಷನಿಂದ ಉಂಟಾಗುವ ಅಪಮಾನವನ್ನು ಏಕೆ ಸಹಿಸುತ್ತಿದ್ದೇವೆ ಎಂದು ಕೇಳಿದರು.

ಅಗಸ್ತ್ಯಃ

ಕಥಮೇಷ ಮಯಾ ಶಕ್ಯಃ ಶಪ್ತುಂ ಯಸ್ಯ ಮಹಾಮುನೇ ।
ವರದೇನ ವರೋ ದತ್ತೋ ವಿದಿತೋ ಭವತಶ್ಚ ಸಃ ॥೧೬॥

ಅಗಸ್ತ್ಯ– ಎಲೈ ಮಹಾಮುನಿಯೇ, ಇವನನ್ನು ನಾನು ಹೇಗೆ ಶಪಿಸಲು ಸಾಧ್ಯ ? ವರಪ್ರದರಾದ ಬ್ರಹ್ಮದೇವರಿಂದ ಅವನು ವರವನ್ನು ಪಡೆದಿದ್ದಾನಷ್ಟೆ? ಈ ವಿಷಯವು ನಿಮಗೂ ತಿಳಿದಿದೆ.

ಯೋ ಮೇ ದೃಷ್ಟಿಪಥಂ ಗಚ್ಛೇತ್ ಸ ಮೇ ವಶ್ಯೋ ಭವೇದಿತಿ ।
ಇತ್ಯನೇನ ವರೋ ದೇವಾನ್ ಯಾಚಿತೋ ಗಚ್ಛತಾ ದಿವಮ್ ॥೧೭॥

ಏವಂ ನ ದಗ್ಧಃ ಸ ಮಯಾ ಭವತಾ ಚ ನ ಸಂಶಯಃ ।
ಅನ್ಯೇನಾಪ್ಯೃಷಿಮುಖ್ಯೇನ ನ ಶಪ್ತೋ ನ ಚ ಪಾತಿತಃ ॥೧೮॥

ಯಾವನು ನನ್ನ ದೃಷ್ಟಿಗೋಚರನಾಗುತ್ತಾನೆಯೋ ಅವನು ನನಗೆ ವಶನಾಗಬೇಕು ಎಂದು ನಹುಷನು ಸ್ವರ್ಗಕ್ಕೆ ಹೋಗುತ್ತಾ ದೇವತೆಗಳನ್ನು ವರವನ್ನು ಯಾಚಿಸಿದ್ದಾನೆ. ಆದ್ದರಿಂದ ಅವನು ನಿಮ್ಮಿಂದಲಾಗಲೀ, ನನ್ನಿಂದಲಾಗಲೀ ಅಥವಾ ಬೇರೆ ಶ್ರೇಷ್ಠ ಋಷಿಗಳಿಂದಾಗಲೀ ಶಾಪಕ್ಕೂ ಒಳಗಾಗಿಲ್ಲ ಮತ್ತು ಇಂದ್ರಸ್ಥಾನದಿಂದ ಬೀಳಿಸಲ್ಪಟ್ಟಿಲ್ಲ. ಇದರಲ್ಲಿ ಸಂಶಯವಿಲ್ಲ.

ಅಮೃತಂ ಚೈವ ಪಾನಾಯ ದತ್ತಮಸ್ಮೈ ಪುರಾ ವಿಭೋ ।
ಮಹಾತ್ಮನೇ ತದರ್ಥಂ ಚ ನಾಸ್ಮಾಭಿರ್ವಿನಿಪಾತ್ಯತೇ ॥೧೯॥

ಎಲೈ ವಿಭುವೇ, ಈ ಮಹಾತ್ಮನಿಗೆ ಹಿಂದೆ ಪಾನ ಮಾಡಲು ಅಮೃತವೂ ಕೊಡಲ್ಪಟ್ಟಿದೆ. ಆ ಕಾರಣದಿಂದ ನಮ್ಮಿಂದ ಅವನು ಬೀಳಿಸಲ್ಪಡುವುದಿಲ್ಲ.

ಪ್ರಾಯಚ್ಛತ್ತ ವರಂ ದೇವಃ ಪ್ರಜಾನಾಂ ದುಃಖಕಾರಕಮ್ ।
ದ್ವಿಜೇಷ್ವಧರ್ಮಯುಕ್ತಾನಿ ಸ ಕರೋತಿ ನರಾಧಮಃ ॥೨೦॥

ದೇವನು ಅವನಿಗೆ ಪ್ರಜೆಗಳಿಗೆ ದುಃಖವನ್ನುಂಟು ಮಾಡುವ ವರವನ್ನು ಕೊಟ್ಟಿದ್ದಾನೆ. ಆ ಕಾರಣದಿಂದ ನರಾಧಮನಾದ ಅವನು ಬ್ರಾಹ್ಮಣರನ್ನು ಅಧರ್ಮದಿಂದ ನಡೆಸಿಕೊಳ್ಳುತ್ತಿದ್ದಾನೆ.

ಅತ್ರ ಯತ್ ಪ್ರಾಪ್ತಕಾಲಂ ನಸ್ತದ್ ಬ್ರೂಹಿ ವದತಾಂವರ ।
ಭವಾಂಶ್ಚಾಪಿ ಯಥಾ ಬ್ರೂಯಾತ್ ತತ್ಕರ್ತಾಸ್ಮಿ ನ ಸಂಶಯಃ ॥೨೧॥

ಎಲೈ ಮಾತನಾಡುವವರಲ್ಲಿ ಶ್ರೇಷ್ಠನೇ, ಆದ್ದರಿಂದ ಈಗ ಏನು ಮಾಡಬಹುದೆಂದು ಹೇಳು. ನೀನು ಹೇಳಿದಂತೆ ನಾನು ಮಾಡುತ್ತೇನೆ, ಇದರಲ್ಲಿ ಸಂಶಯವಿಲ್ಲ.

ಭೃಗುಃ

ಪಿತಾಮಹನಿಯೋಗೇನ ಭವಂತಮಹಮಾಗತಃ ।
ಪ್ರತಿಕರ್ತುಂ ಲವತಿ ನಹುಷೇ ದರ್ಪಮಾಸ್ಥಿತೇ ॥೨೨॥

ಭೃಗು– ಪಿತಾಮಹರಾದ ಬ್ರಹ್ಮದೇವರ ಆದೇಶದಂತೆ ಬಲಿಷ್ಠನೂ, ದರ್ಪಿಷ್ಠನೂ ಆದ ನಹುಷನಿಗೆ ಪ್ರತೀಕಾರವನ್ನು ಮಾಡಲು ನಾನು ನಿನ್ನ ಬಳಿಗೆ ಬಂದಿದ್ದೇನೆ.

ಅದ್ಯ ಹಿ ತ್ವಾ ಸುದುರ್ಬುದ್ಧೀ ರಥೇ ಯೋಕ್ಷ್ಯತಿ ದೇವರಾಟ್ ।
ಅದ್ಯೈನಮಹಮುದ್ವೃತ್ತಂ ಕರಿಷ್ಯಾಮೀಂದ್ರಮೋಜಸಾ ॥೨೩॥

ದೇವರಾಜನಾದ ದುರ್ಬುದ್ಧಿಯುಳ್ಳ ಅವನು ಈ ದಿನ ನಿನ್ನನ್ನು ರಥವನ್ನು ಹೊರಲು ಯೋಜಿಸುವನು. ಈ ದಿನ ನಾನು ನನ್ನ ಸಾಮರ್ಥ್ಯದಿಂದ ಆ ಇಂದ್ರನನ್ನು ದುರ್ನಡತೆಯುಳ್ಳವನನ್ನಾಗಿ ಮಾಡುವೆನು.

ಅದ್ಯೇಂದ್ರಂ ಸ್ಥಾಪಯಿಷ್ಯಾಮಿ ಪಶ್ಯತಸ್ತೇ ಶತಕ್ರತುಮ್ ।
ಸಂಚಾಲ್ಯ ಪಾಪಕರ್ಮಾಣಮಿಂದ್ರಸ್ಥಾನಾತ್ ಸುದುರ್ಮತಿಮ್ ॥೨೪॥

ಈ ದಿನ ನಾನು ನೀನು ನೋಡುತ್ತಿರುವಂತೆಯೇ ಅತ್ಯಂತ ದುರ್ಮತಿಯಾದ ಮತ್ತು ಪಾಪಕರ್ಮವನ್ನು ಮಾಡುವ ನಹುಷನನ್ನು ಇಂದ್ರನ ಸ್ಥಾನದಿಂದ ಇಳಿಸಿ ಶತಕ್ರತುವಾದ ಪುರಂದರನನ್ನು ಇಂದ್ರಸ್ಥಾನದಲ್ಲಿ ಸ್ಥಾಪಿಸುತ್ತೇನೆ.

ಅದ್ಯ ಚಾಸೌ ಕುದೇವೇಂದ್ರಸ್ತ್ವಾಂ ಪದಾ ಧರ್ಷಯಿಷ್ಯತಿ ।
ದೈವೋಪಹತಚಿತ್ತತ್ವಾದಾತ್ಮನಾಶಾಯ ಮಂದಧೀಃ ॥೨೫॥

ಈ ದಿನ ಈ ಕೆಟ್ಟ ದೇವೇಂದ್ರನು ನಿನ್ನನ್ನು ಪಾದದಿಂದ ಒದೆಯುವನು. ದೈವೋಪ-ಹತಚಿತ್ತನಾಗಿ, ಮಂದಬುದ್ಧಿಯುಳ್ಳವನಾಗಿ ತನ್ನ ನಾಶಕ್ಕಾಗಿ ಅಂತಹ ಕಾರ್ಯವನ್ನು ಮಾಡುವನು.

ವ್ಯತ್ಯಾಂತಧರ್ಮಂ ತಮಹಂ ಧರ್ಷಣಾಮರ್ಷಿತೋ ಭೃಶಮ್ ।
ಅಹಿರ್ಭವಸ್ವೇತಿ ರುಷಾ ಶಪ್ಸ್ಯೇ ಪಾಪಂ ದ್ವಿಜದ್ರುಹಮ್ ॥೨೬॥

ಧರ್ಮವನ್ನು ಮೀರಿದ ಅವನ ಮೇಲೆ ನಿನಗೆ ಮಾಡುವ ಈ ಅವಮಾನದಿಂದ ಬಹಳವಾಗಿ ಕೋಪಗೊಂಡು ನಾನು ಆ ಕೋಪದಿಂದ ಸರ್ಪವಾಗು ಎಂದು ಬ್ರಾಹ್ಮಣ

ದ್ರೋಹಿಯೂ, ಪಾಪಕರ್ಮವನ್ನು ಮಾಡುವವನೂ ಆದ ಅವನಿಗೆ ಶಾಪವನ್ನು ಕೊಡುವೆನು.

ತತ ಏನಂ ಸುದುರ್ಬುದ್ಧಿಂ ಧಿಕ್‌ಶಬ್ದಾಭಿಹತತ್ವಿಷಮ್ ।
ಧರಣ್ಯಾಂ ಪಾತಯಿಷ್ಯಾಮಿ ಪ್ರೇಕ್ಷತಸ್ತೇ ಮಹಾಮುನೇ ॥೨೭॥

ನಹುಷಂ ಪಾಪಕರ್ಮಾಣಮೈಶ್ವರ್ಯಬಲಮೋಹಿತಮ್ ।
ಯಥಾ ಚ ರೋಚತೇ ತುಭ್ಯಂ ತಥಾ ಕರ್ತಾಸ್ಮ್ಯಹಂ ಮುನೇ ॥೨೮॥

ಎಲೈ ಮಹಾಮುನಿಯೇ, ಅನಂತರ ಧಿಕ್‌ಶಬ್ದದಿಂದ ತನ್ನ ಕಾಂತಿಯನ್ನು ಕಳೆದುಕೊಂಡ ಅತ್ಯಂತ ದುರ್ಬುದ್ಧಿಯಾದ ಪಾಪಕರ್ಮವನ್ನು ಮಾಡಿದ, ಐಶ್ವರ್ಯಬಲ ಮೋಹಿತನಾದ ನಹುಷನನ್ನು ನೀನು ನೋಡುತ್ತಿರುವಂತೆಯೇ ಭೂಮಿಯಲ್ಲಿ ಬೀಳಿಸುವೆನು. ಎಲೈ ಮುನಿಯೇ, ಅಥವಾ ನಿನಗೆ ಹೇಗೆ ಇಷ್ಟವಾಗುತ್ತದೆಯೋ ಹಾಗೆ ಮಾಡುತ್ತೇನೆ.

ಏವಮುಕ್ತಸ್ತು ಭೃಗುಣಾ ಮೈತ್ರಾವರುಣಿರವ್ಯಯಃ ।
ಅಗಸ್ತ್ಯಃ ಪರಮಪ್ರೀತೋ ಬಭೂವ ವಿಗತಜ್ವರಃ ।
ತಥಾ ಚಕಾರ ತತ್‌ಸರ್ವಂ ಪಪಾತ ನಹುಷೋ ಯಥಾ ॥೨೯॥

ಹೀಗೆ ಭೃಗುಗಳಿಂದ ಹೇಳಲ್ಪಟ್ಟ ಮೈತ್ರಾವರುಣಿಗಳಾದ, ಅವ್ಯಯರಾದ ಅಗಸ್ತ್ಯರು ಬಹಳ ಸಂತೋಷವನ್ನು ಹೊಂದಿ ಆತಂಕವನ್ನು ತೊರೆದರು ಮತ್ತು ನಹುಷನು ಕೆಳಗೆ ಬೀಳುವಂತೆ ಆ ಎಲ್ಲವನ್ನೂ ಮಾಡಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಅಗಸ್ತ್ಯಸಂವಾದೋ ನಾಮ
ದ್ವಿಪಂಚಾಶದುತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಐವತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಐವತ್ಮೂರನೆಯ ಅಧ್ಯಾಯ

ನಹುಷನ ಪತನ. ದೀಪಾದಿದಾನಪುಣ್ಯದಿಂದ ಪುನಃ ಸದ್ಗತಿಪ್ರಾಪ್ತಿ

ಯುಧಿಷ್ಠಿರಃ

ಕಥಂ ಸ ವೈ ವಿಪನ್ನಶ್ಚ ಕಥಂ ವೈ ಪಾತಿತೋ ಭುವಿ ।
ಕಥಂ ಚಾನಿಂದ್ರತಾಂ ಪ್ರಾಪ್ತಸ್ತದ್ ಭವಾನ್ ವಕ್ತುಮರ್ಹತಿ ॥೧॥

ಯುಧಿಷ್ಠಿರ– ನಹುಷನು ಹೇಗೆ ಪುಣ್ಯಹೀನನಾಗಿ ಭೂಮಿಯಲ್ಲಿ ಬಿದ್ದನು? ಅವನು ಹೇಗೆ ಇಂದ್ರಪದವಿಯನ್ನು ಕಳೆದುಕೊಂಡನೆಂದು ನೀನು ನನಗೆ ಹೇಳಬೇಕು.

ಭೀಷ್ಮಃ

ಏವಂ ತಯೋಃ ಸಂವದತೋಃ ಕ್ರಿಯಾಸ್ತಸ್ಯ ಮಹಾತ್ಮನಃ ।
ಸರ್ವಾ ಏವಾಭ್ಯವರ್ತಂತ ಯಾ ದಿವ್ಯಾ ಯಾಶ್ಚ ಮಾನುಷಾಃ ॥೨॥

ಭೀಷ್ಮ– ಭೃಗು ಮತ್ತು ಅಗಸ್ತ್ಯರು ಹೀಗೆ ಮಾತನಾಡುತ್ತಿರುವಾಗ ನಹುಷನ ಮಾನುಷ ಲೋಕದ ಮತ್ತು ದೇವಲೋಕದ ಎಲ್ಲಾ ಸತ್ಕರ್ಮಗಳು ಮುಂದುವರೆದವು.

ತಥೈವ ದೀಪದಾನಾನಿ ಸರ್ವೋಪಕರಣಾನಿ ಚ ।
ಬಲಿಕರ್ಮ ಚ ಯಥಾನ್ಯಾಯಮುತ್ಸವಾಶ್ಚ ಪ್ರಥಕ್ ಪೃಥಕ್ ।
ಸರ್ವಾಸ್ತಸ್ಯ ಸಮುತ್ಪನ್ನಾ ದೇವರಾಜ್ಞೋ ಮಹಾತ್ಮನಃ ॥೩॥

ಹಾಗೆಯೇ ದೀಪದಾನಗಳು, ಸರ್ವೋಪಕರಣ ದಾನಗಳು, ಪೂಜಾಕರ್ಮ, ಬೇರೆ ಬೇರೆ ಉತ್ಸವಗಳು ಎಲ್ಲವೂ ಆ ಮಹಾತ್ಮನಾದ ದೇವರಾಜನಿಂದ ನಡೆಸಲ್ಪಟ್ಟವು.

ದೇವಲೋಕೇ ನೃಲೋಕೇ ಚ ಸದಾಚಾರಾ ಬುಧೈಃ ಸ್ಮೃತಾಃ ।
ತೇ ಚೇದ್ ಭವಂತಿ ರಾಜೇಂದ್ರ ಋಧ್ಯಂತೇ ಗೃಹಮೇಧಿನಃ ।
ಧೂಪಪ್ರದಾನೈರ್ದೀಪೈಶ್ಚ ನಮಸ್ಕಾರೈಸ್ತಥೈವ ಚ ॥೪॥

ಎಲೈ ರಾಜೇಂದ್ರನೇ, ದೇವಲೋಕದಲ್ಲಿ ಮತ್ತು ಮನುಷ್ಯಲೋಕದಲ್ಲಿ ಜ್ಞಾನಿಗಳು ಹೇಳಿದ ಸದಾಚಾರಗಳು ನಡೆದರೆ ಗೃಹಸ್ಥಾಶ್ರಮಿಗಳು ಅಭಿವೃದ್ಧಿಯನ್ನು ಹೊಂದುತ್ತಾರೆ. ಹಾಗೆಯೇ ಧೂಪ-ದೀಪಾದಿ ದಾನಗಳಿಂದಲೂ, ನಮಸ್ಕಾರಗಳಿಂದಲೂ ಅಭಿವೃದ್ಧಿಯನ್ನು ಹೊಂದುತ್ತಾರೆ.

ಯಥಾ ಸಿದ್ಧಸ್ಯ ಚಾನ್ನಸ್ಯ ದ್ವಿಜಾಯಾಗ್ರಂ ಪ್ರದೀಯತೇ ।
ಬಲಯಶ್ಚ ಗೃಹೋದ್ದೇಶೇ ಅಥ ಪ್ರೀಯಂತಿ ದೇವತಾಃ ॥೫॥

ಹಾಗೆಯೇ ಸಿದ್ಧವಾದ ಅಗ್ರಾನ್ನವನ್ನು ಬ್ರಾಹ್ಮಣರಿಗೆ ನೀಡಿದರೆ ಗೃಹಪ್ರದೇಶದಲ್ಲಿ ಪೂಜೆಗಳನ್ನು ಮಾಡಿದರೆ ದೇವತೆಗಳು ಪ್ರಸನ್ನರಾಗುತ್ತಾರೆ.

ಯಥಾ ಚ ಗೃಹಿಣಸ್ತೋಷೋ ಭವೇದ್ ವೈ ಬಲಿಕರ್ಮಣಾ ।
ತಥಾ ಶತಗುಣಾ ಪ್ರೀತಿರ್ದೇವತಾನಾಂ ಸ್ಮ ಜಾಯತೇ ॥೬॥

ಅಂತಹ ಪೂಜಾಕರ್ಮಗಳಿಂದ ಗೃಹಸ್ಥನಿಗೆ ಉಂಟಾಗುವ ಸಂತೋಷದ ನೂರು ಪಟ್ಟು ಸಂತೋಷವು ದೇವತೆಗಳಿಗೆ ಉಂಟಾಗುತ್ತದೆ.

ಏವಂ ಧೂಪಪ್ರದಾನಂ ಚ ದೀಪದಾನಂ ಚ ಸಾಧವಃ ।
ಪ್ರಶಂಸಂತಿ ನಮಸ್ಕಾರೈರ್ಯುಕ್ತಮಾತ್ಮಗುಣಾವಹಮ್ ॥೭॥

ಹಾಗೆಯೇ ತನಗೆ ಸದ್ಗುಣಗಳನ್ನು ತಂದುಕೊಡುವ ನಮಸ್ಕಾರ ಸಹಿತವಾದ ಧೂಪ-ದೀಪ ದಾನಗಳನ್ನು ಸಜ್ಜನರು ಪ್ರಶಂಸೆ ಮಾಡುತ್ತಾರೆ.

ಸ್ನಾನೇನಾದ್ಭಿಶ್ಚ ಯತ್‌ಕರ್ಮ ಕ್ರಿಯತೇ ವೈ ವಿಪಶ್ಚಿತಾ ।
ನಮಸ್ಕಾರಪ್ರಯುಕ್ತೇನ ಪ್ರೀಯತೇ ತೇನ ದೇವತಾಃ ।
ಗೃಹ್ಯಾಶ್ಚ ದೇವತಾಃ ಸರ್ವಾಃ ಪ್ರೀಯಂತೇ ವಿಧಿನಾऽರ್ಚಿತಾಃ ॥೮॥

ಜ್ಞಾನಿಯಾದವನು ಮಾಡುವ ಕರ್ಮದಿಂದಲೂ, ಜಲದಿಂದ ಮಾಡುವ ನಮಸ್ಕಾರಯುಕ್ತವಾದ ತರ್ಪಣಾದಿ ಕ್ರಿಯೆಗಳಿಂದಲೂ ದೇವತೆಗಳು ಪ್ರಸನ್ನರಾಗುತ್ತಾರೆ. ವಿಧಿಗೆ ಅನುಗುಣವಾಗಿ ಪೂಜಿಸಲ್ಪಟ್ಟ ಗೃಹದೇವತೆಗಳೆಲ್ಲರೂ ಪ್ರಸನ್ನರಾಗುತ್ತಾರೆ.

ಇತ್ಯೇತಾಂ ಬುದ್ಧಿಮಾಸ್ಥಾಯ ನಹುಷಃ ಸ ನರೇಶ್ವರಃ ।
ಸುರೇಂದ್ರತ್ವಂ ಮಹತ್ ಪ್ರಾಪ್ಯ ಕೃತವಾನೇತದದ್ಭುತಮ್ ॥೯॥

ಇಂತಹ ಈ ಬುದ್ಧಿಯನ್ನು ಹೊಂದಿ ನರೇಶ್ವರನಾದ ನಹುಷನು ಶ್ರೇಷ್ಠವಾದ ಇಂದ್ರಪದವಿಯನ್ನು ಹೊಂದಲು ಅವೆಲ್ಲವನ್ನೂ ಅದ್ಭುತವಾಗಿ ಮಾಡಿದನು.

ಕಸ್ಯಚಿತ್ತ್ವಥ ಕಾಲಸ್ಯ ಭಾಗ್ಯಕ್ಷಯ ಉಪಸ್ಥಿತೇ ।
ಸರ್ವಮೇತದವಜ್ಞಾಯ ನ ಚಕಾರೈತದೀದೃಶಮ್ ॥೧೦॥

ಎಷ್ಟೋ ಕಾಲವು ಕಳೆದ ಮೇಲೆ ಅವನ ಪುಣ್ಯಕ್ಷಯ ಉಂಟಾಗುವ ಸಮಯ ಬಂದಾಗ ಇವೆಲ್ಲವನ್ನೂ ತಿರಸ್ಕರಿಸಿ ಇಂತಹ ಯಾವ ಕಾರ್ಯವನ್ನೂ ಮಾಡಲಿಲ್ಲ.

ತತಃ ಸ ಪರಿಹೀಣೋಽಭೂತ್ ಸುರೇಂದ್ರೋ ಬಲಿಕರ್ಮತಃ ।
ಧೂಪದೀಪೋದಕವಿಧಿಂ ನ ಯಥಾವಚ್ಚಕಾರ ಹ ।
ತತೋಽಸ್ಯ ಯಜ್ಞವಿಷಯೋ ರಕ್ಷೋಭಿಃ ಪರ್ಯಬಾಧ್ಯತ ॥೧೧॥

ಸುರೇಂದ್ರನಾದ ಅವನು ಬಲಿಕರ್ಮವನ್ನು ತ್ಯಜಿಸಿದನು. ಧೂಪ-ದೀಪೋದಕ ವಿಧಿಯನ್ನು ಸರಿಯಾಗಿ ಮಾಡಲಿಲ್ಲ. ಆಗ ಅವನು ಯಜ್ಞಪ್ರದೇಶವು ರಾಕ್ಷಸರಿಂದ ಕೆಡಿಸಲ್ಪಟ್ಟಿತು.

ಅಥಾಗಸ್ತ್ಯಮೃಷಿಶ್ರೇಷ್ಠಂ ವಾಹನಾಯಾಜುಹಾವ ಹ ।
ದ್ರುತಂ ಸರಸ್ವತೀಕೂಲಾತ್ ಸ್ಮಯನ್ನಿವ ಮಹಾಬಲಃ ॥೧೨॥

ಅನಂತರ ಅವನು ಋಷಿಶ್ರೇಷ್ಠರಾದ ಅಗಸ್ತ್ಯರನ್ನು ತನ್ನ ವಾಹನವನ್ನಾಗಿ ಆಹ್ವಾನ ಮಾಡಿದನು. ಮಹಾಬಲನಾದ ಅವನು ನಗುತ್ತಾ ಸರಸ್ವತೀ ತೀರದಿಂದ ಶೀಘ್ರವಾಗಿ ಎಳೆದುಕೊಂಡು ಹೋಗುವಂತೆ ಅವರನ್ನು ಆಹ್ವಾನಿಸಿದನು.

ತತೋ ಭೃಗುರ್ಮಹಾತೇಜಾ ಮೈತ್ರಾವರುಣಿಮಬ್ರವೀತ್ ।
ನಿಮೀಲಯಸ್ವ ನಯನೇ ಜಟಾಯಾಂ ಪ್ರವಿಶಾಮ್ಯಹಮ್ ॥೧೩॥

ಆಗ ಮಹಾತೇಜಸ್ವಿಗಳಾದ ಭೃಗುಗಳು ಮೈತ್ರಾವರುಣಿಗಳಾದ ಅಗಸ್ತ್ಯರನ್ನು ಕುರಿತು ಕಣ್ಣುಗಳನ್ನು ಮುಚ್ಚಿಕೊಳ್ಳಿ ನಾನು ನಿಮ್ಮ ಜಟೆಯಲ್ಲಿ ಪ್ರವೇಶಿಸುತ್ತೇನೆ ಎಂದು ಹೇಳಿದರು.

ಸ್ಥಾಣುಭೂತಸ್ಯ ತಸ್ಯಾಥ ಜಟಾಃ ಪ್ರಾವಿಶದಚ್ಯುತಃ ।
ಭೃಗುಃ ಸ ಸುಮಹಾತೇಜಾಃ ಪಾತನಾಯ ನೃಪಸ್ಯ ಹ ॥೧೪॥

ಮರದ ತುಂಡಿನಂತೆ ನಿಶ್ಚಲವಾಗಿ ನಿಂತ ಅಗಸ್ತ್ಯರ ಜಟೆಯನ್ನು ಮಹಾತೇಜಸ್ವಿಗಳೂ, ತಮ್ಮ ಗುಣಗಳಿಂದ ಎಂದೂ ಚ್ಯುತರಾಗದವರೂ ಆದ ಭೃಗುಗಳು ನಹುಷನನ್ನು ಬೀಳಿಸುವುದಕ್ಕೋಸ್ಕರ ಪ್ರವೇಶಿಸಿದರು.

ತತಃ ಸ ದೇವರಾಟ್ ಪ್ರಾಪ್ತಸ್ತಮೃಷಿಂ ವಾಹನಾಯ ವೈ ।
ತತೋಽಗಸ್ತ್ಯಃ ಸುರಪತಿಂ ವಾಕ್ಯಮಾಹ ವಿಶಾಂಪತೇ ॥೧೫॥

ಯೋಜಯಸ್ವೇಂದ್ರ ಮಾಂ ಕ್ಷಿಪ್ರಂ ಕಂ ಚ ದೇಶಂ ವಹಾಮಿ ತೇ ।
ಯತ್ರ ವಕ್ಷ್ಯಸಿ ತತ್ರ ತ್ವಾಂ ನಯಿಷ್ಯಾಮಿ ಸುರಾಧಿಪ ॥೧೬॥

ಅನಂತರ ಸಮೀಪಕ್ಕೆ ಬಂದ ಆ ಋಷಿಗಳನ್ನು ದೇವರಾಜನಾದ ನಹುಷನು ವಾಹನವನ್ನು ತೆಗೆದುಕೊಂಡು ಹೋಗುವಂತೆ ಪ್ರಚೋದಿಸಿದನು. ಎಲೈ ರಾಜನೇ, ಆಗ ಅಗಸ್ತ್ಯರು ಸುರಪತಿಯಾದ ನಹುಷನನ್ನು ಕುರಿತು- 'ಇಂದ್ರನೇ, ನನ್ನನ್ನು ಬೇಗ ಹೂಡುವವನಾಗು. ನಿನ್ನನ್ನು ಎಲ್ಲಿಗೆ ಕರೆದುಕೊಂಡು ಹೋಗಲಿ? ಎಲೈ ಸುರಾಧಿಪನೇ, ನೀನು ಹೇಳಿದ ಕಡೆಗೆ ನಿನ್ನನ್ನು ಕರೆದುಕೊಂಡು ಹೋಗುವೆನು' ಎಂದು ಹೇಳಿದರು.

ಇತ್ಯುಕ್ತೋ ನಹುಷಸ್ತೇನ ಯೋಜಯಾಮಾಸ ತಂ ಮುನಿಮ್ ।
ಭೃಗುಸ್ತಸ್ಯ ಜಟಾಸಂಸ್ಥೋ ಬಭೂವ ಹೃಷಿತೋ ಭೃಶಮ್ ॥೧೭॥

ಹೀಗೆ ಹೇಳಲ್ಪಟ್ಟ ನಹುಷನು ಆ ಋಷಿಗಳನ್ನು ತನ್ನ ರಥದಲ್ಲಿ ಹೂಡಿದನು. ಅವರ ಜಟಿಯಲ್ಲಿದ್ದ ಭೃಗುಗಳು ಬಹಳ ಸಂತುಷ್ಟರಾದರು.

ನ ಚಾಪಿ ದರ್ಶನಂ ತಸ್ಯ ಚಕಾರ ಸ ಭೃಗುಸ್ತದಾ ।
ವರದಾನಪ್ರಭಾವಜ್ಞೋ ನಹುಷಸ್ಯ ಮಹಾತ್ಮನಃ ॥೧೮॥

ಮಹಾತ್ಮನಾದ ನಹುಷನು ಪಡೆದ ವರದ ಸಾಮರ್ಥ್ಯವನ್ನು ತಿಳಿದ ಭೃಗುಗಳು ಅವನಿಗೆ ಆಗ ಗೋಚರವಾಗಲಿಲ್ಲ.

ನ ಚುಕೋಪ ಸ ಚಾಗಸ್ತ್ಯೋ ಯುಕ್ತೋಽಪಿ ನಹುಷೇಣ ವೈ ।
ತಂ ತು ರಾಜಾ ಪ್ರತೋದೇನ ಚೋದಯಾಮಾಸ ಭಾರತ ॥೧೯॥

ನಹುಷನಿಂದ ಹೂಡಲ್ಪಟ್ಟರೂ ಅಗಸ್ತ್ಯರು ಕೋಪಗೊಳ್ಳಲಿಲ್ಲ. ಎಲೈ ಭಾರತನೇ, ಆಗ ರಾಜನಾದ ನಹುಷನು ಅವರನ್ನು ಚಾವಟಿಯಿಂದ ಪ್ರಚೋದಿಸಿದನು.

ನ ಚುಕೋಪ ಸ ಧರ್ಮಾತ್ಮಾ ತತಃ ಪಾದೇನ ದೇವರಾಟ್ ।
ಅಗಸ್ತ್ಯಸ್ಯ ತದಾ ಕ್ರುದ್ಧೋ ವಾಮೇನಾಭ್ಯಹನಚ್ಛಿರಃ ॥೨೦॥

ಆಗಲೂ ಧರ್ಮಾತ್ಮರಾದ ಅಗಸ್ತ್ಯರು ಕೋಪಗೊಳ್ಳಲಿಲ್ಲ. ಆಗ ದೇವರಾಜನಾದ ನಹುಷನು ಕೋಪಗೊಂಡ ತನ್ನ ಎಡಗಾಲಿನಿಂದ ಅಗಸ್ತ್ಯರ ಶಿರಸ್ಸನ್ನು ಒದ್ದನು.

ತಸ್ಮಿನ್ ಶಿರಸ್ಯಭಿಹತೇ ಸ ಜಟಾಂತರ್ಗತೋ ಭೃಗುಃ ।
ಶಶಾಪ ಚಾತಿಕೋಪೇನ ನಹುಷಂ ಪಾಪಚೇತಸಮ್ ॥೨೧॥

ಅವರನ್ನು ಶಿರಸ್ಸಿನಲ್ಲಿ ಆ ರೀತಿಯಲ್ಲಿ ಒದೆಯುತ್ತಿರಲು ಜಟೆಯಲ್ಲಿ ಅಡಗಿದ್ದ ಭೃಗುಗಳು ಬಹಳ ಕೋಪದಿಂದ ಪಾಪಚೇತನನಾದ ನಹುಷನಿಗೆ ಶಾಪವನ್ನು ನೀಡಿದರು.

ಭೃಗುಃ

ಯಸ್ಮಾತ್ ಪದಾऽಹನಃ ಕ್ರೋಧಾಚ್ಛಿರಸೀಮಂ ಮಹಾಮುನಿಮ್ ।
ತಸ್ಮಾದಾಶು ಮಹೀಂ ಗಚ್ಛ ಸರ್ಪೋ ಭೂತ್ವಾ ಸುದುರ್ಮತೇ ॥೨೨॥

ಭೃಗು– ಎಲೈ ದುರ್ಬುದ್ಧಿಯೇ, ನೀನು ಕೋಪದಿಂದ ಈ ಮಹರ್ಷಿಗಳಿಗೆ ಶಿರಸ್ಸಿನಲ್ಲಿ ಒದ್ದ ಕಾರಣದಿಂದ ಶೀಘ್ರವಾಗಿ ಸರ್ಪವಾಗಿ ಭೂಮಿಗೆ ಹೋಗು (ಎಂದು ಹೇಳಿದರು).

ಇತ್ಯುಕ್ತಃ ಸ ತದಾ ತೇನ ಸರ್ಪೋ ಭೂತ್ವಾ ಪಪಾತ ಹ ।
ಅದೃಷ್ಟೇನಾಥ ಭೃಗುಣಾ ಭೂತಳೇ ಭರತರ್ಷಭ ॥೨೩॥

ಎಲೈ ಭರತಶ್ರೇಷ್ಠನೇ, ಅದೃಶ್ಯರಾದ ಭೃಗುಗಳಿಂದ ಹೀಗೆ ಶಪ್ತನಾದ ನಹುಷನು ಸರ್ಪರೂಪವನ್ನು ಧರಿಸಿ ಭೂತಳದಲ್ಲಿ ಬಿದ್ದನು.

ಭೃಗುಂ ಹಿ ಯದಿ ಸೋऽದ್ರಾಕ್ಷೀನ್ನಹುಷಃ ಪೃಥಿವೀಪತೇ ।
ನ ಸ ಶಕ್ತೋऽಭವಿಷ್ಯದ್ ವೈ ಪಾತನೇ ತಸ್ಯ ತೇಜಸಾ ॥೨೪॥

ಎಲೈ ರಾಜನೇ, ಒಂದು ಪಕ್ಷ ನಹುಷನು ಭೃಗುಗಳನ್ನು ನೋಡಿದ್ದರೆ ಭೃಗುಗಳಿಗೂ ತಮ್ಮ ಸಾಮರ್ಥ್ಯದಿಂದ ಅವನನ್ನು ಭೂಮಿಗೆ ಬೀಳಿಸಲು ಸಾಧ್ಯವಾಗುತ್ತಿರಲಿಲ್ಲ.

ಸ ತು ತೈಸ್ತೈಃ ಪ್ರದಾನೈಶ್ಚ ತಪೋಭಿರ್ನಿಯಮೈಸ್ತಥಾ ।
ಪತಿತೋऽಪಿ ಮಹಾರಾಜ ಭೂತಳೇ ಸ್ಮೃತಿಮಾನಭೂತ್ ।
ಪ್ರಸಾದಯಾಮಾಸ ಭೃಗುಂ ಶಾಪಾಂತೋ ಮೇ ಭವೇದಿತಿ ॥೨೫॥

ಎಲೈ ಮಹಾರಾಜನೇ, ಅವನು ಭೂತಳದಲ್ಲಿ ಬಿದ್ದರೂ ಅವನು ಮಾಡಿದ ದಾನ, ತಪಸ್ಸು ಮತ್ತು ನಿಯಮಗಳ ಪುಣ್ಯದಿಂದಾಗಿ ಅವನಿಗೆ ಸ್ಮೃತಿಯು ನಾಶವನ್ನು ಹೊಂದಲಿಲ್ಲ. ಆಗ ಅವನು ಭೃಗುಗಳನ್ನು ಕುರಿತು ಶಾಪ ವಿಮೋಕ್ಷವನ್ನು ಮಾಡಿ ಎಂದು ಕೇಳಿದನು.

ತತೋಽಗಸ್ತ್ಯಃ ಕೃಪಾವಿಷ್ಟಃ ಪ್ರಾಸಾದಯತ ತಂ ಭೃಗುಮ್ ।
ಶಾಪಾಂತಾರ್ಥಂ ಮಹಾರಾಜ ಸ ಚ ಪ್ರಾದಾತ್ ಕೃಪಾನ್ವಿತಃ ॥೨೬॥

ಎಲೈ ಮಹಾರಾಜನೇ, ಆಗ ಅಗಸ್ತ್ಯರೂ ಸಹಿತ ಕರುಣೆಯಿಂದ ಕೂಡಿದವರಾಗಿ ಭೃಗುಗಳನ್ನು ಶಾಪವಿಮೋಚನೆಯನ್ನು ಮಾಡಲು ಪ್ರಸನ್ನಗೊಳಿಸಿದರು. ಭೃಗುಗಳಾದರೂ ಕೃಪೆಯಿಂದ ಕೂಡಿ ಶಾಪವಿಮೋಚನೆಯನ್ನು ನೀಡಿದರು.

ರಾಜಾ ಯುಧಿಷ್ಠಿರೋ ನಾಮ ಭವಿಷ್ಯತಿ ಕುರೂದ್ವಹಃ ।
ಸ ತ್ವಾಂ ಮೋಕ್ಷಯಿತಾ ಶಾಪಾದಿತ್ಯುಕ್ತ್ವಾ ತಿರೋಽಧೀಯತ ॥೨೭॥

ಕುರುವಂಶೋದ್ಧಾರಕನಾದ ಯುಧಿಷ್ಠಿರನೆಂಬ ರಾಜನು ಮುಂದೆ ಜನಿಸುವನು. ಅವನು ನನ್ನ ಶಾಪದಿಂದ ನಿನ್ನನ್ನು ಬಿಡುಗಡೆ ಮಾಡುವನು ಎಂದು ಹೇಳಿ ಭೃಗುಗಳು ಅಂತರ್ಧಾನವನ್ನು ಹೊಂದಿದರು.

ಅಗಸ್ತ್ಯೋಽಪಿ ಮಹಾತೇಜಾಃ ಕೃತ್ವಾ ಕಾರ್ಯಂ ಶತಕ್ರತೋಃ ।
ಸ್ವಮಾಶ್ರಮಪದಂ ಪ್ರಾಯಾತ್ ಪೂಜ್ಯಮಾನೋ ದ್ವಿಜಾತಿಭಿಃ ॥೨೮॥

ಮಹಾತೇಜಸ್ವಿಗಳಾದ ಅಗಸ್ತ್ಯರೂ ಸಹ ಶತಕ್ರತುವಾದ ಪುರಂದರನ ಕಾರ್ಯವನ್ನು ನೆರವೇರಿಸಿ ಬ್ರಾಹ್ಮಣರಿಂದ ಪೂಜಿಸಲ್ಪಡುತ್ತಾ ತಮ್ಮ ಆಶ್ರಮಕ್ಕೆ ಹಿಂದಿರುಗಿದರು.

ನಹುಷೋಽಪಿ ತ್ವಯಾ ರಾಜನ್ ತಸ್ಮಾಚ್ಛಾಪಾತ್ ಸಮುದ್ಧೃತಃ ।
ಜಗಾಮ ಬ್ರಹ್ಮಸದನಂ ತೇನ ಪುಣ್ಯೇನ ಕರ್ಮಣಾ ॥೨೯॥

ಎಲೈ ರಾಜನೇ, ನಹುಷನೂ ಸಹ ನಿನ್ನಿಂದ ಆ ಶಾಪದಿಂದ ವಿಮೋಚನೆಯನ್ನು ಹೊಂದಿದನು. ಅವನು ಮೊದಲು ಮಾಡಿದ ಪುಣ್ಯಕರ್ಮಗಳಿಂದ ಅವನು ಬ್ರಹ್ಮಲೋಕಕ್ಕೆ ಹೋದನು.

ತದಾ ತು ಪಾತಯಿತ್ವಾ ತಂ ನಹುಷಂ ಭೂತಳೇ ಭೃಗುಃ ।
ಜಗಾಮ ಬ್ರಹ್ಮಸದನಂ ಬ್ರಹ್ಮಣೇ ಚ ನ್ಯವೇದಯತ್ ॥೩೦॥

ಭೃಗುಗಳಾದರೂ ನಹುಷನನ್ನು ಭೂತಳದಲ್ಲಿ ಕೆಡವಿ ಬ್ರಹ್ಮಸದನಕ್ಕೆ ಹೋಗಿ ಬ್ರಹ್ಮದೇವರಿಗೆ ಎಲ್ಲವನ್ನೂ ನಿವೇದಿಸಿದರು.

ತತಃ ಶಕ್ರಂ ಸಮಾನಾಯ್ಯ ದೇವಾನಾಹ ಪಿತಾಮಹಃ ।
ವರದಾನಾನ್ಮಮ ಸುರಾ ನಹುಷೋ ರಾಜ್ಯಮಾಪ್ತವಾನ್ ।
ಸ ಚಾಗಸ್ತ್ಯೇನ ಕ್ರುದ್ಧೇನ ಭ್ರಂಶಿತೋ ಭೂತಳಂ ಗತಃ ॥೩೧॥

ನ ಚ ಶಕ್ಯಂ ವಿನಾ ರಾಜ್ಞಾ ಸುರಾ ವರ್ತಯಿತುಂ ಕ್ವಚಿತ್ ।
ತಸ್ಮಾದಯಂ ಪುನಃ ಶಕ್ರೋ ದೇವರಾಜೋಽಭಿಷಿಚ್ಯತಾಮ್ ॥೩೨॥

ಆಗ ಪಿತಾಮಹರಾದ ಬ್ರಹ್ಮದೇವರು ಇಂದ್ರನನ್ನು ಕರೆಸಿ ಎಲ್ಲಾ ದೇವತೆಗಳನ್ನುದ್ದೇಶಿಸಿ ಹೇಳಿದರು- 'ಎಲೈ ದೇವತೆಗಳೇ, ನನ್ನ ವರದಾನದಿಂದ ನಹುಷನು ಮೂರುಲೋಕದ ರಾಜ್ಯವನ್ನು ಹೊಂದಿದನು. ಅವನು ಕೋಪಗೊಂಡ ಅಗಸ್ತ್ಯರಿಂದ ಸ್ಥಾನಭ್ರಷ್ಟನಾಗಿ ಭೂತಳವನ್ನು ಸೇರಿದನು. ಎಲೈ ದೇವತೆಗಳೇ, ರಾಜನಿಲ್ಲದೆ ಬದುಕಲು ಸಾಧ್ಯವಿಲ್ಲ. ಆದ್ದರಿಂದ ಪುನಃ ಶಕ್ರನನ್ನು ದೇವರಾಜನನ್ನಾಗಿ ಅಭಿಷೇಕ ಮಾಡಿ' ಎಂದು ಹೇಳಿದರು.

ಏವಂ ಸಂಭಾಷಮಾಣಂ ತು ದೇವಾಃ ಪಾರ್ಥ ಪಿತಾಮಹಮ್ ।
ಏವಮಸ್ತ್ವಿತಿ ಸಂಹೃಷ್ಟಾಃ ಪ್ರತ್ಯೂಚುಸ್ತೇ ಪಿತಾಮಹಮ್ ॥೩೩॥

ಎಲೈ ಪಾರ್ಥನೇ, ಪಿತಾಮಹರು ಹೀಗೆ ಹೇಳುತ್ತಿರಲು ದೇವತೆಗಳು ಸಂತೋಷದಿಂದ ಅವರನ್ನುದ್ದೇಶಿಸಿ ಹಾಗೆಯೇ ಆಗಲಿ ಎಂದು ಹೇಳಿದರು.

ಸೋಽಭಿಷಿಕ್ತೋ ಭಗವತಾ ದೇವರಾಜ್ಯೇನ ವಾಸವಃ ।
ಬ್ರಹ್ಮಣಾ ರಾಜಶಾರ್ದೂಲ ಯಥಾಪೂರ್ವಂ ವ್ಯರೋಚತ ॥೩೪॥

ಎಲೈ ರಾಜಶಾರ್ದೂಲನೇ, ಇಂದ್ರನಾದರೂ ಪೂಜ್ಯರಾದ ಬ್ರಹ್ಮದೇವರಿಂದ ದೇವರಾಜನಾಗಿ ಅಭಿಷೇಕ ಮಾಡಲ್ಪಟ್ಟುಮೊದಲಿನಂತೆ ಶೋಭಿಸಿದನು.

ಏವಮೇತತ್ ಪುರಾವೃತ್ತಂ ನಹುಷಸ್ಯ ವ್ಯತಿಕ್ರಮಾತ್ ।
ಸ ಚ ತೈರೇವ ಸಂಸಿದ್ಧೋ ನಹುಷಃ ಕರ್ಮಭಿಃ ಪುನಃ ॥೩೫॥

ಈ ರೀತಿಯಲ್ಲಿ ಹಿಂದೆ ನಹುಷನ ಅಪಚಾರದಿಂದ ಇದು ನಡೆಯಿತು. ನಹುಷನಾದರೂ ಪುನಃ ಅದೇ ಕರ್ಮಗಳಿಂದ ಸಿದ್ಧಿಯನ್ನು ಪಡೆದನು.

ತಸ್ಮಾದ್ ದೀಪಾಃ ಪ್ರದಾತವ್ಯಾಃ ಸಾಯಂ ವೈ ಗೃಹಮೇಧಿಭಿಃ ।
ದಿವ್ಯಂ ಚಕ್ಷುರವಾಪ್ನೋತಿ ಪ್ರೇತ್ಯ ದೀಪಪ್ರದಾಯಕಃ ।
ಪೂರ್ಣಚಂದ್ರಪ್ರತೀಕಾಶಾ ದೀಪದಾಶ್ಚ ಭವೇತ್ ಪುನಃ ॥೩೬॥

ಆದ್ದರಿಂದ ಗೃಹಸ್ಥರು ಸಾಯಂಕಾಲದಲ್ಲಿ ದೀಪದಾನವನ್ನು ಮಾಡಬೇಕು. ದೀಪದಾನವನ್ನು ಮಾಡುವವನು ಮರಣಾನಂತರದಲ್ಲಿ ದಿವ್ಯಚಕ್ಷುಸ್ಸನ್ನು ಪಡೆಯುತ್ತಾನೆ ಮತ್ತು ಪುನಃ ಭೂಮಿಯಲ್ಲಿ ಜನಿಸುವಾಗ ಪೂರ್ಣಚಂದ್ರನ ಕಾಂತಿಯನ್ನು ಹೊಂದುತ್ತಾನೆ.

ಯಾವದಕ್ಷಿನಿಮೇಷಾಣಿ ಜ್ವಲತೇ ತಾವತೀಃ ಸಮಾಃ ।
ರೂಪವಾನ್ ಧನವಾಂಶ್ಚಾಪಿ ನರೋ ಭವತಿ ದೀಪದಃ ॥೩೭॥

ದಾನ ಮಾಡಿದ ದೀಪವು ಎಷ್ಟು ಸಲ ಕಣ್ಣುಮುಚ್ಚಿ ತೆರೆಯವಷ್ಟು ಕಾಲ ಉರಿಯುತ್ತದೆಯೋ ಅಷ್ಟು ವರ್ಷಗಳ ಕಾಲ ದಾನ ಮಾಡಿದ ಮನುಷ್ಯನು ರೂಪವಂತನೂ, ಧನವಂತನೂ ಆಗುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ದೀಪಾದಿದಾನಫಕಥನಂ ನಾಮ
ತ್ರಿಪಂಚಾಶದುತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಐವತ್ಮೂರನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಐವತ್ನಾಲ್ಕನೆಯ ಅಧ್ಯಾಯ

ಬ್ರಹ್ಮಸ್ವಹರಣಫಲ - ಕ್ಷತ್ರಿಯ-ಚಂಡಾಲಸಂವಾದ

ಯುಧಿಷ್ಠಿರಃ

ಬ್ರಹ್ಮಸ್ವಾನಿ ಚ ಯೇ ಮಂದಾ ಹರಂತಿ ಭರತರ್ಷಭ ।
ನೃಶಂಸಕಾರಿಣೋ ಮೂಢಾಃ ಕ್ವ ತೇ ಗಚ್ಛಂತಿ ಮಾನವಾಃ ॥೧॥

ಯುಧಿಷ್ಠಿರ- ಎಲೈ ಭರತರ್ಷಭನೇ, ಮಂದರೂ, ಮೂರ್ಖರೂ ಆದ ಯಾವ ಮಾನವರು ಬ್ರಹ್ಮಸ್ವವನ್ನು ಅಪಹರಿಸುತ್ತಾರೋ, ಕ್ರೂರಕರ್ಮವನ್ನು ಮಾಡುತ್ತಾರೋ ಅವರು ಎಲ್ಲಿಗೆ ಹೋಗುತ್ತಾರೆ?

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಚಂಡಾಲಸ್ಯ ಚ ಸಂವಾದಂ ಕ್ಷತ್ರಬಂಧೋಶ್ಚ ಭಾರತ ॥೨॥

ಭೀಷ್ಮ- ಎಲೈ ಭಾರತನೇ, ಈ ವಿಷಯದಲ್ಲಿಯೂ ಸಹ ಒಬ್ಬ ಚಂಡಾಲನಿಗೂ ಮತ್ತು ಕ್ಷತ್ರಿಯನಿಗೂ ನಡೆದ ಸಂವಾದರೂಪವಾದ ಈ ಪುರಾತನವಾದ ಇತಿಹಾಸವನ್ನು ಹೇಳುತ್ತಾರೆ.

ರಾಜನ್ಯಃ

ವೃದ್ಧರೂಪೋಽಸಿ ಚಂಡಾಲ ಬಾಲವಚ್ಚ ವಿಚೇಷ್ಟಸೇ ।
ಶ್ವಖರಾಣಾಂ ರಜಃಸೇವೀ ಕಸ್ಮಾದುದ್ವಿಜಸೇ ಗವಾಮ್ ॥೩॥

ರಾಜನ್ಯ- ಎಲೈ ಚಂಡಾಲನೇ, ನೀನು ವೃದ್ಧನಾಗಿದ್ದೀಯೆ. ಆದರೂ ಬಾಲನಂತೆ ನಡೆದುಕೊಳ್ಳುತ್ತಿದ್ದೀಯೆ. ನಾಯಿ ಮತ್ತು ಕತ್ತೆಗಳ ಪಾದಧೂಳನ್ನು ಸೇವಿಸುವ ನೀನು ಗೋವುಗಳ ಪಾದಧೂಳಿಗೆ ಏಕೆ ಹೆದರುತ್ತಿದ್ದೀಯೆ?

ಸಾಧುಭಿರ್ಗರ್ಹಿತಂ ಕರ್ಮ ಚಂಡಾಲಸ್ಯ ವಿಧೀಯತೇ ।
ಕಸ್ಮಾದ್ ಗೋರಜಸಾ ಧ್ವಸ್ತಮಪಾಂ ಕುಂಡೇ ನಿಷಿಂಚಸಿ ॥೪॥

ಚಂಡಾಲನಿಗೆ ಸಜ್ಜನರಿಂದ ನಿಂದಿತವಾದ ಕರ್ಮಗಳು ವಿಧಿಸಲ್ಪಡುತ್ತವೆ. ಗೋವಿನ ಪಾದಧೂಳಿಯು ತಾಕಿದ ನಿನ್ನ ದೇಹವನ್ನು ಏಕೆ ನೀರಿನಿಂದ ತೊಳೆಯುತ್ತಿದ್ದೀಯೆ?

ಚಂಡಾಲಃ

ಬ್ರಾಹ್ಮಣಸ್ಯ ಗವಾಂ ರಾಜನ್ ಹ್ರಿಯತೀನಾಂ ರಜಃ ಪುರಾ ।
ಸೋಮಮುದ್ಧ್ವಂಸಯಾಮಾಸ ತಂ ಚ ಸೋಮಂ ಪಪುರ್ದ್ವಿಜಾಃ ॥೫॥

ಚಂಡಾಲ– ಎಲೈ ರಾಜನೇ, ಯಜ್ಞವನ್ನು ಮಾಡುವ ಒಬ್ಬ ರಾಜನು ಬಲಾತ್ಕಾರದಿಂದ ಬ್ರಾಹ್ಮಣನ ಗೋವುಗಳನ್ನು ಕರೆದುಕೊಂಡು ಹೋದನು. ಆಗ ಆ ಗೋಧೂಳಿಯು ಸೋಮಪಾತ್ರೆಯಲ್ಲಿ ಬಿದ್ದು ಸೋಮವನ್ನು ಕೆಡಿಸಿತು. ಆ ಸೋಮವನ್ನು ಬ್ರಾಹ್ಮಣರು ಪಾನವನ್ನು ಮಾಡಿದರು.

ಯದ್ಯಪಿ ಗೋಧೂಳಿಯು ತಾಕಿದರೆ ಪಾವಿತ್ರ್ಯವೇ ಉಂಟಾಗುತ್ತದೆ. ಆದರೆ ಬಲಾತ್ಕಾರದಿಂದ ತೆಗೆದುಕೊಂಡು ಹೋಗುತ್ತಿರುವ ಗೋವುಗಳು ಮತ್ತು ಅದರ ಧೂಳಿಯೂ ಸಹ ಬ್ರಾಹ್ಮಣ ಸಂಬಂಧಿಯಾದುದರಿಂದ ಬ್ರಹ್ಮಸ್ವರೂಪವೇ ಆಗಿವೆ. ಗೋವು ಬ್ರಹ್ಮಸ್ವರೂಪವಾದುದೆಂದು ಪುನಃ ಏನು ಹೇಳಬೇಕು? ಗೋಧೂಳಿಯು ಬ್ರಹ್ಮಸ್ವರೂಪಿಯಾದುದರಿಂದ ಸೋಮಪಾನ ಮಾಡಿದವನಿಗೆ ಬ್ರಹ್ಮಸ್ವ ಅಪಹಾರ ಮಾಡಿದ ದೋಷವು ಉಂಟಾಯಿತು - ಲಕ್ಷಾಲಂಕಾರ.

ದೀಕ್ಷಿತಶ್ಚ ಸ ರಾಜಾಽಪಿ ಕ್ಷಿಪ್ರಂ ನರಕಮಾವಿಶತ್ ।
ಸಹ ತೈರ್ಯಾಜಕೈಃ ಸರ್ವೈರ್ಬ್ರಹ್ಮಸ್ವಮುಪಜೀವ್ಯ ತತ್ ॥೬॥

ದೀಕ್ಷಿತನಾದ ರಾಜನೂ ಸಹ ಆ ಋತ್ವಿಜರೆಲ್ಲರ ಜೊತೆಯಲ್ಲಿ ಬ್ರಹ್ಮಸ್ವವನ್ನು ಉಪಜೀವಿಸಿದ ಕಾರಣದಿಂದ ಶೀಘ್ರವಾಗಿ ನರಕಕ್ಕೆ ಹೋದನು.

ಯೇಽಪಿ ತತ್ರಾಪಿಬನ್ ಕ್ಷೀರಂ ಘೃತಂ ದಧಿ ಚ ಮಾನವಾಃ ।
ಬ್ರಾಹ್ಮಣಾಃ ಸಹರಾಜನ್ಯಾಃ ಸರ್ವೇ ನರಕಮಾವಿಶನ್ ॥೭॥

ಅಲ್ಲಿ ಯಾವ ಮನುಷ್ಯರು ಕ್ಷೀರ, ದಧಿ, ಘೃತಗಳನ್ನು ಉಪಯೋಗಿಸಿದರೋ ಅಂತಹ ಬ್ರಾಹ್ಮಣ, ಕ್ಷತ್ರಿಯರು ಎಲ್ಲರೂ ನರಕಕ್ಕೆ ಹೋದರು.

ಜಘ್ನತುಸ್ತಪಸಾ ಪುತ್ರಾಂಸ್ತಥಾ ಪೌತ್ರಾನ್ ವಿಧುನ್ವತೀಃ ।
ಪಶೂನವೇಕ್ಷಮಾಣಾಂಶ್ಚ ಸಾಧುವೃತ್ತೇನ ದಂಪತೀ ॥೮॥

ಗೋಸ್ವಾಮಿಗಳಾದ ಬ್ರಾಹ್ಮಣ ದಂಪತಿಗಳು ಎಳೆದುಕೊಂಡು ಹೋಗುವುದನ್ನು ಪ್ರತಿಭಟಿಸುತ್ತಿದ್ದ ಆ ಗೋವುಗಳನ್ನು ನೋಡುತ್ತಿದ್ದವರನ್ನೂ ಮತ್ತು ಎಳೆದುಕೊಂಡು ಹೋದವರ ಪುತ್ರ-ಪೌತ್ರರನ್ನೂ ತಮ್ಮ ಸಮೀಚೀನವಾದ ತಪಸ್ಸಿನಿಂದ ಸಂಹರಿಸಿದರು (ಬ್ರಾಹ್ಮಣರ ತಪಸ್ಸು ಅವರೆಲ್ಲರನ್ನೂ ಸಂಹರಿಸಿತು).

ಅಹಂ ತತ್ರಾವಸಂ ರಾಜನ್ ಬ್ರಹ್ಮಚಾರೀ ಜಿತೇಂದ್ರಿಯಃ ।
ತಾಸಾಂ ಮೇ ರಜಸಾ ಧ್ವಸ್ತಂ ಭೈಕ್ಷಮಾಸೀನ್ನರಾಧಿಪ ॥೯॥

ಎಲೈ ರಾಜನೇ, ನಾನೂ ಸಹ ಜಿತೇಂದ್ರಿಯನಾಗಿ, ಬ್ರಹ್ಮಚಾರಿಯಾಗಿ ಅಲ್ಲಿದ್ದೆನು. ನನ್ನ ಆಹಾರವು ಗೋರಜಸ್ಸಿನಿಂದ ಮಿಶ್ರಿತವಾಗಿ ಕೆಡಿಸಲ್ಪಟ್ಟಿತು.

ಚಂಡಾಲೋಽಹಂ ತತೋ ರಾಜನ್ ಭುಕ್ತ್ವಾ ತದಭವಂ ಮೃತಃ ।
ಬ್ರಹ್ಮಸ್ವಹಾರೀ ಚ ನೃಪ ಸೋಽಪ್ರತಿಷ್ಠಾಂ ಗತಿಂ ಯಯೌ ॥೧೦॥

ರಾಜನೇ, ನಾನು ಅದನ್ನು ಭುಂಜಿಸಿದ ಕಾರಣ ಬ್ರಹ್ಮಸ್ವ ಅಪಹಾರ ಮಾಡಿದ ನಿಮಿತ್ತದಿಂದ ಚಂಡಾಲನಾದೆನು. ಅಪ್ರತಿಷ್ಠಿತವಾದ ಗತಿಯನ್ನು ಹೊಂದಿದೆನು.

ತಸ್ಮಾದ್ ಹರೇನ್ನ ವಿಪ್ರಸ್ವಂ ಕದಾಚಿದಪಿ ಕಿಂಚನ ।
ಬ್ರಹ್ಮಸ್ವರಜಸಾ ಧ್ವಸ್ತಂ ಭುಕ್ತ್ವಾ ಮಾಂ ಪಶ್ಯ ಯಾದೃಶಮ್ ॥೧೧॥

ಆದ್ದರಿಂದ ಯಾವಾಗಲೂ ಬ್ರಾಹ್ಮಣ ಸ್ವತ್ತನ್ನು ಸ್ವಲ್ಪವನ್ನೂ ಅಪಹರಿಸಬಾರದು. ಬ್ರಾಹ್ಮಣ ಸ್ವತ್ತಾದ ಗೋಧೂಳಿನಿಂದ ಮಿಶ್ರಿತವಾದ ಆಹಾರವನ್ನು ಸೇವಿಸಿ ನಾನು ಹೇಗಾಗಿದ್ದೇನೆ ಎಂಬುದನ್ನು ನೋಡು.

ತಸ್ಮಾತ್ ಸೋಮೋಽಪ್ಯವಿಕ್ರೇಯಃ ಪುರುಷೇಣ ವಿಪಶ್ಚಿತಾ ।
ವಿಕ್ರಯಂ ಹೀಹ ಸೋಮಸ್ಯ ಗರ್ಹಯಂತಿ ಮನೀಷಿಣಃ ॥೧೨॥

ಆದ್ದರಿಂದ ವಿವೇಕಿಯಾದ ಪುರುಷನು ಸೋಮಲತೆಯನ್ನು ಕೊಂಡುಕೊಳ್ಳಬಾರದು. ಸೋಮಲತೆಯ ವಿಕ್ರಯವನ್ನು ಜ್ಞಾನಿಗಳು ನಿಂದಿಸುತ್ತಾರೆ.

ಯೇ ಚೈನಂ ಕ್ರೀಣತೇ ರಾಜನ್ ಯೇ ಚ ವಿಕ್ರೀಣತೇ ಜನಾಃ ।
ತೇ ತು ವೈವಸ್ವತಂ ಪ್ರಾಪ್ಯ ರೌರವಂ ಯಾಂತಿ ಸರ್ವಶಃ ॥೧೩॥

ಎಲೈ ರಾಜನೇ, ಯಾರು ಸೋಮಲತೆಯನ್ನು ಮಾರುತ್ತಾರೆಯೋ ಅಥವಾ ಕೊಳ್ಳುತ್ತಾರೆಯೋ ಅವರೆಲ್ಲರೂ ಸಹ ಯಮಪಟ್ಟಣಕ್ಕೆ ಹೋಗಿ ಅಲ್ಲಿ ರೌರವ ನರಕಕ್ಕೆ ಹೋಗುತ್ತಾರೆ.

ಸೋಮಂ ತು ರಜಸಾ ಧ್ವಸ್ತಂ ವಿಕ್ರೀಯಾವಿಧಿಪೂರ್ವಕಮ್ ।
ಶ್ರೋತ್ರಿಯೋ ವಾರ್ಧುಷೀ ಭೂತ್ವಾ ಚಿರರಾತ್ರಾಯ ನಶ್ಯತಿ ।
ನರಕಂ ತ್ರಿಂಶತಂ ಪ್ರಾಪ್ಯ ಶ್ವವಿಷ್ಠಾಮುಪಜೀವತಿ ॥೧೪॥

ಗೋಧೂಳಿನಿಂದ ಮಿಶ್ರತವಾದ ಸೋಮವನ್ನು ಅವಿಧಿಪೂರ್ವಕವಾಗಿ ಮಾರಿದರೆ ಶ್ರೋತ್ರಿಯನಾದ ಬ್ರಾಹ್ಮಣನು ಬಡ್ಡಿಯ ವ್ಯವಹಾರವನ್ನು ಮಾಡುವ ವೈಶ್ಯನಾಗಿ ಜನಿಸಿ ಬಹುಕಾಲದ ನಂತರ ನಾಶವನ್ನು ಹೊಂದುತ್ತಾನೆ. ನಂತರ ಮೂವತ್ತು ರೀತಿಯ ನರಕಗಳನ್ನು ಅನುಭವಿಸಿ ನಾಯಿಯ ಮಲವನ್ನು ಉಪಜೀವಿಸುತ್ತಾನೆ.

ಶ್ವಚರ್ಯಾಮತಿಮಾನಂ ಚ ಸಖಿದಾರೇಷು ವಿಪ್ಲವಮ್ ।
ತುಲಯಾऽಧಾರಯದ್ ಧರ್ಮೋ ಹ್ಯತಿಮಾನೋऽತಿರಿಚ್ಯತೇ ॥೧೫॥

ಯಮಧರ್ಮನು ನಾಯಿಚರ್ಯೆಯನ್ನು, ದುರಭಿಮಾನವನ್ನು, ಮಿತ್ರಪತ್ನಿಯ ದೂಷಣವನ್ನು ತಕ್ಕಡಿಯಲ್ಲಿ ತೂಗಿದನು. ಆಗ ದುರಭಿಮಾನವು ಉಳಿದವಕ್ಕಿಂತ ಹೆಚ್ಚಾಗಿ ತೂಗಿತು.

ಶ್ವಾನಂ ವೈ ಪಾಪಿನಂ ಪಶ್ಯ ವಿವರ್ಣಂ ಹರಿಣಂ ಕೃಶಮ್ ।
ಅತಿಮಾನೇನ ಭೂತಾನಾಮಿಮಾಂ ಗತಿಮುಪಾಗತಮ್ ॥೧೬॥

ವಿವರ್ಣನಾಗಿ, ಬಿಳುಚಿಕೊಂಡು, ಕೃಶನಾಗಿ, ಎಲ್ಲ ಕಡೆಯಲ್ಲಿಯೂ ಓಡುತ್ತಿರುವ ಪಾಪಿಯಾದ ನನ್ನನ್ನು ನೋಡು. ನಾನು ಅತಿಯಾದ ಅಹಂಕಾರವನ್ನು ಹೊಂದಿದುದರಿಂದ ಇಂತಹ ದುರ್ಗತಿಯನ್ನು ಹೊಂದಿದೆನು. (ಶ್ವೀಗತಿವೃದ್ಧ್ಯೋಃ ಎಂದು ಧಾತುವಿರುವುದರಿಂದ ಶ್ವಾನ ಎಂದರೆ ಧಾವಿಸುವಂತಹನು ಎಂದು ಅರ್ಥ).

ಅಹಂ ವೈ ವಿಪುಲೇ ಜಾತಃ ಕುಲೇ ಧನಸಮನ್ವಿತೇ ।
ಅನ್ಯಸ್ಮಿನ್ ಜನ್ಮನಿ ವಿಭೋ ಜ್ಞಾನವಿಜ್ಞಾನಪಾರಗಃ ॥೧೭॥

ಎಲೈ ವಿಭುವೇ, ನಾನು ಇನ್ನೊಂದು ಜನ್ಮದಲ್ಲಿ ಧನಾಢ್ಯವಾದ ಇನ್ನೊಂದು ವಿಪುಲವಾದ ಕುಲದಲ್ಲಿ ಜ್ಞಾನ, ವಿಜ್ಞಾನ ಪಾರಂಗತನಾಗಿ ಜನ್ಮವೆತ್ತಿದೆನು.

ಅಭವಂ ತತ್ರ ಜಾನಾನೋ ದೋಷಾನೇತಾನಹಂ ಸದಾ ।
ಸಂರಬ್ಧ ಏವ ಭೂತಾನಾಂ ಪೃಷ್ಠಮಾಂಸಾನ್ಯಭಕ್ಷಯಮ್ ॥೧೮॥

ಈ ದೋಷಗಳೆಲ್ಲವನ್ನೂ ತಿಳಿದಿದ್ದರೂ ನಾನು ಸಿಟ್ಟಿನಿಂದ ಕೂಡಿ ಪ್ರಾಣಿಗಳ ಪೃಷ್ಠ ಮಾಂಸವನ್ನು ಭಕ್ಷಿಸಿದೆನು.

ಸೋಽಹಂ ತೇನ ಚ ವೃತ್ತೇನ ಭೋಜನೇನ ಚ ತೇನ ವೈ ।
ಇಮಾಮವಸ್ಥಾಂ ಸಂಪ್ರಾಪ್ತಃ ಪಶ್ಯ ಕಾಲಸ್ಯ ಪರ್ಯಯಮ್ ॥೧೯॥

ನಾನು ಮೊದಲನೆಯ ಜನ್ಮದ ಆ ನಡತೆಯಿಂದಲೂ ಮತ್ತು ಪೃಷ್ಠ ಮಾಂಸದ ಭಕ್ಷಣೆಯಿಂದಲೂ ಇಂತಹ ಗತಿಯನ್ನು ಪಡೆದಿದ್ದೇನೆ. ಕಾಲದ ಗತಿಯನ್ನು ನೋಡು.

ಆದೀಪ್ತಮಿವ ತೈಲಾಂತೇ ಭ್ರಮರೈರಿವ ಚಾರ್ದಿತಮ್ ।
ಧಾವಮಾನಂ ಸುಸಂರಬ್ಧಂ ಪಶ್ಯ ಮಾಂ ರಜಸಾನ್ವಿತಮ್ ॥೨೦॥

ತೈಲಪಾತ್ರೆಯಲ್ಲಿ ಬೇಯಿಸಿದಂತೆ, ಜೇನುಹುಳುಗಳಿಂದ ಕಚ್ಚಲ್ಪಟ್ಟವನಂತೆ ಎಲ್ಲ ಅಂಗವೂ ಕಪ್ಪಾಗಿ ಧೂಳಿನಿಂದ ಕೂಡಿ ಓಡುತ್ತಾ ಅತ್ಯಂತ ಕೋಪಗೊಂಡಿರುವ ನನ್ನನ್ನು ನೋಡು.

ಸ್ವಾಧ್ಯಾಯೈಸ್ತು ಮಹತ್ ಪಾಪಂ ತರಂತಿ ಗೃಹಮೇಧಿನಃ ।
ದಾನೈಃ ಪೃಥಗ್ವಿಧೈಶ್ಚಾಪಿ ಯಥಾ ಪ್ರಾಹುರ್ಮನೀಷಿಣಃ ॥೨೧॥

ಗೃಹಸ್ಥರಾದ ಬ್ರಾಹ್ಮಣರು ಸ್ವಾಧ್ಯಾಯದಿಂದಲೂ, ವಿಧವಿಧವಾದ ದಾನದಿಂದಲೂ ಎಲ್ಲ ದೊಡ್ಡಪಾಪವನ್ನೂ ಪರಿಹರಿಸಿಕೊಳ್ಳುತ್ತಾರೆಂದು ಜ್ಞಾನಿಗಳು ಹೇಳುತ್ತಾರೆ.

ತಥಾ ಪಾಪಕೃತಂ ವಿಪ್ರಮಾಶ್ರಮಸ್ಥಂ ಮಹೀಪತೇ ।
ಸರ್ವಸಂಗವಿನಿರ್ಮುಕ್ತಂ ಧಂದಾಂಸ್ಯುತ್ತಾರಯಂತ್ಯುತ ॥೨೨॥

ಎಲೈ ರಾಜನೇ, ಮೊದಲು ಪಾಪವನ್ನು ಮಾಡಿದರೂ ಆಶ್ರಮದಲ್ಲಿ ವಾಸಿಸಿ ಸರ್ವಸಂಗವನ್ನು ಪರಿತ್ಯಾಗ ಮಾಡಿದ ಬ್ರಾಹ್ಮಣನನ್ನು ವೇದವು ದಾಟಿಸುತ್ತದೆ.

ಅಹಂ ತು ಪಾಪಯೋನ್ಯಾಂ ವೈ ಪ್ರಸೂತಃ ಕ್ಷತ್ರಿಯರ್ಷಭ ।
ನಿಶ್ಚಯಂ ನಾಧಿಗಚ್ಛಾಮಿ ಕಥಂ ಮುಚ್ಯೇಯಮಿತ್ಯುತ ॥೨೩॥

ಎಲೈ ಕ್ಷತ್ರಿಯಶ್ರೇಷ್ಠನೇ, ನಾನಾದರೂ ಪಾಪಯೋನಿಯಲ್ಲಿ ಜನಿಸಿದ್ದೇನೆ. ನಾನು ಇದರಿಂದ ಹೇಗೆ ಪಾರಾದೇನು? ಎಂಬುದು ನನಗೆ ತಿಳಿಯುತ್ತಿಲ್ಲ.

ಜಾತಿಸ್ಮರತ್ವಂ ತು ಮಮ ಕೇನಚಿತ್ ಪೂರ್ವಕರ್ಮಣಾ ।
ಶುಭೇನ ಯೇನ ಮೋಕ್ಷಂ ವೈ ಪ್ರಾಪ್ತುಮಿಚ್ಛಾಮ್ಯಹಂ ನೃಪ ॥೨೪॥

ಯಾವುದೋ ಜನ್ಮದ ಪುಣ್ಯದಿಂದ ನನಗೆ ಪೂರ್ವಜನ್ಮದ ಸ್ಮರಣೆ ಇದೆ. ಎಲೈ ರಾಜನೇ, ಆ ಪುಣ್ಯದಿಂದಲೇ ನನಗೆ ಮೋಕ್ಷವನ್ನು ಪಡೆಯುವ ಇಚ್ಛೆಯುಂಟಾಗಿದೆ.

ತ್ವಮಿಮಂ ಮೇ ಪ್ರಪನ್ನಾಯ ಶರಣಂ ಪರಿಪೃಚ್ಛತಃ ।
ಚಂಡಾಲತ್ವಾತ್ ಕಥಮಹಂ ಮುಚ್ಯೇಯಮಿತಿ ಸತ್ತಮ ॥೨೫॥

ಎಲೈ ಸಜ್ಜನರಲ್ಲಿ ಶ್ರೇಷ್ಠನೇ, ಶರಣಾಗತನಾಗಿ ನಿನ್ನನ್ನು ಪ್ರಶ್ನಿಸುತ್ತಿರುವ ನನಗೆ ಸಂಶಯವನ್ನು ಪರಿಹರಿಸು. ಚಂಡಾಲಯೋನಿಯಿಂದ ನಾನು ಹೇಗೆ ನಿರ್ಮುಕ್ತನಾದೇನು ಎಂದು ಹೇಳು.

ರಾಜನ್ಯಃ

ಚಂಡಾಲ ಪ್ರತಿಜಾನೀಹಿ ಯೇನ ಮೋಕ್ಷಮವಾಪ್ಸ್ಯಸಿ ।
ಬ್ರಾಹ್ಮಣಾರ್ಥೇ ತ್ಯಜನ್ ಪ್ರಾಣಾನ್ ಗತಿಮಿಷ್ಟಾಮವಾಪ್ಸ್ಯಸಿ ॥೨೬॥

ರಾಜನ್ಯ– ಎಲೈ ಚಂಡಾಲನೇ, ಹೇಗೆ ಈ ಯೋನಿಯಿಂದ ಮೋಕ್ಷವನ್ನು ಹೊಂದುವಿ ಎಂದು ತಿಳಿ. ಬ್ರಾಹ್ಮಣನ ಸಲುವಾಗಿ ಪ್ರಾಣವನ್ನು ತ್ಯಜಿಸಿದರೆ ನಿನಗೆ ಇಷ್ಟವಾದ ಗತಿಯುಂಟಾಗುವುದು.

ದತ್ತ್ವಾ ಶರೀರಂ ಕ್ರವ್ಯಾದ್ಭ್ಯೋ ರಣಾಗ್ನೌ ದ್ವಿಜಹೇತುಕಮ್ ।
ಹುತ್ವಾ ಪ್ರಾಣಾನ್ ಪ್ರಮೋಕ್ಷಸ್ತೇ ನಾನ್ಯಥಾ ಮೋಕ್ಷಮಾಪ್ಸ್ಯಸಿ ॥೨೭॥

ಬ್ರಾಹ್ಮಣನ ಸಲುವಾಗಿ ರಣದಲ್ಲಿ ಮಾಂಸಾಹಾರಿ ಪ್ರಾಣಿಗಳಿಗೆ ಶರೀರವನ್ನು ಕೊಟ್ಟು, ಪ್ರಾಣಗಳನ್ನು ಹೋಮ ಮಾಡಿ ನಿನಗೆ ಮೋಕ್ಷವುಂಟಾಗುತ್ತದೆ. ಬೇರೆ ರೀತಿಯಲ್ಲಿ ಆಗುವುದಿಲ್ಲ.

ಭೀಷ್ಮಃ

ಇತ್ಯುಕ್ತಃ ಸ ತದಾ ರಾಜನ್ ಬ್ರಹ್ಮಸ್ವಾರ್ಥೇ ಪರಂತಪ ।
ಹುತ್ವಾ ರಣಮುಖೇ ಪ್ರಾಣಾನ್ ಗತಿಮಿಷ್ಟಾಮವಾಪ ಹ ॥೨೮॥

ತಸ್ಮಾದ್ ರಕ್ಷ್ಯಂ ತ್ವಯಾ ಪುತ್ರ ಬ್ರಹ್ಮಸ್ವಂ ಭರತರ್ಷಭ ।
ಯದೀಚ್ಛಸಿ ಮಹಾಬಾಹೋ ಶಾಶ್ವತೀಮುತ್ತಮಾಂ ಗತಿಮ್ ॥೨೯॥

ಎಲೈ ರಾಜನೇ, ಪರಂತಪನೇ, ಹೀಗೆ ಹೇಳಲ್ಪಟ್ಟ ಆ ಚಂಡಾಲನು ಬ್ರಾಹ್ಮಣನ ಸ್ವತ್ತನ್ನು ರಕ್ಷಿಸುವುದಕ್ಕೋಸ್ಕರ ತನ್ನ ಪ್ರಾಣವನ್ನು ಬಿಟ್ಟು ಇಷ್ಟವಾದ ಗತಿಯನ್ನು ಹೊಂದಿದನು. ಎಲೈ ಭರತಶ್ರೇಷ್ಠನೇ, ಪುತ್ರನೇ, ಮಹಾಬಾಹುವೇ, ಆದ್ದರಿಂದ ಶಾಶ್ವತವಾದ ಉತ್ತಮ ಗತಿಯನ್ನು ಹೊಂದಲು ಬಯಸಿದರೆ ಬ್ರಾಹ್ಮಣರ ಸ್ವತ್ತನ್ನು ನೀನು ರಕ್ಷಿಸಬೇಕು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಬ್ರಹ್ಮಸ್ವಾಪಹಾರಫಲನಿರೂಪಣಂ ನಾಮ
ಚತುಃಪಂಚಾಶದುತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಐವತ್ನಾಲ್ಕನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಐವತ್ತೈದನೆಯ ಅಧ್ಯಾಯ

ಪುಣ್ಯಫಲಕಥನೋದ್ದೇಶದಿಂದ ಶಕ್ರ-ಗೌತಮಸಂವಾದಕಥನ

ಯುಧಿಷ್ಠಿರಃ

ಏಕೋ ಲೋಕಃ ಸುಕೃತಿನಾಂ ಸರ್ವೇ ತ್ವಾಹೋ ಪಿತಾಮಹ ।
ಉತ ತತ್ರಾಪಿ ನಾನಾತ್ವಂ ತನ್ಮೇ ಬ್ರೂಹಿ ಪಿತಾಮಹ ॥೧॥

ಯುಧಿಷ್ಠಿರ– ಪಿತಾಮಹನೇ, ಪುಣ್ಯವನ್ನು ಮಾಡಿದವರಿಗೆಲ್ಲ ಒಂದೇ ಲೋಕವೋ ಅಥವಾ ಬೇರೆ ಬೇರೆ ಲೋಕಗಳಿವೆಯೋ ಎಂದು ನನಗೆ ಹೇಳು.

ಭೀಷ್ಮಃ

ಕರ್ಮಭಿಃ ಪಾರ್ಥ ನಾನಾತ್ವಂ ಲೋಕಾನಾಂ ಯಾಂತಿ ಮಾನವಾಃ ।
ಪುಣ್ಯಾನ್ ಪುಣ್ಯಕೃತೋ ಯಾಂತಿ ಪಾಪಾನ್ ಪಾಪಕೃತೋ ಜನಾಃ ॥೨॥

ಭೀಷ್ಮ– ಎಲೈ ಪಾರ್ಥನೇ, ಮಾನವರು ತನ್ನ ಕರ್ಮಗಳಿಂದ ಬೇರೆ ಬೇರೆ ಲೋಕಗಳಿಗೆ ಹೋಗುತ್ತಾರೆ. ಪುಣ್ಯವನ್ನು ಮಾಡಿದವರು ಪುಣ್ಯಲೋಕಗಳಿಗೂ, ಪಾಪವನ್ನು ಮಾಡಿದವರು ಪಾಪಲೋಕಗಳಿಗೂ ಹೋಗುತ್ತಾರೆ.

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಗೌತಮಸ್ಯ ಮುನೇಸ್ತಾತ ಸಂವಾದಂ ವಾಸವಸ್ಯ ಚ ॥೩॥

ಎಲೈ ಪ್ರೀತಿಪಾತ್ರನೇ, ಈ ವಿಷಯದಲ್ಲಿಯೂ ಗೌತಮ ಗೋತ್ರದ ಒಬ್ಬ ಬ್ರಾಹ್ಮಣನಿಗೂ ಮತ್ತು ಇಂದ್ರನಿಗೂ ನಡೆದ ಸಂವಾದ ರೂಪವಾದ ಪುರಾತನವಾದ ಈ ಇತಿಹಾಸವನ್ನು ಹೇಳುತ್ತಾರೆ.

ಬ್ರಾಹ್ಮಣೋ ಗೌತಮಃ ಕಶ್ಚಿನ್ಮೃದುರ್ದಾಂತೋ ಜಿತೇಂದ್ರಿಯಃ ।
ಮಹಾವನೇ ಹಸ್ತಿಶಿಶುಂ ಪರಿದ್ಯೂನಮಮಾತೃಕಮ್ ॥೪॥

ತಂ ದೃಷ್ಟ್ವಾ ಜೀವಯಾಮಾಸ ಸಾನುಕ್ರೋಶೋ ಧೃತವ್ರತಃ ।
ಸ ತು ದೀರ್ಘೇಣ ಕಾಲೇನ ಬಭೂವಾತಿಬಲೋ ಮಹಾನ್ ॥೫॥

ಮೃದುವೂ, ಇಂದ್ರಿಯನಿಗ್ರಹವುಳ್ಳವನೂ ಆದ ಗೌತಮ ಗೋತ್ರದ ಬ್ರಾಹ್ಮಣನೊಬ್ಬನು ದೊಡ್ಡ ಕಾಡಿನಲ್ಲಿ ತಾಯಿಯನ್ನು ಕಳೆದುಕೊಂಡು ಅನಾಥವಾದ ಒಂದು ಆನೆಯ ಮರಿಯನ್ನು ನೋಡಿ ಧೃತವ್ರತನಾದ ಅವನು ಅದರ ಮೇಲೆ ದಯೆಯನ್ನು ಹೊಂದಿ ಅದನ್ನು ಪೋಷಿಸಿ ಬದುಕಿಸಿದನು. ದೀರ್ಘಕಾಲದಲ್ಲಿ ಅದು ಅತಿ ಬಲವುಳ್ಳ ದೊಡ್ಡ ಆನೆಯಾಯಿತು.

ತಂ ಪ್ರಭಿನ್ನಂ ಮಹಾನಾಗಂ ಪ್ರಸ್ರುತಂ ಸರ್ವತೋ ಮದಮ್ ।
ಧೃತರಾಷ್ಟ್ರರೂಪೇಣ ಶಕ್ರೋ ಜಗ್ರಾಹ ಹಸ್ತಿನಮ್ ॥೬॥

ಸರ್ವತ್ರ ಮದೋದಕವನ್ನು ಸುರಿಸುವ ಆ ದೊಡ್ಡ ಆನೆಯನ್ನು ಧೃತರಾಷ್ಟ್ರನ ರೂಪವನ್ನು ಧರಿಸಿದ ಇಂದ್ರನು ಬಂದು ಹಿಡಿದುಕೊಂಡನು.

ಹ್ರಿಯಮಾಣಂ ತು ತಂ ದೃಷ್ಟ್ವಾ ಗೌತಮಃ ಸಂಶಿತವ್ರತಃ ।
ಅಭ್ಯಭಾಷತ ರಾಜಾನಂ ಧೃತರಾಷ್ಟ್ರಂ ಮಹಾತಪಾಃ ॥೭॥

ಮಹಾತಪಸ್ವಿಯೂ, ಶ್ರೇಷ್ಠವ್ರತಧಾರಿಯೂ ಆದ ಗೌತಮನು ಎಳೆದೊಯ್ಯಲ್ಪಡುತ್ತಿದ್ದ ಆನೆಯನ್ನು ನೋಡಿ ಆ ಧೃತರಾಷ್ಟ್ರ ರಾಜನನ್ನು ಕುರಿತು ಮಾತನಾಡಿದನು.

ಮಾ ಮೇ ಹಾರ್ಷೀರ್ಹಸ್ತಿನಂ ಪುತ್ರಮೇನಂ
ದುಃಖಾತ್ ಪುಷ್ಟಂ ಧೃತರಾಷ್ಟ್ರಾಕೃತಜ್ಞ ।
ಮಿತ್ರಂ ಸತಾಂ ಸಪ್ತಪದಂ ವದಂತಿ
ಮಿತ್ರದ್ರೋಹೋ ನೈವ ರಾಜನ್ ಸ್ಪೃಶೇತ್ ತ್ವಾಮ್ ॥೮॥

ಎಲೈ ರಾಜನೇ, ಧೃತರಾಷ್ಟ್ರನೇ, ಅಕೃತಜ್ಞನೇ, ಕಷ್ಟದಿಂದ ಬೆಳೆಸಿ ಪೋಷಿಸಿದ ನನ್ನ ಪುತ್ರನಾದ ಈ ಆನೆಯನ್ನು ಎಳೆದೊಯ್ಯಬೇಡ. ಸಪ್ತಪದಗಳಲ್ಲಿ ಸಜ್ಜನರು ಮಿತ್ರರಾಗುತ್ತಾರೆ ಎಂದು ಹೇಳುತ್ತಾರೆ. ನಿನ್ನನ್ನು ಮಿತ್ರದ್ರೋಹವು ತಟ್ಟದಿರಲಿ.

ಇಧ್ಮೋದಕಪ್ರದಾತಾರಂ ಶೂನ್ಯಪಾಲಕಮಾಶ್ರಮೇ ।
ವಿನೀತಮಾಚಾರ್ಯಕುಲೇ ಸುಯುಕ್ತಂ ಗುರುಕರ್ಮಣಿ ॥೯॥

ಶಿಷ್ಟಂ ದಾಂತಂ ಕೃತಜ್ಞಂ ಚ ಪ್ರಿಯಂ ಚ ಸತತಂ ಮಮ ।
ನ ಮೇ ವಿಕ್ರೋಶತೋ ರಾಜನ್ ಹರ್ತುಮರ್ಹಸಿ ಕುಂಜರಮ್ ॥೧೦॥

ನನಗೆ ಕಟ್ಟಿಗೆ ಮತ್ತು ಜಲಗಳನ್ನು ತಂದುಕೊಡುವ, ಆಶ್ರಮದಲ್ಲಿ ಯಾರೂ ಇಲ್ಲದಿದ್ದಾಗ ಆಶ್ರಮವನ್ನು ರಕ್ಷಿಸುವ, ಆಚಾರ್ಯಕುಲದಲ್ಲಿ ಶಿಕ್ಷಿತವಾದ, ದೊಡ್ಡ ಕಾರ್ಯಗಳನ್ನು ಮಾಡಲು ಚೆನ್ನಾಗಿ ಕಲಿತ, ಕೃತಜ್ಞವೂ, ಒಳ್ಳೆಯ ನಡತೆಯುಳ್ಳದೂ, ನಿಯಂತ್ರಿತವೂ ಮತ್ತು ನನಗೆ ಸತತವಾಗಿ ಪ್ರಿಯವೂ ಆದ ಈ ಆನೆಯನ್ನು ಎಲೈ ರಾಜನೇ, ನಾನು ಕಿರುಚುತ್ತಿದ್ದರೂ ನೀನು ಎಳೆದುಕೊಂಡು ಹೋಗುವುದು ಯುಕ್ತವಲ್ಲ (ಎಂದು ಹೇಳಿದನು).

ಧೃತರಾಷ್ಟ್ರಃ

ಗವಾಂ ಸಹಸ್ರಂ ಭವತೇ ದದಾಮಿ
ದಾಸೀಶತಂ ನಿಷ್ಕಶತಾನಿ ಪಂಚ ।
ಅನ್ಯಚ್ಚ ವಿತ್ತಂ ವಿವಿಧಂ ಮಹರ್ಷೇ
ಕಿಂ ಬ್ರಾಹ್ಮಣಸ್ಯೇಹ ಗಜೇನ ಕೃತ್ಯಮ್ ॥೧೧॥

ಧೃತರಾಷ್ಟ್ರ– ನಿನಗೆ ಸಹಸ್ರಗೋವುಗಳನ್ನು ಕೊಡುತ್ತೇನೆ, ನೂರು ದಾಸಿಯರನ್ನು, ಐದುನೂರು ನಿಷ್ಕಗಳನ್ನು ಕೊಡುತ್ತೇನೆ. ಎಲೈ ಮಹರ್ಷಿಯೇ, ನಿನಗೆ ಬೇಕಾದ ವಿವಿಧವಾದ ಧನವನ್ನೂ ಕೊಡುತ್ತೇನೆ. ಬ್ರಾಹ್ಮಣನಿಗೆ ಗಜದಿಂದ ಏನಾಗಬೇಕಾಗಿದೆ?

ಗೌತಮಃ

ತ್ವಾಮೇವ ಗಾವೋ ವಿವಿಧಾ ಭಜಂತು
ದಾಸ್ಯಃ ಸನಿಷ್ಕಾ ವಿವಿಧಂ ಚ ರತ್ನಮ್ ।
ಅನ್ಯಚ್ಚ ವಿತ್ತಂ ವಿವಿಧಂ ನರೇಂದ್ರ
ಕಿಂ ಬ್ರಾಹ್ಮಣಸ್ಯೇಹ ಧನೇನ ಕೃತ್ಯಮ್ ॥೧೨॥

ಗೌತಮ– ಎಲೈ ನರೇಂದ್ರನೇ, ವಿವಿಧವಾದ ಗೋವುಗಳು ನಿನ್ನ ಬಳಿಯಲ್ಲಿಯೇ ಇರಲಿ. ನಿಷ್ಕಸಹಿತವಾದ ದಾಸಿಯರು, ವಿವಿಧವಾದ ರತ್ನ, ವಿವಿಧವಾದ ಧನ ಎಲ್ಲವೂ ನಿನ್ನಲ್ಲಿಯೇ ಇರಲಿ. ಬ್ರಾಹ್ಮಣರಿಗೆ ಇಲ್ಲಿ ಧನದಿಂದ ಏನಾಗಬೇಕಾಗಿದೆ?

ಧೃತರಾಷ್ಟ್ರಃ

ಬ್ರಾಹ್ಮಣಾನಾಂ ಹಸ್ತಿಭಿರ್ನಾಸ್ತಿ ಕೃತ್ಯಂ
ರಾಜನ್ಯಾನಾಂ ನಾಗಕುಲಾನಿ ವಿಪ್ರ ।
ಸ್ವಂ ವಾಹನಂ ನಯತೋ ನಾಸ್ತ್ಯಧರ್ಮೋ
ನಾಗಶ್ರೇಷ್ಠಾದ್ ಗೌತಮಾಸ್ಮಾನ್ನಿವರ್ತ ॥೧೩॥

ಧೃತರಾಷ್ಟ್ರ– ಎಲೈ ಬ್ರಾಹ್ಮಣನೇ, ಬ್ರಾಹ್ಮಣರಿಗೆ ಆನೆಯಿಂದ ಆಗಬೇಕಾದ ಯಾವ ಕಾರ್ಯವೂ ಇಲ್ಲ. ರಾಜರಿಗೆ ಆನೆಯ ಸಮೂಹವು ಬೇಕು. ನನ್ನ ವಾಹನವನ್ನು ನಾನು ತೆಗೆದುಕೊಂಡು ಹೋಗುವುದರಲ್ಲಿ ಅಧರ್ಮವಿಲ್ಲ. ಗೌತಮನೇ, ಈ ಶ್ರೇಷ್ಠವಾದ ಆನೆಯನ್ನು ಬಿಟ್ಟು ನೀನು ಹಿಂದಿರುಗು.

ಗೌತಮಃ

ಯತ್ರ ಪ್ರೇತೋ ನಂದತಿ ಪುಣ್ಯಕರ್ಮಾ
ಯತ್ರ ಪ್ರೇತಃ ಶೋಚತಿ ಪಾಪಕರ್ಮಾ ।
ವೈವಸ್ವತಸ್ಯ ಸದನೇ ಮಹಾತ್ಮನಃ
ತತ್ರ ತ್ವಾಹಂ ಹಸ್ತಿನಂ ಯಾತಯಿಷ್ಯೇ ॥೧೪॥

ಗೌತಮ– ಎಲ್ಲಿ ಪುಣ್ಯಕರ್ಮವನ್ನು ಮಾಡಿದವನು ಸಂತೋಷಪಡುತ್ತಾನೆಯೋ, ಪಾಪಕರ್ಮವನ್ನು ಮಾಡಿದವನು ದುಃಖಪಡುತ್ತಾನೆಯೋ ಅಂತಹ ಮಹಾತ್ಮನಾದ ಯಮನ ಪಟ್ಟಣಕ್ಕೆ ಆನೆಯನ್ನು ಅಪಹರಿಸುತ್ತಿರುವ ನಿನ್ನನ್ನು ಕಳುಹಿಸುವೆನು (ಲಕ್ಷಾಲಂಕಾರ).

ಧೃತರಾಷ್ಟ್ರಃ

ಯೇ ನಿಷ್ಕ್ರಿಯಾ ನಾಸ್ತಿಕಾ ಶ್ರದ್ದಧಾನಾಃ
ಪಾಪಾತ್ಮಾನ ಇಂದ್ರಿಯಾರ್ಥೇ ನಿವಿಷ್ಟಾಃ ।
ಯಮಸ್ಯ ತೇ ಯಾತನಾಂ ಪ್ರಾಪ್ನುವಂತಿ
ಪರಂ ಗಂತಾ ಧೃತರಾಷ್ಟ್ರೋ ನ ತತ್ರ ॥೧೫॥

ಧೃತರಾಷ್ಟ್ರ– ಯಾರು ಸತ್ಕರ್ಮಗಳನ್ನು ಮಾಡುವುದಿಲ್ಲವೋ, ನಾಸ್ತಿಕರೋ, ಶ್ರದ್ಧಾರಹಿತರೋ, ಪಾಪಾತ್ಮರೋ, ಇಂದ್ರಿಯಸುಖದಲ್ಲಿ ನಿರತರೋ ಅಂತಹವರು ಯಮನ ಯಾತನೆಗಳನ್ನು ಹೊಂದುತ್ತಾರೆ. ಆದರೆ ಧೃತರಾಷ್ಟ್ರನು ಎಂದೂ ಅಲ್ಲಿಗೆ ಹೋಗುವವನಲ್ಲ.

ಗೌತಮಃ

ವೈವಸ್ವತೀ ಸಂಯಮನೀ ಜನಾನಾಂ
ಯತ್ರಾನೃತಂ ನೋಚ್ಯತೇ ಯತ್ರ ಸತ್ಯಮ್ ।
ಯತ್ರಾಬಲಾ ಬಲಿನಂ ಯಾತಯಂತಿ
ತತ್ರ ತ್ವಾಹಂ ಹಸ್ತಿನಂ ಯಾತಯಿಷ್ಯೇ ॥೧೬॥

ಗೌತಮ– ಯಮನ ಪಟ್ಟಣವಾದ, ಪಾಪಿಗಳನ್ನು ದಮನ ಮಾಡುವ, ಸಂಯಮನಿಯಲ್ಲಿ ಸುಳ್ಳು ಹೇಳಲ್ಪಡುವುದಿಲ್ಲ. ಸತ್ಯವೇ ಹೇಳಲ್ಪಡುತ್ತದೆ. ಅಲ್ಲಿ

ದುರ್ಬಲರಾದವರು ಅಪರಾಧ ಮಾಡಿದ ಬಲಿಷ್ಠರನ್ನೂ ಯಾತನೆಗೆ ಒಳಪಡಿಸುತ್ತಾರೆ. ನಾನು ಗಜಾಪಹಾರ ಮಾಡುವ ನಿನ್ನನ್ನು ಅಲ್ಲಿಗೆ ಕಳುಹಿಸಿ ಯಾತನೆ ಹೊಂದುವಂತೆ ಮಾಡುತ್ತೇನೆ.

ಧೃತರಾಷ್ಟ್ರಃ

ಜ್ಯೇಷ್ಠಾಂ ಸ್ವಸಾರಂ ಪಿತರಂ ಮಾತರಂ ಚ
ಗುರುಂ ಯಥಾऽಮಾನಯಂತಶ್ಚರಂತಿ ।
ತಥಾವಿಧಾನಾಮೇಷ ಲೋಕೋ ಮಹರ್ಷೇ
ಪರಂ ಗಂತಾ ಧೃತರಾಷ್ಟ್ರೋ ನ ತತ್ರ ॥೧೭॥

ಧೃತರಾಷ್ಟ್ರ– ಅಕ್ಕನನ್ನು, ತಂದೆಯನ್ನು, ತಾಯಿಯನ್ನು, ಗುರುಗಳನ್ನು ಗೌರವಿಸದೆ ಯಾರು ನಡೆದುಕೊಳ್ಳುತ್ತಾರೆಯೋ, ಎಲೈ ಮಹರ್ಷಿಯೇ, ಅಂತಹವರಿಗೆ ಆ ಲೋಕ ಉಂಟಾಗುತ್ತದೆ. ಆದರೆ ಧೃತರಾಷ್ಟ್ರನು ಅಲ್ಲಿಗೆ ಹೋಗುವವನಲ್ಲ.

ಗೌತಮಃ

ಮಂದಾಕಿನೀ ವೈಶ್ರವಣಸ್ಯ ರಾಜ್ಞೋ
ಮಹಾಭೋಗಾ ಭೋಗಿಜನಪ್ರವೇಶ್ಯಾ ।
ಗಂಧರ್ವಯಕ್ಷೈರಪ್ಸರೋಭಿಶ್ಚ ಜುಷ್ಟಾ
ತತ್ರ ತ್ವಾಹಂ ಹಸ್ತಿನಂ ಯಾತಯಿಷ್ಯೇ ॥೧೮॥

ಗೌತಮ– ಕುಬೇರನ ರಾಜಧಾನಿ ಮಂದಾಕಿನೀ. ಅಲ್ಲಿ ಮಹಾಭೋಗಗಳು ಇದ್ದು ಅದು ಭೋಗಿಜನರಿಂದ ಮಾತ್ರ ಪ್ರವೇಶಕ್ಕೆ ಯೋಗ್ಯವಾದುದು. ಗಂಧರ್ವ-ಯಕ್ಷರಿಂದಲೂ, ಅಪ್ಸರೆಯರಿಂದಲೂ ಸೇವಿತವಾದ ಅಂತಹ ಪುಣ್ಯಲೋಕಕ್ಕೆ ಹೋದರೂ ನಾನು ನನ್ನ ಗಜವನ್ನು ಅಪಹರಿಸುವ ನಿನಗೆ ಯಾತನೆಯನ್ನು ಉಂಟು ಮಾಡುವೆನು (ಲಕ್ಷಾಲಂಕಾರ).

ಧೃತರಾಷ್ಟ್ರಃ

ಅತಿಥಿವ್ರತಾಃ ಸುವ್ರತಾ ಯೇ ಜನಾ ವೈ
ಪ್ರತಿಶ್ರಯಂ ದದತೇ ಬ್ರಾಹ್ಮಣೇಭ್ಯಃ ।

ಶಿಷ್ಟಾಶಿನಃ ಸಂವಿಭಜ್ಯಾಶ್ರಿತಾಂಶ್ಚ
ಮಂದಾಕಿನೀಂ ತೇಽಪಿ ವಿಭೂಷಯಂತಿ ॥೧೯॥

ಧೃತರಾಷ್ಟ್ರ– ಯಾರು ಒಳ್ಳೆಯ ವ್ರತವನ್ನು ಧರಿಸಿರುತ್ತಾರೆಯೋ, ಅತಿಥಿ ನಿಯಮವನ್ನು ಹೊಂದಿರುತ್ತಾರೆಯೋ, ಬ್ರಾಹ್ಮಣರಿಗೆ ಆಶ್ರಯವನ್ನು ನೀಡುತ್ತಾರೆಯೋ, ಬ್ರಾಹ್ಮಣರು ಊಟ ಮಾಡಿದ ಮೇಲೆ ಶಿಷ್ಟಾನ್ನವನ್ನು ಆಶ್ರಿತರಿಗೂ, ಭೃತ್ಯರಿಗೂ ಕೊಟ್ಟು ಸೇವಿಸುತ್ತಾರೆಯೋ ಅಂತಹವರು ಮಂದಾಕಿನಿಯನ್ನು ಅಲಂಕರಿಸುತ್ತಾರೆ.

ಗೌತಮಃ

ಮೇರೋರಗ್ರೇ ಯದ್‌ವನಂ ಭಾತಿ ರಮ್ಯಂ
ಸುಪುಷ್ಪಿತಂ ಕಿನ್ನರಗೀತಜುಷ್ಟಮ್ ।
ಸುದರ್ಶನಾ ಯತ್ರ ಜಂಬೂರ್ವಿಶಾಲಾ
ತತ್ರ ತ್ವಾಹಂ ಹಸ್ತಿನಂ ಯಾಚಯಿಷ್ಯೇ ॥೨೦॥

ಗೌತಮ– ಮೇರುಪರ್ವತದ ಶಿಖರದಲ್ಲಿ ಯಾವ ಸುಪುಷ್ಪಿತವಾದ ಕಿನ್ನರ ಗೀತೆಯಿಂದ ಯುಕ್ತವಾದ ವನವಿದೆಯೋ, ನೋಡಲು ಮನೋಹರವಾದ ವಿಶಾಲವಾದ ಜಂಬೂವೃಕ್ಷವಿದೆಯೋ ಅಲ್ಲಿ ನಾನು ಗಜವನ್ನು ಅಪಹರಿಸುವ ನಿನ್ನನ್ನು ಬೇಡುವಂತೆ ಮಾಡುವೆನು.

ಧೃತರಾಷ್ಟ್ರಃ

ಯೇ ಬ್ರಾಹ್ಮಣಾ ಮೃದವಃ ಸತ್ಯಶೀಲಾ
ಬಹುಶ್ರುತಾಃ ಸರ್ವಭೂತಾಭಿರಾಮಾಃ ।
ಯೇಽಧೀಯಂತೇ ಸೇತಿಹಾಸಂ ಪುರಾಣಂ
ಮಧ್ವಾಹುತ್ಯಾ ಜುಹ್ವತಿ ಚ ದ್ವಿಜೇಂದ್ರಾಃ ॥೨೧॥

ತಥಾವಿಧಾನಾಮೇಷ ಲೋಕೋ ಮಹರ್ಷೇ
ಪರಂ ಗಂತಾ ಧೃತರಾಷ್ಟ್ರೋ ನ ತತ್ರ ।
ಯದ್ ವಿದ್ಯತೇ ವಿದಿತಂ ಸ್ಥಾನಮಸ್ತಿ
ತದ್ ಬ್ರೂಹಿ ತ್ವಂ ತ್ವರಿತೋ ಹ್ಯೇಷ ಯಾಮಿ ॥೨೨॥

ಧೃತರಾಷ್ಟ್ರ– ಮೃದುವೂ, ಸತ್ಯಶೀಲರೂ, ಬಹುವಿದ್ಯಾಸಂಪನ್ನರೂ, ಸರ್ವಭೂತ ಹಿತರೂ ಆದ ಯಾವ ಬ್ರಾಹ್ಮಣರಿದ್ದಾರೆಯೋ, ಯಾರು ಇತಿಹಾಸ-ಪುರಾಣಗಳನ್ನು ಅಧ್ಯಯನ ಮಾಡುತ್ತಾರೆಯೋ, ಯಾವ ದ್ವಿಜಶ್ರೇಷ್ಠರು ಮಧುರವಾದ ಆಹುತಿಗಳಿಂದ ಅಗ್ನಿಯಲ್ಲಿ ಹೋಮವನ್ನು ಮಾಡುತ್ತಾರೆಯೋ ಎಲೈ ಮಹರ್ಷಿಯೇ, ಅಂತಹವರಿಗೆ ಮಾತ್ರ ನೀನು ಹೇಳುವ ಲೋಕವು ಪ್ರಾಪ್ತವಾಗುತ್ತದೆ. ಆದರೆ ಧೃತರಾಷ್ಟ್ರನು ಅಲ್ಲಿಗೆ ಹೋಗುವವನಲ್ಲ. ನನಗೆ ಯಾವ ಕ್ಲಪ್ತವಾದ ಸ್ಥಾನವಿದೆ ಎಂದು ಹೇಳು. ಅಲ್ಲಿಗೆ ನಾನು ಶೀಘ್ರವಾಗಿ ಹೋಗುತ್ತೇನೆ.

ಗೌತಮಃ

ಸುಪುಷ್ಪಿತಂ ಕಿನ್ನರರಾಜಜುಷ್ಟಂ
ಪ್ರಿಯಂ ವನಂ ನಂದನಂ ನಾರದಸ್ಯ ।
ಗಂಧರ್ವಾಣಾಮಪ್ಸರಸಾಂ ಚ ಸದ್ಮ
ತತ್ರ ತ್ವಾಹಂ ಹಸ್ತಿನಂ ಯಾತಯಿಷ್ಯೇ ॥೨೩॥

ಗೌತಮ– ಸುಪುಷ್ಪಿತವಾದ ಶ್ರೇಷ್ಠ ಕಿನ್ನರರಿಂದ ಸಹಿತವಾದ, ನಾರದರಿಗೆ ಪ್ರಿಯವಾದ ನಂದನವನವಿದೆ. ಅಲ್ಲಿ ಗಂಧರ್ವರ ಮತ್ತು ಅಪ್ಸರೆಯರ ಭವನಗಳಿವೆ. ಅಲ್ಲಿ ಆನೆಯ ಅಪಹಾರಕನಾದ ನಿನ್ನನ್ನು ಯಾತನೆಗೆ ಗುರಿ ಮಾಡುತ್ತೇನೆ.

ಧೃತರಾಷ್ಟ್ರಃ

ಯೇ ನೃತ್ತಗೀತೇ ಕುಶಲಾ ಜನಾಃ ಸದಾ
ಹ್ಯಯಾಚಮಾನಾಃ ಸಹಿತಾಶ್ಚರಂತಿ ।
ತಥಾವಿಧಾನಾಮೇಷ ಲೋಕೋ ಮಹರ್ಷೇ
ಪರಂ ಗಂತಾ ಧೃತರಾಷ್ಟ್ರೋ ನ ತತ್ರ ॥೨೪॥

ಧೃತರಾಷ್ಟ್ರ– ಯಾರು ನೃತ್ಯಗೀತೆಗಳಲ್ಲಿ ಕುಶಲರೋ, ಸದಾ ಯಾಚನೆಯನ್ನು ಮಾಡದೆ ಸಂಚರಿಸುತ್ತಾರೆಯೋ, ಎಲೈ ಮಹರ್ಷಿಯೇ, ಅಂತಹವರಿಗೆ ಆ ಲೋಕಗಳು ದೊರೆಯುತ್ತವೆ. ಆದರೆ ಧೃತರಾಷ್ಟ್ರನು ಅಲ್ಲಿಗೆ ಹೋಗುವವನಲ್ಲ.

ಗೌತಮಃ

ಯತ್ರೋತ್ತರಾಃ ಕುರವೋ ಭಾಂತಿ ರಮ್ಯಾ
ದೇವೈಃ ಸಾರ್ಧಂ ಮೋದಮಾನಾ ನರೇಂದ್ರ ।
ಯತ್ರಾಗ್ನಿಯೌನಾಶ್ಚ ವಸಂತಿ ವಿಪ್ರಾ
ಹ್ಯಯೋನಯಃ ಪರ್ವತಯೋನಯಶ್ಚ ॥೨೫॥

ಯತ್ರ ಶಕ್ರೋ ವರ್ಷತಿ ಸರ್ವಕಾಮಾನ್
ಯತ್ರ ಸ್ತ್ರಿಯಃ ಕಾಮಚಾರಾಶ್ಚರಂತಿ ।
ಯತ್ರ ಚೇರ್ಷ್ಯಾ ನಾಸ್ತಿ ನಾರೀಷು ಪುಂಸಾಂ
ತತ್ರ ತ್ವಾಹಂ ಹಸ್ತಿನಂ ಯಾತಯಿಷ್ಯೇ ॥೨೬॥

ಗೌತಮ– ಎಲೈ ನರೇಂದ್ರನೇ, ಮನೋಹರವಾದ ಉತ್ತರ ಕುರುದೇಶದಲ್ಲಿ ಜನರು ದೇವತೆಗಳ ಜೊತೆಯಲ್ಲಿ ಸಂತೋಷಪಡುತ್ತಾ ಶೋಭಿಸುತ್ತಾರೆ. ಅಲ್ಲಿ ಅಗ್ನಿಯೋನಿಗಳೂ, ಅಯೋನಿಜರೂ ಮತ್ತು ಪರ್ವತಯೋನಿಗಳೂ ಆದ ಪುರುಷರಿದ್ದಾರೆ. ಅಲ್ಲಿ ಇಂದ್ರನು ಎಲ್ಲ ಕಾಮಗಳನ್ನೂ ಸುರಿಸುತ್ತಾನೆ. ಸ್ತ್ರೀಯರು ಕಾಮಚಾರರಾಗಿ ಸಂಚರಿಸುತ್ತಾರೆ. ಸ್ತ್ರೀಯರಲ್ಲಿ ಪುರುಷರಿಗೆ ಅಲ್ಲಿ ಅಸೂಯೆ ಇಲ್ಲ. ಅಂತಹ ಸ್ಥಾನದಲ್ಲಿ ಗಜಾಪಹಾರಕನಾದ ನಿನ್ನನ್ನು ಯಾತನೆಗೆ ಗುರಿ ಮಾಡುವೆನು.

ಧೃತರಾಷ್ಟ್ರಃ

ಯೇ ಸರ್ವಭೂತೇಷು ನಿವೃತ್ತಕಾಮಾ
ಅಮಾಂಸಾದಾ ನ್ಯಸ್ತದಂಡಾಶ್ಚರಂತಿ ।
ನ ಹಿಂಸಂತಿ ಸ್ಥಾವರಂ ಜಂಗಮಂ ಚ
ಯೇ ಭೂತಾನಾಂ ಸರ್ವಭೂತಾತ್ಮಭೂತಾಃ ॥೨೭॥

ನಿರಾಶಿಷೋ ನಿರ್ಮಮಾ ವೀತರಾಗಾ
ಲಾಭಾಲಾಭೇ ಯೇ ಸಮಾ ಸತ್ಯಸಂಧಾಃ ।
ತಥಾವಿಧಾನಾಮೇಷ ಲೋಕೋ ಮಹರ್ಷೇ
ಪರಂ ಗಂತಾ ಧೃತರಾಷ್ಟ್ರೋ ನ ತತ್ರ ॥೨೮॥

ಧೃತರಾಷ್ಟ್ರ– ಯಾರು ಮಾಂಸಭಕ್ಷಣೆ ಮಾಡದ ಕಾರಣದಿಂದ ಸರ್ವ ಭೂತಗಳಲ್ಲಿಯೂ ದಂಡ ಪ್ರಹಾರವನ್ನು ಮಾಡದೆ ಆಸೆಯನ್ನು ತೊರೆದಿರುತ್ತಾರೆಯೋ, ಸ್ಥಾವರ-ಜಂಗಮವಾದ ಪ್ರಾಣಿಯನ್ನು ಹಿಂಸಿಸುವುದಿಲ್ಲವೋ, ಯಾರು ಸರ್ವಭೂತಾಂತರ್ಯಾಮಿಯಾದ ಪರಮಾತ್ಮನನ್ನೇ ಮನಸ್ಸಿನಲ್ಲಿ ಚಿಂತಿಸುತ್ತಾರೆಯೋ, ಎಲ್ಲಾ ಆಸೆಗಳನ್ನೂ, ಅಹಂಕಾರಗಳನ್ನೂ ಮತ್ತು ರಾಗಗಳನ್ನು ತೊರೆದಿರುತ್ತಾರೆಯೋ, ಲಾಭಾಲಾಭಗಳಲ್ಲಿ ಸಮರಾಗಿ ಸತ್ಯಸಂಧರಾಗಿರುತ್ತಾರೆಯೋ ಅಂತಹವರಿಗೆ ಆ ಲೋಕಗಳು. ಎಲೈ ಮಹರ್ಷಿಯೇ, ಆದರೆ ಧೃತರಾಷ್ಟ್ರನು ಅಲ್ಲಿಗೆ ಹೋಗುವವನಲ್ಲ.

ಗೌತಮಃ

ತತಃ ಪರಂ ಭಾಂತಿ ಲೋಕಾಃ ಸನಾತನಾಃ
ಸುಪುಣ್ಯಗಂಧಾ ನಿರ್ಮಲಾ ವೀತಶೋಕಾಃ ।
ಸೋಮಸ್ಯ ರಾಜ್ಞಃ ಸದನೇ ಮಹಾತ್ಮನಃ
ತತ್ರ ತ್ವಾಹಂ ಹಸ್ತಿನಂ ಯಾತಯಿಷ್ಯೇ ॥೨೯॥

ಗೌತಮ– ಓಷಧಿಗಳ ರಾಜನಾದ ಮಹಾತ್ಮನಾದ ಚಂದ್ರನ ಲೋಕವು ಪುಣ್ಯಗಂಧದಿಂದ ಕೂಡಿ ನಿರ್ಮಲವೂ, ಶೋಕರಹಿತವೂ ಆಗಿದ್ದು ಹಿಂದೆ ಹೇಳಿದ ಲೋಕಕ್ಕಿಂತ ಶ್ರೇಷ್ಠವಾದ ಲೋಕವಾಗಿ ಕಂಗೊಳಿಸುತ್ತದೆ. ಅಲ್ಲಿ ನಾನು ನಿನ್ನನ್ನು ಯಾತನೆಗೆ ಗುರಿ ಮಾಡುವೆನು.

ಧೃತರಾಷ್ಟ್ರಃ

ಯೇ ದಾನಶೀಲಾ ನ ಪ್ರತಿಗ್ರಹ್ಣಂತೇ ಸದಾ
ನ ಚಾಪ್ಯರ್ಥಾನಾದದತೇ ಪರೇಭ್ಯಃ ।
ಯೇಷಾಮದೇಯಮರ್ಹತೇ ನಾಸ್ತಿ ಕಿಂಚಿತ್
ಸರ್ವಾತಿಥ್ಯಾಃ ಸುಪ್ರಸಾದಾ ಜನಾಶ್ಚ ॥೩೦॥

ಯೇ ಕ್ಷಂತಾರೋ ನಾಭಿಜಲ್ಪಂತಿ ಚಾನ್ಯಾನ್
ಸತಾಂ ಭೂತ್ವಾ ಸತತಂ ಪುಣ್ಯಶೀಲಾಃ ।
ತಥಾವಿಧಾನಾಮೇಷ ಲೋಕೋ ಮಹರ್ಷೇ
ಪರಂ ಗಂತಾ ಧೃತರಾಷ್ಟ್ರೋ ನ ತತ್ರ ॥೩೧॥

ಧೃತರಾಷ್ಟ್ರ- ಯಾರು ದಾನಶೀಲರೋ, ಪ್ರತಿಗ್ರಹವನ್ನು ಮಾಡುವುದಿಲ್ಲವೋ, ಇನ್ನೊಬ್ಬರಿಂದ ಯಾವ ವಸ್ತುವನ್ನೂ ಸ್ವೀಕರಿಸುವುದಿಲ್ಲವೋ, ಯಾರಿಗೆ ಯೋಗ್ಯರಿಗೆ ಕೊಡಲಾರದ ವಸ್ತುವು ಯಾವುದೂ ಇರುವುದಿಲ್ಲವೋ, ಯಾರು ಸರ್ವಾತಿಥಿಯಾಗಿ ಪ್ರಸನ್ನವಾದ ಮನಸ್ಸಿನಿಂದ ಕೂಡಿರುತ್ತಾರೆಯೋ, ಯಾರು ಕ್ಷಮಾಶೀಲರಾಗಿದ್ದು ಇನ್ನೊಬ್ಬರನ್ನು ನಿಂದಿಸುವುದಿಲ್ಲವೋ, ಸತತವಾಗಿ ಪುಣ್ಯಶೀಲರಾಗಿರುತ್ತಾರೆಯೋ ಅಂತಹವರಿಗೆ ಆ ಲೋಕಗಳು. ಆದರೆ ಧೃತರಾಷ್ಟ್ರನು ಅಲ್ಲಿಗೆ ಹೋಗುವವನಲ್ಲ.

ಗೌತಮಃ

ತತಃ ಪರಂ ಭಾಂತಿ ಲೋಕಾಃ ಸನಾತನಾ
ವಿರಜಸೋ ವಿತಮಸ್ಕಾ ವಿಶೋಕಾಃ ।
ಆದಿತ್ಯಸ್ಯ ಸುಮಹಾಂತಃ ಸುವೃತ್ತಾಃ
ತತ್ರ ತ್ವಾಹಂ ಹಸ್ತಿನಂ ಯಾತಯಿಷ್ಯೇ ॥೩೨॥

ಗೌತಮ- ಅದರಿಂದಾಚೆಗೆ ಸನಾತನವಾದ ರಜೋರಹಿತವಾದ, ತಮೋರಹಿತವಾದ, ಶೋಕರಹಿತವಾದ ಸೂರ್ಯನ ಬಹಳ ದೊಡ್ಡದಾದ ಮನೋಹರವಾದ ಲೋಕಗಳು ಕಂಗೊಳಿಸುತ್ತವೆ. ಅಲ್ಲಿ ನಾನು ನಿನ್ನನ್ನು ಯಾತನೆಗೆ ಗುರಿ ಮಾಡುವೆನು.

ಧೃತರಾಷ್ಟ್ರಃ

ಸ್ವಾಧ್ಯಾಯಶೀಲಾ ಗುರುಶುಶ್ರೂಷಣೇ ರತಾಃ
ತಪಸ್ವಿನಃ ಸುವ್ರತಾಃ ಸತ್ಯಸಂಧಾಃ ।
ಆಚಾರ್ಯಾಣಾಮಪ್ರತಿಕೂಲಭಾಷಿಣೋ
ನಿತ್ಯೋತ್ಥಿತಾ ಗುರುಕರ್ಮಸ್ವಚೋದ್ಯಾಃ ॥೩೩॥

ತಥಾವಿಧಾನಾಮೇಷ ಲೋಕೋ ಮಹರ್ಷೇ
ವಿಶುದ್ಧಾನಾಂ ಭಾವಿತವಾಙ್ಮತೀನಾಮ್ ।
ಸತ್ಯೇ ಸ್ಥಿತಾನಾಂ ವೇದವಿದಾಂ ಮಹಾತ್ಮನಾಂ
ಪರಂ ಗಂತಾ ಧೃತರಾಷ್ಟ್ರೋ ನ ತತ್ರ ॥೩೪॥

ಧೃತರಾಷ್ಟ್ರ– ಸ್ವಾಧ್ಯಾಯಶೀಲರೂ, ಗುರುಸೇವೆಯಲ್ಲಿ ನಿರತರಾದವರೂ, ತಪಸ್ವಿಗಳೂ, ಒಳ್ಳೆಯ ವ್ರತವನ್ನು ಧರಿಸಿದವರೂ, ಸತ್ಯಸಂಧರೂ, ಆಚಾರ್ಯರಿಗೆ ವಿರುದ್ಧವಾಗಿ ಮಾತನಾಡದವರೂ, ಗುರುಗಳ ಕಾರ್ಯಗಳಲ್ಲಿ ಪ್ರಚೋದಿಸಲ್ಪಡದೆಯೂ ನಿತ್ಯವೂ ಉದ್ಯುಕ್ತರಾಗಿರುವವರೂ ಆದ ವಿಶುದ್ಧರೂ, ವಾಕ್ ಮತ್ತು ಬುದ್ಧಿಗಳನ್ನು ಶೋಧಿಸಿದವರೂ, ಸತ್ಯದಲ್ಲೇ ಇರುವವರೂ, ವೇದಜ್ಞರೂ, ಮಹಾತ್ಮರೂ ಆದವರಿಗೆ ಮಾತ್ರ, ಎಲೈ ಮಹರ್ಷಿಯೇ, ಆ ಲೋಕಗಳು ದೊರೆಯುತ್ತವೆ. ಆದರೆ ಧೃತರಾಷ್ಟ್ರನು ಅಲ್ಲಿಗೆ ಹೋಗುವವನಲ್ಲ.

ಗೌತಮಃ

ತತಃ ಪರೇ ಭಾಂತಿ ಲೋಕಾಃ ಸನಾತನಾಃ
ಸುಪುಣ್ಯಗಂಧಾ ವಿರಜಾ ವಿಶೋಕಾಃ ।
ವರುಣಸ್ಯ ರಾಜ್ಞಃ ಸದನೇ ಮಹಾತ್ಮನಃ
ತತ್ರ ತ್ವಾಹಂ ಹಸ್ತಿನಂ ಯಾಚಯಿಷ್ಯೇ ॥೩೫॥

ಗೌತಮ– ಅಲ್ಲಿಂದಾಚೆಗೆ ಶೋಕರಹಿತವೂ, ರಜೋರಹಿತವೂ, ಪುಣ್ಯಗಂಧ ಯುಕ್ತವೂ ಆದ ಮಹಾತ್ಮನಾದ ರಾಜನಾದ ವರುಣನ ಸನಾತನವಾದ ಲೋಕಗಳು ಪ್ರಕಾಶಿಸುತ್ತವೆ. ಅಲ್ಲಿ ನಾನು ನಿನ್ನನ್ನು ಯಾಚಿಸುವಂತೆ ಮಾಡುವೆನು.

ಧೃತರಾಷ್ಟ್ರಃ

ಚಾತುರ್ಮಾಸ್ಯೇ ಯೇ ಯಜಂತೇ ಜನಾಃ ಸದಾ
ತಥೇಷ್ಟೀನಾಂ ದಶಶತಂ ಪ್ರಾಪ್ನುವಂತಿ ।
ಯೇ ಚಾಗ್ನಿಹೋತ್ರಂ ಜುಹ್ವತಿ ಶ್ರದ್ದಧಾನಾ
ಯಥಾನ್ಯಾಯಂ ತ್ರೀಣಿ ವರ್ಷಾಣಿ ವಿಪ್ರಾಃ ॥೩೬॥

ಸ್ವದಾರಿಣಾಂ ಧರ್ಮಧುರೇ ಮಹಾತ್ಮನಾಂ
ಯಥೋಚಿತೇ ವರ್ತ್ಮನಿ ಸುಸ್ಥಿತಾನಾಮ್ ।
ಧರ್ಮಾತ್ಮನಾಮುದ್ವಹತಾಂ ಗತಿಂ ತಾಂ
ಪರಂ ಗಂತಾ ಧೃತರಾಷ್ಟ್ರೋ ನ ತತ್ರ ॥೩೭॥

ಧೃತರಾಷ್ಟ್ರ- ಯಾರು ಚಾತುರ್ಮಾಸ್ಯ ಯಾಗಗಳನ್ನು ಮಾಡುತ್ತಾರೆಯೋ, ಸಾವಿರ ಇಷ್ಟಿಗಳನ್ನು ಮಾಡುತ್ತಾರೆಯೋ, ಯಾವ ವಿಪ್ರರು ಶಾಸ್ತ್ರೋಕ್ತವಾದ ರೀತಿಯಿಂದ ಮೂರು ವರ್ಷಗಳ ಕಾಲ ಶ್ರದ್ಧೆಯಿಂದ ಅಗ್ನಿಯಲ್ಲಿ ಹೋಮವನ್ನು ಮಾಡುತ್ತಾರೆಯೋ, ತಮ್ಮ ಪತ್ನಿಯಲ್ಲಿ ನಿರತರಾಗಿರುತ್ತಾರೆಯೋ, ಯಥೋಚಿತವಾದ ಧರ್ಮಮಾರ್ಗದಲ್ಲಿ ಚೆನ್ನಾಗಿ ಪ್ರತಿಷ್ಠಿತರಾಗಿರುತ್ತಾರೆಯೋ, ಧರ್ಮಾತ್ಮರಾಗಿ ಶ್ರೇಷ್ಠಗತಿಯನ್ನು ಹೊಂದುತ್ತಾರೆಯೋ ಅಂತಹ ಸ್ಥಾನವನ್ನು ಧೃತರಾಷ್ಟ್ರನು ಹೊಂದುವುದಿಲ್ಲ.

ಗೌತಮಃ

ಇಂದ್ರಸ್ಯ ಲೋಕಾ ವಿರಜಾ ವಿಶೋಕಾ
ದುರನ್ವಯಾಃ ಕಾಂಕ್ಷಿತಾ ಮಾನವಾನಾಮ್ ।
ತಸ್ಯಾಹಂ ತೇ ಭವನೇ ಭೂರಿತೇಜಸೋ
ರಾಜನ್ನಿಮಂ ಹಸ್ತಿನಂ ಯಾತಯಿಷ್ಯೇ ॥೩೮॥

ಗೌತಮ- ಇಂದ್ರನ ಲೋಕವು ರಜೋರಹಿತವಾಗಿ, ಶೋಕರಹಿತವಾಗಿ, ಹೋಗಲು ಅಸಾಧ್ಯವಾಗಿ, ಮಾನವರಿಂದ ಕಾಂಕ್ಷಿತವಾಗುತ್ತದೆ. ರಾಜನೇ, ಅಲ್ಲಿ ಭೂರಿ ತೇಜಸ್ವಿಯಾದ ಇಂದ್ರನ ಮನೆಯಲ್ಲಿ ಗಜಚೋರನಾದ ನಿನ್ನನ್ನು ಯಾತನೆಗೆ ಗುರಿ ಮಾಡುತ್ತೇನೆ.

ಧೃತರಾಷ್ಟ್ರಃ

ಶತವರ್ಷಜೀವೀ ಯಶ್ಚ ಶೂರೋ ಮನುಷ್ಯೋ
ವೇದಾಧ್ಯಾಯೀ ಯಶ್ಚ ಯಜ್ವಾಽಪ್ರಮತ್ತಃ ।
ಏತೇ ಸರ್ವೇ ಶಕ್ರಲೋಕಂ ವ್ರಜಂತಿ
ಪರಂ ಗಂತಾ ಧೃತರಾಷ್ಟ್ರೋ ನ ತತ್ರ ॥೩೯॥

ಧೃತರಾಷ್ಟ್ರ- ನೂರು ವರ್ಷ ಆಯುಸ್ಸುಳ್ಳವನೂ, ಶೂರನಾದವನೂ, ವೇದಾಧ್ಯಯನ ಮಾಡುವವನೂ, ಯಾಗವನ್ನು ಮಾಡುವವನೂ, ಪ್ರಮಾದರಹಿತನಾದವನೂ, ಇಂತಹವರೆಲ್ಲರೂ ಇಂದ್ರಲೋಕಕ್ಕೆ ಹೋಗುತ್ತಾರೆ. ಆದರೆ ಧೃತರಾಷ್ಟ್ರನು ಅಲ್ಲಿಗೆ ಹೋಗುವವನಲ್ಲ.

ಗೌತಮಃ

ಪ್ರಾಜಾಪತ್ಯಾಃ ಸಂತಿ ಲೋಕಾ ಮಹಾಂತೋ
ನಾಕಸ್ಯ ಪೃಷ್ಠೇ ಪುಷ್ಕಳಾ ವೀತಶೋಕಾಃ ।
ಮನೀಷಿತಾಃ ಸರ್ವಲೋಕೋದ್ಭವಾನಾಂ
ತತ್ರ ತ್ವಾಹಂ ಹಸ್ತಿನಂ ಯಾಚಯಿಷ್ಯೇ ॥೪೦॥

ಗೌತಮ– ಪ್ರಜಾಪತಿಯ ಶ್ರೇಷ್ಠವಾದ, ಪುಷ್ಕಳವಾದ, ಶೋಕರಹಿತವಾದ ಲೋಕಗಳು ಸ್ವರ್ಗದ ಮೇಲ್ಭಾಗದಲ್ಲಿವೆ. ಸರ್ವಲೋಕದ ಉತ್ಪತ್ತಿಗೆ ಕಾರಣರಾದ ದೇವತೆಗಳಿಂದ ಅವು ಕಾಂಕ್ಷಿತವಾಗಿವೆ. ಅಲ್ಲಿ ನಾನು ನಿನ್ನನ್ನು ಯಾಚನೆ ಮಾಡುವಂತೆ ಮಾಡುತ್ತೇನೆ.

ಧೃತರಾಷ್ಟ್ರಃ

ಯೇ ರಾಜಾನೋ ರಾಜಸೂಯಾಭಿಷಿಕ್ತಾ
ಧರ್ಮಾತ್ಮಾನೋ ರಕ್ಷಿತಾರಃ ಪ್ರಜಾನಾಮ್ ।
ಯೇ ಚಾಶ್ವಮೇಧಾವಭೃಥಾಪ್ಲುತಾಂಗಾಃ
ತೇಷಾಂ ಲೋಕಾ ಧೃತರಾಷ್ಟ್ರ ನ ತತ್ರ ॥೪೧॥

ಧೃತರಾಷ್ಟ್ರ– ಅವು ರಾಜಸೂಯ ಯಾಗವನ್ನು ಮಾಡಿ ಅವಭೃಥಸ್ನಾತರಾದ ರಾಜರು, ಪ್ರಜೆಗಳನ್ನು ಧರ್ಮದಿಂದ ರಕ್ಷಿಸುವಂತಹ ರಾಜರು, ಅಶ್ವಮೇಧ ಯಾಗವನ್ನು ಮಾಡಿ ಅವಭೃಥ ಸ್ನಾನವನ್ನು ಮಾಡಿದವರೂ ಅದವರ ಲೋಕ. ಆದರೆ ಧೃತರಾಷ್ಟ್ರನು ಅಲ್ಲಿಗೆ ಹೋಗುವವನಲ್ಲ.

ಗೌತಮಃ

ತತಃ ಪರಂ ಭಾಂತಿ ಲೋಕಾಃ ಸನಾತನಾಃ
ಸುಪುಣ್ಯಗಂಧಾ ವಿರಜಾ ವೀತಶೋಕಾಃ ।
ತಸ್ಮಿನ್ನಹಂ ದುರ್ಲಭೇ ತ್ವಾಪ್ರಧೃಷ್ಯೇ
ಗವಾಂ ಲೋಕೇ ಹಸ್ತಿನಂ ಯಾಚಯಿಷ್ಯೇ ॥೪೨॥

ಗೌತಮ– ಅದರಿಂದ ಆಚೆಗೆ ಪುಣ್ಯಗಂಧವನ್ನು ಹೊಂದಿದ ರಜೋರಹಿತವಾದ,, ಶೋಕರಹಿತವಾದ, ದುರ್ಲಭವಾದ, ನಾಶ ಮಾಡಲು ಅಸಾಧ್ಯವಾದ, ಸನಾತನವಾದ ಗೋಲೋಕಗಳಿವೆ. ಅಲ್ಲಿ ನಾನು ನಿನ್ನನ್ನು ಯಾಚನೆ ಮಾಡುವಂತೆ ಮಾಡುವೆನು.

ಧೃತರಾಷ್ಟ್ರಃ

ಯೋ ಗೋಸಹಸ್ರೀ ಶತದಃ ಸಮಾಂ ಸಮಾಂ
ಯೋ ಗೋಶತೀ ದಶ ದದ್ಯಾತ್ ಸ್ವಶಕ್ತ್ಯಾ ।
ತಥಾ ದಶಘ್ನೋ ಯಶ್ಚ ದದ್ಯಾದಿಹೈಕಾಂ
ಪಂಚಘ್ನೋ ವಾ ದಾನಶೀಲಸ್ತಥೈಕಾಮ್ ॥೪೩॥

ಯೇ ಜೀರ್ಯಂತೇ ಬ್ರಹ್ಮಚರ್ಯೇಣ ವಿಪ್ರಾ
ಬ್ರಾಹ್ಮೀಂ ವಾಚಂ ಪರಿರಕ್ಷಂತಿ ಚೈವ ।
ಮನಸ್ವಿನಸ್ತೀರ್ಥಯಾತ್ರಾಪರಾಯಣಾಃ
ತೇ ತತ್ರ ಮೋದಂತಿ ಗವಾಂ ವಿಮಾನೇ ॥೪೪॥

ಧೃತರಾಷ್ಟ್ರ– ಗೋಸಹಸ್ರ ಸ್ವಾಮಿಯಾದ ಯಾವನು ಪ್ರತಿ ವರ್ಷವೂ ನೂರು ಗೋದಾನವನ್ನು ಮಾಡುತ್ತಾನೆಯೋ, ನೂರು ಗೋವನ್ನು ಹೊಂದಿದ ಯಾವನು ತನ್ನ ಶಕ್ತಿಗೆ ಅನುಗುಣವಾಗಿ ಹತ್ತು ಗೋವುಗಳನ್ನು ದಾನ ಮಾಡುತ್ತಾನೆಯೋ, ಹಾಗೆಯೇ ಹತ್ತು ಗೋವನ್ನು ಹೊಂದಿದವನು ಒಂದು ಗೋವನ್ನು ದಾನ ಮಾಡುತ್ತಾನೆಯೋ, ಹಾಗೆಯೇ ಐದು ಗೋವನ್ನು ಹೊಂದಿದವನು ದಾನ ಶೀಲನಾಗಿ ಒಂದು ಗೋವನ್ನು ದಾನ ಮಾಡುತ್ತಾನೆಯೋ ಮತ್ತು ಯಾವ ವಿಪ್ರನು ಬ್ರಹ್ಮಚರ್ಯದಿಂದಲೇ ಶರೀರವನ್ನು ಸವೆಸುತ್ತಾರೆಯೋ, ವೇದವಾಣಿಯನ್ನು ರಕ್ಷಿಸುತ್ತಾರೆಯೋ, ಧೈರ್ಯಶಾಲಿಯಾಗಿ ತೀರ್ಥಯಾತ್ರಾ ಪರಾಯಣರಾಗಿರುತ್ತಾರೆಯೋ ಅಂತಹವರು ಗೋಲೋಕದಲ್ಲಿ ವಿಮಾನದಲ್ಲಿ ಸಂತೋಷಪಡುತ್ತಾರೆ.

ಪ್ರಭಾಸಂ ಮಾನಸಂ ಪುಣ್ಯಂ ಪುಷ್ಕರಾಣಿ ಮಹತ್ಸರಃ ।
ಪುಣ್ಯಂ ಚ ನೈಮಿಶಂ ತೀರ್ಥಂ ಬಾಹುದಾಂ ನರ್ಮದಾಂ ತದಾ ॥೪೫॥

ಗಯಾಂ ಗಯಶಿರಶ್ಚೈವ ವಿಪಾಶಾಂ ಸ್ಥೂಲವಾಲುಕಾಮ್ ।
ಕೃಷ್ಣಾಂ ಗಂಗಾಂ ವೃದ್ಧಗಂಗಾಂ ಮಹಾಹ್ರದಮಥಾಪಿ ಚ ॥೪೬॥

ಪ್ರಭಾಸ, ಪುಣ್ಯವಾದ ಮಾನಸ ಸರೋವರ, ಪುಷ್ಕರಗಳು, ಮಹಾಸರೋವರ, ಪುಣ್ಯವಾದ ನೈಮಿಶ ತೀರ್ಥ, ಬಾಹುದಾ ಮೊದಲಾದ ನದಿಗಳು, ಗಯಾ, ಗಯಶಿರಸ್ಸು, ವಿಪಾಶಾ, ಸ್ಥೂಲವಾಲುಕಾ, ಕೃಷ್ಣಾ, ಗಂಗಾ, ವೃದ್ಧಗಂಗಾ, ಮಹಾಹ್ರದ;

ಗೌತಮೀಂ ಕೌಶಿಕೀಂ ಪಾಕಾಂ ಮಹಾತ್ಮಾನೋ ಧೃತವ್ರತಾಃ ।
ಸರಸ್ವತೀದೃಷದ್ವತ್ಯೌ ಯಮುನಾಂ ಯೇ ಪ್ರಯಾಂತಿ ಚ ॥೪೭॥

ತತ್ರ ತೇ ದಿವ್ಯಸಂಸ್ಥಾನಾ ದಿವ್ಯಮಾಲ್ಯಧರಾಃ ಶಿವಾಃ ।
ಪ್ರಯಾಂತಿ ಪುಣ್ಯಗಂಧಾಢ್ಯಾ ಧೃತರಾಷ್ಟ್ರೋ ನ ತತ್ರ ವೈ ॥೪೮॥

ಗೌತಮೀ, ಕೌಶಿಕೀ, ಪಾಕಾ, ಸರಸ್ವತೀ, ದೃಷದ್ವತೀ, ಯಮುನಾ - ಈ ಪುಣ್ಯ ಕ್ಷೇತ್ರಗಳಿಗೆ ಮತ್ತು ನದಿಗಳಿಗೆ ಯಾವ ಮಹಾತ್ಮರು ವ್ರತವನ್ನು ಧರಿಸಿ ಹೋಗುತ್ತಾರೆಯೋ ಅಂತಹವರು ಆ ಲೋಕಗಳಲ್ಲಿ ದಿವ್ಯವಾದ ಶರೀರವನ್ನು ಹೊಂದಿ, ದಿವ್ಯವಾದ ಮಾಲೆಗಳನ್ನು ಧರಿಸಿ, ದಿವ್ಯವಾದ ಗಂಧಾಢ್ಯರಾಗಿ ಹೋಗುತ್ತಾರೆ. ಆದರೆ ಧೃತರಾಷ್ಟ್ರನು ಅಲ್ಲಿಗೆ ಹೋಗುವವನಲ್ಲ.

ಗೌತಮಃ

ಯತ್ರ ಶೀತಭಯಂ ನಾಸ್ತಿ ನ ಚೋಷ್ಣಭಯಮಣ್ವಪಿ ।
ನ ಕ್ಷುತ್ಪಿಪಾಸೇ ನ ಗ್ಲಾನಿರ್ನ ದುಃಖಂ ನ ಸುಖಂ ತಥಾ ॥೪೯॥

ನ ದ್ವೇಷ್ಯೋ ನ ಪ್ರಿಯಃ ಕಶ್ಚಿನ್ನ ಬಂಧುರ್ನ ರಿಪುಸ್ತಥಾ ।
ನ ಜರಾಮರಣೇ ವಾಪಿ ನ ಪುಣ್ಯಂ ನ ಚ ಪಾತಕಮ್ ॥೫೦॥

ಗೌತಮ– ಅಲ್ಲಿ ಶೀತಭಯವಿಲ್ಲ, ಉಷ್ಣಭಯವು ಸ್ವಲ್ಪವೂ ಇಲ್ಲ. ಹಸಿವು-ನೀರಡಿಕೆಗಳಿಲ್ಲ, ದಣಿವಿಲ್ಲ, ಶತ್ರುವಿಲ್ಲ, ಬಂಧುವೂ ಇಲ್ಲ, ಪ್ರಿಯನೂ ಇಲ್ಲ, ದ್ವೇಷ್ಯನೂ ಇಲ್ಲ, ಜರಾ-ಮರಣಗಳಿಲ್ಲ, ಪುಣ್ಯ-ಪಾಪಗಳಿಲ್ಲ.

ತಸ್ಮಿನ್ ವಿರಜಸಿ ಸ್ಫೀತೇ ಪ್ರಜ್ಞಾಸತ್ತ್ವವ್ಯವಸ್ಥಿತೇ ।
ಸ್ವಯಂಭುಭವನೇ ಪುಣ್ಯೇ ಹಸ್ತಿನಂ ಮೇ ಯತಿಷ್ಯತಿ ॥೫೧॥

ಅಂತಹ ರಜೋರಹಿತವಾದ, ಪರಿಶುದ್ಧವಾದ, ಪ್ರಜ್ಞೆ ಮತ್ತು ಸತ್ವಗಳಿಂದ ಹೊಂದಲು ಸಾಧ್ಯವಾದ ಪುಣ್ಯಪ್ರದವಾದ ಸ್ವಯಂಭುಭವನದಲ್ಲಿ(ಬ್ರಹ್ಮಲೋಕದಲ್ಲಿ) ನೀನು ಯಾತನೆಯನ್ನು ಹೊಂದುವಂತೆ ಮಾಡುವೆನು.

ಧೃತರಾಷ್ಟ್ರಃ

ನಿರ್ಮುಕ್ತಾಃ ಸರ್ವಸಂಗೇಭ್ಯೋ ಕೃತಾತ್ಮಾನೋ ಯತವ್ರತಾಃ ।
ಅಧ್ಯಾತ್ಮಯೋಗಸಂಸ್ಥಾನೇ ಯುಕ್ತಾಃ ಸ್ವರ್ಗಗತಿಂ ಗತಾಃ ॥೫೨॥

ತೇ ಬ್ರಹ್ಮಭವನಂ ಪುಣ್ಯಂ ಪ್ರಾಪ್ನುವಂತೀಹ ಸಾತ್ತ್ವಿಕಾಃ ।
ನ ತತ್ರ ಧೃತರಾಷ್ಟ್ರಸ್ತೇ ಶಕ್ಯೋ ದ್ರಷ್ಟುಂ ಮಹಾಮುನೇ ॥೫೩॥

ಧೃತರಾಷ್ಟ್ರ– ಸರ್ವಸಂಗನಿರ್ಮುಕ್ತರಾಗಿ ಆತ್ಮಜಯವನ್ನು ಹೊಂದಿ, ನಿಯತ ವ್ರತಧಾರಿಗಳಾಗಿ, ಅಧ್ಯಾತ್ಮಯೋಗ ನಿರತರಾಗಿ ಯಾರು ಸ್ವರ್ಗಗತಿಯನ್ನು ಹೊಂದಿರುತ್ತಾರೆಯೋ ಅಂತಹ ಸಾತ್ವಿಕರು ಪವಿತ್ರವಾದ ಬ್ರಹ್ಮಸದನವನ್ನು ಹೊಂದುತ್ತಾರೆ. ಎಲೈ ಮಹಾಮುನಿಯೇ, ನೀನು ಅಲ್ಲಿ ಧೃತರಾಷ್ಟ್ರನನ್ನು ನೋಡಲು ಸಾಧ್ಯವಿಲ್ಲ.

ಗೌತಮಃ

ರಥಂತರಂ ಯತ್ರ ಬೃಹಚ್ಚ ಗೀಯತೇ
ಯತ್ರ ವೇದೀ ಪುಂಡರೀಕೈಃ ಸ್ತೃಣೋತಿ ।
ಯತ್ರೋಪಯಾತಿ ಹರಿಭಿಃ ಸೋಮಪೀಥೀ
ತತ್ರ ತ್ವಾಹಂ ಹಸ್ತಿನಂ ಯಾತಯಿಷ್ಯೇ ॥೫೪॥

ಗೌತಮ– ಎಲ್ಲಿ ರಥಂತರ ಸಾಮವೂ, ಬೃಹತ್‌ಸಾಮವೂ ಗಾನ ಮಾಡಲ್ಪಡುತ್ತದೆಯೋ, ಎಲ್ಲಿ ಯಜ್ಞವೇದಿಯು ಕಮಲಗಳಿಂದ ಹರಡಲ್ಪಟ್ಟಿರುತ್ತದೆಯೋ ಎಲ್ಲಿ ಸೋಮಪಾನ ಮಾಡುವ ಇಂದ್ರನು ಅಶ್ವಗಳಲ್ಲಿ ಬರುತ್ತಾನೆಯೋ ಅಲ್ಲಿ ಗಜಾಪಹಾರಿಯಾದ ನಿನ್ನನ್ನು ಯಾತನೆಗೆ ಗುರಿಪಡಿಸುತ್ತೇನೆ.

ಬುಧ್ಯಾಮಿ ತ್ವಾಂ ವೃತ್ರಹಣಂ ಶತಕ್ರತುಂ
ವ್ಯತಿಕ್ರಮಂತಂ ಭುವನಾನಿ ವಿಶ್ವಾ ।

ಕಚ್ಚಿನ್ನ ವಾಚಾ ವೃಜಿನಂ ಕದಾಚಿತ್
ನ ಚಾಪ್ಯಕಾರ್ಷಂ ಮನಸೋಭಿಷಂಗಾತ್ ॥೫೫॥

ನಾನು ನಿನ್ನನ್ನು ವೃತ್ರಸಂಹಾರಕನಾದ, ಶತಕ್ರತುವಾದ ಇಂದ್ರನೆಂದೂ, ಎಲ್ಲ ಲೋಕಗಳನ್ನು ರಕ್ಷಿಸಲು ಸಂಚರಿಸುತ್ತಿರುವವನೆಂದೂ ತಿಳಿದಿದ್ದೇನೆ. ನಾನು ನಿನಗೆ ಮಾತಿನಿಂದಾಗಲೀ ಅಥವಾ ಮನಸ್ಸಿನ ದೋಷದಿಂದಾಗಲೀ ಯಾವ ಅಪರಾಧವನ್ನೂ ಮಾಡಿಲ್ಲವಷ್ಟೆ?

ಶಕ್ರಃ

ಯಸ್ಮಾದಿದಂ ಲೋಕಪದಂ ಪ್ರಜಾನಾಮ್
ಅನ್ವಾಗಮಂ ಪರಿಪಾದೇ ಗಜಸ್ಯ ।
ತಸ್ಮಾದ್ ಭವಾನ್ ಪ್ರಣತಂ ಮಾऽನುಶಾಸ್ತು
ಬ್ರವೀಷಿ ಯತ್ ಕರವಾಣೇಹ ಸರ್ವಮ್ ॥೫೬॥

ಶಕ್ರ– ನಾನು ಆನೆಯ ದೊಡ್ಡ ಪಾದವನ್ನು ಅನುಸರಿಸಿಕೊಂಡು ಪ್ರಜೆಗಳಿಂದ ಈ ಲೋಕ ಅಪವಾದಕ್ಕೆ ಗುರಿಯಾದ ಕಾರಣ ನಿನಗೆ ಪ್ರಣತನಾಗಿರುವ ನನ್ನನ್ನು ಶಾಸನ ಮಾಡಬೇಕು. ನೀನು ಏನು ಹೇಳುತ್ತೀಯೋ ಅದೆಲ್ಲವನ್ನೂ ಮಾಡುವೆನು.

ಗೌತಮಃ

ಶ್ವೇತಂ ಕರೇಣುಂ ಮಮ ಪುತ್ರನಾಗಂ
ಯಂ ಮೇऽಹಾರ್ಷೀರ್ದಶವರ್ಷಾಣಿ ಬಾಲಮ್ ।
ಯೋ ಮೇ ವನೇ ವಸತೋऽಭೂದ್ ದ್ವಿತೀಯಃ
ತಮೇವ ಮೇ ದೇಹಿ ಸುರೇಂದ್ರ ನಾಗಮ್ ॥೫೭॥

ಗೌತಮ– ನನ್ನ ಶ್ವೇತವರ್ಣದ ಗಜಶಿಶುವನ್ನು ಪುತ್ರನಂತೆ ಹತ್ತು ವರ್ಷಗಳ ಕಾಲ ಪಾಲಿಸಿದೆನು. ಯಾವ ಆ ಚಿಕ್ಕವಯಸ್ಸಿನ ಆನೆಯನ್ನು ನೀನು ಕರೆದುಕೊಂಡು ಹೋಗುತ್ತಿದ್ದೀಯೋ, ಯಾವ ಆನೆಯು ವನವಾಸವನ್ನು ಮಾಡುವ ನನಗೆ ಮಿತ್ರನಾಗಿದ್ದಿತೋ ಎಲೈ ಸುರೇಂದ್ರನೇ, ಆ ಆನೆಯನ್ನೇ ನನಗೆ ಕೊಡು.

ಶಕ್ರಃ

ಅಯಂ ಸುತಸ್ತೇ ದ್ವಿಜಮುಖ್ಯ ನಾಗ-
ಶ್ಚಾಘ್ರಾಯತೇ ತ್ವಾಮಭಿವೀಕ್ಷ್ಯಮಾಣಃ ।
ಪಾದೌ ಚ ತೇ ನಾಸಿಕಯೋಪಜಿಘ್ರತೇ
ಶ್ರೇಯೋ ಮಮ ಧ್ಯಾಹಿ ನಮಶ್ಚ ತೇಽಸ್ತು ॥೫೮॥

ಶಕ್ರ– ಎಲೈ ದ್ವಿಜಮುಖ್ಯನೇ, ಇದೋ ಈ ನಿನ್ನ ಆನೆ. ನಿನ್ನನ್ನು ನೋಡುತ್ತಾ ಅದು ನಿನ್ನ ಪಾದಗಳನ್ನು ಸೊಂಡಲಿನಿಂದ ಆಘ್ರಾಣಿಸುತ್ತಿದೆ. ನನಗೆ ಶ್ರೇಯಸ್ಸನ್ನು ಆಶಂಸಿಸು. ನಿನಗೆ ನಮಸ್ಕಾರವಿರಲಿ.

ಗೌತಮಃ

ಶಿವಂ ಸದೈವೇಹ ಸುರೇಂದ್ರ ತುಭ್ಯಂ
ಧ್ಯಾಯಾಮಿ ಪೂಜಾಂ ಚ ಸದಾ ಪ್ರಯುಂಜೇ ।
ಮಮಾಪಿ ತ್ವಂ ಶಕ್ರ ಶಿವಂ ದದಸ್ವ
ತ್ವಯಾ ದತ್ತಂ ಪ್ರತಿಗೃಹ್ಣಾತಿ ನಾಗಮ್ ॥೫೯॥

ಗೌತಮ– ಎಲೈ ಸುರೇಂದ್ರನೇ, ನಿನಗೆ ಯಾವಾಗಲೂ ಮಂಗಳವಾಗಲಿ. ನಿನ್ನನ್ನು ಯಾವಾಗಲೂ ಧ್ಯಾನ ಮಾಡುತ್ತೇನೆ ಮತ್ತು ಪೂಜಿಸುತ್ತೇನೆ. ಎಲೈ ಶಕ್ರನೇ, ನನಗೂ ಶುಭಾಶೀರ್ವಾದವನ್ನು ಕೊಡು. ನೀನು ಹಿಂದಿರುಗಿಸುವ ಗಜವನ್ನು ನಾನು ಸ್ವೀಕರಿಸುತ್ತೇನೆ (ಗೌತಮನು ಸ್ವೀಕರಿಸುತ್ತಾನೆ).

ಶಕ್ರಃ

ಯೇಷಾಂ ವೇದಾ ನಿಹಿತಾ ವೈ ಗುಹಾಯಾಂ
ಮನೀಷಿಣಾಂ ಸತ್ತ್ವವತಾಂ ಮಹಾತ್ಮನಾಮ್ ।
ತೇಷಾಂ ತ್ವಯ್ಯೈಕೇನ ಮಹಾತ್ಮನಾಸ್ಮಿ
ಬುದ್ಧಸ್ತಸ್ಮಾತ್ ಪ್ರೀತಿಮಾಂಸ್ತೇಽಹಮದ್ಯ ॥೬೦॥

ಶಕ್ರ– ಯಾರು ತಮ್ಮ ಹೃದಯಗುಹೆಯಲ್ಲಿ ವೇದಗಳನ್ನು ಧರಿಸಿರುತ್ತಾರೆಯೋ ಅಂತಹ ಸತ್ಯವಂತರಾದ, ಮೇಧಾವಿಗಳಾದ ಮಹಾತ್ಮರಲ್ಲಿ ಒಬ್ಬನಾದ ನನ್ನಿಂದ ಮಾತ್ರ

ನಾನು (ಇಂದ್ರನೆಂದು) ತಿಳಿಯಲ್ಪಟ್ಟಿದ್ದೇನೆ. ಆದ್ದರಿಂದ ನಿನ್ನ ಮೇಲೆ ನಾನು ಬಹಳ ಪ್ರೀತಿಯನ್ನು ಹೊಂದಿದ್ದೇನೆ.

ಹಂತೈಹಿ ಬ್ರಾಹ್ಮಣ ಕ್ಷಿಪ್ರಂ ಸಹ ಪುತ್ರೇಣ ಹಸ್ತಿನಾ ।
ಪ್ರಾಪ್ನುಹಿ ತ್ವಂ ಶುಭಾಲ್ಲೋಕಾನಹ್ನಾಯ ಚ ಚಿರಾಯ ಚ ॥೬೧॥

ಬಹಳ ಸಂತೋಷ. ಎಲೈ ಬ್ರಾಹ್ಮಣನೇ, ಶೀಘ್ರವಾಗಿ ನೀನು ನಿನ್ನ ಪುತ್ರನಾದ ಆನೆಯ ಜೊತೆ ಬಾ. ತಕ್ಷಣ ಮತ್ತು ಬಹುಕಾಲದವರೆಗೆ ಶುಭಲೋಕಗಳನ್ನು ಹೊಂದುವವನಾಗು.

ಭೀಷ್ಮಃ

ಸ ಗೌತಮಂ ಪುರಸ್ಕೃತ್ಯ ಸಹ ಪುತ್ರೇಣ ಹಸ್ತಿನಾ ।
ದಿವಮಾಚಕ್ರಮೇ ವಜ್ರೀ ಸದ್ಭಿಃ ಸಹ ದುರಾಸದಮ್ ॥೬೨॥

ಭೀಷ್ಮ– ಆಗ ವಜ್ರಧರನಾದ ಇಂದ್ರನು ಗಜರೂಪ ಪುತ್ರಸಹಿತನಾದ ಗೌತಮನನ್ನು ಮುಂದೆ ಮಾಡಿಕೊಂಡು ಸಜ್ಜನರಿಂದಲೂ ಹೊಂದಲು ಕಷ್ಟಸಾಧ್ಯವಾದ ಸ್ವರ್ಗಕ್ಕೆ ಹೋದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಪಂಚಪಂಚಾಶದುತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಐವತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಐವತ್ತಾರನೆಯ ಅಧ್ಯಾಯ

ಉಪವಾಸದ ಮಹಾತ್ಮೆ

ಯುಧಿಷ್ಠಿರಃ

ದಾನಂ ಬಹುವಿಧಾಕಾರಂ ಶಾಂತಿಃ ಸತ್ಯಮಹಿಂಸತಾ ।
ಸ್ವದಾರತುಷ್ಟಿಶ್ಚೋಕ್ತಾ ತೇ ಫಲಂ ದಾನಸ್ಯ ಚೈವ ಯತ್ ॥೧॥

ಪಿತಾಮಹಸ್ಯ ವಿದಿತಂ ಕಿಮನ್ಯತ್ರ ತಪೋಬಲಾತ್ ।
ತಪಸೋ ಯತ್ಪರಂ ತೇऽದ್ಯ ತನ್ಮೇ ವ್ಯಾಖ್ಯಾತುಮರ್ಹಸಿ ॥೨॥

ಯುಧಿಷ್ಠಿರ– ಅನೇಕ ವಿಧವಾದ ಶಾಂತಿಯನ್ನೂ, ದಾನವನ್ನೂ, ಸತ್ಯವಚನವನ್ನೂ, ಅಹಿಂಸೆಯನ್ನೂ, ಸ್ವಪತ್ನಿಯಲ್ಲಿ ಸಂತೋಷವನ್ನೂ, ದಾನಫಲಗಳನ್ನೂ ನೀನು ಹೇಳಿದ್ದೀಯೆ. ಪಿತಾಮಹರಾದ ನಿಮಗೆ ತಪೋಬಲಕ್ಕಿಂತ ಬೇರೆ ಯಾವ ಬಲವು ತಿಳಿದಿದೆ? ತಪಸ್ವಿಗಿಂತಲೂ ಶ್ರೇಷ್ಠವಾದುದು ಯಾವುದೋ ಅದನ್ನು ಈ ದಿನ ನನಗೆ ಹೇಳಬೇಕು.

ಭೀಷ್ಮಃ

ತಪಃ ಪ್ರಚಕ್ಷತೇ ಯಾವತ್ ತಾವಲ್ಲೋಕಾ ಯುಧಿಷ್ಠಿರ ।
ಮತಂ ಮಮ ತು ಕೌಂತೇಯ ತಪೋ ನಾನಶನಾತ್ ಪರಮ್ ॥೩॥

ಎಲೈ ಯುಧಿಷ್ಠಿರನೇ, ಎಲ್ಲಿಯವರೆಗೂ ಲೋಕವಿರುತ್ತದೆಯೋ ಅಲ್ಲಿಯವರೆಗೆ ತಪಸ್ಸನ್ನು ಶ್ರೇಷ್ಠವೆಂದು ಹೇಳುತ್ತಾರೆ. ಆದರೆ ಎಲೈ ಕೌಂತೇಯನೇ, ನನ್ನ ಅಭಿಪ್ರಾಯದಲ್ಲಿ ಉಪವಾಸಕ್ಕಿಂತ (ಅನಶನ) ದೊಡ್ಡ ತಪಸ್ಸಿಲ್ಲ.

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಭಗೀರಥಸ್ಯ ಸಂವಾದಂ ಬ್ರಹ್ಮಣಶ್ಚ ಮಹಾತ್ಮನಃ ॥೪॥

ಈ ವಿಷಯದಲ್ಲಿಯೂ ಸಹ ಭಗೀರಥನಿಗೂ ಮತ್ತು ಮಹಾತ್ಮರಾದ ಬ್ರಹ್ಮದೇವರಿಗೂ ನಡೆಸ ಸಂವಾದ ರೂಪವಾದ ಪುರಾತನವಾದ ಈ ಇತಿಹಾಸವನ್ನು ಹೇಳುತ್ತಾರೆ.

ಅತೀತ್ಯ ಸುರಲೋಕಂ ಚ ಗವಾಂ ಲೋಕಂ ಚ ಭಾರತ ।
ಋಷಿಲೋಕಂ ಚ ಸೋಽಗಚ್ಛದ್ ಭಗೀರಥ ಇತಿ ಶ್ರುತಿಃ ॥೫॥

ಎಲೈ ಭಾರತನೇ, ಭಗೀರಥನು ಸುರಲೋಕವನ್ನೂ, ಗೋಲೋಕವನ್ನೂ, ಋಷಿ ಲೋಕವನ್ನೂ ದಾಟಿ ಬ್ರಹ್ಮಲೋಕಕ್ಕೆ ಹೋದನೆಂದು ನಾವು ಕೇಳಿದ್ದೇವೆ.

ತಂ ದೃಷ್ಟ್ವಾ ಸ ವಚಃ ಪ್ರಾಹ ಬ್ರಹ್ಮಾ ರಾಜನ್ ಭಗೀರಥಮ್ ।
ಕಥಂ ಭಗೀರಥಾಗಾಸ್ತ್ವಮಿಮಂ ಲೋಕಂ ದುರಾಸದಮ್ ॥೬॥

ನ ಹಿ ದೇವಾ ನ ಗಂಧರ್ವಾ ನ ಮನುಷ್ಯಾ ಭಗೀರಥ ।
ಆಯಾಂತ್ಯತಪ್ತತಪಸಃ ಕಥಂ ವೈ ತ್ವಮಿಹಾಗತಃ ॥೭॥

ಎಲೈ ರಾಜನೇ, ಆ ಭಗೀರಥನನ್ನು ನೋಡಿ ಬ್ರಹ್ಮದೇವರು 'ಎಲೈ ಭಗೀರಥನೇ, ಬರಲು ಕಷ್ಟವಾದ ಈ ಲೋಕಕ್ಕೆ ನೀನು ಹೇಗೆ ಬಂದೆ? ತಪಸ್ಸನ್ನು ಮಾಡದ ದೇವತೆಗಳಾಗಲೀ, ಗಂಧರ್ವರಾಗಲೀ, ಮನುಷ್ಯರಾಗಲೀ ಇಲ್ಲಿಗೆ ಬರುವುದಿಲ್ಲ. ನೀನು ಹೇಗೆ ಬಂದೆ?' ಎಂದು ಹೇಳಿದರು.

ಭಗೀರಥಃ

ನಿಃಶಂಕಮನ್ನಮದದಂ ಬ್ರಾಹ್ಮಣೇಭ್ಯಃ
ಶತಂ ಸಹಸ್ರಾಣಿ ಸದೈವ ದಾನಮ್ ।
ಬ್ರಾಹ್ಮಂ ವ್ರತಂ ನಿತ್ಯಮಾಸ್ಥಾಯ ವಿದ್ಧಿ
ನ ತ್ವೇವಾಹಂ ತಸ್ಯ ಫಲಾದಿಹಾಗಾಮ್ ॥೮॥

ಭಗೀರಥ– ನಾನು ಬ್ರಾಹ್ಮಣರಿಗೆ ನಿಶ್ಶಂಕೆಯಿಂದ ಅನ್ನದಾನವನ್ನು ಮಾಡಿದೆನು. ಯಾವಾಗಲೂ ಲಕ್ಷ ದಾನಗಳನ್ನು ಮಾಡುತ್ತಿದ್ದೆ. ನಿತ್ಯವೂ ಬ್ರಾಹ್ಮಣವ್ರತವನ್ನು ಧರಿಸಿದೆ. ಆದರೆ ಅದರ ಫಲದಿಂದ ನಾನು ಇಲ್ಲಿಗೆ ಬಂದಿಲ್ಲವೆಂದು ತಿಳಿಯಿರಿ.

ದಶೈಕರಾತ್ರಾನ್ ದಶ ಪಂಚರಾತ್ರಾನ್
ಏಕಾದಶೈಕಾದಶಕಾನ್ ಕ್ರತೂಂಶ್ಚ ।
ಜ್ಯೋತಿಷ್ಟೋಮಾನಾಂ ಚ ಶತಂ ಯದಿಷ್ಟಂ
ಫಲೇನ ತೇನಾಪಿ ಚ ನಾಗತೋಽಹಮ್ ॥೯॥

ಹತ್ತು ದಶರಾತ್ರಗಳನ್ನೂ, ಹತ್ತು ಪಂಚರಾತ್ರಗಳನ್ನೂ, ಹನ್ನೊಂದು ಏಕಾದಶ ದಿನದ ಕ್ರತುಗಳನ್ನೂ, ನೂರು ಜ್ಯೋತಿಷ್ಟೋಮಗಳನ್ನೂ ಮಾಡಿದೆ. ಆ ಫಲದಿಂದಲೂ ನಾನು ಇಲ್ಲಿಗೆ ಬಂದಿಲ್ಲ.

ಯಚ್ಚಾವಸಂ ಜಾಹ್ನವೀತೀರನಿತ್ಯಃ
ಶತಂ ಸಮಾಸ್ತಪ್ಯಮಾನಸ್ತಪೋಽಹಮ್ ।
ಅದಾಂ ಚ ತತ್ರಾಶ್ವತರೀಸಹಸ್ರಂ
ನಾರೀಪುರಂ ನ ಚ ತೇನಾಹಮಾಗಾಮ್ ॥೧೦॥

ನಾನು ನೂರು ವರ್ಷಗಳ ಕಾಲ ಗಂಗಾತೀರದಲ್ಲಿ ವಾಸ ಮಾಡಿದೆ. ಘೋರವಾದ ತಪಸ್ಸನ್ನು ಮಾಡಿದೆ. ಅಲ್ಲಿ ಅಶ್ವತರೀ (ಹೇಸರಗತ್ತೆ) ಸಹಸ್ರವನ್ನು ದಾನ ಮಾಡಿದೆ. ಕನ್ಯೆಯರ ಸಮೂಹವನ್ನೇ ದಾನ ಮಾಡಿದೆ. ಅದರಿಂದಲೂ ಇಲ್ಲಿಗೆ ಬಂದಿಲ್ಲ.

ದಶಾಯುತಾನಿ ಚಾಶ್ವಾನಾಮಯುತಾನಿ ಚ ವಿಂಶತಿಮ್ ।
ಪುಷ್ಕರೇಷು ದ್ವಿಜಾತಿಭ್ಯಃ ಪ್ರಾದಾಂ ಗಾಶ್ಚ ಸಹಸ್ರಶಃ ॥೧೧॥

ಪುಷ್ಕರ ಕ್ಷೇತ್ರದಲ್ಲಿ ಒಂದು ಲಕ್ಷ ಅಶ್ವಗಳನ್ನು ಮತ್ತು ಎರಡು ಲಕ್ಷ ಅಶ್ವಗಳನ್ನು ಮತ್ತು ಸಹಸ್ರಾರು ಗೋವುಗಳನ್ನು ಬ್ರಾಹ್ಮಣರಿಗೆ ದಾನ ಮಾಡಿದೆ.

ಸುವರ್ಣಚಂದ್ರೋಡುಪಧಾರಿಣೀನಾಂ
ಕನ್ಯೋತ್ತಮಾನಾಮದದಂ ಸ್ರಗ್ವಿಣೀನಾಮ್ ।
ಷಷ್ಟಿಂ ಸಹಸ್ರಾಣಿ ಚ ಭೂಷಿತಾನಾಂ
ಜಾಂಬೂನದೈರಾಭರಣೈರ್ನ ತೇನ ॥೧೨॥

ಸುವರ್ಣಚಂದ್ರಹಾರಗಳನ್ನು ಧರಿಸಿದ, ದೋಣಿಯಂತಹ ಸುವರ್ಣಾಭರಣ-ಗಳಿಂದ ಕೂಡಿದ ಹಾರವನ್ನು ಧರಿಸಿದ, ಹೂಮಾಲೆಗಳನ್ನು ಧರಿಸಿದ, ಅರವತ್ತು ಸಾವಿರ ಶ್ರೇಷ್ಠ ಕನ್ಯೆಯರನ್ನು ಸುವರ್ಣಾಲಂಕಾರ ಸಹಿತವಾಗಿ ದಾನ ಮಾಡಿದೆ. ಅದರಿಂದಲೂ ಇಲ್ಲಿಗೆ ಬಂದಿಲ್ಲ.

ದಶಾರ್ಬುದಾನ್ಯದದಂ ಗೋಸವೇಜ್ಯಾ-
ಸ್ವೇಕೈಕಶೋ ದಶ ಗಾ ಲೋಕನಾಥ ।
ಸಮಾನವತ್ಸಾಃ ಪಯಸಾ ಸಮನ್ವಿತಾಃ
ಸುವರ್ಣಕಾಂಸ್ಯೋಪದುಹಾ ನ ತೇನ ॥೧೩॥

ಎಲೈ ಲೋಕನಾಥನೇ, ಗೋಸವ ಯಾಗಗಳಲ್ಲಿ ಹತ್ತು ಅರ್ಬುದ ಗೋವುಗಳನ್ನು ದಾನ ಮಾಡಿದೆನು. ಒಬ್ಬೊಬ್ಬರಿಗೂ ಸಮಾನವಾದ ಕರುಗಳುಳ್ಳ, ಚೆನ್ನಾಗಿ ಹಾಲನ್ನು ಕರೆಯುವ, ಸುವರ್ಣಮಯವಾದ ಮತ್ತು ಕಂಚಿನ ಕರೆಯುವ ಪಾತ್ರೆಯಿಂದ ಸಹಿತವಾದ ಹತ್ತು ಗೋವುಗಳನ್ನು ದಾನ ಮಾಡಿದೆನು. ಅದರಿಂದಲೂ ಇಲ್ಲಿಗೆ ಬಂದಿಲ್ಲ.

ಆಪ್ತೋರ್ಯಾಮೇಷು ನಿಯತಮೇಕೈಕಸ್ಮಿನ್ ದಶಾದದಮ್ ।
ಗೃಷ್ಟೀನಾಂ ಕ್ಷೀರದಾತ್ರೀಣಾಂ ರೋಹಿಣೀನಾಂ ನ ತೇನ ಚ ॥೧೪॥

ಆಪ್ತೋರ್ಯಾಮ ಯಾಗಗಳಲ್ಲಿ ನಿಯತವಾಗಿ ಒಬ್ಬೊಬ್ಬರಿಗೂ ಚೆನ್ನಾಗಿ ಹಾಲನ್ನು ಕರೆಯುವ ಒಂದೇ ಸಲ ಕರುವನ್ನು ಹಾಕಿದ ರೋಹಿಣೀ ಜಾತಿಯ ಹತ್ತು ಗೋವುಗಳನ್ನು ದಾನ ಮಾಡಿದೆನು. ಅದರಿಂದಲೂ ಇಲ್ಲಿಗೆ ಬಂದಿಲ್ಲ.

ದೋಗ್ಧ್ರೀಣಾಂ ವೈ ಗವಾಂ ಚೈವ ಪ್ರಯುತಾನಿ ದಶೈವ ಹ ।
ಪ್ರಾದಾಂ ದಶಗುಣಂ ಬ್ರಹ್ಮನ್ ನ ತೇನಾಹಮಿಹಾಗತಃ ॥೧೫॥

ಬ್ರಹ್ಮನೇ, ಚೆನ್ನಾಗಿ ಹಾಲು ಕರೆಯುವ ಹತ್ತು ಲಕ್ಷ ಗೋವುಗಳನ್ನು ದಾನ ಮಾಡಿದೆನು. ಅದರಿಂದಲೂ ಇಲ್ಲಿಗೆ ಬಂದಿಲ್ಲ.

ವಾಜಿನಾಂ ಬಾಹ್ಲಿಜಾತಾನಾಮಯುತಾನ್ಯದದಂ ದಶ ।
ಸಿತಾನಾಂ ಹೇಮಮಾಲಾನಾಂ ನ ಚ ತೇನಾಹಮಾಗತಃ ॥೧೬॥

ಬಾಹ್ಲೀಕ ದೇಶದಲ್ಲಿ ಜನಿಸಿದ ಬಿಳಿಯ ಬಣ್ಣದ, ಹೇಮಮಾಲೆಗಳನ್ನು ಧರಿಸಿದ ಒಂದು ಲಕ್ಷ ಅಶ್ವಗಳನ್ನು ದಾನ ಮಾಡಿದೆನು. ಅದರಿಂದಲೂ ಇಲ್ಲಿಗೆ ಬಂದಿಲ್ಲ.

ಕೋಟೀಶ್ಚ ಕಾಂಚನಸ್ಯಾಷ್ಟೌ ಪ್ರಾದಾಂ ಬ್ರಹ್ಮನ್ ದಶ ತ್ವಹಮ್ ।
ಏಕೈಕಸ್ಮಿನ್ ಕ್ರತೌ ತೇನ ಫಲೇನಾಹಂ ನ ಚಾಗತಃ ॥೧೭॥

ಎಲೈ ಬ್ರಹ್ಮದೇವರೇ, ಒಂದೊಂದು ಯಾಗದಲ್ಲಿ ನಾನು ಎಂಬತ್ತು ಕೋಟಿ ಸುವರ್ಣ ನಿಷ್ಕಗಳನ್ನು ದಾನ ಮಾಡಿದೆನು. ಅದರ ಫಲದಿಂದ ಇಲ್ಲಿಗೆ ಬಂದಿಲ್ಲ.

ವಾಜಿನಾಂ ಶ್ಯಾಮಕರ್ಣಾನಾಂ ಹರಿತಾನಾಂ ಪಿತಾಮಹ ।
ಪ್ರಾದಾಂ ಹೇಮಸ್ರಜಾಂ ಬ್ರಹ್ಮನ್ ಕೋಟೀರ್ದಶ ಚ ಸಪ್ತ ಚ ॥೧೮॥

ಎಲೈ ಪಿತಾಮಹರೇ, ಚಿನ್ನದ ಮಾಲೆಗಳನ್ನು ಧರಿಸಿದ, ಕಪ್ಪಾದ ಕಿವಿಯುಳ್ಳ ಹಸಿರು ಬಣ್ಣದ ಹದಿನೇಳು ಕೋಟಿ ಅಶ್ವಗಳನ್ನು ದಾನ ಮಾಡಿದೆನು.

ಈಷಾದಂತಾನ್ ಮಹಾಕಾಯಾನ್ ಕಾಂಚನಸ್ರಗ್ವಿಭೂಷಿತಾನ್ ।
ಪತ್ನೀಮತಃ ಸಹಸ್ರಾಣಿ ಪ್ರಾಯಚ್ಛಂ ದಶ ಸಪ್ತ ಚ ॥೧೯॥

ಗಾಡಿಯ ಮೂಕಿಯಂತೆ ಉದ್ದವಾದ ದಂತವುಳ್ಳ, ದೊಡ್ಡ ಶರೀರವನ್ನು ಹೊಂದಿದ, ಸುವರ್ಣ ಮಾಲೆಗಳನ್ನು ಧರಿಸಿದ, ಹದಿನೇಳು ಸಾವಿರ ಆನೆಗಳನ್ನು ಹೆಣ್ಣಾನೆಗಳ ಜೊತೆಯಲ್ಲಿ ದಾನ ಮಾಡಿದೆನು.

ಅಲಂಕೃತಾನಾಂ ದೇವೇಶ ದಿವ್ಯೈಃ ಕನಕಭೂಷಣೈಃ ।
ರಥಾನಾಂ ಕಾಂಚನಾಂಗಾನಾಂ ಸಹಸ್ರಾಣ್ಯದದಂ ದಶ ।
ಸಪ್ತ ಚಾನ್ಯಾನಿ ಯುಕ್ತಾನಿ ವಾಜಿಭಿಃ ಸಮಲಂಕೃತೈಃ ॥೨೦॥

ಎಲೈ ದೇವೇಶನೇ, ದಿವ್ಯವಾದ ಕನಕಭೂಷಣಗಳಿಂದ ಅಲಂಕೃತವಾದ, ಸುವರ್ಣಮಯವಾದ ಭಾಗಗಳನ್ನು ಹೊಂದಿದ ಅಲಂಕೃತವಾದ ಅಶ್ವಗಳನ್ನು ಹೂಡಿದ, ಹದಿನೇಳು ಸಾವಿರ ರಥಗಳನ್ನು ದಾನ ಮಾಡಿದೆನು.

ದಕ್ಷಿಣಾವಯವಾಃ ಕೇಚಿದ್ ವೇದೈರ್ಯೇ ಸಂಪ್ರಕೀರ್ತಿತಾಃ ।
ವಾಜಪೇಯೇಷು ದಶಸು ಪ್ರಾದಾಂ ನ ಚ ತೇನಾಗತೋ ಹ್ಯಹಮ್ ॥

ವೇದಗಳಲ್ಲಿ ದಕ್ಷಿಣೆಯ ಅಂಗವೆಂದು ಏನೇನು ಹೇಳಲ್ಪಟ್ಟಿದೆಯೋ ಅವೆಲ್ಲವನ್ನೂ ಹತ್ತು ವಾಜಪೇಯಗಳಲ್ಲಿ ದಾನ ಮಾಡಿದೆನು. ಅದರಿಂದಲೂ ಇಲ್ಲಿಗೆ ಬಂದಿಲ್ಲ.

ಶಕ್ರತುಲ್ಯಪ್ರಭಾವಾನಾಮಿಜ್ಯಯಾ ವಿಕ್ರಮೇಣ ಚ ।
ಸಹಸ್ರಂ ನಿಷ್ಕಕಂಠಾನಾಮದದಂ ದಕ್ಷಿಣಾಮಹಮ್ ॥೨೨॥

ಯಜ್ಞದಲ್ಲಿಯೂ ಮತ್ತು ಪರಾಕ್ರಮದಲ್ಲಿಯೂ ಇಂದ್ರನಿಗೆ ಸಮಾನವಾದ ಪರಾಕ್ರಮವುಳ್ಳ, ಕಂಠದಲ್ಲಿ ವಿಶ್ವಾಭರಣವನ್ನು ಧರಿಸಿದ ಸಹಸ್ರ (ರಾಜಕುಮಾರರನ್ನು) ದಕ್ಷಿಣೆಯಾಗಿ ಕೊಟ್ಟೆನು.

ವಿಜಿತ್ಯ ನೃಪತೀನ್ ಸರ್ವಾನ್ ಮಖೈರಿಷ್ಟ್ವಾ ಪಿತಾಮಹ ।
ಅಷ್ಟಭ್ಯೋ ರಾಜಸೂಯೇಭ್ಯೋ ನ ಚ ತೇನಾಹಮಾಗತಃ ॥೨೩॥

ಎಲೈ ಪಿತಾಮಹರೇ, ಎಲ್ಲ ರಾಜರನ್ನೂ ಗೆದ್ದು ಯಜ್ಞಗಳನ್ನು ಆಚರಿಸಿ ಅನಂತರ ಮಾಡಿದ ಎಂಟು ರಾಜಸೂಯ ಯಾಗಗಳ ಫಲವಾಗಿ ನಾನು ಇಲ್ಲಿಗೆ ಬಂದಿಲ್ಲ.

ಸ್ರೋತಶ್ಚ ಯಾವದ್ ಗಂಗಾಯಾಶ್ಚನ್ನಮಾಸೀಜ್ಜಗತ್ಪತೇ ।
ದಕ್ಷಿಣಾಭಿಃ ಪ್ರವೃತ್ತಾಭಿಃ ಮಮ ನಾಗಾಶ್ಚ ತತ್ಪತೇ ॥೨೪॥

ಎಲೈ ಜನಪತಿಯೇ, ಗಂಗೆಯ ಪ್ರವಾಹವು ಎಷ್ಟು ದಕ್ಷಿಣೆಯಿಂದ ಮುಚ್ಚಿ ಹೋಗಬಹುದೋ ಅಷ್ಟು (ದಕ್ಷಿಣೆಯನ್ನು ಹೊರುವ) ಆನೆಗಳು ನನ್ನ ಬಳಿ ಇದ್ದವು. ದಕ್ಷಿಣೆಗಾಗಿ ಅವೆಲ್ಲವನ್ನೂ ದಾನ ಮಾಡಿದೆ.

ವಾಜಿನಾಂ ಚ ಸಹಸ್ರೇ ದ್ವೇ ಸುವರ್ಣಶತಭೂಷಿತೇ ।
ವರಂ ಗ್ರಾಮಶತಂ ಚಾಹಮೇಕೈಕಸ್ಯ ತ್ರಿಧಾऽದದಮ್ ।
ತಪಸ್ವೀ ನಿಯತಾಹಾರಃ ಶಮಮಾಸ್ಥಾಯ ವಾಗ್ಯತಃ ॥೨೫॥

ನೂರು ಸುವರ್ಣಾಭರಣಗಳಿಂದ ಅಲಂಕೃತವಾದ ಎರಡು ಸಹಸ್ರ ಕುದುರೆಗಳನ್ನು ಮತ್ತು ಶ್ರೇಷ್ಠವಾದ ನೂರು ಗ್ರಾಮಗಳನ್ನು ನಾನು ಒಬ್ಬೊಬ್ಬರಿಗೂ ಮೂರು ಬಾರಿ ದಾನ ಮಾಡಿದೆ. ತಪಸ್ಸಿನಿಂದ ಆಹಾರನಿಯಮವನ್ನು ಹೊಂದಿ, ಮೌನದಿಂದ ಶಾಂತನಾಗಿ ದಾನ ಮಾಡಿದೆನು.

ದೀರ್ಘಕಾಲಂ ಹಿಮವತಿ ಗಂಗಾಯಾಶ್ಚ ದುರುತ್ಸಹಾಮ್ ।
ಮೂರ್ಧ್ನಾ ಧಾರಾಂ ಮಹಾದೇವಃ ಶಿರಸಾ ಯಾಮಧಾರಯತ್ ।
ನ ತೇನಾಪ್ಯಹಮಾಗಚ್ಛಂ ಫಲೇನೇಹ ಪಿತಾಮಹ ॥೨೬॥

ಎಲೈ ಪಿತಾಮಹರೇ, ಹಿಮಾಲಯ ಪರ್ವತದಲ್ಲಿ ದೀರ್ಘಕಾಲದವರೆಗೆ ಮಹಾದೇವನು ತಡೆಯಲು ಅಸಾಧ್ಯವಾದ ಗಂಗೆಯ ಧಾರೆಯನ್ನು ತಡೆಯುವಂತೆ ಮಾಡಿದೆ. ಅದರ ಫಲದಿಂದಲೂ ನಾನು ಇಲ್ಲಿಗೆ ಬಂದಿಲ್ಲ.

ಶಮ್ಯಾಕ್ಷೇಪೈರಯಜಂ ಯಚ್ಚ ದೇವಾನ್
ಸಶಸ್ತ್ರಾಣಾಮಯುತೈಶ್ಚಾಪಿ ಯತ್ರ ।
ತ್ರಯೋದಶದ್ವಾದಶಾಹಾಂಶ್ಚ ದೇವ
ಸಪೌಂಡರೀಕಾನ್ನ ಚ ತೇಷಾಂ ಫಲೇನ ॥೨೭॥

ಶಸ್ತ್ರಮಂತ್ರಗಳಿಂದ ಕೂಡಿದ ಹತ್ತು ಸಾವಿರ ಶಮ್ಯಾಕ್ಷೇಪ ಯಾಗಗಳಿಂದ ದೇವತೆಗಳನ್ನು ಪೂಜಿಸಿದೆ (ಶಮ್ಯಾ ಎಂದರೆ ಯಜ್ಞದಲ್ಲಿ ಉಪಯೋಗಿಸುವ ಒಂದು

ಆಯುಧ ವಿಶೇಷ. ಅದನ್ನು ಎಸೆದಾಗ ಎಷ್ಟು ದೂರದವರೆಗೆ ಹೋಗುತ್ತದೆಯೋ ಅಲ್ಲಿಯವರೆಗೆ ಯಾಗಶಾಲೆಯನ್ನು ಮಾಡಿ ಮಾಡುವ ಯಾಗವು ಶಮ್ಯಾಪ್ರಾಸ ಎನಿಸುತ್ತದೆ. ಅದನ್ನು ಇಲ್ಲಿ ಶಮ್ಯಾಕ್ಷೇಪ ಎನಿಸಿದೆ). ಎಲೈ ದೇವನೇ, ಹದಿಮೂರು ದಿವಸದ, ಹನ್ನೆರಡು ದಿವಸದ ಯಾಗಗಳನ್ನೂ, ಪೌಂಡರೀಕ ಯಾಗಗಳನ್ನೂ ನಾನು ಮಾಡಿದೆನು. ಅವುಗಳೆಲ್ಲವನ್ನೂ ನಾನು ಮಾಡಿದೆನು. ಅವುಗಳ ಫಲದಿಂದಲೂ ನಾನು ಇಲ್ಲಿಗೆ ಬಂದಿಲ್ಲ.

ಅಷ್ಟೌ ಸಹಸ್ರಾಣಿ ಕಕುದ್ಮಿನಾಮಹಂ
ಶುಕ್ಲರ್ಷಭಾಣಾಮದದಂ ಬ್ರಾಹ್ಮಣೇಭ್ಯಃ ।
ಏಕೈಕಂ ವೈ ಕಾಂಚನಂ ಶೃಂಗಮೇಭ್ಯಃ
ಪತ್ನೀಶ್ಚೈಷಾಮದದಂ ಬ್ರಾಹ್ಮಣೇಭ್ಯಃ ॥೨೮॥

ನಾನು ಬ್ರಾಹ್ಮಣರಿಗೆ ಶುಕ್ಲವರ್ಣದ ಒಳ್ಳೆಯ ಹಿಣಿಲನ್ನು ಹೊಂದಿದ ಎಂಟು ಸಹಸ್ರ ವೃಷಭಗಳನ್ನು ಒಂದೊಂದನ್ನೂ ಸುವರ್ಣಶೃಂಗದಿಂದ ಅಲಂಕಾರ ಮಾಡಿ ಗೋ ಸಹಿತವಾಗಿ ಬ್ರಾಹ್ಮಣರಿಗೆ ದಾನವನ್ನು ಮಾಡಿದೆನು.

ಹಿರಣ್ಯರತ್ನನಿಚಿತಾನದದಂ ರತ್ನಪರ್ವತಾನ್ ।
ಧನಧಾನ್ಯಸಮೃದ್ಧಾಂಶ್ಚ ಗ್ರಾಮಾನ್ ಶತಸಹಸ್ರಶಃ ॥೨೯॥

ಹಿರಣ್ಯರತ್ನ ರಾಶಿಗಳನ್ನೂ, ರತ್ನಪರ್ವತಗಳನ್ನೂ, ಧನ-ಧಾನ್ಯದಿಂದ ಸಮೃದ್ಧವಾದ ಗ್ರಾಮಗಳನ್ನೂ ನೂರಾರು ಸಾವಿರಾರು ಸಂಖ್ಯೆಯಲ್ಲಿ ದಾನ ಮಾಡಿದೆನು.

ಶತಂ ಶತಾನಾಂ ಗೃಷ್ಟೀನಾಮದದಂ ಚಾಪ್ಯತಂದ್ರಿತಃ ।
ಇಷ್ಟ್ವಾ ಕ್ರತೂನೇಕೈರ್ಮಹಾಯಜ್ಞೈರ್ಬ್ರಾಹ್ಮಣೇಭ್ಯೋ ನ ತೇನ ಚ ॥೩೦॥

ಅನೇಕ ಮಹಾಯಜ್ಞಗಳನ್ನು ಮಾಡಿ ಬ್ರಾಹ್ಮಣರಿಗೆ ಆಲಸ್ಯವಿಲ್ಲದೆ ಹತ್ತು ಸಹಸ್ರ ಗೃಷ್ಟಿಗಳನ್ನು (ಒಂದೇ ಬಾರಿ ಕರುವನ್ನು ಹಾಕಿರುವ ಹಸುವಿಗೆ ಗೃಷ್ಟಿ ಎಂದು ಹೆಸರು) ದಾನ ಮಾಡಿದೆನು. ಅದರಿಂದಲೂ ಇಲ್ಲಿಗೆ ಬಂದಿಲ್ಲ.

ಏಕಾದಶಾಹೈರಯಜಂ ಸದಕ್ಷಿಣೈ-
ರ್ದ್ವಿರ್ದ್ವಾದಶಾಹೈರಶ್ವಮೇಧೈಶ್ಚ ದೇವ ।

ಅರ್ಕಾಯನೈಃ ಷೋಡಶಭಿಶ್ಚ ಬ್ರಹ್ಮನ್
ತೇಷಾಂ ಫಲೇನೇಹ ನ ಚಾಗತೋಽಸ್ಮಿ ॥೩೧॥

ದಕ್ಷಿಣಾ ಸಹಿತವಾದ ಏಕಾದಶ ಯಾಗದಿಂದಲೂ, ಇಪ್ಪತ್ನಾಲ್ಕು ದಿವಸಗಳ ಯಾಗದಿಂದಲೂ, ಅಶ್ವಮೇಧ ಯಾಗದಿಂದಲೂ, ದಕ್ಷಿಣಾಯನ ಮತ್ತು ಉತ್ತರಾಯಣದಲ್ಲಿ ಮಾಡುವ ಹದಿನಾರು ಯಾಗಗಳಿಂದಲೂ ನಾನು ದೇವತೆಗಳನ್ನು ಪೂಜಿಸಿದೆ. ಎಲೈ ಬ್ರಹ್ಮದೇವನೇ, ನಾನು ಅವುಗಳ ಫಲದಿಂದಲೂ ಇಲ್ಲಿಗೆ ಬಂದಿಲ್ಲ.

ನಿಷ್ಕೈಕಕಂಠಮದದಂ ಯೋಜನಾಯತಂ
ತದ್ವಿಸ್ತೀರ್ಣಂ ಕಾಂಚನಪಾದಪಾನಾಮ್ ।
ವನಂ ಚೂತಾನಾಂ ರತ್ನವಿಭೂಷಿತಾನಾಂ
ನ ಚೈವ ತೇಷಾಮಾಗತೋಽಹಂ ಫಲೇನ ॥೩೨॥

ಕಂಠಪ್ರದೇಶಗಳಲ್ಲಿ ನಿಷ್ಕಗಳಿಂದ ಅಲಂಕಾರ ಮಾಡಿದ ಒಂದು ಯೋಜನ ಉದ್ದವಾದ ಮತ್ತು ಅಗಲವಾದ, ರತ್ನವಿಭೂಷಿತವಾದ ಸುವರ್ಣವೃಕ್ಷಗಳಿಂದ ಕೂಡಿದ ಚೂತವನವನ್ನು ದಾನ ಮಾಡಿದೆನು. ಅವುಗಳ ಫಲದಿಂದಲೂ ಇಲ್ಲಿಗೆ ಬಂದಿಲ್ಲ.

ತುರಾಯಣಂ ಹಿ ವ್ರತಮಪ್ರಧೃಷ್ಯಮ್
ಅಕ್ರೋಧನೋಽಕರವಂ ತ್ರಿಂಶತೋಽಬ್ದಾನ್ ।
ಶತಂ ಗವಾಮಷ್ಟ ಶತಾನಿ ಚೈವ
ದಿನೇ ದಿನೇ ಹ್ಯದದಂ ಬ್ರಾಹ್ಮಣೇಭ್ಯಃ ॥೩೩॥

ನಾನು ಕೋಪವನ್ನು ತ್ಯಜಿಸಿ ನಡೆಸಲು ಅಸಾಧ್ಯವಾದ ತುರಾಯಣ ಎಂಬ ವ್ರತವನ್ನು ಮೂವತ್ತು ವರ್ಷಗಳ ಕಾಲ ಮಾಡಿದೆನು. ಪ್ರತಿದಿನವೂ ನೂರು ಅನಂತರ ಎಂಟುನೂರು ಗೋವುಗಳನ್ನು ಬ್ರಾಹ್ಮಣರಿಗೆ ದಾನ ಮಾಡಿದೆ.

ಪಯಸ್ವಿನೀನಾಮಥ ರೋಹಿಣೀನಾಂ
ತಥೈವ ಚಾಪ್ಯನಡುಹಾಂ ಲೋಕನಾಥ ।
ಪ್ರಾದಾಂ ನಿತ್ಯಂ ಬ್ರಾಹ್ಮಣೇಭ್ಯಃ ಸುರೇಶ
ನೇಹಾಗತಸ್ತೇನ ಫಲೇನ ಚಾಹಮ್ ॥೩೪॥

ಎಲೈ ಲೋಕನಾಥನೇ, ಸುರೇಶನೇ, ರೋಹಿಣೀ ಜಾತಿಯ ಚೆನ್ನಾಗಿ ಹಾಲನ್ನು ಕೊಡುವ ಧೇನುಗಳನ್ನು ಮತ್ತು ಎತ್ತುಗಳನ್ನು ನಾವು ನಿತ್ಯವೂ ದಾನ ಮಾಡಿದೆ. ಅದರ ಫಲದಿಂದ ನಾನು ಇಲ್ಲಿಗೆ ಬಂದಿಲ್ಲ.

ತ್ರಿಂಶದಗ್ನಿಮಹಂ ಬ್ರಹ್ಮನ್ನಯಜಂ ಯಚ್ಚ ನಿತ್ಯದಾ ।
ಅಷ್ಟಾಭಿಃ ಸರ್ವಮೇಧೈಶ್ಚ ನರಮೇಧೈಶ್ಚ ಸಪ್ತಭಿಃ ॥೩೫॥

ಎಲೈ ಬ್ರಹ್ಮದೇವರೇ, ನಾನು ಮೂವತ್ತು ಅಗ್ನಿಗಳನ್ನು ಸ್ಥಾಪಿಸಿ ಎಂಟು ಸರ್ವಮೇಧಗಳನ್ನು ಮತ್ತು ಏಳು ನರಮೇಧಗಳನ್ನು ಮಾಡಿದೆನು.

ದಶಭಿರ್ವಿಶ್ವಜಿದ್ಭಿಶ್ಚ ಶತೈರಷ್ಟಾದಶೋತ್ತರೈಃ ।
ನ ಚೈವ ತೇಷಾಂ ದೇವೇಶ ಫಲೇನಾಹಮಿಹಾಗತಃ ॥೩೬॥

ಎಲೈ ದೇವೇಶನೇ, ನಾನು ಹತ್ತು ವಿಶ್ವಜಿತ್ ಯಾಗಗಳನ್ನು, ಪುನಃ ನೂರ ಹದಿನೆಂಟು ವಿಶ್ವಜಿತ್ ಯಾಗಗಳನ್ನು ಮಾಡಿದೆನು. ಅವುಗಳ ಫಲದಿಂದಲೂ ನಾನು ಇಲ್ಲಿಗೆ ಬಂದಿಲ್ಲ.

ಸರಯ್ವಾಂ ಬಾಹುದಾಯಾಂ ಚ ಗಂಗಾಯಾಮಥ ನೈಮಿಶೇ ।
ಗವಾಂ ಶತಾನಾಮಯುತಮದದಂ ನ ಚ ತೇನ ವೈ ॥೩೭॥

ಸರಯೂ ನದಿಯಲ್ಲಿಯೂ, ಬಾಹುದಾ ನದಿಯಲ್ಲಿಯೂ, ಗಂಗಾ ನದಿಯಲ್ಲಿಯೂ, ನೈಮಿಶಾರಣ್ಯದಲ್ಲಿಯೂ ನಾನು ಹತ್ತು ಲಕ್ಷ ಗೋವುಗಳನ್ನು ದಾನ ಮಾಡಿದೆ. ಅದರಿಂದಲೂ ಇಲ್ಲಿಗೆ ಬಂದಿಲ್ಲ.

ಇಂದ್ರೇಣ ಗುಹ್ಯಂ ನಿಹಿತಂ ವೈ ಗುಹಾಯಾಂ
ಯದ್ ಭಾರ್ಗವಸ್ತಪಸೇಹಾಭ್ಯವಿಂದತ್ ।
ಜಾಜ್ವಲ್ಯಮಾನಮುಶನಾಸ್ತೇಜಸೇಹ
ತತ್ ಸಾಧಯಾಮಾಸಮಹಂ ವರೇಣ ॥೩೮॥

ಇಂದ್ರನು ರಹಸ್ಯವಾಗಿ ಗುಹೆಯಲ್ಲಿ ಅನುಷ್ಠಾನ ಮಾಡಿದ ಅನಶನ ರೂಪವಾದ ಪ್ರಕಾಶಮಾನವಾದ ತಪಸ್ಸೇನಿದೆಯೋ ಮತ್ತು ಯಾವ ತಪಸ್ಸನ್ನು ಭಾರ್ಗವರಾದ

ಶುಕ್ರಾಚಾರ್ಯರು ಸಾಧಿಸಿದರೋ ನಾನು ಆ ಬ್ರಾಹ್ಮಣರ ವರಬಲದಿಂದ ಅಂತಹ ಅನಶನ ವ್ರತವನ್ನು ಸಾಧಿಸಿದೆನು (ಲಕ್ಷಾಲಂಕಾರ).

ತತೋ ಮೇ ಬ್ರಾಹ್ಮಣಾಸ್ತುಷ್ಟಾಸ್ತಸ್ಮಿನ್ ಕರ್ಮಣಿ ಸಾಧಿತೇ ।
ಸಹಸ್ರಮೃಷಯಶ್ಚಾಸನ್ ಯೇ ವೈ ತತ್ರ ಸಮಾಗತಾಃ ।
ಉಕ್ತಸ್ತೈರಸ್ಮಿ ಗಚ್ಛ ತ್ವಂ ಬ್ರಹ್ಮಲೋಕಮಿತಿ ಪ್ರಭೋ ॥೩೯॥

ಎಲೈ ಪ್ರಭುವೇ, ನಾನು ಆ ವ್ರತವನ್ನು ಸಾಧಿಸುವಾಗ ಅಲ್ಲಿಗೆ ಸಹಸ್ರ ಋಷಿಗಳು ಬಂದಿದ್ದರು. ಸಂತುಷ್ಟರಾದ ಅವರು ನನ್ನನ್ನು ಕುರಿತು ನೀನು ಬ್ರಹ್ಮಲೋಕಕ್ಕೆ ಹೋಗು ಎಂದು ಹೇಳಿದರು.

ಪ್ರೀತೇನೋಕ್ತಃ ಸಹಸ್ರೇಣ ಬ್ರಾಹ್ಮಣಾನಾಮಹಂ ಪ್ರಭೋ ।
ಇಮಂ ಲೋಕಮನುಪ್ರಾಪ್ತೋ ಮಾ ಭೂತ್ ತೇಽತ್ರ ವಿಚಾರಣಾ ॥

ಎಲೈ ಪ್ರಭುವೇ, ಪ್ರಸನ್ನರಾದ ಸಹಸ್ರ ಬ್ರಾಹ್ಮಣರ ಪ್ರೀತಿಯುಕ್ತವಾದ ಆದೇಶದಿಂದ ನಾನು ಈ ಲೋಕಕ್ಕೆ ಬಂದಿದ್ದೇನೆ. ಇದರಲ್ಲಿ ನೀವು ಸಂಶಯಪಡಬೇಕಾದ ಅವಶ್ಯಕತೆ ಇಲ್ಲ.

ಕಾಮಂ ಯಥಾವದ್ ವಿಹಿತಂ ವಿಧಾತ್ರಾ
ಪೃಷ್ಟೇನ ವಾಚ್ಯಂ ತು ಮಯಾ ಯಥಾವತ್ ।
ತಪೋ ಹಿ ನಾನ್ಯಚ್ಚಾನಶನಾನ್ಮತಂ ಮೇ
ನಮೋಽಸ್ತು ತೇ ದೇವವರ ಪ್ರಸೀದ ॥೪೧॥

ಬ್ರಹ್ಮದೇವರು ಕೇಳಿದಾಗ ನಾನು ಮಾಡಿದುದನ್ನು ಯಥಾವತ್ತಾಗಿ ಹೇಳಬೇಕು (ನಾನು ಅಹಂಕಾರದಿಂದ ಏನನ್ನೂ ಹೇಳಿಲ್ಲ). ನನ್ನ ಅಭಿಪ್ರಾಯದಲ್ಲಿ ಉಪವಾಸಕ್ಕಿಂತ ದೊಡ್ಡದಾದ ತಪಸ್ಸಿಲ್ಲ. ದೇವಶ್ರೇಷ್ಠನೇ, ನಿನಗೆ ನಮಸ್ಕಾರ. ಪ್ರಸನ್ನನಾಗು.

ಭೀಷ್ಮಃ

ಇತ್ಯುಕ್ತವಂತಂ ತಂ ಬ್ರಹ್ಮಾ ರಾಜಾನಂ ಸ್ಮ ಭಗೀರಥಮ್ ।
ಪೂಜಯಾಮಾಸ ಪೂಜಾರ್ಹಂ ವಿಧಿದೃಷ್ಟೇನ ಕರ್ಮಣಾ ॥೪೨॥

ಭೀಷ್ಮ– ಭಗೀರಥ ರಾಜನು ಹೀಗೆ ಹೇಳುತ್ತಿರಲು ಬ್ರಹ್ಮದೇವರು ವಿಧಿಗೆ ಅನುಸಾರವಾಗಿ ಪೂಜಾರ್ಹನಾದ ಅವನನ್ನು ಪೂಜಿಸಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮಕಥನೇ ಪಿತಾಮಹಭಗೀರಥಸಂವಾದೋ ನಾಮ ಷಟ್‌ಪಂಚಾಶದಧಿಕಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಐವತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಐವತ್ತೇಳನೆಯ ಅಧ್ಯಾಯ

ದೀರ್ಘಾಯುಷ್ಯ ಮತ್ತು ಅಲ್ಪಾಯುಷ್ಯಕ್ಕೆ ಕಾರಣಗಳ ನಿರೂಪಣೆ

ಯುಧಿಷ್ಠಿರಃ

ಶತಾಯುರುಕ್ತಃ ಪುರುಷಃ ಶತವೀರ್ಯಶ್ಚ ವೈದಿಕೇ ।
ಕಸ್ಮಾನ್ ಮ್ರಿಯಂತೇ ಪುರುಷಾ ಬಾಲಾ ಅಪಿ ಪಿತಾಮಹ ॥೧॥

ಯುಧಿಷ್ಠಿರ– ವೇದಗಳಲ್ಲಿ ಪುರುಷನು ಶತವರ್ಷಾಯುಷ್ಯವುಳ್ಳವನೆಂದೂ, ಶತ ವೀರ್ಯವುಳ್ಳವನೆಂದೂ ಹೇಳಲ್ಪಡುತ್ತಾನೆ. ಎಲೈ ಪಿತಾಮಹನೇ, ಬಾಲಕರೂ ಸಹ ಏಕೆ ಮರಣವನ್ನು ಹೊಂದುತ್ತಾರೆ?

ಆಯುಷ್ಮಾನ್ ಕೇನ ಭವತಿ ಸ್ವಲ್ಪಾಯುರ್ವಾऽಪಿ ಮಾನವಃ ।
ಕೇನ ವಾ ಲಭತೇ ಕೀರ್ತಿಂ ಕೇನ ವಾ ಲಭತೇ ಶ್ರಿಯಮ್ ॥೨॥

ತಪಸಾ ಬ್ರಹ್ಮಚರ್ಯೇಣ ಜಪ್ಯೈರ್ಹೋಮೈಸ್ತಥೌಷಧೈಃ ।
ಕರ್ಮಣಾ ಮನಸಾ ವಾಚಾ ತನ್ಮೇ ಬ್ರೂಹಿ ಪಿತಾಮಹ ॥೩॥

ಮನುಷ್ಯನು ದೀರ್ಘಾಯುಸ್ಸನ್ನು ಹೇಗೆ ಪಡೆಯುತ್ತಾನೆ? ಅಲ್ಪಾಯುಸ್ಸನ್ನಾದರೂ ಹೇಗೆ ಪಡೆಯುತ್ತಾನೆ? ಯಾವುದರಿಂದ ಕೀರ್ತಿಯನ್ನು ಮತ್ತು ಸಂಪತ್ತನ್ನು ಪಡೆಯುತ್ತಾನೆ? ಎಲೈ ಪಿತಾಮಹನೇ, ಅದು ತಪಸ್ಸಿನಿಂದಲೋ, ಬ್ರಹ್ಮಚರ್ಯದಿಂದಲೋ, ಜಪದಿಂದಲೋ, ಹೋಮದಿಂದಲೋ, ಔಷಧಿ ಗಳಿಂದಲೋ ಅಥವಾ ಕರ್ಮ-ಮನಸ್ಸು-ಮಾತುಗಳಿಂದಲೋ ಎಂದು ನನಗೆ ಹೇಳು.

ಭೀಷ್ಮಃ

ಅತ್ರ ತೇऽಹಂ ಪ್ರವಕ್ಷ್ಯಾಮಿ ಯನ್ಮಾಂ ತ್ವಮನುಪೃಚ್ಛಸಿ ।
ಅಲ್ಪಾಯುರ್ಯೇನ ಭವತಿ ದೀರ್ಘಾಯುರ್ವಾಪಿ ಮಾನವಃ ॥೪॥

ಯೇನ ವಾ ಲಭತೇ ಕೀರ್ತಿಂ ಯೇನ ವಾ ಲಭತೇ ಶ್ರಿಯಮ್ ।
ಯಥಾ ಚ ವರ್ತನ್ ಪುರುಷಃ ಶ್ರೇಯಸಾ ಸಂಪ್ರಯುಜ್ಯತೇ ॥೫॥

ಭೀಷ್ಮ– ಮನುಷ್ಯನು ಯಾವುದರಿಂದ ಅಲ್ಪಾಯುಸ್ಸನ್ನು ಹೊಂದುತ್ತಾನೆ, ಯಾವುದರಿಂದ ದೀರ್ಘಾಯುಸ್ಸನ್ನು ಹೊಂದುತ್ತಾನೆ, ಯಾವುದರಿಂದ ಕೀರ್ತಿಯನ್ನು ಪಡೆಯುತ್ತಾನೆ, ಯಾವುದರಿಂದ ಸಂಪತ್ತನ್ನು ಪಡೆಯುತ್ತಾನೆ, ಹೇಗೆ ನಡೆದುಕೊಂಡರೆ ಶ್ರೇಯಸ್ಸನ್ನು ಪಡೆಯುತ್ತಾನೆ ಎಂದು ನೀನು ಕೇಳುತ್ತಿರುವ ಪ್ರಶ್ನೆಗಳಿಗೆ ನಾನು ಉತ್ತರವನ್ನು ಹೇಳುವೆನು.

ಆಚಾರಾಲ್ಲಭತೇ ಹ್ಯಾಯುರಾಚಾರಾಲ್ಲಭತೇ ಶ್ರಿಯಮ್ ।
ಆಚಾರಾತ್ ಕೀರ್ತಿಮಾಪ್ನೋತಿ ಪುರುಷಃ ಪ್ರೇತ್ಯ ಚೇಹ ಚ ॥೬॥

ಆಚಾರದಿಂದ ಆಯುಸ್ಸು ಉಂಟಾಗುತ್ತದೆ, ಸಂಪತ್ತು ಉಂಟಾಗುತ್ತದೆ. ಪುರುಷನು ಆಚಾರದಿಂದ ಈ ಲೋಕದಲ್ಲಿಯೂ ಮತ್ತು ಪರಲೋಕದಲ್ಲಿಯೂ ಕೀರ್ತಿಯನ್ನು ಪಡೆಯುತ್ತಾನೆ.

ದುರಾಚಾರೋ ಹಿ ಪುರುಷೋ ನೇಹಾಯುರ್ವಿಂದತೇ ಮಹತ್ ।
ತ್ರಸಂತಿ ಯಸ್ಮಾದ್ ಭೂತಾನಿ ತಥಾ ಪರಿಭವಂತಿ ಚ ॥೭॥

ಯಾವನನ್ನು ನೋಡಿ ಎಲ್ಲರೂ ಹೆದರುತ್ತಾರೋ ಮತ್ತು ಯಾವನನ್ನು ಪರಿಭವಗೊಳಿಸುತ್ತಾರೋ ಅಂತಹ ದುರಾಚಾರಿಯಾದ ಪುರುಷನು ಇಲ್ಲಿ ದೀರ್ಘವಾದ ಆಯುಸ್ಸನ್ನು ಹೊಂದುವುದಿಲ್ಲ.

ತಸ್ಮಾತ್ ಕುರ್ಯಾದಿಹಾಚಾರಂ ಯ ಇಚ್ಛೇದ್ ಭೂತಿಮಾತ್ಮನಃ ।
ಅಪಿ ಪಾಪಶರೀರಸ್ಯ ಆಚಾರೋ ಹಂತ್ಯಲಕ್ಷಣಮ್ ॥೮॥

ಆದ್ದರಿಂದ ಯಾವನು ತನ್ನ ಏಳಿಗೆಯನ್ನು ಅಪೇಕ್ಷಿಸುತ್ತಾನೆಯೋ ಅವನು ಇಲ್ಲಿ ಒಳ್ಳೆಯ ಆಚಾರವನ್ನು ಮಾಡಬೇಕು. ಆಚಾರವು ಪಾಪಶರೀರವುಳ್ಳವನ ದುರ್ಲಕ್ಷಣಗಳನ್ನೂ ನಾಶಪಡಿಸುತ್ತದೆ.

ಆಚಾರಲಕ್ಷಣೋ ಧರ್ಮಃ ಸಂತಶ್ಚಾಚಾರಲಕ್ಷಣಾಃ ।
ಸಾಧೂನಾಂ ಚ ಯಥಾವೃತ್ತಮೇತದಾಚಾರಲಕ್ಷಣಮ್ ॥೯॥

ಆಚಾರವು ಧರ್ಮದ ಲಕ್ಷಣ. ಸಜ್ಜನರ ಲಕ್ಷಣವು ಆಚಾರ. ಸಜ್ಜನರ ಯಥಾರ್ಥವಾದ ನಡತೆಯು ಆಚಾರದ ಲಕ್ಷಣ.

ಅಪ್ಯದೃಷ್ಟಂ ಶ್ರುತಂ ವಾಪಿ ಪುರುಷಂ ಧರ್ಮಚಾರಿಣಮ್ ।
ಭೂತಿಕರ್ಮಾಣಿ ಕುರ್ವಾಣಂ ತಂ ಜನಾಃ ಕುರ್ವತೇ ಪ್ರಿಯಮ್ ॥೧೦॥

ಧರ್ಮಾಚರಣೆಯನ್ನು ಮಾಡುವ ಪುರುಷನನ್ನು ನೋಡದಿದ್ದರೂ ಸತ್ಕರ್ಮಗಳನ್ನು ಮಾಡುವ ಅವನನ್ನು ಕೇಳುವುದರಿಂದಲೇ ಜನರು ಅವನಲ್ಲಿ ಪ್ರೀತಿಯನ್ನು ಮಾಡುತ್ತಾರೆ.

ಯೇ ನಾಸ್ತಿಕಾ ನಿಷ್ಕ್ರಿಯಾಶ್ಚ ಗುರುಶಾಸ್ತ್ರಾತಿಲಂಘಿನಃ ।
ಅಧರ್ಮಜ್ಞಾ ದುರಾಚಾರಾಸ್ತೇ ಭವಂತಿ ಗತಾಯುಷಃ ॥೧೧॥

ನಾಸ್ತಿಕರೂ, ಕ್ರಿಯಾಹೀನರೂ, ಗುರುಗಳನ್ನು ಮತ್ತು ಶಾಸ್ತ್ರಗಳನ್ನು ಉಲ್ಲಂಘಿಸುವವರೂ, ಅಧರ್ಮಜ್ಞರೂ ಮತ್ತು ದುರಾಚಾರವುಳ್ಳವರೂ ಆಯುಸ್ಸನ್ನು ಕಳೆದುಕೊಳ್ಳುತ್ತಾರೆ.

ವಿಶೀಲಾ ಭಿನ್ನಮರ್ಯಾದಾ ನಿತ್ಯಂ ಸಂಕೀರ್ಣಮೈಥುನಾಃ ।
ಅಲ್ಪಾಯುಷೋ ಭವಂತೀಹ ನರಾ ನಿರಯಗಾಮಿನಃ ॥೧೨॥

ದುಷ್ಟಶೀಲವುಳ್ಳ, ಧರ್ಮದ ಮರ್ಯಾದೆಯನ್ನು ಮೀರಿದ, ನಿತ್ಯವೂ ವರ್ಣ ಸಂಕರವನ್ನು ಮಾಡಿ ಮೈಥುನದಲ್ಲಿ ಪ್ರಯತ್ನವನ್ನು ಮಾಡುವ ಮನುಷ್ಯರು ಇಲ್ಲಿ ಅಲ್ಪಾಯುಸ್ಸನ್ನು ಹೊಂದಿ ಅನಂತರ ನರಕಕ್ಕೆ ಹೋಗುತ್ತಾರೆ.

ಸರ್ವಲಕ್ಷಣಹೀನೋಽಪಿ ಸಮುದಾಚಾರವಾನ್ ನರಃ ।
ಶ್ರದ್ದಧಾನೋಽನಸೂಯಶ್ಚ ಶತಂ ವರ್ಷಾಣಿ ಜೀವತಿ ॥೧೩॥

ಸರ್ವಲಕ್ಷಣ ರಹಿತನಾದ ಮನುಷ್ಯನೂ ಸಹ ಒಳ್ಳೆಯ ಆಚಾರವನ್ನು ಹೊಂದಿ ಶ್ರದ್ಧಾಳುವಾಗಿ ಅಸೂಯೆಯನ್ನು ಹೊಂದದಿದ್ದರೆ ನೂರು ವರ್ಷಗಳ ಕಾಲ ಬದುಕುತ್ತಾನೆ.

ಅಕ್ರೋಧನಃ ಸತ್ಯವಾದೀ ಭೂತಾನಾಮಪ್ಯಹಿಂಸಕಃ ।
ಅನಸೂಯುರಜಿಹ್ಮಶ್ಚ ಶತಂ ವರ್ಷಾಣಿ ಜೀವತಿ ॥೧೪॥

ಸಿಟ್ಟನ್ನು ಮಾಡದೆ, ಸತ್ಯವನ್ನು ನುಡಿಯುತ್ತಾ, ಪ್ರಾಣಿಹಿಂಸೆಯನ್ನು ಮಾಡದೆ, ಅಸೂಯೆ ಪಡದೆ, ಕಪಟವನ್ನು ಮಾಡದೆ ಇರುವ ಪುರುಷನು ನೂರು ವರ್ಷಗಳ ಕಾಲ ಜೀವಿಸುತ್ತಾನೆ.

ಲೋಷ್ಟಮರ್ದೀ ತೃಣಚ್ಛೇದೀ ನಖಖಾದೀ ಚ ಯೋ ನರಃ ।
ನಿತ್ಯೋಚ್ಛಿಷ್ಟಃ ಸಂಕುಸುಕೋ ನೇಹಾಯುರ್ವಿಂದತೇ ಮಹತ್ ॥೧೫॥

ವ್ಯರ್ಥವಾಗಿ ಮಣ್ಣಿನ ಹೆಂಟೆಗಳನ್ನು ಒಡೆಯುವವನು, ಯಾವಾಗಲೂ ಹುಲ್ಲನ್ನು ತೆಗೆದುಕೊಂಡು ಅದನ್ನು ಸೀಳುವವನು, ಉಗುರನ್ನು ಕಚ್ಚುವವನು, ನಿತ್ಯವೂ ಉಚ್ಛಿಷ್ಟನಾಗಿರುವವನು (ಮಲ-ಮೂತ್ರ ವಿಸರ್ಜನೆಯನ್ನು ಮಾಡಿ ಕೈ-ಕಾಲುಗಳನ್ನು ತೊಳೆದುಕೊಳ್ಳದಿರುವವನು), ಚಂಚಲ ಸ್ವಭಾವದವನು ದೀರ್ಘಾಯುಸ್ಸನ್ನು ಹೊಂದುವುದಿಲ್ಲ.

ಬ್ರಾಹ್ಮೇ ಮುಹೂರ್ತೇ ಬುಧ್ಯೇತ ಧರ್ಮಾರ್ಥೌ ಚಾನುಚಿಂತಯೇತ್ ।
ಉತ್ಥಾಯಾಚಮ್ಯ ತಿಷ್ಠೇತ ಪೂರ್ವಾಂ ಸಂಧ್ಯಾಂ ಕೃತಾಂಜಲಿಃ ॥೧೬॥

ಬ್ರಾಹ್ಮ ಮುಹೂರ್ತದಲ್ಲಿ ಎಚ್ಚರಗೊಂಡು ಧರ್ಮಾರ್ಥಗಳನ್ನು ಚಿಂತಿಸಬೇಕು. ಎದ್ದು ಆಚಮನವನ್ನು ಮಾಡಿ (ಶೌಚ-ಸ್ನಾನಾದಿಗಳನ್ನು ಮುಗಿಸಿ) ಸೂರ್ಯನಿಗೆ ಅರ್ಘ್ಯವನ್ನು ಕೊಟ್ಟು, ಪ್ರಾತಃಸಂಧ್ಯೆಯನ್ನು ಉಪಾಸನೆ ಮಾಡಬೇಕು.

ಏವಮೇವಾಪರಾಂ ಸಂಧ್ಯಾಂ ಸಮುಪಾಸೀತ ವಾಗ್ಯತಃ ।
ನೇಕ್ಷೇತಾದಿತ್ಯಮುದ್ಯಂತಂ ನಾಸ್ತಂ ಯಾಂತಂ ಕಥಂಚನ ॥೧೭॥

ಹೀಗೆ ಸಾಯಂಸಂಧ್ಯೆಯನ್ನೂ ಸಹ ಮೌನವಾಗಿ ಉಪಾಸನೆ ಮಾಡಬೇಕು. ಉದಯಿಸುತ್ತಿರುವ ಅಥವಾ ಅಸ್ತವನ್ನು ಹೊಂದುತ್ತಿರುವ ಸೂರ್ಯನನ್ನು ನೋಡಬಾರದು.

ಋಷಯೋ ದೀರ್ಘಸಂಧ್ಯತ್ವಾದ್ ದೀರ್ಘಮಾಯುರವಾಪ್ನುವನ್ ।
ತಸ್ಮಾತ್ ತಿಷ್ಠೇತ್ ಸದಾ ಪೂರ್ವಾಂ ಪಶ್ಚಿಮಾಂ ಚೈವ ವಾಗ್ಯತಃ ॥೧೮॥

ಋಷಿಗಳು ಸಂಧ್ಯಾಲೋಪವನ್ನು ಮಾಡದಿದ್ದುದರಿಂದ ದೀರ್ಘಾಯುಸ್ಸನ್ನು ಹೊಂದಿದರು. ಆದ್ದರಿಂದ ಯಾವಾಗಲೂ ಮೌನವಾಗಿ ಪ್ರಾತಃಸಂಧ್ಯಾ ಮತ್ತು ಸಾಯಂಸಂಧ್ಯಾಗಳನ್ನು ಅನುಷ್ಠಾನ ಮಾಡಬೇಕು.

ಯೇ ನ ಪೂರ್ವಾಮುಪಾಸಂತೇ ದ್ವಿಜಾಃ ಸಂಧ್ಯಾಂ ನ ಪಶ್ಚಿಮಾಮ್ ।
ಸರ್ವಾಂಸ್ತಾನ್ ಧಾರ್ಮಿಕೋ ರಾಜಾ ಶೂದ್ರಕರ್ಮಾಣಿ ಕಾರಯೇತ್ ॥

ಯಾವ ದ್ವಿಜರು ಪೂರ್ವ ಮತ್ತು ಪಶ್ಚಿಮ ಸಂಧ್ಯೆಗಳನ್ನು ಮಾಡುವುದಿಲ್ಲವೋ ಅವರೆಲ್ಲರನ್ನೂ ಧಾರ್ಮಿಕನಾದ ರಾಜನು ಶೂದ್ರಕರ್ಮಗಳಲ್ಲಿ ತೊಡಗಿಸಬೇಕು.

ಪರದಾರಾ ನ ಗಂತವ್ಯಾಃ ಸರ್ವವರ್ಣೇಷು ಕರ್ಹಿಚಿತ್ ।
ನ ಹೀದೃಶಮನಾಯುಷ್ಯಂ ಲೋಕೇ ಕಿಂಚನ ವಿದ್ಯತೇ ।
ಯಾದೃಶಂ ಪುರುಷಸ್ಯೇಹ ಪರದಾರಾಭಿಸೇವನಮ್ ॥೨೦॥

ಯಾವ ವರ್ಣದವನೂ ಇನ್ನೊಬ್ಬನ ಭಾರ್ಯೆಯ ಸಂಗವನ್ನು ಮಾಡಬಾರದು. ಪರಸ್ತ್ರೀ ಸಂಗರೂಪಕ್ಕಿಂತ ಪುರುಷನಿಗೆ ಆಯುಸ್ಸಿನ ಹಾನಿಕರವಾದುದು ಬೇರೆ ಯಾವುದೂ ಇಲ್ಲ.

ಪ್ರಸಾಧನಂ ಚ ಕೇಶಾನಾಮಂಜನಂ ದಂತಧಾವನಮ್ ।
ಪೂರ್ವಾಹ್ಣ ಏವ ಕುರ್ವೀತ ದೇವತಾನಾಂ ಚ ಪೂಜನಮ್ ॥೨೧॥

ತಲೆಯನ್ನು ಬಾಚಿಕೊಳ್ಳುವುದು, ತೈಲವನ್ನು ಹಚ್ಚಿಕೊಳ್ಳುವುದು, ದಂತಧಾವನ, ದೇವತಾ ಪೂಜೆ ಇವೆಲ್ಲವನ್ನೂ ಪೂರ್ವಾಹ್ಣದಲ್ಲಿಯೇ ಮಾಡಬೇಕು.

ಪುರೀಷಮೂತ್ರೇ ನೋದೀಕ್ಷೇನ್ನಾಧಿತಿಷ್ಠೇತ್ ಕದಾಚನ ।
ಉದಕ್ಯಯಾ ಚ ಸಂಭಾಷಾಂ ನ ಕುರ್ವೀತ ಕದಾಚನ ॥೨೨॥

ಮಲ-ಮೂತ್ರಗಳನ್ನು ನೋಡಬಾರದು ಮತ್ತು ಎಂದೂ ತುಳಿಯಬಾರದು. ರಜಸ್ವಲೆಯ ಜೊತೆಯಲ್ಲಿ ಎಂದೂ ಮಾತನಾಡಬಾರದು.

ನೋತ್ಸೃಜೇತ ಪುರೀಷಂ ಚ ಕ್ಷೇತ್ರೇ ಗ್ರಾಮಸ್ಯ ಚಾಂತಿಕೇ ।
ಉಭೇ ಮೂತ್ರಪುರೀಷೇ ತು ನಾಪ್ಸು ಕುರ್ಯಾತ್ ಕದಾಚನ ॥೨೩॥

ಕ್ಷೇತ್ರ ಅಥವಾ ಗ್ರಾಮದ ಸಮೀಪದಲ್ಲಿ ಮಲ-ವಿಸರ್ಜನೆಯನ್ನು ಮಾಡಬಾರದು. ನೀರಿನಲ್ಲಿ ಎಂದೂ ಮಲ-ಮೂತ್ರಗಳ ವಿಸರ್ಜನೆಯನ್ನು ಮಾಡಬಾರದು.

ಪ್ರಾಙ್ಮುಖೋ ನಿತ್ಯಮಶ್ನೀಯಾದ್ ವಾಗ್ಯತೋ ನ ಚ ಕುತ್ಸಯನ್ ।
ಪ್ರಸ್ಕಂದಯೇಚ್ಚ ಮನಸಾ ಭುಕ್ತ್ವಾ ಚಾಗ್ನಿಮುಪಸ್ಪೃಶೇತ್ ॥೨೪॥

ಪೂರ್ವಾಭಿಮುಖವಾಗಿ ಕುಳಿತು ಮೌನದಿಂದ ಯಾರನ್ನೂ ಹೀನಾಯ ಮಾಡುತ್ತಾ ನಿಂದಿಸದೆ ಭೋಜನ ಮಾಡಬೇಕು. ಭೋಜನವನ್ನು ಮಾಡಿದ ಮೇಲೆ ಅಗ್ನಿಸ್ಪರ್ಶವನ್ನು ಮಾಡಬೇಕು.

ಆಯುಷ್ಯಂ ಪ್ರಾಙ್ಮುಖೋ ಭುಂಕ್ತೇ ಯಶಸ್ಯಂ ದಕ್ಷಿಣಾಮುಖಃ ।
ಧನ್ಯಂ ಪಶ್ಚಾನ್ಮುಖೋ ಭುಂಕ್ತೇ ಋತಂ ಭುಂಕ್ತೇ ಉದಙ್ಮುಖಃ ॥೨೫॥

ಪೂರ್ವಾಭಿಮುಖವಾಗಿ ಭೋಜನವನ್ನು ಮಾಡಿದರೆ ಆಯುಸ್ಸನ್ನೂ, ದಕ್ಷಿಣಾಭಿಮುಖವಾಗಿ ಭೋಜನ ಮಾಡಿದರೆ ಕೀರ್ತಿಯನ್ನೂ, ಪಶ್ಚಿಮಾಭಿಮುಖವಾಗಿ ಭೋಜನ ಮಾಡಿದರೆ ಧನವನ್ನೂ, ಉತ್ತರಾಭಿಮುಖವಾಗಿ ಭೋಜನ ಮಾಡಿದರೆ ಒಳ್ಳೆಯ ಜ್ಞಾನವನ್ನೂ ಪಡೆಯುತ್ತಾನೆ.

ಅಗ್ನಿಮಾಲಭ್ಯ ತೋಯೇನ ಸರ್ವಾನ್ ಪ್ರಾಣಾನುಪಸ್ಪೃಶೇತ್ ।
ಗಾತ್ರಾಣಿ ಚೈವ ಸರ್ವಾಣಿ ನಾಭಿಂ ಪಾಣಿತಳೇನ ತು ॥೨೫.೮॥

ಅಗ್ನಿಸ್ಪರ್ಶವನ್ನು ಮಾಡಿ ಜಲದಿಂದ ಎಲ್ಲ ಇಂದ್ರಿಯಗಳನ್ನೂ, ದೇಹವನ್ನೂ ಸ್ಪರ್ಶ ಮಾಡಿ ಅಂಗೈಯಿಂದ ನಾಭಿಯನ್ನು ಸ್ಪರ್ಶ ಮಾಡಬೇಕು.

ನಾಧಿತಿಷ್ಠೇತ್ ತುಷಾಂ ಜಾತು ಕೇಶಭಸ್ಮಕಪಾಲಿಕಾಃ ।
ಅನ್ಯಸ್ಯ ಚಾಪ್ಯುಪಸ್ಥಾನಂ ದೂರತಃ ಪರಿವರ್ಜಯೇತ್ ॥೨೬॥

ಹೊಟ್ಟು, ಕೇಶ, ಬೂದಿ, ಮೂಳೆಗಳನ್ನು ಎಂದೂ ಮೆಟ್ಟಬಾರದು. ಇನ್ನೊಬ್ಬನನ್ನು ಹೊಗಳುವುದನ್ನೂ ಸಹ ದೂರದಿಂದಲೇ ಪರಿತ್ಯಜಿಸಬೇಕು.

ಶಾಂತಿಹೋಮಾಂಶ್ಚ ಕುರ್ವೀತ ಪವಿತ್ರಾಣಿ ಚ ಕಾರಯೇತ್ ।
ನಿಷಣ್ಣಶ್ಚಾಪಿ ಖಾದೇತ ನ ತು ಗಚ್ಛನ್ ಕಥಂಚನ ॥೨೭॥

ಶಾಂತಿಹೋಮಗಳನ್ನೂ, ಪವಿತ್ರಕಾರ್ಯಗಳನ್ನೂ ಮತ್ತು ಭೋಜನವನ್ನೂ ಕುಳಿತುಕೊಂಡೇ ಮಾಡಬೇಕು. ನಡೆದಾಡುತ್ತಾ ತಿನ್ನಬಾರದು.

ಮೂತ್ರಂ ನ ತಿಷ್ಠತಾ ಕಾರ್ಯಂ ನ ಭಸ್ಮನಿ ನ ಗೋವ್ರಜೇ ।
ಆರ್ದ್ರಪಾದಸ್ತು ಭುಂಜೀತ ನಾರ್ದ್ರಪಾದಸ್ತು ಸಂವಿಶೇತ್ ।
ಆರ್ದ್ರಪಾದಸ್ತು ಭುಂಜಾನೋ ವರ್ಷಾಣಾಂ ಜೀವತೇ ಶತಮ್ ॥೨೯॥

ನಿಂತುಕೊಂಡು ಮೂತ್ರವಿಸರ್ಜನೆಯನ್ನು ಮಾಡಬಾರದು. ಭಸ್ಮದಲ್ಲಿ ಅಥವಾ ಗೋಶಾಲೆಯಲ್ಲಿ ಮೂತ್ರವಿಸರ್ಗವನ್ನು ಮಾಡಬಾರದು. ಒದ್ದೆಯಾದ ಪಾದದಿಂದ ಭೋಜನವನ್ನು ಮಾಡಬೇಕು. ಪಾದವು ಒದ್ದೆಯಾಗಿರುವಾಗ ಮಲಗಬಾರದು. ಆರ್ದ್ರಪಾದನಾಗಿ ಭೋಜನವನ್ನು ಮಾಡುವವನು ನೂರು ವರ್ಷಗಳ ಕಾಲ ಜೀವಿಸುತ್ತಾನೆ.

ತ್ರೀಣಿ ತೇಜಾಂಸಿ ನೋಚ್ಚಿಷ್ಟ ಆಲಭೇತ ಕದಾಚನ ।
ಅಗ್ನಿಂ ಗಾಂ ಬ್ರಾಹ್ಮಣಾಂಶ್ಚೈವ ತಥಾಸ್ಯಾಯುರ್ನ ರಿಷ್ಯತೇ ॥೩೦॥

ಉಚ್ಚಿಷ್ಟನಾದವನು (ಮಲ-ಮೂತ್ರ ವಿಸರ್ಜನೆಯನ್ನು ಮಾಡಿ ಅಥವಾ ಭೋಜನವನ್ನು ಮಾಡಿ ಸರಿಯಾಗಿ ಕೈ-ಕಾಲು ತೊಳೆಯದಿದ್ದವನು) ಅಗ್ನಿ-ಗೋವು-ಬ್ರಾಹ್ಮಣರು ಈ ಮೂರು ತೇಜಸ್ಸನ್ನು ಎಂದೂ ಮುಟ್ಟಬಾರದು. ಮುಟ್ಟದಿದ್ದರೆ ಅಂತಹವನ ಆಯುಸ್ಸು ಕ್ಷಯವನ್ನು ಹೊಂದುವುದಿಲ್ಲ.

ತ್ರೀಣಿ ತೇಜಾಂಸಿ ನೋಚ್ಚಿಷ್ಟ ಉದೀಕ್ಷೇತ ಕದಾಚನ ।
ಸೂರ್ಯಾಚಂದ್ರಮಸೌ ಚೈವ ನಕ್ಷತ್ರಾಣಿ ಚ ಸರ್ವಶಃ ॥೩೧॥

ಉಚ್ಛಿಷ್ಟನಾದವನು ಸೂರ್ಯ, ಚಂದ್ರ ಮತ್ತು ನಕ್ಷತ್ರಗಳು ಈ ಮೂರು ತೇಜಸ್ಸನ್ನು ಯಾವಾಗಲೂ ನೋಡಬಾರದು.

ಊರ್ಧ್ವಂ ಪ್ರಾಣಾ ಹ್ಯುತ್ಕ್ರಮಂತಿ ಯೂನಃ ಸ್ಥವಿರ ಆಗತೇ ।
ಪ್ರತ್ಯುತ್ಥಾನಾಭಿವಾದಾಭ್ಯಾಂ ಪುನಸ್ತಾನ್ ಪ್ರತಿಪದ್ಯತೇ ॥೩೨॥

ಹಿರಿಯರು ಬಂದಾಗ ಯುವಕನ ಪ್ರಾಣಗಳು ಊರ್ಧ್ವಮುಖವಾಗಿ ಎದ್ದು ಬರುತ್ತವೆ. ಯುವಕನಾದವನು ಎದ್ದು ಅವರಿಗೆ ನಮಸ್ಕಾರ ಮಾಡಿದರೆ ಆ ಪ್ರಾಣಗಳು ಪುನಃ ತಮ್ಮ ತಮ್ಮ ಸ್ಥಾನಗಳಲ್ಲಿ ನಿಲ್ಲುತ್ತವೆ.

ಅಭಿವಾದಯೇತ ವೃದ್ಧಾಂಶ್ಚ ಆಸನಂ ಚೈವ ದಾಪಯೇತ್ ।
ಕೃತಾಂಜಲಿರುಪಾಸೀತ ಗಚ್ಛಂತಂ ಪೃಷ್ಠತೋಽನ್ವಿಯಾತ್ ॥೩೩॥

ಹಿರಿಯರಿಗೆ ನಮಸ್ಕಾರವನ್ನು ಮಾಡಬೇಕು. ಆಸನವನ್ನು ನೀಡಬೇಕು. ಕೈಗಳನ್ನು ಮುಗಿದು ಸಮೀಪದಲ್ಲಿ ನಿಲ್ಲಬೇಕು. ಅವರು ನಡೆಯುವಾಗ ಅವರನ್ನು ಹಿಂಬಾಲಿಸಬೇಕು.

ನ ಚಾಸೀತಾಸನೇ ಭಿನ್ನೇ ಭಿನ್ನಂ ಕಾಂಸ್ಯಂ ಚ ವರ್ಜಯೇತ್ ।
ನೈಕವಸ್ತ್ರೇಣ ಭೋಕ್ತವ್ಯಂ ನ ನಗ್ನಃ ಸ್ನಾತುಮರ್ಹತಿ ।
ಸ್ವಪ್ತವ್ಯಂ ನೈವ ನಗ್ನೇನ ನ ಚೋಚ್ಛಿಷ್ಟೋಽಪಿ ಸಂವಿಶೇತ್ ॥೩೪॥

ಒಡೆದು ಹೋದ ಅಥವಾ ಹರಿದುಹೋದ ಆಸನಗಳಲ್ಲಿ ಕುಳಿತುಕೊಳ್ಳಬಾರದು. ಒಡೆದ ಕಂಚಿನ ತಟ್ಟೆಯಲ್ಲಿ ಭೋಜನವನ್ನು ಮಾಡಬಾರದು. ಒಂದೇ ವಸ್ತ್ರವನ್ನು ಧರಿಸಿ ಭೋಜನವನ್ನು ಮಾಡಬಾರದು. ನಗ್ನನಾಗಿ ಸ್ನಾನವನ್ನಾಗಲೀ, ನಿದ್ರೆಯನ್ನಾಗಲೀ ಮಾಡಬಾರದು. ಉಚ್ಛಿಷ್ಟನಾಗಿಯೂ ನಿದ್ರೆಯನ್ನು ಮಾಡಬಾರದು.

ಉಚ್ಛಿಷ್ಟೋ ನ ಸ್ಪೃಶೇಚ್ಛೀರ್ಷಂ ಸರ್ವೇ ಪ್ರಾಣಾಸ್ತದಾಶ್ರಯಾಃ ।
ಕೇಶಗ್ರಹಾನ್ ಪ್ರಹಾರಾಂಶ್ಚ ಶಿರಸ್ಯೇತಾನ್ ವಿವರ್ಜಯೇತ್ ॥೩೫॥

ಉಚ್ಛಿಷ್ಟನಾದವನು ತಲೆಯನ್ನು ಮುಟ್ಟಬಾರದು. ಏಕೆಂದರೆ ಎಲ್ಲ ಪ್ರಾಣಗಳು (ಇಂದ್ರಿಯಗಳು) ಅಲ್ಲಿಯೇ ಇರುತ್ತವೆ. ತಲೆಯಲ್ಲಿ ಹೊಡೆಯುವುದನ್ನಾಗಲೀ ಅಥವಾ ತಲೆಗೂದಲುಗಳನ್ನು ಹಿಡಿಯುವುದನ್ನಾಗಲೀ ವರ್ಜಿಸಬೇಕು.

ನ ಪಾಣಿಭ್ಯಾಮುಭಾಭ್ಯಾಂ ಚ ಕಂಡೂಯೇಜ್ಜಾತು ವೈ ಶಿರಃ ।
ನ ಚಾಭೀಕ್ಷ್ಣಂ ಶಿರಃಸ್ನಾಯಾತ್ ಆಯುಸ್ತಸ್ಯ ನ ರಿಷ್ಯತೇ ॥೩೬॥

ಎರಡು ಕೈಗಳಿಂದ ತಲೆಯನ್ನು ಕೆರೆದುಕೊಳ್ಳಬಾರದು. ಸತತವಾಗಿ ಪುನಃ ಪುನಃ ಶಿರಸ್ನಾನವನ್ನು ಮಾಡಬಾರದು. ಅಂತಹವನಿಗೆ ಆಯುಸ್ಸು ಕ್ಷಯವನ್ನು ಹೊಂದುವುದಿಲ್ಲ.

ಶಿರಃಸ್ನಾತಶ್ಚ ತೈಲೇನ ನಾಂಗಂ ಕಿಂಚಿದುಪಸ್ಪೃಶೇತ್ ।
ತಿಲಪಿಷ್ಟಂ ನ ಚಾಶ್ನೀಯಾತ್ ತಥಾಯುರ್ವಿಂದತೇ ಮಹತ್ ॥೩೭॥

ಶಿರಸ್ನಾನವನ್ನು ಮಾಡಿದ ಮೇಲೆ ತೈಲವನ್ನು ಹಚ್ಚಿಕೊಳ್ಳಬಾರದು. ತಿಲಪಿಷ್ಟವನ್ನು ತಿನ್ನಬಾರದು. ಅದರಿಂದ ಆಯುಸ್ಸು ವೃದ್ಧಿಯನ್ನು ಹೊಂದುತ್ತದೆ.

ನಾಧ್ಯಾಪಯೇತ್ ತಥೋಚ್ಛಿಷ್ಟೋ ನಾಧೀಯೀತ ಕದಾಚನ ।
ವಾತೇ ಚ ಪೂತಿಗಂಧೇ ಚ ಮನಸಾಪಿ ನ ಚಿಂತಯೇತ್ ।
ಅತ್ರ ಗಾಥಾ ಯಮೋದ್ಗೀತಾಃ ಕೀರ್ತಯಂತಿ ಪುರಾವಿದಃ ॥೩೮॥

ಉಚ್ಛಿಷ್ಟನಾದವನು ಎಂದೂ ಅಧ್ಯಯನವನ್ನಾಗಲೀ ಅಥವಾ ಅಧ್ಯಾಪನವನ್ನಾಗಲೀ ಮಾಡಬಾರದು. ಅಪಾನವಾಯುವು ಹೊರಬಂದರೆ ಅಥವಾ ದುರ್ಗಂಧವು ಬಂದರೆ ಮನಸ್ಸಿನಿಂದಲೂ ಅಧ್ಯಯನವನ್ನು ಚಿಂತಿಸಬಾರದು. ಈ ವಿಷಯದಲ್ಲಿ ಹಿಂದಿನ ಜ್ಞಾನಿಗಳು ಯಮದೇವರು ಹಾಡಿದ ಒಂದು ಗೀತೆಯನ್ನು ಹೇಳುತ್ತಾರೆ.

ಆಯುರಸ್ಯ ನಿಕೃಂತಾಮಿ ಪ್ರಜಾಮಸ್ಯಾದದೇ ತಥಾ ।
ಯ ಉಚ್ಛಿಷ್ಟಃ ಪ್ರವದತಿ ಸ್ವಾಧ್ಯಾಯಂ ಚಾಧಿಗಚ್ಛತಿ ॥೩೯॥

ಯಶ್ಚಾನಧ್ಯಾಯಕಾಲೇಽಪಿ ಮೋಹಾದಧ್ಯಸ್ಯತಿ ದ್ವಿಜಃ ।
ತಸ್ಮಾದ್ ಯುಕ್ತೋಽಪ್ಯನಧ್ಯಾಯೇ ನಾಧೀಯೀತ ಕದಾಚನ ॥೪೦॥

ಯಾವನು ಉಚ್ಛಿಷ್ಟನಾಗಿ ಪ್ರವಚನ ಮಾಡುತ್ತಾನೆಯೋ ಅಥವಾ ಸ್ವಾಧ್ಯಾಯ ಮಾಡುತ್ತಾನೆಯೋ ಮತ್ತು ಯಾವ ಬ್ರಾಹ್ಮಣನು ಅನಧ್ಯಯನ ಕಾಲದಲ್ಲಿ ಮೋಹದಿಂದ ಅಧ್ಯಯನ ಮಾಡುತ್ತಾನೆಯೋ ಅಂತಹವನ ಆಯುಸ್ಸನ್ನು ಕತ್ತರಿಸುತ್ತೇನೆ ಮತ್ತು ಅವನ

ಸಂತತಿಯನ್ನು ನಾನು ಭಕ್ಷಿಸುತ್ತೇನೆ (ಇದು ಯಮದೇವರ ಗೀತೆ). ಆದ್ದರಿಂದ ಒಳ್ಳೆಯ ಆಚಾರದಿಂದ ಯುಕ್ತನಾದವನೂ ಸಹ ಅನಧ್ಯಯನ ಕಾಲದಲ್ಲಿ ಎಂದೂ ಅಧ್ಯಯನವನ್ನು ಮಾಡಬಾರದು.

ಪ್ರತ್ಯಾದಿತ್ಯಂ ಪ್ರತ್ಯಗ್ನಿಂ ಪ್ರತಿ ಗಾಂ ಚ ಪ್ರತಿ ದ್ವಿಜಾನ್ ।
ಯೇ ಮೇಹಂತಿ ಚ ಪಂಥಾನಂ ತೇ ಭವಂತಿ ಗತಾಯುಷಃ ॥೪೧॥

ಯಾರು ಸೂರ್ಯನಿಗೆ ಎದುರಾಗಿ, ಅಗ್ನಿಗೆ ಎದುರಾಗಿ, ಗೋ-ಬ್ರಾಹ್ಮಣರಿಗೆ ಎದುರಾಗಿ, ಮತ್ತು ಮಾರ್ಗದಲ್ಲಿ ಮೂತ್ರವಿಸರ್ಜನೆಯನ್ನು ಮಾಡುತ್ತಾರೆಯೋ ಅವರು ಆಯುಸ್ಸನ್ನು ಕಳೆದುಕೊಳ್ಳುತ್ತಾರೆ.

ಉಭೇ ಮೂತ್ರಪುರೀಷೇ ತು ದಿವಾ ಕುರ್ಯಾದುದಙ್ಮುಖಃ ।
ದಕ್ಷಿಣಾಭಿಮುಖೋ ರಾತ್ರೌ ತಥಾಸ್ಯಾಯುರ್ನ ರಿಷ್ಯತೇ ॥೪೨॥

ಹಗಲಿನಲ್ಲಿ ಮೂತ್ರ-ಮಲ ವಿಸರ್ಜನೆ ಎರಡನ್ನೂ ಉತ್ತರಾಭಿಮುಖವಾಗಿಯೂ, ರಾತ್ರಿಯಲ್ಲಿ ದಕ್ಷಿಣಾಭಿಮುಖವಾಗಿಯೂ ಮಾಡುವವನ ಆಯುಸ್ಸು ಕ್ಷಯವನ್ನು ಹೊಂದುವುದಿಲ್ಲ.

ತ್ರೀನ್ ಸದಾ ನಾವಮನ್ಯೇತ ದೀರ್ಘಮಾಯುರ್ಜಿಜೀವಿಷುಃ ।
ಬ್ರಾಹ್ಮಣಂ ಕ್ಷತ್ರಿಯಂ ಸರ್ಪಂ ಸರ್ವೇ ತ್ವಾಶೀವಿಷೋಪಮಾಃ ॥೪೩॥

ದೀರ್ಘವಾದ ಆಯುಸ್ಸನ್ನು ಬಯಸುವವನು ಬ್ರಾಹ್ಮಣ-ಕ್ಷತ್ರಿಯ ಮತ್ತು ಸರ್ಪ ಈ ಮೂರು ವಸ್ತುಗಳನ್ನು ಅವಮಾನಗೊಳಿಸಬಾರದು. ಅವರೆಲ್ಲರೂ ದೃಷ್ಟಿವಿಷವುಳ್ಳ ಸರ್ಪದಂತೆ.

ದಹತ್ಯಾಶೀವಿಷಃ ಕ್ರುದ್ಧೋ ಯಾವತ್ ಪಶ್ಯತಿ ಚಕ್ಷುಷಾ ।
ಕ್ಷತ್ರಿಯೋಽಪಿ ದಹೇತ್ ಕ್ರುದ್ಧೋ ಯಾವತ್ ಸ್ಪೃಶತಿ ತೇಜಸಾ ॥೪೪॥

ಬ್ರಾಹ್ಮಣಸ್ತು ಕುಲಂ ಹನ್ಯಾದ್ ಧ್ಯಾನೇನಾವೇಕ್ಷಿತೇನ ಚ ।
ತಸ್ಮಾದೇತತ್ತ್ರಯಂ ಯತ್ನಾದ್ ನಾವಮನ್ಯೇತ ಪಂಡಿತಃ ॥೪೫॥

ಆಶೀವಿಷವುಳ್ಳ ಸರ್ಪವು ತನ್ನ ಕಣ್ಣಿನಿಂದ ಎಲ್ಲಿಯವರೆಗೆ ನೋಡುತ್ತದೆಯೋ ಅಷ್ಟು ಭಾಗವನ್ನು ಸುಡುತ್ತದೆ. ಕ್ಷತ್ರಿಯನಾದವನು ತನ್ನ ತೇಜಸ್ಸಿನಿಂದ ಎಷ್ಟು ಜನರನ್ನು (ಅಥವಾ ಧನವನ್ನು) ಸ್ಪರ್ಶಿಸುತ್ತಾನೆಯೋ ಅಷ್ಟನ್ನೂ ಸುಡುತ್ತಾನೆ. ಬ್ರಾಹ್ಮಣನು ಮಾತ್ರ ದೃಷ್ಟಿಯಿಂದಲೇ ಅಥವಾ ಮನಸ್ಸಿನ ಚಿಂತನೆಯಿಂದಲೇ ಕುಲವನ್ನೇ ವಿನಾಶಗೊಳಿಸುತ್ತಾನೆ. ಆದ್ದರಿಂದ ಪಂಡಿತನಾದವನು ಈ ಮೂವರಿಗೆ ಅವಮಾನವನ್ನು ಮಾಡಬಾರದು.

ಗುರುಣಾ ವೈರನಿರ್ಬಂಧೋ ನ ಕರ್ತವ್ಯಃ ಕದಾಚನ ।
ಅನುಮಾನ್ಯಃ ಪ್ರಸಾದ್ಯಶ್ಚ ಗುರುಃ ಕ್ರುದ್ಧೋ ಯುಧಿಷ್ಠಿರ ॥೪೬॥

ಗುರುಗಳ ಜೊತೆಯಲ್ಲಿ ಎಂದೂ ವೈರವನ್ನು ಕಟ್ಟಿಕೊಳ್ಳಬಾರದು. ಎಲೈ ಯುಧಿಷ್ಠಿರನೇ, ಗುರುವು ಕ್ರುದ್ಧನಾದರೂ ಅವನನ್ನು ಒಲೈಸಬೇಕು ಮತ್ತು ಪ್ರಸನ್ನೀಕರಿಸಿಕೊಳ್ಳಬೇಕು.

ಸಮ್ಯಙ್ಮಿಥ್ಯಾಪ್ರವೃತ್ತೇಽಪಿ ವರ್ತಿತವ್ಯಂ ಗುರಾವಿಹ ।
ಗುರುನಿಂದಾ ದಹತ್ಯಾಯುರ್ಮನುಷ್ಯಾಣಾಂ ನ ಸಂಶಯಃ ॥೪೭॥

ಗುರುವು ಸರಿಯಾಗಿ ಅಥವಾ ತಪ್ಪಾಗಿ ಪ್ರವೃತ್ತಿಯನ್ನು ಮಾಡಿದರೂ ಶಿಷ್ಯನಾದವನು ಗುರುವೃತ್ತಿಯನ್ನು ಮಾಡಬೇಕು. ಗುರುನಿಂದೆಯು ಮನುಷ್ಯರ ಆಯುಸ್ಸನ್ನು ಸುಟ್ಟುಬಿಡುವುದರಲ್ಲಿ ಸಂಶಯವಿಲ್ಲ.

ದೂರಾದಾವಸಥಾನ್ಮೂತ್ರಂ ದೂರಾತ್ ಪಾದಾವಸೇಚನಮ್ ।
ಉಚ್ಚಿಷ್ಟೋತ್ಸರ್ಜನಂ ಚೈವ ದೂರೇ ಕಾರ್ಯಂ ಹಿತೈಷಿಣಾ ॥೪೮॥

ಹಿತವನ್ನು ಬಯಸುವವನು ಮೂತ್ರವಿಸರ್ಜನೆಯನ್ನೂ, ಪಾದಪ್ರಕ್ಷಾಲನೆಯನ್ನೂ ಮತ್ತು ಎಂಜಲೆಲೆಗಳನ್ನು ಬಿಸಾಡುವುದನ್ನೂ ಮನೆಯಿಂದ ದೂರದಲ್ಲಿ ಮಾಡಬೇಕು.

ನಾತಿಕಲ್ಯಂ ನಾತಿಸಾಯಂ ನ ಚ ಮಧ್ಯಂದಿನೇ ಸ್ಥಿತೇ ।
ನಾಜ್ಞಾತೈಃ ಸಹ ಗಚ್ಛೇತ ನೈಕೋ ನ ವೃಷಲೈಃ ಸಹ ॥೪೯॥

ಬೆಳಗಿನ ಜಾವದ ಸಮಯದಲ್ಲಿ ಮತ್ತು ಸಾಯಂಕಾಲವು ಮೀರದ ಸಮಯದಲ್ಲಿ ಮತ್ತು ಮಧ್ಯಾಹ್ನದ ಸಮಯದಲ್ಲಿ ಅಪರಿಚಿತ ವ್ಯಕ್ತಿಗಳ ಜೊತೆಯಲ್ಲಾಗಲೀ, ಒಬ್ಬಂಟಿಗನಾಗಲೀ ಅಥವಾ ಶೂದ್ರರ ಜೊತೆಯಲ್ಲಾಗಲೀ ಹೋಗಬಾರದು.

ಪಂಥಾ ದೇಯೋ ಬ್ರಾಹ್ಮಣಾಯ ಗೋಭ್ಯೋ ರಾಜಭ್ಯ ಏವ ಚ ।
ವೃದ್ಧಾಯ ಭಾರತಪ್ತಾಯ ಗರ್ಭಿಣ್ಯೈ ದುರ್ಬಲಾಯ ಚ ॥೫೦॥

ಎದುರಿನಿಂದ ಬಂದ ಬ್ರಾಹ್ಮಣನಿಗೆ ದಾರಿಯನ್ನು ಬಿಟ್ಟುಕೊಡಬೇಕು. ಗೋವುಗಳಿಗೆ, ರಾಜರಿಗೆ, ಹಿರಿಯರಿಗೆ, ಭಾರವನ್ನು ಹೊತ್ತವನಿಗೆ, ಗರ್ಭಿಣಿಗೆ ಮತ್ತು ಅಶಕ್ತನಾದವನಿಗೆ ದಾರಿಯನ್ನು ಬಿಟ್ಟುಕೊಡಬೇಕು.

ಪ್ರದಕ್ಷಿಣಂ ಚ ಕುರ್ವೀತ ಪರಿಜ್ಞಾತಾನ್ ವನಸ್ಪತೀನ್ ।
ಚತುಷ್ಪಥಾನ್ ಪ್ರಕುರ್ವೀತ ಸರ್ವಾನೇವ ಪ್ರದಕ್ಷಿಣಾನ್ ॥೫೧॥

ನಡೆಯುವಾಗ ಪರಿಚಿತವಾದ ವನಸ್ಪತಿಗಳನ್ನು ಬಲಭಾಗಕ್ಕೆ ಮಾಡಿಕೊಂಡು ನಡೆಯಬೇಕು. ಎಲ್ಲಾ ಚತುಷ್ಪಥಗಳನ್ನು ಬಲಭಾಗಕ್ಕೆ ಬಿಟ್ಟುಕೊಂಡು ಎಡಭಾಗದಲ್ಲಿ ನಡೆಯಬೇಕು.

ಮಧ್ಯಂದಿನೇ ನಿಶಾಕಾಲೇ ಮಧ್ಯರಾತ್ರೇ ಚ ಸರ್ವದಾ ।
ಚತುಷ್ಪಥಾನ್ನ ಸೇವೇತ ಉಭೇ ಸಂಧ್ಯೇ ತಥೈವ ಚ ॥೫೨॥

ಮಧ್ಯಂದಿನ ಸಮಯದಲ್ಲಿ, ಮಧ್ಯರಾತ್ರಿಯ ಸಮಯದಲ್ಲಿ ಮತ್ತು ರಾತ್ರಿಯ ಸಮಯದಲ್ಲಿ ಮತ್ತು ಎರಡು ಸಂಧ್ಯಾಕಾಲಗಳಲ್ಲಿ ಚತುಷ್ಪಥಗಳ ಬಳಿ ಹೋಗಬಾರದು.

ಉಪಾನಹೌ ಚ ವಸ್ತ್ರಂ ಚ ಧೃತಮನ್ಯೈರ್ನ ಧಾರಯೇತ್ ।
ಬ್ರಹ್ಮಚಾರೀ ಚ ನಿತ್ಯಂ ಸ್ಯಾತ್ ಪಾದಂ ಪಾದೇನ ನಾಕ್ರಮೇತ್ ॥೫೩॥

ಇನ್ನೊಬ್ಬರು ಧರಿಸಿದ ಪಾದರಕ್ಷೆಗಳನ್ನು ಮತ್ತು ವಸ್ತ್ರಗಳನ್ನು ಧರಿಸಬಾರದು. ಯಾವಾಗಲೂ ಬ್ರಹ್ಮಚಾರಿಯಾಗಿರಬೇಕು. ಕಾಲಿನಿಂದ ಕಾಲನ್ನು ತುಳಿಯಬಾರದು.

ಅಮಾವಾಸ್ಯಾಂ ಪೌರ್ಣಮಾಸ್ಯಾಂ ಚತುರ್ದಶ್ಯಾಂ ಚ ಸರ್ವಶಃ ।
ಅಷ್ಟಮ್ಯಾಂ ಸರ್ವಪಕ್ಷಾಣಾಂ ಬ್ರಹ್ಮಚಾರೀ ಸದಾ ಭವೇತ್ ॥೫೪॥

ಅಮಾವಾಸ್ಯೆಯಂದು, ಪೌರ್ಣಮಾಸ್ಯೆಯಂದು, ಎರಡು ಚತುರ್ದಶಿಗಳಂದು ಮತ್ತು ಎರಡು ಪಕ್ಷಗಳ ಅಷ್ಟಮಿಯಂದು ಸ್ತ್ರೀಸಂಗವನ್ನು ಮಾಡಬಾರದು.

ವೃಥಾಮಾಂಸಂ ನ ಖಾದೇತ ಪೃಷ್ಠಮಾಂಸಂ ತಥೈವ ಚ ।
ಆಕ್ರೋಶಂ ಪರಿವಾದಂ ಚ ಪೈಶುನ್ಯಂ ಚ ವಿವರ್ಜಯೇತ್ ॥೫೫॥

ವ್ಯರ್ಥವಾಗಿ ಮಾಂಸವನ್ನು ತಿನ್ನಬಾರದು (ಶ್ರಾದ್ಧ ಮತ್ತು ಯಜ್ಞಗಳಲ್ಲಿ ಬಿಟ್ಟು ಉಳಿದ ಕಾಲದಲ್ಲಿ ಮಾಂಸವು ವ್ಯರ್ಥಮಾಂಸ ಎನಿಸಿಕೊಳ್ಳುತ್ತದೆ). ಪೃಷ್ಠಭಾಗದ ಮಾಂಸವನ್ನು ತಿನ್ನಬಾರದು. ದೊಡ್ಡವರ ವಿರುದ್ಧ ಕಿರುಚುವುದು, ನಿಂದಿಸುವುದು ಮತ್ತು ಚಾಡಿ ಹೇಳುವುದನ್ನು ವರ್ಜಿಸಬೇಕು.

ನಾರುಂತುದಃ ಸ್ಯಾನ್ನ ನೃಶಂಸವಾದೀ
ನ ಹೀನತಃ ಪರಮಭ್ಯಾದದೀತ ।
ಯಯಾಽಸ್ಯ ವಾಚಾ ಪರ ಉದ್ವಿಜೇತ
ನ ತಾಂ ವದೇದ್ ರುಶತೀಂ ಪಾಪಲೋಕ್ಯಾಮ್ ॥೫೬॥

ಮರ್ಮಭೇದಕವಾದ ಮಾತುಗಳನ್ನಾಗಲೀ, ಕ್ರೂರವಾದ ಮಾತುಗಳನ್ನಾಗಲೀ ಆಡಬಾರದು. ಹೀನನಾದ ಮನುಷ್ಯನಿಂದ ಏನನ್ನೂ ಸ್ವೀಕರಿಸಬಾರದು. ತಾನು ಯಾವ ಮಾತನ್ನಾಡಿದರೆ ಇನ್ನೊಬ್ಬನು ಉದ್ವೇಗಕ್ಕೆ ಒಳಗಾಗುತ್ತಾನೆಯೋ ಅಂತಹ ತೀಕ್ಷ್ಣವಾದ, ಪಾಪಲೋಕ ಸಂಪಾದಕವಾದ ಮಾತುಗಳನ್ನು ಆಡಬಾರದು.

ವಾಕ್ಸಾಯಕಾ ವದನಾನ್ನಿಷ್ಪತಂತಿ
ಯೈರಾಹತಃ ಶೋಚತಿ ರಾತ್ರ್ಯಹಾನಿ ।
ಪರಸ್ಯ ನಾಮರ್ಮಸು ತೇ ಪತಂತಿ
ತಾನ್ ಪಂಡಿತೋ ನಾವಸೃಜೇತ್ ಪರೇಷು ॥೫೭॥

ವಾಗ್ಬಾಣಗಳು ಮುಖದಿಂದ ಹೊರಹೊಮ್ಮುತ್ತವೆ. ಅವುಗಳಿಂದ ಗಾಯಗೊಂಡ ಮನುಷ್ಯನು ಹಗಲೂ, ರಾತ್ರಿಯೂ ದುಃಖಪಡುತ್ತಾನೆ. ಅಂತಹ ವಾಗ್ಬಾಣಗಳು ಮರ್ಮಸ್ಥಾನಗಳಲ್ಲಿಯೇ ಬೀಳುತ್ತವೆ (ಮರ್ಮಸ್ಥಾನವಲ್ಲದ ಕಡೆ ಬೀಳುವುದಿಲ್ಲ). ಪಂಡಿತನಾದವನು ಇನ್ನೊಬ್ಬನ ಮೇಲೆ ಅಂತಹ ವಾಗ್ಬಾಣಗಳನ್ನು ಪ್ರಯೋಗಿಸಬಾರದು.

ರೋಹತೇ ಸಾಯಕೈರ್ವಿದ್ಧಂ ವನಂ ಪರಶುನಾ ಹತಮ್ ।
ವಾಚಾ ದುರುಕ್ತಂ ಬೀಭತ್ಸಂ ನ ಸಂರೋಹತಿ ವಾಕ್‌ಕ್ಷತಮ್ ॥೫೮॥

ಬಾಣಗಳಿಂದ ಹೊಡೆಯಲ್ಪಟ್ಟ ಮರವು ಚಿಗುರುತ್ತದೆ. ಕೊಡಲಿಯಿಂದ ಕಡಿಯಲ್ಪಟ್ಟ ಕಾಡು ಚಿಗುರುತ್ತದೆ. ಆದರೆ ದುರ್ವಚನಗಳಿಂದ ಉಂಟಾದ ಭಯಂಕರವಾದ ಗಾಯವು ಮಾತ್ರ ಪುನಃ ಬೆಳೆಯುವುದಕ್ಕೆ ಅವಕಾಶವನ್ನು ಕೊಡುವುದಿಲ್ಲ.

ಹೀನಾಂಗಾನತಿರಿಕ್ತಾಂಗಾನ್ ವಿದ್ಯಾಹೀನಾನ್ ವಯೋಧಿಕಾನ್ ।
ರೂಪದ್ರವಿಣಹೀನಾಂಶ್ಚ ಸತ್ತ್ವಹೀನಾಂಶ್ಚ ನಾಕ್ಷಿಪೇತ್ ॥೫೯॥

ಅಂಗವಿಕಲರಾದವರನ್ನೂ, ಅಧಿಕಾಂಗರಾದವರನ್ನೂ, ವಿದ್ಯಾಹೀನರಾದವರನ್ನೂ, ವಯಸ್ಸಿನಲ್ಲಿ ಹಿರಿಯರಾದವರನ್ನೂ, ರೂಪಹೀನರಾದವರನ್ನೂ, ವಯೋಹೀನರಾದವರನ್ನೂ, ಧೈರ್ಯಹೀನರಾದವರನ್ನೂ ನಿಂದಿಸಬಾರದು.

ನಾಸ್ತಿಕ್ಯಂ ವೇದನಿಂದಾಂ ಚ ದೇವತಾನಾಂ ಚ ಕುತ್ಸನಮ್ ।
ದ್ವೇಷಸ್ತಂಭಾಭಿಮಾನಾಂಶ್ಚ ತೈಕ್ಷ್ಣ್ಯಂ ಚ ಪರಿವರ್ಜಯೇತ್ ॥೬೦॥

ನಾಸ್ತಿಕ್ಯವಾದ, ವೇದನಿಂದೆ, ದೇವತೆಗಳ ಅವಹೇಳನ, ದ್ವೇಷ, ಗರ್ವ, ಅಭಿಮಾನ ಮತ್ತು ಕ್ರೂರತೆಗಳನ್ನು ವರ್ಜಿಸಬೇಕು.

ಪರಸ್ಯ ದಂಡಂ ನೋದ್ಯಚ್ಛೇತ್ ಕ್ರುದ್ಧೋ ನೈನಂ ನಿಪಾತಯೇತ್ ।
ಅನ್ಯತ್ರ ಪುತ್ರಾಚ್ಛಿಷ್ಯಾದ್ ವಾ ಶಿಕ್ಷಾರ್ಥಂ ತಾಡನಂ ಸ್ಮೃತಮ್ ॥೬೧॥

ಇನ್ನೊಬ್ಬನನ್ನು ದಂಡದಿಂದ ಹೊಡೆಯಬಾರದು. ಕೋಪದಿಂದ ತಳ್ಳಿ ಕೆಡವಬಾರದು. ಪುತ್ರನನ್ನು ಮತ್ತು ಶಿಷ್ಯನನ್ನು ಬಿಟ್ಟು ಯಾರನ್ನೂ ಶಿಕ್ಷಿಸಬಾರದು. ಪುತ್ರ-ಶಿಷ್ಯರಿಗೆ ಹೊಡೆದರೂ ಅವರಿಗೆ ಶಿಕ್ಷಣವನ್ನು ಕೊಡುವುದಕ್ಕಾಗಿಯೇ ಇರಬೇಕು.

ನ ಬ್ರಾಹ್ಮಣಾನ್ ಪರಿವದೇನ್ನಕ್ಷತ್ರಾಣಿ ನ ನಿರ್ದಿಶೇತ್ ।
ತಿಥಿಂ ಪಕ್ಷಸ್ಯ ನ ಬ್ರೂಯಾತ್ ತಸ್ಯಾಯುರ್ನ ಚ ರಿಷ್ಯತೇ ॥೬೨॥

ಬ್ರಾಹ್ಮಣರನ್ನು ನಿಂದಿಸಬಾರದು. ನಕ್ಷತ್ರಗಳನ್ನು ಬೆಟ್ಟು ಮಾಡಿ ತೋರಿಸಬಾರದು. ಪಕ್ಷದ ತಿಥಿಯನ್ನು ಹೇಳಬಾರದು. ಅಂತಹವನ ಆಯುಸ್ಸು ಕ್ಷೀಣವಾಗುವುದಿಲ್ಲ.

ಕೃತ್ವಾ ಮೂತ್ರಪುರೀಷೇ ತು ರಥ್ಯಾಮಾಕ್ರಮ್ಯ ವಾ ಪುನಃ ।
ಪಾದಪ್ರಕ್ಷಾಲನಂ ಕುರ್ಯಾತ್ ಸ್ವಾಧ್ಯಾಯೇ ಭೋಜನೇ ತಥಾ ॥೬೩॥

ಮಲ-ಮೂತ್ರ ವಿಸರ್ಜನೆಯನ್ನು ಮಾಡಿ ಅಥವಾ ರಸ್ತೆಯಲ್ಲಿ ತುಳಿದು ಪಾದಪ್ರಕ್ಷಾಲನೆಯನ್ನು ಮಾಡಿಕೊಳ್ಳದೆ ಸ್ವಾಧ್ಯಾಯವನ್ನು ಅಥವಾ ಭೋಜನವನ್ನು ಮಾಡಬಾರದು.

ತ್ರೀಣಿ ದೇವಾಃ ಪವಿತ್ರಾಣಿ ಬ್ರಾಹ್ಮಣಾನಾಮಕಲ್ಪಯನ್ ।
ಅದೃಷ್ಟಮದ್ಭಿರ್ನಿರ್ಣಿಕ್ತಂ ಯಚ್ಚ ವಾಚಾ ಪ್ರಶಸ್ಯತೇ ॥೬೪॥

ಶೂದ್ರಾದಿಗಳ ಅದರ್ಶನ, ಜಲದಿಂದ ಶೋಧನ ಮತ್ತು ಮಾತಿನಿಂದ ಪ್ರಶಂಸೆ ಈ ಮೂರು ಪದಾರ್ಥಗಳನ್ನು ದೇವತೆಗಳು, ಬ್ರಾಹ್ಮಣರಿಗೆ ಪವಿತ್ರವಾದವುಗಳೆಂದು ಕಲ್ಪಿಸಿದರು.

ಸಂಯಾವಂ ಕೃಸರಂ ಮಾಂಸಂ ಶಷ್ಕುಲೀಃ ಪಾಯಸಂ ತಥಾ ।
ಆತ್ಮಾರ್ಥಂ ನ ಪ್ರಕರ್ತವ್ಯಂ ದೇವತಾನಾಂ ತು ಕಲ್ಪಯೇತ್ ॥೬೫॥

ಗಂಜಿಯನ್ನಾಗಲೀ, ಗೋಧಿಯ ಪಕ್ವಾನ್ನವನ್ನಾಗಲೀ, ಮಾಂಸವನ್ನಾಗಲೀ, ಚಕ್ಕುಲಿಯನ್ನಾಗಲೀ, ಪಾಯಸವನ್ನಾಗಲೀ ತನ್ನ ಸಲುವಾಗಿ ಮಾಡಿಕೊಳ್ಳಬಾರದು. ದೇವರಿಗಾಗಿ ಮಾಡಬೇಕು.

ನಿತ್ಯಮಗ್ನಿಂ ಪರಿಚರೇದ್ ಭಿಕ್ಷಾಂ ದದ್ಯಾಚ್ಚ ನಿತ್ಯದಾ ।
ವಾಗ್ಯತೋ ದಂತಕಾಷ್ಠಂ ಚ ನಿತ್ಯಮೇವ ಸಮಾಚರೇತ್ ।
ನ ಚಾಭ್ಯುದಿತಶಾಯೀ ಸ್ಯಾತ್ ಪ್ರಾಯಶ್ಚಿತ್ತೀ ತಥಾ ಭವೇತ್ ॥೬೬॥

ನಿತ್ಯವೂ ಅಗ್ನಿಯನ್ನು ಪರಿಚರಿಸಬೇಕು. ಭಿಕ್ಷೆಯನ್ನು ನೀಡಬೇಕು. ಮೌನವಾಗಿ ನಿತ್ಯವಾಗಿ ದಂತಧಾವನವನ್ನು ಮಾಡಿಕೊಳ್ಳಬೇಕು. ಸೂರ್ಯನು ಉದಯಿಸಿದ ಮೇಲೆಯೂ ಮಲಗಿರಬಾರದು. ಹಾಗೆ ಮಾಡಿದರೆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕು.

ಮಾತಾಪಿತರಮುತ್ಥಾಯ ಪೂರ್ವಮೇವಾಭಿವಾದಯೇತ್ ।
ಆಚಾರ್ಯಮಥ ವಾಪ್ಯೇನಂ ತಥಾऽऽಯುರ್ವಿಂದತೇ ಮಹತ್ ॥೬೭॥

ತಂದೆ-ತಾಯಿಗಳಿಗಿಂತ ಮೊದಲು ಎದ್ದು, ಅವರನ್ನು ಎಬ್ಬಿಸಿ ಮೊದಲು ನಮಸ್ಕಾರವನ್ನು ಮಾಡಬೇಕು. ಆಚಾರ್ಯರಿಗೆ ನಮಸ್ಕಾರವನ್ನು ಮಾಡಬೇಕು. ಅಂತಹವನು ದೀರ್ಘಾಯುಸ್ಸನ್ನು ಪಡೆಯುತ್ತಾನೆ.

ವರ್ಜಯೇದ್ ದಂತಕಾಷ್ಠಾನಿ ವರ್ಜನೀಯಾನಿ ನಿತ್ಯಶಃ ।
ಭಕ್ಷಯೇಚ್ಛಾಸ್ತ್ರದೃಷ್ಟಾನಿ ಪರ್ವಸ್ವಪಿ ಚ ವರ್ಜಯೇತ್ ॥೬೮॥

ನಿತ್ಯದಲ್ಲಿಯೂ ನಿಷಿದ್ಧವಾದ ದಂತಕಾಷ್ಠಗಳನ್ನು ಪರಿತ್ಯಜಿಸಬೇಕು. ಶಾಸ್ತ್ರವಿಹಿತವಾದುದನ್ನೇ ಭುಂಜಿಸಬೇಕು (ದಂತಧಾವನಕ್ಕೆ ಉಪಯೋಗಿಸಬೇಕು). ಪರ್ವಕಾಲದಲ್ಲಿ ಅವುಗಳಲ್ಲಿಯೂ ಕೆಲವನ್ನು ಬಿಡಬೇಕು.

ಉದಙ್ಮುಖಶ್ಚ ಸತತಂ ಶೌಚಂ ಕುರ್ಯಾತ್ ಸಮಾಹಿತಃ ।
ಅಕೃತ್ವಾ ದೇವತಾಪೂಜಾಂ ನಾನ್ಯಂ ಗಚ್ಛೇತ್ ಕದಾಚನ ।
ಅನ್ಯತ್ರ ತು ಗುರುಂ ವೃದ್ಧಂ ಧಾರ್ಮಿಕಂ ವಾ ವಿಚಕ್ಷಣಃ ॥೭೦॥

ಸತತವಾಗಿ (ಹಗಲಿನಲ್ಲಿ) ಉತ್ತರಾಭಿಮುಖವಾಗಿ ಶೌಚವನ್ನು ಮಾಡಿಕೊಳ್ಳಬೇಕು. ವಿವೇಕಿಯಾದವನು ದೇವತಾಪೂಜೆಯನ್ನು ಮಾಡದೆ ಗುರುಗಳನ್ನು, ಹಿರಿಯರನ್ನು ಅಥವಾ ಧಾರ್ಮಿಕರನ್ನು ಬಿಟ್ಟು ಇನ್ನೊಬ್ಬರ ಕಡೆಗೆ ಹೋಗಬಾರದು.

ಅವಲೋಕ್ಯೋ ನ ಚಾದರ್ಶೋ ಮಲಿನೋ ಬುದ್ಧಿಮತ್ತರೈಃ ।
ನ ಚಾಜ್ಞಾತಾಂ ಸ್ತ್ರಿಯಂ ಗಚ್ಛೇದ್ ಗರ್ಭಿಣೀಂ ವಾ ಕದಾಚನ ॥೭೧॥

ಮೇಧಾವಿಯಾದವನು ಮಲಿನನಾಗಿದ್ದಾಗ ಕನ್ನಡಿಯಲ್ಲಿ ತನ್ನನ್ನು ನೋಡಿಕೊಳ್ಳ-ಬಾರದು. ಅಪರಿಚಿತರಾದ ಸ್ತ್ರೀಯರೊಡನೆ ಅಥವಾ ಗರ್ಭಿಣಿಯರೊಡನೆ ಸಮಾಗಮವನ್ನು ಮಾಡಬಾರದು.

ಉದಕ್‌ಶಿರಾ ನ ಸ್ವಪೇತ ತಥಾ ಪ್ರತ್ಯಕ್‌ಶಿರಾ ನ ಚ ।
ಪ್ರಾಕ್‌ಶಿರಾಸ್ತು ಸ್ವಪೇದ್ ವಿದ್ವಾನಥ ವಾ ದಕ್ಷಿಣಾಶಿರಾಃ ॥೭೨॥

ಉತ್ತರಾಭಿಮುಖವಾಗಿ ಅಥವಾ ಪಶ್ಚಿಮಾಭಿಮುಖವಾಗಿ ಮಲಗಬಾರದು. ವಿದ್ವಾಂಸನಾದವನು ಪೂರ್ವಾಭಿಮುಖವಾಗಿ ಅಥವಾ ದಕ್ಷಿಣಾಭಿಮುಖವಾಗಿ ಮಲಗಬೇಕು.

ನ ಭಗ್ನೇ ನಾವದೀರ್ಣೇ ವಾ ಶಯನೇ ಪ್ರಸ್ವಪೇತ ಚ ।
ನಾಂತರ್ಧಾನೇ ನ ಸಂಯುಕ್ತೇ ನ ಚ ತಿರ್ಯಕ್‌ಕದಾಚನ ॥೭೩॥

ಒಡೆದುಹೋದ ಅಥವಾ ಸೀಳಿ ಹೋದ (ಹರಿದು ಹೋದ) ಹಾಸಿಗೆಯಲ್ಲಿ ಮಲಗಬಾರದು, ಕತ್ತಲೆಯಲ್ಲಿ ಮಲಗಬಾರದು. ಇನ್ನೊಬ್ಬನ ಜೊತೆಯಲ್ಲಿ ಒಂದೇ ಹಾಸಿಗೆಯಲ್ಲಿ ಮಲಗಬಾರದು. ಹಾಸಿಗೆಯಲ್ಲಿ ಅಡ್ಡಲಾಗಿ ಮಲಗಬಾರದು.

ನ ನಗ್ನಃ ಕರ್ಹಿಚಿತ್ ಸ್ನಾಯಾನ್ನ ನಿಶಾಯಾಂ ಕದಾಚನ ।
ಸ್ನಾತ್ವಾ ಚ ನಾವಮೃಜ್ಯೇತ ಗಾತ್ರಾಣಿ ಸುವಿಚಕ್ಷಣಃ ॥೭೪॥

ಯಾವ ಕಾರಣದಿಂದಲೂ ನಗ್ನನಾಗಿ ಸ್ನಾನವನ್ನು ಮಾಡಬಾರದು. ರಾತ್ರಿಯಲ್ಲಿ ಸ್ನಾನವನ್ನು ಮಾಡಬಾರದು. ಮೇಧಾವಿಯಾದವನು ಸ್ನಾನವನ್ನು ಮಾಡಿ ಅನಂತರ ದೇಹಕ್ಕೆ ತೈಲವನ್ನು ಹಚ್ಚಿಕೊಳ್ಳಬಾರದು.

ನ ಚಾನುಲಿಂಪೇದಸ್ನಾತ್ವಾ ಸ್ನಾತ್ವಾ ವಾಸೋ ನ ನಿರ್ಧುನೇತ್ ।
ಆರ್ದ್ರ ಏವ ತು ವಾಸಾಂಸಿ ನಿತ್ಯಂ ಸೇವೇತ ಮಾನವಃ ।
ಸ್ರಜಶ್ಚ ನಾವಕರ್ಷೇತ ನ ಬಹಿರ್ಧಾರಯೇತ ಚ ॥೭೫॥

ಸ್ನಾನವನ್ನು ಮಾಡದೆ ತೈಲವನ್ನು ಹಚ್ಚಿಕೊಳ್ಳಬಾರದು. ಸ್ನಾನವನ್ನು ಮಾಡಿದ ಮೇಲೆ ವಸ್ತ್ರವನ್ನು ಕೊಡವಲೂ ಬಾರದು. ಮನುಷ್ಯನು ಆರ್ದ್ರನಾಗಿಯೇ ವಸ್ತ್ರವನ್ನು ಧರಿಸಬೇಕು. ಪುಷ್ಪಮಾಲೆಗಳನ್ನು ಎಳೆದು ಕೀಳಬಾರದು ಮತ್ತು ಹೊರಗೆ ಹಾಕಿಕೊಳ್ಳಬಾರದು.

ರಕ್ತಮಾಲ್ಯಂ ನ ಧಾರ್ಯಂ ಸ್ಯಾಚ್ಛುಕ್ಲಂ ಧಾರ್ಯಂ ತು ಪಂಡಿತೈಃ ।
ವರ್ಜಯಿತ್ವಾ ತು ಕಮಲಂ ತಥಾ ಕುವಲಯಂ ವಿಭೋ ॥೭೬॥

ಪಂಡಿತನು ರಕ್ತಪುಷ್ಪಗಳನ್ನು ಮುಡಿಯಬಾರದು. ಕಮಲ ಮತ್ತು ಕುವಲಯಗಳನ್ನು ಬಿಟ್ಟು ಉಳಿದ ಶ್ವೇತಪುಷ್ಪಗಳನ್ನು ಮಾತ್ರ ಧರಿಸಬೇಕು.

ರಕ್ತಂ ಶಿರಸಿ ಧಾರ್ಯಂ ತು ತಥಾ ಕಾಲೇಯಮಿತ್ಯಪಿ ।
ಕಾಂಚನೀ ಚೈವ ಯಾ ಮಾಲಾ ನ ಸಾ ದುಷ್ಯತಿ ಕರ್ಹಿಚಿತ್ ।
ಸ್ನಾತಸ್ಯ ವರ್ಣಕಂ ನಿತ್ಯಮಾರ್ದ್ರಂ ದದ್ಯಾದ್ ವಿಶಾಂಪತೇ ॥೭೭॥

ಆಯಾ ಕಾಲದಲ್ಲಿ ಸಿಗುವ (ಅಥವಾ ವನದಲ್ಲಿ ಬೆಳೆಯುವ) ರಕ್ತಪುಷ್ಪಗಳನ್ನು ತಲೆಯಲ್ಲಿ ಧರಿಸಬಹುದು (ಅತಿರಕ್ತ ಪುಷ್ಪಗಳಾಗಿರಬಾರದು). ಚಿನ್ನದ ಮಾಲೆಗಳಿಗೆ ಯಾವ ದೋಷವೂ ಇರುವುದಿಲ್ಲ.

ವಿಪರ್ಯಯಂ ನ ಕುರ್ವೀತ ವಾಸಸೋ ಬುದ್ಧಿಮಾನ್ನರಃ ।
ತಥಾ ನಾನ್ಯದ್‌ಧೃತಂ ಧಾರ್ಯಂ ನ ಚಾಪದಶಮೇವ ಚ ॥೭೮॥

ವಸ್ತ್ರಗಳನ್ನು ಉಡುವುದನ್ನು ಹೊದೆಯುವುದಕ್ಕೆ, ಹೊದೆಯುವುದನ್ನು ಉಡುವುದಕ್ಕೆ - ಹೀಗೆ ವ್ಯತ್ಯಾಸವನ್ನು ಮಾಡಬಾರದು. ಇನ್ನೊಬ್ಬನ ವಸ್ತ್ರವನ್ನು ಅಥವಾ ಅಂಚಿಲ್ಲದ ವಸ್ತ್ರವನ್ನು ಉಡಬಾರದು.

ಅನ್ಯದೇವ ಭವೇದ್ ವಾಸಃ ಶಯನೀಯೇ ನರೋತ್ತಮ ।
ಅನ್ಯದ್ ರಥ್ಯಾಸು ದೇವಾನಾಮರ್ಚಾಯಾಮನ್ಯದೇವ ಹಿ ॥೭೯॥

ಎಲೈ ನರೋತ್ತಮನೇ, ಹಾಸಿಗೆಯಲ್ಲಿ ಬೇರೆ ವಸ್ತ್ರವನ್ನು ಉಪಯೋಗಿಸಬೇಕು. ಪೂಜೆಯಲ್ಲಿ ಬೇರೆ ವಸ್ತ್ರಗಳು ಮತ್ತು ಬೀದಿಗಳಲ್ಲಿ ನಡೆಯುವಾಗ ಬೇರೆ ವಸ್ತ್ರಗಳನ್ನು ಉಪಯೋಗಿಸಬೇಕು.

ಪ್ರಿಯಂಗುಚಂದನಾಭ್ಯಾಂ ಚ ಬಿಲ್ವೇನ ತಗರೇಣ ಚ ।
ಪೃಥಗೇವಾನುಲಿಂಪೇತ ಕೇಸರೇಣ ಚ ಬುದ್ಧಿಮಾನ್ ॥೮೦॥

ಪ್ರಿಯಂಗು, ಶ್ರೀಗಂಧ, ಬಿಲ್ವ ಮತ್ತು ನಂದ್ಯಾವರ್ತ ಗಿಡಗಳ ಗಂಧಗಳನ್ನು ಮತ್ತು ಕೇಸರಿಯನ್ನು ಬುದ್ಧಿವಂತನಾದವನು ಪ್ರತ್ಯೇಕವಾಗಿ ಹಚ್ಚಿಕೊಳ್ಳಬೇಕು.

ಉಪವಾಸಂ ಚ ಕುರ್ವೀತ ಸ್ನಾತಃ ಶುಚಿರಲಂಕೃತಃ ।
ಪರ್ವಕಾಲೇಷು ಸರ್ವೇಷು ಬ್ರಹ್ಮಚಾರೀ ಸದಾ ಭವೇತ್ ॥೮೧॥

ಎಲ್ಲ ಪರ್ವಕಾಲಗಳಲ್ಲಿಯೂ ಸ್ನಾನವನ್ನು ಮಾಡಿ, ಶುಚಿಯಾಗಿ, ಅಲಂಕೃತನಾಗಿ ಉಪವಾಸವನ್ನು ಮಾಡಬೇಕು ಮತ್ತು ಬ್ರಹ್ಮಚರ್ಯದಿಂದ ಇರಬೇಕು.

ನಾಲೀಢಯಾ ಪರಿಹತಂ ಭಕ್ಷಯೇತ ವಿಚಕ್ಷಣಃ ।
ತಥಾ ನೋದ್ಧೃತಸಾರಾಣಿ ಪ್ರೇಕ್ಷತಾಂ ನಾಪ್ರದಾಯ ಚ ॥೮೨॥

ರಜಸ್ವಲೆಯ ದೃಷ್ಟಿಯಿಂದ ದೂಷಿತವಾದ ಅನ್ನವನ್ನು ವಿಚಕ್ಷಣನಾದವನು ಭಕ್ಷಿಸಬಾರದು. ಹಾಗೆಯೇ ಸಾರವನ್ನು ತೆಗೆದ ಪದಾರ್ಥಗಳನ್ನೂ, ನೋಡುವವರಿಗೆ ಕೊಡದಿರುವ ಪದಾರ್ಥಗಳನ್ನೂ ತಿನ್ನಬಾರದು.

ನ ಸನ್ನಿಕೃಷ್ಟೋ ಮೇಧಾವೀ ನಾಶುಚಿರ್ನ ಚ ಸತ್ಸು ಚ ।
ಪ್ರತಿಷಿದ್ಧಾನ್ನ ಧರ್ಮೇಷು ಭಕ್ಷಾನ್ ಭುಂಜೀತ ಪೃಷ್ಠತಃ ॥೮೩॥

ಮೇಧಾವಿಯಾದವನು ಅಪವಿತ್ರನ ಸನ್ನಿಕರ್ಷವಿರುವಾಗ ಅಥವಾ ತಾನು ಅಶುಚಿಯಾಗಿರುವಾಗ ಅಥವಾ ಸಜ್ಜನರ ಎದುರಿಗೆ ಕುಳಿತು ತಿನ್ನಬಾರದು. ಧರ್ಮಶಾಸ್ತ್ರದಲ್ಲಿ ಪ್ರತಿಷಿದ್ಧವಾದುದನ್ನು ತಿನ್ನಬಾರದು. ಮರೆಯಲ್ಲಿ ಹೋಗಿ ತಿನ್ನಬಾರದು.

ಪಿಪ್ಪಲಂ ಚ ವಟಂ ಚೈವ ಶಣಶಾಕಂ ತಥೈವ ಚ ।
ಉದುಂಬರಂ ನ ಖಾದೇಚ್ಚ ಭವಾರ್ಥೀ ಪುರುಷೋತ್ತಮಃ ॥೮೪॥

ತನ್ನ ಕಲ್ಯಾಣವನ್ನು ಬಯಸುವ ಶ್ರೇಷ್ಠ ಪುರುಷನು ಅರಳಿಯ ಹಣ್ಣು, ಆಲದ ಹಣ್ಣು, ಶಣಶಾಕ (ನುಗ್ಗೇಕಾಯಿ) ಮತ್ತು ಅತ್ತಿಹಣ್ಣುಗಳನ್ನು ತಿನ್ನಬಾರದು.

ಆಜಂ ಗವ್ಯಂ ಚ ಯನ್ಮಾಂಸಂ ಮಾಯೂರಂ ಚೈವ ವರ್ಜಯೇತ್ ।
ವರ್ಜಯೇಚ್ಚುಷ್ಕಮಾಂಸಂ ಚ ತಥಾ ಪರ್ಯುಷಿತಂ ಚ ಯತ್ ॥೮೫॥

ಆಡಿನ, ಗೋವಿನ ಮತ್ತು ನವಿಲಿನ ಮಾಂಸಗಳನ್ನು ವರ್ಜಿಸಬೇಕು. ಒಣಗಿದ ಮಾಂಸವನ್ನೂ ಮತ್ತು ಹಳಸಿದ ಮಾಂಸವನ್ನೂ ವರ್ಜಿಸಬೇಕು.

ನ ಪಾಣೌ ಲವಣಂ ವಿದ್ವಾನ್ ಪ್ರಾಶ್ನೀಯಾನ್ನ ಚ ರಾತ್ರಿಷು ।
ದಧಿಸಕ್ತೂನ್ನ ಭುಂಜೀತ ವೃಥಾಮಾಂಸಂ ಚ ವರ್ಜಯೇತ್ ॥೮೬॥

ಕೈಯಿಂದ ಲವಣವನ್ನು ತೆಗೆದು (ಹಾಕಿಕೊಂಡು) ತಿನ್ನಬಾರದು. ರಾತ್ರಿಯಲ್ಲಿ ಲವಣವನ್ನು ತಿನ್ನಬಾರದು. ಮೊಸರಿನಲ್ಲಿ ಕಲಸಿದ ಹಿಟ್ಟನ್ನು ಮತ್ತು ವ್ಯರ್ಥವಾದ ಮಾಂಸವನ್ನು ವರ್ಜಿಸಬೇಕು.

ವಾಲೇನ ತು ನ ಭುಂಜೀತ ಪರಶ್ರಾದ್ಧಂ ತಥೈವ ಚ ।
ಸಾಯಂ ಪ್ರಾತಶ್ಚ ಭುಂಜೀತ ನಾಂತರಾಲೇ ಸಮಾಹಿತಃ ॥೮೭॥

ಕೂದಲು ಬೆರೆತ ಅನ್ನವನ್ನು ತಿನ್ನಬಾರದು. ಇನ್ನೊಬ್ಬನ ಶ್ರಾದ್ಧದಲ್ಲಿ ಊಟವನ್ನು ಮಾಡಬಾರದು. ಸಾಯಂಕಾಲದಲ್ಲಿ ಮತ್ತು ಪ್ರಾತಃಕಾಲದಲ್ಲಿ ಊಟವನ್ನು ಮಾಡಬೇಕು. ಮಧ್ಯದಲ್ಲಿ ಏನನ್ನೂ ತಿನ್ನಬಾರದು.

ವಾಗ್ಯತೋ ನೈಕವಸ್ತ್ರಶ್ಚ ನಾಸಂವಿಷ್ಟಃ ಕದಾಚನ ।
ಭೂಮೌ ಸದೈವ ನಾಶ್ನೀಯಾನ್ನಾನಾಸೀನೋ ನ ಶಬ್ದವತ್ ॥೮೮॥

ಒಂದೇ ವಸ್ತ್ರವನ್ನು ಧರಿಸಿ, ಕುಳಿತುಕೊಳ್ಳದೆ ಊಟವನ್ನು ಮಾಡಬಾರದು. ಮೌನದಿಂದ ಊಟವನ್ನು ಮಾಡಬೇಕು. ಆಸನವಿಲ್ಲದ ಭೂಮಿಯಲ್ಲಿ ಕುಳಿತು ಶಬ್ದ ಸಹಿತವಾಗಿ ತಿನ್ನಬಾರದು.

ತೋಯಪೂರ್ವಂ ಪ್ರದಾಯಾನ್ನಮತಿಥಿಭ್ಯೋ ವಿಶಾಂಪತೇ ।
ಪಶ್ಚಾದ್ ಭುಂಜೀತ ಮೇಧಾವೀ ನ ಚಾಪ್ಯನ್ಯಮನಾ ನರಃ ॥೮೯॥

ಎಲೈ ರಾಜನೇ, ಅತಿಥಿಗಳಿಗೆ ಮೊದಲು ನೀರನ್ನು ಕೊಟ್ಟು ಅನಂತರ ಅನ್ನವನ್ನು ಕೊಡಬೇಕು. ಮೇಧಾವಿಯಾದವನು ಅನಂತರ ಏನನ್ನೂ ಯೋಚಿಸದೆ ಭೋಜನವನ್ನು ಮಾಡಬೇಕು.

ಸಮಾನಮೇಕಪಂಕ್ತ್ಯಾಂ ತು ಭುಂಜೀತಾನ್ನಂ ಜನೇಶ್ವರ ।
ವಿಷಂ ಹಾಲಾಹಲಂ ಭುಂಕ್ತೇ ಯೋಽಪ್ರದಾಯ ಸುಹೃಜ್ಜನೇ ॥೯೦॥

ಎಲೈ ಜನೇಶ್ವರನೇ, ಒಂದು ಪಂಕ್ತಿಯಲ್ಲಿ ಸಮಾನವಾದ ಭೋಜನವನ್ನು ನೀಡಬೇಕು (ಅಥವಾ ಭುಂಜಿಸಬೇಕು). ಯಾವನು ಪಂಕ್ತಿಯಲ್ಲಿ ಕುಳಿತು ಸುಹೃಜ್ಜನರಿಗೆ ಕೊಡದೆ ತಾನೇ ಭುಂಜಿಸುತ್ತಾನೋ ಅವನು ಹಾಲಾಹಲ ವಿಷವನ್ನು ಭುಂಜಿಸುತ್ತಾನೆ.

ಪಾನೀಯಂ ಪಾಯಸಂ ಸರ್ಪಿರ್ದಧಿಸಕ್ತುಮಧೂನ್ಯಪಿ ।
ನಿರಸ್ಯ ದೋಷಮನ್ಯೇಷಾಂ ನ ಪ್ರದೇಯಂ ತು ಕಸ್ಯಚಿತ್ ॥೯೧॥

ನೀರು, ಪಾಯಸ, ಘೃತ, ದಧಿ, ಸಕ್ತು (ಬೋಧಿಭಕ್ಷ್ಯ) ಮತ್ತು ಜೇನುತುಪ್ಪಗಳಲ್ಲಿ ದೋಷವೇನಾದರೂ ಇದ್ದರೆ ಅದನ್ನು ಧಿಕ್ಕರಿಸಿ ಯಾರಿಗೂ ಬಡಿಸಬಾರದು.

ಭುಂಜಾನೋ ಮನುಜವ್ಯಾಘ್ರ ನೈವ ಶಂಕಾಂ ಸಮಾಚರೇತ್ ।
ಅಭಿಗಮ್ಯೋದಪಾನಂ ವೈ ನ ಕರ್ತವ್ಯಂ ಭವಾರ್ಥಿನಾ ॥೯೨॥

ಎಲೈ ಮನುಜವ್ಯಾಘ್ರನೇ, ಊಟ ಮಾಡುವವನು ಆಹಾರದ ವಿಷಯದಲ್ಲಿ ಶಂಕಿಸಬಾರದು. ಶ್ರೇಯಸ್ಸನ್ನು ಬಯಸುವವನು ತಿರುಗಾಡುತ್ತಾ ಜಲಪಾನವನ್ನು ಮಾಡಬಾರದು (ಲಕ್ಷಾಲಂಕಾರ).

ಆಚಮ್ಯ ಚೈವ ಹಸ್ತೇನ ಪರಿಸ್ರಾವ್ಯ ತಥೋದಕಮ್ ।
ಅಂಗುಷ್ಠಂ ಚರಣಸ್ಯಾಥ ದಕ್ಷಿಣಸ್ಯಾವಸೇಚಯೇತ್ ॥೯೩॥

ಭೋಜನಾನಂತರದಲ್ಲಿ ಆಚಮನವನ್ನು ಮಾಡಿ, ಹಸ್ತದ ನೀರನ್ನು ಸೋರಿಸಿ, ಬಲಗೈಯಿಂದ ಬಲಗಾಲಿನ ಅಂಗುಷ್ಠದ ಮೇಲೆ ನೀರನ್ನು ಚುಮುಕಿಸಬೇಕು.

ಪಾಣಿಂ ಮೂರ್ಧ್ನಿ ಸಮಾಧಾಯ ಸ್ಪೃಷ್ಟ್ವಾ ಚಾಗ್ನಿಂ ಸಮಾಹಿತಃ ।
ಜ್ಞಾತಿಶ್ರೈಷ್ಠ್ಯಮವಾಪ್ನೋತಿ ಪ್ರಯೋಗಕುಶಲೋ ನರಃ ॥೯೪॥

ಅನಂತರ ತನ್ನ ಶಿರಸ್ಸಿನ ಮೇಲೆ ಕೈಯನ್ನಿಟ್ಟು ಸಮಾಧಾನದಿಂದ ಅಗ್ನಿಸ್ಪರ್ಶವನ್ನು ಮಾಡುವ, ಪ್ರಯೋಗಕುಶಲನಾದ ನರನು ತನ್ನ ಬಂಧುಗಳಲ್ಲಿ ಶ್ರೇಷ್ಠತ್ವವನ್ನು ಪಡೆಯುತ್ತಾನೆ.

ಅದ್ಭಿಃ ಪ್ರಾಣಾನ್ ಸಮಾಲಭ್ಯ ನಾಭಿಂ ಪಾಣಿತಳೇನ ಚ ।
ಸ್ಪೃಶಂಶ್ಚೈವ ಪ್ರತಿಷ್ಠೇತ ನ ಚಾಪ್ಯಾರ್ದ್ರೇಣ ಪಾಣಿನಾ ॥೯೫॥

ನೀರಿನಿಂದ ಇಂದ್ರಿಯಗಳನ್ನು ಸ್ಪರ್ಶ ಮಾಡಿ, ಅಂಗೈಯಿಂದ ನಾಭಿಯನ್ನು ಸ್ಪರ್ಶ ಮಾಡಿ ಹೊರಡಬೇಕು. ಆರ್ದ್ರವಾದ ಹಸ್ತದಿಂದ ಹೊರಡಬಾರದು.

ಅಂಗುಷ್ಠಮೂಲಸ್ಯ ತಳೇ ಬ್ರಾಹ್ಮಂ ತೀರ್ಥಮುದಾಹೃತಮ್ ।
ಕನಿಷ್ಠಿಕಾಯಾಃ ಪಶ್ಚಾತ್ ತು ದೇವತೀರ್ಥಮಿಹೋಚ್ಯತೇ ॥೯೬॥

ಬಲಗೈ ಹೆಬ್ಬೆಟ್ಟಿನ ಮೂಲದಲ್ಲಿ ಬ್ರಾಹ್ಮತೀರ್ಥವಿದೆ. ಕಿರುಬೆರಳಿನ ಹಿಂಭಾಗದಲ್ಲಿ ಅಥವಾ ಅನಂತರದಲ್ಲಿ ದೇವತೀರ್ಥವಿದೆ (ಇದನ್ನು ಋಷಿತೀರ್ಥವೆಂದೂ ಹೇಳುವುದುಂಟು).

ಅಂಗುಷ್ಠಸ್ಯ ಚ ಯನ್ಮಧ್ಯಂ ಪ್ರದೇಶಿನ್ಯಾಶ್ಚ ಭಾರತ ।
ತೇನ ಪಿತ್ರ್ಯಾಣಿ ಕುರ್ವೀತ ಸ್ಪೃಷ್ಟ್ವಾಪೋ ನ್ಯಾಯತಸ್ತಥಾ ॥೯೭॥

ಎಲೈ ಭಾರತನೇ, ಅಂಗುಷ್ಠ ಮತ್ತು ತೋರು ಬೆರಳುಗಳ ಮಧ್ಯದಲ್ಲಿ, ಹಸ್ತತಳದಲ್ಲಿ ಪಿತೃತೀರ್ಥವಿದೆ. ಆ ಪಿತೃತೀರ್ಥದಿಂದಲೇ ಶಾಸ್ತ್ರಸಮ್ಮತವಾದ ರೀತಿಯಲ್ಲಿ ಪಿತೃಗಳಿಗೆ ತರ್ಪಣವನ್ನು ಕೊಡಬೇಕು.

ಪರಾಪವಾದಂ ನ ಬ್ರೂಯಾನ್ನಾಪ್ರಿಯಂ ಚ ಕದಾಚನ ।
ನ ಮನ್ಯುಃ ಕಶ್ಚಿದುತ್ಪಾದ್ಯಃ ಪುರುಷೇಣ ಭವಾರ್ಥಿನಾ ॥೯೮॥

ಕಲ್ಯಾಣವನ್ನು ಬಯಸುವ ಪುರುಷನು ಇನ್ನೊಬ್ಬರನ್ನು ನಿಂದಿಸಬಾರದು. ಇನ್ನೊಬ್ಬರಿಗೆ ಅಪ್ರಿಯವಾದುದನ್ನು ಮಾತನಾಡಬಾರದು. ಕೋಪವನ್ನು ತಂದುಕೊಳ್ಳಬಾರದು.

ಪತಿತೈಸ್ತು ಕಥಾಂ ನೇಚ್ಛೇದ್ ದರ್ಶನಂ ಚಾಪಿ ವರ್ಜಯೇತ್ ।
ಸಂಸರ್ಗಂ ಚ ನ ಗಚ್ಛೇತ ತಥಾಯುರ್ವಿಂದತೇ ಮಹತ್ ॥೯೯॥

ಪತಿತರ ಜೊತೆಯಲ್ಲಿ ಮಾತನಾಡಬಾರದು. ಅವರ ದರ್ಶನವನ್ನೂ ವರ್ಜಿಸಬೇಕು. ಅವರ ಸಹವಾಸವನ್ನು ಹೊಂದಬಾರದು. ಹಾಗೆ ಮಾಡಿದರೆ ಆಯುಸ್ಸು ವೃದ್ಧಿಯನ್ನು ಹೊಂದುತ್ತದೆ.

ನ ದಿವಾ ಮೈಥುನಂ ಗಚ್ಛೇನ್ನ ಕನ್ಯಾಂ ನ ಚ ಬಂಧಕೀಮ್ ।
ನ ಚಾಸ್ನಾತಾಂ ಸ್ತ್ರಿಯಂ ಗಚ್ಛೇತ್ ತಥಾಯುರ್ವಿಂದತೇ ಮಹತ್ ॥

ಹಗಲಿನಲ್ಲಿ ಮೈಥುನವನ್ನು ಮಾಡಬಾರದು. ಕನ್ಯೆಯ ಅಥವಾ ವ್ಯಭಿಚಾರಿಣಿಯ ಜೊತೆಯಲ್ಲಿ ಮೈಥುನವನ್ನು ಮಾಡಬಾರದು. ಸ್ನಾನವನ್ನು ಮಾಡದಿದ್ದ ಸ್ತ್ರೀಯ ಜೊತೆಯಲ್ಲಿ ಮೈಥುನವನ್ನು ಮಾಡಬಾರದು. ಅದರಿಂದ ದೀರ್ಘಾಯುಷ್ಯವನ್ನು ಹೊಂದುತ್ತಾನೆ.

ಸ್ವೇ ಸ್ವೇ ತೀರ್ಥೇ ಸಮಾಚಮ್ಯ ಕಾರ್ಯೇ ಸಮುಪಕಲ್ಪಿತೇ ।
ತ್ರಿಃ ಪೀತ್ವಾಪೋ ದ್ವಿಃ ಪ್ರಮೃಜ್ಯ ಕೃತಶೌಚೋ ಭವೇನ್ನರಃ ॥೧೦೦॥

ತಮ್ಮ ತಮ್ಮ ಪಾತ್ರೆಯಲ್ಲಿದ್ದ ಜಲದಿಂದ ಆಚಮನವನ್ನು ಮಾಡಿ ಕಾರ್ಯಗಳನ್ನು ಮಾಡಬೇಕು. ಮೂರು ಬಾರಿ ನೀರನ್ನು ಕುಡಿದು, ಎರಡು ಬಾರಿ ಕೈಗಳನ್ನು ಒರೆಸಿಕೊಂಡರೆ ಮನುಷ್ಯನು ಶುಚಿಯಾಗುತ್ತಾನೆ.

ಇಂದ್ರಿಯಾಣಿ ಸಕೃತ್ ಸ್ಪೃಶ್ಯ ತ್ರಿರಭ್ಯುಕ್ಷ್ಯ ಚ ಮಾನವಃ ।
ಕುರ್ವೀತ ಪಿತ್ರ್ಯಂ ದೈವಂ ಚ ವೇದದೃಷ್ಟೇನ ಕರ್ಮಣಾ ॥೧೦೨॥

ಇಂದ್ರಿಯಗಳನ್ನು ಒಂದೊಂದು ಬಾರಿ ಸ್ಪರ್ಶ ಮಾಡಿ, ಮೂರು ಬಾರಿ ಜಲಸಿಂಚನೆಯನ್ನು ಮಾಡಿ ವೇದದೃಷ್ಟವಿಧಾನದಿಂದ ಮನುಷ್ಯನು ಪಿತೃ ಕಾರ್ಯವನ್ನು ಮತ್ತು ದೇವಕಾರ್ಯವನ್ನು ಮಾಡಬೇಕು.

ಬ್ರಾಹ್ಮಣಾರ್ಥೇ ಚ ಯಚ್ಚೌಚಂ ತಚ್ಚ ಮೇ ಶೃಣು ಕೌರವ ।
ಪ್ರವೃತ್ತಂ ಚ ಹಿತಂ ಚೋಕ್ತ್ವಾ ಭೋಜನಾದ್ಯಂತಯೋಸ್ತಥಾ ॥೧೦೩॥

ಎಲೈ ಕೌರವನೇ, ಬ್ರಾಹ್ಮಣರ ಭೋಜನದ ಸಲುವಾಗಿ ಭೋಜನದ ಮೊದಲಿನಲ್ಲಿ ಮತ್ತು ಕೊನೆಯಲ್ಲಿ ಪ್ರವೃತ್ತವಾಗುವ, ಹಿತವಾದ ವಿಧಿಗಳನ್ನು ಕೇಳುವವನಾಗು.

ಸರ್ವಶೌಚೇಷು ಬ್ರಾಹ್ಮೇಣ ತೀರ್ಥೇನ ಸಮುಪಸ್ಪೃಶೇತ್ ।
ನಿಷ್ಠೀವ್ಯ ತು ತಥಾ ಕ್ಷುತ್ವಾ ಸ್ಪೃಶ್ಯಾಪೋ ಹಿ ಶುಚಿರ್ಭವೇತ್ ॥೧೦೪॥

ಎಲ್ಲ ಶೌಚಕಾರ್ಯಗಳಲ್ಲಿಯೂ ಹಿಂದೆ ಹೇಳಿದ ಬ್ರಾಹ್ಮತೀರ್ಥದಿಂದಲೇ ಜಲ ಸ್ಪರ್ಶವನ್ನು ಮಾಡಬೇಕು. ಉಗುಳಿದರೆ ಮತ್ತು ಸೀನಿದರೆ ಜಲಸ್ಪರ್ಶವನ್ನು ಮಾಡಿ ಶುದ್ಧನಾಗುತ್ತಾನೆ.

ವೃದ್ಧೋ ಜ್ಞಾತಿಸ್ತಥಾ ಮಿತ್ರಂ ದರಿದ್ರೋ ಯೋ ಭವೇದಪಿ ।
ಗೃಹೇ ವಾಸಯಿತವ್ಯಾಸ್ತೇ ಧನ್ಯಮಾಯುಷ್ಯಮೇವ ಚ ॥೧೦೫॥

ವೃದ್ಧನಾದವನು, ಜ್ಞಾತಿಯಾದವನು, ಮಿತ್ರನಾದವನು ಮತ್ತು ದರಿದ್ರನಾದವನು ಯಾವನಿದ್ದಾನೆಯೋ ಅವನನ್ನು ನಿನ್ನ ಮನೆಯಲ್ಲಿ ಇಟ್ಟುಕೊಳ್ಳಬೇಕು. ಅದು ಧನಪ್ರದವಾದುದು ಮತ್ತು ಆಯುಃಪ್ರದವಾದುದು.

ಗೃಹೇ ಪಾರಾವತಾ ಧನ್ಯಾಃ ಶುಕಾಶ್ಚ ಸಹಶಾರಿಕಾಃ ।
ದೇವತಾ ಪ್ರತಿಮಾದರ್ಶಾಶ್ಚಂದನಾಃ ಪುಷ್ಪವಲ್ಲಿಕಾಃ ।
ಶುದ್ಧಂ ಜಲಂ ಸುವರ್ಣಂ ಚ ರಜತಂ ಗೃಹಮಂಗಲಮ್ ॥೧೦೬॥

ಗೃಹೇಷ್ವೇತೇ ನ ಪಾಪಾಯ ನಿವಿಷ್ಟಾಸ್ಸೈಲಪಾಯಿಕಾಃ ॥೧೦೭॥

ಮನೆಯಲ್ಲಿ ಪಾರಿವಾಳಗಳು, ಗಿಣಿಗಳು ಮತ್ತು ಮೈನಾ ಹಕ್ಕಿಗಳು, ದೇವತಾ ಪ್ರತಿಮೆಗಳು, ಕನ್ನಡಿ, ಗಂಧ, ಹೂಬಳ್ಳಿಗಳು, ಶುದ್ಧವಾದ ಜಲ, ಚಿನ್ನ, ಬೆಳ್ಳಿ ಎಲ್ಲವೂ ಶುಭವಾದವುಗಳು ಮತ್ತು ಮಂಗಳಪ್ರದವಾದವುಗಳು. ಮೈನಾ ಹಕ್ಕಿ (ಹೆಣ್ಣು ಗಿಳಿ) ಇವುಗಳು ಅಥವಾ ಹೆಣ್ಣು ಸಾರಸ ಪಕ್ಷಿಗಳು ಮನೆಯಲ್ಲಿ ಇದ್ದರೆ ಯಾವ ಅನಿಷ್ಟವೂ ಉಂಟಾಗುವುದಿಲ್ಲ (ಲಕ್ಷಾಲಂಕಾರ).

ಉಪದೀಪಾಶ್ಚ ಗೃಧ್ರಾಶ್ಚ ಕಪೋತಾ ಭ್ರಮರಾಸ್ತಥಾ ।
ನಿವಿಶೇಯುರ್ಯದಾ ತತ್ರ ಶಾಂತಿಹೋಮಂ ಸಮಾಚರೇತ್ ॥೧೦೮॥

ಪತಂಗಗಳು, ಹದ್ದುಗಳು, ಬಾವಲಿಗಳು, ದುಂಬಿಗಳು ಮನೆಯನ್ನು ಪ್ರವೇಶಿಸಿದರೆ ಶಾಂತಿಹೋಮವನ್ನು ಮಾಡಬೇಕು (ಲಕ್ಷಾಲಂಕಾರ).

ಅಮಂಗಲ್ಯಾನಿ ಚೈತಾನಿ ತಥಾಕ್ರೋಶೋ ಮಹಾತ್ಮನಾಮ್ ।
ಮಹಾತ್ಮನಾಂ ಚ ಗುಹ್ಯಾನಿ ನ ವಕ್ತವ್ಯಾನಿ ಕರ್ಹಿಚಿತ್ ॥೧೦೯॥

ಇವುಗಳು ಅಮಂಗಳವಾದವುಗಳು. ಹಾಗೆಯೇ ಮಹಾತ್ಮರನ್ನು ಕಿರುಚಿ ನಿಂದಿಸುವುದು ಅಮಂಗಳವಾದುದು. ದೊಡ್ಡವರಿಗೆ ಸಂಬಂಧಿಸಿದ ರಹಸ್ಯಗಳನ್ನು ಯಾವ ಕಾರಣದಿಂದಲೂ ಹೇಳಬಾರದು.

ಅಗಮ್ಯಾಶ್ಚ ನ ಗಚ್ಛೇತ ರಾಜಪತ್ನೀಃ ಸಖೀಸ್ತಥಾ ।
ವೈದ್ಯಾನಾಂ ಬಾಲವೃದ್ಧಾನಾಂ ಭೃತ್ಯಾನಾಂ ಚ ಯುಧಿಷ್ಠಿರ ॥೧೧೦॥

ಎಲೈ ಯುಧಿಷ್ಠಿರನೇ, ಅಗಮ್ಯರಾದ ರಾಜಪತ್ನಿಯರ, ಸ್ನೇಹಿತೆಯರ, ವೈದ್ಯರ, ಬಾಲರ, ವೃದ್ಧರ, ಭೃತ್ಯರ ಸ್ತ್ರೀಯರು - ಇವರ ಸಂಗವನ್ನು ಮಾಡಬಾರದು.

ಬಂಧೂನಾಂ ಬ್ರಾಹ್ಮಣಾನಾಂ ಚ ತಥಾ ಶಾರಣಿಕಸ್ಯ ಚ ।
ಸಂಬಂಧಿನಾಂ ಚ ರಾಜೇಂದ್ರ ತಥಾಯುರ್ವಿಂದತೇ ಮಹತ್ ॥೧೧೧॥

ಎಲೈ ರಾಜೇಂದ್ರನೇ, ಬಂಧುಗಳ, ಬ್ರಾಹ್ಮಣರ, ಶರಣಾಗತರಾದವರ, ಸಂಬಂಧಿಗಳ ಸ್ತ್ರೀಯರನ್ನು ಸ್ಪರ್ಶಿಸಬಾರದು. ಆ ರೀತಿ ಮಾಡಿ ದೀರ್ಘಾಯುಷ್ಯ- ವನ್ನು ಹೊಂದುತ್ತಾನೆ.

ಬ್ರಾಹ್ಮಣಸ್ಥಪತಿಭ್ಯಾಂ ಚ ನಿರ್ಮಿತಂ ಯನ್ನಿವೇಶನಮ್ ।
ತದಾವಸೇತ್ ಸದಾ ಪ್ರಾಜ್ಞೋ ಭವಾರ್ಥೀ ಮನುಜೇಶ್ವರ ॥೧೧೨॥

ಎಲೈ ಮನುಜೇಶ್ವರನೇ, ಕಲ್ಯಾಣವನ್ನು ಬಯಸುವ ಪ್ರಾಜ್ಞನಾದವನು ಬ್ರಾಹ್ಮಣರಿಂದ ಶುದ್ಧಿಮಾಡಲ್ಪಟ್ಟು ಬಡಗಿಯಿಂದ ನಿರ್ಮಿತವಾದ ಗೃಹದಲ್ಲಿ ವಾಸವನ್ನು ಮಾಡಬೇಕು.

ಸಂಧ್ಯಾಯಾಂ ನ ಸ್ವಪೇದ್ ರಾಜನ್ ವಿದ್ಯಾಂ ನ ಚ ಸಮಾಚರೇತ್ ।
ನ ಭುಂಜೀತ ಚ ಮೇಧಾವೀ ತಥಾಯುರ್ವಿಂದತೇ ಮಹತ್ ॥೧೧೩॥

ಎಲೈ ರಾಜನೇ, ಸಂಧ್ಯಾಕಾಲದಲ್ಲಿ ನಿದ್ರೆಯನ್ನು ಮಾಡಬಾರದು. ವಿದ್ಯಾಭ್ಯಾಸವನ್ನು ಮಾಡಬಾರದು. ಮೇಧಾವಿಯಾದವನು ಆಗ ಏನನ್ನೂ ತಿನ್ನಬಾರದು. ಅದರಿಂದ ದೀರ್ಘಾಯುಸ್ಸನ್ನು ಹೊಂದುತ್ತಾನೆ.

ನಕ್ತಂ ನ ಕುರ್ಯಾತ್ ಪಿತ್ರ್ಯಾಣಿ ರಾತ್ರಿರನ್ಯತ್ರ ದರ್ಶನಮ್ ।
ಪಾನೀಯಸ್ಯ ಕ್ರಿಯಾ ನಕ್ತಂ ನ ಕಾರ್ಯಾ ಭೂತಿಮಿಚ್ಛತಾ ॥೧೧೪॥

ರಾತ್ರಿಯ ವೇಳೆಯಲ್ಲಿ ದರ್ಶನವನ್ನು ಬಿಟ್ಟು ಬೇರೆ ಪಿತೃಕಾರ್ಯವನ್ನು ಮಾಡಬಾರದು. ಐಶ್ವರ್ಯವನ್ನು ಪಡೆಯಲು ಬಯಸುವವನು ರಾತ್ರಿಯ ವೇಳೆಯಲ್ಲಿ ವಿಶೇಷ ಪಾನೀಯಾದಿಗಳನ್ನು ಸ್ವೀಕರಿಸಬಾರದು.

ವರ್ಜನೀಯಾಶ್ಚ ವೈ ನಿತ್ಯಂ ಸಕ್ತವೋ ನಿಶಿ ಭಾರತ ।
ಶೇಷಾಣಿ ಚಾವದಾತಾನಿ ಪಾನೀಯಂ ಚೈವ ಭೋಜನೇ ॥೧೧೫॥

ಎಲೈ ಭಾರತನೇ, ರಾತ್ರಿಯ ವೇಳೆಯಲ್ಲಿ ಸಕ್ತುಗಳನ್ನು (ಹಿಟ್ಟುಗಳನ್ನು) ಯಾವಾಗಲೂ ವರ್ಜಿಸಬೇಕು. ಭೋಜನ ವಿಷಯದಲ್ಲಿ ಬ್ರಾಹ್ಮಣರಿಗೆ ಅನ್ನದಾನವನ್ನು ಮಾಡಿ ಉಳಿದ ಶೇಷವೂ ಮತ್ತು ಪಾನೀಯವೂ ಶುದ್ಧವಾದವುಗಳು.

ಸೌಹಿತ್ಯಂ ಚ ನ ಕರ್ತವ್ಯಂ ರಾತ್ರೌ ಚ ಮನಸಾಚರೇತ್ ।
ದ್ವಿಜಚ್ಛೇದಂ ನ ಕುರ್ವೀತ ಭುಕ್ತ್ವಾ ನ ಚ ಸಮಾಚರೇತ್ ॥೧೧೬॥

ರಾತ್ರಿಯ ವೇಳೆಯಲ್ಲಿ ಪಿತೃತರ್ಪಣವನ್ನು ಕೊಡಬಾರದು. ಹಲ್ಲುಗಳನ್ನು ಕೀಳಬಾರದು. ಊಟವನ್ನು ಮಾಡಿ ಅನಂತರ ತರ್ಪಣಾದಿಗಳನ್ನು ಕೊಡಬಾರದು.

ಮಹಾಕುಲಪ್ರಸೂತಾಂ ಚ ಪ್ರಶಸ್ತಾಂ ಲಕ್ಷಣೈಸ್ತಥಾ ।
ವಯಃಸ್ಥಾಂ ಚ ಮಹಾಪ್ರಾಜ್ಞ ಕನ್ಯಾಮಾವೋಢುಮರ್ಹತಿ ॥೧೧೭॥

ಎಲೈ ಮಹಾಪ್ರಾಜ್ಞನೇ, ಮಹಾಕುಲದಲ್ಲಿ ಜನಿಸಿದ, ಪ್ರಶಸ್ತಳಾದ, ಶುಭಲಕ್ಷಣಗಳಿಂದ ಕೂಡಿದ, ಒಳ್ಳೆಯ ವಯಸ್ಸಿನ ಕನ್ಯೆಯನ್ನು ವಿವಾಹ ಮಾಡಿಕೊಳ್ಳಬೇಕು.

ಅಪತ್ಯಮುತ್ಪಾದ್ಯ ತತಃ ಪ್ರತಿಷ್ಠಾಪ್ಯ ಕುಲಂ ತಥಾ ।
ಪುತ್ರಾಃ ಪ್ರದೇಯಾ ಜ್ಞಾನೇಷು ಕುಲಧರ್ಮೇಷು ಭಾರತ ॥೧೧೮॥

ಎಲೈ ಭಾರತನೇ, ಅವಳಿಂದ ಮಕ್ಕಳನ್ನು ಪಡೆದು, ಕುಲವನ್ನು ಪ್ರತಿಷ್ಠಾಪಿಸಿ, ಪುತ್ರರನ್ನು ಜ್ಞಾನಮಾರ್ಗದಲ್ಲಿ ಮತ್ತು ಕುಲಧರ್ಮಗಳಲ್ಲಿ ತೊಡಗಿಸಬೇಕು.

ಕನ್ಯಾ ಚೋತ್ಪಾದ್ಯ ದಾತವ್ಯಾ ಕುಲಪುತ್ರಾಯ ಧೀಮತೇ ।
ಪುತ್ರಾ ನಿವೇಶ್ಯಾಶ್ಚ ಕುಲಾದ್‌ಭೃತ್ಯಾ ಲಭ್ಯಾಶ್ಚ ಶಿಕ್ಷಿತಾಃ ॥೧೧೯॥

ಜನಿಸಿದ ಪುತ್ರಿಯರನ್ನು ಸತ್ಕುಲ ಪ್ರಸೂತನಾದ, ಮೇಧಾವಿಯಾದವನಿಗೆ ದಾನ ಮಾಡಬೇಕು. ಪುತ್ರರಿಗೂ ಒಳ್ಳೆಯ ಕುಲದಿಂದ ಕನ್ಯೆಯರನ್ನು ತಂದು ವಿವಾಹವನ್ನು ಮಾಡಬೇಕು. ಒಳ್ಳೆಯ ನಡತೆಯುಳ್ಳ ಭೃತ್ಯರನ್ನು ಸಂಪಾದಿಸಬೇಕು.

ಶಿರಃಸ್ನಾತೋಽಥ ಕುರ್ವೀತ ದೈವಂ ಪಿತ್ರ್ಯಮಥಾಪಿ ಚ ।
ನಕ್ಷತ್ರೇ ನ ಚ ಕುರ್ವೀತ ಯಸ್ಮಿನ್ ಜಾತೋ ಭವೇನ್ನರಃ ।
ನ ಪ್ರೋಷ್ಠಪದಯೋಃ ಕಾರ್ಯಂ ತಥಾಗ್ನೇಯೇ ಚ ಭಾರತ ॥೧೨೦॥

ಎಲೈ ಭಾರತನೇ, ದೇವಕಾರ್ಯ ಅಥವಾ ಪಿತೃಕಾರ್ಯವನ್ನು ಶಿರಃಸ್ನಾನವನ್ನು ಮಾಡಿ ಆಚರಿಸಬೇಕು. ತನ್ನ ಜನ್ಮ ನಕ್ಷತ್ರದಲ್ಲಿ ಮನುಷ್ಯನು ಶುಭಕಾರ್ಯವನ್ನು ಮಾಡಬಾರದು. ಹಾಗೆಯೇ ಪೂರ್ವಾಭಾದ್ರ ಮತ್ತು ಉತ್ತರಾಭಾದ್ರ ನಕ್ಷತ್ರದಲ್ಲಿಯೂ ಮತ್ತು ಕೃತ್ತಿಕಾ ನಕ್ಷತ್ರದಲ್ಲಿಯೂ ಶುಭಕಾರ್ಯವು ಪ್ರಶಸ್ತವಲ್ಲ.

ದಾರುಣೇಷು ಚ ಸರ್ವೇಷು ಪ್ರತ್ಯಾರಂಭಂ ವಿವರ್ಜಯೇತ್ ।
ಜ್ಯೌತಿಷೇ ಯಾನಿ ಚೋಕ್ತಾನಿ ಸರ್ವಾಣಿ ಪರಿವರ್ಜಯೇತ್ ॥೧೨೧॥

ದಾರುಣವಾದ ಎಲ್ಲಾ ಕಾಲಗಳಲ್ಲಿಯೂ ಶುಭಕರ್ಮವನ್ನು ಆರಂಭಿಸಬಾರದು. ಜ್ಯೌತಿಷ ಶಾಸ್ತ್ರದಲ್ಲಿ ನಿಷಿದ್ಧವಾದ ಕಾಲಗಳನ್ನು ಬಿಡಬೇಕು.

ಪ್ರಾಙ್ಮುಖಃ ಶ್ಮಶ್ರುಕರ್ಮಾಣಿ ಕಾರಯೇತ ಸಮಾಹಿತಃ ।
ಉದಙ್ಮುಖೋ ವಾ ರಾಜೇಂದ್ರ ತಥಾಯುರ್ವಿಂದತೇ ಮಹತ್ ॥೧೨೨॥

ಎಲೈ ರಾಜೇಂದ್ರನೇ, ಪೂರ್ವಾಭಿಮುಖವಾಗಿ ಅಥವಾ ಉತ್ತರಾಭಿಮುಖವಾಗಿ ಕುಳಿತು ಕ್ಷೌರವನ್ನು ಮಾಡಿಸಿಕೊಳ್ಳಬೇಕು. ಅದರಿಂದ ಆಯುಸ್ಸು ವೃದ್ಧಿಯನ್ನು ಹೊಂದುತ್ತದೆ.

ಪರಿವಾದಂ ನ ಚ ಬ್ರೂಯಾತ್ ಪರೇಷಾಮಾತ್ಮನಸ್ತಥಾ ।
ಪರಿವಾದೋ ನ ಧರ್ಮಾಯ ಪ್ರೋಚ್ಯತೇ ಭರತರ್ಷಭ ॥೧೨೩॥

ಎಲೈ ಭರತಶ್ರೇಷ್ಠನೇ, ತನ್ನನ್ನಾಗಲೀ, ಇನ್ನೊಬ್ಬನನ್ನಾಗಲೀ ನಿಂದಿಸಬಾರದು. ನಿಂದೆಯು ಎಂದೂ ಧರ್ಮವನ್ನು ಉಂಟುಮಾಡುವುದಿಲ್ಲ.

ವರ್ಜಯೇದ್ವ್ಯಂಗಿನೀಂ ನಾರೀಂ ತಥಾ ಕನ್ಯಾಂ ನರೋತ್ತಮ ।
ಸಮಾನಾರ್ಷಾಂ ವ್ಯಂಗಿತಾಂ ಚೈವ ಮಾತುಃ ಸ್ವಕುಲಜಾಂ ತಥಾ ॥೧೨೪॥

ವೃದ್ಧಾಂ ಪ್ರವ್ರಜಿತಾಂ ಚೈವ ತಥೈವ ಚ ಪತಿವ್ರತಾಮ್ ।
ತಥಾತಿಕೃಷ್ಣವರ್ಣಾಂ ಚ ವರ್ಣೋತ್ಕೃಷ್ಟಾಂ ಚ ವರ್ಜಯೇತ್ ॥೧೨೫॥

ಎಲೈ ನರೋತ್ತಮನೇ, ಅಂಗವಿಕಲರಾದ ಸ್ತ್ರೀಯನ್ನು ಅಥವಾ ಕನ್ಯೆಯನ್ನು ಅಥವಾ ಸಮಾನ ಪ್ರವರದವಳನ್ನು, ಮಾತೃಕುಲದವಳನ್ನು, ತನ್ನ ಕುಲದವಳನ್ನು, ವೃದ್ಧಾದವಳನ್ನು, ಸಂನ್ಯಾಸಿನಿಯಾದವಳನ್ನು, ಪತಿವ್ರತೆಯಾದವಳನ್ನು, ಅತಿ ಕಪ್ಪು ಬಣ್ಣದವಳನ್ನು ಮತ್ತು ತನಗಿಂತ ಉತ್ತಮ ವರ್ಣದವಳನ್ನು ವರ್ಜಿಸಬೇಕು.

ಅಯೋನಿಂ ಚ ವಿಯೋನಿಂ ಚ ನ ಗಚ್ಛೇತ ವಿಚಕ್ಷಣಃ ।
ಪಿಂಗಲಾಂ ಕುಷ್ಠಿನೀಂ ನಾರೀಂ ನ ತ್ವಮಾವೋಢುಮರ್ಹಸಿ ॥೧೨೬॥

ವಿಚಕ್ಷಣನಾದವನು ಅಯೋನಿಜೆಯಾದ ಅಥವಾ ವಿರುದ್ಧ ಯೋನಿಯಲ್ಲಿ ಜನಿಸಿದವಳ ಸಮಾಗಮವನ್ನು ಮಾಡಬಾರದು. ಇನ್ನು ಪಿಂಗಳೆ (ಬೂದುವರ್ಣ) ಯನ್ನು, ಕುಷ್ಠ ರೋಗ ಹೊಂದಿದವಳನ್ನು ವಿವಾಹ ಮಾಡಿಕೊಳ್ಳಬಾರದು.

ಅಪಸ್ಮಾರಿಕುಲೇ ಜಾತಾಂ ನಿಹೀನಾಂ ಚೈವ ವರ್ಜಯೇತ್ ।
ಶ್ವಿತ್ರಿಣಾಂ ಚ ಕುಲೇ ಜಾತಾಂ ಕ್ಷಯಿಣಾಂ ಮನುಜೇಶ್ವರ ॥೧೨೭॥

ಎಲೈ ಮನುಜೇಶ್ವರನೇ, ಅಪಸ್ಮಾರರೋಗವನ್ನು ಹೊಂದಿರುವ ಕುಲದಲ್ಲಿ ಜನಿಸಿರುವ ಅಥವಾ ಹೀನ ಜಾತಿಗೆ ಸೇರಿದ ಅಥವಾ ತೊನ್ನು ರೋಗ ಅಥವಾ ಕ್ಷಯ ರೋಗವನ್ನು ಹೊಂದಿದ ಕುಲದಲ್ಲಿ ಜನಿಸಿದ ಸ್ತ್ರೀಯನ್ನು ವಿವಾಹವಾಗಬಾರದು.

ಲಕ್ಷಣೈರನ್ವಿತಾ ಯಾ ಚ ಪ್ರಶಸ್ತಾ ಯಾ ಚ ಲಕ್ಷಣೈಃ ।
ಮನೋಜ್ಞಾ ದರ್ಶನೀಯಾ ಚ ತಾಂ ವೈ ವೋಢುಮಿಹಾರ್ಹತಿ ॥೧೨೮॥

ಯಾವಳು ಪ್ರಶಸ್ತವಾದ ಲಕ್ಷಣಗಳಿಂದ ಕೂಡಿರುತ್ತಾಳೆಯೋ, ಮನೋಹರಳೂ ಮತ್ತು ಸುಂದರಿಯಾಗಿರುತ್ತಾಳೆಯೋ ಅಂತಹವಳನ್ನು ಮದುವೆ ಮಾಡಿಕೊಳ್ಳಬೇಕು.

ಮಹಾಕುಲೇ ನಿವೇಷ್ಟವ್ಯಂ ಸದೃಶೇ ವಾ ಯುಧಿಷ್ಠಿರ ।
ಅವರಾ ಪತಿತಾ ಚೈವ ನ ಗ್ರಾಹ್ಯಾ ಭೂತಿಮಿಚ್ಛತಾ ॥೧೨೯॥

ಎಲೈ ಯುಧಿಷ್ಠಿರನೇ, ಪುತ್ರಿಯನ್ನು ಸದೃಶವಾದ ಮಹಾಕುಲಕ್ಕೆ ಕೊಟ್ಟು ಮದುವೆ ಮಾಡಬೇಕು. ಪತಿತಳೂ, ನೀಚಳೂ ಆದವಳನ್ನು ಕಲ್ಯಾಣವನ್ನು ಬಯಸುವವನು ಮದುವೆ ಮಾಡಿಕೊಳ್ಳಬಾರದು (ಸೊಸೆನ್ನಾಗಿಯೂ ತರಬಾರದು).

ಅಗ್ನೀನುತ್ಪಾದ್ಯ ಯತ್ನೇನ ಕ್ರಿಯಾಃ ಸುವಿಹಿತಾಶ್ಚ ಯಾಃ ।
ವೇದೇಷು ಬ್ರಾಹ್ಮಣೈಃ ಪ್ರೋಕ್ತಾಸ್ತಾಶ್ಚ ಸರ್ವಾಃ ಸಮಾಚರೇತ್ ॥೧೩೦॥

ಅಗ್ನಿಯನ್ನು ಉತ್ಪತ್ತಿ ಮಾಡಿ ವೇದಗಳಲ್ಲಿ ಹೇಳಿರುವ ಕ್ರಿಯೆಗಳನ್ನು ಬ್ರಾಹ್ಮಣರಿಂದ ಚೆನ್ನಾಗಿ ಮಾಡಿಸಿ ವಿವಾಹವಾಗಬೇಕು.

ನ ಚೇರ್ಷ್ಯಾ ಸ್ತ್ರೀಷು ಕರ್ತವ್ಯಾ ದಾರಾ ರಕ್ಷ್ಯಾಶ್ಚ ಸರ್ವಶಃ ।
ಅನಾಯುಷ್ಯಾ ಭವೇದೀರ್ಷ್ಯಾ ತಸ್ಮಾದೀರ್ಷ್ಯಾಂ ವಿವರ್ಜಯೇತ್ ॥

ಸ್ತ್ರೀಯರಲ್ಲಿ ಅಸೂಯೆಯನ್ನು ಮಾಡಬಾರದು. ಪತ್ನಿಯರನ್ನು ಎಲ್ಲ ರೀತಿಯಿಂದಲೂ ರಕ್ಷಿಸಬೇಕು. ಈರ್ಷ್ಯೆಯು ಆಯುಸ್ಸನ್ನು ಹಾಳುಮಾಡುತ್ತದೆ. ಆದ್ದರಿಂದ ಅದನ್ನು ವರ್ಜಿಸಬೇಕು.

ಅನಾಯುಷ್ಯೋ ದಿವಾಸ್ವಪ್ನಸ್ತಥಾಭ್ಯುದಿತಶಾಯಿತಾ ।
ಪ್ರಾತರ್ನಿಶಾಯಾಂ ಚ ತಥಾ ಯೇ ಚೋಚ್ಛಿಷ್ಟಾಃ ಸ್ವಪಂತಿ ವೈ ॥೧೩೨॥

ಹಗಲಿನಲ್ಲಿ ಮಲಗುವುದು, ಸೂರ್ಯೋದಯವಾದ ಮೇಲೆಯೂ ಮಲಗಿರುವುದು, ಪ್ರಾತಃಕಾಲ ಮತ್ತು ಸಂಧ್ಯಾಕಾಲದಲ್ಲಿ ಅಥವಾ ರಾತ್ರಿಯಲ್ಲಿ ಉಚ್ಛಿಷ್ಟಾನಾಗಿ ಮಲಗಿರುವುದು ಎಲ್ಲವೂ ಆಯುಃಕ್ಷಯವನ್ನುಂಟು ಮಾಡುತ್ತದೆ.

ಪಾರದಾರ್ಯಮನಾಯುಷ್ಯಂ ನಾಪಿತೋಚ್ಛಿಷ್ಟತಾ ತಥಾ ।
ಯತ್ನತೋ ವೈ ನ ಕರ್ತವ್ಯಮಭ್ಯಾಸಶ್ಚೈವ ಭಾರತ ॥೧೩೩॥

ಎಲೈ ಭಾರತನೇ, ಪರಸ್ತ್ರೀ ಸಮಾಗಮವನ್ನು ಮಾಡುವುದು, ಕ್ಷೌರವನ್ನು ಮಾಡಿಸಿಕೊಂಡು ಸ್ನಾನವನ್ನು ಮಾಡದೆ ಅಶುಚಿಯಾಗಿರುವುದು, ಅಶುಚಿಯಾಗಿ ವಿದ್ಯಾಭ್ಯಾಸ ಮಾಡುವುದು ಎಲ್ಲವೂ ಆಯುಷ್ಯವನ್ನು ಕಳೆಯುತ್ತವೆ. ಪ್ರಯತ್ನಪಟ್ಟು ಇವುಗಳನ್ನು ತ್ಯಜಿಸಬೇಕು.

ಸಂಧ್ಯಾಂ ನ ಭುಂಜೀನ್ನ ಸ್ನಾಯಾನ್ನ ಪುರೀಷಂ ಸಮುತ್ಸೃಜೇತ್ ।
ಪ್ರಯತಶ್ಚ ಭವೇತ್ ತಸ್ಯಾಂ ನ ಕಿಂಚಿತ್ ಸಮುದಾಚರೇತ್ ॥೧೩೪॥

ಸಂಧ್ಯಾಕಾಲದಲ್ಲಿ ಭೋಜನವನ್ನು ಮಾಡಬಾರದು, ಸ್ನಾನವನ್ನು ಮಾಡಬಾರದು, ಮಲವಿಸರ್ಜನೆಯನ್ನು ಮಾಡಬಾರದು. ಆ ಕಾಲದಲ್ಲಿ ಮೌನವಾಗಿದ್ದು (ಸಂಧ್ಯಾ-ವಂದನೆಯನ್ನು ಬಿಟ್ಟು) ಬೇರೆ ಯಾವ ಸತ್ಕಾರ್ಯವನ್ನೂ ಮಾಡಬಾರದು.

ಬ್ರಾಹ್ಮಣಾನ್ ಪೂಜಯೇಚ್ಚಾಪಿ ತಥಾ ಸ್ನಾತ್ವಾ ನರಾಧಿಪ ।
ದೇವಾಂಶ್ಚ ಪ್ರಣಮೇತ್ ಸ್ನಾತೋ ಗುರೂಂಶ್ಚಾಪ್ಯಭಿವಾದಯೇತ್ ॥

ಎಲೈ ನರಾಧಿಪನೇ, ಸ್ನಾನವನ್ನು ಮಾಡಿ ಬ್ರಾಹ್ಮಣರನ್ನು ಪೂಜಿಸಬೇಕು, ಸ್ನಾನವನ್ನು ಮಾಡಿ ದೇವತೆಗಳನ್ನು ನಮಸ್ಕಾರ ಮಾಡಬೇಕು. ಸ್ನಾನವನ್ನು ಮಾಡಿಯೇ ಗುರುಗಳಿಗೆ ನಮಸ್ಕಾರವನ್ನು ಮಾಡಬೇಕು.

ಅನಿಮಂತ್ರಿತೋ ನ ಗಚ್ಛೇತ ಯಜ್ಞಂ ಗಚ್ಛೇತ್ ತು ದರ್ಶಕಃ ।
ಅನಿಮಂತ್ರಿತೇ ಹ್ಯನಾಯುಷ್ಯಂ ಗಮನಂ ತತ್ರ ಭಾರತ ॥೧೩೬॥

ಎಲೈ ಭಾರತನೇ, ಆಹ್ವಾನವಿಲ್ಲದೆ ಎಲ್ಲಿಗೂ ಹೋಗಬಾರದು. ಯಜ್ಞಕ್ಕೆ ಮಾತ್ರ ದರ್ಶನದ ಸಲುವಾಗಿ ಹೋಗಬಹುದು. ಆಹ್ವಾನವಿಲ್ಲದೆ ಹೋಗುವುದು ಆಯುಸ್ಸನ್ನು ಕಳೆಯುತ್ತದೆ.

ನ ಚೈಕೇನ ಪರಿವ್ರಾಜ್ಯಂ ನ ಚೈಕೇನ ಪಥಾ ನಿಶಿ ।
ಅನಾಗತಾಯಾಂ ಸಂಧ್ಯಾಯಾಂ ಪಶ್ಚಿಮಾಯಾಂ ಗೃಹೇ ವಸೇತ್ ॥೧೩೭॥

ಒಬ್ಬನೇ ಸಂಚರಿಸಬಾರದು. ರಾತ್ರಿಯಲ್ಲಿ ಒಂದೇ ಮಾರ್ಗದಲ್ಲಿ ಒಬ್ಬನೇ ಹೋಗಬಾರದು. ಸಾಯಂಸಂಧ್ಯೆಯು ಪ್ರಾಪ್ತವಾಗುತ್ತಿರುವಾಗ ಮನೆಯಲ್ಲಿಯೇ ಇರಬೇಕು.

ಮಾತುಃ ಪಿತುರ್ಗುರೂಣಾಂ ಚ ಕಾರ್ಯಮೇವಾನುಶಾಸನಮ್ ।
ಹಿತಂ ವಾಪ್ಯಹಿತಂ ವಾಪಿ ನ ವಿಚಾರ್ಯಂ ನರರ್ಷಭ ॥೧೩೮॥

ತಂದೆಯ, ತಾಯಿಯ ಮತ್ತು ಗುರುಗಳ ಶಾಸನವನ್ನು ಪಾಲಿಸಬೇಕು. ಎಲೈ ನರರ್ಷಭನೇ, ಅದು ಹಿತವಾಗಲಿ ಅಥವಾ ಅಹಿತವಾಗಲಿ ವಿಚಾರ ಮಾಡತಕ್ಕದ್ದಲ್ಲ.

ಧನುರ್ವೇದೇ ಚ ವೇದೇ ಚ ಯತ್ನಃ ಕಾರ್ಯೋ ನರಾಧಿಪ ।
ಹಸ್ತಿಪೃಷ್ಠೇಽಶ್ವಪೃಷ್ಠೇ ಚ ರಥಚರ್ಯಾಸು ಚೈವ ಹ ।
ಯತ್ನವಾನ್ ಭವ ರಾಜೇಂದ್ರ ಯತ್ನವಾನ್ ಸುಖಮೇಧತೇ ॥೧೩೯॥

ಎಲೈ ನರಾಧಿಪನೇ, ಧನುರ್ವೇದ ಮತ್ತು ವೇದಗಳನ್ನು ಅಭ್ಯಾಸ ಮಾಡಲು ಪ್ರಯತ್ನವನ್ನು ಮಾಡಬೇಕು. ಎಲೈ ರಾಜೇಂದ್ರನೇ, ಅಶ್ವಾರೋಹಣ, ಗಜಾರೋಹಣ ಮತ್ತು ರಥಚರ್ಯೆಗಳಲ್ಲಿ ಪ್ರಯತ್ನವನ್ನು ಮಾಡುವವನು ಸುಖವನ್ನು ಹೊಂದುತ್ತಾನೆ.

ಅಪ್ರಧೃಷ್ಯಶ್ಚ ಶತ್ರೂಣಾಂ ಭೃತ್ಯಾನಾಂ ಸ್ವಜನಸ್ಯ ಚ ।
ಪ್ರಜಾಪಾಲನಯುಕ್ತಶ್ಚ ನ ಕ್ಷತಿಂ ಲಭತೇ ಕ್ವಚಿತ್ ॥೧೪೦॥

ಅಂತಹವನು ಶತ್ರುಗಳಿಂದ ಸೋಲಿಸಲ್ಪಡುವುದಿಲ್ಲ. ಭೃತ್ಯರಿಂದಲೂ, ಸ್ವಜನರಿಂದಲೂ ಅವಮಾನಗೊಳಿಸಲ್ಪಡುವುದಿಲ್ಲ. ಪ್ರಜಾಪಾಲನೆಯಿಂದ ಯುಕ್ತನಾದ ಅವನು ಯಾವ ಹಾನಿಯನ್ನೂ ಹೊಂದುವುದಿಲ್ಲ.

ಯುಕ್ತಿಶಾಸ್ತ್ರಂ ಚ ತೇ ಜ್ಞೇಯಂ ಶಬ್ದಶಾಸ್ತ್ರಂ ಚ ಭಾರತ ।
ಗಂಧರ್ವಶಾಸ್ತ್ರಂ ಚ ಕಲಾಃ ಪರಿಜ್ಞೇಯಾ ನರಾಧಿಪ ॥೧೪೧॥

ಎಲೈ ಭಾರತನೇ, ನೀನು ಯುಕ್ತಿಶಾಸ್ತ್ರವನ್ನು, ಶಬ್ದಶಾಸ್ತ್ರವನ್ನು ಅಭ್ಯಾಸ ಮಾಡಬೇಕು. ಎಲೈ ನರಾಧಿಪನೇ, ಗಂಧರ್ವಶಾಸ್ತ್ರಮೊದಲಾದ ಕಲಾವಿದ್ಯೆಗಳನ್ನೂ ತಿಳಿಯಬೇಕು.

ಪುರಾಣಮಿತಿಹಾಸಾಶ್ಚ ತಥಾಖ್ಯಾನಾನಿ ಯಾನಿ ಚ ।
ಮಹಾತ್ಮನಾಂ ಚ ಚರಿತಂ ಶ್ರೋತವ್ಯಂ ನಿತ್ಯಮೇವ ತೇ ॥೧೪೨॥

ಪುರಾಣಗಳು, ಇತಿಹಾಸಗಳು, ಆಖ್ಯಾನಗಳು, ಮಹಾತ್ಮರ ಚರಿತ್ರೆಗಳು ಇವುಗಳನ್ನು ನಿತ್ಯವೂ ಕೇಳಬೇಕು.

ಮಾನ್ಯಾನಾಂ ಮಾನನಂ ಕುರ್ಯಾನ್ನಿಂದ್ಯಾನಾಂ ನಿಂದನಂ ತಥಾ ।
ಗೋಬ್ರಾಹ್ಮಣಾರ್ಥೇ ಯುಧ್ಯೇತ ಪ್ರಾಣಾನಪಿ ಪರಿತ್ಯಜೇತ್ ॥೧೪೩॥

ಮಾನ್ಯರಾದವರನ್ನು ಸನ್ಮಾನಿಸಬೇಕು. ನಿಂದನೀಯರಾದವರನ್ನು ನಿಂದಿಸಬೇಕು. ಗೋ-ಬ್ರಾಹ್ಮಣರ ಸಲುವಾಗಿ ಯುದ್ಧವನ್ನು ಮಾಡಬೇಕು. ಪ್ರಾಣಗಳನ್ನೂ ಬಿಡಬೇಕು.

ನ ಸ್ತ್ರೀಷು ಸಜ್ಜೇದ್ ದ್ರಷ್ಟವ್ಯಂ ಶಕ್ತ್ಯಾ ದಾನರುಚಿರ್ಭವೇತ್ ।
ನ ಬ್ರಾಹ್ಮಣಾನ್ ಪರಿಭವೇತ್ ಕಾರ್ಪಣ್ಯಂ ಬ್ರಾಹ್ಮಣೇಷು ಚ ।
ಪತಿತಾನ್ನಾಭಿಭಾಷೇತ ನಾಹ್ವಯೇತ ರಜಸ್ವಲಾಮ್ ॥೧೪೪॥

ಸ್ತ್ರೀಯರಲ್ಲಿ ಬಹಳವಾಗಿ ಆಸಕ್ತನಾಗಬಾರದು. ತನ್ನ ಶಕ್ತಿಯಿದ್ದಷ್ಟು ದಾನದಲ್ಲಿ ಅಭಿರುಚಿಯನ್ನು ಹೊಂದಬೇಕು. ಬ್ರಾಹ್ಮಣರಿಗೆ ಯಾವಾಗಲೂ ಕಾರ್ಪಣ್ಯವಿರುತ್ತದೆ. ಅವರನ್ನು ಅವಮಾನಗೊಳಿಸಬಾರದು. ಪತಿತರನ್ನು ಮಾತನಾಡಿಸಬಾರದು. ರಜಸ್ವಲೆಯನ್ನು ಆಹ್ವಾನ ಮಾಡಬಾರದು.

ಪತ್ನೀಂ ರಜಸ್ವಲಾಂ ಚೈವ ನಾಭಿಗಚ್ಛೇನ್ನ ಚಾಹ್ವಯೇತ್ ।
ಸ್ನಾತಾಂ ಚತುರ್ಥೇ ದಿವಸೇ ರಾತ್ರೌ ಗಚ್ಛೇದ್ವಿಚಕ್ಷಣಃ ॥೧೪೫॥

ರಜಸ್ವಲೆಯಾದ ಪತ್ನಿಯ ಗಮನವನ್ನು ಮಾಡಬಾರದು. ಅವಳನ್ನು ಆಹ್ವಾನಿಸಿ ಮಾತನಾಡಬಾರದು. ಶುಚಕ್ಷಣನಾದವನು ಸ್ನಾನಾನಂತರದಲ್ಲಿ ನಾಲ್ಕನೆಯ ದಿವಸ ರಾತ್ರಿಯಲ್ಲಿ (ಅಂದರೆ ರಜೋದರ್ಶನವಾದ ಐದನೆಯ ದಿವಸದ ರಾತ್ರಿಯಲ್ಲಿ) ಮೈಥುನವನ್ನು ಮಾಡಬೇಕು.

ಪಂಚಮೇ ದಿವಸೇ ನಾರೀ ಷಷ್ಠೇऽಹನಿ ಪುಮಾನ್ ಭವೇತ್ ।
ಏತೇನ ವಿಧಿನಾ ನಾರೀಮುಪಗಚ್ಛೇತ ಪಂಡಿತಃ ।
ಆಷೋಡಶಾದೃತುರ್ಮುಖ್ಯಃ ಪುತ್ರಜನ್ಮನಿ ಶಬ್ದಿತಃ ॥೧೪೬॥

ಐದನೆಯ ದಿವಸದಲ್ಲಿ ಕನ್ಯೆಯೂ, ಆರನೆಯ ದಿವಸದಲ್ಲಿ ಪುತ್ರನೂ ಜನಿಸುವರು. ಹದಿನಾರು ದಿವಸಗಳವರೆಗೆ ಮುಖ್ಯವಾದ ಋತುಕಾಲವೆನಿಸುತ್ತದೆ. ಆದ್ದರಿಂದ ಪಂಡಿತನಾದವನು ಈ ಕ್ರಮದಲ್ಲಿ ಪತ್ನಿಯ ಸಮಾಗಮವನ್ನು ಮಾಡಬೇಕು.

ಜ್ಞಾತಿಸಂಬಂಧಿಮಿತ್ರಾಣಿ ಪೂಜನೀಯಾನಿ ನಿತ್ಯಶಃ ।
ಯಷ್ಟವ್ಯಂ ಚ ಯಥಾಶಕ್ತಿ ಯಜ್ಞೈರ್ವಿವಿಧದಕ್ಷಿಣೈಃ ।
ಅತ ಊರ್ಧ್ವಮರಣ್ಯಂ ಚ ಸೇವಿತವ್ಯಂ ನರಾಧಿಪ ॥೧೪೭॥

ದಾಯಾದಿಗಳು, ಬಂಧುಗಳು ಮತ್ತು ಮಿತ್ರರು- ಇವರನ್ನು ಯಾವಾಗಲೂ ಪೂಜಿಸಬೇಕು. ತನ್ನ ಶಕ್ತಿಗೆ ಅನುಗುಣವಾಗಿ ವಿವಿಧವಾದ ದಕ್ಷಿಣೆಗಳನ್ನು ಕೊಟ್ಟು ಯಜ್ಞವನ್ನು ಮಾಡಬೇಕು. ಎಲೈ ನರಾಧಿಪನೇ, ಅಲ್ಲಿಂದ ಮುಂದೆ ವನವಾಸವನ್ನು ಮಾಡಬೇಕು (ಅರಣ್ಯದಲ್ಲಿ ತಪಸ್ಸನ್ನು ಮಾಡಬೇಕು).

ಏಷ ತೇ ಲಕ್ಷಣೋದ್ದೇಶ ಆಯುಷ್ಯಾಣಾಂ ಪ್ರಕೀರ್ತಿತಃ ।
ಶೇಷಸ್ತ್ರೈವಿದ್ಯವೃದ್ಧೇಭ್ಯಃ ಪ್ರತ್ಯಾಹಾರ್ಯೋ ಯುಧಿಷ್ಠಿರ ॥೧೪೮॥

ಆಯುಃಪ್ರದವಾದ ಈ ವಿಷಯಗಳನ್ನು ಸಂಕ್ಷೇಪವಾಗಿ ನಿನಗೆ ಹೇಳಿದ್ದೇನೆ. ಎಲೈ ಯುಧಿಷ್ಠಿರನೇ, ಉಳಿದ ವಿಷಯಗಳನ್ನು ಮೂರು ವೇದಗಳನ್ನು ತಿಳಿದ ವೃದ್ಧರಿಂದ ಕೇಳಿ ಸ್ವೀಕರಿಸಬೇಕು.

ಆಚಾರೋ ಭೂತಿಜನನೋ ಹ್ಯಾಚಾರೋ ಕೀರ್ತಿವರ್ಧನಃ ।
ಆಚಾರಾದ್ ವರ್ಧತೇ ಹ್ಯಾಯುರಾಚಾರೋ ಹಂತ್ಯಲಕ್ಷಣಮ್ ॥

ಆಚಾರವು ಐಶ್ವರ್ಯವನ್ನುಂಟು ಮಾಡುತ್ತದೆ, ಕೀರ್ತಿಯನ್ನು ಹೆಚ್ಚಿಸುತ್ತದೆ, ಆಯುಸ್ಸನ್ನು ಹೆಚ್ಚಿಸುತ್ತದೆ ಮತ್ತು ದುರ್ಲಕ್ಷಣಗಳನ್ನು ನಾಶ ಮಾಡುತ್ತದೆ.

ಆಗಮಾನಾಂ ಹಿ ಸರ್ವೇಷಾಮಾಚಾರಃ ಶ್ರೇಷ್ಠ ಉಚ್ಯತೇ ।
ಆಚಾರಪ್ರಭವೋ ಧರ್ಮೋ ಧರ್ಮಾದಾಯುರ್ವಿವರ್ಧತೇ ॥೧೫೦॥

ಎಲ್ಲಾ ಆಗಮಗಳಲ್ಲಿಯೂ ಎಲ್ಲರಿಗೂ ಆಚಾರವು ಶ್ರೇಷ್ಠವಾದುದೆಂದು ಹೇಳಲ್ಪಡುತ್ತದೆ. ಆಚಾರದಿಂದ ಧರ್ಮವೂ ಮತ್ತು ಧರ್ಮದಿಂದ ಆಯುಸ್ಸೂ ಹೆಚ್ಚಾಗುತ್ತದೆ.

ಏತದ್ ಯಶಸ್ಯಮಾಯುಷ್ಯಂ ಸ್ವರ್ಗ್ಯಂ ಸ್ವಸ್ತ್ಯಯನಂ ಮಹತ್ ।
ಅನುಕಂಪತಾ ಸರ್ವವರ್ಣಾನ್ ಬ್ರಹ್ಮಣಾ ಸಮುದಾಹೃತಮ್ ॥೧೫೧॥

ಸರ್ವವರ್ಣಗಳ ಮೇಲಿನ ಅನುಕಂಪೆಯಿಂದ ಬ್ರಹ್ಮದೇವರು ಕೀರ್ತಿಕರವಾದ,, ಆಯುಃಪ್ರದವಾದ, ಸ್ವರ್ಗಪ್ರದವಾದ, ಮಂಗಳಪ್ರದವಾದ ಈ ಶ್ರೇಷ್ಠವಾದ ಆಖ್ಯಾನವನ್ನು ಹೇಳಿದ್ದಾರೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಆಯುಷ್ಯಪ್ರಮಾಣಕಥನಂ ನಾಮ
ಸಪ್ತಪಂಚಾಶದುತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಐವತ್ತೇಳನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಐವತ್ತೆಂಟನೆಯ ಅಧ್ಯಾಯ

ಜ್ಯೇಷ್ಠ-ಕನಿಷ್ಠ ವೃತ್ತಿಗಳು

ಯುಧಿಷ್ಠಿರಃ

ಯಥಾ ಜ್ಯೇಷ್ಠಃ ಕನಿಷ್ಠೇಷು ವರ್ತತೇ ಭರತರ್ಷಭ ।
ಕನಿಷ್ಠಾಶ್ಚ ಯಥಾ ಜ್ಯೇಷ್ಠೇ ವರ್ತೇರನ್ ತದ್ ಬ್ರವೀಹಿ ಮೇ ॥೧॥

ಯುಧಿಷ್ಠಿರ– ಎಲೈ ಭರತರ್ಷಭನೇ, ಜ್ಯೇಷ್ಠ (ಹಿರಿಯ) ನಾದವನು ತಮ್ಮಂದಿರ ವಿಷಯದಲ್ಲಿ ಹೇಗೆ ನಡೆದುಕೊಳ್ಳಬೇಕು? ತಮ್ಮಂದಿರೂ ಸಹ ಅಣ್ಣನ ವಿಷಯದಲ್ಲಿ ಹೇಗೆ ನಡೆದುಕೊಳ್ಳಬೇಕೆಂಬುದನ್ನು ನನಗೆ ಹೇಳು.

ಭೀಷ್ಮಃ

ಜ್ಯೇಷ್ಠವತ್ ತಾತ ವರ್ತಸ್ವ ಜ್ಯೇಷ್ಠೋ ಹಿ ಸತತಂ ಭವಾನ್ ।
ಗುರೋರ್ಗರೀಯಸೀ ವೃತ್ತಿರ್ಯಾವತ್ ತುಷ್ಯೇತ ಭಾರತ ॥೨॥

ಭೀಷ್ಮ– ಎಲೈ ಪ್ರೀತಿಪಾತ್ರನೇ, ನೀನು ಜ್ಯೇಷ್ಠನಾಗಿದ್ದೀಯೆ. ಜ್ಯೇಷ್ಠನಂತೆಯೇ ನಡೆದುಕೊ. ಗುರುವು ತನ್ನ ಶಿಷ್ಯನು ಪ್ರೀತನಾಗುವಂತೆ ಎಂತಹ ಶ್ರೇಷ್ಠವಾದ ನಡತೆಯನ್ನು ಹೊಂದಿರುತ್ತಾನೋ ನೀನೂ ನಿನ್ನ ತಮ್ಮಂದಿರ ವಿಷಯದಲ್ಲಿ ಅಂತಹ ಶ್ರೇಷ್ಠವಾದ ನಡತೆಯನ್ನು ಹೊಂದು.

ನ ಗುರಾವಕೃತಪ್ರಜ್ಞೇ ಶಕ್ಯಂ ಶಿಷ್ಯೇಣ ವರ್ತಿತುಮ್ ।
ಗುರೋರ್ಹಿ ದೀರ್ಘದರ್ಶಿತ್ವಂ ಯತ್ತಚ್ಛಿಷ್ಯಸ್ಯ ಭಾರತ ॥೩॥

ಗುರುವು ಅವಿವೇಕಿಯಾಗಿದ್ದರೆ ಶಿಷ್ಯನು ಅವನನ್ನು ಅನುಸರಿಸಲು ಸಾಧ್ಯವಿಲ್ಲ. ಎಲೈ ಭಾರತನೇ, ಗುರುವಿಗೆ ದೀರ್ಘದರ್ಶಿತ್ವವಿದ್ದರೆ ಅದು ಶಿಷ್ಯನಿಗೂ ಬರುತ್ತದೆ.

ಅಂಧಃ ಸ್ಯಾದಂಧವೇಲಾಯಾಂ ಜಡಃ ಸ್ಯಾದಪಿ ವಾ ಬುಧಃ ।
ಪರಿಹಾರೇಣ ತದ್ ಬ್ರೂಯಾದ್ ಯಸ್ತೇಷಾಂ ಸ್ಯಾದ್ ವ್ಯತಿಕ್ರಮಃ ॥೪॥

ವಿವೇಕಿಯಾದ ಹಿರಿಯನಾದವನು ಅಂಧನಾಗಿರಬೇಕಾದಾಗ ಅಂಧನಾಗಿರಬೇಕು. ಜ್ಞಾನಿಯಾಗಿದ್ದರೂ ಜಡನಾಗಿರಬೇಕು. ತಮ್ಮಂದಿರು ಮಾಡಿದ ಅಪಚಾರವನ್ನು ನೇರವಾಗಿ ಹೇಳಬಾರದು. ಪರ್ಯಾಯ ಕ್ರಮದಿಂದ ಹೇಳಬೇಕು.

ಪ್ರತ್ಯಕ್ಷಂ ಭಿನ್ನಹೃದಯಾ ಭೇದಯೇಯುಃ ಕೃತಂ ನರಾಃ ।
ಶ್ರಿಯಾऽಭಿತಪ್ತಾಃ ಕೌಂತೇಯ ಭೇದಕಾಮಾಸ್ತಥಾऽರಯಃ ॥೫॥

ಎಲೈ ಕೌಂತೇಯನೇ, ಪ್ರತ್ಯಕ್ಷವಾಗಿ ಅಣ್ಣ-ತಮ್ಮಂದಿರು ಭಿನ್ನಾಭಿಪ್ರಾಯಗಳನ್ನು ಹೊಂದಿದರೆ ಅವರ ಸಂಪತ್ತನ್ನು ನೋಡಿ ಅಸೂಯೆಯನ್ನು ಪಡುತ್ತಾ ಅವರನ್ನು ಒಡೆಯಲು ಬಯಸುವ ಶತ್ರುಗಳು ಅವರನ್ನು ಒಡೆಯುತ್ತಾರೆ.

ಜ್ಯೇಷ್ಠಃ ಕುಲಂ ವರ್ಧಯತಿ ವಿನಾಶಯತಿ ವಾ ಪುನಃ ।
ಹಂತಿ ಸರ್ವಮಪಿ ಜ್ಯೇಷ್ಠಃ ಪ್ರಾಯೋ ದುರ್ವಿನಯಾದಿಹ ॥೬॥

ಜ್ಯೇಷ್ಠ ಪುತ್ರನು ಕುಲವನ್ನು ವರ್ಧಿಸುತ್ತಾನೆ ಅಥವಾ ನಾಶ ಮಾಡುತ್ತಾನೆ. ಅವನು ದುರ್ನಡತೆಯುಳ್ಳವನಾಗಿದ್ದರೆ ಪ್ರಾಯಶಃ ಕುಲವನ್ನೆಲ್ಲಾ ನಾಶ ಮಾಡುತ್ತಾನೆ.

ಅಥ ಯೋ ವಿನಿಕುರ್ವೀತ ಜ್ಯೇಷ್ಠೋ ಭ್ರಾತಾ ಯವೀಯಸಃ ।
ಅಜ್ಯೇಷ್ಠಃ ಸ್ಯಾದಭಾಗಶ್ಚ ನಿಯಮ್ಯೋ ರಾಜಭಿಶ್ಚ ಸಃ ॥೭॥

ಯಾವ ಅಣ್ಣನು ತಮ್ಮಂದಿರಿಗೆ ಅಪಕಾರವನ್ನು ಮಾಡುತ್ತಾನೆಯೋ ಅವನು ಅಣ್ಣನಲ್ಲ. ಅವನು ತಂದೆಯ ಆಸ್ತಿಯಲ್ಲಿ ಭಾಗಕ್ಕೆ ಅರ್ಹನಲ್ಲ. ಅಂತಹವನನ್ನು ರಾಜರು ದಂಡಿಸಬೇಕು.

ನರೋ ನಿಕೃತಿರ್ಭಿಲೋಕಾನ್ ಪಾಪಾನ್ ಗಚ್ಛತ್ಯಸಂಶಯಮ್ ।
ವಿದುಲಸ್ಯೇವ ತತ್ಪುಷ್ಪಂ ಮೋಘಂ ಜನಯಿತುಃ ಸ್ಮೃತಮ್ ॥೮॥

ಮೋಸ ಮಾಡುವವನು ಪಾಪಲೋಕಗಳಿಗೆ ಹೋಗುವುದರಲ್ಲಿ ಸಂಶಯವಿಲ್ಲ. ಅಂತಹ ಪುತ್ರನು ತಂದೆಯ ದೃಷ್ಟಿಯಿಂದ ವಿದುಲಪುಷ್ಪದಂತೆ ವ್ಯರ್ಥನಾದವನು.

ಸರ್ವಾನರ್ಥಃ ಕುಲೇ ಯತ್ರ ಜಾಯತೇ ಪಾಪಪೂರುಷಃ ।
ಅಕೀರ್ತಿಂ ಜನಯತ್ಯೇವ ಕೀರ್ತಿಮಂತರ್ದಧಾತಿ ಚ ॥೯॥

ಯಾವ ಕುಲದಲ್ಲಿ ಪಾಪಬುದ್ಧಿಯುಳ್ಳ ಪುರುಷನು ಜನಿಸುತ್ತಾನೆಯೋ ಅಲ್ಲಿ ಸರ್ವಾನರ್ಥವೂ ಉಂಟಾಗುತ್ತದೆ. ಅವನು ಕುಲದ ಕೀರ್ತಿಯನ್ನು ನಾಶ ಮಾಡಿ, ಅಪಕೀರ್ತಿಯನ್ನು ಉಂಟುಮಾಡುತ್ತಾನೆ.

ಸರ್ವೇ ಚಾಪಿ ವಿಕರ್ಮಸ್ಥಾ ಭಾಗಂ ನಾರ್ಹಂತಿ ಸೋದರಾಃ ।
ನಾಪ್ರದಾಯ ಕನಿಷ್ಠೇಭ್ಯೋ ಜ್ಯೇಷ್ಠಃ ಕುರ್ವೀತ ಯೌತಕಮ್ ॥೧೦॥

ದುಷ್ಕರ್ಮಗಳಲ್ಲಿ ನಿರತರಾದ ಸೋದರರು ತಂದೆಯ ಆಸ್ತಿಯ ಭಾಗಕ್ಕೆ ಅರ್ಹರಾಗುವುದಿಲ್ಲ ಮತ್ತು ಹಿರಿಯನು ತಮ್ಮಂದಿರಿಗೆ ಕೊಡದೆ ತಾನೇ ಪಿತೃಸ್ವವನ್ನು ತೆಗೆದುಕೊಳ್ಳಬಾರದು.

ಅನುಜಸ್ಯ ಪಿತುರ್ದಾಯಂ ಜಂಘಾಶ್ರಯಬಲೋಽಧ್ವಗಃ ।
ಸ್ವಯಮೀಹೇತ ಲಬ್ಧುಂ ತು ನಾಕಾಮೋ ದಾತುಮರ್ಹತಿ ॥೧೧॥

ತನ್ನ ಜಂಘಾಬಲವನ್ನು ತಿಳಿದ (ತನ್ನ ಆಶ್ರಯಸಾಮರ್ಥ್ಯವನ್ನು ತಿಳಿದ) ಸನ್ಮಾರ್ಗದಲ್ಲಿರುವ ಅಣ್ಣನು ದುಷ್ಕರ್ಮಿಯಾದ ತಮ್ಮನ ಭಾಗವನ್ನು ತಾನೇ ತೆಗೆದುಕೊಳ್ಳಲು ಪ್ರಯತ್ನಿಸಬೇಕು. ತಮ್ಮನ ದುಚ್ಚರಿತೆಯನ್ನು ನೋಡಿ ಅವನಿಗೆ ಭಾಗವನ್ನು ಕೊಡಲು ಇಷ್ಟವಿಲ್ಲದಿದ್ದರೆ ಭಾಗವನ್ನು ಕೊಡಬಾರದು (ಲಕ್ಷಾಲಂಕಾರ).

ಭ್ರಾತೄಣಾಮವಿಭಕ್ತಾನಾಮುತ್ಥಾನಮಪಿ ಚೇತ್ಸಹ ।
ನ ಪುತ್ರಭಾಗಂ ವಿಷಮಂ ಪಿತಾ ದದ್ಯಾತ್ಕಥಂಚನ ॥೧೨॥

ಅವಿಭಕ್ತರಾದ ಸಹೋದರರು ಒಂದೇ ತಾಯಿಯಲ್ಲಿ ಜನಿಸಿದ್ದರೆ ಅವರಿಗೆ ಸಲ್ಲುವ ಭಾಗಗಳು ವಿಷಮವಾಗಿರುವುದಿಲ್ಲ. ಎಲ್ಲರಿಗೂ ಸಮವಾಗಿರುತ್ತವೆ. ಬೇರೆ ತಾಯಿಯಲ್ಲಿ ಜನಿಸಿದ ಪುತ್ರನು ಇನ್ನೊಬ್ಬ ತಾಯಿಯಲ್ಲಿ ಜನಿಸಿದ ಅನೇಕ ಪುತ್ರರು ತೆಗೆದುಕೊಳ್ಳುವ ಭಾಗಗಳನ್ನು ಒಬ್ಬನೇ ತೆಗೆದುಕೊಳ್ಳುತ್ತಾನೆ (ಲಕ್ಷಾಲಂಕಾರ).

ಜ್ಯೇಷ್ಠೋ ನೈವಾವಮನ್ಯೇತ ದುಷ್ಕೃತಃ ಸುಕೃತೋಽಪಿ ವಾ ।
ಗುರೂಣಾಮಪರಾಧೋ ಹಿ ಶಕ್ಯಃ ಕ್ಷಂತವ್ಯ ಏವ ಚ ॥೧೩॥

ತಮ್ಮಂದಿರು ಜ್ಯೇಷ್ಠರು ಸತ್ಕಾರ್ಯವನ್ನು ಮಾಡಲಿ, ಅಸತ್ಕಾರ್ಯವನ್ನು ಮಾಡಲಿ, ಅವರಿಗೆ ಅವಮಾನವನ್ನು ಮಾಡಬಾರದು. ಹಿರಿಯರಾದವರ ಅಪರಾಧವನ್ನು ಸಹಿಸಿಕೊಳ್ಳಬೇಕು ಮತ್ತು ಕ್ಷಮಿಸಬೇಕು.

ಯದಿ ಸ್ತ್ರಿಯೋ ಹ್ಯವರಜಾಃ ಶ್ರೇಯಃ ಪಶ್ಯೇತ್ ತಥಾಚರೇತ್ ।
ಧರ್ಮಂ ಹಿ ಶ್ರೇಯ ಇತ್ಯಾಹುರಿತಿ ಧರ್ಮವಿದೋ ವಿದುಃ ॥೧೪॥

ಹಿರಿಯನಾದವನು ತನ್ನ ಅನಂತರ ಜನಿಸಿದವರು ತಂಗಿಯರಾಗಿದ್ದರೆ ಅವರಿಗೆ ಶ್ರೇಯಸ್ಸಾಗುವ ರೀತಿಯಲ್ಲಿ ನಡೆದುಕೊಳ್ಳಬೇಕು. ಧರ್ಮವೇ ಶ್ರೇಯಸ್ಸಾಧನವೆಂದು ಧರ್ಮವನ್ನು ತಿಳಿದವರು ಹೇಳುತ್ತಾರೆ.

ದಶಾಚಾರ್ಯಾನುಪಾಧ್ಯಾಯ ಉಪಾಧ್ಯಾಯಾನ್ ಪಿತಾ ದಶ ।
ದಶ ಚೈವ ಪಿತೄನ್ ಮಾತಾ ಗೌರವೇಣಾತಿರಿಚ್ಯತೇ ॥೧೪॥

ಗೌರವೇಣಾಭಿಭವತಿ ನಾಸ್ತಿ ಮಾತೃಸಮೋ ಗುರುಃ ।
ಮಾತಾ ಗರೀಯಸೀ ಯಚ್ಚ ತೇನೈತಾಂ ಮನ್ಯತೇ ಜನಃ ॥೧೫॥

ಗೌರವವನ್ನು ಸ್ವೀಕರಿಸುವ ವಿಷಯದಲ್ಲಿ ಹತ್ತು ಆಚಾರ್ಯರಿಗಿಂತಲೂ ಒಬ್ಬ ಉಪಾಧ್ಯಾಯನು ಶ್ರೇಷ್ಠನಾದವನು. ಹತ್ತು ಉಪಾಧ್ಯಾಯರಿಗಿಂತಲೂ ತಂದೆಯು ಶ್ರೇಷ್ಠನಾದವನು. ಹತ್ತು ತಂದೆಯರಿಗಿಂತಲೂ ತಾಯಿಯು ಶ್ರೇಷ್ಠಳಾದವಳು. ತಾಯಿಯು ತನಗೆ ಸಲ್ಲುವ ಗೌರವದಿಂದ ಎಲ್ಲರನ್ನೂ ಮೀರಿಸುತ್ತಾಳೆ. ತಾಯಿಗೆ ಸಮಾನವಾದ ಗುರುವಿಲ್ಲ. ತಾಯಿಯು ಅಷ್ಟು ಶ್ರೇಷ್ಠಳಾಗಿರುವುದರಿಂದಲೇ ಜನರು ಅವಳಿಗೆ ಗೌರವವನ್ನು ಕೊಡುತ್ತಾರೆ.

ಜ್ಯೇಷ್ಠೋ ಭ್ರಾತಾ ಪಿತೃಸಮೋ ಮೃತೇ ಪಿತರಿ ಭಾರತ ।
ಸ ಹ್ಯೇಷಾಂ ವೃತ್ತಿದಾತಾ ಸ್ಯಾತ್ ಸ ಚೈತಾನ್ ಪರಿಪಾಲಯೇತ್ ॥೧೬॥

ಎಲೈ ಭಾರತನೇ, ತಂದೆಯು ಮರಣವನ್ನು ಹೊಂದಿದ ಮೇಲೆ ಅಣ್ಣನು ತಂದೆಗೆ ಸಮಾನನಾದವನು. ಅವನೇ ತಮ್ಮಂದಿರಿಗೆ ಜೀವನೋಪಾಯಗಳನ್ನು ಕಲ್ಪಿಸಿಕೊಟ್ಟು ಅವರನ್ನು ರಕ್ಷಿಸಬೇಕು.

ಕನಿಷ್ಠಾಸ್ತಂ ನಮಸ್ಯೇರನ್ ಸರ್ವೇ ಛಂದಾನುವರ್ತಿನಃ ।
ತಮೇವ ಚೋಪಜೀವೇರನ್ ಯಥೈವ ಪಿತರಂ ತಥಾ ॥೧೭॥

ತಮ್ಮಂದಿರು ಅವನಿಗೆ ನಮಸ್ಕಾರವನ್ನು ಮಾಡಬೇಕು. ಅವನ ಅಭಿಪ್ರಾಯದಂತೆ ನಡೆದುಕೊಳ್ಳಬೇಕು. ತಂದೆಯನ್ನು ಉಪಜೀವಿಸುವಂತೆ ಅವನನ್ನೇ ಉಪಜೀವಿಸಬೇಕು.

ಶರೀರಮೇತೌ ಸೃಜತಃ ಪಿತಾ ಮಾತಾ ಚ ಭಾರತ ।
ಆಚಾರ್ಯಶಾಸ್ತಾ ಯಾ ಜಾತಿಃ ಸಾ ದಿವ್ಯಾ ಸಾऽಮರಾಜರಾ ॥೧೮॥

ಎಲೈ ಭಾರತನೇ, ತಂದೆ-ತಾಯಿಗಳು ಶರೀರವನ್ನು ಮಾತ್ರ ಸೃಷ್ಟಿಮಾಡುತ್ತಾರೆ. ಗುರುವಿನ ಉಪದೇಶದಿಂದ ಪಡೆದ ಜ್ಞಾನಜನ್ಮವು ಮಾತ್ರ ದಿವ್ಯವಾದುದು ಮತ್ತು ಅಜರಾಮರವಾದುದು.

ಜ್ಯೇಷ್ಠಾ ಮಾತೃಸಮಾ ಚಾಪಿ ಭಗಿನೀ ಭರತರ್ಷಭ ।
ಭ್ರಾತುರ್ಭಾರ್ಯಾ ಚ ತದ್ವತ್ ಸ್ಯಾದ್ ಯಸ್ಯಾ ಬಾಲ್ಯೇ ಸ್ತನಂ ಪಿಬೇತ್ ॥

ಎಲೈ ಭರತರ್ಷಭನೇ, ಅಕ್ಕನು ತಾಯಿಗೆ ಸಮಳಾದವಳು. ಅತ್ತಿಗೆಯೂ ಸಹ ಹಾಗೆಯೇ ಮತ್ತು ಬಾಲ್ಯದಲ್ಲಿ ತಾಯಿಯನ್ನು ಬಿಟ್ಟು ಬೇರೆ ಯಾರ ಸ್ತನ್ಯವನ್ನು ಪಾನ ಮಾಡಿರುತ್ತಾನೆಯೋ ಅವಳೂ ಸಹ ತಾಯಿಗೆ ಸಮಳಾದವಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಜ್ಯೇಷ್ಠ-ಕನಿಷ್ಠವೃತ್ತಿಕಥನಂ ನಾಮ
ಅಷ್ಟಪಂಚಾಶದುತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಐವತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಐವತ್ತೊಂಬತ್ತನೆಯ ಅಧ್ಯಾಯ

ಉಪವಾಸವಿಧಿ

ಯುಧಿಷ್ಠಿರಃ

ಸರ್ವೇಷಾಮೇವ ವರ್ಣಾನಾಂ ಮ್ಲೇಚ್ಛಾನಾಂ ಚ ಪಿತಾಮಹ ।
ಉಪವಾಸೇ ಮತಿರಿಯಂ ಕಾರಣಂ ಚ ನ ವಿದ್ಮಹೇ ॥೧॥

ಬ್ರಹ್ಮಕ್ಷತ್ರೇಣ ನಿಯಮಾಶ್ಚರ್ತವ್ಯಾ ಇತಿ ನಃ ಶ್ರುತಮ್ ।
ಉಪವಾಸೇ ಕಥಂ ತೇಷಾಂ ಕೃತ್ಯಮಸ್ತಿ ಪಿತಾಮಹ ॥೨॥

ಯುಧಿಷ್ಠಿರ– ಎಲೈ ಪಿತಾಮಹನೇ, ಸರ್ವವರ್ಣದವರಿಗೂ ಮತ್ತು ಮ್ಲೇಚ್ಛರಿಗೂ ಉಪವಾಸವನ್ನು ಮಾಡುವ ಬುದ್ಧಿಯಿದೆ. ಇದಕ್ಕೆ ಕಾರಣವು ತಿಳಿಯುವುದಿಲ್ಲ. ಬ್ರಾಹ್ಮಣರು ಮತ್ತು ಕ್ಷತ್ರಿಯರು ನಿಯಮವನ್ನು ಅನುಸರಿಸಬೇಕೆಂದು ನಾವು ಕೇಳಿದ್ದೇವೆ. ಎಲೈ ಪಿತಾಮಹನೇ, ಉಳಿದವರಿಗೆ ಉಪವಾಸದಿಂದ ಏನು ಪ್ರಯೋಜನ?

ನಿಯಮಾಶ್ಚೋಪವಾಸಾಂಶ್ಚ ಸರ್ವೇಷಾಂ ಬ್ರೂಹಿ ಪಾರ್ಥಿವ ।
ಅವಾಪ್ನೋತಿ ಗತಿಂ ಕಾಂ ಚ ಉಪವಾಸಪರಾಯಣಃ ॥೩॥

ಉಪವಾಸಃ ಪರಂ ಪುಣ್ಯಮುಪವಾಸಃ ಪರಾಯಣಮ್ ।
ಉಪೋಷ್ಯೇಹ ನರಶ್ರೇಷ್ಠ ಕಿಂ ಫಲಂ ಪ್ರತಿಪದ್ಯತೇ ॥೪॥

ಎಲೈ ಪಾರ್ಥಿವನೇ, ಉಳಿದವರಿಗೂ ಇರುವ ಉಪವಾಸಗಳನ್ನು ಮತ್ತು ನಿಯಮಗಳನ್ನು ಹೇಳು. ಉಪವಾಸ ಪರಾಯಣನಾದವನು ಯಾವ ಗತಿಯನ್ನು ಹೊಂದುತ್ತಾನೆ? ಉಪವಾಸವು ಬಹಳ ಪುಣ್ಯಪ್ರದವಾದುದು, ಶ್ರೇಷ್ಠವಾದ ಆಶ್ರಯವಾದುದು. ಇಲ್ಲಿ ಉಪವಾಸವನ್ನು ಮಾಡಿದವನು ಯಾವ ಫಲವನ್ನು ಹೊಂದುತ್ತಾನೆ?

ಅಧರ್ಮಾನ್ ಮುಚ್ಯತೇ ಕೇನ ಧರ್ಮಮಾಪ್ನೋತಿ ವೈ ಕಥಮ್ ।
ಸ್ವರ್ಗ್ಯಂ ಪುಣ್ಯಂ ಚ ಲಭತೇ ಕಥಂ ಭರತಸತ್ತಮ ॥೫॥

ಎಲೈ ಭರತಶ್ರೇಷ್ಠನೇ, ಮನುಷ್ಯನು ಯಾವುದರಿಂದ ಅಧರ್ಮದಿಂದ ಮುಕ್ತನಾಗುತ್ತಾನೆ? ಯಾವುದರಿಂದ ಧರ್ಮವನ್ನು ಪಡೆಯುತ್ತಾನೆ? ಪುಣ್ಯವನ್ನು ಮತ್ತು ಸ್ವರ್ಗವನ್ನು ಹೇಗೆ ಪಡೆಯುತ್ತಾನೆ?

ಉಪೋಷ್ಯ ಚಾಪಿ ಕಿಂ ತೇನ ಪ್ರದೇಯಂ ಸ್ಯಾನ್ನರಾಧಿಪ ।
ಧರ್ಮೇಣ ಚ ಸುಖಾನರ್ಥಾನ್ ಲಭೇದ್ ಯೇನ ಬ್ರವೀಹಿ ತಮ್ ॥

ಎಲೈ ನರಾಧಿಪನೇ, ಉಪವಾಸವನ್ನು ಮಾಡಿದವನು ಯಾವ ದಾನವನ್ನು ಮಾಡಬೇಕು? ಯಾವ ಧರ್ಮದಿಂದ ಅವನು ಸುಖವನ್ನು ಪಡೆಯುವನೆಂದು ನನಗೆ ಹೇಳು.

ವೈಶಂಪಾಯನಃ

ಏವಂ ಬ್ರುವಾಣಂ ಕೌಂತೇಯಂ ಧರ್ಮಜ್ಞಂ ಧರ್ಮತತ್ತ್ವವಿತ್ ।
ಧರ್ಮಪುತ್ರಮಿದಂ ವಾಕ್ಯಂ ಭೀಷ್ಮಃ ಶಾಂತನವೋಽಬ್ರವೀತ್ ॥೭॥

ವೈಶಂಪಾಯನ– ಹೀಗೆ ಪ್ರಶ್ನೆಯನ್ನು ಕೇಳಿದ ಧರ್ಮಪುತ್ರನಾದ ಕೌಂತೇಯನನ್ನು ಕುರಿತು ಧರ್ಮಜ್ಞರೂ, ಧರ್ಮತತ್ವವನ್ನು ತಿಳಿದವರೂ, ಶಂತನು ಪುತ್ರರೂ ಆದ ಭೀಷ್ಮರು ಈ ಮಾತುಗಳನ್ನು ಆಡಿದರು.

ಇದಂ ಖಲು ಮಹಾರಾಜ ಶ್ರುತಮಾಸೀತ್ ಪುರಾತನಮ್ ।
ಉಪವಾಸವಿಧೌ ಶ್ರೇಷ್ಠಾ ಯೇ ಗುಣಾ ಭರತರ್ಷಭ ॥೮॥

ಎಲೈ ಮಹಾರಾಜನೇ, ಭರತರ್ಷಭನೇ, ಉಪವಾಸದ ವಿಧಿಯಲ್ಲಿ ಯಾವ ಶ್ರೇಷ್ಠವಾದ ಗುಣಗಳಿವೆ ಎಂಬುದನ್ನು ನಾನು ಹಿಂದೆ ಕೇಳಿದ್ದೇನೆ.

ಪ್ರಾಜಾಪತ್ಯಂ ಹ್ಯಂಗಿರಸಂ ಪೃಷ್ಟವಾನಸ್ಮಿ ಭಾರತ ।
ಯಥಾ ಮಾಂ ತ್ವಂ ತಥೈವಾಹಂ ಪೃಷ್ಟವಾಂಸ್ತಂ ತಪೋಧನಮ್ ॥೯॥

ಎಲೈ ಭಾರತನೇ, ನೀನು ನನಗೆ ಪ್ರಶ್ನೆಯನ್ನು ಕೇಳಿದಂತೆಯೇ ನಾನು ಬ್ರಹ್ಮದೇವರ ಪುತ್ರರಾದ ಅಂಗಿರಸರನ್ನು ಪ್ರಶ್ನೆ ಮಾಡಿದೆನು.

ಪ್ರಶ್ನಮೇತಂ ಮಯಾ ಪೃಷ್ಟೋ ಭಗವಾನಗ್ನಿಸಂಭವಃ ।
ಉಪವಾಸವಿಧಿಂ ಪುಣ್ಯಮಾಚಷ್ಟ ಭರತರ್ಷಭ ॥೧೦॥

ಎಲೈ ಭರತರ್ಷಭನೇ, ನಾನು ಕೇಳಿದ ಈ ಪ್ರಶ್ನೆಗೆ ಉತ್ತರವಾಗಿ ಅಗ್ನಿಪುತ್ರರೂ ಅಗ್ನಿಜನಕರೂ ಆದ, ಪೂಜ್ಯರಾದ ಅಂಗಿರಸರು ಪವಿತ್ರವಾದ ಉಪವಾಸ ವಿಧಿಯನ್ನು ಹೇಳಿದರು.

ಅಂಗಿರಾಃ

ಬ್ರಹ್ಮಕ್ಷತ್ರೇ ತ್ರಿರಾತ್ರಂ ತು ವಿಹಿತಂ ಕುರುನಂದನ ।
ದ್ವಿಸ್ತ್ರಿರಾತ್ರಮಥೈಕಾಹಂ ನಿರ್ದಿಷ್ಟಂ ಪುರುಷರ್ಷಭ ॥೧೧॥

ಅಂಗಿರಸ– ಎಲೈ ಕುರುನಂದನನೇ, ಬ್ರಾಹ್ಮಣರಿಗೆ ಮತ್ತು ಕ್ಷತ್ರಿಯರಿಗೆ ಮೂರು ರಾತ್ರಿಗಳ ಉಪವಾಸವು ಹೇಳಲ್ಪಟ್ಟಿದೆ. ಎಲೈ ಪುರುಷರ್ಷಭನೇ, ಹಾಗೆಯೇ ಆರು ರಾತ್ರಿಗಳ ಮತ್ತು ಒಂದು ದಿನದ ಉಪವಾಸವೂ ಹೇಳಲ್ಪಡುತ್ತದೆ.

ವೈಶ್ಯಶೂದ್ರೌ ತು ಯೌ ಮೋಹಾದುಪವಾಸಂ ಪ್ರಕುರ್ವತೇ ।
ತ್ರಿರಾತ್ರಂ ದ್ವಿಸ್ತ್ರಿರಾತ್ರಂ ವಾ ತಯೋಃ ಪುಷ್ಟಿರ್ನ ವಿದ್ಯತೇ ॥೧೨॥

ವೈಶ್ಯರಾಗಲೀ ಶೂದ್ರರಾಗಲೀ ಮೋಹದಿಂದ ಮೂರು ರಾತ್ರಿಗಳ ಉಪವಾಸವನ್ನಾಗಲೀ ಆರು ರಾತ್ರಿಗಳ ಉಪವಾಸವನ್ನಾಗಲೀ ಮಾಡಿದರೆ ಅವರಿಗೆ ಅದರಿಂದ ಯಾವ ಪುಷ್ಟಿಯೂ ಉಂಟಾಗುವುದಿಲ್ಲ.

ಚತುರ್ಥಭಕ್ತಾತ್ಕ್ರಮಣಂ ವೈಶ್ಯಶೂದ್ರೇ ವಿಧೀಯತೇ ।
ತ್ರಿರಾತ್ರಂ ನ ತು ಧರ್ಮಜ್ಞೈರ್ವಿಹಿತಂ ಬ್ರಹ್ಮವಾದಿಭಿಃ ॥೧೩॥

ವೈಶ್ಯ-ಶೂದ್ರರಿಗೆ ದಿವಸದ ನಾಲ್ಕನೆಯ ಭಾಗದಲ್ಲಿ ಭೋಜನವು ಹೇಳಲ್ಪಡುತ್ತದೆ. ಅವರಿಗೆ ಮೂಲ ರಾತ್ರಿಗಳ ಉಪವಾಸವು ಧರ್ಮಜ್ಞರಾದ ಬ್ರಹ್ಮವಾದಿಗಳಿಗೆ ಸಮ್ಮತವಲ್ಲ.

ಪಂಚಮ್ಯಾಂ ಚೈವ ಷಷ್ಠ್ಯಾಂ ಚ ಪೌರ್ಣಮಾಸ್ಯಾಂ ಚ ಭಾರತ ।
ಕ್ಷಮಾವಾನ್ ರೂಪಸಂಪನ್ನಃ ಶ್ರುತವಾಂಶ್ಚೈವ ಜಾಯತೇ ॥೧೪॥

ಎಲೈ ಭಾರತನೇ, ಪಂಚಮಿಯ ದಿವಸ ಮತ್ತು ಷಷ್ಠಿಯ ದಿವಸ ಮತ್ತು ಪೌರ್ಣಮಾಸ್ಯೆಯ ದಿವಸ ಉಪವಾಸವನ್ನು ಮಾಡುವವನು ಕ್ಷಮಾವಂತನೂ, ರೂಪಸಂಪನ್ನನೂ, ವಿದ್ಯಾವಂತನೂ ಆಗಿ ಜನಿಸುವನು.

ನಾನಪತ್ಯೋ ಭವೇತ್ ಪ್ರಾಜ್ಞೋ ದರಿದ್ರೋ ವಾ ಕದಾಚನ ।
ಯಜಿಷ್ಣುಃ ಪಂಚಮೀಂ ಷಷ್ಠೀಂ ಕುಲೇಭ್ಯೋ ಭೋಜಯೇದ್ ದ್ವಿಜಾನ್ ॥

ಯಾವ ಪ್ರಾಜ್ಞನು ಪಂಚಮೀ ಷಷ್ಠೀ ತಿಥಿಗಳಲ್ಲಿ ಯಾಗವನ್ನು ಮಾಡಿ ಪೂಜಜೆಯ ಸತ್ಕುಲ ಪ್ರಸೂತರಾದ ಬ್ರಾಹ್ಮಣರಿಗೆ ಭೋಜನವನ್ನು ಮಾಡಿಸುತ್ತಾನೆಯೋ ಅವನು ಎಂದೂ ಪುತ್ರಹೀನನಾಗಲೀ, ದರಿದ್ರನಾಗಲೀ ಆಗುವುದಿಲ್ಲ.

ಅಷ್ಟಮೀಮಥ ಕೌಂತೇಯ ಶುಕ್ಲಪಕ್ಷೇ ಚತುರ್ದಶೀಮ್ ।
ಉಪೋಷ್ಯ ವ್ಯಾಧಿರಹಿತೋ ವೀರ್ಯವಾನಭಿಜಾಯತೇ ॥೧೬॥

ಎಲೈ ಕೌಂತೇಯನೇ, ಶುಕ್ಲಪಕ್ಷದ ಅಷ್ಟಮಿಯಂದು ಮತ್ತು ಚತುರ್ದಶಿಯಂದು ಉಪವಾಸವನ್ನು ಮಾಡಿದವನು ವ್ಯಾಧಿರಹಿತನಾಗಿ, ವೀರ್ಯವಂತನಾಗಿ ಜನಿಸುತ್ತಾನೆ.

ಮಾರ್ಗಶೀರ್ಷಂ ತು ಯೋ ಮಾಸಮೇಕಭುಕ್ತೇನ ಸಂಕ್ಷಿಪೇತ್ ।
ಭೋಜಯೇಚ್ಚ ದ್ವಿಜಾನ್ ಭಕ್ತ್ಯಾ ಮುಚ್ಯತೇ ವ್ಯಾಧಿಕಿಲ್ಬಿಷೈಃ ॥೧೭॥

ಸರ್ವಕಲ್ಯಾಣಸಂಪೂರ್ಣಃ ಸರ್ವೌಷಧಿಸಮನ್ವಿತಃ ।
ಕೃಷಿಭಾಗೀ ಬಹುಧನೋ ಬಹುಪುತ್ರಶ್ಚ ಜಾಯತೇ ॥೧೮॥

ಮಾರ್ಗಶೀರ್ಷಮಾಸದಲ್ಲಿ ಏಕಭುಕ್ತನಾಗಿ ಮಾಸವನ್ನು ಕಳೆದು, ಭಕ್ತಿಯಿಂದ ಬ್ರಾಹ್ಮಣರ ಭೋಜನವನ್ನು ಮಾಡಿಸುವವನು ವ್ಯಾಧಿಗಳಿಂದಲೂ, ಪಾಪಗಳಿಂದಲೂ

ಮುಕ್ತನಾಗುತ್ತಾನೆ. ಸರ್ವಕಲ್ಯಾಣಗುಣಗಳಿಂದ ಕೂಡಿದವನಾಗಿ, ಎಲ್ಲ ಓಷಧಿಗಳಿಂದಲೂ ಸಮನ್ವಿತನಾಗಿ ಕೃಷಿಯನ್ನು ಮಾಡಿ ಬಹುಧನವನ್ನೂ, ಬಹುಪುತ್ರರನ್ನೂ ಗಳಿಸುವವನಾಗಿ ಜನಿಸುತ್ತಾನೆ.

ಪೌಷಮಾಸಂ ತು ಕೌಂತೇಯ ಭಕ್ತೇನೈಕೇನ ಯಃ ಕ್ಷಪೇತ್ ।
ಸುಭಗೋ ದರ್ಶನೀಯಶ್ಚ ಕುಲೇ ಮಹತಿ ಜಾಯತೇ ॥೧೯॥

ಎಲೈ ಕೌಂತೇಯನೇ, ಯಾವನು ಪುಷ್ಯಮಾಸವನ್ನು ಏಕಭುಕ್ತದಿಂದ ಕಳೆಯುತ್ತಾನೆಯೋ ಅವನು ಶ್ರೇಷ್ಠವಾದ ಕುಲದಲ್ಲಿ ಸೌಭಾಗ್ಯವಂತನೂ, ಸುಂದರನೂ ಆಗಿ ಜನಿಸುತ್ತಾನೆ.

ಪಿತೃಭಕ್ತೋ ಮಾಘಮಾಸಮೇಕಭಕ್ತೇನ ಯಃ ಕ್ಷಪೇತ್ ।
ಶ್ರೀಮತ್ಕುಲೇ ಜ್ಞಾತಿಮಧ್ಯೇ ಸ ಮಹತ್ತ್ವಂ ಪ್ರಪದ್ಯತೇ ॥೨೦॥

ಪಿತೃಭಕ್ತನಾದ ಯಾವನು ಮಾಘಮಾಸವನ್ನು ಏಕಭಕ್ತದಿಂದ ಕಳೆಯುತ್ತಾನೆಯೋ ಅವನು ಸಂಪದ್ಯುಕ್ತನಾಗಿ ಜನಿಸಿ, ಬಂಧುಗಳ ಮಧ್ಯದಲ್ಲಿ ಶ್ರೇಷ್ಠತ್ವವನ್ನು ಹೊಂದುತ್ತಾನೆ.

ಭಗದೈವಂ ತು ಯೋ ಮಾಸಮೇಕಭಕ್ತೇನ ಯಃ ಕ್ಷಪೇತ್ ।
ಸ್ತ್ರೀಷು ವಲ್ಲಭತಾಂ ಯಾತಿ ವಶ್ಯಾಶ್ಚಾಸ್ಯ ಭವಂತಿ ತಾಃ ॥೨೧॥

ಸೂರ್ಯದೇವತಾಕವಾದ ಫಾಲ್ಗುಣಮಾಸವನ್ನು ಯಾವನು ಏಕಭುಕ್ತದಿಂದ ಕಳೆಯುತ್ತಾನೆಯೋ ಅವನು ಸ್ತ್ರೀಯರಿಗೆ ಪ್ರಿಯನಾಗುತ್ತಾನೆ. ಅವನಿಗೆ ಸ್ತ್ರೀಯರು ವಶರಾಗುತ್ತಾರೆ.

ಚೈತ್ರಂ ತು ನಿಯತೋ ಮಾಸಮೇಕಭಕ್ತೇನ ಯಃ ಕ್ಷಪೇತ್ ।
ಸುವರ್ಣಮಣಿಮುಕ್ತಾಢ್ಯೇ ಕುಲೇ ಮಹತಿ ಜಾಯತೇ ॥೨೨॥

ಯಾವನು ನಿಯಮಬದ್ಧನಾಗಿ ಚೈತ್ರಮಾಸವನ್ನು ಏಕಭುಕ್ತಿಯಿಂದ ಕಳೆಯುತ್ತಾನೆಯೋ ಅವನು ಸುವರ್ಣ-ಮಣಿ-ಮುತ್ತುಗಳಿಂದ ಸಂಪನ್ನವಾದ ದೊಡ್ಡ ಕುಲದಲ್ಲಿ ಜನಿಸುತ್ತಾನೆ.

ನಿಸ್ತರೇದೇಕಭಕ್ತೇನ ವೈಶಾಖಂ ಯೋ ಜಿತೇಂದ್ರಿಯಃ ।
ನರೋ ವಾ ಯದಿ ವಾ ನಾರೀ ಜ್ಞಾತೀನಾಂ ಶ್ರೇಷ್ಠತಾಂ ವ್ರಜೇತ್ ॥

ಪುರುಷನಾಗಲೀ ಅಥವಾ ಸ್ತ್ರೀಯಾಗಲೀ ಯಾರು ಜಿತೇಂದ್ರಿಯರಾಗಿ ವೈಶಾಖ ಮಾಸವನ್ನು ಏಕಭುಕ್ತದಿಂದ ಕಳೆಯುತ್ತಾರೆಯೋ ಅವರು ಬಂಧುಗಳ ಮಧ್ಯದಲ್ಲಿ ಶ್ರೇಷ್ಠತ್ವವನ್ನು ಹೊಂದುತ್ತಾರೆ.

ಜ್ಯೇಷ್ಠಾಮೂಲಂ ತು ಯೋ ಮಾಸಮೇಕಭಕ್ತೇನ ಸಂಕ್ಷಪೇತ್ ।
ಐಶ್ವರ್ಯಮತುಲಂ ಶ್ರೇಷ್ಠಂ ಪುಮಾನ್ ಸ್ತ್ರೀ ವಾಭಿಪದ್ಯತೇ ॥೨೪॥

ಯಾವ ಪುರುಷ ಅಥವಾ ಸ್ತ್ರೀಯು ಜ್ಯೇಷ್ಠಮಾಸವನ್ನು ಏಕಭುಕ್ತದಿಂದ ಕಳೆಯುತ್ತಾರೆಯೋ ಅವರು ಶ್ರೇಷ್ಠವಾದ ಮತ್ತು ಅತುಲವಾದ ಐಶ್ವರ್ಯವನ್ನು ಪಡೆಯುತ್ತಾರೆ.

ಆಷಾಢಮೇಕಭಕ್ತೇನ ಸ್ಥಿತ್ವಾ ಮಾಸಮತಂದ್ರಿತಃ ।
ಬಹುಧಾನ್ಯೋ ಬಹುಧನೋ ಬಹುಪುತ್ರಶ್ಚ ಜಾಯತೇ ॥೨೫॥

ಯಾವನು ಆಲಸ್ಯವಿಲ್ಲದೆ ಆಷಾಢಮಾಸವನ್ನು ಏಕಭಕ್ತದಿಂದ ಕಳೆಯುತ್ತಾನೆಯೋ ಅವನು ಬಹುಧಾನ್ಯವಂತನೂ, ಬಹುಧನವಂತನೂ, ಬಹುಪುತ್ರವಂತನೂ ಆಗಿ ಜನಿಸುತ್ತಾನೆ.

ಶ್ರಾವಣಂ ಮಾಸಮೇಕೇನ ಭಕ್ತೇನ ಯಃ ಕ್ಷಪೇತ್ ।
ಯತ್ರ ತತ್ರಾಭಿಷೇಕೇಣ ಯುಜ್ಯತೇ ಜ್ಞಾತಿವರ್ಧನಃ ॥೨೬॥

ಯಾವನು ಶ್ರಾವಣ ಮಾಸವನ್ನು ಏಕಭುಕ್ತಿಯಿಂದ ಕಳೆದು ಅಲ್ಲಲ್ಲಿ ಸ್ನಾನವನ್ನು ಮಾಡುತ್ತಾನೆಯೋ ಅವನು ಬಂಧುಗಳ ಅಭಿವೃದ್ಧಿಯನ್ನು ಕುರಿತು ಕಾರಣನಾಗುತ್ತಾನೆ.

ಪ್ರೌಷ್ಠಪದಂ ತು ಯೋ ಮಾಸಮೇಕಾಹಾರೋ ಭವೇನ್ನರಃ ।
ಧನಾಢ್ಯಂ ಸ್ಫೀತಮಚಲಮೈಶ್ವರ್ಯಂ ಪ್ರತಿಪದ್ಯತೇ ॥೨೭॥

ಭಾದ್ರಪದ ಮಾಸದಲ್ಲಿ ಒಂದೇ ಬಾರಿ ಆಹಾರವನ್ನು ಸ್ವೀಕರಿಸುವ ಮನುಷ್ಯನು ಧನಾಢ್ಯನಾಗಿ ಪರಿಶುದ್ಧವಾದ, ಸ್ಥಿರವಾದ ಐಶ್ವರ್ಯವನ್ನು ಹೊಂದುತ್ತಾನೆ.

ತಥೈವಾಶ್ವಯುಜಂ ಮಾಸಮೇಕಭಕ್ತೇನ ಯಃ ಕ್ಷಪೇತ್ ।
ಪ್ರಜಾವಾನ್ ವಾಹನಾಢ್ಯಶ್ಚ ಬಹುಪುತ್ರಶ್ಚ ಜಾಯತೇ ॥೨೮॥

ಹಾಗೆಯೇ ಆಶ್ವಯುಜ ಮಾಸವನ್ನು ಏಕಭಕ್ತದಿಂದ ಕಳೆಯುವವನು ಪ್ರಜಾವಂತನೂ, ವಾಹನಗಳನ್ನು ಹೊಂದಿ ಸಿರಿವಂತನೂ ಮತ್ತು ಬಹುಪುತ್ರವಂತನೂ ಆಗಿ ಜನಿಸುತ್ತಾನೆ.

ಕಾರ್ತಿಕಂ ತು ನರೋ ಮಾಸಂ ಯಃ ಕುರ್ಯಾದೇಕಭೋಜನಮ್ ।
ಶೂರಶ್ಚ ಬಹುಭಾರ್ಯಶ್ಚ ಕೀರ್ತಿಮಾಂಶ್ಚೈವ ಜಾಯತೇ ॥೨೯॥

ಕಾರ್ತಿಕಮಾಸದಲ್ಲಿ ಯಾವನು ಏಕಭೋಜನವನ್ನು ಮಾಡುತ್ತಾನೆಯೋ ಅವನು ಶೂರನೂ, ಬಹುಭಾರ್ಯೆಯರನ್ನು ಹೊಂದುವವನೂ ಮತ್ತು ಕೀರ್ತಿವಂತನೂ ಆಗಿ ಜನಿಸುತ್ತಾನೆ.

ಇತಿ ಮಾಸಾ ನರವ್ಯಾಘ್ರ ಕ್ಷಪತಾಂ ಪರಿಕೀರ್ತಿತಾಃ ।
ವಿಧೀನಾಂ ನಿಯಮಾಂಶ್ಚೈವ ಶೃಣು ತಾನಪಿ ಪಾರ್ಥಿವ ॥೩೦॥

ಎಲೈ ನರವ್ಯಾಘ್ರನೇ, ಇವು ಮಾಸಗಳನ್ನು ಉಪವಾಸದಿಂದ ಕಳೆಯುವವರಿಗೆ ಹೇಳಲ್ಪಟ್ಟ ಫಲಗಳು. ಎಲೈ ಪಾರ್ಥಿವನೇ, ವಿಧಿಗಳನ್ನು ಮತ್ತು ನಿಯಮಗಳನ್ನು ಕೇಳುವವನಾಗು.

ಪಕ್ಷೇ ಪಕ್ಷೇ ಗತೇ ಯಸ್ತು ಭಕ್ತಮಶ್ನಾತಿ ಭಾರತ ।
ಗವಾಢ್ಯೋ ಬಹುಪುತ್ರಶ್ಚ ದೀರ್ಘಾಯುಶ್ಚ ಸ ಜಾಯತೇ ॥೩೧॥

ಎಲೈ ಭಾರತನೇ, ಯಾವನು ಒಂದು ಪಕ್ಷವು ಕಳೆದ ಮೇಲೆ ಒಂದು ಬಾರಿ ಭೋಜನವನ್ನು ಮಾಡುತ್ತಾನೆಯೋ ಅವನು ಗೋಸಂಪತ್ತಿಯನ್ನು ಹೊಂದಿದವನೂ, ಬಹುಪುತ್ರವಂತನೂ, ದೀರ್ಘಾಯುವೂ ಆಗಿ ಜನಿಸುತ್ತಾನೆ.

ಮಾಸಿ ಮಾಸಿ ತ್ರಿರಾತ್ರಾಣಿ ಕೃತ್ವಾ ವರ್ಷಾಣಿ ದ್ವಾದಶ ।
ಗಣಾಧಿಪತ್ಯಂ ಪ್ರಾಪ್ನೋತಿ ನಿಃಸಪತ್ನಮನಾವಿಲಮ್ ॥೩೨॥

ಹನ್ನೆರಡು ವರ್ಷಗಳ ಕಾಲ ಪ್ರತಿಯೊಂದು ಮಾಸದಲ್ಲಿಯೂ ಮೂರು ರಾತ್ರಿ ಉಪವಾಸವನ್ನು ಮಾಡುವವನು ಶತ್ರುರಹಿತವಾದ, ಪ್ರತಿಬಂಧರಹಿತವಾದ ಗಣಾಧಿಪತ್ಯವನ್ನು ಪಡೆಯುತ್ತಾನೆ.

ಏತೇ ತು ನಿಯಮಾಃ ಸರ್ವೇ ಕರ್ತವ್ಯಾಃ ಶರದೋ ದಶ ।
ದ್ವೇ ಚಾನ್ಯೇ ಭರತಶ್ರೇಷ್ಠ ಸ್ವವೃತ್ತಿಮನುತಿಷ್ಠತಾ ॥೩೩॥

ಎಲೈ ಭರತಶ್ರೇಷ್ಠನೇ, ತನ್ನ ವೃತ್ತಿಯನ್ನು ಅನುಸರಿಸುವ ಮನುಷ್ಯನು ಈ ಎಲ್ಲ ನಿಯಮಗಳನ್ನು ಹನ್ನೆರಡು ವರ್ಷಗಳ ಕಾಲ ಮಾಡಬೇಕು.

ಯಸ್ತು ಪ್ರಾತಸ್ತಥಾ ಸಾಯಂ ಭುಂಜಾನೋ ನಾಂತರಾ ಪಿಬೇತ್ ।
ಅಹಿಂಸಾನಿರತೋ ನಿತ್ಯಂ ಜುಹ್ವಾನೋ ಜಾತವೇದಸಮ್ ॥೩೪॥

ಷಡ್ಭಿಃ ಸ ವರ್ಷೈರ್ನ್ಯಪತೇ ಸಿದ್ಧ್ಯತೇ ನಾತ್ರ ಸಂಶಯಃ ।
ಅಗ್ನಿಷ್ಟೋಮಸ್ಯ ಯಜ್ಞಸ್ಯ ಫಲಂ ಪ್ರಾಪ್ನೋತಿ ಮಾನವಃ ॥೩೫॥

ಯಾವನು ಪ್ರಾತಃಕಾಲ ಮತ್ತು ಸಾಯಂಕಾಲಗಳಲ್ಲಿ ಭೋಜನವನ್ನು ಮಾಡುತ್ತಾ ಮಧ್ಯದಲ್ಲಿ ನೀರನ್ನೂ ಕುಡಿಯದೇ, ಅಹಿಂಸಾನಿರತನಾಗಿ, ನಿತ್ಯದಲ್ಲೂ ಅಗ್ನಿಯಲ್ಲಿ ಹೋಮ ಮಾಡುತ್ತಾನೆಯೋ ಅಂತಹವನು ಆರುವರ್ಷಗಳಲ್ಲಿ ಸಿದ್ಧಿಯನ್ನು ಪಡೆಯುವುದರಲ್ಲಿ ಸಂಶಯವಿಲ್ಲ. ಅಂತಹ ಮನುಷ್ಯನು ಅಗ್ನಿಷ್ಟೋಮಯಾಗದ ಫಲವನ್ನು ಹೊಂದುತ್ತಾನೆ.

ಅಧಿವಾಸೇ ಸೋಽಪ್ಸರಸಾಂ ನೃತ್ಯಗೀತವಿನಾದಿತೇ ।
ತಪ್ತಕಾಂಚನವರ್ಣಾಭಂ ವಿಮಾನಮಧಿರೋಹತಿ ॥೩೬॥

ಪೂರ್ಣಂ ವರ್ಷಸಹಸ್ರಂ ತು ಬ್ರಹ್ಮಲೋಕೇ ಮಹೀಯತೇ ।
ತತ್ಕ್ಷಯಾದಿಹ ಚಾಗಮ್ಯ ಮಾಹಾತ್ಮ್ಯಂ ಪ್ರತಿಪದ್ಯತೇ ॥೩೭॥

ಅವನು ನೃತ್ಯ-ಗೀತೆಗಳಿಂದ ಕೂಡಿರುವ ಅಪ್ಸರೆಯರ ವಾಸಸ್ಥಳದಲ್ಲಿ ತಪ್ತವಾದ ಸೂರ್ಯನ ಬಣ್ಣವನ್ನು ಹೊಂದಿದ ವಿಮಾನವನ್ನು ಏರುತ್ತಾನೆ. ಒಂದು ಸಹಸ್ರವರ್ಷಗಳ ಕಾಲ ಪೂರ್ಣವಾಗಿ ಬ್ರಹ್ಮಲೋಕದಲ್ಲಿ ಮೆರೆಯುತ್ತಾನೆ. ಪುಣ್ಯಕ್ಷಯವಾದ ಮೇಲೆ ಪುನಃ ಇಲ್ಲಿ ಭೂಮಿಗೆ ಬಂದು ಮಾಹಾತ್ಮ್ಯವನ್ನು ಹೊಂದುತ್ತಾನೆ.

ಯಸ್ತು ಸಂವತ್ಸರಂ ಪೂರ್ಣಮೇಕಾಹಾರೋ ಭವೇನ್ನರಃ ।
ಅತಿರಾತ್ರಸ್ಯ ಯಜ್ಞಸ್ಯ ಸ ಫಲಂ ಸಮುಪಾಶ್ನುತೇ ॥೩೮॥

ದಶವರ್ಷಸಹಸ್ರಾಣಿ ಸ್ವರ್ಗೇ ಚ ಸ ಮಹೀಯತೇ ।
ತತ್ಕ್ಷ್ಯಾದಿಹ ಚಾಗಮ್ಯ ಮಾಹಾತ್ಮ್ಯಂ ಪ್ರತಿಪದ್ಯತೇ ॥೩೯॥

ಯಾವ ಮನುಷ್ಯನು ಪೂರ್ಣವಾಗಿ ಒಂದು ವರ್ಷಗಳ ಕಾಲ ಏಕಾಹಾರವನ್ನು ಮಾಡುತ್ತಾನೆಯೋ ಅವನು ಅತಿರಾತ್ರ ಯಜ್ಞದ ಫಲವನ್ನು ಹೊಂದುತ್ತಾನೆ. ಹತ್ತು ಸಹಸ್ರ ವರ್ಷಗಳ ಕಾಲ ಅವನು ಸ್ವರ್ಗದಲ್ಲಿ ಸುಖವನ್ನು ಅನುಭವಿಸುತ್ತಾನೆ. ಪುಣ್ಯ ಕ್ಷಯವಾದ ಮೇಲೆ ಇಲ್ಲಿಗೆ ಬಂದು ಮಾಹಾತ್ಮ್ಯವನ್ನು ಹೊಂದುತ್ತಾನೆ.

ಯಸ್ತು ಸಂವತ್ಸರಂ ಪೂರ್ಣಂ ಚತುರ್ಥಂ ಭಕ್ತಮಶ್ನತೇ ।
ಅಹಿಂಸಾನಿರತೋ ನಿತ್ಯಂ ಸತ್ಯವಾಙ್ನಿಯತೇಂದ್ರಿಯಃ ॥೪೦॥

ವಾಜಪೇಯಸ್ಯ ಯಜ್ಞಸ್ಯ ಫಲಂ ವೈ ಸಮುಪಾಶ್ನುತೇ ।
ತ್ರಿಂಶದ್ವರ್ಷಸಹಸ್ರಾಣಿ ಸ್ವರ್ಗೇ ಚ ಸ ಮಹೀಯತೇ ॥೪೧॥

ಯಾವನು ಪೂರ್ಣವಾದ ಒಂದು ಸಂವತ್ಸರದ ಕಾಲ ನಾಲ್ಕನೆಯ ಆಹಾರವನ್ನು (ಒಂದು ದಿನ ಪೂರ್ಣ ಉಪವಾಸ, ಎರಡನೆಯ ದಿನ ರಾತ್ರಿ ಆಹಾರ ಸೇವನೆ) ಮಾಡಿ, ನಿತ್ಯವೂ ಅಹಿಂಸಾನಿರತನಾಗಿ, ಸತ್ಯವಚನನಾಗಿ, ಇಂದ್ರಿಯಜಯವನ್ನು ಹೊಂದಿರುತ್ತಾನೆಯೋ ಅವನು ವಾಜಪೇಯ ಯಜ್ಞದ ಫಲವನ್ನು ಹೊಂದುತ್ತಾನೆ. ಮೂವತ್ತು ಸಹಸ್ರ ವರ್ಷಗಳ ಕಾಲ ಸ್ವರ್ಗಸುಖವನ್ನು ಅನುಭವಿಸುತ್ತಾನೆ.

ಷಷ್ಠೇ ಕಾಲೇ ತು ಕೌಂತೇಯ ನರಃ ಸಂವತ್ಸರಂ ಕ್ಷಪೇತ್ ।
ಅಶ್ವಮೇಧಸ್ಯ ಯಜ್ಞಸ್ಯ ಫಲಂ ಸಂಪ್ರಾಪ್ನುಯಾನ್ನರಃ ॥೪೨॥

ಚಕ್ರವಾಕಪ್ರಯುಕ್ತೇನ ವಿಮಾನೇನ ಸ ಗಚ್ಛತಿ ।
ಚತ್ವಾರಿಂಶತ್ಸಹಸ್ರಾಣಿ ವರ್ಷಾಣಾಂ ದಿವಿ ಮೋದತೇ ॥೪೩॥

ಎಲೈ ಕೌಂತೇಯನೇ, ಯಾವನು ಷಷ್ಠಕಾಲದಲ್ಲಿ (ಎರಡು ದಿವಸ ಉಪವಾಸ, ಮೂರನೆಯ ದಿವಸ ರಾತ್ರಿ ಭೋಜನ) ಆಹಾರವನ್ನು ಸ್ವೀಕಾರ ಮಾಡಿ ಒಂದು ಸಂವತ್ಸರವನ್ನು ಕಳೆಯುತ್ತಾನೆಯೋ ಅಂತಹವನು ಅಶ್ವಮೇಧ ಯಜ್ಞದ ಫಲವನ್ನು ಹೊಂದುತ್ತಾನೆ. ಚಕ್ರವಾಕ ಪಕ್ಷಿಗಳನ್ನು ಹೂಡಿರುವ ವಿಮಾನದಲ್ಲಿ ಅವನು ಸಂಚರಿಸುತ್ತಾನೆ. ನಲವತ್ತು ಸಾವಿರ ವರ್ಷಗಳ ಕಾಲ ಸ್ವರ್ಗದಲ್ಲಿ ಸುಖವನ್ನು ಅನುಭವಿಸುತ್ತಾನೆ.

ಅಷ್ಟಮೇನ ತು ಭಕ್ತೇನ ಜೀವನ್ ಸಂವತ್ಸರಂ ನೃಪ ।
ಗವಾಮಯಸ್ಯ ಯಜ್ಞಸ್ಯ ಫಲಂ ಪ್ರಾಪ್ನೋತಿ ಮಾನವಃ ॥೪೪॥

ಹಂಸಸಾರಸಯುಕ್ತೇನ ವಿಮಾನೇನ ಸ ಗಚ್ಛತಿ ।
ಪಂಚಾಶತಂ ಸಹಸ್ರಾಣಿ ವರ್ಷಾಣಾಂ ದಿವಿ ಮೋದತೇ ॥೪೫॥

ಎಲೈ ರಾಜನೇ, ಇದೇ ರೀತಿ ಯಾವನು ಅಷ್ಟಮ ಕಾಲದ ಆಹಾರದಿಂದ (ಮೂರು ದಿನ ಪೂರ್ಣವಾಗಿ ಉಪವಾಸ, ನಾಲ್ಕನೆಯ ದಿನ ರಾತ್ರಿ ಭೋಜನ) ಒಂದು ಸಂವತ್ಸರವನ್ನು ಕಳೆಯುತ್ತಾನೆಯೋ ಅವನು ಗವಾಮಯ ಯಜ್ಞದ ಫಲವನ್ನು ಪಡೆಯುತ್ತಾನೆ. ಹಂಸ ಮತ್ತು ಸಾರಸ ಪಕ್ಷಿಗಳನ್ನು ಹೂಡಿದ ವಿಮಾನದಲ್ಲಿ ಸಂಚರಿಸುತ್ತಾನೆ. ಐವತ್ತು ಸಾವಿರ ವರ್ಷಗಳ ಕಾಲ ಸ್ವರ್ಗಸುಖವನ್ನು ಅನುಭವಿಸುತ್ತಾನೆ.

ಪಕ್ಷೇ ಪಕ್ಷೇ ಗತೇ ರಾಜನ್ ಯೋऽಶ್ನೀಯಾದ್ ವರ್ಷಮೇವ ತು ।
ಷಣ್ಮಾಸಾನಶನಂ ತಸ್ಯ ಭಗವಾನಂಗಿರಾಬ್ರವೀತ್ ।
ಷಷ್ಟಿಂ ವರ್ಷಸಹಸ್ರಾಣಿ ದಿವಮಾವಸತೇ ಚ ಸಃ ॥೪೬॥

ವೀಣಾನಾಂ ವಲ್ಲಕೀನಾಂ ಚ ವೇಣೂನಾಂ ಚ ವಿಶಾಂಪತೇ ।
ಸುಘೋಷೈರ್ಮಧುರೈಃ ಶಬ್ದೈಃ ಸುಪ್ತಃ ಸ ಪ್ರತಿಬೋಧ್ಯತೇ ॥೪೭॥

ಒಂದೊಂದು ಪಕ್ಷವು ಕಳೆದ ಮೇಲೆ ಒಂದೊಂದು ಬಾರಿ ಯಾವನು ಆಹಾರ ಸೇವನೆಯನ್ನು ಮಾಡಿ ಒಂದು ವರ್ಷವನ್ನು ಪೂರ್ಣಗೊಳಿಸುತ್ತಾನೆಯೋ ಅದು ಆರು ತಿಂಗಳ ಉಪವಾಸಕ್ಕೆ ಸಮವಾದುದು ಎಂದು ಪೂಜ್ಯರಾದ ಅಂಗಿರಸರು ಹೇಳಿದ್ದಾರೆ. ಅವನು ಅರವತ್ತು ಸಾವಿರ ವರ್ಷಗಳ ಕಾಲ ಸ್ವರ್ಗವಾಸವನ್ನು ಮಾಡುತ್ತಾನೆ. ಎಲೈ ರಾಜನೇ, ಅವನು ವೀಣಾ, ವಲ್ಲಕೀ, ವೇಣುಗಳ ಮಧುರವಾದ ಘೋಷಗಳಿಂದ ನಿದ್ರೆಯಿಂದ ಎಚ್ಚರಿಸಲ್ಪಡುತ್ತಾನೆ.

ಸಂವತ್ಸರಮಿಹೈಕಂ ತು ಮಾಸಿ ಮಾಸಿ ಪಿಬೇತ್ ಪಯಃ ।
ಫಲಂ ವಿಶ್ವಜಿತಸ್ತಾತ ಪ್ರಾಪ್ನೋತಿ ಸುಮನೋರಮಮ್ ॥೪೮॥

ಸಿಂಹವ್ಯಾಘ್ರಪ್ರಯುಕ್ತೇನ ವಿಮಾನೇನ ಸ ಗಚ್ಛತಿ ।
ಸಪ್ತತಿಂ ಚ ಸಹಸ್ರಾಣಿ ವರ್ಷಾಣಾಂ ದಿವಿ ಮೋದತೇ ॥೪೯॥

ಎಲೈ ಪ್ರೀತಿಪಾತ್ರನೇ, ಯಾವನು ತಿಂಗಳಿಗೆ ಒಂದು ಬಾರಿ ಜಲಪಾನವನ್ನು ಮಾಡಿ ಸಂವತ್ಸರವನ್ನು ಕಳೆಯುತ್ತಾನೆಯೋ ಅವನು ವಿಶ್ವಜಿತ್ ಯಾಗದ ಅತಿಮನೋಹರವಾದ ಫಲವನ್ನು ಪಡೆಯುತ್ತಾನೆ. ಸಿಂಹವ್ಯಾಘ್ರಗಳನ್ನು ಹೂಡಿದ ವಿಮಾನದಲ್ಲಿ ಅವನು ಸಂಚರಿಸುತ್ತಾನೆ. ಎಪ್ಪತ್ತು ಸಾವಿರ ವರ್ಷಗಳ ಕಾಲ ಸ್ವರ್ಗಸುಖವನ್ನು ಅನುಭವಿಸುತ್ತಾನೆ.

ಮಾಸಾದೂರ್ಧ್ವಂ ನರವ್ಯಾಘ್ರ ನೋಪವಾಸೋ ವಿಧೀಯತೇ ।
ವಿಧಿಂ ತ್ವನಶನಸ್ಯಾಹುಃ ಪಾರ್ಥ ಧರ್ಮವಿದೋ ಜನಾಃ ॥೫೦॥

ಎಲೈ ನರವ್ಯಾಘ್ರನೇ, ಒಂದು ಮಾಸಕ್ಕಿಂತ ಹೆಚ್ಚು ಉಪವಾಸವು ವಿಹಿತವಾಗುವುದಿಲ್ಲ. ಎಲೈ ಪಾರ್ಥನೇ, ಧರ್ಮವನ್ನು ತಿಳಿದ ಜನರು ಹೀಗೆ ಈ ಉಪವಾಸ ವಿಧಿಯನ್ನು ಹೇಳುತ್ತಾರೆ.

ಅನಾರ್ತೋ ವ್ಯಾಧಿರಹಿತೋ ಗಚ್ಛೇದನಶನಂ ತು ಯಃ ।
ಪದೇ ಪದೇ ಯಜ್ಞಫಲಂ ಪ್ರಾಪ್ನೋತ್ಯವ ನ ಸಂಶಯಃ ॥೫೧॥

ದಿವಂ ಹಂಸಪ್ರಯುಕ್ತೇನ ವಿಮಾನೇನ ಸ ಗಚ್ಛತಿ ।
ಶತಂ ಚಾಪ್ಸರಸಃ ಕನ್ಯಾ ರಮಯಂತ್ಯೇಪಿ ತಂ ನರಮ್ ॥೫೨॥

ದುಃಖಕ್ಕೆ ಈಡಾಗದೆ, ವ್ಯಾಧಿರಹಿತನಾಗಿ ಯಾವನು ಉಪವಾಸವ್ರತವನ್ನು ಮಾಡುತ್ತಾನೆಯೋ ಅವನು ಹೆಜ್ಜೆ ಹೆಜ್ಜೆಗೆ ಯಜ್ಞಫಲವನ್ನು ಹೊಂದುವುದರಲ್ಲಿ ಸಂಶಯವಿಲ್ಲ. ಅವನು ಹಂಸಗಳನ್ನು ಹೂಡಿದ ವಿಮಾನದಿಂದ ಸ್ವರ್ಗಕ್ಕೆ ಹೋಗುತ್ತಾನೆ. ಅವನನ್ನು ನೂರು ಜನ ಅಪ್ಸರಕನ್ಯೆಯರು ಸಂತೋಷಪಡಿಸುತ್ತಾರೆ.

ಆರ್ತೋ ವಾ ವ್ಯಾಧಿತೋ ವಾಪಿ ಗಚ್ಛೇದನಶನಂ ತು ಯಃ ।
ಶತಂ ವರ್ಷಸಹಸ್ರಾಣಾಂ ಮೋದತೇ ದಿವಿ ಸ ಪ್ರಭೋ ।
ಕಾಂಚೀನೂಪುರಶಬ್ದೇನ ಪ್ರಸುಪ್ತಃ ಪ್ರತಿಬುಧ್ಯತೇ ॥೫೩॥

ಆರ್ತನಾಗಿರಲಿ ಅಥವಾ ವ್ಯಾಧಿಗ್ರಸ್ತನಾಗಿರಲಿ ಯಾವನು ಉಪವಾಸವನ್ನು ಮಾಡುತ್ತಾನೆಯೋ ಅವನು ಒಂದು ಲಕ್ಷವರ್ಷಗಳ ಕಾಲ ಸ್ವರ್ಗದಲ್ಲಿ ಸುಖವನ್ನು ಪಡೆಯುತ್ತಾನೆ. ಎಲೈ ಪ್ರಭುವೇ, ಮಲಗಿದ ಅವನು ಕಾಂಚೀನೂಪುರ ಶಬ್ದಗಳಿಂದ ಎಚ್ಚರಿಸಲ್ಪಡುತ್ತಾನೆ.

ಸಹಸ್ರಹಂಸಸಂಯುಕ್ತೇ ವಿಮಾನೇ ಸೋಮವರ್ಚಸಿ ।
ಸ ಗತ್ವಾ ಸ್ತ್ರೀಶತಾಕೀರ್ಣೇ ರಮತೇ ಭರತರ್ಷಭ ॥೫೪॥

ಎಲೈ ಭರತಶ್ರೇಷ್ಠನೇ, ಅವನು ಸಹಸ್ರ ಹಂಸಗಳಿಂದ ಯುಕ್ತವಾದ, ಚಂದ್ರನ ಕಾಂತಿಯನ್ನು ಹೊಂದಿದ, ನೂರು ಸ್ತ್ರೀಯರಿಂದ ತುಂಬಿದ ವಿಮಾನದಲ್ಲಿ ಸಂಚರಿಸುತ್ತಾ ಸುಖಪಡುತ್ತಾನೆ.

ಕ್ಷೀಣಸ್ಯಾಪ್ಯಾಯನಂ ದೃಷ್ಟಂ ಕ್ಷತಸ್ಯ ಕ್ಷತರೋಹಣಮ್ ।
ವ್ಯಾಧಿತಸ್ಯೌಷಧಗ್ರಾಮಃ ಕ್ರುದ್ಧಸ್ಯ ಚ ಪ್ರಸಾದನಮ್ ॥೫೫॥

ಕ್ಷೀಣನಾದವನಿಗೆ ಉಂಟಾಗುವ ಅಭಿವೃದ್ಧಿಯು ನೋಡಲ್ಪಟ್ಟಿದೆ. ಗಾಯಗೊಂಡವನಿಗೆ ಆ ಗಾಯದ ಪರಿಹಾರವು ದೃಷ್ಟವಾಗಿದೆ. ವ್ಯಾಧಿಗ್ರಸ್ತನಾದವನಿಗೆ ಔಷಧಸಮೂಹಗಳಿಂದ ವ್ಯಾಧಿಪರಿಹಾರವೂ ದೃಷ್ಟವಾಗಿದೆ. ಕೋಪಗೊಂಡವನನ್ನು ಸಮಾಧಾನಪಡಿಸಿ ಕೋಪವನ್ನು ಕಳೆಯುವುದೂ ದೃಷ್ಟವಾಗಿದೆ.

ದುಃಖಿತಸ್ಯಾರ್ಥಮಾನಾಭ್ಯಾಂ ದ್ರವ್ಯಾಣಾಂ ಪ್ರತಿಪಾದನಮ್ ।
ನ ಚೈತೇ ಸ್ವರ್ಗಕಾಮಸ್ಯ ರೋಚಂತೇ ಸುಖಮೇಧಸಃ ॥೫೬॥

ದುಃಖಿತನಾದವನಿಗೆ ದ್ರವ್ಯವನ್ನು ನೀಡಿ ಅರ್ಥಮಾನಗಳಿಂದ ದುಃಖವನ್ನು ಪರಿಹರಿಸುವುದು ದೃಷ್ಟವಾಗಿದೆ. ಆದರೆ ಸ್ವರ್ಗಸುಖದಲ್ಲೇ ನೆಟ್ಟ ಮನಸ್ಸುಳ್ಳವನಿಗೆ ಇವು ಯಾವುವೂ ರುಚಿಸುವುದಿಲ್ಲ.

ಅತಃ ಸ ಕಾಮಸಂಯುಕ್ತೋ ವಿಮಾನೇ ಹೇಮಸನ್ನಿಭೇ ।
ರಮತೇ ಸ್ತ್ರೀಶತಾಕೀರ್ಣೇ ಪುರುಷೋऽಲಂಕೃತಃ ಶುಭೇ ॥೫೭॥

ಆದ್ದರಿಂದ ಅವನು ಕಾಮದಿಂದ ಕೂಡಿದವನಾಗಿ, ಸುವರ್ಣಕಾಂತಿಯುಳ್ಳ ವಿಮಾನದಲ್ಲಿ ಅಲಂಕೃತನಾಗಿ ನೂರು ಸ್ತ್ರೀಯರಿಂದ ಕೂಡಿದವನಾಗಿ ಸಂತೋಷ ಪಡುತ್ತಾನೆ.

ಸ್ವಸ್ಥಃ ಸಫಲಸಂಕಲ್ಪಃ ಸುಖೀ ವಿಗತಕಲ್ಮಷಃ ।
ಅನಶ್ನನ್ ದೇಹಮುತ್ಸೃಜ್ಯ ಫಲಂ ಪ್ರಾಪ್ನೋತಿ ಮಾನವಃ ॥೫೮॥

ಸಮಾಧಾನಚಿತ್ತನಾಗಿ ಅನಶನವ್ರತವನ್ನು ಮಾಡುವವನು ತನ್ನ ದೇಹವನ್ನು ತ್ಯಜಿಸಿ, ಸಂಕಲ್ಪಸಿದ್ಧಿಯನ್ನು ಪಡೆದು, ದೋಷಗಳನ್ನು ಕಳೆದುಕೊಂಡು ಸುಖರೂಪವಾದ ಫಲವನ್ನು ಹೊಂದುತ್ತಾನೆ.

ಬಾಲಸೂರ್ಯಪ್ರತೀಕಾಶೇ ವಿಮಾನೇ ಹೇಮವರ್ಚಸಿ ।
ವೈಡೂರ್ಯಮುಕ್ತಾಖಚಿತೇ ವೀಣಾಮುರಜನಾದಿತೇ ॥೫೯॥

ಪತಾಕಾದೀಪಿಕಾಕೀರ್ಣೇ ದಿವ್ಯಘಂಟಾನಿನಾದಿತೇ ।
ಸ್ತ್ರೀಸಹಸ್ರಾನುಚರಿತೇ ಸ ನರಃ ಸುಖಮೇಧತೇ ॥೬೦॥

ಬಾಲಸೂರ್ಯನ ಕಾಂತಿಯನ್ನು ಹೊಂದಿದ, ಸುವರ್ಣವರ್ಣೋಪೇತವಾದ, ವೈಡೂರ್ಯಮುಕ್ತಾಮಣಿಗಳಿಂದ ಖಚಿತವಾದ, ವೀಣಾಮುರಜ ವಾದ್ಯಶಬ್ದಗಳಿಂದ ಕೂಡಿದ, ಪತಾಕೆಗಳಿಂದಲೂ ಮತ್ತು ದೀಪಗಳಿಂದಲೂ ನಿಬಿಡವಾದ, ದೇವ ಘಂಟಾನಾದವನ್ನು ಹೊಂದಿದ, ಸಹಸ್ರ ಸ್ತ್ರೀಯರಿಂದ ತುಂಬಿದ ವಿಮಾನದಲ್ಲಿ ಅವನು ಸುಖವನ್ನು ಹೊಂದುತ್ತಾನೆ.

ಯಾವಂತಿ ರೋಮಕೂಪಾಣಿ ತಸ್ಯ ಗಾತ್ರೇಷು ಪಾಂಡವ ।
ತಾವಂತ್ಯೇವ ಸಹಸ್ರಾಣಿ ವರ್ಷಾಣಾಂ ದಿವಿ ಮೋದತೇ ॥೬೧॥

ಎಲೈ ಪಾಂಡವನೇ, ಅವನ ದೇಹದಲ್ಲಿ ಎಷ್ಟು ರೋಮಕೂಪಗಳಿವೆಯೋ ಅಷ್ಟು ಸಹಸ್ರವರ್ಷಗಳ ಕಾಲ ಸ್ವರ್ಗದಲ್ಲಿ ಸುಖಪಡುತ್ತಾನೆ.

ನಾಸ್ತಿ ವೇದಾತ್ ಪರಂ ಶಾಸ್ತ್ರಂ ನಾಸ್ತಿ ಮಾತೃಸಮೋ ಗುರುಃ ।
ನ ಧರ್ಮಾತ್‌ಪರಮೋ ಲಾಭಃ ತಪೋ ನಾನಶನಾತ್ ಪರಮ್ ॥೬೨॥

ವೇದಗಳಿಗಿಂತ ದೊಡ್ಡ ಶಾಸ್ತ್ರವಿಲ್ಲ. ತಾಯಿಗಿಂತ ದೊಡ್ಡ ಗುರುವಿಲ್ಲ. ಧರ್ಮಕ್ಕಿಂತ ಶ್ರೇಷ್ಠವಾದ ಲಾಭವಿಲ್ಲ. ಉಪವಾಸಕ್ಕಿಂತ ಶ್ರೇಷ್ಠವಾದ ತಪಸ್ಸಿಲ್ಲ.

ಬ್ರಾಹ್ಮಣೇಭ್ಯಃ ಪರಂ ನಾಸ್ತಿ ಪಾವನಂ ದಿವಿ ಚೇಹ ಚ ।
ಉಪವಾಸೈಸ್ತಥಾ ತುಲ್ಯಂ ತಪಃಕರ್ಮ ನ ವಿದ್ಯತೇ ॥೬೩॥

ಬ್ರಾಹ್ಮಣರಿಗಿಂತ ಶ್ರೇಷ್ಠವಾದುದು, ಹೆಚ್ಚು ಪವಿತ್ರವಾದುದು ಈ ಲೋಕದಲ್ಲಾಗಲೀ ಅಥವಾ ಸ್ವರ್ಗಲೋಕದಲ್ಲಾಗಲೀ ಯಾವುದೂ ಇಲ್ಲ. ಹಾಗೆಯೇ ಉಪವಾಸಕ್ಕೆ ಸಮಾನವಾದ ತಪಸ್ಸೂ ಯಾವುದೂ ಇಲ್ಲ.

ಉಪೋಷ್ಯ ವಿಧಿವದ್ ದೇವಾಸ್ತ್ರಿದಿವಂ ಪ್ರತಿಪೇದಿರೇ ।
ಋಷಯಶ್ಚ ಪರಾಂ ಸಿದ್ಧಿಮುಪವಾಸೈರವಾಪ್ನುವನ್ ॥೬೪॥

ವಿಧಿಪೂರ್ವಕವಾಗಿ ಉಪವಾಸವನ್ನು ಮಾಡಿ ದೇವತೆಗಳು ಸ್ವರ್ಗವನ್ನು ಹೊಂದಿದರು. ಋಷಿಗಳೂ ಸಹ ಉಪವಾಸವನ್ನು ಮಾಡಿ ಶ್ರೇಷ್ಠವಾದ ಸಿದ್ಧಿಯನ್ನು ಪಡೆದರು.

ದಿವ್ಯಂ ವರ್ಷಸಹಸ್ರಂ ಹಿ ವಿಶ್ವಾಮಿತ್ರೇಣ ಧೀಮತಾ ।
ಕ್ಷಾಂತಮೇಕೇನ ಭಕ್ತೇನ ತೇನ ವಿಪ್ರತ್ವಮಾಗತಃ ॥೬೫॥

ಮೇಧಾವಿಗಳಾದ ವಿಶ್ವಾಮಿತ್ರರು ದಿವ್ಯಮಾನದ ಸಹಸ್ರವರ್ಷಗಳ ಕಾಲ ಕಷ್ಟವನ್ನು ಸಹಿಸಿ ಏಕಭಕ್ತವನ್ನು ಮಾಡಿದರು. ಆದ್ದರಿಂದ ಬ್ರಾಹ್ಮಣ್ಯವನ್ನು ಪಡೆದರು.

ಚ್ಯವನೋ ಜಮದಗ್ನಿಶ್ಚ ವಸಿಷ್ಠೋ ಗೌತಮೋ ಭೃಗುಃ ।
ಸರ್ವ ಏವ ದಿವಂ ಪ್ರಾಪ್ತಾಃ ಕ್ಷಮಾವಂತೋ ಮಹರ್ಷಯಃ ॥೬೬॥

ಚ್ಯವನ, ಜಮದಗ್ನಿ, ವಸಿಷ್ಠ, ಗೌತಮ, ಭೃಗು ಈ ಎಲ್ಲ ಮಹರ್ಷಿಗಳು ಉಪವಾಸ ಕಷ್ಟವನ್ನು ಸಹಿಸಿ ಸ್ವರ್ಗವನ್ನು ಹೊಂದಿದರು.

ಇದಮಂಗಿರಸಾ ಪೂರ್ವಂ ಮಹರ್ಷಿಭ್ಯಃ ಪ್ರದರ್ಶಿತಮ್ ।
ಯಃ ಪ್ರದರ್ಶಯತೇ ನಿತ್ಯಂ ನ ಸ ದುಃಖಮವಾಪ್ನುಯಾತ್ ॥೬೭॥

ಇದನ್ನು ಹಿಂದೆ ಅಂಗಿರಸರು ಮಹರ್ಷಿಗಳಿಗೆ ಉಪದೇಶಿಸಿದರು. ಇದನ್ನು ನಿತ್ಯವೂ ಯಾವನು ಉಪದೇಶಿಸುತ್ತಾನೆಯೋ ಅವನು ದುಃಖವನ್ನು ಹೊಂದುವುದಿಲ್ಲ.

ಇಮಂ ತು ಕೌಂತೇಯ ಯಥಾಕ್ರಮಂ ವಿಧಿಂ
ಪ್ರವರ್ತಿತಂ ಹ್ಯಂಗಿರಸಾ ಮನೀಷಿಣಾ ।
ಪಠೇತ ಯೋ ವೈ ಶೃಣುಯಾಚ್ಚ ನಿತ್ಯದಾ
ನ ವಿದ್ಯತೇ ತಸ್ಯ ನರಸ್ಯ ಕಿಲ್ಬಿಷಮ್ ॥೬೮॥

ಎಲೈ ಕೌಂತೇಯನೇ, ಮೇಧಾವಿಗಳಾದ ಅಂಗಿರಸರಿಂದ ಪ್ರವರ್ತಿತವಾದ ಕ್ರಮಬದ್ಧವಾದ ಈ ಉಪವಾಸವಿಧಿಯನ್ನು ಯಾವನು ನಿತ್ಯವೂ ಹೇಳುತ್ತಾನೆಯೋ ಅಥವಾ ಕೇಳುತ್ತಾನೆಯೋ ಅಂತಹ ಮನುಷ್ಯನ ದೋಷಗಳು ನಾಶವನ್ನು ಹೊಂದುತ್ತವೆ.

ವಿಮುಚ್ಯತೇ ಚಾಪಿ ಸ ಸರ್ವಸಂಕರೈಃ
ನ ಚಾಸ್ಯ ದೋಷೈರಭಿಭೂಯತೇ ಮನಃ ।
ವಿಯೋನಿಜಾನಾಂ ಚ ವಿಜಾನತೇ ರುತಂ
ಧ್ರುವಾಂ ಚ ಕೀರ್ತಿಂ ಲಭತೇ ನರೋತ್ತಮಃ ॥೬೯॥

ಅವನು ಸರ್ವಸಂಕರಗಳಿಂದಲೂ ಮುಕ್ತನಾಗುತ್ತಾನೆ. ಅವನ ಮನಸ್ಸಿನಲ್ಲಿ ರಾಗಾದಿ ದೋಷಗಳು ಉಂಟಾಗುವುದಿಲ್ಲ. ಪಶು-ಪಕ್ಷಾದಿಗಳ ಭಾಷೆಯನ್ನೂ ತಿಳಿಯುತ್ತಾನೆ. ಆ ನರೋತ್ತಮನು ಶಾಶ್ವತವಾದ ಕೀರ್ತಿಯನ್ನೂ ಪಡೆಯುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಉಪವಾಸವಿಧಿರ್ನಾಮ
ಏಕೋನಷಷ್ಟ್ಯುತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಐವತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಅರವತ್ತನೆಯ ಅಧ್ಯಾಯ

ಉಪವಾಸ ಫಲ

ಯುಧಿಷ್ಠಿರಃ

ಪಿತಾಮಹೇನ ವಿಧಿವದ್ ಯಜ್ಞಾಃ ಪ್ರೋಕ್ತಾ ಮಹಾತ್ಮನಾ ।
ಗುಣಾಶ್ಚೈಷಾಂ ಯಥಾತತ್ತ್ವಂ ಪ್ರೇತ್ಯ ಚೇಹ ಚ ಸರ್ವಶಃ ॥೧॥

ನ ತೇ ಶಕ್ಯಾ ದರಿದ್ರೇಣ ಯಜ್ಞಾಃ ಪ್ರಾಪ್ತುಂ ಪಿತಾಮಹ ।
ಬಹೂಪಕರಣಾ ಯಜ್ಞಾ ನಾನಾಸಂಭಾರವಿಸ್ತರಾಃ ॥೨॥

ಯುಧಿಷ್ಠಿರ– ಮಹಾತ್ಮರಾದ ಪಿತಾಮಹರಾದ ನೀವು ವಿಧಿಗೆ ಅನುಸಾರವಾಗಿ ಯಜ್ಞಗಳನ್ನೂ, ಈ ಲೋಕದಲ್ಲಿ ಮತ್ತು ಮರಣಾನಂತರದಲ್ಲಿ ಅವುಗಳಿಂದ ಉಂಟಾಗುವ ಫಲಗಳನ್ನೂ ಸರಿಯಾಗಿ ಹೇಳಿದ್ದೀರಿ. ಎಲೈ ಪಿತಾಮಹನೇ, ಯಜ್ಞಗಳು, ಅನೇಕ ದ್ರವ್ಯಗಳಿಂದ, ಅನೇಕ ಸಾಧನಗಳಿಂದ ವಿಸ್ತಾರವಾದವುಗಳು. ದರಿದ್ರರಾದವರು ಅದನ್ನು ಮಾಡಲು ಸಾಧ್ಯವಿಲ್ಲ.

ಪಾರ್ಥಿವೈ ರಾಜಪುತ್ರೈರ್ವಾ ಶಕ್ಯಃ ಪ್ರಾಪ್ತುಂ ಪಿತಾಮಹ ।
ನಾರ್ಥನ್ಯೂನೈರವಗುಣೈರೇಕಾತ್ಮಭಿರಸಂಹತೈಃ ॥೩॥

ಯೋ ದರಿದ್ರೈರಪಿ ವಿಧಿಃ ಶಕ್ಯಃ ಪ್ರಾಪ್ತುಂ ಸದಾ ಭವೇತ್ ।
ತುಲ್ಯೋ ಯಜ್ಞಫಲೈರೇತೈಸ್ತನ್ಮೇ ಬ್ರೂಹಿ ಪಿತಾಮಹ ॥೪॥

ಎಲೈ ಪಿತಾಮಹನೇ, ರಾಜರು ಅಥವಾ ರಾಜಪುತ್ರರು ಯಜ್ಞಗಳನ್ನು ಮಾತ್ರ ಮಾಡಬಹುದು. ಧನವಿಲ್ಲದೆ ಯಜ್ಞೋಪಯೋಗಿಯಾದ ದ್ರವ್ಯಗಳಿಲ್ಲದೆ, ಇನ್ನೊಬ್ಬರ ಜೊತೆ ಇಲ್ಲದೆ ಒಬ್ಬಂಟಿಗರಾಗಿ ಇರುವವರು ಅದನ್ನು ಮಾಡಲಾರರು. ಎಲೈ ಪಿತಾಮಹನೇ, ಧನದಿಂದ ದರಿದ್ರರಾದವರೂ ಸಹ ಯಾವ ನಿಯಮವನ್ನು ಮಾಡಲು ಸಾಧ್ಯವೋ ಮತ್ತು ಯಾವ ನಿಯಮವನ್ನು ಮಾಡಿದರೆ ಯಜ್ಞಗಳಿಗೆ ಸಮಾನವಾದ ಫಲವು ಬರುವುದೋ ಅಂತಹದನ್ನು ಹೇಳು.

ಭೀಷ್ಮಃ

ಇದಮಂಗಿರಸಾ ಪ್ರೋಕ್ತಮುಪವಾಸಫಲಾತ್ಮಕಮ್ ।
ವಿಧಿಂ ಯಜ್ಞಫಲೈಸ್ತುಲ್ಯಂ ತನ್ನಿಬೋಧ ಯುಧಿಷ್ಠಿರ ॥೫॥

ಭೀಷ್ಮ– ಎಲೈ ಯುಧಿಷ್ಠಿರನೇ, ಯಜ್ಞಕ್ಕೆ ಸಮಾನವಾದ ಫಲವನ್ನು ನೀಡುವ ಉಪವಾಸದ ವಿಧಿಯನ್ನು, ಅದರ ಫಲವನ್ನು ಅಂಗಿರಸರು ಹೇಳಿದ್ದಾರೆ. ಅದನ್ನು ಕೇಳು.

ಯಸ್ತು ಕಾಲ್ಯಂ ತಥಾ ಸಾಯಂ ಭುಂಜಾನೋ ನಾಂತರಾ ಪಿಬೇತ್ ।
ಅಹಿಂಸಾನಿರತೋ ನಿತ್ಯಂ ಜುಹ್ವಾನೋ ಜಾತವೇದಸಮ್ ॥೬॥

ಷಡ್ಭಿರೇವ ತು ವರ್ಷೈಃ ಸ ಸಿಧ್ಯತೇ ನಾತ್ರ ಸಂಶಯಃ ।
ತಪ್ತಕಾಂಚನವರ್ಣಂ ಚ ವಿಮಾನಂ ಲಭತೇ ನರಃ ॥೭॥

ಯಾವನು ವಿಹಿತಕಾಲದಲ್ಲಿ ಮಧ್ಯಾಹ್ನದಲ್ಲಿ ಮತ್ತು ಸಾಯಂಕಾಲದಲ್ಲಿ ಭೋಜನವನ್ನು ಮಾಡಿ, ಮಧ್ಯೆ ನೀರನ್ನೂ ಪಾನಮಾಡದೆ, ಅಗ್ನಿಹೋತ್ರವನ್ನು ಮಾಡುವನೋ ಅವನು ಆರು ವರ್ಷಗಳಲ್ಲಿಯೇ ಸಿದ್ಧಿಯನ್ನು ಪಡೆಯುತ್ತಾನೆ. ಇದರಲ್ಲಿ ಸಂಶಯವಿಲ್ಲ. ಅವನು ಪುಟವಿಟ್ಟ ಚಿನ್ನದ ಬಣ್ಣವುಳ್ಳ ವಿಮಾನವನ್ನು ಪಡೆಯುತ್ತಾನೆ.

ದೇವಸ್ತ್ರೀಣಾಮಧಿವಾಸೇ ನೃತ್ಯಗೀತನಿನಾದಿತೇ ।
ಪ್ರಾಜಾಪತ್ಯೇ ವಸೇತ್ ಪದ್ಮಮ್ ಅಗ್ನಿವರ್ಣನಿಭೇ ಶುಭೇ ॥೮॥

ನೃತ್ಯ-ಗಾನ-ಶಂಖಗಳಿಂದ ಕೂಡಿದ, ದೇವಸ್ತ್ರೀಯರ ವಾಸಸ್ಥಾನವಾದ, ಅಗ್ನಿವರ್ಣದ ಶುಭವಾದ ಪ್ರಜಾಪತಿಯ ಲೋಕದಲ್ಲಿ ಒಂದು ಪದ್ಮವರ್ಷಗಳ ಕಾಲ ವಾಸ ಮಾಡುತ್ತಾನೆ (ಏಕ, ದಶ, ಶತಕ, ಸಾವಿರ, ದಶಸಾವಿರ, ಲಕ್ಷ, ದಶಲಕ್ಷ, ಕೋಟಿ, ದಶಕೋಟಿ, ಅರ್ಬುದ, ನಿರ್ಬುದ, ಖರ್ವ, ನಿಖರ್ವ, ಪದ್ಮ, ಶಂಖ ... - ಹೀಗೆ ಹತ್ತೊಂಬತ್ತು ಸ್ಥಾನದವರೆಗೆ ಸಂಖ್ಯೆಗಳು ಪ್ರಾಚೀನ ಗ್ರಂಥಗಳಲ್ಲಿ ನಿರೂಪಿಸಲ್ಪಟ್ಟಿವೆ).

ತ್ರೀಣಿ ವರ್ಷಾಣಿ ಯಃ ಪ್ರಾಶೇತ್ ಸತತಂ ತ್ವೇಕಭೋಜನಮ್ ।
ಧರ್ಮಪತ್ನೀರತೋ ನಿತ್ಯಮಗ್ನಿಷ್ಟೋಮಫಲಂ ಲಭೇತ್ ॥೯॥

ಮೂರು ವರ್ಷಗಳ ಕಾಲ ಸತತವಾಗಿ ಏಕಭೋಜನವನ್ನು ಮಾಡಿ ಧರ್ಮಪತ್ನೀ ರತನಾಗಿದ್ದರೆ ಅವನು ಅಗ್ನಿಷ್ಟೋಮ ಫಲವನ್ನು ಪಡೆಯುವನು.

ದ್ವಿತೀಯೇ ದಿವಸೇ ಯಸ್ತು ಪ್ರಾಶ್ನೀಯಾದೇಕಭೋಜನಮ್ ।
ಸದಾ ದ್ವಾದಶಮಾಸಾಂಸ್ತು ಜುಹ್ವಾನೋ ಜಾತವೇದಸಮ್ ।
ಯಜ್ಞಂ ಬಹುಸುವರ್ಣಂ ವಾ ವಾಸವಪ್ರಿಯಮಾಹರೇತ್ ॥೧೦॥

ಎರಡು ದಿವಸಗಳಿಗೊಮ್ಮೆ ರಾತ್ರಿಯಲ್ಲಿ ಒಂದು ಭೋಜನವನ್ನು ಮಾಡುವವನು ಹನ್ನೆರಡು ತಿಂಗಳುಗಳ ಕಾಲ ಹೀಗೆ ಮಾಡಿ ಅಗ್ನಿಹೋತ್ರವನ್ನು ಮಾಡಿದರೆ ಬಹು ಸುವರ್ಣದಾನವನ್ನು ಮಾಡಿದ ಇಂದ್ರನಿಗೆ ಪ್ರಿಯವಾದ ಯಾಗದ ಫಲವನ್ನು ಪಡೆಯುತ್ತಾನೆ.

ಸತ್ಯವಾಗ್ ದಾನಶೀಲಶ್ಚ ಬ್ರಹ್ಮಣ್ಯಶ್ಚಾನಸೂಯಕಃ ।
ಕ್ಷಾಂತೋ ದಾಂತೋ ಜಿತಕ್ರೋಧಃ ಸ ಗಚ್ಛೇತ್ ಪರಮಾಂ ಗತಿಮ್ ॥

ಪಾಂಡರಾಭ್ರಪ್ರತೀಕಾಶೇ ವಿಮಾನೇ ಹಂಸಲಕ್ಷಣೇ ।
ದ್ವೇ ಸಮಾಪ್ತೇ ತತಃ ಪದ್ಮೇ ಸೋಽಪ್ಸರೋಭಿರ್ವಸೇತ್‌ಸಹ ॥೧೨॥

ಯಾವನು ಸತ್ಯವಚನನೂ, ದಾನಶೀಲನೂ, ಬ್ರಾಹ್ಮಣವತ್ಸಲನೂ, ಅಸೂಯಾರಹಿತನೂ, ಕಷ್ಟಸಹಿಷ್ಣುವೂ, ಇಂದ್ರಿಯನಿಗ್ರಹವುಳ್ಳವನೂ, ಕ್ರೋಧವನ್ನು ಜಯಿಸಿದವನೂ ಆಗಿರುತ್ತಾನೋ ಅವನು ಶ್ರೇಷ್ಠವಾದ ಗತಿಯನ್ನು ಹೊಂದುತ್ತಾನೆ. ಅವನು ಹಂಸಗಳ ಚಿಹ್ನೆಗಳಿಂದ ಕೂಡಿರುವ ಬಿಳಿಯ ಮೋಡದ ಬಣ್ಣದ ವಿಮಾನದಲ್ಲಿ ಪೂರ್ಣವಾಗಿ ಎರಡು ಪದ್ಮವರ್ಷಗಳ ಕಾಲ ಅಪ್ಸರೆಯರ ಜೊತೆಯಲ್ಲಿ ವಾಸ ಮಾಡುತ್ತಾನೆ.

ತೃತೀಯೇ ದಿವಸೇ ಯಸ್ತು ಪ್ರಾಶ್ನೀಯಾದೇಕಭೋಜನಮ್ ।
ಸದಾ ದ್ವಾದಶಮಾಸಾಂಸ್ತು ಜುಹ್ವಾನೋ ಜಾತವೇದಸಮ್ ॥೧೩॥

ಅತಿರಾತ್ರಸ್ಯ ಯಜ್ಞಸ್ಯ ಫಲಂ ಪ್ರಾಪ್ನೋತ್ಯನುತ್ತಮಮ್ ।
ಮಯೂರಹಂಸಸಂಯುಕ್ತಂ ವಿಮಾನಂ ಲಭತೇ ನರಃ ॥೧೪॥

ಹನ್ನೆರಡು ತಿಂಗಳುಗಳ ಕಾಲ ಮೂರು ದಿವಸದಲ್ಲಿ ಒಮ್ಮೆ ಏಕಭೋಜನವನ್ನು ಮಾಡಿ ಅಗ್ನಿಹೋತ್ರವನ್ನು ಮಾಡುವವನು ಅತಿರಾತ್ರಯಾಗದ ಶ್ರೇಷ್ಠವಾದ ಫಲವನ್ನು ಹೊಂದುತ್ತಾನೆ. ಮಯೂರ ಮತ್ತು ಹಂಸಗಳಿಂದ ಕೂಡಿದ ವಿಮಾನವನ್ನು ಪಡೆಯುತ್ತಾನೆ.

ಸಪ್ತರ್ಷೀಣಾಂ ಸದಾ ಲೋಕೇ ಸೋಽಪ್ಸರೋಭಿರ್ವಸೇತ್ ಸಹ ।
ನಿವರ್ತನಂ ಚ ತತ್ರಾಸ್ಯ ತ್ರೀಣಿ ಪದ್ಮಾನಿ ವೈ ವಿದುಃ ॥೧೫॥

ಅವನು ಸಪ್ತರ್ಷಿಗಳ ಲೋಕದಲ್ಲಿ ಅಪ್ಸರೆಯರ ಜೊತೆಯಲ್ಲಿ ವಾಸ ಮಾಡುತ್ತಾನೆ. ಮೂರು ಪದ್ಮವರ್ಷಗಳು ಕಳೆದ ಮೇಲೆ ಅವನು ಅಲ್ಲಿಂದ ಹಿಂದಿರುಗುತ್ತಾನೆ ಎಂದು ಜ್ಞಾನಿಗಳು ಹೇಳುತ್ತಾರೆ.

ದಿವಸೇ ಯಶ್ಚತುರ್ಥೇ ತು ಪ್ರಾಶ್ನೀಯಾದೇಕಭೋಜನಮ್ ।
ಸದಾ ದ್ವಾದಶಮಾಸಾನ್ ವೈ ಜುಹ್ವಾನೋ ಜಾತವೇದಸಮ್ ॥೧೬॥

ವಾಜಪೇಯಸ್ಯ ಯಜ್ಞಸ್ಯ ಫಲಂ ಪ್ರಾಪ್ನೋತ್ಯನುತ್ತಮಮ್ ।
ಇಂದ್ರಕನ್ಯಾಧಿರೂಢಂ ಚ ವಿಮಾನಂ ಲಭತೇ ನರಃ ॥೧೭॥

ಸಾಗರಸ್ಯ ಚ ಪರ್ಯಂತೇ ವಾಸವಂ ಲೋಕಮಾವಸೇತ್ ।
ದೇವರಾಜಸ್ಯ ಚ ಕ್ರೀಡಾಂ ನಿತ್ಯಕಾಲಮವೇಕ್ಷತೇ ॥೧೮॥

ಯಾವನು ಹನ್ನೆರಡು ತಿಂಗಳುಗಳವರೆಗೆ ನಾಲ್ಕು ದಿವಸಗಳಿಗೊಮ್ಮೆ ಏಕಭೋಜನವನ್ನು ಮಾಡಿ ಅಗ್ನಿಹೋತ್ರವನ್ನು ಮಾಡುತ್ತಾನೆಯೋ ಅವನು ವಾಜಪೇಯ ಯಾಗದ ಶ್ರೇಷ್ಠವಾದ ಫಲವನ್ನು ಹೊಂದುತ್ತಾನೆ. ಇಂದ್ರಕನ್ಯೆಯರಿಂದ ತುಂಬಿದ ವಿಮಾನವನ್ನು ಪಡೆಯುತ್ತಾನೆ. ಸಾಗರದ ಅಂಚಿನಲ್ಲಿ ಇಂದ್ರಲೋಕದಲ್ಲಿ ವಾಸಮಾಡುತ್ತಾನೆ. ದೇವರಾಜನಾದ ಇಂದ್ರನ ಕ್ರೀಡೆಗಳನ್ನು ನಿತ್ಯವೂ ನೋಡುತ್ತಾನೆ.

ದಿವಸೇ ಪಂಚಮೇ ಯಸ್ತು ಪ್ರಾಶ್ನೀಯಾದೇಕಭೋಜನಮ್ ।
ಸದಾ ದ್ವಾದಶಮಾಸಾಂಸ್ತು ಜುಹ್ವಾನೋ ಜಾತವೇದಸಮ್ ॥೧೯॥

ಅಲುಬ್ಧಃ ಸತ್ಯವಾದೀ ಚ ಬ್ರಹ್ಮಣ್ಯಶ್ಚಾವಿಹಿಂಸಕಃ ।
ಅನಸೂಯುರಪಾಪಸ್ಥೋ ದ್ವಾದಶಾಹಫಲಂ ಲಭೇತ್ ॥೨೦॥

ಹನ್ನೆರಡು ತಿಂಗಳುಕಾಲ ಐದು ದಿವಸಗಳಿಗೊಮ್ಮೆ ಏಕಭೋಜನವನ್ನು ಮಾಡಿ ಅಗ್ನಿಹೋತ್ರವನ್ನು ಮಾಡುತ್ತಾ ಲೋಭವನ್ನು ಜಯಿಸಿ, ಸತ್ಯವಚನನಾಗಿ, ಬ್ರಾಹ್ಮಣ ವತ್ಸಲನಾಗಿ, ಅಹಿಂಸಾನಿರತನಾಗಿ, ಅಸೂಯೆಯನ್ನು ಮಾಡದೆ, ಪಾಪಕರ್ಮಗಳನ್ನು ಆಚರಿಸದೆ ಇರುವವನು ದ್ವಾದಶಾಹ ಯಾಗದ ಫಲವನ್ನು ಹೊಂದುತ್ತಾನೆ.

ಜಾಂಬೂನದಮಯಂ ದಿವ್ಯಂ ವಿಮಾನಮಧಿರೋಹತಿ ।
ಸೂರ್ಯಮಾಲಾಸಮಾಭಾಸಮಾರೋಹೇತ್ ಪಾಂಡರಂ ಗೃಹಮ್ ॥

ಆವರ್ತನಾನಿ ಚತ್ವಾರಿ ತಥಾ ಪದ್ಮಾನಿ ದ್ವಾದಶ ।
ದಾರಾಗ್ನಿಪರಿಮಾಣಶ್ಚ ತತ್ರಾಸೌ ವಸತೇ ಸುಖಮ್ ॥೨೨॥

ಜಾಂಬೂನದಮಯವಾದ (ದೇವತೆಗಳು ಉಪಯೋಗಿಸುವ ಸುವರ್ಣಕ್ಕೆ ಜಾಂಬೂನದ ಎಂದು ಹೆಸರು) ದಿವ್ಯವಾದ ವಿಮಾನವನ್ನು ಏರುತ್ತಾನೆ. ಸೂರ್ಯನ ಪಂಕ್ತಿಗಳಿಗೆ ಸಮಾನವಾದ ಕಾಂತಿಯುಳ್ಳ ಶ್ವೇತವರ್ಣದ ಗೃಹವನ್ನು ಹೊಂದಿ ವಾಸಿಸುತ್ತಾನೆ. ನಾಲ್ಕು ಶಂಖಗಳು ಮತ್ತು ಹನ್ನೆರಡು ಪದ್ಮವರ್ಷಗಳ ಕಾಲ ಅಲ್ಲಿ ಅವನು ದಾರ ಎಂಬ ಪೊದೆಯ ಅಗ್ನಿಯ ವರ್ಣಕ್ಕೆ ಸಮಾನವಾದ ವರ್ಣದಿಂದ ಪ್ರಕಾಶಿಸುತ್ತಾ ಸುಖವಾಗಿ ವಾಸಮಾಡುತ್ತಾನೆ.

ದಿವಸೇ ಯಸ್ತು ಷಷ್ಠೇ ವೈ ಮುನಿಃ ಪ್ರಾಶೇತ ಭೋಜನಮ್ ।
ಸದಾ ದ್ವಾದಶಮಾಸಾನ್ ವೈ ಜುಹ್ವಾನೋ ಜಾತವೇದಸಮ್ ॥೨೩॥

ಸದಾ ತ್ರಿಷವಣಸ್ನಾಯೀ ಬ್ರಹ್ಮಚಾರ್ಯನಸೂಯಕಃ ।
ಗವಾಮಯಸ್ಯ ಯಜ್ಞಸ್ಯ ಫಲಂ ಪ್ರಾಪ್ನೋತ್ಯನುತ್ತಮಮ್ ॥೨೪॥

ಹನ್ನೆರಡು ತಿಂಗಳು ಕಾಲ ಯಾವನು ಆರು ದಿವಸಗಳಿಗೆ ಒಮ್ಮೆ ಏಕಭೋಜನವನ್ನು ಮಾಡಿ ಸದಾ ಅಗ್ನಿಹೋತ್ರವನ್ನು ಮಾಡುತ್ತಾ, ಸದಾ ತ್ರಿಕಾಲ ಸ್ನಾನವನ್ನು ಮಾಡಿ ಬ್ರಹ್ಮಚಾರಿಯಾಗಿ, ಅಸೂಯಾ ರಹಿತನಾಗಿರುತ್ತಾನೆಯೋ ಅವನು ಗವಾಮಯ ಯಜ್ಞದ ಶ್ರೇಷ್ಠವಾದ ಫಲವನ್ನು ಹೊಂದುತ್ತಾನೆ.

ಅಗ್ನಿಜ್ವಾಲಾಸಮಾಭಾಸಂ ಹಂಸಬರ್ಹಿಣಸೇವಿತಮ್ ।
ಶಾತಕುಂಭಮಯಂ ಯುಕ್ತಂ ಸಾಧಯೇದ್ ಯಾನಮುತ್ತಮಮ್ ॥

ತಥೈವಾಪ್ಸರಸಾಮಂಕೇ ಪ್ರಸುಪ್ತಃ ಪ್ರತಿಬುಧ್ಯತೇ ।
ನೂಪುರಾಣಾಂ ನಿನಾದೇನ ಮೇಖಲಾನಾಂ ಚ ನಿಸ್ವನೈಃ ॥೨೬॥

ಅವನು ಅಗ್ನಿಜ್ವಾಲೆಗೆ ಸಮಾನವಾದ ಕಾಂತಿಯಿಂದ, ಹಂಸಗಳಿಂದ ಮತ್ತು ನವಿಲುಗಳಿಂದ ಸೇವಿತವಾದ ಸುವರ್ಣಮಯವಾದ, ಶ್ರೇಷ್ಠವಾದ ವಿಮಾನವನ್ನು ಪಡೆಯುತ್ತಾನೆ. ಹಾಗೆಯೇ ಅಪ್ಸರೆಯರ ತೊಡೆಯ ಮೇಲೆ ಮಲಗಿ ಯಜ್ಞಗಳ ಮತ್ತು ಮೇಖಲೆಗಳ (ಸೊಂಟದಲ್ಲಿ ಧರಿಸುವ ಆಭರಣ) ನಾದದಿಂದ ಎಚ್ಚರಗೊಳ್ಳುತ್ತಾನೆ.

ಕೋಟೀಸಹಸ್ರಂ ವರ್ಷಾಣಾಂ ತ್ರೀಣಿ ಕೋಟಿಶತಾನಿ ಚ ।
ಪದ್ಮಾನ್ಯಷ್ಟಾದಶ ತಥಾ ಪತಾಕೇ ದ್ವೇ ತಥೈವ ಚ ॥೨೭॥

ಅಯುತಾನಿ ಚ ಪಂಚಾಶದ್ ಲಕ್ಷಪಂಚಾಶತಸ್ಯ ಚ ।
ಲೋಮ್ನಾಂ ಪ್ರಮಾಣೇನ ಸಮಂ ಬ್ರಹ್ಮಲೋಕೇ ಮಹೀಯತೇ ॥೨೮॥

ಅವನು ಸಹಸ್ರಕೋಟಿ ಮತ್ತು ಮುನ್ನೂರು ಕೋಟಿ ಮತ್ತು ಹದಿನೆಂಟು ಪದ್ಮ ಮತ್ತು ಎರಡು ಪತಾಕ ಮತ್ತು ಐವತ್ತು ಅಯುತ (ಹತ್ತು ಸಾವಿರ) ಮತ್ತು ಒಂದು ಲಕ್ಷ ಐದುನೂರು ಮತ್ತು ದೇಹದಲ್ಲಿರುವ ಲೋಮಗಳ ಸಂಖ್ಯೆಗೆ ಸಮಾನವಾದ ವರ್ಷಗಳ ಕಾಲ ಬ್ರಹ್ಮಲೋಕದಲ್ಲಿ ಪೂಜಿಸಲ್ಪಡುತ್ತಾನೆ.

ದಿವಸೇ ಸಪ್ತಮೇ ಯಸ್ತು ಪ್ರಾಶ್ನೀಯಾದೇಕಭೋಜನಮ್ ।
ಸದಾ ದ್ವಾದಶಮಾಸಾನ್ ವೈ ಜುಹ್ವಾನೋ ಜಾತವೇದಸಮ್ ॥೨೯॥

ಸರಸ್ವತೀಂ ಗೋಪಯಾನೋ ಬ್ರಹ್ಮಚರ್ಯಂ ಸಮಾಚರನ್ ।
ಸುಮನೋವರ್ಣಕಂ ಚೈವ ಮಧುಮಾಂಸಂ ಚ ವರ್ಜಯೇತ್ ॥೩೦॥

ಪುರುಷೋ ಮರುತಾಂ ಲೋಕಮಿಂದ್ರಲೋಕಂ ಚ ಗಚ್ಛತಿ ।
ತತ್ರ ತತ್ರ ಚ ಸಿದ್ಧಾರ್ಥೋ ದೇವಕನ್ಯಾಭಿರರ್ಚ್ಯತೇ ॥೩೧॥

ಯಾವನು ಏಳುದಿವಸಗಳಿಗೊಮ್ಮೆ ಹನ್ನೆರಡು ತಿಂಗಳುಗಳ ಕಾಲ ಏಕಭೋಜನವನ್ನು ಮಾಡಿ, ಅಗ್ನಿಹೋತ್ರವನ್ನು ಮಾಡಿ, ವೇದವಾಣಿಯನ್ನು ರಕ್ಷಿಸಿಕೊಂಡು ಬ್ರಹ್ಮಚರ್ಯವನ್ನು ಆಚರಿಸುತ್ತಾ ಪುಷ್ಪಗಳನ್ನೂ ಗಂಧಗಳನ್ನೂ ಮಧು-ಮಾಂಸಗಳನ್ನೂ ತ್ಯಜಿಸುತ್ತಾನೆಯೋ ಅಂತಹವನು ಮರುತ್ತುಗಳ ಲೋಕಕ್ಕೂ, ಇಂದ್ರಲೋಕಕ್ಕೂ ಹೋಗುತ್ತಾನೆ. ಅಲ್ಲಲ್ಲಿ ಅವನು ಮನೋಭಿಲಾಷೆಯನ್ನು ಪೂರ್ಣಗೊಳಿಸಿಕೊಂಡು ದೇವಕನ್ಯೆಯರಿಂದ ಅರ್ಚಿಸಲ್ಪಡುತ್ತಾನೆ.

ಫಲಂ ಬಹುಸುವರ್ಣಸ್ಯ ಯಜ್ಞಸ್ಯ ಲಭತೇ ನರಃ ।
ಸಂಖ್ಯಾಮತಿಗುಣಾಂ ಚಾಪಿ ತೇಷು ಲೋಕೇಷು ಮೋದತೇ ॥೩೨॥

ಬಹುಸುವರ್ಣವನ್ನು ದಾನ ಮಾಡಿದ ಯಜ್ಞದ ಫಲವನ್ನು ಹೊಂದುತ್ತಾನೆ. ಬಹಳ ದೊಡ್ಡ ಸಂಖ್ಯೆಯಷ್ಟು ವರ್ಷಗಳ ಕಾಲ ಆ ಲೋಕಗಳಲ್ಲಿ ಸಂತೋಷಪಡುತ್ತಾನೆ.

ಯಸ್ತು ಸಂವತ್ಸರಂ ಕ್ಷಾಂತೋ ಭುಂಕ್ತೇऽಹನ್ಯಷ್ಟಮೇ ನರಃ ।
ದೇವಕಾರ್ಯಪರೋ ನಿತ್ಯಂ ಜುಹ್ವಾನೋ ಜಾತವೇದಸಮ್ ॥೩೩॥

ಪೌಂಡರೀಕಸ್ಯ ಯಜ್ಞಸ್ಯ ಫಲಂ ಪ್ರಾಪ್ನೋತ್ಯನುತ್ತಮಮ್ ।
ಪದ್ಮವರ್ಣನಿಭಂ ಚೈವ ವಿಮಾನಮಧಿಗಚ್ಛತಿ ॥೩೪॥

ಕೃಷ್ಣಾಃ ಕನಕಗೌರ್ಯಶ್ಚ ನಾರ್ಯಃ ಶ್ಯಾಮಾಸ್ತಥಾಪರಾಃ ।
ವಯೋರೂಪವಿಲಾಸಿನ್ಯೋ ಲಭತೇ ನಾತ್ರ ಸಂಶಯಃ ॥೩೫॥

ಯಾವನು ಒಂದು ವರ್ಷದ ಕಾಲ ಕಷ್ಟಸಹಿಷ್ಣುವಾಗಿ ಎಂಟು ದಿನಗಳಿಗೊಮ್ಮೆ ಒಂದು ಭೋಜನವನ್ನು ಮಾಡುತ್ತಾ ನಿತ್ಯವೂ ಅಗ್ನಿಹೋತ್ರವನ್ನು ಮಾಡುತ್ತಾ ದೇವಕಾರ್ಯದಲ್ಲಿ ನಿರತನಾಗಿರುತ್ತಾನೆಯೋ ಅವನು ಪುಂಡರೀಕ ಯಾಗದ ಶ್ರೇಷ್ಠ ಫಲವನ್ನು ಹೊಂದುತ್ತಾನೆ. ಪದ್ಮಕಾಂತಿಯುಳ್ಳ ವಿಮಾನವನ್ನು ಪಡೆಯುತ್ತಾನೆ. ಕೃಷ್ಣ ವರ್ಣದ, ಕನಕರತ್ನಗೌರವರ್ಣದ, ಶ್ಯಾಮವರ್ಣದ, ಒಳ್ಳೆಯ ರೂಪ ಮತ್ತು ವಯಸ್ಸನ್ನು ಹೊಂದಿದ ನಾರಿಯರನ್ನು ಪಡೆಯುವುದರಲ್ಲಿ ಸಂಶಯವಿಲ್ಲ.

ಯಸ್ತು ಸಂವತ್ಸರಂ ಭುಂಕ್ತೇ ನವಮೇ ನವಮೇऽಹನಿ ।
ಸದಾ ದ್ವಾದಶಮಾಸಾನ್ ವೈ ಜುಹ್ವಾನೋ ಜಾತವೇದಸಮ್ ॥೩೬॥

ಅಶ್ವಮೇಧಸ್ಯ ಯಜ್ಞಸ್ಯ ಫಲಂ ಪ್ರಾಪ್ನೋತಿ ಮಾನವಃ ।
ಪುಂಡರೀಕಪ್ರಕಾಶಂ ಚ ವಿಮಾನಂ ಲಭತೇ ನರಃ ॥೩೭॥

ಯಾವ ಮನುಷ್ಯನು ಒಂದು ವರ್ಷದ ಕಾಲ ಒಂಬತ್ತು ದಿನಗಳಿಗೊಮ್ಮೆ ಏಕ ಭೋಜನವನ್ನು ಮಾಡಿ ಸದಾ ಅಗ್ನಿಹೋತ್ರವನ್ನು ಮಾಡುತ್ತಾನೆಯೋ ಅವನು ಅಶ್ವಮೇಧ ಯಾಗದ ಫಲವನ್ನು ಹೊಂದುತ್ತಾನೆ. ಪದ್ಮದ ಪ್ರಕಾಶವನ್ನು ಹೊಂದಿರುವಂತಹ ವಿಮಾನವನ್ನು ಪಡೆಯುತ್ತಾನೆ.

ದೀಪ್ತಸೂರ್ಯಾಗ್ನಿತೇಜೋಭಿರ್ದಿವ್ಯಮಾಲಾಭಿರೇವ ಚ ।
ನೀಯತೇ ರುದ್ರಕನ್ಯಾಭಿಃ ಸೋऽಂತರಿಕ್ಷಂ ಸನಾತನಮ್ ॥೩೮॥

ಅಷ್ಟಾದಶಸಹಸ್ರಾಣಿ ವರ್ಷಾಣಾಂ ಕಲ್ಪಮೇವ ಚ ।
ಕೋಟೀಶತಸಹಸ್ರಂ ಚ ತೇಷು ಲೋಕೇಷು ಮೋದತೇ ॥೩೯॥

ಜ್ವಲಿಸುವ ಸೂರ್ಯಾಗ್ನಿಗಳ ತೇಜಸ್ಸಿನಂತಹ ತೇಜಸ್ಸನ್ನು ಹೊಂದಿದ, ದಿವ್ಯ ಮಾಲೆಗಳನ್ನು ಧರಿಸಿದ ರುದ್ರಕನ್ಯೆಯರಿಂದ ಅವನು ಅಂತರಿಕ್ಷಕ್ಕೆ ಕರೆದುಕೊಂಡು

ಹೋಗಲ್ಪಡುತ್ತಾನೆ. ಒಂದು ಕಲ್ಪ ಹದಿನೆಂಟು ಸಾವಿರ ವರ್ಷಗಳು ಮತ್ತು ನೂರು ಕೋಟಿ ವರ್ಷಗಳ ಕಾಲ ಆ ಲೋಕದಲ್ಲಿ ಸಂತೋಷಪಡುತ್ತಾನೆ.

ಯಸ್ತು ಸಂವತ್ಸರಂ ಭುಂಕ್ತೇ ದಶಮೇಽಹ್ನಿ ಗತೇ ಸತಿ ।
ಸದಾ ದ್ವಾದಶಮಾಸಾನ್ ವೈ ಜುಹ್ವಾನೋ ಜಾತವೇದಸಮ್ ॥೪೦॥

ಬ್ರಹ್ಮಕನ್ಯಾನಿವೇಶೇ ಚ ಸರ್ವಭೂತಮನೋಹರೇ ।
ಅಶ್ವಮೇಧಸಹಸ್ರಸ್ಯ ಫಲಂ ಪ್ರಾಪ್ನೋತ್ಯನುತ್ತಮಮ್ ॥೪೧॥

ಯಾವನು ಒಂದು ವರ್ಷದ ಕಾಲ ಹತ್ತು ದಿವಸಗಳಿಗೊಮ್ಮೆ ಏಕಭೋಜನವನ್ನು ಮಾಡಿ, ಹನ್ನೆರಡು ತಿಂಗಳುಗಳ ಕಾಲ ಯಾವಾಗಲೂ ಅಗ್ನಿಹೋತ್ರವನ್ನು ಮಾಡುತ್ತಾನೆಯೋ ಅವನು ಸರ್ವಪ್ರಾಣಿ ಮನೋಹರವಾದ ಬ್ರಹ್ಮಕನ್ಯೆಯರ ಗೃಹದಲ್ಲಿ ಸಹಸ್ರ ಅಶ್ವಮೇಧಯಾಗದ ಶ್ರೇಷ್ಠ ಫಲವನ್ನು ಹೊಂದುತ್ತಾನೆ.

ರೂಪವತ್ಯಶ್ಚ ತಂ ಕನ್ಯಾ ರಮಯಂತಿ ಸದಾ ನರಮ್ ।
ನೀಲೋತ್ಪಲನಿಭೈರ್ವರ್ಣೈ ರಕ್ತೋತ್ಪಲನಿಭೈಸ್ತಥಾ ॥೪೨॥

ವಿಮಾನಂ ಮಂಡಲಾವರ್ತಮಾವರ್ತಗಹನಾವೃತಮ್ ।
ಸಾಗರೋರ್ಮಿಪ್ರತೀಕಾಶಂ ಸ ಲಭೇದ್ ಯಾನಮುತ್ತಮಮ್ ॥೪೩॥

ರೂಪವತಿಯರಾದ ಆ ಕನ್ಯೆಯರು ಅವನನ್ನು ಸಂತೋಷಪಡಿಸುತ್ತಾರೆ. ಮಂಡಲಾಕಾರವಾದ, ಅನೇಕ ಅಂತಸ್ತುಗಳಿಂದ ಕೂಡಿದ, ಸಾಗರದ ಅಲೆಗಳಂತೆ ತೋರುವ ಶ್ರೇಷ್ಠವಾದ ವಿಮಾನವನ್ನು ಅವನು ಪಡೆಯುತ್ತಾನೆ.

ವಿಚಿತ್ರಮಣಿಮಾಲಾಭಿರ್ನಾದಿತಂ ಶಂಖಪುಷ್ಕರೈಃ ।
ಸ್ಫಾಟಿಕೈರ್ವಜ್ರಸಾರೈಶ್ಚ ಸ್ತಂಭೈಃ ಸುಕೃತವೇದಿಕಮ್ ।
ಆರೋಹತಿ ಮಹದ್ ಯಾನಂ ಹಂಸಸಾರಸವಾಹನಮ್ ॥೪೪॥

ವಿಚಿತ್ರಮಣಿಮಾಲೆಗಳಿಂದ ಕೂಡಿದ, ಶಬ್ದವನ್ನು ಮಾಡುವ ಶಂಖಪುಷ್ಕರ-ಗಳಿಂದಲೂ, ಸ್ಫಟಿಕಮಯವಾದ ಮತ್ತು ವಜ್ರಸಾರಮಯವಾದ ಸ್ತಂಭಗಳಿಂದಲೂ ಕೂಡಿದ, ಒಳ್ಳೆಯ ವೇದಿಕೆಗಳನ್ನು ಹೊಂದಿದ, ಹಂಸ-ಸಾರಸ ಪಕ್ಷಿಗಳಿಂದ ಎಳೆಯಲ್ಪಡುವ ಶ್ರೇಷ್ಠ ವಿಮಾನದಿಂದ ಕರೆದೊಯ್ಯಲ್ಪಡುತ್ತಾನೆ.

ಏಕಾದಶೇ ತು ದಿವಸೇ ಯಃ ಪ್ರಾಪ್ತೇ ಪ್ರಾಶತೇ ಹವಿಃ ।
ಸದಾ ದ್ವಾದಶಮಾಸಾನ್ ವೈ ಜುಹ್ವಾನೋ ಜಾತವೇದಸಮ್ ॥೪೫॥

ಪರಸ್ತ್ರಿಯೋ ನಾಭಿಲಷೇದ್ ವಾಚಾಥ ಮನಸಾಪಿ ವಾ ।
ಅನೃತಂ ಚ ನ ಭಾಷೇತ ಗುರೂಣಾಂ ಪೂಜನೇ ನರಃ ॥೪೬॥

ಯಾವನು ಹನ್ನೆರಡು ತಿಂಗಳ ಕಾಲ ಹನ್ನೊಂದು ದಿವಸಕ್ಕೆ ಒಂದು ಬಾರಿ ಹವಿಷ್ಯಾನ್ನವನ್ನು ಭುಂಜಿಸುತ್ತಾ, ನಿತ್ಯ ಅಗ್ನಿಹೋತ್ರವನ್ನು ಮಾಡುತ್ತಾ, ಪರಸ್ತ್ರೀಯರನ್ನು ಮನಸ್ಸಿನಲ್ಲಾಗಲೀ, ಮಾತಿನಲ್ಲಾಗಲೀ ಆಶಿಸದೆ, ಅನೃತವನ್ನು ಮಾತನಾಡದೆ, ಗುರು-ಪೂಜಾ ರತನಾಗಿ ಇರುತ್ತಾನೆಯೋ,

ಅಭಿಗಚ್ಛೇನ್ಮಹಾದೇವಂ ವಿಮಾನಸ್ಥಂ ಮಹಾಬಲಮ್ ।
ಸ್ವಯಂಭುವಂ ಚ ಪಶ್ಯೇತ ವಿಮಾನಂ ಸಮುಪಸ್ಥಿತಮ್ ॥೪೭॥

ಕುಮಾರ್ಯಃ ಕಾಂಚನಾಭಾಸಾ ರೂಪವತ್ಯೋ ನಯಂತಿ ತಮ್ ।
ರುದ್ರಾಣಾಂ ತಮಧಿವಾಸಂ ದಿವಿ ದಿವ್ಯಂ ಮನೋಹರಮ್ ॥೪೮॥

ವರ್ಷಾಣ್ಯಪರಿಮೇಯಾನಿ ಯುಗಾಂತಮಪಿ ಚಾವಸೇತ್ ।
ಕೋಟೀಶತಸಹಸ್ರಂ ಚ ದಶ ಕೋಟಿಶತಾನಿ ಚ ॥೪೯॥

ಅವನು ವಿಮಾನಸ್ಥನಾದ, ಮಹಾಬಲನಾದ ರುದ್ರದೇವರ ಬಳಿಗೆ ಹೋಗುತ್ತಾನೆ. ಬ್ರಹ್ಮದೇವರ ವಿಮಾನವು ತನ್ನ ಸಮೀಪಕ್ಕೆ ಬರುವುದನ್ನು ನೋಡುತ್ತಾನೆ. ಸುವರ್ಣ-ವರ್ಣದ ರೂಪವತಿಯರಾದ ಕುಮಾರಿಯರು ಅವನನ್ನು ಕರೆದುಕೊಂಡು ಹೋಗುತ್ತಾರೆ. ಅಪರಿಮಿತ ವರ್ಷಗಳ ಕಾಲ ಯುಗಾಂತದವರೆಗೆ ಲಕ್ಷಕೋಟಿ ಮತ್ತು ನೂರು ಕೋಟಿ ವರ್ಷಗಳವರೆಗೆ ಅಲ್ಲಿ ವಾಸ ಮಾಡುತ್ತಾನೆ.

ರುದ್ರಂ ನಿತ್ಯಂ ಪ್ರಣಮತೇ ದೇವದಾನವಸಮ್ಮತಮ್ ।
ಸ ತಸ್ಮೈ ದರ್ಶನಂ ಪ್ರಾಪ್ತೋ ದಿವಸೇ ದಿವಸೇ ಭವೇತ್ ॥೫೦॥

ದೇವ-ದಾನವಸಮ್ಮತನಾದ ರುದ್ರದೇವನನ್ನು ನಿತ್ಯವೂ ನಮಸ್ಕರಿಸುತ್ತಾನೆ. ರುದ್ರದೇವನು ಅವನಿಗೆ ಪ್ರತಿನಿತ್ಯವೂ ದರ್ಶನವನ್ನು ಕೊಡುತ್ತಾನೆ.

ದಿವಸೇ ದ್ವಾದಶೇ ಯಸ್ತು ಪ್ರಾಪ್ತೇ ವೈ ಪ್ರಾಶತೇ ಹವಿಃ ।
ಸದಾ ದ್ವಾದಶಮಾಸಾನ್ ವೈ ಸರ್ವಮೇಧಫಲಂ ಲಭೇತ್ ॥೫೧॥

ಆದಿತ್ಯೈರ್ದ್ವಾದಶೈಸ್ತಸ್ಯ ವಿಮಾನಂ ಸಂವಿಧೀಯತೇ ।
ಮಣಿಮುಕ್ತಾಪ್ರವಾಲೈಶ್ಚ ಮಹಾರ್ಹೈರುಪಶೋಭಿತಮ್ ॥೫೨॥

ಯಾವನು ಒಂದು ವರ್ಷಗಳ ಕಾಲ ಹನ್ನೆರಡು ದಿವಸಗಳಿಗೊಮ್ಮೆ ಹವಿಷ್ಯಾನ್ನವನ್ನು ಭೋಜನ ಮಾಡುತ್ತಾನೆಯೋ ಅವನು ಸರ್ವಮೇಧ ಫಲವನ್ನು ಹೊಂದುತ್ತಾನೆ. ಮಹಾಬೆಲೆಬಾಳುವ ಮಣಿ ಮುಕ್ತ ಪ್ರವಾಳಗಳಿಂದ ಶೋಭಿಸುವ ಅವನ ವಿಮಾನವನ್ನು ದ್ವಾದಶಾದಿತ್ಯರು ನಿರ್ಮಿಸುತ್ತಾರೆ.

ಹಂಸಮಾಲಾಪರಿಕ್ಷಿಪ್ತಂ ನಾಗವೀಥಿಸಮಾಕುಲಮ್ ।
ಮಯೂರೈಶ್ಚಕ್ರವಾಕೈಶ್ಚ ಕೂಜದ್ಭಿರುಪಶೋಭಿತಮ್ ॥೫೩॥

ಅಟ್ಟೈರ್ಮಹದ್ಭಿಃ ಸಂಯುಕ್ತಂ ಬ್ರಹ್ಮಲೋಕೇ ಪ್ರತಿಷ್ಠಿತಮ್ ।
ನಿತ್ಯಮಾವಸತೇ ರಾಜನ್ ನರನಾರೀಸಮಾವೃತಮ್ ।
ಋಷಿರೇವಂ ಮಹಾಭಾಗಸ್ತ್ವಂಗಿರಾಃ ಪ್ರಾಹ ಧರ್ಮವಿತ್ ॥೫೪॥

ಹಂಸಪಂಕ್ತಿಗಳಿಂದ ಸುತ್ತಲೂ ಪರಿವೃತನಾದ, ನಾಗವೀಥಿಗಳಿಂದ ಕೂಡಿದ, ಮನೋಹರವಾಗಿ ಶಬ್ದವನ್ನು ಮಾಡುವ ನವಿಲುಗಳು ಮತ್ತು ಚಕ್ರವಾಕ ಪಕ್ಷಿಗಳಿಂದ ಶೋಭಿತವಾದ, ಅನೇಕ ಉಪ್ಪರಿಗೆಗಳನ್ನು ಹೊಂದಿದ, ಬ್ರಹ್ಮಲೋಕದಲ್ಲಿ ಪ್ರತಿಷ್ಠಿತವಾದ, ನರ-ನಾರೀ ಸಮಾವೃತವಾದ ಗೃಹದಲ್ಲಿ ಯಾವಾಗಲೂ ವಾಸಮಾಡುತ್ತಾನೆ. ಎಲೈ ರಾಜನೇ, ಧರ್ಮಜ್ಞರೂ, ಮಹಾನುಭಾವರೂ ಆದ ಅಂಗಿರಸ ಋಷಿಗಳು ಹೀಗೆ ಹೇಳಿದ್ದಾರೆ.

ತ್ರಯೋದಶೇ ತು ದಿವಸೇ ಯಃ ಪ್ರಾಪ್ತೇ ಪ್ರಾಶತೇ ಹವಿಃ ।
ಸದಾ ದ್ವಾದಶ ಮಾಸಾನ್ ವೈ ಜುಹ್ವಾನೋ ಜಾತವೇದಸಮ್ ॥೫೫॥

ರಕ್ತಪದ್ಮೋದಯಂ ನಾಮ ವಿಮಾನಂ ಸಾಧಯೇನ್ನರಃ ।
ಜಾತರೂಪಪ್ರಯುಕ್ತಂ ಚ ರತ್ನಸಂಚಯಭೂಷಿತಮ್ ॥೫೬॥

ಹದಿಮೂರು ದಿವಸಗಳಿಗೊಮ್ಮೆ ಯಾವನು ಹವಿಷ್ಯಾನ್ನವನ್ನು ಭೋಜನ ಮಾಡಿ ಹನ್ನೆರಡು ತಿಂಗಳುಗಳ ಕಾಲ ಅಗ್ನಿಹೋತ್ರವನ್ನು ಮಾಡುತ್ತಾನೆಯೋ ಅವನು ಸುವರ್ಣಮಯವಾದ, ರತ್ನರಾಶಿಯಿಂದ ಭೂಷಿತವಾದ ರಕ್ತಪದ್ಮೋದಯ ಎಂಬ ವಿಮಾನವನ್ನು ಪಡೆಯುತ್ತಾನೆ.

ದೇವಕನ್ಯಾಭಿರಾಕೀರ್ಣಂ ದಿವ್ಯಾಭರಣಭೂಷಿತಮ್ ।
ಪುಣ್ಯಗಂಧೋದಯಂ ದಿವ್ಯಂ ನಿತ್ಯಂ ವಾಯವ್ಯಶೋಭಿತಮ್ ॥೫೭॥

ತತ್ರ ಶಂಕುಪತಾಕಂ ಚ ಯುಗಾಂತಂ ಕಲ್ಪಮೇವ ಚ ।
ಅಯುತಾಯುತಂ ತಥಾ ಪದ್ಮಂ ಸಮುದ್ರಂ ಚ ತಥಾ ವಸೇತ್ ॥೫೮॥

ಗೀತಗಂಧರ್ವಘೋಷೈಶ್ಚ ಭೇರೀಪಣವನಿಸ್ವನೈಃ ।
ಸದಾ ಪ್ರಮುದಿತಸ್ತಾಭಿರ್ದೇವಕನ್ಯಾಭಿರೀಡ್ಯತೇ ॥೫೯॥

ದೇವಕನ್ಯೆಯರಿಂದ ತುಂಬಿದ, ದಿವ್ಯಾಭರಣ ಭೂಷಿತವಾದ, ಪುಣ್ಯಗಂಧದಿಂದ ಕೂಡಿದ, ದಿವ್ಯವಾದ ವಾಯುದೇವರ ಪುರುಷರಿಂದ ನಿತ್ಯವೂ ಕೂಡಿದ ಗೃಹದಲ್ಲಿ ಶಂಖ, ಪತಾಕ, ಯುಗಾಂತ, ಕಲ್ಪ, ಅಯುತಾಯುತ, ಪದ್ಮ ಮತ್ತು ಸಮುದ್ರ ವರ್ಷಗಳ ಕಾಲದವರೆಗೆ ವಾಸಮಾಡುತ್ತಾನೆ. ಗಂಧರ್ವರ ಗೀತ ಘೋಷಗಳಿಂದಲೂ, ಭೇರೀ-ಪಣವ ಮೊದಲಾದ ವಾದ್ಯಘೋಷದಿಂದಲೂ ಸದಾ ಸಂತೋಷಗೊಂಡು ಆ ದೇವಕನ್ಯೆಯರಿಂದ ಸ್ತೋತ್ರ ಮಾಡಲ್ಪಡುತ್ತಾನೆ.

ಚತುರ್ದಶೇ ತು ದಿವಸೇ ಯಃ ಪೂರ್ಣೇ ಪ್ರಾಶತೇ ಹವಿಃ ।
ಸದಾ ದ್ವಾದಶಮಾಸಾನ್ ವೈ ಮಹಾಮೇಧಫಲಂ ಲಭೇತ್ ॥೬೦॥

ಅನಿರ್ದೇಶ್ಯವಯೋರೂಪಾ ದೇವಕನ್ಯಾಃ ಸ್ವಲಂಕೃತಾಃ ।
ಮೃಷ್ಟತಪ್ತಾಂಗದಧರಾ ವಿಮಾನೈರನುಯಾಂತಿ ತಮ್ ॥೬೧॥

ಯಾವನು ಹನ್ನೆರಡು ತಿಂಗಳುಗಳ ಕಾಲ ಹದಿನಾಲ್ಕು ದಿನಗಳಿಗೊಮ್ಮೆ ಒಂದು ಬಾರಿ ಹವಿಷ್ಯಾನ್ನವನ್ನು ಭುಂಜಿಸುತ್ತಾನೆಯೋ ಅವನು ಮಹಾಮೇಧಯಾಗದ ಫಲವನ್ನು ಹೊಂದುತ್ತಾನೆ. ವರ್ಣನೆ ಮಾಡಲು ಅಸಾಧ್ಯವಾದ, ಅಲಂಕೃತವಾದ, ಸುವರ್ಣಾಂಗಗಳನ್ನು ಧರಿಸಿದ ದೇವಕನ್ಯೆಯರು ವಿಮಾನಗಳಲ್ಲಿ ಅವನನ್ನು ಅನುಸರಿಸುತ್ತಾರೆ.

ಕಲಹಂಸವಿನಿಘ್ನೋಷೈರ್ನೂಪುರಾಣಾಂ ಚ ನಿಸ್ವನೈಃ ।
ಕಾಂಚೀನಾಂ ಚ ಸಮುತ್ಕರ್ಷೈಸ್ತತ್ರ ತತ್ರ ನಿಷೇವ್ಯತೇ ॥೬೨॥

ದೇವಕನ್ಯಾನಿವಾಸೇ ಚ ತಸ್ಮಿನ್ ವಸತಿ ಮಾನವಃ ।
ಜಾಹ್ನವೀವಾಲುಕಾಕೀರ್ಣೇ ಪೂರ್ಣಂ ಸಂವತ್ಸರಂ ನರಃ ॥೬೩॥

ಅವನು ಅಲ್ಲಲ್ಲಿ ಕಲಹಂಸಗಳ ನಾದದಿಂದಲೂ, ನೂಪುರಗಳ (ಗೆಜ್ಜೆಗಳ) ನಾದದಿಂದಲೂ, ಕಾಂಚಿ (ಸೊಂಟದಾಭರಣ) ನಾದಗಳಿಂದಲೂ ಸೇವಿಸಲ್ಪಡುತ್ತಾನೆ. ಅವನು ಆ ದೇವಕನ್ಯೆಯರ ನಿವಾಸದಲ್ಲಿ ಗಂಗೆಯ ಮರಳುಗಳ ಕಣದ ಸಂಖ್ಯೆಯಷ್ಟು ವರ್ಷಗಳ ಕಾಲ ವಾಸ ಮಾಡುತ್ತಾನೆ.

ಯಸ್ತು ಪಕ್ಷೇ ಗತೇ ಭುಂಕ್ತೇ ಏಕಭಕ್ತಂ ಜಿತೇಂದ್ರಿಯಃ ।
ಸದಾ ದ್ವಾದಶ ಮಾಸಾಂಸ್ತು ಜುಹ್ವಾನೋ ಜಾತವೇದಸಮ್ ।
ರಾಜಸೂಯಸಹಸ್ರಸ್ಯ ಫಲಂ ಪ್ರಾಪ್ನೋತ್ಯನುತ್ತಮಮ್ ॥೬೪॥

ಯಾನಮಾರೋಹತೇ ನಿತ್ಯಂ ಹಂಸಬರ್ಹಿಣಸೇವಿತಮ್ ।
ಮಣಿಮಂಡಲಕೈಶ್ಚಿತ್ರಂ ಜಾತರೂಪಸಮನ್ವಿತಮ್ ॥೬೫॥

ಯಾವನು ಒಂದು ಪಕ್ಷಕ್ಕೆ ಒಂದು ಬಾರಿ ಜಿತೇಂದ್ರಿಯನಾಗಿ ಏಕಭೋಜನವನ್ನು ಮಾಡುತ್ತಾ ಹನ್ನೆರಡು ತಿಂಗಳುಗಳ ಕಾಲ ಅಗ್ನಿಹೋತ್ರವನ್ನು ಮಾಡುತ್ತಾನೆಯೋ ಅವನು ಸಹಸ್ರ ರಾಜಸೂಯಯಾಗಗಳ ಶ್ರೇಷ್ಠವಾದ ಫಲವನ್ನು ಹೊಂದುತ್ತಾನೆ. ಹಂಸ-ನವಿಲುಗಳಿಂದ ಸೇವಿತವಾದ, ಮಣಿಮಂಡಲಗಳಿಂದ ಕೂಡಿ ವಿಚಿತ್ರವಾದ, ಸುವರ್ಣಮಯವಾದ ವಿಮಾನವನ್ನು ಏರುತ್ತಾನೆ.

ದಿವ್ಯಾಭರಣಶೋಭಾಭಿರ್ವರಸ್ತ್ರೀಭಿರಲಂಕೃತಮ್ ।
ಏಕಸ್ತಂಭಂ ಚತುರ್ದ್ವಾರಂ ಸಪ್ತಭೌಮಂ ಸುಮಂಗಲಮ್ ।
ವೈಜಯಂತೀಸಹಸ್ರೈಶ್ಚ ಶೋಭಿತಂ ಗೀತನಿಸ್ವನೈಃ ॥೬೬॥

ದಿವ್ಯಂ ದಿವ್ಯಗುಣೋಪೇತಂ ವಿಮಾನಮಧಿರೋಹತಿ ।
ಮಣಿಮುಕ್ತಾಪ್ರವಾಲೈಶ್ಚ ಭೂಷಿತಂ ವೈದ್ಯುತಪ್ರಭಮ್ ।
ವಸೇದ್ ಯುಗಸಹಸ್ರಂ ಚ ಖಡ್ಗಕುಂಜರವಾಹನಃ ॥೬೭॥

ದಿವ್ಯಾಭರಣಗಳನ್ನು ಧರಿಸಿ ಶೋಭಾಯಮಾನವಾದ, ಶ್ರೇಷ್ಠ ಸ್ತ್ರೀಯರಿಂದ ಅಲಂಕೃತವಾದ ಒಂದು ಸ್ತಂಭವನ್ನು, ನಾಲ್ಕು ದ್ವಾರವನ್ನು, ಏಳು ಉಪ್ಪರಿಗೆಗಳನ್ನು ಹೊಂದಿದ, ಮಂಗಳವೂ, ಸಹಸ್ರ ವೈಜಯಂತೀ ಮಾಲೆಗಳಿಂದ ಶೋಭಿತವೂ, ಗೀತಧ್ವನಿಯಿಂದ ಯುಕ್ತವಾದುದೂ, ದಿವ್ಯಗುಣೋಪೇತವೂ ಆದ, ಮುಕ್ತಾಮಣಿ ಹವಳಗಳಿಂದ ಭೂಷಿತವಾದ, ಮಿಂಚಿನಂತಹ ಕಾಂತಿಯುಳ್ಳ ದಿವ್ಯವಾದ ವಿಮಾನವನ್ನು ಏರುತ್ತಾನೆ. ಅವನು ಖಡ್ಗಮೃಗ ಮತ್ತು ಕುಂಜರಗಳಿಂದ ಎಳೆಯಲ್ಪಟ್ಟ ವಾಹನದಲ್ಲಿ ಸಹಸ್ರ ಯುಗಗಳ ಪರ್ಯಂತವಾಗಿ ವಾಸಿಸುತ್ತಾನೆ.

ಷೋಡಶೇ ದಿವಸೇ ಯಸ್ತು ಸಂಪ್ರಾಪ್ತೇ ಪ್ರಾಶತೇ ಹವಿಃ ।
ಸದಾ ದ್ವಾದಶ ಮಾಸಾನ್ ವೈ ಸೋಮಯಜ್ಞಫಲಂ ಭವೇತ್ ॥೬೮॥

ಸೋಮಕನ್ಯಾನಿವಾಸೇಷು ಸೋಽಧ್ಯಾವಸತಿ ನಿತ್ಯದಾ ।
ಸೌಮ್ಯಗಂಧಾನುಲಿಪ್ತಶ್ಚ ಕಾಮಚಾರಗತಿರ್ಭವೇತ್ ॥೬೯॥

ಯಾವನು ಹದಿನಾರು ದಿವಸಗಳಿಗೊಮ್ಮೆ ಒಂದು ಬಾರಿ ಹವಿಷ್ಯಾನ್ನವನ್ನು ಹನ್ನೆರಡು ತಿಂಗಳುಗಳ ಕಾಲ ಭುಂಜಿಸುತ್ತಾನೆಯೋ ಅವನು ಸೋಮಯಾಗದ ಫಲವನ್ನು ಹೊಂದುತ್ತಾನೆ. ಸೋಮಕನ್ಯೆಯರ ನಿವಾಸಸ್ಥಾನದಲ್ಲಿ ಅವನು ಯಾವಾಗಲೂ ವಾಸಿಸುತ್ತಾನೆ. ಸೌಮ್ಯಗಂಧದಿಂದ ಯುಕ್ತನಾಗಿ ಅವನು ಬಯಸಿದ ಕಡೆ ಹೋಗುವಂತಹ ಗತಿಯನ್ನು ಹೊಂದುತ್ತಾನೆ.

ಸುದರ್ಶನಾಭಿರ್ನಾರೀಭಿರ್ಮಧುರಾಭಿಸ್ತಥೈವ ಚ ।
ಅರ್ಚ್ಯತೇ ವೈ ವಿಮಾನಸ್ಥಃ ಕಾಮಭೋಗೈಶ್ಚ ಸೇವ್ಯತೇ ॥೭೦॥

ಫಲಂ ಪದ್ಮಶತಪ್ರಖ್ಯಂ ಮಹಾಕಲ್ಪಂ ದಶಾಧಿಕಮ್ ।
ಆವರ್ತನಾನಿ ಚತ್ವಾರಿ ಸಾಗರೇ ಯಾತ್ಯಸೌ ನರಃ ॥೭೧॥

ಸುಂದರಿಯರೂ, ಮಧುರಸ್ವಭಾವದವರೂ ಆದ ನಾರಿಯರು ಅವನನ್ನು ಪೂಜಿಸುತ್ತಾರೆ. ವಿಮಾನದಲ್ಲಿ ಕುಳಿತು ಎಲ್ಲ ಕಾಮಭೋಗಗಳನ್ನೂ ಪಡೆಯುತ್ತಾನೆ. ಅವನು ನೂರು ಪದ್ಮ ಮತ್ತು ಹತ್ತು ಮಹಾಕಲ್ಪಗಳು ಮತ್ತು ನಾಲ್ಕು ಚತುರ್ಯುಗಗಳಿಗೆ ಸಮಾನವಾದ ಕಾಲದವರೆಗೆ ಅಂತಹ ಪುಣ್ಯಫಲವನ್ನು ಅನುಭವಿಸುತ್ತಾ ಸಾಗರದಲ್ಲಿ ಸಂಚರಿಸುತ್ತಾನೆ.

ದಿವಸೇ ಸಪ್ತದಶಮೇ ಪ್ರಾಪ್ತೇ ಯಃ ಪ್ರಾಶಯೇದ್ ಹವಿಃ ।
ಸದಾ ದ್ವಾದಶ ಮಾಸಾನ್ ವೈ ಜುಹ್ವಾನೋ ಜಾತವೇದಸಮ್ ॥೭೨॥

ಸ್ಥಾನಂ ವಾರುಣಮೈಂದ್ರಂ ಚ ರೌದ್ರಂ ಚೈವಾಧಿಗಚ್ಛತಿ ।
ಮಾರುತೌಶನಸೇ ಚೈವ ಬ್ರಹ್ಮಲೋಕಂ ಚ ಗಚ್ಛತಿ ॥೭೩॥

ಹನ್ನೆರಡು ತಿಂಗಳವರೆಗೆ ಹದಿನೇಳು ದಿವಸಗಳಲ್ಲಿ ಒಂದು ಬಾರಿ ಹವಿಷ್ಯಾನ್ನವನ್ನು ಭೋಜನ ಮಾಡಿ ಅಗ್ನಿಹೋತ್ರವನ್ನು ಮಾಡುವವನು ವರುಣನ, ಇಂದ್ರನ, ರುದ್ರನ, ಮರುತ್ತುಗಳ, ಶುಕ್ರನ ಸ್ಥಾನಕ್ಕೆ ಹೋಗಿ ಬ್ರಹ್ಮಲೋಕಕ್ಕೆ ಹೋಗುತ್ತಾನೆ.

ತತ್ರ ದೈವತಕನ್ಯಾಭಿರಾಸನೇನೋಪಚರ್ಯತೇ ।
ಭೂರ್ಭುವಂ ಚಾಪಿ ದೇವರ್ಷಿಂ ವಿಶ್ವರೂಪಮವೇಕ್ಷತೇ ॥೭೪॥

ತತ್ರ ದೇವಾಧಿದೇವಸ್ಯ ಕುಮಾರ್ಯೋ ರಮಯಂತಿ ತಮ್ ।
ಮನೋಜ್ಞರೂಪಧಾರಿಣ್ಯೋ ಮಧುರಾಃ ಸಮಲಂಕೃತಾಃ ॥೭೫॥

ಚಂದ್ರಾದಿತ್ಯಾವುಭೌ ಯಾವದ್ ಗಗನೇ ಚರತಃ ಪ್ರಭೋ ।
ತಾವಚ್ಚರತ್ಯಸೌ ವೀರಃ ಸುಧಾಮೃತರಸಾಶನಃ ॥೭೬॥

ಅಲ್ಲಿ ದೇವತಾಕನ್ಯೆಯರಿಂದ ಆಸನಾದಿ ಉಪಚಾರವನ್ನು ಪಡೆಯುತ್ತಾನೆ. ಭೂಲೋಕವನ್ನೂ, ಅಂತರಿಕ್ಷಲೋಕವನ್ನೂ ಮತ್ತು ದೇವರ್ಷಿಯಾದ ವಿಶ್ವರೂಪರನ್ನು ನೋಡುತ್ತಾನೆ. ಅಲ್ಲಿ ಮನೋಹರ ರೂಪವನ್ನು ಧರಿಸಿದ, ಅಲಂಕೃತರಾದ ದೇವಕನ್ಯೆಯರು ಅವನನ್ನು ಸಂತೋಷಪಡಿಸುತ್ತಾರೆ. ಎಲೈ ಪ್ರಭುವೇ, ಸೂರ್ಯ-ಚಂದ್ರರು ಆಕಾಶದಲ್ಲಿ ಎಲ್ಲಿಯವರೆಗೆ ಸಂಚರಿಸುತ್ತಾರೆಯೋ ಅಲ್ಲಿಯವರೆಗೆ ಆ ವೀರನು ಅಮೃತರಸ ಸದೃಶವಾದ ಆಹಾರವನ್ನು ಹೊಂದಿ ಅಲ್ಲಿರುತ್ತಾನೆ.

ಅಷ್ಟಾದಶೇ ತು ದಿವಸೇ ಪ್ರಾಶ್ನೀಯಾದೇಕಭೋಜನಮ್ ।
ಸದಾ ದ್ವಾದಶ ಮಾಸಾನ್ ವೈ ಸಪ್ತ ಲೋಕಾನ್ ಸ ಪಶ್ಯತಿ ॥೭೭॥

ರಥೈಃ ಸನಂದಿಘೋಷೈಶ್ಚ ಪೃಷ್ಠತಃ ಸೋಽನುಗಮ್ಯತೇ ।
ದೇವಕನ್ಯಾಧಿರೂಢೈಸ್ತು ಭ್ರಾಜಮಾನೈಃ ಸ್ವಲಂಕೃತೈಃ ॥೭೮॥

ಯಾವನು ಹನ್ನೆರಡು ತಿಂಗಳವರೆಗೆ ಹದಿನೆಂಟು ದಿವಸಕ್ಕೆ ಒಮ್ಮೆ ಭೋಜನವನ್ನು ಮಾಡುತ್ತಾನೆಯೋ ಅವನು ಸಪ್ತಲೋಕಗಳನ್ನೂ ನೋಡುತ್ತಾನೆ. ಅಲಂಕೃತರಾದ, ಶೋಭಾಯಮಾನರಾದ ದೇವಕನ್ಯೆಯರಿಂದ ಆರೂಢವಾದ, ನಂದಿಘೋಷ ಸಹಿತವಾದ ರಥಗಳಿಂದ ಅವನು ಹಿಂಬಾಲಿಸಲ್ಪಡುತ್ತಾನೆ.

ವ್ಯಾಘ್ರಸಿಂಹಪ್ರಯುಕ್ತಂ ಚ ಮೇಘಸ್ವನನಿನಾದಿತಮ್ ।
ವಿಮಾನಮುತ್ತಮಂ ದಿವ್ಯಂ ಸುಸುಖೀ ಹ್ಯಧಿರೋಹತಿ ॥೭೯॥

ತತ್ರ ಕಲ್ಪಸಹಸ್ರಂ ಸ ಕಾಂತಾಭಿಃ ಸಹ ಮೋದತೇ ।
ಸುಧಾರಸಂ ಚ ಭುಂಜೀತ ಹ್ಯಮೃತೋಪಮಮುತ್ತಮಮ್ ॥೮೦॥

ವ್ಯಾಘ್ರ-ಸಿಂಹಗಳನ್ನು ಹೊಂದಿದ, ಮೇಘಸ್ವನದಂತೆ ಗಂಭೀರನಾದವುಳ್ಳ, ದಿವ್ಯವಾದ ಮತ್ತು ಶ್ರೇಷ್ಠವಾದ ವಿಮಾನವನ್ನು ಅತ್ಯಂತ ಸುಖದಿಂದ ಕೂಡಿದ ಅವನು ಏರುತ್ತಾನೆ. ಅಲ್ಲಿ ಮನೋಹರರಾದ ಸ್ತ್ರೀಯರ ಜೊತೆಯಲ್ಲಿ ಅಮೃತಸದೃಶವಾದ, ಶ್ರೇಷ್ಠವಾದ ಸುಧಾರಸವನ್ನು ಭುಂಜಿಸುತ್ತಾ ಕಾಂತೆಯರ ಜೊತೆಯಲ್ಲಿ ಸಂತೋಷಪಡುತ್ತಾನೆ.

ಏಕೋನವಿಂಶೇ ದಿವಸೇ ಯೋ ಭುಂಕ್ತೇ ಏಕಭೋಜನಮ್ ।
ಸದಾ ದ್ವಾದಶ ಮಾಸಾನ್ ವೈ ಸತ್ಯವಾದೀ ಧೃತವ್ರತಃ ॥೮೧॥

ಉತ್ತಮಂ ಲಭತೇ ಸ್ಥಾನಮಪ್ಸರೋಗಣಸೇವಿತಮ್ ।
ಗಂಧರ್ವೈರುಪಗೀತಂ ಚ ವಿಮಾನಂ ಸೂರ್ಯವರ್ಚಸಮ್ ॥೮೨॥

ತತ್ರಾಮರವರಸ್ತ್ರೀಭಿರ್ಮೋದತೇ ವಿಗತಜ್ವರಃ ।
ದಿವ್ಯಾಂಬರಧರಃ ಶ್ರೀಮಾನಯುತಾನಾಂ ಶತಂ ಸಮಾಃ ॥೮೩॥

ಯಾವನು ಹನ್ನೆರಡು ತಿಂಗಳವರೆಗೆ ಹತ್ತೊಂಬತ್ತು ದಿವಸಗಳಲ್ಲಿ ಒಂದು ಭೋಜನವನ್ನು ಮಾಡಿ ಸತ್ಯವಾದಿಯೂ, ವ್ರತಶೀಲನೂ ಆಗಿರುತ್ತಾನೆಯೋ ಅವನು ಅಪ್ಸರೆಯರ ಸಮೂಹದಿಂದ ಸೇವಿತವಾದ ಸ್ಥಾನವನ್ನು ಹೊಂದುತ್ತಾನೆ. ಗಂಧರ್ವರು ಗಾನ ಮಾಡುತ್ತಿರುವ ಸೂರ್ಯಪ್ರಭೆಯುಳ್ಳ ವಿಮಾನದಲ್ಲಿ ಅವನು ನಿರಾತಂಕನಾಗಿ ದೇವಸ್ತ್ರೀಯರ ಜೊತೆಯಲ್ಲಿ ದಿವ್ಯಾಂಬರವನ್ನು ಧರಿಸಿ, ಕಾಂತಿಯುಕ್ತನಾಗಿ, ನೂರು ಅಯುತ ವರ್ಷಗಳ ಕಾಲ ಸಂತೋಷಪಡುತ್ತಾನೆ.

ಪೂರ್ಣೇऽಥ ದಿವಸೇ ವಿಂಶೇ ಯೋ ಭುಂಕ್ತೇ ಹ್ಯೇಕಭೋಜನಮ್ ।
ಸದಾ ದ್ವಾದಶ ಮಾಸಾಂಸ್ತು ಸತ್ಯವಾದೀ ಧೃತವ್ರತಃ ॥೮೪॥

ಅಮಾಂಸಾಶೀ ಬ್ರಹ್ಮಚಾರೀ ಸರ್ವಭೂತಹಿತೇ ರತಃ ।
ಸ ಲೋಕಾನ್ ವಿಪುಲಾನ್ ದಿವ್ಯಾನಾದಿತ್ಯಾನಾಮುಪಾಶ್ನುತೇ ॥೮೫॥

ಗಂಧರ್ವೈರಪ್ಸರೋಭಿಶ್ಚ ದಿವ್ಯಮಾಲ್ಯಾನುಲೇಪನೈಃ ।
ವಿಮಾನೈಃ ಕಾಂಚನೈರ್ದಿವ್ಯೈಃ ಸುಖೀ ಚರತಿ ನಿತ್ಯದಾ ॥೮೬॥

ಯಾವನು ಹನ್ನೆರಡು ತಿಂಗಳುಗಳವರೆಗೆ ಇಪ್ಪತ್ತು ದಿವಸಕ್ಕೆ ಒಂದು ಭೋಜನವನ್ನು ಮಾಡಿ ಸತ್ಯವಾದಿಯೂ, ವ್ರತಶೀಲನೂ, ಮಾಂಸವನ್ನು ತ್ಯಜಿಸಿದವನೂ, ಬ್ರಹ್ಮಚಾರಿಯೂ, ಸರ್ವಭೂತ ಹಿತದಲ್ಲಿ ರತನೂ ಆಗಿರುತ್ತಾನೆಯೋ ಅವನು ವಿಪುಲವಾದ ಆದಿತ್ಯನ ಲೋಕವನ್ನು ಹೊಂದುತ್ತಾನೆ. ದಿವ್ಯಮಾಲ್ಯಾನುಲೇಪನವನ್ನು ಹೊಂದಿದ ಗಂಧರ್ವರಿಂದ ಮತ್ತು ಅಪ್ಸರೆಯರಿಂದ ಸಹಿತನಾಗಿ ಸುವರ್ಣಮಯವಾದ ದಿವ್ಯ ವಿಮಾನದಲ್ಲಿ ನಿತ್ಯವೂ ಸಂತೋಷದಿಂದ ಸಂಚರಿಸುತ್ತಾನೆ.

ಏಕವಿಂಶೇ ತು ದಿವಸೇ ಯೋ ಭುಂಕ್ತೇ ಹ್ಯೇಕಭೋಜನಮ್ ।
ಸದಾ ದ್ವಾದಶ ಮಾಸಾನ್ ವೈ ಜುಹ್ವಾನೋ ಜಾತವೇದಸಮ್ ॥೮೭॥

ಲೋಕಮೌಶನಸಂ ದಿವ್ಯಂ ಶಕ್ರಲೋಕಂ ಚ ಗಚ್ಛತಿ ।
ಅಶ್ವಿನೋರ್ಮರುತಾಂ ಚೈವ ಸುಖೇಷ್ವಭಿರತಃ ಸದಾ ॥೮೮॥

ಅನಭಿಜ್ಞಶ್ಚ ದುಃಖಾನಾಂ ವಿಮಾನವರಮಾಸ್ಥಿತಃ ।
ಸೇವ್ಯಮಾನೋ ವರಸ್ತ್ರೀಭಿಃ ಕ್ರೀಡತ್ಯಮರವತ್ ಪ್ರಭುಃ ॥೮೯॥

ಹನ್ನೆರಡು ತಿಂಗಳುಗಳವರೆಗೆ ಇಪ್ಪತ್ತೊಂದು ದಿವಸದಲ್ಲಿ ಒಂದು ಭೋಜನವನ್ನು ಮಾಡುತ್ತಾ, ಅಗ್ನಿಹೋತ್ರವನ್ನು ಮಾಡುವವನು ದಿವ್ಯವಾದ ಶುಕ್ರಲೋಕಕ್ಕೂ, ಇಂದ್ರಲೋಕಕ್ಕೂ, ಅಶ್ವಿನಿ ಮತ್ತು ಮರುತ್ತುಗಳ ಲೋಕಕ್ಕೂ ಹೋಗುತ್ತಾನೆ. ಅವನು ಯಾವಾಗಲೂ ಸುಖದಲ್ಲಿ ರತನಾಗಿರುತ್ತಾನೆ. ಶ್ರೇಷ್ಠವಾದ ವಿಮಾನದಲ್ಲಿ ಕುಳಿತು ದುಃಖವನ್ನು ಹೊಂದದೆ ಸುಂದರಿಯರಾದ ಸ್ತ್ರೀಯರ ಜೊತೆಯಲ್ಲಿ ಕ್ರೀಡಿಸುತ್ತಾ ದೇವತೆಯಂತೆ ಇರುತ್ತಾನೆ.

ದ್ವಾವಿಂಶೇ ದಿವಸೇ ಪ್ರಾಪ್ತೇ ಯೋ ಭುಂಕ್ತೇ ಹ್ಯೇಕಭೋಜನಮ್ ।
ಸದಾ ದ್ವಾದಶ ಮಾಸಾನ್ ವೈ ಜುಹ್ವಾನೋ ಜಾತವೇದಸಮ್ ॥೯೦॥

ಧೃತಿಮಾನಹಿಂಸಾನಿರತಃ ಸತ್ಯವಾಗನಸೂಯಕಃ ।
ರುದ್ರಾಣಾಂ ಲೋಕಮಾಪ್ನೋತಿ ದಿವಾಕರಸಮಪ್ರಭಃ ॥೯೧॥

ಕಾಮಚಾರೀ ಸುಧಾಹಾರೋ ವಿಮಾನವರಮಾಸ್ಥಿತಃ ।
ರಮತೇ ದೇವಕನ್ಯಾಭಿರ್ದಿವ್ಯಾಭರಣಭೂಷಿತಃ ॥೯೨॥

ಯಾವನು ಹನ್ನೆರಡು ತಿಂಗಳುಗಳವರೆಗೆ ಇಪ್ಪತ್ತೆರಡು ದಿವಸಗಳಿಗೊಮ್ಮೆ ಭೋಜನವನ್ನು ಮಾಡಿ, ಅಗ್ನಿಹೋತ್ರವನ್ನು ಮಾಡಿ ಧೈರ್ಯವಂತನೂ, ಅಹಿಂಸಾ ನಿರತನೂ, ಸತ್ಯವಚನನೂ, ಅಸೂಯಾರಹಿತನೂ ಆಗಿರುತ್ತಾನೆಯೋ ಅವನು ಸೂರ್ಯನಿಗೆ ಸಮಾನವಾದ ತೇಜಸ್ಸನ್ನು ಹೊಂದಿ ರುದ್ರನ ಲೋಕಕ್ಕೆ ಹೋಗುತ್ತಾನೆ. ತನಗೆ ಇಚ್ಛೆ ಬಂದ ಕಡೆಗೆ ಹೋಗುವ ಸಾಮರ್ಥ್ಯವನ್ನು ಹೊಂದಿ, ಸುಧೆಯನ್ನೇ ಆಹಾರವನ್ನಾಗಿ ಮಾಡಿಕೊಂಡು ಶ್ರೇಷ್ಠವಾದ ವಿಮಾನದಲ್ಲಿ ಕುಳಿತು ದಿವ್ಯಾಭರಣ ಭೂಷಿತನಾಗಿ ದೇವಕನ್ಯೆಯರ ಜೊತೆಯಲ್ಲಿ ಸಂತೋಷಪಡುತ್ತಾನೆ.

ತ್ರಯೋವಿಂಶೇ ತು ದಿವಸೇ ಪ್ರಾಶೇದ್ ಯಸ್ತ್ವೇಕಭೋಜನಮ್ ।
ಸದಾ ದ್ವಾದಶ ಮಾಸಾಂಸ್ತು ಮಿತಾಹಾರೋ ಜಿತೇಂದ್ರಿಯಃ ॥೯೩॥

ವಾಯೋರುಶನಸಶ್ಚೈವ ರುದ್ರಲೋಕಂ ಚ ಗಚ್ಛತಿ ।
ಕಾಮಚಾರೀ ಕಾಮಗಮಃ ಪೂಜ್ಯಮಾನೋಽಪ್ಸರೋಗಣೈಃ ॥೯೪॥

ಅನೇಕಯುಗಪರ್ಯಂತಂ ವಿಮಾನವರಮಾಸ್ಥಿತಃ ।
ಮೋದತೇ ದೇವಕನ್ಯಾಭಿರ್ದಿವ್ಯಾಭರಣಭೂಷಿತಃ ॥೯೫॥

ಯಾವನು ಹನ್ನೆರಡು ತಿಂಗಳುಗಳವರೆಗೆ ಇಪ್ಪತ್ಮೂರು ದಿವಸಗಳಲ್ಲಿ ಒಂದು ಭೋಜನವನ್ನು ಮಾಡಿ ಮಿತಾಹಾರನಾಗಿ ಜಿತೇಂದ್ರಿಯನಾಗಿರುತ್ತಾನೆಯೋ ಅವನು ವಾಯುಲೋಕಕ್ಕೂ, ಶುಕ್ರಲೋಕಕ್ಕೂ ಮತ್ತು ರುದ್ರಲೋಕಕ್ಕೂ ಹೋಗುತ್ತಾನೆ. ತನಗೆ ಮನಸ್ಸಿಗೆ ಬಂದ ಕಡೆ ಹೋಗುವವನಾಗಿ, ಅಪ್ಸರೆಯರ ಸಮೂಹದಿಂದ ಪೂಜಿತನಾಗಿ ವಿಮಾನವನ್ನು ಏರಿ, ಅನೇಕ ಯುಗಗಳ ಕಾಲ ದಿವ್ಯಾಭರಣಭೂಷಿತನಾಗಿ ದೇವಕನ್ಯೆಯರ ಜೊತೆಯಲ್ಲಿ ಸುಖಪಡುತ್ತಾನೆ.

ಚತುರ್ವಿಂಶೇ ತು ದಿವಸೇ ಯಃ ಪ್ರಾಶೇದೇಕಭೋಜನಮ್ ।
ಸದಾ ದ್ವಾದಶ ಮಾಸಾನ್ ವೈ ಜುಹ್ವಾನೋ ಜಾತವೇದಸಮ್ ॥೯೬॥

ಆದಿತ್ಯಾನಾಮಧೀವಾಸೇ ಮೋದಮಾನೋ ವಸೇಚ್ಚಿರಮ್ ।
ದಿವ್ಯಮಾಲ್ಯಾಂಬರಧರೋ ದಿವ್ಯಗಂಧಾನುಲೇಪನಃ ॥೯೭॥

ವಿಮಾನೇ ಕಾಂಚನೇ ದಿವ್ಯೇ ಹಂಸಯುಕ್ತೇ ಮನೋರಮೇ ।
ರಮತೇ ದೇವಕನ್ಯಾನಾಂ ಸಹಸ್ರೈರಯುತೈಸ್ತದಾ ॥೯೮॥

ಯಾವನು ಹನ್ನೆರಡು ತಿಂಗಳುಗಳವರೆಗೆ ಇಪ್ಪತ್ನಾಲ್ಕು ದಿವಸಗಳಿಗೆ ಒಮ್ಮೆ ಭೋಜನವನ್ನು ಮಾಡಿ ಅಗ್ನಿಹೋತ್ರವನ್ನು ಮಾಡುತ್ತಾನೆಯೋ ಅವನು ಆದಿತ್ಯರ ಗೃಹದಲ್ಲಿಯೇ ದಿವ್ಯಮಾಲ್ಯವಸ್ತ್ರವನ್ನು ಧರಿಸಿ, ದಿವ್ಯಗಂಧಾನುಲೇಪನದಿಂದ ಸಂತೋಷದಿಂದ ಬಹುಕಾಲ ವಾಸಿಸುತ್ತಾನೆ. ದಿವ್ಯವಾದ ಸುವರ್ಣಮಯವಾದ ಮನೋಹರವಾದ ಹಂಸಯುಕ್ತವಾದ ವಿಮಾನದಲ್ಲಿ ಹತ್ತು ಸಹಸ್ರ ದೇವಕನ್ಯೆಯರಿಂದ ಕೂಡಿ ಸಂತೋಷಪಡುತ್ತಾನೆ.

ಪಂಚವಿಂಶೇ ತು ದಿವಸೇ ಯಃ ಪ್ರಾಶೇದೇಕಭೋಜನಮ್ ।
ಸದಾ ದ್ವಾದಶ ಮಾಸಾಂಸ್ತು ಪುಷ್ಕಳಂ ಯಾನಮಾರುಹೇತ್ ॥೯೯॥

ಸಿಂಹವ್ಯಾಘ್ರಪ್ರಯುಕ್ತೈಶ್ಚ ಮೇಘಸ್ವನನಿನಾದಿತೈಃ ।
ರಥೈಃ ಸನಂದಿಘೋಷೈಶ್ಚ ಪೃಷ್ಠತಃ ಸೋಽನುಗಮ್ಯತೇ ॥೧೦೦॥

ಯಾವನು ಹನ್ನೆರಡು ತಿಂಗಳುಗಳವರೆಗೆ ಇಪ್ಪತ್ತೈದು ದಿನಗಳಿಗೊಮ್ಮೆ ಒಂದು ಭೋಜನವನ್ನು ಮಾಡುತ್ತಾನೆಯೋ ಅವನು ಸಮೃದ್ಧವಾದ ಯಾನವನ್ನು ಏರುತ್ತಾನೆ. ಅವನು ಸಿಂಹ-ವ್ಯಾಘ್ರಗಳನ್ನು ಹೂಡಿದ, ಮೇಘಸ್ವನದಂತೆ ಗಂಭೀರವಾದ ಸ್ವನವುಳ್ಳ ನಂದಿಘೋಷ ಸಹಿತವಾದ ರಥಗಳಿಂದ ಹಿಂಬಾಲಿಸಲ್ಪಡುತ್ತಾನೆ.

ದೇವಕನ್ಯಾಸಮಾರೂಢೈ ರಾಜತೈರ್ವಿಮಲೈಃ ಶುಭೈಃ ।
ವಿಮಾನಮುತ್ತಮಂ ದಿವ್ಯಮಾಸ್ಥಾಯ ಸುಮನೋಹರಮ್ ॥೧೦೧॥

ತತ್ರ ಕಲ್ಪಸಹಸ್ರಂ ವೈ ರಮತೇ ಸ್ತ್ರೀಶತಾವೃತಃ ।
ಸುಧಾರಸಂ ಚೋಪಜೀವನ್ನಮೃತೋಪಮಮುತ್ತಮಮ್ ॥೧೦೨॥

ದೇವಕನ್ಯೆಯರಿಂದ ಆರೂಢವಾದ ಶುದ್ಧವಾದ ರಜತಮಯವಾದ ಶ್ರೇಷ್ಠವಾದ ದಿವ್ಯವಾದ ಮನೋಹರವಾದ ವಿಮಾನವನ್ನೇರಿ ಸಹಸ್ರಕಲ್ಪಗಳವರೆಗೆ ಅಮೃತ-ಪ್ರಾಯವಾದ ಸುಧಾರಸವನ್ನು ಆಹಾರವಾಗಿ ಸ್ವೀಕರಿಸುತ್ತಾ ನೂರು ಸ್ತ್ರೀಯರಿಂದ ಸುತ್ತುವರಿಯಲ್ಪಟ್ಟು ಸಂತೋಷಪಡುತ್ತಾನೆ.

ಷಡ್‌ವಿಂಶೇ ದಿವಸೇ ಯಸ್ತು ಪ್ರಾಶ್ನೀಯಾದೇಕಭೋಜನಮ್ ।
ಸದಾ ದ್ವಾದಶ ಮಾಸಾಂಸ್ತು ನಿಯತೋ ನಿಯತಾಶನಃ ॥೧೦೩॥

ಜಿತೇಂದ್ರಿಯೋ ವೀತರಾಗೋ ಜುಹ್ವಾನೋ ಜಾತವೇದಸಮ್ ।
ಸ ಪ್ರಾಪ್ನೋತಿ ಮಹಾಭಾಗಃ ಪೂಜ್ಯಮಾನೋಽಪ್ಸರೋಗಣೈಃ ॥೧೦೪॥

ಯಾವನು ಹನ್ನೆರಡು ತಿಂಗಳುಗಳವರೆಗೆ ಇಪ್ಪತ್ತಾರು ದಿನಗಳಿಗೆ ಒಮ್ಮೆ ಭೋಜನವನ್ನು ಮಾಡಿ ನಿಯಮಬದ್ಧನೂ, ನಿಯತವಾದ ಆಹಾರವುಳ್ಳವನೂ, ಜಿತೇಂದ್ರಿಯನೂ, ರಾಗರಹಿತನೂ ಆಗಿ ಅಗ್ನಿಹೋತ್ರವನ್ನು ಮಾಡುತ್ತಾನೆಯೋ ಆ ಮಹಾನುಭಾವನು ಅಪ್ಸರೆಯರ ಗಣದಿಂದ ಪೂಜಿತನಾಗಿ ಉತ್ತಮ ಲೋಕಗಳನ್ನು ಹೊಂದುತ್ತಾನೆ.

ಸಪ್ತಾನಾಂ ಮರುತಾಂ ಲೋಕಾನ್ ವಸೂನಾಂ ಚಾಪಿ ಸೋಽಶ್ನುತೇ ।
ವಿಮಾನೇ ಸ್ಫಾಟಿಕೇ ದಿವ್ಯೇ ಸರ್ವರತ್ನೈರಲಂಕೃತೇ ॥೧೦೫॥

ಗಂಧರ್ವೈರಪ್ಸರೋಭಿಶ್ಚ ಪೂಜ್ಯಮಾನಃ ಪ್ರಮೋದತೇ ।
ದ್ವೇ ಯುಗಾನಾಂ ಸಹಸ್ರೇ ತು ದಿವ್ಯೇ ದಿವ್ಯೇನ ತೇಜಸಾ ॥೧೦೬॥

ಅವನು ಸಪ್ತ ಮರುತ್ತುಗಳ ಲೋಕವನ್ನೂ, ಅಷ್ಟ ವಸ್ತುಗಳ ಲೋಕವನ್ನೂ ಹೊಂದುತ್ತಾನೆ. ಸ್ಫಟಿಕಮಯವಾದ ಸರ್ವರತ್ನಗಳಿಂದ ಅಲಂಕೃತವಾದ ದಿವ್ಯವಾದ ವಿಮಾನದಲ್ಲಿ ಕುಳಿತು ಗಂಧರ್ವರಿಂದಲೂ ಮತ್ತು ಅಪ್ಸರೆಯರಿಂದಲೂ ಪೂಜಿಸಲ್ಪಟ್ಟು ಎರಡು ಸಹಸ್ರ ಯುಗಗಳವರೆಗೆ ದಿವ್ಯವಾದ ತೇಜಸ್ಸನ್ನು ಹೊಂದಿ ಸಂತೋಷಪಡುತ್ತಾನೆ.

ಸಪ್ತವಿಂಶೇ ತು ದಿವಸೇ ಯಃ ಪ್ರಾಶೇದೇಕಭೋಜನಮ್ ।
ಸದಾ ದ್ವಾದಶ ಮಾಸಾಂಸ್ತು ಜುಹ್ವಾನೋ ಜಾತವೇದಸಮ್ ॥೧೦೭॥

ಫಲಂ ಪ್ರಾಪ್ನೋತಿ ವಿಪುಲಂ ದೇವಲೋಕೇ ಚ ಪೂಜ್ಯತೇ ।
ಅಮೃತಾಶೀ ವಸಂಸ್ತತ್ರ ಸ ವಿತೃಪ್ತಃ ಪ್ರಮೋದತೇ ॥೧೦೮॥

ಹನ್ನೆರಡು ತಿಂಗಳುಗಳವರೆಗೆ ಯಾವನು ಇಪ್ಪತ್ತೇಳು ದಿವಸಗಳಲ್ಲಿ ಒಂದು ಭೋಜನವನ್ನು ಮಾಡಿ ಅಗ್ನಿಹೋತ್ರವನ್ನು ಮಾಡುತ್ತಾನೆಯೋ ಅವನು ಅದಕ್ಕೆ ಅನುಗುಣವಾದ ವಿಪುಲವಾದ ಫಲವನ್ನು ಪಡೆಯುತ್ತಾನೆ. ದೇವಲೋಕದಲ್ಲಿ ಪೂಜಿಸಲ್ಪಡುತ್ತಾನೆ. ಅಲ್ಲಿ ವಾಸ ಮಾಡಿ ಅವನು ಅಮೃತಪ್ರಾಶನವನ್ನು ಮಾಡಿ ಬಹಳ ತೃಪ್ತಿಯನ್ನು ಹೊಂದಿ ಸಂತೋಷಪಡುತ್ತಾನೆ.

ದೇವರ್ಷಿಚರಿತಂ ರಾಜನ್ ರಾಜರ್ಷಿಭಿರಧಿಷ್ಠಿತಮ್ ।
ಅಧ್ಯಾವಸತಿ ದಿವ್ಯಾತ್ಮಾ ವಿಮಾನವರಮಾಸ್ಥಿತಃ ॥೧೦೯॥

ಸ್ತ್ರೀಭಿರ್ಮನೋಭಿರಾಮಾಭೀ ರಮಮಾಣೋ ಮದೋತ್ಕಟಃ ।
ಯುಗಕಲ್ಪಸಹಸ್ರಾಣಿ ತ್ರೀಣ್ಯಾವಸತಿ ವೈ ಸುಖಿಮ್ ॥೧೧೦॥

ಎಲೈ ರಾಜನೇ, ದೇವರ್ಷಿಗಳು ತಿರುಗಾಡುವ ಮತ್ತು ರಾಜರ್ಷಿಗಳು ಕುಳಿತುಕೊಳ್ಳುವ ಶ್ರೇಷ್ಠವಾದ ವಿಮಾನವನ್ನು ಏರಿ ದಿವ್ಯಾತ್ಮನಾದ ಅವನು ಮದೋತ್ಕಟನಾಗಿ ಮನೋಹರರಾದ ಸ್ತ್ರೀಯರ ಜೊತೆಯಲ್ಲಿ ಸಂತೋಷಪಡುತ್ತಾ ಮೂರು ಸಹಸ್ರ ಯುಗಗಳವರೆಗೆ ಸುಖವನ್ನು ಅನುಭವಿಸುತ್ತಾನೆ.

ಯೋಽಷ್ಟಾವಿಂಶೇ ತು ದಿವಸೇ ಪ್ರಾಶ್ನೀಯಾದೇಕಭೋಜನಮ್ ।
ಸದಾ ದ್ವಾದಶ ಮಾಸಾಂಸ್ತು ಜಿತಾತ್ಮಾ ವಿಜಿತೇಂದ್ರಿಯಃ ॥೧೧೧॥

ಫಲಂ ದೇವರ್ಷಿಚರಿತಂ ವಿಪುಲಂ ಸಮುಪಾಶ್ನುತೇ ।
ಭೋಗವಾಂಸ್ತೇಜಸಾ ಭಾತಿ ಸಹಸ್ರಾಂಶುರಿವಾಮಲಃ ॥೧೧೨॥

ಯಾವನು ಹನ್ನೆರಡು ತಿಂಗಳುಗಳವರೆಗೆ ಇಪ್ಪತ್ತೆಂಟು ದಿನಗಳಿಗೊಮ್ಮೆ ಭೋಜನವನ್ನು ಮಾಡಿ ಮನೋಜಯವನ್ನು, ಇಂದ್ರಿಯಜಯವನ್ನು ಹೊಂದಿರುತ್ತಾನೆಯೋ ಅವನು ದೇವರ್ಷಿಗಳಿಗೆ ದೊರಕುವ ವಿಪುಲವಾದ ಫಲವನ್ನು ಹೊಂದುತ್ತಾನೆ. ಒಳ್ಳೆಯ ಭೋಗವನ್ನು ಹೊಂದಿ, ತನ್ನ ತೇಜಸ್ಸಿನಿಂದ ಸಹಸ್ರಾಂಶುವಾದ ಸೂರ್ಯನಂತೆ ಪರಿಶುದ್ಧವಾಗಿ ಶೋಭಿಸುತ್ತಾನೆ.

ಸುಕುಮಾರ್ಯಶ್ಚ ನಾರ್ಯಸ್ತಮ್ ಅಮರಾಣಾಂ ಸುವರ್ಚಸಾಮ್ ।
ಪೀನಸ್ತನೋರುಜಘನಾ ದಿವ್ಯಾಭರಣಭೂಷಿತಾಃ ॥೧೧೩॥

ರಮಯಂತಿ ಮನಃಕಾಂತಾ ವಿಮಾನೇ ಸೂರ್ಯಸನ್ನಿಭೇ ।
ಸರ್ವಕಾಮಗಮೇ ದಿವ್ಯೇ ಕಲ್ಪಾಯುತಶತಂ ಸಮಾಃ ॥೧೧೪॥

ಪೀನಸ್ತನಗಳನ್ನೂ ಮತ್ತು ವಿಸ್ತಾರವಾದ ತೊಡೆಗಳನ್ನೂ ಹೊಂದಿದ ಸುಕುಮಾರಿಯರಾದ ಮನೋಹರರಾದ ದೇವನಾರಿಯರು ದಿವ್ಯಾಭರಣಭೂಷಿತರಾಗಿ ಅವನನ್ನು ಸಂತೋಷಪಡಿಸುತ್ತಾರೆ. ಅವನು ಸೂರ್ಯಸದೃಶವಾದ, ಸರ್ವ-ಕಾಮಗಳನ್ನೂ ಹೊಂದಿರುವ ದಿವ್ಯವಾದ ವಿಮಾನದಲ್ಲಿ ಹತ್ತುಲಕ್ಷ ವರ್ಷಗಳವರೆಗೆ ಸುಖವನ್ನು ಅನುಭವಿಸುತ್ತಾನೆ.

ಏಕೋನತ್ರಿಂಶೇ ದಿವಸೇ ಯಃ ಪ್ರಾಶೇದೇಕಭೋಜನಮ್ ।
ಸದಾ ದ್ವಾದಶ ಮಾಸಾನ್ ವೈ ಸತ್ಯವ್ರತಪರಾಯಣಃ ॥೧೧೫॥

ತಸ್ಯ ಲೋಕಾಃ ಶುಭಾ ದಿವ್ಯಾ ದೇವರಾಜರ್ಷಿಪೂಜಿತಾಃ ।
ವಿಮಾನಂ ಚಂದ್ರಶುಭ್ರಾಭಂ ದಿವ್ಯಂ ಸಮಧಿಗಚ್ಛತಿ ॥೧೧೬॥

ಜಾತರೂಪಮಯಂ ಯುಕ್ತಂ ಸರ್ವರತ್ನವಿಭೂಷಿತಮ್ ।
ಅಪ್ಸರೋಗಣಸಂಪೂರ್ಣಂ ಗಂಧರ್ವೈರುಪಶೋಭಿತಮ್ ॥೧೧೭॥

ಯಾವನು ಹನ್ನೆರಡು ತಿಂಗಳುಗಳವರೆಗೆ ಇಪ್ಪತ್ತೊಂಬತ್ತು ದಿವಸಗಳಲ್ಲಿ ಒಂದು ಭೋಜನವನ್ನು ಮಾಡಿ ಸತ್ಯವ್ರತ ಪರಾಯಣನಾಗಿರುತ್ತಾನೆಯೋ ಅವನಿಗೆ ದೇವರ್ಷಿ ರಾಜರ್ಷಿ ಪೂಜಿತವಾದ ಶುಭವಾದ ದಿವ್ಯಲೋಕಗಳು ದೊರೆಯುತ್ತವೆ. ಚಂದ್ರನಂತೆ ಶುಭ್ರವಾದ ಸುವರ್ಣಮಯವಾದ, ಸರ್ವರತ್ನಗಳಿಂದ ವಿಭೂಷಿತವಾದ, ಅಪ್ಸರೆಯರ ಸಮೂಹದಿಂದ ತುಂಬಿದ, ಗಂಧರ್ವರಿಂದ ಶೋಭಿಸುವ ದಿವ್ಯವಾದ ವಿಮಾನವನ್ನು ಅವನು ಹೊಂದುತ್ತಾನೆ.

ತತ್ರ ಚೈನಂ ಶುಭಾ ನಾರ್ಯೋ ದಿವ್ಯಾಭರಣಭೂಷಿತಾಃ ।
ಮನೋಭಿರಾಮಾ ಮಧುರಾ ರಮಯಂತಿ ಮದೋತ್ಕಟಾಃ ॥೧೧೮॥

ಭೋಗವಾಂಸ್ತೇಜಸಾ ಯುಕ್ತೋ ವೈಶ್ವಾನರಸಮಪ್ರಭಃ ।
ದಿವ್ಯೋ ದಿವ್ಯೇನ ವಪುಷಾ ಭ್ರಾಜಮಾನ ಇವಾಮರಃ ॥೧೧೯॥

ವಸೂನಾಂ ಮರುತಾಂ ಚೈವ ಸಾಧ್ಯಾನಾಮಶ್ವಿನೋಸ್ತಥಾ ।
ರುದ್ರಾಣಾಂ ಚ ತಥಾ ಲೋಕಾನ್ ಬ್ರಹ್ಮಲೋಕಗತಿರ್ಭವೇತ್ ॥೧೨೦॥

ಅಲ್ಲಿ ದಿವ್ಯಾಭರಣಭೂಷಿತರಾದ, ಶುಭರಾದ,ಮಧುರರಾದ, ಮನೋಹರರಾದ, ಮದೋತ್ಕಟರಾದ ನಾರಿಯರು ಅವರನ್ನು ಸಂತೋಷಪಡಿಸುತ್ತಾರೆ. ಅವನು ಅಗ್ನಿಗೆ ಸಮಾನವಾದ ಕಾಂತಿಯನ್ನು ಹೊಂದಿ ತೇಜಸ್ಸಿನಿಂದ ಕೂಡಿದವನಾಗಿ ದಿವ್ಯವಾದ ಶರೀರದಿಂದ ದೇವನಂತೆ ಶೋಭಿಸುತ್ತಾ ಒಳ್ಳೆಯ ಭೋಗವನ್ನು ಹೊಂದಿ ವಸುಗಳ ಲೋಕಕ್ಕೂ, ಮರುತ್ತುಗಳ ಲೋಕಕ್ಕೂ, ಸಾಧ್ಯರ ಮತ್ತು ಅಶ್ವಿನಿಗಳ ಲೋಕಕ್ಕೂ, ರುದ್ರ ಲೋಕಕ್ಕೂ ಹೋಗಿ ಅಲ್ಲಿಂದ ಬ್ರಹ್ಮಲೋಕಕ್ಕೆ ಹೋಗುತ್ತಾನೆ.

ಯಸ್ತು ಮಾಸೇ ಗತೇ ಭುಂಕ್ತೇ ಏಕಭಕ್ತಂ ಶಮಾತ್ಮಕಃ ।
ಸದಾ ದ್ವಾದಶ ಮಾಸಾನ್ ವೈ ಬ್ರಹ್ಮಲೋಕಮವಾಪ್ನುಯಾತ್ ॥೧೨೧॥

ಸುಧಾರಸಕೃತಾಹಾರಃ ಶ್ರೀಮಾನ್ ಸರ್ವಮನೋಹರಃ ।
ತೇಜಸಾ ವಪುಷಾ ಲಕ್ಷ್ಮ್ಯಾ ಭ್ರಾಜತೇ ರಶ್ಮಿವಾನಿವ ॥೧೨೨॥

ಯಾವನು ಹನ್ನೆರಡು ತಿಂಗಳುಗಳವರೆಗೆ ಒಂದು ತಿಂಗಳಿಗೊಮ್ಮೆ ಒಂದು ಬಾರಿ ಭೋಜನವನ್ನು ಸ್ವೀಕರಿಸಿ ಶಾಂತನಾಗಿರುತ್ತಾನೆಯೋ ಅವನು ಬ್ರಹ್ಮಲೋಕವನ್ನು ಹೊಂದುತ್ತಾನೆ. ಅವನು ಸುಧಾರಸದ ಆಹಾರವುಳ್ಳವನಾಗಿ, ಸಂಪದ್ಯುಕ್ತನಾಗಿ, ಸರ್ವರಿಗೂ ಮನೋಹರನಾಗಿ ತೇಜಸ್ಸಿನಿಂದಲೂ, ಕಾಂತಿಯಿಂದಲೂ ಸೂರ್ಯನಂತೆ ಕಂಗೊಳಿಸುತ್ತಾನೆ.

ದಿವ್ಯಮಾಲ್ಯಾಂಬರಧರೋ ದಿವ್ಯಗಂಧಾನುಲೇಪನಃ ।
ಸುಖೇಷ್ವಭಿರತೋ ಯೋಗೀ ದುಃಖಾನಾಮವಿಜಾನಕಃ ॥೧೨೩॥

ಸ್ವಯಂಪ್ರಭಾಭಿರ್ನಾರೀಭಿರ್ವಿಮಾನಸ್ಥೋ ಮಹೀಯತೇ ।
ರುದ್ರದೇವರ್ಷಿಕನ್ಯಾಭಿಃ ಸತತಂ ಚಾಭಿಪೂಜ್ಯತೇ ॥೧೨೪॥

ನಾನಾವಿಧಸುರೂಪಾಭಿರ್ನಾನಾರಾಗಾಭಿರೇವ ಚ ।
ನಾನಾಮಧುರಭಾಷಾಭಿರ್ನಾನಾರತಿಭಿರೇವ ಚ ॥೧೨೫॥

ಸ್ವಯಂ ಪ್ರಭೆಯುಳ್ಳ ಸ್ತ್ರೀಯರಿಂದ ವಿಮಾನದಲ್ಲಿ ಪೂಜಿಸಲ್ಪಡುತ್ತಾನೆ. ನಾನಾ ವಿಧವಾದ ಮನೋಹರ ರೂಪಗಳನ್ನು ಹೊಂದಿದ, ನಾನಾ ರೂಪವಾದ ಲೇಪಗಳನ್ನು ಹೊಂದಿದ, ನಾನಾ ರೂಪವಾದ ಮಧುರ ಮಾತುಗಳನ್ನು ಆಡುವ, ಅನೇಕ ವಿಧವಾದ ಅಭಿರುಚಿಯನ್ನೂ ರತಿಯನ್ನೂ ಹೊಂದಿರುವ ರುದ್ರಕನ್ಯೆಯರಿಂದಲೂ, ದೇವಕನ್ಯೆಯರಿಂದಲೂ ಮತ್ತು ಋಷಿಕನ್ಯೆಯರಿಂದಲೂ ಸತತವಾಗಿ ಪೂಜಿಸಲ್ಪಡುತ್ತಾನೆ.

ವಿಮಾನೇ ನಗರಾಕಾರೇ ಸೂರ್ಯವತ್ ಸೂರ್ಯಸನ್ನಿಭೇ ।
ಪೃಷ್ಠತಃ ಸೋಮಸಂಕಾಶೇ ಉದರ್ಕೇ ಚಾಭ್ರಸನ್ನಿಭೇ ॥೧೨೬॥

ದಕ್ಷಿಣಾಯಾಂ ತು ರಕ್ತಾಭೇ ಅಧಸ್ತಾನ್ನೀಲಮಂಡಲೇ ।
ಊರ್ಧ್ವಂ ಚಿತ್ರಾಭಿಸಂಕಾಶೇ ನೈಕೋ ವಸತಿ ಪೂಜಿತಃ ॥೧೨೭॥

ಸೂರ್ಯನಿಗೆ ಸದೃಶವಾದ, ಹಿಂಭಾಗದಲ್ಲಿ ಚಂದ್ರನಿಗೆ ಸದೃಶವಾದ, ಉತ್ತರ ಭಾಗದಲ್ಲಿ ಬಿಳಿಯ ಮೋಡಗಳಿಗೆ ಸದೃಶವಾದ, ದಕ್ಷಿಣ ದಿಕ್ಕಿನಲ್ಲಿ ಕೆಂಪು ಕಾಂತಿಯನ್ನು ಹೊಂದಿದ, ಅಧೋಭಾಗದಲ್ಲಿ ನೀಲಮಂಡಲವನ್ನು ಹೊಂದಿದ, ಊರ್ಧ್ವಭಾಗದಲ್ಲಿ ವಿಚಿತ್ರವಾದ ಕಾಂತಿಯನ್ನು ಹೊಂದಿದ ನಗರಾಕಾರದ ವಿಮಾನದಲ್ಲಿ ಅನೇಕರಿಂದ ಪೂಜಿಸಲ್ಪಟ್ಟು ವಾಸ ಮಾಡುತ್ತಾನೆ.

ಯಾವದ್ವರ್ಷಸಹಸ್ರಂ ತು ಜಂಬೂದ್ವೀಪೇ ಪ್ರವರ್ಷತಿ ।
ತಾವತ್ ಸಂವತ್ಸರಾಃ ಪ್ರೋಕ್ತಾ ಬ್ರಹ್ಮಲೋಕಸ್ಯ ಧೀಮತಃ ॥೧೨೮॥

ವಿಪ್ರುಷಶ್ಚೈವ ಯಾವಂತ್ಯೋ ನಿಪತಂತಿ ನಭಸ್ತಳಾತ್ ।
ವರ್ಷಾಸು ವರ್ಷತಸ್ತಾವನ್ನಿವಸತ್ಯಮರಪ್ರಭಃ ॥೧೨೯॥

ಮಾಸೋಪವಾಸೀ ವರ್ಷೇಸ್ತು ದಶಭಿಃ ಸ್ವರ್ಗಮುತ್ತಮಮ್ ।
ಮಹರ್ಷಿತ್ವಮಥಾಸಾದ್ಯ ಸಶರೀರಗತಿರ್ಭವೇತ್ ॥೧೩೦॥

ಜಂಬೂದ್ವೀಪದಲ್ಲಿ ಸಹಸ್ರ ವರ್ಷಗಳಲ್ಲಿ ಎಷ್ಟು ಮಳೆಯು ಬೀಳುತ್ತದೆಯೋ ಅಷ್ಟು ವರ್ಷಗಳ ಕಾಲ ಮೇಧಾವಿಯಾದ ಅವನಿಗೆ ಬ್ರಹ್ಮಲೋಕದ ಪ್ರಾಪ್ತಿಯಾಗುತ್ತದೆ. ಮಳೆಗಾಲದಲ್ಲಿ ಆಕಾಶದಿಂದ ಎಷ್ಟು ಹನಿ ನೀರು ಬೀಳುತ್ತವೆಯೋ ಅಷ್ಟು ವರ್ಷಗಳ ಕಾಲ ಅವನು ದೇವತಾಕಾಂತಿಯನ್ನು ಹೊಂದಿ ಬ್ರಹ್ಮಲೋಕದಲ್ಲಿ ವಾಸಿಸುತ್ತಾನೆ. ಮಾಸೋಪವಾಸವನ್ನು ಮಾಡಿ ಒಂದು ಊಟವನ್ನು ಮಾಡುವವನು ಹತ್ತು ವರ್ಷಗಳಲ್ಲಿ ಸಶರೀರನಾಗಿ ಶ್ರೇಷ್ಠವಾದ ಸ್ವರ್ಗಕ್ಕೆ ಹೋಗಿ ಮಹರ್ಷಿತ್ವವನ್ನು ಪಡೆಯುತ್ತಾನೆ.

ಮುನಿರ್ದಾಂತೋ ಜಿತಕ್ರೋಧೋ ಜಿತಶಿಶ್ನೋದರಃ ಸದಾ ।
ಜುಹ್ವನ್ನಗ್ನೀಂಶ್ಚ ನಿಯತಃ ಸಂಧ್ಯೋಪಾಸನಸೇವಿತಾ ॥೧೩೧॥

ಬಹುಭಿರ್ನಿಯಮೈರೇವಂ ಮಾಸಾನಶ್ನಾತಿ ಯೋ ನರಃ ।
ಅಭ್ರಾವಕಾಶಶೀಲಶ್ಚ ತಸ್ಯ ಭಾನೋರಿವ ತ್ವಿಷಃ ॥೧೩೨॥

ದಿವಂ ಗತ್ವಾ ಶರೀರೇಣ ಸ್ವೇನ ರಾಜನ್ ಯಥಾಮರಃ ।
ಸ್ವರ್ಗಂ ಪುಣ್ಯಂ ಯಥಾಕಾಮಮುಪಭುಂಕ್ತೇ ಯಥಾವಿಧಿ ॥೧೩೩॥

ಇಂದ್ರಿಯನಿಗ್ರಹವುಳ್ಳವನಾಗಿ, ಕ್ರೋಧವನ್ನು ಜಯಿಸಿ, ಶಿಶ್ನೋದರಗಳನ್ನು ಜಯಿಸಿ, ಮುನಿಯಾಗಿ, ಅಗ್ನಿಹೋತ್ರವನ್ನು ಮಾಡುತ್ತಾ, ನಿಯಮದಿಂದ ಸಂಧ್ಯೋಪಾಸನೆಯನ್ನು ಮಾಡುವವನು ಹೀಗೆ ಅನೇಕ ನಿಯಮಗಳಿಂದ ತಿಂಗಳುಗಳನ್ನು ಕಳೆಯುವವನಿಗೆ ಅಭ್ರ ಮತ್ತು ಆಕಾಶದ ಶೀಲವೂ, ಸೂರ್ಯನ ಕಾಂತಿಯೂ ಉಂಟಾಗುತ್ತದೆ. ಎಲೈ ರಾಜನೇ, ದೇವತೆಗಳಂತೆ ಸಶರೀರವಾಗಿ ಸ್ವರ್ಗಕ್ಕೆ ಹೋಗಿ ತನ್ನ ಮನಸ್ಸಿಗೆ ಬೇಕಾಗುವಂತಹ ವಸ್ತುಗಳನ್ನು ಶಾಸ್ತ್ರವಿಧಿಗೆ ಅನುಸಾರವಾಗಿ ಭೋಗಿಸುತ್ತಾನೆ.

ಏಷ ತೇ ಭರತಶ್ರೇಷ್ಠ ಯಜ್ಞಾನಾಂ ವಿಧಿರುತ್ತಮಃ ।
ವ್ಯಾಖ್ಯಾತೋ ಹ್ಯಾನುಪೂರ್ವ್ಯೇಣ ಉಪವಾಸಫಲಾತ್ಮಕಃ ॥೧೩೪॥

ಎಲೈ ಭರತಶ್ರೇಷ್ಠನೇ, ನಿನಗೆ ಯಜ್ಞಗಳ, ಶ್ರೇಷ್ಠವಾದ ಈ ವಿಧಿಯನ್ನೂ ಮತ್ತು ಕ್ರಮವಾಗಿ ಉಪವಾಸದ ಫಲಗಳನ್ನೂ ಹೇಳಿದ್ದೇನೆ.

ದರಿದ್ರೈರ್ಮನುಜೈಃ ಪಾರ್ಥ ಪ್ರಾಪ್ಯಂ ಯಜ್ಞಫಲಂ ಯಥಾ ।
ಉಪವಾಸಮಿಮಂ ಕೃತ್ವಾ ಗಚ್ಛೇಚ್ಚ ಪರಮಾಂ ಗತಿಮ್ ।
ದೇವದ್ವಿಜಾತಿಪೂಜಾಯಾಂ ರತೋ ಭರತಸತ್ತಮ ॥೧೩೫॥

ಎಲೈ ಪಾರ್ಥನೇ, ಭರತಸತ್ತಮನೇ, ದರಿದ್ರರಾದ ಮನುಷ್ಯರೂ ಸಹ ದೇವ-ಬ್ರಾಹ್ಮಣರ ಪೂಜೆಯಲ್ಲಿ ರತರಾಗಿ, ಈ ಉಪವಾಸವನ್ನು ಮಾಡಿ ಯಜ್ಞಫಲವನ್ನು ಹೊಂದಿ ಶ್ರೇಷ್ಠವಾದ ಗತಿಯನ್ನು ಹೊಂದಬಹುದು.

ಉಪವಾಸವಿಧಿಸ್ತ್ವೇಷ ವಿಸ್ತರೇಣ ಪ್ರಕೀರ್ತಿತಃ ।
ನಿಯತೇಷ್ವಪ್ರಮತ್ತೇಷು ಶೌಚವತ್ಸು ಮಹತ್ಸು ಚ ॥೧೩೬॥

ದಂಭದ್ರೋಹನಿವೃತ್ತೇಷು ಕೃತಬುದ್ಧಿಷು ಭಾರತ ।
ಅಚಲೇಷ್ವಪ್ರಕಂಪೇಷು ಮಾ ತೇ ಭೂದತ್ರ ಸಂಶಯಃ ॥೧೩೭॥

ವಿಸ್ತಾರವಾಗಿ ನಾನು ಹೇಳಿದ ಈ ಉಪವಾಸದ ವಿಧಿಯನ್ನು ನಿಯಮಬದ್ಧರಾದ, ಜಾಗರೂಕರಾದ, ಶುಚಿಗಳಾದ, ದಂಭ-ದ್ರೋಹ ರಹಿತರಾದ, ಕೃತಬುದ್ಧಿಯುಳ್ಳ, ಸ್ಥಿರರಾದ, ಧರ್ಮಮಾರ್ಗದಿಂದ ಅಲುಗಾಡದಿರುವ ಜನರಿಗೆ ಮಾತ್ರ ಹೇಳಬೇಕು. ಎಲೈ ಭಾರತನೇ, ಈ ವಿಷಯದಲ್ಲಿ ನೀನು ಸಂಶಯವನ್ನು ಹೊಂದಬೇಡ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಷಷ್ಟ್ಯುತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಅರವತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಅರವತ್ತೊಂದನೆಯ ಅಧ್ಯಾಯ

ಶೌಚಪ್ರಕಾರಗಳು

ಯುಧಿಷ್ಠಿರಃ

ಯದ್ವರಂ ಸರ್ವತೀರ್ಥಾನಾಂ ತದ್ ಬ್ರವೀಹಿ ಪಿತಾಮಹ ।
ಯತ್ರ ವೈ ಪರಮಂ ಶೌಚಂ ತನ್ಮೇ ವ್ಯಾಖ್ಯಾತುಮರ್ಹಸಿ ॥೧॥

ಯುಧಿಷ್ಠಿರ– ಎಲೈ ಪಿತಾಮಹನೇ, ಎಲ್ಲ ತೀರ್ಥಗಳಲ್ಲಿ ಯಾವುದು ಶ್ರೇಷ್ಠವೆಂದು ನನಗೆ ಹೇಳಬೇಕು. ಹಾಗೆಯೇ ಶೌಚಗಳಲ್ಲಿ ಶ್ರೇಷ್ಠವಾದ ಶೌಚವು ಯಾವುದೆಂದೂ ನನಗೆ ಹೇಳು.

ಭೀಷ್ಮಃ

ಸರ್ವಾಣಿ ಖಲು ತೀರ್ಥಾನಿ ಗುಣವಂತಿ ಮನೀಷಿಣಾಮ್ ।
ಯತ್ತು ತೀರ್ಥಂ ಚ ಶೌಚಂ ಚ ತನ್ಮೇ ಶೃಣು ಸಮಾಹಿತಃ ॥೨॥

ಭೀಷ್ಮ– ವಿವೇಕಿಗಳಾದವರಿಗೆ ಎಲ್ಲ ತೀರ್ಥಗಳೂ ಶ್ರೇಷ್ಠವಾದವುಗಳೇ. ಯಾವುದು ಶ್ರೇಷ್ಠವಾದ ತೀರ್ಥ, ಯಾವುದು ಪರಮ ಶೌಚ ಎಂಬುದನ್ನು ಸಮಾಧಾನದಿಂದ ನನ್ನಿಂದ ಕೇಳು.

ಅಗಾಧೇ ವಿಮಲೇ ಶುದ್ಧೇ ಸತ್ಯತೋಯೇ ಧೃತಿಹ್ರದೇ ।
ಸ್ನಾತವ್ಯಂ ಮಾನಸೇ ತೀರ್ಥೇ ಸತ್ತ್ವಮಾಲಂಬ್ಯ ಶಾಶ್ವತಮ್ ॥೩॥

ಅಗಾಧವಾದ, ಪರಿಶುದ್ಧವಾದ, ಸತ್ಯವೆಂಬ ಜಲವನ್ನೂ, ಧೈರ್ಯವೆಂಬ ಮಡುವನ್ನೂ ಹೊಂದಿದ ಮಾನಸ ತೀರ್ಥದಲ್ಲಿ (ಮನಸ್ಸೆಂಬ ತೀರ್ಥದಲ್ಲಿ) ಸತ್ವವನ್ನು ಆಶ್ರಯಿಸಿ ಯಾವಾಗಲೂ ಸ್ನಾನ ಮಾಡಬೇಕು.

ತೀರ್ಥಶೌಚಮನರ್ಥಿತ್ವಂ ಮಾರ್ದವಂ ಸತ್ಯಮಾರ್ಜವಮ್ ।
ಅಹಿಂಸಾ ಸರ್ವಭೂತಾನಾಮಾನೃಶಂಸ್ಯಂ ದಮಃ ಶಮಃ ॥೪॥

ತೀರ್ಥಗಳಲ್ಲಿ ಸ್ನಾನ, ಯಾರನ್ನೂ ಬೇಡದಿರುವುದು, ಮೃದುತನ, ಸತ್ಯವಚನ, ಆರ್ಜವ, ಅಹಿಂಸೆ, ಸರ್ವಪ್ರಾಣಿಗಳಲ್ಲಿ ದಯೆ, ಇಂದ್ರಿಯನಿಗ್ರಹ, ಭಗವನ್ನಿಷ್ಠೆ - ಇವು ಶ್ರೇಷ್ಠವಾದ ಶೌಚಗಳು.

ನಿರ್ಮಮಾ ನಿರಹಂಕಾರಾ ನಿರ್ದ್ವಂದ್ವಾ ನಿಷ್ಪರಿಗ್ರಹಾಃ ।
ಶುಚಯಸ್ತೀರ್ಥಭೂತಾಸ್ತೇ ಯೇ ಭೈಕ್ಷಮುಪಭುಂಜತೇ ॥೫॥

ಅಹಂಕಾರ-ಮಮಕಾರಗಳನ್ನು ತ್ಯಜಿಸಿ, ಶೀತೋಷ್ಣಾದಿ ದ್ವಂದ್ವಗಳನ್ನು ಮೀರಿ, ಪರಿಗ್ರಹವನ್ನು ಮಾಡದೆ, ಭೈಕ್ಷವೃತ್ತಿಯಿಂದ ಜೀವಿಸಿ ಶುಚಿಯಾಗಿರುವವರು ಅವರೇ ಸ್ವತಃ ತೀರ್ಥದಂತೆ ಇರುವವರು.

ತತ್ತ್ವವಿತ್ತ್ವಮನಹಂಬುದ್ಧಿಸ್ತೀರ್ಥಂ ಪರಮಮುಚ್ಯತೇ ।
ನಾರಾಯಣೇऽಥ ರುದ್ರೇ ವಾ ಭಕ್ತಿಸ್ತೀರ್ಥಂ ಪರಂ ಮತಮ್ ।
ಶೌಚಲಕ್ಷಣಮೇತತ್ ತೇ ಸರ್ವತ್ರೈವಾನ್ವವೇಕ್ಷಣಮ್ ॥೬॥

ತತ್ತ್ವಜ್ಞಾನ ಮತ್ತು ನಿರಹಂಕಾರಗಳು ಶ್ರೇಷ್ಠವಾದ ತೀರ್ಥಗಳೆಂದು ಹೇಳಲ್ಪಡುತ್ತವೆ. ನಾರಾಯಣನಲ್ಲಿ ಅಥವಾ ರುದ್ರನಲ್ಲಿ ಭಕ್ತಿಯು ಶ್ರೇಷ್ಠವಾದ ತೀರ್ಥ. ಈ ಶೌಚ ಲಕ್ಷಣವನ್ನು ಪಾದವಿನ್ಯಾಸ, ಜಲಪಾನ ಮೊದಲಾದ ಎಲ್ಲ ಕಡೆಗಳಲ್ಲಿಯೂ ಗಮನಿಸಬೇಕು (ಲಕ್ಷಾಲಂಕಾರ).

ರಜಸ್ತಮಃಸತ್ತ್ವಮಥೋ ಯೇಷಾಂ ನಿರ್ಧೌತಮಾತ್ಮನಃ ।
ಶೌಚಾಶೌಚೇ ನ ತೇ ಸಕ್ತಾಃ ಸ್ವಕಾರ್ಯಪರಿಮಾರ್ಗಿಣಃ ॥೭॥

ಯಾರು ತಮ್ಮ ಮನಸ್ಸಿನಿಂದ ರಾಜಸ, ತಾಮಸ, ಸಾತ್ವಿಕ ಭಾವಗಳನ್ನು ತೊಡೆದುಕೊಂಡಿರುತ್ತಾರೆಯೋ ಮತ್ತು ತಮ್ಮ ಪರಮಕಾರ್ಯವಾದ ಗುರಿಯನ್ನು ಅನ್ವೇಷಣೆ ಮಾಡುತ್ತಾರೆಯೋ ಅವರಿಗೆ ಶೌಚ-ಅಶೌಚಗಳಲ್ಲಿ ಆಸಕ್ತಿ ಇರುವುದಿಲ್ಲ.

ಸರ್ವತ್ಯಾಗೇಷ್ವಭಿರತಾಃ ಸರ್ವಜ್ಞಾಃ ಸರ್ವದರ್ಶಿನಃ ।
ಶೌಚೇನ ವೃತ್ತಶೌಚಾರ್ಥಾಸ್ತೇ ತೀರ್ಥಾಃ ಶುಚಯಶ್ಚ ತೇ ॥೮॥

ಸರ್ವತ್ಯಾಗಿಗಳೂ, ಸರ್ವಜ್ಞರೂ, ಸರ್ವದರ್ಶಿಗಳೂ ತಮ್ಮ ಶೌಚದ ಫಲವನ್ನು ಪಡೆದವರೂ ಆದ ಅವರೇ ತೀರ್ಥರಾದವರು ಮತ್ತು ಶುಚಿಗಳಾದವರು.

ನೋದಕಕ್ಲಿನ್ನಗಾತ್ರಸ್ತು ಸ್ನಾತ ಇತ್ಯಭಿಧೀಯತೇ ।
ಸ ಸ್ನಾತೋ ಯೋ ದಮಸ್ನಾತಃ ಸ ಬಾಹ್ಯಾಭ್ಯಂತರಃ ಶುಚಿಃ ॥೯॥

ನೀರಿನಲ್ಲಿ ಮುಳುಗಿದವನನ್ನು ಸ್ನಾನ ಮಾಡಿದವನು ಎಂದು ಹೇಳುವುದಿಲ್ಲ. ಯಾವನು ಇಂದ್ರಿಯನಿಗ್ರಹವನ್ನು ಹೊಂದಿ ನೀರಿನಲ್ಲಿ ಸ್ನಾನ ಮಾಡುತ್ತಾನೆಯೋ ಅವನೇ ಒಳಗೂ ಮತ್ತು ಹೊರಗೂ ಶುಚಿಯಾದವನು.

ಅತೀತೇಷ್ವನಪೇಕ್ಷಾ ಯೇ ಪ್ರಾಪ್ತೇಷ್ವರ್ಥೇಷು ನಿರ್ಮಮಾಃ ।
ಶೌಚಮೇವ ಪರಂ ತೇಷಾಂ ಯೇಷಾಂ ನೋತ್ಪದ್ಯತೇ ಸ್ಪೃಹಾ ॥೧೦॥

ಯಾರಿಗೆ ಕಳೆದುಹೋದ ವಸ್ತುವಿನಲ್ಲಿ ಅಪೇಕ್ಷೆ ಇಲ್ಲವೋ, ಪ್ರಾಪ್ತವಾದ ವಸ್ತುಗಳಲ್ಲಿ ಮಮಕಾರವಿಲ್ಲವೋ, ಯಾರಿಗೆ ಆಸೆಯೇ ಉಂಟಾಗುವುದಿಲ್ಲವೋ ಅಂತಹವರಿಗೆ ಪರಮ ಶೌಚವೇ ಉಂಟಾಗುತ್ತದೆ.

ಪ್ರಜ್ಞಾನಂ ಶೌಚಮೇವೇಹ ಶರೀರಸ್ಯ ವಿಶೇಷತಃ ।
ತಥಾ ನಿಷ್ಕಿಂಚನತ್ವಂ ಚ ಮನಸಶ್ಚ ಪ್ರಸನ್ನತಾ ॥೧೧॥

ಶರೀರಕ್ಕೆ ತತ್ತ್ವಜ್ಞಾನವೇ ಶೌಚವಾದುದು. ಹಾಗೆಯೇ ದಾರಿದ್ರ್ಯ ಮತ್ತು ಮನಸ್ಸಿನ ಪ್ರಸನ್ನತೆಗಳು ಶೌಚರೂಪವಾದವುಗಳು.

ವೃತ್ತಶೌಚಂ ಮನಃಶೌಚಂ ತೀರ್ಥಶೌಚಂ ಪರಂ ಹಿ ತತ್ ।
ಜ್ಞಾನೋತ್ಪನ್ನಂ ಚ ಯಚ್ಛೌಚಂ ತಚ್ಛೌಚಂ ಪರಮಂ ಮತಮ್ ॥೧೨॥

ನಡತೆಯಿಂದ ಉಂಟಾಗುವ ಶುದ್ಧಿ, ಮನಸ್ಸಿನ ಶುದ್ಧಿ ಮತ್ತು ತೀರ್ಥಸ್ನಾನದಿಂದ ಉಂಟಾಗುವ ಶುದ್ಧಿ ಬೇರೆ ರೀತಿಯಾದುದು. ಜ್ಞಾನದಿಂದ ಉಂಟಾಗುವ ಯಾವ ಶೌಚವಿದೆಯೋ ಅದೇ ಶ್ರೇಷ್ಠವಾದ ಶೌಚವೆಂದು ಹೇಳಲ್ಪಡುತ್ತದೆ.

ಮನಸಾऽಥ ಪ್ರದೀಪೇನ ಬ್ರಹ್ಮಜ್ಞಾನಜಲೇನ ಚ ।
ಸ್ನಾತಾ ಯೇ ಮಾನಸೇ ತೀರ್ಥೇ ತಜ್ಜ್ಞಾಃ ಕ್ಷೇತ್ರಜ್ಞದರ್ಶಿನಃ ॥೧೩॥

ಮನಸ್ಸು ಎಂಬ ದೀಪವನ್ನು ಹಿಡಿದು ಬ್ರಹ್ಮಜ್ಞಾನವೆಂಬ ಜಲದಲ್ಲಿ ಮಾನಸ ತೀರ್ಥದಲ್ಲಿ ಯಾರು ಸ್ನಾನವನ್ನು ಮಾಡುತ್ತಾರೆಯೋ ಅವರೇ ಶೌಚದ ಮರ್ಮವನ್ನು ತಿಳಿದವರು ಮತ್ತು ಕ್ಷೇತ್ರಜ್ಞನಾದ ಪರಮಾತ್ಮನನ್ನು ನೋಡುವವರು.

ಸಮಾರೋಪಿತಶೌಚಸ್ತು ನಿತ್ಯಂ ಭಾವಸಮನ್ವಿತಃ ।
ಕೇವಲಂ ಗುಣಸಂಪನ್ನಃ ಶುಚಿರೇವ ನರಃ ಸದಾ ॥೧೪॥

ನಿತ್ಯವೂ ಶೌಚವನ್ನು ಮಾಡಿಕೊಂಡು, ಭಕ್ತಿಯಿಂದ ಕೂಡಿದ ಗುಣಸಂಪನ್ನನಾಗಿರುವ ಮನುಷ್ಯನು ಯಾವಾಗಲೂ ಶುಚಿಯೇ.

ಶರೀರಸ್ಥಾನಿ ತೀರ್ಥಾನಿ ಪ್ರೋಕ್ತಾನ್ಯೇತಾನಿ ಭಾರತ ।
ಪೃಥಿವ್ಯಾಂ ಯಾನಿ ತೀರ್ಥಾನಿ ಪುಣ್ಯಾನಿ ಶೃಣು ತಾನ್ಯಪಿ ॥೧೫॥

ಎಲೈ ಭಾರತನೇ, ಶರೀರದಲ್ಲಿರುವ ಈ ತೀರ್ಥವನ್ನು ಹೇಳಿದೆ. ಪೃಥಿವಿಯಲ್ಲಿರುವ ಪುಣ್ಯತೀರ್ಥಗಳನ್ನು ಕೇಳುವವನಾಗು.

ಯಥಾ ಶರೀರಸ್ಯೋದ್ದೇಶಾಃ ಶುಚಯಃ ಪರಿನಿರ್ಮಿತಾಃ ।
ತಥಾ ಪೃಥಿವ್ಯಾ ಭಾಗಾಶ್ಚ ಪುಣ್ಯಾನಿ ಸಲಿಲಾನಿ ಚ ॥೧೬॥

ಶರೀರದ ಕೆಲವು ಭಾಗಗಳು ಹೇಗೆ ಶುಚಿ ಎಂದು ಹೇಳಲ್ಪಡುತ್ತವೆಯೋ ಹಾಗೆಯೇ ಪೃಥ್ವಿಯ ಕೆಲವು ಭಾಗಗಳು ಮತ್ತು ಕೆಲವು ಜಲಗಳು ಶುಚಿ ಎಂದು ಹೇಳಲ್ಪಡುತ್ತವೆ.

ಪ್ರಾರ್ಥನಾಚ್ಚೈವ ತೀರ್ಥಸ್ಯ ಸ್ನಾನಾಚ್ಚ ಪಿತೃತರ್ಪಣಾತ್ ।
ಧುನಂತಿ ಪಾಪಂ ತೀರ್ಥೇಷು ತೇ ಪ್ರಯಾಂತಿ ಸುಖಂ ದಿವಮ್ ॥೧೭॥

ತೀರ್ಥವನ್ನು ಪ್ರಾರ್ಥನೆ ಮಾಡುವುದರಿಂದ (ಸ್ತೋತ್ರ ಮಾಡುವುದರಿಂದ), ತೀರ್ಥದಲ್ಲಿ ಸ್ನಾನವನ್ನು ಮಾಡುವುದರಿಂದ ಮತ್ತು ತೀರ್ಥಗಳಲ್ಲಿ ಪಿತೃತರ್ಪಣ ಕೊಡುವುದರಿಂದ, ತೀರ್ಥಯಾತ್ರೆಯನ್ನು ಮಾಡುವುದರಿಂದ ತಮ್ಮ ಪಾಪಗಳನ್ನು ಕಳೆದುಕೊಂಡು ಸುಖವಾಗಿ ಸ್ವರ್ಗಕ್ಕೆ ಹೋಗುತ್ತಾರೆ.

ಪರಿಗ್ರಹಾಚ್ಚ ಸಾಧೂನಾಂ ಪೃಥಿವ್ಯಾಶ್ಚೈವ ತೇಜಸಾ ।
ಅತೀವ ಪುಣ್ಯಾಸ್ತೇ ಭಾಗಾಃ ಸಲಿಲಸ್ಯ ಚ ತೇಜಸಾ ॥೧೮॥

ಭೂಮಿಯ ಅಂತಹ ಭಾಗಗಳು ಸಜ್ಜನರು ಸ್ವೀಕರಿಸಿರುವುದರಿಂದಲೂ, ಪೃಥಿವಿಯ ತೇಜಸ್ಸಿನಿಂದಲೂ ಮತ್ತು ಅಲ್ಲಿರುವ ಜಲದ ತೇಜಸ್ಸಿನಿಂದಲೂ ಅತ್ಯಂತ ಪುಣ್ಯ ಭಾಗಗಳಾಗಿವೆ.

ಮನಸಶ್ಚ ಪೃಥಿವ್ಯಾಶ್ಚ ಪುಣ್ಯತೀರ್ಥಾಸ್ತಥಾಪರೇ ।
ಉಭಯೋರೇವ ಯಃ ಸ್ನಾತಃ ಸ ಸಿದ್ಧಿಂ ಶೀಘ್ರಮಾಪ್ನುಯಾತ್ ॥೧೯॥

ಮನಸ್ಸಿನ ಪುಣ್ಯತೀರ್ಥಗಳು ಮತ್ತು ಭೂಮಿಯ ಪುಣ್ಯತೀರ್ಥಗಳು ಬೇರೆ ಬೇರೆಯಾಗಿವೆ. ಯಾವನು ಎರಡರಲ್ಲಿಯೂ ಸ್ನಾನ ಮಾಡುತ್ತಾನೆಯೋ ಅವನು ಶೀಘ್ರವಾಗಿ ಸಿದ್ಧಿಯನ್ನು ಹೊಂದುತ್ತಾನೆ.

ಯಥಾ ಬಲಂ ಕ್ರಿಯಾಹೀನಂ ಕ್ರಿಯಾ ವಾ ಬಲವರ್ಜಿತಾ ।
ನೇಹ ಸಾಧಯತೇ ಕಾರ್ಯಂ ಸಮಾಯುಕ್ತಸ್ತು ಸಿದ್ಧ್ಯತಿ ॥೨೦॥

ಏವಂ ಶರೀರಶೌಚೇನ ತೀರ್ಥಶೌಚೇನ ಚಾನ್ವಿತಃ ।
ತತಃ ಸಿದ್ಧಿಮವಾಪ್ನೋತಿ ದ್ವಿವಿಧಾ ಶೌಚಲಕ್ಷಣಾ ॥೨೧॥

ಕ್ರಿಯಾಹೀನವಾದ ಬಲವಾಗಲೀ, ಬಲವಿಲ್ಲದ ಕ್ರಿಯೆಯಾಗಲೀ ಹೇಗೆ ಕಾರ್ಯವನ್ನು ಸಾಧಿಸುವುದಿಲ್ಲವೋ, ಎರಡೂ ಸೇರಿದರೆ ಹೇಗೆ ಕಾರ್ಯಸಿದ್ಧಿ ಆಗುತ್ತದೆಯೋ ಅದರಂತೆ ಶರೀರ ಶೌಚ ಮತ್ತು ತೀರ್ಥಶೌಚ ಇವೆರಡರಿಂದ ಕೂಡಿದ ಮನುಷ್ಯನು ಸಿದ್ಧಿಯನ್ನು ಹೊಂದುತ್ತಾನೆ. ಹೀಗೆ ಶೌಚಸ್ವರೂಪವು ಎರಡು ವಿಧವಾಗಿದೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ದ್ವಿವಿಧಶೌಚಕಥನಂ ನಾಮ
ಏಕಷಷ್ಟ್ಯುತ್ತರಶತತಮೋಽಧ್ಯಾಯಃ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಅರವತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಅರವತ್ತೆರಡನೆಯ ಅಧ್ಯಾಯ

ದುಷ್ಕರ್ಮಫಲವಾದ ನೀಚಯೋನಿಗಳು

ಯುಧಿಷ್ಠಿರಃ

ಪಿತಾಮಹ ಮಹಾಬಾಹೋ ಸರ್ವಶಾಸ್ತ್ರವಿದಾಂವರ ।
ಶ್ರೋತುಮಿಚ್ಛಾಮಿ ಮರ್ತ್ಯಾನಾಂ ಸಂಸಾರವಿಧಿಮುತ್ತಮಮ್ ॥೧॥

ಯುಧಿಷ್ಠಿರ– ಎಲೈ ಮಹಾಬಾಹುವೇ, ಸರ್ವಶಾಸ್ತ್ರಜ್ಞರಲ್ಲಿ ಶ್ರೇಷ್ಠನೇ, ಪಿತಾಮಹನೇ, ಮನುಷ್ಯರ ಸಂಸಾರವಿಧಿಗಳನ್ನು ಕೇಳಲು ಬಯಸುತ್ತೇನೆ.

ಕೇನ ವೃತ್ತೇನ ರಾಜೇಂದ್ರ ವರ್ತಮಾನಾ ನರಾ ಭುವಿ ।
ಪ್ರಾಪ್ನುವಂತ್ಯುತ್ತಮಂ ಸ್ವರ್ಗಂ ಕಥಂ ಚ ನರಕಂ ನೃಪ ॥೨॥

ಎಲೈ ರಾಜೇಂದ್ರನೇ, ಭೂಲೋಕದಲ್ಲಿ ಎಂತಹ ನಡತೆಯಿಂದ ಕೂಡಿದ ಜನರು ಉತ್ತಮವಾದ ಸ್ವರ್ಗವನ್ನು ಪಡೆಯುತ್ತಾರೆ? ಎಲೈ ರಾಜನೇ, ನರಕವನ್ನು ಹೇಗೆ ಪಡೆಯುತ್ತಾರೆ?

ಮೃತಂ ಶರೀರಮುತ್ಸೃಜ್ಯ ಕಾಷ್ಠಲೋಷ್ಟಸಮಂ ಜನಾಃ ।
ಪ್ರಯಾಂತ್ಯಮುಂ ಲೋಕಮಿತಃ ಕೋ ವೈ ತಾನನುಗಚ್ಛತಿ ॥೩॥

ಕಟ್ಟಿಗೆ ಮತ್ತು ಮಣ್ಣುಹೆಂಟೆಗೆ ಸಮಾನವಾದ ಮೃತ ಶರೀರವನ್ನು ತ್ಯಜಿಸಿ ಜನರು ಇಲ್ಲಿಂದ ಪರಲೋಕಕ್ಕೆ ಹೋಗುತ್ತಾರೆ. ಅವರನ್ನು ಯಾರು ಅನುಸರಿಸುತ್ತಾರೆ?

ಭೀಷ್ಮಃ

ಅಸಾವಾಯಾತಿ ಭಗವಾನ್ ಬೃಹಸ್ಪತಿರುದಾರಧೀಃ ।
ಪೃಚ್ಛೈನಂ ಸುಮಹಾಭಾಗಮೇತದ್ ಗುಹ್ಯಂ ಸನಾತನಮ್ ॥೪॥

ಭೀಷ್ಮ– ಪೂಜ್ಯರೂ, ಮೇಧಾವಿಗಳೂ ಆದ ಬೃಹಸ್ಪತಿಗಳು ಇಲ್ಲಿಯೇ ಬರುತ್ತಿದ್ದಾರೆ. ಗುಹ್ಯವೂ, ಸನಾತನವೂ ಆದ ಈ ವಿಷಯವನ್ನು ಕುರಿತು ಆ ಮಹಾನುಭಾವರನ್ನೇ ಪ್ರಶ್ನೆಯನ್ನು ಮಾಡು.

ನೈತದನ್ಯೇನ ಶಕ್ಯಂ ಹಿ ವಕ್ತುಂ ಕೇನಚಿದದ್ಯ ವೈ ।
ವಕ್ತಾ ಬೃಹಸ್ಪತಿಸಮೋ ನ ಹ್ಯನ್ಯೋ ವಿದ್ಯತೇ ಕ್ವಚಿತ್ ॥೫॥

ನಿನ್ನ ಪ್ರಶ್ನೆಗೆ ಉತ್ತರವನ್ನು ಈ ದಿನ ಬೇರೆ ಯಾರೂ ಹೇಳಲು ಸಾಧ್ಯವಿಲ್ಲ. ಬೃಹಸ್ಪತಿಗೆ ಸಮರಾದ ಪ್ರತ್ಯುತ್ತರವನ್ನು ಕೊಡುವವನು ಬೇರೆ ಯಾವನೂ ಇಲ್ಲ.

ವೈಶಂಪಾಯನಃ

ತಯೋಃ ಸಂವದತೋರೇವಂ ಪಾರ್ಥಗಾಂಗೇಯಯೋಸ್ತದಾ ।
ಆಜಗಾಮ ವಿಶುದ್ಧಾತ್ಮಾ ಭಗವಾನ್ ಸ ಬೃಹಸ್ಪತಿಃ ॥೬॥

ವೈಶಂಪಾಯನ– ಯುಧಿಷ್ಠಿರ ಮತ್ತು ಭೀಷ್ಮರು ಹೀಗೆ ಮಾತನಾಡುತ್ತಿರುವಾಗ ವಿಶುದ್ಧಾತ್ಮರಾದ, ಪೂಜ್ಯರಾದ ಬೃಹಸ್ಪತಿಗಳು ಅಲ್ಲಿಗೆ ಬಂದರು.

ತತೋ ರಾಜಾ ಸಮುತ್ಥಾಯ ಧೃತರಾಷ್ಟ್ರಪುರೋಗಮಃ ।
ಪೂಜಾಮನುಪಮಾಂ ಚಕ್ರೇ ಸರ್ವೇ ತೇ ಚ ಸಭಾಸದಃ ॥೭॥

ಆಗ ರಾಜನಾದ ಯುಧಿಷ್ಠಿರನು ಧೃತರಾಷ್ಟ್ರನನ್ನು ಮುಂದೆ ಮಾಡಿಕೊಂಡು ಎದ್ದು ಅವರಿಗೆ ಅಸದೃಶವಾದ ಪೂಜೆಯನ್ನು ಸಲ್ಲಿಸಿದನು. ಆ ಸಭಾಸದರೆಲ್ಲರೂ ಹಾಗೆಯೇ ಮಾಡಿದರು.

ತತೋ ಧರ್ಮಸುತೋ ರಾಜಾ ಭಗವಂತಂ ಬೃಹಸ್ಪತಿಮ್ ।
ಉಪಗಮ್ಯ ಯಥಾನ್ಯಾಯಂ ಪ್ರಶ್ನಂ ಪಪ್ರಚ್ಛ ಸುವ್ರತಃ ॥೮॥

ಅನಂತರ ರಾಜನೂ ಸುವ್ರತನೂ ಆದ ಯುಧಿಷ್ಠಿರನು ಪೂಜ್ಯರಾದ ಬೃಹಸ್ಪತಿಗಳನ್ನು ಶಾಸ್ತ್ರೋಕ್ತವಾಗಿ ಸಮೀಪಿಸಿ ಪ್ರಶ್ನೆಯನ್ನು ಕೇಳಿದನು.

ಯುಧಿಷ್ಠಿರಃ

ಭಗವನ್ ಸರ್ವಧರ್ಮಜ್ಞ ಸರ್ವಶಾಸ್ತ್ರವಿಶಾರದ ।
ಮರ್ತ್ಯಸ್ಯ ಕಃ ಸಹಾಯೋ ವೈ ಪಿತಾ ಮಾತಾ ಸುತೋ ಗುರುಃ ॥೯॥

ಮೃತಂ ಶರೀರಮುತ್ಸೃಜ್ಯ ಕಾಷ್ಠಲೋಷ್ಟಸಮಂ ಜನಾಃ ।
ಗಚ್ಛಂತ್ಯಮುಂ ಚ ಲೋಕಂ ಚ ಕ ಏನಮನುಗಚ್ಛತಿ ॥೧೦॥

ಯುಧಿಷ್ಠಿರ– ಪೂಜ್ಯರೇ, ಸರ್ವಧರ್ಮಜ್ಞರೇ, ಸರ್ವಶಾಸ್ತ್ರವಿಶಾರದರೇ, ಮರಣಶೀಲನಾದ ಮನುಷ್ಯನಿಗೆ ತಂದೆಯೋ, ತಾಯಿಯೋ, ಪುತ್ರನೋ, ಗುರುವೋ ಯಾರು ಸಹಾಯಕರಾಗುತ್ತಾರೆ? ಜೀವರು ಕಟ್ಟಿಗೆ ಮತ್ತು ಮಣ್ಣಿಗೆ ಸಮಾನವಾದ ಮೃತಶರೀರವನ್ನು ಬಿಟ್ಟು ಪರಲೋಕಕ್ಕೆ ಹೋಗುತ್ತಾರೆ. ಆಗ ಯಾವುದು ಅವನನ್ನು ಹಿಂಬಾಲಿಸುತ್ತದೆ?

ಬೃಹಸ್ಪತಿಃ

ಏಕಃ ಪ್ರಸೂತೋ ರಾಜೇಂದ್ರ ಏಕ ಏವ ಪ್ರಮೀಯತೇ ।
ಏಕಸ್ತರತಿ ದುರ್ಗಾಣಿ ಗಚ್ಛತ್ಯೇಕಶ್ಚ ದುರ್ಗತಿಮ್ ॥೧೧॥

ಬೃಹಸ್ಪತಿ– ರಾಜನೇ, ಒಬ್ಬನೇ ಹುಟ್ಟುತ್ತಾನೆ, ಒಬ್ಬನೇ ಸಾಯುತ್ತಾನೆ, ಒಬ್ಬನೇ ಕ್ಲೇಶವನ್ನು ಅನುಭವಿಸುತ್ತಾನೆ, ಒಬ್ಬನೇ ಕ್ಲೇಶಗಳನ್ನು ದಾಟುತ್ತಾನೆ.

ಅಸಹಾಯಃ ಪಿತಾ ಮಾತಾ ತಥಾ ಭ್ರಾತಾ ಸುತೋ ಗುರುಃ ।
ಜ್ಞಾತಿಸಂಬಂಧಿವರ್ಗಶ್ಚ ಮಿತ್ರವರ್ಗಸ್ತಥೈವ ಚ ॥೧೨॥

ತಂದೆ, ತಾಯಿ, ಸಹೋದರ, ಪುತ್ರ, ಗುರು, ಜ್ಞಾತಿ, ದಾಯಾದಿಗಳು, ಸಂಬಂಧಿಗಳು, ಮಿತ್ರರು - ಯಾರೂ ಸಹಾಯಕರಾಗುವುದಿಲ್ಲ.

ಮೃತಂ ಶರೀರಮುತ್ಸೃಜ್ಯ ಕಾಷ್ಠಲೋಷ್ಟಸಮಂ ಜನಾಃ ।
ಮುಹೂರ್ತಮುಪತಿಷ್ಠಂತಿ ತತೋ ಯಾಂತಿ ಪರಾಙ್ಮುಖಾಃ ।
ತೈಃ ಶರೀರಿಣಮುತ್ಸೃಷ್ಟಂ ಧರ್ಮ ಏಕೋऽನುಗಚ್ಛತಿ ॥೧೩॥

ಜನರು ಕಾಷ್ಠಲೋಷ್ಟಕ್ಕೆ (ಕಟ್ಟಿಗೆ-ಮಣ್ಣಿನ ಹೆಂಟೆ) ಸಮಾನವಾದ ಮೃತಶರೀರದ ಬಳಿ ಒಂದು ಮುಹೂರ್ತ ಇದ್ದು ರೋದನವನ್ನು ಮಾಡಿ, ಮೃತಶರೀರವನ್ನು ಬಿಟ್ಟು, ವಿಮುಖರಾಗಿ ಹೊರಟು ಹೋಗುತ್ತಾರೆ. ಅವರು ತ್ಯಜಿಸಿದ ಶರೀರದಿ (ಹೊರಟ) ಜೀವನ ಧರ್ಮ ಒಂದೇ ಹಿಂಬಾಲಿಸುತ್ತದೆ.

ತಸ್ಮಾದ್ಧರ್ಮಃ ಸಹಾಯಾರ್ಥೇ ಸೇವಿತವ್ಯಃ ಸದಾ ನೃಭಿಃ ।
ಪ್ರಾಣೀ ಧರ್ಮಸಮಾಯುಕ್ತೋ ಗಚ್ಛತೇ ಸ್ವರ್ಗತಿಂ ಪರಾಮ್ ।
ತಥೈವಾಧರ್ಮಸಂಯುಕ್ತೋ ನರಕಾಯೋಪಪದ್ಯತೇ ॥೧೪॥

ಆದ್ದರಿಂದ ಸಹಾಯವನ್ನು ಉದ್ದೇಶಿಸುವ ಮನುಷ್ಯನು ಯಾವಾಗಲೂ ಧರ್ಮವನ್ನು ಸಂಪಾದಿಸಬೇಕು. ಧರ್ಮವನ್ನು ಸಂಪಾದಿಸಿದ ಮನುಷ್ಯನು ಶ್ರೇಷ್ಠವಾದ ಸ್ವರ್ಗಗತಿಯನ್ನು ಹೊಂದುತ್ತಾನೆ. ಹಾಗೆಯೇ ಅಧರ್ಮದಿಂದ ಯುಕ್ತನಾದವನು ನರಕಕ್ಕೆ ಹೋಗುವವನಾಗುತ್ತಾನೆ.

ತಸ್ಮಾನ್ನ್ಯಾಯಗತೈರರ್ಥೈರ್ಧರ್ಮಂ ಸೇವೇತ ಪಂಡಿತಃ ।
ಧರ್ಮ ಏಕೋ ಮನುಷ್ಯಾಣಾಂ ಸಹಾಯಃ ಪಾರಲೌಕಿಕಃ ॥೧೫॥

ಆದ್ದರಿಂದ ವಿವೇಕಿಯಾದವನು ನ್ಯಾಯದಿಂದ ಸಂಪಾದಿಸಿದ ಧನದಿಂದ ಧರ್ಮವನ್ನು ಮಾಡಬೇಕು. ಮನುಷ್ಯರಿಗೆ ಪರಲೋಕದಲ್ಲಿ ಸಹಾಯವನ್ನು ಮಾಡುವುದು ಧರ್ಮ ಒಂದೇ.

ಲೋಭಾನ್ಮೋಹಾದನುಕ್ರೋಶಾದ್ ಭಯಾದ್ ವಾಪ್ಯಬಹುಶ್ರುತಃ ।
ನರಃ ಕರೋತ್ಯಕಾರ್ಯಾಣಿ ಪರಾರ್ಥೇ ಲೋಭಮೋಹಿತಃ ॥೧೬॥

ಲೋಭದಿಂದ, ಮೋಹದಿಂದ, ದಯೆಯಿಂದ, ಭಯದಿಂದ ಅಥವಾ ಅಜ್ಞಾನದಿಂದ ಅಥವಾ ಇನ್ನೊಬ್ಬರ ದ್ರವ್ಯದಲ್ಲಿ ಆಸೆಯಿಂದ ಮನುಷ್ಯನು ಅಕಾರ್ಯಗಳನ್ನು ಮಾಡುತ್ತಾನೆ.

ಧರ್ಮಶ್ಚಾರ್ಥಶ್ಚ ಕಾಮಶ್ಚ ತ್ರಿತಯಂ ಜೀವಿತೇ ಫಲಮ್ ।
ಏತತ್ ತ್ರಯಮವಾಪ್ತವ್ಯಮಧರ್ಮಪರಿವರ್ಜಿತಮ್ ॥೧೭॥

ಧರ್ಮ-ಅರ್ಥ-ಕಾಮ - ಈ ಮೂರು ಜೀವನದ ಫಲ. ಇವುಗಳನ್ನು ಅಧರ್ಮದ ಸ್ಪರ್ಶವಿಲ್ಲದಂತೆ ಸಂಪಾದಿಸಬೇಕು.

ಯುಧಿಷ್ಠಿರಃ

ಶ್ರುತಂ ಭಗವತೋ ವಾಕ್ಯಂ ಧರ್ಮಯುಕ್ತಂ ಪರಂ ಹಿತಮ್ ।
ಶರೀರವಿಷಯಂ ಜ್ಞಾತುಂ ಬುದ್ಧಿಸ್ತು ಮಮ ಜಾಯತೇ ॥೧೮॥

ಮೃತಂ ಶರೀರರಹಿತಂ ಸೂಕ್ಷ್ಮಮವ್ಯಕ್ತತಾಂ ಗತಮ್ ।
ಅಚಕ್ಷುರ್ವಿಷಯಂ ಪ್ರಾಪ್ತಂ ಕಥಂ ಧರ್ಮೋಽನುಗಚ್ಛತಿ ॥೧೯॥

ಯುಧಿಷ್ಠಿರ– ಪೂಜ್ಯರಾದ ನಿಮ್ಮ ಧರ್ಮಯುಕ್ತವಾದ ಮತ್ತು ಅತ್ಯಂತ ಹಿತವಾದ ಮಾತನ್ನು ಕೇಳಿ, ಶರೀರವಿಷಯವನ್ನು ತಿಳಿದುಕೊಳ್ಳಬೇಕೆಂದು ನನಗೆ ಬುದ್ಧಿ ಉಂಟಾಗುತ್ತಿದೆ. ಮೃತನಾಗಿ ಶರೀರರಹಿತನಾಗಿ, ಸೂಕ್ಷ್ಮಾವಸ್ಥೆಯನ್ನು ಹೊಂದಿ, ಕಣ್ಣಿಗೆ ಗೋಚರನಾಗದಿದ್ದವನನ್ನು ಧರ್ಮವು ಹೇಗೆ ಅನುಸರಿಸುತ್ತದೆ?

ಬೃಹಸ್ಪತಿಃ

ಪೃಥಿವೀ ವಾಯುರಾಕಾಶಮಾಪೋ ಜ್ಯೋತಿಶ್ಚ ಪಂಚಮಮ್ ।
ಬುದ್ಧಿರಾತ್ಮಾ ಚ ಸಹಿತಾ ಧರ್ಮಂ ಪಶ್ಯಂತಿ ನಿತ್ಯಶಃ ॥೨೦॥

ಬೃಹಸ್ಪತಿ– ಪೃಥಿವಿ, ಜಲ, ಅಗ್ನಿ, ವಾಯು, ಆಕಾಶ - ಈ ಪಂಚಭೂತಗಳ ಅಭಿಮಾನಿದೇವತೆಗಳು ಬುದ್ಧಿ ಮತ್ತು ಧರ್ಮಾಭಿಮಾನಿಯಾದ ದೇವತೆಗಳು ಯಾವಾಗಲೂ ಎಲ್ಲರೂ (ಜೀವನ) ಧರ್ಮವನ್ನು ನೋಡುತ್ತಾರೆ.

ಪ್ರಾಣಿನಾಮಿಹ ಸರ್ವೇಷಾಂ ಸಾಕ್ಷಿಭೂತಾ ದಿವಾನಿಶಮ್ ।
ಏತೈಶ್ಚ ಸ ಹ ಧರ್ಮೋಽಪಿ ತಂ ಜೀವಮನುಗಚ್ಛತಿ ॥೨೧॥

ಇವರು ಹಗಲೂ, ರಾತ್ರಿಯೂ ಜೀವರು ಮಾಡುವ ಎಲ್ಲ ಕಾರ್ಯಗಳಿಗೂ ಸಾಕ್ಷಿಯಾಗಿರುತ್ತಾರೆ. ಜೀವನು ಪರಲೋಕಕ್ಕೆ ಹೋಗುವಾಗ ಅವನ ಜೊತೆಯಲ್ಲಿ ಈ ದೇವತೆಗಳೂ ಮತ್ತು ಧರ್ಮವೂ ಹೋಗುತ್ತದೆ.

ತ್ವಗಸ್ಥಿಮಾಂಸಂ ಶುಕ್ರಂ ಚ ಶೋಣಿತಂ ಚ ಮಹಾಮತೇ ।
ಶರೀರಂ ವರ್ಜಿತಂ ಚೈತೈರ್ಜೀವಿತೇನ ವಿವರ್ಜಿತಮ್ ॥೨೨॥

ಎಲೈ ಮಹಾಮತಿಯೇ, ಚರ್ಮ, ಅಸ್ಥಿ, ಮಾಂಸ, ಶುಕ್ರ, ಶೋಣಿತಗಳಿಂದ ಯುಕ್ತವಾದ ಜೀವನಿಂದ ತ್ಯಕ್ತವಾದ ಶರೀರವನ್ನು ಬಿಟ್ಟು ಇವರು ಹೋಗುತ್ತಾರೆ.

ತತೋ ಧರ್ಮಸಮಾಯುಕ್ತಃ ಸ ಜೀವಃ ಸುಖಮೇಧತೇ ।
ಇಹ ಲೋಕೇ ಪರೇ ಚೈವ ಕಿಂಭೂಯಃ ಕಥಯಾಮಿ ತೇ ॥೨೩॥

ಆಗ ಧರ್ಮವನ್ನು ಮಾಡಿದ ಜೀವನು ಈ ಲೋಕದಲ್ಲಿಯೂ, ಪರಲೋಕದಲ್ಲಿಯೂ ಸುಖವನ್ನು ಹೊಂದುತ್ತಾನೆ. ಇನ್ನೂ ನಿನಗೆ ಏನನ್ನು ಹೇಳಲಿ?

ಯುಧಿಷ್ಠಿರಃ

ಅನುದರ್ಶಿತಂ ಭಗವತಾ ಯಥಾ ಧರ್ಮೋಽನುಗಚ್ಛತಿ ।
ಏತತ್ತು ಜ್ಞಾತುಮಿಚ್ಛಾಮಿ ಕಥಂ ರೇತಃ ಪ್ರವರ್ತತೇ ॥೨೪॥

ಯುಧಿಷ್ಠಿರ– ಪೂಜ್ಯರಾದ ನೀವು ಧರ್ಮವು ಹೇಗೆ ಹಿಂಬಾಲಿಸುತ್ತದೆ ಎಂದು ತೋರಿಸಿದ್ದೀರಿ. ಪುರುಷನ ರೇತಸ್ಸು ಹೇಗೆ ಪ್ರವೃತ್ತವಾಗುತ್ತದೆ ಎಂದು ತಿಳಿಯಲು ಬಯಸುತ್ತೇನೆ.

ಬೃಹಸ್ಪತಿಃ

ಅನ್ನಮಶ್ನಂತಿ ಯೇ ದೇವಾಃ ಶರೀರಸ್ಥಾ ನರೇಶ್ವರ ।
ಪೃಥಿವೀ ವಾಯುರಾಕಾಶಮಾಪೋ ಜ್ಯೋತಿರ್ಮನಸ್ತಥಾ ॥೨೫॥

ತತಸ್ತೃಪ್ತೇಷು ರಾಜೇಂದ್ರ ತೇಷು ಭೂತೇಷು ಪಂಚಸು ।
ಮನಃಷಷ್ಠೇಷು ಶುದ್ಧಾತ್ಮನ್ ರೇತಃ ಸಂಪದ್ಯತೇ ಮಹತ್ ॥೨೬॥

ಬೃಹಸ್ಪತಿ– ಎಲೈ ರಾಜನೇ, ಜೀವನು ಆಹಾರವನ್ನು ಭಕ್ಷಿಸುವಾಗ ಶರೀರದಲ್ಲಿ ಇರುವ ಪೃಥಿವ್ಯಾದಿ ಪಂಚಮಹಾಭೂತಗಳೂ, ಮನೋದೇವತೆಯೂ ಆಹಾರವನ್ನು ಭುಂಜಿಸುತ್ತಾರೆ. ಎಲೈ ರಾಜೇಂದ್ರನೇ, ಆ ಐದು ದೇವತೆಗಳು ಮತ್ತು ಆರನೆಯದಾದ ಮನೋದೇವತೆಯು ತೃಪ್ತರಾದಾಗ ಶ್ರೇಷ್ಠವಾದ ರೇತಸ್ಸು ಉಂಟಾಗುತ್ತದೆ.

ತತೋ ಗರ್ಭಃ ಸಂಭವತಿ ಸ್ತ್ರೀಪುಂಸೋಃ ಪಾರ್ಥ ಸಂಗಮೇ ।
ಏತತ್ತೇ ಸರ್ವಮಾಖ್ಯಾತಂ ಕಿಂಭೂಯಃ ಕಥಯಾಮಿ ತೇ ॥೨೭॥

ಸ್ತ್ರೀ-ಪುರುಷರ ಸಮಾಗಮವಾದಾಗ ಆ ರೇತಸ್ಸಿನಿಂದ ಗರ್ಭವುಂಟಾಗುತ್ತದೆ. ನಿನಗೆ ಎಲ್ಲವನ್ನೂ ಹೇಳಿದ್ದೇನೆ. ಇನ್ನೂ ಏನನ್ನು ಹೇಳಲಿ?

ಯುಧಿಷ್ಠಿರಃ

ಆಖ್ಯಾತಮೇತದ್ ಭವತಾ ಗರ್ಭಃ ಸಂಜಾಯತೇ ಯಥಾ ।
ಯಥಾ ಜಾತಸ್ತು ಪುರುಷಃ ಪ್ರಪದ್ಯತಿ ತದುಚ್ಯತಾಮ್ ॥೨೮॥

ಯುಧಿಷ್ಠಿರ– ಪೂಜ್ಯರಾದ ನೀವು ಗರ್ಭವು ಹೇಗೆ ಜನಿಸುತ್ತದೆ ಎಂದು ಹೇಳಿದಿರಿ. ಜನಿಸಿದ ಜೀವನು ಮುಂದೆ ಏನಾಗುತ್ತಾನೆ ಎಂಬುದನ್ನು ಹೇಳಿ.

ಬೃಹಸ್ಪತಿಃ

ಆಸನ್ನಮಾತ್ರಃ ಸತತಂ ತೈರ್ಭೂತೈರಭಿಭೂಯತೇ ।
ವಿಪ್ರಮುಕ್ತಶ್ಚ ತೈರ್ಭೂತೈಃ ಪುನರ್ಯಾತ್ಯಪರಾಂ ಗತಿಮ್ ।
ಸ ತು ಭೂತಸಮಾಯುಕ್ತಃ ಪ್ರಾಪ್ನುತೇ ಜೀವ ಏವ ಹ ॥೨೯॥

ಬೃಹಸ್ಪತಿ– ಜೀವನು ಜನಿಸಿದ ತಕ್ಷಣವೇ ಆ ಭೂತಗಳಿಗೆ ವಶನಾಗುತ್ತಾನೆ. ಆ ಭೂತಗಳಿಂದ ಬಿಡುಗಡೆಯನ್ನು ಹೊಂದದೆಯೇ ಇನ್ನೊಂದು ದೇಹಕ್ಕೆ ಹೋಗುತ್ತಾನೆ. ಜೀವನು ಭೂತಗಳಿಂದ ಸಹಿತನಾಗಿಯೇ ದೇಹದಿಂದ ದೇಹಕ್ಕೆ ಹೋಗುತ್ತಾನೆ.

ತತೋಽಸ್ಯ ಕರ್ಮ ಪಶ್ಯಂತಿ ಶುಭಂ ವಾ ಯದಿ ವಾಶುಭಮ್ ।
ದೇವತಾಃ ಪಂಚಭೂತಸ್ಥಾಃ ಕಿಂಭೂಯಃ ಶ್ರೋತುಮಿಚ್ಛಸಿ ॥೩೦॥

ಅನಂತರ ಜೀವನು ಮಾಡಿದ ಶುಭಕರ್ಮಗಳನ್ನಾಗಲೀ, ಅಶುಭ ಕರ್ಮಗಳನ್ನಾಗಲೀ ಪಂಚಭೂತದೇವತೆಗಳು ನೋಡುತ್ತಾರೆ. ಇನ್ನೂ ಏನನ್ನು ಕೇಳಲು ಬಯಸುತ್ತೀಯೆ?

ಯುಧಿಷ್ಠಿರಃ

ತ್ವಗಸ್ಥಿಮಾಂಸಮುತ್ಸೃಜ್ಯ ತೈಶ್ಚ ಭೂತೈರ್ವಿವರ್ಜಿತಃ ।
ಜೀವಃ ಸ ಭಗವನ್ ಕ್ವಸ್ಥಃ ಸುಖಿದುಃಖೇ ಸಮಶ್ನುತೇ ॥೩೧॥

ಯುಧಿಷ್ಠಿರ– ಎಲೈ ಪೂಜ್ಯರೇ, ಪಂಚಭೂತಗಳು ಪರಿತ್ಯಜಿಸಿದ ಚರ್ಮ-ಮಾಂಸಾದಿ ರೂಪವಾದ ಶರೀರವನ್ನು ಬಿಟ್ಟು ಜೀವನು ಎಲ್ಲಿ ಇದ್ದವನಾಗಿ ಸುಖ-ದುಃಖಗಳನ್ನು ಅನುಭವಿಸುತ್ತಾನೆ?

ಬೃಹಸ್ಪತಿಃ

ಜೀವೋ ಧರ್ಮಸಮಾಯುಕ್ತಃ ಶೀಘ್ರಂ ರೇತಸ್ತ್ವಮಾಗತಃ ।
ಸ್ತ್ರೀಣಾಂ ತು ಪುಷ್ಪಮಾಸಾದ್ಯ ಸೂತೇ ಕಾಲೇನ ಭಾರತ ॥೩೨॥

ಬೃಹಸ್ಪತಿ– ಎಲೈ ಭಾರತನೇ, ಧರ್ಮದಿಂದ ಕೂಡಿದ ಜೀವನು ಶೀಘ್ರವಾಗಿ ಪುರುಷನ ರೇತಸ್ಸಿನಲ್ಲಿ ಸೇರಿ ಸ್ತ್ರೀಯರ ಶೋಣಿತದ ಜೊತೆಯಲ್ಲಿ ಬೆರೆತು ಯೋಗ್ಯವಾದ ಕಾಲದಲ್ಲಿ ಜನನವನ್ನು ಹೊಂದುತ್ತಾನೆ.

ಯಮಸ್ಯ ಪುರುಷೈಃ ಕ್ಲೇಶಂ ಯಮಸ್ಯ ಪುರುಷೈರ್ವಧಮ್ ।
ದುಃಖಂ ಸಂಸಾರಚಕ್ರಂ ಚ ನರಃ ಕ್ಲೇಶಂ ಚ ಗಚ್ಛತಿ ॥೩೩॥

ಮರಣವನ್ನು ಹೊಂದಿದ ಮೇಲೆ ಯಮಭಟರಿಂದ ಕ್ಲೇಶವನ್ನೂ, ವಧೆಯನ್ನೂ ಅನುಭವಿಸಿ, ದುಃಖರೂಪವಾದ ಸಂಸಾರಚಕ್ರಕ್ಕೆ ಪುನಃ ಬಂದು ಕ್ಲೇಶವನ್ನು ಅನುಭವಿಸುತ್ತಾನೆ.

ಇಹಲೋಕೇ ಚ ಸ ಪ್ರಾಣೀ ಜನ್ಮಪ್ರಭೃತಿ ಪಾರ್ಥಿವ ।
ಸ್ವಕೃತಂ ಕರ್ಮ ವೈ ಭುಂಕ್ತೇ ಧರ್ಮಸ್ಯ ಫಲಮಾಶ್ರಿತಃ ॥೩೪॥

ಎಲೈ ರಾಜನೇ, ಈ ಲೋಕಕ್ಕೆ ಬಂದ ಜೀವನು ಹುಟ್ಟಿದಾಗಿನಿಂದ ತಾನು ಮಾಡಿದ ಧರ್ಮ ಅಥವಾ ಅಧರ್ಮದ ಫಲವನ್ನು ಭೋಗಿಸುತ್ತಾನೆ.

ಯದಿ ಧರ್ಮಂ ಯಥಾಶಕ್ತಿ ಜನ್ಮಪ್ರಭೃತಿ ಸೇವತೇ ।
ತತಃ ಸ ಪುರುಷೋ ಭೂತ್ವಾ ಸೇವತೇ ನಿತ್ಯದಾ ಸುಖಮ್ ॥೩೫॥

ಹುಟ್ಟಿದಾಗಿನಿಂದ ತನ್ನ ಶಕ್ತಿಗೆ ಅನುಗುಣವಾಗಿ ಧರ್ಮವನ್ನು ಸೇವಿಸಿದ್ದರೆ ಆ ಪುರುಷನು ಯಾವಾಗಲೂ ಸುಖವನ್ನೇ ಹೊಂದುತ್ತಾನೆ.

ಅಥಾಂತರಾ ತು ಧರ್ಮಸ್ಯ ಅಧರ್ಮಮುಪಸೇವತೇ ।
ಸುಖಸ್ಯಾನಂತರಂ ದುಃಖಂ ಸ ಜೀವೋಽಪ್ಯಧಿಗಚ್ಛತಿ ॥೩೬॥

ಧರ್ಮಗಳ ಮಧ್ಯದಲ್ಲಿ ಅಧರ್ಮವನ್ನು ಮಾಡಿದ್ದರೆ ಸುಖದ ಅನಂತರ ದುಃಖವನ್ನು (ದುಃಖದ ಅನಂತರ ಸುಖವನ್ನು) ಹೊಂದುತ್ತಾನೆ.

ಅಧರ್ಮೇಣ ಸಮಾಯುಕ್ತೋ ಯಮಸ್ಯ ವಿಷಯಂ ಗತಃ ।
ಮಹದ್ದುಃಖಂ ಸಮಾಸಾದ್ಯ ತಿರ್ಯಗ್ಯೋನೌ ಪ್ರಜಾಯತೇ ॥೩೭॥

ಕೇವಲ ಅಧರ್ಮದಿಂದಲೇ ಕೂಡಿದ್ದರೆ ಯಮನ ಪಟ್ಟಣಕ್ಕೆ ಹೋಗಿ, ಬಹಳ ದುಃಖಗಳನ್ನು ಅನುಭವಿಸಿ ನೀಚಯೋನಿಯಲ್ಲಿ ಜನಿಸುತ್ತಾನೆ.

ಕರ್ಮಣಾ ಯೇನ ಯೇನೇಹ ಯಸ್ಯಾಂ ಯೋನೌ ಪ್ರಸೂಯತೇ ।
ಜೀವೋ ಮೋಹಸಮಾಯುಕ್ತಸ್ತನ್ಮೇ ನಿಗದತಃ ಶೃಣು ॥೩೮॥

ಭ್ರಮೆಗಳಿಂದ ಕೂಡಿದ ಜೀವನು ಯಾವ ಯಾವ ಕರ್ಮಗಳಿಂದ ಯಾವ ಯಾವ ಯೋನಿಯಲ್ಲಿ ಜನಿಸುತ್ತಾನೆಂಬುದನ್ನು ನನ್ನಿಂದ ಕೇಳು.

ಯದೇತದುಚ್ಯತೇ ಶಾಸ್ತ್ರೇ ಸೇತಿಹಾಸೇ ಸಛಂದಸಿ ।
ಯಮಸ್ಯ ವಿಷಯಂ ಘೋರಂ ಮರ್ತ್ಯಲೋಕಾತ್ ಪ್ರಪದ್ಯತೇ ॥೩೯॥

ಶಾಸ್ತ್ರಗಳಲ್ಲಿ, ಇತಿಹಾಸಗಳಲ್ಲಿ ಮತ್ತು ವೇದಗಳಲ್ಲಿ ಹೇಳುವಂತೆ ಮೃತನಾದವನು ಮರ್ತ್ಯಲೋಕವನ್ನು ಬಿಟ್ಟು ಯಮನ ಘೋರವಾದ ಪಟ್ಟಣಕ್ಕೆ ಹೋಗುತ್ತಾನೆ.

ಅಧೀತ್ಯ ಚತುರೋ ವೇದಾನ್ ದ್ವಿಜೋ ಮೋಹಸಮನ್ವಿತಃ ।
ಪತಿತಾತ್ ಪ್ರತಿಗೃಹ್ಯಾಥ ಖರಯೋನೌ ಪ್ರಜಾಯತೇ ॥೪೦॥

ನಾಲ್ಕು ವೇದಗಳನ್ನು ಓದಿ, ಮೋಹಸಮನ್ವಿತನಾದ ದ್ವಿಜನು ಪತಿತರಿಂದ ದಾನ ಸ್ವೀಕಾರವನ್ನು ಮಾಡಿ ಅವರ ಸಹವಾಸವನ್ನು ಮಾಡಿದರೆ ಕತ್ತೆಯಾಗಿ ಜನಿಸುತ್ತಾನೆ.

ಖರೋ ಜೀವತಿ ವರ್ಷಾಣಿ ದಶ ಪಂಚ ಚ ಭಾರತ ।
ಖರೋ ಮೃತೋ ಬಲೀವರ್ದಃ ಸಪ್ತ ವರ್ಷಾಣಿ ಜೀವತಿ ॥೪೧॥

ಎಲೈ ಭಾರತನೇ, ಕತ್ತೆಯಾಗಿ ಹದಿನೈದು ವರ್ಷ ಜೀವಿಸುತ್ತಾನೆ. ಕತ್ತೆಯಾಗಿ ಸತ್ತು ಎತ್ತಾಗಿ ಏಳು ವರ್ಷಗಳ ಕಾಲ ಜೀವಿಸುತ್ತಾನೆ.

ಬಲೀವರ್ದೋ ಮೃತಶ್ಚಾಪಿ ಜಾಯತೇ ಬ್ರಹ್ಮರಾಕ್ಷಸಃ ।
ಬ್ರಹ್ಮರಕ್ಷಸ್ತು ತ್ರೀನ್ಮಾಸಾನ್ ಜಾಯತೇ ಬ್ರಾಹ್ಮಣಸ್ತತಃ ॥೪೨॥

ಎತ್ತು ಮೃತವಾಗಿ ಮೂರು ತಿಂಗಳಕಾಲ ಬ್ರಹ್ಮರಾಕ್ಷಸನಾಗಿ ಜನಿಸುತ್ತಾನೆ. ಅನಂತರ ಬ್ರಾಹ್ಮಣನಾಗಿ ಜನಿಸುತ್ತಾನೆ.

ಪತಿತಂ ಯಾಜಯಿತ್ವಾ ತು ಕೃಮಿಯೋನೌ ಪ್ರಜಾಯತೇ ।
ತತ್ರ ಜೀವತಿ ವರ್ಷಾಣಿ ದಶ ಪಂಚ ಚ ಭಾರತ ॥೪೩॥

ಪತಿತನಾದವನಿಗೆ ಹೋಮಾದಿಗಳನ್ನು ಮಾಡಿಸಿದರೆ ಕ್ರಿಮಿಯೋನಿಯಲ್ಲಿ ಜನಿಸುತ್ತಾನೆ. ಎಲೈ ಭಾರತನೇ, ಅಲ್ಲಿ ಹದಿನೈದು ವರ್ಷಗಳ ಕಾಲ ಜೀವಿಸುತ್ತಾನೆ.

ಕೃಮಿಭಾವಾತ್ ಪ್ರಮುಕ್ತಸ್ತು ತತೋ ಜಾಯತಿ ಗರ್ದಭಃ ।
ಗರ್ದಭಃ ಪಂಚ ವರ್ಷಾಣಿ ಪಂಚ ವರ್ಷಾಣಿ ಸೂಕರಃ ।
ಶ್ವಾ ವರ್ಷಮೇಕಂ ಭವತಿ ತತೋ ಜಾಯತಿ ಮಾನವಃ ॥೪೪॥

ಅನಂತರ ಕ್ರಿಮಿಭಾವವನ್ನು ಬಿಟ್ಟು ಕತ್ತೆಯಾಗಿ ಜನಿಸುತ್ತಾನೆ. ಕತ್ತೆಯಾಗಿ ಐದು ವರ್ಷಗಳ ಕಾಲ ಜೀವಿಸಿ ಅನಂತರ ಹಂದಿಯಾಗಿ ಐದು ವರ್ಷಗಳು, ನಾಯಿಯಾಗಿ ಒಂದು ವರ್ಷ ಜೀವಿಸಿ ಅನಂತರ ಮನುಷ್ಯನಾಗುತ್ತಾನೆ.

ಉಪಾಧ್ಯಾಯೇ ತು ಯಃ ಪಾಪಂ ಶಿಷ್ಯಃ ಕುರ್ಯಾದಬುದ್ಧಿಮಾನ್ ।
ಸ ಜೀವ ಇಹ ಸಂಸಾರಾಂಸ್ತ್ರೀನಾಪ್ನೋತಿ ನ ಸಂಶಯಃ ॥೪೫॥

ಬುದ್ಧಿಯಿಲ್ಲದ ಶಿಷ್ಯನು ಉಪಾಧ್ಯಾಯರಿಗೆ ಅಪಚಾರವನ್ನು ಮಾಡಿದರೆ ಅಂತಹವನು ಮೂರು ಜನ್ಮಗಳನ್ನು ಪಡೆಯುವುದರಲ್ಲಿ ಸಂಶಯವಿಲ್ಲ.

ಪ್ರಾಕ್ಶ್ವಾ ಭವತಿ ರಾಜೇಂದ್ರ ತತಃ ಕ್ರವ್ಯಾತ್ ತತಃ ಖರಃ ।
ತತಃ ಪ್ರೇತಃ ಪರಿಕ್ಲಿಷ್ಟಃ ತತೋ ಜಾಯೇತ ಬ್ರಾಹ್ಮಣಃ ॥೪೬॥

ಎಲೈ ರಾಜೇಂದ್ರನೇ, ಮೊದಲು ನಾಯಿಯಾಗುತ್ತಾನೆ ಅನಂತರ ಮಾಂಸಾಹಾರಿ ಪ್ರಾಣಿಯಾಗುತ್ತಾನೆ, ಅನಂತರ ಕತ್ತೆಯಾಗುತ್ತಾನೆ. ಅಲ್ಲಿ ಬಹಳ ಕ್ಲೇಶಗಳನ್ನು ಅನುಭವಿಸಿ ಮರಣವನ್ನು ಹೊಂದಿ ಅನಂತರ ಬ್ರಾಹ್ಮಣನಾಗಿ ಜನಿಸುತ್ತಾನೆ.

ಮನಸಾಪಿ ಗುರೋರ್ಭಾರ್ಯಾಂ ಯಃ ಶಿಷ್ಯೋ ಯಾತಿ ಪಾಪಕೃತ್ ।
ಸೋಽಧಮಾನ್ ಯಾತಿ ಸಂಸಾರಾನ್ ಅಧಮೇನೇಹ ಕರ್ಮಣಾ ॥

ಪಾಪಕರ್ಮರತನಾದ ಯಾವ ಶಿಷ್ಯನು ಮನಸ್ಸಿನಿಂದಲೂ ಗುರುಪತ್ನಿಯನ್ನು ಸ್ವೀಕರಿಸಿದರೆ ಅಂತಹ ಅಧಮಕರ್ಮದಿಂದ ಅವನು ಅಧಮಯೋನಿಗಳಲ್ಲಿ ಹುಟ್ಟುತ್ತಾನೆ.

ಶ್ವಯೋನೌ ತು ಸ ಸಂಭೂತಸ್ತ್ರೀಣಿ ವರ್ಷಾಣಿ ಜೀವತಿ ।
ತತ್ರಾಪಿ ನಿಧನಂ ಪ್ರಾಪ್ತಃ ಕೃಮಿಯೋನೌ ಪ್ರಜಾಯತೇ ॥೪೮॥

ಕೃಮಿಭಾವಮವಾಪ್ನೋತಿ ವರ್ಷಮೇಕಂ ಸ ಜೀವತಿ ।
ತತಸ್ತು ನಿಧನಂ ಪ್ರಾಪ್ಯ ಬ್ರಹ್ಮಯೋನೌ ಪ್ರಜಾಯತೇ ॥೪೯॥

ನಾಯಿಯಾಗಿ ಹುಟ್ಟಿ ಅವನು ಒಂದು ವರ್ಷ ಬದುಕುತ್ತಾನೆ. ಅಲ್ಲಿ ನಿಧನವನ್ನು ಹೊಂದಿ ಕ್ರಿಮಿಯೋನಿಯಲ್ಲಿ ಜನಿಸುತ್ತಾನೆ. ಕ್ರಿಮಿಯೋನಿಯಲ್ಲಿ ಒಂದು ವರ್ಷ ಬದುಕಿ ಅನಂತರ ಮರಣವನ್ನು ಹೊಂದಿ ಬ್ರಹ್ಮಯೋನಿಯಲ್ಲಿ ಜನಿಸುತ್ತಾನೆ.

ಯದಿ ಪುತ್ರಸಮಂ ಶಿಷ್ಯಂ ಗುರುರ್ಹನ್ಯಾದಕಾರಣೇ ।
ಆತ್ಮನಃ ಕಾಮಕಾರೇಣ ಸೋಽಪಿ ಹಂಸಃ ಪ್ರಜಾಯತೇ ॥೫೦॥

ಪುತ್ರಸಮಾನನಾದ ಶಿಷ್ಯನನ್ನು ಗುರುವು ನಿಷ್ಕಾರಣವಾಗಿ ಹೊಡೆದರೆ ಅವನು ತನ್ನ ಸ್ವೇಚ್ಛಾಚಾರದೋಷದಿಂದ ಹಂಸವಾಗಿ ಜನಿಸುತ್ತಾನೆ.

ಪಿತರಂ ಮಾತರಂ ವಾಪಿ ಯಸ್ತು ಪುತ್ರೋಽವಮನ್ಯತೇ ।
ಸೋಽಪಿ ರಾಜನ್ ಮೃತೋ ಜಂತುಃ ಪೂರ್ವಂ ಜಾಯತಿ ಗರ್ದಭಃ ॥

ಎಲೈ ರಾಜನೇ, ಯಾವ ಪುತ್ರನು ತಂದೆಯನ್ನಾಗಲೀ, ತಾಯಿಯನ್ನಾಗಲೀ ಅಪಮಾನ ಮಾಡುತ್ತಾನೆಯೋ ಅವನು ಮೃತನಾಗಿ ಮೊದಲು ಕತ್ತೆಯಾಗಿ ಜನಿಸುತ್ತಾನೆ.

ಖರೋ ಜೀವತಿ ಮಾಸಾಂಸ್ತು ದಶ ಶ್ವಾ ಚ ಚತುರ್ದಶ ।
ಬಿಡಾಲಃ ಸಪ್ತ ಮಾಸಾಂಸ್ತು ತತೋ ಜಾಯತಿ ಮಾನವಃ ॥೫೨॥

ಕತ್ತೆಯಾಗಿ ಹತ್ತು ತಿಂಗಳು, ಅನಂತರ ನಾಯಿಯಾಗಿ ಹದಿನಾಲ್ಕು ತಿಂಗಳುಗಳು, ಅನಂತರ ಬೆಕ್ಕಾಗಿ ಏಳು ತಿಂಗಳುಗಳು- ಹೀಗೆ ಕಳೆದು ಅನಂತರ ಮನುಷ್ಯನಾಗಿ ಜನಿಸುತ್ತಾನೆ.

ಮಾತಾಪಿತರಮಾಕ್ರುಶ್ಯ ಸಾರಿಕಃ ಸಂಪ್ರಜಾಯತೇ ।
ತಾಡಯಿತ್ವಾ ತು ತಾವೇವ ಕಚ್ಛಪಃ ಸಂಪ್ರಜಾಯತೇ ॥೫೩॥

ಮಾತಾ-ಪಿತೃಗಳನ್ನು ಕಿರುಚಿ ನಿಂದಿಸುವವನು ಸಾರಿಕ ಪಕ್ಷಿಯಾಗಿ (ಮೈನಾ ಹಕ್ಕಿ) ಜನಿಸುತ್ತಾನೆ. ಅವರನ್ನು ಹೊಡೆಯುವವನು ಆಮೆಯಾಗಿ ಜನಿಸುತ್ತಾನೆ.

ಕಚ್ಛಪೋ ದಶ ವರ್ಷಾಣಿ ತ್ರೀಣಿ ವರ್ಷಾಣಿ ಶಲ್ಯಕಃ ।
ವ್ಯಾಲೋ ಭೂತ್ವಾ ತು ಷಣ್ಮಾಸಾಂಸ್ತತೋ ಜಾಯತಿ ಮಾನುಷಃ ॥೫೪॥

ಆಮೆಯಾಗಿ ಹತ್ತು ವರ್ಷಗಳು, ಅನಂತರ ಮುಳ್ಳುಹಂದಿಯಾಗಿ ಮೂರು ವರ್ಷಗಳು, ಅನಂತರ ಸರ್ಪವಾಗಿ ಆರು ತಿಂಗಳುಗಳು ಇದ್ದು ಅನಂತರ ಮನುಷ್ಯನಾಗುತ್ತಾನೆ.

ಭರ್ತ್ರಪಿಂಡಮುಪಾಶ್ನನ್ ಯೋ ರಾಜದ್ವಿಷ್ಟಾನಿ ಸೇವತೇ ।
ಸೋಽಪಿ ಮೋಹಸಮಾಪನ್ನೋ ಮೃತೋ ಜಾಯತಿ ವಾನರಃ ॥೫೫॥

ಯಾವನು ರಾಜಪಿಂಡವನ್ನು ಉಪಜೀವಿಸಿ, ರಾಜನಿಗೆ ಅನಿಷ್ಟವಾದ ಕಾರ್ಯಗಳನ್ನು ಮಾಡುತ್ತಾನೆಯೋ ಮೋಹಸಮನ್ವಿತನಾದ ಅಂತಹವನು ಮರಣವನ್ನು ಹೊಂದಿ ವಾನರನಾಗುತ್ತಾನೆ.

ವಾನರೋ ದಶ ವರ್ಷಾಣಿ ತ್ರೀಣಿ ವರ್ಷಾಣಿ ಮೂಷಕಃ ।
ಶ್ವಾ ಭೂತ್ವಾ ಚಾಥ ಷಣ್ಮಾಸಾಂಸ್ತತೋ ಜಾಯತಿ ಮಾನುಷಃ ॥೫೬॥

ವಾನರನಾಗಿ ಹತ್ತು ವರ್ಷಗಳು, ಅನಂತರ ಇಲಿಯಾಗಿ ಮೂರು ವರ್ಷಗಳು, ಅನಂತರ ನಾಯಿಯಾಗಿ ಆರುತಿಂಗಳುಗಳನ್ನು ಕಳೆದು, ಪುನಃ ಮನುಷ್ಯನಾಗಿ ಹುಟ್ಟುತ್ತಾನೆ.

ನ್ಯಾಸಾಪಹರ್ತಾ ತು ನರೋ ಯಮಸ್ಯ ವಿಷಯಂ ಗತಃ ।
ಸಂಸಾರಾಣಾಂ ಶತಂ ಗತ್ವಾ ಕ್ರಿಮಿಯೋನೌ ಪ್ರಜಾಯತೇ ॥೫೭॥

ನ್ಯಾಸವಾಗಿಟ್ಟ ವಸ್ತುವನ್ನು ಅಪಹರಿಸುವವನು ಯಮಪಟ್ಟಣಕ್ಕೆ ಹೋಗಿ, ಅಲ್ಲಿಂದ ನೂರು ನೀಚಯೋನಿಗಳನ್ನು ಎತ್ತಿ ಕ್ರಿಮಿಯೋನಿಯಲ್ಲಿ ಜನಿಸುತ್ತಾನೆ.

ತತ್ರ ಜೀವತಿ ವರ್ಷಾಣಿ ದಶ ಪಂಚ ಚ ಭಾರತ ।
ದುಷ್ಕೃತಸ್ಯ ಕ್ಷಯಂ ಗತ್ವಾ ತತೋ ಜಾಯತಿ ಮಾನುಷಃ ॥೫೮॥

ಎಲೈ ಭಾರತನೇ, ಅಲ್ಲಿ ಹದಿನೈದು ವರ್ಷಗಳ ಕಾಲ ಜೀವಿಸಿ, ದುಷ್ಕರ್ಮಗಳನ್ನು ಕಳೆದುಕೊಂಡು ಪುನಃ ಮನುಷ್ಯನಾಗಿ ಜನಿಸುತ್ತಾನೆ.

ಅಸೂಯಕೋ ನರಶ್ಚಾಪಿ ಮೃತೋ ಜಾಯತಿ ಶಾರ್ಙ್ಗಕಃ ।
ವಿಶ್ವಾಸಹರ್ತಾ ತು ನರೋ ಮೀನೋ ಜಾಯತಿ ದುರ್ಮತಿಃ ॥೫೯॥

ಅಸೂಯೆಯನ್ನು ಮಾಡುವ ನರನು ಮೃತನಾಗಿ ಶಾರ್ಙ್ಗಪಕ್ಷಿಯಾಗಿ ಜನಿಸುತ್ತಾನೆ. ವಿಶ್ವಾಸಘಾತವನ್ನು ಮಾಡುವ ಮನುಷ್ಯನು ಮರಣವನ್ನು ಹೊಂದಿ ಮೀನಿನ ಜನ್ಮವನ್ನು ಪಡೆಯುತ್ತಾನೆ.

ಭೂತ್ವಾ ಮೀನೋऽಷ್ಟವರ್ಷಾಣಿ ಮೃಗೋ ಜಾಯತಿ ಭಾರತ ।
ಮೃಗಸ್ತು ಚತುರೋ ಮಾಸಾಂಸ್ತತಶ್ಚಾಗ್ಗಃ ಪ್ರಜಾಯತೇ ॥೬೦॥

ಎಲೈ ಭಾರತನೇ, ಮೀನಾಗಿ ಎಂಟು ವರ್ಷಗಳನ್ನೂ, ಅನಂತರ ಜಿಂಕೆಯಾಗಿ ನಾಲ್ಕು ತಿಂಗಳುಗಳನ್ನೂ ಕಳೆದು, ಅನಂತರ ಹೋತವಾಗುತ್ತಾನೆ.

ಛಾಗಸ್ತು ನಿಧನಂ ಪ್ರಾಪ್ಯ ಪೂರ್ಣೇ ಸಂವತ್ಸರೇ ತತಃ ।
ಕೀಟಃ ಸಂಜಾಯತೇ ಜಂತುಸ್ತತೋ ಜಾಯತಿ ಮಾನುಷಃ ॥೬೧॥

ಹೋತವಾಗಿ ಒಂದು ವರ್ಷವು ಪೂರ್ಣವಾದಾಗ ನಿಧನವನ್ನು ಹೊಂದಿ ಕೀಟವಾಗಿ ಜನಿಸಿ ಅನಂತರ ಮನುಷ್ಯನಾಗಿ ಜನಿಸುತ್ತಾನೆ.

ಧಾನ್ಯಾನ್ ಯವಾನ್ ತಿಲಾನ್ ಮಾಷಾನ್-
ಕುಲತ್ಥಾನ್ ಸರ್ಷಪಾನ್ ಚಣಾನ್ ।
ಕಲಾಯಾನಥ ಮುದ್ಗಾಂಶ್ಚ ಗೋಧೂಮಾನತಸೀಸ್ತಥಾ ॥೬೨॥

ಯಸ್ತು ಧಾನ್ಯಸ್ಯ ಹರ್ತಾ ತು ಮೋಹಾಜ್ಜಂತುರಚೇತನಃ ।
ಸ ಜಾಯತೇ ಮಹಾರಾಜ ಮೂಷಕೋ ನಿರಪತ್ರಪಃ ॥೬೩॥

ಯವ (ಅಕ್ಕಿ), ತಿಲ (ಎಳ್ಳು), ಉದ್ದು, ಹುರುಳಿ, ಸಾಸಿವೆ, ಕಡಲೆ, ಕಲಾಯ (ನೆಲಗಡಲೆ), ಹೆಸರು, ಗೋಧಿ ಅಗಸೆ ಮುಂತಾದ ಧಾನ್ಯಗಳನ್ನು ಮೋಹದಿಂದ ನಾಚಿಕೆಯಿಲ್ಲದೆ, ಪ್ರಜ್ಞಾಶೂನ್ಯನಾಗಿ ಕದಿಯುವವನು ಇಲಿಯಾಗಿ ಜನಿಸುತ್ತಾನೆ.

ತತಃ ಪ್ರೇತ್ಯ ಮಹಾರಾಜ ಪುನರ್ಜಾಯತಿ ಸೂಕರಃ ।
ಸೂಕರೋ ಜಾತಮಾತ್ರಸ್ತು ರೋಗೇಣ ಮ್ರಿಯತೇ ನೃಪ ॥೬೪॥

ಎಲೈ ಮಹಾರಾಜನೇ, ಅಲ್ಲಿ ಮರಣವನ್ನು ಹೊಂದಿ ಪುನಃ ಹಂದಿಯಾಗಿ ಜನಿಸುತ್ತಾನೆ. ಎಲೈ ಮಹಾರಾಜನೇ, ಹಂದಿಯಾಗಿ ಹುಟ್ಟಿದ ತಕ್ಷಣ ರೋಗದಿಂದ ಮರಣವನ್ನು ಹೊಂದುತ್ತಾನೆ.

ಶ್ವಾ ತತೋ ಜಾಯತೇ ಮೂಢಃ ಕರ್ಮಣಾ ತೇನ ಪಾರ್ಥಿವ ।
ಶ್ವಾ ಭೂತ್ವಾ ಪಂಚ ವರ್ಷಾಣಿ ಜಾಯತೇ ಮಾನುಷಸ್ತತಃ ॥೬೫॥

ಎಲೈ ರಾಜನೇ, ಮೂಢನಾದ ಅವನು ತಾನು ಮಾಡಿದ ಹಿಂದಿನ ಕರ್ಮದಿಂದ ನಾಯಿಯಾಗಿ ಜನಿಸುತ್ತಾನೆ. ನಾಯಿಯಾಗಿ ಐದು ವರ್ಷಗಳ ಕಾಲ ಜೀವಿಸಿ ಅನಂತರ ಮನುಷ್ಯನಾಗುತ್ತಾನೆ.

ಪರದಾರಾಭಿಮರ್ಶಂ ತು ಕೃತ್ವಾ ಜಾಯತಿ ವೈ ವೃಕಃ ।
ಶ್ವಾ ಸೃಗಾಲಸ್ತತೋ ಗೃಧ್ರೋ ವ್ಯಾಲಃ ಕಂಕೋ ಬಕಸ್ತಥಾ ॥೬೬॥

ಪರಪತ್ನಿಯನ್ನು ಕೆಡಿಸುವವನು ಮೊದಲು ತೋಳನಾಗುತ್ತಾನೆ. ಅನಂತರ ನಾಯಿ, ನರಿ, ಹದ್ದು, ಸರ್ಪ, ಕಂಕ ಮತ್ತು ಬಕಗಳ ಜನ್ಮವನ್ನು ಪಡೆಯುತ್ತಾನೆ.

ಭ್ರಾತುರ್ಭಾರ್ಯಾಂ ತು ದುರ್ಬುದ್ಧಿರ್ಯೋ ಧರ್ಷಯತಿ ಮೋಹಿತಃ ।
ಪುಂಸ್ಕೋಕಿಲತ್ವಮಾಪ್ನೋತಿ ಸೋಽಪಿ ಸಂವತ್ಸರಂ ನೃಪ ॥೬೭॥

ಯಾವನು ಮೋಹ ಮತ್ತು ದುರ್ಬುದ್ಧಿಗೆ ಒಳಗಾಗಿ ಸಹೋದರನ ಭಾರ್ಯೆಯನ್ನು ಧರ್ಷಣವನ್ನು ಮಾಡುತ್ತಾನೆಯೋ ಅವನು ದೊಡ್ಡ ಕೊಕ್ಕರೆಯ ಜನ್ಮವನ್ನು ಪಡೆದು ಒಂದು ವರ್ಷದ ಕಾಲ ಜೀವಿಸುತ್ತಾನೆ.

ಸಖಿಭಾರ್ಯಾಂ ಗುರೋರ್ಭಾರ್ಯಾಂ ರಾಜಭಾರ್ಯಾಂ ತಥೈವ ಚ ।
ಪ್ರಧರ್ಷಯಿತ್ವಾ ಕಾಮಾದ್ ಯೋ ಮೃತೋ ಜಾಯತಿ ಸೂಕರಃ ॥೬೮॥

ಕಾಮದಿಂದ ಸ್ನೇಹಿತನ ಭಾರ್ಯೆಯನ್ನು, ಗುರುಭಾರ್ಯೆಯನ್ನು, ರಾಜ ಭಾರ್ಯೆಯನ್ನು ಧರ್ಷಣ ಮಾಡುವವನು ಮೃತನಾಗಿ ಹಂದಿಯಾಗುತ್ತಾನೆ.

ಸೂಕರಃ ಪಂಚ ವರ್ಷಾಣಿ ಪಂಚ ವರ್ಷಾಣಿ ಶ್ವಾವಿಧಃ ।
ಪಿಪೀಲಕಸ್ತು ಷಣ್ಮಾಸಾಂಕೀಟಃ ಸ್ಯಾನ್ಮಾಸಮೇವ ಚ ।
ಏತಾನಾಸಾದ್ಯ ಸಂಸಾರಾನ್ ಕೃಮಿಯೋನೌ ಪ್ರಜಾಯತೇ ॥೬೯॥

ಹಂದಿಯಾಗಿ ಐದು ವರ್ಷಗಳು, ಮುಳ್ಳು ಹಂದಿಯಾಗಿ ಐದು ವರ್ಷಗಳು, ಇರುವೆಯಾಗಿ ಆರು ತಿಂಗಳು, ಕೀಟವಾಗಿ ಒಂದು ತಿಂಗಳು - ಹೀಗೆ ಅನೇಕ ಜನ್ಮಗಳನ್ನು ಎತ್ತಿ ಅನಂತರ ಕ್ರಿಮಿಯೋನಿಯಲ್ಲಿ ಜನಿಸುತ್ತಾನೆ.

ತತ್ರ ಜೀವತಿ ಮಾಸಾಂಸ್ತು ಕೃಮಿಯೋನೌ ತ್ರಯೋದಶ ।
ತತೋಽಧರ್ಮಕ್ಷಯಂ ಕೃತ್ವಾ ಪುನರ್ಜಾಯತಿ ಮಾನುಷಃ ॥೭೦॥

ಕ್ರಿಮಿಯೋನಿಯಲ್ಲಿ ಹದಿಮೂರು ತಿಂಗಳುಗಳ ಕಾಲ ಜೀವಿಸಿದ್ದು ತನ್ನ ಪಾಪದ ಕ್ಷಯವನ್ನು ಮಾಡಿಕೊಂಡು ಪುನಃ ಮನುಷ್ಯನಾಗುತ್ತಾನೆ.

ಉಪಸ್ಥಿತೇ ವಿವಾಹೇ ತು ದಾನೇ ಯಜ್ಞೇಽಪಿ ವಾಭಿಭೋ ।
ಮೋಹಾತ್ ಕರೋತಿ ಯೋ ವಿಘ್ನಂ ಸ ಮೃತೋ ಜಾಯತೇ ಕೃಮಿಃ ॥

ಎಲೈ ಶತ್ರುಜಯವನ್ನು ಸಂಪಾದಿಸುವವನೇ, ವಿವಾಹವಾಗಲೀ, ದಾನವಾಗಲೀ, ಯಜ್ಞವಾಗಲೀ ಉಪಸ್ಥಿತವಾದಾಗ ಯಾವನು ಮೋಹದಿಂದ ವಿಘ್ನವನ್ನು ಮಾಡುತ್ತಾನೆಯೋ ಅವನು ಕ್ರಿಮಿಯಾಗಿ ಜನಿಸುತ್ತಾನೆ.

ಕೃಮಿರ್ಜೀವತಿ ವರ್ಷಾಣಿ ದಶ ಪಂಚ ಚ ಭಾರತ ।
ಅಧರ್ಮಸ್ಯ ಕ್ಷಯಂ ಕೃತ್ವಾ ತತೋ ಜಾಯತಿ ಮಾನುಷಃ ॥೭೨॥

ಎಲೈ ಭಾರತನೇ, ಅವನು ಕ್ರಿಮಿಯಾಗಿ ಹದಿನೈದು ವರ್ಷಗಳ ಕಾಲ ಜೀವಿಸಿ ಪಾಪದ ಕ್ಷಯವನ್ನು ಮಾಡಿಕೊಂಡು ಅನಂತರ ಮನುಷ್ಯನಾಗುತ್ತಾನೆ.

ಪೂರ್ವಂ ದತ್ತ್ವಾ ತು ಯಃ ಕನ್ಯಾಂ ದ್ವಿತೀಯೇ ದಾತುಮಿಚ್ಛತಿ ।
ಸೋಽಪಿ ರಾಜನ್ ಮೃತೋ ಜಂತುಃ ಕೃಮಿಯೋನೌ ಪ್ರಜಾಯತೇ ॥

ಎಲೈ ರಾಜನೇ, ಮೊದಲು ಒಬ್ಬನಿಗೆ ಕನ್ಯಾದಾನವನ್ನು ಮಾಡಿ ಪುನಃ ಇನ್ನೊಬ್ಬನಿಗೆ ಕೊಡಲು ಇಚ್ಛಿಸುವವನು ಮರಣವನ್ನು ಹೊಂದಿ ಕ್ರಿಮಿಯೋನಿಯಲ್ಲಿ ಜನಿಸುತ್ತಾನೆ.

ತತ್ರ ಜೀವತಿ ವರ್ಷಾಣಿ ತ್ರಯೋದಶ ಯುಧಿಷ್ಠಿರ ।
ಅಧರ್ಮಸಂಕ್ಷಯೇ ಯುಕ್ತಸ್ತತೋ ಜಾಯತಿ ಮಾನುಷಃ ॥೭೪॥

ಎಲೈ ಯುಧಿಷ್ಠಿರನೇ, ಅಲ್ಲಿ ಅವನು ಹದಿಮೂರು ವರ್ಷಗಳ ಕಾಲ ಜೀವಿಸಿದ್ದು, ಪಾಪಕ್ಷಯವಾದ ಮೇಲೆ ಪುನಃ ಮನುಷ್ಯನಾಗಿ ಜನಿಸುತ್ತಾನೆ.

ದೇವಕಾರ್ಯಮುಪಾಕೃತ್ಯ ಪಿತೃಕಾರ್ಯಮಥಾಪಿ ಚ ।
ಅನಿರ್ವಾಪ್ಯ ಸಮಶ್ನನ್ ವೈ ತತೋ ಜಾಯತಿ ವಾಯಸಃ ॥೭೫॥

ದೇವತಾ ಕಾರ್ಯವನ್ನಾಗಲೀ, ಪಿತೃಕಾರ್ಯವನ್ನಾಗಲೀ ಪ್ರಾರಂಭಿಸಿ, ಅದು ಮುಗಿಯುವುದಕ್ಕಿಂತ ಮೊದಲೇ ಆಹಾರವನ್ನು ಸೇವಿಸುವವನು ಕಾಗೆಯಾಗಿ ಜನಿಸುತ್ತಾನೆ.

ವಾಯಸೋ ದಶ ವರ್ಷಾಣಿ ತತೋ ಜಾಯತಿ ಕುಕ್ಕುಟಃ ।
ಜಾಯತೇ ಲವಕಶ್ಚಾಪಿ ಮಾಸಂ ತಸ್ಮಾತ್ತು ಮಾನುಷಃ ॥೭೬॥

ಕಾಗೆಯಾಗಿ ಹತ್ತು ವರ್ಷ ಕಳೆದು ಅನಂತರ ಕೋಳಿಯಾಗುತ್ತಾನೆ. ಅನಂತರ ಲವಕ (ಮರಕುಟುಕ ಪಕ್ಷಿ)ವಾಗಿ ಒಂದು ತಿಂಗಳನ್ನು ಕಳೆದು ಅನಂತರ ಮನುಷ್ಯನಾಗುತ್ತಾನೆ.

ಜ್ಯೇಷ್ಠಂ ಪಿತೃಸಮಂ ಚಾಪಿ ಭ್ರಾತರಂ ಯೋಽವಮನ್ಯತೇ ।
ಸೋಽಪಿ ಮೃತ್ಯುಮುಪಾಗಮ್ಯ ಕ್ರೌಂಚಯೋನೌ ಪ್ರಜಾಯತೇ ॥೭೭॥

ಜ್ಯೇಷ್ಠನೂ ಪಿತೃಸಮಾನನೂ ಆದ ಅಣ್ಣನನ್ನು ಅವಮಾನ ಮಾಡಿದರೆ ಮರಣವನ್ನು ಹೊಂದಿ ಕ್ರೌಂಚಯೋನಿಯಲ್ಲಿ ಜನಿಸುತ್ತಾನೆ.

ಸಖಿಭಾರ್ಯಾಂ ಗುರೋರ್ಭಾರ್ಯಾಂ ರಾಜಭಾರ್ಯಾಂ ತಥೈವ ಚ ।
ಪ್ರಧರ್ಷಯಿತ್ವಾ ಕಾಮಾದ್ ಯೋ ಮೃತೋ ಜಾಯತಿ ಸೂಕರಃ ॥೬೮॥

ಕಾಮದಿಂದ ಸ್ನೇಹಿತನ ಭಾರ್ಯೆಯನ್ನು, ಗುರುಭಾರ್ಯೆಯನ್ನು, ರಾಜ ಭಾರ್ಯೆಯನ್ನು ಧರ್ಷಣ ಮಾಡುವವನು ಮೃತನಾಗಿ ಹಂದಿಯಾಗುತ್ತಾನೆ.

ಸೂಕರಃ ಪಂಚ ವರ್ಷಾಣಿ ಪಂಚ ವರ್ಷಾಣಿ ಶ್ವಾವಿಧಃ ।
ಪಿಪೀಲಕಸ್ತು ಷಣ್ಮಾಸಾಂಕೀಟಃ ಸ್ಯಾನ್ಮಾಸಮೇವ ಚ ।
ಏತಾನಾಸಾದ್ಯ ಸಂಸಾರಾನ್ ಕೃಮಿಯೋನೌ ಪ್ರಜಾಯತೇ ॥೬೯॥

ಹಂದಿಯಾಗಿ ಐದು ವರ್ಷಗಳು, ಮುಳ್ಳು ಹಂದಿಯಾಗಿ ಐದು ವರ್ಷಗಳು, ಇರುವೆಯಾಗಿ ಆರು ತಿಂಗಳು, ಕೀಟವಾಗಿ ಒಂದು ತಿಂಗಳು - ಹೀಗೆ ಅನೇಕ ಜನ್ಮಗಳನ್ನು ಎತ್ತಿ ಅನಂತರ ಕ್ರಿಮಿಯೋನಿಯಲ್ಲಿ ಜನಿಸುತ್ತಾನೆ.

ತತ್ರ ಜೀವತಿ ಮಾಸಾಂಸ್ತು ಕೃಮಿಯೋನೌ ತ್ರಯೋದಶ ।
ತತೋಽಧರ್ಮಕ್ಷಯಂ ಕೃತ್ವಾ ಪುನರ್ಜಾಯತಿ ಮಾನುಷಃ ॥೭೦॥

ಕ್ರಿಮಿಯೋನಿಯಲ್ಲಿ ಹದಿಮೂರು ತಿಂಗಳುಗಳ ಕಾಲ ಜೀವಿಸಿದ್ದು ತನ್ನ ಪಾಪದ ಕ್ಷಯವನ್ನು ಮಾಡಿಕೊಂಡು ಪುನಃ ಮನುಷ್ಯನಾಗುತ್ತಾನೆ.

ಉಪಸ್ಥಿತೇ ವಿವಾಹೇ ತು ದಾನೇ ಯಜ್ಞೇಽಪಿ ವಾಭಿಭೋ ।
ಮೋಹಾತ್ ಕರೋತಿ ಯೋ ವಿಘ್ನಂ ಸ ಮೃತೋ ಜಾಯತೇ ಕೃಮಿಃ ॥

ಎಲೈ ಶತ್ರುಜಯವನ್ನು ಸಂಪಾದಿಸುವವನೇ, ವಿವಾಹವಾಗಲೀ, ದಾನವಾಗಲೀ, ಯಜ್ಞವಾಗಲೀ ಉಪಸ್ಥಿತವಾದಾಗ ಯಾವನು ಮೋಹದಿಂದ ವಿಘ್ನವನ್ನು ಮಾಡುತ್ತಾನೆಯೋ ಅವನು ಕ್ರಿಮಿಯಾಗಿ ಜನಿಸುತ್ತಾನೆ.

ಕೃಮಿರ್ಜೀವತಿ ವರ್ಷಾಣಿ ದಶ ಪಂಚ ಚ ಭಾರತ ।
ಅಧರ್ಮಸ್ಯ ಕ್ಷಯಂ ಕೃತ್ವಾ ತತೋ ಜಾಯತಿ ಮಾನುಷಃ ॥೭೨॥

ಎಲೈ ಭಾರತನೇ, ಅವನು ಕ್ರಿಮಿಯಾಗಿ ಹದಿನೈದು ವರ್ಷಗಳ ಕಾಲ ಜೀವಿಸಿ ಪಾಪದ ಕ್ಷಯವನ್ನು ಮಾಡಿಕೊಂಡು ಅನಂತರ ಮನುಷ್ಯನಾಗುತ್ತಾನೆ.

ಪೂರ್ವಂ ದತ್ತ್ವಾ ತು ಯಃ ಕನ್ಯಾಂ ದ್ವಿತೀಯೇ ದಾತುಮಿಚ್ಛತಿ ।
ಸೋಽಪಿ ರಾಜನ್ ಮೃತೋ ಜಂತುಃ ಕೃಮಿಯೋನೌ ಪ್ರಜಾಯತೇ ॥

ಎಲೈ ರಾಜನೇ, ಮೊದಲು ಒಬ್ಬನಿಗೆ ಕನ್ಯಾದಾನವನ್ನು ಮಾಡಿ ಪುನಃ ಇನ್ನೊಬ್ಬನಿಗೆ ಕೊಡಲು ಇಚ್ಛಿಸುವವನು ಮರಣವನ್ನು ಹೊಂದಿ ಕ್ರಿಮಿಯೋನಿಯಲ್ಲಿ ಜನಿಸುತ್ತಾನೆ.

ತತ್ರ ಜೀವತಿ ವರ್ಷಾಣಿ ತ್ರಯೋದಶ ಯುಧಿಷ್ಠಿರ ।
ಅಧರ್ಮಸಂಕ್ಷಯೇ ಯುಕ್ತಸ್ತತೋ ಜಾಯತಿ ಮಾನುಷಃ ॥೭೪॥

ಎಲೈ ಯುಧಿಷ್ಠಿರನೇ, ಅಲ್ಲಿ ಅವನು ಹದಿಮೂರು ವರ್ಷಗಳ ಕಾಲ ಜೀವಿಸಿದ್ದು, ಪಾಪಕ್ಷಯವಾದ ಮೇಲೆ ಪುನಃ ಮನುಷ್ಯನಾಗಿ ಜನಿಸುತ್ತಾನೆ.

ದೇವಕಾರ್ಯಮುಪಾಕೃತ್ಯ ಪಿತೃಕಾರ್ಯಮಥಾಪಿ ಚ ।
ಅನಿರ್ವಾಪ್ಯ ಸಮಶ್ನನ್ ವೈ ತತೋ ಜಾಯತಿ ವಾಯಸಃ ॥೭೫॥

ದೇವತಾ ಕಾರ್ಯವನ್ನಾಗಲೀ, ಪಿತೃಕಾರ್ಯವನ್ನಾಗಲೀ ಪ್ರಾರಂಭಿಸಿ, ಅದು ಮುಗಿಯುವುದಕ್ಕಿಂತ ಮೊದಲೇ ಆಹಾರವನ್ನು ಸೇವಿಸುವವನು ಕಾಗೆಯಾಗಿ ಜನಿಸುತ್ತಾನೆ.

ವಾಯಸೋ ದಶ ವರ್ಷಾಣಿ ತತೋ ಜಾಯತಿ ಕುಕ್ಕುಟಃ ।
ಜಾಯತೇ ಲವಕಶ್ಚಾಪಿ ಮಾಸಂ ತಸ್ಮಾತ್ತು ಮಾನುಷಃ ॥೭೬॥

ಕಾಗೆಯಾಗಿ ಹತ್ತು ವರ್ಷ ಕಳೆದು ಆನಂತರ ಕೋಳಿಯಾಗುತ್ತಾನೆ. ಆನಂತರ ಲವಕ (ಮರಕುಟುಕ ಪಕ್ಷಿ)ವಾಗಿ ಒಂದು ತಿಂಗಳನ್ನು ಕಳೆದು ಆನಂತರ ಮನುಷ್ಯನಾಗುತ್ತಾನೆ.

ಜ್ಯೇಷ್ಠಂ ಪಿತೃಸಮಂ ಚಾಪಿ ಭ್ರಾತರಂ ಯೋಽವಮನ್ಯತೇ ।
ಸೋಽಪಿ ಮೃತ್ಯುಮುಪಾಗಮ್ಯ ಕ್ರೌಂಚಯೋನೌ ಪ್ರಜಾಯತೇ ॥೭೭॥

ಜ್ಯೇಷ್ಠನೂ ಪಿತೃಸಮಾನನೂ ಆದ ಅಣ್ಣನನ್ನು ಅವಮಾನ ಮಾಡಿದರೆ ಮರಣವನ್ನು ಹೊಂದಿ ಕ್ರೌಂಚಯೋನಿಯಲ್ಲಿ ಜನಿಸುತ್ತಾನೆ.

ಕ್ರೌಂಚೋ ಜೀವತಿ ಮಾಸಾಂಸ್ತು ದಶ ದ್ವೌ ಸಪ್ತ ಪಂಚ ಚ ।
ತತೋ ನಿಧನಮಾಪನ್ನೋ ಮಾನುಷತ್ವಮುಪಾಶ್ನುತೇ ॥೭೮॥

ಕ್ರೌಂಚಪಕ್ಷಿಯಾಗಿ ಇಪ್ಪತ್ನಾಲ್ಕು ತಿಂಗಳುಗಳ ಕಾಲ ಜೀವಿಸಿ ಅಲ್ಲಿ ನಿಧನವನ್ನು ಹೊಂದಿ ಪುನಃ ಮನುಷ್ಯನಾಗುತ್ತಾನೆ.

ವೃಷಲೋ ಬ್ರಾಹ್ಮಣೀಂ ಗತ್ವಾ ಕೃಮಿಯೋನೌ ಪ್ರಜಾಯತೇ ।
ತತ್ಸಾಪತ್ಯಂ ಸಮುತ್ಪಾದ್ಯ ತತೋ ಭವತಿ ಮಾನುಷಃ ॥೭೯॥

ಶೂದ್ರನು ಬ್ರಾಹ್ಮಣ ಸ್ತ್ರೀ ಗಮನವನ್ನು ಮಾಡಿ ಅಲ್ಲಿ ಮಕ್ಕಳನ್ನು ಪಡೆದರೆ ಕ್ರಿಮಿ ಯೋನಿಯಲ್ಲಿ ಜನಿಸಿ ಅನಂತರ ಮನುಷ್ಯನಾಗುತ್ತಾನೆ.

ಕೃತಘ್ನಸ್ತು ಮೃತೋ ರಾಜನ್ ಯಮಸ್ಯ ವಿಷಯಂ ಗತಃ ।
ಯಮಸ್ಯ ವಿಷಯೇ ಕ್ರುದ್ಧೈರ್ವಧಂ ಪ್ರಾಪ್ನೋತಿ ದಾರುಣಮ್ ॥೮೦॥

ಎಲೈ ರಾಜನೇ, ಕೃತಘ್ನನಾದವನು ಯಮದೇವರ ರಾಜ್ಯಕ್ಕೆ ಹೋಗಿ ಅಲ್ಲಿ ಕ್ರುದ್ಧರಾದ ಯಮಭಟರಿಂದ ದಾರುಣವಾದ ಹಿಂಸೆಗಳನ್ನು ಅನುಭವಿಸುತ್ತಾನೆ.

ಪಟ್ಟಿಸಂ ಮುದ್ಗರಂ ಶೂಲಮಗ್ನಿಕುಂಭಂ ಚ ದಾರುಣಮ್ ।
ಅಸಿಪತ್ರವನಂ ಘೋರಂ ವಾಲುಕಾಂ ಕೂಟಶಾಲ್ಮಲೀಮ್ ॥೮೧॥

ಏತಾಶ್ಚಾನ್ಯಾಶ್ಚ ಬಹ್ವೀಃ ಸ ಯಮಸ್ಯ ವಿಷಯಂ ಗತಃ ।
ಯಾತನಾಃ ಪ್ರಾಪ್ಯ ತತ್ರೋಗ್ರಾಸ್ತತೋ ವಧ್ಯತಿ ಭಾರತ ॥೮೨॥

ಪಟ್ಟಿಸ, ಮುದ್ಗರ, ಶೂಲ, ದಾರುಣವಾದ ಅಗ್ನಿಕುಂಭ, ಘೋರವಾದ ವಾಲುಕ, ಕೂಟಶಾಲ್ಮಲೀ ಮೊದಲಾದ ಅನೇಕ ಯಾತನೆಗಳನ್ನು ಅನುಭವಿಸಿ ಅನಂತರ ಅಲ್ಲಿ ಪ್ರಹಾರ ಮಾಡಲ್ಪಡುತ್ತಾನೆ.

ಸಂಸಾರಚಕ್ರಮಾಸಾದ್ಯ ಕೃಮಿಯೋನೌ ಪ್ರಜಾಯತೇ ।
ಕೃಮಿರ್ಭವತಿ ವರ್ಷಾಣಿ ದಶ ಪಂಚ ಚ ಭಾರತ ।
ತತೋ ಗರ್ಭಂ ಸಮಾಸಾದ್ಯ ತತ್ರೈವ ಮ್ರಿಯತೇ ಶಿಶುಃ ॥೮೩॥

ಅಲ್ಲಿಂದ ಪುನಃ ಸಂಸಾರಚಕ್ರಕ್ಕೆ ಸಿಲುಕಿ ಕ್ರಿಮಿಯೋನಿಯಲ್ಲಿ ಜನಿಸುತ್ತಾನೆ. ಎಲೈ ಭಾರತನೇ, ಕ್ರಿಮಿಯೋನಿಯಲ್ಲಿ ಹದಿನೈದು ವರ್ಷಗಳ ಕಾಲ ಜೀವಿಸಿ ಅನಂತರ ಮನುಷ್ಯ ಗರ್ಭವನ್ನು ಸೇರಿ ಅಲ್ಲಿಯೇ ಮರಣವನ್ನು ಹೊಂದುತ್ತಾನೆ.

ತತೋ ಗರ್ಭಶತೈರ್ಜಂತುರ್ಬಹುಭಿಃ ಸಂಪ್ರಜಾಯತೇ ।
ಸಂಸಾರಾಂಶ್ಚ ಬಹೂನ್ ಗತ್ವಾ ತತಸ್ತಿರ್ಯಕ್‌ಪ್ರಜಾಯತೇ ॥೮೪॥

ಅನಂತರ ನೂರು ಜನ್ಮಗಳನ್ನು ಧರಿಸಿ, ಸಂಸಾರಚಕ್ರದಲ್ಲಿ ಬಹುವಾಗಿ ತಿರುಗಿ ತಿರ್ಯಗ್ಯೋನಿ (ನೀಚಜನ್ಮ)ಯಲ್ಲಿ ಜನಿಸುತ್ತಾನೆ.

ಮೃತೋ ದುಃಖಮನುಪ್ರಾಪ್ಯ ಬಹುವರ್ಷಗಣಾನಿಹ ।
ಅಪುನರ್ಭಾವಸಂಯುಕ್ತಃ ತಿರ್ಯಗ್ಜಂತುಷು ಜಾಯತೇ ॥೮೫॥

ಅಲ್ಲಿ ಮೃತನಾಗಿ ಅನೇಕ ವರ್ಷಗಳ ಕಾಲ ದುಃಖಗಳನ್ನು ಅನುಭವಿಸಿ ಪುನಃ ಮೇಲೇಳದಂತಹ ತಿರ್ಯಗ್ಯೋನಿಗಳಲ್ಲಿ ಜನಿಸುತ್ತಾನೆ.

ಅಶಸ್ತ್ರಂ ಪುರುಷಂ ಹತ್ವಾ ಸಶಸ್ತ್ರಃ ಪುರುಷಾಧಮಃ ।
ಅರ್ಥಾರ್ಥೀ ಯದಿ ವಾ ವೈರೀ ಸ ಮೃತೋ ಜಾಯತೇ ಖರಃ ॥೮೬॥

ಧನದ ಕಾರಣದಿಂದಾಗಲೀ ಅಥವಾ ವೈರದಿಂದಾಗಲೀ ಶಸ್ತ್ರವನ್ನು ಹಿಡಿದ ಪುರುಷನು ಶಸ್ತ್ರರಹಿತನಾದವನನ್ನು ಕೊಂದರೆ ಕತ್ತೆಯಾಗಿ ಜನಿಸುತ್ತಾನೆ.

ಖರೋ ಜೀವತಿ ವರ್ಷೇ ದ್ವೇ ತತಃ ಶಸ್ತ್ರೇಣ ವಧ್ಯತೇ ।
ಸ ಮೃತೋ ಮೃಗಯೋನೌ ತು ನಿತ್ಯೋದ್ವಿಗ್ನೋಽಭಿಜಾಯತೇ ॥೮೭॥

ಕತ್ತೆಯಾಗಿ ಎರಡು ವರ್ಷ ಜೀವಿಸಿ ಅನಂತರ ಶಸ್ತ್ರದಿಂದ ಕೊಲ್ಲಲ್ಪಡುತ್ತಾನೆ. ಅಲ್ಲಿ ಮೃತನಾಗಿ ನಿತ್ಯವೂ ಭಯಗ್ರಸ್ತವಾದ ಜಿಂಕೆಯ ಯೋನಿಯಲ್ಲಿ ಜನಿಸುತ್ತಾನೆ.

ಮೃಗೋ ವಧ್ಯತಿ ಶಸ್ತ್ರೇಣ ಗತೇ ಸಂವತ್ಸರೇ ತು ಸಃ ।
ಹತೋ ಮೃಗಸ್ತತೋ ಮೀನಃ ಸೋಽಪಿ ಜಾಲೇನ ಬಧ್ಯತೇ ॥೮೮॥

ಜಿಂಕೆಯಾಗಿ ಒಂದು ವರ್ಷ ಕಳೆದ ಮೇಲೆ ಶಸ್ತ್ರದಿಂದ ಕೊಲ್ಲಲ್ಪಡುತ್ತಾನೆ. ಜಿಂಕೆಯಾಗಿ ಹತನಾದವನು, ಅನಂತರ ಮೀನಾಗಿ ಹುಟ್ಟಿ ಅಲ್ಲಿಯೂ ಬಲೆಯಲ್ಲಿ ಸಿಲುಕಿ ಮೃತನಾಗುತ್ತಾನೆ.

ಮಾಸೇ ಚತುರ್ಥೇ ಸಂಪ್ರಾಪ್ತೇ ಶ್ವಾಪದಃ ಸಂಪ್ರಜಾಯತೇ ।
ಶ್ವಾಪದೋ ದಶ ವರ್ಷಾಣಿ ದ್ವೀಪೀ ವರ್ಷಾಣಿ ಪಂಚ ಚ ॥೮೯॥

ಮೀನಾಗಿ ನಾಲ್ಕು ತಿಂಗಳು ಕಳೆದಾಗ ಆ ದೇಹವನ್ನು ತ್ಯಜಿಸಿ ಮಾಂಸಾಹಾರಿ ಪ್ರಾಣಿಯಾಗಿ ಜನಿಸುತ್ತಾನೆ. ಹತ್ತು ವರ್ಷ ಮಾಂಸಾಹಾರಿ ಪ್ರಾಣಿಯಾಗಿ ನಂತರ ಚಿರತೆಯಾಗಿ ಜನಿಸುತ್ತಾನೆ.

ತತಸ್ತು ನಿಧನಂ ಪ್ರಾಪ್ತಃ ಕಾಲಪರ್ಯಾಯಚೋದಿತಃ ।
ಅಧರ್ಮಸ್ಯ ಕ್ಷಯಂ ಕೃತ್ವಾ ತತೋ ಜಾಯತಿ ಮಾನುಷಃ ॥೯೦॥

ಅನಂತರ ಕಾಲಕ್ರಮದಲ್ಲಿ ನಿಧನವನ್ನು ಹೊಂದಿ, ಅಧರ್ಮದ ವಿನಾಶವನ್ನು ಮಾಡಿಕೊಂಡು ಮನುಷ್ಯನಾಗುತ್ತಾನೆ.

ಸ್ತ್ರಿಯಂ ಹತ್ವಾ ತು ದುರ್ಬುದ್ಧಿರ್ಯಮಸ್ಯ ವಿಷಯಂ ಗತಃ ।
ಬಹೂನ್ ಕ್ಲೇಶಾನ್ ಸಮಾಸಾದ್ಯ ನರಕಾನೇಕವಿಂಶತಿಮ್ ॥೯೧॥

ತತಃ ಪಶ್ಚಾನ್ಮಹಾರಾಜ ಕೃಮಿಯೋನೌ ಪ್ರಜಾಯತೇ ।
ಕೃಮಿರ್ವಿಂಶತಿವರ್ಷಾಣಿ ಭೂತ್ವಾ ಜಾಯತಿ ಮಾನುಷಃ ॥೯೨॥

ದುರ್ಬುದ್ಧಿಯುಳ್ಳ ಮನುಷ್ಯನು ಸ್ತ್ರೀಹತ್ಯೆಯನ್ನು ಮಾಡಿ, ಯಮಪಟ್ಟಣಕ್ಕೆ ಹೋಗಿ ಅಲ್ಲಿ ಅನೇಕ ಕ್ಲೇಶಗಳನ್ನೂ, ಇಪ್ಪತ್ತೊಂದು ವಿಧವಾದ ನರಕಗಳನ್ನೂ ಅನುಭವಿಸಿ ಅನಂತರ ಕ್ರಿಮಿಯೋನಿಯಲ್ಲಿ ಜನಿಸುತ್ತಾನೆ. ಎಲೈ ಮಹಾರಾಜನೇ, ಕ್ರಿಮಿಯೋನಿಯಲ್ಲಿ ಇಪ್ಪತ್ತು ವರ್ಷಗಳನ್ನು ಕಳೆದು ಅನಂತರ ಮನುಷ್ಯನಾಗಿ ಜನಿಸುತ್ತಾನೆ.

ಭೋಜನಂ ಚೋರಯಿತ್ವಾ ತು ಮಕ್ಷಿಕಾ ಜಾಯತೇ ನರಃ ।
ಮಕ್ಷಿಕಾಸಂಘವಶಗೋ ಬಹೂನ್ ಮಾಸಾನ್ ಭವತ್ಯುತ ।
ತತಃ ಪಾಪಕ್ಷಯಂ ಕೃತ್ವಾ ಮಾನುಷತ್ವಮವಾಪ್ನುತೇ ॥೯೩॥

ಭೋಜನವನ್ನು ಕದ್ದ ಮನುಷ್ಯನು ನೊಣವಾಗಿ ಜನಿಸುತ್ತಾನೆ. ಅವನು ನೊಣಗಳ ಸಮೂಹದಲ್ಲಿಯೇ ಸಿಲುಕಿ ಅನೇಕ ಮಾಸಗಳನ್ನು ಕಳೆಯುತ್ತಾನೆ. ಅನಂತರ ಪಾಪಕ್ಷಯವನ್ನು ಹೊಂದಿ ಮನುಷ್ಯಜನ್ಮವನ್ನು ಪಡೆಯುತ್ತಾನೆ.

ವಾದ್ಯಂ ಹೃತ್ವಾ ತು ಪುರುಷೋ ಮಶಕಃ ಸಂಪ್ರಜಾಯತೇ ।
ತಥಾ ಪಿಣ್ಯಾಕಸಂಮಿಶ್ರಮಶನಂ ಚೋರಯೇನ್ನರಃ ।
ಜಾಯತೇ ಶ್ವಭ್ರನಿಯತೋ ದಾರುಣೋ ಮೂಷಕೋ ನರಃ ॥೯೪॥

ವಾದ್ಯವನ್ನು ಕದ್ದ ಪುರುಷನು ಸೊಳ್ಳೆಯಾಗಿ ಜನಿಸುತ್ತಾನೆ. ಹಿಂಡಿಯಿಂದ ಮಿಶ್ರಿತವಾದ ಆಹಾರವನ್ನು ಕದಿಯುವ ನರನು ಯಾವಾಗಲೂ ಹಳ್ಳದಲ್ಲಿ ವಾಸಿಸುವ ದಾರುಣವಾದ ಇಲಿಯಾಗುತ್ತಾನೆ.

ಲವಣಂ ಚೋರಯಿತ್ವಾ ತು ಚೀರೀವಾಕಃ ಪ್ರಜಾಯತೇ ।
ದಧಿ ಹೃತ್ವಾ ಬಕಶ್ಚಾಪಿ ಪ್ಲವೋ ಮತ್ಸ್ಯಾನಸಂಸ್ಕೃತಾನ್ ॥೯೫॥

ಲವಣವನ್ನು (ಉಪ್ಪು) ಕದ್ದವನು ಚೀರೀವಾಕವಾಗಿ (ಚಿಮ್ಮಂಡೆ ಹುಳು) ಜನಿಸುತ್ತಾನೆ. ಮೊಸರನ್ನು ಕದ್ದವನು ಬಕಪಕ್ಷಿಯಾಗುತ್ತಾನೆ. ಹಸಿಯ ಮೀನುಗಳನ್ನು ಕದ್ದವನು ಪ್ಲವ ಎಂಬ ಪಕ್ಷಿಯಾಗುತ್ತಾನೆ.

ಚೋರಯಿತ್ವಾ ಪಯಶ್ಚಾಪಿ ಬಲಾಕಾ ಸಂಪ್ರಜಾಯತೇ ।
ಯಸ್ತು ಚೋರಯತೇ ತೈಲಂ ತೈಲಪಾಯೀ ಪ್ರಜಾಯತೇ ।
ಚೋರಯಿತ್ವಾ ತು ದುರ್ಬುದ್ಧಿರ್ಮಧು ದಂಶಃ ಪ್ರಜಾಯತೇ ॥೯೬॥

ಹಾಲನ್ನು ಕದ್ದವನು ಬಲಾಕಾ ಪಕ್ಷಿಯಾಗುತ್ತಾನೆ. ತೈಲವನ್ನು ಕದ್ದವನು ತೈಲಪಾಯಿ ಎಂಬ ಪಕ್ಷಿಯಾಗುತ್ತಾನೆ. ಜೇನುತುಪ್ಪವನ್ನು ಕದ್ದವನು ಜೇನುಹುಳುವಾಗಿ ಜನಿಸುತ್ತಾನೆ.

ಅಯೋ ಹೃತ್ವಾ ತು ದುರ್ಬುದ್ಧಿರ್ವಾಯಸೋ ಜಾಯತೇ ನರಃ ।
ಪಾಯಸಂ ಚೋರಯಿತ್ವಾ ತು ತಿತ್ತಿರಿತ್ವಮವಾಪ್ನುತೇ ॥೯೭॥

ಕಬ್ಬಿಣವನ್ನು ಕದ್ದ ದುರ್ಬುದ್ಧಿಯುಳ್ಳ ಮನುಷ್ಯನು ಕಾಗೆಯಾಗುತ್ತಾನೆ. ಪಾಯಸವನ್ನು ಕದ್ದವನು ತಿತ್ತಿರಿ ಪಕ್ಷಿಯಾಗುತ್ತಾನೆ.

ಹೃತ್ವಾ ಪೈಷ್ಟಮಪೂಪಂ ಚ ಕುಂಭೋಲೂಕಃ ಪ್ರಜಾಯತೇ ।
ಫಲಂ ವಾ ಮೂಲಕಂ ಹೃತ್ವಾ ಜಾಯೇತ್ ಪಿಪೀಲಿಕಃ ॥೯೮॥

ಹಿಟ್ಟಿನಿಂದ ಮಾಡಿದ ಅಪೂಪವನ್ನು ಕದ್ದವನು ಗೂಬೆಯಾಗುತ್ತಾನೆ. ಹಣ್ಣನ್ನು ಅಥವಾ ಗೆಡ್ಡೆಗಳನ್ನು ಕದ್ದವನು ಇರುವೆಯಾಗುತ್ತಾನೆ.

ಕಾಂಸ್ಯಂ ಹೃತ್ವಾ ತು ದುರ್ಬುದ್ಧಿರ್ಹಾರೀತೋ ಜಾಯತೇ ನರಃ ।
ರಾಜತಂ ಭಾಜನಂ ಹೃತ್ವಾ ಕಪೋತಃ ಸಂಪ್ರಜಾಯತೇ ॥೯೯॥

ಕಂಚಿನ ಪಾತ್ರೆಯನ್ನು ಕದಿಯುವ ದುರ್ಬುದ್ಧಿಯುಳ್ಳ ನರನು ಹಾರೀತ ಪಕ್ಷಿಯಾಗುತ್ತಾನೆ. ಬೆಳ್ಳಿಯ ಪಾತ್ರೆಯನ್ನು ಕದಿಯುವವನು ಪಾರಿವಾಳವಾಗಿ ಜನಿಸುತ್ತಾನೆ.

ಹೃತ್ವಾ ತು ಕಾಂಚನಂ ಭಾಂಡಂ ಕೃಮಿಯೋನೌ ಪ್ರಜಾಯತೇ ।
ಕ್ರೌಂಚಃ ಕಾರ್ಪಾಸಿಕಂ ಹೃತ್ವಾ ಮೃತೋ ಜಾಯೇತ ಮಾನುಷಃ ॥೧೦೦॥

ಚಿನ್ನದ ಪಾತ್ರೆಯನ್ನು ಕದಿಯುವವನು ಕ್ರಿಮಿಯೋನಿಯಲ್ಲಿ ಜನಿಸುತ್ತಾನೆ. ಹತ್ತಿಯ ಬಟ್ಟೆಯನ್ನು ಕದಿಯುವವನು ಕ್ರೌಂಚಪಕ್ಷಿಯಾಗಿ ಮರಣವನ್ನು ಹೊಂದಿ ಮನುಷ್ಯನಾಗುತ್ತಾನೆ.

ಪತ್ರೋರ್ಣಂ ಚೋರಯಿತ್ವಾ ತು ಕೃಕಲತ್ವಂ ನಿಗಚ್ಛತಿ ।
ಕೌಶಿಕಂ ತು ತತೋ ಹೃತ್ವಾ ನರೋ ಜಾಯತಿ ವರ್ತಕಃ ॥೧೦೧॥

ಉಣ್ಣೆಯ ಬಟ್ಟೆಯನ್ನು ಕದಿಯುವವನು ಓತಿಕೇತನ ಜನ್ಮವನ್ನು ಪಡೆಯುತ್ತಾನೆ. ರೇಶ್ಮೆ ವಸ್ತ್ರವನ್ನು ಕದಿಯುವವನು ವರ್ತಕನಾಗಿ ಜನಿಸುತ್ತಾನೆ.

ಅಂಶುಕಂ ಚೋರಯಿತ್ವಾ ತು ಕಪೋತಃ ಸಂಪ್ರಜಾಯತೇ ।
ಚೋರಯಿತ್ವಾ ದುಕೂಲಂ ತು ಮೃತೋ ಹಂಸಃ ಪ್ರಜಾಯತೇ ॥೧೦೨॥

ಸಣ್ಣ ವಸ್ತ್ರವನ್ನು ಕದಿಯುವವನು ಪಾರಿವಾಳವಾಗಿ ಜನಿಸುತ್ತಾನೆ. ಹೊದೆಯುವ ವಸ್ತ್ರವನ್ನು ಕದಿಯುವವನು ಮೃತನಾಗಿ ಹಂಸವಾಗಿ ಜನಿಸುತ್ತಾನೆ.

ಚೋರಯಿತ್ವಾ ನರಃ ಪಟ್ಟಂ ತ್ವಾವಿಕಂ ವಾಪಿ ಭಾರತ ।
ಕ್ಷೌಮಂ ಚ ವಸ್ತ್ರಮಾದಾಯ ಶಶೋ ಜಂತುಃ ಪ್ರಜಾಯತೇ ॥೧೦೩॥

ಎಲೈ ಭಾರತನೇ, ಪಟ್ಟವಸ್ತ್ರವನ್ನೂ, ಶಾಲನ್ನೂ, ರೇಶ್ಮೆಯ ವಸ್ತ್ರವನ್ನೂ ಕದಿಯುವವನು ಮೊಲವಾಗುತ್ತಾನೆ.

ವರ್ಣಾನ್ ಹೃತ್ವಾ ತು ಪುರುಷೋ ಮೃತೋ ಜಾಯತಿ ಬರ್ಹಿಣಃ ।
ಹೃತ್ವಾ ರಕ್ತಾನಿ ವಸ್ತ್ರಾಣಿ ಜಾಯತೇ ಜೀವಜೀವಕಃ ॥೧೦೪॥

ಅನುಲೇಪನವನ್ನು ಕದಿಯುವ ಮನುಷ್ಯನು ಮರಣವನ್ನು ಹೊಂದಿ ನವಿಲಾಗುತ್ತಾನೆ. ರಕ್ತವಸ್ತ್ರವನ್ನು ಕದಿಯುವವನು ಚಕೋರಪಕ್ಷಿಯಾಗಿ ಜನಿಸುತ್ತಾನೆ.

ವರ್ಣಕಾದೀಂಸ್ತಥಾ ಗಂಧಾಂಶ್ಚೋರಯಿತ್ವಾ ತು ಮಾನವಃ ।
ಛುಚ್ಛುಂದರಿತ್ವಮಾಪ್ನೋತಿ ರಾಜನ್ ಲೋಭಪರಾಯಣಃ ॥೧೦೫॥

ಎಲೈ ರಾಜನೇ, ಅನುಲೇಪನ ಗಂಧವನ್ನು ಕದ್ದು ಲೋಭಪರಾಯಣನಾದ ಮನುಷ್ಯನು ಛುಂಚುಂದರಿ ಪಕ್ಷಿಯಾಗಿ ಜನಿಸುತ್ತಾನೆ.

ವಿಶ್ವಾಸೇನ ತು ನಿಕ್ಷಿಪ್ತಂ ಯೋ ನಿಹ್ನವತಿ ಮಾನವಃ ।
ಸ ಗತಾಸುರ್ನರಸ್ತಾದೃಕ್ ಮತ್ಸ್ಯಯೋನೌ ಪ್ರಜಾಯತೇ ॥೧೦೬॥

ವಿಶ್ವಾಸದಿಂದ ಇಟ್ಟ ಪದಾರ್ಥವನ್ನು ಮುಚ್ಚಿಡುವವನು ಮರಣವನ್ನು ಹೊಂದಿ ಮತ್ಸ್ಯ (ಮೀನಿನ) ಯೋನಿಯಲ್ಲಿ ಜನಿಸುತ್ತಾನೆ.

ಮತ್ಸ್ಯಯೋನಿಮನುಪ್ರಾಪ್ಯ ಮೃತೋ ಜಾಯತಿ ಮಾನುಷಃ ।
ಮಾನುಷತ್ವಮನುಪ್ರಾಪ್ಯ ಕ್ಷೀಣಾಯುರುಪಪದ್ಯತೇ ॥೧೦೭॥

ಮತ್ಸ್ಯಯೋನಿಯನ್ನು ಹೊಂದಿ, ಅಲ್ಲಿ ಮೃತನಾಗಿ ಮನುಷ್ಯಯೋನಿಯಲ್ಲಿ ಜನಿಸುತ್ತಾನೆ. ಮನುಷ್ಯಯೋನಿಯಲ್ಲಿ ಜನಿಸಿ ಅಲ್ಪಾಯುವಾಗುತ್ತಾನೆ.

ಪಾಪಾನಿ ತು ನರಃ ಕೃತ್ವಾ ತಿರ್ಯಗ್ಜಾಯತಿ ಭಾರತ ।
ನ ಚಾತ್ಮನಃ ಪ್ರಮಾಣಂ ತೇ ಧರ್ಮಂ ಜಾನಾತಿ ಕಂಚನ ॥೧೦೮॥

ಎಲೈ ಭಾರತನೇ, ಮನುಷ್ಯನು ಪಾಪವನ್ನು ಮಾಡಿ ತಿರ್ಯಗ್ಯೋನಿಯಲ್ಲಿ ಜನಿಸುತ್ತಾನೆ. ತನ್ನನ್ನು ಉದ್ಧಾರ ಮಾಡುವ ಧರ್ಮವನ್ನು ಯಾವನೂ ತಿಳಿದಿಲ್ಲ.

ಯೇ ಪಾಪಾನಿ ನರಾಃ ಕೃತ್ವಾ ನಿರಸ್ಯಂತಿ ವ್ರತೈಃ ಸದಾ ।
ಸುಖದುಃಖಸಮಾಯುಕ್ತಾ ವ್ಯಾಧಿತಾಸ್ತೇ ಭವಂತ್ಯುತ ॥೧೦೯॥

ಯಾವ ಮನುಷ್ಯರು ಪಾಪಗಳನ್ನು ಮಾಡಿ ಅನಂತರ ವ್ರತಗಳನ್ನು ಮಾಡಿ ಕಳೆದುಕೊಳ್ಳಲು ಪ್ರಯತ್ನಿಸುತ್ತಾರೆಯೋ ಅವರು ಸುಖ-ದುಃಖ ಸಮಾಯುಕ್ತರಾಗಿ, ರೋಗಗ್ರಸ್ತರಾಗಿ ಜನಿಸುತ್ತಾರೆ.

ಅಸಂವಾಸಾಃ ಪ್ರಜಾಯಂತೇ ಮ್ಲೇಚ್ಛಾಶ್ಚಾಪಿ ನ ಸಂಶಯಃ ।
ನರಾಃ ಪಾಪಸಮಾಚಾರಾ ಲೋಭಮೋಹಸಮನ್ವಿತಾಃ ॥೧೧೦॥

ಪಾಪಕರ್ಮವನ್ನು ಆಚರಿಸುವ, ಲೋಭ-ಮೋಹ ಸಮನ್ವಿತರಾದ, ಸರಿಯಾಗಿ ವಸ್ತ್ರವನ್ನು ಹೊದ್ದುಕೊಳ್ಳದಿರುವ ಮನುಷ್ಯರು ಮ್ಲೇಚ್ಛರಾಗಿ ಜನಿಸುತ್ತಾರೆ.

ವರ್ಜಯಂತಿ ಚ ಪಾಪಾನಿ ಜನ್ಮಪ್ರಭೃತಿ ಯೇ ನರಾಃ ।
ಅರೋಗಾ ರೂಪವಂತಸ್ತೇ ಧನಿನಶ್ಚ ಭವಂತ್ಯುತ ॥೧೧೧॥

ಯಾವ ಮನುಷ್ಯರು ಹುಟ್ಟಿದಾಗಿನಿಂದಲೂ ಪಾಪಕಾರ್ಯಗಳನ್ನು ವರ್ಜಿಸುತ್ತಾರೆಯೋ ಅವರು (ಮುಂದಿನ ಜನ್ಮದಲ್ಲಿ) ರೋಗರಹಿತರೂ, ರೂಪವಂತರೂ ಮತ್ತು ಧನವಂತರೂ ಆಗುತ್ತಾರೆ.

ಸ್ತ್ರಿಯೋಽಪ್ಯೇತೇನ ಕಲ್ಪೇನ ಕೃತ್ವಾ ಪಾಪಮವಾಪ್ನುಯುಃ ।
ಏತೇಷಾಮೇವ ಜಂತೂನಾಂ ಪತ್ನೀತ್ವಮುಪಯಾಂತಿ ತಾಃ ॥೧೧೨॥

ಸ್ತ್ರೀಯರೂ ಸಹ ಇದೇ ವಿಧಾನದಿಂದ ಪಾಪವನ್ನು ಸಂಪಾದಿಸುತ್ತಾರೆ. ಅವರೂ ಮುಂದಿನ ಜನ್ಮದಲ್ಲಿ ಅಂತಹ ಜಂತುಗಳ ಪತ್ನೀತ್ವವನ್ನೇ ಹೊಂದುತ್ತಾರೆ.

ಪರಸ್ವಹರಣೇ ದೋಷಾಃ ಸರ್ವ ಏವ ಪ್ರಕೀರ್ತಿತಾಃ ।
ಏತದ್ವೈ ಲೇಶಮಾತ್ರೇಣ ಕಥಿತಂ ತೇ ಮಯಾಽನಘ ।
ಅಪರಸ್ಮಿನ್ ಕಥಾಯೋಗೇ ಭೂಯಃ ಶ್ರೋಷ್ಯಸಿ ಭಾರತ ॥೧೧೩॥

ಪರಸ್ವತ್ತನ್ನು ಅಪಹಾರ ಮಾಡಿದರೆ ಉಂಟಾಗುವ ದೋಷಗಳೆಲ್ಲವೂ ನನ್ನಿಂದ ಹೇಳಲ್ಪಟ್ಟಿವೆ. ಎಲೈ ಅನಘನೇ, ನಾನು ಇದನ್ನು ಸ್ವಲ್ಪ ಮಾತ್ರ ಹೇಳಿದ್ದೇನೆ. ಎಲೈ ಭಾರತನೇ, ಇನ್ನೊಂದು ಕಥಾ ಸಂದರ್ಭದಲ್ಲಿ ನೀನು ಇನ್ನೂ ಹೆಚ್ಚಾಗಿ ಕೇಳುವಿ.

ಏತನ್ಮಯಾ ಮಹಾರಾಜ ಬ್ರಹ್ಮಣೋ ವದತಃ ಪುರಾ ।
ಸುರರ್ಷೀಣಾಂ ಶ್ರುತಂ ಮಧ್ಯೇ ಪೃಷ್ಟಶ್ಚಾಪಿ ಯಥಾತಥಮ್ ॥೧೧೪॥

ಎಲೈ ಮಹಾರಾಜನೇ, ದೇವರ್ಷಿಗಳ ಸಭೆಯಲ್ಲಿ ಪ್ರಶ್ನೆ ಮಾಡಲ್ಪಟ್ಟ ಬ್ರಹ್ಮದೇವರು ಈ ವಿಷಯಗಳನ್ನು ಹೇಳುವಾಗ ಅವರ ಮಧ್ಯದಲ್ಲಿ ಕುಳಿತ ನಾನು ಇದನ್ನು ಸರಿಯಾಗಿ ಕೇಳಿದೆನು.

ಮಯಾಽಪಿ ತವ ಕಾರ್ತ್ಸ್ನ್ಯೇನ ಯಥಾವದನುವರ್ಣಿತಮ್ ।
ಏತಚ್ಛ್ರುತ್ವಾ ಮಹಾರಾಜ ಧರ್ಮೇ ಕುರು ಮನಃ ಸದಾ ॥೧೧೫॥

ನಾನೂ ಸಹ ನಿನಗೆ ಕೇಳಿದುದನ್ನು ಪೂರ್ಣವಾಗಿ ವರ್ಣಿಸಿದ್ದೇನೆ. ಎಲೈ ಮಹಾರಾಜನೇ, ಇದನ್ನು ಕೇಳಿ ಯಾವಾಗಲೂ ಧರ್ಮದಲ್ಲಿಯೇ ಮನಸ್ಸನ್ನಿಡು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಸಂಸಾರಚಕ್ರನಿರೂಪಣಂ ನಾಮ
ದ್ವಿಷಷ್ಟ್ಯುತ್ತರಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಅರವತ್ತೆರಡನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಅರವತ್ಮೂರನೆಯ ಅಧ್ಯಾಯ

ಅನ್ನದಾನಫಲ

ಯುಧಿಷ್ಠಿರಃ

ಅಧರ್ಮಸ್ಯ ಗತಿರ್ಬ್ರಹ್ಮನ್ ಕಥಿತಾ ಮೇ ತ್ವಯಾಽನಘ ।
ಧರ್ಮಸ್ಯ ತು ಗತಿಂ ಶ್ರೋತುಮಿಚ್ಛಾಮಿ ವದತಾಂ ವರ ।
ಕೃತ್ವಾ ಪಾಪಾನಿ ಕರ್ಮಾಣಿ ಕಥಂ ಯಾಂತಿ ಶುಭಾಂ ಗತಿಮ್ ॥೧॥

ಯುಧಿಷ್ಠಿರ– ಪೂಜ್ಯರಾದ ಬೃಹಸ್ಪತಿಗಳೇ, ಅನಘರೇ, ನೀವು ಅಧರ್ಮದ ಗತಿಗಳನ್ನು ಹೇಳಿದಿರಿ. ಮಾತನಾಡುವವರಲ್ಲಿ ಶ್ರೇಷ್ಠರೇ, ಧರ್ಮದ ಗತಿಯನ್ನು ಕೇಳಲು

ಬಯಸುತ್ತೇನೆ. ಪಾಪಕರ್ಮವನ್ನು ಮಾಡಿದವನು ಹೇಗೆ ಶುಭಗತಿಯನ್ನು ಹೊಂದುತ್ತಾನೆ?

ಬೃಹಸ್ಪತಿಃ

ಕೃತ್ವಾ ಪಾಪಾನಿ ಕರ್ಮಾಣಿ ಅಧರ್ಮವಶಮಾಗತಃ ।
ಮನಸಾ ವಿಪರೀತೇನ ನಿರಯಂ ಪ್ರತಿಪದ್ಯತೇ ॥೨॥

ಬೃಹಸ್ಪತಿ– ವಿರುದ್ಧವಾದ ಮನಸ್ಸಿನಿಂದ ಅಧರ್ಮಕ್ಕೆ ವಶನಾಗಿ ಪಾಪಕರ್ಮವನ್ನು ಮಾಡಿ ಮನುಷ್ಯನು ನರಕಕ್ಕೆ ಹೋಗುತ್ತಾನೆ.

ಮೋಹಾದಧರ್ಮಂ ಯಃ ಕೃತ್ವಾ ಪುನಃ ಸಮನುತಪ್ಯತೇ ।
ಮನಃಸಮಾಧಿಸಂಯುಕ್ತೋ ನ ಸ ಸೇವೇತ ದುಷ್ಕೃತಮ್ ॥೩॥

ಮೋಹದಿಂದ ಅಧರ್ಮವನ್ನು ಮಾಡಿ ಪುನಃ ಪಶ್ಚಾತ್ತಾಪವನ್ನು ಪಟ್ಟುಯಾವನು ಮನಸ್ಸಮಾಧಾನವನ್ನು ಹೊಂದುತ್ತಾನೆಯೋ ಅವನು ಪುನಃ ಪಾಪಕಾರ್ಯವನ್ನು ಮಾಡುವುದಿಲ್ಲ.

ಯಥಾ ಯಥಾ ನರಃ ಸಮ್ಯಗಧರ್ಮಮನುಭಾಷತೇ ।
ಸಮಾಹಿತೇನ ಮನಸಾ ವಿಮುಚ್ಯತಿ ತಥಾ ತಥಾ ।
ಭುಜಂಗ ಇವ ನಿರ್ಮೋಕಾತ್ ಪೂರ್ವಭುಕ್ತಾಜ್ಜರಾನ್ವಿತಾತ್ ॥೪॥

ಮನುಷ್ಯನು ಸಮಾಧಾನಗೊಂಡ ಮನಸ್ಸಿನಿಂದ ಹೇಗೆ ಹೇಗೆ ಅಧರ್ಮವನ್ನು ನಿಂದಿಸುತ್ತಾನೆಯೋ ಹಾಗೆ ಹಾಗೆ ಸರ್ಪವು ಜೀರ್ಣವಾದ ಪೊರೆಯನ್ನು ಬಿಟ್ಟಂತೆ ಹಿಂದೆ ಅನುಭವಿಸಿದ ದುಷ್ಕರ್ಮಗಳಿಂದ ಮುಕ್ತನಾಗುತ್ತಾನೆ.

ದತ್ತ್ವಾ ವಿಪ್ರಸ್ಯ ದಾನಾನಿ ವಿವಿಧಾನಿ ಸಮಾಹಿತಃ ।
ಮನಃಸಮಾಧಿಸಂಯುಕ್ತಃ ಸುಗತಿಂ ಪ್ರತಿಪದ್ಯತೇ ॥೫॥

ಮನಸ್ಸಮಾಧಾನದಿಂದ ಕೂಡಿದವನಾಗಿ ಬ್ರಾಹ್ಮಣರಿಗೆ ವಿವಿಧ ದಾನವನ್ನು ಮಾಡಿ ಸುಗತಿಯನ್ನು ಹೊಂದುತ್ತಾನೆ.

ಪ್ರದಾನಾನಿ ತು ವಕ್ಷ್ಯಾಮಿ ಯಾನಿ ದತ್ತ್ವಾ ಯುಧಿಷ್ಠಿರ ।
ನರಃ ಕೃತ್ವಾಪ್ಯಕಾರ್ಯಾಣಿ ತದಾ ಧರ್ಮೇಣ ಯುಜ್ಯತೇ ॥೬॥

ಎಲೈ ಯುಧಿಷ್ಠಿರನೇ, ಅಕಾರ್ಯಗಳನ್ನು ಮಾಡಿದರೂ ಯಾವ ದಾನದಿಂದ ಮನುಷ್ಯನು ಧರ್ಮವನ್ನು ಸಂಪಾದಿಸುತ್ತಾನೆಯೋ ಅಂತಹ ದಾನಗಳನ್ನು ನಿನಗೆ ಹೇಳುವೆನು.

ಸರ್ವೇಷಾಮೇವ ದಾನಾನಾಮನ್ನಂ ಶ್ರೇಷ್ಠಮುದಾಹೃತಮ್ ।
ಪೂರ್ವಮನ್ನಂ ಪ್ರದಾತವ್ಯಮೃಜುನಾ ಧರ್ಮಮಿಚ್ಛತಾ ॥೭॥

ಎಲ್ಲಾ ದಾನಗಳಲ್ಲಿ ಅನ್ನದಾನವು ಶ್ರೇಷ್ಠವೆಂದು ಹೇಳಲಾಗುತ್ತದೆ. ಋಜು ಬುದ್ಧಿಯನ್ನು ಹೊಂದಿ ಧರ್ಮವನ್ನು ಸಂಪಾದಿಸಲು ಬಯಸುವವನು ಮೊದಲು ಅನ್ನದಾನವನ್ನು ಮಾಡಬೇಕು.

ಪ್ರಾಣಾ ಹ್ಯನ್ನಂ ಮನುಷ್ಯಾಣಾಂ ತಸ್ಮಾಜ್ಜಂತುಶ್ಚ ಜಾಯತೇ ।
ಅನ್ನೇ ಪ್ರತಿಷ್ಠಿತಾ ಲೋಕಾಸ್ತಸ್ಮಾದನ್ನಂ ಪ್ರಶಂಸ್ಯತೇ ॥೮॥

ಮನುಷ್ಯರಿಗೆ ಅನ್ನವೇ ಪ್ರಾಣ. ಅನ್ನದಿಂದಲೇ ಪ್ರಾಣಿಗಳು ಜನಿಸುತ್ತವೆ. ಲೋಕಗಳು ಅನ್ನದಲ್ಲಿ ಪ್ರತಿಷ್ಠಿತವಾಗಿವೆ. ಆದ್ದರಿಂದ ಅನ್ನವು ಪ್ರಶಂಸಿಸಲ್ಪಡುತ್ತದೆ.

ಅನ್ನಮೇವ ಪ್ರಶಂಸಂತಿ ದೇವರ್ಷಿಪಿತೃಮಾನವಾಃ ।
ಅನ್ನಸ್ಯ ಹಿ ಪ್ರದಾನೇನ ಸ್ವರ್ಗಮಾಪ್ನೋತಿ ಕೌಶಿಕಃ ॥೯॥

ದೇವತೆಗಳು, ಋಷಿಗಳು, ಪಿತೃಗಳು ಮತ್ತು ಮಾನವರು ಅನ್ನವನ್ನೇ ಪ್ರಶಂಸಿಸುತ್ತಾರೆ. ಅನ್ನವನ್ನು ದಾನ ಮಾಡಿದುದರಿಂದ ಇಂದ್ರನು ಸ್ವರ್ಗವನ್ನು ಹೊಂದುತ್ತಾನೆ (ಹೊಂದಿದನು).

ನ್ಯಾಯಲಬ್ಧಂ ಪ್ರದಾತವ್ಯಂ ದ್ವಿಜೇಭ್ಯೋ ಹ್ಯನ್ನಮುತ್ತಮಮ್ ।
ಸ್ವಾಧ್ಯಾಯಸಮವೇತೇಭ್ಯಃ ಪ್ರಹೃಷ್ಟೇನಾಂತರಾತ್ಮನಾ ॥೧೦॥

ಸ್ವಾಧ್ಯಾಯಯುಕ್ತರಾದ ಬ್ರಾಹ್ಮಣರಿಗೆ ಸಂತುಷ್ಟವಾದ ಮನಸ್ಸಿನಿಂದ, ನ್ಯಾಯಲಬ್ಧವಾದ, ಶ್ರೇಷ್ಠವಾದ ಅನ್ನವನ್ನು ಕೊಡಬೇಕು.

ಯಸ್ಯ ಹ್ಯನ್ನಮುಪಾಶ್ನಂತಿ ಬ್ರಾಹ್ಮಣಾನಾಂ ಶತಾ ದಶ ।
ಹೃಷ್ಟೇನ ಮನಸಾ ದತ್ತಂ ನ ಸ ತಿರ್ಯಗ್ಗತಿರ್ಭವೇತ್ ॥೧೧॥

ಯಾವನು ಸಂತೋಷದಿಂದ ನೀಡಿದ ಅನ್ನವನ್ನು ಸಹಸ್ರ ಬ್ರಾಹ್ಮಣರು ಭುಂಜಿಸುತ್ತಾರೆಯೋ ಅವನು ನೀಚಗತಿಯನ್ನು ಹೊಂದುವುದಿಲ್ಲ.

ಬ್ರಾಹ್ಮಣಾನಾಂ ಸಹಸ್ರಾಣಿ ದಶ ಭೋಜ್ಯ ನರರ್ಷಭ ।
ನರೋಽಧರ್ಮಾತ್ ಪ್ರಮುಚ್ಯೇತ ಪಾಪೇಷ್ವಭಿರತಃ ಸದಾ ॥೧೨॥

ಎಲೈ ನರಶ್ರೇಷ್ಠನೇ, ಪಾಪದಲ್ಲಿ ಯಾವಾಗಲೂ ಅಭಿರತನಾದವನು ಹತ್ತು ಸಹಸ್ರ ಬ್ರಾಹ್ಮಣರಿಗೆ ಭೋಜನವನ್ನು ಮಾಡಿಸಿ ಆ ಅಧರ್ಮದಿಂದ ಮುಕ್ತನಾಗುತ್ತಾನೆ.

ಭೈಕ್ಷೇಣಾನ್ನಂ ಸಮಾಹೃತ್ಯ ವಿಪ್ರೋ ವೇದಪುರಸ್ಕೃತಃ ।
ಸ್ವಾಧ್ಯಾಯನಿರತೇ ವಿಪ್ರೇ ದತ್ತೇ ತ್ವೇಹ ಸುಖಮೇಧತೇ ॥೧೩॥

ವೇದನಿರತನಾದ ಬ್ರಾಹ್ಮಣನು ಭಿಕ್ಷೆಯಿಂದ ಅನ್ನವನ್ನು ತಂದು, ಸ್ವಾಧ್ಯಾಯ ನಿರತನಾದ ಬ್ರಾಹ್ಮಣನಿಗೆ ದಾನವನ್ನು ಮಾಡಿದರೆ ಇಲ್ಲಿ ಸುಖವನ್ನು ಹೊಂದುತ್ತಾನೆ.

ಅಹಿಂಸನ್ ಬ್ರಾಹ್ಮಣಂ ನಿತ್ಯಂ ನ್ಯಾಯೇನ ಪರಿಪಾಲ್ಯ ಚ ।
ಕ್ಷತ್ರಿಯಸ್ತರಸಾ ಪ್ರಾಪ್ತಮನ್ನಂ ಯೋ ವೈ ಪ್ರಯಚ್ಛತಿ ॥೧೪॥

ದ್ವಿಜೇಭ್ಯೋ ವೇದವೃದ್ಧೇಭ್ಯಃ ಪ್ರಯತಃ ಸುಸಮಾಹಿತಃ ।
ತೇನಾಪಾಪೋ ವಿಶುದ್ಧಾತ್ಮಾ ದುಷ್ಕೃತಂ ಕರ್ಮ ಪಾಂಡವ ॥೧೫॥

ಎಲೈ ಪಾಂಡವನೇ, ಕ್ಷತ್ರಿಯನಾದವನು ಬ್ರಾಹ್ಮಣರಿಗೆ ಹಿಂಸೆಯನ್ನು ಮಾಡದೆ ಯಾವಾಗಲೂ ನ್ಯಾಯದಿಂದ ಅವರನ್ನು ರಕ್ಷಿಸಿ ತನ್ನ ಬಲದಿಂದ ಪ್ರಾಪ್ತವಾದ ಅನ್ನವನ್ನು ನಿಯಮದಿಂದ ಕೂಡಿದ, ವೇದವೃದ್ಧರಾದ ಬ್ರಾಹ್ಮಣರಿಗೆ ಸಮಾಧಾನದಿಂದ ದಾನ ಮಾಡಿ ಧರ್ಮಾತ್ಮನಾಗಿ ಮೊದಲು ಮಾಡಿದ ದುಷ್ಕರ್ಮಗಳನ್ನು ಕಳೆದುಕೊಳ್ಳುತ್ತಾನೆ.

ಷಡ್‌ಭಾಗಪರಿಶುದ್ಧಂ ಚ ಕೃಷೇರ್ಭಾಗಮುಪಾರ್ಜಿತಮ್ ।
ವೈಶ್ಯೋ ದದದ್ ದ್ವಿಜಾತಿಭ್ಯಃ ಪಾಪೇಭ್ಯಃ ಪರಿಮುಚ್ಯತೇ ॥೧೬॥

ವೈಶ್ಯನಾದವನು ಕೃಷಿಯನ್ನು ಮಾಡಿ, ಕೃಷಿಯಿಂದ ಬಂದ ಶುದ್ಧವಾದ ದ್ರವ್ಯದಲ್ಲಿ ಆರನೆಯ ಒಂದು ಭಾಗವನ್ನು ಬ್ರಾಹ್ಮಣರಿಗೆ ಕೊಟ್ಟು, ಪಾಪಗಳಿಂದ ಬಿಡುಗಡೆಯನ್ನು ಹೊಂದುತ್ತಾನೆ.

ಅವಾಪ್ಯ ಪ್ರಾಣಸಂದೇಹಂ ಕಾರ್ಕಶ್ಯೇನ ಸಮಾರ್ಜಿತಮ್ ।
ಅನ್ನಂ ದತ್ತ್ವಾ ದ್ವಿಜಾತಿಭ್ಯಃ ಶೂದ್ರಃ ಪಾಪಾತ್ ಪ್ರಮುಚ್ಯತೇ ॥೧೭॥

ಶೂದ್ರನಾದವನು ಪ್ರಾಣಸಂಕಟವನ್ನು ಹೊಂದುವವರೆಗೂ ಕಷ್ಟದಿಂದ ದುಡಿದು ಸಂಪಾದಿಸಿದ ಅನ್ನವನ್ನು ಬ್ರಾಹ್ಮಣರಿಗೆ ಕೊಟ್ಟು ಪಾಪದಿಂದ ಮುಕ್ತನಾಗುತ್ತಾನೆ.

ಔರಸೇನ ಬಲೇನಾನ್ನಮಾರ್ಜಯಿತ್ವಾऽವಿಹಿಂಸಕಃ ।
ಯಃ ಪ್ರಯಚ್ಛತಿ ವಿಪ್ರೇಭ್ಯೋ ನ ಸ ದುರ್ಗಾಣಿ ಸೇವತೇ ॥೧೮॥

ಇನ್ನೊಬ್ಬರಿಗೆ ಹಿಂಸೆಯನ್ನು ಮಾಡದೆ ತನ್ನ ಸ್ವಂತ ಬಲದಿಂದ ಅನ್ನವನ್ನು ಸಂಪಾದಿಸಿ ಬ್ರಾಹ್ಮಣರಿಗೆ ದಾನ ಮಾಡುವವನು ಕಷ್ಟಗಳನ್ನು ಹೊಂದುವುದಿಲ್ಲ.

ನ್ಯಾಯೇನಾವಾಪ್ತಮನ್ನಂ ತು ನರೋ ಲೋಭವಿವರ್ಜಿತಃ ।
ದ್ವಿಜೇಭ್ಯೋ ವೇದವೃದ್ಧೇಭ್ಯೋ ದತ್ತ್ವಾ ಪಾಪಾತ್ ಪ್ರಮುಚ್ಯತೇ ॥೧೯॥

ಮನುಷ್ಯನು ನ್ಯಾಯದಿಂದ ಅನ್ನವನ್ನು ಸಂಪಾದಿಸಿ, ಲೋಭರಹಿತನಾಗಿ ವೇದವಿದ್ವಾಂಸರಾದ ಬ್ರಾಹ್ಮಣರಿಗೆ ದಾನ ಮಾಡಿ ಪಾಪದಿಂದ ಮುಕ್ತನಾಗುತ್ತಾನೆ.

ಅನ್ನಮೂರ್ಜಸ್ಕರಂ ಲೋಕೇ ದತ್ತ್ವೋರ್ಜಸ್ವೀ ಭವೇನ್ನರಃ ।
ಸತಾಂ ಪಂಥಾನಮಾಶ್ರಿತ್ಯ ಸರ್ವಪಾಪಾತ್ ಪ್ರಮುಚ್ಯತೇ ॥೨೦॥

ಲೋಕದಲ್ಲಿ ಅನ್ನವು ಬಲಕಾರಿಯಾದುದು. ಅನ್ನವನ್ನು ದಾನ ಮಾಡುವ ಮನುಷ್ಯನು ಬಲಿಷ್ಠನಾಗುತ್ತಾನೆ. ಸಜ್ಜನರು ಹೋದ ಮಾರ್ಗದಲ್ಲಿ ನಡೆದರೆ ಎಲ್ಲ ಪಾಪಗಳಿಂದಲೂ ಮುಕ್ತನಾಗುತ್ತಾನೆ.

ದಾನಕೃದ್ಭಿಃ ಕೃತಃ ಪಂಥಾ ಯೇನ ಯಾಂತಿ ಮನೀಷಿಣಃ ।
ತೇ ಸ್ಮ ಪ್ರಾಣಸ್ಯ ದಾತಾರಸ್ತೇಭ್ಯೋ ಧರ್ಮಃ ಸನಾತನಃ ॥೨೧॥

ದಾನವನ್ನು ಕೊಟ್ಟ ಪ್ರಾಚೀನರು ಮಾರ್ಗವನ್ನು ಮಾಡಿದ್ದಾರೆ. ವಿವೇಕಿಗಳಾದವರು ಅದೇ ಮಾರ್ಗದಲ್ಲಿ ಹೋಗುತ್ತಾರೆ. ಅವರು ಪ್ರಾಣವನ್ನು ಬೇಕಾದರೂ ಕೊಡುವವರು. ಅವರಿಗೆ ಸನಾತನ ಧರ್ಮವೇ ಶ್ರೇಷ್ಠವಾದುದು.

ಸರ್ವಾವಸ್ಥಂ ಮನುಷ್ಯೇಣ ನ್ಯಾಯೇನಾನ್ನಮುಪಾರ್ಜಿತಮ್ ।
ಕಾರ್ಯಂ ಪಾತ್ರಗತಂ ನಿತ್ಯಮನ್ನಂ ಹಿ ಪರಮಾ ಗತಿಃ ॥೨೨॥

ಸರ್ವಾವಸ್ಥೆಗಳಲ್ಲಿಯೂ ಮನುಷ್ಯನು ನ್ಯಾಯದಿಂದ ಗಳಿಸಿದ ಅನ್ನವನ್ನು ಪಾತ್ರರಿಗೆ (ಯೋಗ್ಯರಿಗೆ) ದಾನವನ್ನು ಮಾಡಬೇಕು. ಅನ್ನದಾನವು ಯಾವಾಗಲೂ ಶ್ರೇಷ್ಠವಾದ ಗತಿಯನ್ನು ಕೊಡುತ್ತದೆ.

ಅನ್ನಸ್ಯ ಹಿ ಪ್ರದಾನೇನ ನರೋ ದುರ್ಗಂ ನ ಸೇವತೇ ।
ತಸ್ಮಾದನ್ನಂ ಪ್ರದಾತವ್ಯಮನ್ಯಾಯಪರಿವರ್ಜಿತಮ್ ॥೨೩॥

ಅನ್ನದಾನವನ್ನು ಮಾಡುವ ಮನುಷ್ಯನು ಕಷ್ಟಗಳನ್ನು ಹೊಂದುವುದಿಲ್ಲ. ಆದ್ದರಿಂದ ಅನ್ಯಾಯದ ಸ್ಪರ್ಶವಿಲ್ಲದ ಅನ್ನವನ್ನು ದಾನ ಮಾಡಬೇಕು.

ಯತೇದ್ ಬ್ರಾಹ್ಮಣಪೂರ್ವಂ ಹಿ ಭೋಕ್ತುಮನ್ನಂ ಗೃಹೀ ಸದಾ ।
ಅವಂಧ್ಯಂ ದಿವಸಂ ಕುರ್ಯಾದ್ ದಾನಾಧ್ಯಯನಕರ್ಮಭಿಃ ॥೨೪॥

ಗೃಹಸ್ಥನು ಮೊದಲು ಬ್ರಾಹ್ಮಣರಿಗೆ ಅನ್ನವನ್ನು ದಾನ ಮಾಡಿ ಅನಂತರ ಭೋಜನ ಮಾಡಲು ಪ್ರಯತ್ನಿಸಬೇಕು. ದಾನ, ಅಧ್ಯಯನ ಮತ್ತು ಸಂಧ್ಯಾದಿ ಕರ್ಮಗಳಿಲ್ಲದೆ ದಿವಸವನ್ನು ಬಂಜೆಯನ್ನಾಗಿ ಮಾಡಬಾರದು.

ಭೋಜಯಿತ್ವಾ ದಶಶತಂ ನರೋ ವೇದವಿದಾಂ ನೃಪ ।
ನ್ಯಾಯವಿದ್ಧರ್ಮವಿದುಷಾಮಿತಿಹಾಸವಿದಾಂ ತಥಾ ॥೨೫॥

ನ ಯಾತಿ ನರಕಂ ಘೋರಂ ದರಿದ್ರಶ್ಚ ನ ಜಾಯತೇ ।
ಸರ್ವಕಾಮಸಮಾಯುಕ್ತಃ ಪ್ರೇತ್ಯ ಚಾಪ್ಯಶ್ನುತೇ ಫಲಮ್ ॥೨೬॥

ಎಲೈ ರಾಜನೇ, ವೇದಜ್ಞರಾದ, ನ್ಯಾಯಜ್ಞರಾದ, ಧರ್ಮಜ್ಞರಾದ, ಇತಿಹಾಸಜ್ಞರಾದ ಸಹಸ್ರ ಬ್ರಾಹ್ಮಣರಿಗೆ ಭೋಜನವನ್ನು ಮಾಡಿಸುವ ಮನುಷ್ಯನು ಘೋರವಾದ ನರಕಕ್ಕೆ ಹೋಗುವುದಿಲ್ಲ. ದರಿದ್ರನಾಗಿ ಜನಿಸುವುದಿಲ್ಲ. ಮರಣವನ್ನು ಹೊಂದಿದ ಮೇಲೆ ಎಲ್ಲ ಕಾಮಗಳಿಂದಲೂ ಯುಕ್ತನಾಗಿ ಒಳ್ಳೆಯ ಫಲವನ್ನು ಹೊಂದುತ್ತಾನೆ.

ಏವಂ ಸುಖಿಸಮಾಯುಕ್ತೋ ರಮತೇ ವಿಗತಜ್ವರಃ ।
ರೂಪವಾನ್ ಕೀರ್ತಿಮಾಂಶ್ಚೈವ ಧನವಾಂಶ್ಚೋಪಪದ್ಯತೇ ॥೨೭॥

ಹೀಗೆ ಸುಖದಿಂದ ಕೂಡಿದವನಾಗಿ ನಿರಾತಂಕವಾಗಿ ಸಂತೋಷಪಡುತ್ತಾನೆ. ರೂಪವಂತನೂ, ಕೀರ್ತಿವಂತನೂ ಮತ್ತು ಧನವಂತನೂ ಆಗುತ್ತಾನೆ.

ಏತತ್ತೇ ಸರ್ವಮಾಖ್ಯಾತಮನ್ನದಾನಫಲಂ ಮಹತ್ ।
ಮೂಲಮೇತದ್ಧಿ ಧರ್ಮಾರ್ಥೇ ಪ್ರದಾನಂ ಚ ಪರಂತಪ ॥೨೮॥

ಎಲೈ ಪರಂತಪನೇ, ಶ್ರೇಷ್ಠವಾದ ಅನ್ನದಾನ ಫಲವನ್ನೆಲ್ಲಾ ನಿನಗೆ ಹೇಳಿದ್ದೇನೆ. ಈ ಅನ್ನದಾನವೇ ಧರ್ಮವನ್ನು ಸಂಪಾದನೆ ಮಾಡುವುದಕ್ಕೆ ಮೂಲಭೂತವಾದುದು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ತ್ರಿಷಷ್ಟ್ಯುತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಅರವತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಅರವತ್ನಾಲ್ಕನೆಯ ಅಧ್ಯಾಯ

ಅಹಿಂಸೆಯ ಪ್ರಶಂಸೆ

ಯುಧಿಷ್ಠಿರಃ

ಅಹಿಂಸಾ ವೈದಿಕಂ ಕರ್ಮ ಧ್ಯಾನಮಿಂದ್ರಿಯಸಂಯಮಃ ।
ತಪೋऽಥ ಗುರುಶುಶ್ರೂಷಾ ಕಿಂ ಶ್ರೇಯಃ ಪುರುಷಂ ಪ್ರತಿ ॥೧॥

ಯುಧಿಷ್ಠಿರ– ಅಹಿಂಸೆ, ವೇದೋಕ್ತಕರ್ಮಾನುಷ್ಠಾನ, ದಾನ, ಇಂದ್ರಿಯನಿಗ್ರಹ, ತಪಸ್ಸು ಮತ್ತು ಗುರುಶುಶ್ರೂಷೆ ಇವುಗಳಲ್ಲಿ ಪುರುಷನಿಗೆ ಶ್ರೇಷ್ಠವಾದುದು ಯಾವುದು?

ಬೃಹಸ್ಪತಿಃ

ಸರ್ವಾಣ್ಯೇತಾನಿ ಧರ್ಮಸ್ಯ ಪೃಥಗ್‌ದ್ವಾರಾಣಿ ಸರ್ವಶಃ ।
ಶೃಣು ಸಂಕೀರ್ತ್ಯಮಾನಾನಿ ಷಡೇವ ಭರತರ್ಷಭ ॥೨॥

ಬೃಹಸ್ಪತಿ– ಎಲೈ ಭರತರ್ಷಭನೇ, ಈ ಆರೂ ಮನುಷ್ಯನಿಗೆ ಧರ್ಮದ ಬೇರೆ ಬೇರೆ ದ್ವಾರಗಳು. ಅವುಗಳನ್ನು ಹೇಳುತ್ತೇನೆ, ಕೇಳು.

ಹಂತ ನಿಃಶ್ರೇಯಸಂ ಜಂತೋರಹಂ ವಕ್ಷ್ಯಾಮ್ಯನುತ್ತಮಮ್ ॥೩॥

ಸಂತೋಷ, ಮನುಷ್ಯರಿಗೆ ಶ್ರೇಯಸ್ಕರವಾದ ಧರ್ಮವನ್ನು ನಾನು ಹೇಳುವೆನು.

ಅಹಿಂಸಾಪಾಶ್ರಯಂ ಧರ್ಮಂ ಯಃ ಸಾಧಯತಿ ವೈ ನರಃ।
ತ್ರೀನ್ ದೋಷಾನ್ ಸರ್ವಭೂತೇಷು ನಿಧಾಯ ಪುರುಷಃ ಸದಾ ।
ಕಾಮಕ್ರೋಧೌ ಚ ಸಂಯಮ್ಯ ತತಃ ಸಿದ್ಧಿಮುಪಾಶ್ನುತೇ ॥೪॥

ಅಹಿಂಸೆಯನ್ನು ಆಶ್ರಯಿಸಿದ ಧರ್ಮವನ್ನು ಯಾವ ಮನುಷ್ಯನು ಸಾಧಿಸುತ್ತಾನೆಯೋ, ಸರ್ವಭೂತಗಳ ವಿಷಯದಲ್ಲಿ ಮೂರು ದೋಷಗಳನ್ನು - ಹಿಂಸೆ, ಅಪರಾಧ ಮತ್ತು ನಿಂದೆಗಳನ್ನು, ದೂರದಲ್ಲಿಟ್ಟು ಕಾಮಕ್ರೋಧಗಳನ್ನು ಜಯಿಸುವವನು ಸಿದ್ಧನೆನಿಸುತ್ತಾನೆ.

ಅಹಿಂಸಕಾನಿ ಭೂತಾನಿ ದಂಡೇನ ವಿನಿಹಂತಿ ಯಃ ।
ಆತ್ಮನಃ ಸುಖಮನ್ವಿಚ್ಛನ್ ನ ಸ ಪ್ರೇತ್ಯ ಸುಖೀ ಭವೇತ್ ॥೫॥

ತನ್ನ ಸುಖವನ್ನು ಬಯಸಿ ಹಿಂಸೆಯನ್ನು ಮಾಡದಿದ್ದ ಪ್ರಾಣಿಗಳನ್ನು ಯಾವನು ದಂಡದಿಂದ ಹೊಡೆಯುತ್ತಾನೆಯೋ ಅವನು ಮೃತನಾದ ಮೇಲೆ ಸುಖವನ್ನು ಹೊಂದುವುದಿಲ್ಲ.

ಆತ್ಮೋಪಮಶ್ಚ ಭೂತೇಷು ಯೋ ವೈ ಭವತಿ ಪೂರುಷಃ ।
ನ್ಯಸ್ತದಂಡೋ ಜಿತಕ್ರೋಧಃ ಸ ಪ್ರೇತ್ಯ ಸುಖಮೇಧತೇ ॥೬॥

ಯಾವನು ದಂಡವನ್ನು ತ್ಯಜಿಸಿ, ಕ್ರೋಧವನ್ನು ಜಯಿಸಿ, ತನ್ನಂತೆಯೇ ಎಲ್ಲ ಪ್ರಾಣಿಗಳ ಜೊತೆಯಲ್ಲಿಯೂ ವರ್ತಿಸುತ್ತಾನೆಯೋ ಅವನು ಮರಣವನ್ನು ಹೊಂದಿ ಸುಖವನ್ನು ಪಡೆಯುತ್ತಾನೆ.

ಸರ್ವಭೂತಾತ್ಮಭೂತಸ್ಯ ಸರ್ವಭೂತಾನಿ ಪಶ್ಯತಃ ।
ದೇವಾಪಿ ಮಾರ್ಗೇ ಮುಹ್ಯಂತಿ ಅಪದಸ್ಯ ಪದೈಷಿಣಃ ॥೭॥

ಸರ್ವಭೂತಗಳು ಸರ್ವಭೂತಗಳ ಅಂತರ್ಯಾಮಿಯಾದ ಪರಮಾತ್ಮನಿಗೆ ಸೇರಿದವುಗಳು ಎಂದು ತಿಳಿಯುವವನು ನಡೆಯುವ ಮಾರ್ಗದಲ್ಲಿ ದಾರಿಯನ್ನು ಕಾಣದೆ ದೇವತೆಗಳೂ ಮೋಹಕ್ಕೆ ಒಳಗಾಗುತ್ತಾರೆ.

ನ ತತ್‌ಪರಸ್ಯ ಸಂದದ್ಯಾತ್ ಪ್ರತಿಕೂಲಂ ಯದಾತ್ಮನಃ ।
ಏಷ ಸಂಕ್ಷೇಪತೋ ಧರ್ಮಃ ಕಾಮಾದನ್ಯಃ ಪ್ರವರ್ತತೇ ॥೮॥

ತನಗೆ ಯಾವುದು ಅಪ್ರಿಯವೋ ಅದನ್ನು ಇನ್ನೊಬ್ಬರಿಗೆ ಮಾಡಬಾರದು. ಇದು ಧರ್ಮದ ಸಂಕ್ಷೇಪ. ಉಳಿದೆಲ್ಲವೂ ಕಾಮದಿಂದ ಪ್ರವೃತ್ತವಾಗುತ್ತವೆ.

ಪ್ರತ್ಯಾಖ್ಯಾನೇ ಚ ದಾನೇ ಚ ಸುಖದುಃಖೇ ಪ್ರಿಯಾಪ್ರಿಯೇ ।
ಆತ್ಮೌಪಮ್ಯೇನ ಪುರುಷಃ ಸಮಾಧಿಮಧಿಗಚ್ಛತಿ ॥೯॥

ನಿರಾಕರಣೆ, ದಾನ, ಸುಖ-ದುಃಖಗಳು, ಪ್ರಿಯಾಪ್ರಿಯಗಳು ಇವುಗಳ ವಿಷಯದಲ್ಲಿ ಯಾವನು ಇನ್ನೊಬ್ಬನನ್ನು ತನ್ನಂತೆ ನೋಡುತ್ತಾನೆಯೋ ಅವನು ಸಮಾಧಿಯನ್ನು ಪಡೆಯುತ್ತಾನೆ.

ಯಥಾ ಪರಃ ಪ್ರಕ್ರಮತೇऽಪರೇಷು
ತಥಾऽಪರಃ ಪ್ರಕ್ರಮತೇ ಪರಸ್ಮಿನ್ ।
ಏಷೈವ ತೇऽಸ್ತೂಪಮಾ ಜೀವಲೋಕೇ
ಯಥಾ ಧರ್ಮೋ ನಿಪುಣೇನೋಪದಿಷ್ಟಃ ॥೧೦॥

ಹೇಗೆ ಒಬ್ಬನು ಇನ್ನೊಬ್ಬರ ವಿಷಯದಲ್ಲಿ ನಡೆದುಕೊಳ್ಳುತ್ತಾನೆಯೋ ಆ ಇನ್ನೊಬ್ಬನೂ ಸಹ ತನ್ನ ವಿಷಯದಲ್ಲಿ ಹಾಗೆಯೇ ನಡೆದುಕೊಳ್ಳುತ್ತಾನೆ. ಇದೇ ಜೀವಲೋಕದಲ್ಲಿ ನಡೆಯುವ ರೀತಿ. ಆದ್ದರಿಂದ ವಿವೇಕಿಗಳಾದವರು ಉಪದೇಶ ಮಾಡಿದುದೇ ಧರ್ಮವಾಗುತ್ತದೆಯೇ ಹೊರತು ತನ್ನ ಮನಸ್ಸಿಗೆ ಬಂದಂತೆ ನಡೆದುಕೊಳ್ಳುವುದು ಧರ್ಮವಲ್ಲ(ಲಕ್ಷ್ಯಲಂಕಾರ).

ವೈಶಂಪಾಯನಃ

ಇತ್ಯುಕ್ತ್ವಾ ತಂ ಸುರಗುರುರ್ಧರ್ಮರಾಜಂ ಯುಧಿಷ್ಠಿರಮ್ ।
ದಿವಮಾಚಕ್ರಮೇ ಧೀಮಾನ್ ಸರ್ವೇಷಾಮೇವ ಪಶ್ಯತಾಮ್ ॥೧೧॥

ವೈಶಂಪಾಯನ– ದೇವಗುರುಗಳಾದ, ಮೇಧಾವಿಗಳಾದ ಬೃಹಸ್ಪತಿಗಳು ಧರ್ಮಪುತ್ರನಾದ ಯುಧಿಷ್ಠಿರನಿಗೆ ಹೀಗೆ ಹೇಳಿ ಎಲ್ಲರೂ ನೋಡುತ್ತಿರುವಂತೆಯೇ ಸ್ವರ್ಗಕ್ಕೆ ಹೊರಟು ಹೋದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ಚತುಃಷಷ್ಟ್ಯುತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಅರವತ್ನಾಲ್ಕನೆಯ ಅಧ್ಯಾಯ ಮುಗಿಯಿತು.

॥ ಇತಿ ಯುಧಿಷ್ಠಿರ-ಬೃಹಸ್ಪತಿಸಂವಾದಃ ಸಮಾಪ್ತಃ ॥

★ ★ ★ ★ ★

ನೂರ ಅರವತ್ತೈದನೆಯ ಅಧ್ಯಾಯ

ಅಹಿಂಸಾ ಪ್ರಕಾರಗಳು

ವೈಶಂಪಾಯನಃ

ತತೋ ಯುಧಿಷ್ಠಿರೋ ರಾಜಾ ಶರತಲ್ಪೇ ಪಿತಾಮಹಮ್ ।
ಪುನರೇವ ಮಹಾತೇಜಾಃ ಪಪ್ರಚ್ಛ ವದತಾಂವರಮ್ ॥೧॥

ವೈಶಂಪಾಯನ– ಅನಂತರ ಮಹಾತೇಜಸ್ವಿಯಾದ ಯುಧಿಷ್ಠಿರ ರಾಜನು ಶರತಲ್ಪದಲ್ಲಿ ಮಲಗಿದ, ಮಾತನಾಡುವವರಲ್ಲಿ ಶ್ರೇಷ್ಠರಾದ ಪಿತಾಮಹರನ್ನು ಕುರಿತು ಪುನಃ ಪ್ರಶ್ನೆಯನ್ನು ಮಾಡಿದನು.

ಋಷಯೋ ಬ್ರಾಹ್ಮಣಾ ದೇವಾಃ ಪ್ರಶಂಸಂತಿ ಮಹಾಮತೇ ।
ಅಹಿಂಸಾಲಕ್ಷಣಂ ಧರ್ಮಂ ವೇದಪ್ರಾಮಾಣ್ಯಲಕ್ಷಣಾತ್ ॥೨॥

ಎಲೈ ಮಹಾಮತಿಯೇ, ವೇದಪ್ರಾಮಾಣ್ಯವನ್ನು ಆಧರಿಸಿ ಋಷಿಗಳು, ಬ್ರಾಹ್ಮಣರು ಮತ್ತು ದೇವತೆಗಳು ಅಹಿಂಸಾರೂಪವಾದ ಧರ್ಮವನ್ನು ಪ್ರಶಂಸೆ ಮಾಡುತ್ತಾರೆ.

ಕರ್ಮಣಾ ಮನುಜಃ ಕುರ್ವನ್ ಹಿಂಸಾಂ ಪಾರ್ಥಿವಸತ್ತಮ ।
ವಾಚಾ ಚ ಮನಸಾ ಚೈವ ಕಥಂ ದುಃಖಾತ್ ಪ್ರಮುಚ್ಯತೇ ॥೩॥

ಎಲೈ ಪಾರ್ಥಿವಶ್ರೇಷ್ಠನೇ, ಕರ್ಮದಿಂದ, ಮಾತಿನಿಂದ, ಮನಸ್ಸಿನಿಂದ ಹಿಂಸೆಯನ್ನು ಮಾಡುವ ಮನುಷ್ಯನು ಹೇಗೆ ದುಃಖದಿಂದ ಪಾರಾಗುತ್ತಾನೆ?

ಭೀಷ್ಮಃ

ಚತುರ್ವಿಧೇಯಂ ನಿರ್ದಿಷ್ಟಾ ಅಹಿಂಸಾ ಬ್ರಹ್ಮವಾದಿಭಿಃ ।
ಏಷೈಕತೋಽಪಿ ವಿಭ್ರಷ್ಟಾ ನ ಭವತ್ಯರಿಸೂದನ ॥೪॥

ಭೀಷ್ಮ– ಈ ಅಹಿಂಸೆಯು ಮನಸ್ಸಿನಿಂದ ಅಹಿಂಸೆ, ಮಾತಿನಿಂದ ಅಹಿಂಸೆ, ದೇಹದಿಂದ ಅಹಿಂಸೆ ಮತ್ತು ಕರ್ಮದಿಂದ ಅಹಿಂಸೆ ಎಂದು ನಾಲ್ಕು ವಿಧವಾದುದೆಂದು ಬ್ರಹ್ಮವಾದಿಗಳು ಹೇಳುತ್ತಾರೆ. ಎಲೈ ಶತ್ರುಸೂದನನೇ, ಅದರಲ್ಲಿ ಒಂದು ವಿಧವಾದುದು ನ್ಯೂನವಾದರೂ ಅಹಿಂಸೆಯು ಪೂರ್ಣವಾಗುವುದಿಲ್ಲ.

ಯಥಾ ಸರ್ವಶ್ಚತುಷ್ಪಾದಸ್ತ್ರಿಭಿಃ ಪಾದೈರ್ನ ತಿಷ್ಠತಿ ।
ತಥೈವೇಯಂ ಮಹೀಪಾಲ ಪ್ರೋಚ್ಯತೇ ಕಾರಣೈಸ್ತ್ರಿಭಿಃ ॥೫॥

ಎಲೈ ಮಹೀಪಾಲನೇ, ಹೇಗೆ ನಾಲ್ಕು ಪಾದಗಳುಳ್ಳ ಪ್ರಾಣಿಯು ಮೂರು ಪಾದಗಳಲ್ಲಿ ನಿಲ್ಲಲಾರದೋ ಹಾಗೆ ನಾಲ್ಕು ಅಂಗಗಳನ್ನು ಹೊಂದಿರುವ ಅಹಿಂಸೆಯು ಮೂರೇ ಅಂಗಗಳಿಂದ ಪೂರ್ಣವಾಗಿ ನಿಲ್ಲಲಾರದು.

ಯಥಾ ನಾಗಪದೇಽನ್ಯಾನಿ ಪದಾನಿ ಪದಗಾಮಿನಾಮ್ ।
ಸರ್ವಾಣ್ಯೇವಾಪಿಧೀಯಂತೇ ಪದಜಾತಾನಿ ಕೌಂಜರೇ ।
ಏವಂ ಲೋಕೇಷ್ವಹಿಂಸಾ ತು ನಿರ್ದಿಷ್ಟಾ ಧರ್ಮತಃ ಪರಾ ॥೬॥

ಹೇಗೆ ಆನೆಯ ಹೆಜ್ಜೆಯಲ್ಲಿ ನಡೆಯುವ ಉಳಿದ ಎಲ್ಲ ಪ್ರಾಣಿಗಳ ಹೆಜ್ಜೆಗಳು ಮುಳುಗಿಹೋಗುತ್ತವೆಯೋ ಅದರಂತೆ ಅಹಿಂಸಾ ರೂಪವಾದ ಧರ್ಮದಲ್ಲಿ ಉಳಿದ ಎಲ್ಲ ಧರ್ಮಗಳೂ ಅಡಗಿ ಹೋಗುತ್ತವೆ.

ಕರ್ಮಣಾ ಲಿಪ್ಯತೇ ಜಂತುರ್ವಾಚಾ ಚ ಮನಸೈವ ಚ ॥೭॥

ಪೂರ್ವಂ ತು ಮನಸಾ ತ್ಯಕ್ತ್ವಾ ತಥಾ ವಾಚಾಽಥ ಕರ್ಮಣಾ ।
ತ್ರಿಕಾರಣಂ ತು ನಿರ್ದಿಷ್ಟಂ ಶ್ರೂಯತೇ ಬ್ರಹ್ಮವಾದಿಭಿಃ ॥೮॥

ಮನುಷ್ಯನು ಕರ್ಮದಿಂದ, ಮನಸ್ಸಿನಿಂದ ಮತ್ತು ಮಾತಿನಿಂದ ಲೇಪವನ್ನು ಹೊಂದುತ್ತಾನೆ. ಆದ್ದರಿಂದ ಮೊದಲು ಮನಸ್ಸಿನಿಂದ, ಅನಂತರ ಮಾತಿನಿಂದ, ಅನಂತರ

ಕರ್ಮದಿಂದ ಅಹಿಂಸೆಯನ್ನು ಜಯಿಸಬೇಕೆಂದು ಬ್ರಹ್ಮವಾದಿಗಳು ಹಿಂಸೆಗೆ ಈ ಮೂರು ಕಾರಣಗಳೆಂದು ಹೇಳಿರುವುದು ಕೇಳಿ ಬರುತ್ತದೆ.

ಮನೋವಾಚಿ ತಥಾಸ್ವಾದೇ ದೋಷಾ ಹ್ಯೇಷು ಪ್ರತಿಷ್ಠಿತಾಃ ।
ನ ಭಕ್ಷಯಂತ್ಯತೋ ಮಾಂಸಂ ತಪೋಯುಕ್ತಾ ಮನೀಷಿಣಃ ॥೯॥

ಮನಸ್ಸಿನಲ್ಲಿ, ಮಾತಿನಲ್ಲಿ ಹಾಗೆಯೇ ಆಸ್ವಾದದಲ್ಲಿ (ಆಹಾರದಲ್ಲಿ) ದೋಷಗಳು ಪ್ರತಿಷ್ಠಿತವಾಗಿವೆ. ಆದ್ದರಿಂದ ತಪೋಯುಕ್ತರಾದ ಜ್ಞಾನಿಗಳು ಮಾಂಸವನ್ನು ಭಕ್ಷಿಸುವುದಿಲ್ಲ.

ದೋಷಾಂಸ್ತು ಭಕ್ಷಣೇ ರಾಜನ್ ಮಾಂಸಸ್ಯೇಹ ನಿಬೋಧ ಮೇ ।
ಪುತ್ರಮಾಂಸೋಪಮಂ ಜಾನನ್ ಖಾದತೇ ಯೋ ವಿಚೇತನಃ ॥೧೦॥

ಎಲೈ ರಾಜನೇ, ಮಾಂಸಭಕ್ಷಣದಲ್ಲಿರುವ ದೋಷಗಳನ್ನು ನನ್ನಿಂದ ಕೇಳು. ಯಾವನು ಪ್ರಾಣಿಗಳ ಮಾಂಸವು ತನ್ನ ಪುತ್ರನ ಮಾಂಸಕ್ಕೆ ಸಮಾನವೆಂದು ತಿಳಿದೂ ಮೋಹಪರವಶನಾಗಿ ಮಾಂಸವನ್ನು ತಿನ್ನುತ್ತಾನೆಯೋ ಅವನನ್ನು ಪುರುಷಾಧಮನೆಂದು ಕರೆಯುತ್ತಾರೆ.

ಮಾತಾಪಿತೃಸಮಾಯೋಗೇ ಪುತ್ರತ್ವಂ ಜಾಯತೇ ಯಥಾ ।
ರಸಶ್ಚ ಪ್ರತಿಜಿಹ್ವಾಯಾಂ ಪ್ರಜ್ಞಾನಂ ಜಾಯತೇ ತಥಾ ।
ತಥಾ ಶಾಸ್ತ್ರೇಷು ನಿಯತಂ ರಾಗೋ ಹ್ಯಾಸ್ವಾದಿತಾದ್ ಭವೇತ್ ॥೧೧॥

ಮಾತಾ-ಪಿತೃಗಳ ಸಂಯೋಗದಿಂದ ಪುತ್ರನು ಜನಿಸುತ್ತಾನೆ. ರಸಕ್ಕೂ ಮತ್ತು ಜಿಹ್ವೆಗೂ ಸಂಯೋಗ ಉಂಟಾಗುವುದರಿಂದ ಹಾಗೆಯೇ ರಸಜ್ಞಾನವು ಉಂಟಾಗುತ್ತದೆ. ಹಾಗೆಯೇ ಆಸ್ವಾದನೆ ಮಾಡಿದ ಶಾಸ್ತ್ರಗಳಲ್ಲಿ ನಿಯತವಾಗಿ ರಾಗವುಂಟಾಗುತ್ತದೆ (ಲಕ್ಷಾಲಂಕಾರ).

ಸಂಸ್ಕೃತಾಸಂಸ್ಕೃತಾ ಪಕ್ವಾ ಲವಣಾಲವಣಾಸ್ತಥಾ ।
ಪ್ರಜ್ಞಾಯಂತೇ ಯಥಾ ಭಾವಾಸ್ತಥಾ ಚಿತ್ತಂ ನಿರುಧ್ಯತೇ ॥೧೨॥

ಅಸಂಸ್ಕೃತವಾದ, ಅಪಕ್ವವಾದ, ಲವಣರಹಿತವಾದ ಆಹಾರದಲ್ಲಿ ಅಸಾರತ್ವ ಬುದ್ಧಿಯಿಂದ ಹೇಗೆ ಮನೋನಿರೋಧವು ಮಾಡಲ್ಪಡುತ್ತದೆಯೋ ಅದರಂತೆ ಸಂಸ್ಕೃತವಾದ, ಪಕ್ವವಾದ, ಲವಣ ಸಹಿತವಾದ ಮಾಂಸದಲ್ಲಿಯೂ ದೋಷವನ್ನು ನೋಡಿ ಮನೋನಿರೋಧವನ್ನು ಮಾಡಬೇಕು (ಲಕ್ಷಾಲಂಕಾರ).

ಭೇರೀಶಂಖಮೃದಂಗಾದ್ಯಾಂಸ್ತಂತ್ರೀಶಬ್ದಾಂಶ್ಚ ಪುಷ್ಕಲಾನ್ ।
ನಿಷೇವಿಷ್ಯಂತಿ ವೈ ಮಂದಾ ಮಾಂಸಭಕ್ಷಾ ಕಥಂ ನರಾಃ ॥೧೩॥

ಯಾವ ಮಂದರಾದ ಮನುಷ್ಯರು ಮಾಂಸಭಕ್ಷಣದಲ್ಲಿಯೇ ನಿರತರಾಗಿರುತ್ತಾರೆಯೋ ಅವರು ಪುಷ್ಕಳವಾದ ಭೇರೀ, ಶಂಖ, ಮೃದಂಗ ಶಬ್ದಗಳನ್ನೂ, ತಂತ್ರೀವಾದ್ಯ ಶಬ್ದಗಳನ್ನೂ ಹೇಗೆ ಆಸ್ವಾದಿಸುತ್ತಾರೆ?

ಅಚಿಂತಿತಮನುದ್ದಿಷ್ಟಮಸಂಕಲ್ಪಿತಮೇವ ಚ ।
ರಸಂ ಗೃದ್ಧ್ಯಾಭಿಭೂತಾ ವೈ ಪ್ರಶಂಸಂತಿ ಫಲಾರ್ಥಿನಃ ।
ಪ್ರಶಂಸಾಮೇವ ಮಾಂಸಸ್ಯ ದೋಷಕರ್ಮಫಲಾನ್ವಿತಾಃ ॥೧೪॥

ಆಸೆಯಿಂದ ಕೂಡಿದ ಫಲಾರ್ಥಿಗಳಾದವರು ಚಿಂತಿಸದಿದ್ದ, ಉದ್ದೇಶಿಸದಿದ್ದ, ಅಸಂಕಲ್ಪಿತವಾದ ರಸಗಳನ್ನು ಪ್ರಶಂಸಿಸುತ್ತಾರೆ. ದೋಷಕರ್ಮ ಫಲಾನ್ವಿತರಾದವರು ಮಾಂಸದ ಪ್ರಶಂಸೆಯನ್ನೇ ಮಾಡುತ್ತಾರೆ (ಲಕ್ಷಾಲಂಕಾರ).

ಜೀವಿತಂ ಹಿ ಪರಿತ್ಯಕ್ತ್ವಾ ಬಹವಃ ಸಾಧವೋ ಜನಾಃ ।
ಸ್ವಮಾಂಸೈಃ ಪರಮಾಂಸಾನಿ ಪರಿಪಾಲ್ಯ ದಿವಂ ಗತಾಃ ॥೧೫॥

ಅನೇಕ ಸಾಧುಜನರು ತಮ್ಮ ಜೀವನವನ್ನು ತ್ಯಾಗ ಮಾಡಿ ತಮ್ಮ ಮಾಂಸಗಳಿಂದ ಇನ್ನೊಬ್ಬರ ಮಾಂಸವನ್ನು ರಕ್ಷಿಸಿ ಸ್ವರ್ಗಕ್ಕೆ ಹೋಗಿದ್ದಾರೆ.

ಏವಮೇಷಾ ಮಹಾರಾಜ ಚತುರ್ಭಿಃ ಕಾರಣೈರ್ವೃತಾ ।
ಅಹಿಂಸಾ ತವ ನಿರ್ದಿಷ್ಟಾ ಸರ್ವಧರ್ಮಾರ್ಥಸಂಹಿತಾ ॥೧೬॥

ಎಲೈ ಮಹಾರಾಜನೇ, ಹೀಗೆ ಈ ಅಹಿಂಸೆಯು ನಾಲ್ಕು ಕಾರಣಗಳಿಂದ ಕೂಡಿದೆ. ಅಹಿಂಸೆಯೇ ಸರ್ವಧರ್ಮಾರ್ಥಗಳ ಸಂಹಿತೆ ಎಂದು ಹೇಳಲ್ಪಡುತ್ತದೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಅಹಿಂಸಾಪ್ರಕಾರೋನಾಮ
ಪಂಚಷಷ್ಟ್ಯುತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಅರವತ್ತೈದನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಅರವತ್ತಾರನೆಯ ಅಧ್ಯಾಯ

ಅಹಿಂಸಾದಿಗಳಿಗೆ ಶ್ರೇಯಸ್ತ್ವವನ್ನು ನಿರೂಪಿಸಿದುದು.

ಯುಧಿಷ್ಠಿರಃ

ಅಹಿಂಸಾ ಪರಮೋ ಧರ್ಮ ಇತ್ಯುಕ್ತಂ ಬಹುಶಸ್ತ್ವಯಾ ।
ಶ್ರಾದ್ಧೇಷು ಚ ಭವಾನಾಹ ಪಿತೄನಾಮಿಷಕಾಂಕ್ಷಿಣಃ ॥೧॥

ಯುಧಿಷ್ಠಿರ– ಅಹಿಂಸೆಯು ಶ್ರೇಷ್ಠವಾದ ಧರ್ಮವೆಂದು ಅನೇಕ ಬಾರಿ ಹೇಳಿದ್ದೀಯೆ ಮತ್ತು ಶ್ರಾದ್ಧದಲ್ಲಿ ಪಿತೃಗಳು ಮಾಂಸವನ್ನು ಆಕಾಂಕ್ಷಿಸುತ್ತಾರೆ ಎಂದೂ ಹೇಳಿದ್ದೀಯೆ.

ಮಾಂಸೈರ್ಬಹುವಿಧೈಃ ಪ್ರೋಕ್ತಸ್ತ್ವಯಾ ಶ್ರಾದ್ಧವಿಧಿಃ ಪುರಾ ।
ಅಹತ್ವಾ ಚ ಕುತೋ ಮಾಂಸಮ್ ಏತದ್ವಿ ವಿಧಿರುಚ್ಯತೇ ॥೨॥

ಅನೇಕ ವಿಧವಾದ ಮಾಂಸಗಳಿಂದ ನೀವು ಹಿಂದೆ ಶ್ರಾದ್ಧವಿಧಿಯನ್ನು ಹೇಳಿದ್ದೀರಿ. ಪ್ರಾಣಿವಧೆಯನ್ನು ಮಾಡದೆ ಮಾಂಸವು ಎಲ್ಲಿಂದ ಬರಬೇಕು? ಮಾಂಸವು ಶ್ರಾದ್ಧದಲ್ಲಿ ವಿಹಿತವಷ್ಟೆ?

ಜಾತೋ ನಃ ಸಂಶಯೋ ಧರ್ಮೇ ಮಾಂಸಸ್ಯ ಪರಿವರ್ಜನೇ ।
ದೋಷೋ ಭಕ್ಷಯತಃ ಕಃ ಸ್ಯಾತ್ ಕಶ್ಚಾಭಕ್ಷಯತೋ ಗುಣಃ ॥೩॥

ಮಾಂಸಭಕ್ಷಣೆ ಮಾಡಿದವನಿಗೆ ಏನು ದೋಷ? ಭಕ್ಷಣೆ ಮಾಡದಿದ್ದವನಿಗೆ ಏನು ಗುಣ? ಮಾಂಸವನ್ನು ತ್ಯಜಿಸುವುದು ಧರ್ಮವೆಂಬ ವಿಷಯದಲ್ಲಿ ನಮಗೆ ಬಹಳ ಸಂಶಯವುಂಟಾಗಿದೆ.

ಹತ್ವಾ ಭಕ್ಷಯತೋ ವಾಪಿ ಪರೇಣೋಪಹೃತಸ್ಯ ವಾ ।
ಹನ್ಯಾದ್ ವಾ ಯಃ ಪರಸ್ಯಾರ್ಥೇ ಕ್ರೀತ್ವಾ ವಾ ಭಕ್ಷಯೇನ್ನರಃ ॥೪॥

ತಾನೇ ಕೊಂದು ಭಕ್ಷಿಸುವವನಿಗೆ ಏನು ದೋಷ? ಇನ್ನೊಬ್ಬನಿಂದ ಕೊಲ್ಲಲ್ಪಟ್ಟ ಪ್ರಾಣಿಯ ಮಾಂಸವನ್ನು ಭಕ್ಷಿಸುವವನಿಗೆ ಏನು ದೋಷ? ಇನ್ನೊಬ್ಬನ ಸಲುವಾಗಿ ಕೊಲ್ಲುವವನಿಗೆ ಏನು ದೋಷ? ಕ್ರಯಕ್ಕೆ ಕೊಂಡು ಭಕ್ಷಿಸುವವನಿಗೆ ಏನು ದೋಷ?

ಏತದಿಚ್ಛಾಮಿ ತತ್ತ್ವೇನ ಕಥ್ಯಮಾನಂ ತ್ವಯಾऽನಘ ।
ನಿಶ್ಚಯೇನ ಚಿಕೀರ್ಷಾಮಿ ಧರ್ಮಮೇತಂ ಸನಾತನಮ್ ॥೫॥

ಎಲೈ ಅನಘನೇ, ಇದನ್ನು ನೀನು ಹೇಳಬೇಕು. ಈ ಸನಾತನ ಧರ್ಮವನ್ನು ನಾನು ಖಂಡಿತವಾಗಿಯೂ ಮಾಡಲು ಬಯಸುತ್ತೇನೆ.

ಕಥಮಾಯುರವಾಪ್ನೋತಿ ಕಥಂ ಭವತಿ ಸತ್ತ್ವವಾನ್ ।
ಕಥಮವ್ಯಂಗತಾಮೇತಿ ಲಕ್ಷಣ್ಯೋ ಜಾಯತೇ ಕಥಮ್ ॥೬॥

ಹೇಗೆ ಆಯುಸ್ಸಿನ ವೃದ್ಧಿಯನ್ನು ಪಡೆಯುತ್ತಾನೆ? ಹೇಗೆ ಬಲಶಾಲಿಯಾಗುತ್ತಾನೆ? ಹೇಗೆ ವ್ಯಂಗತೆಯನ್ನು ಕಳೆದುಕೊಳ್ಳುತ್ತಾನೆ? ಹೇಗೆ ಲಕ್ಷಣವಂತನಾಗುತ್ತಾನೆ?

ಭೀಷ್ಮಃ

ಮಾಂಸಸ್ಯ ಭಕ್ಷಣೇ ರಾಜನ್ ಯೋऽಧರ್ಮಃ ಕುರುಪುಂಗವ ।
ತಂ ಮೇ ಶೃಣು ಯಥಾತತ್ತ್ವಂ ಯಶ್ಚಾಸ್ಯ ವಿಧಿರುತ್ತಮಃ ॥೭॥

ಭೀಷ್ಮ– ಎಲೈ ರಾಜನೇ, ಕುರುಶ್ರೇಷ್ಠನೇ, ಮಾಂಸಭಕ್ಷಣೆಯಲ್ಲಿ ಯಾವ ಅಧರ್ಮವಿದೆ ಎಂದೂ ಮಾಂಸದ ಶ್ರೇಷ್ಠವಾದ ವಿಧಿಯು ಯಾವ ರೀತಿಯಿದೆ ಎಂದೂ ಸರಿಯಾಗಿ ಕೇಳುವವನಾಗು.

ರೂಪಮವ್ಯಂಗತಾಮಾಯುರ್ಬುದ್ಧಿಂ ಸತ್ತ್ವಂ ಬಲಂ ಸ್ಮೃತಿಮ್ ।
ಪ್ರಾಪ್ತುಕಾಮೈರ್ನರೈರ್ಹಿಂಸಾ ವರ್ಜಿತಾ ವೈ ಮಹಾತ್ಮಭಿಃ ॥೮॥

ರೂಪವನ್ನೂ, ಸಕಲಾಂಗಗಳನ್ನೂ, ಆಯುರ್ವೃದ್ಧಿಯನ್ನೂ, ಧೈರ್ಯ-ಬಲ-ಸ್ಮೃತಿಗಳನ್ನೂ ಹಿಂಸೆಯನ್ನು ಪಡೆಯಲು ಬಯಸಿದ ಮಹಾತ್ಮರು ವರ್ಜಿಸಿದರಷ್ಟೆ!

ಋಷೀಣಾಮತ್ರ ಸಂವಾದೋ ಬಹುಶಃ ಕುರುಪುಂಗವ ।
ಬಭೂವ ತೇಷಾಂ ತು ಮತಂ ಯತ್ತಚ್ಛೃಣು ಯುಧಿಷ್ಠಿರ ॥೯॥

ಎಲೈ ಕುರುಪುಂಗವನೇ, ಈ ವಿಷಯದಲ್ಲಿ ಅನೇಕ ಬಾರಿ ಋಷಿಗಳ ಸಂವಾದವು ನಡೆದಿದೆ. ಎಲೈ ಯುಧಿಷ್ಠಿರನೇ, ಅವರ ಅಭಿಪ್ರಾಯವೇನೆಂದು ಕೇಳು.

ಯೋ ಯಜೇತಾಶ್ವಮೇಧೇನ ಮಾಸಿ ಮಾಸಿ ಯತವ್ರತಃ ।
ವರ್ಜಯೇನ್ಮಧು ಮಾಂಸಂ ಚ ಸಮಮೇತದ್ ಯುಧಿಷ್ಠಿರ ॥೧೦॥

ಎಲೈ ಯುಧಿಷ್ಠಿರನೇ, ಯಾವನು ದೃಢವ್ರತನಾಗಿ ಪ್ರತಿ ತಿಂಗಳೂ ಅಶ್ವಮೇಧ ಯಾಗವನ್ನು ಮಾಡುವನೋ ಮತ್ತು ಯಾವನು ಮದ್ಯ-ಮಾಂಸವನ್ನು ವರ್ಜಿಸುವನೋ ಅವರಿಬ್ಬರೂ ಸಮರಾದವರು.

ಸಪ್ತರ್ಷಯೋ ವಾಲಖಿಲ್ಯಾಸ್ತಥೈವ ಚ ಮರೀಚಿಪಾಃ ।
ಮಾಂಸಸ್ಯಾಭಕ್ಷಣಂ ರಾಜನ್ ಪ್ರಶಂಸಂತಿ ಮನೀಷಿಣಃ ॥೧೧॥

ಎಲೈ ರಾಜನೇ, ಮೇಧಾವಿಗಳಾದ ಸಪ್ತರ್ಷಿಗಳು, ವಾಲಖಿಲ್ಯರು ಮತ್ತು ಮರೀಚಿಪರು ಮಾಂಸವನ್ನು ಭಕ್ಷಿಸದಿರುವುದನ್ನು ಪ್ರಶಂಸೆ ಮಾಡುತ್ತಾರೆ.

ನ ಭಕ್ಷಯತಿ ಯೋ ಮಾಂಸಂ ನ ಹನ್ಯಾನ್ನ ಚ ಘಾತಯೇತ್ ।
ತಂ ಮಿತ್ರಂ ಸರ್ವಭೂತಾನಾಂ ಮನುಃ ಸ್ವಾಯಂಭುವೋಽಬ್ರವೀತ್ ॥

ಯಾವನು ಮಾಂಸಭಕ್ಷಣೆಯನ್ನು ಮಾಡುವುದಿಲ್ಲವೋ, ಪ್ರಾಣಿಗಳನ್ನು ಕೊಲ್ಲುವುದಿಲ್ಲವೋ ಅಥವಾ ಕೊಲ್ಲಿಸುವುದಿಲ್ಲವೋ ಅವನು ಸರ್ವಪ್ರಾಣಿಗಳಿಗೂ ಮಿತ್ರನಾದವನು ಎಂದು ಸ್ವಾಯಂಭುವ ಮನುವು ಹೇಳಿದ್ದಾನೆ.

ಅಧೃಷ್ಯಃ ಸರ್ವಭೂತಾನಾಂ ವಿಶ್ವಾಸ್ಯಃ ಸರ್ವಜಂತುಷು ।
ಸಾಧೂನಾಂ ಸಮ್ಮತೋ ನಿತ್ಯಂ ಭವೇನ್ಮಾಂಸಸ್ಯ ವರ್ಜನಾತ್ ॥೧೩॥

ಮಾಂಸವನ್ನು ಪರಿತ್ಯಾಗ ಮಾಡುವುದರಿಂದ ಯಾವ ಪ್ರಾಣಿಯಿಂದಲೂ ಪರಾಭವವನ್ನು ಹೊಂದದೆ, ಎಲ್ಲ ಪ್ರಾಣಿಗಳ ವಿಶ್ವಾಸಕ್ಕೆ ಪಾತ್ರನಾಗಿ ಸಜ್ಜನರಿಗೆ ಯಾವಾಗಲೂ ಸಮ್ಮತನಾಗುತ್ತಾನೆ.

ಸ್ವಮಾಂಸಂ ಪರಮಾಂಸೇನ ಯೋ ವರ್ಧಯಿತುಮಿಚ್ಛತಿ ।
ನಾರದಃ ಪ್ರಾಹ ಧರ್ಮಾತ್ಮಾ ನಿಯತಂ ಸೋಽವಸೀದತಿ ॥೧೪॥

ತನ್ನ ಮಾಂಸವನ್ನು ಇನ್ನೊಂದು ಪ್ರಾಣಿಯ ಮಾಂಸದಿಂದ ಯಾವನು ಅಭಿವೃದ್ಧಿಯನ್ನು ಪಡಿಸಲು ಇಚ್ಛಿಸುತ್ತಾನೆಯೋ ಅವನು ಖಂಡಿತವಾಗಿ ಅವಸಾನವನ್ನು (ನಾಶ) ಹೊಂದುತ್ತಾನೆ ಎಂದು ಧರ್ಮಾತ್ಮರಾದ ನಾರದರು ಹೇಳಿದ್ದಾರೆ.

ದದಾತಿ ಯಜತೇ ಚಾಪಿ ತಪಸ್ವೀ ವಾ ಭವಿಷ್ಯತಿ ।
ಮಧುಮಾಂಸನಿವೃತ್ತ್ಯೇತಿ ಪ್ರಾಹೈವಂ ಸ ಬೃಹಸ್ಪತಿಃ ॥೧೫॥

ಮಧು-ಮಾಂಸವನ್ನು ವರ್ಜಿಸುವುದರಿಂದ ಮನುಷ್ಯನು ದಾನ ಮಾಡಿದವನೂ, ಯಾಗ ಮಾಡಿದವನೂ, ತಪಸ್ಸನ್ನು ಮಾಡಿದವನೂ ಆಗುತ್ತಾನೆ ಎಂದು ಬೃಹಸ್ಪತಿಗಳು ಹೇಳಿದ್ದಾರೆ.

ಮಾಸಿ ಮಾಸ್ಯಶ್ವಮೇಧೇನ ಯೋ ಯಜೇತ ಶತಂ ಸಮಾಃ ।
ನ ಖಾದತಿ ಚ ಯೋ ಮಾಂಸಂ ಸಮಮೇತನ್ಮತಂ ಮಮ ॥೧೬॥

ನೂರು ವರ್ಷಗಳ ಕಾಲ ಪ್ರತಿತಿಂಗಳೂ ಅಶ್ವಮೇಧ ಯಾಗವನ್ನು ಮಾಡಿದವನು ಮತ್ತು ಮಾಂಸಭಕ್ಷಣೆಯನ್ನು ಮಾಡದಿರುವವನು ಇಬ್ಬರೂ ಸಮಾನರೆಂದು ನನ್ನ ಅಭಿಪ್ರಾಯ.

ಸದಾ ಯಜತಿ ಸತ್ರೇಣ ಸದಾ ದಾನಂ ಪ್ರಯಚ್ಛತಿ ।
ಸದಾ ತಪಸ್ವೀ ಭವತಿ ಸದಾ ಮಾಂಸವಿವರ್ಜನಾತ್ ॥೧೭॥

ಯಾವಾಗಲೂ ಮಾಂಸವನ್ನು ವರ್ಜಿಸುವುದರಿಂದ ಸದಾ ಸತ್ರಯಾಗವನ್ನು ಮಾಡಿದವನೂ, ದಾನವನ್ನು ಮಾಡಿದವನೂ ಮತ್ತು ತಪಸ್ಸನ್ನು ಮಾಡಿದವನೂ ಆಗುತ್ತಾನೆ.

ಸರ್ವೇ ವೇದಾ ನ ತತ್ಕುರ್ಯುಃ ಸರ್ವಯಜ್ಞಾಶ್ಚ ಭಾರತ ।
ಯೋ ಭಕ್ಷಯಿತ್ವಾ ಮಾಂಸಾನಿ ಪಶ್ಚಾದಪಿ ನಿವರ್ತತೇ ॥೧೮॥

ಎಲೈ ಭಾರತನೇ, ಯಾವನು ಮೊದಲು ಮಾಂಸವನ್ನು ಭಕ್ಷಿಸಿ, ಅನಂತರ ಅದರಿಂದ ನಿವೃತ್ತನಾಗುತ್ತಾನೆಯೋ ಅದರಿಂದ ಅವನು ಗಳಿಸುವ ಪುಣ್ಯವನ್ನು ಎಲ್ಲ ವೇದಗಳೂ ಮತ್ತು ಎಲ್ಲ ಯಜ್ಞಗಳೂ ಗಳಿಸಿಕೊಡಲಾರವು.

ದುಷ್ಕರಂ ಹಿ ರಸಜ್ಞೇನ ಮಾಂಸಸ್ಯ ಪರಿವರ್ಜನಮ್ ।
ಚರ್ತುಂ ವ್ರತಮಿದಂ ಶ್ರೇಷ್ಠಂ ಸರ್ವಪ್ರಾಣ್ಯಭಯಪ್ರದಮ್ ॥೧೯॥

ಮಾಂಸದ ರುಚಿಯನ್ನು ತಿಳಿದವನಿಗೆ ಮಾಂಸವನ್ನು ಬಿಡುವುದು ಕಷ್ಟಸಾಧ್ಯವಾದುದು. ಆದ್ದರಿಂದ ಸರ್ವಪ್ರಾಣಿಗಳಿಗೆ ಅಭಯವನ್ನು ಕೊಡುವ ಈ ಶ್ರೇಷ್ಠವಾದ ವ್ರತವನ್ನು ಆಚರಿಸುವುದು ಶ್ರೇಷ್ಠವಾದುದು.

ಸರ್ವಭೂತೇಷು ಯೋ ವಿದ್ವಾನ್ ದದಾತ್ಯಭಯದಕ್ಷಿಣಾಮ್ ।
ದಾತಾ ಭವತಿ ಲೋಕೇ ಸ ಪ್ರಾಣಾನಾಂ ನಾತ್ರ ಸಂಶಯಃ ॥೨೦॥

ಜ್ಞಾನಿಯಾದ ಯಾವನು ಸರ್ವಭೂತಗಳಿಗೆ ಅಭಯದಕ್ಷಿಣೆಯನ್ನು ಕೊಡುತ್ತಾನೆಯೋ ಅವನು ಲೋಕದಲ್ಲಿ ಪ್ರಾಣದಾನವನ್ನೇ ಮಾಡುತ್ತಾನೆ ಎಂಬ ವಿಷಯದಲ್ಲಿ ಸಂಶಯವಿಲ್ಲ.

ಏವಂ ವೈ ಪರಮಂ ಧರ್ಮಂ ಪ್ರಶಂಸಂತಿ ಮನೀಷಿಣಃ ।
ಪ್ರಾಣಾ ಯಥಾತ್ಮನೋಭೀಷ್ಟಾ ಭೂತಾನಾಮಪಿ ತೇ ತಥಾ ॥೨೧॥

ವಿವೇಕಿಗಳಾದವರು ಹೀಗೆ ಈ ಶ್ರೇಷ್ಠವಾದ ಅಹಿಂಸಾಧರ್ಮವನ್ನು ಪ್ರಶಂಸೆ ಮಾಡುತ್ತಾರೆ. ತನಗೆ ಹೇಗೆ ತನ್ನ ಪ್ರಾಣವು ಇಷ್ಟವೋ ಅದರಂತೆ ಪ್ರಾಣಿಗಳಿಗೂ ತಮ್ಮ ಪ್ರಾಣಗಳು ಇಷ್ಟವಾದವುಗಳು.

ಆತ್ಮೌಪಮ್ಯೇನ ಗಂತವ್ಯಂ ಬುದ್ಧಿಮದ್ಭಿರ್ಮಹಾತ್ಮಭಿಃ ।
ಮೃತ್ಯುತೋ ಭಯಮಸ್ತೀತಿ ವಿದುಷಾಂ ಭೂತಿಮಿಚ್ಛತಾಮ್ ॥೨೨॥

ಮೃತ್ಯುವಿನ ಭಯವು ನಮಗೂ ಇದೆ ಎಂದು ತಿಳಿದು ಕಲ್ಯಾಣವನ್ನು ಇಚ್ಛಿಸುವ ವಿವೇಕಿಗಳು ತಮ್ಮಂತೆಯೇ ಇನ್ನೊಂದು ಪ್ರಾಣಿಯನ್ನು ನೋಡಬೇಕು.

ಕಿಂ ಪುನರ್ಹನ್ಯಮಾನಾನಾಂ ತರಸಾ ಜೀವಿತಾರ್ಥಿನಾಮ್ ।
ಅರೋಗಾಣಾಮಪಾಪಾನಾಂ ಪಾಪೈರ್ಮಾಂಸೋಪಜೀವಿಭಿಃ ॥೨೩॥

ಹೀಗಿರುವಾಗ ರೋಗವಿಲ್ಲದೆ ಬದುಕಲು ಬಯಸುವ ನಿರಪರಾಧಿಗಳಾದ, ಮಾಂಸೋಪಜೀವಿಗಳಾದ ಪಾಪಿಜನರಿಂದ ಕೊಲ್ಲಲ್ಪಡುವ ಪ್ರಾಣಿಗಳ ವಿಷಯದಲ್ಲಿ ಹೇಳುವುದೇನಿದೆ?

ಮೃತ್ಯುತೋ ಭಯಮಸ್ತೀಹ ಶಂಕಾಯಾಂ ದುಃಖಮುತ್ತರಮ್ ।
ಧರ್ಮಸ್ಯಾಯತನಂ ತಸ್ಮಾನ್ಮಾಂಸಸ್ಯ ಪರಿವರ್ಜನಮ್ ॥೨೪॥

ಮೃತ್ಯುವಿನಿಂದ ತನಗೆ ಭಯವಿದೆ ಎಂದೂ, ಅನಂತರ ಕಾಲದಲ್ಲಿ ದುಃಖವಿದೆ ಎಂದೂ ತಿಳಿಯುವ ಮನುಷ್ಯನು ಮಾಂಸವರ್ಜನೆಯ ರೂಪವಾದ ಧರ್ಮಕ್ಕೆ ಆಶ್ರಯನಾಗಬೇಕು.

ತಸ್ಮಾದ್ ವಿದ್ಧಿ ಮಹಾರಾಜ ಮಾಂಸಸ್ಯ ಪರಿವರ್ಜನಮ್ ।
ಧರ್ಮಸ್ಯಾಯತನಂ ಶ್ರೇಷ್ಠಂ ಸ್ವರ್ಗಸ್ಯ ಚ ಸುಖಸ್ಯ ಚ ॥೨೫॥

ಎಲೈ ಮಹಾರಾಜನೇ, ಆದ್ದರಿಂದ ಮಾಂಸವರ್ಜನೆಯು ಧರ್ಮಕ್ಕೆ ಆಶ್ರಯವಾದುದು, ಶ್ರೇಷ್ಠವಾದುದು, ಸ್ವರ್ಗಕ್ಕೂ ಮತ್ತು ಸುಖಕ್ಕೂ ಕಾರಣವಾದುದು ಎಂದು ತಿಳಿ.

ಅಹಿಂಸಾ ಪರಮೋ ಧರ್ಮಸ್ತಥಾऽಹಿಂಸಾ ಪರಂ ತಪಃ ।
ಅಹಿಂಸಾ ಪರಮಂ ಸತ್ಯಂ ತತೋ ಧರ್ಮಃ ಪ್ರವರ್ತತೇ ॥೨೬॥

ಅಹಿಂಸೆಯು ಶ್ರೇಷ್ಠವಾದ ಧರ್ಮ. ಅಹಿಂಸೆಯು ಶ್ರೇಷ್ಠವಾದ ತಪಸ್ಸು. ಅಹಿಂಸೆಯು ಶ್ರೇಷ್ಠವಾದ ಸತ್ಯ. ಧರ್ಮವು ಅಹಿಂಸೆಯಿಂದ ಪ್ರವೃತ್ತವಾಗುತ್ತದೆ.

ನ ಹಿ ಮಾಂಸಂ ತೃಣಾತ್ ಕಾಷ್ಠಾದುಪಲಾದ್ ವಾಪಿ ಜಾಯತೇ ।
ಹತ್ವಾ ಜಂತುಂ ತತೋ ಮಾಂಸಂ ತಸ್ಮಾನ್ಮಾಂಸಂ ವಿವರ್ಜಯೇತ್ ॥

ಮಾಂಸವು ಹುಲ್ಲಿನಿಂದಾಗಲೀ, ಕಟ್ಟಿಗೆಯಿಂದಾಗಲೀ, ಕಲ್ಲಿನಿಂದಾಗಲೀ ಉಂಟಾಗುವುದಿಲ್ಲ. ಪ್ರಾಣಿಯನ್ನು ಕೊಂದೇ ಮಾಂಸವನ್ನು ಪಡೆಯಬೇಕು. ಆದ್ದರಿಂದ ಮಾಂಸವನ್ನು ವರ್ಜಿಸಬೇಕು.

ಸ್ವಾಹಾಸ್ವಧಾಮೃತಭುಜೋ ದೇವಾಃ ಸತ್ಯಾರ್ಜವಪ್ರಿಯಾಃ ।
ಕ್ರವ್ಯಾದಾನ್ ರಾಕ್ಷಸಾನ್ ವಿದ್ಧಿ ಜಿಹ್ಮಾನೃತಪರಾಯಣಾನ್ ॥೨೮॥

ಸ್ವಾಹಾ, ಸ್ವಧಾ ಅಮೃತರೂಪವಾದ ಅನ್ನವನ್ನು ಸ್ವೀಕರಿಸುವ ದೇವತೆಗಳು ಸತ್ಯದಲ್ಲಿ ಮತ್ತು ಋಜುತನದಲ್ಲಿ (ಸರಳತೆ) ಪ್ರೀತಿಯುಳ್ಳವರು. ಮಾಂಸವನ್ನು ಭಕ್ಷಿಸುವವರನ್ನು ಮೋಸ ಮತ್ತು ಅನೃತಕ್ಕೆ ಆಶ್ರಯರಾದ ರಾಕ್ಷಸರೆಂದು ತಿಳಿ.

ಕಾಂತಾರೇಷ್ವಥ ಘೋರೇಷು ದುರ್ಗೇಷು ಗಹನೇಷು ಚ ।
ರಾತ್ರ್ಯಾವಹನಿ ಸಂಧ್ಯಾಸು ಚತ್ವರೇಷು ಸಭಾಸು ಚ ।
ಅಮಾಂಸಭಕ್ಷಣೇ ರಾಜನ್ ಭಯಮಂತೇ ನ ಗಚ್ಛತಿ ॥೨೯॥

ಎಲೈ ರಾಜನೇ, ಮಾಂಸಭಕ್ಷಣೆಯನ್ನು ಮಾಡದಿದ್ದರೆ ಘೋರ ಅರಣ್ಯಗಳಲ್ಲಿ, ಘನವಾದ ದುರ್ಗಗಳಲ್ಲಿ, ರಾತ್ರಿಯಲ್ಲಿ, ಸಂಧ್ಯಾಕಾಲದಲ್ಲಿ, ಹಗಲಿನಲ್ಲಿ, ಚತುಷ್ಪಥಗಳಲ್ಲಿ, ಸಭೆಗಳಲ್ಲಿ - ಎಲ್ಲೂ ಭಯವುಂಟಾಗುವುದಿಲ್ಲ.

ಯದಿ ಚೇತ್ಖಾದಕೋ ನ ಸ್ಯಾನ್ನ ತದಾ ಘಾತಕೋ ಭವೇತ್ ।
ಘಾತಕಃ ಖಾದನಾರ್ಥಾಯ ಯಥಾ ಭವತಿ ವೈ ನರಃ ॥೩೦॥

ಮಾಂಸವನ್ನು ತಿನ್ನದಿದ್ದರೆ ಅವನು ಘಾತಕನೂ ಆಗುವುದಿಲ್ಲ. ಘಾತಕನಾದವನು (ಪ್ರಾಣಿಯನ್ನು ಕೊಲ್ಲುವವನು) ತಾನೂ ಇನ್ನೊಂದು ಪ್ರಾಣಿಗೆ ಆಹಾರವಾಗುತ್ತೇನೆ ಎಂಬುದನ್ನು ಗಮನಿಸಬೇಕು.

ಅಭಕ್ಷ್ಯಮೇತದಿತಿ ವಾ ಇತಿ ಹಿಂಸಾ ನಿವರ್ತತೇ ।
ಖಾದಕಾರ್ಥಮತೋ ಹಿಂಸಾ ಮೃಗಾದೀನಾಂ ಪ್ರವರ್ತತೇ ॥೩೧॥

ಇದು ಭಕ್ಷಣೀಯವಲ್ಲ ಎಂದು ತಿಳಿಯುವುದರಿಂದ ಹಿಂಸೆಯು ನಿವೃತ್ತವಾಗುತ್ತದೆ. ಅಂತಹ ಜ್ಞಾನವಿಲ್ಲದಿದ್ದವರು ತಿನ್ನುವ ಸಲುವಾಗಿ ಮೃಗಾದಿಗಳ ಹಿಂಸೆಯಲ್ಲಿ ಪ್ರವೃತ್ತರಾಗುತ್ತಾರೆ.

ಯಸ್ಮಾದ್ ಗ್ರಸತಿ ಚೈವಾಯುರ್ಹಿಂಸಕಾನಾಂ ಮಹಾದ್ಯುತೇ ।
ತಸ್ಮಾದ್ ವಿವರ್ಜಯೇನ್ಮಾಂಸಂ ಯ ಇಚ್ಛೇದ್ ಭೂತಿಮಾತ್ಮನಃ ॥೩೨॥

ಎಲೈ ಮಹಾದ್ಯುತಿಯೇ, ಮಾಂಸವು ಹಿಂಸೆ ಮಾಡುವವನ ಆಯುಸ್ಸನ್ನು ನಾಶಪಡಿಸುತ್ತದೆ. ಆದ್ದರಿಂದ ತನ್ನ ಕಲ್ಯಾಣವನ್ನು ಬಯಸುವವನು ಮಾಂಸವನ್ನು ವರ್ಜಿಸಬೇಕು.

ತ್ರಾತಾರಂ ನಾಧಿಗಚ್ಛಂತಿ ರೌದ್ರಾಃ ಪ್ರಾಣಿವಿಹಿಂಸಕಾಃ ।
ಉದ್ವೇಜನೀಯಾ ಭೂತಾನಾಂ ಯಥಾ ವ್ಯಾಲಮೃಗಾಸ್ತಥಾ ॥೩೩॥

ಹೇಗೆ ಕೊಲ್ಲಲ್ಪಡುವ ಸರ್ಪಮೃಗಗಳಿಗೆ ಯಾರೂ ರಕ್ಷಕರು ದೊರೆಯುವುದಿಲ್ಲವೋ ಅದರಂತೆ ಪ್ರಾಣಿಗಳಿಗೆ ಭಯವನ್ನುಂಟು ಮಾಡಿ ಪ್ರಾಣಿಗಳನ್ನು ಕೊಲ್ಲುವ ರೌದ್ರ ಪುರುಷರಿಗೆ ಯಾವ ರಕ್ಷಕರೂ ದೊರೆಯುವುದಿಲ್ಲ.

ಲೋಭಾದ್ ವಾ ಬುದ್ಧಿಮೋಹಾದ್ ವಾ ಬಲವೀರ್ಯಾರ್ಥಮೇವ ಚ
ಸಂಸರ್ಗಾದ್ ವಾಥ ಪಾಪಾನಾಮ್ ಅಧರ್ಮೋ ರುಚಿತೋ ನೃಣಾಮ್ ॥

ಲೋಭದಿಂದಲಾಗಲೀ, ಬುದ್ಧಿಮೋಹದಿಂದಾಗಲೀ, ಬಲ-ವೀರ್ಯಗಳ ಅಭಿವೃದ್ಧಿಗಾಗಲೀ ಅಥವಾ ಪಾಪಿಗಳ ಸಂಸರ್ಗದಿಂದಾಗಲೀ ಮನುಷ್ಯರಿಗೆ ಅಧರ್ಮದಲ್ಲಿ ರುಚಿ ಉಂಟಾಗುತ್ತದೆ.

ಸ್ವಮಾಂಸಂ ಪರಮಾಂಸೇನ ಯೋ ವರ್ಧಯಿತುಮಿಚ್ಛತಿ ।
ಉದ್ವಿಗ್ನರಾಷ್ಟ್ರೋ ಭವತಿ ಯತ್ರತತ್ರಾಭಿಜಾಯತೇ ॥೩೫॥

ಯಾವ ರಾಜನು ಪರಮಾಂಸದಿಂದ ತನ್ನ ಮಾಂಸವನ್ನು ಅಭಿವೃದ್ಧಿ ಪಡಿಸಲು ಬಯಸುತ್ತಾನೆಯೋ ಅವನ ರಾಷ್ಟ್ರವು ಉದ್ವಿಗ್ನವಾಗುತ್ತದೆ. ಅವನು ಎಲ್ಲೆಲ್ಲಿಯೂ ಜನ್ಮವನ್ನು ಪಡೆಯುತ್ತಾನೆ.

ಧನ್ಯಂ ಯಶಸ್ಯಮಾಯುಷ್ಯಂ ಸ್ವರ್ಗ್ಯಂ ಸ್ವಸ್ತ್ಯಯನಂ ಮಹತ್ ।
ಮಾಂಸಸ್ಯಾಭಕ್ಷಣಂ ಪ್ರಾಹುರ್ನಿಯತಾಃ ಪರಮರ್ಷಯಃ ॥೩೬॥

ಮಾಂಸ ಭಕ್ಷಣೆಯನ್ನು ಮಾಡದಿರುವುದು ನಿಯಮೇನ ಧನಪ್ರದವಾದುದು, ಕೀರ್ತಿಪ್ರದವಾದುದು, ಆಯುರ್ವೃದ್ಧಿಕರವಾದುದು, ಸ್ವರ್ಗಪ್ರದವಾದುದು ಮತ್ತು ದೊಡ್ಡ ಕಲ್ಯಾಣ ರೂಪವಾದುದು ಎಂದು ಪರಮರ್ಷಿಗಳು ಹೇಳುತ್ತಾರೆ.

ಇದಂ ತು ಖಲು ಕೌಂತೇಯ ಶ್ರುತಮಾಸೀತ್ ಪುರಾ ಮಯಾ ।
ಮಾರ್ಕಂಡೇಯಸ್ಯ ವದತೋ ಯೇ ದೋಷಾ ಮಾಂಸಭಕ್ಷಣೇ ॥೩೭॥

ಯೋ ಹಿ ಖಾದತಿ ಮಾಂಸಾನಿ ಪ್ರಾಣಿನಾಂ ಜೀವಿತಾರ್ಥಿನಾಮ್ ।
ಹತಾನಾಂ ವಾ ಮೃತಾನಾಂ ವಾ ಯಥಾ ಹಂತಾ ತಥೈವ ಸಃ ॥೩೮॥

ಎಲೈ ಕೌಂತೇಯನೇ, ಹಿಂದೆ ಮಾಂಸಭಕ್ಷಣ ವಿಷಯದಲ್ಲಿ ಮಾರ್ಕಂಡೇಯರು ಮಾತನಾಡುತ್ತಿದ್ದಾಗ ನಾನು ಈ ವಿಷಯವನ್ನು ಕೇಳಿದೆನು. ಯಾವನು ಬದುಕಲು

ಬಯಸುವ ಪ್ರಾಣಿಗಳ ಮಾಂಸವನ್ನು - ಆ ಪ್ರಾಣಿಗಳು ಕೊಲ್ಲಲ್ಪಡಲಿ ಅಥವಾ ತಾವಾಗಿಯೇ ಮೃತವಾಗಿರಲಿ - ತಿನ್ನುತ್ತಾನೆಯೋ ಅವನು ಕೊಲ್ಲುವವನಷ್ಟೇ ಪಾಪಕ್ಕೆ ಗುರಿಯಾಗುತ್ತಾನೆ.

ಧನೇನ ಕ್ರಾಯಕೋ ಹಂತಿ ಖಾದಕಶ್ಚೋಪಭೋಗತಃ ।
ಘಾತಕೋ ವಧಬಂಧಾಭ್ಯಾಮಿತ್ಯೇಷ ತ್ರಿವಿಧೋ ವಧಃ ॥೩೯॥

ಕೊಂಡುಕೊಳ್ಳುವವನು ಧನದಿಂದ ಪ್ರಾಣಿಯನ್ನು ಕೊಲ್ಲುತ್ತಾನೆ, ತಿನ್ನುವವನು ಭೋಗದಿಂದ ಪ್ರಾಣಿಯನ್ನು ಕೊಲ್ಲುತ್ತಾನೆ. ಕೊಲ್ಲುವವನು ಶಸ್ತ್ರದಿಂದಾಗಲೀ, ಬಂಧನದಿಂದಾಗಲೀ ಕೊಲ್ಲುತ್ತಾನೆ. ಹೀಗೆ ಈ ವಧೆಯು ಮೂರು ವಿಧವಾದುದು.

ಅಖಾದನ್ನನುಮೋದಂಶ್ಚ ಭಾವದೋಷೇಣ ಮಾನವಃ ।
ಯೋಽನುಮನ್ಯೇತ ಹಂತವ್ಯಂ ಸೋಽಪಿ ದೋಷೇಣ ಲಿಪ್ಯತೇ ॥೪೦॥

ಯಾವ ಮನುಷ್ಯನು ತಾನು ತಿನ್ನದಿದ್ದರೂ ಇನ್ನೊಬ್ಬನ ಮಾಂಸಭಕ್ಷಣೆಗೆ ಅನುಮೋದನೆಯನ್ನು ನೀಡುತ್ತಾನೆಯೋ ಅಥವಾ ಪ್ರಾಣಿಯು ಕೊಲ್ಲಲ್ಪಡುವಾಗ ಅನುಮೋದನೆಯನ್ನು ನೀಡುತ್ತಾನೆಯೋ ಅವನೂ ಕೂಡ ದುಷ್ಟವಾದ ಮನಸ್ಸನ್ನು ಹೊಂದಿದ ಕಾರಣದಿಂದ ದೋಷಕ್ಕೆ ಭಾಗಿಯಾಗುತ್ತಾನೆ.

ಅಧೃಷ್ಯಃ ಸರ್ವಭೂತಾನಾಮಾಯುಷ್ಮಾನ್ ನೀರುಜಃ ಸುಖೀ ।
ಭವತ್ಯಭಕ್ಷಯನ್ ಮಾಂಸಂ ದಯಾವಾನ್ ಪ್ರಾಣಿನಾಮಿಹ ॥೪೧॥

ಮಾಂಸವನ್ನು ತಿನ್ನದೆ ಪ್ರಾಣಿಗಳಲ್ಲಿ ದಯೆಯನ್ನು ಹೊಂದುವ ಪುರುಷನು ಯಾವ ಪ್ರಾಣಿಗಳಿಂದಲೂ ಪರಾಭವ ಹೊಂದದೆ ದೀರ್ಘಾಯುಷ್ಯವಂತನೂ, ಅರೋಗಿಯೂ ಮತ್ತು ಸುಖಿಯೂ ಆಗುತ್ತಾನೆ.

ಹಿರಣ್ಯದಾನೈರ್ಗೋದಾನೈರ್ಭೂಮಿದಾನೈಶ್ಚ ಸರ್ವಶಃ ।
ಮಾಂಸಸ್ಯಾಭಕ್ಷಣೇ ಧರ್ಮೋ ವಿಶಿಷ್ಯಾದಿತಿ ನಃ ಶ್ರುತಿಃ ॥೪೨॥

ಹಿರಣ್ಯದಾನಕ್ಕಿಂತಲೂ, ಗೋದಾನಕ್ಕಿಂತಲೂ, ಭೂದಾನಕ್ಕಿಂತಲೂ ಮಾಂಸದ ಅಭಕ್ಷಣೆಯು ಶ್ರೇಷ್ಠವಾದ ಧರ್ಮವೆಂದು ನಾವು ಕೇಳಿದ್ದೇವೆ.

ಅಪ್ರೋಕ್ಷಿತಂ ವೃಥಾಮಾಂಸಂ ವಿಧಿಹೀನಂ ನ ಭಕ್ಷಯೇತ್ ।
ಭಕ್ಷಯನ್ ನಿರಯಂ ಯಾತಿ ನರೋ ನಾಸ್ಯತ್ರ ಸಂಶಯಃ ॥೪೩॥

ಪ್ರೋಕ್ಷಿತವಲ್ಲದ ಅಥವಾ ವಿಧಿಹೀನವಾದ ಅಥವಾ ವ್ಯರ್ಥವಾದ ಮಾಂಸವನ್ನು ತಿನ್ನಬಾರದು. ಅಂತಹದನ್ನು ತಿನ್ನುವವನು ನರಕಕ್ಕೆ ಹೋಗುವುದರಲ್ಲಿ ಸಂಶಯವಿಲ್ಲ.

ಪ್ರೋಕ್ಷಿತಾಭ್ಯುಕ್ಷಿತಂ ಮಾಂಸಂ ತಥಾ ಬ್ರಾಹ್ಮಣಕಾಮ್ಯಯಾ ।
ಅಲ್ಪದೋಷಮಿಹ ಜ್ಞೇಯಂ ವಿಪರೀತೇ ತು ಲಿಪ್ಯತೇ ॥೪೪॥

ಬ್ರಾಹ್ಮಣರಿಗೆ ಕೊಡುವ ಸಲುವಾಗಿ ಪ್ರೋಕ್ಷಣೆಯನ್ನು ಮಾಡಿ ಶುದ್ಧಿಗೊಳಿಸಲ್ಪಟ್ಟ ಮಾಂಸವು ಕಡಿಮೆ ದೋಷವನ್ನುಂಟು ಮಾಡುತ್ತದೆ ಎಂದು ತಿಳಿಯಬೇಕು. ಇದಕ್ಕೆ ವಿರುದ್ಧವಾಗಿ ನಡೆದುಕೊಂಡರೆ ಬಹಳ ದೋಷಗಳ ಲೇಪವಾಗುತ್ತದೆ.

ಖಾದಕಸ್ಯ ಕೃತೇ ಜಂತುಂ ಯೋ ಹನ್ಯಾತ್ ಪುರುಷೋऽಧಮಃ ।
ಮಹಾದೋಷಕರಸ್ತತ್ರ ಖಾದಕೋ ನ ತು ಘಾತಕಃ ॥೪೫॥

ಯಾವ ಅಧಮನಾದ ಪುರುಷನು ಮಾಂಸವನ್ನು ತಿನ್ನುವವನ ಸಲುವಾಗಿ ಪ್ರಾಣಿಯನ್ನು ಕೊಲ್ಲುತ್ತಾನೆಯೋ ಅಲ್ಲಿ ತಿನ್ನುವವನಿಗೇ ಬಹಳ ದೋಷವುಂಟಾಗುತ್ತದೆ, ಕೊಲ್ಲುವವನಿಗಲ್ಲ.

ಇಜ್ಯಾಯಜ್ಞಶ್ರುತಿಕೃತೈರ್ಯೋ ಮಾರ್ಗೈರಬುಧೋ ಜನಃ ।
ಹನ್ಯಾಜ್ಜಂತುಂ ಮಾಂಸಗೃದ್ಧ್ಯೀ ಸ ವೈ ನರಕಮಾಪ್ತವಾನ್ ॥೪೬॥

ಮಾಂಸದಾಸೆಯನ್ನು ಹೊಂದಿ ಪೂಜೆ, ಯಜ್ಞ ಮತ್ತು ವೈದಿಕ ಕರ್ಮಗಳ ನೆಪದಿಂದ ಯಾವ ಅಜ್ಞಾನಿಯಾದವನು ಪ್ರಾಣಿಯನ್ನು ಕೊಲ್ಲುತ್ತಾನೆಯೋ ಅವನು ನಿಶ್ಚಯವಾಗಿ ನರಕಕ್ಕೆ ಹೋಗುತ್ತಾನೆ.

ಭಕ್ಷಯಿತ್ವಾ ತು ಯೋ ಮಾಂಸಂ ಪಶ್ಚಾದಪಿ ನಿವರ್ತತೇ ।
ತಸ್ಯಾಪಿ ಸುಮಹಾನ್ ಧರ್ಮೋ ಯಃ ಪಾಪಾದ್ ವಿನಿವರ್ತತೇ ॥೪೭॥

ಮೊದಲು ಮಾಂಸವನ್ನು ಭಕ್ಷಿಸುತ್ತಿದ್ದು ಅನಂತರ ಅದನ್ನು ತ್ಯಜಿಸುವವನಿಗೂ ಬಹಳ ದೊಡ್ಡ ಧರ್ಮವುಂಟಾಗುತ್ತದೆ. ಏಕೆಂದರೆ ಅವನು ಪಾಪದಿಂದ ನಿವೃತ್ತನಾಗಿರುತ್ತಾನೆ.

ಆಹರ್ತಾ ಚಾನುಮಂತಾ ಚ ವಿಶಸ್ತಾ ಕ್ರಯವಿಕ್ರಯೀ ।
ಸಂಸ್ಕರ್ತಾ ಚೋಪಭೋಕ್ತಾ ಚ ಘಾತಕಾಃ ಸರ್ವ ಏವ ತೇ ॥೪೮॥

ಪ್ರಾಣಿಯನ್ನು ಎಳೆದುಕೊಂಡು ಬರುವವನೂ, ಕೊಲ್ಲಲು ಅನುಮತಿಯನ್ನು ಕೊಡುವವನೂ, ಕೊಲ್ಲುವವನೂ, ಮಾಂಸವನ್ನು ಮಾರುವವನೂ, ಕೊಳ್ಳುವವನೂ, ಬೇಯಿಸುವವನೂ ಮತ್ತು ಭಕ್ಷಿಸುವವನೂ ಎಲ್ಲರೂ ಪ್ರಾಣಿಘಾತಕರೇ.

ಇದಮನ್ಯತ್ ತು ವಕ್ಷ್ಯಾಮಿ ಪ್ರಮಾಣಂ ವಿಧಿನಿರ್ಮಿತಮ್ ।
ಪುರಾಣಮೃಷಿಭಿರ್ಜುಷ್ಟಂ ವೇದೇಷು ವಿಧಿನಿರ್ಮಿತಮ್ ॥೪೯॥

ವೇದಗಳಲ್ಲಿ ನಿಶ್ಚಿತವಾದ, ಋಷಿಗಳಿಂದ ಸೇವಿತವಾದ, ವಿಧಿಗೆ ಅನುಸಾರವಾದ ಈ ಇನ್ನೊಂದು ವಿಷಯವನ್ನು ಹೇಳುತ್ತೇನೆ.

ಪ್ರವೃತ್ತಿಲಕ್ಷಣೇ ಧರ್ಮೇ ಫಲಾರ್ಥಿಭಿರಭಿದ್ರುತೇ ।
ಯಥೋಕ್ತಂ ರಾಜಶಾರ್ದೂಲ ನ ತು ತನ್ಮೋಕ್ಷಕಾಂಕ್ಷಿಣಾಮ್ ॥೫೦॥

ಎಲೈ ರಾಜಶಾರ್ದೂಲನೇ, ಈ ಮಾಂಸಭಕ್ಷಣವು ಫಲವನ್ನು ಬಯಸಿ ಪ್ರವೃತ್ತಿ ಧರ್ಮವನ್ನು ಮಾಡುವ ಪುರುಷರಿಗಾಗಿ ಹೇಳಲ್ಪಟ್ಟಿದೆ. ಮೋಕ್ಷಾಪೇಕ್ಷಿಗಳಾಗಿ ನಿಯತ ಕರ್ಮಾನುಷ್ಠಾನ ಮಾಡುವವರಿಗೆ ಅಲ್ಲ.

ಹವಿರ್ಯತ್ ಸಂಸ್ಕೃತಂ ಮಂತ್ರೈಃ ಪ್ರೋಕ್ಷಿತಾಭ್ಯುಕ್ಷಿತಂ ಶುಚಿ ।
ವೇದೋಕ್ತೇನ ಪ್ರಮಾಣೇನ ಪಿತ್ರ್ಯಾಣಾಂ ಪ್ರಕ್ರಿಯಾಸು ಚ ।
ಅತೋಽನ್ಯಥಾ ವೃಥಾಮಾಂಸಮಭಕ್ಷ್ಯಂ ಮನುರಬ್ರವೀತ್ ॥೫೧॥

ಪ್ರೋಕ್ಷಿತವಾಗಿ ಮಂತ್ರಗಳಿಂದ ಸಂಸ್ಕರಿಸಲ್ಪಟ್ಟ ಹವಿಸ್ಸೇ ವೇದೋಕ್ತ ಪ್ರಮಾಣಕ್ಕೆ ಅನುಸಾರವಾಗಿ ಯಜ್ಞಗಳಲ್ಲಿಯೂ ಮತ್ತು ಪಿತೃಕಾರ್ಯಗಳಲ್ಲಿಯೂ ಶುದ್ಧವಾದುದು. ಉಳಿದ ಮಾಂಸವು ವೃಥಾ ಮಾಂಸ. ಅದನ್ನು ಭಕ್ಷಿಸಬಾರದು ಎಂದು ಮನುವು ಹೇಳಿದ್ದಾನೆ.

ಅಸ್ವರ್ಗ್ಯಮಯಶಸ್ಯಂ ಚ ರಕ್ಷೋವದ್ ಭರತರ್ಷಭ ।
ವಿಧಿನಾ ಹಿ ನರಾಃ ಪೂರ್ವಂ ಮಾಂಸಂ ರಾಜನ್ನಭಕ್ಷಯನ್ ॥೫೨॥

ಎಲೈ ಭರತರ್ಷಭನೇ, ರಾಕ್ಷಸರಂತೆ ಅಂತಹ ಮಾಂಸವನ್ನು ಭಕ್ಷಿಸುವುದು ಸ್ವರ್ಗ ಸಾಧನವಲ್ಲ ಮತ್ತು ಅಕೀರ್ತಿಕರವಾದುದು. ಎಲೈ ರಾಜನೇ, ಹಿಂದೆ ಮನುಷ್ಯರು ವಿಧಿಗೆ ಅನುಸಾರವಾಗಿ ಮಾತ್ರ ಮಾಂಸವನ್ನು ಭಕ್ಷಿಸುತ್ತಿದ್ದರು.

ಯ ಇಚ್ಛೇತ್ ಪುರುಷೋಽತ್ಯಂತಮಾತ್ಮಾನಂ ನಿರುಪದ್ರವಮ್ ।
ಸ ವರ್ಜಯೇತ ಮಾಂಸಾನಿ ಪ್ರಾಣಿನಾಮಿಹ ಸರ್ವಶಃ ॥೫೩॥

ಯಾವ ಮನುಷ್ಯನು ತನಗೆ ಯಾವ ಉಪದ್ರವವೂ ಆಗಬಾರದೆಂದು ಬಯಸುತ್ತಾನೋ ಅವನು ಎಲ್ಲ ರೀತಿಯಿಂದಲೂ ಪ್ರಾಣಿಗಳ ಮಾಂಸವನ್ನು ವರ್ಜಿಸಬೇಕು.

ಶ್ರೂಯತೇ ಹಿ ಪುರಾ ಕಲ್ಪೇ ನೃಣಾಂ ವ್ರೀಹಿಮಯಃ ಪಶುಃ ।
ಯೇನಾಯಜಂತ ಯಜ್ವಾನಃ ಪುಣ್ಯಲೋಕಪರಾಯಣಾಃ ॥೫೪॥

ಪ್ರಾಚೀನಕಾಲದಲ್ಲಿ ಪುಣ್ಯಲೋಕ ಪರಾಯಣರಾದವರು ಧಾನ್ಯಮಯವಾದ (ಪಿಷ್ಟಮಯವಾದ) ಪಶುವನ್ನು ಮಾಡಿ ಅದರಿಂದ ಯಜ್ಞವನ್ನು ಮಾಡುತ್ತಿದ್ದರು ಎಂದು ಕೇಳಿ ಬರುತ್ತದೆ.

ಋಷಿಭಿಃ ಸಂಶಯಂ ಪೃಷ್ಟೋ ವಸುಶ್ಚೇದಿಪತಿಃ ಪುರಾ ।
ಅಭಕ್ಷ್ಯಮಿತಿ ಮಾಂಸಂ ಸ ಪ್ರಾಹ ಭಕ್ಷ್ಯಮಿತಿ ಪ್ರಭೋ ॥೫೫॥

ಆಕಾಶಾನ್ಮೇದಿನೀಂ ಪ್ರಾಪ್ತಸ್ತತಃ ಸ ಪೃಥಿವೀಪತಿಃ ।
ಏತದೇವ ಪುನಶ್ಚೋಕ್ತ್ವಾ ವಿವೇಶ ಧರಣೀತಲಮ್ ॥೫೬॥

ಹಿಂದೆ ಋಷಿಗಳು ಚೇದಿರಾಜನಾದ ವಸುವನ್ನು ಮಾಂಸವು ಭಕ್ಷ್ಯವೇ ಅಭಕ್ಷ್ಯವೇ ಎಂದು ತಮ್ಮ ಸಂಶಯವನ್ನು ಕೇಳಿದಾಗ ಅವನು ಭಕ್ಷ್ಯ ಎಂದು ಹೇಳಿದ ತಕ್ಷಣ ಆಕಾಶದಿಂದ ಭೂಮಿಗೆ ಇಳಿದನು. ಅದೇ ಮಾತನ್ನು ಇನ್ನೊಂದು ಬಾರಿ ಹೇಳಿ ಭೂಮಿಯ ಒಳಗೆ ಇಳಿದು ಪಾತಾಳಕ್ಕೆ ಹೋದನು.

ಪ್ರಜಾನಾಂ ಹಿತಕಾಮೇನ ತ್ವಗಸ್ಥೇನ ಮಹಾತ್ಮನಾ ।
ಆರಣ್ಯಾಃ ಸರ್ವದೈವತ್ಯಾಃ ಪ್ರೋಕ್ಷಿತಾಸ್ತಪಸಾ ಮೃಗಾಃ ॥೫೭॥

ಆಹರ್ತಾ ಚಾನುಮಂತಾ ಚ ವಿಶಸ್ತಾ ಕ್ರಯವಿಕ್ರಯೀ ।
ಸಂಸ್ಕರ್ತಾ ಚೋಪಭೋಕ್ತಾ ಚ ಘಾತಕಾಃ ಸರ್ವ ಏವ ತೇ ॥೪೮॥

ಪ್ರಾಣಿಯನ್ನು ಎಳೆದುಕೊಂಡು ಬರುವವನೂ, ಕೊಲ್ಲಲು ಅನುಮತಿಯನ್ನು ಕೊಡುವವನೂ, ಕೊಲ್ಲುವವನೂ, ಮಾಂಸವನ್ನು ಮಾರುವವನೂ, ಕೊಳ್ಳುವವನೂ, ಬೇಯಿಸುವವನೂ ಮತ್ತು ಭಕ್ಷಿಸುವವನೂ ಎಲ್ಲರೂ ಪ್ರಾಣಿಘಾತಕರೇ.

ಇದಮನ್ಯತ್ ತು ವಕ್ಷ್ಯಾಮಿ ಪ್ರಮಾಣಂ ವಿಧಿನಿರ್ಮಿತಮ್ ।
ಪುರಾಣಮೃಷಿಭಿರ್ಜುಷ್ಟಂ ವೇದೇಷು ವಿಧಿನಿರ್ಮಿತಮ್ ॥೪೯॥

ವೇದಗಳಲ್ಲಿ ನಿಶ್ಚಿತವಾದ, ಋಷಿಗಳಿಂದ ಸೇವಿತವಾದ, ವಿಧಿಗೆ ಅನುಸಾರವಾದ ಈ ಇನ್ನೊಂದು ವಿಷಯವನ್ನು ಹೇಳುತ್ತೇನೆ.

ಪ್ರವೃತ್ತಿಲಕ್ಷಣೇ ಧರ್ಮೇ ಫಲಾರ್ಥಿಭಿರಭಿದ್ರುತೇ ।
ಯಥೋಕ್ತಂ ರಾಜಶಾರ್ದೂಲ ನ ತು ತನ್ಮೋಕ್ಷಕಾಂಕ್ಷಿಣಾಮ್ ॥೫೦॥

ಎಲೈ ರಾಜಶಾರ್ದೂಲನೇ, ಈ ಮಾಂಸಭಕ್ಷಣವು ಫಲವನ್ನು ಬಯಸಿ ಪ್ರವೃತ್ತಿ ಧರ್ಮವನ್ನು ಮಾಡುವ ಪುರುಷರಿಗಾಗಿ ಹೇಳಲ್ಪಟ್ಟಿದೆ. ಮೋಕ್ಷಾಪೇಕ್ಷಿಗಳಾಗಿ ನಿಯತ ಕರ್ಮಾನುಷ್ಠಾನ ಮಾಡುವವರಿಗೆ ಅಲ್ಲ.

ಹವಿರ್ಯತ್ ಸಂಸ್ಕೃತಂ ಮಂತ್ರೈಃ ಪ್ರೋಕ್ಷಿತಾಭ್ಯುಕ್ಷಿತಂ ಶುಚಿ ।
ವೇದೋಕ್ತೇನ ಪ್ರಮಾಣೇನ ಪಿತ್ರ್ಯಾಣಾಂ ಪ್ರಕ್ರಿಯಾಸು ಚ ।
ಅತೋಽನ್ಯಥಾ ವೃಥಾಮಾಂಸಮಭಕ್ಷ್ಯಂ ಮನುರಬ್ರವೀತ್ ॥೫೧॥

ಪ್ರೋಕ್ಷಿತವಾಗಿ ಮಂತ್ರಗಳಿಂದ ಸಂಸ್ಕರಿಸಲ್ಪಟ್ಟ ಹವಿಸ್ಸೇ ವೇದೋಕ್ತ ಪ್ರಮಾಣಕ್ಕೆ ಅನುಸಾರವಾಗಿ ಯಜ್ಞಗಳಲ್ಲಿಯೂ ಮತ್ತು ಪಿತೃಕಾರ್ಯಗಳಲ್ಲಿಯೂ ಶುದ್ಧವಾದುದು. ಉಳಿದ ಮಾಂಸವು ವೃಥಾ ಮಾಂಸ. ಅದನ್ನು ಭಕ್ಷಿಸಬಾರದು ಎಂದು ಮನುವು ಹೇಳಿದ್ದಾನೆ.

ಅಸ್ವರ್ಗ್ಯಮಯಶಸ್ಯಂ ಚ ರಕ್ಷೋವದ್ ಭರತರ್ಷಭ ।
ವಿಧಿನಾ ಹಿ ನರಾಃ ಪೂರ್ವಂ ಮಾಂಸಂ ರಾಜನ್ನಭಕ್ಷಯನ್ ॥೫೨॥

ಎಲೈ ಭರತರ್ಷಭನೇ, ರಾಕ್ಷಸರಂತೆ ಅಂತಹ ಮಾಂಸವನ್ನು ಭಕ್ಷಿಸುವುದು ಸ್ವರ್ಗ ಸಾಧನವಲ್ಲ ಮತ್ತು ಅಕೀರ್ತಿಕರವಾದುದು. ಎಲೈ ರಾಜನೇ, ಹಿಂದೆ ಮನುಷ್ಯರು ವಿಧಿಗೆ ಅನುಸಾರವಾಗಿ ಮಾತ್ರ ಮಾಂಸವನ್ನು ಭಕ್ಷಿಸುತ್ತಿದ್ದರು.

ಯ ಇಚ್ಛೇತ್ ಪುರುಷೋಽತ್ಯಂತಮಾತ್ಮಾನಂ ನಿರುಪದ್ರವಮ್ ।
ಸ ವರ್ಜಯೇತ ಮಾಂಸಾನಿ ಪ್ರಾಣಿನಾಮಿಹ ಸರ್ವಶಃ ॥೫೩॥

ಯಾವ ಮನುಷ್ಯನು ತನಗೆ ಯಾವ ಉಪದ್ರವವೂ ಆಗಬಾರದೆಂದು ಬಯಸುತ್ತಾನೋ ಅವನು ಎಲ್ಲ ರೀತಿಯಿಂದಲೂ ಪ್ರಾಣಿಗಳ ಮಾಂಸವನ್ನು ವರ್ಜಿಸಬೇಕು.

ಶ್ರೂಯತೇ ಹಿ ಪುರಾ ಕಲ್ಪೇ ನೃಣಾಂ ವ್ರೀಹಿಮಯಃ ಪಶುಃ ।
ಯೇನಾಯಜಂತ ಯಜ್ವಾನಃ ಪುಣ್ಯಲೋಕಪರಾಯಣಾಃ ॥೫೪॥

ಪ್ರಾಚೀನಕಾಲದಲ್ಲಿ ಪುಣ್ಯಲೋಕ ಪರಾಯಣರಾದವರು ಧಾನ್ಯಮಯವಾದ (ಪಿಷ್ಟಮಯವಾದ) ಪಶುವನ್ನು ಮಾಡಿ ಅದರಿಂದ ಯಜ್ಞವನ್ನು ಮಾಡುತ್ತಿದ್ದರು ಎಂದು ಕೇಳಿ ಬರುತ್ತದೆ.

ಋಷಿಭಿಃ ಸಂಶಯಂ ಪೃಷ್ಟೋ ವಸುಶ್ಚೈದಿಪತಿಃ ಪುರಾ ।
ಅಭಕ್ಷ್ಯಮಿತಿ ಮಾಂಸಂ ಸ ಪ್ರಾಹ ಭಕ್ಷ್ಯಮಿತಿ ಪ್ರಭೋ ॥೫೫॥

ಆಕಾಶಾನ್ಮೇದಿನೀಂ ಪ್ರಾಪ್ತಸ್ತತಃ ಸ ಪೃಥಿವೀಪತಿಃ ।
ಏತದೇವ ಪುನಶ್ಚೋಕ್ತ್ವಾ ವಿವೇಶ ಧರಣೀತಳಮ್ ॥೫೬॥

ಹಿಂದೆ ಋಷಿಗಳು ಚೇದಿರಾಜನಾದ ವಸುವನ್ನು ಮಾಂಸವು ಭಕ್ಷ್ಯವೇ ಅಭಕ್ಷ್ಯವೇ ಎಂದು ತಮ್ಮ ಸಂಶಯವನ್ನು ಕೇಳಿದಾಗ ಅವನು ಭಕ್ಷ್ಯ ಎಂದು ಹೇಳಿದ ತಕ್ಷಣ ಆಕಾಶದಿಂದ ಭೂಮಿಗೆ ಇಳಿದನು. ಅದೇ ಮಾತನ್ನು ಇನ್ನೊಂದು ಬಾರಿ ಹೇಳಿ ಭೂಮಿಯ ಒಳಗೆ ಇಳಿದು ಪಾತಾಳಕ್ಕೆ ಹೋದನು.

ಪ್ರಜಾನಾಂ ಹಿತಕಾಮೇನ ತ್ವಗಸ್ಥೇನ ಮಹಾತ್ಮನಾ ।
ಆರಣ್ಯಾಃ ಸರ್ವದೈವತ್ಯಾಃ ಪ್ರೋಕ್ಷಿತಾಸ್ತಪಸಾ ಮೃಗಾಃ ॥೫೭॥

ಪ್ರಜೆಗಳ ಮೇಲಿನ ಹಿತದೃಷ್ಟಿಯಿಂದ ಮಹಾತ್ಮರಾದ ಅಗಸ್ತ್ಯರು ಅರಣ್ಯದಲ್ಲಿರುವ ಎಲ್ಲಾ ದೇವತೆಗಳಿಗೆ ಸಂಬಂಧಪಟ್ಟ ಪಶುಗಳನ್ನು ತಪಸ್ಸಿನ ಶಕ್ತಿಯಿಂದ ಪ್ರೋಕ್ಷಣೆಯನ್ನು ಮಾಡಿದ್ದಾರೆ (ಆದ್ದರಿಂದ ನೀನು ಹಿಂಸೆ ಮಾಡಬಹುದಾದ ಪಶುಗಳಿಲ್ಲ).

ಕ್ರಿಯಾ ಹ್ಯೇವಂ ನ ಹೀಯಂತೇ ಪಿತೃದೈವತಸಂಶ್ರಿತಾಃ ।
ಪ್ರೀಯಂತೇ ಪಿತರಶ್ಚೈವ ನ್ಯಾಯತೋಽಮಾಂಸತರ್ಪಿತಾಃ ॥೫೮॥

ಮಾಂಸವನ್ನು ಉಪಯೋಗಿಸದಿದ್ದರೆ ಪಿತೃಕಾರ್ಯ ಮತ್ತು ದೇವತಾ ಕಾರ್ಯಗಳಲ್ಲಿ ಯಾವ ಹಾನಿಯೂ ಉಂಟಾಗುವುದಿಲ್ಲ. ನ್ಯಾಯಪ್ರಾಪ್ತವಾದ, ಮಾಂಸಭಿನ್ನವಾದ ಆಹಾರದಿಂದಲೇ ತೃಪ್ತಿಯನ್ನು ಹೊಂದಿದ ದೇವತೆಗಳು ಸಂತೋಷಪಡುತ್ತಾರೆ.

ಇದಂ ತು ಶೃಣು ರಾಜೇಂದ್ರ ಕೀರ್ತ್ಯಮಾನಂ ಮಯಾನಘ ।
ಅಭಕ್ಷಣೇ ಸರ್ವಸುಖಂ ಮಾಂಸಸ್ಯ ಮನುಜಾಧಿಪ ॥೫೯॥

ಎಲೈ ಅನಘನೇ, ರಾಜೇಂದ್ರನೇ, ನಾನು ಹೇಳುವ ಈ ಇನ್ನೊಂದು ವಿಷಯವನ್ನು ಕೇಳು - ಮಾಂಸವನ್ನು ಭಕ್ಷಿಸದಿದ್ದರೆ ಎಲ್ಲ ಸುಖವೂ ಉಂಟಾಗುತ್ತದೆ.

ಯಸ್ತು ವರ್ಷಶತಂ ಪೂರ್ಣಂ ತಪಸ್ತಪ್ಯೇತ್ ಸುದಾರುಣಮ್ ।
ಯಶ್ಚೈಕಂ ವರ್ಜಯೇನ್ಮಾಂಸಂ ಸಮಮೇತನ್ಮತಂ ಮಮ ॥೬೦॥

ಯಾವನು ಪೂರ್ಣವಾಗಿ ನೂರು ವರ್ಷಗಳ ಕಾಲ ದಾರುಣವಾದ ತಪಸ್ಸನ್ನು ಮಾಡುತ್ತಾನೆಯೋ ಮತ್ತು ಯಾವನು ಮಾಂಸವನ್ನು ವರ್ಜಿಸುತ್ತಾನೆಯೋ ಅವರಿಬ್ಬರೂ ಸಮರಾದವರು ಎಂದು ನನ್ನ ಅಭಿಪ್ರಾಯ.

ಕೌಮುದೇ ತು ವಿಶೇಷೇಣ ಶುಕ್ಲಪಕ್ಷೇ ನರಾಧಿಪ ।
ವರ್ಜಯೇತ್ ಸರ್ವಮಾಂಸಾನಿ ಧರ್ಮೋ ಹ್ಯತ್ರ ವಿಧೀಯತೇ ॥೬೧॥

ಎಲೈ ರಾಜನೇ, ಕಾರ್ತಿಕಮಾಸದಲ್ಲಿ, ಅದರಲ್ಲಿಯೂ ಶುಕ್ಲಪಕ್ಷದಲ್ಲಿ ಸರ್ವ ಮಾಂಸಗಳನ್ನೂ ವರ್ಜಿಸಿದರೆ ಬಹಳ ಧರ್ಮವುಂಟಾಗುವುದೆಂದು ವಿಧಿಸಲ್ಪಡುತ್ತದೆ.

ಚತುರೋ ವಾರ್ಷಿಕಾನ್ ಮಾಸಾನ್ ಯೋ ಮಾಂಸಂ ಪರಿವರ್ಜಯೇತ್ ।
ಚತ್ವಾರಿ ಭದ್ರಾಣ್ಯಾಪ್ನೋತಿ ಕೀರ್ತಿಮಾಯುರ್ಯಶೋ ಬಲಮ್ ॥೬೨॥

ವರ್ಷಾಕಾಲದ ನಾಲ್ಕು ತಿಂಗಳುಗಳಲ್ಲಿ ಯಾವನು ಮಾಂಸವನ್ನು ವರ್ಜಿಸುತ್ತಾನೋ ಅವನು ಮಂಗಳವಾದ ಕೀರ್ತಿಯನ್ನೂ, ಆಯುಸ್ಸನ್ನೂ, ಯಶಸ್ಸನ್ನೂ ಮತ್ತು ಬಲವನ್ನೂ ಹೊಂದುತ್ತಾನೆ.

ಅಥವಾ ಮಾಸಮಪ್ಯೇಕಂ ಸರ್ವಮಾಂಸಾನ್ಯಭಕ್ಷಯನ್ ।
ಅತೀತ್ಯ ಸರ್ವದುಃಖಾನಿ ಸುಖೀ ಜೀವೇನ್ನಿರಾಮಯಃ ॥೬೩॥

ಅಥವಾ ಒಂದು ತಿಂಗಳ ಕಾಲವಾದರೂ ಯಾವ ಮಾಂಸವನ್ನೂ ಸೇವಿಸದಿದ್ದರೆ ಮನುಷ್ಯನು ಎಲ್ಲ ದುಃಖಗಳನ್ನೂ ಕಳೆದುಕೊಂಡು ರೋಗರಹಿತನಾಗಿ ಸುಖದಿಂದ ಬದುಕುತ್ತಾನೆ.

ಯೇ ವರ್ಜಯಂತಿ ಮಾಂಸಾನಿ ಮಾಸಶಃ ಪಕ್ಷಶೋಽಪಿ ವಾ ।
ತೇಷಾಂ ಹಿಂಸಾನಿವೃತ್ತಾನಾಂ ಬ್ರಹ್ಮಲೋಕೋ ವಿಧೀಯತೇ ॥೬೪॥

ಯಾರು ಮಾಸಗಳವರೆಗೆ ಅಥವಾ ಪಕ್ಷಗಳವರೆಗೆ ಮಾಂಸವನ್ನು ವರ್ಜಿಸುತ್ತಾರೆಯೋ ಅಂತಹವರು ಹಿಂಸೆಯಿಂದ ನಿವೃತ್ತರಾಗುವ ಕಾರಣ ಅವರಿಗೆ ಬ್ರಹ್ಮಲೋಕವು ವಿಧಿಸಲ್ಪಡುತ್ತದೆ.

ಮಾಂಸಂ ತು ಕೌಮುದಂ ಪಕ್ಷಂ ವರ್ಜಿತಂ ಪಾರ್ಥ ರಾಜಭಿಃ ।
ಸರ್ವಭೂತಾತ್ಮಭೂತೈಸ್ತೈರ್ವಿಜ್ಞಾತಾರ್ಥಪರಾವರೈಃ ॥೬೫॥

ಎಲೈ ಪಾರ್ಥನೇ, ಸರ್ವಭೂತಾಂತರ್ಯಾಮಿಯಾದ ಪರಮಾತ್ಮನನ್ನು ತಿಳಿದ, ತತ್ತ್ವಜ್ಞಾನಿಗಳಾದ ರಾಜರು ಕಾರ್ತಿಕ ಮಾಸದಲ್ಲಿ ಮಾಂಸವನ್ನು ತ್ಯಜಿಸಿದ್ದಾರೆ.

ನಾಭಾಗೇನಾಂಬರೀಷೇಣ ಗಯೇನ ಚ ಮಹಾತ್ಮನಾ ।
ಆಯುಷಾ ಚಾನರಣ್ಯೇನ ದಿಲೀಪರಘುಪೂರುಭಿಃ ॥೬೬॥

ಕಾರ್ತವೀರ್ಯಾನಿರುದ್ಧಾಭ್ಯಾಂ ನಹುಷೇಣ ಯಯಾತಿನಾ ।
ಆಯುನಾ ವಾ ನರೇಂದ್ರೇಣ ತಥೈವ ಶಶಬಿಂದುನಾ ।
ಯೌವನಾಶ್ವೇನ ಚ ತಥಾ ಶಿಬಿನೌಶೀನರೇಣ ಚ ॥೬೭॥

ಶ್ಯೇನಚಿತ್ರೇಣ ರಾಜೇಂದ್ರ ಸೋಮಕೇನ ವೃಕೇಣ ಚ ।
ರೈವತೇನ ರಂತಿದೇವೇನ ವಸುನಾ ಸೃಂಜಯೇನ ಚ ॥೬೮॥

ದುಃಷಂತೇನ ಕರೂಷೇಣ ರಾಮಾಲಕನಳೈಸ್ತಥಾ ।
ವಿರೂಪಾಶ್ವೇನ ನಿಮಿನಾ ಜನಕೇನ ಚ ಧೀಮತಾ ॥೬೯॥

ಸಿಲೇನ ಪೃಥುನಾ ಚೈವ ವೀರಸೇನೇನ ಚೈವ ಹ ।
ಇಕ್ಷ್ವಾಕುಣಾ ಶಂಭುನಾ ಚ ಶ್ವೇತೇನ ಸಗರೇಣ ಚ ॥೭೦॥

ಏತೈಶ್ಚಾನ್ಯೈ ರೃಷ್ಟ ರಾಜೇಂದ್ರ ಪುರಾ ಮಾಂಸಂ ನ ಭಕ್ಷಿತಮ್ ।
ಶಾರದಂ ಕೌಮುದಂ ಮಾಸಂ ತತಸ್ತೇ ಸ್ವರ್ಗಮಾಪ್ನುವನ್ ॥೭೧॥

ನಾಭಾಗ, ಅಂಬರೀಷ, ಮಹಾತ್ಮನಾದ ಗಯ, ಆಯು, ಅರಣ್ಯ, ದಿಲೀಪ, ರಘು, ಪೂರು, ಕಾರ್ತವೀರ್ಯ, ಅನಿರುದ್ಧ, ನಹುಷ, ಯಯಾತಿ, ಶಶಬಿಂದು, ಯೌವನಾಶ್ವ (ಮಾಂಧಾತೃ), ಔಶೀನರನಾದ ಶಿಬಿ, ಶ್ಯೇನಚಿತ್ರ, ಸೋಮಕ, ವೃಕ, ರೈವತ, ರಂತಿದೇವ, ವಸು, ಸೃಂಜಯ, ದುಷ್ಮಂತ, ಕರೂಷ, ರಾಮ, ಅಲಕ, ನಳ, ವಿರೂಪಾಶ್ವ, ನಿಮಿ, ಮೇಧಾವಿಯಾದ ಜನಕ, ಸಿಲ, ಪೃಥು, ವೀರಸೇನನಾದ ಇಕ್ಷ್ವಾಕು, ಶಂಭು, ಶ್ವೇತ, ಸಗರ - ಎಲೈ ರಾಜನೇ, ಇವರು ಯಾರೂ ಶರತ್ಕಾಲದ ಕಾರ್ತಿಕ ಮಾಸದಲ್ಲಿ ಮಾಂಸವನ್ನು ಭಕ್ಷಿಸಲಿಲ್ಲ. ಅದರಿಂದ ಅವರು ಸ್ವರ್ಗವನ್ನು ಹೊಂದಿದರು.

ಬ್ರಹ್ಮಲೋಕೇ ಚ ತಿಷ್ಠಂತಿ ಜ್ವಲಮಾನಾಃ ಶ್ರಿಯಾऽನ್ವಿತಾಃ ।
ಉಪಾಸ್ಯಮಾನಾ ಗಂಧರ್ವೈಃ ಸ್ತ್ರೀಸಹಸ್ರೈಃ ಸಮಾವೃತಾಃ ॥೭೨॥

ಇವರು ಗಂಧರ್ವರಿಂದ ಸೇವಿಸಲ್ಪಟ್ಟು, ಸಹಸ್ರ ಸ್ತ್ರೀಯರಿಂದ ಪರಿವೃತರಾಗಿ, ಕಾಂತಿಯಿಂದ ಬೆಳಗುತ್ತಾ ಬ್ರಹ್ಮಲೋಕದಲ್ಲಿ ಇರುತ್ತಾರೆ.

ತದೇತದುತ್ತಮಂ ಧರ್ಮಮಹಿಂಸಾಲಕ್ಷಣಂ ಶುಭಮ್ ।
ಯೇ ಚರಂತಿ ಮಹಾತ್ಮಾನೋ ನಾಕಪೃಷ್ಠೇ ವಸಂತಿ ತೇ ॥೭೩॥

ಆದ್ದರಿಂದ ಈ ಅಹಿಂಸಾರೂಪವಾದ ಧರ್ಮವು ಶ್ರೇಷ್ಠವಾದುದು ಮತ್ತು ಶುದ್ಧವಾದುದು. ಅದನ್ನು ಆಚರಣೆ ಮಾಡುವ ಮಹಾತ್ಮರು ಸ್ವರ್ಗಲೋಕದಲ್ಲಿ ವಾಸವನ್ನು ಮಾಡುತ್ತಾರೆ.

ಮಧು ಮಾಂಸಂ ಚ ಯೇ ನಿತ್ಯಂ ವರ್ಜಯಂತೀಹ ಧಾರ್ಮಿಕಾಃ ।
ಜನ್ಮಪ್ರಭೃತಿ ಮದ್ಯಂ ಚ ಸರ್ವೇ ತೇ ಮುನಯಃ ಸ್ಮೃತಾಃ ।
ವಿಶಿಷ್ಟತಾಂ ಜ್ಞಾತಿಷು ಚ ಲಭಂತೇ ನಾತ್ರ ಸಂಶಯಃ ॥೭೪॥

ಮದ್ಯ-ಮಾಂಸಗಳನ್ನು ಯಾವಾಗಲೂ ವರ್ಜಿಸುವ ಧಾರ್ಮಿಕರು ಮತ್ತು ಜನ್ಮಾರಭ್ಯ ಮದ್ಯವನ್ನು ವರ್ಜಿಸುವವರು - ಇವರೆಲ್ಲರೂ ಮುನಿಗಳೆಂದು ಹೇಳಲ್ಪಡುತ್ತಾರೆ. ಮದ್ಯ-ಮಾಂಸಗಳನ್ನು ವರ್ಜಿಸುವವರು ಜ್ಞಾತಿಗಳಲ್ಲಿ ಶ್ರೇಷ್ಠರಾಗುತ್ತಾರೆ ಎನ್ನುವುದರಲ್ಲಿ ಸಂಶಯವಿಲ್ಲ.

ಇಮಂ ಧರ್ಮಮಮಾಂಸಾದಂ ಯಶ್ಚರೇಚ್ಛ್ರಾವಯೇತ ವಾ ।
ಅಪಿ ಚೇತ್ಸುದುರಾಚಾರೋ ನ ಜಾತು ನಿರಯಂ ವ್ರಜೇತ್ ॥೭೫॥

ಈ ಮಾಂಸದ ಅಭಕ್ಷಣೆಗೆ ಸಂಬಂಧಿಸಿದ ಈ ಆಖ್ಯಾನವನ್ನು ಯಾರು ಕೇಳುತ್ತಾರೆಯೋ, ಕೇಳಿಸುತ್ತಾರೆಯೋ ಮತ್ತು ಯಾರು ಮಾಂಸದ ಅಭಕ್ಷಣೆಯನ್ನು ಆಚರಿಸುತ್ತಾರೆಯೋ ಅವರು ದುರಾಚಾರಿಗಳಾಗಿದ್ದರೂ ನರಕಕ್ಕೆ ಹೋಗುವುದಿಲ್ಲ.

ಪಠೇದ್ ವಾ ಯ ಇದಂ ರಾಜನ್ ಶೃಣುಯಾದ್ ವಾಪ್ಯಭೀಕ್ಷ್ಣಶಃ ।
ಅಮಾಂಸಭಕ್ಷಣವಿಧಿಂ ಪವಿತ್ರಮೃಷಿಪೂಜಿತಮ್ ।
ವಿಮುಕ್ತಃ ಸರ್ವಪಾಪೇಭ್ಯಃ ಸರ್ವಕಾಮೈರ್ಮಹೀಯತೇ ॥೭೬॥

ಎಲೈ ರಾಜನೇ, ಈ ಪವಿತ್ರವಾದ, ಋಷಿಗಳಿಂದ ಪೂಜಿತವಾದ, ಮಾಂಸ ವರ್ಜನ ವಿಧಿಯನ್ನು ಯಾವನು ಸತತವಾಗಿ ಕೇಳುತ್ತಾನೆಯೋ ಅವನು ಸರ್ವಪಾಪಗಳಿಂದ ನಿರ್ಮುಕ್ತನಾಗಿ ಸರ್ವಕಾಮಗಳನ್ನು ಹೊಂದುತ್ತಾನೆ.

ಆಪನ್ನಶ್ಚಾಪದೋ ಮುಚ್ಯೇದ್ ಬದ್ಧೋ ಮುಚ್ಯೇತ ಬಂಧನಾತ್ ।
ಮುಚ್ಯೇತ ರೋಗಾದ್ ರೋಗೀ ಚ ದುಃಖಾನ್ಮುಚ್ಯೇತ ದುಃಖಿತಃ ॥೭೭॥

ಆಪತ್ತಿಗೆ ಸಿಲುಕಿದವನು ಆಪತ್ತಿನಿಂದ ಬಿಡುಗಡೆಯನ್ನು ಹೊಂದುತ್ತಾನೆ. ಬದ್ಧನಾದವನು ಬಂಧನದ ಬಿಡುಗಡೆಯನ್ನು ಹೊಂದುತ್ತಾನೆ. ರೋಗಿಯು ರೋಗದ ನಿವೃತ್ತಿಯನ್ನು ಹೊಂದುತ್ತಾನೆ. ದುಃಖಿಯಾದವನು ದುಃಖದ ಪರಿಹಾರವನ್ನು ಹೊಂದುತ್ತಾನೆ.

ತಿರ್ಯಗ್ಯೋನಿಂ ನ ಗಚ್ಛೇತ ರೂಪವಾಂಶ್ಚ ಭವೇನ್ನರಃ ।
ಸಿದ್ಧಿಮಾನ್ ವೈ ಕುಲಶ್ರೈಷ್ಠ್ಯಂ ಪ್ರಾಪ್ನುಯಾಚ್ಚ ಮಹದ್ಯಶಃ ॥೭೮॥

ಮಾಂಸದ ಅಭಕ್ಷಣೆಯನ್ನು ಅನುಷ್ಠಾನ ಮಾಡುವ ಮನುಷ್ಯನು ನೀಚಯೋನಿಗಳಿಗೆ ಹೋಗುವುದಿಲ್ಲ. ರೂಪವಂತನಾಗಿ ಜನಿಸಿ, ಸಿದ್ಧಿಯನ್ನು ಪಡೆದು, ತನ್ನ ಕುಲದಲ್ಲಿ ಶ್ರೇಷ್ಠತೆಯನ್ನು ಮತ್ತು ಅಪಾರವಾದ ಕೀರ್ತಿಯನ್ನು ಪಡೆಯುತ್ತಾನೆ.

ಏತತ್ ತೇ ಕಥಿತಂ ರಾಜನ್ ಮಾಂಸಸ್ಯ ಪರಿವರ್ಜನೇ ।
ಅಪ್ರವೃತ್ತೌ ನಿವೃತ್ತೌ ಚ ವಿಧಾನಮೃಷಿನಿರ್ಮಿತಮ್ ॥೭೯॥

ಎಲೈ ರಾಜನೇ, ಮಾಂಸಭಕ್ಷಣವರ್ಜನದ ವಿಷಯದಲ್ಲಿ ಪ್ರವೃತ್ತಿಯನ್ನೇ ಮಾಡದಿದ್ದರೆ ಅಥವಾ ಮೊದಲು ಪ್ರವೃತ್ತಿ ಮಾಡಿ ಅನಂತರ ನಿವೃತ್ತಿಯನ್ನು ಮಾಡುವಲ್ಲಿ ಋಷಿಗಳು ಹೇಳಿದ ವಿಧಾನವನ್ನು ನಿನಗೆ ತಿಳಿಸಿದ್ದೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಮಧುಮಾಂಸಭಕ್ಷಣನಿವೃತ್ತಿರ್ನಾಮ
ಷಟ್‌ಷಷ್ಟ್ಯುತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಅರವತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಅರವತ್ತೇಳನೆಯ ಅಧ್ಯಾಯ

ಮಾಂಸಭಕ್ಷಣಪ್ರಕರಣದ ಉಪಸಂಹಾರ

ಯುಧಿಷ್ಠಿರಃ

ಇಮೇ ವೈ ಮಾನವಾ ಲೋಕೇ ಭೃಶಂ ಮಾಂಸಸ್ಯ ಗೃದ್ಧಿನಃ ।
ವಿಸೃಜ್ಯ ಭಕ್ಷಾನ್ ವಿವಿಧಾನ್ ಯಥಾ ರಕ್ಷೋಗಣಾಸ್ತಥಾ ॥೧॥

ಯುಧಿಷ್ಠಿರ– ಲೋಕದಲ್ಲಿ ಈ ಮನುಷ್ಯರು ವಿವಿಧವಾದ ಭಕ್ಷ್ಯಗಳನ್ನು ಬಿಟ್ಟು ರಾಕ್ಷಸ ಸಮೂಹದಂತೆ ಮಾಂಸವನ್ನು ತಿನ್ನುವುದರಲ್ಲಿ ತೀವ್ರವಾದ ಆಸೆ ಉಳ್ಳವರಾಗಿದ್ದಾರೆ.

ನಾಪೂಪಾನ್ ವಿವಿಧಾಕಾರಾನ್ ಶಾಕಾನಿ ವಿವಿಧಾನಿ ಚ ।
ಷಾಡವಾನ್ ರಸಯೋಗಾಂಶ್ಚ ತಥೇಚ್ಛಂತಿ ಯಥಾऽऽಮಿಷಮ್ ॥೨॥

ಅವರು ಮಾಂಸವನ್ನು ಬಯಸುವಂತೆ ವಿವಿಧವಾದ ಹಣ್ಣುಗಳನ್ನಾಗಲೀ, ವಿವಿಧವಾದ ತರಕಾರಿಗಳನ್ನಾಗಲೀ ಅಥವಾ ಕಡುಬುಗಳನ್ನಾಗಲೀ ಅಥವಾ ರಸಗಳನ್ನಾಗಲೀ ಬಯಸುವುದಿಲ್ಲ.

ತತ್ರ ಮೇ ಬುದ್ಧಿರತ್ರೈವ ವಿಸರ್ಗೇ ಪರಿಮುಹ್ಯತೇ ।
ನ ಮನ್ಯೇ ರಸತಃ ಕಿಂಚಿನ್ಮಾಂಸತೋऽಸ್ತೀಹ ಕಿಂಚನ ॥೩॥

ನನಗೆ ಮಾಂಸವನ್ನು ಬಿಡುವ ವಿಷಯದಲ್ಲಿ ಬುದ್ಧಿಯು ಮೋಹಗೊಂಡಿದೆ. ಮಾಂಸಕ್ಕಿಂತಲೂ ರುಚಿಯಾದುದು ಯಾವುದೂ ಇಲ್ಲವೆಂದು ನಾನು ತಿಳಿಯುತ್ತೇನೆ.

ತದಿಚ್ಛಾಮಿ ಗುಣಾನ್ ಶ್ರೋತುಂ ಮಾಂಸಸ್ಯಾಭಕ್ಷಣೇऽಪಿ ವಾ ।
ಭಕ್ಷಣೇ ಚೈವ ಯೇ ದೋಷಾಸ್ತಾಂಶ್ಚೈವ ಪುರುಷರ್ಷಭ ॥೪॥

ಆದ್ದರಿಂದ ಎಲೈ ಪುರುಷರ್ಷಭನೇ, ಮಾಂಸವನ್ನು ಪರಿತ್ಯಜಿಸುವುದರಲ್ಲಿ ಇರುವ ಗುಣಗಳನ್ನೂ, ಮಾಂಸವನ್ನು ಭಕ್ಷಿಸುವುದರಲ್ಲಿ ಬರುವ ದೋಷಗಳನ್ನೂ ನಾನು ಕೇಳಲು ಬಯಸುತ್ತೇನೆ.

ಸರ್ವಂ ತತ್ತ್ವೇನ ಧರ್ಮಜ್ಞ ಯಥಾವದಿಹ ಧರ್ಮತಃ ।
ಕಿಂ ವಾ ಭಕ್ಷ್ಯಮಭಕ್ಷ್ಯಂ ವಾ ಸರ್ವಮೇತದ್ ವದಸ್ವ ಮೇ ॥೫॥

ಎಲೈ ಧರ್ಮಜ್ಞನೇ, ಧರ್ಮದೃಷ್ಟಿಯಿಂದ ಎಲ್ಲವನ್ನೂ ಸರಿಯಾಗಿ ಹೇಳು. ಯಾವುದು ಭಕ್ಷ್ಯ, ಯಾವುದು ಅಭಕ್ಷ್ಯ ಎಂಬುದೆಲ್ಲವನ್ನೂ ನನಗೆ ಹೇಳುವವನಾಗು.

ಭೀಷ್ಮಃ

ಏವಮೇತನ್ಮಹಾಬಾಹೋ ಯಥಾ ವದಸಿ ಭಾರತ ।
ನ ಮಾಂಸಾತ್ ಪರಮತ್ರಾನ್ಯದ್ ರಸತೋ ವಿದ್ಯತೇ ಭುವಿ ॥೬॥

ಎಲೈ ಭಾರತನೇ, ಮಹಾಬಾಹುವೇ, ನೀನು ಹೇಳಿದಂತೆಯೇ ರುಚಿಯ ವಿಷಯದಲ್ಲಿ ಮಾಂಸಕ್ಕಿಂತ ಶ್ರೇಷ್ಠವಾದುದು ಭೂಮಿಯಲ್ಲಿ ಯಾವುದೂ ಇಲ್ಲ.

ಕ್ಷತಕ್ಷೀಣಾಭಿತಪ್ತಾನಾಂ ಗ್ರಾಮ್ಯಧರ್ಮರತಾಶ್ಚ ಯೇ ।
ಅಧ್ವನಾ ಕರ್ಶಿತಾನಾಂ ಚ ನ ಮಾಂಸಾದ್ ವಿದ್ಯತೇ ಪರಮ್ ॥೭॥

ಗಾಯಗೊಂಡವರಿಗೂ, ರೋಗಿಷ್ಠರಾದವರಿಗೂ, ದಾರಿಹೋಕರಿಗೂ ಮಾಂಸಕ್ಕಿಂತ ಶ್ರೇಷ್ಠವಾದುದು ಯಾವುದೂ ಇಲ್ಲ.

ಸದ್ಯೋ ವರ್ಧಯತಿ ಪ್ರಾಣಾನ್ ಪುಷ್ಟಿಮಗ್ರ್ಯಂ ದದಾತಿ ಚ ।
ನ ಭಕ್ಷೋಽಭ್ಯಧಿಕಃ ಕಶ್ಚಿನ್ಮಾಂಸಾದಸ್ತಿ ಪರಂತಪ ॥೮॥

ಎಲೈ ಪರಂತಪನೇ, ಮಾಂಸವು ತಕ್ಷಣದಲ್ಲಿಯೇ ಇಂದ್ರಿಯಗಳಿಗೆ ಶಕ್ತಿಯನ್ನು ಕೊಡುತ್ತದೆ. ದೇಹಕ್ಕೆ ಶ್ರೇಷ್ಠವಾದ ಪುಷ್ಟಿಯನ್ನು ಕೊಡುತ್ತದೆ. ಆದ್ದರಿಂದ ಮಾಂಸಕ್ಕಿಂತ ದೊಡ್ಡದಾದ ಯಾವ ಭಕ್ಷ್ಯವೂ ಇಲ್ಲ.

ವಿವರ್ಜನೇ ತು ಬಹವೋ ಗುಣಾಃ ಕೌರವನಂದನ ।
ಯೇ ಭವಂತಿ ಮನುಷ್ಯಾಣಾಂ ತಾನ್ ಮೇ ನಿಗದತಃ ಶೃಣು ॥೯॥

ಎಲೈ ಕೌರವನಂದನನೇ, ಮಾಂಸಭಕ್ಷಣವನ್ನು ಬಿಡುವುದರಿಂದ ಮನುಷ್ಯರಿಗೆ ಯಾವ ಬಹುಗುಣಗಳು ಉಂಟಾಗುತ್ತವೆ ಎಂಬುದನ್ನು ನನ್ನಿಂದ ಕೇಳು.

ಸ್ವಮಾಂಸಂ ಪರಮಾಂಸೈರ್ಯೋ ವಿವರ್ಧಯಿತುಮಿಚ್ಛತಿ ।
ನಾಸ್ತಿ ಕ್ಷುದ್ರತರಸ್ತಸ್ಮಾನ್ನ ನೃಶಂಸತರೋ ನರಃ ॥೧೦॥

ಇನ್ನೊಂದು ಪ್ರಾಣಿಯ ಮಾಂಸದಿಂದ ತನ್ನ ಮಾಂಸವನ್ನು ಅಭಿವೃದ್ಧಿ ಪಡಿಸಲು ಇಚ್ಛಿಸುವವನಿಗಿಂತ ಹೆಚ್ಚು ಕ್ಷುದ್ರನಾದವನು ಮತ್ತು ಕ್ರೂರಿಯಾದವನು ಯಾವನೂ ಇಲ್ಲ.

ನ ಹಿ ಪ್ರಾಣಾತ್ ಪ್ರಿಯತರಂ ಲೋಕೇ ಕಿಂಚನ ವಿದ್ಯತೇ ।
ತಸ್ಮಾದ್ ದಯಾಂ ನರಃ ಕುರ್ಯಾದ್ ಯಥಾಽಽತ್ಮನಿ ತಥಾ ಪರೇ ॥

ಲೋಕದಲ್ಲಿ ಪ್ರಾಣಕ್ಕಿಂತ ಪ್ರಿಯವಾದ ವಸ್ತುವು ಯಾವುದೂ ಇಲ್ಲ. ಆದ್ದರಿಂದ ಮನುಷ್ಯನು ತನ್ನಲ್ಲಿ ಹೇಗೋ ಹಾಗೆ ಇನ್ನೊಬ್ಬರಲ್ಲಿಯೂ ದಯೆಯನ್ನು ತೋರಿಸಬೇಕು.

ಶುಕ್ರಾಚ್ಚ ತಾತ ಸಂಭೂತಿರ್ಮಾಂಸಸ್ಯೇಹ ನ ಸಂಶಯಃ ।
ಭಕ್ಷಣೇ ತು ಮಹಾನ್ ದೋಷೋ ವಧೇನ ಸ ಹಿ ತುಲ್ಯತೇ ॥೧೨॥

ಎಲೈ ಪ್ರೀತಿಪಾತ್ರನೇ, ಮಾಂಸವು ವೀರ್ಯದಿಂದ ಉಂಟಾಗುತ್ತದೆ ಎಂಬುದರಲ್ಲಿ ಸಂಶಯವಿಲ್ಲ. ಮಾಂಸಭಕ್ಷಣೆಯು ಮಹಾದೋಷಕವಾದುದು ಮತ್ತು ವಧೆಗೆ ಸಮಾನವಾದುದು.

ಅಹಿಂಸಾಲಕ್ಷಣೋ ಧರ್ಮ ಇತಿ ವೇದವಿದೋ ವಿದುಃ ।
ಯದಹಿಂಸ್ರಂ ಭವೇತ್ಕರ್ಮ ತತ್ಕುರ್ಯಾದಾತ್ಮವಾನ್ ನರಃ ॥೧೩॥

ಅಹಿಂಸೆಯು ಧರ್ಮದ ಲಕ್ಷಣವೆಂದು ವೇದಜ್ಞರು ಹೇಳುತ್ತಾರೆ. ಸ್ಥಿರವಾದ ಮನಸ್ಸುಳ್ಳ ಮನುಷ್ಯರು ಹಿಂಸೆ ಇಲ್ಲದಿದ್ದಂತಹ ಕರ್ಮವನ್ನೇ ಮಾಡಬೇಕು.

ಪಿತೃದೈವತಯಜ್ಞೇಷು ಪ್ರೋಕ್ಷಿತಂ ಹವಿರುಚ್ಯತೇ ।
ವಿಧಿನಾ ವೇದದೃಷ್ಟೇನ ತದ್ ಭುಕ್ತ್ವಾ ನೇಹ ದೂಷ್ಯತೇ ॥೧೪॥

ಪಿತೃಕಾರ್ಯದಲ್ಲಿ ಮತ್ತು ದೇವತಾ ಪೂಜೆಯಲ್ಲಿ ಮತ್ತು ಯಜ್ಞದಲ್ಲಿ ಪ್ರೋಕ್ಷಿತವಾದ ಮಾಂಸವು ಹವಿಸ್ಸು ಎಂದು ಹೇಳಲ್ಪಡುತ್ತದೆ. ವೇದವಿಹಿತವಾದ ಮಾರ್ಗದಿಂದ ಅದನ್ನು ಭಕ್ಷಿಸಿದರೆ ದೋಷವುಂಟಾಗುವುದಿಲ್ಲ.

ಯಜ್ಞಾರ್ಥೇ ಪಶವಃ ಸೃಷ್ಟಾ ಇತ್ಯಪಿ ಶ್ರೂಯತೇ ಶ್ರುತಿಃ ।
ಅತೋಽನ್ಯಥಾ ಪ್ರವೃತ್ತಾನಾಂ ರಾಕ್ಷಸೋ ವಿಧಿರುಚ್ಯತೇ ॥೧೫॥

ಕ್ಷತ್ರಿಯಾಣಾಂ ತು ಯೋ ದೃಷ್ಟೋ ವಿಧಿಸ್ತಮಪಿ ಮೇ ಶೃಣು ।
ವೀರ್ಯೇಣೋಪಾರ್ಜಿತಂ ಮಾಂಸಂ ಯಥಾ ಖಾದನ್ ನ ದುಷ್ಯತಿ ॥

ಯಜ್ಞದ ಸಲುವಾಗಿ ಪಶುಗಳು ಸೃಷ್ಟವಾದವು ಎಂದು ವೇದದಲ್ಲಿ ಕೇಳಿಬರುತ್ತದೆ. ಅದನ್ನು ಬಿಟ್ಟು ಬೇರೆ ರೀತಿಯಲ್ಲಿ ಮಾಂಸಭಕ್ಷಣೆಯಲ್ಲಿ ಪ್ರವೃತ್ತನಾದರೆ ಅದು ರಾಕ್ಷಸರ ನಡತೆ. ಕ್ಷತ್ರಿಯರಿಗೆ ಹೇಳಲ್ಪಟ್ಟಿರುವ ವಿಧಾನವನ್ನೂ ನನ್ನಿಂದ ಕೇಳು. ಪರಾಕ್ರಮದಿಂದ ಬೇಟೆಯಾಡಿ ಸಂಪಾದಿಸಿದ ಮಾಂಸವನ್ನು ತಿಂದರೆ ದೋಷವುಂಟಾಗುವುದಿಲ್ಲ.

ಆರಣ್ಯಾಃ ಸರ್ವದೈವತ್ಯಾಃ ಪ್ರೋಕ್ಷಿತಾಃ ಸರ್ವಶೋ ಮೃಗಾಃ ।
ಅಗಸ್ತ್ಯೇನ ಪುರಾ ರಾಜನ್ ಮೃಗಯಾ ಯೇನ ಪೂಜ್ಯತೇ ॥೧೭॥

ಎಲೈ ರಾಜನೇ, ಅರಣ್ಯದಲ್ಲಿರುವ ಬೇರೆ ಬೇರೆ ದೇವತೆಗಳಿಗೆ ಸಂಬಂಧಿಸಿದ ಎಲ್ಲ ಪಶುಗಳೂ ಅಗಸ್ತ್ಯರಿಂದ ಪ್ರೋಕ್ಷಿತವಾಗಿವೆ. ಆದ್ದರಿಂದ ಬೇಟೆಯು ಪೂಜಿಸಲ್ಪಡುತ್ತದೆ (ಅಗಸ್ತ್ಯರಿಂದ ಪ್ರೋಕ್ಷಿತವಾಗಿರುವುದರಿಂದ ಬೇಟೆಯಾಡಿ ಬಂದ ಮಾಂಸವು ಹವಿಸ್ಸಾಗಿರುತ್ತದೆ).

ನಾತ್ಮಾನಮಪರಿತ್ಯಜ್ಯ ಮೃಗಯಾ ನಾಮ ವಿದ್ಯತೇ ।
ಸಮತಾಮುಪಸಂಗಮ್ಯ ರೂಪಂ ಹನ್ಯಾನ್ನ ವಾ ನೃಪ ॥೧೮॥

ತನ್ನನ್ನು ಪ್ರಾಣಸಂಕಟಕ್ಕೆ ಸಿಲುಕಿಸಿಕೊಳ್ಳದೆ ಬೇಟೆ ಎಂಬುದಿಲ್ಲ. ತಾನು ಪ್ರಾಣಿಯನ್ನು ಕೊಲ್ಲಬಹುದು ಅಥವಾ ಪ್ರಾಣಿಯೂ ತನ್ನನ್ನು ಕೊಲ್ಲಬಹುದು. ಹೀಗೆ ಪ್ರಾಣಿಯ ಸಾಮ್ಯವನ್ನು ಹೊಂದಿದವನು ಎಲೈ ರಾಜನೇ, ಬೇಟೆಯಲ್ಲಿ ಪ್ರಾಣಿಯನ್ನು ಕೊಲ್ಲಬಹುದು ಅಥವಾ ಕೊಲ್ಲದಿರಬಹುದು.

ಅತೋ ರಾಜರ್ಷಯಃ ಸರ್ವೇ ಮೃಗಯಾಂ ಯಾಂತಿ ಭಾರತ ।
ನ ಹಿ ಲಿಪ್ಯಂತಿ ದೋಷೇಣ ನ ಚೈತತ್ ಪಾತಕಂ ವಿದುಃ ॥೧೯॥

ಎಲೈ ಭಾರತನೇ, ಆದ್ದರಿಂದ ಎಲ್ಲ ರಾಜರ್ಷಿಗಳೂ ಬೇಟೆಯಾಡುತ್ತಾರೆ. ಅವರು ದೋಷದಿಂದ ಲಿಪ್ತರಾಗುವುದಿಲ್ಲ. ಬೇಟೆಯನ್ನು ಪಾಪವೆಂದು ಯಾರೂ ಹೇಳುವುದಿಲ್ಲ.

ನ ಹಿ ತತ್ಪರಮಂ ಕಿಂಚಿದಿಹ ಲೋಕೇ ಪರತ್ರ ಚ ।
ಕರ್ತವ್ಯಾ ಚೇಹ ಭೂತೇಷು ದಯಾ ಕೌರವನಂದನ ॥೨೦॥

ಆದರೆ ಎಲೈ ಕೌರವನಂದನನೇ, ಲೋಕದಲ್ಲಿ ದಯೆಯನ್ನು ಬಿಟ್ಟು ಪ್ರಾಣಿಗಳಿಗೆ ಮಾಡಬಹುದಾದ ಶ್ರೇಷ್ಠವಾದ ಉಪಕಾರವು ಯಾವುದೂ ಇಲ್ಲ.

ನ ಭಯಂ ವಿದ್ಯತೇ ಜಾತು ನರಸ್ಯೇಹ ದಯಾವತಃ ।
ದಯಾವತಾಮಿಮೇ ಲೋಕಾಃ ಪರೇ ಚಾಪಿ ತಪಸ್ವಿನಾಮ್ ॥೨೧॥

ದಯಾಪರನಾದ ಮನುಷ್ಯನಿಗೆ ಈ ಲೋಕದಲ್ಲಿ ಯಾವ ಭಯವೂ ಇಲ್ಲ. ದಯಾವಂತರಾದ ತಪಸ್ವಿಗಳಿಗೆ ಈ ಲೋಕವೂ ಪರಲೋಕವೂ ಕ್ಲೃಪ್ತವಾಗಿದೆ.

ಅಭಯಂ ಸರ್ವಭೂತೇಭ್ಯೋ ಯೋ ದದಾತಿ ದಯಾಪರಃ ।
ಅಭಯಂ ತಸ್ಯ ಭೂತಾನಿ ದದತೀತ್ಯನುಶುಶ್ರುಮಃ ॥೨೨॥

ಯಾವನು ದಯಾಪರನಾಗಿ ಸಕಲ ಪ್ರಾಣಿಗಳಿಗೂ ಅಭಯವನ್ನು ಕೊಡುತ್ತಾನೆಯೋ ಅವನಿಗೆ ಸಕಲ ಪ್ರಾಣಿಗಳು ಅಭಯವನ್ನು ಕೊಡುತ್ತವೆ ಎಂದು ನಾವು ಕೇಳಿದ್ದೇವೆ.

ಕ್ಷತಂ ಚ ಸ್ಖಲಿತಂ ಚೈವ ಪತಿತಂ ಕ್ಲಿಷ್ಟಮಾಹತಮ್ ।
ಸರ್ವಭೂತಾನಿ ರಕ್ಷಂತಿ ಸಮೇಷು ವಿಷಮೇಷು ಚ ॥೨೩॥

ಎಲ್ಲ ಪ್ರಾಣಿಗಳೂ ತಮ್ಮ ಜಾತಿಗೆ ಸೇರಿದ ಇನ್ನೊಂದು ಪ್ರಾಣಿಯು ಗಾಯಗೊಂಡಾಗ, ಎಡವಿದಾಗ, ಬಿದ್ದಾಗ, ಕ್ಲೇಶಗೊಂಡಾಗ, ಹೊಡೆಯಲ್ಪಟ್ಟಾಗ ತಮ್ಮ ಸಮಪರಿಸ್ಥಿತಿಯಲ್ಲಿಯೂ ಮತ್ತು ವಿಷಮ ಪರಿಸ್ಥಿತಿಯಲ್ಲಿಯೂ ಆ ಪ್ರಾಣಿಯನ್ನು ರಕ್ಷಿಸುತ್ತವೆ.

ನೈನಂ ವ್ಯಾಲಮೃಗಾ ಘ್ನಂತಿ ನ ಪಿಶಾಚಾ ನ ರಾಕ್ಷಸಾಃ ।
ಮುಚ್ಯಂತೇ ಭಯಕಾಲೇಷು ಮೋಕ್ಷಯಂತಿ ಚ ಯೇ ಪರಾನ್ ॥೨೪॥

ಯಾರು ಸಂಕಟಕ್ಕೆ ಸಿಲುಕಿದ ಇನ್ನೊಬ್ಬನನ್ನು ಸಂಕಟದಿಂದ ಪಾರು ಮಾಡುತ್ತಾರೆಯೋ ಅಂತಹವರನ್ನು ಸರ್ಪಗಳು ಕೊಲ್ಲುವುದಿಲ್ಲ. ಪಿಶಾಚಿಗಳಾಗಲೀ, ರಾಕ್ಷಸರಾಗಲೀ ಕೊಲ್ಲುವುದಿಲ್ಲ. ಅಂತಹವರು ಭಯಸಂದರ್ಭದಲ್ಲಿ ಭಯ ಮುಕ್ತರಾಗುತ್ತಾರೆ.

ಪ್ರಾಣದಾನಾತ್ ಪರಂ ದಾನಂ ನ ಭೂತಂ ನ ಭವಿಷ್ಯತಿ ।
ನ ಹ್ಯಾತ್ಮನಃ ಪ್ರಿಯತರಃ ಕಶ್ಚಿದಸ್ತೀತಿ ನಿಶ್ಚಿತಮ್ ॥೨೫॥

ಪ್ರಾಣದಾನಕ್ಕಿಂತ ದೊಡ್ಡ ದಾನವು ಹಿಂದೆ ಇರಲಿಲ್ಲ ಮತ್ತು ಮುಂದೆ ಇರುವುದಿಲ್ಲ. ಹಾಗೆಯೇ ತನಗಿಂತ ಪ್ರಿಯವಾದ ವಸ್ತುವು ಇನ್ನೊಂದು ಇಲ್ಲ ಎಂಬುದು ನಿಶ್ಚಿತವಾದುದು.

ಅನಿಷ್ಟಂ ಸರ್ವಭೂತಾನಾಂ ಮರಣಂ ನಾಮ ಭಾರತ ।
ಮೃತ್ಯುಕಾಲೇ ಹಿ ಭೂತಾನಾಂ ಸದ್ಯೋ ಜಾಯತಿ ವೇಪಥುಃ ॥೨೬॥

ಎಲೈ ಭಾರತನೇ, ಎಲ್ಲ ಪ್ರಾಣಿಗಳಿಗೂ ಮರಣವು ಅನಿಷ್ಟವಾದುದು. ಮರಣ ಕಾಲದಲ್ಲಿ ಎಲ್ಲ ಪ್ರಾಣಿಗಳಿಗೂ ತಕ್ಷಣವೇ ಶರೀರದಲ್ಲಿ ನಡುಕ ಉಂಟಾಗುತ್ತದೆ.

ಜಾತಿಜನ್ಮಜರಾದುಃಖೇ ನಿತ್ಯಂ ಸಂಸಾರಸಾಗರೇ ।
ಜಂತವಃ ಪರಿವರ್ತಂತೇ ಮರಣಾದುದ್ವಿಜಂತಿ ಚ ॥೨೭॥

ಗರ್ಭವಾಸ, ಜನನ, ಮುಪ್ಪು ಮತ್ತು ದುಃಖಗಳಿಂದ ಕೂಡಿದ ಸಂಸಾರ ಸಾಗರದಲ್ಲಿ ಪ್ರಾಣಿಗಳು ನಿತ್ಯವೂ ತೊಳಲಾಡುತ್ತವೆ ಮತ್ತು ಮರಣಕ್ಕೆ ಹೆದರುತ್ತವೆ.

ಗರ್ಭವಾಸೇಷು ಪಚ್ಯಂತೇ ಕ್ಷಾರಾಮ್ಲಕಟುಕೈ ರಸೈಃ ।
ಮೂತ್ರಶ್ಲೇಷ್ಮಪುರೀಷಾಣಾಂ ಸ್ಪರ್ಶೈಶ್ಚ ಭೃಶದಾರುಣೈಃ ॥೨೮॥

ಗರ್ಭವಾಸಗಳಲ್ಲಿ ಹುಳಿ-ಉಪ್ಪು-ಖಾರ ಈ ರಸಗಳ ಸ್ಪರ್ಶದಿಂದಲೂ, ಮಲ-ಮೂತ್ರ-ಶ್ಲೇಷ್ಮಾದಿಗಳ ಅತ್ಯಂತ ದಾರುಣವಾದ ಸ್ಪರ್ಶದಿಂದಲೂ ಪೀಡಿಸಲ್ಪಡುತ್ತಾರೆ.

ಜಾತಾಶ್ಚಾಪ್ಯವಶಾಸ್ತತ್ರ ಭಿದ್ಯಮಾನಾಃ ಪುನಃ ಪುನಃ ।
ಪಾಟ್ಯಮಾನಾಶ್ಚ ದೃಶ್ಯಂತೇ ವಿವಶಾ ಮಾಂಸಗೃದ್ಧಿಭಿಃ ॥೨೯॥

ಜನಿಸಿದ ಮೇಲೂ ಸಹ ಪ್ರಾಣಿಗಳು ವಿವಶವಾಗಿರುವಾಗಲೇ ಮಾಂಸವನ್ನು ಆಶಿಸುವ ಜನರು ಅವುಗಳನ್ನು ಕತ್ತರಿಸುವುದು ಮತ್ತು ಸೀಳುವುದು ಕಂಡುಬರುತ್ತದೆ.

ಕುಂಭೀಪಾಕೇ ಚ ಪಚ್ಯಂತೇ ತಾಂ ತಾಂ ಯೋನಿಮುಪಾಗತಾಃ ।
ಆಕ್ರಮ್ಯ ಮಾರ್ಯಮಾಣಾಶ್ಚ ಭ್ರಾಮ್ಯಂತೇ ವೈ ಪುನಃ ಪುನಃ ॥೩೦॥

ಅಂತಹ ಘಾತಕರು ಕುಂಭೀಪಾಕ ನರಕದಲ್ಲಿ ಬೇಯಿಸಲ್ಪಡುತ್ತಾರೆ ಮತ್ತು ಯಾವ ಪ್ರಾಣಿಗಳನ್ನು ವಧೆ ಮಾಡಿದರೋ ಆ ಯೋನಿಯಲ್ಲಿಯೇ ಜನ್ಮವೆತ್ತಿ ಅಲ್ಲಿ ಬಲಾತ್ಕಾರದಿಂದ ಶಸ್ತ್ರಗಳಿಂದ ಕತ್ತರಿಸಲ್ಪಟ್ಟು ಪುನಃ ಪುನಃ ಸಂಸಾರದಲ್ಲಿ ತಿರುಗಾಡುತ್ತಾರೆ.

ನಾತ್ಮನೋಽಸ್ತಿ ಪ್ರಿಯತರಃ ಪೃಥಿವ್ಯಾಮನುಸೃತ್ಯ ಹ ।
ತಸ್ಮಾತ್ಪ್ರಾಣೇಷು ಸರ್ವೇಷು ದಯಾವಾನಾತ್ಮವಾನ್ ಭವೇತ್ ॥೩೧॥

ಭೂಮಿಯಲ್ಲಿ ಎಲ್ಲಿ ಹುಡುಕಿದರೂ ತನಗಿಂತ ಪ್ರಿಯವಾದ ವಸ್ತುವು ಯಾವುದೂ ದೊರೆಯುವುದಿಲ್ಲ. ಆದ್ದರಿಂದ ವಿವೇಕಿಯಾದವನು ಎಲ್ಲ ಪ್ರಾಣಿಗಳಲ್ಲಿಯೂ ದಯೆಯನ್ನು ತೋರಬೇಕು.

ಸರ್ವಮಾಂಸಾನಿ ಯೋ ರಾಜನ್ ಯಾವಜ್ಜೀವಂ ನ ಭಕ್ಷಯೇತ್ ।
ಸ್ವರ್ಗೇ ಸ ವಿಪುಲಂ ಸ್ಥಾನಂ ಪ್ರಾಪ್ನುಯಾತ್ ನಾತ್ರ ಸಂಶಯಃ ॥೩೨॥

ಎಲೈ ರಾಜನೇ, ಯಾವನು ತನ್ನ ಜೀವಮಾನ ಕಾಲದಲ್ಲಿ ಯಾವ ಮಾಂಸವನ್ನೂ ಭಕ್ಷಿಸುವುದಿಲ್ಲವೋ ಅವನು ವಿಪುಲವಾದ ಸ್ವರ್ಗಸ್ಥಾನವನ್ನು ಪಡೆಯುವುದರಲ್ಲಿ ಸಂಶಯವಿಲ್ಲ.

ಯೇ ಭಕ್ಷಯಂತಿ ಮಾಂಸಾನಿ ಭೂತಾನಾಂ ಜೀವಿತೈಷಿಣಾಮ್ ।
ಭಕ್ಷ್ಯಂತೇ ತೇಽಪಿ ತೈರ್ಭೂತೈರಿತಿ ಮೇ ನಾಸ್ತಿ ಸಂಶಯಃ ॥೩೩॥

ಯಾವ ಮನುಷ್ಯನು ಬದುಕಲು ಬಯಸುವ ಪ್ರಾಣಿಗಳ ಮಾಂಸವನ್ನು ತಿನ್ನುತ್ತಾನೆಯೋ ಆ ಪ್ರಾಣಿಗಳೂ ಕೂಡ ನರಕದಲ್ಲಿ ಅಥವಾ ಜೀವಿತದಲ್ಲಿ ಅವನನ್ನು ಭಕ್ಷಿಸುವುದರಲ್ಲಿ ಸಂಶಯವಿಲ್ಲ.

ಮಾಂ ಸ ಭಕ್ಷಯತೇ ಯಸ್ಮಾದ್ ಭಕ್ಷಯಿಷ್ಯೇ ತಮಪ್ಯಹಮ್ ।
ಏತನ್ಮಾಂಸಸ್ಯ ಮಾಂಸತ್ವಂ ಗದಿತಂ ಚೇಹ ಭಾರತ ॥೩೪॥

ನನ್ನನ್ನು ಅವನು ತಿನ್ನುತ್ತಾನೆ, ಅವನನ್ನು ನಾನು ತಿನ್ನುವೆನು ಎಂಬ ವ್ಯುತ್ಪತ್ತಿಯಿಂದ ಎಲೈ ಭಾರತನೇ ಮಾಂಸ ಶಬ್ದವು ಹೇಳಲ್ಪಡುತ್ತದೆ. (‘ಮಾಂ’ ಎಂದರೆ ನನ್ನನ್ನು ತಿನ್ನುತ್ತಾನೆ ಎಂದು ಅರ್ಥ. ‘ಸಃ’ ಎಂದರೆ ನನ್ನಿಂದ ತಿನ್ನಲ್ಪಡುತ್ತಾನೆ ಎಂದು ಅರ್ಥ).

ಘಾತಕೋ ವಧ್ಯತೇ ನಿತ್ಯಂ ತಥಾ ವಧ್ಯೇತ ಬಂಧಕಃ ।
ಆಕ್ರೋಷ್ಟಾಕ್ರುಶ್ಯತೇ ರಾಜನ್ ದ್ವೇಷ್ಟಾ ದ್ವೇಷ್ಯತ್ವಮಾಪ್ನುತೇ ॥೩೫॥

ಪ್ರಾಣಿಯನ್ನು ಕೊಲ್ಲುವವನು ಯಾವಾಗಲೂ ವಧೆಯನ್ನು ಹೊಂದುತ್ತಾನೆ. ಪ್ರಾಣಿಗಳನ್ನು ಕಟ್ಟಿಹಾಕುವವನು ವಧಿಸಲ್ಪಡುತ್ತಾನೆ. ಎಲೈ ರಾಜನೇ, ನಿಂದಿಸುವವನು ನಿಂದಿಸಲ್ಪಡುತ್ತಾನೆ ಮತ್ತು ದ್ವೇಷವನ್ನು ಮಾಡುವವನು ದ್ವೇಷಿಸಲ್ಪಡುತ್ತಾನೆ.

ಯೇನ ಯೇನ ಶರೀರೇಣ ಯದ್ಯತ್ ಕರ್ಮ ಕರೋತಿ ಯಃ ।
ತೇನ ತೇನ ಶರೀರೇಣ ತತ್ತತ್ಫಲಮುಪಾಶ್ನುತೇ ॥೩೬॥

ಯಾವ ಯಾವ ಶರೀರದಿಂದ ಮನುಷ್ಯನು ಯಾವ ಯಾವ ಕರ್ಮವನ್ನು ಮಾಡುತ್ತಾನೆಯೋ ಅದೇ ಶರೀರದಿಂದ ಆ ಕರ್ಮಗಳ ಫಲವನ್ನು ಅನುಭವಿಸುತ್ತಾನೆ.

ಅಹಿಂಸಾ ಪರಮೋ ಧರ್ಮಸ್ತಥಾऽಹಿಂಸಾ ಪರೋ ದಮಃ ।
ಅಹಿಂಸಾ ಪರಮಂ ದಾನಮ್ ಅಹಿಂಸಾ ಪರಮಂ ತಪಃ ॥೩೭॥

ಅಹಿಂಸೆಯು ಶ್ರೇಷ್ಠವಾದ ಧರ್ಮ. ಅಹಿಂಸೆಯು ಶ್ರೇಷ್ಠವಾದ ತಪಸ್ಸು. ಅಹಿಂಸೆಯು ಶ್ರೇಷ್ಠವಾದ ದಾನ. ಅಹಿಂಸೆಯು ಶ್ರೇಷ್ಠವಾದ ಇಂದ್ರಿಯನಿಗ್ರಹ.

ಅಹಿಂಸಾ ಪರಮೋ ಯಜ್ಞಸ್ತಥಾಹಿಂಸಾ ಪರಂ ಬಲಮ್ ।
ಅಹಿಂಸಾ ಪರಮಂ ಮಿತ್ರಮಹಿಂಸಾ ಪರಮಂ ಸುಖಮ್ ।
ಅಹಿಂಸಾ ಪರಮಂ ಸತ್ಯಮಹಿಂಸಾ ಪರಮಂ ಶ್ರುತಮ್ ॥೩೮॥

ಅಹಿಂಸೆಯು ಶ್ರೇಷ್ಠವಾದ ಯಜ್ಞ. ಅಹಿಂಸೆಯು ಶ್ರೇಷ್ಠವಾದ ಬಲ. ಅಹಿಂಸೆಯು ಶ್ರೇಷ್ಠವಾದ ಮಿತ್ರ. ಅಹಿಂಸೆಯು ಶ್ರೇಷ್ಠವಾದ ಸುಖ. ಅಹಿಂಸೆಯು ಶ್ರೇಷ್ಠವಾದ ಸತ್ಯ ಮತ್ತು ಅಹಿಂಸೆಯು ಶ್ರೇಷ್ಠವಾದ ವಿದ್ಯೆ.

ಸರ್ವಯಜ್ಞೇಷು ವಾ ದಾನಂ ಸರ್ವತೀರ್ಥೇಷು ಚಾಪ್ಲುತಮ್ ।
ಸರ್ವದಾನಫಲಂ ವಾಪಿ ನೈತತ್ತುಲ್ಯಮಹಿಂಸಯಾ ॥೩೯॥

ಸರ್ವಯಜ್ಞಗಳಲ್ಲಿ ದಾನವಾಗಲೀ, ಸರ್ವತೀರ್ಥಗಳಲ್ಲಿ ಸ್ನಾನವಾಗಲೀ ಅಥವಾ ಸರ್ವದಾನಗಳಾಗಲೀ ಈ ಅಹಿಂಸೆಗೆ ಸಮಾನವಾದ ಫಲವನ್ನು ಹೊಂದುವುದಿಲ್ಲ. ಅಹಿಂಸೆಯೇ ಅಧಿಕವಾದ ಫಲವನ್ನು ಕೊಡುತ್ತದೆ.

ಅಹಿಂಸ್ರಸ್ಯ ತಪೋऽಕ್ಷಯ್ಯಮಹಿಂಸ್ರೋ ಯಜತೇ ಸದಾ ।
ಅಹಿಂಸ್ರಃ ಸರ್ವಭೂತಾನಾಂ ಯಥಾ ಮಾತಾ ಯಥಾ ಪಿತಾ ॥೪೦॥

ಹಿಂಸೆಯನ್ನು ಮಾಡದವನು ಅಕ್ಷಯವಾದ ತಪಸ್ಸನ್ನು ಪಡೆಯುತ್ತಾನೆ. ಹಿಂಸೆಯನ್ನು ಮಾಡದವನು ಯಾವಾಗಲೂ ಯಜ್ಞವನ್ನು ಮಾಡುತ್ತಾನೆ. ಹಿಂಸೆಯನ್ನು ಮಾಡದವನು ಎಲ್ಲ ಪ್ರಾಣಿಗಳಿಗೆ ತಂದೆಯಂತೆಯೂ, ತಾಯಿಯಂತೆಯೂ ಆಗುತ್ತಾನೆ.

ಏತತ್ಫಲಮಹಿಂಸಾಯಾ ಭೂಯಶ್ಚ ಕುರುಪುಂಗವ ।
ನ ಹಿ ಶಕ್ಯಾ ಗುಣಾ ವಕ್ತುಮಿಹ ವರ್ಷಶತೈರಪಿ ॥೪೧॥

ಎಲೈ ಕುರುಪುಂಗವನೇ, ಅಹಿಂಸೆಗೆ ಇವೂ ಮತ್ತು ಇನ್ನೂ ಹೆಚ್ಚಿನ ಫಲವೂ ಇದೆ. ಅಹಿಂಸೆಯ ಗುಣಗಳನ್ನು ನೂರು ವರ್ಷಗಳಲ್ಲಿಯೂ ಹೇಳಿ ಮುಗಿಸಲು ಸಾಧ್ಯವಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಅಹಿಂಸಾಸ್ತುತಿರ್ನಾಮ
ಸಪ್ತಷಷ್ಟ್ಯುತ್ತರಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಅರವತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಅರವತ್ತೆಂಟನೆಯ ಅಧ್ಯಾಯ

ಕೀಟೋಪಾಖ್ಯಾನ ಪ್ರಾರಂಭ

ಯುಧಿಷ್ಠಿರಃ

ಅಕಾಮಾಶ್ಚ ಸಕಾಮಾಶ್ಚ ಹತಾ ಯೇಽಸ್ಮಿನ್ ಮಹಾಹವೇ ।
ಕಾಂ ಗತಿಂ ಪ್ರತಿಪದ್ಯಂತೇ ತನ್ಮೇ ಬ್ರೂಹಿ ಪಿತಾಮಹ ॥೧॥

ಯುಧಿಷ್ಠಿರ– ಎಲೈ ಪಿತಾಮಹನೇ, ಈ ಮಹಾಯುದ್ಧದಲ್ಲಿ ಇಚ್ಛೆಯಿಂದ ಅಥವಾ ಇಚ್ಛೆಯಿಲ್ಲದೆ ಹತರಾದವರು ಯಾವ ಗತಿಯನ್ನು ಹೊಂದುತ್ತಾರೆ?

ದುಃಖಂ ಪ್ರಾಣಪರಿತ್ಯಾಗಃ ಪುರುಷಾಣಾಂ ಮಹಾಮೃಧೇ ।
ಜಾನಾಮಿ ತತ್ತ್ವಂ ಧರ್ಮಜ್ಞ ಪ್ರಾಣತ್ಯಾಗಃ ಸುದುಷ್ಕರಃ ॥೨॥

ದೊಡ್ಡ ಯುದ್ಧದಲ್ಲಿ ಪುರುಷರಿಗೆ ಪ್ರಾಣಪರಿತ್ಯಾಗವು ದುಃಖವೆಂಬ ತತ್ತ್ವವನ್ನು ತಿಳಿದಿದ್ದೇನೆ. ಎಲೈ ಧರ್ಮಜ್ಞನೇ, ಪ್ರಾಣತ್ಯಾಗವು ಬಹಳ ಕಠಿಣವಾದುದು.

ಸಮೃದ್ಧೇ ವಾಽಸಮೃದ್ಧೇ ವಾ ಶುಭೇ ವಾ ಯದಿ ವಾಽಶುಭೇ ।
ಕಾರಣಂ ತತ್ರ ಮೇ ಬ್ರೂಹಿ ಸರ್ವಜ್ಞೋ ಹ್ಯಸಿ ಮೇ ಮತಃ ॥೩॥

ಶ್ರೀಮಂತನಾಗಿರಲಿ ಇಲ್ಲದಿರಲಿ, ಶುಭಯೋನಿಯಾಗಲಿ ಅಥವಾ ಅಶುಭ ಯೋನಿಯಾಗಲಿ ಪ್ರಾಣತ್ಯಾಗವು ದುಷ್ಕರವಾದುದು. ಅದಕ್ಕೆ ಕಾರಣವನ್ನು ಹೇಳು. ನೀನು ಸರ್ವಜ್ಞನೆಂದು ನನ್ನ ಅಭಿಪ್ರಾಯ.

ಭೀಷ್ಮಃ

ಸಮೃದ್ಧೇ ವಾऽಸಮೃದ್ಧೇ ವಾ ಶುಭೇ ವಾ ಯದಿ ವಾऽಶುಭೇ ।
ಸಂಸಾರೇऽಸ್ಮಿನ್ ಸಮಾಜಾತಾಃ ಪ್ರಾಣಿನಃ ಪೃಥಿವೀಪತೇ ॥೪॥

ನಿರತಾ ಯೇನ ಭಾವೇನ ತತ್ರ ಮೇ ಶೃಣು ಕಾರಣಮ್ ।
ಸಮ್ಯಕ್ಚಾಯಮನುಪ್ರಶ್ನಸ್ತ್ವಯೋಕ್ತಶ್ಚ ಯುಧಿಷ್ಠಿರ ॥೫॥

ಭೀಷ್ಮ– ಎಲೈ ಯುಧಿಷ್ಠಿರನೇ, ನೀನು ಮಾಡಿದ ಈ ಪ್ರಶ್ನೆಯು ಬಹಳ ಸರಿಯಾಗಿದೆ. ಸಮೃದ್ಧವಾದ ಅಥವಾ ಸಮೃದ್ಧಿಯಿಂದ ಕೂಡಿರದ ಜನ್ಮಗಳಲ್ಲಿ, ಶುಭವಾದ ಅಥವಾ ಅಶುಭವಾದ ಯೋನಿಗಳಲ್ಲಿ ಈ ಸಂಸಾರಕ್ಕೆ ಬಂದ ಪ್ರಾಣಿಗಳು ಯಾವ ಅಭಿಪ್ರಾಯದಿಂದ ಆ ದೇಹದಲ್ಲಿ ಪ್ರೀತಿಯಿಂದ ಇರುತ್ತಾರೆಂಬುದಕ್ಕೆ ಕಾರಣವನ್ನು ನಿನಗೆ ಹೇಳುತ್ತೇನೆ, ಕೇಳು.

ಅತ್ರ ತೇ ವರ್ತಯಿಷ್ಯಾಮಿ ಪುರಾವೃತ್ತಮಿದಂ ನೃಪ ।
ದ್ವೈಪಾಯನಸ್ಯ ಸಂವಾದಂ ಕೀಟಸ್ಯ ಚ ಯುಧಿಷ್ಠಿರ ॥೬॥

ಎಲೈ ಯುಧಿಷ್ಠಿರನೇ, ರಾಜನೇ, ಈ ವಿಷಯದಲ್ಲಿ ಹಿಂದೆ ದ್ವೈಪಾಯನರಿಗೂ ಮತ್ತು ಒಂದು ಕೀಟಕ್ಕೂ ನಡೆದ ಸಂವಾದವನ್ನು ನಿನಗೆ ಹೇಳುವೆನು.

ಬ್ರಹ್ಮಭೂತಶ್ಚರನ್ ವಿಪ್ರಃ ಕೃಷ್ಣದ್ವೈಪಾಯನಃ ಪುರಾ ।
ದದರ್ಶ ಕೀಟಂ ಧಾವಂತಂ ಶೀಘ್ರಂ ಶಕಟವರ್ತ್ಮನಿ ॥೭॥

ಮನಸ್ಸಿನಿಂದ ಬ್ರಹ್ಮನಲ್ಲಿಯೇ ಇದ್ದ ಬ್ರಾಹ್ಮಣರಾದ ಕೃಷ್ಣದ್ವೈಪಾಯನರು ಹಿಂದೆ ಒಂದು ಗಾಡಿಯು ಹೋಗುತ್ತಿದ್ದ ಮಾರ್ಗದಲ್ಲಿ ಶೀಘ್ರವಾಗಿ ಓಡುತ್ತಿದ್ದ ಒಂದು ಕೀಟವನ್ನು ನೋಡಿದರು.

ಗತಿಜ್ಞಃ ಸರ್ವಭೂತಾನಾಂ ರುತಜ್ಞಶ್ಚ ಶರೀರಿಣಾಮ್ ।
ಸರ್ವಜ್ಞಃ ಸರ್ವದರ್ಶೀ ಚ ಕೀಟಂ ವಚನಮಬ್ರವೀತ್ ॥೮॥

ಕೀಟ ಸಂತ್ರಸ್ತರೂಪೋಽಸಿ ತ್ವರಿತಶ್ಚೈವ ಲಕ್ಷ್ಯಸೇ ।
ಕ್ವ ಧಾವಸಿ ತದಾಚಕ್ಷ್ವ ಕುತಸ್ತೇ ಭಯಮಾಗತಮ್ ॥೯॥

ಸರ್ವಪ್ರಾಣಿಗಳ ಗಮನವನ್ನು, ಮಾತುಗಳನ್ನು ತಿಳಿದ ಸರ್ವಜ್ಞರೂ, ಸರ್ವದರ್ಶಿಯೂ ಆದ ಅವರು ಕೀಟವನ್ನು ಕುರಿತು- 'ಎಲೈ ಕೀಟವೇ, ಬಹಳ ಹೆದರಿದಂತೆ ಕಾಣುತ್ತಿದ್ದೀಯೆ ಮತ್ತು ತ್ವರೆಯಿಂದ ಕೂಡಿದಂತೆ ಕಾಣುತ್ತಿದ್ದೀಯೆ! ನಿನಗೆ ಯಾವುದರಿಂದ ಭಯವುಂಟಾಗಿದೆ? ಎಲ್ಲಿಗೆ ಓಡುತ್ತಿದ್ದೀಯೆ ಎಂದು ನನಗೆ ಹೇಳು' ಎಂದು ಕೇಳಿದರು.

ಕೀಟಃ

ಶಕಟಸ್ಯಾಸ್ಯ ಮಹತೋ ಘೋಷಂ ಶ್ರುತ್ವಾ ಭಯಂ ಮಮ ।
ಆಗತಂ ವೈ ಮಹಾಬುದ್ಧೇ ಸ್ವನ ಏಷ ಹಿ ದಾರುಣಃ ।
ಶ್ರೂಯತೇ ನ ಸ ಮಾಂ ಹನ್ಯಾದಿತಿ ತಸ್ಮಾದಪಾಕ್ರಮೇ ॥೧೦॥

ಕೀಟ– ಎಲೈ ಮಹಾಬುದ್ಧಿಯುಳ್ಳವರೇ, ಈ ದೊಡ್ಡ ಗಾಡಿಯ ಘೋಷವನ್ನು ಕೇಳಿ ನನಗೆ ಭಯವುಂಟಾಗಿದೆ. ಈ ಘೋಷವು ಬಹಳ ದಾರುಣವಾಗಿ ಕೇಳಿಬರುತ್ತಿದೆ. ಗಾಡಿಯು ನನ್ನನ್ನು ಕೊಲ್ಲದಿರಲಿ ಎಂದು ನಾನು ಶೀಘ್ರವಾಗಿ ಓಡಿ ಹೋಗುತ್ತಿದ್ದೇನೆ.

ಶ್ವಸತಾಂ ಚ ಶೃಣೋಮ್ಯೇವಂ ಗೋಪುತ್ರಾಣಾಂ ಪ್ರಚೋದ್ಯತಾಮ್ ।
ವಹತಾಂ ಸುಮಹಾಭಾರಂ ಸನ್ನಿಕರ್ಷೇ ಸ್ವನಂ ಪ್ರಭೋ ।
ನೃಣಾಂ ಚ ಸಂವಾಹಯತಾಂ ಶ್ರೂಯಂತೇ ವಿವಿಧಾಃ ಸ್ವನಾಃ ॥೧೧॥

ಎಲೈ ಪ್ರಭುವೇ, ಬಹಳ ದೊಡ್ಡಭಾರವನ್ನು ಹೊತ್ತು ಗಾಡಿಯನ್ನು ಎಳೆಯುತ್ತಿರುವ ಮತ್ತು ಗಾಡಿಯನ್ನು ಹೊಡೆಯುವವರಿಂದ ಪ್ರಚೋದಿಸಲ್ಪಡುತ್ತಿರುವ ಈ ಗೋಪುತ್ರರ (ಸಣ್ಣ ಎತ್ತುಗಳ) ಉಸಿರಾಡುವ ಸ್ವರವನ್ನು ಸಮೀಪದಲ್ಲಿಯೇ ಕೇಳುತ್ತಿದ್ದೇನೆ. ಗಾಡಿಯನ್ನು ಹೊಡೆಯುವ ಮನುಷ್ಯರ ವಿವಿಧ ಶಬ್ದಗಳು ಕೇಳಿಬರುತ್ತಿವೆ.

ಸೋಢುಮಸ್ಮದ್ವಿಧೇನೈಷ ನ ಶಕ್ಯಃ ಕೀಟಯೋನಿನಾ ।
ತಸ್ಮಾದಪಕ್ರಮಾಮ್ಯೇಷ ಭಯಾದಸ್ಮಾತ್ ಸುದಾರುಣಾತ್ ॥೧೨॥

ಕೀಟಯೋನಿಯಲ್ಲಿ ಜನಿಸಿದ ನನ್ನಂಥವರಿಂದ ಇದನ್ನು ಸಹಿಸುವುದು ಸಾಧ್ಯವಿಲ್ಲ. ಆದ್ದರಿಂದ ಈ ದಾರುಣವಾದ ಭಯದಿಂದ ನಾನು ಮಾರ್ಗವನ್ನು ಬಿಟ್ಟು ಓಡಿ ಹೋಗುತ್ತಿದ್ದೇನೆ.

ದುಃಖಂ ಹಿ ಮೃತ್ಯುರ್ಭೂತಾನಾಂ ಜೀವಿತಂ ಚ ಸುದುರ್ಲಭಮ್ ।
ಅತೋ ಭೀತಃ ಪಲಾಯಾಮಿ ಗಚ್ಛೇಯಂ ನಾಸುಖಂ ಸುಖಾತ್ ॥೧೩॥

ಪ್ರಾಣಿಗಳಿಗೆ ಮರಣವು ದುಃಖಕರವಾದುದು ಮತ್ತು ಜೀವನವು ಅತ್ಯಂತ ದುರ್ಲಭವಾದುದು. ಆದ್ದರಿಂದ ಸುಖದ ಕಡೆಯಿಂದ ದುಃಖದ ಕಡೆಗೆ ನಾನು ಹೋಗಬಾರದೆಂದು ಭಯದಿಂದ ಓಡಿಹೋಗುತ್ತಿದ್ದೇನೆ.

ಭೀಷ್ಮಃ

ಇತ್ಯುಕ್ತಃ ಸ ತು ತಂ ಪ್ರಾಹ ಕುತಃ ಕೀಟ ಸುಖಂ ತವ ।
ಮರಣಂ ತೇ ಸುಖಂ ಮನ್ಯೇ ತಿರ್ಯಗ್ಯೋನೌ ಹಿ ವರ್ತಸೇ ॥೧೪॥

ಭೀಷ್ಮ– ಹೀಗೆ ಹೇಳಲ್ಪಟ್ಟ ದ್ವೈಪಾಯನರು ಆ ಕೀಟವನ್ನು ಕುರಿತು- 'ಎಲೈ ಕೀಟವೇ, ನಿನಗೆಲ್ಲಿಯ ಸುಖ? ತಿರ್ಯಗ್ಯೋನಿಯಲ್ಲಿ ಜನಿಸಿರುವೆಯಷ್ಟೆ! ನಿನಗೆ ಮರಣವೇ ಸುಖವೆಂದು ನಾನು ತಿಳಿಯುತ್ತೇನೆ.

ಶಬ್ದಂ ಸ್ಪರ್ಶಂ ರಸಂ ಗಂಧಂ ಭೋಗಾಂಶ್ಚೋಚ್ಚಾವಚಾನ್ ಬಹೂನ್ ।
ನಾಭಿಜಾನಾಸಿ ಕೀಟ ತ್ವಂ ಶ್ರೇಯೋ ಮರಣಮೇವ ತೇ ॥೧೫॥

'ಎಲೈ ಕೀಟವೇ, ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳ ಶ್ರೇಷ್ಠವಾದ ಮತ್ತು ಕನಿಷ್ಠವಾದ ಅನೇಕ ಭೋಗಗಳನ್ನು ನೀನು ಅನುಭವಿಸಲಾರೆ. ಆದ್ದರಿಂದ ನಿನಗೆ ಮರಣವೇ ಶ್ರೇಷ್ಠವಾದುದು' ಎಂದು ಹೇಳಿದರು.

ಕೀಟಃ

ಸರ್ವತ್ರ ನಿರತೋ ಜೀವ ಇತೀಹಾಪಿ ಸುಖಂ ಮಮ ।
ಚೇತಯಾಮಿ ಮಹಾಪ್ರಾಜ್ಞ ತಸ್ಮಾದಿಚ್ಛಾಮಿ ಜೀವಿತಮ್ ॥೧೬॥

ಕೀಟ– ಜೀವನು ತನಗೆ ಬಂದ ಪ್ರತಿಯೊಂದು ಯೋನಿಯಲ್ಲಿಯೂ ಸುಖವನ್ನು ಹೊಂದುತ್ತಾನೆ ಎಂಬ ಕಾರಣದಿಂದ ನಾನು ಈ ಕೀಟಯೋನಿಯಲ್ಲಿಯೂ ಸುಖವನ್ನು ಅನುಭವಿಸುತ್ತಿದ್ದೇನೆ. ಎಲೈ ಮಹಾಪ್ರಾಜ್ಞನೇ, ಆದ್ದರಿಂದ ಬದುಕಲು ಇಚ್ಛಿಸುತ್ತೇನೆ.

ಇಹಾಪಿ ವಿಷಯಃ ಸರ್ವೋ ಯಥಾದೇಹಂ ಪ್ರವರ್ತಿತಃ ।
ಮಾನುಷಾಸ್ತಿರ್ಯಗಾಶ್ಚೈವ ಪೃಥಗ್ಭೋಗಾ ವಿಶೇಷತಃ ॥೧೭॥

ಈ ದೇಹದಲ್ಲಿಯೂ ಕೂಡ ದೇಹಕ್ಕೆ ಅನುಗುಣವಾಗಿ ಸರ್ವವಿಷಯ ಭೋಗಗಳೂ ಇವೆ. ಮನುಷ್ಯರ ಭೋಗಕ್ಕಿಂತ ಪ್ರಾಣಿಗಳ ಭೋಗವು ವಿಶೇಷವಾಗಿ ಭಿನ್ನವಾದುದೇ ಆಗಿದೆ.

ಅಹಮಾಸಂ ಮನುಷ್ಯೋ ವೈ ಶೂದ್ರೋ ಬಹುಧನಃ ಪುರಾ ।
ಅಬ್ರಹ್ಮಣ್ಯೋ ನೃಶಂಸಶ್ಚ ಕದರ್ಯೋ ವೃದ್ಧಿಜೀವನಃ ॥೧೮॥

ನಾನು ಹಿಂದೆ ಬಹಳ ಧನವುಳ್ಳ ಶೂದ್ರನಾಗಿದ್ದೆನು. ಬ್ರಾಹ್ಮಣರಿಗೆ ಹಿತವನ್ನು ಮಾಡದೆ, ಕ್ರೂರಿಯಾಗಿ, ಜಿಪುಣನಾಗಿ ಬಡ್ಡಿಯಿಂದ ಜೀವನವನ್ನು ಮಾಡಿದೆನು.

ವಾಕ್ತೀಕ್ಷ್ಣೋ ನಿಕೃತಿಪ್ರಜ್ಞೋ ಮೋಷ್ಟಾ ವಿಶ್ವಸ್ಯ ಸರ್ವಶಃ ।
ಮಿಥಃಕೃತೋಽಪನಿಧನಃ ಪರಸ್ವಹರಣೇ ರತಃ ॥೧೯॥

ತೀಕ್ಷ್ಣವಾದ ಮಾತನ್ನಾಡುತ್ತಾ, ಮೋಸದ ಬುದ್ಧಿಯನ್ನು ಹೊಂದಿದವನಾಗಿ, ಸಿಕ್ಕಿದ್ದನ್ನೆಲ್ಲ ಕದಿಯುತ್ತಾ, ಸುಳ್ಳು ಮಾತನಾಡುತ್ತಾ, ಧನವನ್ನು ಹೂತಿಡುತ್ತಾ, ಇನ್ನೊಬ್ಬರ ಸ್ವತ್ತನ್ನು ಅಪಹಾರ ಮಾಡುವುದರಲ್ಲಿ ನಿರತನಾಗಿದ್ದೆನು.

ಭೃತ್ಯಾತಿಥಿಜನಶ್ಚಾಪಿ ಗೃಹೇ ಪರ್ಯುಷಿತೋ ಮಯಾ ।
ಮಾತ್ಸರ್ಯಾತ್ ಸ್ವಾದುಕಾಮೇನ ನೃಶಂಸೇನ ಬುಭೂಷತಾ ॥೨೦॥

ಒಳ್ಳೆಯ ಊಟವನ್ನು ಮಾಡಲು ಬಯಸುವವನೂ, ಕ್ರೂರನೂ, ಧನ ಸಂಪಾದನೆಯಲ್ಲಿಯೇ ಆಸಕ್ತಿಯುಳ್ಳವನೂ ಆದ ನಾನು ಮಾತ್ಸರ್ಯದಿ ಭೃತ್ಯಾತಿಥಿಗಳಿಗೂ, ಸುಹೃಜ್ಜನರಿಗೂ ಅನ್ನವನ್ನು ನೀಡದೆ ಮೊದಲೇ ಭೋಜನವನ್ನು ಮಾಡುತ್ತಿದ್ದೆ.

ದೇವಾರ್ಥಂ ಪಿತೃಯಜ್ಞಾರ್ಥಮನ್ನಂ ಶ್ರದ್ಧಾಕೃತಂ ಮಯಾ ।
ನ ದತ್ತಮರ್ಥಕಾಮೇನ ದತ್ತಮನ್ನಂ ಲುನಾಮಿ ಚ ॥೨೧॥

ದೇವಕಾರ್ಯಕ್ಕಾಗಿ ಮಾಡಿದ ಪೂಜೆಯಲ್ಲಿ ಅಥವಾ ಪಿತೃಕಾರ್ಯದಲ್ಲಿ ಮಾಡಿದ ಶ್ರದ್ಧೆಯಿಂದ ಸಿದ್ಧಪಡಿಸಿದ ಅನ್ನವನ್ನು ಲೋಭದಿಂದ ನಾನು ಯಾರಿಗೂ ದಾನವನ್ನು ಮಾಡುತ್ತಿರಲಿಲ್ಲ. ಪರಿಜನರು ಒಂದು ಪಕ್ಷ ದಾನವನ್ನು ಮಾಡಿದರೆ ಅದನ್ನು ಪುನಃ ಕಿತ್ತುಕೊಳ್ಳುತ್ತಿದ್ದೆ.

ಗುಪ್ತಂ ಶರಣಮಾಶ್ರಿತ್ಯ ಭಯೇಷು ಶರಣಾಗತಾಃ ।
ಅಕಸ್ಮಾನ್ನೋ ಭಯಾತ್ ತ್ಯಕ್ತಾ ನ ಚ ತ್ರಾತಾऽಭಯೈಷಿಣಃ ॥೨೨॥

ಭಯದಿಂದ ಅವಿತುಕೊಂಡು ಅಭಯವನ್ನು ಆಶಿಸಿ ನನ್ನ ಬಳಿಗೆ ಬಂದು ಶರಣಾಗತರಾದವರನ್ನು ನಾನು ರಕ್ಷಿಸದೆ ಪರಿತ್ಯಾಗವನ್ನು ಮಾಡಿದೆ.

ಧನಧಾನ್ಯಂ ಪ್ರಿಯಾ ದಾರಾ ಯಾನಂ ವಾಸಸ್ತಥಾऽದ್ಭುತಮ್ ।
ಶ್ರಿಯಂ ದೃಷ್ಟ್ವಾ ಮನುಷ್ಯಾಣಾಮಸೂಯಾಮಿ ನಿರರ್ಥಕಮ್ ॥೨೩॥

ಇನ್ನೊಬ್ಬರ ಧನ-ಧಾನ್ಯ , ಪ್ರಿಯರು, ಪತ್ನಿಯರು, ಅದ್ಭುತವಾದ ವಾಹನ-ವಸ್ತ್ರ ಮತ್ತು ಸಂಪತ್ತನ್ನು ನೋಡಿ ವ್ಯರ್ಥವಾಗಿ ಅಸೂಯೆ ಪಡುತ್ತಿದ್ದೆ.

ಈರ್ಷ್ಯುಃ ಪರಸುಖಂ ದೃಷ್ಟ್ವಾ ಆತತಾಯ್ಯಬುಭೂಷಕಃ ।
ತ್ರಿವರ್ಗಹಂತಾ ಚಾನ್ಯೇಷಾಂ ಮೂರ್ಖಾಣಾಂ ಚಾನುವರ್ತಿತಾ ॥೨೪॥

ಇನ್ನೊಬ್ಬರ ಸುಖವನ್ನು ನೋಡಿ ಮತ್ಸರವನ್ನು ಹೊಂದಿ ಇನ್ನೊಬ್ಬರ ಸುಖವನ್ನು ಹಾಳು ಮಾಡಲು ಬಯಸಿ ಯಾವ ಒಳ್ಳೆಯ ಕಾರ್ಯವನ್ನು ಮಾಡಲೂ ಬಯಸದೆ ಇನ್ನೊಬ್ಬರ ಧರ್ಮಾರ್ಥ ಕಾಮಗಳನ್ನು ನಾಶಗೊಳಿಸಿ ಮೂರ್ಖರನ್ನು ಅನುಸರಿಸಿದೆ.

ನೃಶಂಸಗುಣಭೂಯಿಷ್ಠಂ ಪುರಾ ಕರ್ಮ ಕೃತಂ ಮಯಾ ।
ಸ್ಮೃತ್ವಾ ತದನುತಪ್ಯೇऽಹಂ ತ್ಯಕ್ತ್ವಾ ಪ್ರಿಯಮಿವಾತ್ಮಜಮ್ ॥೨೫॥

ನಾನು ಹಿಂದೆ ಹೆಚ್ಚಾಗಿ ಕ್ರೂರಕರ್ಮಗಳನ್ನೇ ಮಾಡಿದ್ದೇನೆ. ಅದನ್ನು ಸ್ಮರಿಸಿ ಈಗ ಪ್ರಿಯಪುತ್ರನನ್ನು ಕಳೆದುಕೊಂಡ ತಂದೆಯಂತೆ ಪಶ್ಚಾತ್ತಾಪ ಪಡುತ್ತಿದ್ದೇನೆ.

ಶುಭಾನಾಮಪಿ ಜಾನಾಮಿ ಕೃತಾನಾಂ ಕರ್ಮಣಾಂ ಫಲಮ್ ।
ಮಾತಾ ಚ ಪೂಜಿತಾ ವೃದ್ಧಾ ಬ್ರಾಹ್ಮಣಾಶ್ಚಾರ್ಚಿತಾ ಮಯಾ ॥೨೬॥

ನನಗೆ ನಾನು ಮಾಡಿದ ಅಲ್ಪಸ್ವಲ್ಪ ಶುಭಕರ್ಮಗಳ ಫಲವೂ ತಿಳಿದಿದೆ. ನಾನು ವೃದ್ಧಳಾದ ತಾಯಿಯನ್ನು ಪೂಜಿಸಿದೆ. ಬ್ರಾಹ್ಮಣರು ಪೂಜಿಸಲ್ಪಟ್ಟರು.

ಸಕೃಜ್ಜಾತಿಗುಣೋಪೇತಃ ಸಂಗತ್ಯಾ ಗೃಹಮಾಗತಃ ।
ಅತಿಥಿಃ ಪೂಜಿತೋ ಬ್ರಹ್ಮನ್ ತೇನ ಮಾಂ ನಾಜಹಾತ್ ಸ್ಮೃತಿಃ ॥೨೭॥

ಎಲೈ ಬ್ರಹ್ಮರ್ಷಿಗಳೇ, ಒಮ್ಮೆ ಸತ್ಕುಲಪ್ರಸೂತನಾದ, ಸದ್ಗುಣಭರಿತನಾದ ಒಬ್ಬ ಬ್ರಾಹ್ಮಣನು ಮನೆಗೆ ಅತಿಥಿಯಾಗಿ ಬಂದು ನನ್ನಿಂದ ಪೂಜಿಸಲ್ಪಟ್ಟನು. ಅದರಿಂದ ನನಗೆ ಹಿಂದಿನ ಸ್ಮೃತಿಯು ಅಳಿಸಿ ಹೋಗಲಿಲ್ಲ.

ಕರ್ಮಣಾ ತೇನ ಚೈವಾಹಂ ಸುಖಾಶಾಮಿಹ ಲಕ್ಷಯೇ ।
ತಚ್ಛ್ರೋತುಮಹಮಿಚ್ಛಾಮಿ ತ್ವತ್ತಃ ಶ್ರೇಯಸ್ತಪೋಧನ ॥೨೮॥

ಅಂತಹ ಶುಭಕರ್ಮವನ್ನು ಮಾಡಿದುದರಿಂದ ನನಗೆ ಇಲ್ಲಿ ಸುಖದ ಆಸೆಯು ಇದೆ. ಎಲೈ ತಪೋಧನನೇ, ನಿನ್ನಿಂದ ಶ್ರೇಯಸ್ಸಾಧನವನ್ನು ಕೇಳಲು ಬಯಸುತ್ತೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಅಷ್ಟಷಷ್ಟ್ಯುತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಅರವತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಅರವತ್ತೊಂಬತ್ತನೆಯ ಅಧ್ಯಾಯ

ಕೀಟಕ್ಕೆ ವ್ಯಾಸರು ಮಾಡಿದ ಅನುಗ್ರಹ

ವ್ಯಾಸಃ

ಶುಭೇನ ಕರ್ಮಣಾ ಯದ್ವೈ ತಿರ್ಯಗ್ಯೋನೌ ನ ಮುಹ್ಯಸೇ ।
ಮಯ್ಯೇವ ಕೀಟ ತತ್‌ಕರ್ಮ ಯೇನ ತ್ವಂ ನ ಪ್ರಮುಹ್ಯಸೇ ॥೧॥

ವ್ಯಾಸ– ಎಲೈ ಕೀಟವೇ, ತಿರ್ಯಗ್ಯೋನಿಯಲ್ಲಿ ಜನಿಸಿದ್ದರೂ ಮಾಡಿದ ಶುಭ ಕರ್ಮದ ಪ್ರಭಾವದಿಂದ ನೀನು ವಿಸ್ಮೃತಿಗೆ ಒಳಗಾಗದಿರುವುದು ನನ್ನ ಅನುಗ್ರಹವೇ. ನನ್ನ ಅನುಗ್ರಹದಿಂದ ನಿನಗೆ ಮೌಢ್ಯವು ಉಂಟಾಗಿಲ್ಲ.

ಅಹಂ ಹಿ ದರ್ಶನಾದೇವ ತಾರಯಾಮಿ ತಪೋಬಲಾತ್ ।
ತಪೋಬಲಾದ್ ಹಿ ಬಲವದ್ ಬಲಮನ್ಯನ್ನ ವಿದ್ಯತೇ ॥೨॥

ನಾನು ತಪೋಬಲದಿಂದ ನೀನು ನನ್ನನ್ನು ನೋಡಿದ ಕಾರಣದಿಂದಲೇ ನಿನ್ನನ್ನು ಕೀಟಯೋನಿಯಿಂದ ದಾಟಿಸುತ್ತೇನೆ. ತಪೋಬಲಕ್ಕಿಂತ ಅಧಿಕವಾದ ಬಲವು ಇನ್ನೊಂದಿಲ್ಲ.

ಜಾನಾಮಿ ಪಾಪೈಃ ಸ್ವಕೃತೈರ್ಗತಂ ತ್ವಾಂ ಕೀಟ ಕೀಟತಾಮ್ ।
ಅವಾಪ್ಸ್ಯಸಿ ಪರಂ ಧರ್ಮಂ ಮಾನುಷ್ಯೇ ಯದಿ ಮನ್ಯಸೇ ॥೩॥

ಎಲೈ ಕೀಟವೇ, ನೀನು ಮಾಡಿದ ಪಾಪಗಳ ನಿಮಿತ್ತದಿಂದ ನೀನು ಕೀಟ ಯೋನಿಯನ್ನು ಪಡೆದಿದ್ದೀಯೆ ಎಂದು ನಾನು ತಿಳಿದಿದ್ದೇನೆ. ನಿನಗೆ ಇಷ್ಟವಾದರೆ ಮನುಷ್ಯ ಜನ್ಮವನ್ನು ಕೊಡುತ್ತೇನೆ. ಅಲ್ಲಿ ಶ್ರೇಷ್ಠವಾದ ಧರ್ಮವನ್ನು ಸಂಪಾದಿಸುವಿ.

ಕರ್ಮ ಭೂಮಿಕೃತಂ ದೇವಾ ಭುಂಜತೇ ತಿರ್ಯಗಾಶ್ಚ ಯೇ ।
ಧರ್ಮಾದಪಿ ಮನುಷ್ಯೇಷು ಕಾಮೋऽರ್ಥಶ್ಚ ಯಥಾ ಗುಣೈಃ ॥೪॥

ಭೂಮಿಯಲ್ಲಿ ಮಾಡಿದ ಕರ್ಮದ ಫಲವನ್ನು ದೇವತೆಗಳು ಅನುಭವಿಸುತ್ತಾರೆ ಮತ್ತು ತಿರ್ಯಗ್ಯೋನಿ ಪ್ರಾಣಿಗಳು ಅನುಭವಿಸುತ್ತವೆ. ಮನುಷ್ಯರಿಗೆ ಧರ್ಮಕ್ಕಿಂತಲೂ ಅರ್ಥ-ಕಾಮಗಳು ಹೆಚ್ಚಿನ ಗುಣವುಳ್ಳವುಗಳೆಂದು ತೋರುತ್ತವೆ.

ವಾಗ್ಬುದ್ಧಿಪಾಣಿಪಾದೈಶ್ಚಾಪ್ಯುಪೇತಸ್ಯ ವಿಪಶ್ಚಿತಃ ।
ಕಿಂ ಹೀಯತೇ ಮನುಷ್ಯಸ್ಯ ಮಂತ್ರಾರ್ಥಸ್ಯಾಪಿ ಜೀವತಃ ॥೫॥

ವಾಗಾದಿ ಇಂದ್ರಿಯಗಳಿಂದಲೂ, ಬುದ್ಧಿಯಿಂದಲೂ ಯುಕ್ತನಾಗಿ, ವಿವೇಕಿಯಾಗಿ ಮಂತ್ರಾರ್ಥವನ್ನು ತಿಳಿದು ಜೀವಿಸುವ ಮನುಷ್ಯನಿಗೆ ಯಾವ ಪುಣ್ಯವು ಹಾನಿಯನ್ನು ಹೊಂದುತ್ತದೆ? (ಯಾವ ಪುಣ್ಯವು ಪ್ರಾಪ್ತವಾಗುವುದಿಲ್ಲ?) - ಲಕ್ಷಾಲಂಕಾರ.

ಜೀವನ್ ಹಿ ಕುರುತೇ ಪೂಜಾಂ ವಿಪ್ರಾಗ್ರ್ಯಃ ಶಶಿಸೂರ್ಯಯೋಃ ।
ಬ್ರುವನ್ನಪಿ ಕಥಾಂ ಪುಣ್ಯಾಂ ತತ್ರ ಕೀಟ ತ್ವಮೇಷ್ಯಸಿ ॥೬॥

ಬದುಕಿರುವ ಬ್ರಾಹ್ಮಣನು ಸೂರ್ಯ-ಚಂದ್ರರ ಪೂಜೆಯನ್ನು ಮಾಡುತ್ತಾನೆ. ಪವಿತ್ರವಾದ ಪ್ರವಚನವನ್ನು ಮಾಡುತ್ತಾನೆ. ಎಲೈ ಕೀಟವೇ, ಅಂತಹ ಮನುಷ್ಯಯೋನಿಗೆ ನೀನು ಹೋಗುವಿ.

ಗುಣಭೂತಾನಿ ಭೂತಾನಿ ತತ್ರ ತ್ವಮುಪಭೋಕ್ಷ್ಯಸೇ ।
ತತ್ರ ತೇऽಹಂ ವಿನೇಷ್ಯಾಮಿ ಬ್ರಹ್ಮತ್ವಂ ಯತ್ರ ಚೇಚ್ಛಸಿ ॥೭॥

ಉಳಿದ ಪ್ರಾಣಿಗಳು (ಮತ್ತು ಮನುಷ್ಯರು) ನಿನಗೆ ಸೇವಕರಾಗಿರುತ್ತಾರೆ. ನಿನ್ನನ್ನು ನೀನು ಇಷ್ಟಪಟ್ಟರೆ ಅಂತಹ ಬ್ರಾಹ್ಮಣನನ್ನಾಗಿ ಮಾಡುವೆನು.

ಸ ತಥೇತಿ ಪ್ರತಿಶ್ರುತ್ಯ ಕೀಟೋ ಸಮವತಿಷ್ಠತ ।
ತಮೃಷಿಂ ದ್ರಷ್ಟುಮಗಮತ್ ಸರ್ವಾಸ್ವನ್ಯಾಸು ಯೋನಿಷು ॥೮॥

ಆ ಕೀಟವು ಆ ಋಷಿಗಳನ್ನು ಕುರಿತು ಹಾಗೆಯೇ ಆಗಲಿ ಎಂದು ಹೇಳಿ ದಾರಿಯಲ್ಲಿ ನಿಂತು ಬೇರೆ ಎಲ್ಲ ಯೋನಿಗಳನ್ನೂ ನೋಡಲು ಹೊರಟಿತು.

ಶ್ವಾವಿದ್ ಗೋಧಾವರಾಹಾಣಾಂ ತಥೈವ ಮೃಗಪಕ್ಷಿಣಾಮ್ ।
ಶ್ವಪಾಕಶೂದ್ರವೈಶ್ಯಾನಾಂ ಕ್ಷತ್ರಿಯಾಣಾಂ ಚ ಯೋನಿಷು ॥೯॥

ಮುಳ್ಳುಹಂದಿ, ಉಡ, ವರಾಹ, ಮೃಗ-ಪಕ್ಷಿಗಳು, ಶ್ವಪಚ, ಶೂದ್ರ, ವೈಶ್ಯ, ಕ್ಷತ್ರಿಯರ ಯೋನಿಗಳನ್ನು ನೋಡಿತು.

ಸ ಕೀಟ ಏವಮಾಖ್ಯಾತಮ್ ಋಷಿಣಾ ಸತ್ಯವಾದಿನಾ ।
ಪ್ರತಿಸ್ಮೃತ್ಯಾಥ ಜಗ್ರಾಹ ಪಾದೌ ಮೂರ್ಧ್ನಿ ಕೃತಾಂಜಲಿಃ ॥೧೦॥

ಕ್ಷತ್ರಿಯ ಯೋನಿಯನ್ನು ನೋಡಿದ ಆ ಕೀಟವು ಸತ್ಯವಾದಿಗಳಾದ ಆ ಋಷಿಗಳು ಹೇಳಿದ ಆ ಮಾತನ್ನು ಸ್ಮರಿಸಿ ಹೋಗಿ ಕೈಗಳನ್ನು ಮುಗಿದು ಅವರ ಪಾದಗಳಿಗೆ ಶಿರಸಾ ನಮಸ್ಕರಿಸಿತು.

ಕೀಟಃ

ಇದಂ ತದತುಲಂ ಸ್ಥಾನಮೀಪ್ಸಿತಂ ದಶಭಿರ್ಗುಣೈಃ ।
ಯದಹಂ ಪ್ರಾಪ್ಯ ಕೀಟತ್ವಮಾಗತೋ ರಾಜಪುತ್ರತಾಮ್ ॥೧೧॥

ಕೀಟ– ಇದು ನಾನು ಅಪೇಕ್ಷಿಸಿದ ಹತ್ತುಗುಣಗಳಿಂದ ಕೂಡಿದ ಅಸದೃಶವಾದ ಸ್ಥಾನ. ನಾನು ಕೀಟತ್ವವನ್ನು ಹೊಂದಿಯೇ ರಾಜಪುತ್ರತ್ವವು ನನಗೆ ಬೇಕಾಗಿದ್ದಿತು.

ವಹಂತಿ ಮಾಮತಿಬಲಾಃ ಕುಂಜರಾ ಹೇಮಮಾಲಿನಃ ।
ಸ್ಯಂದನೇಷು ಚ ಕಾಂಬೋಜಾ ಯುಕ್ತಾಃ ಪರಮವಾಜಿನಃ ॥೧೨॥

ನನ್ನನ್ನು ಚಿನ್ನದ ಮಾಲೆಯನ್ನು ಧರಿಸಿದ ಅತಿಬಲಿಷ್ಠವಾದ ಆನೆಗಳು ಹೊರುತ್ತವೆ. ನನ್ನ ರಥದಲ್ಲಿ ಕಾಂಬೋಜದೇಶದ ಶ್ರೇಷ್ಠವಾದ ಅಶ್ವಗಳು ಹೂಡಲ್ಪಡುತ್ತವೆ.

ಉಷ್ಟ್ರಾಶ್ವತರಯುಕ್ತಾನಿ ಯಾನಾನಿ ಚ ವಹಂತಿ ಮಾಮ್ ।
ಸಬಾಂಧವಃ ಸಹಾಮಾತ್ಯಶ್ಚಾಶ್ನಾಮಿ ಪಿಶಿತೌದನಮ್ ॥೧೩॥

ಒಂಟೆಗಳನ್ನು, ಹೇಸರಗತ್ತೆಗಳನ್ನು ಹೂಡಿದ ವಾಹನಗಳು ನನ್ನನ್ನು ಕರೆದುಕೊಂಡು ಹೋಗುತ್ತವೆ. ಅಮಾತ್ಯರಿಂದ ಮತ್ತು ಬಂಧುಗಳಿಂದ ಒಡಗೂಡಿ ನಾನು ಮಾಂಸಭೋಜನವನ್ನು ಮಾಡುತ್ತೇನೆ.

ಗೃಹೇಷು ಸುನಿವಾಸೇಷು ಸುಖೇಷು ಶಯನೇಷು ಚ ।
ಪರಾರ್ಧ್ಯೇಷು ಮಹಾಭಾಗ ಸ್ವಪಾಮೀಹ ಸುಪೂಜಿತಃ ॥೧೪॥

ಎಲೈ ಮಹಾಭಾಗನೇ, ಒಳ್ಳೆಯ ರೀತಿಯಿಂದ ನಿರ್ಮಿಸಿದ ಮನೆಗಳಲ್ಲಿ ಸುಖವಾದ ಶಯನಗಳಲ್ಲಿ ಬಹಳ ಪೂಜಿತನಾಗಿ ಮಲಗುತ್ತೇನೆ.

ಸರ್ವೇಷ್ವಪರರಾತ್ರೇಷು ಸೂತಮಾಗಧಬಂದಿನಃ ।
ಸ್ತುವಂತಿ ಮಾಂ ಯಥಾ ದೇವಂ ಮಹೇಂದ್ರಮಿವ ಬಂದಿನಃ ॥೧೫॥

ಅಪರರಾತ್ರಿಯ ಕಾಲದಲ್ಲಿ (ಬೆಳಗಿನ ಜಾವದಲ್ಲಿ) ಸೂತಮಾಗಧಬಂದಿಗಳು ಮಹೇಂದ್ರನನ್ನು ವಂದಿಗಳು ಸ್ತೋತ್ರ ಮಾಡುವಂತೆ ನನ್ನನ್ನು ಸ್ತೋತ್ರ ಮಾಡುತ್ತಾರೆ.

ಪ್ರಸಾದಾತ್ ಸತ್ಯಸಂಧಸ್ಯ ಭವತೋऽಮಿತತೇಜಸಃ ।
ಯದಹಂ ಕೀಟತಾಂ ಪ್ರಾಪ್ಯ ಸಂಪ್ರಾಪ್ತೋ ರಾಜಪುತ್ರತಾಮ್ ॥೧೬॥

ಅಮಿತತೇಜಸ್ವಿಗಳಾದ, ಸತ್ಯಸಂಧರಾದ ನಿಮ್ಮ ಅನುಗ್ರಹದಿಂದ ನಾನು ಕೀಟತ್ವವನ್ನು ಹೊಂದಿ ಹಾಗೆಯೇ ರಾಜಕುಮಾರನಾಗಿದ್ದೇನೆ.

ನಮಸ್ತೇಽಸ್ತು ಮಹಾಪ್ರಾಜ್ಞ ಕಿಂ ಕರೋಮಿ ಪ್ರಶಾಧಿ ಮಾಮ್ ।
ತ್ವತ್ತಪೋಬಲನಿರ್ದಿಷ್ಟಮಿದಂ ಹ್ಯಧಿಗತಂ ಮಯಾ ॥೧೭॥

ಎಲೈ ಮಹಾಪ್ರಾಜ್ಞನೇ, ನಿನಗೆ ನಮಸ್ಕಾರ. ನಾನು ಈಗ ಏನು ಮಾಡಲಿ ಎಂದು ಹೇಳು. ನಿನ್ನ ತಪೋಬಲದಿಂದ ನಾನು ಇಂತಹ ಸ್ಥಾನವನ್ನು ಪಡೆದಿದ್ದೇನೆ.

ವ್ಯಾಸಃ

ಅರ್ಚಿತೋಽಹಂ ತ್ವಯಾ ರಾಜನ್ ವಾಗ್ಭಿರದ್ಯ ಯದೃಚ್ಛಯಾ ।
ಅದ್ಯ ತೇ ಕೀಟತಾಂ ಪ್ರಾಪ್ಯ ಸ್ಮೃತಿರ್ಜಾತಾಜುಗುಪ್ಸಿತಾ ॥೧೮॥

ವ್ಯಾಸ– ಎಲೈ ರಾಜನೇ, ಈ ದಿನ ನಾನು ನಿನ್ನಿಂದ ಪೂಜಿಸಲ್ಪಟ್ಟಿದ್ದೇನೆ. ಈ ದಿನ ಕೀಟತ್ವವನ್ನು ಹೊಂದಿದ ನಿನಗೆ ದೈವಾನುಗ್ರಹದಿಂದ ಹಿಂದಿನ (ಅ)ಜುಗುಪ್ಸಿತವಾದ ಸ್ಮೃತಿಯು ಉಂಟಾಗಿದೆ.

ನ ತು ನಾಶೋಽಸ್ತಿ ಪಾಪಸ್ಯ ಯತ್ತ್ವಯೋಪಚಿತಂ ಪುರಾ ।
ಶೂದ್ರೇಣೈವಾರ್ಥಲುಬ್ಧೇನ ನೃಶಂಸೇನಾತತಾಯಿನಾ ॥೧೯॥

ಆದರೆ ನೀನು ಹಿಂದೆ ಶೂದ್ರನಾಗಿ, ಲೋಭಿಯಾಗಿ, ಕ್ರೂರಿಯಾಗಿ, ಕುಲನಾಶಕನಾಗಿ ಸಂಪಾದಿಸಿದ ಪಾಪಕ್ಕೆ ನಾಶವುಂಟಾಗುವುದಿಲ್ಲ.

ಮಮ ತೇ ದರ್ಶನಂ ಪ್ರಾಪ್ತಂ ತಚ್ಚೈವ ಸುಕೃತಂ ಪುರಾ ।
ತಿರ್ಯಗ್ಯೋನೌ ಸ್ಮ ಜಾತೇನ ಮಮ ಚಾಪ್ಯರ್ಚನಾತ್ ತಥಾ ॥೨೦॥

ನೀನು ಹಿಂದೆ ಮಾಡಿದ ಮಾತೃಸೇವಾರೂಪವಾದ ಪುಣ್ಯದಿಂದ ನಿನಗೆ ನನ್ನ ದರ್ಶನವು ಪ್ರಾಪ್ತವಾಯಿತು. ತಿರ್ಯಗ್ಯೋನಿಯಲ್ಲಿ ಜನಿಸಿ ನನ್ನ ಅರ್ಚನೆಯನ್ನು ಮಾಡದಿದ್ದರೂ ಪುಣ್ಯವು ಪ್ರಾಪ್ತವಾಯಿತು.

ಇತಸ್ತ್ವಂ ರಾಜಪುತ್ರತ್ವಾದ್ ಬ್ರಾಹ್ಮಣ್ಯಂ ಸಮವಾಪ್ಸ್ಯಸಿ ।
ಗೋಬ್ರಾಹ್ಮಣಕೃತೇ ಪ್ರಾಣಾನ್ ತ್ಯಕ್ತ್ವಾ ರಾಜನ್ ರಣಾಜಿರೇ ॥೨೧॥

ರಾಜಪುತ್ರಸುಖಂ ಪ್ರಾಪ್ಯ ಕ್ರತೂಂಶ್ಚೈವಾಪ್ತದಕ್ಷಿಣಾನ್ ।
ಅಥ ಮೋದಿಷ್ಯಸೇ ಸ್ವರ್ಗೇ ಬ್ರಹ್ಮಭೂತೋಽವ್ಯಯಃ ಸುಖೀ ॥೨೨॥

ಇನ್ನು ಮುಂದೆ ನೀನು ಈ ರಾಜಕುಮಾರನ ಅವಸ್ಥೆಯನ್ನು ಬಿಟ್ಟು ಬ್ರಾಹ್ಮಣ್ಯವನ್ನು ಹೊಂದುವಿ. ಎಲೈ ರಾಜನೇ, ಗೋ-ಬ್ರಾಹ್ಮಣರ ಸಲುವಾಗಿ ರಣರಂಗದಲ್ಲಿ ಪ್ರಾಣಗಳನ್ನು ತ್ಯಜಿಸಿ, ರಾಜಪುತ್ರ ಸುಖವನ್ನು ಹೊಂದಿ, ಭೂರಿದಕ್ಷಿಣೆಯುಳ್ಳ ಯಜ್ಞಗಳನ್ನು ಮಾಡಿ, ಸ್ವರ್ಗದಲ್ಲಿ ಪರಮಾತ್ಮನನ್ನೇ ಧ್ಯಾನ ಮಾಡುತ್ತಾ ಸುಖದಿಂದ ಇರುವಿ.

ತಿರ್ಯಗ್ಯೋನ್ಯಾಃ ಶೂದ್ರತಾಮಭ್ಯುಪೈತಿ
ಶೂದ್ರೋ ವೈಶ್ಯತ್ವಂ ಕ್ಷತ್ರಿಯತ್ವಂ ಚ ವೈಶ್ಯಃ ।
ವೃತ್ತಶ್ಲಾಘೀ ಕ್ಷತ್ರಿಯೋ ಬ್ರಾಹ್ಮಣತ್ವಂ
ಸ್ವರ್ಗಂ ಪುಣ್ಯಂ ಬ್ರಾಹ್ಮಣಃ ಸಾಧುವೃತ್ತಃ ॥೨೩॥

ತಿರ್ಯಗ್ಯೋನಿಯಲ್ಲಿ ಜನಿಸಿದವನು ಸತ್ಕರ್ಮದಿಂದ ಶೂದ್ರನಾಗುತ್ತಾನೆ. ಶೂದ್ರನಾದವನು ವೈಶ್ಯನೂ, ವೈಶ್ಯನು ಕ್ಷತ್ರಿಯನೂ ಆಗುತ್ತಾನೆ. ಒಳ್ಳೆಯ ನಡತೆಯುಳ್ಳ ಕ್ಷತ್ರಿಯನು ಬ್ರಾಹ್ಮಣನಾಗುತ್ತಾನೆ. ಸದಾಚಾರವುಳ್ಳ ಬ್ರಾಹ್ಮಣನು ಪವಿತ್ರವಾದ ಸ್ವರ್ಗವನ್ನು ಹೊಂದುತ್ತಾನೆ.

ವಿಶೇಷ ಸೂಚನೆ– ಈ ಅಧ್ಯಾಯಗಳಲ್ಲಿ ಮೂಲಶ್ಲೋಕಗಳು ಸಂದಿಗ್ಧವಾಗಿವೆ. ಶ್ರೀಮಧ್ವಾಚಾರ್ಯರು ಮಹಾಭಾರತ ತಾತ್ಪರ್ಯನಿರ್ಣಯದಲ್ಲಿ ಹೇಳಿದಂತೆ ಅರ್ಥವನ್ನು ಮಾಡಬೇಕಾದ ಸೂಚನೆಗಳೂ ಇವೆ. ಆದ್ದರಿಂದ ನಾವು ಶ್ರೀಮಧ್ವಾಚಾರ್ಯರ ವಚನಕ್ಕೆ ಅನುಗುಣವಾಗಿ ಅನುವಾದವನ್ನು ಮಾಡಲು ಪ್ರಯತ್ನಪಟ್ಟಿದ್ದೇವೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಕೀಟಸ್ಯ ವ್ಯಾಸಾನುಗ್ರಹೋ ನಾಮ
ಏಕೋನಸಪ್ತತ್ಯುತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಅರವತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಪ್ಪತ್ತನೆಯ ಅಧ್ಯಾಯ

ಕೀಟದ ಬ್ರಾಹ್ಮಣಜನ್ಮಪ್ರಾಪ್ತಿ ಮತ್ತು ಸದ್ಗತಿ

ಭೀಷ್ಮಃ

ಕ್ಷತ್ರಧರ್ಮಮನುಪ್ರಾಪ್ತಃ ಸ್ಮರನ್ನೇವ ಸ ವೀರ್ಯವಾನ್ ।
ತ್ಯಕ್ತ್ವಾ ಸ ಕೀಟತಾಂ ರಾಜನ್ ಚಚಾರ ವಿಪುಲಂ ತಪಃ ॥೧॥

ಭೀಷ್ಮ– ಎಲೈ ರಾಜನೇ, ಕ್ಷತ್ರಧರ್ಮವನ್ನು ಹೊಂದಿದ ಆ ಪರಾಕ್ರಮಶಾಲಿಯಾದ ಕೀಟವು ತನ್ನ ಕೀಟತ್ವವನ್ನು ಸ್ಮರಿಸುತ್ತಲೇ ಕೀಟತ್ವವನ್ನು ತ್ಯಜಿಸಿ ವಿಪುಲವಾದ ತಪಸ್ಸನ್ನು ಮಾಡಿತು.

ತಸ್ಯ ಧರ್ಮಾರ್ಥವಿದುಷೋ ದೃಷ್ಟ್ವಾ ತದ್ವಿಪುಲಂ ತಪಃ ।
ಆಜಗಾಮ ದ್ವಿಜಶ್ರೇಷ್ಠಃ ಕೃಷ್ಣದ್ವೈಪಾಯನಸ್ತದಾ ॥೨॥

ಧರ್ಮಾರ್ಥಗಳನ್ನು ತಿಳಿದ ಆ ಕೀಟದ ವಿಪುಲವಾದ ತಪಸ್ಸನ್ನು ನೋಡಿ ದ್ವಿಜಶ್ರೇಷ್ಠರಾದ ಕೃಷ್ಣದ್ವೈಪಾಯನರು ಆಗ ಆಗಮಿಸಿದರು.

ವ್ಯಾಸಃ

ಕ್ಷಾತ್ರಂ ಚೈವ ವ್ರತಂ ಕೀಟ ಭೂತಾನಾಂ ಪರಿಪಾಲನಮ್ ।
ಕ್ಷಾತ್ರಂ ಚೈವ ವ್ರತಂ ಧ್ಯಾಯನ್ ತತೋ ವಿಪ್ರತ್ವಮೇಷ್ಯಸಿ ॥೩॥

ವ್ಯಾಸ– ಎಲೈ ಕೀಟವೇ, ಕ್ಷತ್ರಿಯರ ವ್ರತ ಎಂದರೆ ಪ್ರಜೆಗಳ ರಕ್ಷಣೆಯನ್ನು ಮಾಡುವುದು. ಕ್ಷತ್ರಿಯ ವ್ರತವನ್ನೇ ಚಿಂತಿಸುತ್ತಾ, ಅದನ್ನು ಮಾಡುತ್ತಾ ನೀನು ಅನಂತರ ವಿಪ್ರತ್ವವನ್ನು ಹೊಂದುವಿ.

ಪಾಹಿ ಸರ್ವಾಃ ಪ್ರಜಾಃ ಸಮ್ಯಕ್ ಶುಭಾಶುಭವಿದಾತ್ಮವಾನ್ ।
ಶುಭೈಃ ಸಂವಿಭಜನ್ ಕಾಮೈರಶುಭಾನಾಂ ಚ ಪಾವನೈಃ ॥೪॥

ಶುಭಾಶುಭಗಳನ್ನು ತಿಳಿದು ಧೈರ್ಯಶಾಲಿಯಾಗಿ ಎಲ್ಲ ಪ್ರಜೆಗಳನ್ನೂ ಚೆನ್ನಾಗಿ ರಕ್ಷಿಸು. ಶುಭವಾದ ಫಲಗಳನ್ನು ಹಂಚಿಕೊಂಡು, ಅಶುಭವಾದ ಫಲಗಳನ್ನು ಪ್ರಾಯಶ್ಚಿತ್ತದಿಂದ ಮತ್ತು ಶುದ್ಧೀಕರಣ ಕಾರ್ಯಗಳಿಂದ ಕಳೆದುಕೊಂಡು (ಪ್ರಜೆಗಳನ್ನು ಚೆನ್ನಾಗಿ ಪಾಲಿಸು).

ಆತ್ಮವಾನ್ ಭವ ಸುಪ್ರೀತಃ ಸ್ವಧರ್ಮಚರಣೇ ರತಃ ।
ಕ್ಷಾತ್ರೀಂ ತನುಂ ಸಮುತ್ಸೃಜ್ಯ ತತೋ ವಿಪ್ರತ್ವಮೇಷ್ಯಸಿ ॥೫॥

ಧೈರ್ಯಶಾಲಿಯಾಗಿ ಸಂತೋಷದಿಂದ ಕೂಡಿ ನಿನ್ನ ಧರ್ಮಾಚರಣೆಯಲ್ಲಿ ನಿರತನಾಗು. ಈ ಕ್ಷತ್ರಿಯ ಧರ್ಮವನ್ನು ಆಚರಿಸುತ್ತಿರುವ ನಿನ್ನ ದೇಹವನ್ನು ತ್ಯಜಿಸಿ ಅನಂತರ ವಿಪ್ರತ್ವವನ್ನು ಹೊಂದುವಿ.

ಭೀಷ್ಮಃ

ಸೋಽಥಾರಣ್ಯಮಭಿಪ್ರೇತ್ಯ ಪುನರೇವ ಯುಧಿಷ್ಠಿರ ।
ಮಹರ್ಷೇರ್ವಚನಂ ಶ್ರುತ್ವಾ ಪ್ರಜಾ ಧರ್ಮೇಣ ಪಾಲ್ಯ ಚ ॥೬॥

ಭೀಷ್ಮ– ಎಲೈ ಯುಧಿಷ್ಠಿರನೇ, ಮಹರ್ಷಿಗಳ ವಚನವನ್ನು ಕೇಳಿ ಆ ಕೀಟವು ಪ್ರಜೆಗಳನ್ನು ಧರ್ಮದಿಂದ ಪಾಲಿಸಿ ಅರಣ್ಯವನ್ನು ಉದ್ದೇಶಿಸಿ ಹೊರಟು ಅಲ್ಲಿ ತಪಸ್ಸನ್ನು ಮಾಡಿತು.

ಅಚಿರೇಣೈವ ಕಾಲೇನ ಕೀಟಃ ಪಾರ್ಥಿವಸತ್ತಮ ।
ಪ್ರಜಾಪಾಲನಧರ್ಮೇಣ ಪ್ರೇತ್ಯ ವಿಪ್ರತ್ವಮಾಗತಃ ॥೭॥

ಎಲೈ ಪಾರ್ಥಿವಶ್ರೇಷ್ಠನೇ, ಆ ಕೀಟವು ಶೀಘ್ರವಾಗಿ ತನ್ನ ಕೀಟತ್ವವನ್ನು ತೊರೆದು ಪ್ರಜಾಪಾಲನೆಯನ್ನು ಮಾಡಿದ ಪುಣ್ಯದಿಂದ ವಿಪ್ರತ್ವವನ್ನು ಹೊಂದಿತು.

ತತಸ್ತಂ ಬ್ರಾಹ್ಮಣಂ ದೃಷ್ಟ್ವಾ ಪುನರೇವ ಮಹಾಯಶಾಃ ।
ಆಜಗಾಮ ಮಹಾಪ್ರಾಜ್ಞಃ ಕೃಷ್ಣದ್ವೈಪಾಯನಸ್ತದಾ ॥೮॥

ಆಗ ಆ ಬ್ರಾಹ್ಮಣನನ್ನು ನೋಡಿ ಮಹಾಕೀರ್ತಿವಂತರೂ, ಮಹಾಪ್ರಾಜ್ಞರೂ ಆದ ಕೃಷ್ಣದ್ವೈಪಾಯನರು ಪುನಃ ಅಲ್ಲಿಗೆ ಬಂದರು.

ವ್ಯಾಸಃ

ಭೋ ಭೋ ವಿಪ್ರರ್ಷಭ ಶ್ರೀಮನ್ ಮಾ ವ್ಯಥಿಷ್ಠಾಃ ಕಥಂಚನ ।
ಶುಭಕೃಚ್ಛುಭಯೋನೀಷು ಪಾಪಕೃತ್ ಪಾಪಯೋನಿಷು ।
ಉಪಪದ್ಯತಿ ಧರ್ಮಜ್ಞ ಯಥಾಧರ್ಮಂ ಯಥಾಗಮಮ್ ॥೯॥

ವ್ಯಾಸ– ಎಲೈ ಬ್ರಾಹ್ಮಣಶ್ರೇಷ್ಠನೇ, ಮರಣಕ್ಕೆ ವ್ಯಥೆ ಪಡಬೇಡ. ಎಲೈ ಧರ್ಮಜ್ಞನೇ, ಶುಭವನ್ನು ಮಾಡಿದವನು ಶುಭಯೋನಿಗಳಲ್ಲಿಯೂ, ಪಾಪವನ್ನು ಮಾಡಿದವನು ಪಾಪ ಯೋನಿಗಳಲ್ಲಿಯೂ ತಾನು ಮಾಡಿದ ಧರ್ಮಕ್ಕೆ ಮತ್ತು ಶಾಸ್ತ್ರಕ್ಕೆ ಅನುಗುಣವಾಗಿ ಜನ್ಮವನ್ನು ಪಡೆಯುತ್ತಾನೆ.

ತಸ್ಮಾನ್ಮೃತ್ಯುಭಯಾತ್ ಕೀಟ ಮಾ ವ್ಯಥಿಷ್ಠಾಃ ಕಥಂಚನ ।
ಧರ್ಮಲೋಪಾದ್ ಭಯಂ ತೇ ಸ್ಯಾತ್ ತಸ್ಮಾದ್ಧರ್ಮಂ ಚರೋತ್ತಮಮ್ ॥

ಎಲೈ ಕೀಟವೇ, ಆದ್ದರಿಂದ ಮೃತ್ಯುಭಯದಿಂದ ಯಾವ ರೀತಿಯಲ್ಲಿಯೂ ವ್ಯಥೆಯನ್ನು ಹೊಂದಬೇಡ. ಧರ್ಮಲೋಪದಿಂದ ನಿನಗೆ ಭಯವುಂಟಾದೀತು. ಆದ್ದರಿಂದ ಶ್ರೇಷ್ಠವಾದ ಧರ್ಮವನ್ನು ಆಚರಿಸು.

ಕೀಟಃ

ಸುಖಾತ್ ಸುಖತರಂ ಪ್ರಾಪ್ತೋ ಭಗವಂಸ್ತ್ವತ್ಕೃತೇ ಹ್ಯಹಮ್ ।
ಧರ್ಮಮೂಲಂ ಶ್ರಿಯಂ ಪ್ರಾಪ್ಯ ಪಾಪ್ಮಾ ನಷ್ಟ ಇಹಾದ್ಯ ಮೇ ॥೧೧॥

ಕೀಟ– ಪೂಜ್ಯರೇ, ನಿಮ್ಮ ಅನುಗ್ರಹದಿಂದ ಒಂದು ಸುಖದಿಂದ ನಾನು ಇನ್ನೊಂದು ಹೆಚ್ಚಿನ ಸುಖಕ್ಕೆ ಹೋಗುತ್ತಿದ್ದೇನೆ. ಧರ್ಮಮೂಲವಾದ ಸಂಪತ್ತನ್ನು ಪಡೆದು ಈ ದಿನ ನನ್ನ ಪಾಪವು ನಷ್ಟವಾಗಿದೆ.

ಭೀಷ್ಮಃ

ಭಗವದ್ವಚನಾತ್ ಕೀಟೋ ಬ್ರಾಹ್ಮಣ್ಯಂ ಪ್ರಾಪ್ಯ ದುರ್ಲಭಮ್ ।
ಅಕರೋತ್ ಪೃಥಿವೀಂ ರಾಜನ್ ಯಜ್ಞಯೂಪಶತಾಂಕಿತಾಮ್ ।
ತತಃ ಸಾಲೋಕ್ಯಮಗಮದ್ ಬ್ರಹ್ಮಣೋ ಬ್ರಹ್ಮವಿತ್ತಮಃ ॥೧೨॥

ಭೀಷ್ಮ– ಎಲೈ ರಾಜನೇ, ಭಗವಂತನಾದ ಕೃಷ್ಣದ್ವೈಪಾಯನರ ವಚನದಂತೆ ಆ ಕೀಟವು ದುರ್ಲಭವಾದ ಬ್ರಾಹ್ಮಣ್ಯವನ್ನು ಹೊಂದಿ, ಭೂಮಿಯನ್ನು ನೂರು ಯಜ್ಞಯೂಪದಿಂದ ಅಂಕಿತವನ್ನಾಗಿ ಮಾಡಿ ಅನಂತರ ಬ್ರಹ್ಮಜ್ಞಾನಿಯಾಗಿ ಪರಮಾತ್ಮನ ಸಾಲೋಕ್ಯವನ್ನು ಪಡೆಯಿತು.

ಅವಾಪ ಚ ಪರಂ ಕೀಟಃ ಪಾರ್ಥ ಬ್ರಹ್ಮ ಸನಾತನಮ್ ।
ಸ್ವಕರ್ಮಫಲನಿರ್ವೃತ್ತಂ ವ್ಯಾಸಸ್ಯ ವಚನಂ ಯಥಾ ॥೧೩॥

ಎಲೈ ಪಾರ್ಥನೇ, ಆ ಕೀಟವು ವ್ಯಾಸರ ವಚನದಂತೆ ತನ್ನ ಕರ್ಮಗಳ ಫಲವಾಗಿ ವೇದಪ್ರತಿಪಾದ್ಯನಾದ ಪರಬ್ರಹ್ಮನನ್ನು ಹೊಂದಿತು.

ತೇऽಪಿ ಯಸ್ಮಾತ್ ಸ್ವಭಾವೇನ ಹತಾಃ ಕ್ಷತ್ರಿಯಪುಂಗವಾಃ ।
ಸಂಪ್ರಾಪ್ತಾಸ್ತೇ ಗತಿಂ ಪುಣ್ಯಾಂ ತಸ್ಮಾತ್ ಪುತ್ರಕ ಮಾ ಶುಚ ॥೧೪॥

ಯುದ್ಧದಲ್ಲಿ ಹತರಾದ ಕ್ಷತ್ರಿಯಪುಂಗವರೂ ಸಹ ತಮ್ಮ ಕ್ಷತ್ರಿಯಧರ್ಮಕ್ಕೆ ಅನುಸಾರವಾಗಿ ಹತರಾಗಿದ್ದಾರೆ. ಅವರು ಸದ್ಗತಿಯನ್ನು ಹೊಂದಿದ್ದಾರೆ. ಪುತ್ರನೇ, ಆದ್ದರಿಂದ ಶೋಕಪಡಬೇಡ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಕೀಟಸ್ಯ ಸದ್ಗತಿಪ್ರಾಪ್ತಿರ್ನಾಮ
ಸಪ್ತತ್ಯುತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಎಪ್ಪತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಪ್ಪತ್ತೊಂದನೆಯ ಅಧ್ಯಾಯ

ವ್ಯಾಸ ಮೈತ್ರೇಯರ ಸಂವಾದ - ಮೈತ್ರೇಯ ಭಿಕ್ಷಾ

ಯುಧಿಷ್ಠಿರಃ

ವಿದ್ಯಾ ತಪಶ್ಚ ದಾನಂ ಚ ಕಿಮೇತೇಷಾಂ ವಿಶಿಷ್ಯತೇ ।
ಪೃಚ್ಛಾಮಿ ತ್ವಾ ಸತಾಂಶ್ರೇಷ್ಠ ತನ್ಮೇ ಬ್ರೂಹಿ ಪಿತಾಮಹ ॥೧॥

ಯುಧಿಷ್ಠಿರ– ಎಲೈ ಪಿತಾಮಹನೇ, ವಿದ್ಯಾ-ತಪಸ್ಸು ಮತ್ತು ದಾನ ಇವುಗಳಲ್ಲಿ ಯಾವುದು ಶ್ರೇಷ್ಠವೆಂದು ನಿನ್ನನ್ನು ಕೇಳುತ್ತಿದ್ದೇನೆ. ಎಲೈ ಸಜ್ಜನರಲ್ಲಿ ಶ್ರೇಷ್ಠನಾದವನೇ, ನನಗೆ ಉತ್ತರವನ್ನು ಹೇಳು.

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಮೈತ್ರೇಯಸ್ಯ ಚ ಸಂವಾದಂ ಕೃಷ್ಣದ್ವೈಪಾಯನಸ್ಯ ಚ ॥೨॥

ಭೀಷ್ಮ- ಈ ವಿಷಯದಲ್ಲಿಯೂ ಸಹ ಮೈತ್ರೇಯರಿಗೂ ಮತ್ತು ವ್ಯಾಸರಿಗೂ ನಡೆದ ಸಂವಾದ ರೂಪವಾದ, ಪ್ರಾಚೀನವಾದ ಈ ಇತಿಹಾಸವನ್ನು ಹೇಳುತ್ತಾರೆ.

ಕೃಷ್ಣದ್ವೈಪಾಯನೋ ರಾಜನ್ನಜ್ಞಾತಚರಿತಂ ಚರನ್ ।
ವಾರಾಣಸ್ಯಾಮುಪಾತಿಷ್ಠನ್ಮೈತ್ರೇಯಂ ಸ್ವೈರಿಣೀಕುಲೇ ॥೩॥

ಎಲೈ ರಾಜನೇ, ಕೃಷ್ಣದ್ವೈಪಾಯನರು ಅಜ್ಞಾತಚರಿತೆಯನ್ನು ಮಾಡುತ್ತಾ ವಾರಣಾಸಿಯಲ್ಲಿ ಗಂಗಾತೀರದಲ್ಲಿ ಕುಳಿತಿದ್ದ ಮೈತ್ರೇಯರ ಬಳಿಗೆ ಬಂದರು.

ತಮುಪಸ್ಥಿತಮಾಸೀನಂ ಜ್ಞಾತ್ವಾ ಸ ಮುನಿಸತ್ತಮಮ್ ।
ಅರ್ಚಿತ್ವಾ ಭೋಜಯಾಮಾಸ ಮೈತ್ರೇಯೋ ಮುನಿಸತ್ತಮಮ್ ॥೪॥

ಸಮೀಪಕ್ಕೆ ಬಂದು ಕುಳಿತ ಮುನಿಶ್ರೇಷ್ಠರಾದ ವ್ಯಾಸರನ್ನು ಗಮನಿಸಿ ಮೈತ್ರೇಯರು ಅವರನ್ನು ಪೂಜಿಸಿ ಅವರಿಗೆ ಭೋಜನವನ್ನು ನೀಡಿದರು.

ತದನ್ನಮುತ್ತಮಂ ಭುಕ್ತ್ವಾ ಗುಣವತ್ ಸಾರ್ವಕಾಮಿಕಮ್ ।
ಪ್ರತಿಷ್ಠಮಾನೋಽಸ್ಮಯತ ಪ್ರೀತಃ ಕೃಷ್ಣೋ ಮಹಾಮನಾಃ ॥೫॥

ಶ್ರೇಷ್ಠವೂ, ಸರ್ವಕಾಮಪ್ರದವೂ ಆದ ಆ ಅನ್ನವನ್ನು ಭುಂಜಿಸಿ ಹೊರಡುತ್ತಾ ಉದಾರಿಗಳಾದ ವೇದವ್ಯಾಸರು ಸಂತೋಷದಿಂದ ನಕ್ಕರು.

ತಮುತ್ಸ್ಮಯಂತಂ ಸಂಪ್ರೇಕ್ಷ್ಯ ಮೈತ್ರೇಯಃ ಕೃಷ್ಣಮಬ್ರವೀತ್ ।
ಕಾರಣಂ ಬ್ರೂಹಿ ಧರ್ಮಾತ್ಮನ್ ಯೋಽಸ್ಮಯಿಷ್ಠಾಃ ಕುತಶ್ಚ ತೇ ।
ತಪಸ್ವಿನೋ ಧೃತಿಮತಃ ಪ್ರಮೋದಃ ಸಮುಪಾಗತಃ ॥೬॥

ನಗುತ್ತಿದ್ದ ವ್ಯಾಸರನ್ನು ನೋಡಿ ಮೈತ್ರೇಯರು ಧರ್ಮಾತ್ಮರೇ, ನೀವು ನಗುವುದಕ್ಕೆ ಕಾರಣವನ್ನು ಹೇಳಿ. ತಪಸ್ವಿಗಳೂ, ಧೈರ್ಯಶಾಲಿಗಳೂ ಆದ ನಿಮಗೆ ನಗುವುದಕ್ಕೆ ಕಾರಣವಾದ ಸಂತೋಷವು ಎಲ್ಲಿಂದ ಉಂಟಾಯಿತು?

ಏತತ್‌ಪೃಚ್ಛಾಮಿ ತೇ ವಿದ್ವನ್ನಭಿವಾದ್ಯ ಪ್ರಣಮ್ಯ ಚ ।
ಆತ್ಮನಶ್ಚ ತಪೋಭಾಗ್ಯಂ ಮಹಾಭಾಗ್ಯಂ ತಥೈವ ಚ ॥೭॥

ಪೃಥಗಾಚರತಸ್ತಾತ ಪೃಥಗಾತ್ಮನಿ ಚಾವಯೋಃ ।
ಅಲ್ಪಾಂತರಮಹಂ ಮನ್ಯೇ ವಿಶಿಷ್ಟಮಪಿ ಚಾನ್ವಯಾತ್ ॥೮॥

ಎಲೈ ವಿದ್ವಾಂಸರೇ, ನಿಮಗೆ ನಮಸ್ಕಾರವನ್ನು ಮಾಡಿ ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ನಾವು ಬೇರೆ ಬೇರೆ ತಪಸ್ಸನ್ನು ಆಚರಿಸಿದರೂ ಎಲೈ ಪ್ರೀತಿಪಾತ್ರರೇ, ನಮ್ಮಿಬ್ಬರಿಗೂ ತಪೋಭಾಗ್ಯದಲ್ಲಿ ಇರುವ ಅಂತರವು ಬಹಳ ಅಲ್ಪವಾದುದೆಂದು, ಆದರೆ ಜ್ಞಾನದಿಂದ ನೀವು ಅಧಿಕರಾದವರೆಂದೂ ತಿಳಿದಿದ್ದೇನೆ (ಲಕ್ಷಾಲಂಕಾರ).

ವ್ಯಾಸಃ

ಅತಿಚ್ಛೇದಾತಿವಾದಾಭ್ಯಾಂ ಸ್ಮಯೋಽಯಂ ಸಮುಪಾಗತಃ ।
ಅಸತ್ಯಂ ವೇದವಚನಂ ಕಸ್ಮಾದ್ ವೇದೋಽನೃತಂ ವದೇತ್ ॥೯॥

ವ್ಯಾಸರು– ಅತಿಚ್ಛೇದ ಮತ್ತು ಅತಿವಾದಗಳಿಂದ ನನಗೆ ನಗುವುಂಟಾಯಿತು. ವೇದವಚನವು ಏಕೆ ಅಸತ್ಯವಾಗುತ್ತದೆ? ವೇದವು ಏಕೆ ಸುಳ್ಳನ್ನು ಹೇಳೀತು?

ಅತಿಶಯವಾದ ಕರ್ಮವು ಅತಿವಾದ. ಅದರ ಫಲವಾದ ಪಾಪನಾಶವು ಅತಿಚ್ಛೇದ. ಅವುಗಳನ್ನು ಈ ರೀತಿಯಲ್ಲಿ ತಿಳಿದ ನನಗೆ ವಿಸ್ಮಯವುಂಟಾಯಿತು (ಲಕ್ಷಾಲಂಕಾರ).

ತ್ರೀಣ್ಯೇವ ತು ಪದಾನ್ಯಾಹುಃ ಪುರುಷಸ್ಯೋತ್ತಮಂ ವ್ರತಮ್ ।
ನ ದ್ರುಹ್ಯೇನ್ನೈವ ನಿಂದ್ಯಾಚ್ಚ ಸತ್ಯಂ ಚೈವ ಪರಂ ವದೇತ್ ।
ಇದಾನೀಂ ಚೈವ ನಃ ಕೃತ್ಯಂ ಪುರಸ್ತಾಚ್ಚ ಪರಂ ಸ್ಮೃತಮ್ ॥೧೦॥

ಮನುಷ್ಯನ ಶ್ರೇಷ್ಠವಾದ ವ್ರತವನ್ನು ಮೂರು ಪದಗಳು ಹೇಳುತ್ತವೆ - ದ್ರೋಹವನ್ನು ಮಾಡಬಾರದು. ನಿಂದಿಸಬಾರದು. ಸತ್ಯವನ್ನು ನುಡಿಯಬೇಕು. ಇದು ನಾವು ಈಗಲೂ ಮತ್ತು ಮುಂದೆಯೂ ಮಾಡಬೇಕಾದ ಕಾರ್ಯವೆಂದು ಹೇಳಲ್ಪಡುತ್ತದೆ.

ಅಲ್ಪೋಽಪಿ ತಾದೃಶೋ ದಾಯೋ ಭವತ್ಯುತ ಮಹಾಫಲಃ ।
ತೃಷಿತಾಯ ಚ ಯದ್‌ದತ್ತಂ ಹೃದಯೇನಾನಸೂಯತಾ ॥೧೧॥

ಬಾಯಾರಿದವನಿಗೆ ಅಸೂಯೆ ಇಲ್ಲದೆ ಪ್ರೀತಿಯಿಂದ ಕೊಟ್ಟ ಅಲ್ಪಜಲವೂ ಸಹ ಮಹಾಫಲವನ್ನು ಕೊಡುತ್ತದೆ.

ತೃಷಿತಸ್ಯೃಷಿತಾಯ ತ್ವಂ ದತ್ತೇ ವ್ಯತದಶನಂ ಮಮ ।
ಅಜೈಷೀರ್ಮಹತೋ ಲೋಕಾನ್ ಮಹಾಯಜ್ಞೈರಿವಾಭಿಭೋ ।
ಅತೋ ದಾನಪವಿತ್ರೇಣ ಪ್ರೀತೋಽಸ್ಮಿ ತಪಸೈವ ಚ ॥೧೨॥

ಎಲೈ ಶತ್ರುನಿವಾರಕನೇ, ನೀನೇ ಬಾಯಾರಿದ್ದರೂ ಬಾಯಾರಿದ ನನಗೆ ಇಂತಹ ಭೋಜನವನ್ನು ಕೊಟ್ಟು ಮಹಾಯಜ್ಞಗಳಿಂದ ಜಯಿಸುವಂತೆ ಮಹಾಲೋಕಗಳನ್ನು ಜಯಿಸಿದ್ದೀಯೆ. ಆದ್ದರಿಂದ ನಿನ್ನ ಪವಿತ್ರವಾದ ದಾನದಿಂದ ಮತ್ತು ತಪಸ್ಸಿನಿಂದ ನನಗೆ ಸಂತೋಷವುಂಟಾಯಿತು.

ಪುಣ್ಯಸ್ಯೈವ ಹಿ ತೇ ಗಂಧಃ ಪುಣ್ಯಸ್ಯೈವ ಚ ದರ್ಶನಮ್ ।
ಪುಣ್ಯಶ್ಚ ವಾತಿ ಗಂಧಸ್ತೇ ಮನ್ಯೇ ಕರ್ಮವಿಧಾನತಃ ॥೧೩॥

ನಿನ್ನ ದೇಹದಿಂದ ಹೊರಬರುತ್ತಿರುವ ಗಂಧವು ಪುಣ್ಯವಾಗಿದೆ. ನಿನ್ನ ದರ್ಶನವೂ ಪುಣ್ಯವಾಗಿದೆ. ಇದು ನೀನು ಮಾಡಿದ ತಪೋರೂಪದ ಕರ್ಮದ ಫಲದಿಂದ ಎಂದು ನಾನು ಭಾವಿಸುತ್ತೇನೆ.

ಅಧಿಕಂ ಮಾರ್ಜನಾತ್ ತಾತ ತಥೈವಾಪ್ಯನುಲೇಪನಾತ್ ।
ಶುಭಂ ಸರ್ವಪವಿತ್ರೇಭ್ಯೋ ದಾನಮೇವ ಪರಂ ಭವೇತ್ ॥೧೪॥

ಪ್ರೀತಿಪಾತ್ರನೇ, ಸ್ನಾನಗಳಿಗಿಂತಲೂ, ಅನುಲೇಪನಗಳಿಗಿಂತಲೂ ಮತ್ತು ಪವಿತ್ರವಾದ ಎಲ್ಲವುಗಳಿಗಿಂತಲೂ ದಾನವೇ ಅತ್ಯಂತ ಶುಭವಾದುದು.

ಯಾನೀಮಾನ್ಯುತ್ತಮಾನೀಹ ವೇದೋಕ್ತಾನಿ ಪ್ರಶಂಸಸಿ ।
ತೇಷಾಂ ಶ್ರೇಷ್ಠತಮಂ ದಾನಮಿತಿ ಮೇ ನಾಸ್ತಿ ಸಂಶಯಃ ॥೧೫॥

ವೇದಗಳಲ್ಲಿ ಹೇಳಿದ ಯಾವ ಉತ್ತಮ ವ್ರತಗಳನ್ನು ನೀನು ಪ್ರಶಂಸೆ ಮಾಡುತ್ತಿದ್ದೀಯೋ ಅವುಗಳಲ್ಲಿ ದಾನವು ಬಹಳ ಶ್ರೇಷ್ಠವಾದುದು ಎಂಬ ವಿಷಯದಲ್ಲಿ ನನಗೆ ಸಂಶಯವಿಲ್ಲ.

ದಾನಕೃದ್ಭಿಃ ಕೃತಃ ಪಂಥಾ ಯೇನ ಯಾಂತಿ ಮನೀಷಿಣಃ ।
ತೇ ಹಿ ಪ್ರಾಣಸ್ಯ ದಾತಾರಸ್ತೇಷು ಧರ್ಮಃ ಪ್ರತಿಷ್ಠಿತಃ ॥೧೬॥

ಪ್ರಾಚೀನರು ದಾನವನ್ನು ಮಾಡಿ (ಪುಣ್ಯಸಂಪಾದನೆಯ) ಮಾರ್ಗವನ್ನು ಮಾಡಿದ್ದಾರೆ. ಆ ಮಾರ್ಗದಲ್ಲಿ ವಿವೇಕಿಗಳಾದವರು ಹೋಗುತ್ತಾರೆ. ಅಂತಹವರು ಪ್ರಾಣವನ್ನೇ ದಾನ ಮಾಡುವವರು. ಅವರಲ್ಲಿ ಧರ್ಮವು ಪ್ರತಿಷ್ಠಿತವಾಗಿದೆ.

ಯಥಾ ವೇದಾಃ ಸ್ವಧೀತಾಶ್ಚ ಯಥಾ ಚೇಂದ್ರಿಯಸಂಯಮಃ ।
ಸರ್ವತ್ಯಾಗೋ ಯಥಾ ಚೇಹ ತಥಾ ದಾನಮನುತ್ತಮಮ್ ॥೧೭॥

ಅಧೀತವಾದ ವೇದದಂತೆ, ಇಂದ್ರಿಯನಿಗ್ರಹದಂತೆ, ಸಂನ್ಯಾಸದಂತೆ ಈ ಲೋಕದಲ್ಲಿ ದಾನವು ಶ್ರೇಷ್ಠವಾದುದು.

ತ್ವಂ ಹಿ ತಾತ ಸುಖಾದೇವ ಸುಖಮೇಷ್ಯಸಿ ಶೋಭನಮ್ ।
ಸುಖಾತ್ ಸುಖತರಪ್ರಾಪ್ತಿಂ ಪ್ರಾಪ್ನುತೇ ಪ್ರೀತಿಮಾನ್ ನರಃ ॥೧೮॥

ಎಲೈ ಪ್ರೀತಿಪಾತ್ರನೇ, ನೀನು ಒಂದು ಸುಖದಿಂದ ಶೋಭನವಾದ ಇನ್ನೊಂದು ಸುಖದ ಅನುಭವಕ್ಕೆ ಹೋಗುವಿ. ಸಂತೋಷವುಳ್ಳ ಮನುಷ್ಯನು ಸುಖದಿಂದ ಹೆಚ್ಚಿನ ಸುಖದ ಪ್ರಾಪ್ತಿಯನ್ನು ಪಡೆಯುತ್ತಾನೆ.

ತನ್ನಃ ಪ್ರತ್ಯಕ್ಷಮೇವೇದಮುಪಲಬ್ಧಮಸಂಶಯಮ್ ।
ಶ್ರೀಮಂತಮಾಪ್ನುವಂತ್ಯರ್ಥಾ ದಾನಂ ಯಜ್ಞಸ್ತಥಾ ಸುಖಮ್ ॥೧೯॥

ಇದು ನಮಗೆ ಪ್ರತ್ಯಕ್ಷಸಿದ್ಧವಾದುದು ಎಂಬುದರಲ್ಲಿ ಸಂಶಯವಿಲ್ಲ. ಶ್ರೀಮಂತನಾದವನನ್ನೇ ಅರ್ಥವೂ, ದಾನವೂ, ಯಜ್ಞವೂ ಮತ್ತು ಸುಖವೂ ಸಮೀಪಿಸುತ್ತವೆ.

ಸುಖಾದೇವ ಪರಂ ದುಃಖಂ ದುಃಖಾದನ್ಯತ್ ಪರಂ ಸುಖಮ್ ।
ದೃಶ್ಯತೇ ಹಿ ಮಹಾಪ್ರಾಜ್ಞ ನಿಯತಂ ವೈ ಸ್ವಭಾವತಃ ॥೨೦॥

ಎಲೈ ಮಹಾಪ್ರಾಜ್ಞನೇ, ಸಾಧಾರಣವಾಗಿ ಸ್ವಾಭಾವಿಕವಾಗಿ ಸುಖದ ಅನಂತರ ದುಃಖ, ದುಃಖದ ಅನಂತರ ಸುಖ ಎಂಬುದು ನಿಯತವಾದುದು ಎಂದು ಕಂಡು ಬರುತ್ತದೆ.

ತ್ರಿವಿಧಾನೀಹ ವೃತ್ತಾನಿ ನರಸ್ಯಾಹುರ್ಮನೀಷಿಣಃ ।
ಪುಣ್ಯಮನ್ಯತ್ ಪಾಪಮನ್ಯನ್ನ ಪುಣ್ಯಂ ನ ಚ ಪಾಪಕಮ್ ॥೨೧॥

ಮನುಷ್ಯನ ಕರ್ಮಗಳು, ಪುಣ್ಯ-ಪಾಪ ಮತ್ತು ಎರಡೂ ಅಲ್ಲದುದು ಎಂದು ಮೂರು ವಿಧವಾಗಿ ಇದೆ ಎಂದು ಜ್ಞಾನಿಗಳು ಹೇಳುತ್ತಾರೆ.

ನ ವೃತ್ತಂ ಮನ್ಯತೇऽನ್ಯಸ್ಯ ಮನ್ಯತೇऽನ್ಯಸ್ಯ ಪಾಪಕಮ್ ।
ಯಥಾ ಸ್ವಧರ್ಮನಿರ್ವೃತ್ತಂ ನ ಪುಣ್ಯಂ ನ ಚ ಪಾಪಕಮ್ ॥೨೨॥

ಬ್ರಹ್ಮಜ್ಞಾನಿಯಾದವನು ಮಾತ್ರ ಇನ್ನೊಬ್ಬನ ನಡತೆಯನ್ನಾಗಲೀ, ಇನ್ನೊಬ್ಬರ ಪಾಪವನ್ನಾಗಲೀ, ತನ್ನ ಧರ್ಮದಿಂದ ಉಂಟಾದ ಪುಣ್ಯ-ಪಾಪಗಳನ್ನಾಗಲೀ ಗಮನಿಸುವುದಿಲ್ಲ.

ರಮಸ್ವೈಧಸ್ವ ಮೋದಸ್ವ ದೇಹಿ ಚೈವ ಯಜಸ್ವ ಚ ।
ನ ತ್ವಾಮಭಿಭವಿಷ್ಯಂತಿ ವೈದ್ಯಾ ನ ಚ ತಪಸ್ವಿನಃ ॥೨೩॥

ಸಂತೋಷದಿಂದ ಇರು. ಅಭಿವೃದ್ಧಿಯನ್ನು ಹೊಂದು. ದಾನವನ್ನು ಮಾಡು. ಯಾಗವನ್ನು ಮಾಡು. ನಿನ್ನನ್ನು ಯಾವ ವಿದ್ವಾಂಸರಾಗಲೀ ಅಥವಾ ತಪಸ್ವಿಗಳಾಗಲೀ ಪರಿಭವಗೊಳಿಸುವುದಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಮೈತ್ರೇಯಭಿಕ್ಷಾ ನಾಮ
ಏಕಸಪ್ತ್ಯುತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಎಪ್ಪತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಪ್ಪತ್ತೆರಡನೆಯ ಅಧ್ಯಾಯ

ವ್ಯಾಸ-ಮೈತ್ರೇಯರ ಸಂವಾದ

ಭೀಷ್ಮಃ

ಏವಮುಕ್ತಃ ಪ್ರತ್ಯುವಾಚ ಮೈತ್ರೇಯಃ ಕರ್ಮಪೂಜಕಃ ।
ಅತ್ಯಂತಂ ಶ್ರೀಮತಿ ಕುಲೇ ಜಾತಃ ಪ್ರಾಜ್ಞೋ ಬಹುಶ್ರುತಃ ॥೧॥

ಅಸಂಶಯಂ ಮಹಾಪ್ರಾಜ್ಞ ಯಥೈವಾತ್ಥ ತಥೈವ ತತ್ ।
ಅನುಜ್ಞಾತಸ್ತು ಭವತಾ ಕಿಂಚಿದ್ ಬ್ರೂಯಾಮಹಂ ವಿಭೋ ॥೨॥

ಭೀಷ್ಮ- ಹೀಗೆ ಹೇಳಲ್ಪಟ್ಟ ಕರ್ಮಪ್ರಶಂಸೆಯನ್ನು ಮಾಡುವ ಮೈತ್ರೇಯರು ವ್ಯಾಸರನ್ನುಕುರಿತು- 'ಮಹಾಪ್ರಾಜ್ಞರೇ, ನಿಸ್ಸಂಶಯವಾಗಿ ಪ್ರಾಜ್ಞನೂ, ಬಹುಶ್ರುತನೂ ಆದವನು ನೀವು ಹೇಳಿದಂತೆಯೇ ಬಹಳ ಶ್ರೀಮಂತರಾದವರ ಕುಲದಲ್ಲಿ ಜನಿಸುತ್ತಾನೆ. ವಿಭುವೇ, ನಿಮ್ಮ ಅನುಮತಿಯನ್ನು ಪಡೆದು ನಾನು ಒಂದು ಅಲ್ಪ ವಿಷಯವನ್ನು ಹೇಳುತ್ತೇನೆ' ಎಂದು ಹೇಳಿದರು.

ವ್ಯಾಸಃ

ಯದ್ಯದಿಚ್ಛಸಿ ಮೈತ್ರೇಯ ಯಾವದ್ಯಾವದ್ ಯಥಾ ತಥಾ ।
ಬ್ರೂಹಿ ತತ್ತನ್ಮಹಾಭಾಗ ಶುಶ್ರೂಷೇ ವಚನಂ ತವ ॥೩॥

ವ್ಯಾಸ- ಎಲೈ ಮಹಾನುಭಾವನೇ, ನೀನು ಏನೇನನ್ನು ಹೇಳಲು ಬಯಸುತ್ತೀಯೋ, ಎಷ್ಟೆಷ್ಟು ಹೇಳಲು ಬಯಸುತ್ತೀಯೋ ಅದೆಲ್ಲವನ್ನೂ ಹೇಳು. ನಾನು ನಿನ್ನ ಮಾತುಗಳನ್ನು ಕೇಳುವ ಆಸೆಯಿಂದಿದ್ದೇನೆ.

ಮೈತ್ರೇಯಃ

ನಿರ್ದೋಷಂ ನಿರ್ಮಲಂ ಚೈವ ವಚನಂ ದಾನಸಂಹಿತಮ್ ।
ವಿದ್ಯಾತಪೋಭ್ಯಾಂ ಹಿ ಭವಾನ್ ಭಾವಿತಾತ್ಮಾ ನ ಸಂಶಯಃ ॥೪॥

ಮೈತ್ರೇಯ- ವಿದ್ಯಾ ಮತ್ತು ತಪಸ್ಸುಗಳಿಂದ ನೀವು ಪರಿಶುದ್ಧವಾದ ಮನಸ್ಸುಳ್ಳವರು ಎಂಬುದರಲ್ಲಿ ಸಂಶಯವಿಲ್ಲ. ಆದ್ದರಿಂದ ದಾನದ ವಿಷಯದಲ್ಲಿ ನೀವು ಹೇಳಿದುದು ನಿರ್ದೋಷವೂ, ನಿರ್ಮಲವೂ ಆಗಿದೆ.

ಭವತೋ ಭಾವಿತಾತ್ಮತ್ವಾದ್ ದಾಯೋಽಯಂ ಸುಮಹಾನ್ ಮಮ ।
ಭೂಯೋ ಬುದ್ಧ್ಯಾಽನುಪಶ್ಯಾಮಿ ಸುಸಮೃದ್ಧತಪಾ ಇವ ॥೫॥

ನೀವು ಪರಿಶುದ್ಧಾತ್ಮರಾದ್ದರಿಂದ ನನಗೆ ಉಂಟಾದ ಈ ಲಾಭವು ಬಹಳ ದೊಡ್ಡದು. ನನ್ನ ಬುದ್ಧಿಯಿಂದ ಪುನಃ ಸಮೃದ್ಧವಾದ ತಪಸ್ಸನ್ನು ಮಾಡಿದವನಂತೆ ನಿಮ್ಮನ್ನು ನೋಡುತ್ತಿದ್ದೇನೆ.

ಅಪಿ ಮೇ ದರ್ಶನಾದೇವ ಭವತೋ ಹ್ಯುದಯೋ ಭವೇತ್ ।
ಮನ್ಯೇ ಭವತ್ಪ್ರಸಾದೋಽಯಂ ತದ್ಧಿ ಕರ್ಮಸ್ವಭಾವತಃ ॥೬॥

ಮತ್ತು ನಿಮ್ಮ ದರ್ಶನದಿಂದಲೇ ನನಗೆ ಅಭ್ಯುದಯ ಉಂಟಾದೀತು. ನೀವು ಮಾಡಿದ ಈ ಅನುಗ್ರಹವು ಕರ್ಮದ ಸ್ವಭಾವದಿಂದ ಉಂಟಾದುದು ಎಂದು ನಾನು ತಿಳಿಯುತ್ತೇನೆ.

ತಪಃ ಶ್ರುತಂ ಚ ಯೋನಿಶ್ಚಾಪ್ಯೇತದ್ ಬ್ರಾಹ್ಮಣ್ಯಕಾರಣಮ್ ।
ತ್ರಿಭಿರ್ಗುಣೈಃ ಸಮುದಿತಸ್ತತೋ ಭವತಿ ವೈ ದ್ವಿಜಃ ॥೭॥

ತಪಸ್ಸು, ವಿದ್ಯೆ ಮತ್ತು ಕುಲ - ಈ ಮೂರು ಬ್ರಾಹ್ಮಣ್ಯಕ್ಕೆ ಕಾರಣವಾದವುಗಳು. ಈ ಮೂರು ಗುಣಗಳನ್ನು ಹೊಂದಿದವನು ಬ್ರಾಹ್ಮಣನಾಗುತ್ತಾನೆ.

ತಸ್ಮಿಂಸ್ತಪ್ತೇ ಚ ತೃಪ್ಯಂತೇ ಪಿತರೋ ದೈವತಾನಿ ಚ ।
ನ ಹಿ ಶ್ರುತವತಾಂ ಕಿಂಚಿದಧಿಕಂ ಬ್ರಾಹ್ಮಣಾದೃತೇ ॥೮॥

ಅವನು ತೃಪ್ತನಾದರೆ ಪಿತೃಗಳು, ದೇವತೆಗಳು ತೃಪ್ತರಾಗುತ್ತಾರೆ. ವಿದ್ಯಾವಂತರಲ್ಲಿ ಬ್ರಾಹ್ಮಣನನ್ನು ಬಿಟ್ಟು ಶ್ರೇಷ್ಠನಾದವನು ಯಾವನೂ ಇಲ್ಲ.

ಯಥಾ ಹಿ ಸುಕೃತೇ ಕ್ಷೇತ್ರೇ ಫಲಂ ವಿಂದಂತಿ ಮಾನವಾಃ ।
ಏವಂ ದತ್ತ್ವಾ ಶ್ರುತವತಿ ಫಲಂ ದಾತಾ ಸಮಶ್ನುತೇ ॥೯॥

ಹೇಗೆ ಚೆನ್ನಾಗಿ ಹದಮಾಡಿದ ಕ್ಷೇತ್ರದಲ್ಲಿ ಬಿತ್ತಿದ ಬೀಜದಿಂದ ಮನುಷ್ಯರು ಫಲವನ್ನು ಪಡೆಯುತ್ತಾರೆಯೋ ಹಾಗೆ ಜ್ಞಾನಸಂಪನ್ನನಾದವನಿಗೆ ದಾನವನ್ನು ಮಾಡಿ ದಾತೃವು ಪುಣ್ಯವನ್ನು ಸಂಪಾದಿಸುತ್ತಾನೆ.

ಬ್ರಾಹ್ಮಣಶ್ಚೇನ್ನ ವಿದ್ಯೇತ ಶ್ರುತವೃತ್ತೋಪಸಂಹಿತಃ ।
ಪ್ರತಿಗ್ರಹೀತಾ ದಾನಸ್ಯ ಮೋಘಂ ಸ್ಯಾದ್ ಧನಿನಾಂ ಧನಮ್ ॥೧೦॥

ವಿದ್ಯೆ ಮತ್ತು ಆಚಾರಗಳಿಂದ ಸಂಪನ್ನನಾಗಿ ದಾನವನ್ನು ಸ್ವೀಕಾರ ಮಾಡುವ ಬ್ರಾಹ್ಮಣನೇ ಇಲ್ಲದಿದ್ದರೆ ಧನಿಕರ ಧನವು ವ್ಯರ್ಥವಾದೀತು.

ಅದನ್ ಹ್ಯವಿದ್ವಾನ್ ಹಂತ್ಯನ್ನಮದ್ಯಮಾನಂ ಚ ಹಂತಿ ತಮ್ ।
ತಂ ಚ ಹನ್ಯತಿ ಯಸ್ಯಾನ್ನಂ ಸ ಹತ್ವಾ ಹನ್ಯತೇಽಬುಧಃ ॥೧೧॥

ಜ್ಞಾನಶೂನ್ಯನಾದವನು ತಾನು ತಿನ್ನುವ ಅನ್ನವನ್ನು ಕೊಲ್ಲುತ್ತಾನೆ. ಆ ಅನ್ನವೂ ಅವನನ್ನು ಕೊಲ್ಲುತ್ತದೆ. ಆ ಅನ್ನವು ಆ ಅವಿವೇಕಿಯು ಯಾವನ ಅನ್ನವನ್ನು ತಿನ್ನುತ್ತಾನೆಯೋ ಅವನನ್ನು ಕೊಲ್ಲುತ್ತದೆ.

ಪ್ರಭುರ್ಹ್ಯನ್ನಮದನ್ ವಿದ್ವಾನ್ ಪುನರ್ಜನಯತೀಶ್ವರಃ ।
ಸ ಚಾನ್ನಾಜ್ಜಾಯತೇ ತಸ್ಮಾತ್ ಸೂಕ್ಷ್ಮ ಏವ ವ್ಯತಿಕ್ರಮಃ ॥೧೨॥

ಅವನನ್ನು ಕೊಂದು ಅವಿವೇಕಿಯನ್ನೂ ಕೊಲ್ಲುತ್ತದೆ. ಸಮರ್ಥನಾದ ವಿದ್ವಾಂಸನು ಅನ್ನವನ್ನು ಭಕ್ಷಿಸಿ ಪುನಃ ಅನ್ನವನ್ನು ಉಂಟುಮಾಡುತ್ತಾನೆ. ಆ ವಿದ್ವಾಂಸನೂ ಅನ್ನದಿಂದಲೇ ಜನಿಸುತ್ತಾನೆ. ಅನ್ನವನ್ನು ತಿನ್ನುವವನೇ ಅನ್ನವನ್ನು ಸೃಷ್ಟಿಸುವ ಈ ವ್ಯತ್ಯಾಸ ಕ್ರಮವು ಬಹಳ ಸೂಕ್ಷ್ಮವಾದುದು.

ಯದೇವ ದದತಃ ಪುಣ್ಯಂ ತದೇವ ಪ್ರತಿಗೃಹ್ಣತಃ ।
ನ ಹ್ಯೇಕಚಕ್ರಂ ವರ್ತೇತ ಇತ್ಯೇವಮೃಷಯೋ ವಿದುಃ ॥೧೩॥

ಸತ್ಪಾತ್ರನಿಗೆ ಅನ್ನವನ್ನು ಕೊಡುವವನಿಗೆ ಯಾವ ಪುಣ್ಯವೋ, ಅನ್ನವನ್ನು ಸ್ವೀಕಾರ ಮಾಡುವವನಿಗೂ ಅದೇ ಪುಣ್ಯವು ಪ್ರಾಪ್ತವಾಗುತ್ತದೆ. ಗಾಡಿಯು ಒಂದೇ ಚಕ್ರದಿಂದ ಚಲಿಸುವುದಿಲ್ಲವಷ್ಟೆ! ಎಂದು ಋಷಿಗಳು ತಿಳಿಯುತ್ತಾರೆ.

ಯತ್ರ ವೈ ಬ್ರಾಹ್ಮಣಾಃ ಸಂತಿ ಶ್ರುತವೃತ್ತೋಪಸಂಹಿತಾಃ ।
ತತ್ರ ದಾನಫಲಂ ಪುಣ್ಯಮಿಹ ಚಾಮುತ್ರ ಚಾಶ್ನುತೇ ॥೧೪॥

ವಿದ್ಯೆ ಮತ್ತು ಆಚಾರಗಳಿಂದ ಸಂಪನ್ನರಾದ ಬ್ರಾಹ್ಮಣರು ಎಲ್ಲಿ ಇರುತ್ತಾರೆಯೋ ಅಲ್ಲಿ ಅವರಿಗೆ ಮಾಡಿದ ದಾನಫಲವಾದ ಶುಭವನ್ನು ದಾತೃವು ಈ ಲೋಕದಲ್ಲಿಯೂ, ಪರಲೋಕದಲ್ಲಿಯೂ ಅನುಭವಿಸುತ್ತಾನೆ.

ಯೇ ಯೋನಿಶುದ್ಧಾಃ ಸತತಂ ತಪಸ್ಯಭಿರತಾ ಭೃಶಮ್ ।
ದಾನಾಧ್ಯಯನಸಂಪನ್ನಾಸ್ತೇ ವೈ ಪೂಜ್ಯತಮಾಃ ಸದಾ ॥೧೫॥

ಯಾರು ಶುದ್ಧವಾದ ಕುಲದಲ್ಲಿ ಜನಿಸಿದ್ದಾರೆಯೋ, ಸತತವಾಗಿ ತೀವ್ರವಾದ ತಪಸ್ಸಿನಲ್ಲಿ ನಿರತರಾಗಿರುತ್ತಾರೆಯೋ, ದಾನಾಧ್ಯಯನಾದಿಗಳಲ್ಲಿ ನಿರತರಾಗಿರುತ್ತಾರೆಯೋ ಅವರು ಯಾವಾಗಲೂ ಅತ್ಯಂತ ಪೂಜ್ಯರಾದವರು.

ತೈರ್ಹಿ ಸದ್ಭಿಃ ಕೃತಃ ಪಂಥಾಶ್ಚೇತಯಾನೋ ನ ಮುಹ್ಯತೇ ।
ತೇ ಹಿ ಸ್ವರ್ಗಸ್ಯ ನೇತಾರೋ ಯಜ್ಞವಾಹಾಃ ಸನಾತನಾಃ ॥೧೬॥

ಅಂತಹವರು ಸ್ವರ್ಗಕ್ಕೆ ಹೋಗುವ ದಾರಿಯನ್ನು ನಿರ್ಮಾಣ ಮಾಡಿದ್ದಾರೆ. ಅದನ್ನು ತಿಳಿದವನು ಮೋಹಕ್ಕೆ ಒಳಗಾಗುವುದಿಲ್ಲ. ಅವರೇ ಸ್ವರ್ಗಕ್ಕೆ ಕರೆದುಕೊಂಡು ಹೋಗುವವರು, ಯಜ್ಞಗಳನ್ನು ನಿರ್ವಹಿಸುವವರು ಮತ್ತು ವೇದಪ್ರತಿಪಾದ್ಯರಾದವರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಮೈತ್ರೇಯಭಿಕ್ಷಾ ನಾಮ
ದ್ವಾಸಪ್ತತ್ಯುತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಎಪ್ಪತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಪ್ಪತ್ಮೂರನೆಯ ಅಧ್ಯಾಯ

ವ್ಯಾಸ-ಮೈತ್ರೇಯರ ಸಂವಾದ

ಭೀಷ್ಮಃ

ಏವಮುಕ್ತಃ ಸ ಭಗವಾನ್ ಮೈತ್ರೇಯಂ ಪ್ರತ್ಯಭಾಷತ ।
ದಿಷ್ಟ್ಯೈವಂ ತ್ವಂ ವಿಜಾನಾಸಿ ದಿಷ್ಟ್ಯಾ ತೇ ಬುದ್ಧಿರೀದೃಶೀ ।
ಲೋಕೋ ಹ್ಯಾರ್ಯಗುಣಾನೇವ ಶ್ರದ್ಧಯಾ ಸ್ವಗುಣೈರಪಿ ॥೧॥

ಬ್ರಾಹ್ಮಣಶ್ಚೇನ್ನ ವಿದ್ಯೇತ ಶ್ರುತವೃತ್ತೋಪಸಂಹಿತಃ ।
ಪ್ರತಿಗ್ರಹೀತಾ ದಾನಸ್ಯ ಮೋಘಂ ಸ್ಯಾದ್ ಧನಿನಾಂ ಧನಮ್ ॥೧೦॥

ವಿದ್ಯೆ ಮತ್ತು ಆಚಾರಗಳಿಂದ ಸಂಪನ್ನನಾಗಿ ದಾನವನ್ನು ಸ್ವೀಕಾರ ಮಾಡುವ ಬ್ರಾಹ್ಮಣನೇ ಇಲ್ಲದಿದ್ದರೆ ಧನಿಕರ ಧನವು ವ್ಯರ್ಥವಾದೀತು.

ಅದನ್ ಹ್ಯವಿದ್ವಾನ್ ಹಂತ್ಯನ್ನಮದ್ಯಮಾನಂ ಚ ಹಂತಿ ತಮ್ ।
ತಂ ಚ ಹನ್ಯತಿ ಯಸ್ಯಾನ್ನಂ ಸ ಹತ್ವಾ ಹನ್ಯತೇಽಬುಧಃ ॥೧೧॥

ಜ್ಞಾನಶೂನ್ಯನಾದವನು ತಾನು ತಿನ್ನುವ ಅನ್ನವನ್ನು ಕೊಲ್ಲುತ್ತಾನೆ. ಆ ಅನ್ನವೂ ಅವನನ್ನು ಕೊಲ್ಲುತ್ತದೆ. ಆ ಅನ್ನವು ಆ ಅವಿವೇಕಿಯು ಯಾವನ ಅನ್ನವನ್ನು ತಿನ್ನುತ್ತಾನೆಯೋ ಅವನನ್ನು ಕೊಲ್ಲುತ್ತದೆ.

ಪ್ರಭುರ್ಹ್ಯನ್ನಮದನ್ ವಿದ್ವಾನ್ ಪುನರ್ಜನಯತೀಶ್ವರಃ ।
ಸ ಚಾನ್ನಾಜ್ಜಾಯತೇ ತಸ್ಮಾತ್ ಸೂಕ್ಷ್ಮ ಏವ ವ್ಯತಿಕ್ರಮಃ ॥೧೨॥

ಅವನನ್ನು ಕೊಂದು ಅವಿವೇಕಿಯನ್ನೂ ಕೊಲ್ಲುತ್ತದೆ. ಸಮರ್ಥನಾದ ವಿದ್ವಾಂಸನು ಅನ್ನವನ್ನು ಭಕ್ಷಿಸಿ ಪುನಃ ಅನ್ನವನ್ನು ಉಂಟುಮಾಡುತ್ತಾನೆ. ಆ ವಿದ್ವಾಂಸನೂ ಅನ್ನದಿಂದಲೇ ಜನಿಸುತ್ತಾನೆ. ಅನ್ನವನ್ನು ತಿನ್ನುವವನೇ ಅನ್ನವನ್ನು ಸೃಷ್ಟಿಸುವ ಈ ವ್ಯತ್ಯಾಸ ಕ್ರಮವು ಬಹಳ ಸೂಕ್ಷ್ಮವಾದುದು.

ಯದೇವ ದದತಃ ಪುಣ್ಯಂ ತದೇವ ಪ್ರತಿಗೃಹ್ಣತಃ ।
ನ ಹ್ಯೇಕಚಕ್ರಂ ವರ್ತೇತ ಇತ್ಯೇವಮೃಷಯೋ ವಿದುಃ ॥೧೩॥

ಸತ್ಪಾತ್ರನಿಗೆ ಅನ್ನವನ್ನು ಕೊಡುವವನಿಗೆ ಯಾವ ಪುಣ್ಯವೋ, ಅನ್ನವನ್ನು ಸ್ವೀಕಾರ ಮಾಡುವವನಿಗೂ ಅದೇ ಪುಣ್ಯವು ಪ್ರಾಪ್ತವಾಗುತ್ತದೆ. ಗಾಡಿಯು ಒಂದೇ ಚಕ್ರದಿಂದ ಚಲಿಸುವುದಿಲ್ಲವಷ್ಟೆ! ಎಂದು ಋಷಿಗಳು ತಿಳಿಯುತ್ತಾರೆ.

ಯತ್ರ ವೈ ಬ್ರಾಹ್ಮಣಾಃ ಸಂತಿ ಶ್ರುತವೃತ್ತೋಪಸಂಹಿತಾಃ ।
ತತ್ರ ದಾನಫಲಂ ಪುಣ್ಯಮಿಹ ಚಾಮುತ್ರ ಚಾಶ್ನುತೇ ॥೧೪॥

ವಿದ್ಯೆ ಮತ್ತು ಆಚಾರಗಳಿಂದ ಸಂಪನ್ನರಾದ ಬ್ರಾಹ್ಮಣರು ಎಲ್ಲಿ ಇರುತ್ತಾರೆಯೋ ಅಲ್ಲಿ ಅವರಿಗೆ ಮಾಡಿದ ದಾನಫಲವಾದ ಶುಭವನ್ನು ದಾತೃವು ಈ ಲೋಕದಲ್ಲಿಯೂ, ಪರಲೋಕದಲ್ಲಿಯೂ ಅನುಭವಿಸುತ್ತಾನೆ.

ಯೇ ಯೋನಿಶುದ್ಧಾಃ ಸತತಂ ತಪಸ್ಯಭಿರತಾ ಭೃಶಮ್ ।
ದಾನಾಧ್ಯಯನಸಂಪನ್ನಾಸ್ತೇ ವೈ ಪೂಜ್ಯತಮಾಃ ಸದಾ ॥೧೫॥

ಯಾರು ಶುದ್ಧವಾದ ಕುಲದಲ್ಲಿ ಜನಿಸಿದ್ದಾರೆಯೋ, ಸತತವಾಗಿ ತೀವ್ರವಾದ ತಪಸ್ಸಿನಲ್ಲಿ ನಿರತರಾಗಿರುತ್ತಾರೆಯೋ, ದಾನಾಧ್ಯಯನಾದಿಗಳಲ್ಲಿ ನಿರತರಾಗಿರುತ್ತಾರೆಯೋ ಅವರು ಯಾವಾಗಲೂ ಅತ್ಯಂತ ಪೂಜ್ಯರಾದವರು.

ತೈರ್ಹಿ ಸದ್ಭಿಃ ಕೃತಃ ಪಂಥಾಶ್ಚೇತಯಾನೋ ನ ಮುಹ್ಯತೇ ।
ತೇ ಹಿ ಸ್ವರ್ಗಸ್ಯ ನೇತಾರೋ ಯಜ್ವಾನಾಃ ಸನಾತನಾಃ ॥೧೬॥

ಅಂತಹವರು ಸ್ವರ್ಗಕ್ಕೆ ಹೋಗುವ ದಾರಿಯನ್ನು ನಿರ್ಮಾಣ ಮಾಡಿದ್ದಾರೆ. ಅದನ್ನು ತಿಳಿದವನು ಮೋಹಕ್ಕೆ ಒಳಗಾಗುವುದಿಲ್ಲ. ಅವರೇ ಸ್ವರ್ಗಕ್ಕೆ ಕರೆದುಕೊಂಡು ಹೋಗುವವರು, ಯಜ್ಞಗಳನ್ನು ನಿರ್ವಹಿಸುವವರು ಮತ್ತು ವೇದಪ್ರತಿಪಾದ್ಯರಾದವರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಮೈತ್ರೇಯಭಿಕ್ಷಾ ನಾಮ
ದ್ವಾಸಪ್ತತ್ಯುತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಎಪ್ಪತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಪ್ಪತ್ಮೂರನೆಯ ಅಧ್ಯಾಯ

ವ್ಯಾಸ-ಮೈತ್ರೇಯರ ಸಂವಾದ

ಭೀಷ್ಮಃ

ಏವಮುಕ್ತಃ ಸ ಭಗವಾನ್ ಮೈತ್ರೇಯಂ ಪ್ರತ್ಯಭಾಷತ ।
ದಿಷ್ಟ್ಯೈವಂ ತ್ವಂ ವಿಜಾನಾಸಿ ದಿಷ್ಟ್ಯಾ ತೇ ಬುದ್ಧಿರೀದೃಶೀ ।
ಲೋಕೋ ಹ್ಯಾರ್ಯಗುಣಾನೇವ ಶ್ರದ್ಧಯಾ ಸ್ವಗುಣೈರಪಿ ॥೧॥

ಭೀಷ್ಮ– ಹೀಗೆ ಹೇಳಲ್ಪಟ್ಟ ಪೂಜ್ಯರಾದ ವ್ಯಾಸರು ಮೈತ್ರೇಯರನ್ನು ಕುರಿತು- ದೇವರ ದಯದಿಂದ ನೀನು ಇಂತಹ ಜ್ಞಾನವನ್ನು ಹೊಂದಿದ್ದೀಯೆ. ದೇವರ ದಯದಿಂದ ನಿನ್ನ ಬುದ್ಧಿಯು ಈ ರೀತಿಯಾಗಿದೆ. ಜನರು ತಮ್ಮಗುಣಕ್ಕಿಂತಲೂ ಹೆಚ್ಚಾಗಿ ದೊಡ್ಡವರ ಗುಣಗಳನ್ನೇ ಪ್ರಶಂಸಿಸುತ್ತಾರೆ.

ರೂಪಮಾನವಯೋಮಾನಶ್ರೀಮಾನಾಶ್ಚಾಪ್ಯಸಂಶಯಮ್ ।
ದಿಷ್ಟ್ಯಾ ನಾಭಿಭವಂತಿ ತ್ವಾಂ ದೈವಸ್ತೇऽಯಮನುಗ್ರಹಃ ।
ಯತ್ ತೇ ಭೃಶತರಂ ದಾನಾದ್ ವರ್ತಯಿಷ್ಯಾಮಿ ತಚ್ಛೃಣು ॥೨॥

ರೂಪಮದ, ವಯಸ್ಸಿನ ಮದ, ಸಂಪತ್ತಿನ ಮದ ಇವುಗಳು ನಿನ್ನನ್ನು ಪರಾಭವಗೊಳಿಸುವುದಿಲ್ಲ. ಇದು ನಿನಗಿರುವ ದೇವತಾನುಗ್ರಹ. ನಿನಗೆ ದಾನಕ್ಕಿಂತಲೂ ಶ್ರೇಷ್ಠವಾದ ಫಲವನ್ನು ಕೊಡುವುದನ್ನು ಹೇಳುವೆನು, ಅದನ್ನು ಕೇಳು.

ಯಾನೀಹಾಗಮಶಾಸ್ತ್ರಾಣಿ ಯಾಶ್ಚ ಕಾಶ್ಚಿತ್ಪ್ರವೃತ್ತಯಃ ।
ತಾನಿ ವೇದಂ ಪುರಸ್ಕೃತ್ಯ ಪ್ರವೃತ್ತಾನಿ ಯಥಾಕ್ರಮಮ್ ॥೩॥

ಈ ಲೋಕದಲ್ಲಿ ಯಾವ ಆಗಮಶಾಸ್ತ್ರಗಳು ಮತ್ತು ಪ್ರವೃತ್ತಿಗಳು ಇವೆಯೋ ಅವೆಲ್ಲವೂ ವೇದವನ್ನು ಆಧರಿಸಿಕೊಂಡು ಹೊರಟಿವೆ.

ಅಹಂ ದಾನಂ ಪ್ರಶಂಸಾಮಿ ಭವಾನಪಿ ತಪಃಶ್ರುತೇ ।
ತಪಃ ಪವಿತ್ರಂ ವೇದಸ್ಯ ತಪಃ ಸ್ವರ್ಗಸ್ಯ ಸಾಧನಮ್ ॥೪॥

ನಾನು ದಾನವು ಪ್ರಶಸ್ತವೆಂದು ಹೇಳುತ್ತೇನೆ. ನೀನು ತಪಸ್ಸು ಮತ್ತು ಯಜ್ಞಗಳು ಪ್ರಶಸ್ತವೆಂದು ಹೇಳುತ್ತಿದ್ದೀಯೆ. ತಪಸ್ಸು ಅಧ್ಯಯನ ಮಾಡಿದ ವೇದಕ್ಕೂ ಪಾವಿತ್ರ್ಯವನ್ನು ತಂದುಕೊಡುವಂತಹದು ಮತ್ತು ಸ್ವರ್ಗಕ್ಕೆ ಸಾಧನವಾದುದು.

ತಪಸಾ ಮಹದಾಪ್ನೋತಿ ವಿದ್ಯಯಾ ಚೇತಿ ನಃ ಶ್ರುತಮ್ ।
ತಪಸ್ಯೇವ ಚಾಪನುದೇದ್ ಯಚ್ಚಾನ್ಯದಪಿ ದುಷ್ಕೃತಮ್ ॥೫॥

ತಪಸ್ಸಿನಿಂದಲೂ, ವಿದ್ಯೆಯಿಂದಲೂ ಮನುಷ್ಯನು ಮಹತ್ವವನ್ನು ಪಡೆಯುತ್ತಾನೆ ಎಂದು ನಾವು ಕೇಳಿದ್ದೇವೆ. ಬೇರೆ ಯಾವ ದುಷ್ಕರ್ಮವಿದ್ದರೂ ಅದನ್ನು ತಪಸ್ಸಿನಿಂದಲೇ ಪರಿಹರಿಸಿಕೊಳ್ಳಬೇಕು.

ಯದ್ಯದ್ ಹಿ ಕಿಂಚಿತ್ ಸಂಧಾಯ ಪುರುಷಸ್ತಪ್ಯತೇ ತಪಃ ।
ಸರ್ವಮೇತದವಾಪ್ನೋತಿ ವಿದ್ಯಯಾ ಚೇತಿ ನಃ ಶ್ರುತಮ್ ॥೬॥

ಮನುಷ್ಯನು ಏನೇನನ್ನು ಉದ್ದೇಶಿಸಿ ತಪಸ್ಸನ್ನು ಮಾಡುತ್ತಾನೆಯೋ ಅವೆಲ್ಲವನ್ನೂ ವಿದ್ಯೆಯಿಂದಲೂ ಪಡೆಯುತ್ತಾನೆಂದು ನಾವು ಕೇಳಿದ್ದೇವೆ.

ದುರನ್ವಯಂ ದುಷ್ಪ್ರಧೃಷ್ಯಂ ದುರಾಪಂ ದುರತಿಕ್ರಮಮ್ ।
ಸರ್ವಂ ವೈ ತಪಸಾऽಭ್ಯೇತಿ ತಪೋ ಹಿ ಬಲವತ್ತರಮ್ ॥೭॥

ಸಂಬಂಧವನ್ನು ಪಡೆಯಲು ಸಾಧ್ಯವಿಲ್ಲದ, ಆಕ್ರಮಿಸಲು ಸಾಧ್ಯವಿಲ್ಲದ, ಹೊಂದಲು ಸಾಧ್ಯವಿಲ್ಲದ, ದಾಟಲು ಸಾಧ್ಯವಿಲ್ಲದ ಎಲ್ಲಾ ವಸ್ತುಗಳನ್ನೂ ತಪಸ್ಸಿನಿಂದ ಪಡೆಯುತ್ತಾನೆ. ತಪಸ್ಸು ಅತ್ಯಂತ ಬಲಿಷ್ಠವಾದುದು.

ಸುರಾಪಃ ಸ್ವರ್ಣಹಾರೀ ಚ ಭ್ರೂಣಹಾ ಗುರುತಲ್ಪಗಃ ।
ತಪಸಾ ತರತೇ ಸರ್ವಮೇನಸಶ್ಚ ಪ್ರಮುಚ್ಯತೇ ॥೮॥

ಸುರಾಪಾನವನ್ನು ಮಾಡಿದವನು, ಸ್ವರ್ಣಾಪಹಾರಕನು, ಭ್ರೂಣಹತ್ಯೆಯನ್ನು ಮಾಡಿದವನು, ಗುರುತಲ್ಪಗಾಮಿಯಾದವನು ತಪಸ್ಸಿನಿಂದಲೇ ಎಲ್ಲವನ್ನೂ ದಾಟಿ ಪಾಪದಿಂದ ನಿರ್ಮುಕ್ತನಾಗುತ್ತಾನೆ.

ಸರ್ವವಿದ್ಯಸ್ತು ಚಕ್ಷುಷ್ಮಾನಪಿ ಯಾದೃಶತಾದೃಶಃ ।
ತಪಸ್ವಿನೌ ಚ ತಾವಾಹುಸ್ತಾಭ್ಯಾಂ ಕಾರ್ಯಂ ಸದಾ ನಮಃ ॥೯॥

ಸರ್ವವಿದ್ಯಾಸಂಪನ್ನನಾದವನು ಯಾವ ರೀತಿಯಲ್ಲಿದ್ದರೂ ಅವನೇ ಕಣ್ಣುಳ್ಳವನು. ತಪಸ್ವಿಯಾದವನು ಮತ್ತು ಸರ್ವವಿದ್ಯಾಸಂಪನ್ನನು ಇಬ್ಬರೂ ತಪಸ್ವಿಗಳೆಂದೇ ಕರೆಯಲ್ಪಡುತ್ತಾರೆ. ಅವರನ್ನು ಯಾವಾಗಲೂ ನಮಸ್ಕರಿಸಬೇಕು.

ಸರ್ವೇ ಪೂಜ್ಯಾಃ ಶ್ರುತಧನಾಸ್ತಥೈವ ಚ ತಪಸ್ವಿನಃ ।
ದಾನಪ್ರದಾಃ ಸುಖಂ ಪ್ರೇತ್ಯ ಪ್ರಾಪ್ನುವಂತೀಹ ಚ ಶ್ರಿಯಮ್ ॥೧೦॥

ತಪೋಧನರೂ ಮತ್ತು ವಿದ್ಯಾಧರರೂ ಆದ ಎಲ್ಲರನ್ನೂ ಪೂಜಿಸಬೇಕು. ಅವರಿಗೆ ದಾನವನ್ನು ಮಾಡುವವರು ಈ ಲೋಕದಲ್ಲಿ ಸಂಪತ್ತನ್ನೂ ಪರಲೋಕದಲ್ಲಿ ಸುಖವನ್ನೂ ಪಡೆಯುತ್ತಾರೆ.

ಇಮಂ ಚ ಬ್ರಹ್ಮಲೋಕಂ ಚ ಲೋಕಂ ಚ ಬಲವತ್ತರಮ್ ।
ಅನ್ನದಾನೈಃ ಸುಕೃತಿನಃ ಪ್ರಾಪ್ನುವಂತೀಹ ಲೌಕಿಕಮ್ ॥೧೧॥

ಪುಣ್ಯವಂತರು ಅನ್ನದಾನಗಳಿಂದ ಈ ಲೋಕದಲ್ಲಿ ಸಂಪತ್ತನ್ನೂ ಮತ್ತು ಮರಣಾನಂತರದಲ್ಲಿ ಬ್ರಹ್ಮಲೋಕವನ್ನೂ, ಅದಕ್ಕಿಂತ ಉತ್ತಮವಾದ ಲೋಕಗಳನ್ನೂ ಹೊಂದುತ್ತಾರೆ.

ಪೂಜಿತಾಃ ಪೂಜಯಂತ್ಯೇತಾನ್ ಮಾನಿತಾ ಮಾನಯಂತಿ ಚ ।
ಅದಾತಾ ಯತ್ರ ಯತ್ರೈತಿ ಸರ್ವತಃ ಸಂಪ್ರಣುದ್ಯತೇ ॥೧೨॥

ಪೂಜಿಸಲ್ಪಟ್ಟವರು ತಮ್ಮನ್ನು ಪೂಜೆ ಮಾಡಿದವರನ್ನು ಪೂಜಿಸುತ್ತಾರೆ. ಗೌರವಿಸಲ್ಪಟ್ಟವರು ಗೌರವಿಸಿದವನಿಗೆ ಗೌರವವನ್ನು ಕೊಡುತ್ತಾರೆ. ದಾನ ಮಾಡದವನು ಎಲ್ಲೆಲ್ಲಿ ಹೋದರೂ ಎಲ್ಲ ಕಡೆಯಲ್ಲಿಯೂ ತಳ್ಳಲ್ಪಡುತ್ತಾನೆ.

ಅಕರ್ತಾ ಚೈವ ಕರ್ತಾ ಚ ಲಭತೇ ಯಸ್ಯ ಯಾದೃಶಮ್ ।
ಯದ್ಯೇವೋರ್ಧ್ವಂ ಯದ್ಯವಾಕ್ಚ ಲೋಕಾನ್ನಯಸಿ ಯಾಸ್ಯಸಿ ॥೧೩॥

ಶುಭಾಶುಭ ಕರ್ಮಗಳನ್ನು ಮಾಡುವವನು ಮತ್ತು ಮಾಡದವನು ತಮ್ಮ ಕರ್ಮಕ್ಕೆ ಅನುಗುಣವಾಗಿ ತಮಗೆ ಯೋಗ್ಯವಾದ ಊರ್ಧ್ವಲೋಕ ಅಥವಾ ಅಧೋ ಲೋಕಗಳಿಗೆ ಹೋಗುತ್ತಾರೆ.

ಪ್ರಾಪ್ಸ್ಯಸೇ ತ್ವನ್ನಪಾನಾನಿ ಯಾನಿ ದಾಸ್ಯಸಿ ಕಾನಿಚಿತ್ ।
ಮೇಧಾವ್ಯಸಿ ಕುಲೇ ಜಾತಃ ಶ್ರುತವಾನನೃಶಂಸವಾನ್ ॥೧೪॥

ಯಾವ ಅನ್ನ-ಪಾನಗಳನ್ನು ನೀನು ದಾನ ಮಾಡುವಿಯೋ ಅಂತಹ ಅನ್ನ ಪಾನಗಳನ್ನು ನೀನು ಹೊಂದುವಿ. ನೀನು ಸತ್ಕುಲದಲ್ಲಿ ಜನಿಸಿ ವಿದ್ಯಾವಂತನೂ, ದಯಾಪರನೂ, ಮಾರ್ದವವನ್ನು ಹೊಂದಿದವನೂ ಮತ್ತು ಮೇಧಾವಿಯೂ ಆಗಿದ್ದೀಯೆ.

ಕೌಮಾರದಾರವ್ರತವಾನ್ ಮೈತ್ರೇಯ ನಿರತೋ ಭವ ।
ಏತದ್ ಗೃಹಾಣ ಪ್ರಥಮಂ ಪ್ರಶಸ್ತಂ ಗೃಹಮೇಧಿನಾಮ್ ॥೧೫॥

ಎಲೈ ಮೈತ್ರೇಯನೇ, ಕೌಮಾರದಿಂದಲೂ ಪತ್ನೀವ್ರತವನ್ನು ಧರಿಸಿ ಪತ್ನಿಯಲ್ಲಿಯೇ ನಿರತನಾಗಿರು. ಇದು ಗೃಹಸ್ಥರಿಗೆ ಅತ್ಯಂತ ಪ್ರಶಸ್ತವಾದ ವ್ರತವೆಂದು ತಿಳಿ.

ಯೋ ಭರ್ತಾ ವಾಸಿತಾತುಷ್ಟೋ ಭರ್ತುಸ್ತುಷ್ಟಾ ಚ ವಾಸಿತಾ ।
ಯಸ್ಮಿನ್ನೇವಂ ಕುಲೇ ಸರ್ವಂ ಕಲ್ಯಾಣಂ ತತ್ರ ವರ್ತತೇ ॥೧೬॥

ಯಾವ ಕುಲದಲ್ಲಿ ಪತಿಯು ಪತ್ನಿಯಿಂದಲೂ, ಪತ್ನಿಯು ಪತಿಯಿಂದಲೂ ಸಂತುಷ್ಟರಾಗಿರುತ್ತಾರೆಯೋ ಅಲ್ಲಿಯೇ ಸರ್ವಕಲ್ಯಾಣಗಳೂ ಸಂಭವಿಸುತ್ತವೆ.

ಅದ್ಭಿರ್ಗಾತ್ರಾನ್ಮಲಮಿವ ತಮೋಽಗ್ನಿಪ್ರಭಯಾ ಯಥಾ ।
ದಾನೇನ ತಪಸಾ ಚೈವ ಸರ್ವಪಾಪಮಪೋಹ್ಯತೇ ॥೧೭॥

ನೀರಿನಿಂದ ದೇಹಕಶ್ಮಲವನ್ನು ತೊಳೆದಂತೆ, ಅಗ್ನಿಪ್ರಭೆಯಿಂದ ಅಂಧಕಾರವು ನಾಶವಾದಂತೆ ದಾನದಿಂದಲೂ ಮತ್ತು ತಪಸ್ಸಿನಿಂದಲೂ ಎಲ್ಲ ಪಾಪಗಳೂ ನಾಶವನ್ನು ಹೊಂದುತ್ತವೆ.

ಸ್ವಸ್ತಿ ಪ್ರಾಪ್ನುಹಿ ಮೈತ್ರೇಯ ಗೃಹಾನ್ ಸಾಧು ವ್ರಜಾಮ್ಯಹಮ್ ।
ಏತನ್ಮನಸಿ ಕರ್ತವ್ಯಂ ಶ್ರೇಯ ಏವಂ ಭವಿಷ್ಯತಿ ॥೧೮॥

ಎಲೈ ಮೈತ್ರೇಯನೇ, ನಿನಗೆ ಕ್ಷೇಮವಾಗಲಿ. ನಾನು ಮನೆಗೆ ಹೋಗುತ್ತೇನೆ. ನಾನು ಹೇಳಿದುದನ್ನು ಮನಸ್ಸಿನಲ್ಲಿ ಧರಿಸು. ಅದರಿಂದ ಶ್ರೇಯಸ್ಸು ಉಂಟಾಗುವುದು.

ಭೀಷ್ಮಃ

ತಂ ಪ್ರಣಮ್ಯಾಥ ಮೈತ್ರೇಯಃ ಕೃತ್ವಾ ಚಾಭಿಪ್ರದಕ್ಷಿಣಮ್ ।
ಸ್ವಸ್ತಿ ಪ್ರಾಪ್ನೋತು ಭಗವಾನಿತ್ಯುವಾಚ ಕೃತಾಂಜಲಿಃ ॥೧೯॥

ಭೀಷ್ಮ– ಅನಂತರ ಮೈತ್ರೇಯರು ವ್ಯಾಸರಿಗೆ ಪ್ರದಕ್ಷಿಣೆಯನ್ನು ಮಾಡಿ ನಮಸ್ಕರಿಸಿ, ಪೂಜ್ಯರಾದ ನಿಮಗೆ ಕ್ಷೇಮವಾಗಲಿ ಎಂದು ಕೈಮುಗಿದು ಹೇಳಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ತ್ರಿಸಪ್ತತ್ಯುತ್ತರಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರಎಪ್ಪತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಪ್ಪತ್ನಾಲ್ಕನೆಯ ಅಧ್ಯಾಯ

ಪತಿವ್ರತಾಧರ್ಮ, ಸುಮನ-ಶಾಂಡಿಲಿಯರ ಸಂವಾದ

ಯುಧಿಷ್ಠಿರಃ

ಸತ್‌ಸ್ತ್ರೀಣಾಂ ಸಮುದಾಚಾರಂ ಸರ್ವಧರ್ಮಭೃತಾಂ ವರ ।
ಶ್ರೋತುಮಿಚ್ಛಾಮ್ಯಹಂ ತತ್ತತ್ತಂ ಮೇ ಬ್ರೂಹಿ ಪಿತಾಮಹ ॥೧॥

ಯುಧಿಷ್ಠಿರ- ಸರ್ವಧರ್ಮಿಷ್ಠರಲ್ಲಿ ಶ್ರೇಷ್ಠನಾದ ಪಿತಾಮಹನೇ, ಉತ್ತಮ ಸ್ತ್ರೀಯರ ಸಮುದಾಚಾರವನ್ನು ನಿನ್ನಿಂದ ಕೇಳಲು ಬಯಸುತ್ತೇನೆ. ಅದನ್ನು ನನಗೆ ಹೇಳು.

ಭೀಷ್ಮಃ

ಸರ್ವಜ್ಞಾಂ ಸರ್ವಧರ್ಮಜ್ಞಾಂ ದೇವಲೋಕೇ ಮನಸ್ವಿನೀಮ್ ।
ಕೈಕೇಯೀ ಸುಮನಾ ನಾಮ ಶಾಂಡಿಲೀಂ ಪರ್ಯಪೃಚ್ಛತ ॥೨॥

ಭೀಷ್ಮ- ದೇವಲೋಕದಲ್ಲಿ ಸುಮನಾ ಎಂಬ ಕೈಕೇಯಿಯು ಸರ್ವಜ್ಞಳೂ, ಸರ್ವಧರ್ಮವನ್ನು ತಿಳಿದವಳೂ ಆದ ಶಾಂಡಿಲಿಯನ್ನು ಪ್ರಶ್ನೆ ಮಾಡಿದಳು.

ಕೇನ ವೃತ್ತೇನ ಕಲ್ಯಾಣಿ ಸದಾಚಾರೇಣ ಕೇನ ವಾ ।
ವಿಧೂಯ ಸರ್ವಪಾಪಾನಿ ದೇವಲೋಕಂ ತ್ವಮಾಗತಾ ॥೩॥

ಎಲೌ ಕಲ್ಯಾಣಿಯೇ, ಯಾವ ನಡತೆಯಿಂದ ಅಥವಾ ಯಾವ ಸದಾಚಾರದಿಂದ ನೀನು ಎಲ್ಲ ಪಾಪಗಳನ್ನೂ ಕಳೆದುಕೊಂಡು ದೇವಲೋಕಕ್ಕೆ ಬಂದಿದ್ದೀಯೆ?

ಹುತಾಶನಶಿಖೇವ ತ್ವಂ ಜ್ವಲಮಾನಾ ಸ್ವತೇಜಸಾ ।
ಸುತಾ ತಾರಾಧಿಪಸ್ಯೇವ ಪ್ರಭಯಾ ದಿವಮಾಗತಾ ॥೪॥

ಅಗ್ನಿಶಿಖೆಯಂತೆ ನೀನು ನಿನ್ನ ತೇಜಸ್ಸಿನಿಂದ ಬೆಳಗುತ್ತಾ ಚಂದ್ರನ ಪುತ್ರಿಯಂತೆ ನಿನ್ನ ಪ್ರಭೆಯಿಂದ ಸ್ವರ್ಗಕ್ಕೆ ಬಂದಿದ್ದೀಯೆ.

ಅರಜಾಂಸಿ ಚ ವಸ್ತ್ರಾಣಿ ಧಾರಯಂತೀ ಗತಕ್ಲಮಾ ।
ವಿಮಾನಸ್ಥಾ ಶುಭೇ ಭಾಸಿ ಸಹಸ್ರಗುಣಮೋಜಸಾ ॥೫॥

ಎಲೌ ಶುಭಳೇ, ಶುಭ್ರವಾದ ವಸ್ತ್ರವನ್ನು ಧರಿಸಿ, ಶ್ರಮರಹಿತಳಾಗಿ, ವಿಮಾನದಲ್ಲಿ ಕುಳಿತು ನೀನು ಸಹಸ್ರಪಟ್ಟು ಕಾಂತಿಯಿಂದ ಕೂಡಿರುವವಳಾಗಿ ತೋರುತ್ತಿದ್ದೀಯೆ.

ನ ತ್ವಮಲ್ಪೇನ ತಪಸಾ ದಾನೇನ ನಿಯಮೇನ ವಾ ।
ಇಮಂ ಲೋಕಮನುಪ್ರಾಪ್ತಾ ತಸ್ಮಾತ್ ತತ್ ತ್ವಂ ವದಸ್ವ ಮೇ ॥೬॥

ನೀನು ಅಲ್ಪವಾದ ತಪಸ್ಸಿನಿಂದಾಗಲೀ, ದಾನದಿಂದಾಗಲೀ, ನಿಯಮದಿಂದಾಗಲೀ ಈ ಲೋಕಕ್ಕೆ ಬಂದವಳಲ್ಲ. ಆದ್ದರಿಂದ ನೀನು ಇಲ್ಲಿಗೆ ಬಂದುದಕ್ಕೆ ಕಾರಣವನ್ನು ನನಗೆ ಹೇಳು.

ಇತಿ ಪೃಷ್ಟಾ ಸುಮನಯಾ ಮಧುರಂ ಚಾರುಹಾಸಿನೀ ।
ಶಾಂಡಿಲೀ ನಿಭೃತಂ ವಾಕ್ಯಂ ಸುಮನಾಮಿದಮಬ್ರವೀತ್ ॥೭॥

ಹೀಗೆ ಸುಮನಳಿಂದ ಮಧುರವಾಗಿ ಕೇಳಲ್ಪಟ್ಟ, ಚಾರುಹಾಸಿನಿಯಾದ ಶಾಂಡಿಲಿಯು ಸುಮನಳನ್ನು ಉದ್ದೇಶಿಸಿ ಈ ಮಾತನ್ನು ಆಡಿದಳು.

ನಾಹಂ ಕಾಷಾಯವಸನಾ ನಾಪಿ ವಲ್ಕಲಧಾರಿಣೀ ।
ನ ಚ ಮುಂಡಾ ನ ಜಟಿಲಾ ಭೂತ್ವಾ ದೇವತ್ವಮಾಗತಾ ॥೮॥

ನಾನು ಕಾವಿಯನ್ನು ಧರಿಸಿ ಅಥವಾ ನಾರುಮಡಿಯನ್ನು ಧರಿಸಿ ಅಥವಾ ಸಂನ್ಯಾಸವನ್ನು ಸ್ವೀಕರಿಸಿ ಅಥವಾ ಕರ್ಕಶವಾದ ಧರ್ಮಚಾರಿಣಿಯಾಗಿ ದೇವಲೋಕಕ್ಕೆ ಬಂದಿಲ್ಲ.

ಅಹಿತಾನಿ ಚ ವಾಕ್ಯಾನಿ ಸರ್ವಾಣಿ ಪರುಷಾಣಿ ಚ ।
ಅಪ್ರಮತ್ತಾ ಚ ಭರ್ತಾರಂ ಕದಾಚಿನ್ನಾಹಮಬ್ರುವಮ್ ॥೯॥

ನಾನು ಪತಿಯನ್ನು ಕುರಿತು ಜಾಗರೂಕಳಾಗಿ ಎಂದೂ ಅಹಿತವಾದ ವಾಕ್ಯಗಳನ್ನಾಗಲೀ, ಒರಟು ಮಾತುಗಳನ್ನಾಗಲೀ ಆಡಲಿಲ್ಲ.

ದೇವತಾನಾಂ ಪಿತೄಣಾಂ ಚ ಬ್ರಾಹ್ಮಣಾನಾಂ ಚ ಪೂಜನೇ ।
ಅಪ್ರಮತ್ತಾ ಸದಾಯುಕ್ತಾ ಶ್ವಶ್ರೂಶ್ವಶುರವರ್ತಿನೀ ॥೧೦॥

ನೂರ ಎಪ್ಪತ್ನಾಲ್ಕನೆಯ ಅಧ್ಯಾಯ

ಪತಿವ್ರತಾಧರ್ಮ, ಸುಮನ-ಶಾಂಡಿಲಿಯರ ಸಂವಾದ

ಯುಧಿಷ್ಠಿರಃ

ಸತ್‌ಸ್ತ್ರೀಣಾಂ ಸಮುದಾಚಾರಂ ಸರ್ವಧರ್ಮಭೃತಾಂ ವರ ।
ಶ್ರೋತುಮಿಚ್ಛಾಮ್ಯಹಂ ತತ್ತತ್ತಂ ಮೇ ಬ್ರೂಹಿ ಪಿತಾಮಹ ॥೧॥

ಯುಧಿಷ್ಠಿರ- ಸರ್ವಧರ್ಮಿಷ್ಠರಲ್ಲಿ ಶ್ರೇಷ್ಠನಾದ ಪಿತಾಮಹನೇ, ಉತ್ತಮ ಸ್ತ್ರೀಯರ ಸಮುದಾಚಾರವನ್ನು ನಿನ್ನಿಂದ ಕೇಳಲು ಬಯಸುತ್ತೇನೆ. ಅದನ್ನು ನನಗೆ ಹೇಳು.

ಭೀಷ್ಮಃ

ಸರ್ವಜ್ಞಾಂ ಸರ್ವಧರ್ಮಜ್ಞಾಂ ದೇವಲೋಕೇ ಮನಸ್ವಿನೀಮ್ ।
ಕೈಕೇಯೀ ಸುಮನಾ ನಾಮ ಶಾಂಡಿಲೀಂ ಪರ್ಯಪೃಚ್ಛತ ॥೨॥

ಭೀಷ್ಮ- ದೇವಲೋಕದಲ್ಲಿ ಸುಮನಾ ಎಂಬ ಕೈಕೇಯಿಯು ಸರ್ವಜ್ಞಳೂ, ಸರ್ವಧರ್ಮವನ್ನು ತಿಳಿದವಳೂ ಆದ ಶಾಂಡಿಲಿಯನ್ನು ಪ್ರಶ್ನೆ ಮಾಡಿದಳು.

ಕೇನ ವೃತ್ತೇನ ಕಲ್ಯಾಣಿ ಸದಾಚಾರೇಣ ಕೇನ ವಾ ।
ವಿಧೂಯ ಸರ್ವಪಾಪಾನಿ ದೇವಲೋಕಂ ತ್ವಮಾಗತಾ ॥೩॥

ಎಲೌ ಕಲ್ಯಾಣಿಯೇ, ಯಾವ ನಡತೆಯಿಂದ ಅಥವಾ ಯಾವ ಸದಾಚಾರದಿಂದ ನೀನು ಎಲ್ಲ ಪಾಪಗಳನ್ನೂ ಕಳೆದುಕೊಂಡು ದೇವಲೋಕಕ್ಕೆ ಬಂದಿದ್ದೀಯೆ?

ಹುತಾಶನಶಿಖೇವ ತ್ವಂ ಜ್ವಲಮಾನಾ ಸ್ವತೇಜಸಾ ।
ಸುತಾ ತಾರಾಧಿಪಸ್ಯೇವ ಪ್ರಭಯಾ ದಿವಮಾಗತಾ ॥೪॥

ಅಗ್ನಿಶಿಖೆಯಂತೆ ನೀನು ನಿನ್ನ ತೇಜಸ್ಸಿನಿಂದ ಬೆಳಗುತ್ತಾ ಚಂದ್ರನ ಪುತ್ರಿಯಂತೆ ನಿನ್ನ ಪ್ರಭೆಯಿಂದ ಸ್ವರ್ಗಕ್ಕೆ ಬಂದಿದ್ದೀಯೆ.

ಅರಜಾಂಸಿ ಚ ವಸ್ತ್ರಾಣಿ ಧಾರಯಂತೀ ಗತಕ್ಲಮಾ ।
ವಿಮಾನಸ್ಥಾ ಶುಭೇ ಭಾಸಿ ಸಹಸ್ರಗುಣಮೋಜಸಾ ॥೫॥

ಎಲೌ ಶುಭಳೇ, ಶುಭ್ರವಾದ ವಸ್ತ್ರವನ್ನು ಧರಿಸಿ, ಶ್ರಮರಹಿತಳಾಗಿ, ವಿಮಾನದಲ್ಲಿ ಕುಳಿತು ನೀನು ಸಹಸ್ರಪಟ್ಟು ಕಾಂತಿಯಿಂದ ಕೂಡಿರುವವಳಾಗಿ ತೋರುತ್ತಿದ್ದೀಯೆ.

ನ ತ್ವಮಲ್ಪೇನ ತಪಸಾ ದಾನೇನ ನಿಯಮೇನ ವಾ ।
ಇಮಂ ಲೋಕಮನುಪ್ರಾಪ್ತಾ ತಸ್ಮಾತ್ ತತ್ ತ್ವಂ ವದಸ್ವ ಮೇ ॥೬॥

ನೀನು ಅಲ್ಪವಾದ ತಪಸ್ಸಿನಿಂದಾಗಲೀ, ದಾನದಿಂದಾಗಲೀ, ನಿಯಮದಿಂದಾಗಲೀ ಈ ಲೋಕಕ್ಕೆ ಬಂದವಳಲ್ಲ. ಆದ್ದರಿಂದ ನೀನು ಇಲ್ಲಿಗೆ ಬಂದುದಕ್ಕೆ ಕಾರಣವನ್ನು ನನಗೆ ಹೇಳು.

ಇತಿ ಪೃಷ್ಟಾ ಸುಮನಯಾ ಮಧುರಂ ಚಾರುಹಾಸಿನೀ ।
ಶಾಂಡಿಲೀ ನಿಭೃತಂ ವಾಕ್ಯಂ ಸುಮನಾಮಿದಮಬ್ರವೀತ್ ॥೭॥

ಹೀಗೆ ಸುಮನಳಿಂದ ಮಧುರವಾಗಿ ಕೇಳಲ್ಪಟ್ಟ, ಚಾರುಹಾಸಿನಿಯಾದ ಶಾಂಡಿಲಿಯು ಸುಮನಳನ್ನು ಉದ್ದೇಶಿಸಿ ಈ ಮಾತನ್ನು ಆಡಿದಳು.

ನಾಹಂ ಕಾಷಾಯವಸನಾ ನಾಪಿ ವಲ್ಕಲಧಾರಿಣೀ ।
ನ ಚ ಮುಂಡಾ ನ ಜಟಿಲಾ ಭೂತ್ವಾ ದೇವತ್ವಮಾಗತಾ ॥೮॥

ನಾನು ಕಾವಿಯನ್ನು ಧರಿಸಿ ಅಥವಾ ನಾರುಮಡಿಯನ್ನು ಧರಿಸಿ ಅಥವಾ ಸಂನ್ಯಾಸವನ್ನು ಸ್ವೀಕರಿಸಿ ಅಥವಾ ಕರ್ಕಶವಾದ ಧರ್ಮಚಾರಿಣಿಯಾಗಿ ದೇವಲೋಕಕ್ಕೆ ಬಂದಿಲ್ಲ.

ಅಹಿತಾನಿ ಚ ವಾಕ್ಯಾನಿ ಸರ್ವಾಣಿ ಪರುಷಾಣಿ ಚ ।
ಅಪ್ರಮತ್ತಾ ಚ ಭರ್ತಾರಂ ಕದಾಚಿನ್ನಾಹಮಬ್ರುವಮ್ ॥೯॥

ನಾನು ಪತಿಯನ್ನು ಕುರಿತು ಜಾಗರೂಕಳಾಗಿ ಎಂದೂ ಅಹಿತವಾದ ವಾಕ್ಯಗಳನ್ನಾಗಲೀ, ಒರಟು ಮಾತುಗಳನ್ನಾಗಲೀ ಆಡಲಿಲ್ಲ.

ದೇವತಾನಾಂ ಪಿತೄಣಾಂ ಚ ಬ್ರಾಹ್ಮಣಾನಾಂ ಚ ಪೂಜನೇ ।
ಅಪ್ರಮತ್ತಾ ಸದಾಯುಕ್ತಾ ಶ್ವಶ್ರೂಶ್ವಶುರವರ್ತಿನೀ ॥೧೦॥

ದೇವತೆಗಳ, ಪಿತೃಗಳ ಮತ್ತು ಬ್ರಾಹ್ಮಣರ ಪೂಜೆಯಲ್ಲಿಯೂ ಅತ್ತೆ-ಮಾವಂದಿರ ಸೇವೆಯಲ್ಲಿಯೂ ಎಚ್ಚರಿಕೆಯಿಂದ ಸದಾ ಉದ್ಯುಕ್ತಳಾಗಿರುತ್ತೇನೆ.

ಪೈಶುನ್ಯೇ ನ ಪ್ರವರ್ತಾಮಿ ನ ಮಮೈತನ್ಮನೋಗತಮ್ ।
ಪ್ರದ್ವಾರಿ ಚ ನ ತಿಷ್ಠಾಮಿ ಚಿರಂ ನ ಕಥಯಾಮಿ ಚ ॥೧೧॥

ಚಾಡಿಯನ್ನು ಹೇಳುವುದಿಲ್ಲ. ಅದು ನನ್ನ ಮನಸ್ಸಿಗೆ ಇಷ್ಟವೂ ಅಲ್ಲ. ಮನೆಯ ಮುಂಬಾಗಿಲಿನಲ್ಲಿ ನಿಲ್ಲುವುದಿಲ್ಲ. ಯಾರ ಜೊತೆಯಲ್ಲಿಯೂ ಬಹಳ ಹೊತ್ತು ಮಾತನಾಡುವುದಿಲ್ಲ.

ಅಸದ್ವಾ ಹಸಿತಂ ಕಿಂಚಿದಹಿತಂ ವಾಪಿ ಕರ್ಮಣಾ ।
ರಹಸ್ಯಮರಹಸ್ಯಂ ವಾ ನ ಪ್ರವರ್ತಾಮಿ ಸರ್ವಥಾ ॥೧೨॥

ಕೆಟ್ಟ ವಿಷಯದಲ್ಲಿ ನಗುವುದನ್ನಾಗಲೀ ಅಥವಾ ಅಹಿತವಾದ ಕರ್ಮವನ್ನಾಗಲೀ ರಹಸ್ಯವಾಗಿ ಅಥವಾ ಪ್ರಕಾಶವಾಗಿ ಸರ್ವಥಾ ಮಾಡುವುದಿಲ್ಲ.

ಕಾರ್ಯಾರ್ಥೇ ನಿರ್ಗತಂ ಚಾಪಿ ಭರ್ತಾರಂ ಗೃಹಮಾಗತಮ್ ।
ಆಸನೇನೋಪಸಂಯೋಜ್ಯ ಪೂಜಯಾಮಿ ಸಮಾಹಿತಾ ॥೧೩॥

ಕಾರ್ಯದ ಸಲುವಾಗಿ ಹೊರಗೆ ಹೋಗಿ ಮನೆಗೆ ಹಿಂದಿರುಗಿದ ಪತಿಯನ್ನು ಆಸನವನ್ನು ಕೊಟ್ಟು ಸತ್ಕರಿಸಿ ಸಮಾಧಾನದಿಂದ ಪೂಜಿಸುತ್ತೇನೆ.

ಯದ್ಯಚ್ಚ ನಾಭಿಜಾನಾತಿ ಯದ್ಭೋಜ್ಯಂ ನಾಭಿನಂದತಿ ।
ಭಕ್ಷ್ಯಂ ವಾಪ್ಯಥ ವಾ ಲೇಹ್ಯಂ ತತ್ಸರ್ವಂ ವರ್ಜಯಾಮ್ಯಹಮ್ ॥೧೪॥

ಪತಿಯು ಯಾವುದನ್ನು ಇಷ್ಟ ಪಡುವುದಿಲ್ಲವೋ, ಯಾವ ಭಕ್ಷ್ಯ-ಲೇಹ್ಯ ಮೊದಲಾದವುಗಳನ್ನು ಇಷ್ಟಪಡುವುದಿಲ್ಲವೋ ಅದೆಲ್ಲವನ್ನೂ ನಾನೂ ವರ್ಜಿಸುತ್ತೇನೆ.

ಕುಟುಂಬಾರ್ಥೇ ಸಮಾನೀತಂ ಯತ್ಕಿಂಚಿತ್ಕಾರ್ಯಮೇವ ತು ।
ಪ್ರಾತರುತ್ಥಾಯ ತತ್ಸರ್ವಂ ಕಾರಯಾಮಿ ಕರೋಮಿ ಚ ॥೧೫॥

ಕುಟುಂಬದ ಸಲುವಾಗಿ ಒದಗಿ ಬಂದ ಯಾವ ಕಾರ್ಯವನ್ನೂ ಪ್ರಾತಃಕಾಲದಲ್ಲಿ ಬೇಗ ಎದ್ದು ಎಲ್ಲವನ್ನೂ ಮಾಡುತ್ತೇನೆ ಮತ್ತು ಮಾಡಿಸುತ್ತೇನೆ.

ಪ್ರವಾಸಂ ಯದಿ ಮೇ ಭರ್ತಾ ಯಾತಿ ಕಾರ್ಯೇಣ ಕೇನಚಿತ್ ।
ಮಂಗಲೈರ್ಬಹುಭಿರ್ಯುಕ್ತಾ ಭವಾಮಿ ನಿಯತಾಸನಾ ॥೧೬॥

ಪತಿಯು ಯಾವುದಾದರೂ ಕಾರ್ಯದ ಸಲುವಾಗಿ ಪ್ರವಾಸಕ್ಕೆ ಹೋದರೆ ನಾನು ಮಂಗಳಕ್ಕೆ ಕಾರಣಗಳಾದ ನಿಯಮಗಳನ್ನು ಮಾಡುತ್ತೇನೆ.

ಅಂಜನಂ ರೋಚನಾಂ ಚೈವ ಸ್ನಾನಂ ಮಾಲ್ಯಾನುಲೇಪನಮ್ ।
ಪ್ರಸಾಧನಂ ಚ ನಿಷ್ಕ್ರಾಂತೇ ನಾಭಿನಂದಾಮಿ ಭರ್ತರಿ ॥೧೭॥

ಪತಿಯು ಊರಿನಲ್ಲಿ ಇಲ್ಲದಿದ್ದಾಗ ನಾನು ಅಭ್ಯಂಜನವನ್ನಾಗಲೀ, ಅಲಂಕಾರವನ್ನಾಗಲೀ, ವಿಶೇಷ ಸ್ನಾನವನ್ನಾಗಲೀ, ಮಾಲೆಯನ್ನಾಗಲೀ, ಸುಗಂಧ ಲೇಪನವನ್ನಾಗಲೀ, ಕಾಡಿಗೆ ಮುಂತಾದವನ್ನಾಗಲೀ ಇಷ್ಟಪಡುವುದಿಲ್ಲ.

ನೋತ್ಥಾಪಯಾಮಿ ಭರ್ತಾರಂ ಸುಖಸುಪ್ತಮಹಂ ಸದಾ ।
ಆತುರೇಷ್ವಪಿ ಕಾರ್ಯೇಷು ತೇನ ತುಷ್ಯತಿ ಮೇ ಮನಃ ॥೧೮॥

ಆತುರ ಕಾರ್ಯವು ಒದಗಿದರೂ ಸುಖವಾಗಿ ನಿದ್ರಿಸುವ ನನ್ನ ಪತಿಯನ್ನು ಎಂದೂ ಎಬ್ಬಿಸುವುದಿಲ್ಲ. ಅದರಿಂದ ನನ್ನ ಮನಸ್ಸು ಸಂತೋಷಗೊಳ್ಳುತ್ತದೆ.

ನಾಯಾಸಯಾಮಿ ಭರ್ತಾರಂ ಕುಟುಂಬಾರ್ಥೇ ಚ ಸರ್ವದಾ ।
ಗುಪ್ತಗುಹ್ಯಾ ಸದಾ ಚಾಸ್ಮಿ ಸುಸಮ್ಮೃಷ್ಟನಿವೇಶನಾ ॥೧೯॥

ಕುಟುಂಬದ ಸಲುವಾಗಿ ಪತಿಗೆ ಎಂದೂ ಉಪದ್ರವವನ್ನು ಕೊಡುವುದಿಲ್ಲ. ರಹಸ್ಯಗಳನ್ನು ಯಾವಾಗಲೂ ಗೌಪ್ಯವಾಗಿಯೇ ಇಡುತ್ತೇನೆ. ಮನೆಯನ್ನು ಚೆನ್ನಾಗಿ ತೊಳೆದು ಇಟ್ಟುಕೊಳ್ಳುತ್ತೇನೆ.

ಇಮಂ ಧರ್ಮಪಥಂ ನಾರೀ ಪಾಲಯಂತೀ ಸಮಾಹಿತಾ ।
ಅರುಂಧತೀವ ನಾರೀಣಾಂ ಸ್ವರ್ಗಲೋಕೇ ಮಹೀಯತೇ ॥೨೦॥

ಇಂತಹ ಧರ್ಮಮಾರ್ಗವನ್ನು ಸಮಾಧಾನದಿಂದ ಅನುಸರಿಸುವ ನಾರಿಯು ನಾರಿಯರ ಮಧ್ಯದಲ್ಲಿ ಅರುಂಧತಿಯು ಪೂಜಿಸಲ್ಪಡುವಂತೆ ಸ್ವರ್ಗಲೋಕದಲ್ಲಿ ಪೂಜಿಸಲ್ಪಡುತ್ತಾಳೆ.

ಭೀಷ್ಮಃ

ಏತದಾಖ್ಯಾಯ ಸಾ ದೇವೀ ಸುಮನಾಯೈ ತಪಸ್ವಿನೀ ।
ಪತಿಧರ್ಮಂ ಮಹಾಭಾಗಾ ಜಗಾಮಾದರ್ಶನಂ ತದಾ ॥೨೧॥

ಭೀಷ್ಮ– ತಪಸ್ವಿನಿಯಾದ, ಮಹಾನುಭಾವಳಾದ ಆ ಶಾಂಡಿಲಿದೇವಿಯು ಸುಮನೆಗೆ ಹೀಗೆ ಪತಿಧರ್ಮವನ್ನು ನಿರೂಪಿಸಿ ಅದೃಶ್ಯಳಾದಳು.

ಯಶ್ಚೇದಂ ಪಾಂಡವಾಖ್ಯಾನಂ ಪಠೇತ್ ಪರ್ವಣಿ ಪರ್ವಣಿ ।
ಸ ದೇವಲೋಕಂ ಸಂಪ್ರಾಪ್ಯ ನಂದನೇ ಸುಸುಖಿಂ ವಸೇತ್ ॥೨೨॥

ಎಲೈ ಪಾಂಡವನೇ, ಯಾವನು ಈ ಆಖ್ಯಾನವನ್ನು ಪರ್ವ ಪರ್ವಗಳಲ್ಲಿ ಪಠಿಸುತ್ತಾನೆಯೋ ಅವನು ದೇವಲೋಕವನ್ನು ಪಡೆದು ನಂದನವನದಲ್ಲಿ ಸುಖವಾಗಿ ವಾಸಿಸುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಸುಮನಾ-ಶಾಂಡಿಲೀಸಂವಾದೋ ನಾಮ
ಚತುಃಸಪ್ತತ್ಯುತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಎಪ್ಪತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಪ್ಪತ್ತೈದನೆಯ ಅಧ್ಯಾಯ

ನಾರಾಯಣನ ಸರ್ವೋತ್ತಮತ್ವಕಥನ

ಯುಧಿಷ್ಠಿರಃ

ಯಜ್ಜ್ಞೇಯಂ ಪರಮಂ ಕೃತ್ಯಮನುಷ್ಠೇಯಂ ಮಹಾತ್ಮಭಿಃ ।
ಸಾರಂ ಮೇ ಸರ್ವಶಾಸ್ತ್ರಾಣಾಂ ವಕ್ತುಮರ್ಹಸ್ಯನುಗ್ರಹಾತ್ ॥೧॥

ಯುಧಿಷ್ಠಿರ– ಯಾವುದು ತಿಳಿಯಬೇಕಾದುದರಲ್ಲಿ ಅತ್ಯಂತ ಶ್ರೇಷ್ಠವೋ, ಮಹಾತ್ಮರಿಂದ ಮಾಡಬೇಕಾದುದರಲ್ಲಿ ಅತ್ಯಂತ ಶ್ರೇಷ್ಠವಾದ ಕಾರ್ಯವೋ, ಅಂತಹ ಸರ್ವಶಾಸ್ತ್ರಗಳ ಸಾರವನ್ನು ಅನುಗ್ರಹ ಮಾಡಿ ನನಗೆ ಹೇಳಬೇಕು.

ಭೀಷ್ಮಃ

ಶ್ರೂಯತಾಮಿದಮತ್ಯಂತಂ ಗೂಢಂ ಸಂಸಾರಮೋಚನಮ್ ।
ಶ್ರೋತವ್ಯಂ ಚ ತ್ವಯಾ ಸಮ್ಯಗ್ ಜ್ಞಾತವ್ಯಂ ಚ ವಿಶಾಂಪತೇ ॥೨॥

ಭೀಷ್ಮ– ಎಲೈ ರಾಜನೇ, ಅತ್ಯಂತ ರಹಸ್ಯವಾದ, ಸಂಸಾರಮೋಚಕವಾದ ಈ ವಿಷಯವನ್ನು ನೀನು ಕೇಳಬೇಕು. ಈ ವಿಷಯವನ್ನು ಕೇಳಿ ಚೆನ್ನಾಗಿ ತಿಳಿದುಕೊಳ್ಳಬೇಕು.

ಪುಂಡರೀಕಃ ಪುರಾ ವಿಪ್ರಃ ಪುಣ್ಯತೀರ್ಥೇ ಜಪಾನ್ವಿತಃ ।
ನಾರದಂ ಪರಿಪಪ್ರಚ್ಛ ಶ್ರೇಯೋ ಯೋಗಪರಂ ಮುನಿಮ್ ॥೩॥

ನಾರದಶ್ಚಾಬ್ರವೀದೇನಂ ಬ್ರಹ್ಮಣೋಕ್ತಂ ಮಹಾತ್ಮನಾ ॥೪॥

ಹಿಂದೆ ಪುಂಡರೀಕನೆಂಬ ಬ್ರಾಹ್ಮಣನು ಪುಣ್ಯತೀರ್ಥದಲ್ಲಿ ಜಪವನ್ನು ಮಾಡುತ್ತಾ ಯೋಗಪರರಾದ ನಾರದಋಷಿಯನ್ನು ಕುರಿತು ಶ್ರೇಯಸ್ಸಿನ ವಿಷಯದಲ್ಲಿ ಪ್ರಶ್ನೆಯನ್ನು ಮಾಡಿದನು. ನಾರದರು ಮಹಾತ್ಮರಾದ ಬ್ರಹ್ಮದೇವರು ತಮಗೆ ಹೇಳಿದುದನ್ನು ಅವನಿಗೆ ಹೇಳಿದರು.

ಶೃಣುಷ್ವಾವಹಿತಸ್ತಾತ ಜ್ಞಾನಯೋಗಮನುತ್ತಮಮ್ ।
ಅಪ್ರಭೂತಂ ಪ್ರಭೂತಾರ್ಥಂ ವೇದಶಾಸ್ತ್ರಾರ್ಥಸಾರಕಮ್ ॥೫॥

ಪ್ರೀತಿಪಾತ್ರನೇ, ಶ್ರೇಷ್ಠವಾದ, ಅಲ್ಪವಾದ, ಮಹಾಫಲದಾಯಕವಾದ, ವೇದಶಾಸ್ತ್ರಗಳ ಅರ್ಥಸಾರರೂಪವಾದ ಜ್ಞಾನಯೋಗವನ್ನು ಕೇಳು.

ಯಃ ಪರಃ ಪ್ರಕೃತೇಃ ಪ್ರೋಕ್ತಃ ಪುರುಷಃ ಪಂಚವಿಂಶಕಃ ।
ಸ ಏವ ಸರ್ವಭೂತಾತ್ಮಾ ನರ ಇತ್ಯಭಿಧೀಯತೇ ॥೬॥

ಪ್ರಕೃತಿಗಿಂತ ಉತ್ತಮನಾದ, ಇಪ್ಪತ್ತೈದನೆಯ ತತ್ತ್ವವಾದ, ಸರ್ವಭೂತಸ್ವಾಮಿಯಾದ ಯಾವ ಪುರುಷನಿದ್ದಾನೆಯೋ ಅವನೇ ನರನೆಂದು ಹೇಳಲ್ಪಡುತ್ತಾನೆ.

ನರಾಜ್ಜಾತಾನಿ ತತ್ತ್ವಾನಿ ನಾರಾಣೀತಿ ತತೋ ವಿದುಃ ।
ತಾನ್ಯೇವ ಚಾಯನಂ ತಸ್ಯ ತೇನ ನಾರಾಯಣಃ ಸ್ಮೃತಃ ॥೭॥

ನರನಿಂದ ಜಾತವಾದ ತತ್ತ್ವಗಳು (ಜಡವು) ನಾರ ಎಂದು ಹೇಳಲ್ಪಡುತ್ತವೆ. ನಾರವೇ (ಜಲವೇ) ಆಯನವಾದ ಕಾರಣದಿಂದ ಅವನನ್ನು ನಾರಾಯಣ ಎಂದು ಹೇಳುತ್ತಾರೆ.

ನಾರಾಯಣಾಜ್ಜಗತ್ಸರ್ವಂ ಸರ್ಗಕಾಲೇ ಪ್ರಜಾಯತೇ ।
ತಸ್ಮಿನ್ನೇವ ಪುನಸ್ತಚ್ಚ ಪ್ರಲಯೇ ಸಂಪ್ರಲೀಯತೇ ॥೮೪॥

ಸೃಷ್ಟಿಕಾಲದಲ್ಲಿ ಜಗತ್ತೆಲ್ಲವೂ ನಾರಾಯಣನಿಂದಲೇ ಜನಿಸುತ್ತದೆ. ಪುನಃ ಪ್ರಳಯಕಾಲದಲ್ಲಿ ಅವನಲ್ಲಿಯೇ ಲಯವನ್ನು ಹೊಂದುತ್ತದೆ.

ನಾರಾಯಣಃ ಪರಂ ಬ್ರಹ್ಮ ತತ್ತ್ವಂ ನಾರಾಯಣಃ ಪರಃ ।
ಪರಾದಪಿ ಪರಶ್ಚಾಸೌ ತಸ್ಮಾನ್ನಾಸ್ತಿ ಪರಾತ್ಪರಮ್ ॥೯॥

ನಾರಾಯಣನೇ ಪರಬ್ರಹ್ಮ. ಅವನೇ ಪರತತ್ತ್ವ. ಅವನು ಪರಕ್ಕಿಂತಲೂ ಪರನಾದವನು. ಪರನಾದ ಅವನಿಗಿಂತಲೂ ಶ್ರೇಷ್ಠನಾದವನು ಯಾವನೂ ಇಲ್ಲ.

ವಾಸುದೇವಂ ತಥಾ ವಿಷ್ಣುಮಾತ್ಮಾನಂ ಚ ತಥಾ ವಿದುಃ ।
ಸಂಜ್ಞಾಭೇದೈಃ ಸ ಏವೈಕಃ ಸರ್ವಶಾಸ್ತ್ರಾಭಿಸಂಸ್ಕೃತಃ ॥೧೦॥

ಅವನನ್ನು ವಾಸುದೇವನೆಂದೂ, ವಿಷ್ಣುವೆಂದೂ, ಆತ್ಮನೆಂದೂ ಕರೆಯುತ್ತಾರೆ. ಈ ಸಂಜ್ಞಾಭೇದದಿಂದ ಅವನೊಬ್ಬನೇ ಸರ್ವಶಾಸ್ತ್ರಗಳಿಂದಲೂ ಪೂಜಿಸಲ್ಪಡುತ್ತಾನೆ.

ಆಲೋಡ್ಯ ಸರ್ವಶಾಸ್ತ್ರಾಣಿ ವಿಚಾರ್ಯ ಚ ಪುನಃ ಪುನಃ ।
ಇದಮೇಕಂ ಸುನಿಷ್ಪನ್ನಂ ಧ್ಯೇಯೋ ನಾರಾಯಣಃ ಸದಾ ॥೧೧॥

ಎಲ್ಲ ಶಾಸ್ತ್ರಗಳನ್ನೂ ಆಲೋಡನೆಯನ್ನು ಮಾಡಿ ಪುನಃ ಪುನಃ ವಿಮರ್ಶೆ ಮಾಡಿದರೆ ನಾರಾಯಣನೇ ಸದಾ ಧ್ಯೇಯನಾದವನು ಎಂಬ ಈ ಮುಖ್ಯವಾದ ಒಂದು ತತ್ತ್ವವು ಚೆನ್ನಾಗಿ ಹೊರಬೀಳುತ್ತದೆ.

ತಸ್ಮಾತ್ ತ್ವಂ ಗಹನಾನ್ಸರ್ವಾಂಸ್ತ್ಯಕ್ತ್ವಾ ಶಾಸ್ತ್ರಾರ್ಥವಿಸ್ತರಾನ್ ।
ಅನನ್ಯಚೇತಾ ಧ್ಯಾಯಸ್ವ ನಾರಾಯಣಮಜಂ ವಿಭುಮ್ ॥೧೨॥

ಆದ್ದರಿಂದ ನೀನು ಗಹನವಾದ ಎಲ್ಲ ಶಾಸ್ತ್ರಾರ್ಥ ವಿಚಾರವನ್ನು ಬಿಟ್ಟು ಅನನ್ಯವಾದ ಮನಸ್ಸಿನಿಂದ ಜನ್ಮರಹಿತನೂ, ವ್ಯಾಪ್ತನೂ ಆದ ನಾರಾಯಣನನ್ನು ಧ್ಯಾನಿಸು.

ಮುಹೂರ್ತಮಪಿ ಯೋ ಧ್ಯಾಯೇನ್ನಾರಾಯಣಮತಂದ್ರಿತಃ ।
ಸೋಽಪಿ ತದ್ಗತಿಮಾಪ್ನೋತಿ ಕಿಂ ಪುನಸ್ತತ್ಪರಾಯಣಃ ॥೧೩॥

ಒಂದು ಮುಹೂರ್ತವಾದರೂ ಆಲಸ್ಯವಿಲ್ಲದೆ ನಾರಾಯಣನನ್ನು ಧ್ಯಾನ ಮಾಡಿದವನೂ ಅವನ ಗತಿಯನ್ನು ಹೊಂದುತ್ತಾನೆ. ಇನ್ನು ನಾರಾಯಣ ಪರಾಯಣರಾದವರ ವಿಷಯದಲ್ಲಿ ಏನು ಹೇಳಬೇಕು?

ನಮೋ ನಾರಾಯಣಾಯೇತಿ ಯೋ ವೇದ ಬ್ರಹ್ಮ ಶಾಶ್ವತಮ್ ।
ಅಂತಕಾಲೇ ಜಪನ್ನೇತಿ ತದ್ ವಿಷ್ಣೋಃ ಪರಮಂ ಪದಮ್ ॥೧೪॥

'ನಮೋ ನಾರಾಯಣಾಯ' ಎಂಬ ಶಾಶ್ವತವಾದ ವೇದಮಂತ್ರದ ಅರ್ಥವನ್ನು ತಿಳಿದು, ಅಂತ್ಯಕಾಲದಲ್ಲಿ ಅದನ್ನು ಜಪಿಸುವವನು ವಿಷ್ಣುವಿನ ಪರಮಸ್ಥಾನಕ್ಕೆ ಹೋಗುತ್ತಾನೆ.

ಶ್ರವಣಾತ್ ಮನನಾಚ್ಚೈವ ಗೀತಿಸ್ತುತ್ಯರ್ಚನಾದಿಭಿಃ ।
ಆರಾಧ್ಯಂ ಸರ್ವದಾ ಬ್ರಹ್ಮ ಪುರುಷೇಣ ಹಿತೈಷಿಣಾ ॥೧೫॥

ಆತ್ಮಹಿತವನ್ನು ಬಯಸುವ ಪುರುಷನು ಶ್ರವಣದಿಂದ, ಮನನದಿಂದ, ಗಾನದಿಂದ, ಸ್ತೋತ್ರದಿಂದ ಮತ್ತು ಅರ್ಚನಾದಿಗಳಿಂದ ಯಾವಾಗಲೂ ಆ ಬ್ರಹ್ಮನನ್ನು ಆರಾಧಿಸಬೇಕು.

ಲಿಪ್ಯತೇ ನ ಸ ಪಾಪೇನ ನಾರಾಯಣಪರಾಯಣಃ ।
ಪುನಾತಿ ಸಕಲಂ ಲೋಕಂ ಸಹಸ್ರಾಂಶುರಿವೋದಿತಃ ॥೧೬॥

ನಾರಾಯಣ ಪರಾಯಣನಾದವನಿಗೆ ಪಾಪಗಳ ಲೇಪವಾಗುವುದಿಲ್ಲ. ಅವನು ಉದಯಿಸಿದ ಸೂರ್ಯನಂತೆ ಎಲ್ಲ ಲೋಕಗಳನ್ನೂ ಪವಿತ್ರಗೊಳಿಸುತ್ತಾನೆ.

ಬ್ರಹ್ಮಚಾರೀ ಗೃಹಸ್ಥೋಽಪಿ ವಾನಪ್ರಸ್ಥೋಽಥ ಭಿಕ್ಷುಕಃ ।
ಕೇಶವಾರಾಧನಂ ಹಿತ್ವಾ ನೈವ ಯಾತಿ ಪರಾಂ ಗತಿಮ್ ॥೧೭॥

ಬ್ರಹ್ಮಚಾರಿಯಾಗಲೀ, ಗೃಹಸ್ಥನಾಗಲೀ, ವಾನಪ್ರಸ್ಥನಾಗಲೀ, ಸಂನ್ಯಾಸಿಯಾಗಲೀ ಕೇಶವಾರಾಧನೆಯನ್ನು ಬಿಟ್ಟು ಯಾರೂ ಸದ್ಗತಿಯನ್ನು ಹೊಂದುವುದಿಲ್ಲ.

ಜನ್ಮಾಂತರಸಹಸ್ರೇಷು ದುರ್ಲಭಾ ತದ್ಗತಾ ಮತಿಃ ।
ತದ್ ಭಕ್ತವತ್ಸಲಂ ದೇವಂ ಸಮಾರಾಧಯ ಸುವ್ರತ ॥೧೮॥

ಸಹಸ್ರಜನ್ಮಗಳಲ್ಲಿ ನಾರಾಯಣನ ಮತಿಯು ದೊರಕುವುದು ದುರ್ಲಭವಾದುದು. ಆದ್ದರಿಂದ ಎಲೈ ಸುವ್ರತನೇ, ಭಕ್ತವತ್ಸಲನಾದ ಆ ದೇವನನ್ನು ಆರಾಧಿಸು.

ಭೀಷ್ಮಃ

ನಾರದೇನೈವಮುಕ್ತಸ್ತು ಸ ವಿಪ್ರೋಽಭ್ಯರ್ಚಯದ್ ಹರಿಮ್ ।
ಸ್ವಪ್ನೇಽಪಿ ಪುಂಡರೀಕಾಕ್ಷಂ ಶಂಖಚಕ್ರಗದಾಧರಮ್ ॥೧೯॥

ಕಿರೀಟಕುಂಡಲಧರಂ ಲಸಚ್ಛ್ರೀವತ್ಸಕೌಸ್ತುಭಮ್ ।
ತಂ ದೃಷ್ಟ್ವಾ ದೇವದೇವೇಶಂ ಪ್ರಾಣಮತ್ ಸಂಭ್ರಮಾನ್ವಿತಃ ॥೨೦॥

ಭೀಷ್ಮ– ನಾರದರಿಂದ ಹೀಗೆ ಹೇಳಲ್ಪಟ್ಟ ಆ ಪುಂಡರೀಕ ಬ್ರಾಹ್ಮಣನು ಹರಿಯನ್ನು ಅರ್ಚಿಸಿ, ಶಂಖ-ಚಕ್ರ-ಗದಾಧಾರಿಯಾದ, ಕಿರೀಟ-ಕುಂಡಲಧಾರಿಯಾದ ಆ ಪುಂಡರೀಕಾಕ್ಷನನ್ನು ಸ್ವಪ್ನದಲ್ಲಿಯೂ ನೋಡಿ, ದೇವದೇವೇಶನಾದ ಅವನಿಗೆ ಸಂಭ್ರಮದಿಂದ ನಮಸ್ಕಾರವನ್ನು ಮಾಡಿದನು.

ಅಥ ಕಾಲೇನ ಮಹತಾ ತಥಾ ಪ್ರತ್ಯಕ್ಷತಾಂಗತಃ ।
ಸಂಸ್ತುತಃ ಸ್ತುತಿಭಿರ್ವೇದ್ಯೈರ್ದೇವಗಂಧರ್ವಕಿನ್ನರೈಃ ॥೨೧॥

ಅನಂತರ ಬಹುಕಾಲವು ಕಳೆದ ಮೇಲೆ ಅದೇ ರೂಪದಲ್ಲಿ ನಾರಾಯಣನು ಅವನಿಗೆ ಪ್ರತ್ಯಕ್ಷನಾದನು. ಅವನು ದೇವ-ಗಂಧರ್ವ-ಕಿನ್ನರರಿಂದ, ವೇದೋಕ್ತ ಸ್ತೋತ್ರಗಳಿಂದ ಸಂಸ್ತುತನಾದನು.

ಅಥ ತೇನೈವ ಭಗವಾನಾತ್ಮಲೋಕಮಧೋಕ್ಷಜಃ ।
ಗತಃ ಸಂಪೂಜಿತಃ ಸರ್ವೈಃ ಸ ಯೋಗಿನಿಲಯೋ ಹರಿಃ ॥೨೨॥

ಅನಂತರ ಯೋಗಿನಿಲಯನೂ, ಅಧೋಕ್ಷಜನೂ ಆದ ಹರಿಯು ಎಲ್ಲರಿಂದಲೂ ಪೂಜಿಸಲ್ಪಟ್ಟು, ಪುಂಡರೀಕ ಬ್ರಾಹ್ಮಣನ ಜೊತೆಯಲ್ಲಿ ತನ್ನ ಲೋಕಕ್ಕೆ ಹೋದನು.

ತಸ್ಮಾತ್ ತ್ವಮಪಿ ರಾಜೇಂದ್ರ ತದ್ಭಕ್ತಸ್ತತ್ಪರಾಯಣಃ ।
ಅರ್ಚಯಿತ್ವಾ ಯಥಾಯೋಗಂ ಭಜಸ್ವ ಪುರುಷೋತ್ತಮಮ್ ॥೨೩॥

ಆದ್ದರಿಂದ ಎಲೈ ರಾಜನೇ, ನೀನೂ ಸಹ ನಾರಾಯಣ ಭಕ್ತನಾಗಿ, ನಾರಾಯಣ ಪರಾಯಣನಾಗಿ, ನಿನ್ನ ಯೋಗ್ಯತೆಗೆ ಅನುಗುಣವಾಗಿ ಪುರುಷೋತ್ತಮನನ್ನು ಪೂಜಿಸಿ ಭಜಿಸು.

ಅಜರಮಮರಮೇಕಂ ಧ್ಯೇಯಮಾದ್ಯಂತಶೂನ್ಯಂ
ಸಗುಣಮಗುಣಮಾದ್ಯಂ ಸ್ಥೂಲಮತ್ಯಂತಸೂಕ್ಷ್ಮಮ್ ।
ನಿರುಪಮಮುಪಮೇಯಂ ಯೋಗಿವಿಜ್ಞಾನಗಮ್ಯಂ
ತ್ರಿಭುವನಗುರುಮೀಶಂ ತ್ವಂ ಪ್ರಪದ್ಯಸ್ವ ವಿಷ್ಣುಮ್ ॥೨೪॥

ಜರಾ-ಮರಣರಹಿತನೂ, ಸರ್ವಪ್ರಧಾನನೂ, ಜ್ಞಾನಗೋಚರನೂ, ಆದ್ಯಂತ ಶೂನ್ಯನೂ, ಅಪ್ರಾಕೃತ ಗುಣವಂತನೂ, ಪ್ರಾಕೃತಗುಣರಹಿತನೂ, ಜಗತ್ತಿನ ಸೃಷ್ಟಿಗಿಂತಲೂ ಮೊದಲು ಇರುವವನೂ, ಸ್ಥೂಲನಾದವನೂ, ಅತ್ಯಂತ ಸೂಕ್ಷ್ಮನಾದವನೂ, ಅಸದೃಶನಾದವನೂ, ಎಲ್ಲದಕ್ಕೂ ದೃಷ್ಟಾಂತವಾದವನೂ, ಯೋಗಿಗಳ ಜ್ಞಾನಕ್ಕೆ ವಿಷಯನಾದವನೂ, ಮೂರುಲೋಕದ ಗುರುವೂ ಆದ ಆ ವಿಷ್ಣುವನ್ನು ಶರಣು ಹೊಂದು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಪುಂಡರೀಕ-ನಾರದಸಂವಾದೇ
ನಾರಾಯಣಸ್ಯ ಸರ್ವೋತ್ತಮತ್ವಕಥನಂ ನಾಮ ಪಂಚಸಪ್ತತ್ಯುತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಎಪ್ಪತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಪ್ಪತ್ತಾರನೆಯ ಅಧ್ಯಾಯ

ಸಾಮೋಪಾಯ ಪ್ರಶಂಸೆ

ಯುಧಿಷ್ಠಿರಃ

ಸಾಮ್ನಾ ವಾಪಿ ಪ್ರದಾನೇ ವಾ ಜ್ಯಾಯಃ ಕಿಂ ಭವತೋ ಮತಮ್ ।
ಪ್ರಬ್ರೂಹಿ ಭರತಶ್ರೇಷ್ಠ ಯದತ್ರ ವ್ಯತಿರಿಚ್ಯತೇ ॥೧॥

ಯುಧಿಷ್ಠಿರ– ಎಲೈ ಭರತಶ್ರೇಷ್ಠನೇ, ಸಾಮೋಪಾಯ ಮತ್ತು ದಾನೋಪಾಯಗಳಲ್ಲಿ ನಿನ್ನ ಅಭಿಪ್ರಾಯದಲ್ಲಿ ಯಾವುದು ಶ್ರೇಷ್ಠವಾದುದು? ಯಾವುದು ಇನ್ನೊಂದನ್ನು ಮೀರಿಸುತ್ತದೆ?

ಭೀಷ್ಮಃ

ಸಾಮ್ನಾ ಪ್ರಸಾದ್ಯತೇ ಕಶ್ಚಿದ್ ದಾನೇನ ಚ ತಥಾऽಪರಃ ।
ಪುರುಷಃ ಪ್ರಕೃತಿಂ ಜ್ಞಾತ್ವಾ ತಯೋರೇಕತರಂ ಭಜೇತ್ ॥೨॥

ಭೀಷ್ಮ– ಒಬ್ಬನನ್ನು ಸಾಮೋಪಾಯದಿಂದ ಸಮಾಧಾನಗೊಳಿಸಬಹುದು. ಇನ್ನೊಬ್ಬನನ್ನು ದಾನೋಪಾಯದಿಂದ ಸಮಾಧಾನಗೊಳಿಸಬಹುದು. ಪುರುಷನು ಅವನ ಸ್ವಭಾವವನ್ನು ತಿಳಿದು ಎರಡರಲ್ಲಿ ಒಂದು ಉಪಾಯವನ್ನು ಪ್ರಯೋಗಿಸಬೇಕು.

ಗುಣಾಂಸ್ತು ಶೃಣು ಮೇ ರಾಜನ್ ಸಾಂತ್ವಸ್ಯ ಭರತರ್ಷಭ ।
ದಾರುಣಾನ್ಯಪಿ ಭೂತಾನಿ ಸಾಂತ್ವೇನಾರಾಧಯೇದ್ ಯಥಾ ॥೩॥

ಎಲೈ ಭರತರ್ಷಭನೇ, ರಾಜನೇ, ಭಯಂಕರವಾದವರನ್ನೂ ಸಾಮೋಪಾಯದಿಂದ ಸಂತೋಷಪಡಿಸುವಂತಹ ಸಾಮೋಪಾಯದ ಗುಣಗಳನ್ನು ಕೇಳು.

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಗೃಹೀತ್ವಾ ರಕ್ಷಸಾ ಮುಕ್ತೋ ದ್ವಿಜಾತಿಃ ಕಾನನೇ ಯಥಾ ॥೪॥

ಈ ವಿಷಯದಲ್ಲಿಯೂ ಸಹ ಕಾಡಿನಲ್ಲಿ ಒಬ್ಬ ಬ್ರಾಹ್ಮಣನು ರಾಕ್ಷಸನಿಂದ ಹಿಡಿಯಲ್ಪಟ್ಟು ಮುಕ್ತನಾದ ಈ ಒಂದು ಪುರಾತನವಾದ ಇತಿಹಾಸವನ್ನು ಹೇಳುತ್ತಾರೆ.

ಕಶ್ಚಿತ್ತು ಬುದ್ಧಿಸಂಪನ್ನೋ ಬ್ರಾಹ್ಮಣೋ ವಿಜನೇ ವನೇ ।
ಗೃಹೀತಃ ಕೃಚ್ಛ್ರಮಾಪನ್ನೋ ರಕ್ಷಸಾ ಭಕ್ಷಯಿಷ್ಯತಾ ॥೫॥

ಬುದ್ಧಿಸಂಪನ್ನನಾದ ಒಬ್ಬ ಬ್ರಾಹ್ಮಣನು ನಿರ್ಜನವಾದ ವನದಲ್ಲಿ ತನ್ನನ್ನು ತಿನ್ನಲು ಬಯಸಿದ ಒಬ್ಬ ರಾಕ್ಷಸನಿಂದ ಹಿಡಿಯಲ್ಪಟ್ಟು ಕಷ್ಟಕ್ಕೆ ಸಿಲುಕಿದನು.

ಸ ಬುದ್ಧಿಶ್ರುತಸಂಪನ್ನಸ್ತಂ ದೃಷ್ಟ್ವಾ ತೀವ ಭೀಷಣಮ್ ।
ಸಾಮೈವಾಸ್ಮಿನ್ ಪ್ರಯುಯುಜೇ ನ ಮುಮೋಹ ನ ವಿವ್ಯಥೇ ॥೬॥

ಬುದ್ಧಿವಿದ್ಯಾಸಂಪನ್ನನಾದ ಅವನು ಬಹಳ ಭಯಂಕರನಾದ ರಾಕ್ಷಸನನ್ನು ನೋಡಿ ಮೋಹಗೊಳ್ಳದೆ, ವ್ಯಥೆ ಪಡದೆ ಸಾಮೋಪಾಯವನ್ನೇ ಪ್ರಯೋಗಿಸಿದನು.

ರಕ್ಷಸ್ತು ವಾಚಾ ಸಂಪೂಜ್ಯ ಪ್ರಶ್ನಂ ಪಪ್ರಚ್ಛ ತಂ ದ್ವಿಜಮ್ ।
ಮೋಕ್ಷ್ಯಸೇ ಬ್ರೂಹಿ ಮೇ ಪ್ರಶ್ನಂ ಕೇನಾಸ್ಮಿ ಹರಿಣಃ ಕೃಶಃ ॥೭॥

ರಾಕ್ಷಸನು ಮಾತುಗಳಿಂದ ಬ್ರಾಹ್ಮಣನನ್ನು ಪೂಜಿಸಿ ಅವನನ್ನು ಕುರಿತು- 'ನನ್ನ ಪ್ರಶ್ನೆಗೆ ಉತ್ತರವನ್ನು ಹೇಳಿದರೆ ನಿನ್ನನ್ನು ಬಿಡುತ್ತೇನೆ. ನಾನು ಏಕೆ ಕೃಶನೂ, ಹರಿಣನೂ (ಬಿಳುಚಿಕೊಂಡಿರುವವನು), ವರ್ಣಹೀನನಾಗಿರುವವನೂ ಆಗಿದ್ದೇನೆಂದು ಹೇಳು' ಎಂದು ಕೇಳಿದನು.

ಮುಹೂರ್ತಮಥ ಸಂಚಿಂತ್ಯ ಬ್ರಾಹ್ಮಣಸ್ತಸ್ಯ ರಕ್ಷಸಃ ।
ಆಭಿರ್ಗಾಥಾಭಿರವ್ಯಗ್ರಃ ಪ್ರಶ್ನಂ ಪ್ರತಿಜಗಾದ ಹ ॥೮॥

ಆ ಬ್ರಾಹ್ಮಣನು ಆ ರಾಕ್ಷಸನ ಪ್ರಶ್ನೆಯನ್ನು ಒಂದು ಮುಹೂರ್ತದ ಕಾಲ ಚಿಂತಿಸಿ ಗಾಬರಿಗೊಳ್ಳದೆ ಈ ಗೀತೆಗಳಿಂದ ಅವನ ಪ್ರಶ್ನೆಗೆ ಉತ್ತರವನ್ನು ಹೇಳಿದನು.

ವಿದೇಶಸ್ಥೋ ವಿಲೋಕಸ್ಥೋ ವಿನಾ ನೂನಂ ಸುಹೃಜ್ಜನೈಃ ।
ವಿಷಯಾನತುಲಾನ್ ಭುಂಕ್ಷೇ ತೇನಾಸಿ ಹರಿಣಃ ಕೃಶಃ ॥೯॥

ನೀನು ಅನ್ಯಲೋಕದಲ್ಲಿ ಅನ್ಯದೇಶದಲ್ಲಿದ್ದು ಸುಹೃಜ್ಜನರಿಂದ ರಹಿತನಾಗಿ ಒಳ್ಳೆಯ ವಿಷಯಗಳನ್ನು ಭೋಗಿಸುತ್ತಿದ್ದೀಯೆ. ಆದ್ದರಿಂದ ಹರಿಣನೂ, ಕೃಶನೂ ಆಗಿದ್ದೀಯೆ.

ನೂನಂ ಮಿತ್ರಾಣಿ ತೇ ರಕ್ಷಃ ಸಾಧೂಪಚರಿತಾನ್ಯಪಿ ।
ಸ್ವದೋಷಾದಪರಜ್ಯಂತೇ ತೇನಾಸಿ ಹರಿಣಃ ಕೃಶಃ ॥೧೦॥

ಎಲೈ ರಾಕ್ಷಸನೇ, ನೀನು ನಿನ್ನ ಮಿತ್ರರನ್ನು ಚೆನ್ನಾಗಿ ಉಪಚರಿಸಿದರೂ ಅವರು ತಮ್ಮ ದೋಷದಿಂದಲೇ ನಿನ್ನನ್ನು ಬಿಟ್ಟುಹೋಗುತ್ತಾರೆ. ಆದ್ದರಿಂದ ಹರಿಣನೂ, ಕೃಶನೂ ಆಗಿದ್ದೀಯೆ.

ಧನೈಶ್ವರ್ಯಾಧಿಕಾಃ ಸ್ತಬ್ಧಾಸ್ತ್ವದ್ಗುಣೈಃ ಪರಮಾವರಾಃ ।
ಅವಜಾನಂತಿ ನೂನಂ ತ್ವಾಂ ತೇನಾಸಿ ಹರಿಣಃ ಕೃಶಃ ॥೧೧॥

ನಿನಗಿಂತ ಗುಣದಲ್ಲಿ ಅಧಮರಾದವರು ಧನೈಶ್ವರ್ಯಾದಿಗಳಿಂದ ಅಧಿಕರಾಗಿ ಅಹಂಕಾರಿಗಳಾಗಿ ನಿನ್ನನ್ನು ಅವಮಾನ ಮಾಡುತ್ತಾರೆ. ಆದ್ದರಿಂದ ಹರಿಣನೂ, ಕೃಶನೂ ಆಗಿದ್ದೀಯೆ.

ಗುಣವಾನ್ ವಿಗುಣಾನನ್ಯಾನ್ ನೂನಂ ಪಶ್ಯಸಿ ಸತ್ಕೃತಾನ್ ।
ಪ್ರಾಜ್ಞೋಽಪ್ರಾಜ್ಞಾನ್ ವಿನೀತಾತ್ಮಾ ತೇನಾಸಿ ಹರಿಣಃ ಕೃಶಃ ॥೧೨॥

ಗುಣವಂತನಾದ ನೀನು ಗುಣಹೀನರಾದ ಅನ್ಯರು ಸತ್ಕರಿಸಲ್ಪಡುವುದನ್ನೂ, ವಿನಯವಂತನೂ ಪ್ರಾಜ್ಞನೂ ಆದ ನೀನು ಅಪ್ರಾಜ್ಞರು ಸತ್ಕರಿಸಲ್ಪಡುವುದನ್ನೂ ನೋಡುತ್ತಿದ್ದೀಯೆ. ಆದ್ದರಿಂದ ಹರಿಣನೂ, ಕೃಶನೂ ಆಗಿದ್ದೀಯೆ.

ಅವೃತ್ತ್ಯಾ ಕ್ಲಿಶ್ಯಮಾನೋಽಪಿ ವೃತ್ತ್ಯುಪಾಯಾನ್ ವಿಗರ್ಹಯನ್ ।
ಮಾಹಾತ್ಮ್ಯಾದ್ ವ್ಯಥಸೇ ನೂನಂ ತೇನಾಸಿ ಹರಿಣಃ ಕೃಶಃ ॥೧೩॥

ಜೀವನೋಪಾಯವಿಲ್ಲದೆ ಕ್ಲೇಶಪಡುತ್ತಿದ್ದರೂ ಜೀವನೋಪಾಯವನ್ನು ಅವಲಂಬಿಸುವುದನ್ನು ನಿನ್ನ ಮಹಾತ್ಮ್ಯೆಯಿಂದ ನಿಂದಿಸುತ್ತಾ ವ್ಯಥೆಪಡುತ್ತಿದ್ದೀಯೆ. ಆದ್ದರಿಂದ ಹರಿಣನೂ, ಕೃಶನೂ ಆಗಿದ್ದೀಯೆ.

ಸಂಪೀಡ್ಯಾತ್ಮಾನಮಾರ್ಯತ್ವಾತ್ ತ್ವಯಾ ಕಶ್ಚಿದುಪಸೃತಃ ।
ಜಿತಂ ತ್ವಾಂ ಮನ್ಯತೇ ಸಾಧೋ ತೇನಾಸಿ ಹರಿಣಃ ಕೃಶಃ ॥೧೪॥

ಶ್ರೇಷ್ಠಗುಣವನ್ನು ಹೊಂದಿರುವುದರಿಂದ ನಿನ್ನನ್ನೇ ನೀನು ಕ್ಲೇಶಗೊಳಿಸಿ ಒಬ್ಬರಿಗೆ ಉಪಕಾರವನ್ನು ಮಾಡಿದ್ದೀಯೆ. ಎಲೈ ಸಜ್ಜನನೇ, ಅವನು ನಿನ್ನನ್ನು ಪರಾಜಿತನೆಂದು ತಿಳಿಯುತ್ತಾನೆ. ಆದ್ದರಿಂದ ಹರಿಣನೂ, ಕೃಶನೂ ಆಗಿದ್ದೀಯೆ.

ಕ್ಲಿಶ್ಯಮಾನಾನ್ ವಿಮಾರ್ಗೇಷು ಕಾಮಕ್ರೋಧಾವೃತಾತ್ಮನಃ ।
ಮನ್ಯೇ ನು ಧ್ಯಾಯಸಿ ಜನಾಂಸ್ತೇನಾಸಿ ಹರಿಣಃ ಕೃಶಃ ॥೧೫॥

ಕಾಮ-ಕ್ರೋಧಕ್ಕೆ ವಶರಾಗಿ, ದುರ್ಮಾರ್ಗದಲ್ಲಿ ಕ್ಲೇಶಪಡುವ ಜನರನ್ನು ಕುರಿತು ನೀನು ಚಿಂತಿಸುತ್ತಿದ್ದೀಯೆ ಎಂದು ನಾನು ತಿಳಿಯುತ್ತೇನೆ. ಆದ್ದರಿಂದ ಹರಿಣನೂ, ಕೃಶನೂ ಆಗಿದ್ದೀಯೆ.

ಪ್ರಾಜ್ಞೈಃ ಸಂಭಾವಿತೋ ನೂನಂ ನಪ್ರಾಜ್ಞೈರುಪಸಂಹಿತಃ ।
ಹ್ರೀಮಾನಮರ್ಷೀ ದುರ್ವೃತ್ತೈಸ್ತೇನಾಸಿ ಹರಿಣಃ ಕೃಶಃ ॥೧೬॥

ಪ್ರಾಜ್ಞರಿಂದ ಸಂಭಾವಿತನಾದ ನೀನು ದುರ್ನಡತೆಯುಳ್ಳವರಿಂದ ಮತ್ತು ಅವಿವೇಕಿಗಳಾದವರಿಂದ ನಿಂದಿಸಲ್ಪಡುತ್ತಿದ್ದೀಯೆ. ನಾಚಿಕೆಯುಳ್ಳವನೂ ಮತ್ತು ಕೋಪವುಳ್ಳವನೂ ಆದ ನೀನು ಹರಿಣನೂ, ಕೃಶನೂ ಆಗಿದ್ದೀಯೆ.

ನೂನಂ ಮಿತ್ರಮುಖಃ ಶತ್ರುಃ ಕಶ್ಚಿದಾರ್ಯವದಾಚರನ್ ।
ವಂಚಯಿತ್ವಾ ಗತಸ್ತ್ವಾಂ ವೈ ತೇನಾಸಿ ಹರಿಣಃ ಕೃಶಃ ॥೧೭॥

ಖಂಡಿತವಾಗಿ ಮಿತ್ರಮುಖವನ್ನು ಹಾಕಿಕೊಂಡು ಒಬ್ಬ ಶತ್ರುವು ಆರ್ಯನಂತೆ ಆಚರಿಸುತ್ತಾ ನಿನಗೆ ಮೋಸವನ್ನು ಮಾಡಿ ಹೋಗಿದ್ದಾನೆ. ಆದ್ದರಿಂದ ಹರಿಣನೂ, ಕೃಶನೂ ಆಗಿದ್ದೀಯೆ.

ಪ್ರಕಾಶಾರ್ಥಗತಿರ್ನೂನಂ ರಹಸ್ಯಕುಶಲಃ ಕೃತೀ ।
ತಜ್ಞೈರ್ನ ಪೂಜ್ಯಸೇ ನೂನಂ ತೇನಾಸಿ ಹರಿಣಃ ಕೃಶಃ ॥೧೮॥

ಪ್ರಯತ್ನಶೀಲನಾಗಿ ಯಾವುದನ್ನೂ ಮುಚ್ಚಿಡದೆ ಮಾತನಾಡುವ ನೀನು ರಹಸ್ಯ ಮಾತುಗಳಲ್ಲಿ ಕುಶಲನಾಗಿಲ್ಲ. ಅದನ್ನು ತಿಳಿದವರು ನಿನ್ನನ್ನು ಪೂಜಿಸುವುದಿಲ್ಲ. ಆದ್ದರಿಂದ ಹರಿಣನೂ, ಕೃಶನೂ ಆಗಿದ್ದೀಯೆ.

ಅಸತ್ಸು ವಿನಿವಿಷ್ಟೇಷು ಬ್ರುವತೋ ಮುಕ್ತಸಂಶಯಮ್ ।
ಗುಣಾಸ್ತೇ ನ ವಿರಾಜಂತೇ ತೇನಾಸಿ ಹರಿಣಃ ಕೃಶಃ ॥೧೯॥

ದುಷ್ಟಜನರು ಕುಳಿತಿರುವಲ್ಲಿ ನೀನು ಯಾವ ಸಂಕೋಚವೂ ಇಲ್ಲದೆ ಮಾತನಾಡುತ್ತೀಯೆ. ಆದರಿಂದ ನಿನ್ನ ಗುಣಗಳು ಪ್ರಕಾಶಿಸುವುದಿಲ್ಲ. ಆದ್ದರಿಂದ ಹರಿಣನೂ, ಕೃಶನೂ ಆಗಿದ್ದೀಯೆ.

ಧನಬುದ್ಧಿಶ್ರುತೈರ್ಹೀನಃ ಕೇವಲಂ ತೇಜಸಾಽನ್ವಿತಃ ।
ಮಹತ್ ಪ್ರಾರ್ಥಯಸೇ ನೂನಂ ತೇನಾಸಿ ಹರಿಣಃ ಕೃಶಃ ॥೨೦॥

ಧನ-ಬುದ್ಧಿ-ವಿದ್ಯೆಗಳಿಂದ ಹೀನನಾಗಿ, ಕೇವಲ ಪರಾಕ್ರಮವನ್ನು ಮಾತ್ರ ಹೊಂದಿ ದೊಡ್ಡವನಾಗಲು ಆಶಿಸುತ್ತಿದ್ದೀಯೆ. ಆದ್ದರಿಂದ ಹರಿಣನೂ, ಕೃಶನೂ ಆಗಿದ್ದೀಯೆ.

ತಪಃಪ್ರಣಿಹಿತಾತ್ಮಾನಂ ಮನ್ಯೇ ತ್ವಾರಣ್ಯಕಾಂಕ್ಷಿಣಮ್ ।
ಬಂಧುವರ್ಗೋ ನ ಗೃಹ್ಣಾತಿ ತೇನಾಸಿ ಹರಿಣಃ ಕೃಶಃ ॥೨೧॥

ತಪಸ್ಸಿನಲ್ಲಿ ಆಸಕ್ತವಾದ ಮನಸ್ಸುಳ್ಳವನಾಗಿ ಅರಣ್ಯವಾಸವನ್ನು ಬಯಸುವ ನಿನ್ನನ್ನು ನಿನ್ನ ಬಂಧುವರ್ಗವು ಸ್ವೀಕರಿಸುತ್ತಿಲ್ಲ. ಆದ್ದರಿಂದ ಹರಿಣನೂ, ಕೃಶನೂ ಆಗಿದ್ದೀಯೆ.

ನೂನಮರ್ಥವತಾಂ ಮಧ್ಯೇ ತವ ವಾಕ್ಯಮನುತ್ತಮಮ್ ।
ನ ಭಾತಿ ಕಾಲೇಽಭಿಹಿತಂ ತೇನಾಸಿ ಹರಿಣಃ ಕೃಶಃ ॥೨೨॥

ಧನವಂತರ ಮಧ್ಯದಲ್ಲಿ ಯೋಗ್ಯವಾದ ಕಾಲದಲ್ಲಿ ನೀನು ಆಡುವ ಶ್ರೇಷ್ಠವಾದ ಮಾತುಗಳು ಅವರಿಗೆ ಹಿಡಿಸುತ್ತಿಲ್ಲ. ಆದ್ದರಿಂದ ಹರಿಣನೂ, ಕೃಶನೂ ಆಗಿದ್ದೀಯೆ.

ದೃಷ್ಟಪೂರ್ವಂ ಶ್ರುತಪೂರ್ವಂ ಕುಪಿತಂ ಹೃದಯಪ್ರಿಯಮ್ ।
ಅನುನೇತುಂ ನ ಶಕ್ನೋಷಿ ತೇನಾಸಿ ಹರಿಣಃ ಕೃಶಃ ॥೨೩॥

ಹಿಂದೆ ನೋಡಿದ, ಕೇಳಿದ, ಕುಪಿತನಾದ, ಪ್ರಿಯನಾದ ಸ್ನೇಹಿತನನ್ನು ಸಮಾಧಾನ ಪಡಿಸಲು ನಿನಗೆ ಸಾಧ್ಯವಾಗುತ್ತಿಲ್ಲ. ಆದ್ದರಿಂದ ಹರಿಣನೂ, ಕೃಶನೂ ಆಗಿದ್ದೀಯೆ.

ನೂನಮಾಸಂಜ(ನ್ ಜ)ಯಿತ್ವಾ ತೇ ಕೃತ್ಯೇ ಕಸ್ಮಿಂಶ್ಚಿದೀಪ್ಸಿತೇ ।
ಕಶ್ಚಿದರ್ಥಯತೇಽತ್ಯರ್ಥಂ ತೇನಾಸಿ ಹರಿಣಃ ಕೃಶಃ ॥೨೪॥

ಯಾವನೋ ಒಬ್ಬನು ತನಗೆ ಬೇಕಾದ ಕೆಲಸದಲ್ಲಿ ನಿನ್ನನ್ನು ನಿಯೋಜಿಸಿ, ಬೇಗ ಮುಗಿಸುವಂತೆ ಒತ್ತಾಯ ಮಾಡುತ್ತಿದ್ದಾನೆ. ಆದ್ದರಿಂದ ಹರಿಣನೂ, ಕೃಶನೂ ಆಗಿದ್ದೀಯೆ.

ನೂನಂ ತ್ವಾಂ ಸ್ವಗುಣಾಪೇಕ್ಷಂ ಪೂಜಯಾನಂ ಸುಹೃದ್ ಧ್ರುವಮ್ ।
ಮಮಾರ್ಥಮಿತಿ ಜಾನಂತಿ ತೇನಾಸಿ ಹರಿಣಃ ಕೃಶಃ ॥೨೫॥

ನೀನು ನಿನ್ನ ಗುಣಗಳನ್ನೇ ಅಪೇಕ್ಷಿಸಿ ಒಬ್ಬನನ್ನು ಸತ್ಕರಿಸುತ್ತಿದ್ದರೆ ನಿನ್ನ ಮಿತ್ರರು ಅದು ನನ್ನಿಂದಾದ ಕೆಲಸ ಎಂದು ತಿಳಿಯುತ್ತಾರೆ. ಆದ್ದರಿಂದ ಹರಿಣನೂ, ಕೃಶನೂ ಆಗಿದ್ದೀಯೆ.

ಅಂತರ್ಗತಮಭಿಪ್ರಾಯಂ ನೂನಂ ನೇಚ್ಛಸಿ ಲಜ್ಜಯಾ ।
ವಿವಕ್ತುಂ ಪ್ರಾಪ್ತಿಶೈಥಿಲ್ಯಾತ್ ತೇನಾಸಿ ಹರಿಣಃ ಕೃಶಃ ॥೨೬॥

ಮನಸ್ಸಿನ ಒಳಗಿರುವ ಅಭಿಪ್ರಾಯವನ್ನು ಅದು ಸಾಧ್ಯವಾಗುತ್ತದೆಯೋ ಇಲ್ಲವೋ ಎಂಬ ಶಂಕೆಯಿಂದ, ಲಜ್ಜೆಯಿಂದ ನೀನು ಹೇಳಲು ಇಷ್ಟಪಡುತ್ತಿಲ್ಲ. ಆದ್ದರಿಂದ ಹರಿಣನೂ, ಕೃಶನೂ ಆಗಿದ್ದೀಯೆ.

ನಾನಾಬುದ್ಧಿರುಚೀಲ್ಲೋಕೇ ಮನುಷ್ಯಾನ್ ನೂನಮಿಚ್ಛಸಿ ।
ಗ್ರಹೀತುಂ ಸ್ವಗುಣೈಃ ಸರ್ವಾಂಸ್ತೇನಾಸಿ ಹರಿಣಃ ಕೃಶಃ ॥೨೭॥

ಲೋಕದಲ್ಲಿ ನಾನಾ ಬುದ್ಧಿಗಳನ್ನೂ, ನಾನಾ ಅಭಿರುಚಿಗಳನ್ನೂ ಹೊಂದಿರುವ ಮನುಷ್ಯರೆಲ್ಲರನ್ನೂ ನಿನ್ನ ಗುಣಗಳಿಂದ ನೀನು ಸಂಗ್ರಹಿಸಲು ಇಚ್ಛಿಸುತ್ತಿದ್ದೀಯೆ. ಆದ್ದರಿಂದ ಹರಿಣನೂ, ಕೃಶನೂ ಆಗಿದ್ದೀಯೆ.

ಅವಿದ್ವಾನ್ ಭೀರುರಲ್ಪಾರ್ಥೋ ವಿದ್ಯಾವಿಕ್ರಮದಾನಜಮ್ ।
ಯಶಃ ಪ್ರಾರ್ಥಯಸೇ ನೂನಂ ತೇನಾಸಿ ಹರಿಣಃ ಕೃಶಃ ॥೨೮॥

ವಿದ್ಯೆ ಇಲ್ಲದವನೂ, ಭಯಗ್ರಸ್ತನೂ, ಅಲ್ಪದಾನವುಳ್ಳವನೂ ಆದ ನೀನು ವಿದ್ಯೆಯಿಂದ, ಪರಾಕ್ರಮದಿಂದ ಮತ್ತು ದಾನದಿಂದ ಉಂಟಾಗುವ ಯಶಸ್ಸನ್ನು ಖಂಡಿತವಾಗಿ ಪ್ರಾರ್ಥಿಸುತ್ತಿದ್ದೀಯೆ. ಆದ್ದರಿಂದ ಹರಿಣನೂ, ಕೃಶನೂ ಆಗಿದ್ದೀಯೆ.

ಚಿರಾಭಿಲಷಿತಂ ಕಿಂಚಿತ್ ಫಲಮಪ್ರಾಪ್ತಮೇವ ತೇ ।
ಕೃತಮನ್ಯೈರಪಹೃತಂ ತೇನಾಸಿ ಹರಿಣಃ ಕೃಶಃ ॥೨೯॥

ನೀನು ಬಹಳ ದಿನದಿಂದ ಬಯಸುತ್ತಿದ್ದ ಒಂದು ಫಲವು ನಿನಗೆ ದೊರಕಿಲ್ಲ. ನೀನು ಸಂಪಾದಿಸಿದ ಒಂದು ಫಲವನ್ನು ಬೇರೆಯವರು ಅಪಹರಿಸಿದ್ದಾರೆ. ಆದ್ದರಿಂದ ಹರಿಣನೂ, ಕೃಶನೂ ಆಗಿದ್ದೀಯೆ.

ನೂನಮಾತ್ಮಕೃತಂ ದೋಷಮಪಶ್ಯನ್ ಕಿಂಚಿದಾತ್ಮನಿ ।
ಅಕಾರಣೇऽಭಿಶಸ್ತೋऽಸಿ ತೇನಾಸಿ ಹರಿಣಃ ಕೃಶಃ ॥೩೦॥

ನಿನ್ನಲ್ಲಿ ನೀನು ಯಾವ ದೋಷವನ್ನೂ ಕಾಣದಿದ್ದರೂ ನಿಷ್ಕಾರಣವಾಗಿ ನಿಂದಿಸಲ್ಪಡುತ್ತಿದ್ದೀಯೆ. ಆದ್ದರಿಂದ ಹರಿಣನೂ, ಕೃಶನೂ ಆಗಿದ್ದೀಯೆ.

ಸುಹೃದಾಮಪ್ರಮತ್ತಾನಾಮಪ್ರಮೋಕ್ಷ್ಯಾರ್ಥಹಾನಿಜಮ್ ।
ದುಃಖಮರ್ಥಗುಣೈರ್ಹೀನಸ್ತೇನಾಸಿ ಹರಿಣಃ ಕೃಶಃ ॥೩೧॥

ಎಚ್ಚರ ತಪ್ಪಿದ ನಿನ್ನ ಸುಹೃಜ್ಜನರಿಗೆ ಅರ್ಥಹಾನಿಯಿಂದ ಉಂಟಾದ ದುಃಖವನ್ನು ಅರ್ಥದಿಂದಲೂ, ಗುಣಗಳಿಂದಲೂ ಹೀನನಾದ ನೀನು ಪರಿಹರಿಸಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಹರಿಣನೂ, ಕೃಶನೂ ಆಗಿದ್ದೀಯೆ.

ಸಾಧೂನ್ ಗೃಹಸ್ಥಾನ್ ದೃಷ್ಟ್ವಾ ಚ ತಥಾऽಸಾಧೂನ್ ವನೇಚರಾನ್ ।
ಮುಕ್ತಾಂಶ್ಚಾವಸಥೇ ಸಕ್ತಾಂಸ್ತೇನಾಸಿ ಹರಿಣಃ ಕೃಶಃ ॥೩೨॥

ಸಜ್ಜನರು ಮನೆಯಲ್ಲಿರುವುದನ್ನೂ, ಅಸಜ್ಜನರು ಅರಣ್ಯವಾಸಿಗಳಾಗಿರುವುದನ್ನೂ, ಸಂನ್ಯಾಸಿಗಳು ಗೃಹದಲ್ಲಿ ಆಸಕ್ತರಾಗಿರುವುದನ್ನೂ ನೋಡಿ ಚಿಂತಿಸುತ್ತಿದ್ದೀಯೆ. ಆದ್ದರಿಂದ ಹರಿಣನೂ, ಕೃಶನೂ ಆಗಿದ್ದೀಯೆ.

ಧರ್ಮ್ಯಮರ್ಥಂ ಚ ಕಾಲೇ ಚ ದೇಶೇ ಚಾಭಿಹಿತಂ ವಚಃ ।
ನ ಪ್ರಸಿದ್ಧ್ಯತಿ ತೇ ನೂನಂ ತೇನಾಸಿ ಹರಿಣಃ ಕೃಶಃ ॥೩೩॥

ನೀನು ಯೋಗ್ಯವಾದ ಕಾಲದಲ್ಲಿ, ಯೋಗ್ಯವಾದ ದೇಶದಲ್ಲಿ ಧರ್ಮಕ್ಕೆ ಮತ್ತು ಅರ್ಥಕ್ಕೆ ಅನುಸಾರವಾಗಿ ಆಡಿದ ಮಾತುಗಳು ಪ್ರಸಿದ್ಧಿಯನ್ನು ಪಡೆಯುತ್ತಿಲ್ಲ. ಆದ್ದರಿಂದ ಹರಿಣನೂ, ಕೃಶನೂ ಆಗಿದ್ದೀಯೆ.

ದತ್ತಾನಕುಶಲೈರರ್ಥಾನ್ ಮನೀಷೀ ಸಂಜಿಜೀವಿಷುಃ ।
ಪ್ರಾಪ್ಯ ವರ್ತಯಸೇ ನೂನಂ ತೇನಾಸಿ ಹರಿಣಃ ಕೃಶಃ ॥೩೪॥

ಮೇಧಾವಿಯಾದ ನೀನು ಬದುಕುವ ಇಚ್ಛೆಯಿಂದ ಕುಶಲರಲ್ಲದ ಜನರು ಕೊಟ್ಟ ಪದಾರ್ಥದಿಂದ ಜೀವಿಸುತ್ತಿದ್ದೀಯೆ. ಆದ್ದರಿಂದ ಹರಿಣನೂ, ಕೃಶನೂ ಆಗಿದ್ದೀಯೆ.

ಪಾಪಾನ್ ವಿವರ್ಧತೋ ದೃಷ್ಟ್ವಾ ಕಲ್ಯಾಣಾಂಶ್ಚಾವಸೀದತಃ ।
ಧ್ರುವಂ ಮೃಗಯಸೇ ಯೋಗ್ಯಂ ತೇನಾಸಿ ಹರಿಣಃ ಕೃಶಃ ॥೩೫॥

ಪಾಪಿಗಳು ಹೆಚ್ಚುತ್ತಿರುವುದನ್ನೂ, ಪುಣ್ಯವಂತರು ಕ್ಷೀಣಿಸುತ್ತಿರುವುದನ್ನೂ ನೋಡಿ ಖಂಡಿತವಾಗಿ ಯೋಗ್ಯರಾದವರನ್ನು ಹುಡುಕುತ್ತಿದ್ದೀಯೆ. ಆದ್ದರಿಂದ ಹರಿಣನೂ, ಕೃಶನೂ ಆಗಿದ್ದೀಯೆ.

ಪರಸ್ಪರವಿರುದ್ಧಾನಾಂ ಪ್ರಿಯಂ ನೂನಂ ಚಿಕೀರ್ಷಸಿ ।
ಸುಹೃದಾಮವಿರೋಧೇನ ತೇನಾಸಿ ಹರಿಣಃ ಕೃಶಃ ॥೩೬॥

ಪರಸ್ಪರ ವಿರುದ್ಧರಾದ ನಿನ್ನ ಸ್ನೇಹಿತರಿಗೆ ವಿರೋಧವನ್ನು ಪರಿಹರಿಸಿ ಅವಿರೋಧವನ್ನು ಮಾಡಲು ಪ್ರಯತ್ನಿಸುತ್ತಿದ್ದೀಯೆ. ಆದ್ದರಿಂದ ಹರಿಣನೂ, ಕೃಶನೂ ಆಗಿದ್ದೀಯೆ.

ಶ್ರೋತ್ರಿಯಾಂಶ್ಚ ವಿಕರ್ಮಸ್ಥಾನ್ ಪ್ರಾಜ್ಞಾಂಶ್ಚಾಪ್ಯಜಿತೇಂದ್ರಿಯಾನ್ ।
ಮನ್ಯೇಽನುಧ್ಯಾಯಸಿ ಜನಾಂಸ್ತೇನಾಸಿ ಹರಿಣಃ ಕೃಶಃ ॥೩೭॥

ದುಷ್ಕರ್ಮನಿರತರಾದ ಶ್ರೋತ್ರಿಯರನ್ನೂ, ಇಂದ್ರಿಯಲೋಲುಪರಾದ ಪ್ರಾಜ್ಞರನ್ನೂ ನೋಡಿ ನೀನು ಚಿಂತಿಸುತ್ತಿದ್ದೀಯೆ. ಆದ್ದರಿಂದ ಹರಿಣನೂ, ಕೃಶನೂ ಆಗಿದ್ದೀಯೆ.

ಭೀಷ್ಮಃ

ಏವಂ ಸಂಪೂಜಿತಂ ರಕ್ಷೋ ವಿಪ್ರಂ ತಂ ಪ್ರತ್ಯಪೂಜಯತ್ ।
ಸಖಾಯಮಕರೋಚ್ಚೈನಂ ಸಂಯೋಜ್ಯಾರ್ಥೈರ್ಮುಮೋಚ ಹ ॥೩೮॥

ಭೀಷ್ಮ– ಹೀಗೆ ಪೂಜಿಸಲ್ಪಟ್ಟ ಆ ರಾಕ್ಷಸನು ಆ ಬ್ರಾಹ್ಮಣನನ್ನು ಪೂಜಿಸಿ, ಅವನನ್ನು ಸ್ನೇಹಿತನನ್ನಾಗಿ ಮಾಡಿಕೊಂಡು ಧನವನ್ನು ಕೊಟ್ಟು ಬಿಟ್ಟುಬಿಟ್ಟನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಹರಿಣಕೃಶೀಯಂ ನಾಮ
ಷಟ್‌ಸಪ್ತತ್ಯುತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಎಪ್ಪತ್ತಾರನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಪ್ಪತ್ತೇಳನೆಯ ಅಧ್ಯಾಯ

ಶ್ರಾದ್ಧರಹಸ್ಯ ಮತ್ತು ಧರ್ಮರಹಸ್ಯಗಳು

ಯುಧಿಷ್ಠಿರಃ

ಜನ್ಮ ಮಾನುಷ್ಯಕಂ ಪ್ರಾಪ್ಯ ಕರ್ಮಕ್ಷೇತ್ರಂ ಸುದುರ್ಲಭಮ್ ।
ಶ್ರೇಯೋರ್ಥಿನಾ ದರಿದ್ರೇಣ ಕಿಂ ಕರ್ತವ್ಯಂ ಪಿತಾಮಹ ॥೧॥

ದಾನಾನಾಮುತ್ತಮಂ ಯಚ್ಚ ದೇಯಂ ಯಚ್ಚ ಯಥಾಯಥಾ ।
ಮಾನ್ಯಾನ್ ಪೂಜ್ಯಾಂಶ್ಚ ಗಾಂಗೇಯ ರಹಸ್ಯಂ ವಕ್ತುಮರ್ಹಸಿ ॥೨॥

ಯುಧಿಷ್ಠಿರ– ಎಲೈ ಪಿತಾಮಹನೇ, ಮನುಷ್ಯಜನ್ಮವನ್ನು ಪಡೆದು, ದುರ್ಲಭವಾದ ಕರ್ಮಭೂಮಿಯಲ್ಲಿ ಜನಿಸಿ, ಶ್ರೇಯೋರ್ಥಿಯಾದ ದರಿದ್ರನು ಏನು ಮಾಡಬೇಕು? ಎಲೈ ಗಾಂಗೇಯನೇ, ದಾನದಲ್ಲಿ ಶ್ರೇಷ್ಠವಾದುದು ಯಾವುದು? ಯಾವ ಯಾವ ದಾನವನ್ನು ಹೇಗೆ ಮಾಡಬೇಕು? ಮಾನ್ಯರು ಮತ್ತು ಪೂಜ್ಯರಾದವರು ಯಾರು? ಈ ರಹಸ್ಯವನ್ನು ಹೇಳಬೇಕು.

ವೈಶಂಪಾಯನಃ

ಏವಂ ಪೃಷ್ಟೋ ನರೇಂದ್ರೇಣ ಪಾಂಡವೇನ ಯಶಸ್ವಿನಾ ।
ಧರ್ಮಾಣಾಂ ಪರಮಂ ಗುಹ್ಯಂ ಭೀಷ್ಮಃ ಪ್ರೋವಾಚ ಪಾರ್ಥಿವಮ್ ॥

ವೈಶಂಪಾಯನ– ಹೀಗೆ ಕೀರ್ತಿವಂತನೂ, ಪಾಂಡುಪುತ್ರನೂ ಆದ ಯುಧಿಷ್ಠಿರನಿಂದ ಧರ್ಮದ ಪರಮರಹಸ್ಯ ವಿಷಯದಲ್ಲಿ ಪ್ರಶ್ನೆ ಮಾಡಲ್ಪಟ್ಟು ಭೀಷ್ಮರು ಆ ರಾಜನನ್ನು ಕುರಿತು ಹೇಳಿದರು.

ಭೀಷ್ಮಃ

ಶೃಣುಷ್ವಾವಹಿತೋ ರಾಜನ್ ಧರ್ಮಗುಹ್ಯಾನಿ ಭಾರತ ।
ಯಥಾಹಿ ಭಗವಾನ್ ವ್ಯಾಸಃ ಪುರಾ ಕಥಿತವಾನ್ ಮಯಿ ॥೪॥

ಭೀಷ್ಮ– ಎಲೈ ರಾಜನೇ, ಭಾರತನೇ, ನನಗೆ ಪೂಜ್ಯರಾದ ವ್ಯಾಸರು ಹಿಂದೆ ಹೇಳಿದಂತಹ ಧರ್ಮರಹಸ್ಯಗಳನ್ನು ಅವಧಾನದಿಂದ ಕೇಳು.

ದೇವಗುಹ್ಯಮಿದಂ ರಾಜನ್ ಯಮೇನಾಕ್ಲಿಷ್ಟಕರ್ಮಣಾ ।
ನಿಯಮಸ್ಥೇನ ಯುಕ್ತೇನ ತಪಸೋ ಮಹತಃ ಫಲಮ್ ॥೫॥

ಎಲೈ ರಾಜನೇ, ಇದು ದೇವರಹಸ್ಯ. ಇದರ ಜ್ಞಾನವು ಯಮ-ನಿಯಮದಿಂದ ಕೂಡಿದ ಸತ್ಕರ್ಮವನ್ನು ಮಾಡಿ ದೊಡ್ಡ ತಪಸ್ಸನ್ನು ಮಾಡಿದುದರ ಫಲವಾಗಿ ದೊರೆಯುತ್ತದೆ.

ಯೇನ ಯಃ ಪ್ರೀಯತೇ ದೇವಃ ಪ್ರೀಯಂತೇ ಪಿತರಸ್ತಥಾ ।
ಋಷಯಃ ಪ್ರಮಥಾಃ ಶ್ರೀಶ್ಚ ಚಿತ್ರಗುಪ್ತೋ ದಿಶಾಂಗಜಾಃ ॥೬॥

ಯಾವ ಮನುಷ್ಯನಿಗೆ ಅವನ ಯಾವ ಒಂದು ಕರ್ಮದಿಂದ ಒಬ್ಬ ದೇವತೆಯು ಪ್ರಸನ್ನನಾದರೆ ಆಗ ಅವನ ಪಿತೃಗಳು, ಋಷಿಗಳು, ಪ್ರಮಥರು, ಲಕ್ಷ್ಮಿಯು, ಚಿತ್ರಗುಪ್ತರು ಮತ್ತು ದಿಗ್ಗಜಗಳು ಪ್ರಸನ್ನವಾಗುತ್ತಾರೆ.

ಋಷಿಧರ್ಮಃ ಸ್ಮೃತೋ ಯತ್ರ ಸರಹಸ್ಯೋ ಮಹಾಫಲಃ ।
ಮಹಾದಾನಫಲಂ ಚೈವ ಸರ್ವಯಜ್ಞಫಲಂ ತಥಾ ॥೭॥

ರಹಸ್ಯಗಳಲ್ಲಿ ರಹಸ್ಯವಾದ, ಮಹಾಫಲವನ್ನು ಕೊಡುವ ಋಷಿಧರ್ಮವು ಹೇಳಲ್ಪಟ್ಟಿದೆ. ಹಾಗೆಯೇ ಮಹಾದಾನಫಲವೂ, ಸರ್ವಯಜ್ಞಫಲವೂ ಹೇಳಲ್ಪಟ್ಟಿವೆ.

ಯಶ್ಚೈತದೇವಂ ಜಾನೀಯಾಜ್ಜ್ಞಾತ್ವಾ ವಾ ಕುರುತೇಽನಘ ।
ಸದೋಷೋಽದೋಷವಾಂಶ್ಚೇಹ ತೈರ್ಗುಣೈಃ ಸಹ ಯುಜ್ಯತೇ ॥೮॥

ಯಾವನು ಅದನ್ನು ಕೇಳಿ ಅದರಂತೆ ಆಚರಿಸುವನೋ ಅವನು ದೋಷವಿರಲಿ ಇಲ್ಲದಿರಲಿ, ಅಲ್ಲಿ ಹೇಳಿದ ಗುಣಗಳಿಂದ ಯುಕ್ತನಾಗುತ್ತಾನೆ.

ದಶಸೂನಾಸಮಂ ಚಕ್ರಂ ದಶಚಕ್ರಸಮೋ ಧ್ವಜಃ ।
ದಶಧ್ವಜಸಮಾ ವೇಶ್ಯಾ ದಶವೇಶ್ಯಾಸಮೋ ನೃಪಃ ।
ಅರ್ಧೇನೈತಾನಿ ಸರ್ವಾಣಿ ನೃಪತಿಃ ಕಥ್ಯತೇಽಧಿಕಃ ॥೯॥

ಹತ್ತು ಕಟುಕರಿಗೆ (ದೋಷ ಮತ್ತು ಪಾಪದ ವಿಷಯದಲ್ಲಿ) ಒಬ್ಬ ಗಾಣಿಗನು ಸಮನಾದವನು. ಹತ್ತು ಗಾಣಿಗರಿಗೆ ಒಬ್ಬ ಈಡಿಗನು (ಮರದಿಂದ ಹೆಂಡವನ್ನು ತೆಗೆಯುವವನು) ಸಮನಾದವನು. ಹತ್ತು ಈಡಿಗರಿಗೆ ಒಬ್ಬ ವೇಶ್ಯೆಯು ಸಮನಾದವಳು. ಹತ್ತು ವೇಶ್ಯೆಯರಿಗೆ ಒಬ್ಬ ರಾಜನು ಸಮನಾದವನು. ಇವರೆಲ್ಲರನ್ನೂ ಸೇರಿಸಿದರೆ ಎಷ್ಟು ಪಾಪವುಂಟಾಗುತ್ತದೆಯೋ ಅದಕ್ಕಿಂತಲೂ ಅರ್ಧಪಟ್ಟು ಹೆಚ್ಚು ಪಾಪಸಂಬಂಧವುಳ್ಳವನು ರಾಜನೆಂದು ಹೇಳಲ್ಪಡುತ್ತದೆ.

ತ್ರಿವರ್ಗಸಹಿತಂ ಶಾಸ್ತ್ರಂ ಪವಿತ್ರಂ ಪುಣ್ಯಲಕ್ಷಣಮ್ ॥೧೦॥

ಧರ್ಮವ್ಯಾಕರಣಂ ಪುಣ್ಯಂ ರಹಸ್ಯಶ್ರವಣಂ ಮಹತ್ ।
ಶ್ರೋತವ್ಯಂ ಧರ್ಮಸಂಯುಕ್ತಂ ವಿಹಿತಂ ತ್ರಿದಶೈಃ ಸ್ವಯಮ್ ॥೧೧॥

ಧರ್ಮಾರ್ಥಕಾಮಗಳನ್ನು ಬೋಧಿಸುವ ಶಾಸ್ತ್ರವು ಪವಿತ್ರವಾದುದು, ಪುಣ್ಯಪ್ರದವಾದುದು, ಧರ್ಮರೂಪವಾದುದು. ರಹಸ್ಯದಲ್ಲಿ ಕೇಳಬೇಕಾದ ಶ್ರೇಷ್ಠವಾದ ಶಾಸ್ತ್ರವಾದುದು. ದೇವತೆಗಳೇ ಸ್ವತಃ ಉಪದೇಶ ಮಾಡಿರುವ ಧರ್ಮಯುಕ್ತವಾದ ಆ ಶಾಸ್ತ್ರವನ್ನು ಕೇಳಬೇಕು.

ಪಿತೄಣಾಂ ಯತ್ರ ಗುಹ್ಯಾನಿ ಪ್ರೋಚ್ಯಂತೇ ಶ್ರಾದ್ಧಕರ್ಮಣಿ ।
ದೇವತಾನಾಂ ಚ ಸರ್ವೇಷಾಂ ರಹಸ್ಯಂ ಕಥ್ಯತೇಽಖಿಲಮ್ ॥೧೨॥

ಅದರಲ್ಲಿ ಶ್ರಾದ್ಧಕರ್ಮಕ್ಕೂ, ಪಿತೃಗಳಿಗೂ ಹಾಗೂ ದೇವತೆಗಳಿಗೂ ಸಂಬಂಧಿಸಿದ ಎಲ್ಲಾ ರಹಸ್ಯ ವಿಷಯಗಳು ಹೇಳಲ್ಪಡುತ್ತವೆ.

ಋಷಿಧರ್ಮಃ ಸ್ಮೃತೋ ಯತ್ರ ಸರಹಸ್ಯೋ ಮಹಾಫಲಃ ।
ಮಹಾಯಜ್ಞಫಲಂ ಚೈವ ಸರ್ವದಾನಫಲಂ ತಥಾ ॥೧೩॥

ಅದರಲ್ಲಿ ರಹಸ್ಯವಾದ, ಮಹಾಫಲಪ್ರದವಾದ ಋಷಿಧರ್ಮವೂ, ಮಹಾಯಜ್ಞ ಫಲಗಳೂ, ಸರ್ವದಾನಫಲಗಳೂ ಹೇಳಲ್ಪಡುತ್ತವೆ.

ಯೇ ಪಠಂತಿ ಸದಾ ಮರ್ತ್ಯಾ ಯೇಷಾಂ ಚೈವೋಪತಿಷ್ಠತಿ ।
ಶ್ರುತ್ವಾ ಚ ಫಲಮಾಚಷ್ಟೇ ಸ್ವಯಂ ನಾರಾಯಣಃ ಪ್ರಭುಃ ॥೧೪॥

ಯಾವ ಮನುಷ್ಯರು ಅದನ್ನು ಪಠಿಸಿ ಅನುಷ್ಠಾನ ಮಾಡುತ್ತಾರೆಯೋ, ಯಾರು ಶ್ರವಣ ಮಾಡುತ್ತಾರೋ ಅವರಿಗೆ ಪ್ರಭುವಾದ ನಾರಾಯಣನು ಸ್ವತಃ ಫಲಗಳನ್ನು ಹೇಳಿದ್ದಾನೆ.

ಗವಾಂ ಫಲಂ ತೀರ್ಥಫಲಂ ಯಜ್ಞಾನಾಂ ಚೈವ ಯತ್ಫಲಮ್ ।
ಏತತ್ಫಲಮವಾಪ್ನೋತಿ ಯೋ ನರೋಽತಿಥಿಪೂಜಕಃ ॥೧೫॥

ಅತಿಥಿಪೂಜೆಯನ್ನು ಮಾಡುವ ನರನು ಗೋದಾನ ಮಾಡಿದ ಫಲವನ್ನೂ, ತೀರ್ಥ ಸ್ನಾನ ಮಾಡಿದ ಫಲವನ್ನೂ, ಯಜ್ಞವನ್ನು ಮಾಡಿದ ಫಲವನ್ನೂ ಹೊಂದುತ್ತಾನೆ.

ಶ್ರೋತಾರಃ ಶ್ರದ್ಧಧಾನಾಶ್ಚ ಯೇಷಾಂ ಶುದ್ಧಂ ಚ ಮಾನಸಮ್ ।
ತೇಷಾಂ ವ್ಯಕ್ತಂ ಜಿತಾ ಲೋಕಾಃ ಶ್ರದ್ಧಧಾನೇನ ಸಾಧುನಾ ॥೧೬॥

ಶ್ರದ್ಧೆಯಿಂದ ಮತ್ತು ಶುದ್ಧವಾದ ಮನಸ್ಸಿನಿಂದ ಯಾರು ಕೇಳುತ್ತಾರೆಯೋ ಅವರು ಲೋಕಗಳನ್ನು ಜಯಿಸುತ್ತಾರೆ.

ಮುಚ್ಯತೇ ಕಿಲ್ಬಿಷಾಚ್ಚೈವ ನ ಸ ಪಾಪೇನ ಲಿಪ್ಯತೇ ।
ಧರ್ಮಂ ಚ ಲಭತೇ ನಿತ್ಯಂ ಪ್ರೇತ್ಯ ಲೋಕಗತೋ ನರಃ ॥೧೭॥

ದೋಷಗಳಿಂದ ನಿರ್ಮುಕ್ತರಾಗುತ್ತಾರೆ. ಪಾಪಲೇಪವನ್ನು ಹೊಂದುವುದಿಲ್ಲ. ಧರ್ಮವನ್ನು ಸಂಪಾದಿಸುತ್ತಾರೆ ಮತ್ತು ಮರಣಾನಂತರದಲ್ಲಿ ಶುಭಲೋಕಗಳನ್ನು ಹೊಂದುತ್ತಾರೆ (ಇವು ನಾರಾಯಣನು ಸ್ವತಃ ಹೇಳಿದ ಫಲಗಳು).

ಕಸ್ಯಚಿತ್ತ್ವಥ ಕಾಲಸ್ಯ ದೇವದೂತೋ ಯದೃಚ್ಛಯಾ ।
ಸ್ಥಿತೋ ಹ್ಯಂತರ್ಹಿತೋ ಭೂತ್ವಾ ಪರ್ಯಭಾಷತ ವಾಸವಮ್ ॥೧೮॥

ಒಮ್ಮೆ ಒಬ್ಬ ದೇವದೂತನು ಇಂದ್ರನ ಸಮೀಪಕ್ಕೆ ಬಂದು ಅದೃಶ್ಯವಾಗಿ ನಿಂತು ಇಂದ್ರನ ಜೊತೆಯಲ್ಲಿ ಮಾತನಾಡಿದನು.

ಯೌ ತೌ ಕಾಮಗುಣೋಪೇತಾವಶ್ವಿನೌ ಭಿಷಜಾಂ ವರೌ ।
ಆಜ್ಞಯಾऽಹಂ ತಯೋಃ ಪ್ರಾಪ್ತಃ ಸನರಾನ್ ಪಿತೃದೈವತಾನ್ ॥೧೯॥

ಕಾಮ, ರೂಪ ಮತ್ತು ಗುಣೋಪೇತರೂ ಶ್ರೇಷ್ಠವೈದ್ಯರೂ ಆದ ಅಶ್ವಿನೀದೇವತೆಗಳ ಆಜ್ಞೆಯಿಂದ ನಾನು ಮನುಷ್ಯರ ಬಳಿಗೂ, ಪಿತೃಗಳ ಬಳಿಗೂ ಮತ್ತು ದೇವತೆಗಳ ಬಳಿಗೂ ಬಂದಿದ್ದೇನೆ.

ಕಸ್ಮಾದ್ಧಿ ಮೈಥುನಂ ಶ್ರಾದ್ಧೇ ದಾತುರ್ಭೋಕ್ತುಶ್ಚ ವರ್ಜಿತಮ್ ।
ಕಿಮರ್ಥಂ ಚ ತ್ರಯಃ ಪಿಂಡಾಃ ಪ್ರವಿಭಕ್ತಾಃ ಪೃಥಕ್‌ಪೃಥಕ್ ॥೨೦॥

ಶ್ರಾದ್ಧವನ್ನು ಮಾಡುವವನಿಗೂ, ಶ್ರಾದ್ಧ ಭೋಜನವನ್ನು ಮಾಡುವವನಿಗೂ ಏಕೆ ಮೈಥುನವು ನಿಷಿದ್ಧವಾಗಿದೆ? ಏಕೆ ಮೂರು ಪಿಂಡಗಳನ್ನು ಪ್ರತ್ಯೇಕವಾಗಿ ಕೊಡಬೇಕು?

ಪ್ರಥಮಃ ಕಸ್ಯ ದಾತವ್ಯೋ ಮಧ್ಯಮಃ ಕ್ವ ಚ ಗಚ್ಛತಿ ।
ಉತ್ತರಶ್ಚ ಸ್ಮೃತಃ ಕಸ್ಯ ಏತದಿಚ್ಛಾಮಿ ವೇದಿತುಮ್ ॥೨೧॥

ಮೊದಲನೆಯ ಪಿಂಡವನ್ನು ಯಾರಿಗೆ ಕೊಡಬೇಕು? ಮಧ್ಯದ ಪಿಂಡವು ಯಾರನ್ನು ತಲುಪುತ್ತದೆ? ಕೊನೆಯ ಪಿಂಡವು ಯಾರಿಗೆ ಸೇರುತ್ತದೆ? ನಾನು ಇದನ್ನು ತಿಳಿಯಲು ಬಯಸುತ್ತೇನೆ.

ಭೀಷ್ಮಃ

ಶ್ರದ್ಧಧಾನೇನ ದೂತೇನ ಭಾಷಿತಂ ಧರ್ಮಸಂಹಿತಮ್ ।
ಪೂರ್ವಸ್ಥಾಸ್ತ್ರಿದಶಾಃ ಸರ್ವೇ ಪಿತರಃ ಪೂಜ್ಯ ಖೇಚರಮ್ ॥೨೨॥

ಭೀಷ್ಮ– ಶ್ರದ್ಧೆಯಿಂದ ಕೂಡಿದ ಧರ್ಮಯುಕ್ತವಾದ ದೇವದೂತನ ಮಾತನ್ನು ಕೇಳಿ, ಅವನ ಪೂರ್ವಜರಾದ ಪಿತೃಗಳು ಮತ್ತು ದೇವತೆಗಳು ಅವನನ್ನು ಪೂಜಿಸಿ ಮಾತನಾಡಿದರು.

ಪಿತರಃ

ಸ್ವಾಗತಂ ತೇऽಸ್ತು ಭದ್ರಂ ತೇ ಶ್ರೂಯತಾಂ ಖೇಚರೋತ್ತಮ ।
ಗೂಢಾರ್ಥಃ ಪರಮಃ ಪ್ರಶ್ನೋ ಭವತಾ ಸಮುದೀರಿತಃ ॥೨೩॥

ಪಿತೃಗಳು– ಎಲೈ ಖೇಚರಶ್ರೇಷ್ಠನೇ, ನಿನಗೆ ಸ್ವಾಗತ. ನಿನಗೆ ಮಂಗಳವಾಗಲಿ. ನೀನು ಗೂಡಾರ್ಥವುಳ್ಳ ಶ್ರೇಷ್ಠವಾದ ಪ್ರಶ್ನೆಯನ್ನು ಕೇಳಿದ್ದೀಯೆ. ಉತ್ತರವನ್ನು ಕೇಳು.

ಶ್ರಾದ್ಧಂ ದತ್ತ್ವಾ ಚ ಭುಕ್ತ್ವಾ ಚ ಪುರುಷೋ ಯಃ ಸ್ತ್ರಿಯಂ ವ್ರಜೇತ್ ।
ಪಿತರಸ್ತಸ್ಯ ತಂ ಮಾಸಂ ತಸ್ಮಿನ್ ರೇತಸಿ ಶೇರತೇ ॥೨೪॥

ಶ್ರಾದ್ಧವನ್ನು ಕೊಟ್ಟು ಅಥವಾ ಶ್ರಾದ್ಧ ಭೋಜನವನ್ನು ಮಾಡಿ ಸ್ತ್ರೀಸಂಗವನ್ನು ಮಾಡಿದರೆ ಅವನ ಪಿತೃಗಳು ಒಂದು ತಿಂಗಳ ಕಾಲ ರೇತಸ್ಸಿನಲ್ಲಿ ಮಲಗುತ್ತಾರೆ.

ಪ್ರವಿಭಾಗಂ ತು ಪಿಂಡಾನಾಂ ಪ್ರವಕ್ಷ್ಯಾಮ್ಯನುಪೂರ್ವಶಃ ।
ಪಿಂಡೋ ಹ್ಯಧಸ್ತಾದ್ ಗಚ್ಛಂಸ್ತು ಅಪ ಆವಿಶ್ಯ ಭಾವಯೇತ್ ॥೨೫॥

ಪಿಂಡಗಳ ವಿಭಾಗವನ್ನು ಕ್ರಮವಾಗಿ ಹೇಳುತ್ತೇನೆ. ಮೊದಲು ಕೊಡುವ ಕೆಳಗಿನ (ಹತ್ತಿರದ) ಪಿಂಡವನ್ನು ನೀರಿನಲ್ಲಿ ಬಿಡಬೇಕು.

ಪಿಂಡಂ ತು ಮಧ್ಯಮಂ ತತ್ರ ಪತ್ನೀ ತ್ವೇಕಾ ಸಮಶ್ನುತೇ ।
ಪಿಂಡಸ್ತೃತೀಯೋ ಯಸ್ತೇಷಾಂ ತಂ ದದ್ಯಾಜ್ಜಾತವೇದಸಿ ।
ಏಷ ಶ್ರಾದ್ಧವಿಧಿಃ ಪ್ರೋಕ್ತೋ ಯಥಾ ಧರ್ಮೋ ನ ಲುಪ್ಯತೇ ॥೨೬॥

ಮಧ್ಯಮ ಪಿಂಡವನ್ನು ಯಜಮಾನನ ಪತ್ನಿಯೊಬ್ಬಳೇ ಭುಂಜಿಸಬೇಕು. ಮೂರನೆಯ ಪಿಂಡವನ್ನು ಅಗ್ನಿಗೆ ಆಹುತಿಯನ್ನಾಗಿ ಕೊಡಬೇಕು. ಇದು ಶ್ರಾದ್ಧವಿಧಿ. ಹೀಗೆ ಮಾಡಿದರೆ ಧರ್ಮಲೋಪವಾಗುವುದಿಲ್ಲ.

ಪಿತರಸ್ತಸ್ಯ ತುಷ್ಯಂತಿ ಪ್ರಹೃಷ್ಟಮನಸಃ ಸದಾ ।
ಪ್ರಜಾ ವಿವರ್ಧತೇ ಚಾಸ್ಯ ಅಕ್ಷಯಂ ಚೋಪತಿಷ್ಠತಿ ॥೨೭॥

ಅವನ ಪಿತೃಗಳು ತೃಪ್ತರಾಗುತ್ತಾರೆ. ಮನಸ್ಸಂತೋಷವನ್ನು ಹೊಂದುತ್ತಾರೆ. ಸಂತತಿಯು ಅಭಿವೃದ್ಧಿಯನ್ನು ಹೊಂದುತ್ತದೆ ಮತ್ತು ತಾನು ಮಾಡಿದ ಶ್ರಾದ್ಧದ ಫಲವು ಅಕ್ಷಯವಾಗುತ್ತದೆ.

ದೇವದೂತಃ

ಆನುಪೂರ್ವ್ಯೇಣ ಪಿಂಡಾನಾಂ ಪ್ರವಿಭಾಗಃ ಪೃಥಕ್‌ಪೃಥಕ್ ।
ಪಿತೄಣಾಂ ತ್ರಿಷು ಸರ್ವೇಷಾಂ ನಿರುಕ್ತಂ ಕಥಿತಂ ತ್ವಯಾ ॥೨೮॥

ದೇವದೂತ– ಕ್ರಮವಾಗಿ ಕೊಡುವ ಪಿಂಡಗಳ ವಿಭಾಗವನ್ನು ಮತ್ತು ಹೇಗೆ ವಿನಿಯೋಗ ಮಾಡಬೇಕೆಂಬುದನ್ನು ನೀನು ಹೇಳಿದ್ದೀಯೆ.

ಏಕಃ ಸಮುದ್ಧೃತಃ ಪಿಂಡೋ ಹ್ಯಧಸ್ತಾತ್ ಕಸ್ಯ ಗಚ್ಛತಿ ।
ಕಂ ವಾ ಪ್ರೀಣಯತೇ ದೇವಂ ಕಥಂ ತಾರಯತೇ ಪಿತೄನ್ ॥೨೯॥

ಮೊದಲಿನ ಕೆಳಗಿನ ಪಿಂಡವು ಯಾರಿಗೆ ಸೇರುತ್ತದೆ? ಯಾವ ದೇವತೆಯನ್ನು ಸಂತೋಷಗೊಳಿಸುತ್ತದೆ? ಪಿತೃಗಳನ್ನು ಹೇಗೆ ದಾಟಿಸುತ್ತದೆ?

ಮಧ್ಯಮಂ ತು ತದಾ ಪತ್ನೀ ಭುಂಕ್ತೇಽನುಜ್ಞಾತಮೇವ ಹಿ ।
ಕಿಮರ್ಥಂ ಪಿತರಸ್ತಸ್ಯ ಕವ್ಯಮೇವ ಚ ಭುಂಜತೇ ॥೩೦॥

ಮಧ್ಯಮದ ಪಿಂಡವನ್ನು ಋತ್ವಿಜರ ಮತ್ತು ಯಜಮಾನನ ಅನುಮತಿಯಿಂದ ಪತ್ನಿಯು ತಿನ್ನುವಳಷ್ಟೆ! ಆಗ ಅವನ ಪಿತೃಗಳು ಏಕೆ (ಹೇಗೆ) ಆ ಕವ್ಯವನ್ನು ಭುಂಜಿಸುತ್ತಾರೆ?

ಅತ್ರ ಯಸ್ತ್ವಂತಿಮಃ ಪಿಂಡೋ ಗಚ್ಛತೇ ಜಾತವೇದಸಮ್ ।
ಭವತೇ ಕಾ ಗತಿಸ್ತಸ್ಯ ಕಂ ವಾ ಸಮನುಗಚ್ಛತಿ ॥೩೧॥

ಅಗ್ನಿಯಲ್ಲಿ ಹಾಕುವ ಮೂರನೆಯ ಪಿಂಡವು ಯಾರನ್ನು ಸೇರುತ್ತದೆ? ಮತ್ತು ಅದರ ಗತಿಯೇನಾಗುತ್ತದೆ?

ಏತದಿಚ್ಛಾಮ್ಯಹಂ ಶ್ರೋತುಂ ಪಿಂಡೇಷು ತ್ರಿಷು ಯಾ ಗತಿಃ ।
ಫಲಂ ವೃತ್ತಿಂ ಚ ಮಾರ್ಗಂ ಚ ಯಶ್ಚೈನಂ ಪ್ರತಿಪದ್ಯತೇ ॥೩೨॥

ಮೂರು ಪಿಂಡಗಳ ಗತಿ, ಅವುಗಳ ಫಲ, ಅವುಗಳು ಹೋಗುವ ಮಾರ್ಗ, ಅವುಗಳು ತಲುಪುವ ಸ್ಥಾನ - ಇವುಗಳನ್ನು ನಾನು ಕೇಳಲು ಬಯಸುತ್ತೇನೆ.

ಪಿತರಃ

ಸುಮಹಾನೇಷ ಪ್ರಶ್ನೋ ವೈ ಯಸ್ತ್ವಯಾ ಸಮುದೀರಿತಃ ।
ರಹಸ್ಯಮದ್ಭುತಂ ಚಾಪಿ ಪೃಷ್ಟಾಃ ಸ್ಮ ಗಗನೇಚರ ॥೩೩॥

ಪಿತೃಗಳು– ನೀನು ಕೇಳಿದ ಪ್ರಶ್ನೆಯು ಬಹಳ ದೊಡ್ಡದಾಗಿದೆ. ಎಲೈ ಗಗನಚರನೇ, ನಮಗೆ ರಹಸ್ಯವೂ ಮತ್ತು ಅದ್ಭುತವೂ ಆದ ಪ್ರಶ್ನೆಯನ್ನು ಕೇಳಿದ್ದೀಯೆ.

ಏತದೇವ ಪ್ರಶಂಸಂತಿ ದೇವಾಶ್ಚ ಮುನಯಸ್ತಥಾ ।
ತೇऽಪ್ಯೇವಂ ನಾಭಿಜಾನಂತಿ ಪಿತೃಕಾರ್ಯವಿನಿಶ್ಚಯಮ್ ।
ವರ್ಜಯಿತ್ವಾ ಮಹಾತ್ಮಾನಂ ಚಿರಜೀವಿನಮುತ್ತಮಮ್ ॥೩೪॥

ದೇವತೆಗಳು ಮತ್ತು ಪಿತೃಗಳು ಈ ಶ್ರಾದ್ಧಕರ್ಮವನ್ನು ಪ್ರಶಂಸೆ ಮಾಡುತ್ತಾರೆ. ಆದರೆ ಅವರೂ ಪಿತೃಕಾರ್ಯದ ರಹಸ್ಯಗಳನ್ನು ಹೀಗೆ ತಿಳಿದಿಲ್ಲ. ಚಿರಂಜೀವಿಗಳಾದ ಶ್ರೇಷ್ಠರಾದ ಮಾರ್ಕಂಡೇಯರೊಬ್ಬರನ್ನು ಬಿಟ್ಟು ಬೇರೆ ಯಾರೂ ಈ ರಹಸ್ಯವನ್ನು ತಿಳಿದಿಲ್ಲ.

ಪಿತೃಭಕ್ತಸ್ತು ಯೋ ವಿಪ್ರೋ ವರಲಬ್ಧೋ ಮಹಾಯಶಾಃ ।
ತ್ರಯಾಣಾಮಪಿ ಪಿಂಡಾನಾಂ ಶ್ರುತ್ವಾ ಭಗವತೋ ಗತಿಮ್ ॥೩೫॥

ಪಿತೃಭಕ್ತನಾದ ಮತ್ತು ದೈವಾನುಗ್ರಹದಿಂದ ಜನಿಸಿದ, ಮಹಾಕೀರ್ತಿವಂತನಾದ ಬ್ರಾಹ್ಮಣನು ಮೂರುಪಿಂಡಗಳ ಗತಿಯನ್ನು ಪೂಜ್ಯರಿಂದ ಕೇಳಿ (ಶ್ರಾದ್ಧವನ್ನು ಮಾಡಬೇಕು).

ದೇವದೂತೇನ ಯಃ ಪೃಷ್ಟಃ ಶ್ರಾದ್ಧಸ್ಯ ವಿಧಿನಿಶ್ಚಯಃ ।
ಗತಿಸ್ತ್ರಯಾಣಾಂ ಪಿಂಡಾನಾಂ ಶೃಣುಷ್ವಾವಹಿತೋ ಮಮ ॥೩೬॥

ಶ್ರಾದ್ಧದ ವಿಧಿಯ ವಿಷಯದಲ್ಲಿ, ಅದರಲ್ಲಿಯೂ ಮೂರು ಪಿಂಡಗಳ ಗತಿಯ ವಿಷಯದಲ್ಲಿ ದೇವದೂತನು ಕೇಳಿದ ಪ್ರಶ್ನೆಗೆ ಉತ್ತರವಾಗಿ ನನ್ನ ಮಾತನ್ನು ಅವಧಾನದಿಂದ ಕೇಳು.

ಅಪೋ ಗಚ್ಛತಿ ಯೋ ಹ್ಯತ್ರ ಶಶಿನಂ ಹ್ಯೇಷ ಪ್ರೀಣಯೇತ್ ।
ಶಶೀ ಪ್ರೀಣಯತೇ ದೇವಾನ್ ಪಿತೄಂಶ್ಚೈವ ಮಹಾಮತೇ ॥೩೭॥

ನೀರಿನಲ್ಲಿ ವಿಸರ್ಜಿಸುವ ಮೊದಲನೆಯ ಪಿಂಡವು ಚಂದ್ರನನ್ನು ಸಂತೋಷ ಪಡಿಸುತ್ತದೆ. ಎಲೈ ಮಹಾಮತಿಯೇ, ಚಂದ್ರನು ದೇವತೆಗಳನ್ನೂ ಮತ್ತು ಪಿತೃಗಳನ್ನೂ ಸಂತೋಷಪಡಿಸುತ್ತಾನೆ.

ಭುಂಕ್ತೇ ತು ಪತ್ನೀ ಯಂ ಚೈಷಾಮನುಜ್ಞಾತಾ ತು ಮಧ್ಯಮಮ್ ।
ಪುತ್ರಕಾಮಾಯ ಪುತ್ರಂ ತು ಪ್ರಯಚ್ಛಂತಿ ಪಿತಾಮಹಾಃ ॥೩೮॥

ಬ್ರಾಹ್ಮಣರ ಅನುಮತಿಯನ್ನು ಪಡೆದು ಪತ್ನಿಯು ಭುಂಜಿಸುವ ಮಧ್ಯಮ ಪಿಂಡವು ಪುತ್ರಕಾಮನಾದ ಯಜಮಾನನಿಗೆ ಪಿತಾಮಹರ ಅನುಗ್ರಹದಿಂದ ಪುತ್ರನು ಜನಿಸುವಂತೆ ಮಾಡುತ್ತದೆ.

ಹವ್ಯವಾಹೇ ತು ಯಃ ಪಿಂಡೋ ದೀಯತೇ ತನ್ನಿಬೋಧ ಮೇ ।
ಪಿತರಸ್ತೇನ ತೃಪ್ಯಂತಿ ಪ್ರೀತಾಃ ಕಾಮಾನ್ ದಿಶಂತಿ ಚ ।
ಏತತ್ತೇ ಕಥಿತಂ ಸರ್ವಂ ತ್ರಿಷು ಪಿಂಡೇಷು ಯಾ ಗತಿಃ ॥೩೯॥

ಅಗ್ನಿಯಲ್ಲಿ ಹಾಕುವ ಪಿಂಡದ ವಿಷಯವನ್ನು ನನ್ನಿಂದ ಕೇಳು. ಅದರಿಂದ ಪಿತೃಗಳು ತೃಪ್ತರಾಗಿ ಅಪೇಕ್ಷಿತವಾದ ಕಾಮಗಳನ್ನು ಕೊಡುತ್ತಾರೆ. ಮೂರು ಪಿಂಡಗಳ ಗತಿಯನ್ನು ನಿನಗೆ ಹೇಳಿದ್ದೇನೆ.

ಋತ್ವಿಗ್ ಯೋ ಯಜಮಾನಸ್ಯ ಪಿತೃತ್ವಮನುಗಚ್ಛತಿ ।
ತಸ್ಮಿನ್ನಹನಿ ಮನ್ಯಂತೇ ಪರಿಹಾರ್ಯಂ ಹಿ ಮೈಥುನಮ್ ॥೪೦॥

ಯಾವ ಋತ್ವಿಜನು ಶ್ರಾದ್ಧ ಮಾಡುವ ಯಜಮಾನನ ಪಿತೃಸ್ಥಾನದಲ್ಲಿ ಕುಳಿತು ಭೋಜನವನ್ನು ಮಾಡುತ್ತಾನೆಯೋ ಆ ದಿವಸ ಮೈಥುನವನ್ನು ವರ್ಜಿಸಬೇಕೆಂದು ಜ್ಞಾನಿಗಳು ತಿಳಿದಿದ್ದಾರೆ.

ಶುಚಿನಾ ತು ಸದಾ ಶ್ರಾದ್ಧಂ ಭೋಕ್ತವ್ಯಂ ಖೇಚರೋತ್ತಮ ।
ಯೇ ಮಯಾ ಕಥಿತಾ ದೋಷಾಸ್ತೇ ತಥಾ ಸ್ಯುರ್ನ ಚಾನ್ಯಥಾ ॥೪೧॥

ಎಲೈ ಖೇಚರೋತ್ತಮನೇ, ಶುಚಿಯಾಗಿ ಕುಳಿತು ಶ್ರಾದ್ಧಭೋಜನವನ್ನು ಮಾಡಬೇಕು. ಇಲ್ಲದಿದ್ದರೆ ನಾನು ಹೇಳಿದ ದೋಷಗಳೆಲ್ಲವೂ ಉಂಟಾಗುತ್ತವೆ.

ತಸ್ಮಾತ್ ಸ್ನಾತಃ ಶುಚಿಃ ಕ್ಷಾಂತಃ ಶ್ರಾದ್ಧಂ ಭುಂಜೀತ ವೈ ದ್ವಿಜಃ ।
ಪ್ರಜಾ ವಿವರ್ಧತೇ ಚಾಸ್ಯ ಯಶ್ಚೈವಂ ಸಂಪ್ರಯಚ್ಛತಿ ॥೪೨॥

ಆದ್ದರಿಂದ ಸ್ನಾನವನ್ನು ಮಾಡಿ ಶುಚಿಯಾಗಿ, ಶಾಂತನಾಗಿ ಬ್ರಾಹ್ಮಣನು ಶ್ರಾದ್ಧ ಭೋಜನವನ್ನು ಮಾಡಬೇಕು. ಆಗ ಶ್ರಾದ್ಧವನ್ನು ಕೊಡುವ ಯಜಮಾನನ ಸಂತತಿಯು ಅಭಿವೃದ್ಧಿಯನ್ನು ಹೊಂದುತ್ತದೆ.

ತತೋ ವಿದ್ಯುತ್ಪ್ರಭೋ ನಾಮ ಋಷಿರಾಹ ಮಹಾತಪಾಃ ।
ಆದಿತ್ಯತೇಜಸಾ ತಸ್ಯ ತುಲ್ಯಂ ರೂಪಂ ಪ್ರಕಾಶತೇ ॥೪೩॥

ಆಗ ಮಹಾತಪಸ್ವಿಯಾದ, ವಿದ್ಯುತ್ಪ್ರಭ ಋಷಿಯು ಮಾತನಾಡಿದನು. ಅವನ ರೂಪವು ಸೂರ್ಯನ ತೇಜಸ್ಸಿಗೆ ಸಮಾನವಾಗಿ ಪ್ರಕಾಶಿಸುತ್ತಿದ್ದಿತು.

ಸ ಚ ಧರ್ಮರಹಸ್ಯಾನಿ ಶ್ರುತ್ವಾ ಶಕ್ರಮಥಾಬ್ರವೀತ್ ॥೪೪॥

ಅವನು ಈ ಧರ್ಮರಹಸ್ಯಗಳನ್ನು ಕೇಳಿ ಇಂದ್ರನನ್ನು ಕುರಿತು ಹೇಳಿದನು.

ತಿರ್ಯಗ್ಯೋನಿಗತಾನ್ ಸತ್ತ್ವಾನ್ ಮರ್ತ್ಯಾ ಹಿಂಸಂತಿ ಮೋಹಿತಾಃ ।
ಕೀಟಾನ್ ಪಿಪೀಲಿಕಾನ್ ಸರ್ಪಾನ್ ಮೇಷಾನ್ ಸಮೃಗಪಕ್ಷಿಣಃ ।
ಕಿಲ್ಬಿಷಂ ಸುಬಹು ಪ್ರಾಪ್ತಾಃ ಕಿಂಸ್ವಿದೇಷಾಂ ಪ್ರತಿಕ್ರಿಯಾ ॥೪೫॥

ಮನುಷ್ಯರು ಮೋಹದಿಂದ ಕೂಡಿದವರಾಗಿ ತಿರ್ಯಗ್ಯೋನಿಯಲ್ಲಿರುವ ಕೀಟಗಳು, ಇಲಿಗಳು, ಸರ್ಪಗಳು, ಹೋತಗಳು, ಮೃಗ-ಪಕ್ಷಿಗಳು - ಇವುಗಳನ್ನು ಕೊಲ್ಲುತ್ತಾರೆ. ಬಹಳ ದೋಷವನ್ನು ಸಂಪಾದಿಸುತ್ತಾರೆ. ಅವರಿಗೆ ಪರಿಹಾರೋಪಾಯವೇನು?

ತತೋ ದೇವಗಣಾಃ ಸರ್ವೇ ಋಷಯಶ್ಚ ತಪೋಧನಾಃ ।
ಪಿತರಶ್ಚ ಮಹಾಭಾಗಾಃ ಪೂಜಯಂತಿ ಸ್ಮ ತಂ ಮುನಿಮ್ ॥೪೬॥

ಆಗ ಎಲ್ಲ ದೇವತಾ ಸಮೂಹಗಳೂ, ತಪೋಧನರಾದ ಋಷಿಗಳೂ, ಮಹಾನುಭಾವರಾದ ಪಿತೃಗಳೂ ಆ ಋಷಿಯನ್ನು ಪೂಜಿಸಿದರು.

ಶಕ್ರಃ

ಕುರುಕ್ಷೇತ್ರಂ ಗಯಾಂ ಗಂಗಾಂ ಪ್ರಭಾಸಂ ಪುಷ್ಕರಾಣಿ ಚ ।
ಏತಾನಿ ಮನಸಾ ಧ್ಯಾತ್ವಾ ಅವಗಾಹೇತ್ ತತೋ ಜಲಮ್ ।
ತಥಾ ಮುಚ್ಯತಿ ಪಾಪೇನ ರಾಹುಣಾ ಚಂದ್ರಮಾ ಯಥಾ ॥೪೭॥

ಇಂದ್ರ– ಕುರುಕ್ಷೇತ್ರ, ಗಯಾ, ಗಂಗೆ, ಪ್ರಭಾಸ, ಪುಷ್ಕರಗಳು ಇವುಗಳನ್ನು ಮನಸ್ಸಿನಲ್ಲಿ ಧ್ಯಾನಿಸಿ ಅನಂತರ ಸ್ನಾನವನ್ನು ಮಾಡಬೇಕು. ಅದರಿಂದ ರಾಹುವಿನಿಂದ ಚಂದ್ರನು ಮುಕ್ತನಾದಂತೆ ಮನುಷ್ಯನು ಪಾಪದಿಂದ ಮುಕ್ತನಾಗುತ್ತಾನೆ.

ತ್ರ್ಯಹಂ ಸ್ನಾತಃ ಸ ಭವತಿ ನಿರಾಹಾರಶ್ಚ ವರ್ತತೇ ।
ಸ್ಪೃಶತೇ ಯೋ ಗವಾಂ ಪೃಷ್ಠಂ ವಾಲಧಿಂ ಚ ನಮಸ್ಯತಿ ॥೪೮॥

ಯಾವನು ನಿರಾಹಾರನಾಗಿ ಗೋವಿನ ಪೃಷ್ಠವನ್ನು ಮತ್ತು ಬಾಲವನ್ನು ಮುಟ್ಟಿ ನಮಸ್ಕರಿಸುತ್ತಾನೆಯೋ ಅವನು ಮೂರು ಸ್ನಾನಗಳನ್ನು ಮಾಡಿದ ಫಲವನ್ನು ಹೊಂದುತ್ತಾನೆ.

ತತೋ ವಿದ್ಯುತ್ಪ್ರಭೋ ವಾಕ್ಯಮಭ್ಯಭಾಷತ ವಾಸವಮ್ ।
ಅಯಂ ಸೂಕ್ಷ್ಮತರೋ ಧರ್ಮಸ್ತಂ ನಿಬೋಧ ಶತಕ್ರತೋ ॥೪೯॥

ಅನಂತರ ವಿದ್ಯುತ್ಪ್ರಭನು ಇಂದ್ರನನ್ನು ಕುರಿತು- 'ಎಲೈ ಶತಕ್ರತುವೇ, ಇದು ಅತ್ಯಂತ ಸೂಕ್ಷ್ಮವಾದ ಧರ್ಮ. ಇದನ್ನು ಕೇಳು.

ಘೃಷ್ಟೋ ವಟಕಷಾಯೇಣ ಅನುಲಿಪ್ತಃ ಪ್ರಿಯಂಗುಣಾ ।
ಕ್ಷೀರೇಣ ಷಷ್ಟಿಕಾನ್ ಭುಕ್ತ್ವಾ ಸರ್ವಪಾಪೈಃ ಪ್ರಮುಚ್ಯತೇ ॥೫೦॥

ವಟಕಷಾಯದಿಂದ ಮತ್ತು ಪ್ರಿಯಂಗುವಿನಿಂದ ಲೇಪಿತನಾಗಿ ಕ್ಷೀರಯುಕ್ತವಾದ ಯವಾನ್ನವನ್ನು ಭುಂಜಿಸುವವನು ಎಲ್ಲ ಪಾಪಗಳಿಂದಲೂ ಮುಕ್ತನಾಗುತ್ತಾನೆ.

ಶ್ರೂಯತಾಂ ಚಾಪರಂ ಗುಹ್ಯಂ ರಹಸ್ಯಮೃಷಿಚಿಂತಿತಮ್ ।
ಶ್ರುತಂ ಮೇ ಭಾಷಮಾಣಸ್ಯ ಸ್ಥಾಣೋಃ ಸ್ಥಾನೇ ಬೃಹಸ್ಪತೇಃ ।
ರುದ್ರೇಣ ಸಹ ದೇವೇಶ ತನ್ನಿಬೋಧ ಶಚೀಪತೇ ॥೫೧॥

ಎಲೈ ಶಚೀಪತಿಯೇ, ಋಷಿಗಳಿಗೆ ಸಮ್ಮತವಾದ ಬಹಳ ಗುಹ್ಯವಾದ ಇನ್ನೊಂದು ವಿಷಯವನ್ನು ಕೇಳು. ಇದನ್ನು ನಾನು ರುದ್ರನ ಸ್ಥಾನವಾದ ಕೈಲಾಸದಲ್ಲಿ ಬೃಹಸ್ಪತಿಗಳ ಜೊತೆಯಲ್ಲಿ ರುದ್ರನು ಮಾತನಾಡುತ್ತಿದ್ದಾಗ ಕೇಳಿದೆನು.

ಪರ್ವತಾರೋಹಣಂ ಕೃತ್ವಾ ಏಕಪಾದೋ ವಿಭಾವಸುಮ್ ।
ನಿರೀಕ್ಷೇತ ನಿರಾಹಾರ ಊರ್ಧ್ವಬಾಹುಃ ಕೃತಾಂಜಲಿಃ ।
ತಪಸಾ ಮಹತಾ ಯುಕ್ತ ಉಪವಾಸಫಲಂ ಲಭೇತ್ ॥೫೨॥

ಪರ್ವತವನ್ನು ಹತ್ತಿ, ಏಕಪಾದದಲ್ಲಿ ನಿಂತು, ನಿರಾಹಾರನಾಗಿ, ಊರ್ಧ್ವಬಾಹುವಾಗಿ ಕೈಗಳನ್ನು ಮುಗಿದು ಸೂರ್ಯನನ್ನು ನೋಡಬೇಕು. ಈ ದೊಡ್ಡ ತಪಸ್ಸಿನಿಂದ ಯುಕ್ತನಾದವನು ಉಪವಾಸಫಲವನ್ನು ಹೊಂದುತ್ತಾನೆ.

ರಶ್ಮಿಭಿಸ್ತಾಪಿತೋಽರ್ಕಸ್ಯ ಸರ್ವಪಾಪಮಪೋಹತಿ ।
ಗ್ರೀಷ್ಮಕಾಲೇಽಥವಾ ಶೀತೇ ಏವಂ ಪಾಪಮಪೋಹತಿ ॥೫೩॥

ಗ್ರೀಷ್ಮಕಾಲದಲ್ಲಿ ಅಥವಾ ಶೀತಕಾಲದಲ್ಲಿ ಸೂರ್ಯನ ಕಿರಣಗಳಿಂದ ತಪ್ತನಾದವನು ಎಲ್ಲ ಪಾಪಗಳನ್ನೂ ಕಳೆದುಕೊಳ್ಳುತ್ತಾನೆ.

ತತಃ ಪಾಪಾತ್ ಪ್ರಮುಕ್ತಸ್ಯ ದ್ಯುತಿರ್ಭವತಿ ಶಾಶ್ವತೀ ।
ತೇಜಸಾ ಸೂರ್ಯವದ್ ದೀಪ್ತೋ ಭ್ರಾಜತೇ ಸೋಮವತ್ ಪುನಃ ॥

ಪಾಪಗಳನ್ನು ಕಳೆದುಕೊಂಡ ಮೇಲೆ ಅವನು ಸೂರ್ಯನಂತೆ ತೇಜಸ್ವಿಯಾಗಿ ಚಂದ್ರನಂತೆ ಬೆಳಗುತ್ತಾನೆ (ಎಂದು ಬೃಹಸ್ಪತಿಗಳು ಹೇಳಿದರು).

ಮಧ್ಯೇ ತ್ರಿದಶವರ್ಗಸ್ಯ ದೇವರಾಜಃ ಶತಕ್ರತುಃ ।
ಉವಾಚ ಮಧುರಂ ವಾಕ್ಯಂ ಬೃಹಸ್ಪತಿಮನುತ್ತಮಮ್ ॥೫೫॥

ದೇವಸಮೂಹದ ಮಧ್ಯದಲ್ಲಿ ದೇವರಾಜನಾದ ಶತಕ್ರತುವು ಶ್ರೇಷ್ಠರಾದ ಬೃಹಸ್ಪತಿಗಳನ್ನು ಮಧುರವಾಗಿ ಪ್ರಶ್ನೆ ಮಾಡಿದನು.

ಧರ್ಮಗುಹ್ಯಂ ತು ಭಗವನ್ ಮಾನುಷಾಣಾಂ ಸುಖಾವಹಮ್ ।
ಸರಹಸ್ಯಾಶ್ಚ ಯೇ ದೋಷಾಸ್ತಾನ್ ಯಥಾವದುದೀರಯ ॥೫೬॥

ಪೂಜ್ಯರೇ, ಮನುಷ್ಯರಿಗೆ ಸುಖವನ್ನುಂಟು ಮಾಡುವ ಗುಹ್ಯವಾದ ಧರ್ಮಗಳನ್ನು ಮತ್ತು ರಹಸ್ಯವಾದ ದೋಷಗಳನ್ನು ಯಥಾರ್ಥವಾಗಿ ನನಗೆ ಹೇಳಿ.

ಬೃಹಸ್ಪತಿಃ

ಪ್ರತಿಮೇಹಂತಿ ಯೇ ಸೂರ್ಯಮನಿಲಂ ದ್ವಿಷತೇ ಚ ಯೇ ।
ಹವ್ಯವಾಹೇ ಪ್ರದೀಪ್ತೇ ಚ ಸಮಿಧಂ ಯೇ ನ ಜುಹ್ವತಿ ॥೫೭॥

ಬಾಲವತ್ಸಾಂ ಚ ಯೇ ಧೇನುಂ ದುಹಂತಿ ಕ್ಷೀರಕಾರಣಾತ್ ।
ತೇಷಾಂ ದೋಷಾನ್ ಪ್ರವಕ್ಷ್ಯಾಮಿ ತಾನ್ನಿಬೋಧ ಶಚೀಪತೇ ॥೫೮॥

ಬೃಹಸ್ಪತಿ– ಯಾರು ಸೂರ್ಯನಿಗೆ ಎದುರಾಗಿ ಮೂತ್ರವಿಸರ್ಜನೆಯನ್ನು ಮಾಡುತ್ತಾರೆಯೋ ವಾಯುವನ್ನು ದ್ವೇಷಿಸುತ್ತಾರೆಯೋ, ಪ್ರದೀಪ್ತವಾದ ಅಗ್ನಿಯಲ್ಲಿ ಸಮಿತ್ತುಗಳನ್ನು ಹಾಕಿ ಹೋಮವನ್ನು ಮಾಡುವುದಿಲ್ಲವೋ, ಎಳೆಗರುವಿನ ತಾಯಿಯಾದ ಹಸುವನ್ನು ಕ್ಷೀರಕ್ಕಾಗಿ ದೋಹನವನ್ನು ಮಾಡುತ್ತಾರೆಯೋ ಅವರ ದೋಷವನ್ನು ಹೇಳುವೆನು. ಎಲೈ ಶಚೀಪತಿಯೇ, ಅದನ್ನು ಕೇಳು.

ಭಾನುಮಾನನಿಲಶ್ಚೈವ ಹವ್ಯವಾಹಶ್ಚ ವಾಸವ ।
ಲೋಕಾನಾಂ ಮಾತರಶ್ಚೈವ ಗಾವಃ ಸೃಷ್ಟಾಃ ಸ್ವಯಂಭುವಾ ॥೫೯॥

ಎಲೈ ಇಂದ್ರನೇ, ಸೂರ್ಯ, ಅನಿಲ, ಅಗ್ನಿ, ಲೋಕಮಾತೆಯರಾದ ಗೋವುಗಳು ಎಲ್ಲರೂ ಬ್ರಹ್ಮದೇವನಿಂದ ಸೃಷ್ಟರಾಗಿದ್ದಾರೆ.

ಲೋಕಾಂಸ್ತಾರಯಿತುಂ ಶಕ್ತಾ ಮರ್ತ್ಯೇಷ್ವೇತೇಷು ದೇವತಾಃ ।
ಸರ್ವೇ ಭವಂತಃ ಶೃಣ್ವಂತು ಏಕೈಕಂ ಧರ್ಮನಿಶ್ಚಯಮ್ ॥೬೦॥

ಈ ದೇವತೆಗಳೆಲ್ಲರೂ ಈ ಮನುಷ್ಯರನ್ನು ಪಾಪಗಳಿಂದ ದಾಟಿಸಲು ಸಮರ್ಥರಾಗಿದ್ದಾರೆ. ನೀವೆಲ್ಲರೂ ಒಂದೊಂದು ಧರ್ಮನಿಶ್ಚಯವನ್ನು ಕೇಳಿ.

ವರ್ಷಾಣಿ ಷಡಶೀತಿಂ ತು ದುರ್ವೃತ್ತಾಃ ಕುಲಪಾಂಸನಾಃ ।
ಸ್ತ್ರಿಯಃ ಸರ್ವಾಶ್ಚ ದುರ್ವೃತ್ತಾಃ ಪ್ರತಿಮೇಹಂತಿ ಯಾ ರವಿಮ್ ॥೬೧॥

ದುರ್ನಡತೆಯುಳ್ಳ, ಕುಲಘಾತಕರಾದ ಪುರುಷರು ಮತ್ತು ದುರ್ನಡತೆಯನ್ನು ಹೊಂದಿ, ಸೂರ್ಯನಿಗೆ ಎದುರಾಗಿ ಮೂತ್ರ ಮಾಡುವ ಸ್ತ್ರೀಯರು ಎಂಬತ್ತಾರು ವರ್ಷಗಳ ಕಾಲ (ನರಕದಲ್ಲಿ) ದುಃಖವನ್ನು ಅನುಭವಿಸುತ್ತಾರೆ.

ಅನಿಲದ್ವೇಷಿಣಃ ಶಕ್ರ ಗರ್ಭಸ್ರಾ ಚ್ಯವತೇ ಪ್ರಜಾ ।
ಹವ್ಯವಾಹಸ್ಯ ದೀಪ್ತಸ್ಯ ಸಮಿಧಂ ಯೇ ನ ಜುಹ್ವತಿ ।
ಅಗ್ನಿಕಾರ್ಯೇಷು ವೈ ತೇಷಾಂ ಹವ್ಯಂ ನಾಶ್ನಾತಿ ಪಾವಕಃ ॥೬೨॥

ಎಲೈ ಶಕ್ರನೇ, ವಾಯುವನ್ನು ದ್ವೇಷಿಸುವವರ ಸಂತತಿಯು ಗರ್ಭಸ್ರಾವದಿಂದಲೇ ನಾಶ ಹೊಂದುತ್ತದೆ. ದೀಪ್ತವಾದ ಅಗ್ನಿಯಲ್ಲಿ ಯಾರು ಸಮಿತ್ತುಗಳಿಂದ ಹೋಮವನ್ನು ಮಾಡುವುದಿಲ್ಲವೋ ಅಂತಹವರು ಅಗ್ನಿಕಾರ್ಯದಲ್ಲಿ ಕೊಟ್ಟ ಹವಿಸ್ಸನ್ನು ಅಗ್ನಿಯು ಸ್ವೀಕರಿಸುವುದಿಲ್ಲ.

ಕ್ಷೀರಂ ತು ಬಾಲವತ್ಸಾನಾಂ ಯೇ ಪಿಬಂತೀಹ ಮಾನವಾಃ ।
ನ ತೇಷಾಂ ಕ್ಷೀರಪಾಃ ಕೇಚಿಜ್ಜಾಯಂತೇ ಕುಲವರ್ಧನಾಃ ॥೬೩॥

ಎಳೆಗರುಗಳಿರುವ ಧೇನುಗಳ ಹಾಲನ್ನು ಯಾರು ಕರೆಯುತ್ತಾರೆಯೋ ಅವರ ಕುಲದಲ್ಲಿ ಸ್ತನ್ಯಪಾನವನ್ನು ಮಾಡಿ ಕುಲವನ್ನು ಅಭಿವೃದ್ಧಿಪಡಿಸುವ ಶಿಶುಗಳು ಜನಿಸುವುದಿಲ್ಲ.

ಪ್ರಜಾಕ್ಷಯೇಣ ಯುಜ್ಯಂತೇ ಕುಲವಂಶಕ್ಷಯೇಣ ಚ ।
ಏವಮೇತತ್ ಪುರಾ ದೃಷ್ಟಂ ಕುಲವೃದ್ಧೈರ್ದ್ವಿಜಾತಿಭಿಃ ॥೬೪॥

ಪ್ರಜೆಗಳು ನಾಶವನ್ನು ಹೊಂದುತ್ತಾರೆ. ಕುಲವೂ ನಾಶವನ್ನು ಹೊಂದುತ್ತದೆ. ಕುಲವೃದ್ಧರಾದ ಬ್ರಾಹ್ಮಣರು ಹೀಗೆ ಹಿಂದೆಯೇ ತೀರ್ಮಾನಿಸಿದ್ದಾರೆ.

ತಸ್ಮಾದ್ ವರ್ಜ್ಯಾನಿ ವರ್ಜ್ಯಾನಿ ಕಾರ್ಯಂ ಕಾರ್ಯಂ ಚ ನಿತ್ಯಶಃ ।
ಭೂತಿಕಾಮೇನ ಮರ್ತ್ಯೇನ ಸತ್ಯಮೇತದ್ ಬ್ರವೀಮಿ ತೇ ॥೬೫॥

ಆದ್ದರಿಂದ ಕಲ್ಯಾಣವನ್ನು ಬಯಸುವ ಮನುಷ್ಯನು ಬಿಡಬೇಕಾದುದನ್ನು ಬಿಡಬೇಕು. ಮಾಡಬೇಕಾದುದನ್ನು ನಿತ್ಯವೂ ಮಾಡಬೇಕು. ಇದನ್ನು ಸತ್ಯವಾಗಿ ನಿನಗೆ ಹೇಳುತ್ತಿದ್ದೇನೆ.

ತತಃ ಸರ್ವೇ ಮಹಾಭಾಗ ದೇವತಾಃ ಸಮರುದ್ಗಣಾಃ ।
ಋಷಯಶ್ಚ ಮಹಾಭಾಗಾಃ ಪೃಚ್ಛಂತಿ ಸ್ಮ ಪಿತೃಂಸ್ತತಃ ॥೬೬॥

ಎಲೈ ಮಹಾನುಭಾವನೇ, ಆಗ ಎಲ್ಲ ದೇವತೆಗಳು ಮತ್ತು ಮರುದ್ಗಣಗಳು, ಮಹಾನುಭಾವರಾದ ಋಷಿಗಳು ಪಿತೃಗಳನ್ನು ಕೇಳಿದರು.

ಪಿತರಃ ಕೇನ ತುಷ್ಯಂತಿ ಮರ್ತ್ಯಾನಾಮಲ್ಪಚೇತಸಾಮ್ ।
ಅಕ್ಷಯಂ ಚ ಕಥಂ ದಾನಂ ಭವೇಚ್ಚೈವೌರ್ಧ್ವದೇಹಿಕಮ್ ॥೬೭॥

ಅಲ್ಪಚೇತನರಾದ ಮರ್ತ್ಯರ ಮೇಲೆ ಪಿತೃಗಳು ಹೇಗೆ ಸಂತುಷ್ಟರಾಗುತ್ತಾರೆ? ಮಾನವರು ಮಾಡಿದ ಔರ್ಧ್ವದೈಹಿಕ ದಾನವು ಹೇಗೆ ಅಕ್ಷಯವಾಗುತ್ತದೆ?

ಆನೃಣ್ಯಂ ವಾ ಕಥಂ ಮರ್ತ್ಯಾ ಗಚ್ಛೇಯುಃ ಕೇನ ಕರ್ಮಣಾ ।
ಏತದಿಚ್ಛಾಮಹೇ ಶ್ರೋತುಂ ಪರಂ ಕೌತೂಹಲಂ ಹಿ ನಃ ॥೬೮॥

ಮನುಷ್ಯರು ಯಾವ ಕರ್ಮದಿಂದ ಋಣಮುಕ್ತರಾಗುತ್ತಾರೆ? ಇದನ್ನು ನಾವು ಕೇಳಲು ಬಯಸುತ್ತೇವೆ. ನಮಗೆ ಈ ವಿಷಯದಲ್ಲಿ ಬಹಳ ಕುತೂಹಲವಿದೆ.

ಪಿತರಃ

ನ್ಯಾಯತೋ ವೈ ಮಹಾಭಾಗಾಃ ಸಂಶಯಃ ಸಮುದಾಹೃತಃ ।
ಶ್ರೂಯತಾಂ ಯೇನ ತುಷ್ಯಾಮೋ ಮರ್ತ್ಯಾನಾಂ ಸಾಧುಕರ್ಮಣಾಮ್ ॥

ಪಿತೃಗಳು– ಎಲೈ ಮಹಾನುಭಾವರೇ, ನ್ಯಾಯವಾಗಿಯೇ ನೀವು ಸಂಶಯವನ್ನು ಹೇಳಿದ್ದೀರಿ. ಸತ್ಕರ್ಮವನ್ನು ಮಾಡುವ ಮನುಷ್ಯರ ಮೇಲೆ ನಾವು ಹೇಗೆ ಪ್ರಸನ್ನರಾಗುತ್ತೇವೆ ಎಂಬುದನ್ನು ಕೇಳಿ.

ನೀಲಷಂಡಪ್ರಮೋಕ್ಷೇಣ ಅಮಾವಾಸ್ಯಾಂ ತಿಲೋದಕೈಃ ।
ವರ್ಷಾಸು ದೀಪಕೈಶ್ಚೈವ ಪಿತೄಣಾಮನೃಣೋ ಭವೇತ್ ॥೭೦॥

ನೀಲವೃಷೋತ್ಸರ್ಗವನ್ನು ಮಾಡುವುದರಿಂದ, ಅಮಾವಾಸ್ಯೆಯಂದು ತರ್ಪಣ ಕೊಡುವುದರಿಂದ, ಮಳೆಗಾಲದಲ್ಲಿ ದೀಪದಾನ ಮಾಡುವುದರಿಂದ ಮಾನವನು ಪಿತೃ ಋಣದಿಂದ ಮುಕ್ತನಾಗುತ್ತಾನೆ.

ಅಕ್ಷಯಂ ನಿರ್ವ್ಯಲೀಕಂ ಚ ದಾನಮೇತನ್ಮಹಾಫಲಮ್ ।
ಅಸ್ಮಾಕಂ ಪರಿತೋಷಶ್ಚ ಅಕ್ಷಯಃ ಪರಿಕೀರ್ತ್ಯತೇ ॥೭೧॥

ನಿಷ್ಕಪಟತನದಿಂದ ಮಾಡುವ ಈ ದಾನವು ಅಕ್ಷಯವಾದ ಮಹಾಫಲವನ್ನು ಕೊಡುತ್ತದೆ. ನಮಗೂ ಸಹ ಅಕ್ಷಯವಾದ ಸಂತೋಷವನ್ನು ಉಂಟು ಮಾಡುತ್ತದೆ ಎಂದೂ ಹೇಳಲ್ಪಡುತ್ತದೆ.

ಶ್ರದ್ಧಾನಾಶ್ಚ ಯೇ ಮರ್ತ್ಯಾ ಆಹರಿಷ್ಯಂತಿ ಸಂತತಿಮ್ ।
ದುರ್ಗಾತ್ ತೇ ತಾರಯಿಷ್ಯಂತಿ ನರಕಾತ್ ಪ್ರಪಿತಾಮಹಾನ್ ॥೭೨॥

ಶ್ರದ್ಧೆಯಿಂದ ಈ ದಾನಾದಿ ಕಾರ್ಯವನ್ನು ಮಾಡುವ ಮನುಷ್ಯರಿಗೆ ಅವರ ದಾನಗಳು ಸಂತತಿಯನ್ನು ಬೆಳೆಸುತ್ತವೆ, ಕಷ್ಟಗಳಿಂದ ದಾಟಿಸುತ್ತವೆ ಮತ್ತು ಅವರ ಪ್ರಪಿತಾಮಹರನ್ನು ನರಕದಿಂದ ಉದ್ಧರಿಸುತ್ತವೆ.

ಪಿತೄಣಾಂ ಭಾಷಿತಂ ಶ್ರುತ್ವಾ ಹೃಷ್ಟರೋಮಾ ತಪೋಧನಃ ।
ವೃದ್ಧಗಾರ್ಗ್ಯೋ ಮಹಾತೇಜಾಸ್ತಾನೇವಂ ವಾಕ್ಯಮಬ್ರವೀತ್ ॥೭೩॥

ಕೇ ಗುಣಾ ನೀಲಷಂಡಸ್ಯ ಪ್ರಮುಕ್ತಸ್ಯ ತಪೋಧನಾಃ ।
ವರ್ಷಾಸು ದೀಪದಾನೇನ ತಥೈವ ಚ ತಿಲೋದಕೈಃ ॥೭೪॥

ಪಿತೃಗಳ ಮಾತನ್ನು ಕೇಳಿ ರೋಮಾಂಚಗೊಂಡ ತಪೋಧನರಾದ, ಮಹಾತೇಜಸ್ವಿಗಳಾದ ವೃದ್ಧಗಾರ್ಗ್ಯರೆಂಬ ಋಷಿಗಳು ಪಿತೃಗಳನ್ನು ಕುರಿತು- 'ಎಲೈ ತಪೋಧನರೇ, ನೀಲ ವೃಷೋತ್ಸರ್ಗದಿಂದ ಏನು ಫಲ ಉಂಟಾಗುತ್ತದೆ? ಮಳೆಗಾಲದಲ್ಲಿ ದೀಪದಾನದಿಂದಲೂ, ಅಮಾವಾಸ್ಯೆಯ ತರ್ಪಣದಿಂದಲೂ ಯಾವ ಫಲ ಉಂಟಾಗುತ್ತದೆ?' ಎಂದು ಕೇಳಿದರು.

ಪಿತರಃ

ನೀಲಷಂಡಸ್ಯ ಲಾಂಗೂಲಂ ತೋಯಮಭ್ಯುದ್ಧರೇದ್ ಯದಿ ।
ಷಷ್ಟಿ ವರ್ಷಸಹಸ್ರಾಣಿ ಪಿತರಸ್ತೇನ ತರ್ಪಿತಾಃ ॥೭೫॥

ಪಿತೃಗಳು– ನೀಲವೃಷವು ತನ್ನ ಬಾಲವನ್ನು ನೀರಿನಲ್ಲಿ ಅದ್ದಿ ಎತ್ತಿದರೆ ಪಿತೃಗಳು ಅರವತ್ತು ಸಹಸ್ರ ವರ್ಷಗಳ ಕಾಲ ತೃಪ್ತಿಯನ್ನು ಹೊಂದುತ್ತಾರೆ.

ಯಸ್ತು ಶೃಂಗಗತಂ ಪಂಕಂ ಕೂಲಾದುದ್ಧೃತ್ಯ ತಿಷ್ಠತಿ ।
ಪಿತರಸ್ತೇನ ಗಚ್ಛಂತಿ ಸೋಮಲೋಕಮಸಂಶಯಮ್ ॥೭೬॥

ಆ ವೃಷಭವು ದಡದ ಮಣ್ಣನ್ನು ಕೊಂಬಿನಿಂದ ತಿವಿದು ಎತ್ತಿ ನಿಂತರೆ ಪಿತೃಗಳು ನಿಸ್ಸಂಶಯವಾಗಿ ಚಂದ್ರಲೋಕಕ್ಕೆ ಹೋಗುತ್ತಾರೆ.

ವರ್ಷಾಸು ದೀಪದಾನೇನ ಶಶಿವಚ್ಛೋಭತೇ ನರಃ ।
ತಮೋರೂಪಂ ನ ತಸ್ಯಾಸ್ತಿ ದೀಪಕಂ ಯಃ ಪ್ರಯಚ್ಛತಿ ॥೭೭॥

ಮಳೆಗಾಲದಲ್ಲಿ ದೀಪದಾನವನ್ನು ಮಾಡುವ ನರನು ಚಂದ್ರನಂತೆ ಶೋಭಿಸುತ್ತಾನೆ. ದೀಪದಾನ ಮಾಡುವವನಿಗೆ ಯಾವ ತಾಮಸಲೋಕವೂ ಉಂಟಾಗುವುದಿಲ್ಲ.

ಅಮಾವಾಸ್ಯಾಂ ತು ಯೇ ಮರ್ತ್ಯಾಃ ಪ್ರಯಚ್ಛಂತಿ ತಿಲೋದಕಮ್ ।
ಪಾತ್ರಮೌದುಂಬರಂ ಗೃಹ್ಯ ಮಧುಮಿಶ್ರಂ ತಪೋಧನ ।
ಕೃತಂ ಭವತಿ ತೈಃ ಶ್ರಾದ್ಧಂ ಸರಹಸ್ಯಂ ಯಥಾರ್ಥವತ್ ॥೭೮॥

ಎಲೈ ತಪೋಧನನೇ, ಯಾವ ಮನುಷ್ಯರು ಅಮಾವಾಸ್ಯೆಯಂದು ಔದುಂಬರದಿಂದ ಮಾಡಿದ ಪಾತ್ರೆಯನ್ನು ಹಿಡಿದು ಮಧುಮಿಶ್ರವಾದ ತಿಲೋದಕವನ್ನು ಕೊಡುತ್ತಾರೆಯೋ ಅವರು ರಹಸ್ಯವಾಗಿ, ಯಥಾರ್ಥವಾಗಿ ಶ್ರಾದ್ಧವನ್ನೇ ಮಾಡಿರುತ್ತಾರೆ.

ಹೃಷ್ಟಪುಷ್ಟಮನಾಸ್ತೇಷಾಂ ಪ್ರಜಾ ಭವತಿ ನಿತ್ಯದಾ ।
ಕುಲವಂಶಸ್ಯ ವೃದ್ಧಿಸ್ತು ಪಿಂಡದಸ್ಯ ಫಲಂ ಭವೇತ್ ।
ಶ್ರದ್ದಧಾನಸ್ತು ಯಃ ಕುರ್ಯಾತ್ ಪಿತೄಣಾಮನೃಣೋ ಭವೇತ್ ॥೭೯॥

ಅವರ ಪ್ರಜೆಗಳು ಯಾವಾಗಲೂ ಹೃಷ್ಟಪುಷ್ಟರಾಗಿ ಇರುತ್ತಾರೆ. ಪಿಂಡಪ್ರದಾನವನ್ನು ಮಾಡುವವನಿಗೆ ಕುಲವೃದ್ಧಿಯುಂಟಾಗುತ್ತದೆ. ಶ್ರದ್ಧೆಯಿಂದ ಮಾಡುವವನು ಪಿತೃ ಋಣದಿಂದ ಮುಕ್ತನಾಗುತ್ತಾನೆ.

ಏವಮೇವ ಸಮುದ್ದಿಷ್ಟಃ ಶ್ರಾದ್ಧಕಾಲಕ್ರಮಸ್ತಥಾ ।
ವಿಧಿಃ ಪಾತ್ರಂ ಫಲಂ ಚೈವ ಯಥಾವದನುಕೀರ್ತಿತಮ್ ॥೮೦॥

ಈ ರೀತಿಯಾಗಿಯೇ ಶ್ರಾದ್ಧದ ಕಾಲ, ಕ್ರಮ, ವಿಧಾನ, ಪಾತ್ರ ಮತ್ತು ಫಲಗಳನ್ನು ಯಥಾರ್ಥವಾಗಿ ವರ್ಣಿಸಿದ್ದೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಶ್ರಾದ್ಧರಹಸ್ಯಕಥನಂ ನಾಮ
ಸಪ್ತಸಪ್ತತ್ಯುತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಎಪ್ಪತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಪ್ಪತ್ತೆಂಟನೆಯ ಅಧ್ಯಾಯ

ದೇವತೆಗಳಿಂದ ಶ್ರಾದ್ಧಾದಿಧರ್ಮೋಪದೇಶ

ಭೀಷ್ಮಃ

ಕೇನ ತೇ ಚ ಭವೇತ್ ಪ್ರೀತಿಃ ಕಥಂ ತುಷ್ಟಿಂ ತು ಗಚ್ಛಸಿ ।
ಇತಿ ಪೃಷ್ಟಃ ಸುರೇಂದ್ರೇಣ ಪ್ರೋವಾಚ ಹರಿರವ್ಯಯಃ ॥೧॥

ಭೀಷ್ಮ– ಯಾವುದರಿಂದ ನಿನಗೆ ಪ್ರೀತಿಯುಂಟಾಗುತ್ತದೆ? ಯಾವುದರಿಂದ ಸಂತೋಷವುಂಟಾಗುತ್ತದೆ ಎಂದು ಸುರೇಂದ್ರನಿಂದ ಕೇಳಲ್ಪಟ್ಟ ಅವ್ಯಯನಾದ ಹರಿಯು ಮಾತನಾಡಿದನು.

ಬ್ರಾಹ್ಮಣಾನಾಂ ಪರೀವಾದೋ ಮಮ ವಿದ್ವೇಷಣಂ ಮಹತ್ ।
ಬ್ರಾಹ್ಮಣೈಃ ಪೂಜಿತೈರ್ನಿತ್ಯಂ ಪೂಜಿತೋऽಹಂ ನ ಸಂಶಯಃ ॥೨॥

ನಿತ್ಯಾಭಿವಾದ್ಯಾ ವಿಪ್ರೇಂದ್ರಾ ಭುಕ್ತ್ವಾ ಪಾದೌ ತಥಾऽऽತ್ಮನಃ ।
ತೇಷಾಂ ತುಷ್ಯಾಮಿ ಮರ್ತ್ಯಾನಾಂ ಯಶ್ಚಕ್ರೇ ಚ ಬಲಿಂ ಹರೇತ್ ॥೩॥

ಹರಿ-ಬ್ರಾಹ್ಮಣರ ನಿಂದೆಯು ನನಗೆ ಬಹಳ ವಿದ್ವೇಷಕ್ಕೆ ಕಾರಣವಾದುದು. ನಿತ್ಯವೂ ಬ್ರಾಹ್ಮಣರನ್ನು ಪೂಜಿಸಿದರೆ ನಾನು ಪೂಜಿಸಲ್ಪಡುತ್ತೇನೆ. ಇದರಲ್ಲಿ ಸಂಶಯವಿಲ್ಲ. ನಿತ್ಯವೂ ಬ್ರಾಹ್ಮಣಶ್ರೇಷ್ಠರಿಗೆ ನಮಸ್ಕಾರವನ್ನು ಮಾಡಬೇಕು. ಭೋಜನವಾದ ನಂತರ ತನ್ನ ಕಾಲನ್ನು ಸ್ಪರ್ಶಿಸಬೇಕು ಮತ್ತು ವರ್ತುಲಾಕಾರ ಮಂಡಲದಲ್ಲಿ ಬಲಿಹರಣವನ್ನು ಮಾಡಬೇಕು. ಇದರಿಂದ ನಾನು ಮಾನವರಿಗೆ ಸಂತುಷ್ಟನಾಗುವೆನು (ಲಕ್ಷಾಲಂಕಾರ).

ವಾಮನಂ ಬ್ರಾಹ್ಮಣಂ ದೃಷ್ಟ್ವಾ ವರಾಹಂ ಚ ಜಟೋಚ್ಛ್ರಿತಮ್ ।
ಉದ್ಧೃತಾಂ ಧರಣೀಂ ಚೈವ ಮೂರ್ಧ್ನಾ ಧಾರಯತೇ ತು ಯಃ ।
ನ ತೇಷಾಮಶುಭಂ ಕಿಂಚಿತ್ ಕಲ್ಮಷಂ ಚೋಪಪದ್ಯತೇ ॥೪॥

ಕುಬ್ಜನಾದ ಬ್ರಾಹ್ಮಣನನ್ನು ನೋಡಿ ವಾಮನನಿಗೆ ನಮಸ್ಕಾರ ಮಾಡುವಂತೆ ನಮಸ್ಕಾರ ಮಾಡಬೇಕು. ಜಟೆಯನ್ನು ಹೊಂದಿದ ಬ್ರಾಹ್ಮಣನನ್ನು ನೋಡಿ ವರಾಹನಿಗೆ ನಮಸ್ಕಾರ ಮಾಡುವಂತೆ ನಮಸ್ಕಾರ ಮಾಡಬೇಕು. ವಾಮನ ಮತ್ತು ವರಾಹರ ರೂಪದಿಂದ ಉದ್ಧರಿಸಲ್ಪಟ್ಟ ಭೂಮಿಯನ್ನು ನೋಡಿ ಆ ಮೃತ್ತಿಕೆಯನ್ನು ತಲೆಯ ಮೇಲೆ ಧರಿಸಬೇಕು. ಅಂತಹವರಿಗೆ ಯಾವ ಅಶುಭವಾಗಲೀ, ದೋಷವಾಗಲೀ ಉಂಟಾಗುವುದಿಲ್ಲ.

ಅಶ್ವತ್ಥಂ ರೋಚನಾಂ ಗಾಂ ಚ ಪೂಜಯೇದ್ ಯೋ ನರಃ ಸದಾ ।
ಪೂಜಿತಂ ಚ ಜಗತ್ ತೇನ ಸದೇವಾಸುರಮಾನುಷಮ್ ॥೫॥

ಅಶ್ವತ್ಥವೃಕ್ಷ, ಗೋರೋಚನ ಮತ್ತು ಗೋವುಗಳನ್ನು ಯಾವ ನರನು ಯಾವಾಗಲೂ ಪೂಜಿಸುತ್ತಾನೋ ಅವನು ದೇವಾಸುರ-ಮನುಷ್ಯರಿಂದ ಕೂಡಿದ ಜಗತ್ತನ್ನೇ ಪೂಜಿಸುತ್ತಾನೆ.

ತೇನ ರೂಪೇಣ ತೇಷಾಂ ಚ ಪೂಜಾಂ ಗೃಹ್ಣಾಮಿ ತತ್ತ್ವತಃ ।
ಪೂಜಾ ಮಮೈಷಾ ನಾನ್ಯಸ್ಯಾ ಯಾವಲ್ಲೋಕಾಃ ಪ್ರತಿಷ್ಠಿತಾಃ ॥೬॥

ಆ ರೂಪದಿಂದ ನಾನೇ ಆ ಪೂಜೆಗಳನ್ನು ಸ್ವೀಕರಿಸುತ್ತೇನೆ. ಅವುಗಳು ಲೋಕಗಳು ಇರುವವರೆಗೆ ನನ್ನ ಪೂಜೆಯೇ ಆಗುತ್ತವೆ, ಬೇರೆ ಪೂಜೆಯಾಗುವುದಿಲ್ಲ.

ಅನ್ಯಥಾ ಹಿ ವೃಥಾ ಮರ್ತ್ಯಾಃ ಪೂಜಯಂತ್ಯಲ್ಪಬುದ್ಧಯಃ ।
ನಾಹಂ ತತ್‌ಪ್ರತಿಗೃಹ್ಣಾಮಿ ನ ಸಾ ತುಷ್ಟಿಕರೀ ಮಮ ॥೭॥

ಅಲ್ಪಬುದ್ಧಿಯುಳ್ಳ ಮನುಷ್ಯರು ಬೇರೆ ರೀತಿಯಲ್ಲಿ ವ್ಯರ್ಥವಾಗಿ ಪೂಜೆ ಮಾಡುತ್ತಾರೆ. ಅದನ್ನು ನಾನು ಸ್ವೀಕರಿಸುವುದಿಲ್ಲ ಮತ್ತು ಆ ಪೂಜೆಯಿಂದ ನನಗೆ ಸಂತೋಷವೂ ಆಗುವುದಿಲ್ಲ.

ಇಂದ್ರಃ

ಚಕ್ರಂ ಪಾದೌ ವರಾಹಂ ಚ ಬ್ರಾಹ್ಮಣಂ ಚಾಪಿ ವಾಮನಮ್ ।
ಉದ್ಧೃತಾಂ ಧರಣೀಂ ಚೈವ ಕಿಮರ್ಥಂ ತ್ವಂ ಪ್ರಶಂಸಸಿ ॥೮॥

ಭವಾನ್‌ಸೃಜತಿ ಭೂತಾನಿ ಭವಾನ್ ಸುಂಹರತಿ ಪ್ರಜಾಃ ।
ಪ್ರಕೃತಿಃ ಸರ್ವಭೂತಾನಾಂ ಸಮರ್ತ್ಯಾನಾಂ ಸನಾತನೀ ॥೯॥

ಇಂದ್ರ– ಮಂಡಲ, ಪಾದಗಳು, ವರಾಹ, ಕುಬ್ಜನಾದ ಬ್ರಾಹ್ಮಣ ಮತ್ತು ಉದ್ಧೃತವಾದ ಭೂಮಿ - ಇವುಗಳನ್ನು ನೀನು ಏತಕ್ಕೆ ಪ್ರಶಂಸಿಸುತ್ತಿದ್ದೀಯೆ? ನೀನು ಪ್ರಜೆಗಳನ್ನು ಸೃಷ್ಟಿಸುತ್ತೀಯೆ. ಅವರನ್ನು ಸಂಹಾರ ಮಾಡುತ್ತೀಯೆ. ಮನುಷ್ಯರನ್ನೂ ಸೇರಿ ಎಲ್ಲ ಪ್ರಾಣಿಗಳೂ ಅವರ ಸ್ವಭಾವವೂ ಅನಾದಿಕಾಲದಿಂದಲೂ ಬಂದಿವೆ.

ಭೀಷ್ಮಃ

ಸಂಪ್ರಹಸ್ಯ ತತೋ ವಿಷ್ಣುರಿದಂ ವಚನಮಬ್ರವೀತ್ ।
ಚಕ್ರೇಣ ನಿಹತಾ ದೈತ್ಯಾಃ ಪದ್ಭ್ಯಾಂ ಕ್ರಾಂತಾ ವಸುಂಧರಾ ॥೧೦॥

ಭೀಷ್ಮ– ವಿಷ್ಣುವು ನಕ್ಕು ಆಗ ಹೀಗೆ ಮಾತನಾಡಿದನು: ನಾನು ಚಕ್ರದಿಂದ ದೈತ್ಯರನ್ನು ಸಂಹಾರ ಮಾಡಿದೆ. ಪಾದಗಳಿಂದ ಭೂಮಿಯನ್ನು ಅಳೆದೆ.

ವಾರಾಹಂ ರೂಪಮಾಸ್ಥಾಯ ಉದ್ಧೃತಾ ಚ ವಸುಂಧರಾ ।
ವಾಮನಂ ರೂಪಮಾಸ್ಥಾಯ ಜಿತೋ ರಾಜಾ ಮಯಾ ಬಲಿಃ ॥೧೧॥

ವರಾಹರೂಪವನ್ನು ಧರಿಸಿ ಭೂಮಿಯನ್ನು ಎತ್ತಿದೆ. ವಾಮನ ರೂಪವನ್ನು ಧರಿಸಿ ಬಲಿಯನ್ನು ಜಯಿಸಿದೆ.

ಪರಿತುಷ್ಟೋ ಭವಾಮ್ಯೇವಂ ಮಾನುಷಾಣಾಂ ಮಹಾತ್ಮನಾಮ್ ।
ತನ್ಮಾಂ ಯೇ ಪೂಜಯಿಷ್ಯಂತಿ ನಾಸ್ತಿ ತೇಷಾಂ ಪರಾಭವಃ ॥೧೨॥

ಈ ರೀತಿಯಾಗಿ ಮಹಾತ್ಮರಾದ ಬ್ರಾಹ್ಮಣರಿಗೆ ನಾನು ಸಂತುಷ್ಟನಾಗುತ್ತೇನೆ. ಹೀಗೆ ನನ್ನನ್ನು ಯಾರು ಪೂಜಿಸುವರೋ ಅವರಿಗೆ ಪರಾಭವವುಂಟಾಗುವುದಿಲ್ಲ.

ಅಪಿ ವಾ ಬ್ರಾಹ್ಮಣಂ ದೃಷ್ಟ್ವಾ ಬ್ರಹ್ಮಚಾರಿಣಮಾಗತಮ್ ।
ಬ್ರಾಹ್ಮಣಾಯಾಹುತಿಂ ದತ್ತ್ವಾ ಅಮೃತಂ ತಸ್ಯ ಭೋಜನಮ್ ॥೧೩॥

ಅಥವಾ ಮನೆಗೆ ಬಂದ ಬ್ರಹ್ಮಚಾರಿಯಾದ ಬ್ರಾಹ್ಮಣನನ್ನು ನೋಡಿ ಅವನಿಗೆ ಮೊದಲಿಗೆ ಆಹುತಿಯನ್ನು ನೀಡಿ ಅನಂತರ ಭೋಜನವನ್ನು ಮಾಡುವವನು ಅಮೃತವನ್ನೇ ಭುಂಜಿಸುತ್ತಾನೆ.

ಐಂದ್ರೀಂ ಸಂಧ್ಯಾಮುಪಾಸಿತ್ವಾ ಆದಿತ್ಯಾಭಿಮುಖಃಸ್ಥಿತಃ ।
ಸರ್ವತೀರ್ಥೇಷು ಸ ಸ್ನಾತೋ ಮುಚ್ಯತೇ ಸರ್ವಕಿಲ್ಬಿಷೈಃ ॥೧೪॥

ಸೂರ್ಯನಿಗೆ ಅಭಿಮುಖವಾಗಿ ನಿಂತು ಪ್ರಾತಃಕಾಲ ಸಂಧ್ಯಾವಂದನೆಯನ್ನು ಮಾಡುವವನೂ, ಸರ್ವತೀರ್ಥಗಳಲ್ಲಿ ಸ್ನಾನವನ್ನು ಮಾಡುವವನೂ ಎಲ್ಲ ದೋಷಗಳಿಂದಲೂ ಮುಕ್ತರಾಗುತ್ತಾನೆ.

ಏತದ್ ವಃ ಕಥಿತಂ ಗುಹ್ಯಮಖಿಲೇನ ತಪೋಧನಾಃ ।
ಸಂಶಯಂ ಪೃಚ್ಛಮಾನಾನಾಂ ಕಿಂ ಭೂಯಃ ಕಥಯಾಮ್ಯಹಮ್ ॥೧೫॥

ಎಲೈ ತಪೋಧನರೇ, ನಿಮ್ಮ ಸಂಶಯಕ್ಕೆ ಉತ್ತರವಾಗಿ ನಾನು ರಹಸ್ಯವಾದ ಇವೆಲ್ಲವನ್ನೂ ಹೇಳಿದ್ದೇನೆ. ಇನ್ನೂ ಏನು ಹೇಳಲಿ?

ಬಲದೇವಃ

ಶ್ರೂಯತಾಂ ಪರಮಂ ಗುಹ್ಯಂ ಮಾನುಷಾಣಾಂ ಸುಖಾವಹಮ್ ।
ಅಜಾನಂತೋ ಯದಬುಧಾಃ ಕ್ಲಿಶ್ಯಂತೇ ಭೂತಪೀಡಿತಾಃ ॥೧೬॥

ಬಲದೇವ– ಮನುಷ್ಯರಿಗೆ ಸುಖವನ್ನು ಉಂಟುಮಾಡುವ ಪರಮರಹಸ್ಯವಾದ ಈ ವಿಷಯವನ್ನು ಕೇಳಿ. ಜ್ಞಾನವಿಲ್ಲದವರು ಇದನ್ನು ತಿಳಿಯದೆ ಭೂತಗಳಿಂದ ಪೀಡಿತರಾಗಿ ಕ್ಲೇಶವನ್ನು ಅನುಭವಿಸುತ್ತಾರೆ.

ಕಲ್ಯ ಉತ್ಥಾಯ ಯೋ ಮರ್ತ್ಯಃ ಸ್ಪೃಶೇದ್ ಗಾಂ ವೈ ಘೃತಂ ದಧಿ ।
ಸರ್ಷಪಂ ಚ ಪ್ರಿಯಂಗುಂ ಚ ಕಲ್ಮಷಾತ್ ಪ್ರತಿಮುಚ್ಯತೇ ॥೧೭॥

ಮನುಷ್ಯರು ಪ್ರತಿದಿನವೂ ಪ್ರಾತಃಕಾಲದಲ್ಲಿ ಎದ್ದು ಗೋವು, ಘೃತ, ದಧಿ, ಸರ್ಷಪ (ಸಾಸಿವೆ) ಮತ್ತು ಪ್ರಿಯಂಗು (ನವಣೆ)ಗಳನ್ನು ಮುಟ್ಟುತ್ತಾನೆಯೋ ಅವನು ದೋಷಗಳಿಂದ ಮುಕ್ತನಾಗುತ್ತಾನೆ.

ಭೂತಾನಿ ಚೈವ ಸರ್ವಾಣಿ ಅಗ್ರತಃ ಪೃಷ್ಠತೋಽಪಿ ವಾ ।
ಉಚ್ಛಿಷ್ಟಂ ವಾಽಪಿ ಚಿದ್ರೇಷು ವರ್ಜಯಂತಿ ತಪೋಧನಾಃ ॥೧೮॥

ತಪೋಧನರಾದವರು ಪಶುಗಳ ಮುಂಭಾಗದಲ್ಲಿ ಅಥವಾ ಹಿಂಭಾಗದಲ್ಲಿ ನಡೆಯುತ್ತಾರೆ (ಪಶುಗಳ ಮಧ್ಯದಲ್ಲಿ ಹೋಗುವುದಿಲ್ಲ) ಮತ್ತು ಉಚ್ಛಿಷ್ಟವನ್ನು ಗುಂಡಿಗಳಲ್ಲಿ ಹಾಕುತ್ತಾರೆ.

ದೇವಾಃ

ಪ್ರಗೃಹ್ಯೌದುಂಬರಂ ಪಾತ್ರಂ ತೋಯಪೂರ್ಣಮುದಙ್‌ಮುಖಃ ।
ಉಪವಾಸಂ ತು ಗೃಹ್ಣೀಯಾದ್ ಯದ್ವಾ ಸಂಕಲ್ಪಯೇದ್ ವ್ರತಮ್ ॥

ದೇವತೆಗಳು– ನೀರನ್ನು ತುಂಬಿದ ಅತ್ತಿಮರದ ಕಮಂಡಲುವನ್ನು ಹಿಡಿದುಕೊಂಡು ಉತ್ತರಾಭಿಮುಖವಾಗಿ ನಿಂತು ಉಪವಾಸ ವ್ರತದ ಸಂಕಲ್ಪವನ್ನಾಗಲೀ ಅಥವಾ ಬೇರೆ ವ್ರತದ ಸಂಕಲ್ಪವನ್ನಾಗಲೀ ಮಾಡಬೇಕು.

ದೇವತಾಸ್ತಸ್ಯ ತುಷ್ಯಂತಿ ಕಾಮಿಕಂ ಚಾಪಿ ಸಿದ್ಧ್ಯತಿ ।
ಅನ್ಯಥಾ ಹಿ ವೃಥಾ ಮರ್ತ್ಯಾಃ ಕುರ್ವತೇ ಸ್ವಲ್ಪಬುದ್ಧಯಃ ॥೨೦॥

ಅವನಿಗೆ ದೇವತೆಗಳು ಪ್ರಸನ್ನರಾಗುತ್ತಾರೆ. ಕಾಮಿತಫಲವು ಸಿದ್ಧಿಸುತ್ತದೆ. ಅಲ್ಪಬುದ್ಧಿಯುಳ್ಳ ಮನುಷ್ಯರು ವ್ಯರ್ಥವಾಗಿ ಬೇರೆ ರೀತಿಯಲ್ಲಿ ಮಾಡುತ್ತಾರೆ.

ಉಪವಾಸೇ ಬಲೌ ಚಾಪಿ ತಾಮ್ರಪಾತ್ರಂ ವಿಶಿಷ್ಯತೇ ।
ಬಲಿರ್ಭಿಕ್ಷಾ ತಥಾऽರ್ಘ್ಯಂ ಚ ಪಿತೄಣಾಂ ಚ ತಿಲೋದಕಮ್ ॥೨೧॥

ಉಪವಾಸದಲ್ಲಿ ಮತ್ತು ಭೋಜನದಲ್ಲಿ ತಾಮ್ರಪಾತ್ರೆಯು ಶ್ರೇಷ್ಠವಾದುದು. ಅನ್ನದಾನ, ಭಿಕ್ಷೆ, ಅರ್ಘ್ಯ ಮತ್ತು ತಿಲತರ್ಪಣಗಳು ಪಿತೃಗಳಿಗೆ ಪ್ರೀತಿಕರವಾದುವು.

ತಾಮ್ರಪಾತ್ರೇಣ ದಾತವ್ಯಮನ್ಯಥಾऽಲ್ಪಫಲಂ ಭವೇತ್ ।
ಗುಹ್ಯಮೇತತ್ ಸಮುದ್ದಿಷ್ಟಂ ಯಥಾ ತುಷ್ಯಂತಿ ದೇವತಾಃ ॥೨೨॥

ಇವುಗಳನ್ನು ತಾಮ್ರಪಾತ್ರದಲ್ಲಿರುವ ನೀರಿನಿಂದ ಕೊಡಬೇಕು. ಇಲ್ಲದಿದ್ದರೆ ಅಲ್ಪ ಫಲವುಂಟಾಗುತ್ತದೆ. ಇದು ರಹಸ್ಯವಾದುದು. ಇದರಿಂದ ದೇವತೆಗಳು ಪ್ರಸನ್ನರಾಗುತ್ತಾರೆ.

ಧರ್ಮಃ

ರಾಜಪೌರುಷಿಕೇ ವಿಪ್ರೇ ಘಾಂಟಿಕೇ ಪರಿಚಾರಿಕೇ ।
ಗೋರಕ್ಷಕೇ ವಾಣಿಜಕೇ ತಥಾ ಕಾರುಕುಶೀಲವೇ ॥೨೩॥

ಮಿತ್ರದ್ರುಹ್ಯನಧೀಯಾನೇ ಯಶ್ಚ ಸ್ಯಾದ್ ವೃಷಲೀಪತಿಃ ।
ಏತೇಷು ದೈವಂ ಪಿತ್ರ್ಯಂ ವಾ ನ ದೇಯಂ ಸ್ಯಾತ್ ಕಥಂಚನ ।
ಪಿಂಡದಾಸ್ತಸ್ಯ ಹೀಯಂತೇ ನ ಚ ಪ್ರೀಣಾತಿ ವೈ ಪಿತೄನ್ ॥೨೪॥

ಧರ್ಮ– ರಾಜಸೇವೆಯನ್ನು ಮಾಡುವ ಬ್ರಾಹ್ಮಣನಿಗೆ, ಘಂಟೆಯನ್ನು ಬಾರಿಸುವವನಿಗೆ, ಸೇವಕನಿಗೆ, ಗೋರಕ್ಷಣೆಯನ್ನು ಮಾಡುವವನಿಗೆ, ವ್ಯಾಪಾರವನ್ನು ಮಾಡುವವನಿಗೆ, ಕಬ್ಬಿಣದ ಕೆಲಸವನ್ನು ಮಾಡುವವನಿಗೆ, ನಾಟಕಗಳಲ್ಲಿ ಪಾತ್ರ ವಹಿಸುವವನಿಗೆ, ಮಿತ್ರದ್ರೋಹಿಯಾದವನಿಗೆ, ಅಧ್ಯಯನವನ್ನು ಮಾಡದಿದ್ದವನಿಗೆ, ಶೂದ್ರಸ್ತ್ರೀ ಪತಿಯಾದವನಿಗೆ ದೇವಕಾರ್ಯದಲ್ಲಿಯೂ, ಪಿತೃಕಾರ್ಯದಲ್ಲಿಯೂ ಏನನ್ನೂ ಕೊಡಬಾರದು. ಅವರಿಗೆ ದಾನ ಮಾಡಿದರೆ ಪಿಂಡದಾನವನ್ನು ಮಾಡುವವನ ಸಂತತಿಯು ಕ್ಷಯವನ್ನು ಹೊಂದುತ್ತದೆ ಮತ್ತು ಪಿತೃಗಳು ಸಂತುಷ್ಟಿಯನ್ನು ಹೊಂದುವುದಿಲ್ಲ.

ಅತಿಥಿರ್ಯಸ್ಯ ಭಗ್ನಾಶೋ ಗೃಹಾತ್ ಪ್ರತಿನಿವರ್ತತೇ ।
ಪಿತರಸ್ತಸ್ಯ ದೇವಾಶ್ಚ ಅಗ್ನಯಶ್ಚ ತಥೈವ ಹಿ ।
ನಿರಾಶಾಃ ಪ್ರತಿಗಚ್ಛಂತಿ ಅತಿಥೇರಪ್ರತಿಗ್ರಹಾತ್ ॥೨೫॥

ಯಾವನ ಮನೆಯಿಂದ ಅತಿಥಿಯು ನಿರಾಶನಾಗಿ ಹೊರಗೆ ಹೋಗುತ್ತಾನೆಯೋ ಅವನಿಗೆ ಪಿತೃಗಳು, ದೇವತೆಗಳು ಮತ್ತು ಅಗ್ನಿಯು ಅತಿಥಿಯನ್ನು ಆದರಿಸದ ಕಾರಣದಿಂದ ನಿರಾಶರಾಗಿ ಹೊರಗೆ ಹೋಗುತ್ತಾರೆ.

ಸ್ತ್ರೀಘ್ನೈರ್ಗೋಘ್ನೈಃ ಕೃತಘ್ನೈಶ್ಚ ಬ್ರಹ್ಮಘ್ನೈರ್ಗುರುತಲ್ಪಗೈಃ ।
ತುಲ್ಯದೋಷೋ ಭವತ್ಯೇಭಿರ್ಯಸ್ಯಾತಿಥಿರನರ್ಚಿತಃ ॥೨೬॥

ಮನೆಗೆ ಬಂದ ಅತಿಥಿಯನ್ನು ಸತ್ಕರಿಸದಿದ್ದವನು ಸ್ತ್ರೀಹತ್ಯೆಯನ್ನು ಮಾಡಿದವನಿಗೆ, ಗೋಹತ್ಯೆಯನ್ನು ಮಾಡಿದವನಿಗೆ, ಕೃತಘ್ನನಿಗೆ, ಬ್ರಹ್ಮಹತ್ಯೆಯನ್ನು ಮಾಡಿದವನಿಗೆ, ಗುರುತಲ್ಪಗಾಮಿಗೆ ಸಮಾನವಾದ ದೋಷವನ್ನು ಹೊಂದುತ್ತಾನೆ.

ಅಗ್ನಿಃ

ಪಾದಮುದ್ಯಮ್ಯ ಯೋ ಮರ್ತ್ಯಃ ಸ್ಪೃಶೇದ್ ಗಾಶ್ಚ ಸುದುರ್ಮತಿಃ ।
ಬ್ರಾಹ್ಮಣಂ ವಾ ಮಹಾಭಾಗಂ ದೀಪ್ಯಮಾನಂ ತಥಾऽನಲಮ್ ।
ತಸ್ಯ ದೋಷಾನ್ ಪ್ರವಕ್ಷ್ಯಾಮಿ ತಚ್ಛೃಣುಧ್ವಂ ಸಮಾಹಿತಾಃ ॥೨೭॥

ಅಗ್ನಿ– ಪಾದವನ್ನು ಎತ್ತಿ ದುರ್ಮತಿಯಾದ ಯಾವನು ಗೋವನ್ನಾಗಲೀ, ಮಹಾನುಭಾವನಾದ ಬ್ರಾಹ್ಮಣನನ್ನಾಗಲೀ ಅಥವಾ ಜ್ವಲಿಸುವ ಅಗ್ನಿಯನ್ನಾಗಲೀ ಸ್ಪರ್ಶ ಮಾಡುತ್ತಾನೆಯೋ ಅವನಿಗೆ ಉಂಟಾಗುವ ದೋಷಗಳನ್ನು ಹೇಳುವೆನು. ಸಮಾಧಾನದಿಂದ ಕೇಳಿ.

ದಿವಂ ಸ್ಪೃಶತ್ಯಶಬ್ದೋऽಸ್ಯ ತ್ರಸ್ಯಂತಿ ಪಿತರಶ್ಚ ವೈ ।
ವೈಮನಸ್ಯಂ ಚ ದೇವಾನಾಂ ಕೃತಂ ಭವತಿ ಪುಷ್ಕಳಮ್ ।
ಪಾವಕಶ್ಚ ಮಹಾತೇಜಾ ಹವ್ಯಂ ನ ಪ್ರತಿಗೃಹ್ಣತಿ ॥೨೮॥

ಅವನ ಅಪಕೀರ್ತಿಯು ಸ್ವರ್ಗವನ್ನು ಮುಟ್ಟುತ್ತದೆ. ಅವನ ಪಿತೃಗಳು ಹೆದರುತ್ತಾರೆ. ದೇವತೆಗಳು ಪುಷ್ಕಳವಾದ ವೈಮನಸ್ಯವನ್ನು ಹೊಂದುತ್ತಾರೆ. ಮಹಾತೇಜಸ್ವಿಯಾದ ಅಗ್ನಿಯು ಹವಿಸ್ಸನ್ನು ಸ್ವೀಕರಿಸುವುದಿಲ್ಲ.

ಅಜನ್ಮನಾಂ ಶತಂ ಚೈವ ನರಕೇ ಪಚ್ಯತೇ ತು ಸಃ ।
ನಿಷ್ಕೃತಿಂ ಚ ನ ತಸ್ಯಾಪಿ ಅನುಮನ್ಯಂತಿ ಕರ್ಹಿಚಿತ್ ॥೨೯॥

ಅವನು ನೂರು ಜನ್ಮಗಳ ಕಾಲ ನರಕದಲ್ಲಿ ಬೇಯಿಸಲ್ಪಡುತ್ತಾನೆ. ಅವನಿಗೆ ಆ ಪಾಪದ ಪರಿಹಾರವನ್ನು ಯಾರೂ ಅನುಮೋದಿಸುವುದಿಲ್ಲ.

ತಸ್ಮಾದ್ ಗಾವೋ ನ ಪಾದೇನ ಸ್ಪೃಷ್ಟವ್ಯಾ ವೈ ಕದಾಚನ ।
ಬ್ರಾಹ್ಮಣಶ್ಚ ಮಹಾತೇಜಾ ದೀಪ್ಯಮಾನಸ್ತಥಾऽನಲಃ ।
ಶ್ರದ್ದಧಾನೇನ ಮರ್ತ್ಯೇನ ಆತ್ಮನೋ ಹಿತಮಿಚ್ಛತಾ ॥೩೦॥

ಏತೇ ದೋಷಾ ಮಯಾ ಪ್ರೋಕ್ತಾಸ್ತ್ರಿಷು ಯಃ ಪಾದಮುತ್ಸೃಜೇತ್ ॥

ಆದ್ದರಿಂದ ಗೋವುಗಳನ್ನು, ಮಹಾತೇಜಸ್ವಿಯಾದ ಬ್ರಾಹ್ಮಣನನ್ನು, ಜ್ವಲಿಸುವ ಅಗ್ನಿಯನ್ನು ತನ್ನ ಹಿತವನ್ನು ಬಯಸುವ ಶ್ರದ್ಧೆಯುಳ್ಳ ಮನುಷ್ಯನು ಪಾದದಿಂದ ಒದೆಯಬಾರದು. ಈ ಮೂರು ವಸ್ತುಗಳನ್ನು ಪಾದದಿಂದ ಸ್ಪರ್ಶ ಮಾಡುವುದರಿಂದ ಉಂಟಾಗುವ ಈ ದೋಷಗಳನ್ನು ನಾನು ಹೇಳಿದ್ದೇನೆ.

ವಿಶ್ವಾಮಿತ್ರಃ

ಶ್ರೂಯತಾಂ ಪರಮಂ ಗುಹ್ಯಂ ರಹಸ್ಯಂ ಧರ್ಮಸಂಹಿತಮ್ ।
ಪರಮಾನ್ನೇನ ಯೋ ದದ್ಯಾತ್ ಪಿತೄಣಾಮೌಪಹಾರಿಕಮ್ ॥೩೨॥

ಗಜಚ್ಛಾಯಾಯಾಂ ಪೂರ್ವಸ್ಯಾಂ ಕುತಪೇ ದಕ್ಷಿಣಾಮುಖಃ ।
ಯದಾ ಭಾದ್ರಪದೇ ಮಾಸಿ ಭವತೇ ಬಹುಲೇ ಮಘಾ ॥೩೩॥

ಶ್ರೂಯತಾಂ ತಸ್ಯ ದಾನಸ್ಯ ಯಾದೃಶೋ ಗುಣವಿಸ್ತರಃ ।
ಕೃತಂ ತೇನ ಮಹಚ್ಛ್ರಾದ್ಧಂ ವರ್ಷಾಣೀಹ ತ್ರಯೋದಶ ॥೩೪॥

ವಿಶ್ವಾಮಿತ್ರ– ಪರಮಗುಹ್ಯವೂ, ರಹಸ್ಯವೂ, ಧರ್ಮಸಂಹಿತವೂ ಆದ ಈ ಮಾತನ್ನು ಕೇಳಿ. ಭಾದ್ರಪದ ಮಾಸದ ಕೃಷ್ಣಪಕ್ಷದಲ್ಲಿ ದಕ್ಷಿಣಾಭಿಮುಖವಾಗಿ ಕುಳಿತು ಆನೆಯ ಶಿರಸ್ಸಿನ ಛಾಯೆಯು ಪೂರ್ವದಿಕ್ಕಿನಲ್ಲಿ ಬಿದ್ದಾಗ (ಸೂರ್ಯನು ಪಶ್ಚಿಮ ದಿಕ್ಕಿಗೆ ತಿರುಗಿದಾಗ) ಪಿತೃಕಾರ್ಯದಲ್ಲಿ ಪಿತೃಗಳನ್ನು ಉದ್ದೇಶಿಸಿ ಯಾವಾತನು ಪರಮಾನ್ನ ಸಹಿತವಾದ ಭೋಜನವನ್ನು ಕೊಡುತ್ತಾನೆಯೋ ಅಂತಹ ದಾನಕ್ಕೆ ಎಂತಹ

ವಿಸ್ತಾರವಾದ ಗುಣವಿದೆ ಎಂದು ಕೇಳಿ. ಅವನು ಹದಿಮೂರು ವರ್ಷಗಳ ಕಾಲ ಸತತವಾಗಿ ದೊಡ್ಡ ಶ್ರಾದ್ಧವನ್ನು ಮಾಡಿದ ಫಲಕ್ಕೆ ಭಾಗಿಯಾಗುತ್ತಾನೆ.

ಬಹುಲೇ ಸಮಂಗೇ ಹ್ಯಕುತೋಭಯೇ ಚ
ಕ್ಷೇಮೇ ಚ ಸಖ್ಯೇವ ಹಿ ಭೂಯಸೀ ಚ ।
ಯಥಾ ಪುರಾ ಬ್ರಹ್ಮಪುರೇ ಸವತ್ಸಾ
ಶತಕ್ರತೋರ್ವಜ್ರಧರಸ್ಯ ಯಜ್ಞೇ ॥೩೫॥

ಭೂಯಶ್ಚ ಯಾ ವಿಷ್ಣುಪದೇ ಸ್ಥಿತಾ ಯಾ
ವಿಭಾವಸೋಶ್ಚಾಪಿ ಪಥೇ ಸ್ಥಿತಾ ಯಾಃ ।
ದೇವಾಶ್ಚ ಸರ್ವೇ ಸಹ ನಾರದೇನ
ಪ್ರಕುರ್ವತೇ ಸರ್ವಸಹೇತಿ ನಾಮ ॥೩೬॥

ಹಿಂದೆ ಶತಕ್ರತುವಾದ, ವಜ್ರಧರನಾದ ಇಂದ್ರನ ಯಜ್ಞದಲ್ಲಿ ಬ್ರಹ್ಮಲೋಕದಲ್ಲಿ ವತ್ಸಸಹಿತಳಾದ ಕಾಮಧೇನುವನ್ನು ಬಹುಲೇ (ವಿಸ್ತೃತಳೇ), ಸಮಂಗೇ (ಒಳ್ಳೆಯ ಅವಯವವನ್ನು ಹೊಂದಿದವಳೇ), ಅಕುತೋಭಯೇ (ಯಾವ ಭಯವೂ ಇಲ್ಲದವಳೇ), ಕ್ಷೇಮೇ (ಕ್ಷೇಮವನ್ನು ಉಂಟುಮಾಡುವವಳೇ), ಸಖಿ (ಸಖಿಯೇ) ಭೂಯಸೀ (ದೊಡ್ಡವಳೇ) ಎಂದು ಸ್ತೋತ್ರ ಮಾಡುತ್ತಿದ್ದರು. ವಿಷ್ಣುಪದದಲ್ಲಿ ಯಾವ ಗೋವುಗಳಿವೆಯೋ ಸೂರ್ಯಪಥದಲ್ಲಿ ಯಾವ ಗೋವುಗಳಿವೆಯೋ ಅವುಗಳಿಗೆ ನಾರದರೂ ಮತ್ತು ಎಲ್ಲಾ ದೇವತೆಗಳೂ 'ಸರ್ವಸಹಾ' ಎಂದು ನಾಮಕರಣವನ್ನು ಮಾಡುತ್ತಾರೆ.

ಮಂತ್ರೇಣೈತೇನಾಭಿವಂದೇತ ಯೋ ವೈ
ವಿಮುಚ್ಯತೇ ಪಾಪಕೃತೇನ ಕರ್ಮಣಾ ।
ಲೋಕಾನವಾಪ್ನೋತಿ ಪುರಂದರಸ್ಯ
ಗವಾಂ ಫಲಂ ಚಂದ್ರಮಸೋ ದ್ಯುತಿಂ ಚ ॥೩೭॥

ಈ ಮಂತ್ರದಿಂದ ಯಾವನು ಗೋವುಗಳಿಗೆ ನಮಸ್ಕಾರವನ್ನು ಮಾಡುತ್ತಾನೆಯೋ ಅವನು ತನ್ನ ದುಷ್ಕರ್ಮದಿಂದ ಉಂಟಾದ ಪಾಪಗಳಿಂದ ಮುಕ್ತನಾಗುತ್ತಾನೆ. ಇಂದ್ರನ ಲೋಕವನ್ನೂ, ಗೋಲೋಕವನ್ನೂ, ಚಂದ್ರನ ಕಾಂತಿಯನ್ನೂ ಫಲವಾಗಿ ಪಡೆಯುತ್ತಾನೆ.

ಅಜನ್ಮನಾಂ ಶತಂ ಚೈವ ನರಕೇ ಪಚ್ಯತೇ ತು ಸಃ ।
ನಿಷ್ಕೃತಿಂ ಚ ನ ತಸ್ಯಾಪಿ ಅನುಮನ್ಯಂತಿ ಕರ್ಹಿಚಿತ್ ॥೨೯॥

ಅವನು ನೂರು ಜನ್ಮಗಳ ಕಾಲ ನರಕದಲ್ಲಿ ಬೇಯಿಸಲ್ಪಡುತ್ತಾನೆ. ಅವನಿಗೆ ಆ ಪಾಪದ ಪರಿಹಾರವನ್ನು ಯಾರೂ ಅನುಮೋದಿಸುವುದಿಲ್ಲ.

ತಸ್ಮಾದ್ ಗಾವೋ ನ ಪಾದೇನ ಸ್ಪಷ್ಟವ್ಯಾ ವೈ ಕದಾಚನ ।
ಬ್ರಾಹ್ಮಣಶ್ಚ ಮಹಾತೇಜಾ ದೀಪ್ಯಮಾನಸ್ತಥಾऽನಲಃ ।
ಶ್ರದ್ದಧಾನೇನ ಮರ್ತ್ಯೇನ ಆತ್ಮನೋ ಹಿತಮಿಚ್ಛತಾ ॥೩೦॥

ಏತೇ ದೋಷಾ ಮಯಾ ಪ್ರೋಕ್ತಾಸ್ತ್ರಿಷು ಯಃ ಪಾದಮುತ್ಸೃಜೇತ್ ॥

ಆದ್ದರಿಂದ ಗೋವುಗಳನ್ನು, ಮಹಾತೇಜಸ್ವಿಯಾದ ಬ್ರಾಹ್ಮಣನನ್ನು, ಜ್ವಲಿಸುವ ಅಗ್ನಿಯನ್ನು ತನ್ನ ಹಿತವನ್ನು ಬಯಸುವ ಶ್ರದ್ಧೆಯುಳ್ಳ ಮನುಷ್ಯನು ಪಾದದಿಂದ ಒದೆಯಬಾರದು. ಈ ಮೂರು ವಸ್ತುಗಳನ್ನು ಪಾದದಿಂದ ಸ್ಪರ್ಶ ಮಾಡುವುದರಿಂದ ಉಂಟಾಗುವ ಈ ದೋಷಗಳನ್ನು ನಾನು ಹೇಳಿದ್ದೇನೆ.

ವಿಶ್ವಾಮಿತ್ರಃ

ಶ್ರೂಯತಾಂ ಪರಮಂ ಗುಹ್ಯಂ ರಹಸ್ಯಂ ಧರ್ಮಸಂಹಿತಮ್ ।
ಪರಮಾನ್ನೇನ ಯೋ ದದ್ಯಾತ್ ಪಿತೄಣಾಮೌಪಹಾರಿಕಮ್ ॥೩೨॥

ಗಜಚ್ಛಾಯಾಯಾಂ ಪೂರ್ವಸ್ಯಾಂ ಕುತಪೇ ದಕ್ಷಿಣಾಮುಖಃ ।
ಯದಾ ಭಾದ್ರಪದೇ ಮಾಸಿ ಭವತೇ ಬಹುಲೇ ಮಘಾ ॥೩೩॥

ಶ್ರೂಯತಾಂ ತಸ್ಯ ದಾನಸ್ಯ ಯಾದೃಶೋ ಗುಣವಿಸ್ತರಃ ।
ಕೃತಂ ತೇನ ಮಹಚ್ಛ್ರಾದ್ಧಂ ವರ್ಷಾಣೀಹ ತ್ರಯೋದಶ ॥೩೪॥

ವಿಶ್ವಾಮಿತ್ರ– ಪರಮಗುಹ್ಯವೂ, ರಹಸ್ಯವೂ, ಧರ್ಮಸಂಹಿತವೂ ಆದ ಈ ಮಾತನ್ನು ಕೇಳಿ. ಭಾದ್ರಪದ ಮಾಸದ ಕೃಷ್ಣಪಕ್ಷದಲ್ಲಿ ದಕ್ಷಿಣಾಭಿಮುಖವಾಗಿ ಕುಳಿತು ಆನೆಯ ಶಿರಸ್ಸಿನ ಛಾಯೆಯು ಪೂರ್ವದಿಕ್ಕಿನಲ್ಲಿ ಬಿದ್ದಾಗ (ಸೂರ್ಯನು ಪಶ್ಚಿಮ ದಿಕ್ಕಿಗೆ ತಿರುಗಿದಾಗ) ಪಿತೃಕಾರ್ಯದಲ್ಲಿ ಪಿತೃಗಳನ್ನು ಉದ್ದೇಶಿಸಿ ಯಾವಾತನು ಪರಮಾನ್ನಸಹಿತವಾದ ಭೋಜನವನ್ನು ಕೊಡುತ್ತಾನೆಯೋ ಅಂತಹ ದಾನಕ್ಕೆ ಎಂತಹ

ವಿಸ್ತಾರವಾದ ಗುಣವಿದೆ ಎಂದು ಕೇಳಿ. ಅವನು ಹದಿಮೂರು ವರ್ಷಗಳ ಕಾಲ ಸತತವಾಗಿ ದೊಡ್ಡ ಶ್ರಾದ್ಧವನ್ನು ಮಾಡಿದ ಫಲಕ್ಕೆ ಭಾಗಿಯಾಗುತ್ತಾನೆ.

ಬಹುಲೇ ಸಮಂಗೇ ಹ್ಯಕುತೋಭಯೇ ಚ
ಕ್ಷೇಮೇ ಚ ಸಖ್ಯೇವ ಹಿ ಭೂಯಸೀ ಚ ।
ಯಥಾ ಪುರಾ ಬ್ರಹ್ಮಪುರೇ ಸವತ್ಸಾ
ಶತಕ್ರತೋರ್ವಜ್ರಧರಸ್ಯ ಯಜ್ಞೇ ॥೩೫॥

ಭೂಯಶ್ಚ ಯಾ ವಿಷ್ಣುಪದೇ ಸ್ಥಿತಾ ಯಾ
ವಿಭಾವಸೋಶ್ಚಾಪಿ ಪಥೇ ಸ್ಥಿತಾ ಯಾಃ ।
ದೇವಾಶ್ಚ ಸರ್ವೇ ಸಹ ನಾರದೇನ
ಪ್ರಕುರ್ವತೇ ಸರ್ವಸಹೇತಿ ನಾಮ ॥೩೬॥

ಹಿಂದೆ ಶತಕ್ರತುವಾದ, ವಜ್ರಧರನಾದ ಇಂದ್ರನ ಯಜ್ಞದಲ್ಲಿ ಬ್ರಹ್ಮಲೋಕದಲ್ಲಿ ವತ್ಸಸಹಿತಳಾದ ಕಾಮಧೇನುವನ್ನು ಬಹುಲೇ (ವಿಸ್ತೃತಳೇ), ಸಮಂಗೇ (ಒಳ್ಳೆಯ ಅವಯವವನ್ನು ಹೊಂದಿದವಳೇ), ಅಕುತೋಭಯೇ (ಯಾವ ಭಯವೂ ಇಲ್ಲದವಳೇ), ಕ್ಷೇಮೇ (ಕ್ಷೇಮವನ್ನು ಉಂಟುಮಾಡುವವಳೇ), ಸಖಿ (ಸಖಿಯೇ) ಭೂಯಸೀ (ದೊಡ್ಡವಳೇ) ಎಂದು ಸ್ತೋತ್ರ ಮಾಡುತ್ತಿದ್ದರು. ವಿಷ್ಣುಪದದಲ್ಲಿ ಯಾವ ಗೋವುಗಳಿವೆಯೋ ಸೂರ್ಯಪಥದಲ್ಲಿ ಯಾವ ಗೋವುಗಳಿವೆಯೋ ಅವುಗಳಿಗೆ ನಾರದರೂ ಮತ್ತು ಎಲ್ಲಾ ದೇವತೆಗಳೂ 'ಸರ್ವಸಹಾ' ಎಂದು ನಾಮಕರಣವನ್ನು ಮಾಡುತ್ತಾರೆ.

ಮಂತ್ರೇಣೈತೇನಾಭಿವಂದೇತ ಯೋ ವೈ
ವಿಮುಚ್ಯತೇ ಪಾಪಕೃತೇನ ಕರ್ಮಣಾ ।
ಲೋಕಾನವಾಪ್ನೋತಿ ಪುರಂದರಸ್ಯ
ಗವಾಂ ಫಲಂ ಚಂದ್ರಮಸೋ ದ್ಯುತಿಂ ಚ ॥೩೭॥

ಈ ಮಂತ್ರದಿಂದ ಯಾವನು ಗೋವುಗಳಿಗೆ ನಮಸ್ಕಾರವನ್ನು ಮಾಡುತ್ತಾನೆಯೋ ಅವನು ತನ್ನ ದುಷ್ಕರ್ಮದಿಂದ ಉಂಟಾದ ಪಾಪಗಳಿಂದ ಮುಕ್ತನಾಗುತ್ತಾನೆ. ಇಂದ್ರನ ಲೋಕವನ್ನೂ, ಗೋಲೋಕವನ್ನೂ, ಚಂದ್ರನ ಕಾಂತಿಯನ್ನೂ ಫಲವಾಗಿ ಪಡೆಯುತ್ತಾನೆ.

ಏವಂ ಹಿ ಮಂತ್ರಂ ತ್ರಿದಶಾಭಿಜುಷ್ಟಂ
ಪಠೇತ ಯಃ ಪರ್ವಸು ಗೋಷ್ಠಮಧ್ಯೇ ।
ನ ತಸ್ಯ ಪಾಪಂ ನ ಭಯಂ ನ ಶೋಕಃ
ಸಹಸ್ರನೇತ್ರಸ್ಯ ಚ ಯಾತಿ ಲೋಕಮ್ ॥೩೮॥

ದೇವತೆಗಳಿಗೆ ಪ್ರಿಯವಾದ ಈ ಮಂತ್ರವನ್ನು ಪರ್ವಕಾಲದಲ್ಲಿ ಗೋಶಾಲೆಯ ಮಧ್ಯದಲ್ಲಿ ಯಾವನು ಪಠಿಸುತ್ತಾನೆಯೋ ಅವನಿಗೆ ಪಾಪವಾಗಲೀ, ಭಯವಾಗಲೀ, ಶೋಕವಾಗಲೀ ಉಂಟಾಗುವುದಿಲ್ಲ. ಅವನು ಸಹಸ್ರನೇತ್ರನಾದ ಇಂದ್ರನ ಲೋಕಕ್ಕೆ ಹೋಗುತ್ತಾನೆ.

ಭೀಷ್ಮಃ

ಅಥ ಸಪ್ತ ಮಹಾಭಾಗ ಋಷಯೋ ಲೋಕವಿಶ್ರುತಾಃ ।
ವಸಿಷ್ಠಪ್ರಮುಖಾಃ ಸರ್ವೇ ಬ್ರಹ್ಮಾಣಂ ಪದ್ಮಸಂಭವಮ್ ।
ಪ್ರದಕ್ಷಿಣಮಭಿಕ್ರಮ್ಯ ಸರ್ವೇ ಪ್ರಾಂಜಲಯಃ ಸ್ಥಿತಾಃ ॥೩೯॥

ಭೀಷ್ಮ- ಅನಂತರ ಎಲೈ ಮಹಾನುಭಾವನೇ, ಲೋಕವಿಶ್ರುತರಾದ ವಸಿಷ್ಠರೇ ಮೊದಲಾದ ಸಪ್ತರ್ಷಿಗಳೆಲ್ಲರೂ ಪದ್ಮಸಂಭವರಾದ ಬ್ರಹ್ಮದೇವರಿಗೆ ಪ್ರದಕ್ಷಿಣೆಯನ್ನು ಮಾಡಿ ಕೈಗಳನ್ನು ಮುಗಿದು ಎದುರಿಗೆ ನಿಂತರು.

ಉವಾಚ ವಚನಂ ತೇಷಾಂ ವಸಿಷ್ಠೋ ಬ್ರಹ್ಮವಿತ್ತಮಃ ।
ಸರ್ವಪ್ರಾಣಿಹಿತಂ ಪ್ರಶ್ನಂ ಬ್ರಹ್ಮಕ್ಷತ್ರೇ ವಿಶೇಷತಃ ॥೪೦॥

ಅವರಲ್ಲಿ ಬ್ರಹ್ಮಜ್ಞಾನಿಗಳಲ್ಲಿ ಶ್ರೇಷ್ಠರಾದ ವಸಿಷ್ಠರು ಸರ್ವಪ್ರಾಣಿಹಿತವೂ, ಬ್ರಾಹ್ಮಣ ಕ್ಷತ್ರಿಯರಿಗೆ ವಿಶೇಷವಾಗಿ ಹಿತವೂ ಆದ ಒಂದು ಪ್ರಶ್ನೆಯನ್ನು ಮಾಡಿದರು.

ದ್ರವ್ಯಹೀನಾಃ ಕಥಂ ಮರ್ತ್ಯಾ ದರಿದ್ರಾಃ ಸಾಧುವೃತ್ತಯಃ ।
ಪ್ರಾಪ್ನುವಂತೀಹ ಯಜ್ಞಸ್ಯ ಫಲಂ ಕೇನ ಚ ಕರ್ಮಣಾ ॥೪೧॥

ದ್ರವ್ಯಹೀನರೂ, ದರಿದ್ರರೂ, ಒಳ್ಳೆಯ ನಡತೆಯುಳ್ಳವರೂ ಆದ ಮನುಷ್ಯರು ಯಾವ ಕರ್ಮದಿಂದ ಈ ಲೋಕದಲ್ಲಿ ಯಜ್ಞದ ಫಲವನ್ನು ಪಡೆಯುತ್ತಾರೆ?

ಏತಚ್ಛ್ರುತ್ವಾ ವಚಸ್ತೇಷಾಂ ಬ್ರಹ್ಮಾ ವಚನಮಬ್ರವೀತ್ ॥೪೨॥

ಅಹೋ ಪ್ರಶ್ನೋ ಮಹಾಭಾಗ ಗೂಢಾರ್ಥಃ ಪರಮಃ ಶುಭಃ ।
ಸೂಕ್ಷ್ಮಃ ಶ್ರೇಯಾಂಶ್ಚ ಮರ್ತ್ಯಾನಾಂ ಭವದ್ಭಿಃ ಸಮುದಾಹೃತಃ ॥೪೩॥

ಈ ಮಾತನ್ನು ಕೇಳಿದ ಬ್ರಹ್ಮದೇವರು ಉತ್ತರವನ್ನು ನೀಡಿದರು- ಎಲೈ ಮಹಾನುಭಾವನೇ, ಗೂಢಾರ್ಥವಾದ, ಪರಮಮಂಗಳಕರವಾದ ಪ್ರಶ್ನೆಯನ್ನು ಕೇಳಿದ್ದೀಯೆ. ನೀನು ಕೇಳಿದ ಈ ಪ್ರಶ್ನೆಯು ಬಹಳ ಸೂಕ್ಷ್ಮವಾದುದು ಮತ್ತು ಮನುಷ್ಯರಿಗೆ ಶ್ರೇಯಸ್ಕರವಾದುದು.

ಶ್ರೂಯತಾಂ ಸರ್ವಮಾಖ್ಯಾಸ್ಯೇ ನಿಖಿಲೇನ ತಪೋಧನಾಃ ।
ಯಥಾ ಯಜ್ಞಫಲಂ ಮರ್ತ್ಯೋ ಲಭತೇ ನಾತ್ರ ಸಂಶಯಃ ॥೪೪॥

ಎಲೈ ತಪೋಧನರೇ, ಹೇಗೆ ಮನುಷ್ಯನು ಯಜ್ಞಫಲವನ್ನು ಪಡೆಯುತ್ತಾನೆ ಎಂಬುದೆಲ್ಲವನ್ನೂ ಸಮಗ್ರವಾಗಿ ಹೇಳುತ್ತೇನೆ. ಇದರಲ್ಲಿ ಸಂಶಯವಿಲ್ಲ. ಅದನ್ನು ಕೇಳಿ.

ಪೌಷಮಾಸಸ್ಯ ಶುಕ್ಲೇ ವೈ ಯದಾ ಯುಜ್ಯೇತ ರೋಹಿಣೀ ।
ತೇನ ನಕ್ಷತ್ರಯೋಗೇನ ಆಕಾಶಶಯನೋ ಭವೇತ್ ॥೪೫॥

ಪುಷ್ಯಮಾಸದ ಶುಕ್ಲಪಕ್ಷದಲ್ಲಿ ರೋಹಿಣಿ ನಕ್ಷತ್ರವಿರುವಾಗ ಮನುಷ್ಯನು ಆಕಾಶ ಶಯನನಾಗಬೇಕು.

ಏಕವಸ್ತ್ರಃ ಶುಚಿಃ ಸ್ನಾತಃ ಶ್ರದ್ದಧಾನಃ ಸಮಾಹಿತಃ ।
ಸೋಮಸ್ಯ ರಶ್ಮಯಃ ಪೀತ್ವಾ ಮಹಾಯಜ್ಞಫಲಂ ಲಭೇತ್ ॥೪೬॥

ಎಂದರೆ ಸ್ನಾನವನ್ನು ಮಾಡಿ, ಶುಚಿಯಾಗಿ, ಏಕವಸ್ತ್ರವನ್ನುಟ್ಟು, ಶ್ರದ್ಧೆ ಸಮಾಧಾನದಿಂದ ಕೂಡಿ ಚಂದ್ರನ ಕಿರಣಗಳನ್ನು ಪಾನ ಮಾಡುವವನು ಮಹಾಯಜ್ಞ ಫಲವನ್ನು ಹೊಂದುತ್ತಾನೆ.

ಏತದ್ ವಃ ಪರಮಂ ಗುಹ್ಯಂ ಕಥಿತಂ ದ್ವಿಜಸತ್ತಮಾಃ ।
ಯನ್ಮಾಂ ಭವಂತಃ ಪೃಚ್ಛಂತಿ ಸೂಕ್ಷ್ಮತತ್ತ್ವಾರ್ಥದರ್ಶಿನಃ ॥೪೭॥

ಏವಂ ಹಿ ಮಂತ್ರಂ ತ್ರಿದಶಾಭಿಜುಷ್ಟಂ
ಪಠೇತ ಯಃ ಪರ್ವಸು ಗೋಷ್ಠಮಧ್ಯೇ ।
ನ ತಸ್ಯ ಪಾಪಂ ನ ಭಯಂ ನ ಶೋಕಃ
ಸಹಸ್ರನೇತ್ರಸ್ಯ ಚ ಯಾತಿ ಲೋಕಮ್ ॥೩೮॥

ದೇವತೆಗಳಿಗೆ ಪ್ರಿಯವಾದ ಈ ಮಂತ್ರವನ್ನು ಪರ್ವಕಾಲದಲ್ಲಿ ಗೋಶಾಲೆಯ ಮಧ್ಯದಲ್ಲಿ ಯಾವನು ಪಠಿಸುತ್ತಾನೆಯೋ ಅವನಿಗೆ ಪಾಪವಾಗಲೀ, ಭಯವಾಗಲೀ, ಶೋಕವಾಗಲೀ ಉಂಟಾಗುವುದಿಲ್ಲ. ಅವನು ಸಹಸ್ರನೇತ್ರನಾದ ಇಂದ್ರನ ಲೋಕಕ್ಕೆ ಹೋಗುತ್ತಾನೆ.

ಭೀಷ್ಮಃ

ಅಥ ಸಪ್ತ ಮಹಾಭಾಗ ಋಷಯೋ ಲೋಕವಿಶ್ರುತಾಃ ।
ವಸಿಷ್ಠಪ್ರಮುಖಾಃ ಸರ್ವೇ ಬ್ರಹ್ಮಾಣಂ ಪದ್ಮಸಂಭವಮ್ ।
ಪ್ರದಕ್ಷಿಣಮಭಿಕ್ರಮ್ಯ ಸರ್ವೇ ಪ್ರಾಂಜಲಯಃ ಸ್ಥಿತಾಃ ॥೩೯॥

ಭೀಷ್ಮ– ಅನಂತರ ಎಲೈ ಮಹಾನುಭಾವನೇ, ಲೋಕವಿಶ್ರುತರಾದ ವಸಿಷ್ಠರೇ ಮೊದಲಾದ ಸಪ್ತರ್ಷಿಗಳೆಲ್ಲರೂ ಪದ್ಮಸಂಭವರಾದ ಬ್ರಹ್ಮದೇವರಿಗೆ ಪ್ರದಕ್ಷಿಣೆಯನ್ನು ಮಾಡಿ ಕೈಗಳನ್ನು ಮುಗಿದು ಎದುರಿಗೆ ನಿಂತರು.

ಉವಾಚ ವಚನಂ ತೇಷಾಂ ವಸಿಷ್ಠೋ ಬ್ರಹ್ಮವಿತ್ತಮಃ ।
ಸರ್ವಪ್ರಾಣಿಹಿತಂ ಪ್ರಶ್ನಂ ಬ್ರಹ್ಮಕ್ಷತ್ರೇ ವಿಶೇಷತಃ ॥೪೦॥

ಅವರಲ್ಲಿ ಬ್ರಹ್ಮಜ್ಞಾನಿಗಳಲ್ಲಿ ಶ್ರೇಷ್ಠರಾದ ವಸಿಷ್ಠರು ಸರ್ವಪ್ರಾಣಿಹಿತವೂ, ಬ್ರಾಹ್ಮಣ ಕ್ಷತ್ರಿಯರಿಗೆ ವಿಶೇಷವಾಗಿ ಹಿತವೂ ಆದ ಒಂದು ಪ್ರಶ್ನೆಯನ್ನು ಮಾಡಿದರು.

ದ್ರವ್ಯಹೀನಾಃ ಕಥಂ ಮರ್ತ್ಯಾ ದರಿದ್ರಾಃ ಸಾಧುವೃತ್ತಯಃ ।
ಪ್ರಾಪ್ನುವಂತೀಹ ಯಜ್ಞಸ್ಯ ಫಲಂ ಕೇನ ಚ ಕರ್ಮಣಾ ॥೪೧॥

ದ್ರವ್ಯಹೀನರೂ, ದರಿದ್ರರೂ, ಒಳ್ಳೆಯ ನಡತೆಯುಳ್ಳವರೂ ಆದ ಮನುಷ್ಯರು ಯಾವ ಕರ್ಮದಿಂದ ಈ ಲೋಕದಲ್ಲಿ ಯಜ್ಞದ ಫಲವನ್ನು ಪಡೆಯುತ್ತಾರೆ?

ಏತಚ್ಛ್ರುತ್ವಾ ವಚಸ್ತೇಷಾಂ ಬ್ರಹ್ಮಾ ವಚನಮಬ್ರವೀತ್ ॥೪೨॥

ಅಹೋ ಪ್ರಶ್ನೋ ಮಹಾಭಾಗ ಗೂಢಾರ್ಥಃ ಪರಮಃ ಶುಭಃ ।
ಸೂಕ್ಷ್ಮಃ ಶ್ರೇಯಾಂಶ್ಚ ಮರ್ತ್ಯಾನಾಂ ಭವದ್ಭಿಃ ಸಮುದಾಹೃತಃ ॥೪೩॥

ಈ ಮಾತನ್ನು ಕೇಳಿದ ಬ್ರಹ್ಮದೇವರು ಉತ್ತರವನ್ನು ನೀಡಿದರು- ಎಲೈ ಮಹಾನುಭಾವನೇ, ಗೂಢಾರ್ಥವಾದ, ಪರಮಮಂಗಳಕರವಾದ ಪ್ರಶ್ನೆಯನ್ನು ಕೇಳಿದ್ದೀಯೆ. ನೀನು ಕೇಳಿದ ಈ ಪ್ರಶ್ನೆಯು ಬಹಳ ಸೂಕ್ಷ್ಮವಾದುದು ಮತ್ತು ಮನುಷ್ಯರಿಗೆ ಶ್ರೇಯಸ್ಕರವಾದುದು.

ಶ್ರೂಯತಾಂ ಸರ್ವಮಾಖ್ಯಾಸ್ಯೇ ನಿಖಿಲೇನ ತಪೋಧನಾಃ ।
ಯಥಾ ಯಜ್ಞಫಲಂ ಮರ್ತ್ಯೋ ಲಭತೇ ನಾತ್ರ ಸಂಶಯಃ ॥೪೪॥

ಎಲೈ ತಪೋಧನರೇ, ಹೇಗೆ ಮನುಷ್ಯನು ಯಜ್ಞಫಲವನ್ನು ಪಡೆಯುತ್ತಾನೆ ಎಂಬುದೆಲ್ಲವನ್ನೂ ಸಮಗ್ರವಾಗಿ ಹೇಳುತ್ತೇನೆ. ಇದರಲ್ಲಿ ಸಂಶಯವಿಲ್ಲ. ಅದನ್ನು ಕೇಳಿ.

ಪೌಷಮಾಸಸ್ಯ ಶುಕ್ಲೇ ವೈ ಯದಾ ಯುಜ್ಯೇತ ರೋಹಿಣೇ ।
ತೇನ ನಕ್ಷತ್ರಯೋಗೇನ ಆಕಾಶಶಯನೋ ಭವೇತ್ ॥೪೫॥

ಪುಷ್ಯಮಾಸದ ಶುಕ್ಲಪಕ್ಷದಲ್ಲಿ ರೋಹಿಣಿ ನಕ್ಷತ್ರವಿರುವಾಗ ಮನುಷ್ಯನು ಆಕಾಶ ಶಯನನಾಗಬೇಕು.

ಏಕವಸ್ತ್ರಃ ಶುಚಿಃ ಸ್ನಾತಃ ಶ್ರದ್ದಧಾನಃ ಸಮಾಹಿತಃ ।
ಸೋಮಸ್ಯ ರಶ್ಮಯಃ ಪೀತ್ವಾ ಮಹಾಯಜ್ಞಫಲಂ ಲಭೇತ್ ॥೪೬॥

ಎಂದರೆ ಸ್ನಾನವನ್ನು ಮಾಡಿ, ಶುಚಿಯಾಗಿ, ಏಕವಸ್ತ್ರವನ್ನುಟ್ಟು, ಶ್ರದ್ಧೆ ಸಮಾಧಾನದಿಂದ ಕೂಡಿ ಚಂದ್ರನ ಕಿರಣಗಳನ್ನು ಪಾನ ಮಾಡುವವನು ಮಹಾಯಜ್ಞ ಫಲವನ್ನು ಹೊಂದುತ್ತಾನೆ.

ಏತದ್ ವಃ ಪರಮಂ ಗುಹ್ಯಂ ಕಥಿತಂ ದ್ವಿಜಸತ್ತಮಾಃ ।
ಯನ್ಮಾಂ ಭವಂತಃ ಪೃಚ್ಛಂತಿ ಸೂಕ್ಷ್ಮತತ್ತ್ವಾರ್ಥದರ್ಶಿನಃ ॥೪೭॥

ಎಲೈ ದ್ವಿಜಶ್ರೇಷ್ಠರೇ, ಸೂಕ್ಷ್ಮಾರ್ಥದರ್ಶಿಗಳಾದ ನೀವು ಕೇಳಿದ ಪ್ರಶ್ನೆಗೆ ಉತ್ತರವಾಗಿ ನಾನು ಅತ್ಯಂತ ರಹಸ್ಯವಾದ ಈ ವಿಷಯವನ್ನು ಹೇಳಿದ್ದೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ದೇವೈರ್ಧರ್ಮೋಪದೇಶೋ ನಾಮ ಅಷ್ಟಸಪ್ತತ್ಯುತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಎಪ್ಪತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಪ್ಪತ್ತೊಂಬತ್ತನೆಯ ಅಧ್ಯಾಯ

ಅಗ್ನ್ಯಾದಿ ದೇವತೆಗಳಿಂದ ಧರ್ಮೋಪದೇಶ

ವಿಭಾವಸುಃ

ಸಲಿಲಸ್ಯಾಂಜಲಿಂ ಪೂರ್ಣಮಕ್ಷತಾಶ್ಚ ಧೃತೋತ್ತರಾಃ ।
ಸೋಮಸ್ಯೋತ್ತಿಷ್ಠಮಾನಸ್ಯ ತಜ್ಜಲಂ ಚಾಕ್ಷತಾಂಶ್ಚ ತಾನ್ ॥೧॥

ಸ್ಥಿತೋ ಹ್ಯಭಿಮುಖೋ ಮರ್ತ್ಯಃ ಪೌರ್ಣಮಾಸ್ಯಾಂ ಬಲಿಂ ಹರೇತ್ ।
ಅಗ್ನಿಕಾರ್ಯಂ ಕೃತಂ ತೇನ ಹುತಾಶ್ಚಾಸ್ಯಾಗ್ನಯಸ್ತ್ರಯಃ ॥೨॥

ವಿಭಾವಸು– ಪೌರ್ಣಮಾಸಿಯ ದಿವಸ ಪೂರ್ಣವಾದ ಜಲಾಂಜಲಿಯನ್ನು ಅಕ್ಷತೆಗಳ ಜೊತೆಯಲ್ಲಿ ತೆಗೆದುಕೊಂಡು ಉತ್ತರಮುಖವಾಗಿ ಎದ್ದು, ಚಂದ್ರೋದಯವಾಗುವ ವೇಳೆಯಲ್ಲಿ ಅಕ್ಷತ ಸಹಿತವಾದ ಜಲವನ್ನು ಚಂದ್ರನಿಗೆ ನೀಡಿ ಅವನನ್ನು ಪೂಜಿಸುವವನು ಅಗ್ನಿಕಾರ್ಯವನ್ನು ಮಾಡಿದವನಾಗುತ್ತಾನೆ. ಅವನಿಂದ ಮೂರು ಅಗ್ನಿಗಳು ಹೋಮಿಸಲ್ಪಡುತ್ತವೆ.

ವನಸ್ಪತಿಂ ಚ ಯೋ ಹನ್ಯಾದಮಾವಾಸ್ಯಾಮಬುದ್ಧಿಮಾನ್ ।
ಅಪಿ ಹ್ಯೇಕೇನ ಪತ್ರೇಣ ಲಿಪ್ಯತೇ ಬ್ರಹ್ಮಹತ್ಯಯಾ ॥೩॥

ಅಮಾವಾಸ್ಯೆಯ ದಿವಸ ಬುದ್ಧಿ ಇಲ್ಲದ ಯಾವನು ಯಾವುದೇ ಗಿಡದ ಒಂದು ಎಲೆಯನ್ನು ಕಿತ್ತರೂ ಅವನಿಗೆ ಬ್ರಹ್ಮಹತ್ಯಾ ದೋಷದ ಲೇಪವುಂಟಾಗುತ್ತದೆ.

ದಂತಕಾಷ್ಠಂ ತು ಯಃ ಖಾದೇದಮಾವಾಸ್ಯಾಮಬುದ್ಧಿಮಾನ್ ।
ಹಿಂಸಿತಶ್ಚಂದ್ರಮಾಸ್ತೇನ ಪಿತರಶ್ಚೋದ್ವಿಜಂತಿ ಚ ॥೪॥

ಹವ್ಯಂ ನ ತಸ್ಯ ದೇವಾಶ್ಚ ಪ್ರತಿಗೃಹ್ಣಂತಿ ಪರ್ವಸು ।
ಕುಪ್ಯಂತೇ ಪಿತರಶ್ಚಾಸ್ಯ ಕುಲೇ ವಂಶೋऽಸ್ಯ ಹೀಯತೇ ॥೫॥

ಅಮಾವಾಸ್ಯೆಯ ದಿವಸ ಬುದ್ಧಿ ಇಲ್ಲದ ಯಾವನು ಬೇವಿನ ಕಡ್ಡಿ ಮೊದಲಾದ ದಂತಕಾಷ್ಠವನ್ನು ಉಪಯೋಗಿಸುತ್ತಾನೆಯೋ ಅವನು ಚಂದ್ರನನ್ನು ಹಿಂಸಿಸುತ್ತಾನೆ. ಅವನ ಪಿತೃಗಳು ಭೀತರಾಗುತ್ತಾರೆ. ಪರ್ವಕಾಲದಲ್ಲಿ ಮಾಡಿದ ಪೂಜೆಯಲ್ಲಿ ದೇವತೆಗಳು ಅವನ ಹವಿಸ್ಸನ್ನು ಸ್ವೀಕರಿಸುವುದಿಲ್ಲ. ಅವನ ಪಿತೃಗಳು ಕುಪಿತರಾಗುತ್ತಾರೆ ಮತ್ತು ವಂಶವು ನಾಶವನ್ನು ಹೊಂದುತ್ತದೆ.

ಶ್ರೀಃ

ಪ್ರಕೀರ್ಣಂ ಭಾಜನಂ ಯತ್ರ ಪಾನಭಾಂಡಮಥಾಸನಮ್ ।
ಯೋಷಿತಶ್ಚೈವ ಹನ್ಯಂತೇ ಕಶ್ಮಲೋಪಹತೇ ಗೃಹೇ ॥೬॥

ದೇವತಾಃ ಪಿತರಶ್ಚೈವ ಉತ್ಸವೇ ಪರ್ವಣೇಷು ವಾ ।
ನಿರಾಶಾಃ ಪ್ರತಿಗಚ್ಛಂತಿ ಕಶ್ಮಲೋಪಹತಾದ್ ಗೃಹಾತ್ ॥೭॥

ಲಕ್ಷ್ಮೀ– ಯಾವ ಮನೆಯಲ್ಲಿ ಅಡಿಗೆ ಪಾತ್ರೆಗಳು, ಪಾನಪಾತ್ರೆಗಳು, ಆಸನಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿರುತ್ತವೆಯೋ, ಯಾವ ಮನೆಯು ಕಸದಿಂದ ಕೂಡಿರುತ್ತದೆಯೋ ಯಾವ ಮನೆಯಲ್ಲಿ ಸ್ತ್ರೀಯರು ಹೊಡೆಯಲ್ಪಡುತ್ತಾರೆಯೋ ಅಲ್ಲಿ ಉತ್ಸವ ಕಾಲದಲ್ಲಿಯೂ, ಪರ್ವಕಾಲದಲ್ಲಿಯೂ, ದೇವತೆಗಳು ಮತ್ತು ಪಿತೃಗಳು ಕಸದಿಂದ ತುಂಬಿದ ಆ ಮನೆಯಿಂದ ನಿರಾಶರಾಗಿ ಹೊರಗೆ ಹೋಗುತ್ತಾರೆ.

ಅಂಗಿರಾಃ

ಯಸ್ತು ಸಂವತ್ಸರಂ ಪೂರ್ಣಂ ದದ್ಯಾದ್ ದೀಪಂ ಕರಂಜಕೇ ।
ಸುವರ್ಚಲಾಮೂಲಹಸ್ತಃ ಪ್ರಜಾ ತಸ್ಯ ವಿವರ್ಧತೇ ॥೮॥

ಅಂಗಿರಸ– ಯಾವನು ಒಂದು ವರ್ಷದವರೆಗೆ ಒಳ್ಳೆಯ ಕಾಂತಿಗೆ ಕಾರಣವಾದ ಹಸ್ತಾ ನಕ್ಷತ್ರದ ಯೋಗದಲ್ಲಿ ಹೊಂಗೆಯ ಎಣ್ಣೆಯ ದೀಪವನ್ನು (ಹೊಂಗೆಯ ಮರದ

ಕೆಳಗೆ ದೀಪವನ್ನು ದಾನ ಮಾಡುತ್ತಾನೆಯೋ ಅವನ ಸಂತತಿಯು ಅಭಿವೃದ್ಧಿಯನ್ನು ಹೊಂದುತ್ತದೆ.

ಗಾರ್ಗ್ಯಃ

ಆತಿಥ್ಯಂ ಸತತಂ ಕುರ್ಯಾದ್ ದೀಪಂ ದದ್ಯಾತ್ ಪ್ರತಿಶ್ರಯೇ ।
ವರ್ಜಯಾನೋ ದಿವಾಸ್ವಾಪಂ ನ ಚ ಮಾಂಸಾನಿ ಭಕ್ಷಯೇತ್ ॥೯॥

ಗಾರ್ಗ್ಯ– ಸತತವಾಗಿ ಅತಿಥಿಯನ್ನು ಪೂಜಿಸಬೇಕು. ಮನೆಯಲ್ಲಿ ದೀಪವನ್ನು ಇಡಬೇಕು (ಆಶ್ರಿತನಾದವನಿಗೆ ದೀಪದಾನವನ್ನು ಮಾಡಬೇಕು). ದಿವಾಸ್ವಾಪವನ್ನು (ಹಗಲುನಿದ್ರೆ) ಮತ್ತು ಮಾಂಸಭಕ್ಷಣವನ್ನು ವರ್ಜಿಸಬೇಕು.

ಗೋಬ್ರಾಹ್ಮಣಂ ನ ಹಿಂಸ್ಯಾಚ್ಚ ಪುಷ್ಕರಾಣಿ ಚ ಕೀರ್ತಯೇತ್ ।
ಏಷ ಶ್ರೇಷ್ಠತಮೋ ಧರ್ಮಃ ಸರಹಸ್ಯೋ ಮಹಾಫಲಃ ॥೧೦॥

ಗೋ-ಬ್ರಾಹ್ಮಣರಿಗೆ ಹಿಂಸೆಯನ್ನು ಮಾಡಬಾರದು. ಪುಷ್ಕರಗಳನ್ನು (ಮೂರು ಪುಷ್ಕರಗಳಿವೆ) ಬಾಯಿಯಿಂದ ಕೀರ್ತನೆ ಮಾಡಬೇಕು. ಇದು ಅತ್ಯಂತ ಶ್ರೇಷ್ಠವಾದ, ರಹಸ್ಯವಾದ, ಮಹಾಫಲವನ್ನು ಕೊಡುವ ಧರ್ಮ.

ಅಪಿ ಕ್ರತುಶತೈರಿಷ್ಟ್ವಾ ಕ್ಷಯಂ ಗಚ್ಛತಿ ತದ್ಧವಿಃ ।
ನ ತು ಕ್ಷೀಯಂತಿ ತೇ ಧರ್ಮಾಃ ಶ್ರದ್ದಧಾನೈಃ ಪ್ರಯೋಜಿತಾಃ ॥೧೧॥

ಶ್ರದ್ಧೆ ಇಲ್ಲದೆ ನೂರು ಯಾಗಗಳನ್ನು ಮಾಡಿದರೂ ಆ ಹವಿಸ್ಸು ನಾಶವನ್ನು ಹೊಂದುತ್ತದೆ. ಆದರೆ ಶ್ರದ್ಧೆಯುಳ್ಳವರು ಮಾಡಿದ ಧರ್ಮವು ನಾಶವನ್ನು ಹೊಂದುವುದಿಲ್ಲ.

ಇದಂ ಚ ಪರಮಂ ಗುಹ್ಯಂ ಸರಹಸ್ಯಂ ನಿಬೋಧತ ।
ಶ್ರಾದ್ಧಕಲ್ಪೇ ಚ ದೈವೇ ಚ ತೈರ್ಥಿಕೇ ಪರ್ವಣೇಷು ಚ ॥೧೨॥

ಶ್ರಾದ್ಧವಿಧಿಯಲ್ಲಿ, ದೈವಪೂಜೆಯಲ್ಲಿ, ತೀರ್ಥವಿಧಿಯಲ್ಲಿಮತ್ತು ಪರ್ವವಿಧಿಗಳಲ್ಲಿ ಇರುವ ಈ ಅತ್ಯಂತ ಗುಹ್ಯವೂ, ರಹಸ್ಯವೂ ಆದ ವಿಷಯವನ್ನು ತಿಳಿಯಿರಿ.

ರಜಸ್ವಲಾ ಚ ಯಾ ನಾರೀ ಶ್ವಿತ್ರಿಕಾऽಪುತ್ರಿಕಾ ಚ ಯಾ ।
ಏತಾಭಿಶ್ಚಕ್ಷುಷಾ ದೃಷ್ಟಂ ಹವಿರ್ನಾಶ್ನಂತಿ ದೇವತಾಃ ।
ಪಿತರಶ್ಚ ನ ತುಷ್ಯಂತಿ ವರ್ಷಾಣ್ಯಸ್ಯ ತ್ರಯೋದಶ ॥೧೩॥

ರಜಸ್ವಲೆಯಾದ ಅಥವಾ ತೊನ್ನು ಹಿಡಿದ ಅಥವಾ ಮಕ್ಕಳಿಲ್ಲದ ಸ್ತ್ರೀಯರಿಂದ ನೋಡಲ್ಪಟ್ಟ ಹವಿಸ್ಸನ್ನು ದೇವತೆಗಳು ಸ್ವೀಕರಿಸುವುದಿಲ್ಲ. ಪಿತೃಗಳು ಹದಿಮೂರು ವರ್ಷಗಳ ಕಾಲ ಅವನಿಗೆ ಪ್ರಸನ್ನರಾಗುವುದಿಲ್ಲ.

ಶುಕ್ಲವಾಸಾಃ ಶುಚಿರ್ಭೂತ್ವಾ ಬ್ರಾಹ್ಮಣಾನ್ ಸ್ವಸ್ತಿ ವಾಚಯೇತ್ ।
ಕೀರ್ತಯೇದ್ ಭಾರತಂ ಚೈವ ತಥಾ ಸ್ಯಾದಕ್ಷಯಂ ಹವಿಃ ॥೧೪॥

ಶುಚಿರ್ಭೂತನಾಗಿ, ಶುಕ್ಲ (ಬಿಳಿಬಟ್ಟೆ) ವಸ್ತ್ರವನ್ನು ಧರಿಸಿ, ಬ್ರಾಹ್ಮಣರಿಂದ ಸ್ವಸ್ತಿವಾಚನವನ್ನು ಮಾಡಿಸಿ, ಭಾರತ ಪ್ರವಚನವನ್ನು ಮಾಡಬೇಕು (ಮಾಡಿಸಬೇಕು). ಆಗ ಹವಿಸ್ಸು ಅಕ್ಷಯವಾಗುತ್ತದೆ.

ಧೌಮ್ಯಃ

ಭಿನ್ನಭಾಂಡಂ ಚ ಖಟ್ವಾಂ ಚ ಕುಕ್ಕುಟಂ ಶುನಕಂ ತಥಾ ।
ಅಪ್ರಶಸ್ತಾನಿ ಸರ್ವಾಣಿ ಯಶ್ಚ ವೃಕ್ಷೋ ಗೃಹೇರುಹಃ ॥೧೫॥

ಧೌಮ್ಯ– ಒಡೆದ ಪಾತ್ರೆಗಳು, ಮಂಚ, ಕೋಳಿ, ನಾಯಿ, ಮನೆಯಲ್ಲಿ ಬೆಳೆದ ಮರ- ಇವೆಲ್ಲವೂ ಅಪ್ರಶಸ್ತವಾದವುಗಳು.

ಭಿನ್ನಭಾಂಡೇ ಕಲಿಂ ಪ್ರಾಹುಃ ಖಟ್ವಾಯಾಂ ತು ಧನಕ್ಷಯಃ ।
ಕುಕ್ಕುಟೇ ಶುನಕೇ ಚೈವ ಹವಿರ್ನಾಶ್ನಂತಿ ದೇವತಾಃ ।
ವೃಕ್ಷಮೂಲೇ ಧ್ರುವಂ ಸತ್ವಂ ತಸ್ಮಾದ್ ವೃಕ್ಷಂ ನ ರೋಪಯೇತ್ ॥೧೬॥

ಒಡೆದ ಪಾತ್ರೆಗಳಿದ್ದರೆ ಅವುಗಳಲ್ಲಿ ಕಲಿ ಇರುತ್ತಾನೆ (ಅದರಿಂದ ಜಗಳವಾಗುತ್ತದೆ). ಮಂಚದಿಂದ ಧನಕ್ಷಯವಾಗುತ್ತದೆ. ನಾಯಿ ಮತ್ತು ಕೋಳಿಗಳಿದ್ದರೆ ದೇವತೆಗಳು ಹವಿಸ್ಸನ್ನು ಸ್ವೀಕರಿಸುವುದಿಲ್ಲ. ವೃಕ್ಷಮೂಲಗಳಲ್ಲಿ ಪಿಶಾಚಾದಿಗಳು ಇರುತ್ತವೆ. ಆದ್ದರಿಂದ ಮನೆಯೊಳಗೆ ವೃಕ್ಷಗಳನ್ನು ನೆಡಬಾರದು (ಲಕ್ಷಾಲಂಕಾರ).

ಜಮದಗ್ನಿಃ

ಯೋ ಯಜೇದಶ್ವಮೇಧೇನ ವಾಜಪೇಯಶತೇನ ಹ ।
ಅವಾಕ್ಶಿರಾ ವಾ ಲಂಬೇತ ಸತ್ರಂ ವಾ ಸ್ಫೀತಮಾಹರೇತ್ ॥೧೭॥

ನ ಯಸ್ಯ ಹೃದಯಂ ಶುದ್ಧಂ ನರಕಂ ಸ ಧ್ರುವಂ ವ್ರಜೇತ್ ।
ತುಲ್ಯಂ ಯಜ್ಞಶ್ಚ ಸತ್ಯಂ ಚ ಹೃದಯಸ್ಯ ಚ ಶುದ್ಧತಾ ॥೧೮॥

ಜಮದಗ್ನಿ– ಮನಸ್ಸು ಶುದ್ಧವಾಗಿಲ್ಲದಿದ್ದರೆ ಅಶ್ವಮೇಧಯಾಗವನ್ನು ಮಾಡಿದರೂ, ನೂರು ವಾಜಪೇಯ ಯಾಗಗಳನ್ನು ಮಾಡಿದರೂ, ತಲೆಕೆಳಗಾಗಿ ನಿಂತು ತಪಸ್ಸನ್ನು ಮಾಡಿದರೂ, ಪರಿಶುದ್ಧವಾದ ಸತ್ರಯಾಗವನ್ನು ಮಾಡಿದರೂ ಅವನು ನಿಶ್ಚಯವಾಗಿ ನರಕಕ್ಕೇ ಹೋಗುತ್ತಾನೆ. ಯಜ್ಞ, ಸತ್ಯ ಮತ್ತು ಮನಶ್ಶುದ್ಧಿ- ಇವುಗಳು ಸಮಾನವಾದವುಗಳು.

ಶುದ್ಧೇನ ಮನಸಾ ದತ್ತ್ವಾ ಸಕ್ತುಪ್ರಸ್ಥಂ ದ್ವಿಜಾತಯೇ ।
ಬ್ರಹ್ಮಲೋಕಮನುಪ್ರಾಪ್ತಃ ಪರ್ಯಾಪ್ತಂ ತನ್ನಿದರ್ಶನಮ್ ॥೧೯॥

ಶುದ್ಧವಾದ ಮನಸ್ಸಿನಿಂದ ಬ್ರಾಹ್ಮಣನಿಗೆ ಒಂದು ಹಿಡಿ ಹಿಟ್ಟನ್ನು ಕೊಟ್ಟು ಬ್ರಹ್ಮಲೋಕಕ್ಕೆ ಹೋದ ಕಥೆಯನ್ನು ಕೇಳಿದ್ದೇವೆ. ಅದೊಂದು ದೃಷ್ಟಾಂತವು ಸಾಕು.

ವಾಯುಃ

ಕಿಂಚಿದ್ಧರ್ಮಂ ಪ್ರವಕ್ಷ್ಯಾಮಿ ಮಾನುಷಾಣಾಂ ಸುಖಾವಹಮ್ ।
ಸರಹಸ್ಯಾಶ್ಚ ಯೇ ದೋಷಾಸ್ತಾನ್ ಶೃಣುಧ್ವಂ ಸಮಾಹಿತಾಃ ॥೨೦॥

ವಾಯು– ಮನುಷ್ಯರಿಗೆ ಸುಖವನ್ನು ಕೊಡುವ ಒಂದು ಸಣ್ಣಧರ್ಮವನ್ನು ಮತ್ತು ರಹಸ್ಯಸಹಿತವಾದ ದೋಷಗಳನ್ನು ಹೇಳುತ್ತೇನೆ. ಸಮಾಧಾನದಿಂದ ಅವುಗಳನ್ನು ಕೇಳಿ.

ಅಗ್ನಿಕಾರ್ಯಂ ಚ ಕರ್ತವ್ಯಂ ಪರಮಾನ್ನೇನ ಭೋಜನಮ್ ।
ದೀಪಕಶ್ಚಾಪಿ ಕರ್ತವ್ಯಃ ಪಿತೃಣಾಂ ಸತಿಲೋದಕಃ ॥೨೧॥

ಶ್ರಾದ್ಧದಲ್ಲಿ ಅಗ್ನಿಕಾರ್ಯವನ್ನು (ವೈಶ್ವದೇವವನ್ನು) ಮಾಡಬೇಕು. ಬ್ರಾಹ್ಮಣರಿಗೆ ಪರಮಾನ್ನಸಹಿತವಾಗಿ ಭೋಜನವನ್ನು ನೀಡಬೇಕು. ದೀಪವನ್ನೂ ದಾನ ಮಾಡಬೇಕು. ಪಿತೃಗಳಿಗೆ ತಿಲತರ್ಪಣವನ್ನು ಕೊಡಬೇಕು.

ಏತೇನ ವಿಧಿನಾ ಮರ್ತ್ಯಃ ಶ್ರದ್ದಧಾನಃ ಸಮಾಹಿತಃ ।
ಚತುರೋ ವಾರ್ಷಿಕಾನ್ ಮಾಸಾನ್ ಯೋ ದದಾತಿ ತಿಲೋದಕಮ್ ॥

ಭೋಜನಂ ಚ ಯಥಾಶಕ್ತ್ಯಾ ಬ್ರಾಹ್ಮಣೇ ವೇದಪಾರಗೇ ।
ಪಶುಬಂಧಶತಸ್ಯೇಹ ಫಲಂ ಪ್ರಾಪ್ನೋತಿ ಪುಷ್ಕಳಮ್ ॥೨೩॥

ಈ ವಿಧಿಯಿಂದ ಯಾವನು ಶ್ರದ್ಧೆ, ಸಮಾಧಾನದಿಂದ ಕೂಡಿದವನಾಗಿ ಮಳೆಗಾಲದಲ್ಲಿ ನಾಲ್ಕು ತಿಂಗಳು ಪಿತೃಗಳಿಗೆ ತರ್ಪಣವನ್ನು ಕೊಟ್ಟು, ವೇದ ಪಾರಂಗತರಾದ ಬ್ರಾಹ್ಮಣರಿಗೆ ಯಥಾಶಕ್ತಿ ಭೋಜನವನ್ನು ಮಾಡಿಸುತ್ತಾನೆಯೋ ಅವನು ನೂರು ಪಶುಯಾಗಗಳನ್ನು ಮಾಡಿದ ಪುಷ್ಕಳವಾದ ಫಲವನ್ನು ಪಡೆಯುತ್ತಾನೆ.

ಇದಂ ಚೈವಾಪರಂ ಗುಹ್ಯಮಪ್ರಶಸ್ತಂ ನಿಬೋಧತ ।
ಅಗ್ನೇಸ್ತು ವೃಷಲೋ ನೇತಾ ಹವಿರ್ಮೂಢಾಶ್ಚ ಯೋಷಿತಃ ॥೨೪॥

ಮನ್ಯತೇ ಧರ್ಮ ಏವೇತಿ ಸ ಚಾಧರ್ಮೇಣ ಲಿಪ್ಯತೇ ।
ಅಗ್ನಯಸ್ತಸ್ಯ ಕುಪ್ಯಂತಿ ಶೂದ್ರಯೋನಿಂ ಸ ಗಚ್ಛತಿ ॥೨೫॥

ಇನ್ನೊಂದು ರಹಸ್ಯವಾದ, ಅಶುಭವಾದ ವಿಷಯವನ್ನು ತಿಳಿಯಿರಿ. ಶೂದ್ರನು ಅಗ್ನಿಯನ್ನು ತೆಗೆದುಕೊಂಡು ಬಂದರೆ, ಸ್ತ್ರೀಯರು ಹವಿಸ್ಸನ್ನು ತೆಗೆದುಕೊಂಡು ಬಂದರೆ ಕೆಲವರು ಅದನ್ನು ಧರ್ಮವೆಂದೇ ತಿಳಿಯುತ್ತಾರೆ. ಆದರೆ ಅದು ಅಧರ್ಮ. ಯಜಮಾನನು ಅಧರ್ಮಲೇಪವನ್ನು ಹೊಂದುತ್ತಾನೆ. ಅವನಿಗೆ ಅಗ್ನಿಗಳು ಕೋಪಗೊಳ್ಳುತ್ತವೆ ಮತ್ತು ಅವನು ಮುಂದೆ ಶೂದ್ರಯೋನಿಗೆ ಹೋಗುತ್ತಾನೆ.

ಪಿತರಶ್ಚ ನ ತುಷ್ಯಂತಿ ಸಹದೇವೈರ್ವಿಶೇಷತಃ ।
ಪ್ರಾಯಶ್ಚಿತ್ತಂ ತು ಯತ್ ತತ್ರ ಬ್ರುವತಸ್ತನ್ನಿಬೋಧ ಮೇ ।
ಯತ್ಕೃತ್ವಾ ತು ನರಃ ಸಮ್ಯಕ್ಸುಖೀ ಭವತಿ ವಿಜ್ವರಃ ॥೨೬॥

ವಿಶೇಷವಾಗಿ ಅವನ ಪಿತೃಗಳು ಮತ್ತು ದೇವತೆಗಳು ಸಂತೋಷಗೊಳ್ಳುವುದಿಲ್ಲ. ಯಾವ ಪ್ರಾಯಶ್ಚಿತ್ತವನ್ನು ಮಾಡಿ ಅಂತಹ ಮನುಷ್ಯನು ನಿರಾತಂಕವಾಗಿ ಸುಖವಾಗಿ ಇರುತ್ತಾನೆಯೋ ಅಂತಹ ಪ್ರಾಯಶ್ಚಿತ್ತವನ್ನು ಹೇಳುತ್ತೇನೆ, ಅದನ್ನು ಕೇಳಿ.

ಗವಾಂ ಮೂತ್ರಪುರೀಷೇಣ ಪಯಸಾ ಚ ಘೃತೇನ ಚ ।
ಅಗ್ನಿಕಾರ್ಯಂ ತ್ರ್ಯಹಂ ಕುರ್ಯಾನ್ನಿರಾಹಾರಃ ಸಮಾಹಿತಃ ॥೨೭॥

ಉಪವಾಸ ಮತ್ತು ಸಮಾಧಾನದಿಂದಿದ್ದು ಮೂರು ದಿವಸಗಳ ಕಾಲ ಗೋಮೂತ್ರ, ಗೋಮಯ, ಗೋಕ್ಷೀರ ಮತ್ತು ಗೋಘೃತಗಳಿಂದ ಅಗ್ನಿಕಾರ್ಯವನ್ನು ಮಾಡಬೇಕು.

ತತಃ ಸಂವತ್ಸರೇ ಪೂರ್ಣೇ ಪ್ರತಿಗೃಹ್ಣಂತಿ ದೇವತಾಃ ।
ಹೃಷ್ಯಂತಿ ಪಿತರಶ್ಚಾಸ್ಯ ಶ್ರಾದ್ಧಕಾಲ ಉಪಸ್ಥಿತೇ ॥೨೮॥

ಅನಂತರ ಒಂದು ವರ್ಷವು ಕಳೆದ ಮೇಲೆ ದೇವತೆಗಳು ಅವನಿಗೆ ಪ್ರಸನ್ನರಾಗುತ್ತಾರೆ ಮತ್ತು ಶ್ರಾದ್ಧಕಾಲವು ಬಂದಾಗ ಪಿತೃಗಳೂ ಸಂತೋಷ ಪಡುತ್ತಾರೆ.

ಏಷ ಹ್ಯಧರ್ಮೋ ಧರ್ಮಶ್ಚ ರಹಸ್ಯಃ ಸಂಪ್ರಕೀರ್ತಿತಃ ।
ಮರ್ತ್ಯಾನಾಂ ಸ್ವರ್ಗಕಾಮಾನಾಂ ಪ್ರೇತ್ಯ ಸ್ವರ್ಗಸುಖಾವಹಃ ॥೨೯॥

ಸ್ವರ್ಗಕಾಮನೆಯುಳ್ಳ ಮನುಷ್ಯರಿಗೆ ಮರಣಾನಂತರದಲ್ಲಿ ಸುಖವನ್ನು ಕೊಡುವ ರಹಸ್ಯವಾದ ಧರ್ಮಗಳನ್ನೂ ಮತ್ತು ಹಾಗೆಯೇ ಅಧರ್ಮಗಳನ್ನೂ ಹೇಳಿದ್ದೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ಏಕೋನಾಶೀತ್ಯುತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಎಪ್ಪತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಂಬತ್ತನೆಯ ಅಧ್ಯಾಯ

ಲೋಮಶರಿಂದ ಧರ್ಮೋಪದೇಶ

ಲೋಮಶಃ

ಪರದಾರೇಷು ಯೇ ಸಕ್ತಾ ಅಕೃತ್ವಾ ದಾರಸಂಗ್ರಹಮ್ ।
ನಿರಾಶಾಃ ಪಿತರಸ್ತೇಷಾಂ ಶ್ರಾದ್ಧಕಾಲೇ ಭವಂತಿ ವೈ ॥೧॥

ಲೋಮಶ– ವಿವಾಹವನ್ನು ಮಾಡಿಕೊಳ್ಳದೆ ಪರಪತ್ನಿಯರಲ್ಲಿ ಆಸಕ್ತರಾದವರಿಗೆ ಅವರ ಪಿತೃಗಳು ಶ್ರಾದ್ಧಕಾಲದಲ್ಲಿ ನಿರಾಶರಾಗುತ್ತಾರೆ.

ಪರದಾರರತಿರ್ಯಃ ಸ್ಯಾದ್ ಯಶ್ಚ ವಂಧ್ಯಾಮುಪಾಸತೇ ।
ಬ್ರಹ್ಮಸ್ವಂ ಹರತೇ ಯಶ್ಚ ಸಮದೋಷಾ ಭವಂತಿ ತೇ ॥೨॥

ಪರದಾರರತಿಯುಳ್ಳವನೂ, ವಂಧ್ಯಾ(ಬಂಜೆ)ಸಂಗವನ್ನು ಮಾಡುವವನೂ, ಬ್ರಹ್ಮಸ್ವವನ್ನು ಅಪಹರಿಸುವವನೂ ಮೂವರೂ ಸಮಾನದೋಷವುಳ್ಳವರಾಗುತ್ತಾರೆ.

ಅಸಂಭಾಷ್ಯಾ ಭವಂತ್ಯೇತೇ ಪಿತೄಣಾಂ ನಾತ್ರ ಸಂಶಯಃ ।
ದೇವತಾಃ ಪಿತರಶ್ಚೈಷಾಂ ನಾಭಿನಂದಂತಿ ತದ್ಹವಿಃ ॥೩॥

ಅವರು ಪಿತೃಗಳಿಗೆ ಸಂಭಾಷಣೆಗೆ ಅರ್ಹರಲ್ಲ ಎಂಬುದರಲ್ಲಿ ಸಂಶಯವಿಲ್ಲ. ಅಂತಹವರು ಕೊಡುವ ಹವಿಸ್ಸನ್ನು ದೇವತೆಗಳು ಮತ್ತು ಪಿತೃಗಳು ಸೇವಿಸುವುದಿಲ್ಲ.

ತಸ್ಮಾತ್ಪರಸ್ಯ ವೈ ದಾರಾಂಸ್ತ್ಯಜೇದ್ ವಂಧ್ಯಾಂ ಚ ಯೋಷಿತಮ್ ।
ಬ್ರಹ್ಮಸ್ವಂ ಹಿ ನ ಹರ್ತವ್ಯಮಾತ್ಮನೋ ಹಿತಮಿಚ್ಛತಾ ॥೪॥

ಆದ್ದರಿಂದ ತನ್ನ ಹಿತವನ್ನು ಬಯಸುವವನು ಪರಪತ್ನಿಯರನ್ನು ತ್ಯಜಿಸಬೇಕು. ಬಂಜೆಯಾದ ಸ್ತ್ರೀಯನ್ನು ತ್ಯಜಿಸಬೇಕು. ಬ್ರಹ್ಮಸ್ವವನ್ನು ಅಪಹಾರ ಮಾಡಬಾರದು.

ಶ್ರೂಯತಾಂ ಚಾಪರಂ ಗುಹ್ಯಂ ರಹಸ್ಯಂ ಧರ್ಮಸಂಹಿತಮ್ ।
ಶ್ರದ್ದಧಾನೇನ ಕರ್ತವ್ಯಂ ಗುರೂಣಾಂ ವಚನಂ ಸದಾ ॥೫॥

ಧರ್ಮಸಮ್ಮತವಾದ ಈ ಇನ್ನೊಂದು ರಹಸ್ಯವನ್ನು ಕೇಳಿ. ಗುರುಗಳ ಮಾತನ್ನು ಯಾವಾಗಲೂ ಶ್ರದ್ಧೆಯಿಂದ ನಡೆಸಿಕೊಡಬೇಕು.

ದ್ವಾದಶ್ಯಾಂ ಪೌರ್ಣಮಾಸ್ಯಾಂ ಚ ಮಾಸಿಮಾಸಿ ಘೃತಾಕ್ಷತಮ್ ।
ಬ್ರಾಹ್ಮಣೇಭ್ಯಃ ಪ್ರಯಚ್ಛೇತ ತಸ್ಯ ಪುಣ್ಯಂ ನಿಬೋಧತ ॥೬॥

ದ್ವಾದಶಿಯ ದಿವಸ ಅಥವಾ ಪೌರ್ಣಮಾಸಿಯ ದಿವಸ ಪ್ರತಿ ತಿಂಗಳೂ ಘೃತ ಸಹಿತವಾದ ಅಕ್ಕಿಯನ್ನು ದಾನ ಮಾಡುವವನ ಪುಣ್ಯವನ್ನು ಕೇಳಿ.

ಸೋಮಶ್ಚ ವರ್ಧತೇ ತೇನ ಸಮುದ್ರಶ್ಚ ಮಹೋದಧಿಃ ।
ಅಶ್ವಮೇಧಚತುರ್ಭಾಗಂ ಫಲಂ ಸೃಜತಿ ವಾಸವಃ ॥೭॥

ಅದರಿಂದ ಚಂದ್ರನೂ ಮಹಾಸಮುದ್ರವೂ ವೃದ್ಧಿಯನ್ನು ಹೊಂದುತ್ತಾರೆ. ಇಂದ್ರನು ಅವನಿಗೆ ಅಶ್ವಮೇಧಯಾಗದ ನಾಲ್ಕನೆಯ ಒಂದು ಭಾಗದ ಫಲವನ್ನು ಕೊಡುತ್ತಾನೆ.

ದಾನೇನೈತೇನ ತೇಜಸ್ವೀ ವೀರ್ಯವಾಂಶ್ಚ ಭವೇನ್ನರಃ ।
ಪ್ರೀತಶ್ಚ ಭಗವಾನ್ ಸೋಮ ಇಷ್ಟಾನ್ ಕಾಮಾನ್ ಪ್ರಯಚ್ಛತಿ ॥೮॥

ಈ ದಾನದಿಂದ ಮನುಷ್ಯನು ತೇಜಸ್ವಿಯೂ, ಸಾಮರ್ಥ್ಯೋಪೇತನೂ ಆಗುತ್ತಾನೆ. ಸಂತುಷ್ಟನಾದ, ಪೂಜ್ಯನಾದ ಚಂದ್ರನು ಅವನಿಗೆ ಇಷ್ಟವಾದ ಕಾಮಗಳನ್ನು ಕೊಡುತ್ತಾನೆ.

ಶ್ರೂಯತಾಂ ಚಾಪರೋ ಧರ್ಮಃ ಸರಹಸ್ಯೋ ಮಹಾಫಲಃ ।
ಇದಂ ಕಲಿಯುಗಂ ಪ್ರಾಪ್ಯ ಮನುಷ್ಯಾಣಾಂ ಸುಖಾವಹಃ ॥೯॥

ಪ್ರಾಪ್ತವಾದ ಈ ಕಲಿಯುಗದಲ್ಲಿ ಮನುಷ್ಯರಿಗೆ ಸುಖವನ್ನು ತರುವ ಮತ್ತು ಮಹಾಫಲವನ್ನು ಕೊಡುವ ರಹಸ್ಯವಾದ ಇನ್ನೊಂದು ಧರ್ಮವನ್ನು ಕೇಳಿ.

ಕಲ್ಯಮುತ್ಥಾಯ ಯೋ ಮರ್ತ್ಯಃ ಸ್ನಾತಃ ಶುಕ್ಲೇನ ವಾಸಸಾ ।
ತಿಲಪಾತ್ರಂ ಪ್ರಯಚ್ಛೇತ ಬ್ರಾಹ್ಮಣೇಭ್ಯಃ ಸಮಾಹಿತಃ ॥೧೦॥

ತಿಲೋದಕಂ ಚ ಯೋ ದದ್ಯಾತ್ ಪಿತೄಣಾಂ ಮಧುನಾ ಸಹ ।
ದೀಪಕಂ ಕೃಸರಂ ಚೈವ ಶ್ರೂಯತಾಂ ತಸ್ಯ ತತ್ಫಲಮ್ ॥೧೧॥

ಪ್ರಾತಃಕಾಲದಲ್ಲಿ ಎದ್ದು ಸ್ನಾನವನ್ನು ಮಾಡಿ, ಶ್ವೇತವಸ್ತ್ರವನ್ನು ಧರಿಸಿ, ಸಮಾಧಾನದಿಂದ ಯಾವನು ಬ್ರಾಹ್ಮಣನಿಗೆ ತಿಲಪಾತ್ರೆಯನ್ನು ಕೊಡುತ್ತಾನೆಯೋ ಮತ್ತು ಪಿತೃಗಳಿಗೆ ಮಧುಸಹಿತವಾದ ತಿಲೋದಕವನ್ನೂ, ದೀಪವನ್ನೂ ಮತ್ತು (ಯವಾನ್ನ) ವನ್ನು ಕೊಡುತ್ತಾನೆಯೋ ಅದರ ಫಲವನ್ನು ಕೇಳಿ.

ತಿಲಪಾತ್ರೇ ಫಲಂ ಪ್ರಾಹ ಭಗವಾನ್ ಪಾಕಶಾಸನಃ ।
ಗೋಪ್ರದಾನಂ ಚ ಯಃ ಕುರ್ಯಾದ್ ಭೂಮಿದಾನಂ ಚ ಶಾಶ್ವತಮ್ ॥

ಅಗ್ನಿಷ್ಟೋಮಂ ಚ ಯೋ ಯಜ್ಞಂ ಯಜೇತ ಬಹುದಕ್ಷಿಣಮ್ ।
ತಿಲಪಾತ್ರಂ ಸಹೈತೇನ ಸಮಂ ಮನ್ಯಂತಿ ದೇವತಾಃ ॥೧೩॥

ತಿಲಪಾತ್ರದಾನದ ಫಲವನ್ನು ಪೂಜ್ಯನಾದ ಪಾಕಶಾಸನನಾದ ಇಂದ್ರನು ಹೇಳುತ್ತಾನೆ. ಯಾವನು ಗೋದಾನವನ್ನು ಮಾಡುತ್ತಾನೆಯೋ, ಭೂಮಿದಾನವನ್ನು ಮಾಡುತ್ತಾನೆಯೋ, ಅಗ್ನಿಷ್ಟೋಮವನ್ನು ಮಾಡುತ್ತಾನೆಯೋ, ಬಹುದಕ್ಷಿಣಾ ಸಹಿತವಾದ ಯಾಗವನ್ನು ಮಾಡುತ್ತಾನೆಯೋ ಅವೆಲ್ಲದಕ್ಕೂ ತಿಲಪಾತ್ರವು ಸಮಾನವಾದುದು ಎಂದು ದೇವತೆಗಳು ತಿಳಿಯುತ್ತಾರೆ (ಎಂದು ಇಂದ್ರನು ಹೇಳಿದ್ದಾನೆ).

ತಿಲೋದಕಂ ಸದಾ ಶ್ರಾದ್ಧೇ ಮನ್ಯಂತೇ ಪಿತರೋಽಕ್ಷಯಮ್ ।
ದೀಪೇ ಚ ಕೃಸರೇ ಚೈವ ತುಷ್ಯಂತೇಽಸ್ಯ ಪಿತಾಮಹಾಃ ॥೧೪॥

ಶ್ರಾದ್ಧದಲ್ಲಿ ಕೊಡುವ ತಿಲೋದಕದಿಂದ ಪಿತೃಗಳು ಅಕ್ಷಯಫಲವನ್ನು ಕೊಡುತ್ತಾರೆ. ದೀಪ ಮತ್ತು ತಿಲಾನ್ನದಾನದಿಂದ ಪಿತಾಮಹರು ಸಂತುಷ್ಟರಾಗುತ್ತಾರೆ.

ಸ್ವರ್ಗೇ ಚ ಪಿತೃಲೋಕೇ ಚ ಪಿತೃದೇವಾಭಿಪೂಜಿತಮ್ ।
ಏವಮೇತನ್ಮಯೋದ್ದಿಷ್ಟಮೃಷಿದೃಷ್ಟಂ ಪುರಾತನಮ್ ॥೧೫॥

ಸ್ವರ್ಗದಲ್ಲಿ ಮತ್ತು ಪಿತೃಲೋಕದಲ್ಲಿ ದೇವತೆಗಳಿಂದ ಮತ್ತು ಪಿತೃಗಳಿಂದ ಸತ್ಕರಿಸಲ್ಪಡುವ ಋಷಿದೃಷ್ಟವಾದ, ಪುರಾತನವಾದ ಈ ಧರ್ಮವನ್ನು ನಾನು ನಿಮಗೆ ಹೇಳಿದ್ದೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಅಶೀತ್ಯುತ್ತರಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಎಂಬತ್ತನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಂಬತ್ತೊಂದನೆಯ ಅಧ್ಯಾಯ

ಅರುಂಧತಿ ಮೊದಲಾದವರಿಂದ ಧರ್ಮೋಪದೇಶ

ಭೀಷ್ಮಃ

ತತಸ್ತ ಋಷಿಗಣಾಃ ಸರ್ವೇ ಪಿತರಶ್ಚ ಸದೇವತಾಃ ।
ಅರುಂಧತೀಂ ತಪೋವೃದ್ಧಾಮಪೃಚ್ಛಂತ ಸಮಾಹಿತಾಃ ।
ಸಮಾನಶೀಲಾಂ ವೀರ್ಯೇಣ ವಸಿಷ್ಠಸ್ಯ ಮಹಾತ್ಮನಃ ॥೧॥

ತತ್ತೋ ಧರ್ಮರಹಸ್ಯಾನಿ ಶ್ರೋತುಮಿಚ್ಛಾಮಹೇ ವಯಮ್ ।
ಯತ್ತೇ ಗುಹ್ಯತಮಂ ಭದ್ರೇ ತತ್ ಪ್ರಭಾಷಿತುಮರ್ಹಸಿ ॥೨॥

ಭೀಷ್ಮ– ಅನಂತರ ಎಲ್ಲಾ ಋಷಿಗಳು, ದೇವತೆಗಳು ಮತ್ತು ಪಿತೃಗಳು, ತಪೋವೃದ್ಧಳೂ, ಸಾಮರ್ಥ್ಯದಲ್ಲಿ ಮಹಾತ್ಮರಾದ ವಸಿಷ್ಠರಿಗೆ ಸಮಾನಶೀಲಳಾದವಳೂ ಆದ ಅರುಂಧತಿಯನ್ನು ಸಮಾಧಾನದಿಂದ ಎಲೌ ಮಂಗಳಸ್ವರೂಪಳೇ, ನಿನ್ನಿಂದ ನಾವು ಧರ್ಮರಹಸ್ಯಗಳನ್ನು ಕೇಳಲು ಬಯಸುತ್ತೇವೆ. ಯಾವುದು ಅತ್ಯಂತ ರಹಸ್ಯವಾದುದೋ ಅದನ್ನು ಹೇಳಬೇಕು ಎಂದು ಕೇಳಿದರು.

ಅರುಂಧತೀ

ತಪೋವೃದ್ಧಿರ್ಮಯಾ ಪ್ರಾಪ್ತಾ ಭವತಾಂ ಸ್ಮರಣೇನ ವೈ ।
ಭವತಾಂ ಚ ಪ್ರಸಾದೇನ ಧರ್ಮಾನ್ ವಕ್ಷ್ಯಾಮಿ ಶಾಶ್ವತಾನ್ ॥೩॥

ಸಗುಹ್ಯಾನ್ ಸರಹಸ್ಯಾಂಶ್ಚ ತಾನ್ ಶೃಣುಧ್ವಮಶೇಷತಃ ।
ಶ್ರದ್ದಧಾನೇ ಪ್ರಯೋಕ್ತವ್ಯಾ ಯಸ್ಯ ಶುದ್ಧಂ ತಥಾ ಮನಃ ॥೪॥

ಅರುಂಧತೀ– ನಿಮ್ಮ ಸ್ಮರಣೆಯಿಂದ ನಾನು ತಪೋವೃದ್ಧಿಯನ್ನು ಪಡೆದಿದ್ದೇನೆ. ನಿಮ್ಮ ಅನುಗ್ರಹದಿಂದ ರಹಸ್ಯವಾದ ಮತ್ತು ಗುಹ್ಯವಾದ, ಶಾಶ್ವತವಾದ ಧರ್ಮಗಳನ್ನು ಹೇಳುತ್ತೇನೆ. ಅದನ್ನು ಪೂರ್ಣವಾಗಿ ಕೇಳಿ. ಶ್ರದ್ಧೆಯುಳ್ಳವನಿಗೂ ಮತ್ತು ಶುದ್ಧ ಮನಸ್ಸುಳ್ಳವನಿಗೂ ಧರ್ಮವನ್ನು ಹೇಳಬೇಕಷ್ಟೆ!

ಅಶ್ರದ್ದಧಾನೋ ಮಾನೀ ಚ ಬ್ರಹ್ಮಹಾ ಗುರುತಲ್ಪಗಃ ।
ಅಸಂಭಾಷ್ಯಾ ಹಿ ಚತ್ವಾರೋ ನೈಷಾಂ ಧರ್ಮಂ ಪ್ರಕಾಶಯೇತ್ ॥೫॥

ಶ್ರದ್ಧೆ ಇಲ್ಲದವನು, ಅಹಂಕಾರಿಯಾದವನು, ಬ್ರಹ್ಮಹತ್ಯೆಯನ್ನು ಮಾಡಿದವನು, ಗುರುತಲ್ಪಗಾಮಿ - ಈ ನಾಲ್ವರು ಸಂಭಾಷಣೆಗೆ ಅರ್ಹರಲ್ಲ. ಅವರಿಗೆ ಧರ್ಮವನ್ನು ಪ್ರಕಾಶಿಸಬಾರದು.

ಅಹನ್ಯಹನಿ ಯೋ ದದ್ಯಾತ್ ಕಪಿಲಾಂ ದ್ವಾದಶೀಃ ಸಮಾಃ ।
ಮಾಸಿಮಾಸಿ ಚ ಸತ್ರೇಣ ಯೋ ಯಜೇತ ಸದಾ ನರಃ ॥೬॥

ಗವಾಂ ಶತಸಹಸ್ರಂ ಚ ಯೋ ದದ್ಯಾಜ್ಜ್ಯೇಷ್ಠಪುಷ್ಕರೇ ।
ನ ತದ್ಧರ್ಮಫಲಂ ತುಲ್ಯಮತಿಥಿರ್ಯಸ್ಯ ತುಷ್ಯತಿ ॥೭॥

ಹನ್ನೆರಡು ವರ್ಷಗಳ ಕಾಲ ಯಾವನು ಸತತವಾಗಿ ಪ್ರತಿದಿನವೂ ಕಪಿಲ ಗೋವುಗಳನ್ನು ದಾನ ಮಾಡುತ್ತಾನೆಯೋ ಮತ್ತು ಪ್ರತಿ ತಿಂಗಳೂ ಸತ್ರಯಾಗವನ್ನು ಮಾಡುತ್ತಾನೆಯೋ ಯಾವನು ಜ್ಯೇಷ್ಠಮಾಸದ ಪೌರ್ಣಮಾಸಿಯಂದು ಲಕ್ಷಗೋದಾನ ಮಾಡುತ್ತಾನೆಯೋ ಆ ಧರ್ಮಗಳಿಂದ ಉಂಟಾದ ಫಲವು ಅತಿಥಿಯ ಸಂತೋಷದಿಂದ ಉಂಟಾದ ಫಲಕ್ಕೆ ಸಮನಾದುದಲ್ಲ (**ಲಕ್ಷಾಲಂಕಾರ**).

ಶ್ರೂಯತಾಂ ಚಾಪರೋ ಧರ್ಮೋ ಮನುಷ್ಯಾಣಾಂ ಸುಖಾವಹಃ ।
ಶ್ರದ್ದಧಾನೇನ ಕರ್ತವ್ಯಃ ಸರಹಸ್ಯೋ ಮಹಾಫಲಃ ॥೮॥

ಶ್ರದ್ಧೆಯುಳ್ಳವನು ಮಾಡಬೇಕಾದ ರಹಸ್ಯವಾದ, ಮಹಾಫಲದಾಯಕವಾದ, ಸುಖಪ್ರದವಾದ ಇನ್ನೊಂದು ಧರ್ಮವನ್ನು ಕೇಳಿ.

ಕಲ್ಯಮುತ್ಥಾಯ ಗೋಮಧ್ಯೇ ಗೃಹ್ಯ ದರ್ಭಾನ್ ಸಹೋದಕಾನ್ ।
ನಿಷಿಂಚೀತ ಗವಾಂ ಶೃಂಗೇ ಮಸ್ತಕೇನ ಚ ತಜ್ಜಲಮ್ ।
ಪ್ರತೀಚ್ಛೇತ ನಿರಾಹಾರಸ್ತಸ್ಯ ಧರ್ಮಫಲಂ ಶೃಣು ॥೯॥

ಪ್ರಾತಃಕಾಲದಲ್ಲಿ ಎದ್ದು ಗೋವುಗಳ ಮಧ್ಯದಲ್ಲಿ ದರ್ಭೆಗಳನ್ನು ಮತ್ತು ಉದಕವನ್ನು ಹಿಡಿದು ಅದರಿಂದ ಗೋವುಗಳ ಶೃಂಗಕ್ಕೆ ಅಭಿಷೇಕವನ್ನು ಮಾಡಿ ನಿರಾಹಾರನಾಗಿ ಆ ಜಲವನ್ನು ತಲೆಯ ಮೇಲೆ ಧರಿಸಬೇಕು. ಅದರಿಂದ ಉಂಟಾಗುವ ಧರ್ಮಫಲವನ್ನು ಕೇಳಿ.

ಶ್ರೂಯಂತೇ ಯಾನಿ ತೀರ್ಥಾನಿ ತ್ರಿಷು ಲೋಕೇಷು ಕಾನಿಚಿತ್ ।
ಸಿದ್ಧಚಾರಣಜುಷ್ಟಾನಿ ಸೇವಿತಾನಿ ಮಹರ್ಷಿಭಿಃ ।
ಅಭಿಷೇಕಃ ಸಮಸ್ತೇಷಾಂ ಗವಾಂ ಶೃಂಗೋದಕಸ್ಯ ಚ ॥೧೦॥

ಮೂರುಲೋಕಗಳಲ್ಲಿ ಸಿದ್ಧ-ಚಾರಣರಿಂದಲೂ, ಮಹರ್ಷಿಗಳಿಂದಲೂ ಸೇವಿತವಾದ ಎಷ್ಟು ತೀರ್ಥಗಳಿವೆಯೋ ಅಷ್ಟು ತೀರ್ಥಗಳಲ್ಲಿ ಸ್ನಾನ ಮಾಡಿದ ಫಲವು ಗೋಶೃಂಗೋದಕವನ್ನು ತಲೆಯ ಮೇಲೆ ಧರಿಸುವುದರಿಂದ ಉಂಟಾಗುತ್ತದೆ.

ಭೀಷ್ಮಃ

ಸಾಧುಸಾಧ್ವಿತಿ ಚೋದ್ದಿಷ್ಟಂ ದೈವತೈಃ ಪಿತೃಭಿಸ್ತಥಾ ।
ಭೂತೈಶ್ಚೈವ ಸುಸಂಹೃಷ್ಟೈಃ ಪೂಜಿತಾ ಸಾऽಪ್ಯರುಂಧತೀ ॥೧೧॥

ಭೀಷ್ಮ– ಆಗ ದೇವತೆಗಳು ಮತ್ತು ಪಿತೃಗಳು 'ಸಾಧು-ಸಾಧು' ಎಂದು ಹೇಳಿದರು. ಬಹಳ ಸಂತೋಷಗೊಂಡ ಪಿತೃಗಳು ಅರುಂಧತಿಯನ್ನು ಪೂಜಿಸಿದರು.

ಪಿತಾಮಹಃ(ಬ್ರಹ್ಮಾ)

ಅಹೋ ಧರ್ಮೋ ಮಹಾಭಾಗೇ ಸರಹಸ್ಯ ಉದಾಹೃತಃ ।
ವರಂ ದದಾಮಿ ತೇ ಧನ್ಯೇ ತಪಸ್ತೇ ವರ್ಧತಾಂ ಸದಾ ॥೧೨॥

ಬ್ರಹ್ಮಾ– ಎಲೌ ಮಹಾನುಭಾವಳೇ, ಸಂತೋಷ. ರಹಸ್ಯವಾದ ಧರ್ಮವನ್ನು ಹೇಳಿದ್ದೀಯೆ. ಧನ್ಯಳಾದವಳೇ, ನಿನಗೆ ವರವನ್ನು ಕೊಡುತ್ತೇನೆ. ನಿನ್ನ ತಪಸ್ಸು ಯಾವಾಗಲೂ ಅಭಿವೃದ್ಧಿಯನ್ನು ಹೊಂದಲಿ.

ಯಮಃ

ರಮಣೀಯಾ ಕಥಾ ದಿವ್ಯಾ ಯುಷ್ಮತ್ತೋ ಯಾ ಮಯಾ ಶ್ರುತಾ ।
ಶ್ರೂಯತಾಂ ಚಿತ್ರಗುಪ್ತಸ್ಯ ಭಾಷಿತಂ ಮಮ ಚ ಪ್ರಿಯಮ್ ॥೧೩॥

ಯಮ– ನಿಮ್ಮಿಂದ ನಾನು ರಮಣೀಯವಾದ ಕಥೆಗಳನ್ನು ಕೇಳಿದ್ದೇನೆ. ನನಗೆ ಪ್ರಿಯವಾದ ಚಿತ್ರಗುಪ್ತರ ಮಾತುಗಳನ್ನೂ ಕೇಳಿ.

ರಹಸ್ಯಂ ಧರ್ಮಸಂಯುಕ್ತಂ ಶಕ್ಯಂ ಶ್ರೋತುಂ ಮಹರ್ಷಿಭಿಃ ।
ಶ್ರದ್ದಧಾನೇನ ಮರ್ತ್ಯೇನ ಆತ್ಮನೋ ಹಿತಮಿಚ್ಛತಾ ॥೧೪॥

ತನ್ನ ಹಿತವನ್ನು ಬಯಸುವ ಶ್ರದ್ಧಾಳುವಾದ ಮನುಷ್ಯನಿಂದಲೂ ಮತ್ತು ಮಹರ್ಷಿಗಳಿಂದಲೂ ಧರ್ಮಸಂಯುಕ್ತವಾದ ಈ ರಹಸ್ಯವನ್ನು ಕೇಳಲು ಸಾಧ್ಯ.

ನ ಹಿ ಪುಣ್ಯಂ ತಥಾ ಪಾಪಂ ಕೃತಂ ಕಿಂಚಿದ್ ವಿನಶ್ಯತಿ ।
ಪರ್ವಕಾಲೇ ಚ ಯತ್ ಕಿಂಚಿದಾದಿತ್ಯಂ ಚಾಧಿತಿಷ್ಠತಿ ॥೧೫॥

ಪರ್ವಕಾಲದಲ್ಲಿ ಮಾಡಿದ ಅಲ್ಪಪುಣ್ಯವಾಗಲೀ, ಪಾಪವಾಗಲೀ ನಾಶವನ್ನು ಹೊಂದುವುದಿಲ್ಲ. ಅದು ಸೂರ್ಯನ ಬಳಿ ಆಶ್ರಿತವಾಗಿರುತ್ತದೆ.

ಪ್ರೇತಲೋಕಂ ಗತೇ ಮರ್ತ್ಯೇ ತತ್ತತ್ಸರ್ವಂ ವಿಭಾವಸುಃ ।
ಪ್ರತಿಜಾನಾತಿ ಪುಣ್ಯಾತ್ಮಾ ತಚ್ಚ ತತ್ರೋಪಯುಜ್ಯತೇ ॥೧೬॥

ಮನುಷ್ಯನು ಮರಣವನ್ನು ಹೊಂದಿ ಯಮಲೋಕಕ್ಕೆ ಹೋದಾಗ ಪುಣ್ಯಾತ್ಮನಾದ ಸೂರ್ಯನು ಅವೆಲ್ಲವನ್ನೂ ತಿಳಿದು ಅದನ್ನು ಹಿಂದೆ ಕೊಡುತ್ತಾನೆ. ಆ ಪುಣ್ಯವು ಅಲ್ಲಿ ಉಪಯೋಗಕ್ಕೆ ಬರುತ್ತದೆ.

ಕಿಂಚಿದ್ಧರ್ಮಂ ಪ್ರವಕ್ಷ್ಯಾಮಿ ಚಿತ್ರಗುಪ್ತಮತಂ ಶುಭಮ್ ।
ಪಾನೀಯಂ ಚೈವ ದೀಪಂ ಚ ದಾತವ್ಯಂ ಸತತಂ ತಥಾ ॥೧೭॥

ಚಿತ್ರಗುಪ್ತರಿಗೆ ಸಮ್ಮತವಾದ ಇನ್ನೊಂದು ಶುಭವಾದ ಧರ್ಮವನ್ನು ಹೇಳುವೆನು. ಜಲದಾನವನ್ನೂ ಮತ್ತು ದೀಪದಾನವನ್ನು ಸತತವಾಗಿ ಮಾಡಬೇಕು.

ಉಪಾನಹೌ ಚ ಚ್ಛತ್ರಂ ಚ ಕಪಿಲಾ ಚ ಯಥಾತಥಮ್ ।
ಪುಷ್ಕರೇ ಕಪಿಲಾ ದೇಯಾ ಬ್ರಾಹ್ಮಣೇ ವೇದಪಾರಗೇ ॥೧೮॥

ಪಾದರಕ್ಷೆಗಳ ದಾನ, ಛತ್ರಿಯ ದಾನ ಮತ್ತು ಕಪಿಲಗೋವುಗಳ ದಾನವನ್ನು ಆಗಾಗ ಮಾಡಬೇಕು. ಜ್ಯೇಷ್ಠ ಪೌರ್ಣಮಾಸಿಯಂದು ವೇದಪಾರಂಗತನಾದ ಬ್ರಾಹ್ಮಣನಿಗೆ ಕಪಿಲ ಗೋದಾನವನ್ನು ಮಾಡಬೇಕು.

ಅಗ್ನಿಹೋತ್ರಂ ಚ ಯತ್ನೇನ ಸರ್ವಶಃ ಪ್ರತಿಪಾಲಯೇತ್ ।
ಅಯಂ ಚೈವಾಪರೋ ಧರ್ಮಶ್ಚಿತ್ರಗುಪ್ತೇನ ಭಾಷಿತಃ ।
ಫಲಮಸ್ಯ ಪೃಥಕ್ತ್ವೇನ ಶ್ರೋತುಮರ್ಹಂತಿ ಸತ್ತಮಾಃ ॥೧೯॥

ಅಗ್ನಿಹೋತ್ರವನ್ನೂ ಸಹ ಪ್ರಯತ್ನಪೂರ್ವಕವಾಗಿ ಯಾವಾಗಲೂ ರಕ್ಷಿಸಿಕೊಂಡಿರಬೇಕು. ಚಿತ್ರಗುಪ್ತನು ಹೇಳಿದ ಇನ್ನೊಂದು ಧರ್ಮವಿದೆ. ಸಜ್ಜನರಲ್ಲಿ ಶ್ರೇಷ್ಠರಾದ ನೀವು ಅದರ ಫಲವನ್ನು ಪ್ರತ್ಯೇಕವಾಗಿ ಕೇಳಬೇಕು.

ಪ್ರಲಯಂ ಸರ್ವಭೂತೈಶ್ಚ ಗಂತವ್ಯಂ ಕಾಲಪರ್ಯಯಾತ್ ॥೨೦॥

ತತ್ರ ದುರ್ಗಮನುಪ್ರಾಪ್ತಾಃ ಕ್ಷುತ್ತೃಷ್ಣಾಪರಿಪೀಡಿತಾಃ ।
ದಹ್ಯಮಾನಾ ವಿಪಚ್ಯಂತೇ ನ ತತ್ರಾಸ್ತಿ ಪಲಾಯನಮ್ ॥೨೧॥

ಕಾಲಕ್ರಮದಲ್ಲಿ ಎಲ್ಲ ಪ್ರಾಣಿಗಳೂ ಮರಣವನ್ನು ಹೊಂದಬೇಕು. ಮರಣವನ್ನು ಹೊಂದಿ ನರಕವನ್ನು ಹೊಂದಿದ ಮೇಲೆ ಹಸಿವು, ನೀರಡಿಕೆಗಳಿಂದ ಪೀಡಿತರಾಗಿ ಜೀವನರು ದುಃಖವನ್ನು ಹೊಂದುತ್ತಾರೆ. ಅಲ್ಲಿ ತಾಪದಿಂದ ಬೇಯಿಸಲ್ಪಡುತ್ತಾರೆ. ಅಲ್ಲಿಂದ ಪಲಾಯನ ಮಾಡಲು ಸಾಧ್ಯವಿಲ್ಲ.

ಅಂಧಕಾರಂ ತಮೋ ಘೋರಂ ಪ್ರವಿಶಂತ್ಯಲ್ಪಬುದ್ಧಯಃ ।
ತತ್ರ ಧರ್ಮಂ ಪ್ರವಕ್ಷ್ಯಾಮಿ ಯೇನ ದುರ್ಗಾಣಿ ಸಂತರೇತ್ ।
ಅಲ್ಪವ್ಯಯಂ ಮಹಾರ್ಥಂ ಚ ಪ್ರೇತ್ಯ ಚೈವ ಸುಖೋದಯಮ್ ॥೨೨॥

ಅಲ್ಪಬುದ್ಧಿಯುಳ್ಳವರು ಅಲ್ಲಿ ಘೋರವಾದ ಅಂಧಕಾರವನ್ನು ಪ್ರವೇಶಿಸುತ್ತಾರೆ. ಅಂತಹ ಕಷ್ಟಗಳನ್ನು ದಾಟುವ, ಅಲ್ಪವ್ಯಯಸಾಧ್ಯವಾದ, ಮಹಾಫಲಪ್ರದವಾದ, ಮರಣಾನಂತರದಲ್ಲಿ ಸುಖವನ್ನು ಕೊಡುವ ಧರ್ಮವನ್ನು ನಾನು ಹೇಳುವೆನು.

ಪಾನೀಯಸ್ಯ ಗುಣಾ ದಿವ್ಯಾಃ ಪ್ರೇತಲೋಕೇ ವಿಶೇಷತಃ ॥೨೩॥

ತತ್ರ ಪುಣ್ಯೋದಕಾ ನಾಮ ನದೀ ತೇಷಾಂ ವಿಧೀಯತೇ ।
ಅಕ್ಷಯಂ ಸಲಿಲಂ ತತ್ರ ಶೀತಲಂ ಹ್ಯಮೃತೋಪಮಮ್ ॥೨೪॥

ಪ್ರೇತಲೋಕದಲ್ಲಿ ವಿಶೇಷವಾಗಿ ಜಲದಾನಕ್ಕೆ ವಿಶೇಷಗುಣಗಳಿವೆ (ಅಲ್ಲಿ ಜಲವು ಬಹಳ ದುರ್ಲಭವಾದುದು). ಜಲದಾನ ಮಾಡಿದವರಿಗೆ ಅಲ್ಲಿ ಪವಿತ್ರವಾದ, ಶೀತಲವಾದ, ಅಮೃತಸದೃಶವಾದ, ಅಕ್ಷಯವಾದ ನೀರಿರುವ ಪುಣ್ಯೋದಕ ಎಂಬ ನದಿಯು ಸಹಾಯವಾಗುತ್ತದೆ.

ಸ ತತ್ರ ತೋಯಂ ಪಿಬತಿ ಪಾನೀಯಂ ಯಃ ಪ್ರಯಚ್ಛತಿ ।
ಪ್ರದೀಪಸ್ಯ ಪ್ರದಾನೇನ ಶ್ರೂಯತಾಂ ಗುಣವಿಸ್ತರಃ ॥೨೫॥

ಯಾವನು ಜಲದಾನವನ್ನು ಮಾಡುತ್ತಾನೆಯೋ ಅವನು ಆ ನದಿಯಲ್ಲಿ ಜಲಪಾನವನ್ನು ಮಾಡುತ್ತಾನೆ. ದೀಪದಾನದ ವಿಸ್ತಾರವಾದ ಗುಣವನ್ನು ಕೇಳಿ.

ತಮೋಂಧಕಾರಂ ನಿಯತಂ ದೀಪದೋ ನ ಪ್ರಪಶ್ಯತಿ ।
ಪ್ರಭಾಂ ಚಾಸ್ಯ ಪ್ರಯಚ್ಛಂತಿ ಸೋಮಭಾಸ್ಕರಪಾವಕಾಃ ।
ದೇವತಾಶ್ಚಾಸ್ಯ ಮನ್ಯಂತೇ ವಿಮಲಾಃ ಸರ್ವತೋ ದಿಶಃ ॥೨೬॥

ದೀಪದಾನವನ್ನು ಮಾಡಿದವನು ಅಲ್ಲಿ ನಿಯತವಾಗಿರುವ ಅಂಧಕಾರವನ್ನು ನೋಡುವುದಿಲ್ಲ. ಸೂರ್ಯ-ಚಂದ್ರಾಗ್ನಿಗಳು ಅವನಿಗೆ ಬೆಳಕನ್ನು ಕೊಡುತ್ತಾರೆ. ದೇವತೆಗಳು ಅವನಿಗೆ ಎಲ್ಲ ಕಡೆಗಳಲ್ಲಿಯೂ ಪರಿಶುದ್ಧವಾದ ದಿಕ್ಕುಗಳನ್ನೇ ತೋರಿಸುತ್ತಾರೆ.

ದ್ಯೋತತೇ ಚ ಯಥಾSSದಿತ್ಯಃ ಪ್ರೇತಲೋಕಗತೋ ನರಃ ।
ತಸ್ಮಾದ್ ದೀಪಃ ಪ್ರದಾತವ್ಯಃ ಪಾನೀಯಂ ಚ ವಿಶೇಷತಃ ॥೨೭॥

ದೀಪದಾನವನ್ನು ಮಾಡಿ ಪ್ರೇತಲೋಕಕ್ಕೆ ಹೋದ ಮನುಷ್ಯನು ಸೂರ್ಯನಂತೆ ಶೋಭಿಸುತ್ತಾನೆ. ಆದ್ದರಿಂದ ದೀಪದಾನವನ್ನು ಮಾಡಬೇಕು. ವಿಶೇಷವಾಗಿ ಜಲದಾನವನ್ನು ಮಾಡಬೇಕು.

ಕಪಿಲಾಂ ಯೇ ಪ್ರಯಚ್ಛಂತಿ ಬ್ರಾಹ್ಮಣೇ ವೇದಪಾರಗೇ ।
ಪುಷ್ಕರೇ ಚ ವಿಶೇಷೇಣ ಶ್ರೂಯತಾಂ ತಸ್ಯ ಯತ್ಫಲಮ್ ।
ಗೋಶತಂ ಸವೃಷಂ ತೇನ ದತ್ತಂ ಭವತಿ ಶಾಶ್ವತಮ್ ॥೨೮॥

ವೇದಪಾರಂಗತನಾದ ಬ್ರಾಹ್ಮಣನಿಗೆ ಜ್ಯೇಷ್ಠಮಾಸದ ಪೌರ್ಣಮಾಸಿಯಂದು ಕಪಿಲ ಗೋದಾನವನ್ನು ಮಾಡುವವನಿಗೆ ಉಂಟಾಗುವ ಫಲವನ್ನು ವಿಶೇಷವಾಗಿ ಕೇಳಿ. ಅವನಿಗೆ ಕರುಗಳಿಂದ ಸಹಿತವಾದ ನೂರು ಗೋದಾನವನ್ನು ಮಾಡಿದ ಫಲವು ಉಂಟಾಗುತ್ತದೆ.

ಪಾಪಂ ಕರ್ಮ ಚ ಯತ್ಕಿಂಚಿದ್ ಬ್ರಹ್ಮಹತ್ಯಾಸಮಂ ಭವೇತ್ ।
ಶೋಧಯೇತ್ ಕಪಿಲಾ ಹ್ಯೇಕಾ ಪ್ರದತ್ತಂ ಗೋಶತಂ ಯಥಾ ॥೨೯॥

ಅವನು ಬ್ರಹ್ಮಹತ್ಯೆಗೆ ಸಮವಾದ ಯಾವುದಾದರೂ ಪಾಪಕರ್ಮವನ್ನು ಮಾಡಿದ್ದರೂ ನೂರು ಗೋದಾನವನ್ನು ಮಾಡಿದಂತೆ ಒಂದು ಕಪಿಲ ಗೋದಾನವು ಅವನನ್ನು ಶೋಧಿಸುತ್ತದೆ.

ತಸ್ಮಾತ್ತು ಕಪಿಲಾ ದೇಯಾ ಕೌಮುದ್ಯಾಂ ಜ್ಯೇಷ್ಠಪುಷ್ಕರೇ ।
ನ ತೇಷಾಂ ವಿಷಮಂ ಕಿಂಚಿನ್ನ ದುಃಖಂ ನ ಚ ಕಂಟಕಾಃ ॥೩೦॥

ಉಪಾನಹೌ ಚ ಯೋ ದದ್ಯಾತ್ ಪಾತ್ರಭೂತೇ ದ್ವಿಜೋತ್ತಮೇ ।
ಛತ್ರದಾನೇ ಸುಖಾಂ ಛಾಯಾಂ ಲಭತೇ ಪರಲೋಕಗಃ ॥೩೧॥

ಆದ್ದರಿಂದ ಕಾರ್ತಿಕ ಮಾಸದ ಮತ್ತು ಜ್ಯೇಷ್ಠಮಾಸದ ಪೌರ್ಣಮಾಸಿಯಂದು ಕಪಿಲ ಗೋದಾನವನ್ನು ಮಾಡಬೇಕು ಮತ್ತು ಯಾವನು ಸತ್ಪಾತ್ರನಾದ ದ್ವಿಜೋತ್ತಮನಿಗೆ ಪಾದರಕ್ಷೆಯನ್ನು ದಾನ ಮಾಡುತ್ತಾನೆಯೋ ಅವನಿಗೆ ವಿಷಮವಾದ ಮಾರ್ಗವಾಗಲೀ, ದುಃಖವಾಗಲೀ ಉಂಟಾಗುವುದಿಲ್ಲ. ಅವನ ಮಾರ್ಗದಲ್ಲಿ ಮುಳ್ಳುಗಳಿರುವುದಿಲ್ಲ. ಛತ್ರಿಯನ್ನು ದಾನ ಮಾಡಿದವನು ಪರಲೋಕಕ್ಕೆ ಹೋಗಿ ಒಳ್ಳೆಯ ಛಾಯೆಯನ್ನು ಹೊಂದುತ್ತಾನೆ.

ನ ಹಿ ದತ್ತಸ್ಯ ದಾನಸ್ಯ ನಾಶೋಽಸ್ತೀಹ ಕದಾಚನ ।
ಚಿತ್ರಗುಪ್ತಮತಂ ಶ್ರುತ್ವಾ ಹೃಷ್ಟರೋಮಾ ವಿಭಾವಸುಃ ।
ಉವಾಚ ದೇವತಾಃ ಸರ್ವಾಃ ಪಿತೄಂಶ್ಚೈವ ಮಹಾದ್ಯುತಿಃ ॥೩೨॥

ಈ ಲೋಕದಲ್ಲಿ ಮಾಡಿದ ಯಾವ ದಾನವೂ ನಾಶವನ್ನು ಹೊಂದುವುದಿಲ್ಲ. ಚಿತ್ರಗುಪ್ತನ ಅಭಿಪ್ರಾಯವನ್ನು ಕೇಳಿದ ಅಗ್ನಿಯು ರೋಮಾಂಚಿತನಾಗಿ ದೇವತೆಗಳನ್ನೂ ಮತ್ತು ಎಲ್ಲಾ ಪಿತೃಗಳನ್ನೂ ಕುರಿತು ಮಾತನಾಡಿದನು.

ಶ್ರುತಂ ಹಿ ಚಿತ್ರಗುಪ್ತಸ್ಯ ಧರ್ಮಗುಹ್ಯಂ ಮಹಾತ್ಮನಃ ॥೩೩॥

ಶ್ರದ್ದಧಾನಾಶ್ಚ ಯೇ ಮರ್ತ್ಯಾ ಬ್ರಾಹ್ಮಣೇಷು ಮಹಾತ್ಮಸು ।
ದಾನಮೇತತ್ ಪ್ರಯಚ್ಛಂತಿ ನ ತೇಷಾಂ ವಿದ್ಯತೇ ಭಯಮ್ ॥೩೪॥

ಮಹಾತ್ಮನಾದ ಚಿತ್ರಗುಪ್ತನ ಧರ್ಮರಹಸ್ಯವಾದ ಮಾತುಗಳನ್ನು ನೀವು ಕೇಳಿದ್ದೀರಿ. ಯಾವ ಮನುಷ್ಯರು ಶ್ರದ್ಧೆಯಿಂದ ಮಹಾತ್ಮರಾದ ಬ್ರಾಹ್ಮಣರಲ್ಲಿ ಈ ದಾನಗಳನ್ನು ಮಾಡುತ್ತಾರೆಯೋ ಅವರಿಗೆ ಭಯವಿಲ್ಲ.

ಧರ್ಮದೋಷಾಸ್ತಿ ತ್ವಮೇ ಪಂಚ ಯೇಷಾಂ ನಾಸ್ತೀಹ ನಿಷ್ಕೃತಿಃ ।
ಅಸಂಭಾಷ್ಯಾ ಅನಾಚಾರಾ ವರ್ಜನೀಯಾ ನರಾಧಮಾಃ ॥೩೫॥

ಈ ಐದು ಮಂದಿ ಧರ್ಮದೋಷವುಳ್ಳವರು. ಅವರಿಗೆ ಪ್ರಾಯಶ್ಚಿತ್ತವಿಲ್ಲ. ಅವರು ಅನಾಚಾರಿಗಳು, ಸಂಭಾಷಣೆಗೆ ಅಯೋಗ್ಯರು ಮತ್ತು ವರ್ಜಿಸಬೇಕಾದ ನರಾಧಮರು.

ಬ್ರಹ್ಮಹಾ ಚೈವ ಗೋಘ್ನಶ್ಚ ಪರದಾರರತಶ್ಚ ಯಃ ।
ಅಶ್ರದ್ದಧಾನಶ್ಚ ನರಃ ಸ್ತ್ರಿಯಂ ಯಶ್ಚೋಪಜೀವತಿ ॥೩೬॥

ಅವರು ಯಾರೆಂದರೆ - ಬ್ರಹ್ಮಹತ್ಯೆಯನ್ನು ಮಾಡಿದವನು, ಗೋಹತ್ಯೆ ಮಾಡಿದವನು, ಪರದಾರತನಾದವನು, ಶ್ರದ್ಧೆಯಿಲ್ಲದವನು ಮತ್ತು ಸ್ತ್ರೀಯನ್ನು ಉಪಜೀವಿಸಿ ಬದುಕುವವನು.

ಪ್ರೇತಲೋಕಗತಾ ಹ್ಯೇತೇ ನರಕೇ ಪಾಪಕರ್ಮಿಣಃ ।
ಪಚ್ಯಂತೇ ವೈ ಯಥಾ ಮೀನಾಃ ಪೂಯಶೋಣಿತಭೋಜನಾಃ ॥೩೭॥

ಪ್ರೇತಲೋಕಕ್ಕೆ ಹೋದ ಈ ಪಾಪಕರ್ಮಿಗಳು ನರಕದಲ್ಲಿ ಪೂಯ, ಶೋಣಿತ ಭೋಜನರಾಗಿ ಮೀನುಗಳಂತೆ ಬೇಯಿಸಲ್ಪಡುತ್ತಾರೆ.

ಅಸಂಭಾಷ್ಯಾಃ ಪಿತೄಣಾಂ ಚ ದೇವಾನಾಂ ಚೈವ ಪಂಚ ತೇ ।
ಸ್ನಾತಕಾನಾಂ ಚ ವಿಪ್ರಾಣಾಂ ಯೇ ಚಾನ್ಯೇ ಚ ತಪೋಧನಾಃ ॥೩೮॥

ಈ ಐದು ಜನರು ಪಿತೃಗಳಿಗೂ, ದೇವತೆಗಳಿಗೂ, ವೇದವಿದ್ಯಾ ಪಾರಂಗತರಾದ ವಿಪ್ರರಿಗೂ ಮತ್ತು ಉಳಿದ ತಪೋಧನರಿಗೂ ಸಂಭಾಷಣೆಗೆ ಅನರ್ಹರಾದವರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಏಕಾಶೀತ್ಯುತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಎಂಬತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಂಬತ್ತೆರಡನೆಯ ಅಧ್ಯಾಯ

ಪ್ರಮಥರ ಉಪದೇಶ

ಭೀಷ್ಮಃ

ತತಃ ಸರ್ವೇ ಮಹಾಭಾಗಾ ದೇವಾಶ್ಚ ಪಿತರಶ್ಚ ಹ ।
ಋಷಯಶ್ಚ ಮಹಾಭಾಗಾಃ ಪ್ರಮಥಾನ್ ವಾಕ್ಯಮಬ್ರುವನ್ ॥೧॥

ಭೀಷ್ಮ- ಆಗ ಮಹಾನುಭಾವರಾದ ಎಲ್ಲಾ ದೇವತೆಗಳು, ಪಿತೃಗಳು ಮತ್ತು ಋಷಿಗಳು ಪ್ರಮಥರನ್ನುಕುರಿತು ಹೇಳಿದರು.

ಭವಂತೋ ವೈ ಮಹಾಭಾಗಾ ಅಪರೋಕ್ಷನಿಶಾಚರಾಃ ।
ಉಚ್ಛಿಷ್ಟಾನಶುಚೀನ್ ಕ್ಷುದ್ರಾನ್ ಕಥಂ ಹಿಂಸಥ ಮಾನವಾನ್ ॥೨॥

ಮಹಾನುಭಾವರಾದ ನೀವೆಲ್ಲರೂ ಪ್ರತ್ಯಕ್ಷರಾಗಿ ನಿಶಾಚರರಾದವರು. ಉಚ್ಛಿಷ್ಟರಾದ, ಅಶುಚಿಗಳಾದ, ಕ್ಷುದ್ರರಾದ ಮನುಷ್ಯರನ್ನು ಹೇಗೆ ಹಿಂಸಿಸುತ್ತೀರಿ?

ಕೇ ಚ ಸ್ಮೃತಾಃ ಪ್ರತೀಘಾತಾ ಯೇನ ಮರ್ತ್ಯಾನ್ನ ಹಿಂಸಥ ।
ರಕ್ಷೋಘ್ನಾನಿ ಚ ಕಾನಿ ಸ್ಯುರ್ಯೈರ್ಗೃಹೇಷು ಪ್ರಣಶ್ಯಥ ।
ಶ್ರೋತುಮಿಚ್ಛಾಮ ಯುಷ್ಮಾಕಂ ಸರ್ವಮೇತನ್ನಿಶಾಚರಾಃ ॥೩॥

ನೀವು ಮರ್ತ್ಯರನ್ನು ಹಿಂಸಿಸದಂತೆ ಮಾಡಲು ಹೇಳಲ್ಪಟ್ಟ ಪರಿಹಾರೋಪಾಯಗಳೇನು? ಯಾವುದರಿಂದ ನೀವು ನಾಶವನ್ನು ಹೊಂದುವಿರೋ ಅಂತಹ ರಕ್ಷೋಘ್ನವಾದ ಕಾರ್ಯಗಳು ಯಾವವು? ಎಲೈ ನಿಶಾಚರರೇ, ನಿಮಗೆ ಸಂಬಂಧಿಸಿದ ಈ ಎಲ್ಲವನ್ನೂ ನಾವು ಕೇಳಲು ಬಯಸುತ್ತೇವೆ.

ಪ್ರಮಥಾಃ

ಮೈಥುನೇನ ಸದೋಚ್ಛಿಷ್ಟಾಃ ಕೃತೇ ಚೈವಾಧರೋತ್ತರೇ ।
ಮೋಹಾನ್ಮಾಂಸಾನಿ ಖಾದೇತ ವೃಕ್ಷಮೂಲೇ ಚ ಯಃ ಸ್ವಪೇತ್ ॥೪॥

ಆಮಿಷಂ ಶೀರ್ಷತೋ ಯಸ್ಯ ಪಾದತೋ ಯಶ್ಚ ಸಂವಿಶೇತ್ ।
ತತ ಉಚ್ಛಿಷ್ಟಕಾಃ ಸರ್ವೇ ಬಹುಚ್ಛಿದ್ರಾಶ್ಚ ಮಾನವಾಃ ॥೫॥

ಪ್ರಮಥ– ಮೈಥುನವನ್ನು ಮಾಡಿ ಯಾವಾಗಲೂ ಉಚ್ಚಿಷ್ಟರಾದವರು, ಹಿರಿಯರ ಮತ್ತು ಕಿರಿಯರ ಜೊತೆಯಲ್ಲಿ ವಿಪರೀತವಾಗಿ ನಡೆದುಕೊಳ್ಳುವವರು, ಮೋಹದಿಂದ ಮಾಂಸವನ್ನು ತಿನ್ನುವವರು, ಮರದ ಬುಡದಲ್ಲಿ ಮಲಗುವವರು, ತಲೆಯ ಮೇಲೆ ಮಾಂಸವನ್ನು ಹೊರುವವರು, ಹಾಸಿಗೆಯಲ್ಲಿ ಪಾದದ ಕಡೆ ತಲೆ ಮಾಡಿ ಮಲಗುವವರು ಇವರೆಲ್ಲರೂ ಉಚ್ಚಿಷ್ಟರಾದ ಮನುಷ್ಯರು. ಇವರು ಬಹುದೋಷಗಳಿಗೆ ಆಸ್ಪದರಾಗುತ್ತಾರೆ.

ಉದಕೇ ಚಾಪ್ಯಮೇಧ್ಯಾನಿ ಶ್ಲೇಷ್ಮಾಣಂ ಚ ಪ್ರಮುಂಚತಿ ।
ಏತೇ ಭಕ್ಷ್ಯಾಶ್ಚ ವಧ್ಯಾಶ್ಚ ಮಾನುಷಾ ನಾತ್ರ ಸಂಶಯಃ ॥೬॥

ಉದಕದಲ್ಲಿ ಮಲವಿಸರ್ಜನೆ ಮಾಡುವವರು, ಶ್ಲೇಷ್ಮ ವಿಸರ್ಜನೆ ಮಾಡುವವರು ನಮ್ಮಿಂದ ವಧ್ಯರೂ, ಭಕ್ಷ್ಯರೂ ಆಗುತ್ತಾರೆ. ಇದರಲ್ಲಿ ಸಂಶಯವಿಲ್ಲ.

ಏವಂಶೀಲಸಮಾಚಾರಾನ್ ಧರ್ಷಯಾಮೋ ಹಿ ಮಾನವಾನ್ ।
ಶ್ರೂಯತಾಂ ಚ ಪ್ರತೀಘಾತಾನ್ ಯೈರ್ನ ಶಕ್ನುಮ ಹಿಂಸಿತುಮ್ ॥೭॥

ಇಂತಹ ಶೀಲಸಮಾಚಾರವುಳ್ಳ ಮಾನವರನ್ನು ನಾವು ಹಿಂಸಿಸುತ್ತೇವೆ. ನಾವು ಹಿಂಸೆ ಮಾಡಲಾಗದಿರುವಂತಹ ಪ್ರತೀಕಾರೋಪಾಯಗಳನ್ನು ಕೇಳಿ.

ಗೋರೋಚನಾಸಮಾಲಂಭೋ ವಚಾಹಸ್ತಶ್ಚ ಯೋ ಭವೇತ್ ।
ಘೃತಾಕ್ಷತಂ ಚ ಯೋ ದದ್ಯಾನ್ಮಸ್ತಕೇ ತತ್ಪರಾಯಣಃ ॥೮॥

ಯೇ ಚ ಮಾಂಸಂ ನ ಖಾದಂತಿ ತಾನ್ನ ಶಕ್ನುಮ ಹಿಂಸಿತುಮ್ ।
ಯಸ್ಯ ಚಾಗ್ನಿರ್ಗೃಹೇ ನಿತ್ಯಂ ದಿವಾರಾತ್ರೌ ಚ ದೀಪ್ಯತೇ ॥೯॥

ತರಕ್ಷೋಶ್ಚರ್ಮದಂಷ್ಟ್ರಾಶ್ಚ ತಥೈವ ಗಿರಿಕಚ್ಛಪಃ ।
ಆಜ್ಯಧೂಮೋ ಬಿಡಾಲಶ್ಚ ಚಾಗಃ ಕೃಷ್ಣೋऽತ ಪಿಂಗಲಃ ॥೧೦॥

ಯೇಷಾಮೇತಾನಿ ತಿಷ್ಠಂತಿ ಗೃಹೇಷು ಗೃಹಮೇಧಿನಾಮ್ ।
ತಾನ್ಯಧೃಷ್ಯಾಣ್ಯಗಾರಾಣಿ ಪಿಶಿತಾಶೈಃ ಸುದಾರುಣೈಃ ॥೧೧॥

ಯಾವನು ಗೋರೋಚನವನ್ನು ಲೇಪಿಸಿಕೊಳ್ಳುತ್ತಾನೆಯೋ, ಕೈಯಲ್ಲಿ ಬಜೆಯನ್ನು ಹಿಡಿಯುತ್ತಾನೆಯೋ, ತುಪ್ಪದಿಂದ ಕಲಸಿದ ಮಂತ್ರಾಕ್ಷತೆಯನ್ನು ತಲೆಯ ಮೇಲೆ ಧರಿಸುತ್ತಾನೆಯೋ, ಮಾಂಸವನ್ನು ತಿನ್ನುವುದಿಲ್ಲವೋ ಅಂತಹವರನ್ನು ನಾವು ಹಿಂಸಿಸಲಾರೆವು. ಯಾವನ ಮನೆಯಲ್ಲಿ ಅಗ್ನಿಹೋತ್ರದ ಅಗ್ನಿಯು ಹಗಲೂ-ರಾತ್ರಿಯೂ ಜ್ವಲಿಸುತ್ತದೆಯೋ, ವ್ಯಾಘ್ರಚರ್ಮ ಮತ್ತು ದಂಷ್ಟ್ರಗಳು ಹಾಗೂ ಪರ್ವತದ ಆಮೆಯು ಇರುತ್ತದೆಯೋ ಹಾಗೆಯೇ ಹೋಮದಿಂದ ಉಂಟಾದ ಆಜ್ಯಧೂಮವು, ಬೆಕ್ಕು, ಕಪ್ಪಾದ ಅಥವಾ ಕಂದುಬಣ್ಣದ ಆಡು ಇರುತ್ತದೆಯೋ ಅಂತಹವರನ್ನು ಅತ್ಯಂತ ಭಯಂಕರರಾದ ಮಾಂಸಾಹಾರಿಗಳು ಹಿಂಸಿಸಲು ಸಾಧ್ಯವಿಲ್ಲ. ಅಂತಹ ಗೃಹಗಳು ಅವರಿಂದ ಆಕ್ರಮಿಸಲ್ಪಡುವುದಿಲ್ಲ.

ಲೋಕಾನಸ್ಮದ್ವಿಧಾ ಯೇ ಚ ವಿಚರಂತಿ ಯಥಾಸುಖಮ್ ।
ತಸ್ಮಾದೇತಾನಿ ಗೇಹೇಷು ರಕ್ಷೋಘ್ನಾನಿ ವಿಶಾಂಪತೇ ।
ಏತದ್ ವಃ ಕಥಿತಂ ಸರ್ವಂ ಯತ್ರ ವಃ ಸಂಶಯೋ ಮಹಾನ್ ॥೧೨॥

ನಮ್ಮಂತಹ ಅನೇಕ ನಿಶಾಚರರು ಸುಖವಾಗಿ ಲೋಕದಲ್ಲಿ ಸಂಚರಿಸುತ್ತಿರುತ್ತಾರೆ. ಎಲೈ ರಾಜನೇ, ಆದ್ದರಿಂದ ಮನೆಗಳಲ್ಲಿ ಈ ರಕ್ಷೋಘ್ನವಾದ ಕಾರ್ಯವನ್ನು ಮಾಡಿ, ರಕ್ಷೋಘ್ನವಾದ ವಸ್ತುವನ್ನು ಇಟ್ಟುಕೊಳ್ಳಬೇಕು. ನಿಮಗೆ ಬಹಳ ಸಂಶಯವಿದ್ದ ಈ ವಿಷಯವೆಲ್ಲವನ್ನೂ ಹೇಳಿದ್ದೇವೆ.

॥ ಇತಿ ಶ್ರೀಮನ್ಮಹಾಭಾರತೇ ಅನುಶಾಸನಪರ್ವಣಿ ದಾನಧರ್ಮಪರ್ವಣಿ
ಪ್ರಥಮೋಪದೇಶೋ ನಾಮ ದ್ವ್ಯಶೀತ್ಯುತ್ತರಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಎಂಬತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಂಬತ್ಮೂರನೆಯ ಅಧ್ಯಾಯ

ದಿಗ್ಗಜಗಳಿಂದ ಧರ್ಮೋಪದೇಶ

ಭೀಷ್ಮಃ

ತತಃ ಪದ್ಮಪ್ರತೀಕಾಶಃ ಪದ್ಮೋದ್ಭೂತಃ ಪಿತಾಮಹಃ ।
ಉವಾಚ ವಚನಂ ದೇವಾನ್ ವಾಸವಂ ಚ ಶಚೀಪತಿಮ್ ॥೧॥

ಭೀಷ್ಮ- ಅನಂತರ ಪದ್ಮಕಾಂತಿಯನ್ನು ಹೊಂದಿದ, ಪದ್ಮದಿಂದ ಜನಿಸಿದ, ಪಿತಾಮಹರಾದ ಬ್ರಹ್ಮದೇವರು ದೇವತೆಗಳನ್ನೂ ಮತ್ತು ಶಚೀಪತಿಯಾದ ಇಂದ್ರನನ್ನೂ ಕುರಿತು ಮಾತನಾಡಿದರು.

ಅಯಂ ಮಹಾಬಲೋ ನಾಗೋ ರಸಾತಳಚರೋ ಬಲೀ ।
ತೇಜಸ್ವೀ ರೇಣುಕೋ ನಾಮ ಮಹಾಸತ್ವಪರಾಕ್ರಮಃ ॥೨॥

ಈ ರೇಣುಕನೆಂಬ ಗಜವು ರಸಾತಳ ಸಂಚಾರಿಯಾಗಿ ಮಹಾಬಲವುಳ್ಳದ್ದೂ, ತೇಜಸ್ಸುಳ್ಳದ್ದೂ ಮತ್ತು ಧೈರ್ಯ-ಪರಾಕ್ರಮವುಳ್ಳದ್ದೂ ಆಗಿದೆ.

ಅತಿತೇಜಸ್ವಿನಃ ಸರ್ವೇ ಮಹಾವೀರ್ಯಾ ಮಹಾಗಜಾಃ ।
ಧಾರಯಂತಿ ಮಹೀಂ ಕೃತ್ಸ್ನಾಂ ಸಶೈಲವನಕಾನನಾಮ್ ॥೩॥

ಬಹಳ ಸಾಮರ್ಥ್ಯವನ್ನು ಹೊಂದಿದ, ಪರಾಕ್ರಮಶಾಲಿಗಳಾದ ಮಹಾಗಜಗಳು ಶೈಲ-ವನ-ಕಾನನ ಸಹಿತವಾದ ಸಮಗ್ರವಾದ ಭೂಮಿಯನ್ನು ಹೊರುತ್ತವೆ.

ಭವದ್ಭಿಃ ಸಮನುಜ್ಞಾತೋ ರೇಣುಕಸ್ತಾನ್ ಮಹಾಗಜಾನ್ ।
ಧರ್ಮಗುಹ್ಯಾನಿ ಸರ್ವಾಣಿ ಗತ್ವಾ ಪೃಚ್ಛತು ತತ್ರ ವೈ ॥೪॥

ರೇಣುಕನು ನಿಮ್ಮ ಅನುಮತಿಯನ್ನು ಪಡೆದು ಆ ಮಹಾಗಜಗಳ ಬಳಿಗೆ ಹೋಗಿ ಎಲ್ಲಾ ಧರ್ಮೋಪದೇಶಗಳನ್ನು ಕೇಳಲಿ (ಎಂದು ಹೇಳಿದರು).

ಪಿತಾಮಹವಚಃ ಶ್ರುತ್ವಾ ತೇ ದೇವಾ ರೇಣುಕಂ ತದಾ ।
ಪ್ರೇಷಯಾಮಾಸುರವ್ಯಗ್ರಾ ಯತ್ರ ತೇ ಧರಣೀಧರಾಃ ॥೫॥

ಬ್ರಹ್ಮದೇವರ ಮಾತುಗಳನ್ನು ಕೇಳಿ ಆಗ ಆ ದೇವತೆಗಳು ರೇಣುಕನನ್ನು ಭೂಮಿಯನ್ನು ಹೊತ್ತ ಗಜಗಳು ಇರುವಲ್ಲಿಗೆ ಕಳುಹಿಸಿದರು.

ರೇಣುಕಃ

ಅನುಜ್ಞಾತೋಽಸ್ಮಿ ದೇವೈಶ್ಚ ಪಿತೃಭಿಶ್ಚ ಮಹಾಬಲಾಃ ।
ಧರ್ಮಗುಹ್ಯಾನಿ ಯುಷ್ಮಾಕಂ ಶ್ರೋತುಮಿಚ್ಛಾಮಿ ತತ್ತ್ವತಃ ।
ಕಥಯಧ್ವಂ ಮಹಾಭಾಗಾ ಯದ್ವಸ್ತತ್ತ್ವಂ ಮನೀಷಿತಮ್ ॥೬॥

ರೇಣುಕ– ಎಲೈ ಮಹಾಬಲರೇ, ದೇವತೆಗಳಿಂದಲೂ ಮತ್ತು ಪಿತೃಗಳಿಂದಲೂ ನಾನು ಅನುಮತಿಯನ್ನು ಪಡೆದಿದ್ದೇನೆ. ನಿಮ್ಮಿಂದ ಧರ್ಮರಹಸ್ಯವನ್ನು ಸರಿಯಾಗಿ ಕೇಳಲು ಬಯಸುತ್ತೇನೆ. ಮಹಾನುಭಾವರೇ, ನಿಮಗೆ ಅಭಿಪ್ರೇತವಾದ ಧರ್ಮತತ್ತ್ವಗಳನ್ನು ಹೇಳಿ.

ದಿಗ್ಗಜಾಃ

ಕಾರ್ತಿಕೇ ಮಾಸಿ ಚಾಶ್ಲೇಷಾ ಬಹುಲಸ್ಯಾಷ್ಟಮೀ ಶಿವಾ ।
ತೇನ ನಕ್ಷತ್ರಯೋಗೇನ ಯೋ ದದಾತಿ ಗುಡೌದನಮ್ ।
ಇಮಂ ಮಂತ್ರಂ ಜಪನ್ ಶ್ರಾದ್ಧೇ ಯತಾಹಾರೋ ಹ್ಯಕೋಪನಃ ॥೭॥

ದಿಗ್ಗಜ– ಕಾರ್ತಿಕಮಾಸದ ಕೃಷ್ಣಪಕ್ಷದ ಅಷ್ಟಮಿಯಂದು, ಆಶ್ಲೇಷಾ ನಕ್ಷತ್ರವಿರುವ ಶುಭದಿನದಲ್ಲಿ ಮಾನವನು ನಿಯತಾಹಾರನಾಗಿ, ಕೋಪವನ್ನು ತ್ಯಜಿಸಿದವನಾಗಿ ಈ ಮಂತ್ರವನ್ನು ಹೇಳುತ್ತಾ ಗುಡೋದನವನ್ನು ದಾನ ಮಾಡಬೇಕು.

ಬಲದೇವಪ್ರಭೃತಯೋ ಯೇ ನಾಗಾ ಬಲವತ್ತರಾಃ ।
ಅನಂತಾ ಹ್ಯಕ್ಷಯಾ ನಿತ್ಯಂ ಭೋಗಿನಃ ಸುಮಹಾಬಲಾಃ ॥೮॥

ತೇಷಾಂ ಕುಲೋದ್ಭವಾ ಯೇ ಚ ಮಹಾಭೂತಾ ಭುಜಂಗಮಾಃ ।
ತೇ ಮೇ ಬಲಿಂ ಪ್ರಯಚ್ಛಂತು ಬಲತೇಜೋಭಿವೃದ್ಧಯೇ ॥೯॥

ಶೇಷದೇವನ ಮಕ್ಕಳಾದ ಬಲಿಷ್ಠವಾದ ನಾಗಗಳು ಯಾವುವು ಇವೆಯೋ ಅನಂತವಾದ, ಅಕ್ಷಯವಾದ, ದೊಡ್ಡ ಶರೀರವನ್ನು ಹೊಂದಿದ, ಅತ್ಯಂತ ಬಲವನ್ನು ಹೊಂದಿದ ನಾಗಗಳು ಯಾವುವು ಇವೆಯೋ, ಅವುಗಳ ಕುಲದಲ್ಲಿ ಹುಟ್ಟಿದ, ದೊಡ್ಡ ಶರೀರವನ್ನು ಧರಿಸಿದ ನಾಗಗಳು ಏನಿವೆಯೋ ಅವೆಲ್ಲವೂ ನನ್ನ ಬಲ-ತೇಜೋ ಅಭಿವೃದ್ಧಿಗಾಗಿ ನನ್ನ ಈ ಪೂಜೆಯನ್ನು (ನೈವೇದ್ಯವನ್ನು) ಸ್ವೀಕರಿಸಲಿ.

ಯದಾ ನಾರಾಯಣಃ ಶ್ರೀಮಾನುಜ್ಜಹಾರ ವಸುಂಧರಾಮ್ ।
ತದ್ಬಲಂ ತಸ್ಯ ದೇವಸ್ಯ ಧರಾಮುದ್ಧರತಸ್ತಥಾ ॥೧೦॥

ಕಾಂತಿಯುಕ್ತನಾದ ನಾರಾಯಣನು ಭೂಮಿಯನ್ನು ಎತ್ತುವಾಗ ಆ ದೇವನಿಗೆ ಎಂತಹ ಬಲವಿದ್ದಿತೋ (ಅಂತಹ ಬಲದ ಒಂದಂಶವು ಉಂಟಾಗಲಿ).

ಏವಮುಕ್ತ್ವಾ ಬಲಿಂ ತತ್ರ ವಲ್ಮೀಕೇ ತು ನಿವೇದಯೇತ್ ॥೧೧॥

ಎಂಬ ಈ ಮಂತ್ರವನ್ನು ಹೇಳಿ ಹುತ್ತದಲ್ಲಿ ಗುಡೋದನ ಬಲಿಯನ್ನು ಹಾಕಬೇಕು.

ಗಜೇಂದ್ರಕುಸುಮಾಕೀರ್ಣಂ ನೀಲವಸ್ತ್ರಾನುಲೇಪನಮ್ ।
ನಿರ್ವಪೇತ್ ತಂ ತು ವಲ್ಮೀಕೇ ಅಸ್ತಂ ಯಾತೇ ದಿವಾಕರೇ ॥೧೨॥

ಸೂರ್ಯನು ಅಸ್ತಂಗತನಾದಮೇಲೆ ನಾಗಕೇಸರ ಪುಷ್ಪಗಳನ್ನು ಹುತ್ತದ ಮೇಲೆ ಹಾಕಿ, ನೀಲವಸ್ತ್ರವನ್ನು ಹೊದಿಸಿ, ಗಂಧವನ್ನು ಅರ್ಪಿಸಿ ನೈವೇದ್ಯವನ್ನು ಕೊಡಬೇಕು.

ಏವಂ ತುಷ್ಟಾಸ್ತತಃ ಸರ್ವೇ ಅಧಸ್ತಾದ್ ಭಾರಪೀಡಿತಾಃ ।
ಶ್ರಮಂ ತಂ ನಾವಬುಧ್ಯಾಮೋ ಧಾರಯಂತೋ ವಸುಂಧರಾಮ್ ॥

ಹೀಗೆ ಮಾಡಿದರೆ ಭೂಮಿಯನ್ನು ಹೊತ್ತು ಭಾರವನ್ನು ಹೊತ್ತಿರುವ ನಮಗೆಲ್ಲರಿಗೂ ಶ್ರಮವೇ ಉಂಟಾಗುವುದಿಲ್ಲ.

ಏವಂ ಮನ್ಯಾಮಹೇ ಧರ್ಮಂ ಭಾರಾರ್ತಾ ನಿರಪೇಕ್ಷಿಣಃ ।
ಬ್ರಾಹ್ಮಣಃ ಕ್ಷತ್ರಿಯೋ ವೈಶ್ಯಃ ಶೂದ್ರೋ ವಾ ಯದ್ಯುಪೋಷಿತಃ ॥೧೪॥

ಏವಂ ಸಂವತ್ಸರಂ ಕೃತ್ವಾ ದಾನಂ ಬಹುಫಲಂ ಲಭೇತ್ ।
ವಲ್ಮೀಕೇ ಬಲಿಮಾದಾಯ ತನ್ನೋ ಬಹುಫಲಂ ಮತಮ್ ॥೧೫॥

ಭಾರಾರ್ತರಾಗಿ ಬೇರೆ ಏನನ್ನೂ ಅಪೇಕ್ಷಿಸದಿರುವ ನಾವು ಇದನ್ನು ಧರ್ಮವೆಂದು ತಿಳಿಯುತ್ತೇವೆ. ಬ್ರಾಹ್ಮಣನಾಗಲೀ, ಕ್ಷತ್ರಿಯನಾಗಲೀ, ವೈಶ್ಯನಾಗಲೀ, ಶೂದ್ರನಾಗಲೀ ಉಪವಾಸದಿಂದಿದ್ದು, ಒಂದು ಸಂವತ್ಸರದ ಕಾಲ ಹೀಗೆ ಗುಡೋದನ ದಾನವನ್ನು ಮಾಡಿದರೆ ಅವನಿಗೆ ಬಹಳ ಫಲ ಉಂಟಾಗುತ್ತದೆ. ಹುತ್ತದಲ್ಲಿ ಬಲಿಯನ್ನು ಹಾಕಿದರೆ ಅದು ನಮಗೂ ಬಹಳ ಫಲವನ್ನು ಕೊಡುತ್ತದೆ.

ಯೇ ಚ ನಾಗಾ ಮಹಾವೀರ್ಯಾಸ್ತ್ರಿಷು ಲೋಕೇಷು ಕೃತ್ಸ್ನಶಃ ।
ಕೃತಾತಿಥ್ಯಾ ಭವೇಯುಸ್ತೇ ಶತಂ ವರ್ಷಾಣಿ ತತ್ತ್ವತಃ ॥೧೬॥

ಮೂರುಲೋಕಗಳಲ್ಲಿರುವ ಮಹಾಸಾಮರ್ಥ್ಯವುಳ್ಳ ಎಲ್ಲ ನಾಗಗಳೂ ಈ ನೈವೇದ್ಯ ದಾನದಿಂದ ನೂರು ವರ್ಷಗಳ ಕಾಲ ಆತಿಥ್ಯವನ್ನು ಸ್ವೀಕರಿಸಿದಂತೆ ಆಗುತ್ತವೆ (ಫಲವನ್ನು ಕೊಡುತ್ತವೆ).

॥ ಇತಿ ಶ್ರೀಮನ್ಮಹಾಭಾರತೇ ಅನುಶಾಸನಪರ್ವಣಿ ದಾನಧರ್ಮಪರ್ವಣಿ
ತ್ರ್ಯಶೀತ್ಯುತ್ತರಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಎಂಬತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಂಬತ್ನಾಲ್ಕನೆಯ ಅಧ್ಯಾಯ

ಮಹೇಶ್ವರನ ಧರ್ಮೋಪದೇಶ

ಮಹೇಶ್ವರಃ

ಸಾರಮುದ್ಧೃತ್ಯ ಯುಷ್ಮಾಭಿಃ ಸಾಧುಧರ್ಮ ಉದಾಹೃತಃ ।
ಧರ್ಮಗುಹ್ಯಮಿದಂ ಮತ್ತಃ ಶೃಣುಧ್ವಂ ಸರ್ವ ಏವ ಹ ॥೧॥

ಮಹೇಶ್ವರ– ನಿಮ್ಮಿಂದ ಸಾರವನ್ನು ಉದ್ಧರಿಸಿ ಸದ್ಧರ್ಮವು ಹೇಳಲ್ಪಟ್ಟಿತು. ಎಲ್ಲರೂ ನಾನು ಹೇಳುವ ಈ ಧರ್ಮರಹಸ್ಯವನ್ನು ಕೇಳಿ.

ಯೇಷಾಂ ಧರ್ಮಾಶ್ರಿತಾ ಬುದ್ಧಿಃ ಶ್ರದ್ದಧಾನಾಶ್ಚ ಯೇ ನರಾಃ ।
ತೇಷಾಂ ಸ್ಯಾದುಪದೇಷ್ಟವ್ಯಃ ಸರಹಸ್ಯೋ ಮಹಾಫಲಃ ॥೨॥

ಯಾರ ಬುದ್ಧಿಯು ಧರ್ಮವನ್ನೇ ಆಶ್ರಯಿಸಿರುತ್ತದೆಯೋ ಮತ್ತು ಯಾರು ಶ್ರದ್ಧೆಯಿಂದ ಕೂಡಿರುತ್ತಾರೋ ಅಂತಹವರಿಗೆ ರಹಸ್ಯವೂ, ಮಹಾಫಲದಾಯಕವೂ ಆದ ಧರ್ಮವನ್ನು ಉಪದೇಶ ಮಾಡಬೇಕು.

ನಿರುದ್ವಿಗ್ನಸ್ತು ಯೋ ದದ್ಯಾನ್ಮಾಸಮೇಕಂ ಗವಾಹ್ನಿಕಮ್ ।
ಏಕಭಕ್ತಂ ತಥಾಽಶ್ನೀಯಾಚ್ಛ್ರೇಯಸ್ತಾಂ ತಸ್ಯ ಯತ್ಫಲಮ್ ॥೩॥

ಯಾವ ಉದ್ವೇಗವೂ ಇಲ್ಲದೆ ಒಂದು ತಿಂಗಳ ಕಾಲ ಪ್ರತಿದಿನವೂ ಗೋವುಗಳಿಗೆ ಆಹಾರವನ್ನು ನೀಡಿ ಯಾವನು ಒಂದೇ ಹೊತ್ತು ಭೋಜನವನ್ನು ಮಾಡುತ್ತಾನೆಯೋ ಅವನಿಗೆ ಉಂಟಾಗುವ ಫಲವನ್ನು ಕೇಳಿ.

ಇಮಾ ಗಾವೋ ಮಹಾಭಾಗಾಃ ಪವಿತ್ರಂ ಪರಮಂ ಸ್ಮೃತಾಃ ।
ತ್ರೀನ್ ಲೋಕಾನ್ ಧಾರಯಂತಿ ಸ್ಮ ಸದೇವಾಸುರಮಾನುಷಾನ್ ॥೪॥

ಎಲ್ಲೆ ಮಹಾನುಭಾವರೇ, ಈ ಗೋವುಗಳು ಪರಮ ಪವಿತ್ರವಾದವುಗಳು ಎಂದು ಹೇಳಲ್ಪಡುತ್ತವೆ. ಇವು ದೇವಾಸುರ-ಮನುಷ್ಯರಿಂದ ಸಹಿತವಾದ ಮೂರು ಲೋಕಗಳನ್ನೂ ಧರಿಸುತ್ತವೆ.

ತಾಸು ಚೈವ ಮಹಾಪುಣ್ಯಂ ಶುಶ್ರೂಷಾ ಚ ಮಹಾಫಲಮ್ ।
ಅಹನ್ಯಹನಿ ಧರ್ಮೇಣ ಯುಜ್ಯತೇ ವೈ ಗವಾಹ್ನಿಕಃ ॥೫॥

ಅವುಗಳಿಗೆ ಮಾಡುವ ಸೇವೆಯು ಮಹಾಪುಣ್ಯಪ್ರದವಾದುದು ಮತ್ತು ಮಹಾಫಲವನ್ನು ಕೊಡುವಂತಹದು. ನಿತ್ಯವೂ ಗೋವಿಗೆ ಗ್ರಾಸವನ್ನು ಕೊಡುವವನು ಧರ್ಮವನ್ನು ಸಂಪಾದಿಸುತ್ತಾನೆ.

ಮಯಾ ಹ್ಯೇತಾ ಹ್ಯನುಜ್ಞಾತಾಃ ಪೂರ್ವಮಾಸನ್ ಕೃತೇ ಯುಗೇ ।
ತತೋಽಹಮನುನೀತೋ ವೈ ಬ್ರಹ್ಮಣಾ ಪದ್ಮಯೋನಿನಾ ॥೬॥

ನಾನು ಹಿಂದೆ ಕೃತಯುಗದಲ್ಲಿ ನನ್ನ ಜೊತೆಯಲ್ಲಿರುವಂತೆ ಗೋವುಗಳಿಗೆ ಅನುಮತಿಯನ್ನು ನೀಡಿದ್ದೆ. ಅನಂತರ ಪದ್ಮಯೋನಿಗಳಾದ ಬ್ರಹ್ಮದೇವರು ನನ್ನನ್ನು ಸಮಾಧಾನ ಪಡಿಸಿ ಒಪ್ಪಿಸಿದರು.

ತಸ್ಮಾದ್ ವ್ರಜಸ್ಥಾನಗತಸ್ತಿಷ್ಠತ್ಯುಪರಿ ಮೇ ವೃಷಃ ।
ರಮೇಽಹಂ ಸಹ ಗೋಭಿಶ್ಚ ತಸ್ಮಾತ್ ಪೂಜ್ಯಾಃ ಸದೈವ ತಾಃ ॥೭॥

ಆದ್ದರಿಂದ ಗೋಶಾಲೆಯಲ್ಲಿದ್ದ ವೃಷಭವು ಈಗ ನನ್ನ ಧ್ವಜದಲ್ಲಿರುತ್ತದೆ. ನಾನೂ ಸಹ ಗೋವುಗಳ ಜೊತೆಯಲ್ಲಿ ಸಂತೋಷದಿಂದ ಇರುತ್ತೇನೆ. ಆದ್ದರಿಂದ ಗೋವುಗಳನ್ನು ಸದಾ ಪೂಜಿಸಬೇಕು.

ಮಹಾಪ್ರಭಾವಾ ವರದಾ ವರಾನ್ ದದ್ಯುರುಪಾಸಿತಾಃ ।
ತಾ ಗಾವೋಽಸ್ಯಾನುಮನ್ಯಂತೇ ಸರ್ವಕರ್ಮಸು ಯತ್ಫಲಮ್ ॥೮॥

ಮಹಾಸಾಮರ್ಥ್ಯವನ್ನು ಹೊಂದಿದ, ವರಪ್ರದವಾದ ಗೋವುಗಳನ್ನು ಉಪಾಸನೆ ಮಾಡಿದರೆ ಅವು ವರಗಳನ್ನು ಕೊಡುವವು. ಆ ಗೋವುಗಳು ಮನುಷ್ಯರು ಮಾಡಿದ ಸರ್ವಕರ್ಮಗಳಿಗೆ ಶಾಸ್ತ್ರದಲ್ಲಿ ಹೇಳಿದ ಫಲಗಳನ್ನು ಅನುಮೋದಿಸುತ್ತವೆ.

ತಸ್ಯ ತತ್ರ ಚತುರ್ಭಾಗೋ ಯೋ ದದಾತಿ ಗವಾಹ್ನಿಕಮ್ ॥೯॥

ನಿತ್ಯವೂ ಗೋಗ್ರಾಸವನ್ನು ಕೊಡುವವನಿಗೆ ಸತತವಾಗಿ ಗೋಸೇವೆಯನ್ನು ಮಾಡುವವನ ನಾಲ್ಕನೆಯ ಒಂದು ಭಾಗದಷ್ಟು ಪುಣ್ಯವು ಬರುತ್ತದೆ.

॥ ಇತಿ ಶ್ರೀಮನ್ಮಹಾಭಾರತೇ ಅನುಶಾಸನಪರ್ವಣಿ ದಾನಧರ್ಮಪರ್ವಣಿ ಮಹಾದೇವರಹಸ್ಯಂ ನಾಮ ಚತುರಶೀತ್ಯುತ್ತರಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಎಂಬತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಂಬತ್ತೈದನೆಯ ಅಧ್ಯಾಯ

ಸ್ಕಂದನ ಉಪದೇಶ ಮತ್ತು ವಿಷ್ಣುವಿನಿಂದ ಸರ್ವಧರ್ಮಗಳ ಅನುಮೋದನೆ

ಸ್ಕಂದಃ

ಮಮಾಪ್ಯನುಮತೋ ಧರ್ಮಸ್ತಂ ಶೃಣುಧ್ವಂ ಸಮಾಹಿತಾಃ ।
ನೀಲಷಂಡಸ್ಯ ಶೃಂಗಾಭ್ಯಾಂ ಗೃಹೀತ್ವಾ ಮೃತ್ತಿಕಾಂ ತು ಯಃ ॥೧॥

ಅಭಿಷೇಕಂ ತ್ರ್ಯಹಂ ಕುರ್ಯಾತ್ ತಸ್ಯ ಧರ್ಮಂ ನಿಬೋಧತ ।
ಶೋಧಯೇದಶುಭಂ ಸರ್ವಮಾಧಿಪತ್ಯಂ ಪರತ್ರ ಚ ।
ಯಾವಚ್ಚ ಜಾಯತೇ ಮರ್ತ್ಯಸ್ತಾವಚ್ಛ್ರೋತ್ರೋ ಭವಿಷ್ಯತಿ ॥೨॥

ಸ್ಕಂದ– ನನಗೂ ಧರ್ಮವು ಅನುಮತವಾಗಿದೆ. ಅದನ್ನು ಸಮಾಧಾನದಿಂದ ಕೇಳಿ. ಕಪ್ಪಾದ ವೃಷಭವು ಶೃಂಗದಿಂದ ಎತ್ತಿದ ಮೃತ್ತಿಕೆಯನ್ನು ಲೇಪಿಸಿಕೊಂಡು ಯಾವನು ಮೂರು ದಿವಸಗಳಲ್ಲಿ ಸ್ನಾನವನ್ನು ಮಾಡುತ್ತಾನೆಯೋ ಅವನಿಗೆ ಉಂಟಾಗುವ ಧರ್ಮವನ್ನು ತಿಳಿಯಿರಿ. ಅದು ಅವನ ಅಶುಭವೆಲ್ಲವನ್ನೂ ಶೋಧಿಸುತ್ತದೆ. ಈ

ಲೋಕದಲ್ಲಿಯೂ ಮತ್ತು ಪರಲೋಕದಲ್ಲಿಯೂ ಸರ್ವಾಧಿಪತ್ಯವನ್ನು ಕೊಡುತ್ತದೆ. ಎಷ್ಟು ಬಾರಿ ಜನಿಸುತ್ತಾನೆಯೋ ಅಷ್ಟು ಬಾರಿ ಶೂರನಾಗುತ್ತಾನೆ.

ಇದಂ ಚಾಪ್ಯಪರಂ ಗುಹ್ಯಂ ಸರಹಸ್ಯಂ ನಿಬೋಧತ ॥೩॥

ಪ್ರಗೃಹ್ಯೌದುಂಬರಂ ಪಾತ್ರಂ ಪಕ್ವಾನ್ನಂ ಮಧುನಾ ಸಹ ।
ಸೋಮಸ್ಯೋತ್ತಿಷ್ಠಮಾನಸ್ಯ ಪೌರ್ಣಮಾಸ್ಯಾಂ ಬಲಿಂ ಹರೇತ್ ॥೪॥

ಇನ್ನೊಂದು ಧರ್ಮರಹಸ್ಯವನ್ನು ತಿಳಿಯಿರಿ. ಅತ್ತಿಯ ಪಾತ್ರೆಯನ್ನು ತೆಗೆದುಕೊಂಡು ಜೇನುತುಪ್ಪವನ್ನು ಬೆರೆಸಿದ ಪಕ್ವಾನ್ನವನ್ನು ಚಂದ್ರೋದಯದ ಸಮಯದಲ್ಲಿ ಪೌರ್ಣಮಾಸಿಯ ದಿವಸ ಚಂದ್ರನಿಗೆ ಸಮರ್ಪಿಸಬೇಕು.

ತಸ್ಯ ಧರ್ಮಫಲಂ ನಿತ್ಯಂ ಶ್ರದ್ದಧಾನಾ ನಿಬೋಧತ ।
ಸಾಧ್ಯಾ ರುದ್ರಾಸ್ತಥಾऽऽದಿತ್ಯಾ ವಿಶ್ವೇದೇವಾಸ್ತಥಾऽಶ್ವಿನೌ ॥೫॥

ಮರುತೋ ವಸವಶ್ಚೈವ ಪ್ರತಿಗೃಹ್ಣಂತಿ ತಂ ಬಲಿಮ್ ।
ಸೋಮಶ್ಚ ವರ್ಧತೇ ತೇನ ಸಮುದ್ರಶ್ಚ ಮಹೋದಧಿಃ ॥೬॥

ಏಷ ಧರ್ಮೋ ಮಯೋದ್ದಿಷ್ಟಃ ಸರಹಸ್ಯಃ ಸುಖಾವಹಃ ॥೭॥

ಶ್ರದ್ಧೆಯುಳ್ಳ ನೀವು ಅದರಿಂದ ಉಂಟಾಗುವ ಧರ್ಮಫಲವನ್ನು ತಿಳಿಯಿರಿ. ಆ ಪೂಜೆಯನ್ನು ಸಾಧ್ಯರೂ, ರುದ್ರರೂ, ಆದಿತ್ಯರೂ, ವಿಶ್ವೇದೇವತೆಗಳೂ, ಅಶ್ವಿನಿಗಳೂ, ಮರುತ್ತುಗಳೂ ಮತ್ತು ವಸುಗಳೂ ಸ್ವೀಕರಿಸುತ್ತಾರೆ. ಅದರಿಂದ ಚಂದ್ರನು ಅಭಿವೃದ್ಧಿಯನ್ನು ಹೊಂದುತ್ತಾನೆ. ಸಮುದ್ರವು ವೃದ್ಧಿಯನ್ನು ಹೊಂದುತ್ತದೆ. ಇದು ನಾನು ಹೇಳಲು ಉದ್ದೇಶಿಸಿದ್ದ ಸುಖಪ್ರದವಾದ, ರಹಸ್ಯವಾದ ಧರ್ಮ.

ವಿಷ್ಣುಃ

ಧರ್ಮಗುಹ್ಯಾನಿ ಸರ್ವಾಣಿ ದೇವತಾನಾಂ ಮಹಾತ್ಮನಾಮ್ ।
ಋಷೀಣಾಂ ಚೈವ ಗುಹ್ಯಾನಿ ಯಃ ಪಠೇದಾಹ್ನಿಕಂ ಸದಾ ॥೮॥

ಶೃಣುಯಾದ್ ವಾऽನಸೂಯುರ್ಯಃ ಶ್ರದ್ದಧಾನಃ ಸಮಾಹಿತಃ ।
ನಾಸ್ಯ ವಿಘ್ನಃ ಪ್ರಭವತಿ ಭಯಂ ಚಾಸ್ಯ ನ ವಿದ್ಯತೇ ॥೯॥

ವಿಷ್ಣು– ಯಾವನು ಮಹಾತ್ಮರಾದ ದೇವತೆಗಳು ಮತ್ತು ಋಷಿಗಳು ಹೇಳಿದ ಈ ಎಲ್ಲಾ ಧರ್ಮಗುಹ್ಯಗಳನ್ನೂ ಪ್ರತಿದಿನವೂ ಪಠಿಸುತ್ತಾನೆಯೋ ಅಥವಾ ಶ್ರದ್ಧೆ, ಸಮಾಧಾನದಿಂದ ಕೂಡಿ ಅಸೂಯೆಯನ್ನು ತೊರೆದು ಹೇಳುತ್ತಾನೆಯೋ ಅವನಿಗೆ ಯಾವ ವಿಘ್ನವೂ ಉಂಟಾಗುವುದಿಲ್ಲ. ಯಾವ ಭಯವೂ ಉಂಟಾಗುವುದಿಲ್ಲ.

ಯೇ ಚ ಧರ್ಮಾಃ ಶುಭಾಃ ಪುಣ್ಯಾಃ ಸರಹಸ್ಯಾ ಉದಾಹೃತಾಃ ।
ತೇಷಾಂ ಧರ್ಮಫಲಂ ತಸ್ಯ ಯಃ ಪಠೇತ ಜಿತೇಂದ್ರಿಯಃ ॥೧೦॥

ಯಾವನು ಜಿತೇಂದ್ರಿಯನಾಗಿ ಈ ಆಖ್ಯಾನವನ್ನು ಪಠಿಸುತ್ತಾನೆಯೋ ಅವನಿಗೆ ಈ ಆಖ್ಯಾನದಲ್ಲಿ ಹೇಳಿದ ರಹಸ್ಯವಾದ, ಪುಣ್ಯಪ್ರದವಾದ, ಶುಭವಾದ ಎಲ್ಲ ಧರ್ಮಗಳ ಫಲವೂ ಉಂಟಾಗುತ್ತದೆ.

ನಾಸ್ಯ ಪಾಪಂ ಪ್ರಭವತಿ ನ ಚ ಪಾಪೇನ ಲಿಪ್ಯತೇ ।
ಪಠೇದ್ ವಾ ಶ್ರಾವಯೇದ್ ವಾಪಿ ಶ್ರುತ್ವಾ ವಾ ಲಭತೇ ಫಲಮ್ ॥

ಅವನನ್ನು ಪಾಪವು ಆಕ್ರಮಿಸುವುದಿಲ್ಲ. ಅವನಿಗೆ ಪಾಪದ ಲೇಪವೂ ಆಗುವುದಿಲ್ಲ. ಇದನ್ನು ಪಠಿಸುವವನೂ, ಕೇಳುವವನೂ ಮತ್ತು ಹೇಳುವವನೂ ಅಂತಹ ಫಲವನ್ನು ಪಡೆಯುತ್ತಾನೆ.

ಭುಂಜತೇ ಪಿತರೋ ದೇವಾ ಹವ್ಯಂ ಕವ್ಯಮಥಾಕ್ಷಯಮ್ ।
ಶ್ರಾವಯಂಶ್ಚಾಪಿ ವಿಪ್ರೇಂದ್ರಾನ್ ಪರ್ವಸು ಪ್ರಯತೋ ನರಃ ॥೧೨॥

ಋಷೀಣಾಂ ದೇವತಾನಾಂ ಚ ಪಿತೄಣಾಂ ಚೈವ ನಿತ್ಯದಾ ।
ಭವತ್ಯಭಿಮತಃ ಶ್ರೀಮಾನ್ ಧರ್ಮೇಷು ಪ್ರಯತಃ ಸದಾ ॥೧೩॥

ಪಿತೃಗಳು ಮತ್ತು ದೇವತೆಗಳು ಭುಂಜಿಸುವ ಹವ್ಯ-ಕವ್ಯಗಳು ಅಕ್ಷಯವಾಗುತ್ತವೆ. ಶ್ರೇಷ್ಠ ಬ್ರಾಹ್ಮಣರಿಗೆ ಪರ್ವಕಾಲದಲ್ಲಿ ಇದನ್ನು ಪ್ರವಚನ ಮಾಡುವ ಮನುಷ್ಯನು ದೇವತೆಗಳಿಗೂ, ಪಿತೃಗಳಿಗೂ ಮತ್ತು ಋಷಿಗಳಿಗೂ ಯಾವಾಗಲೂ ಸಮ್ಮತನಾಗಿ, ಸಂಪದ್ಯುಕ್ತನಾಗಿ ಧರ್ಮನಿರತನಾಗುತ್ತಾನೆ.

ಕೃತ್ವಾಽಪಿ ಪಾಪಕಂ ಕರ್ಮ ಮಹಾಪಾತಕವರ್ಜಿತಮ್ ।
ರಹಸ್ಯಧರ್ಮಂ ಶ್ರುತ್ವೇಮಂ ಸರ್ವಪಾಪೈಃ ಪ್ರಮುಚ್ಯತೇ ॥೧೪॥

ಮಹಾಪಾತಕಗಳನ್ನು ಬಿಟ್ಟು ಬೇರೆ ಪಾಪಗಳನ್ನು ಮಾಡಿದವನೂ ಸಹ ಈ ರಹಸ್ಯಧರ್ಮವನ್ನು ಶ್ರವಣ ಮಾಡಿದರೆ ಎಲ್ಲ ಪಾಪಗಳಿಂದಲೂ ಮುಕ್ತನಾಗುತ್ತಾನೆ.

ಭೀಷ್ಮಃ

ಏತದ್ ಧರ್ಮರಹಸ್ಯಂ ವೈ ದೇವತಾನಾಂ ನರಾಧಿಪ ।
ವ್ಯಾಸೋದ್ದಿಷ್ಟಂ ಮಯಾ ಪ್ರೋಕ್ತಂ ಸರ್ವದೇವನಮಸ್ಕೃತಮ್ ॥೧೫॥

ಭೀಷ್ಮ- ಎಲೈ ರಾಜನೇ, ದೇವತೆಗಳು ಹೇಳಿದ ಈ ಧರ್ಮರಹಸ್ಯವು ಸರ್ವದೇವ ನಮಸ್ಕೃತವಾದುದು ಮತ್ತು ವ್ಯಾಸರು ನನಗೆ ಹೇಳಿದುದು. ಅದನ್ನೂ ನಾನು ನಿನಗೆ ಹೇಳಿದ್ದೇನೆ.

ಪೃಥಿವೀ ರತ್ನಸಂಪೂರ್ಣಾ ಜ್ಞಾನಂ ಚೇದಮನುತ್ತಮಮ್ ।
ಇದಮೇವ ತತಃ ಶ್ರಾವ್ಯಮಿತಿ ಮನ್ಯೇತ ಧರ್ಮವಿತ್ ॥೧೬॥

ಒಂದು ಕಡೆ ರತ್ನಸಂಪೂರ್ಣವಾದ ಪೃಥಿವಿ. ಇನ್ನೊಂದು ಕಡೆ ಈ ಶ್ರೇಷ್ಠವಾದ ಧರ್ಮಗುಹ್ಯಗಳ ಜ್ಞಾನ. ಹೀಗಿದ್ದರೆ ಧರ್ಮಜ್ಞನಾದವನು ಗುಹ್ಯಧರ್ಮಗಳ ಜ್ಞಾನವನ್ನೇ ಶ್ರವಣದಿಂದ ಪಡೆಯಬೇಕು ಎಂದು ತಿಳಿಯಬೇಕು.

ನಾಶ್ರದ್ದಧಾನಾಯ ನ ನಾಸ್ತಿಕಾಯ ನ ನಷ್ಟಧರ್ಮಾಯ ನ ನಿರ್ಗುಣಾಯ ।
ನ ಹೇತುದುಷ್ಟಾಯ ಗುರುದ್ವಿಷೇ ವಾ ನಾನಾತ್ಮಭೂತಾಯ ನಿವೇದ್ಯಮೇತತ್ ॥

ಇದನ್ನು ಶ್ರದ್ಧೆ ಇಲ್ಲದವನಿಗೆ, ನಾಸ್ತಿಕನಿಗೆ, ಧರ್ಮಾಚರಣೆ ಇಲ್ಲದವನಿಗೆ, ಗುಣಹೀನನಾದವನಿಗೆ, ಎಲ್ಲದನ್ನೂ ಪ್ರಯೋಜನ ದೃಷ್ಟಿಯಿಂದ ಮಾಡುವವನಿಗೆ, ಗುರುದ್ವೇಷ ಮಾಡುವವನಿಗೆ, ದೇವರ ಸ್ಮರಣೆ ಇಲ್ಲದವನಿಗೆ ಹೇಳಬಾರದು.

॥ ಇತಿ ಶ್ರೀಮನ್ಮಹಾಭಾರತೇ ಅನುಶಾಸನಪರ್ವಣಿ ಸರ್ವರಹಸ್ಯಂ ನಾಮ
ಪಂಚಾಶೀತ್ಯುತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಎಂಬತ್ತೈದನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಂಬತ್ತಾರನೆಯ ಅಧ್ಯಾಯ

ಭೋಜ್ಯಾಭೋಜ್ಯವಿವೇಕ

ಯುಧಿಷ್ಠಿರಃ

ಕೇ ಭೋಜ್ಯಾ ಬ್ರಾಹ್ಮಣಸ್ಯೇಹ ಕೇ ಭೋಜ್ಯಾಃ ಕ್ಷತ್ರಿಯಸ್ಯ ಹ ।
ತಥಾ ವೈಶ್ಯಸ್ಯ ಕೇ ಭೋಜ್ಯಾಃ ಕೇ ಶೂದ್ರಸ್ಯ ಚ ಭಾರತ ॥೧॥

ಯುಧಿಷ್ಠಿರ– ಎಲೈ ಭಾರತನೇ, ಬ್ರಾಹ್ಮಣನು ಇಲ್ಲಿ ಯಾರಿಗೆ ಭೋಜನವನ್ನು ಮಾಡಿಸಬೇಕು? ಕ್ಷತ್ರಿಯನು ಯಾರಿಗೆ ಭೋಜನವನ್ನು ಮಾಡಿಸಬೇಕು? ವೈಶ್ಯನು ಯಾರಿಗೆ ಭೋಜನವನ್ನು ಮಾಡಿಸಬೇಕು? ಶೂದ್ರನು ಯಾರಿಗೆ ಭೋಜನವನ್ನು ಮಾಡಿಸಬೇಕು?

ಭೀಷ್ಮಃ

ಬ್ರಾಹ್ಮಣಾ ಬ್ರಾಹ್ಮಣಸ್ಯೇಹ ಭೋಜ್ಯಾ ಯೇ ಚೈವ ಕ್ಷತ್ರಿಯಾಃ ।
ವೈಶ್ಯಾಶ್ಚಾಪಿ ತಥಾ ಭೋಜ್ಯಾಃ ಶೂದ್ರಾಶ್ಚ ಪರಿವರ್ಜಿತಾಃ ॥೨॥

ಭೀಷ್ಮ– ಬ್ರಾಹ್ಮಣರು ಬ್ರಾಹ್ಮಣರಿಗೆ ಭೋಜನವನ್ನು ಭೋಜನವನ್ನು ಮಾಡಿಸಬೇಕು. ಕ್ಷತ್ರಿಯರಿಗೂ, ವೈಶ್ಯರಿಗೂ ಭೋಜನವನ್ನು ಮಾಡಿಸಬಹುದು. ಆದರೆ ಶೂದ್ರರನ್ನು ಪರಿತ್ಯಜಿಸಬೇಕು.

ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾ ಭೋಜ್ಯಾ ವೈ ಕ್ಷತ್ರಿಯಸ್ಯ ಹ ।
ವರ್ಜನೀಯಾಸ್ತು ವೈ ಶೂದ್ರಾಃ ಸರ್ವಭಕ್ಷಾ ವಿಕರ್ಮಿಣಃ ॥೩॥

ಕ್ಷತ್ರಿಯನು ಬ್ರಾಹ್ಮಣರಿಗೂ, ಕ್ಷತ್ರಿಯರಿಗೂ, ವೈಶ್ಯರಿಗೂ ಭೋಜನವನ್ನು ಮಾಡಿಸಬೇಕು. ಆದರೆ ಸರ್ವಭಕ್ಷಕರಾದ, ವಿಕರ್ಮಗಳಲ್ಲಿ ನಿರತರಾದ ಶೂದ್ರರಿಗೆ ಭೋಜನವನ್ನು ಮಾಡಿಸುವಂತಿಲ್ಲ.

ವೈಶ್ಯಾಸ್ತು ಭೋಜ್ಯಾ ವಿಪ್ರಾಣಾಂ ಕ್ಷತ್ರಿಯಾಣಾಂ ತಥೈವ ಚ ।
ನಿತ್ಯಾಗ್ನಯೋ ವಿವಿಕ್ತಾಶ್ಚ ಚಾತುರ್ಮಾಸ್ಯರತಾಶ್ಚ ಯೇ ॥೪॥

ನಿತ್ಯಾಗ್ನಿಹೋತ್ರಿಗಳಾದ ಏಕಾಂತವಾಸಿಗಳಾದ, ಚಾತುರ್ಮಾಸ್ಯರತರಾದ ವೈಶ್ಯರಿಗೆ ಬ್ರಾಹ್ಮಣರು ಮತ್ತು ಕ್ಷತ್ರಿಯರು ಭೋಜನವನ್ನು ಮಾಡಿಸಬಹುದು.

ಶೂದ್ರಾಣಾಮಥ ಯೋ ಭುಂಕ್ತೇ ಸ ಭುಂಕ್ತೇ ಪೃಥಿವೀಮಲಮ್ ।
ಮಲಂ ನೃಣಾಂ ಸ ಪಿಬತಿ ಮಲಂ ಭುಂಕ್ತೇ ಜನಸ್ಯ ಚ ॥೫॥

ಶೂದ್ರಾಣಾಂ ಯಸ್ತಥಾ ಭುಂಕ್ತೇ ಸ ಭುಂಕ್ತೇ ಪೃಥಿವೀಮಲಮ್ ।
ಪೃಥಿವೀಮಲಮಶ್ನಂತಿ ಯೇ ದ್ವಿಜಾಃ ಶೂದ್ರಭೋಜಿನಃ ॥೬॥

ಯಾವ ದ್ವಿಜನು ಶೂದ್ರಾನ್ನವನ್ನು ಭುಂಜಿಸುತ್ತಾನೆಯೋ ಅವನು ಪೃಥಿವೀಮಲವನ್ನೂ, ಸರ್ವಜನರ ಮಲವನ್ನೂ ತಿನ್ನುತ್ತಾನೆ.

ಶೂದ್ರಸ್ಯ ಕರ್ಮನಿಷ್ಠಾಯಾಂ ವಿಕರ್ಮಸ್ಥೋಽಪಿ ಪಚ್ಯತೇ ।
ಬ್ರಾಹ್ಮಣಃ ಕ್ಷತ್ರಿಯೋ ವೈಶ್ಯೋ ವಿಕರ್ಮಸ್ಥಶ್ಚ ಪಚ್ಯತೇ ॥೭॥

ಶೂದ್ರನು ಕರ್ಮನಿಷ್ಠೆಯನ್ನು ಹೊಂದಿದರೆ ಅವನು ವಿಕರ್ಮಸ್ಥನಾದರೂ ನರಕದಲ್ಲಿ ಬೇಯಿಸಲ್ಪಡುತ್ತಾನೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯರು ಶೂದ್ರಕರ್ಮದಲ್ಲಿ ನಿರತರಾದರೆ ಅವರೂ ನರಕದಲ್ಲಿ ಬೇಯಿಸಲ್ಪಡುತ್ತಾರೆ.

ಸ್ವಾಧ್ಯಾಯನಿರತಾ ವಿಪ್ರಾಸ್ತಥಾ ಸ್ವಸ್ತ್ಯಯನೇ ನೃಣಾಮ್ ।
ರಕ್ಷಣೇ ಕ್ಷತ್ರಿಯಂ ಪ್ರಾಹುರ್ವೈಶ್ಯಂ ಪುಷ್ಟ್ಯರ್ಥಮೇವ ಚ ॥೮॥

ಬ್ರಾಹ್ಮಣರು ಸ್ವಾಧ್ಯಾಯನಿರತರಾದವರು. ಕ್ಷತ್ರಿಯರು ಪ್ರಜೆಗಳ ಕ್ಷೇಮದಲ್ಲಿ ಮತ್ತು ರಕ್ಷಣೆಯಲ್ಲಿ ನಿರತರಾದವರು. ವೈಶ್ಯರು (ಸಮಾಜದ) ಪುಷ್ಟಿಕಾರ್ಯದಲ್ಲಿ ನಿರತರಾದವರು.

ಕರೋತಿ ಕರ್ಮ ಯದ್ವೈಶ್ಯಸ್ತದ್ಗತ್ವಾ ಹ್ಯುಪಜೀವತಿ ।
ಕೃಷಿಗೋರಕ್ಷ್ಯವಾಣಿಜ್ಯಮಕುತ್ಸಾ ವೈಶ್ಯಕರ್ಮಣಿ ॥೯॥

ವೈಶ್ಯನು ಯಾವ ಕರ್ಮವನ್ನು ಮಾಡುತ್ತಾನೆಯೋ ಅದನ್ನು ಸಮಾಜವು ಉಪಜೀವಿಸುತ್ತದೆ. ಕೃಷಿ, ಗೋರಕ್ಷೆ, ವಾಣಿಜ್ಯ, ವೈಶ್ಯಕರ್ಮದ ಅನಿಂದೆ - ಇವು ವೈಶ್ಯಕರ್ಮಗಳು.

ಶೂದ್ರಕರ್ಮ ತು ಯಃ ಕುರ್ಯಾದವಿಹಾಯ ಸ್ವಕರ್ಮ ಚ ।
ಸ ವಿಜ್ಞೇಯೋ ಯಥಾ ಶೂದ್ರೋ ನ ಚ ಭೋಜ್ಯಃ ಕದಾಚನ ॥೧೦॥

ತನ್ನ ಕರ್ಮವನ್ನು ತ್ಯಜಿಸಿ ಯಾವನು ಶೂದ್ರಕರ್ಮವನ್ನು ಮಾಡುತ್ತಾನೆಯೋ ಅವನನ್ನು ಶೂದ್ರನೆಂದೇ ತಿಳಿಯಬೇಕು. ಅವನಿಗೆ ಭೋಜನವನ್ನು ಮಾಡಿಸಬಾರದು.

ಚಿಕಿತ್ಸಕಃ ಕಾಂಡಪೃಷ್ಠಃ ಪುರಾಧ್ಯಕ್ಷಃ ಪುರೋಹಿತಃ ।
ಸಾಂವತ್ಸರೋ ವೃಥಾಧ್ಯಾಯೀ ಸರ್ವೇ ತೇ ಶೂದ್ರಸಮ್ಮಿತಾಃ ॥೧೧॥

ವೈದ್ಯ, ಆಯುಧವನ್ನು ತಯಾರಿಸುವವನು, ಗ್ರಾಮಪತಿ, ಗ್ರಾಮ ಪುರೋಹಿತ, ಜ್ಯೋತಿಷಿ, ವ್ಯರ್ಥವಾಗಿ ಅಧ್ಯಯನವನ್ನು ಮಾಡಿದವನು- ಎಲ್ಲರೂ ಶೂದ್ರರಿಗೆ ಸಮಾನರಾದವರು.

ಶೂದ್ರಕರ್ಮಸ್ವಥೈತೇಷು ಯೋ ಭುಂಕ್ತೇ ನಿರಪತ್ರಪಃ ।
ಅಭೋಜ್ಯಭೋಜನಂ ಭುಕ್ತ್ವಾ ಭಯಂ ಪ್ರಾಪ್ನೋತಿ ದಾರುಣಮ್ ॥೧೨॥

ಕುಲಂ ವೀರ್ಯಂ ಚ ತೇಜಶ್ಚ ತಿರ್ಯಗ್ಯೋನಿತ್ವಮೇವ ಚ ।
ಸ ಪ್ರಯಾತಿ ಯಥಾ ಶ್ವಾ ವೈ ನಿಷ್ಕ್ರಿಯೋ ಧರ್ಮವರ್ಜಿತಃ ॥೧೩॥

ಇಂತಹ ಶೂದ್ರಕರ್ಮವನ್ನು ಮಾಡುವವರ ಅನ್ನವನ್ನು ನಾಚಿಕೆಯಿಲ್ಲದೆ ಯಾವನು ಭೋಜನವನ್ನು ಮಾಡುತ್ತಾನೆಯೋ ಅವನು ಅಭಕ್ಷ್ಯಭೋಜನವನ್ನು ಮಾಡಿ ದಾರುಣವಾದ ಭಯಕ್ಕೆ ಗುರಿಯಾಗುತ್ತಾನೆ. ಅವನ ಕುಲ, ವೀರ್ಯ ಮತ್ತು ತೇಜಸ್ಸುಗಳು ಭಯಗ್ರಸ್ತವಾಗುತ್ತವೆ ಮತ್ತು ಮುಂದೆ ತಿರ್ಯಗ್ಯೋನಿಯಲ್ಲಿ ಜನಿಸುತ್ತಾನೆ. ಅವನು ಕ್ರಿಯಾರಹಿತನಾಗಿ, ಧರ್ಮಾನುಷ್ಠಾನ ರಹಿತನಾಗಿ ನಾಯಿಯಂತೆ ತಿರುಗುತ್ತಾನೆ.

ಭುಂಕ್ತೇ ಚಿಕಿತ್ಸಕಸ್ಯಾನ್ನಂ ತದನ್ನಂ ಚ ಪುರೀಷವತ್ ।
ಪುಂಶ್ಚಲ್ಯನ್ನಂ ಚ ಮೂತ್ರಂ ಸ್ಯಾತ್ ಕಾರುಕಾನ್ನಂ ಚ ಶೋಣಿತಮ್ ॥

ವೈದ್ಯನ ಅನ್ನವು ಮಲಕ್ಕೆ ಸಮಾನವಾದುದು. ವ್ಯಭಿಚಾರಿಣಿಯ ಅನ್ನವು ಮೂತ್ರಕ್ಕೆ ಸಮಾನವಾದುದು. ಕಮ್ಮಾರನ ಅನ್ನವು ರಕ್ತಕ್ಕೆ ಸಮಾನವಾದುದು.

ವಿದ್ಯೋಪಜೀವಿನೋಽನ್ನಂ ಚ ಯೋ ಭುಂಕ್ತೇ ಸಾಧುಸಮ್ಮತಃ ।
ತದಪ್ಯನ್ನಂ ಯಥಾ ಶೌದ್ರಂ ತತ್ ಸಾಧುಃ ಪರಿವರ್ಜಯೇತ್ ॥೧೫॥

ಸಾಧುಸಮ್ಮತನಾದವನು ವಿದ್ಯೋಪಜೀವನವನ್ನು ಮಾಡುವವನ ಅನ್ನವನ್ನು ಊಟ ಮಾಡಿದರೆ ಆ ಅನ್ನವು ಶೂದ್ರಾನ್ನಕ್ಕೆ ಸಮಾನವಾದುದು. ಸಾಧುವಾದವನು ಅದನ್ನು ಪರಿತ್ಯಜಿಸಬೇಕು.

ವಚನೀಯಸ್ಯ ಯೋ ಭುಂಕ್ತೇ ತಮಾಹುಃ ಶೋಣಿತಂ ಹ್ರದಮ್ ।
ಪಿಶುನಂ ಭೋಜನಂ ಭುಂಕ್ತೇ ಬ್ರಹ್ಮಹತ್ಯಾಸಮಂ ವಿದುಃ ॥೧೬॥

ಅಸತ್ಕೃತಮವಜ್ಞಾತಂ ನ ಭೋಕ್ತವ್ಯಂ ಕದಾಚನ ॥೧೭॥

ವ್ಯಾಧಿಂ ಕುಲಕ್ಷಯಂ ಚೈವ ಕ್ಷಿಪ್ರಂ ಪ್ರಾಪ್ನೋತಿ ಬ್ರಾಹ್ಮಣಃ ।
ನಗರೀರಕ್ಷಿಣೋ ಭುಂಕ್ತೇ ಶ್ವಪಚಪ್ರವಣೋ ಭವೇತ್ ॥೧೮॥

ಶೀಲ ಕಳಂಕವುಳ್ಳವನ ಅನ್ನವನ್ನು ಊಟ ಮಾಡುವವನನ್ನು ರಕ್ತದ ಮಡುವೆಂದು ಕರೆಯುತ್ತಾರೆ. ಚಾಡಿಕೋರನ ಅನ್ನವು ಬ್ರಹ್ಮಹತ್ಯೆಯನ್ನು ಮಾಡಿದವನ ಅನ್ನಕ್ಕೆ ಸಮನಾದುದೆಂದು ತಿಳಿಯುತ್ತಾರೆ. ಗೌರವವಿಲ್ಲದೆ ಅವಮಾನ ಮಾಡಿ ನೀಡಿದ ಅನ್ನವನ್ನು ಎಂದೂ ತಿನ್ನಬಾರದು. ಅದರಿಂದ ಬ್ರಾಹ್ಮಣನು ವ್ಯಾಧಿಯನ್ನೂ, ಕುಲಕ್ಷಯವನ್ನೂ ಶೀಘ್ರವಾಗಿ ಹೊಂದುತ್ತಾನೆ. ನಗರರಕ್ಷಕರ ಅನ್ನವನ್ನು ಭುಂಜಿಸುವವನು ಚಂಡಾಲನ ಸ್ನೇಹಿತನಾಗುತ್ತಾನೆ.

ಗೋಘ್ನೇ ಚ ಬ್ರಾಹ್ಮಣಘ್ನೇ ಚ ಸುರಾಪೇ ಗುರುತಲ್ಪಗೇ ।
ಭುಕ್ತ್ವಾ ತ್ವನ್ನಂ ಜಾಯತೇ ವಿಪ್ರೋ ರಕ್ಷಸಾಂ ಕುಲವರ್ಧನಃ ॥೧೯॥

ಗೋಹತ್ಯೆ ಮಾಡಿದವನ, ಬ್ರಹ್ಮಹತ್ಯೆಯನ್ನು ಮಾಡಿದವನ, ಸುರಾಪಾನವನ್ನು ಮಾಡಿದವನ, ಗುರುತಲ್ಪಗಮನವನ್ನು ಮಾಡಿದವನ ಅನ್ನವನ್ನು ತಿಂದ ಬ್ರಾಹ್ಮಣನು ರಾಕ್ಷಸನಾಗಿ ಜನಿಸಿ ರಾಕ್ಷಸ ಕುಲವನ್ನು ಬೆಳೆಸುತ್ತಾನೆ.

ನ್ಯಾಸಾಪಹಾರಿಣೋ ಭುಕ್ತ್ವಾ ಕೃತಘ್ನೇ ಕ್ಲೀಬವರ್ತಿನಿ ।
ಜಾಯತೇ ಶಬರಾವಾಸೇ ಮಧ್ಯದೇಶಬಹಿಷ್ಕೃತೇ ॥೨೦॥

ನ್ಯಾಸಾಪಹಾರಿಯ ಅನ್ನವನ್ನೂ, ಕೃತಘ್ನನ ಅನ್ನವನ್ನೂ, ನಪುಂಸಕರ ವರ್ತನೆಯನ್ನು ಹೊಂದಿದವನ ಅನ್ನವನ್ನೂ ತಿಂದವನು ಮಧ್ಯದೇಶದ ಆಚೆಗೆ ಬೇಡರ ಕುಲದಲ್ಲಿ ಜನಿಸುತ್ತಾನೆ.

ಅಭೋಜ್ಯಾಶ್ಚೈವ ಭೋಜ್ಯಾಶ್ಚ ಮಯಾ ಪ್ರೋಕ್ತಾ ಯಥಾವಿಧಿ ।
ಕಿಮನ್ಯದದ್ಯ ಕೌಂತೇಯ ಮತ್ತಸ್ತ್ವಂ ಶ್ರೋತುಮಿಚ್ಛಸಿ ॥೨೧॥

ಎಲೈ ಕೌಂತೇಯನೇ, ನಾನು ಶಾಸ್ತ್ರಕ್ಕೆ ಅನುಸಾರವಾಗಿ ಯಾರು ಭೋಜ್ಯರು ಮತ್ತು ಯಾರು ಅಭೋಜ್ಯರು ಎಂದು ಹೇಳಿದ್ದೇನೆ. ಈ ದಿನ ನನ್ನಿಂದ ನೀನು ಬೇರೆ ಏನನ್ನು ಕೇಳಲು ಬಯಸುತ್ತೀಯೆ?

॥ ಇತಿ ಶ್ರೀಮನ್ಮಹಾಭಾರತೇ ಅನುಶಾಸನಪರ್ವಣಿ ದಾನಧರ್ಮಪರ್ವಣಿ ಭೋಜ್ಯಾಭೋಜ್ಯವಿವೇಕೋ ನಾಮ ಷಡಶೀತ್ಯುತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಎಂಬತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಂಬತ್ತೇಳನೆಯ ಅಧ್ಯಾಯ

ಪ್ರತಿಗ್ರಹದ ಪ್ರಾಯಶ್ಚಿತ್ತವಿಧಿಗಳು

ಯುಧಿಷ್ಠಿರಃ

ಉಕ್ತಾಸ್ತು ಭವತಾ ಭೋಜ್ಯಾಸ್ತಥಾऽಭೋಜ್ಯಾಶ್ಚ ಸರ್ವಶಃ ।
ಅತ್ರ ಮೇ ಪ್ರಶ್ನಸಂದೇಹಸ್ತನ್ಮೇ ವದ ಪಿತಾಮಹ ॥೧॥

ಬ್ರಾಹ್ಮಣಾನಾಂ ವಿಶೇಷೇಣ ಹವ್ಯಕವ್ಯಪ್ರತಿಗ್ರಹೇ ।
ನಾನಾವಿಧೇಷು ಭೋಜ್ಯೇಷು ಪ್ರಾಯಶ್ಚಿತ್ತಾನಿ ಶಂಸ ಮೇ ॥೨॥

ಯುಧಿಷ್ಠಿರ– ಪಿತಾಮಹನೇ, ಭೋಜ್ಯಾಭೋಜ್ಯ ವಿಭಾಗವನ್ನು ವಿಸ್ತಾರವಾಗಿ ಹೇಳಿದ್ದೀಯೆ. ಇದರಲ್ಲಿ ನನಗೆ ಒಂದು ಸಂಶಯವಿದೆ, ಅದನ್ನು ನಿವಾರಿಸು. ವಿಶೇಷವಾಗಿ ಹವ್ಯ-ಕವ್ಯಗಳಲ್ಲಿ ಬ್ರಾಹ್ಮಣರು ಮಾಡಿದ ಪ್ರತಿಗ್ರಹಕ್ಕೆ ಮತ್ತು ನಾನಾವಿಧ ಭೋಜ್ಯರಿಗೆ ಪ್ರಾಯಶ್ಚಿತ್ತಗಳನ್ನು ನನಗೆ ಹೇಳು.

ಭೀಷ್ಮಃ

ಹಂತ ವಕ್ಷ್ಯಾಮಿ ತೇ ರಾಜನ್ ಬ್ರಾಹ್ಮಣಾನಾಂ ಮಹಾತ್ಮನಾಮ್ ।
ಪ್ರತಿಗ್ರಹೇಷು ಭೋಜ್ಯೇ ಚ ಮುಚ್ಯತೇ ಯೇನ ಪಾಪ್ಮನಃ ॥೩॥

ಭೀಷ್ಮ- ಎಲೈ ರಾಜನೇ, ಸಂತೋಷ. ಮಹಾತ್ಮರಾದ ಬ್ರಾಹ್ಮಣರಿಗೆ ಪ್ರತಿಗ್ರಹಗಳಲ್ಲಿಯೂ ಮತ್ತು ಭೋಜ್ಯರ ವಿಷಯದಲ್ಲಿಯೂ ಇರುವ ಪಾಪವನ್ನು ಪರಿಹಾರ ಮಾಡುವ ಪ್ರಾಯಶ್ಚಿತ್ತಗಳನ್ನು ಹೇಳುತ್ತೇನೆ.

ಘೃತಪ್ರತಿಗ್ರಹೇ ಚೈವ ಸಾವಿತ್ರೀ ಸಮಿಧಾಹುತಿಃ ।
ತಿಲಪ್ರತಿಗ್ರಹೇ ಚೈವ ಸಮಮೇತದ್ ಯುಧಿಷ್ಠಿರ ॥೪॥

ಘೃತವನ್ನು ಸ್ವೀಕಾರ ಮಾಡಿದರೆ ಗಾಯತ್ರೀಮಂತ್ರವನ್ನು ಜಪಿಸಿ ಅಗ್ನಿಯಲ್ಲಿ ಸಮಿತ್ತುಗಳನ್ನು ಹೋಮ ಮಾಡಬೇಕು. ಎಲೈ ಯುಧಿಷ್ಠಿರನೇ, ತಿಲಪ್ರತಿಗ್ರಹವನ್ನು ಮಾಡಿದರೂ ಇದೇ ಪ್ರಾಯಶ್ಚಿತ್ತ.

ಮಾಂಸಪ್ರತಿಗ್ರಹೇ ಚೈವ ಮಧುನೋ ಲವಣಸ್ಯ ಚ ।
ಆದಿತ್ಯೋದಯನಂ ಸ್ಥಿತ್ವಾ ಪೂತೋ ಭವತಿ ಬ್ರಾಹ್ಮಣಃ ॥೫॥

ಮಾಂಸ, ಜೇನುತುಪ್ಪ ಮತ್ತು ಲವಣಗಳನ್ನು ಸ್ವೀಕರಿಸಿದರೆ ಸೂರ್ಯೋದಯ ಕಾಲದಲ್ಲಿ ನಿಂತು ಬ್ರಾಹ್ಮಣನು ಪವಿತ್ರನಾಗುತ್ತಾನೆ.

ಕಾಂಚನಂ ಪ್ರತಿಗೃಹ್ಯಾಥ ಜಪಮಾನೋ ಗುರುಶ್ರುತಿಮ್ ।
ಕೃಷ್ಣಾಯಸಂ ಚ ವಿವೃತಂ ಧಾರಯನ್ ಮುಚ್ಯತೇ ದ್ವಿಜಃ ॥೬॥

ಸುವರ್ಣ ಪ್ರತಿಗ್ರಹವನ್ನು ಮಾಡಿದವನು ಕಬ್ಬಿಣವನ್ನು ಹಿಡಿದು ಗಾಯತ್ರೀ ಜಪವನ್ನು ಮಾಡುವುದರಿಂದ ದೋಷದಿಂದ ಮುಕ್ತನಾಗುತ್ತಾನೆ.

ಏವಂ ಪ್ರತಿಗೃಹೀತೇಽಥ ಧನೇ ವಸ್ತ್ರೇ ತಥಾ ಸ್ತ್ರಿಯಾಮ್ ।
ಏವಮೇವ ನರಶ್ರೇಷ್ಠ ಸುವರ್ಣಸ್ಯ ಪ್ರತಿಗ್ರಹೇ ॥೭॥

ಧನ, ವಸ್ತ್ರ ಮತ್ತು ಸ್ತ್ರೀ ಪ್ರತಿಗ್ರಹವನ್ನು ಮಾಡಿದರೂ ಎಲೈ ನರಶ್ರೇಷ್ಠನೇ, ಸುವರ್ಣ ಪ್ರತಿಗ್ರಹದ ಪ್ರಾಯಶ್ಚಿತ್ತವೇ ಇರುತ್ತದೆ.

ಅನ್ನಪ್ರತಿಗ್ರಹೇ ಚೈವ ಪಾಯಸೇಕ್ಷುರಸೇ ತಥಾ ।
ಇಕ್ಷುತೈಲಪವಿತ್ರಾಣಾಂ ತ್ರಿಸಂಧ್ಯೇಽಪ್ಸು ನಿಮಜ್ಜನಮ್ ॥೮॥

ಅನ್ನ, ಪಾಯಸ, ಕಬ್ಬಿನ ರಸ, ಕಬ್ಬು, ತೈಲ, ಘೃತ ಇವುಗಳನ್ನು ಸ್ವೀಕಾರ ಮಾಡಿದರೆ ಸಂಧ್ಯಾಕಾಲದಲ್ಲಿ ಮೂರು ದಿನ ಸ್ನಾನವನ್ನು ಮಾಡಬೇಕು.

ವ್ರೀಹೌ ಪುಷ್ಪೇ ಫಲೇ ಚೈವ ಜಲೇ ಪಿಷ್ಟಮಯೇ ತಥಾ ।
ಯಾವಕೇ ದಧಿದುಗ್ಧೇ ಚ ಸಾವಿತ್ರೀಂ ಶತಶೋऽನ್ವಿತಾಮ್ ॥೯॥

ಭತ್ತ, ಪುಷ್ಪ-ಫಲಗಳು, ಜಲ, ಹಿಟ್ಟಿನ ಪದಾರ್ಥಗಳು, ಗೋಧಿ, ಹಾಲು-ಮೊಸರುಗಳು ಇವುಗಳನ್ನು ಸ್ವೀಕರಿಸಿದರೆ ನೂರು ಗಾಯತ್ರೀ ಜಪವನ್ನು ಮಾಡಬೇಕು.

ಉಪಾನಹೌ ಚ ಚ್ಛತ್ರಂ ಚ ಪ್ರತಿಗೃಹ್ಯೌರ್ಧ್ವದೇಹಿಕಮ್ ।
ಜಪೇಚ್ಛತಂ ಸಮಾಯುಕ್ತಸ್ತೇನ ಮುಚ್ಯೇತ ಪಾಪ್ಮನಾ ॥೧೦॥

ಉತ್ತರಕ್ರಿಯೆಗೆ ಸಂಬಂಧಿಸಿದ ಛತ್ರಿ ಮತ್ತು ಪಾದರಕ್ಷೆಗಳನ್ನು ಪ್ರತಿಗ್ರಹಿಸಿದರೆ ನೂರು ಗಾಯತ್ರೀ ಜಪವನ್ನು ಮಾಡಬೇಕು. ಆಗ ಆ ಪಾಪದಿಂದ ಮುಕ್ತನಾಗುತ್ತಾನೆ.

ಕ್ಷೇತ್ರಪ್ರತಿಗ್ರಹೇ ಚೈವ ಗ್ರಹಸೂತಕಯೋಸ್ತಥಾ ।
ತ್ರೀಣಿ ರಾತ್ರಾಣ್ಯುಪೋಷಿತ್ವಾ ತೇನ ಪಾಪಾದ್ ವಿಮುಚ್ಯತೇ ॥೧೧॥

ಭೂಮಿಯನ್ನು ಪ್ರತಿಗ್ರಹ ಮಾಡಿದರೆ ಅಥವಾ ಗ್ರಹಣ ಮತ್ತು ಸೂತಕದಲ್ಲಿ ಪ್ರತಿಗ್ರಹವನ್ನು ಮಾಡಿದರೆ ಮೂರು ರಾತ್ರಿ ಉಪವಾಸವನ್ನು ಮಾಡಿ ಆ ಪಾಪದಿಂದ ಶುದ್ಧನಾಗುತ್ತಾನೆ.

ಕೃಷ್ಣಪಕ್ಷೇ ತು ಯಃ ಶ್ರಾದ್ಧಂ ಪಿತೄಣಾಮಶ್ನತೇ ದ್ವಿಜಃ ।
ಅನ್ನಮೇತದಹೋರಾತ್ರಾತ್ ಪೂತೋ ಭವತಿ ಬ್ರಾಹ್ಮಣಃ ॥೧೨॥

ಕೃಷ್ಣಪಕ್ಷದಲ್ಲಿ ಪಿತೃಗಳ ಶ್ರಾದ್ಧಾನ್ನವನ್ನು ಭುಂಜಿಸುವ ಬ್ರಾಹ್ಮಣನು ಒಂದು ಹಗಲು ಮತ್ತು ರಾತ್ರಿಯು ಕಳೆದ ಮೇಲೆ ಶುದ್ಧನಾಗುತ್ತಾನೆ.

ನ ಚ ಸಂಧ್ಯಾಮುಪಾಸೀತ ನ ಚ ಜಾಪ್ಯಂ ಪ್ರವರ್ತಯೇತ್ ।
ನ ಸಂಕಿರೇತ್ ತದನ್ನಂ ಚ ತತಃ ಪೂಯೇತ ಬ್ರಾಹ್ಮಣಃ ॥೧೩॥

ಶ್ರಾದ್ಧ ಭೋಜನವನ್ನು ಮಾಡಿದವನು ಸಂಧ್ಯಾವಂದನೆಯನ್ನು ಮಾಡಬಾರದು. ಜಪವನ್ನು ಮಾಡಬಾರದು. ಬೇರೆ ಆಹಾರವನ್ನು ಸ್ವೀಕರಿಸಿ ಶ್ರಾದ್ಧಾನ್ನವನ್ನು ದೂಷಿಸಬಾರದು. ಹಾಗೆ ಮಾಡಿದರೆ ಪವಿತ್ರನಾಗುತ್ತಾನೆ.

ಇತ್ಯರ್ಥಮಪರಾಹ್ಣೇ ತು ಪಿತೄಣಾಂ ಶ್ರಾದ್ಧಮುಚ್ಯತೇ ।
ಯಥೋಕ್ತಾನಾಂ ಯದಶ್ನೀಯುರ್ಬ್ರಾಹ್ಮಣಾಃ ಪೂರ್ವಕೇತಿತಾಃ ॥೧೪॥

ಅದಕ್ಕಾಗಿಯೇ ಅಪರಾಹ್ಣದಲ್ಲಿ ಪಿತೃಶ್ರಾದ್ಧವು ವಿಧಿಸಲ್ಪಡುತ್ತದೆ (ರಾತ್ರಿ ಭೋಜನವನ್ನು ಮಾಡಬೇಕಾದ ಅವಶ್ಯಕತೆ ಇರುವುದಿಲ್ಲ) ಮತ್ತು ಬ್ರಾಹ್ಮಣರಿಗೆ ಮೊದಲೇ ನಿಮಂತ್ರಣವನ್ನು ಕೊಟ್ಟಿರಬೇಕು. ಆಗ ಅವರು ಹೇಳಿದ ವಿಧಿಯಿಂದ ಭೋಜನವನ್ನು ಮಾಡಬಹುದು.

ಮೃತಕಸ್ಯ ತೃತೀಯಾಹೇ ಬ್ರಾಹ್ಮಣೋ ಯೋಽನ್ನಮಶ್ನುತೇ ।
ಸ ತ್ರಿವೇಲಂ ಸಮುನ್ಮಜ್ಜ್ಯ ದ್ವಾದಶಾಹೇನ ಶುದ್ಧ್ಯತಿ ॥೧೫॥

ಮೃತಕನ ಮನೆಯಲ್ಲಿ ಮೂರನೆಯ ದಿವಸ ಬ್ರಾಹ್ಮಣನು ಊಟವನ್ನು ಮಾಡಿದರೆ ದಿವಸಕ್ಕೆ ಮೂರು ಸಲದಂತೆ ಹನ್ನೆರಡು ದಿವಸ ಸ್ನಾನವನ್ನು ಮಾಡಿ ಶುದ್ಧನಾಗುತ್ತಾನೆ.

ದ್ವಾದಶಾಹೇ ವ್ಯತೀತೇ ತು ಕೃತಶೌಚೋ ವಿಶೇಷತಃ ।
ಬ್ರಾಹ್ಮಣೇಭ್ಯೋ ಹವಿರ್ದತ್ತ್ವಾ ಮುಚ್ಯತೇ ತೇನ ಪಾಪ್ಮನಾ ॥೧೬॥

ಹನ್ನೆರಡು ದಿವಸ ಕಳೆದ ಮೇಲೆ ವಿಶೇಷವಾಗಿ ಶುದ್ಧಿಯನ್ನು ಮಾಡಿಕೊಂಡು, ಬ್ರಾಹ್ಮಣರಿಗೆ ಹವಿಸ್ಸನ್ನು ದಾನ ಮಾಡಿದರೆ ಆ ಪಾಪದಿಂದ ಮುಕ್ತನಾಗುತ್ತಾನೆ.

ಮೃತಸ್ಯ ದಶರಾತ್ರೇಣ ಪ್ರಾಯಶ್ಚಿತ್ತಾನಿ ದಾಪಯೇತ್ ।
ಸಾವಿತ್ರೀಂ ರೈವತೀಮಿಷ್ಟಿಂ ಕೂಷ್ಮಾಂಡಮಘಮರ್ಷಣಮ್ ॥೧೭॥

ಮೃತರ ಮನೆಯಲ್ಲಿ ಹತ್ತುರಾತ್ರಿಯ ಒಳಗೆ ಭೋಜನವನ್ನು ಮಾಡಿದರೆ ಗಾಯತ್ರೀ ಮಂತ್ರ, ರೈವತೀ ಮಂತ್ರದಿಂದ ಹೋಮ, ಕೂಷ್ಮಾಂಡ ಹೋಮ ಮತ್ತು ಅಘಮರ್ಷಣ ಮಂತ್ರದಿಂದ ಪ್ರಾಯಶ್ಚಿತ್ತವನ್ನು ಮಾಡಬೇಕು.

ಮೃತಕಸ್ಯ ತ್ರಿರಾತ್ರೇ ಯಃ ಸಮುದ್ದಿಷ್ಟೇ ಸಮಶ್ನುತೇ ।
ಸಪ್ತ ತ್ರಿಷವಣಂ ಸ್ನಾತ್ವಾ ಪೂತೋ ಭವತಿ ಬ್ರಾಹ್ಮಣಃ ॥೧೮॥

ಸಿದ್ಧಿಮಾಪ್ನೋತಿ ವಿಪುಲಾಮಾಪದಂ ಚೈವ ನಾಪ್ನುಯಾತ್ ॥೧೯॥

ಮೃತಕನ ಮನೆಯಲ್ಲಿ ಮೂರು ರಾತ್ರಿಯ ಒಳಗೆ ಭೋಜನವನ್ನು ಮಾಡುವ ಬ್ರಾಹ್ಮಣನು ಏಳು ದಿವಸ ತ್ರಿಕಾಲ ಸ್ನಾನವನ್ನು ಮಾಡಿ ಪವಿತ್ರನಾಗುತ್ತಾನೆ. ಸಿದ್ಧಿಯನ್ನು ಪಡೆದು ಆಪತ್ತುಗಳನ್ನು ಹೊಂದುವುದಿಲ್ಲ.

ಯಸ್ತು ಶೂದ್ರೈಃ ಸಹಾಶ್ನೀಯಾದ್ ಬ್ರಾಹ್ಮಣೋಽಪ್ಯೇಕಭೋಜನೇ ।
ಅಶೌಚಂ ವಿಧಿವತ್ ತಸ್ಯ ಶೌಚಮತ್ರ ವಿಧೀಯತೇ ॥೨೦॥

ಶೂದ್ರನ ಸಹಪಂಕ್ತಿಯಲ್ಲಿ ಭೋಜನವನ್ನು ಮಾಡುವವನು ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕು. ಕ್ಷತ್ರಿಯ, ವೈಶ್ಯರಿಗೂ ಸಹ ಭಿನ್ನಪಂಕ್ತಿಯಲ್ಲೇ ಭೋಜನವನ್ನು ನೀಡಬೇಕು. ಶೂದ್ರನ ಜೊತೆಯಲ್ಲಿ ಏಕಪಂಕ್ತಿಯಲ್ಲಿ ಭೋಜನವನ್ನು ಮಾಡಿದವನು ಸೂತಕದ ಮೈಲಿಗೆಯು ಕಳೆಯುವವರೆಗೂ ಪ್ರತಿದಿನವೂ ತ್ರಿಕಾಲ ಸ್ನಾನ ಮತ್ತು ಗಾಯತ್ರೀ ಜಪಗಳನ್ನು ಮಾಡಬೇಕು (ಲಕ್ಷಾಲಂಕಾರ).

ಯಸ್ತು ವೈಶ್ಯೈಃ ಸಹಾಶ್ನೀಯಾದ್ ಬ್ರಾಹ್ಮಣೋಽಪ್ಯೇಕಭೋಜನೇ ।
ಸ ವೈ ತ್ರಿರಾತ್ರಂ ದೀಕ್ಷಿತ್ವಾ ಮುಚ್ಯತೇ ತೇನ ಕರ್ಮಣಾ ॥೨೧॥

ವೈಶ್ಯರ ಜೊತೆಯಲ್ಲಿ ಏಕಪಂಕ್ತಿಯಲ್ಲಿ ಭೋಜನವನ್ನು ಮಾಡಿದ ಬ್ರಾಹ್ಮಣನು ಮೂರು ದಿನ ವ್ರತವನ್ನು ಮಾಡಿ (ತ್ರಿಕಾಲ ಸ್ನಾನ ಮತ್ತು ಗಾಯತ್ರೀ ಜಪ) ಆ ಕರ್ಮದಿಂದ ಮುಕ್ತನಾಗುತ್ತಾನೆ.

ಕ್ಷತ್ರಿಯೈಃ ಸಹ ಯೋಽಶ್ನೀಯಾದ್ ಬ್ರಾಹ್ಮಣೋಽಪ್ಯೇಕಭೋಜನೇ ।
ಆಪ್ಲುತಃ ಸಹ ವಾಸೋಭಿಸ್ತೇನ ಮುಚ್ಯೇತ ಪಾಪ್ಮನಾ ॥೨೨॥

ಕ್ಷತ್ರಿಯರ ಜೊತೆಯಲ್ಲಿ ಏಕಪಂಕ್ತಿಯಲ್ಲಿ ಭೋಜನವನ್ನು ಮಾಡಿದ ಬ್ರಾಹ್ಮಣನು ಸಚೇಲಸ್ನಾನವನ್ನು ಮಾಡಿ, ಆ ಪಾಪದಿಂದ ಮುಕ್ತನಾಗುತ್ತಾನೆ.

ಶೂದ್ರಸ್ಯ ತು ಕುಲಂ ಹಂತಿ ವೈಶ್ಯಸ್ಯ ಪಶುಬಾಂಧವಾನ್ ।
ಕ್ಷತ್ರಿಯಸ್ಯ ಶ್ರಿಯಂ ಹಂತಿ ಬ್ರಾಹ್ಮಣಸ್ಯ ಸುವರ್ಚಸಮ್ ॥೨೩॥

ಬ್ರಾಹ್ಮಣ ಪಂಕ್ತಿಯಲ್ಲಿ ಕುಳಿತು ಭೋಜನವನ್ನು ಮಾಡಿದರೆ ಶೂದ್ರನ ಕುಲವು ನಾಶವನ್ನು ಹೊಂದುತ್ತದೆ. ವೈಶ್ಯನು ಪಶು-ಬಾಂಧವರನ್ನು ಕಳೆದುಕೊಳ್ಳುತ್ತಾನೆ. ಕ್ಷತ್ರಿಯನು ಸಂಪತ್ತನ್ನು ಕಳೆದುಕೊಳ್ಳುತ್ತಾನೆ ಮತ್ತು (ಅವರ ಪಂಕ್ತಿಯಲ್ಲಿ ಭೋಜನ ಮಾಡಿದ) ಬ್ರಾಹ್ಮಣನು ತನ್ನ ತೇಜಸ್ಸನ್ನು ಕಳೆದುಕೊಳ್ಳುತ್ತಾನೆ.

ಪ್ರಾಯಶ್ಚಿತ್ತಂ ಚ ಶಾಂತಿಂ ಚ ಜುಹುಯಾತ್ ತೇನ ಮುಚ್ಯತೇ ।
ಸಾವಿತ್ರೀಂ ರೈವತೀಮಿಷ್ಟಿಂ ಕೂಷ್ಮಾಂಡಮಘಮರ್ಷಣಮ್ ॥೨೪॥

ಗಾಯತ್ರೀ ಜಪ, ರೈವತೀ ಮಂತ್ರದಿಂದ ಹೋಮ, ಕೂಷ್ಮಾಂಡ ಮಂತ್ರದಿಂದ ಹೋಮ ಮತ್ತು ಅಘಮರ್ಷಣ ಸೂಕ್ತದಿಂದ ಪಾರಾಯಣರೂಪವಾದ ಪ್ರಾಯಶ್ಚಿತ್ತ ಶಾಂತಿಯನ್ನು ಮಾಡಿದರೆ ಆ ದೋಷದಿಂದ ಮುಕ್ತನಾಗುತ್ತಾನೆ.

ಯದ್ಯುಚ್ಛಿಷ್ಟಮಥಾನ್ಯೋನ್ಯಂ ಸಂಪ್ರಾಶೇನ್ನಾತ್ರ ಸಂಶಯಃ ।
ರೋಚನಾ ಏರಜಾ ರಾತ್ರಿರ್ಮಂಗಲಾಲಂಭನಾನಿ ಚ ॥೨೫॥

ಪರಸ್ಪರ ಉಚ್ಛಿಷ್ಟಗಳನ್ನು ತಿಂದರೆ ಗೋರೋಚನ ಧಾರಣ, ಶುಭ್ರವಸ್ತ್ರಧಾರಣ, ರಾತ್ರಿಯಲ್ಲಿ ದೂರ್ವಾದಿ ಮಂಗಳದ್ರವ್ಯಗಳ ಸ್ಪರ್ಶ-ಇವುಗಳನ್ನು ಮಾಡಬೇಕು (ಲಕ್ಷಾಲಂಕಾರ).

॥ ಇತಿ ಶ್ರೀಮನ್ಮಹಾಭಾರತೇ ಅನುಶಾಸನಪರ್ವಣಿ ದಾನಧರ್ಮಪರ್ವಣಿ
ಪ್ರಾಯಶ್ಚಿತ್ತವಿಧಿರ್ನಾಮ ಸಪ್ತಾಶೀತ್ಯುತ್ತರಶತತಮೋऽಧ್ಯಾಯಃ ॥
ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಎಂಬತ್ತೇಳನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಂಬತ್ತೆಂಟನೆಯ ಅಧ್ಯಾಯ

ದಾನವನ್ನು ಮಾಡಿ ಸದ್ಗತಿಯನ್ನು ಪಡೆದವರ ಕೀರ್ತನೆ

ಯುಧಿಷ್ಠಿರಃ

ದಾನೇನ ವರ್ತತೇತ್ಯಾಹ ತಪಸಾ ಚೈವ ಭಾರತ ।
ತದೇತನ್ಮೇ ಮನೋದುಃಖಂ ವ್ಯಪೋಹ ತ್ವಂ ಪಿತಾಮಹ ।
ಕಿಂಸ್ವಿತ್ಪೃಥಿವ್ಯಾಂ ಹ್ಯೇತನ್ಮೇ ಭವಾನ್ ಶಂಸಿತುಮರ್ಹತಿ ॥೧॥

ಮೃತಕಸ್ಯ ತ್ರಿರಾತ್ರೇ ಯಃ ಸಮುದ್ದಿಷ್ಟೇ ಸಮಶ್ನುತೇ ।
ಸಪ್ತ ತ್ರಿಷವಣಂ ಸ್ನಾತ್ವಾ ಪೂತೋ ಭವತಿ ಬ್ರಾಹ್ಮಣಃ ॥೧೮॥

ಸಿದ್ಧಿಮಾಪ್ನೋತಿ ವಿಪುಲಾಮಾಪದಂ ಚೈವ ನಾಪ್ನುಯಾತ್ ॥೧೯॥

ಮೃತಕನ ಮನೆಯಲ್ಲಿ ಮೂರು ರಾತ್ರಿಯ ಒಳಗೆ ಭೋಜನವನ್ನು ಮಾಡುವ ಬ್ರಾಹ್ಮಣನು ಏಳು ದಿವಸ ತ್ರಿಕಾಲ ಸ್ನಾನವನ್ನು ಮಾಡಿ ಪವಿತ್ರನಾಗುತ್ತಾನೆ. ಸಿದ್ಧಿಯನ್ನು ಪಡೆದು ಆಪತ್ತುಗಳನ್ನು ಹೊಂದುವುದಿಲ್ಲ.

ಯಸ್ತು ಶೂದ್ರೈಃ ಸಹಾಶ್ನೀಯಾದ್ ಬ್ರಾಹ್ಮಣೋಽಪ್ಯೇಕಭೋಜನೇ ।
ಅಶೌಚಂ ವಿಧಿವತ್ ತಸ್ಯ ಶೌಚಮತ್ರ ವಿಧೀಯತೇ ॥೨೦॥

ಶೂದ್ರನ ಸಹಪಂಕ್ತಿಯಲ್ಲಿ ಭೋಜನವನ್ನು ಮಾಡುವವನು ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕು. ಕ್ಷತ್ರಿಯ, ವೈಶ್ಯರಿಗೂ ಸಹ ಭಿನ್ನಪಂಕ್ತಿಯಲ್ಲೇ ಭೋಜನವನ್ನು ನೀಡಬೇಕು. ಶೂದ್ರನ ಜೊತೆಯಲ್ಲಿ ಏಕಪಂಕ್ತಿಯಲ್ಲಿ ಭೋಜನವನ್ನು ಮಾಡಿದವನು ಸೂತಕದ ಮೈಲಿಗೆಯು ಕಳೆಯುವವರೆಗೂ ಪ್ರತಿದಿನವೂ ತ್ರಿಕಾಲ ಸ್ನಾನ ಮತ್ತು ಗಾಯತ್ರೀ ಜಪಗಳನ್ನು ಮಾಡಬೇಕು (ಲಕ್ಷಾಲಂಕಾರ).

ಯಸ್ತು ವೈಶ್ಯೈಃ ಸಹಾಶ್ನೀಯಾದ್ ಬ್ರಾಹ್ಮಣೋಽಪ್ಯೇಕಭೋಜನೇ ।
ಸ ವೈ ತ್ರಿರಾತ್ರಂ ದೀಕ್ಷಿತ್ವಾ ಮುಚ್ಯತೇ ತೇನ ಕರ್ಮಣಾ ॥೨೧॥

ವೈಶ್ಯರ ಜೊತೆಯಲ್ಲಿ ಏಕಪಂಕ್ತಿಯಲ್ಲಿ ಭೋಜನವನ್ನು ಮಾಡಿದ ಬ್ರಾಹ್ಮಣನು ಮೂರು ದಿನ ವ್ರತವನ್ನು ಮಾಡಿ (ತ್ರಿಕಾಲ ಸ್ನಾನ ಮತ್ತು ಗಾಯತ್ರೀ ಜಪ) ಆ ಕರ್ಮದಿಂದ ಮುಕ್ತನಾಗುತ್ತಾನೆ.

ಕ್ಷತ್ರಿಯೈಃ ಸಹ ಯೋಽಶ್ನೀಯಾದ್ ಬ್ರಾಹ್ಮಣೋಽಪ್ಯೇಕಭೋಜನೇ ।
ಆಪ್ಲುತಃ ಸಹ ವಾಸೋಭಿಸ್ತೇನ ಮುಚ್ಯೇತ ಪಾಪ್ಮನಾ ॥೨೨॥

ಕ್ಷತ್ರಿಯರ ಜೊತೆಯಲ್ಲಿ ಏಕಪಂಕ್ತಿಯಲ್ಲಿ ಭೋಜನವನ್ನು ಮಾಡಿದ ಬ್ರಾಹ್ಮಣನು ಸಚೇಲಸ್ನಾನವನ್ನು ಮಾಡಿ, ಆ ಪಾಪದಿಂದ ಮುಕ್ತನಾಗುತ್ತಾನೆ.

ಶೂದ್ರಸ್ಯ ತು ಕುಲಂ ಹಂತಿ ವೈಶ್ಯಸ್ಯ ಪಶುಬಾಂಧವಾನ್ ।
ಕ್ಷತ್ರಿಯಸ್ಯ ಶ್ರಿಯಂ ಹಂತಿ ಬ್ರಾಹ್ಮಣಸ್ಯ ಸುವರ್ಚಸಮ್ ॥೨೩॥

ಬ್ರಾಹ್ಮಣ ಪಂಕ್ತಿಯಲ್ಲಿ ಕುಳಿತು ಭೋಜನವನ್ನು ಮಾಡಿದರೆ ಶೂದ್ರನ ಕುಲವು ನಾಶವನ್ನು ಹೊಂದುತ್ತದೆ. ವೈಶ್ಯನು ಪಶು-ಬಾಂಧವರನ್ನು ಕಳೆದುಕೊಳ್ಳುತ್ತಾನೆ. ಕ್ಷತ್ರಿಯನು ಸಂಪತ್ತನ್ನು ಕಳೆದುಕೊಳ್ಳುತ್ತಾನೆ ಮತ್ತು (ಅವರ ಪಂಕ್ತಿಯಲ್ಲಿ ಭೋಜನ ಮಾಡಿದ) ಬ್ರಾಹ್ಮಣನು ತನ್ನ ತೇಜಸ್ಸನ್ನು ಕಳೆದುಕೊಳ್ಳುತ್ತಾನೆ.

ಪ್ರಾಯಶ್ಚಿತ್ತಂ ಚ ಶಾಂತಿಂ ಚ ಜುಹುಯಾತ್ ತೇನ ಮುಚ್ಯತೇ ।
ಸಾವಿತ್ರೀಂ ರೈವತೀಮಿಷ್ಟಿಂ ಕೂಷ್ಮಾಂಡಮಘಮರ್ಷಣಮ್ ॥೨೪॥

ಗಾಯತ್ರೀ ಜಪ, ರೈವತೀ ಮಂತ್ರದಿಂದ ಹೋಮ, ಕೂಷ್ಮಾಂಡ ಮಂತ್ರದಿಂದ ಹೋಮ ಮತ್ತು ಅಘಮರ್ಷಣ ಸೂಕ್ತದಿಂದ ಪಾರಾಯಣರೂಪವಾದ ಪ್ರಾಯಶ್ಚಿತ್ತ ಶಾಂತಿಯನ್ನು ಮಾಡಿದರೆ ಆ ದೋಷದಿಂದ ಮುಕ್ತನಾಗುತ್ತಾನೆ.

ಯದ್ಯುಚ್ಛಿಷ್ಟಮಥಾನ್ಯೋನ್ಯಂ ಸಂಪ್ರಾಶೇನ್ನಾತ್ರ ಸಂಶಯಃ ।
ರೋಚನಾ ವಿರಜಾ ರಾತ್ರಿರ್ಮಂಗಲಾಲಂಭನಾನಿ ಚ ॥೨೫॥

ಪರಸ್ಪರ ಉಚ್ಛಿಷ್ಟಗಳನ್ನು ತಿಂದರೆ ಗೋರೋಚನ ಧಾರಣ, ಶುಭ್ರವಸ್ತ್ರಧಾರಣ, ರಾತ್ರಿಯಲ್ಲಿ ದೂರ್ವಾದಿ ಮಂಗಳದ್ರವ್ಯಗಳ ಸ್ಪರ್ಶ-ಇವುಗಳನ್ನು ಮಾಡಬೇಕು (ಲಕ್ಷಾಲಂಕಾರ).

॥ ಇತಿ ಶ್ರೀಮನ್ಮಹಾಭಾರತೇ ಅನುಶಾಸನಪರ್ವಣಿ ದಾನಧರ್ಮಪರ್ವಣಿ
ಪ್ರಾಯಶ್ಚಿತ್ತವಿಧಿರ್ನಾಮ ಸಪ್ತಾಶೀತ್ಯುತ್ತರಶತತಮೋऽಧ್ಯಾಯಃ ॥
ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಎಂಬತ್ತೇಳನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಂಬತ್ತೆಂಟನೆಯ ಅಧ್ಯಾಯ

ದಾನವನ್ನು ಮಾಡಿ ಸದ್ಗತಿಯನ್ನು ಪಡೆದವರ ಕೀರ್ತನೆ

ಯುಧಿಷ್ಠಿರಃ

ದಾನೇನ ವರ್ತತೇತ್ಯಾಹ ತಪಸಾ ಚೈವ ಭಾರತ ।
ತದೇತನ್ಮೇ ಮನೋದುಃಖಂ ವ್ಯಪೋಹ ತ್ವಂ ಪಿತಾಮಹ ।
ಕಿಂಸ್ವಿತ್ಪೃಥಿವ್ಯಾಂ ಹ್ಯೇತನ್ಮೇ ಭವಾನ್ ಶಂಸಿತುಮರ್ಹತಿ ॥೧॥

ಯುಧಿಷ್ಠಿರ– ಎಲೈ ಭಾರತನೇ, ದಾನವನ್ನು ಮಾಡಿ, ತಪಸ್ಸನ್ನು ಮಾಡಿ ಎಂದು ಹೇಳುತ್ತಾರೆ. ಈ ವಿಷಯದಲ್ಲಿ ನನ್ನ ಮನೋದುಃಖವನ್ನು ಪರಿಹರಿಸು. ಎಲೈ ಪಿತಾಮಹನೇ, ಭೂಮಿಯಲ್ಲಿ ಯಾರು, ಏನು ದಾನವನ್ನು ಮಾಡಿ, ಏನನ್ನು ಸಂಪಾದಿಸಿದರು ಎಂದು ನನಗೆ ಹೇಳು.

ಭೀಷ್ಮಃ

ಶೃಣು ಯೈರ್ಧರ್ಮನಿರತೈಸ್ತಪಸಾ ಭಾವಿತಾತ್ಮಭಿಃ ।
ಲೋಕಾ ಹ್ಯಸಂಶಯಂ ಪ್ರಾಪ್ತಾ ದಾನಪುಣ್ಯರತೈರ್ನೃಪೈಃ ॥೨॥

ಭೀಷ್ಮ– ಧರ್ಮನಿರತರಾದವರು, ತಪಸ್ಸಿನಿಂದ ಶುದ್ಧಿಯನ್ನು ಪಡೆದವರು, ದಾನ ಮತ್ತು ಪುಣ್ಯಸಂಪಾದನೆಯಲ್ಲಿ ರತರಾದ ರಾಜರು ನಿಸ್ಸಂಶಯವಾಗಿ ಎಂತಹ ಲೋಕಗಳನ್ನು ಹೊಂದಿದರು ಎಂದು ಕೇಳು.

ಸತೃತಶ್ಚ ತಥಾऽऽತ್ರೇಯಃ ಶಿಷ್ಯೇಭ್ಯೋ ಬ್ರಹ್ಮ ನಿರ್ಗುಣಮ್ ।
ಉಪದಿಶ್ಯ ತದಾ ರಾಜನ್ ಗತೋ ಲೋಕಾನನುತ್ತಮಾನ್ ॥೩॥

ಎಲೈ ರಾಜನೇ, ಸತೃತರಾದ ಆತ್ರೇಯರು ಶಿಷ್ಯರಿಗೆ ಗುಣಾತೀತನಾದ ಪರಬ್ರಹ್ಮನನ್ನು ಉಪದೇಶ ಮಾಡಿ, ಶ್ರೇಷ್ಠವಾದ ಲೋಕಗಳನ್ನು ಹೊಂದಿದರು.

ಶಿಬಿರೌಶೀನರಃ ಪ್ರಾಣಾನ್ ಪ್ರಿಯಸ್ಯ ತನಯಸ್ಯ ಚ ।
ಬ್ರಾಹ್ಮಣಾರ್ಥಮುಪಾಕೃತ್ಯ ನಾಕಪೃಷ್ಠಮಿತೋ ಗತಃ ॥೪॥

ಔಶೀನರನಾದ ಶಿಬಿಯು ಬ್ರಾಹ್ಮಣರ ಸಲುವಾಗಿ ತನ್ನ ಪ್ರಿಯಪುತ್ರನ ಪ್ರಾಣವನ್ನು ಕೊಟ್ಟು ಸ್ವರ್ಗಕ್ಕೆ ಹೋದನು.

ಪ್ರತರ್ದನಃ ಕಾಶಿಪತಿಃ ಪ್ರದಾಯ ತನಯಂ ಸ್ವಕಮ್ ।
ಬ್ರಾಹ್ಮಣಾಯಾತುಲಾಂ ಕೀರ್ತಿಮಿಹ ಚಾಮುತ್ರ ಚಾಶ್ನುತೇ ॥೫॥

ಕಾಶೀಪತಿಯಾದ ಪ್ರತರ್ದನನು ಬ್ರಾಹ್ಮಣರಿಗೆ ತನ್ನ ಪುತ್ರನನ್ನು ದಾನ ಮಾಡಿ ಈ ಲೋಕದಲ್ಲಿ ಮತ್ತು ಪರಲೋಕದಲ್ಲಿ ಅತುಲವಾದ ಕೀರ್ತಿಯನ್ನು ಹೊಂದಿದನು.

ರಂತಿದೇವಶ್ಚ ಸಾಂಕೃತ್ಯೋ ವಸಿಷ್ಠಾಯ ಮಹಾತ್ಮನೇ ।
ಅರ್ಘ್ಯಂ ಪ್ರದಾಯ ವಿಧಿವಲ್ಲೇಭೇ ಲೋಕಾನನುತ್ತಮಾನ್ ॥೬॥

ಸಂಕೃತಿಯ ಪುತ್ರನಾದ ರಂತಿದೇವನು ಮಹಾತ್ಮರಾದ ವಸಿಷ್ಠರಿಗೆ ವಿಧಿ ಪೂರ್ವಕವಾಗಿ ಅರ್ಘ್ಯಪ್ರದಾನವನ್ನು ಮಾಡಿ ಉತ್ತಮ ಲೋಕಗಳನ್ನು ಪಡೆದನು.

ದಿವ್ಯಂ ಶತಶಲಾಕಂ ಚ ಯಜ್ಞಾರ್ಥಂ ಕಾಂಚನಂ ಶುಭಮ್ ।
ಛತ್ರಂ ದೇವಾವೃಧೋ ದತ್ತ್ವಾ ಬ್ರಾಹ್ಮಣಾಯಾಸ್ಥಿತೋ ದಿವಮ್ ॥೭॥

ದೇವಾವೃಧ ರಾಜನು ಯಜ್ಞದ ಸಲುವಾಗಿ ಬ್ರಾಹ್ಮಣರಿಗೆ ನೂರು ಕಡ್ಡಿಗಳಿರುವ ದಿವ್ಯವಾದ ಶುಭ್ರವಾದ ಸುವರ್ಣಮಯವಾದ ಛತ್ರವನ್ನು ಕೊಟ್ಟು ಸ್ವರ್ಗಕ್ಕೆ ಹೋದನು.

ಭಗವಾನಂಬರೀಷಶ್ಚ ಬ್ರಾಹ್ಮಣಾಯಾಮಿತೌಜಸೇ ।
ಪ್ರದಾಯ ಸಕಲಂ ರಾಷ್ಟ್ರಂ ಸುರಲೋಕಮವಾಪ್ತವಾನ್ ॥೮॥

ಪೂಜ್ಯನಾದ ಅಂಬರೀಷನು ಅಮಿತ ತೇಜಸ್ವಿಯಾದ ಬ್ರಾಹ್ಮಣನಿಗೆ ತನ್ನ ಸಕಲ ರಾಷ್ಟ್ರವನ್ನೂ ಕೊಟ್ಟು ಸುರಲೋಕವನ್ನು ಹೊಂದಿದನು.

ಸಾವಿತ್ರಃ ಕುಂಡಲಂ ದಿವ್ಯಂ ಯಾನಂ ಚ ಜನಮೇಜಯಃ ।
ಬ್ರಾಹ್ಮಣಾಯ ಚ ಗಾ ದತ್ತ್ವಾ ಗತೋ ಲೋಕಾನನುತ್ತಮಾನ್ ॥೯॥

ಸಾವಿತ್ರನು ದಿವ್ಯವಾದ ಕುಂಡಲವನ್ನು, ಜನಮೇಜಯನು ದಿವ್ಯವಾದ ವಾಹನ ಮತ್ತು ಭೂಮಿಯನ್ನೂ ಬ್ರಾಹ್ಮಣನಿಗೆ ಕೊಟ್ಟು ಶ್ರೇಷ್ಠವಾದ ಲೋಕವನ್ನು ಹೊಂದಿದರು.

ವೃಷಾದರ್ಭಿಶ್ಚ ರಾಜರ್ಷೀ ರತ್ನಾನಿ ವಿವಿಧಾನಿ ಚ ।
ರಮ್ಯಾಂಶ್ಚಾವಸಥಾನ್ ದತ್ತ್ವಾ ದ್ವಿಜೇಭ್ಯೋ ದಿವಮಾಗತಃ ॥೧೦॥

ರಾಜರ್ಷಿಯಾದ ವೃಷಾದರ್ಭಿಯು ವಿವಿಧವಾದ ರತ್ನಗಳನ್ನೂ, ಮನೋಹರವಾದ ಗೃಹಗಳನ್ನೂ ಬ್ರಾಹ್ಮಣರಿಗೆ ದಾನ ಮಾಡಿ ಸ್ವರ್ಗಕ್ಕೆ ಹೋದನು.

ನಿಮೀ ರಾಷ್ಟ್ರಂ ಚ ವೈದರ್ಭಿಃ ಕನ್ಯಾಂ ದತ್ತ್ವಾ ಮಹಾತ್ಮನೇ ।
ಅಗಸ್ತ್ಯಾಯ ಗತಃ ಸ್ವರ್ಗಂ ಸಪುತ್ರಪಶುಬಾಂಧವಃ ॥೧೧॥

ವಿದರ್ಭಪುತ್ರನಾದ ನಿಮಿಯು ಮಹಾತ್ಮರಾದ ಅಗಸ್ತ್ಯರಿಗೆ ರಾಷ್ಟ್ರವನ್ನೂ, ಕನ್ಯೆಯನ್ನೂ ದಾನ ಮಾಡಿ ಪುತ್ರ-ಪಶು-ಬಾಂಧವರ ಸಹಿತವಾಗಿ ಸ್ವರ್ಗಕ್ಕೆ ಹೋದನು.

ಜಾಮದಗ್ನ್ಯಶ್ಚ ವಿಪ್ರಾಯ ಭೂಮಿಂ ದತ್ತ್ವಾ ಮಹಾಯಶಾಃ ।
ರಾಮೋಽಕ್ಷಯಾಂಸ್ತಥಾ ಲೋಕಾನ್ ಜಗಾಮ ಮನಸೋಽಧಿಕಾನ್ ॥

ಜಮದಗ್ನಿ ಪುತ್ರರಾದ, ಮಹಾಕೀರ್ತಿವಂತರಾದ ಪರಶುರಾಮರು ಬ್ರಾಹ್ಮಣರಿಗೆ ಭೂಮಿಯನ್ನು ದಾನ ಮಾಡಿ ಮನಸ್ಸಿನಿಂದ ಚಿಂತಿಸಲೂ ಅಸಾಧ್ಯವಾದ, ಶ್ರೇಷ್ಠವಾದ ಲೋಕಗಳನ್ನು ಹೊಂದಿದರು.

ಅವರ್ಷತಿ ಚ ಪರ್ಜನ್ಯೇ ಸರ್ವಭೂತಾನಿ ದೇವರಾಟ್ ।
ವಸಿಷ್ಠೋ ಜೀವಯಾಮಾಸ ಯೇನ ಯಾತೋಽಕ್ಷಯಾಂ ಗತಿಮ್ ॥

ಪರ್ಜನ್ಯನು ಮಳೆಯನ್ನು ಸುರಿಸದಿದ್ದಾಗ ದೇವರಾಜರಾದ ವಸಿಷ್ಠರು (ಮಳೆಯನ್ನು ಸುರಿಸಿ) ಎಲ್ಲ ಪ್ರಾಣಿಗಳನ್ನೂ ಜೀವಿಸುವಂತೆ ಮಾಡಿ, ಆ ಪುಣ್ಯದಿಂದ ಅಕ್ಷಯವಾದ ಗತಿಯನ್ನು ಪಡೆದರು.

ರಾಮೋ ದಾಶರಥಿಶ್ಚೈವ ಹುತ್ವಾ ಯಜ್ಞೇಷು ವೈ ವಸು ।
ಸ ಗತೋ ಹ್ಯಕ್ಷಯಾಲ್ಲೋಕಾನ್ ಯಸ್ಯ ಲೋಕೇ ಮಹದ್ಯಶಃ ॥೧೪॥

ದಾಶರಥಿ ರಾಮನು ಯಜ್ಞಗಳಲ್ಲಿ ಹೋಮವನ್ನು ಮಾಡಿ, ಸಂಪತ್ತೆಲ್ಲವನ್ನೂ ದಾನ ಮಾಡಿ ಅಕ್ಷಯಲೋಕವನ್ನು ಹೊಂದಿದನು. ಅವನ ಮಹಾಕೀರ್ತಿಯು ಈಗಲೂ ಲೋಕದಲ್ಲಿದೆ.

ಕಕ್ಷಸೇನಶ್ಚ ರಾಜರ್ಷಿರ್ವಸಿಷ್ಠಾಯ ಮಹಾತ್ಮನೇ ।
ನ್ಯಾಸಂ ಯಥಾವತ್ ಸನ್ನ್ಯಸ್ಯ ಜಗಾಮ ಸುಮಹಾಯಶಾಃ ॥೧೫॥

ರಾಜರ್ಷಿಯಾದ ಕಕ್ಷಸೇನನು ಮಹಾತ್ಮರಾದ ವಸಿಷ್ಠರಿಗೆ ನ್ಯಾಸವನ್ನು (ರಕ್ಷಣೆಗೆ ಇಟ್ಟುಕೊಂಡ ವಸ್ತು) ಸರಿಯಾಗಿ ಹಿಂದಿರುಗಿಸಿ ಮಹಾಕೀರ್ತಿಯನ್ನು ಪಡೆದನು.

ಕರಂಧಮಸ್ಯ ಪೌತ್ರಸ್ತು ಮರುತ್ತೋಽವಿಕ್ಷಿತಃ ಸುತಃ ।
ಕನ್ಯಾಮಾಂಗಿರಸೇ ದತ್ತ್ವಾ ದಿವಾಮಾಶು ಜಗಾಮ ಸಃ ॥೧೬॥

ಕರಂಧಮನ ಪೌತ್ರನೂ, ಅವಿಕ್ಷಿತನ ಪುತ್ರನೂ ಆದ ಮರುತ್ತನು ಅಂಗಿರಸರಿಗೆ ಕನ್ಯಾದಾನವನ್ನು ಮಾಡಿ ಶೀಘ್ರವಾಗಿ ಸ್ವರ್ಗಕ್ಕೆ ಹೋದನು.

ಬ್ರಹ್ಮದತ್ತಶ್ಚ ಪಾಂಚಾಲ್ಯೋ ರಾಜಾ ಧರ್ಮಭೃತಾಂವರಃ ।
ನಿಧಿಂ ಶಂಖಿಮನುಜ್ಞಾಪ್ಯ ಜಗಾಮ ಪರಮಾಂ ಗತಿಮ್ ॥೧೭॥

ಪಾಂಚಾಲ ದೇಶದ ರಾಜನೂ, ಧರ್ಮಿಷ್ಠರಲ್ಲಿ ಶ್ರೇಷ್ಠನೂ ಆದ ಬ್ರಹ್ಮದತ್ತ ರಾಜನು ಕುಬೇರನಿಂದ ಶಂಖನಿಧಿಯನ್ನು ಪಡೆದು, ಅದನ್ನು ಬ್ರಾಹ್ಮಣರಿಗೆ ಕೊಟ್ಟು ಶ್ರೇಷ್ಠವಾದ ಗತಿಯನ್ನು ಹೊಂದಿದನು (ಲಕ್ಷಾಲಂಕಾರ).

ರಾಜಾ ಮಿತ್ರಸಹಶ್ಚೈವ ವಸಿಷ್ಠಾಯ ಮಹಾತ್ಮನೇ ।
ಮದಯಂತೀಂ ಪ್ರಿಯಾಂ ಭಾರ್ಯಾಂ ದತ್ತ್ವಾ ಚ ತ್ರಿದಿವಂ ಗತಃ ॥೧೮॥

ಮಿತ್ರಸಹ ರಾಜನು ಮಹಾತ್ಮರಾದ ವಸಿಷ್ಠರಿಗೆ ತಮ್ಮ ಪ್ರಿಯಪತ್ನಿಯಾದ ಮದಯಂತಿಯನ್ನು ಕೊಟ್ಟು ಸ್ವರ್ಗಕ್ಕೆ ಹೋದನು.

ಮನೋಃ ಪುತ್ರಶ್ಚ ಸುದ್ಯುಮ್ನೋ ಲಿಖಿತಾಯ ಮಹಾತ್ಮನೇ ।
ದಂಡಮುದ್ಧೃತ್ಯ ಧರ್ಮೇಣ ಗತೋ ಲೋಕಾನನುತ್ತಮಾನ್ ॥೧೯॥

ಮನುವಿನ ಪುತ್ರನಾದ ಸುದ್ಯುಮ್ನನು ಮಹಾತ್ಮರಾದ ಲಿಖಿತರಿಗೆ ವಿಧಿಸಿದ ದಂಡವನ್ನು ಹಿಂದೆ ತೆಗೆದುಕೊಂಡು, ಆ ಧರ್ಮದಿಂದ ಶ್ರೇಷ್ಠವಾದ ಲೋಕಗಳಿಗೆ ಹೋದನು.

ಸಹಸ್ರಚಿತ್ಯೋ ರಾಜರ್ಷಿಃ ಪ್ರಾಣಾನಿಷ್ಟಾನ್ ಮಹಾಯಶಾಃ ।
ಬ್ರಾಹ್ಮಣಾರ್ಥೇ ಪರಿತ್ಯಜ್ಯ ಗತೋ ಲೋಕಾನನುತ್ತಮಾನ್ ॥೨೦॥

ಮಹಾಕೀರ್ತಿವಂತನೂ, ರಾಜರ್ಷಿಯೂ ಆದ ಸಹಸ್ರಚಿತ್ತಿಯು ಇಷ್ಟವಾದ ತನ್ನ ಪ್ರಾಣಗಳನ್ನು ಬ್ರಾಹ್ಮಣರ ಸಲುವಾಗಿ ಪರಿತ್ಯಾಗ ಮಾಡಿ, ಶ್ರೇಷ್ಠವಾದ ಲೋಕಗಳನ್ನು ಪಡೆದನು.

ಸರ್ವಕಾಮೈಶ್ಚ ಸಂಪೂರ್ಣಂ ದತ್ತ್ವಾ ವೇಶ್ಮ ಹಿರಣ್ಮಯಮ್ ।
ಮೌದ್ಗಲ್ಯಾಯ ಗತಃ ಸ್ವರ್ಗಂ ಶತದ್ಯುಮ್ನೋ ಮಹೀಪತಿಃ ॥೨೧॥

ಶತದ್ಯುಮ್ನರಾಜನು ಮೌದ್ಗಲ್ಯರಿಗೆ ಸರ್ವಕಾಮ ಸಂಪೂರ್ಣವಾದ, ಸುವರ್ಣಮಯವಾದ ಗೃಹವನ್ನು ದಾನ ಮಾಡಿ ಸ್ವರ್ಗಕ್ಕೆ ಹೋದನು.

ಭಕ್ಷ್ಯಭೋಜ್ಯಸ್ಯ ಚ ಕೃತಾನ್ ರಾಶಯಃ ಪರ್ವತೋಪಮಾನ್ ।
ಶಾಂಡಿಲ್ಯಾಯ ಪುರಾ ದತ್ತ್ವಾ ಸಮನ್ಯುರ್ದಿವಮಾಸ್ಥಿತಃ ॥೨೨॥

ಸಮನ್ಯು ರಾಜನು ಪರ್ವತಗಳಂತಹ ಭಕ್ಷ್ಯ-ಭೋಜ್ಯಗಳ ರಾಶಿಗಳನ್ನು ಶಾಂಡಿಲ್ಯರಿಗೆ ಕೊಟ್ಟು ಸ್ವರ್ಗಕ್ಕೆ ಹೋದನು.

ನಾಮ್ನಾ ಚ ದ್ಯುತಿಮಾನ್ ನಾಮ ಸಾಲ್ವರಾಜೋ ಮಹಾದ್ಯುತಿಃ ।
ದತ್ತ್ವಾ ರಾಜ್ಯಮೃಚೀಕಾಯ ಗತೋ ಲೋಕಾನನುತ್ತಮಾನ್ ॥೨೩॥

ದ್ಯುತಿಮಾನ್ ಎಂಬ ಮಹಾಕಾಂತಿಯುಳ್ಳ ಸಾಲ್ವರಾಜನು ಋಚೀಕರಿಗೆ ರಾಜ್ಯವನ್ನು ದಾನ ಮಾಡಿ ಶ್ರೇಷ್ಠವಾದ ಲೋಕಗಳನ್ನು ಹೊಂದಿದನು.

ಮದಿರಾಶ್ವಶ್ಚ ರಾಜರ್ಷಿರ್ದತ್ತ್ವಾ ಕನ್ಯಾಂ ಸುಮಧ್ಯಮಾಮ್ ।
ಹಿರಣ್ಯಹಸ್ತಾಯ ಗತೋ ಲೋಕಾನ್ ದೇವೈರಧಿಷ್ಠಿತಾನ್ ॥೨೪॥

ಮದಿರಾಶ್ವನೆಂಬ ರಾಜರ್ಷಿಯು ಸುಮಧ್ಯಮೆಯಾದ (ಸುಂದರಿಯಾದ) ತನ್ನ ಪುತ್ರಿಯನ್ನು ಹಿರಣ್ಯಹಸ್ತ ಋಷಿಗಳಿಗೆ ಕೊಟ್ಟು ದೇವತೆಗಳು ವಾಸ ಮಾಡುವ ಲೋಕಕ್ಕೆ ಹೋದನು.

ಲೋಮಪಾದಶ್ಚ ರಾಜರ್ಷಿಃ ಶಾಂತಾಂ ದತ್ತ್ವಾ ಸುತಾಂ ಪ್ರಭುಃ ।
ಋಷ್ಯಶೃಂಗಾಯ ವಿಪುಲೈಃ ಸರ್ವೈಃ ಕಾಮೈರಯುಜ್ಯತ ॥೨೫॥

ಲೋಮಪಾದನೆಂಬ ರಾಜರ್ಷಿಯು ತನ್ನ ಮಗಳಾದ ಶಾಂತಳನ್ನು ಋಷ್ಯಶೃಂಗರಿಗೆ ದಾನ ಮಾಡಿ ವಿಪುಲವಾಗಿ ಸರ್ವಕಾಮಗಳನ್ನೂ ಪಡೆದನು.

ಕೌತ್ಸಾಯ ದತ್ತ್ವಾ ಕನ್ಯಾಂ ತು ಹಂಸೀಂ ನಾಮ ಯಶಸ್ವಿನೀಮ್ ।
ಗತೋಽಕ್ಷಯಾನತೋ ಲೋಕಾನ್ ರಾಜರ್ಷಿಶ್ಚ ಭಗೀರಥಃ ॥೨೬॥

ರಾಜರ್ಷಿಯಾದ ಭಗೀರಥನು ಕೌತ್ಸರಿಗೆ ಕೀರ್ತಿವಂತಳಾದ ತನ್ನ ಮಗಳಾದ ಹಂಸಿಯನ್ನು ದಾನ ಮಾಡಿ ಅದರಿಂದ ಅಕ್ಷಯಲೋಕಗಳನ್ನು ಹೊಂದಿದನು.

ದತ್ತ್ವಾ ಶತಸಹಸ್ರಂ ತು ಗವಾಂ ರಾಜಾ ಭಗೀರಥಃ ।
ಸವತ್ಸಾನಾಂ ಕಹೋಳಾಯ ಗತೋ ಲೋಕಾನನುತ್ತಮಾನ್ ॥೨೭॥

ಭಗೀರಥ ರಾಜನು ಕಹೋಳರಿಗೆ ವತ್ಸಸಹಿತವಾದ ಲಕ್ಷ ಗೋವುಗಳನ್ನು ದಾನ ಮಾಡಿ ಶ್ರೇಷ್ಠವಾದ ಲೋಕಗಳನ್ನು ಹೊಂದಿದನು.

ಏತೇ ಚಾನ್ಯೇ ಚ ಬಹವೋ ದಾನೇನ ತಪಸಾ ಚ ಹ ।
ಯುಧಿಷ್ಠಿರ ಗತಾಃ ಸ್ವರ್ಗಂ ನಿವರ್ತಂತೇ ಪುನಃಪುನಃ ॥೨೮॥

ಎಲೈ ಯುಧಿಷ್ಠಿರನೇ, ಇವರೂ ಮತ್ತು ಇನ್ನೂ ಅನೇಕರೂ ತಪಸ್ಸನ್ನು ಮಾಡಿ ದಾನವನ್ನು ಮಾಡಿ ಸ್ವರ್ಗಕ್ಕೆ ಹೋಗಿದ್ದಾರೆ. ಅವರು ಪುನಃ ಪುನಃ ಭೂಮಿಗೆ ಬರುತ್ತಾರೆ.

ತೇಷಾಂ ಪ್ರತಿಷ್ಠಿತಾ ಕೀರ್ತಿರ್ಯಾವತ್‌ಸ್ಥಾಸ್ಯತಿ ಮೇದಿನೀ ।
ಗೃಹಸ್ಥೈರ್ದಾನತಪಸಾ ಯೈರ್ಲೋಕಾ ವೈ ವಿನಿರ್ಜಿತಾಃ ॥೨೯॥

ಯಾವ ಗೃಹಸ್ಥರು ದಾನ ಮತ್ತು ತಪಸ್ಸುಗಳಿಂದ ಉತ್ತಮ ಲೋಕಗಳನ್ನು ಜಯಿಸಿದರೋ ಅಂತಹವರ ಕೀರ್ತಿಯು ಭೂಮಿಯು ಇರುವವರೆಗೂ ಭೂಮಿಯಲ್ಲಿ ಪ್ರತಿಷ್ಠಿತವಾಗಿರುತ್ತದೆ.

ಶಿಷ್ಟಾನಾಂ ಚರಿತಂ ಹ್ಯೇತತ್ ಕೀರ್ತಿತಂ ಮೇ ಯುಧಿಷ್ಠಿರ ।
ದಾನಯಜ್ಞಪ್ರಜಾಸರ್ಗೈರೇತೇ ಹಿ ದಿವಮಾಸ್ಥಿತಾಃ ॥೩೦॥

ಎಲೈ ಯುಧಿಷ್ಠಿರನೇ, ಶಿಷ್ಟರಾದವರ ಈ ಚರಿತ್ರೆಯನ್ನು ನಾನು ಹೇಳಿದ್ದೇನೆ. ಇವರು ದಾನದಿಂದ, ಯಜ್ಞಗಳಿಂದ ಮತ್ತು ಸಂತತಿಯಿಂದ ಸ್ವರ್ಗವನ್ನು ಹೊಂದಿದವರು.

ದತ್ತ್ವಾ ತು ಸತತಂ ತೇಽಸ್ತು ಕೌರವಾಣಾಂ ಧುರಂಧರ ।
ದಾನಯಜ್ಞಕ್ರಿಯಾಯುಕ್ತಾ ಬುದ್ಧಿರ್ಧರ್ಮೋಪಚಾಯಿನೀ ॥೩೧॥

ಎಲೈ ಕೌರವರ ಧುರಂಧರನೇ, ನಿನಗೆ ಸತತವಾದ ದಾನಗಳನ್ನು ಮಾಡಿ ಧರ್ಮವನ್ನು ಹೆಚ್ಚಿಸುವ ದಾನಯಜ್ಞಕ್ರಿಯಾ ವಿಷಯವಾದ ಬುದ್ಧಿಯು ಉಂಟಾಗಲಿ.

ಯತ್ರ ತೇ ನೃಪಶಾರ್ದೂಲ ಸಂದೇಹೋ ವೈ ಭವಿಷ್ಯತಿ ।
ಶ್ವಃ ಪ್ರಭಾತೇ ಹಿ ವಕ್ಷ್ಯಾಮಿ ಸಂಧ್ಯಾ ಹಿ ಸಮುಪಸ್ಥಿತಾ ॥೩೨॥

ಎಲೈ ರಾಜಶಾರ್ದೂಲನೇ, ನಿನಗೆ ಬೇರೆ ಸಂಶಯವಿದ್ದರೆ ಅದನ್ನು ನಾಳೆಯ ಪ್ರಾತಃಕಾಲದಲ್ಲಿ ಹೇಳುವೆನು. ಈಗ ಸಂಧ್ಯಾಸಮಯವು ಪ್ರಾಪ್ತವಾಗುತ್ತಿದೆ.

ಇತಿ ಶ್ರೀಮನ್ಮಹಾಭಾರತೇ ಅನುಶಾಸನಪರ್ವಣಿ ದಾನಧರ್ಮಪ್ರಶಂಸಾ ನಾಮ ಅಷ್ಟಾಶೀತ್ಯುತ್ತರಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಎಂಬತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಂಬತ್ತೊಂಬತ್ತನೆಯ ಅಧ್ಯಾಯ

ದಾನದ ಪ್ರಭೇದಗಳು

ಯುಧಿಷ್ಠಿರಃ

ಶ್ರುತಂ ಮೇ ಭವತಸ್ತಾತ ಸತ್ಯವ್ರತಪರಾಕ್ರಮ ।
ದಾನಧರ್ಮೇಣ ಮಹತಾ ಯೇ ಪ್ರಾಪ್ತಾಸ್ತ್ರಿದಿವಂ ನೃಪಾಃ ॥೧॥

ಯುಧಿಷ್ಠಿರ– ಸತ್ಯವ್ರತಪರಾಕ್ರಮನೇ, ಪ್ರೀತಿಪಾತ್ರನೇ, ನಾನು ಮಹಾದಾನ ಧರ್ಮವನ್ನು ಮಾಡಿ ಸ್ವರ್ಗವನ್ನು ಸೇರಿದ ರಾಜರನ್ನು ಕೇಳಿದೆನು.

ಇಮಾಂಸ್ತು ಶ್ರೋತುಮಿಚ್ಛಾಮಿ ಧರ್ಮಾನ್ ಧರ್ಮಭೃತಾಂವರ ।
ದಾನಂ ಕತಿವಿಧಂ ದೇಯಂ ಕಿಂ ತಸ್ಯ ಚ ಫಲಂ ಲಭೇತ್ ॥೨॥

ಧರ್ಮಿಷ್ಠರಲ್ಲಿ ಶ್ರೇಷ್ಠನೇ, ದಾನವು ಎಷ್ಟು ವಿಧ? ಏನನ್ನು ಕೊಡಬೇಕು? ಅದರ ಫಲವೇನು ಎಂದು ಈ ಧರ್ಮಗಳನ್ನು ಕೇಳಲು ಬಯಸುತ್ತೇನೆ.

ಕಥಂ ಕೇಭ್ಯಶ್ಚ ಧರ್ಮ್ಯಂ ಚ ದಾನಂ ದಾತವ್ಯಮಿಷ್ಯತೇ ।
ಕೈಃ ಕಾರಣೈಃ ಕತಿವಿಧಂ ಶ್ರೋತುಮಿಚ್ಛಾಮಿ ತತ್ತ್ವತಃ ॥೩॥

ಧರ್ಮಕ್ಕೆ ಅನುಗುಣವಾದ ದಾನವನ್ನು ಹೇಗೆ, ಯಾರಿಗೆ, ಯಾವ ಕಾರಣಗಳಿಂದ ಮಾಡಬೇಕು? ಅದರಲ್ಲಿ ಎಷ್ಟು ವಿಧ? ಎಂದು ಸರಿಯಾಗಿ ಕೇಳಲು ಬಯಸುತ್ತೇನೆ.

ಭೀಷ್ಮಃ

ಶೃಣು ತತ್ತ್ವೇನ ಕೌಂತೇಯ ದಾನಂ ಪ್ರತಿ ಮಮಾನಘ ।
ಯಥಾ ದಾನಂ ಪ್ರದಾತವ್ಯಂ ಸರ್ವವರ್ಣೇಷು ಭಾರತ ॥೪॥

ಭೀಷ್ಮ- ಕೌಂತೇಯನೇ, ಅನಘನೇ, ದಾನದ ವಿಷಯದಲ್ಲಿ ಸರ್ವ ವರ್ಣದವರಿಗೂ ಹೇಗೆ ದಾನವನ್ನು ಮಾಡಬೇಕೆಂಬುದನ್ನು ಸರಿಯಾಗಿ ಕೇಳು.

ಧರ್ಮಾದರ್ಥಾದ್ ಭಯಾತ್ ಕಾಮಾತ್ ಕಾರುಣ್ಯಾದಿತಿ ಭಾರತ ।
ದಾನಂ ಪಂಚವಿಧಂ ಜ್ಞೇಯಂ ಕಾರಣೈರ್ಯೈರ್ನಿಬೋಧ ತತ್ ॥೫॥

ಎಲೈ ಭಾರತನೇ, ಧರ್ಮದಿಂದ, ಅರ್ಥದಿಂದ, ಭಯದಿಂದ, ಕಾಮದಿಂದ ಮತ್ತು ಕರುಣೆಯಿಂದ ಎಂದು ಹೀಗೆ ದಾನದ ಕಾರಣವು ಐದು ವಿಧವಾಗಿರುವುದರಿಂದ ದಾನವೂ ಐದು ವಿಧವಾದುದೆಂದು ತಿಳಿಯಬೇಕು.

ಇಹ ಕೀರ್ತಿಮವಾಪ್ನೋತಿ ಪ್ರೇತ್ಯ ಚಾನುತ್ತಮಂ ಸುಖಮ್ ।
ಇತಿ ದಾನಂ ಪ್ರದಾತವ್ಯಂ ಬ್ರಾಹ್ಮಣೇಭ್ಯೋಽನಸೂಯತಾ ॥೬॥

ಈ ಲೋಕದಲ್ಲಿ ಕೀರ್ತಿಯನ್ನೂ, ಪರಲೋಕದಲ್ಲಿ ಸುಖವನ್ನೂ ಕೊಡುವುದೆಂದು ಬ್ರಾಹ್ಮಣರಿಗೆ ಅಸೂಯಾ ರಹಿತನಾಗಿ ದಾನವನ್ನು ಮಾಡಬೇಕು (ಇದು ಧರ್ಮದ ಕಾರಣದಿಂದ ಮಾಡಿದ ದಾನ).

ದದಾತಿ ವಾ ದಾಸ್ಯತಿ ವಾ ಮಹ್ಯಂ ದತ್ತಮನೇನ ವಾ ।
ಇತ್ಯರ್ಥಿಭ್ಯೋ ನಿಶಮ್ಯೈವ ಸರ್ವಂ ದಾತವ್ಯಮರ್ಥಿನೇ ॥೭॥

ಇವನು ನನಗೆ ದಾನವನ್ನು ಮಾಡುತ್ತಾನೆ, ಮುಂದೆ ಮಾಡುವನು ಅಥವಾ ಹಿಂದೆ ಮಾಡಿದ್ದಾನೆ ಎಂದು ತಿಳಿದು ದಾನವನ್ನು ಪ್ರಾರ್ಥಿಸುವವರಿಂದ ಅವನ ಪರಿಸ್ಥಿತಿಯನ್ನು ತಿಳಿದು ಅಂತಹ ದ್ರವ್ಯದಾನವನ್ನು ಮಾಡಬೇಕು (ಇದು ಅರ್ಥ ಕಾರಣದಿಂದ ಮಾಡಿದ ದಾನ).

ನಾಸ್ಯಾಹಂ ನ ಮದೀಯೋಽಯಂ ಪಾಪಂ ಕುರ್ಯಾದ್ ವಿಮಾನಿತಃ ।
ಇತಿ ದದ್ಯಾದ್ ಭಯಾದೇವ ದೃಢಂ ಮೂಢಾಯ ಪಂಡಿತಃ ॥೮॥

ಇವನು ನನ್ನವನಲ್ಲ, ನಾನೂ ಇವನಿಗೆ ಸೇರಿದವನಲ್ಲ. ಆದರೆ ಕೊಡದಿದ್ದರೆ ಇವನು ಏನಾದರೂ ಅಪಾಯವನ್ನುಂಟು ಮಾಡಬಹುದು ಎಂಬ ಭಯದಿಂದ ಪಂಡಿತನಾದವನು ಮೂಢನಿಗೂ ಸರಿಯಾಗಿ ದಾನವನ್ನು ಮಾಡಬೇಕು (ಇದು ಭಯದ ಕಾರಣದಿಂದ ಉಂಟಾದ ದಾನ).

ಪ್ರಿಯೋ ಮೇಽಯಂ ಪ್ರಿಯೋಽಸ್ಯಾಹಮಿತಿ ಸಂಪ್ರೇಕ್ಷ್ಯ ಬುದ್ಧಿಮಾನ್ ।
ವಯಸ್ಯಾಯೈವಮಕ್ಲಿಷ್ಟಂ ದಾನಂ ದದ್ಯಾದತಂದ್ರಿತಃ ॥೯॥

ಇವನು ನನಗೆ ಪ್ರಿಯನಾದವನು, ನಾನೂ ಇವನಿಗೆ ಪ್ರಿಯನಾದವನು ಎಂದು ತಿಳಿದು ವಿವೇಕಿಯಾದವನು ಸ್ನೇಹಿತನಿಗೆ ಆಲಸ್ಯವಿಲ್ಲದೆ, ಕ್ಲೇಶಪಡದೆ ದಾನವನ್ನು ಮಾಡಬೇಕು (ಇದು ಕಾಮದ ಕಾರಣದಿಂದ ಉಂಟಾದ ದಾನ).

ದೀನಶ್ಚ ಯಾಚತೇ ಚಾಯಮಲ್ಪೇನಾಪಿ ಹಿ ತುಷ್ಯತಿ ।
ಇತಿ ದದ್ಯಾದ್ ದರಿದ್ರಾಯ ಕಾರುಣ್ಯಾದಿತಿ ಸರ್ವಥಾ ॥೧೦॥

ಇವನು ದೀನನಾದವನು, ಬೇಡುತ್ತಿದ್ದಾನೆ. ಅಲ್ಪದಿಂದಲೂ ಸಂತೋಷವನ್ನು ಪಡುತ್ತಾನೆ ಎಂದು ದರಿದ್ರನಿಗೆ ಕರುಣೆಯಿಂದ ದಾನವನ್ನು ಮಾಡಬೇಕು (ಇದು ಕರುಣಾ ನಿಮಿತ್ತವಾದ ದಾನ).

ಇತಿ ಪಂಚವಿಧಂ ದಾನಂ ಪುಣ್ಯಕೀರ್ತಿವಿವರ್ಧನಮ್ ।
ಯಥಾಶಕ್ತ್ಯಾ ಪ್ರದಾತವ್ಯಮೇವಮಾಹ ಪ್ರಜಾಪತಿಃ ॥೧೧॥

ಹೀಗೆ ಪುಣ್ಯವನ್ನೂ, ಕೀರ್ತಿಯನ್ನೂ ಅಭಿವೃದ್ಧಿ ಪಡಿಸುವ ಪಂಚವಿಧವಾದ ದಾನವನ್ನು ತನ್ನ ಶಕ್ತಿಗೆ ಅನುಗುಣವಾಗಿ ಮಾಡಬೇಕೆಂದು ಬ್ರಹ್ಮದೇವರು ಹೇಳಿದ್ದಾರೆ.

ಇತಿ ಶ್ರೀಮನ್ಮಹಾಭಾರತೇ ಅನುಶಾಸನಪರ್ವಣಿ ದಾನಪ್ರಭೇದಕಥನಂ ನಾಮ ಏಕೋನನವತ್ಯುತ್ತರಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಎಂಬತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ತೊಂಬತ್ತನೆಯ ಅಧ್ಯಾಯ

ಕೃಷ್ಣನ ದೇಹದಿಂದ ಪ್ರದ್ಯುಮ್ನನ ನಿಷ್ಕ್ರಮಣ ಮತ್ತು ಪುನಃ ಪ್ರವೇಶ

ಯುಧಿಷ್ಠಿರಃ

ಪಿತಾಮಹ ಮಹಾಪ್ರಾಜ್ಞ ಸರ್ವಶಾಸ್ತ್ರವಿಶಾರದ ।
ಶ್ರೂಯತಾಂ ಮೇ ಹಿ ವಚನಮರ್ಥಿತ್ವಾತ್ ಪ್ರಬ್ರವೀಮ್ಯಹಮ್ ॥೧॥

ಯುಧಿಷ್ಠಿರ– ಎಲೈ ಪಿತಾಮಹನೇ, ಮಹಾಪ್ರಾಜ್ಞನೇ, ಸರ್ವಶಾಸ್ತ್ರವಿಶಾರದನೇ, ನಾನು ಅರ್ಥಿಯಾಗಿರುವುದರಿಂದ ಮಾತನಾಡುತ್ತಿದ್ದೇನೆ. ನನ್ನ ಮಾತನ್ನು ಕೇಳು.

ಪರಾವರಜ್ಞೋ ಭೂತಾನಾಂ ದಯಾವಾನ್ ಸರ್ವಜಂತುಷು ।
ಆಗಮೈರ್ಬಹುಭಿಃ ಪ್ರೀತೋ ಭವಾನ್ ನಃ ಪರಮಃ ಕುಲೇ ॥೨॥

ಜೀವರಲ್ಲಿ ಉಚ್ಚ-ನೀಚ ಭಾವವನ್ನು ತಿಳಿದು, ಎಲ್ಲ ಪ್ರಾಣಿಗಳಲ್ಲಿ ದಯೆಯನ್ನು ಹೊಂದಿ, ಅನೇಕ ಆಗಮಗಳನ್ನು ಸಂತೋಷದಿಂದ ಅಧ್ಯಯನವನ್ನು ಮಾಡಿದ ನೀನು ನಮ್ಮ ಕುಲದಲ್ಲಿ ಬಹಳ ಶ್ರೇಷ್ಠನಾದವನು.

ತ್ವಾದೃಶೋ ದುರ್ಲಭೋ ಲೋಕೇ ಸಾಂಪ್ರತಂ ಜ್ಞಾನಸಂಯುತಃ ।
ಭವತಾ ಗುರುಣಾ ಚೈವ ಧನ್ಯಾ ಬತ ವಯಂ ಪ್ರಭೋ ॥೩॥

ನಿನ್ನಂತಹ ಜ್ಞಾನಸಂಪನ್ನರು ಲೋಕದಲ್ಲಿ ದುರ್ಲಭರಾದವರು. ನಿನ್ನಂತಹ ಹಿರಿಯನನ್ನು ಹೊಂದಿ ಎಲೈ ಪ್ರಭುವೇ, ನಾವು ಧನ್ಯರಾಗಿದ್ದೇವೆ.

ಅಯಂ ಸ ಕಾಲಃ ಸಂಪ್ರಾಪ್ತೋ ದುರ್ಲಭೋ ಜ್ಞಾತಿಬಾಂಧವೈಃ ।
ಶಾಸ್ತಾ ನು ನಾಸ್ತಿ ನಃ ಕಶ್ಚಿತ್ತ್ವದೃತೇ ಪುರುಷರ್ಷಭ ॥೪॥

ಎಲೈ ಪುರುಷಶ್ರೇಷ್ಠನೇ, ನಿನ್ನನ್ನು ಬಿಟ್ಟು ನಮಗೆ ಯಾರೂ ಉಪದೇಶವನ್ನು ಮಾಡದಂತಹ ಕಷ್ಟಕಾಲವು ನಮಗೂ ನಮ್ಮ ಜ್ಞಾತಿ-ಬಾಂಧವರಿಗೂ ಒದಗಿದೆ.

ತಸ್ಮಾದ್ ಧರ್ಮಾರ್ಥಸಹಿತಮಾಯತ್ಯಾಂ ಚ ಹಿತೋದಯಮ್ ।
ಆಶ್ಚರ್ಯಂ ಪರಮಂ ವಾಕ್ಯಂ ಶ್ರೋತುಮಿಚ್ಛಾಮಿ ಭಾರತ ॥೫॥

ಆದ್ದರಿಂದ ಎಲೈ ಭಾರತನೇ, ಧರ್ಮಾರ್ಥಸಂಬಂಧಿಯಾದ, ಭವಿಷ್ಯತ್ಕಾಲದಲ್ಲಿ ಹಿತವನ್ನುಂಟು ಮಾಡುವ, ಆಶ್ಚರ್ಯಕರವಾದ, ಶ್ರೇಷ್ಠವಾದ ವಿಷಯವನ್ನು ನಿನ್ನಿಂದ ಕೇಳಲು ಬಯಸುತ್ತೇನೆ.

ಅಯಂ ನಾರಾಯಣಃ ಶ್ರೀಮಾನ್ ಸರ್ವಪಾರ್ಥಿವಸನ್ನಿಧೌ ।
ಭವಂತಂ ಬಹುಮಾನಾಚ್ಚ ಪ್ರಣಯಾಚ್ಚೋಪಸೇವತೇ ॥೬॥

ಈ ಶ್ರೀಮನ್ನಾರಾಯಣನು-ಕೃಷ್ಣನು ಸರ್ವರಾಜರ ಸನ್ನಿಧಿಯಲ್ಲಿ ನಿನ್ನನ್ನು ಗೌರವದಿಂದಲೂ ಮತ್ತು ಪ್ರೀತಿಯಿಂದಲೂ ಸೇವಿಸುತ್ತಿದ್ದಾನೆ.

ಅಸ್ಯೈವ ತು ಸಮಕ್ಷಂ ನಃ ಪಾರ್ಥಿವಾನಾಂ ತಥೈವ ಚ ।
ಇತಿವೃತ್ತಂ ಪುರಾಣಂ ಚ ಶ್ರೋತ್ಕ್ಯಾಣಾಂ ಪರಮಂ ಹಿತಮ್ ॥೭॥

ಯದಿ ತೇಽಹಮನುಗ್ರಾಹ್ಯೋ ಭ್ರಾತೃಭಿಃ ಸಹಿತೋಽನಘ ।
ಮತ್ಪ್ರಿಯಾರ್ಥಂ ಹಿ ಕೌರವ್ಯ ಸ್ನೇಹಾದ್ ಭಾಷಿತುಮರ್ಹಸಿ ॥೮

ನನ್ನ ಮೇಲೆ ನಿನ್ನ ಅನುಗ್ರಹವಿದ್ದರೆ ಎಲೈ ಅನಘನೇ, ಕೌರವ್ಯನೇ, ಈ ಕೃಷ್ಣನ ಮತ್ತು ರಾಜರಾದ ನಮ್ಮೆಲ್ಲರ ಸಮಕ್ಷಮದಲ್ಲಿ ಶ್ರೋತೃಗಳಿಗೆ ಪರಮಹಿತವಾದ ಹಿಂದೆ ನಡೆದ ಒಂದು ಘಟನೆಯನ್ನು ತಮ್ಮಂದಿರಿಂದ ಸಹಿತನಾದ ನನಗೆ ಪ್ರಿಯವನ್ನುಂಟು ಮಾಡಲು ಸ್ನೇಹದಿಂದ ಹೇಳಬೇಕು.

ವೈಶಂಪಾಯನಃ

ತಸ್ಯ ತದ್ವಚನಂ ಶ್ರುತ್ವಾ ಸ್ನೇಹಾದಾಗತವಿಕ್ಲವಃ ।
ಪ್ರಪಿಬನ್ನಿವ ತಂ ದೃಷ್ಟ್ವಾ ಭೀಷ್ಮೋ ವಚನಮಬ್ರವೀತ್ ॥೯॥

ವೈಶಂಪಾಯನ– ಯುಧಿಷ್ಠಿರನ ಆ ಮಾತುಗಳನ್ನು ಕೇಳಿ, ಸ್ನೇಹದಿಂದ ಮನಸ್ಸಿನಲ್ಲಿ ವೈಕ್ಲವ್ಯವನ್ನು ಹೊಂದಿ ದೃಷ್ಟಿಯಿಂದ ಪಾನ ಮಾಡುವನಂತೆ ಅವನನ್ನು ನೋಡುತ್ತಾ ಭೀಷ್ಮರು ಮಾತನಾಡಿದರು.

ಶೃಣು ರಾಜನ್ ಪುರಾವೃತ್ತಮಿತಿಹಾಸಂ ಪುರಾತನಮ್ ।
ಏತಾವದುಕ್ತ್ವಾ ಗಾಂಗೇಯಃ ಪ್ರಣಮ್ಯ ಶಿರಸಾ ಹರಿಮ್ ।
ಧರ್ಮರಾಜಂ ಸಮೀಕ್ಷ್ಯೇದಂ ಪುನರ್ವಕ್ತುಂ ಸಮಾರಭತ್ ॥೧೦॥

ರಾಜನೇ, ಪ್ರಾಚೀನಕಾಲದಲ್ಲಿ ನಡೆದ ಈ ಇತಿಹಾಸವನ್ನು ಕೇಳು. ಇಷ್ಟು ಹೇಳಿ ಭೀಷ್ಮರು ಹರಿಗೆ ಶಿರಸಾ ನಮಸ್ಕಾರವನ್ನು ಮಾಡಿ, ಧರ್ಮರಾಜನನ್ನು ನೋಡಿ ಪುನಃ ಮಾತನಾಡಲು ಪ್ರಾರಂಭಿಸಿದರು.

ಅಯಂ ನಾರಾಯಣಃ ಶ್ರೀಮಾನ್ ಪುತ್ರಾರ್ಥೇ ವ್ರತಕಾಂಕ್ಷಯಾ ।
ದೀಕ್ಷಿತೋಽಭೂನ್ಮಹಾಬಾಹುಃ ಪುರಾ ದ್ವಾದಶವಾರ್ಷಿಕಮ್ ॥೧೧॥

ಈ ಮಹಾಬಾಹುವೂ, ಸಂಪದ್ಯುಕ್ತನೂ ಆದ ನಾರಾಯಣನು ಪುತ್ರನನ್ನು ಪಡೆಯುವ ಸಲುವಾಗಿ ವ್ರತವನ್ನು ಮಾಡಲು ಬಯಸಿ ಹನ್ನೆರಡು ವರ್ಷಗಳ ಕಾಲ ತಪಸ್ಸನ್ನು ಕೈಗೊಂಡನು.

ಶಿವನ ಅನುಗ್ರಹದಿಂದ ಕೃಷ್ಣನು ಪ್ರದ್ಯುಮ್ನನನ್ನು ಪಡೆದನು ಎಂಬ ಅಪವಾದವನ್ನು ಪರಿಹರಿಸಲು ಭೀಷ್ಮರು 'ಅಯಂ ನಾರಾಯಣಃ' ಎಂಬ ಶ್ಲೋಕದಿಂದ ಪ್ರಾರಂಭಿಸಿ ಅಧ್ಯಾಯದ ಕೊನೆಯವರೆಗೆ ಒಂದು ಕಥೆಯನ್ನು ಹೇಳುತ್ತಾರೆ. ಇಲ್ಲಿ '**ಅಸುರಃ ಸಾಂಪ್ರತಂ ಕಶ್ಚಿತ್**' (ಶ್ಲೋಕ ೪೨) ರಿಂದ ಆರಂಭವಾಗುವ ಮುಂದಿರುವ ಶ್ಲೋಕದಿಂದ ಕೈಲಾಸಶಿಖರದಲ್ಲಿ ವಕ್ರನೆಂಬ ಅಸುರನಿದ್ದನು. ಅವನು ಕೃಷ್ಣಪುತ್ರನಾದ ಪ್ರದ್ಯುಮ್ನನಿಂದಲೇ ಕೊಲ್ಲಲ್ಪಡಬೇಕಾದವನು ಎಂದು ಹೇಳಲ್ಪಡುತ್ತದೆ. '**ತತೋ ಮಮಾತ್ಮಜೋ ದೇಹಾತ್ ಸೋಗ್ನಿರ್ಭೂತ್ವಾ ವಿನಿಃಸೃತಃ**' (ಶ್ಲೋಕ ೪೫) ಎಂಬ ವಚನದಿಂದ ಮೊದಲೇ ಜನಿಸಿದ ಪ್ರದ್ಯುಮ್ನನನ್ನು ತನ್ನ ಉದರದಲ್ಲಿಟ್ಟುಕೊಂಡು ಕೃಷ್ಣನು ಕೈಲಾಸಕ್ಕೆ ಬಂದನು. ಪ್ರದ್ಯುಮ್ನ ಅಗ್ನಿಯ ರೂಪವನ್ನು ತೆಗೆದುಕೊಂಡು ಕೃಷ್ಣ ದೇಹದಿಂದ ಹೊರಗೆ ಬಂದು ಆ ವನದ ಜೊತೆಯಲ್ಲಿ ಆ ಅಸುರನನ್ನೂ ದಹಿಸಿದನು ಎಂದು ತಿಳಿದುಬರುತ್ತದೆ. 'ಸ ತು ವಹ್ನಿರ್ಮಹಾನ್ ಭೂತ್ವಾ' (ಶ್ಲೋಕ ೨೯) ಎಂಬ ಶ್ಲೋಕದಿಂದ ಆ ಅಸುರನನ್ನು ದಹಿಸಿ ಪುನಃ ಪ್ರದ್ಯುಮ್ನ ರೂಪದಿಂದಲೇ ಕೃಷ್ಣನ ಉದರವನ್ನು ಪ್ರವೇಶಿಸಿದನು ಎಂದೂ ತಿಳಿದು ಬರುತ್ತದೆ. ಈ ಘಟನೆಯು ಎಲ್ಲ ಋಷಿಗಳಿಂದಲೂ ನೋಡಲ್ಪಟ್ಟಿತು. ಕೃಷ್ಣನೂ ಸಹ ಈ ಅಧ್ಯಾಯದ ಕೊನೆಯಲ್ಲಿ ಹೇಳುವಂತೆ ಅದನ್ನು ವರ್ಣಿಸಿದ್ದಾನೆ. ಆದ್ದರಿಂದ ಮೊದಲೇ ಜನಿಸಿದ ಪ್ರದ್ಯುಮ್ನನಿಗೆ ಪುನಃ ಜನನವು ಅಯುಕ್ತವಾದುದರಿಂದ ಶಿವನ ಅನುಗ್ರಹದಿಂದ ಕೃಷ್ಣನು ಪ್ರದ್ಯುಮ್ನನನ್ನು ಪುತ್ರನನ್ನಾಗಿ ಪಡೆದನು ಎಂಬ ವಾರ್ತೆಯು ಅಸುರ ಜನರ ಮೋಹನಕ್ಕಾಗಿಯೇ

ಹೊರಟಿದೆ ಎಂಬ ಸಾರಾಂಶವು ಸ್ಪಷ್ಟವಾಗಿ ತಿಳಿದು ಬರುತ್ತದೆ. ಈ ಪ್ರಮೇಯವನ್ನೇ ಮನಸ್ಸಿನಲ್ಲಿಟ್ಟುಕೊಂಡು ಪೂರ್ಣಪ್ರಜ್ಞಾಚಾರ್ಯರೂ ಸಹ ಹಾಗೆಯೇ ತಮ್ಮ ಗ್ರಂಥದಲ್ಲಿ ನಿವೇಶವನ್ನು ಮಾಡಿದ್ದಾರೆ. ಆದ್ದರಿಂದ ಕೃಷ್ಣನ ಅಭಿಪ್ರಾಯವೂ, ಕೃಷ್ಣನ ಭಕ್ತಾಗ್ರೇಸರರಾದ ಪೂರ್ಣಪ್ರಜ್ಞಾಚಾರ್ಯರ ಅಭಿಪ್ರಾಯವೂ ಒಂದೇ ಎಂದು ಸಿದ್ಧವಾಗುತ್ತದೆ - ಲಕ್ಷಾಲಂಕಾರ.

ದೀಕ್ಷಿತಂ ಕೇಶವಂ ದ್ರಷ್ಟುಮಭಿಜಗ್ಮುರ್ಮಹರ್ಷಯಃ ।
ಸೇವಿತುಂ ತಂ ಮಹಾತ್ಮಾನಂ ಪ್ರೀಯಮಾಣಂ ಜನಾರ್ದನಮ್ ॥೧೨॥

ದೀಕ್ಷಿತನಾದ ಕೃಷ್ಣನನ್ನು ನೋಡಿ ಸಂತೋಷಗೊಂಡ, ಮಹಾತ್ಮನಾದ ಅವನ ಸೇವೆಯನ್ನು ಮಾಡಲು ಮಹರ್ಷಿಗಳು ಅಲ್ಲಿಗೆ ಬಂದರು.

ನಾರದಃ ಪರ್ವತಶ್ಚೈವ ಕೃಷ್ಣದ್ವೈಪಾಯನಸ್ತಥಾ ।
ದೇವಲಃ ಕಾಶ್ಯಪಶ್ಚೈವ ಹಸ್ತಿಕಾಶ್ಯಪ ಏವ ಚ ।
ಜಮದಗ್ನಿಶ್ಚ ರಾಜೇಂದ್ರ ಧೌಮ್ಯೋ ವಾಲ್ಮೀಕಿರೇವ ಚ ॥೧೩॥

ಅಪರೇಽಪಿ ತಪಃಸಿದ್ಧಾಃ ಸತ್ಯವ್ರತಪರಾಯಣಾಃ ।
ಶಿಷ್ಯೈರನುಗತಾಃ ಸರ್ವೇ ಬ್ರಹ್ಮವಿದ್ಭಿರಕಲ್ಮಷೈಃ ॥೧೪॥

ನಾರದ, ಪರ್ವತ, ಕೃಷ್ಣದ್ವೈಪಾಯನರು, ದೇವಲ, ಕಾಶ್ಯಪ, ಹಸ್ತಿಕಾಶ್ಯಪ, ಜಮದಗ್ನಿ, ಧೌಮ್ಯ, ವಾಲ್ಮೀಕಿ ಮತ್ತು ಇನ್ನೂ ತಪಸ್ಸಿದ್ಧರೂ, ಸತ್ಯವ್ರತಪರಾಯಣರೂ ಆದ ಅನೇಕ ಋಷಿಗಳು, ಬ್ರಹ್ಮಜ್ಞಾನಿಗಳೂ, ನಿಷ್ಕಲ್ಮಷರೂ ಆದ ತಮ್ಮ ಶಿಷ್ಯರಿಂದ ಹಿಂಬಾಲಿಸಲ್ಪಟ್ಟವರಾಗಿ ಎಲ್ಲರೂ ಅಲ್ಲಿಗೆ ಬಂದರು.

ಕೇಶವಸ್ತಾನಭಿಗತಾನ್ ಪ್ರೀತ್ಯಾ ಸಂಪರಿಗೃಹ್ಯ ಚ ।
ತೇಷಾಮತಿಥಿಸತ್ಕಾರಂ ಪೂಜನಾರ್ಹಂ ಕುಲೋಚಿತಮ್ ।
ದೇವಕೀತನಯೋ ಹೃಷ್ಟೋ ದೇವತುಲ್ಯಮಕಲ್ಪಯತ್ ॥೧೫॥

ಕೇಶವನು ಅಲ್ಲಿಗೆ ಬಂದ ಅವರನ್ನು ಪ್ರೀತಿಯಿಂದ ಸ್ವೀಕರಿಸಿ ಅವರನ್ನು ಪೂಜಿಸಲು ಕುಲೋಚಿತವಾದ ಅತಿಥಿ ಸತ್ಕಾರವನ್ನು ಮಾಡುವವನಾಗಿ ದೇವಕೀನಂದನನಾದ ಅವನು ಸಂತೋಷದಿಂದ ದೇವತೆಗಳಿಗೆ ಸಲ್ಲುವಂತಹ ಅತಿಥಿ ಸತ್ಕಾರವನ್ನು ಮಾಡಿದನು.

ಉಪವಿಷ್ಟೇಷು ಸರ್ವೇಷು ವಿಷ್ಟರೇಷು ತದಾऽನಘ ।
ವಿಶ್ರಸ್ತೇಷು ಹಿ ತುಷ್ಟೇಷು ಕೇಶವಾರ್ಚನಯಾ ಪುನಃ ॥೧೬॥

ಪರಸ್ಪರಂ ಕಥಾ ದಿವ್ಯಾಃ ಪ್ರಾವರ್ತಂತ ಮನೋರಮಾಃ ।
ವಿಷ್ಣೋರ್ನಾರಾಯಣಸ್ಯೈವ ಪ್ರಸಾದಾತ್ ಕಥಯಾಮಿ ತಾಃ ॥೧೭॥

ಅವರೂ ಸಹ ಕೇಶವಾರ್ಚನೆಯನ್ನು ಮಾಡಿ ವಿಶ್ರಾಂತಿಯನ್ನು ಪಡೆದು ತಮ್ಮ ತಮ್ಮ ಆಸನಗಳಲ್ಲಿ ಕುಳಿತಿರುವಾಗ ಎಲೈ ಅನಘನೇ, ಪರಸ್ಪರವಾಗಿ ದಿವ್ಯವೂ, ಮನೋಹರವೂ ಆದ ಅನೇಕ ಕಥೆಗಳು ನಡೆದವು. ವಿಷ್ಣುವೂ, ನಾರಾಯಣನೂ ಆದ ಕೃಷ್ಣನ ಅನುಗ್ರಹದಿಂದ ಆ ಕಥೆಗಳನ್ನು ಹೇಳುತ್ತೇನೆ.

ತಸ್ಯೈವ ವ್ರತಚರ್ಯಾಯಾಂ ಮುನಿಭಿರ್ವಿಸ್ಮಿತಂ ಪುರಾ ।
ಯಶ್ಚ ಗೋವೃಷಭಾಂಕಸ್ಯ ಪ್ರಭಾವೋऽಭೂನ್ಮಹಾತ್ಮನಃ ॥೧೮॥

ಅವನ ವ್ರತಚರ್ಯೆಯನ್ನು ನೋಡಿ ಹಾಗೂ ಮಹಾತ್ಮನಾದ ವೃಷಧ್ವಜನಾದ ಶಂಕರನ ಸಾಮರ್ಥ್ಯವನ್ನು ನೋಡಿ ಹಿಂದೆ ಮಹಾತ್ಮರು ವಿಸ್ಮಿತರಾದರು (ರಾಗಿದ್ದರು).

ಯತ್ರ ದೇವೀ ಮಹಾದೇವಮಪೃಚ್ಛತ್ ಸಂಶಯಾನ್ ಪುರಾ ।
ಕಥಯಾಮಾಸ ಸರ್ವಾನ್ ತಾನ್ ದೇವ್ಯಾಃ ಪ್ರಿಯಚಿಕೀರ್ಷಯಾ ॥೧೯॥

ಅಲ್ಲಿ ಪಾರ್ವತಿದೇವಿಯು ತನ್ನ ಸಂಶಯಗಳನ್ನು ಮಹಾದೇವನಲ್ಲಿ ಕೇಳಿದಳು. ಶಿವನು ದೇವಿಗೆ ಪ್ರಿಯವನ್ನು ಮಾಡಲು ಬಯಸಿ ಆ ಎಲ್ಲ ಪ್ರಶ್ನೆಗಳಿಗೆ ಉತ್ತರವನ್ನು ನೀಡಿದನು.

ಉಮಾಪತ್ಯೋಶ್ಚ ಸಂವಾದಂ ಶೃಣು ತಾತ ಮನೋರಮಮ್ ।
ವರ್ಣಾಶ್ರಮಾಣಾಂ ಧರ್ಮಶ್ಚ ತತ್ರ ತಾತ ಸಮಾಹಿತಃ ॥೨೦॥

ಎಲೈ ಪ್ರೀತಿಪಾತ್ರನೇ, ಮನೋಹರವಾದ ಆ ಉಮಾ-ಮಹೇಶ್ವರ ಸಂವಾದವನ್ನು ಕೇಳು. ಅದರಲ್ಲಿ ವರ್ಣಾಶ್ರಮ ಧರ್ಮಗಳು ನೆಲೆಗೊಂಡಿವೆ.

ಋಷಿಧರ್ಮಶ್ಚ ನಿಖಿಲೋ ರಾಜಧರ್ಮಶ್ಚ ಪುಷ್ಕಳಃ ।
ಗೃಹಸ್ಥಧರ್ಮಶ್ಚ ಶುಭಃ ಕರ್ಮಪಾಕಫಲಾನಿ ಚ ॥೨೧॥

ದೇವಗುಹ್ಯಂ ಚ ವಿವಿಧಂ ದಾನಧರ್ಮವಿಧಿಸ್ತಥಾ ।
ವಿಧಾನಮತ್ರ ಸಂಪ್ರೋಕ್ತಂ ಯಮಸ್ಯ ನಿಯಮಸ್ಯ ಚ ॥೨೨॥

(ಅಲ್ಲಿ) ಸಮಸ್ತವಾದ ಋಷಿಧರ್ಮವೂ, ಪುಷ್ಕಳವಾದ ರಾಜಧರ್ಮವೂ, ಶುಭವಾದ ಗೃಹಸ್ಥಧರ್ಮವೂ, ಕರ್ಮಪಾಕಫಲಗಳೂ, ವಿವಿಧವಾದ ದೇವಗುಹ್ಯ (ರಹಸ್ಯ)ಗಳೂ, ದಾನ- ಧರ್ಮ ವಿಧಿಗಳೂ, ಯಮ-ನಿಯಮ ವಿಧಿಗಳೂ ಹೇಳಲ್ಪಟ್ಟಿವೆ.

ಯಮಲೋಕವಿಧಾನಂ ಚ ಸ್ವರ್ಗಲೋಕವಿಧಿಸ್ತಥಾ ।
ಪ್ರಾಣಮೋಕ್ಷವಿಧಿಶ್ಚೈವ ತೀರ್ಥಚರ್ಯಾ ಚ ಪುಷ್ಕಳಾ ॥೨೩॥

ಮೋಕ್ಷಧರ್ಮವಿಧಾನಂ ಚ ಸಾಂಖ್ಯಯೋಗಸಮನ್ವಿತಮ್ ।
ಸ್ತ್ರೀಧರ್ಮಶ್ಚ ಸ್ವಯಂ ದೇವ್ಯಾ ದೇವದೇವಾಯ ಭಾಷಿತಃ ॥೨೪॥

ಯಮಲೋಕದ ವಿಧಾನಗಳು, ಸ್ವರ್ಗಲೋಕದ ವಿಧಾನಗಳು, ಮರಣ ಪ್ರಕಾರ, ಪುಷ್ಕಳವಾದ ತೀರ್ಥಯಾತ್ರೆಯ ಕ್ರಮ, ಮೋಕ್ಷಧರ್ಮ ವಿಧಿಗಳು, ಸಾಂಖ್ಯಯೋಗ ಸಮ್ಮತವಾದ ಜ್ಞಾನ (ಇವು ಶಂಕರನಿಂದ ಹೇಳಲ್ಪಟ್ಟಿವೆ). ಸ್ತ್ರೀಧರ್ಮಗಳು ಎಲ್ಲವೂ ಪಾರ್ವತಿದೇವಿಯಿಂದ ದೇವದೇವನಾದ ಶಂಕರನ ಎದುರಿಗೆ ಹೇಳಲ್ಪಟ್ಟಿವೆ.

ಏವಮಾದಿ ಶುಭಂ ಸರ್ವಂ ತತ್ರ ತಾತ ಸಮಾಹಿತಮ್ ।
ರುದ್ರಾಣ್ಯಾಃ ಸಂಶಯಪ್ರಶ್ನೋ ಯತ್ರ ತಾತ ಪ್ರವರ್ತತೇ ॥೨೫॥

ಎಲೈ ಪ್ರೀತಿಪಾತ್ರನೇ, ಪಾರ್ವತಿಯ ಸಂಶಯ ಪ್ರಶ್ನೆಗಳು ಎಲ್ಲಿವೆಯೋ ಅಲ್ಲಿ ಇಂತಹ ಶುಭವಾದ ಎಲ್ಲ ವಿಷಯಗಳೂ ಹೇಳಲ್ಪಟ್ಟಿವೆ.

ಧನ್ಯಂ ಯಶಸ್ಯಮಾಯುಷ್ಯಂ ಧರ್ಮ್ಯಂ ಚ ಪರಮಂ ಹಿತಮ್ ।
ಪುಷ್ಟಿಯೋಗಮಿದಂ ದಿವ್ಯಂ ಕಥ್ಯಮಾನಂ ಮಯಾ ಶೃಣು ॥೨೬॥

ಈ ಸಂವಾದವು ಧನಪ್ರದವಾದುದು, ಕೀರ್ತಿಪ್ರದವಾದುದು, ಆಯುಃಪ್ರದವಾದುದು, ಧರ್ಮಪ್ರದವಾದುದು, ಪರಮಹಿತವಾದುದು ಮತ್ತು ಪೌಷ್ಟಿಕವಾದುದು. ನಾನು ಹೇಳುವ ಈ ದಿವ್ಯವಾದ ಆಖ್ಯಾನವನ್ನು ಕೇಳು.

ಇತಿಹಾಸಮಿಮಂ ದಿವ್ಯಂ ಪವಿತ್ರಂ ಪರಮಂ ಶುಭಮ್ ।
ಸಾಯಂ ಪ್ರಾತಃ ಸದಾ ಸಮ್ಯಕ್ ಶ್ರೋತವ್ಯಂ ಚ ಬುಭೂಷತಾ ॥೨೭॥

ಈ ದಿವ್ಯವೂ, ಪವಿತ್ರವೂ, ಪರಮಮಂಗಳವೂ ಆದ ಇತಿಹಾಸವನ್ನು ತನ್ನ ಕಲ್ಯಾಣವನ್ನು ಬಯಸುವವನು ಯಾವಾಗಲೂ ಪ್ರಾತಃಕಾಲದಲ್ಲಿ ಮತ್ತು ಸಾಯಂಕಾಲದಲ್ಲಿ ಚೆನ್ನಾಗಿ ಕೇಳಬೇಕು.

ತತೋ ನಾರಾಯಣೋ ದೇವಃ ಸಂಕ್ಲಿಷ್ಟೋ ವ್ರತಚರ್ಯಯಾ ।
ವಹ್ನಿರ್ವಿನಿಃಸೃತೋ ವಕ್ತ್ರಾತ್ ಕೃಷ್ಣಸ್ಯಾದ್ಭುತದರ್ಶನಃ ॥೨೮॥

ಆನಂತರ ದೇವನಾದ ನಾರಾಯಣನು ವ್ರತಾನುಷ್ಠಾನದಿಂದ ಕ್ಲೇಶವನ್ನು ಹೊಂದಿದವನಂತೆ ತೋರಿಸಿಕೊಂಡನು. ಆಗ ಕೃಷ್ಣನ ಮುಖದಿಂದ ಅದ್ಭುತವಾಗಿ ಕಾಣುವ ವಹ್ನಿಯು ಹೊರಹೊಮ್ಮಿತು.

ಸ ತು ವಹ್ನಿರ್ಮಹಾನ್ ಭೂತ್ವಾ ದಗ್ಧ್ವಾ ಗಿರಿಮಶೇಷತಃ ।
ಪುನರೇವಾವಿಶತ್ ಕೃಷ್ಣಂ ತದದ್ಭುತಮಿವಾಭವತ್ ॥೨೯॥

ಆ ವಹ್ನಿಯು ಬಹಳ ದೊಡ್ಡದಾಗಿ ಬೆಳೆದು ಆ ಪರ್ವತವನ್ನು ಸಂಪೂರ್ಣವಾಗಿ ಸುಟ್ಟುಪುನಃ ಕೃಷ್ಣನನ್ನು ಪ್ರವೇಶಿಸಿತು. ಆ ಘಟನೆಯು ಅದ್ಭುತವಾಗಿದ್ದಿತು.

ಅಗ್ನಿನಾ ತೇನ ಮಹತಾ ನಿಃಸೃತೇನ ಮುಖಾದ್ ವಿಭೋಃ ।
ಪಶ್ಯತಾಮೇವ ಸರ್ವೇಷಾಂ ದಗ್ಧ ಏವ ನಗೋತ್ತಮಃ ॥೩೦॥

ಮೃಗಪಕ್ಷಿಗಣಾಕೀರ್ಣಃ ಶ್ವಾಪದೈರಭಿಸಂಕುಲಃ ।
ವೃಕ್ಷಗುಲ್ಮಲತಾಕೀರ್ಣೋ ಮಥಿತೋಽದೀನದರ್ಶನಃ ॥೩೧॥

ವಿಭುವಾದ ಕೃಷ್ಣನ ಮುಖದಿಂದ ಹೊರಹೊಮ್ಮಿದ ಆ ದೊಡ್ಡ ಅಗ್ನಿಯಿಂದ ಎಲ್ಲರೂ ನೋಡುತ್ತಿರುವಂತೆಯೇ ಮೃಗ-ಪಕ್ಷಿಗಳ ಗಣದಿಂದ ಕೂಡಿದ, ಮಾಂಸಾಹಾರಿ ಪ್ರಾಣಿಗಳಿಂದ ನಿಬಿಡವಾದ, ವೃಕ್ಷ-ಗುಲ್ಮ-ಲತೆಗಳಿಂದ ತುಂಬಿಕೊಂಡು ಸುಂದರವಾಗಿ ಕಾಣುತ್ತಿದ್ದ ಆ ಶ್ರೇಷ್ಠ ಪರ್ವತವು ಒಂದು ಕ್ಷಣದಲ್ಲಿ ದಗ್ಧವಾಯಿತು.

ಪುನಃ ಸ ದೃಷ್ಟಮಾತ್ರೇಣ ಹರಿಣಾ ಸೌಮ್ಯಚೇತಸಾ ।
ಸ ಬಭೂವ ಗಿರಿಃ ಕ್ಷಿಪ್ರಂ ಪ್ರಫುಲ್ಲದ್ರುಮಕಾನನಃ ॥೩೨॥

ಸಿದ್ಧಚಾರಣಸಂಘೈಶ್ಚ ಪ್ರಸನ್ನೈರುಪಶೋಭಿತಃ ।
ಮತ್ತವಾರಣಸಂಯುಕ್ತೋ ನಾನಾಪಕ್ಷಿಗಣೈರ್ಯುತಃ ।
ತದದ್ಭುತಮಚಿಂತ್ಯಂ ಚ ಸರ್ವೇಷಾಮಭವದ್ ಭೃಶಮ್ ॥೩೩॥

ಪುನಃ ಹರಿಯು ಸೌಮ್ಯದೃಷ್ಟಿಯಿಂದ ಆ ಪರ್ವತವನ್ನು ನೋಡಿದ ಕೂಡಲೇ ಅದು ಶೀಘ್ರವಾಗಿ ಅನೇಕ ವೃಕ್ಷವುಳ್ಳ ತಾಣಗಳಿಂದಲೂ, ಪ್ರಸನ್ನರಾದ ಸಿದ್ಧ-ಚಾರಣ ಸಮೂಹಗಳಿಂದಲೂ, ಮದ್ದಾನೆಗಳ ಸಮೂಹದಿಂದಲೂ, ನಾನಾ ಪಕ್ಷಿಗಳ ಸಮೂಹದಿಂದಲೂ ಕೂಡಿ ಮೊದಲಿನಂತೆಯೇ ಆಯಿತು. ಆ ಘಟನೆಯು ಎಲ್ಲರಿಗೂ ಅದ್ಭುತವೂ ಮತ್ತು ಅಚಿಂತ್ಯವೂ ಆಗಿದ್ದಿತು.

ತಂ ದೃಷ್ಟ್ವಾ ಹೃಷ್ಟರೋಮಾಣಃ ಸರ್ವೇ ಮುನಿಗಣಾಸ್ತದಾ ।
ವಿಸ್ಮಿತಾಃ ಪರಮಾಯಸ್ತಾಃ ಸಾಧ್ವಸಾಕುಲಲೋಚನಾಃ ।
ನ ಕಿಂಚಿದಬ್ರುವಂಸ್ತತ್ರ ಶುಭಂ ವಾ ಯದಿ ವೇತರತ್ ॥೩೪॥

ಅದನ್ನು ನೋಡಿದ ಎಲ್ಲ ಮುನಿಗಳೂ ರೋಮಾಂಚನವನ್ನು ಹೊಂದಿ, ವಿಸ್ಮಯವನ್ನು ಹೊಂದಿ, ಶ್ರಮವನ್ನು ಹೊಂದಿ ಭಯದಿಂದ ತುಂಬಿದ ಕಣ್ಣುಳ್ಳವರಾದರು. ಅಲ್ಲಿ ಯಾರೂ ಶುಭವನ್ನಾಗಲೀ, ಅಶುಭವನ್ನಾಗಲೀ ಏನನ್ನೂ ಮಾತನಾಡಲಿಲ್ಲ.

ತತೋ ನಾರಾಯಣೋ ದೇವೋ ಮುನಿಸಂಘೇ ಸುವಿಸ್ಮಿತೇ ।
ತಾನ್ ಸಮೀಕ್ಷ್ಯೈವ ಮಧುರಂ ಬಭಾಷೇ ಪುಷ್ಕರೇಕ್ಷಣಃ ॥೩೫॥

ಕಿಮರ್ಥಂ ಮುನಿಸಂಘಸ್ಯ ವಿಸ್ಮಯೋऽಯಮನುತ್ತಮಃ ।
ಏತನ್ಮೇ ಸಂಶಯಂ ಸರ್ವೇ ಯಾಥಾತಥ್ಯಮನಿಂದಿತಾಃ ।
ಋಷಯೋ ವಕ್ತುಮರ್ಹಂತಿ ನಿಶ್ಚಯೇನಾರ್ಥಕೋವಿದಾಃ ॥೩೬॥

ಆಗ ಮುನಿಸಂಘವು ಅತ್ಯಂತ ವಿಸ್ಮಿತವಾಗಿರಲು ದೇವನೂ, ಪುಷ್ಕರಾಕ್ಷನೂ ಆದ ನಾರಾಯಣನು ಅವರನ್ನು ನೋಡಿ ಮಧುರವಾದ ವಾಣಿಯಿಂದ ಮುನಿಸಂಘಕ್ಕೆ ಏಕೆ ಇಂತಹ ತೀವ್ರವಾದ ವಿಸ್ಮಯವುಂಟಾಗಿದೆ? ಈ ನನ್ನ ಸಂಶಯವನ್ನು ಅನಿಂದಿತರೂ, ಅರ್ಥಕೋವಿದರೂ ಆದ ಋಷಿಗಳಾದ ನೀವೆಲ್ಲರೂ ಯಥಾರ್ಥವಾಗಿ ಪರಿಹರಿಸಬೇಕು ಎಂದು ಹೇಳಿದನು.

ಕೇಶವಸ್ಯ ವಚಃ ಶ್ರುತ್ವಾ ತುಷ್ಟುವುರ್ಮುನಿಪುಂಗವಾಃ ।
ಭವಾನ್ ಸೃಜತಿ ವೈ ಲೋಕಾನ್ ಭವಾನ್ ಸಂಹರತಿ ಪ್ರಜಾಃ ।
ಭವಾನ್ ಶೀತಂ ಭವಾನುಷ್ಣಂ ಭವಾನ್ ಸತ್ಯಂ ಭವಾನ್ ಕ್ರತುಃ ॥೩೭॥

ಕೇಶವನ ಮಾತುಗಳನ್ನು ಕೇಳಿ ಋಷಿಗಳು ಅವನನ್ನು ಸ್ತೋತ್ರ ಮಾಡಿದರು - ನೀನೇ ಲೋಕಗಳನ್ನು ಸೃಷ್ಟಿಸುತ್ತೀಯೆ. ನೀನೇ ಪ್ರಜೆಗಳನ್ನು ಸಂಹರಿಸುತ್ತೀಯೆ. ಶೀತ, ಉಷ್ಣ, ಸತ್ಯ, ಯಜ್ಞ ಎಲ್ಲವೂ ನಿನ್ನ ಅಧೀನ.

ಭವಾನಾದಿರ್ಭವಾನಂತೋ ಭವತೋಽನ್ಯನ್ನ ವಿದ್ಯತೇ ।
ಸ್ಥಾವರಂ ಜಂಗಮಂ ಸರ್ವಂ ತ್ವಮೇವ ಪುರುಷೋತ್ತಮ ॥೩೮॥

ನೀನೇ ಮೊದಲು ಇದ್ದವನು. ನೀನೇ ಪ್ರಪಂಚದ ಕೊನೆಯಲ್ಲಿ ಇರುವವನು. ಸ್ಥಾವರ-ಜಂಗಮಾತ್ಮಕವಾದ ಸರ್ವವೂ ನಿನ್ನ ಅಧೀನವಾಗಿದೆ. ಎಲೈ ಪುರುಷೋತ್ತಮನೇ, ನಿನ್ನನ್ನು ಬಿಟ್ಟು ಸ್ವತಂತ್ರವಾದ ವಸ್ತುವು ಬೇರೆ ಯಾವುದೂ ಇಲ್ಲ.

ತತ್ತಃ ಸರ್ವಮಿದಂ ತಾತ ಲೋಕಚಕ್ರಂ ಪ್ರವರ್ತತೇ ।
ತ್ವಮೇವಾರ್ಹಸಿ ತದ್ವಕ್ತುಂ ಮುಖಾದಗ್ನಿವಿನಿರ್ಗಮಮ್ ॥೩೯॥

ಎಲೈ ಪ್ರೀತಿಪಾತ್ರನೇ, ನಿನ್ನಿಂದ ಲೋಕಯಾತ್ರೆಯು ನಡೆಯುತ್ತದೆ. ನಿನ್ನ ಮುಖದಿಂದ ಅಗ್ನಿಯು ಹೊರಹೊಮ್ಮಿದ ವಿಷಯವನ್ನು ನೀನೇ ಹೇಳಬೇಕು.

ಏತನ್ನೋ ವಿಸ್ಮಯಕರಂ ಬಭೂವ ಮಧುಸೂದನ ।
ತತೋ ವಿಗತಸಂತ್ರಾಸಾ ಭವಾಮ ಪುರುಷೋತ್ತಮ ।
ಯದಿಚ್ಛೇತ್ ತತ್ರ ವಕ್ತವ್ಯಂ ಕುತೋಽಸ್ಮಾಕಂ ನಿಯೋಗತಃ ॥೪೦॥

ಎಲೈ ಮಧುಸೂದನನೇ, ಇದು ನಮಗೆ ಬಹಳ ವಿಸ್ಮಯವನ್ನುಂಟು ಮಾಡಿತು. ಪುರುಷೋತ್ತಮನೇ, ನೀನು ಎಲ್ಲವನ್ನೂ ವಿವರಿಸಿದರೆ ನಾವು ನಮ್ಮ ಭಯವನ್ನು ಕಳೆದುಕೊಳ್ಳುತ್ತೇವೆ. ನಿನ್ನ ಇಚ್ಛೆಗೆ ಬಂದಂತೆ ಮಾತನಾಡು. ನಮ್ಮ ಆದೇಶದಿಂದ ಮಾತನಾಡುವ ನಿರ್ಬಂಧವು ನಿನಗೆ ಇಲ್ಲ (ಎಂದು ಸ್ತೋತ್ರ ಮಾಡಿದರು).

ಶ್ರೀಭಗವಾನ್

ನಿತ್ಯಂ ಹಿತಾರ್ಥಂ ಲೋಕಾನಾಂ ಭವದ್ಭಿಃ ಕ್ರಿಯತೇ ತಪಃ ।
ತಸ್ಮಾಲ್ಲೋಕಹಿತಂ ಗುಹ್ಯಂ ಶ್ರೂಯತಾಂ ಕಥಯಾಮಿ ವಃ ॥೪೧॥

ಶ್ರೀಭಗವಾನ್– ನೀವು ಲೋಕಹಿತಕ್ಕಾಗಿ ಯಾವಾಗಲೂ ತಪಸ್ಸನ್ನು ಮಾಡುತ್ತೀರಿ. ಆದ್ದರಿಂದ ಲೋಕಹಿತವೂ, ರಹಸ್ಯವೂ ಆದ ವಿಷಯವನ್ನು ನಿಮಗೆ ಹೇಳುತ್ತೇನೆ.

ಅಸುರಃ ಸಾಂಪ್ರತಂ ಕಶ್ಚಿದಹಿತೋ ಲೋಕನಾಶನಃ ।
ಮಾಯಾಸ್ತ್ರಕುಶಲಶ್ಚೈವ ಬಲದರ್ಪಸಮನ್ವಿತಃ ॥೪೨॥

ಬಭೂವ ಸ ಮಯಾ ವಧ್ಯೋ ಲೋಕಾನಾಂ ಹಿತಕಾಮ್ಯಯಾ ।
ಪುತ್ರೇಣ ಮೇ ವಧೋ ದೃಷ್ಟಸ್ತಸ್ಯ ವೈ ಮುನಿಪುಂಗವಾಃ ॥೪೩॥

ಈಗ ಲೋಕನಾಶಕನೂ, ಲೋಕಕ್ಕೆ ಅಹಿತನೂ, ಮಾಯಾಶಸ್ತ್ರಾಸ್ತ್ರ ಕುಶಲನೂ, ಬಲ-ದರ್ಪದಿಂದ ಕೂಡಿದವನೂ ಆದ ಒಬ್ಬ ಅಸುರನಿದ್ದನು. ಲೋಕಹಿತದ ದೃಷ್ಟಿಯಿಂದ ನಾನು ಅವನನ್ನು ಕೊಲ್ಲಬೇಕಾಗಿದ್ದಿತು. ಎಲೈ ಮುನಿಪುಂಗವರೇ, ಅವನು ನನ್ನ ಪುತ್ರನಿಂದ ಕೊಲ್ಲಲ್ಪಡಬೇಕೆಂದು ವಿಧಿಯ ನಿಯಮವಿದ್ದಿತು.

ತದರ್ಥಂ ಪುತ್ರಮೇವಾಹಂ ಸಿಸೃಕ್ಷುರ್ವನಮಾಗತಃ ।
ಆತ್ಮನಃ ಸದೃಶಂ ಪುತ್ರಮಹಂ ಜನಯಿತುಂ ವ್ರತೈಃ ॥೪೪॥

ಆ ಕಾರಣದಿಂದ ನನಗೆ ಸದೃಶನಾದ ಪುತ್ರನನ್ನು ವ್ರತಾನುಷ್ಠಾನದಿಂದ ಪಡೆಯಲು ನಾನು ಈ ವನಕ್ಕೆ ಬಂದೆನು.

ಏವಂ ವ್ರತಪರೀತಸ್ಯ ತಪಸ್ತೀವ್ರತಯಾ ಮಮ ।
ತತೋ ಮಮಾತ್ಮಜೋ ದೇಹಾತ್ ಸೋಽಗ್ನಿರ್ಭೂತ್ವಾ ವಿನಿಃಸೃತಃ ॥೪೫॥

ಹೀಗೆ ನಾನು ವ್ರತವನ್ನು ಧರಿಸಿ ತೀವ್ರವಾದ ತಪಸ್ಸನ್ನು ಮಾಡುತ್ತಿರಲು ನನ್ನ ದೇಹದಿಂದ ನನ್ನ ಪುತ್ರನು ಅಗ್ನಿಯ ರೂಪವನ್ನು ಧರಿಸಿ ಹೊರಗೆ ಬಂದನು.

ವಿನಿಃಸೃತ್ಯ ಗತೋ ದ್ರಷ್ಟುಂ ಕ್ಷಣೇನ ಚ ಪಿತಾಮಹಮ್ ।
ಬ್ರಹ್ಮಣಾ ಮನ್ಮಥೋಽನಂಗಃ ಪುತ್ರತ್ವೇನ ಪ್ರಕಲ್ಪಿತಃ ।
ಅನುಜ್ಞಾತಶ್ಚ ತೇನೈವ ಪುನರಾಯಾನ್ಮಮಾಂತಿಕಮ್ ॥೪೬॥

ಹೊರಬಂದವನು ತಕ್ಷಣವೇ ಪಿತಾಮಹರಾದ ಬ್ರಹ್ಮದೇವರನ್ನು ನೋಡಲು ಹೋದನು. ಬ್ರಹ್ಮದೇವರು ಅನಂಗನಾದ ಮನ್ಮಥನನ್ನು ನನ್ನ ಪುತ್ರನೆಂದು ಸಂಕಲ್ಪಿಸಿದ್ದರು. ಬ್ರಹ್ಮದೇವರ ಅನುಮತಿಯನ್ನು ಪಡೆದು ಅವನು ಪುನಃ ನನ್ನ ಬಳಿಗೆ ಬಂದನು.

ಏತನ್ಮೇ ವೈಷ್ಣವಂ ತೇಜೋ ಮಮ ವಕ್ತ್ರಾದ್ ವಿನಿಃಸೃತಮ್ ।
ತತ್ತೇಜಸಾ ನಿರ್ದಗ್ಧಿತಃ ಪುರತೋಽಯಂ ಗಿರಿಃ ಸ್ಥಿತಃ ॥೪೭॥

ನನ್ನ ವೈಷ್ಣವ ತೇಜಸ್ಸು ನನ್ನ ಮುಖದಿಂದ ಹೊರಗೆ ಬಂದಿತು. ಆ ತೇಜಸ್ಸಿನಿಂದ ಎದುರಿಗಿದ್ದ ಪರ್ವತವು ನಾಶವನ್ನು ಹೊಂದಿತು.

ದೃಷ್ಟ್ವಾ ದಾಹಂ ಗಿರೇಸ್ತಸ್ಯ ಸೌಮ್ಯಭಾವತಯಾ ಮಮ ।
ಪುನಃ ಸ ದೃಷ್ಟಮಾತ್ರೇಣ ಗಿರಿರಾಸೀದ್ ಯಥಾಪುರಮ್ ॥೪೮॥

ಪರ್ವತವು ದಗ್ಧವಾದುದನ್ನು ನೋಡಿ ನಾನು ಪುನಃ ಅದನ್ನು ಸೌಮ್ಯದೃಷ್ಟಿಯಿಂದ ನೋಡಿದ ತಕ್ಷಣವೇ ಅದು ಮೊದಲಿನಂತಾಯಿತು.

ಏತದ್ ಗುಹ್ಯಂ ಮಯಾ ತಥ್ಯಂ ಕಥಿತಂ ವಃ ಸಮಾಸತಃ ।
ಭವಂತೋ ವ್ಯಥಿತಾ ಯೇನ ವಿಸ್ಮಿತಾಶ್ಚ ತಪೋಧನಾಃ ॥೪೯॥

ಎಲೈ ತಪೋಧನರೇ, ನೀವು ಅದರಿಂದ ವ್ಯಥೆಯನ್ನು ಮತ್ತು ವಿಸ್ಮಯವನ್ನು ಹೊಂದಿದ್ದೀರಿ. ರಹಸ್ಯವಾದ ಮತ್ತು ಸತ್ಯವಾದ ಈ ವಿಷಯವನ್ನು ಸಂಕ್ಷೇಪವಾಗಿ ಹೇಳಿದ್ದೇನೆ.

ಋಷೀಣಾಮೇವಮುಕ್ತ್ವಾ ತು ತಾನ್ ಪುನಃ ಪ್ರತ್ಯಭಾಷತ ॥೫೦॥

ಋಷಿಗಳನ್ನು ಕುರಿತು ಹೀಗೆ ಹೇಳಿ ಕೃಷ್ಣನು ಪುನಃ ಅವರನ್ನು ಕುರಿತು ಮಾತನಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಅನುಶಾಸನಪರ್ವಣಿ ದಾನಧರ್ಮಪರ್ವಣಿ
ಏಕೋನನವತ್ಯುತ್ತರಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ತೊಂಬತ್ತನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ತೊಂಬತ್ತೊಂದನೆಯ ಅಧ್ಯಾಯ

ಋಷಿಗಳಿಂದ ಪ್ರವಚನ ಮಾಡುವಂತೆ ನಾರದರಿಗೆ ಒತ್ತಾಯ

ಶ್ರೀಭಗವಾನ್

ಭವತಾಂ ದರ್ಶನಾದೇವ ಪ್ರೀತಿರಭ್ಯಧಿಕಾ ಮಮ ।
ಭವಂತಸ್ತು ತಪಃಸಿದ್ಧಾ ಭವಂತೋ ದೇವದರ್ಶನಾಃ ॥೧॥

ಶ್ರೀಭಗವಾನ್– ನಿಮ್ಮ ದರ್ಶನದಿಂದಲೇ ನನಗೆ ಬಹಳ ಸಂತೋಷವಾಗಿದೆ. ನೀವು ತಪಃಸಿದ್ಧರು ಮತ್ತು ದೇವದರ್ಶನವನ್ನು ಹೊಂದಿದವರು.

ಸರ್ವತ್ರ ಗತಿಮಂತಶ್ಚ ಜ್ಞಾನವಿಜ್ಞಾನಭಾವಿತಾಃ ।
ಗತ್ಯಾಗತಿಜ್ಞಾ ಲೋಕಾನಾಂ ಸರ್ವೇ ನಿರ್ಧೂತಕಲ್ಮಷಾಃ ॥೨॥

ಸರ್ವತ್ರ ಗತಿಯುಳ್ಳವರು. ಜ್ಞಾನ-ವಿಜ್ಞಾನಗಳಿಂದ ಪರಿಶುದ್ಧರಾದವರು. ಲೋಕಗಳಿಂದ ಗಮನಾಗಮನಗಳನ್ನು ತಿಳಿದವರು. ಎಲ್ಲರೂ ದೋಷದೂರರಾದವರು.

ತಸ್ಮಾದ್ ಭವದ್ಭಿರ್ಯತ್ ಕಿಂಚಿದ್ ದೃಷ್ಟಂ ವಾऽಪ್ಯಥವಾ ಶ್ರುತಮ್ ।
ಆಶ್ಚರ್ಯಭೂತಂ ಲೋಕೇಷು ತದ್ ಭವಂತೋ ಬ್ರುವಂತು ಮೇ ॥೩॥

ಆದ್ದರಿಂದ ನೀವು ಲೋಕದಲ್ಲಿ ನೋಡಿದ ಅಥವಾ ಕೇಳಿದ ಯಾವುದಾದರೂ ಆಶ್ಚರ್ಯಕರವಾದ ವಿಷಯವನ್ನು ನನಗೆ ಹೇಳಿ.

ಯುಷ್ಮಾಭಿಃ ಕಥಿತಂ ಯತ್ ಸ್ಯಾತ್ ತಪಸಾ ಭಾವಿತಾತ್ಮಭಿಃ ।
ತತ್ ಸ್ಯಾದಮೃತಸಂಕಾಶಂ ವಾಙ್ಮಧುಶ್ರವಣೇ ಸ್ಪೃಹಾ ॥೪॥

ತಪಸ್ಸಿನಿಂದ ಶೋಧಿತವಾದ ಮನಸ್ಸನ್ನು ಹೊಂದಿದ ನೀವು ಹೇಳುವಂತಹ ವಿಷಯವು ಅಮೃತದಂತಿರುತ್ತದೆ. ಅಂತಹ ವಾಙ್ಮಯವಾದ ಮಧುವನ್ನು ಸ್ವೀಕರಿಸಲು ನನಗೆ ಆಸೆಯಾಗಿದೆ.

ರಾಗದ್ವೇಷವಿಯುಕ್ತಾನಾಂ ಸತತಂ ಸತ್ಯವಾದಿನಾಮ್ ।
ಶ್ರದ್ಧೇಯಂ ಶ್ರವಣೇಯಂ ಚ ವಚನಂ ಹಿ ಸತಾಂ ಭವೇತ್ ॥೫॥

ರಾಗ-ದ್ವೇಷ ರಹಿತರಾದವರೂ, ಸತತವೂ ಸತ್ಯವಾದಿಗಳೂ ಆದವರ ಮಾತುಗಳನ್ನು ಸಜ್ಜನರು ಕೇಳಿ ಶ್ರದ್ಧೆಯನ್ನು ಮಾಡಬೇಕು.

ತತ್ಸಂಯೋಗಂ ಹಿ ತನ್ಮೇऽಸ್ತು ನ ವೃಥಾ ಕರ್ತುಮರ್ಹಥ ।
ಭವತಾಂ ದರ್ಶನಂ ತಸ್ಮಾತ್ ಸಫಲಂ ತು ಭವೇನ್ಮಮ ॥೬॥

ಅಂತಹ ವಚನಗಳ ಸಂಯೋಗವು ನನಗಾಗಲಿ. ನನ್ನ ಪ್ರಾರ್ಥನೆಯನ್ನು ವ್ಯರ್ಥಗೊಳಿಸಬೇಡಿ. ನನಗೆ ನಿಮ್ಮ ದರ್ಶನವು ಸಫಲವಾಗಲಿ.

ತದಹಂ ಸಜ್ಜನಮುಖಾನ್ನಿಃಸೃತಂ ಜನಸಂಸದಿ ।
ಕಥಯಿಷ್ಯಾಮ್ಯಹರಹೋ ಬುದ್ಧಿದೀಪಕರಂ ನೃಣಾಮ್ ॥೭॥

ಸಜ್ಜನರ ಮುಖದಿಂದ ಬಂದ, ಬುದ್ಧಿಯನ್ನು ಉದ್ದೀಪನಗೊಳಿಸುವ ಅಂತಹ ವಿಷಯವನ್ನು ನಾನು ಜನಸಮೂಹದಲ್ಲಿ ನಿತ್ಯವೂ ಹೇಳುವೆನು.

ತದನ್ಯೇ ವರ್ಧಯಿಷ್ಯಂತಿ ಪೂಜಯಿಷ್ಯಂತಿ ವಾಪರೇ ।
ವಾಕ್‌ಶಲ್ಯವಿಗತಾಶ್ಚಾನ್ಯೇ ಪ್ರಶಂಸಂತಿ ಪುರಾತನಾಃ ॥೮॥

ಅದನ್ನು ಉಳಿದವರು ಅಭಿವೃದ್ಧಿಗೊಳಿಸುತ್ತಾರೆ. ಇನ್ನು ಕೆಲವರು ಗೌರವಿಸುತ್ತಾರೆ. ವಾಕ್‌ಶಲ್ಯರಹಿತರಾಗಿ ಮೃದುವಾಗಿ ಮಾತನಾಡುವ ಪ್ರಾಚೀನರು ಪ್ರಶಂಸೆ ಮಾಡುತ್ತಾರೆ.

ಭೀಷ್ಮಃ

ಏವಂ ಬ್ರುವತಿ ಗೋವಿಂದೇ ಶ್ರವಣಾರ್ಥಂ ಮಹರ್ಷಯಃ ।
ವಾಗ್ಭಿಃ ಸಾಂಜಲಿಮಾಲಾಭಿರಿದಮೂಚುರ್ಜನಾರ್ದನಮ್ ॥೯॥

ಭೀಷ್ಮ– ಗೋವಿಂದನು ಶ್ರವಣವನ್ನು ಮಾಡಲು ಬಯಸಿ ಹೀಗೆ ಮಾತನಾಡುತ್ತಿರಲು ಮಹರ್ಷಿಗಳು ತಮ್ಮ ಕೈಗಳನ್ನು ಜೋಡಿಸಿ ಜನಾರ್ದನನನ್ನು ಕುರಿತು ಹೀಗೆ ಮಾತನಾಡಿದರು.

ಅಯುಕ್ತಮಸ್ಮಾನೇವಂ ತ್ವಂ ವಾಚಾ ವರದ ಭಾಷಿತುಮ್ ।
ತ್ವಚ್ಛಾಸನಮುಖಾಃ ಸರ್ವೇ ತ್ವದಧೀನಪರಿಶ್ರಮಾಃ ॥೧೦॥

ಎಲೈ ವರದನೇ, ನಮ್ಮನ್ನು ಕುರಿತು ನೀನು ಹೀಗೆ ಮಾತನಾಡುವುದು ನ್ಯಾಯವಲ್ಲ. ನಾವೆಲ್ಲರೂ ನಿನ್ನ ಮುಖದಿಂದ ಬರುವ ಶಾಸನವನ್ನೇ ನಿರೀಕ್ಷಿಸುತ್ತಾ, ನಿನಗೆ ಅಧೀನರಾಗಿ ಪರಿಶ್ರಮವನ್ನು ಪಡುತ್ತೇವೆ.

ಏವಂ ಪೂಜಯಿತುಂ ಚಾಸ್ಮಾನ್ ನ ಚೈವಾರ್ಹಸಿ ಕೇಶವ ।
ತದ್ಧಸ್ತ್ವನ್ಯನ್ನ ಪಶ್ಯಾಮೋ ಯಲ್ಲೋಕೇ ತೇ ನ ವಿದ್ಯತೇ ।
ದಿವಿ ವಾ ಭುವಿ ವಾ ಕಿಂಚಿತ್ ತತ್ಸರ್ವಂ ಹಿ ತ್ವಯಾ ತತಮ್ ॥೧೧॥

ಎಲೈ ಕೇಶವನೇ, ನೀನು ನಮ್ಮನ್ನು ಪೂಜಿಸುವುದು ಸರಿಯಲ್ಲ. ನಿನ್ನ ಬಳಿ ಇಲ್ಲದಿರುವ ಯಾವ ಶುಭವಸ್ತು (ಗುಣ)ವನ್ನೂ ನಾವು ಲೋಕದಲ್ಲಿ ನೋಡಲಾರೆವು. ಭೂಮಿಯಲ್ಲಿ ಸ್ವರ್ಗದಲ್ಲಿ ಇರುವ ವಸ್ತುಗಳೆಲ್ಲವೂ ನಿನ್ನಿಂದ ವ್ಯಾಪ್ತವಾಗಿವೆ.

ನ ವಿದ್ಮಹೇ ವಯಂ ದೇವ ಕಥ್ಯಮಾನಂ ತವಾಂತಿಕೇ ।
ಏವಮುಕ್ತೋ ಹೃಷೀಕೇಶಃ ಸಸ್ಮಿತಂ ಚೇದಮಬ್ರವೀತ್ ॥೧೨॥

ಎಲೈ ದೇವನೇ, ನಿನ್ನ ಬಳಿ ನಾವು ಹೇಳಬಹುದಾದಂತಹ ಯಾವ ವಿಷಯವೂ ನಮಗೆ ಕಾಣುವುದಿಲ್ಲ (ಎಂದು ಹೇಳಿದರು). ಹೀಗೆ ಹೇಳಲ್ಪಟ್ಟ ಹೃಷೀಕೇಶನು ನಗುತ್ತಾ ಈ ಮಾತನ್ನು ಆಡಿದನು.

ಅಹಂ ಮಾನುಷಯೋನಿಸ್ಥಃ ಸಾಂಪ್ರತಂ ಮುನಿಪುಂಗವಾಃ ।
ತಸ್ಮಾನ್ಮಾನುಷವದ್ ವೀರ್ಯಂ ಮಮ ಜಾನೀತ ಸುವ್ರತಾಃ ।
ಭವದ್ಭಿಃ ಕಥ್ಯಮಾನಂ ಚ ಅಪೂರ್ವಮಿವ ತದ್ ಭವೇತ್ ॥೧೩॥

ಎಲೈ ಮುನಿಪುಂಗವರೇ, ನಾನು ಈಗ ಮಾನುಷಯೋನಿಯಲ್ಲಿದ್ದೇನೆ. ಆದ್ದರಿಂದ ಎಲೈ ಸುವ್ರತರೇ, ನನ್ನ ಸಾಮರ್ಥ್ಯವು ಮನುಷ್ಯರ ಸಾಮರ್ಥ್ಯದಂತೆ ಇದೆ ಎಂದು ತಿಳಿಯಿರಿ. ಆದ್ದರಿಂದ ನೀವು ಹೇಳುವುದೆಲ್ಲವೂ ನನಗೆ ಹೊಸದಾಗಿರುವಂತೆಯೇ ತೋರುತ್ತದೆ ಎಂದು ಹೇಳಿದನು.

ಭೀಷ್ಮಃ

ಏವಂ ಸಂಚೋದಿತಾಃ ಸರ್ವೇ ಕೇಶವೇನ ಮಹಾತ್ಮನಾ ।
ಋಷಯಶ್ಚಾನುವರ್ತಂತೇ ವಾಸುದೇವಸ್ಯ ಶಾಸನಮ್ ॥೧೪॥

ಭೀಷ್ಮ- ಹೀಗೆ ಮಹಾತ್ಮನಾದ ಕೇಶವನಿಂದ ಪ್ರೇರಿಸಲ್ಪಟ್ಟ ಋಷಿಗಳೆಲ್ಲರೂ ವಾಸುದೇವನ ಶಾಸನವನ್ನು ಅನುಸರಿಸಿದರು.

ತತಸ್ತ ್ವಷಿಗಣಾಃ ಸರ್ವೇ ನಾರದಂ ದೇವದರ್ಶನಮ್ ।
ಅಮನ್ಯಂತ ಬುಧಾ ಬುದ್ಧ್ಯಾ ಸಮರ್ಥಂ ತನ್ನಿಬೋಧನೇ ॥೧೫॥

ಆಗ ಜ್ಞಾನಿಗಳಾದ ಎಲ್ಲ ಋಷಿಗಳು ದೇವದರ್ಶನರಾದ ನಾರದರನ್ನು ಮಾತನಾಡಲು ಸಮರ್ಥರೆಂದು ತಿಳಿದರು.

ಋಷಿರುಗ್ರತಪಾಶ್ಚಾಯಂ ಕೇಶವಸ್ಯ ಪ್ರಿಯೋಽಧಿಕಮ್ ।
ಪುರಾಣಜ್ಞಶ್ಚ ವಾಗ್ಮೀ ಚ ಕಾರಣೈಸ್ತಂ ಚ ಮೇನಿರೇ ॥೧೬॥

ನಾರದರು ಉಗ್ರತಪಸ್ಸನ್ನು ಮಾಡಿದವರು. ಕೇಶವನಿಗೆ ಅಧಿಕ ಪ್ರಿಯರಾದವರು. ಪುರಾಣವನ್ನು ತಿಳಿದವರು ಮತ್ತು ವಾಗ್ಮಿಗಳು. ಈ ಕಾರಣದಿಂದ ಅವರು ಸಮರ್ಥರಾದವರು ಎಂದು ತಿಳಿದರು.

ಸರ್ವೇ ತದರ್ಹಣಂ ಕೃತ್ವಾ ನಾರದಂ ವಾಕ್ಯಮಬ್ರುವನ್ ॥೧೭॥

ಆಗ ಎಲ್ಲರೂ ನಾರದರನ್ನು ಪೂಜಿಸಿ ಅವರನ್ನು ಕುರಿತು ಹೀಗೆ ಹೇಳಿದರು.

ಭವತಾ ತೀರ್ಥಯಾತ್ರಾರ್ಥಂ ಚರತಾ ಹಿಮವದ್ಗಿರೌ ।
ದೃಷ್ಟಂ ವೈ ಯತ್ ತದಾಶ್ಚರ್ಯಂ ಶ್ರೋತೃಣಾಂ ಪರಮಂ ಪ್ರಿಯಮ್ ॥

ತತ್ತ ್ವಂ ತ್ವಮವಿಶೇಷೇಣ ಹಿತಾರ್ಥಂ ಸರ್ವಮಾದಿತಃ ।
ಪ್ರಿಯಾರ್ಥಂ ಕೇಶವಸ್ಯಾಸ್ಯ ಸ ಭವಾನ್ ವಕ್ತುಮರ್ಹತಿ ॥೧೯॥

ಹಿಮಾಲಯ ಪರ್ವತದಲ್ಲಿ ನೀವು ತೀರ್ಥಯಾತ್ರೆಯನ್ನು ಮಾಡುವಾಗ ನೋಡಿದ, ಶ್ರೋತೃಗಳಿಗೆ ಪರಮಪ್ರಿಯವಾದ, ಆಶ್ಚರ್ಯಕರವಾದ ವಿಷಯವೆಲ್ಲವನ್ನೂ ಮೊದಲಿನಿಂದಲೂ ಪ್ರಾರಂಭಿಸಿ ಕೇಶವನ ಪ್ರೀತಿಗಾಗಿ ಹೇಳಬೇಕು (ಎಂದು ಹೇಳಿದರು).

ಭೀಷ್ಮಃ

ತದಾ ಸಂಚೋದಿತಃ ಸರ್ವೈರ್ಋಷಿಭಿರ್ನಾರದಸ್ತದಾ ।
ಪ್ರಣಮ್ಯ ಶಿರಸಾ ವಿಷ್ಣುಂ ಸರ್ವಲೋಕಹಿತೇ ರತಮ್ ।
ಸಮುದ್ವೀಕ್ಷ್ಯ ಹೃಷೀಕೇಶಂ ವಕ್ತುಮೇವೋಪಚಕ್ರಮೇ ॥೨೦॥

ಭೀಷ್ಮ- ಆಗ ಎಲ್ಲ ಋಷಿಗಳಿಂದಲೂ ಪ್ರಚೋದಿಸಲ್ಪಟ್ಟ ನಾರದರು ಸರ್ವಲೋಕ ಹಿತದಲ್ಲಿ ರತನಾದ ವಿಷ್ಣುವನ್ನು ನಮಸ್ಕರಿಸಿ ಹೃಷೀಕೇಶನನ್ನು ನೋಡುತ್ತಾ ಮಾತನಾಡಲು ಪ್ರಾರಂಭಿಸಿದರು.

ತತೋ ನಾರಾಯಣಸುಹೃನ್ನಾರದೋ ವದತಾಂವರಃ ।
ಶಂಕರಸ್ಯೋಮಯಾ ಸಾರ್ಧಂ ಸಂವಾದಮನುಭಾಷತ ॥೨೧॥

ಅನಂತರ ಮಾತನಾಡುವವರಲ್ಲಿ ಶ್ರೇಷ್ಠರಾದ, ನಾರಾಯಣನ ಪ್ರಿಯರಾದ ನಾರದರು ಶಿವ-ಪಾರ್ವತಿಯರಿಗೆ ನಡೆದ ಸಂವಾದವನ್ನು ಅನುವಾದವನ್ನು ಮಾಡಲು ಪ್ರಾರಂಭಿಸಿದರು.

॥ ಇತಿ ಶ್ರೀಮನ್ಮಹಾಭಾರತೇ ಅನುಶಾಸನಪರ್ವಣಿ ದಾನಧರ್ಮಕಥನೇ
ಋಷಿ-ಕೇಶವಸಂವಾದೋ ನಾಮ ಏಕನವತ್ಯುತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ತೊಂಬತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ತೊಂಬತ್ತೆರಡನೆಯ ಅಧ್ಯಾಯ

ನಾರದರಿಂದ ಉಮಾ-ಮಹೇಶ್ವರಸಂವಾದದ ಅನುವಾದ.
ರುದ್ರನ ತೃತೀಯನೇತ್ರೋತ್ಪತ್ತಿ.

ನಾರದಃ

ಭಗವಂಸ್ತೀರ್ಥಯಾತ್ರಾರ್ಥಂ ತಥೈವ ಚರತಾ ಮಯಾ ।
ದಿವ್ಯಮದ್ಭುತಸಂಕಾಶಂ ದೃಷ್ಟಂ ಹೈಮವತಂ ವನಮ್ ॥೧॥

ನಾರದ– ಭಗವಂತನೇ, ತೀರ್ಥಯಾತ್ರೆಗಾಗಿ ನಾನು ಸಂಚಾರ ಮಾಡುತ್ತಿದ್ದಾಗ ದಿವ್ಯವಾದ ಮತ್ತು ಅದ್ಭುತವಾದ ಕಾಂತಿಯುಳ್ಳ ಹಿಮಾಲಯ ಪರ್ವತದ ವನವನ್ನು ನೋಡಿದೆನು.

ನಾನಾವೃಕ್ಷಲತಾಯುಕ್ತಂ ನಾನಾಪಕ್ಷಿಗಣೈರ್ವೃತಮ್ ।
ನಾನಾರತ್ನಸಮಾಕೀರ್ಣಂ ನಾನಾಭಾವಸಮನ್ವಿತಮ್ ॥೨॥

ದಿವ್ಯಚಂದನಸಂಯುಕ್ತಂ ದಿವ್ಯಧೂಪೇನ ಧೂಪಿತಮ್ ।
ದಿವ್ಯಪುಷ್ಪಸಮಾಕೀರ್ಣಂ ದಿವ್ಯಗಂಧೇನ ಮೂರ್ಚ್ಛಿತಮ್ ॥೩॥

ಸಿದ್ಧಚಾರಣಸಂವಾಸಂ ಭೂತಸಂಘೈರ್ನಿಷೇವಿತಮ್ ।
ವರಿಷ್ಠಾಪ್ಸರಸಾಕೀರ್ಣಂ ನಾನಾಗಂಧರ್ವಸಂಕುಲಮ್ ॥೪॥

ಅದು ನಾನಾ ವೃಕ್ಷಗಳಿಂದಲೂ, ನಾನಾ ಪಕ್ಷಿಗಣಗಳಿಂದಲೂ, ಅನೇಕ ವಿಧವಾದ ರತ್ನಗಳಿಂದಲೂ, ಅನೇಕ ಅಭಿಪ್ರಾಯಗಳಿಂದಲೂ ಕೂಡಿದ್ದಿತು. ದಿವ್ಯಚಂದನದಿಂದ ಕೂಡಿ, ದಿವ್ಯಧೂಮದಿಂದ ಧೂಪಿತವಾಗಿ, ದಿವ್ಯಪುಷ್ಪಗಳು ಎಲ್ಲೆಡೆಯಲ್ಲಿಯೂ ಹರಡಿ ವ್ಯಾಪ್ತವಾದ ದಿವ್ಯವಾದ ಗಂಧವನ್ನು ಹೊಂದಿದ್ದಿತು. ಸಿದ್ಧ- ಚಾರಣರಿಗೆ ವಾಸಸ್ಥಾನವಾಗಿ, ಭೂತಗಣಗಳಿಂದ ಸೇವಿತವಾಗಿ, ಶ್ರೇಷ್ಠರಾದ ಅಪ್ಸರೆಯರಿಂದ ಮತ್ತು ನಾನಾ ಗಂಧರ್ವರಿಂದ ನಿಬಿಡವಾಗಿದ್ದಿತು.

ಮೃದಂಗಮುರಜೋದ್ಘುಷ್ಟಂ ಶಂಖವೀಣಾಭಿನಾದಿತಮ್ ।
ನೃತ್ಯದ್ಭಿರ್ಭೂತಸಂಘೈಶ್ಚ ಸರ್ವತಸ್ತ್ವಭಿಶೋಭಿತಮ್ ॥೫॥

ಮೃದಂಗ, ಮುರಜ ಮೊದಲಾದ ವಾದ್ಯಘೋಷದಿಂದಲೂ, ಶಂಖ-ವೀಣಾ ಮೊದಲಾದವುಗಳ ಘೋಷದಿಂದಲೂ, ನರ್ತನವನ್ನು ಮಾಡುವ ಭೂತಸಂಘಗಳಿಂದಲೂ ಎಲ್ಲಕಡೆಯಲ್ಲಿಯೂ ಶೋಭಿಸುತ್ತಿದ್ದಿತು.

ನಾನಾರೂಪೈರ್ವಿರೂಪೈಶ್ಚ ಭೀಮರೂಪೈರ್ಭಯಾನಕೈಃ ।
ವ್ಯಾಘ್ರಸಿಂಹೋರಗಮುಖೈರ್ಬಿಡಾಲವದನೈಸ್ತಥಾ ॥೬॥

ಖರೋಷ್ಟ್ರದ್ವೀಪಿವದನೈರ್ಗಜವಕ್ತ್ರೈಸ್ತಥೈವ ಚ ।
ಉಲೂಕಶ್ಯೇನವದನೈಃ ಕಾಕಗೃಧ್ರಮುಖೈಸ್ತಥಾ ॥೭॥

ಏವಂ ಬಹುವಿಧಾಕಾರೈರ್ಭೂತಸಂಘೈರ್ಭೃಶಾಕುಲಮ್ ।
ನಾನದ್ಯಮಾನಂ ಬಹುಧಾ ಹರಪಾರಿಷದೈರ್ಭೃಶಮ್ ॥೮॥

ನಾನಾ ರೂಪಗಳನ್ನು ಧರಿಸಿದ, ವಿಕಾರ ರೂಪಗಳನ್ನು, ಭಯಂಕರ ರೂಪಗಳನ್ನು ಹೊಂದಿದ, ಭಯಂಕರವಾದ ವ್ಯಾಘ್ರ-ಸಿಂಹ-ಸರ್ಪಗಳ ಮುಖವನ್ನು ಹೊಂದಿದ, ಕತ್ತೆ-ಒಂಟೆ-ಚಿರತೆಗಳ ಮುಖವನ್ನು ಹೊಂದಿದ, ಆನೆಯ ಮುಖವನ್ನು ಹೊಂದಿದ, ಗೂಬೆ-ಹದ್ದುಗಳ ಮುಖವನ್ನು ಹೊಂದಿದ, ಕಾಗೆ-ಗಿಡಗಗಳ ಮುಖವನ್ನು ಹೊಂದಿದ ಅನೇಕ ವಿಧವಾದ, ಅನೇಕ ಆಕಾರಗಳನ್ನು ಹೊಂದಿದ ಭೂತಸಂಘಗಳಿಂದ ನಿಬಿಡವಾಗಿದ್ದಿತು. ರುದ್ರನ ಪಾರ್ಷದರು ಉಂಟುಮಾಡಿದ ಕೋಲಾಹಲದಿಂದ ಕೂಡಿದ್ದಿತು.

ಘೋರರೂಪಂ ಸುದುರ್ದರ್ಶಂ ರಕ್ಷೋಗಣಶತೈರ್ವೃತಮ್ ।
ಸಮಾಜಂ ತದ್ವನೇ ದೃಷ್ಟಂ ಮಯಾ ಭೂತಪತೇಃ ಪುರಾ ॥೯॥

ಹಿಂದೆ ಭೂತಪತಿಯಾದ ಶಿವನ ಆ ವನದಲ್ಲಿ ನಾನು ಘೋರರೂಪವನ್ನು ಹೊಂದಿದ, ನೋಡಲು ಕಷ್ಟಸಾಧ್ಯವಾದ, ನೂರಾರು ರಾಕ್ಷಸ ಸಮೂಹದಿಂದ ಕೂಡಿದ ಸಭೆಯನ್ನು ನೋಡಿದೆನು.

ಪ್ರನೃತ್ತಾಪ್ಸರಸಂ ದಿವ್ಯಂ ದೇವಗಂಧರ್ವನಾದಿತಮ್ ।
ಷಟ್‌ಪದೈರುಪಗೀತಂ ಚ ಪ್ರಥಮೇ ಮಾಸಿ ಮಾಧವೇ ॥೧೦॥

ಉತ್ಕೋಶತ್ಕೊಂಚಕುರರೈಃ ಸಾರಸೈರ್ದೇವಜೀವಕೈಃ ।
ಮತ್ತಾಭಿಃ ಪರಪುಷ್ಟಾಭಿಃ ಕೂಜಂತೀಭಿಃ ಸಮಾಕುಲಮ್ ॥೧೧॥

ಉತ್ತಮೋತ್ಸವಸಂಕಾಶಂ ಭೀಮರೂಪತರಂ ತತಃ ।
ದ್ರಷ್ಟುಂ ಭವತಿ ಸರ್ವಸ್ಯ ಧರ್ಮಭಾಗಿಜನಸ್ಯ ಚ ॥೧೨॥

ಅಪ್ಸರೆಯರು ನರ್ತನವನ್ನು ಮಾಡುತ್ತಿದ್ದ, ದೇವ-ಗಂಧರ್ವರು ಗಾನವನ್ನು ಮಾಡುತ್ತಿದ್ದ, ದಿವ್ಯವಾದ ವಸಂತ ಋತುವಿನ ಭ್ರಮರಗಳ ಝೇಂಕಾರದಿಂದ ಕೂಡಿದ ಕ್ರೌಂಚ-ಚಕೋರ ಪಕ್ಷಿಗಳ ನಾದದಿಂದಲೂ, ಸಾರಸ-ಚಕ್ರವಾಕ ಪಕ್ಷಿಗಳ ನಾದದಿಂದಲೂ, ಮತ್ತು ಕೋಗಿಲೆಗಳ ನಾದದಿಂದಲೂ ಕೂಡಿದಂತಹ, ದೊಡ್ಡ

ಉತ್ಸವದಂತಿದ್ದರೂ ಭಯಂಕರವಾಗಿ ಕಾಣುತ್ತಿದ್ದ ಧರ್ಮಾನುಸಾರಿಗಳಾದ ಜನರೆಲ್ಲರಿಗೂ ನೋಡಲು ಸಾಧ್ಯವಾಗುವಂತಹ ಸಭೆಯನ್ನು ನೋಡಿದೆನು.

ಯೇ ಚೋರ್ಧ್ವರೇತಸಃ ಸಿದ್ಧಾಸ್ತತ್ರ ತತ್ರ ಸಮಾಗತಾಃ ।
ಮಾರ್ತಾಂಡರಶ್ಮಿಸಂಚಾರಾ ವಿಶ್ವೇದೇವಗಣಾಸ್ತಥಾ ॥೧೩॥

ತಥಾ ನಾಗಾಸ್ತಥಾ ದಿವ್ಯಾ ಲೋಕಪಾಲಾ ಹುತಾಶನಾಃ ।
ವಾತಾಶ್ಚ ಸರ್ವೇ ವಾಯಂತಿ ದಿವ್ಯಪುಷ್ಪಸಮಾಕುಲಾಃ ॥೧೪॥

ಅಲ್ಲಿ ಊರ್ಧ್ವರೇತಸ್ಕರಾದ ಸಿದ್ಧರು ಅಲ್ಲಲ್ಲಿ ಇದ್ದರು. ಸೂರ್ಯನ ರಶ್ಮಿಗಳಲ್ಲಿ ಸಂಚಾರ ಮಾಡುವ ಋಷಿಗಳು ಮತ್ತು ವಿಶ್ವೇದೇವಗಣಗಳು, ನಾನಾ ದಿವ್ಯ ಗಜಗಳು, ಲೋಕಪಾಲಕರು, ಅಗ್ನಿಯು ಇದ್ದರು. ವಾಯುವು ಅಲ್ಲಿ ದಿವ್ಯಪುಷ್ಪದ ಗಂಧವನ್ನು ತೆಗೆದುಕೊಂಡು ಬೀಸುತ್ತಿದ್ದಿತು.

ಕಿರಂತಃ ಸರ್ವಪುಷ್ಪಾಣಿ ಕಿರಂತೋऽದ್ಭುತದರ್ಶನಾಃ ।
ಓಷಧ್ಯಃ ಪ್ರಜ್ವಲಂತ್ಯಶ್ಚ ದ್ಯೋತಯಂತ್ಯೋ ದಿಶೋ ದಶ ॥೧೫॥

ವಿಹಗಾಶ್ಚ ಮುದಾ ಯುಕ್ತಾ ನೃತ್ಯಂತಿ ಚ ನದಂತಿ ಚ ।
ಗಿರಃ ಸುಮಧುರಾಸ್ತತ್ರ ದಿವ್ಯಾ ದಿವ್ಯಜನಪ್ರಿಯಾಃ ॥೧೬॥

ಅಲ್ಲಿ ಅನೇಕ ವಾಯುಗಳು ಎಲ್ಲ ಪುಷ್ಪಗಳನ್ನು ಮತ್ತು ಅದ್ಭುತವಾಗಿ ಕಾಣುವ ಪ್ರಜ್ವಲಿಸುವ ಓಷಧಿಗಳನ್ನು ತಂದು ಹಾಕಿ ಹತ್ತು ದಿಕ್ಕುಗಳು ಕಂಗೊಳಿಸುತ್ತಿದ್ದವು. ಪಕ್ಷಿಗಳು ಸಂತೋಷದಿಂದ ಕುಣಿದು ಕೇಕೆಯನ್ನು ಹಾಕುತ್ತಿದ್ದವು. ದಿವ್ಯಜನಪ್ರಿಯವೂ, ದಿವ್ಯವೂ ಆದ ಸುಮಧುರವಾದ ಮಾತುಗಳು ಅಲ್ಲಿ ಕೇಳಿ ಬರುತ್ತಿದ್ದವು.

ತತ್ರ ದೇವೋ ಗಿರಿತಟೇ ಹೇಮಧಾತುವಿಭೂಷಿತೇ ।
ಪರ್ಯಂಕ ಇವ ಬಭ್ರಾಜ ಉಪವಿಷ್ಟೋ ಮಹಾದ್ಯುತಿಃ ॥೧೭॥

ಅಲ್ಲಿ ಹೇಮಧಾತು (ಬಂಗಾರ) ವಿಭೂಷಿತವಾದ ಪರ್ವತ ಪ್ರದೇಶವೊಂದರಲ್ಲಿ ಪರ್ಯಂಕದಲ್ಲಿ ಕುಳಿತಿದ್ದಂತೆ ಮಹಾದ್ಯುತಿ (ಕಾಂತಿ) ಯುಳ್ಳ ರುದ್ರನು ಕುಳಿತಿದ್ದನು.

ವ್ಯಾಘ್ರಚರ್ಮಪರೀಧಾನೋ ಗಜಚರ್ಮೋತ್ತರಚ್ಛದಃ ।
ವ್ಯಾಲಯಜ್ಞೋಪವೀತಶ್ಚ ಲೋಹಿತಾಂತ್ರವಿಭೂಷಿತಃ ॥೧೮॥

ಹರಿಶ್ಮಶ್ರುಜಟೋ ಭೀಮೋ ಭಯಕರ್ತಾ ಸುರದ್ವಿಷಾಮ್ ।
ಭಯಘ್ನಃ ಸರ್ವಭೂತಾನಾಂ ಭಕ್ತಾನಾಮಭಯಂಕರಃ ॥೧೯॥

ಕಿನ್ನರೈರ್ದೇವಗಂಧರ್ವೈಃ ಸ್ತೂಯಮಾನಃ ಸಮಂತತಃ ।
ಋಷಿಭಿಶ್ಚಾಪ್ಸರೋಭಿಶ್ಚ ಸರ್ವತಶ್ಚಾಪಿ ಶೋಭಿತಃ ॥೨೦॥

ವ್ಯಾಘ್ರಚರ್ಮವನ್ನು ಉಟ್ಟು, ಗಜಚರ್ಮವನ್ನು ಹೊದ್ದು, ಸರ್ಪ ಯಜ್ಞೋಪವೀತವನ್ನು ಧರಿಸಿ, ಕೆಂಪಾದ ಕರುಳಿನ ಹಾರದಿಂದ ವಿಭೂಷಿತನಾಗಿ, ಹಸಿರು ಬಣ್ಣದ ಶ್ಮಶ್ರು- ಜಟೆಗಳನ್ನು ಧರಿಸಿ ಭಯಂಕರನೂ, ಸುರಶತ್ರುಗಳಿಗೆ ಭಯವನ್ನು ಉಂಟುಮಾಡುವವನೂ, ಸರ್ವಭೂತಗಳಿಗೂ ಭಯವನ್ನು ಪರಿಹಾರ ಮಾಡುವವನೂ, ಭಕ್ತರಿಗೆ ಅಭಯಂಕರನೂ ಆದ ಶಿವನು ಕಿನ್ನರರಿಂದಲೂ, ದೇವ-ಗಂಧರ್ವರಿಂದಲೂ ಎಲ್ಲಕಡೆಯಿಂದಲೂ ಸ್ತೋತ್ರ ಮಾಡಲ್ಪಟ್ಟು ಋಷಿಗಳ ಜೊತೆಯಲ್ಲಿ ಮತ್ತು ಅಪ್ಸರೆಯರ ಜೊತೆಯಲ್ಲಿ ಶೋಭಿಸುತ್ತಿದ್ದನು.

ತತ್ರ ಭೂತಪತೇಃ ಸ್ಥಾನಂ ದೇವದಾನವಸಂಕುಲಮ್ ।
ಸರ್ವತೇಜೋಮಯಂ ಭೂಮ್ನಾ ಲೋಕಪಾಲನಿಷೇವಿತಮ್ ॥೨೧॥

ಮಹೋರಗಸಮಾಕೀರ್ಣಂ ಸರ್ವೇಷಾಂ ಲೋಮಹರ್ಷಣಮ್ ।
ಭೀಮರೂಪಮನಿರ್ದೇಶ್ಯಮಪ್ರಧೃಷ್ಯತಮಂ ವಿಭೋ ॥೨೨॥

ಎಲೈ ವಿಭುವೇ, ಅಲ್ಲಿ ಭೂತಪತಿಯಾದ ಶಿವನ ಸ್ಥಾನವು ದೇವ-ದಾನವರಿಂದ ನಿಬಿಡವಾಗಿ, ಸರ್ವತೇಜೋಮಯವಾಗಿ, ಲೋಕಪಾಲರಿಂದ ನಿಷೇವಿತವಾಗಿ ಮಹಾಸರ್ಪಗಳಿಂದ ಸುತ್ತುವರಿಯಲ್ಪಟ್ಟು ಎಲ್ಲರೂ ರೋಮಾಂಚನವುಳ್ಳವರಾಗಿ, ಭಯಂಕರ ರೂಪವುಳ್ಳದ್ದೂ, ವರ್ಣಿಸಲು ಅಸಾಧ್ಯವಾದದ್ದೂ, ಪರಾಭವಗೊಳಿಸಲು ಅಸಾಧ್ಯವಾದದ್ದೂ ಆಗಿದೆ (ಆಗಿದ್ದಿತು).

ತತ್ರ ಭೂತಪತಿಂ ದೇವಮಾಸೀನಂ ಶಿಖರೋತ್ತಮೇ ।
ಋಷಯೋ ಭೂತಸಂಘಾಶ್ಚ ಪ್ರಣಮ್ಯ ಶಿರಸಾ ಹರಮ್ ।
ಗೀರ್ಭಿಃ ಪರಮಶುದ್ಧಾಭಿಸ್ತುಷ್ಟುವುಶ್ಚ ಮನೋಹರಮ್ ॥೨೩॥

ಅಲ್ಲಿ ಒಂದು ಶ್ರೇಷ್ಠವಾದ ಶಿಖರದಲ್ಲಿ ಕುಳಿತ ಭೂತಪತಿಯಾದ ರುದ್ರದೇವನನ್ನು ಋಷಿಗಳು, ಭೂತಸಂಘಗಳು ಶಿರಸಾ ನಮಸ್ಕರಿಸಿ ಪರಮ ಶುದ್ಧವಾದ ಮಾತುಗಳಿಂದ ಮನೋಹರವಾಗಿ ಸ್ತೋತ್ರವನ್ನು ಮಾಡಿದವು.

ವಿಮುಕ್ತಾಶ್ಚೈವ ಪಾಪೇಭ್ಯೋ ಬಭೂವುರ್ವಿಗತಜ್ವರಾಃ ।
ಋಷಯೋ ವಾಲಖಿಲ್ಯಾಶ್ಚ ತಥಾ ವಿಪ್ರರ್ಷಯಶ್ಚ ಯೇ ॥೨೪॥

ಅಯೋನಿಜಾ ಯೋನಿಜಾಶ್ಚ ತಪಃಸಿದ್ಧಾ ಮಹರ್ಷಯಃ ।
ತತಸ್ತಂ ದೇವದೇವೇಶಂ ಭಗವಂತಮುಪಾಸತೇ ॥೨೫॥

ಎಲ್ಲ ಪಾಪಗಳಿಂದಲೂ ನಿರ್ಮುಕ್ತರಾದ, ನಿರಾತಂಕರಾದ ಋಷಿಗಳೂ, ವಾಲಖಿಲ್ಯರೂ, ಬ್ರಹ್ಮರ್ಷಿಗಳೂ, ಅಯೋನಿಜರೂ, ಯೋನಿಜರೂ, ತಪಸ್ಸಿದ್ಧರಾದ ಮಹರ್ಷಿಗಳೂ ಅಲ್ಲಿ ದೇವದೇವೇಶನಾದ, ಭಗವಂತನಾದ ಅವನನ್ನು ಉಪಾಸನೆ ಮಾಡುತ್ತಿದ್ದರು.

ತತಸ್ತಸ್ಮಿನ್ ಕ್ಷಣೇ ದೇವೀ ಭೂತಸ್ತ್ರೀಗಣಸಂವೃತಾ ।
ಹರತುಲ್ಯಾಂಬರಧರಾ ಸಮಾನವ್ರತಚಾರಿಣೀ ॥೨೬॥

ಕಾಂಚನಂ ಕಲಶಂ ಗೃಹ್ಯ ಸರ್ವತೀರ್ಥಾಂಬುಪೂರಿತಮ್ ।
ಪುಷ್ಪವೃಷ್ಟ್ಯಾಭಿವರ್ಷಂತೀ ದಿವ್ಯಗಂಧಸಮಾಯುತಾ ॥೨೭॥

ಸರಿದ್ವರಾಭಿಃ ಸರ್ವಾಭಿಃ ಪೃಷ್ಠತೋಽನುಗತಾ ವರಾ ।
ಸೇವಿತುಂ ಭಗವತಾರ್ಶ್ವಮಾಜಗಾಮ ಶುಚಿಸ್ಮಿತಾ ॥೨೮॥

ಅನಂತರ ಆ ಕ್ಷಣದಲ್ಲಿ ಭೂತಸ್ತ್ರೀಗಣದಿಂದ ಪರಿವೃತಳಾದ, ಶಿವನ ವಸ್ತ್ರಕ್ಕೆ ಸದೃಶವಾದ ವಸ್ತ್ರವನ್ನು ಧರಿಸಿದ, ಸಮಾನವ್ರತಚಾರಿಣಿಯಾದ ಪಾರ್ವತೀದೇವಿಯು ಸರ್ವತೀರ್ಥಗಳಿಂದ ಪೂರ್ಣವಾದ ಸುವರ್ಣಕಲಶವನ್ನು ಕೈಯಲ್ಲಿ ಹಿಡಿದು ದಿವ್ಯಗಂಧದಿಂದ ಕೂಡಿದವಳಾಗಿ ಎಲ್ಲ ಕಡೆಯಲ್ಲಿಯೂ ಪುಷ್ಪವೃಷ್ಟಿಯನ್ನು ಮಾಡುತ್ತಾ ಶ್ರೇಷ್ಠವಾದ ನದೀ-ದೇವತೆಗಳಿಂದ ಹಿಂಬಾಲಿಸಲ್ಪಟ್ಟವಳಾಗಿ ರುದ್ರದೇವರ ಸೇವೆಯನ್ನು ಮಾಡಲು ಶುಚಿಸ್ಮಿತಳಾಗಿ ಅವರ ಸಮೀಪಕ್ಕೆ ಬಂದಳು.

ಆಗಮ್ಯ ತು ಗಿರೇಃ ಪುತ್ರೀ ದೇವದೇವಸ್ಯ ಚಾಂತಿಕಮ್ ।
ಮನಃಪ್ರಿಯಂ ಚಿಕೀರ್ಷಂತೀ ಕ್ರೀಡಾರ್ಥಂ ಶಂಕರಾಂತಿಕೇ ॥೨೯॥

ಮನೋಹರಾಭ್ಯಾಂ ಪಾಣಿಭ್ಯಾಂ ಹರನೇತ್ರೇ ಪಿಧಾಯ ತು ।
ಅವೇಕ್ಷ್ಯ ಹೃಷ್ಟಾ ಸ್ವಗಣಾನ್ ಸ್ಮಯಂತೀ ಪೃಷ್ಠತಃ ಸ್ಥಿತಾ ॥೩೦॥

ಪರ್ವತಪುತ್ರಿಯಾದ ಅವಳು ದೇವನ ಸಮೀಪಕ್ಕೆ ಬಂದು, ಅವನಿಗೆ ಪ್ರಿಯವನ್ನುಂಟು ಮಾಡಲು ಕ್ರೀಡಾರ್ಥವಾಗಿ ಶಂಕರನ ಹಿಂದೆ ನಿಂತು ತನ್ನ ಗಣಗಳನ್ನು ನೋಡಿ ನಗುತ್ತಾ ಸಂತೋಷದಿಂದ ತನ್ನ ಮನೋಹರವಾದ ಎರಡು ಕೈಗಳಿಂದ ರುದ್ರನ ಎರಡು ಕಣ್ಣುಗಳನ್ನು ಮುಚ್ಚಿದಳು.

ದೇವ್ಯಾ ಚಾಂಧೀಕೃತೇ ದೇವೇ ಕಶ್ಮಲಂ ಸಮಪದ್ಯತ ।
ನಿಮೀಲಿತೇ ಭೂತಪತೌ ನಷ್ಟಚಂದ್ರಾರ್ಕತಾರಕಮ್ ॥೩೧॥

ನಿಃಸ್ವಾಧ್ಯಾಯವಷಟ್‌ಕಾರಂ ತಮಸಾ ಚಾಭಿಸಂವೃತಮ್ ।
ವಿಷಣ್ಣಂ ಭಯಸಂತ್ರಸ್ತಂ ಜಗದಾಸೀದ್ ಭಯಾಕುಲಮ್ ॥೩೨॥

ದೇವಿಯ ಕ್ರೀಡೆಯಿಂದ ರುದ್ರನು ಅಂಧನಂತೆ ಆಗುತ್ತಿರಲು ಎಲ್ಲ ಕಡೆಯಲ್ಲಿಯೂ ಕತ್ತಲು ಉಂಟಾಯಿತು. ರುದ್ರನು ಕಣ್ಣು ಮುಚ್ಚುತ್ತಿರಲು ಸೂರ್ಯ-ಚಂದ್ರ-ನಕ್ಷತ್ರಗಳು ನಷ್ಟವಾದವು. ಸ್ವಾಧ್ಯಾಯ, ವಷಟ್‌ಕಾರಗಳು ನಿಂತು ಹೋದವು. ಕತ್ತಲೆಯು ಲೋಕವನ್ನು ಆವರಿಸಿತು. ಜಗತ್ತು ವಿಷಾದದಿಂದಲೂ, ಭಯದಿಂದಲೂ ಕೂಡಿ ಸಂತ್ರಸ್ತವಾಯಿತು.

ಹಾಹಾಕಾರಸ್ತ್ವಷೀಣಾಂ ಚ ಲೋಕಾನಾಮಭವತ್ ತದಾ ।
ತಮೋಭಿಭೂತೇ ಸಂಭ್ರಾಂತೇ ಲೋಕೇ ಜೀವಿತಶಂಕಿತೇ ॥೩೩॥

ತೃತೀಯಂ ಚಾಸ್ಯ ಸಂಭೂತಂ ಲಲಾಟೇ ನೇತ್ರಮಾಯತಮ್ ।
ದ್ವಾದಶಾದಿತ್ಯಸಂಕಾಶಂ ಲೋಕಾನ್ ಭಾಸಾऽವಭಾಸಯತ್ ॥೩೪॥

ಋಷಿಗಳಿಗೆ ಮತ್ತು ಲೋಕಗಳಿಗೆ ಹಾಹಾಕಾರವುಂಟಾಯಿತು. ಜನರು ಅಂಧಕಾರದಿಂದ ಪೀಡಿತರಾಗಿ, ದಿಗ್ಭ್ರಾಂತರಾಗಿ ತಮ್ಮ ಜೀವಿತದ ಶಂಕೆಯನ್ನು

ಹೊಂದುತ್ತಿರಲು ರುದ್ರದೇವರ ಹಣೆಯಲ್ಲಿ ವಿಶಾಲವಾದ ಮೂರನೆಯ ನೇತ್ರವು ದ್ವಾದಶಾದಿತ್ಯರ ಪ್ರಭೆಯನ್ನು ಹೊಂದಿ, ತನ್ನ ಪ್ರಭೆಯಿಂದ ಲೋಕಗಳನ್ನು ಪ್ರಕಾಶಗೊಳಿಸುತ್ತಾ ಉದ್ಭವಿಸಿತು.

ತತ್ರ ನೇತ್ರಾಗ್ನಿನಾ ತೇನ ಯುಗಾಂತಾಗ್ನಿನಿಭೇನ ವೈ ।
ಅದಹ್ಯತ ಗಿರಿಃ ಸರ್ವೋ ಹಿಮವಾನಗ್ರತಃ ಸ್ಥಿತಃ ॥೩೫॥

ಯುಗಾಂತಕಾಲದ ಅಗ್ನಿಗೆ ಸದೃಶವಾದ, ಆ ನೇತ್ರಾಗ್ನಿಯಿಂದ ಎದುರಿಗಿದ್ದ ಹಿಮಾಲಯ ಪರ್ವತವೆಲ್ಲವೂ ಸುಟ್ಟುಹೋಯಿತು.

ದಹ್ಯಮಾನೇ ಗಿರೌ ತಸ್ಮಿನ್ ಮೃಗಪಕ್ಷಿಸಮಾಕುಲೇ ।
ಸವಿದ್ಯಾಧರಗಂಧರ್ವೇ ದಿವ್ಯೌಷಧಸಮಾಯುತೇ ॥೩೬॥

ತತೋ ಗಿರಿಸುತಾ ಚಾಪಿ ವಿಸ್ಮಯೋತ್ಫುಲ್ಲಲೋಚನಾ ।
ಬಭೂವ ಚ ಜಗತ್ಸರ್ವಂ ತಥಾ ವಿಸ್ಮಯಸಂಯುತಮ್ ॥೩೭॥

ಮೃಗ-ಪಕ್ಷಿಗಳಿಂದ ಕೂಡಿದ, ವಿದ್ಯಾದರ-ಗಂಧರ್ವರಿಂದ ಕೂಡಿದ, ದಿವ್ಯೌಷಧಗಳಿಂದ ಸಮನ್ವಿತವಾದ ಆ ಪರ್ವತವು ಸುಡಲ್ಪಡುತ್ತಿರಲು ವಿಸ್ಮಯದಿಂದ ಗಿರಿಜೆಯು ಅಗಲವಾಗಿ ಕಣ್ಣುಗಳನ್ನು ತೆಗೆದಳು. ಜಗತ್ತೆಲ್ಲವೂ ಹಾಗೆಯೇ ವಿಸ್ಮಯದಿಂದ ಕೂಡಿತು.

ಪಶ್ಯತಾಮೇವ ಸರ್ವೇಷಾಂ ದೇವದಾನವರಕ್ಷಸಾಮ್ ।
ನೇತ್ರಜೇನಾಗ್ನಿನಾ ತೇನ ದಗ್ಧ ಏವ ನಗೋತ್ತಮಃ ॥೩೮॥

ದೇವ-ದಾನವ-ರಾಕ್ಷಸರು ನೋಡುತ್ತಿರುವಂತೆಯೇ ಶಿವನ ನೇತ್ರದಿಂದ ಉಂಟಾದ ಅಗ್ನಿಯಿಂದ ಆ ಶ್ರೇಷ್ಠವಾದ ಪರ್ವತವು ಸುಟ್ಟೇ ಹೋಯಿತು.

ತಂ ದೃಷ್ಟ್ವಾ ಮಥಿತಂ ಶೈಲಂ ಶೈಲಪುತ್ರೀ ಸವಿಕ್ಲವಾ ।
ಪಿತುಃ ಶಮನಮಿಚ್ಛಂತೀ ಪಪಾತ ಭುವಿ ಪಾದಯೋಃ ॥೩೯॥

ಆ ಪರ್ವತವು ದಹಿಸಲ್ಪಡುತ್ತಿರುವುದನ್ನು ನೋಡಿ ಶೈಲಪುತ್ರಿಯಾದ ಪಾರ್ವತಿಯು ಭಯದಿಂದ ಕೂಡಿದವಳಾಗಿ, ತಂದೆಗೆ ಕ್ಷೇಮವನ್ನು ಬಯಸುತ್ತಾ ರುದ್ರದೇವರ ಪಾದಗಳ ಮೇಲೆ ಬಿದ್ದಳು.

ತದ್ ದೃಷ್ಟ್ವಾ ದೇವದೇವೇಶೋ ದೇವ್ಯಾ ದುಃಖಮನುತ್ತಮಮ್ ।
ಹೈಮವತ್ಯಾಃ ಪ್ರಿಯಾರ್ಥಂ ಚ ಗಿರಿಂ ಪುನರವೈಕ್ಷತ ॥೪೦॥

ದೃಷ್ಟಮಾತ್ರೇ ಭಗವತಾ ಸೌಮ್ಯಯುಕ್ತೇನ ಚೇತಸಾ ।
ಕ್ಷಣೇನ ಹಿಮವಾನ್ ಶೈಲಃ ಪ್ರಕೃತಿಸ್ಥೋಽಭವತ್ ಪುನಃ ॥೪೧॥

ದೇವಿಯ ಆ ತೀವ್ರವಾದ ದುಃಖವನ್ನು ನೋಡಿದ ರುದ್ರದೇವರು ಹೈಮವತಿಯಾದ (ಹಿಮಾಲಯ ಪುತ್ರಿಯಾದ) ಅವಳಿಗೆ ಪ್ರಿಯವನ್ನುಂಟು ಮಾಡಲು ಆ ಪರ್ವತವನ್ನು ಪುನಃ ನೋಡಿದರು. ಸೌಮ್ಯದೃಷ್ಟಿಯಿಂದ ಕೂಡಿದ ಮನಸ್ಸಿನಿಂದ ಆ ಪರ್ವತವನ್ನು ನೋಡಿದ ತಕ್ಷಣವೇ ಹಿಮಾಲಯವು ಮೊದಲಿನಂತೆಯೇ ಆಯಿತು.

ಹೃಷ್ಟಪುಷ್ಟವಿಹಂಗಶ್ಚ ಪ್ರಫುಲ್ಲದ್ರುಮಕಾನನಃ ।
ಸಿದ್ಧಚಾರಣಸಂಘೈಶ್ಚ ಪ್ರೀತಿಯುಕ್ತೈಃ ಸಮಾಕುಲಃ ॥೪೨॥

ಹೃಷ್ಟ-ಪುಷ್ಟ ಪಕ್ಷಿಗಳು, ಅರಳಿದ ಹೂಗಳುಳ್ಳ ಮರಗಳ ಕಾನನಗಳು, ಸಂತೋಷದಿಂದ ಕೂಡಿದ ಸಿದ್ಧ-ಚಾರಣ ಸಂಘಗಳು ನಿಬಿಡವಾಗಿ ಕಂಡುಬಂದವು.

ಪಿತರಂ ಪ್ರಕೃತಿಸ್ಥಂ ಚ ದೃಷ್ಟ್ವಾ ಹೈಮವತೀ ಭೃಶಮ್ ।
ಅಭವತ್ ಪ್ರೀತಿಸಂಯುಕ್ತಾ ಮುದಿತಾ ಚ ಪಿನಾಕಿನಮ್ ॥೪೩॥

ತಂದೆಯು ಮೊದಲಿನಂತೆಯೇ ಆದುದನ್ನು ನೋಡಿ ಬಹಳ ಸಂತೋಷಗೊಂಡ ಪಾರ್ವತಿಯು ರುದ್ರದೇವರ ಸಾಮರ್ಥ್ಯದ ವಿಷಯದಲ್ಲಿ ಬಹಳ ಸಂತೋಷವನ್ನು ಹೊಂದಿದಳು.

ದೇವೀ ವಿಸ್ಮಯಸಂಯುಕ್ತಾ ಪ್ರಷ್ಟುಕಾಮಾ ಮಹೇಶ್ವರಮ್ ।
ಹಿತಾರ್ಥಂ ಸರ್ವಲೋಕಾನಾಂ ಪ್ರಜಾನಾಂ ಹಿತಕಾಮ್ಯಯಾ ।
ದೇವದೇವಂ ಮಹಾದೇವೀ ಬಭಾಷೇದಂ ವಚೋಽರ್ಥವತ್ ॥೪೪॥

ವಿಸ್ಮಯಯುಕ್ತಳಾದ ಪಾರ್ವತಿಯು ಸರ್ವಲೋಕಗಳಿಗೆ ಮತ್ತು ಪ್ರಜೆಗಳಿಗೆ ಹಿತವನ್ನು ಬಯಸಿ ರುದ್ರದೇವರನ್ನು ಪ್ರಶ್ನೆ ಮಾಡಲು ಬಯಸಿ ಅವರನ್ನು ಕುರಿತು ಅರ್ಥಪೂರ್ಣವಾದ ಈ ಮಾತನ್ನು ಆಡಿದಳು.

ಭಗವನ್ ದೇವದೇವೇಶ ಶೂಲಪಾಣೇ ಮಹಾದ್ಯುತೇ ।
ವಿಸ್ಮಯೋ ಮೇ ಮಹಾನ್ ಜಾತಸ್ತಸ್ಮಿನ್ ನೇತ್ರಾಗ್ನಿಸಮ್ಪ್ಲುತೇ ॥೪೫॥

ಭಗವಂತನೇ, ದೇವದೇವೇಶನೇ, ಶೂಲಪಾಣಿಯೇ, ಮಹಾದ್ಯುತಿಯೇ, ನಿನ್ನ ನೇತ್ರಾಗ್ನಿಯಿಂದ ಉಂಟಾದ ಈ ವನದಹನವನ್ನು ನೋಡಿ ನನಗೆ ಬಹಳ ವಿಸ್ಮಯ ಉಂಟಾಗಿದೆ.

ಕಿಮರ್ಥಂ ದೇವದೇವೇಶ ಲಲಾಟೇಽಸ್ಮಿನ್ ಪ್ರಕಾಶತೇ ।
ಅತಿಸೂರ್ಯಾಗ್ನಿಸಂಕಾಶಂ ತೃತೀಯಂ ನೇತ್ರಮಾಯತಮ್ ॥೪೬॥

ನೇತ್ರಾಗ್ನಿನಾ ತು ಮಹತಾ ನಿರ್ದಗ್ಧೋ ಹಿಮವಾನಸೌ ।
ಪುನಃ ಸ ದೃಷ್ಟಮಾತ್ರಸ್ತು ಪ್ರಕೃತಿಸ್ಥಃ ಪಿತಾ ಮಮ ॥೪೭॥

ದೇವದೇವೇಶನೇ, ಈ ನಿನ್ನ ಲಲಾಟದಲ್ಲಿ ಸೂರ್ಯಾಗ್ನಿಗಳ ತೇಜಸ್ಸನ್ನು ಮೀರಿದ ವಿಶಾಲವಾದ ತೃತೀಯ ನೇತ್ರವು ಏಕೆ ಕಾಣುತ್ತಿದೆ? ನಿನ್ನ ಆ ದೊಡ್ಡ ನೇತ್ರಾಗ್ನಿಯಿಂದ ಈ ಹಿಮಾಲಯ ಪರ್ವತವು ಸುಟ್ಟುಹೋಯಿತು. ಪುನಃ ನೀನು ನೋಡಿದ ತಕ್ಷಣವೇ ನನ್ನ ತಂದೆಯು ಮೊದಲಿನಂತೆ ಆದನು.

ಏಷ ಮೇ ಸಂಶಯೋ ದೇವ ಹೃದಿ ಮೇ ಸಂಪ್ರತಿ ವರ್ತತೇ ।
ದೇವದೇವ ನಮಸ್ತುಭ್ಯಂ ತನ್ಮೇ ಶಂಸಿತುಮರ್ಹಸಿ ॥೪೮॥

ಎಲೈ ದೇವದೇವನೇ, ಈ ವಿಷಯದಲ್ಲಿ ನನಗೆ ಈಗ ವಿಸ್ಮಯವುಂಟಾಗಿದೆ. ದೇವದೇವನೇ, ನಿನಗೆ ನಮಸ್ಕಾರ. ಇದಕ್ಕೆ ಕಾರಣವನ್ನು ನನಗೆ ಹೇಳಬೇಕು (ಎಂದು ಹೇಳಿದಳು).

ನಾರದಃ

ಏವಮುಕ್ತಸ್ತಯಾ ದೇವ್ಯಾ ಪ್ರೀಯಮಾಣೋಽಬ್ರವೀದ್ ಭವಃ ।
ಸ್ಥಾನೇ ಸಂಶಯಿತುಂ ದೇವಿ ಧರ್ಮಜ್ಞೇ ಪ್ರಿಯಭಾಷಿಣಿ ॥೪೯॥

ನಾರದ– ದೇವಿಯಿಂದ ಹೀಗೆ ಕೇಳಲ್ಪಟ್ಟ ರುದ್ರದೇವರು ಸಂತೋಷಗೊಂಡು ದೇವಿಯನ್ನು ಕುರಿತು- 'ಎಲೈ ಧರ್ಮಜ್ಞೆಯೇ, ಪ್ರಿಯಭಾಷಿಣಿಯೇ, ದೇವಿಯೇ ನೀನು ಸಂಶಯಪಡುವುದು ಯುಕ್ತವಾಗಿದೆ.

ತ್ವದೃತೇ ಮಾಂ ಹಿ ವೈ ಪ್ರಷ್ಟುಂ ನ ಶಕ್ಯಂ ಕೇನಚಿತ್ ಪ್ರಿಯೇ ।
ಪ್ರಕಾಶಂ ಯದಿ ವಾ ಗುಹ್ಯಂ ತತ್ತ್ವಿಯಾರ್ಥಂ ಬ್ರವೀಮ್ಯಹಮ್ ॥೫೦॥

ಎಲೌ ಪ್ರಿಯೆಯೇ, ನಿನ್ನನ್ನು ಬಿಟ್ಟು ಬೇರೆ ಯಾವನೂ ನನ್ನನ್ನು ಹೀಗೆ ಪ್ರಶ್ನೆಯನ್ನು ಕೇಳಲಾರನು. ಅದು ರಹಸ್ಯವಾಗಿರಲಿ ಅಥವಾ ಇಲ್ಲದಿರಲಿ ನಿನಗೆ ಪ್ರಿಯವನ್ನುಂಟು ಮಾಡಲು ನಾನು ಹೇಳುತ್ತೇನೆ.

ಶೃಣು ತತ್ಸರ್ವಮಖಿಲಮಸ್ಯಾಂ ಸಂಸದಿ ಭಾಮಿನಿ ।
ಸರ್ವೇಷಾಮೇವ ಲೋಕಾನಾಂ ಕೂಟಸ್ಥಂ ವಿದ್ಧಿ ಮಾಂ ಪ್ರಿಯೇ ॥೫೧॥

ಎಲೌ ಭಾಮಿನಿಯೇ, ಅದೆಲ್ಲವನ್ನೂ ಈ ಸಭೆಯಲ್ಲಿ ನಾನು ಹೇಳುತ್ತೇನೆ, ಅದನ್ನು ಕೇಳು. ಎಲೌಪ್ರಿಯೆಯೇ, ನಾನು ಎಲ್ಲ ಲೋಕಗಳ ಶಿಖರಸ್ಥಾನದಲ್ಲಿ ಇದ್ದೇನೆಂದು ತಿಳಿ.

ಮದಧೀನಾಸ್ತ್ರಯೋ ಲೋಕಾ ಯಥಾ ವಿಷ್ಣೌ ತಥಾ ಮಯಿ ।
ಸ್ರಷ್ಟಾ ವಿಷ್ಣುರಹಂ ಗೋಪ್ತಾ ಇತ್ಯೇತದ್ ವಿದ್ಧಿ ಭಾಮಿನಿ ॥೫೨॥

ವಿಷ್ಣುವಿಗೆ ಅಧೀನವಾದಂತೆ ಮೂರುಲೋಕಗಳು ನನಗೂ ಅಧೀನವಾಗಿವೆ. ಎಲೌ ಭಾಮಿನಿಯೇ ವಿಷ್ಣುವು ಸೃಷ್ಟಿಮಾಡುತ್ತಾನೆ, ನಾನು ರಕ್ಷಿಸುತ್ತೇನೆ ಎಂದು ತಿಳಿ.

ತಸ್ಮಾದ್ ಯದಾ ಮಾಂ ಸ್ಪೃಶತಿ ಶುಭಂ ವಾ ಯದಿ ವೇತರತ್ ।
ತಥೈವೇದಂ ಜಗತ್ಸರ್ವಂ ತತ್ತದ್ ಭವತಿ ಶೋಭನೇ ॥೫೩॥

ಎಲೌ ಶೋಭನೆಯೇ, ಆದ್ದರಿಂದ ನನಗೆ ಶುಭವಾಗಲೀ ಅಥವಾ ಅಶುಭವಾಗಲೀ ಉಂಟಾದರೆ ಈ ಜಗತ್ತೆಲ್ಲವೂ ಶುಭವನ್ನೂ, ಅಶುಭವನ್ನೂ ಹೊಂದುತ್ತದೆ.

ಏತದ್ ಗುಹ್ಯಮಜಾನಂತ್ಯಾ ತ್ವಯಾ ಬಾಲ್ಯಾದನಿಂದಿತೇ ।
ನೇತ್ರೇ ಮೇ ಪಿಹಿತೇ ದೇವಿ ಕ್ರೀಡನಾರ್ಥಂ ದೃಢವ್ರತೇ ॥೫೪॥

ಎಲೌ ಅನಿಂದಿತೆಯೇ, ದೇವಿಯೇ, ದೃಢವ್ರತೆಯೇ, ಈ ರಹಸ್ಯವನ್ನು ತಿಳಿಯದೆ ನೀನು ಬಾಲ್ಯನಿಮಿತ್ತದಿಂದ, ಕ್ರೀಡಾರ್ಥವಾಗಿ ನನ್ನ ಕಣ್ಣುಗಳನ್ನು ಮುಚ್ಚಿದೆ.

ತತ್ಕತೇ ನಷ್ಟಚಂದ್ರಾರ್ಕಂ ಜಗದಾಸೀದ್ ಭಯಾಕುಲಮ್ ।
ನಷ್ಟಾದಿತ್ಯೇ ತಮೋಭೂತೇ ಲೋಕೇ ಗಿರಿಸುತೇ ಪ್ರಿಯೇ ॥೫೫॥

ತೃತೀಯಂ ಲೋಚನಂ ಸೃಷ್ಟಂ ಲೋಕಾನ್ ಸಂರಕ್ಷಿತುಂ ಮಯಾ ।
ಅಸ್ಯೈವ ತೇಜಸಾऽಕ್ಷ್ಣೋ ಮೇ ಮಥಿತೋऽಯಂ ಗಿರಿಃ ಶುಭೇ ।
ವೃಕ್ಷಗುಲ್ಮಲತಾಕೀರ್ಣೋ ವ್ಯಾಲಾಧ್ಯುಷಿತಕಂದರಃ ॥೫೬॥

ಅದರಿಂದ ಸೂರ್ಯ-ಚಂದ್ರರು ನಷ್ಟವಾಗಿ ಜಗತ್ತಲ್ಲಿ ಭಯವುಂಟಾಯಿತು. ಎಲೌ ಪ್ರಿಯೆಯೇ, ಗಿರಿಸುತೆಯೇ, ಸೂರ್ಯನು ನಷ್ಟನಾಗಿ ಜಗತ್ತು ಅಂಧಕಾರದಿಂದ ಆವರಿಸಲ್ಪಡುತ್ತಿರಲು ಲೋಕಗಳನ್ನು ರಕ್ಷಿಸಲು ನಾನು ಮೂರನೆಯ ನೇತ್ರವನ್ನು ಸೃಷ್ಟಿಸಿದೆ. ಈ ಕಣ್ಣಿನ ತೇಜಸ್ಸಿನಿಂದಲೇ ವೃಕ್ಷ-ಗುಲ್ಮ ಲತೆಗಳಿಂದ ತುಂಬಿದ, ಗುಹೆಗಳಲ್ಲಿ ಸರ್ಪ ಮೊದಲಾದ ಮೃಗಗಳನ್ನು ಹೊಂದಿದ ಈ ಪರ್ವತವು ದಗ್ಧವಾಯಿತು.

ತತ್ತ್ವಿಯಾರ್ಥಂ ಕೃತೋ ದೇವಿ ಪ್ರಕೃತಿಸ್ಥಃ ಪುನರ್ಮಯಾ ।
ಕಥಿತಂ ಸಂಶಯಸ್ಥಾನಂ ನಿರ್ವಿಶಂಕಾ ಭವ ಪ್ರಿಯೇ ॥೫೭॥

ಎಲೌ ದೇವಿಯೇ, ನಿನ್ನ ಪ್ರೀತಿಗಾಗಿ ನಾನು ಪುನಃ ಪರ್ವತವನ್ನು ಮೊದಲಿನಂತೆಯೇ ಮಾಡಿದೆನು. ನಿನ್ನ ಸಂಶಯವನ್ನು ಪರಿಹರಿಸಿದ್ದೇನೆ. ಪ್ರಿಯೆಯೇ, ನಿರಾತಂಕವಾಗಿರು.

॥ ಇತಿ ಶ್ರೀಮನ್ಮಹಾಭಾರತೇ ಅನುಶಾಸನಪರ್ವಣಿ ದಾನಧರ್ಮೇ
ಉಮಾಮಹೇಶ್ವರಸಂವಾದೋ ನಾಮ ದ್ವಿನವತ್ಯುತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ತೊಂಬತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ತೊಂಬತ್ಮೂರನೆಯ ಅಧ್ಯಾಯ

ಉಮಾ-ಮಹೇಶ್ವರ ಸಂವಾದ. ಶಿವನಿಂದ ತಾನು ಚತುರ್ಮುಖನಾಗುವುದಕ್ಕೆ, ನೀಲಕಂಠನಾಗುವುದಕ್ಕೆ, ಪಿನಾಕಿಯಾಗುವುದಕ್ಕೆ ಮತ್ತು ವೃಷಭಧ್ವಜನಾಗುವುದಕ್ಕೆ ಕಾರಣಕಥನ.

ನಾರದಃ

ಕ್ಷಣಜ್ಞಾ ದೇವದೇವಸ್ಯ ಶ್ರೋತುಕಾಮಾ ಪ್ರಿಯಂ ಹಿತಮ್ ।
ಉಮಾದೇವೀ ಮಹಾದೇವಮಪೃಚ್ಛತ್ ಪುನರೇವ ತು ॥೧॥

ನಾರದ– ದೇವದೇವನ ಸಮಯವನ್ನು ತಿಳಿದ ಉಮಾದೇವಿಯು ಪ್ರಿಯವನ್ನೂ, ಹಿತವನ್ನೂ ಬಯಸಿ, ಮಹಾದೇವನನ್ನು ಕುರಿತು ಮಹಾಪ್ರಶ್ನೆಯನ್ನು ಮಾಡಿದಳು.

ಭಗವನ್ ದೇವದೇವೇಶ ಸರ್ವದೇವನಮಸ್ಕೃತ ।
ಚತುರ್ಮುಖೋ ವೈ ಭಗವಾನಭವತ್ ಕೇನ ಹೇತುನಾ ॥೨॥

ಭಗವಂತನೇ, ದೇವದೇವೇಶನೇ, ಸರ್ವದೇವತೆಗಳಿಂದ ನಮಸ್ಕೃತನಾದವನೇ, ಪೂಜ್ಯನಾದ ನೀನು ಯಾವ ನಿಮಿತ್ತದಿಂದ ನಾಲ್ಕುಮುಖಗಳನ್ನು ಹೊಂದಿದೆ?

ಭಗವನ್ ಕೇನ ವೈ ವಕ್ತ್ರಮೈಂದ್ರಮದ್ಭುತದರ್ಶನಮ್ ।
ಉತ್ತರಂ ಚಾಪಿ ಭಗವನ್ ಪಶ್ಚಿಮಂ ಶುಭದರ್ಶನಮ್ ।
ದಕ್ಷಿಣಂ ಚ ಮುಖಂ ರೌದ್ರಂ ಕೇನೋರ್ಧ್ವಂ ಜಟಿಲಾವೃತಮ್ ॥೩॥

ಭಗವಂತನೇ, ಯಾವ ನಿಮಿತ್ತದಿಂದ ಪೂರ್ವಾಭಿಮುಖವಾದ ನಿನ್ನ ಮುಖವು ಅದ್ಭುತವಾಗಿ ಕಾಣುತ್ತಿದೆ? ಪಶ್ಚಿಮದಲ್ಲಿರುವ ನಿನ್ನ ಮುಖವು ಶುಭವಾಗಿ ಕಾಣುತ್ತಿದೆ. ದಕ್ಷಿಣ ದಿಕ್ಕಿನಲ್ಲಿರುವ ನಿನ್ನ ಮುಖವು ಭಯಂಕರವಾಗಿ ಕಾಣುತ್ತಿದೆ ಮತ್ತು ಉತ್ತರ ದಿಕ್ಕಿನಲ್ಲಿರುವ ನಿನ್ನ ಮುಖವು ಜಟಿಲವಾಗಿದೆ. ಏಕೆ?

ಯಥಾದಿಶಂ ಮಹಾಭಾಗ ಶ್ರೋತುಮಿಚ್ಛಾಮಿ ಕಾರಣಮ್ ।
ಏಷ ಮೇ ಸಂಶಯೋ ದೇವ ತನ್ಮೇ ಶಂಸಿತುಮರ್ಹಸಿ ॥೪॥

ಎಲೈ ಮಹಾನುಭಾವನೇ, ದಿಕ್ಕುಗಳ ಅನುಸಾರವಾಗಿ ಆ ನಿಮಿತ್ತಗಳನ್ನು ನಾನು ಕೇಳಲು ಬಯಸುತ್ತೇನೆ. ಎಲೈ ದೇವನೇ, ನೀನು ಆ ಸಂಶಯಗಳನ್ನು ಪರಿಹರಿಸಬೇಕು.

ಮಹಾದೇವಃ

ತದಹಂ ತೇ ಪ್ರವಕ್ಷ್ಯಾಮಿ ಯತ್ತ್ವಂ ಪೃಚ್ಛಸಿ ಭಾಮಿನಿ ।
ಪುರಾऽಸುರೌ ಮಹಾಘೋರೌ ಲೋಕೋದ್ವೇಗಕರೌ ಭೃಶಮ್ ॥೫॥

ಸುಂದೋಪಸುಂದನಾಮಾನಾವಾಸತುರ್ಬಹುಗರ್ವಿತೌ ।
ಅಶಸ್ತ್ರವಧ್ಯೌ ಬಲಿನೌ ಪರಸ್ಪರಹಿತೈಷಿಣೌ ॥೬॥

ಮಹಾದೇವ– ಎಲೌ ಭಾಮಿನಿಯೇ, ನೀನು ಕೇಳುವ ಪ್ರಶ್ನೆಗೆ ನಾನು ಉತ್ತರವನ್ನು ಹೇಳುವೆನು. ಹಿಂದೆ ಮಹಾಘೋರರಾದ, ಲೋಕಕ್ಕೆ ಭಯವನ್ನುಂಟು ಮಾಡುವ ಸುಂದೋಪಸುಂದರೆಂಬ ಇಬ್ಬರು ಅಸುರರಿದ್ದರು. ಅವರು ಬಹಳ ಗರ್ವದಿಂದ ಕೂಡಿ, ಬಲಿಷ್ಠರಾಗಿ, ಪರಸ್ಪರ ಹಿತವನ್ನು ಬಯಸುತ್ತಾ ಶಸ್ತ್ರಗಳಿಂದ ಅವಧ್ಯರಾಗಿದ್ದರು.

ತಯೋರೇವ ವಿನಾಶಾಯ ನಿರ್ಮಿತಾ ವಿಶ್ವಕರ್ಮಣಾ ।
ಮೃಗಪಕ್ಷಿಗಣಾನಾಂ ಚ ಸ್ಥಾವರಾಣಾಂ ತಥೈವ ಚ ॥೭॥

ಸರ್ವತಃ ಸಾರಮುದ್ಧೃತ್ಯ ತಿಲಶೋ ಲೋಕಪೂಜಿತಾ ।
ತಿಲೋತ್ತಮೇತಿ ವಿಖ್ಯಾತಾ ಅಪ್ಸರಾಃ ಸಾ ಬಭೂವ ಹ ॥೮॥

ಅವರ ವಿನಾಶಕ್ಕಾಗಿಯೇ ಜಗತ್ತನ್ನು ಸೃಷ್ಟಿಮಾಡುವ ಬ್ರಹ್ಮದೇವರು ಮೃಗ-ಪಕ್ಷಿ ಗಣಗಳ ಮತ್ತು ವೃಕ್ಷಗಳ ಸಾರವನ್ನು ಎಲ್ಲ ಕಡೆಗಳಿಂದಲೂ ಎಳ್ಳಿನಷ್ಟು ಭಾಗಗಳನ್ನು ತೆಗೆದು ಒಂದು ಸ್ತ್ರೀಮೂರ್ತಿಯನ್ನು ಮಾಡಿದರು. ಅವಳು ಲೋಕಪೂಜಿತಳಾದ, ಪ್ರಖ್ಯಾತಳಾದ ತಿಲೋತ್ತಮೆ ಎಂಬ ಅಪ್ಸರೆಯಾದಳು.

ದೇವಕಾರ್ಯಂ ಕರಿಷ್ಯಂತೀ ಹಾವಭಾವಸಮನ್ವಿತಾ ।
ಸಾ ತು ಪರ್ಯಂತಮಾಗಮ್ಯ ರೂಪೇಣಾಪ್ರತಿಮಾ ಭುವಿ ॥೯॥

ಮಯಾ ಬಹುಮತಾ ಚೇಯಂ ದೇವಕಾರ್ಯಂ ಕರಿಷ್ಯತಿ ।
ಇತಿ ಮತ್ವಾ ತದಾ ಚಾಹಂ ಕುರ್ವಂತೀಂ ಮಾಂ ಪ್ರದಕ್ಷಿಣಮ್ ।
ತಥೈವ ತಾಂ ದಿದೃಕ್ಷುಶ್ಚ ಚತುರ್ವಕ್ತ್ರೋऽಭವಂ ಪ್ರಿಯೇ ॥೧೦॥

ಅವಳು ದೇವಕಾರ್ಯವನ್ನು ಮಾಡುವವಳಾಗಿ, ಹಾವಭಾವ ಸಮನ್ವಿತಳಾಗಿ, ಭೂಮಿಯಲ್ಲಿ ರೂಪದಿಂದ ಅಸದೃಶಳಾಗಿ ನನ್ನ ಸಮೀಪಕ್ಕೆ ಬಂದಳು. ನಾನು ಇವಳನ್ನು

ಗೌರವಿಸಿದರೆ ಇವಳು ದೇವಕಾರ್ಯವನ್ನು ಮಾಡುತ್ತಾಳೆ ಎಂದು ತಿಳಿದ ನಾನು ನನಗೆ ಪ್ರದಕ್ಷಿಣೆ ಮಾಡುತ್ತಿದ್ದ ಅವಳನ್ನು ನೋಡಲು ಬಯಸಿ ಹಾಗೆಯೇ ಅವಳನ್ನು ತಿರುಗಿ ನೋಡುತ್ತಿದ್ದಾಗ ನನಗೆ ನಾಲ್ಕು ಮುಖಗಳು ಉಂಟಾದವು.

ಐಂದ್ರಂ ಮುಖಮಿದಂ ಪೂರ್ವಂ ತಪಶ್ಚರ್ಯಾಪರಂ ಸದಾ ।
ದಕ್ಷಿಣಂ ಮೇ ಮುಖಂ ದಿವ್ಯಂ ರೌದ್ರಂ ಸಂಹರತಿ ಪ್ರಜಾಃ ॥೧೧॥

ಲೋಕಕಾರ್ಯಪರಂ ನಿತ್ಯಂ ಪಶ್ಚಿಮಂ ಮೇ ಮುಖಂ ಪ್ರಿಯೇ ।
ವೇದಾನಧೀತೇ ಸತತಮದ್ಭುತಂ ಚೋತ್ತರಂ ಮುಖಮ್ ।
ಏತತ್ತೇ ಸರ್ವಮಾಖ್ಯಾತಂ ಕಿಂ ಭೂಯಃ ಶ್ರೋತುಮಿಚ್ಛಸಿ ॥೧೨॥

ಪೂರ್ವದಿಕ್ಕಿನಲ್ಲಿರುವ ಈ ಮುಖವು ಯಾವಾಗಲೂ ತಪಶ್ಚರ್ಯೆಯಲ್ಲಿ ನಿರತವಾಗಿರುತ್ತದೆ. ದಕ್ಷಿಣ ದಿಕ್ಕಿನಲ್ಲಿರುವ ದಿವ್ಯವಾದ ಮುಖವು ಭಯಂಕರವಾಗಿದ್ದು ಪ್ರಜೆಗಳನ್ನು ಸಂಹರಿಸುತ್ತದೆ. ಎಲೌ ಪ್ರಿಯೆಯೇ, ಪಶ್ಚಿಮ ದಿಕ್ಕಿನ ಮುಖವು ನಿತ್ಯವೂ ಲೋಕಕಾರ್ಯಗಳನ್ನು ಮಾಡುತ್ತದೆ. ಉತ್ತರ ದಿಕ್ಕಿನಲ್ಲಿರುವ ಅದ್ಭುತವಾದ ಮುಖವು ವೇದಗಳನ್ನು ಅಧ್ಯಯನ ಮಾಡುತ್ತದೆ. ನೀನು ಕೇಳಿದುದೆಲ್ಲವನ್ನೂ ಹೇಳಿದ್ದೇನೆ. ಪುನಃ ಏನನ್ನು ಕೇಳಲು ಬಯಸುತ್ತೀಯೆ?

ಉಮಾ

ಭಗವನ್ ಶ್ರೋತುಮಿಚ್ಛಾಮಿ ಶೂಲಪಾಣೇ ವರಪ್ರದ ।
ಕಿಮರ್ಥಂ ನೀಲತಾ ಕಂಠೇ ಭಾತಿ ಬರ್ಹನಿಭಾ ತವ ॥೧೩॥

ಉಮಾ– ಭಗವಂತನೇ, ಶೂಲಪಾಣಿಯೇ, ವರಪ್ರದನೇ, ನಿನ್ನ ಕಂಠದಲ್ಲಿನವಿಲು ಗರಿಯಂತೆ ಕಪ್ಪು ಬಣ್ಣವು ಏತಕ್ಕಿದೆ ಎಂದು ಕೇಳಲು ಬಯಸುತ್ತೇನೆ.

ಮಹೇಶ್ವರಃ

ಹಂತ ತೇ ಕಥಯಿಷ್ಯಾಮಿ ಶೃಣು ದೇವಿ ಸಮಾಹಿತಾ ॥೧೪॥

ದೇವಿಯೇ, ಸಂತೋಷ, ಹೇಳುವೆನು, ಸಮಾಧಾನದಿಂದ ಕೇಳು.

ಪುರಾ ಯುಗಾಂತರೇ ಯತ್ನಾದಮೃತಾರ್ಥಂ ಸುರಾಸುರೈಃ ।
ಬಲವದ್ಭಿರ್ವಿಮಥಿತಶ್ಚಿರಕಾಲಂ ಮಹೋದಧಿಃ ॥೧೫॥

ಹಿಂದೆ ಯುಗಾಂತರದಲ್ಲಿ ಬಲಿಷ್ಠರಾದ ದೇವಾಸುರರು ಅಮೃತವನ್ನು ಪಡೆಯಲು ಬಹಳ ಪ್ರಯತ್ನವನ್ನು ಪಟ್ಟು ಬಹುಕಾಲದವರೆಗೆ ಕ್ಷೀರಸಾಗರವನ್ನು ಮಥಿಸಿದರು.

ರಜ್ಜುನಾ ನಾಗರಾಜೇನ ಮಥ್ಯಮಾನೇ ಮಹೋದಧೌ ।
ವಿಷಂ ತತ್ರ ಸಮುದ್ಭೂತಂ ಸರ್ವಲೋಕವಿನಾಶನಮ್ ॥೧೬॥

ನಾಗರಾಜನಾದ ವಾಸುಕಿಯನ್ನು ಹಗ್ಗವನ್ನಾಗಿ ಮಾಡಿಕೊಂಡು ಸಮುದ್ರವನ್ನು ಕಡೆದಾಗ ಅಲ್ಲಿ ಸರ್ವಲೋಕ ವಿನಾಶಕವಾದ ವಿಷವು ಉಂಟಾಯಿತು.

ತದ್ ದೃಷ್ಟ್ವಾ ವಿಬುಧಾಃ ಸರ್ವೇ ತದಾ ವಿಮನಸೋಽಭವನ್ ।
ಗ್ರಸ್ತಂ ಹಿ ತನ್ಮಯಾ ದೇವಿ ಲೋಕಾನಾಂ ಹಿತಕಾರಣಾತ್ ॥೧೭॥

ಅದನ್ನು ನೋಡಿ ಎಲ್ಲ ದೇವತೆಗಳೂ ಬೇಸರಗೊಂಡರು. ಎಲೌ ದೇವಿಯೇ, ಲೋಕದ ಹಿತಕ್ಕಾಗಿ ನಾನು ಆ ವಿಷವನ್ನು ನುಂಗಿದೆನು.

ತತ್ಕೃತಾ ನೀಲತಾ ಚಾಸೀತ್ಕಂಠೇ ಬರ್ಹಿನಿಭಾ ಶುಭೇ ।
ತದಾಪ್ರಭೃತಿ ಚೈವಾಹಂ ನೀಲಕಂಠ ಇತಿ ಸ್ಮೃತಃ ।
ಏತತ್ತೇ ಸರ್ವಮಾಖ್ಯಾತಂ ಕಿಂ ಭೂಯಃ ಶ್ರೋತುಮಿಚ್ಛಸಿ ॥೧೮॥

ಎಲೌ ಶುಭಳೇ, ಆ ಕಾರಣದಿಂದ ನನ್ನ ಕಂಠವು ನವಿಲುಗರಿಯಂತೆ ಕಪ್ಪಾಯಿತು. ಅಂದಿನಿಂದ ಆರಂಭಿಸಿ ನಾನು ನೀಲಕಂಠನೆಂದು ಕರೆಯಲ್ಪಡುತ್ತೇನೆ. ನೀನು ಕೇಳಿದುದೆಲ್ಲವನ್ನೂ ಹೇಳಿದ್ದೇನೆ. ಇನ್ನೂ ಏನನ್ನು ಕೇಳಲು ಬಯಸುತ್ತೀಯೆ?

ಉಮಾ

ನೀಲಕಂಠ ನಮಸ್ತೇಽಸ್ತು ಸರ್ವಲೋಕಸುಖಾವಹ ।
ಬಹೂನಾಮಾಯುಧಾನಾಂ ತ್ವಂ ಪಿನಾಕಂ ಧರ್ತುಮಿಚ್ಛಸಿ ।
ಕಿಮರ್ಥಂ ದೇವದೇವೇಶ ತನ್ಮೇ ಶಂಸಿತುಮರ್ಹಸಿ ॥೧೯॥

ಉಮಾ– ನೀಲಕಂಠನೇ, ಸರ್ವಲೋಕಗಳಿಗೆ ಸುಖವನ್ನು ಕೊಡುವವನೇ, ನಿನಗೆ ನಮಸ್ಕಾರ. ದೇವದೇವೇಶನೇ, ಅನೇಕ ಆಯುಧಗಳ ಮಧ್ಯದಲ್ಲಿ ನೀನು ಪಿನಾಕವನ್ನು ಧರಿಸಲು ಏಕೆ ಇಚ್ಛಿಸುತ್ತೀಯೆ ಎಂದು ನನಗೆ ಹೇಳಬೇಕು.

ಮಹೇಶ್ವರಃ

ಶಸ್ತ್ರಾಗಮಂ ತೇ ವಕ್ಷ್ಯಾಮಿ ಶೃಣು ಧರ್ಮ್ಯಂ ಶುಚಿಸ್ಮಿತೇ ।
ಯುಗಾಂತರೇ ಮಹಾದೇವಿ ಕಣ್ವೋ ನಾಮ ಮಹಾಮುನಿಃ ॥೨೦॥

ಮಹೇಶ್ವರ– ಎಲೌ ಶುಚಿಸ್ಮಿತೆಯೇ, ಶಸ್ತ್ರವು ನನಗೆ ಬಂದ ಧರ್ಮಪ್ರದವಾದ ರೀತಿಯನ್ನು ನಿನಗೆ ಹೇಳುವೆನು. ಎಲೌ ಮಹಾದೇವಿಯೇ, ಯುಗಾಂತರದಲ್ಲಿ ಕಣ್ವನೆಂಬ ಮಹರ್ಷಿ ಇದ್ದನು.

ಸ ಹಿ ದಿವ್ಯಾಂ ತಪಶ್ಚರ್ಯಾಂ ಕರ್ತುಮೇವೋಪಚಕ್ರಮೇ ।
ತಥಾ ತಸ್ಯ ತಪೋ ಘೋರಂ ಚರತಃ ಕಾಲಪರ್ಯಯಾತ್ ।
ವಲ್ಮೀಕಂ ಪುನರುದ್ಭೂತಂ ತಸ್ಯೈವ ಶಿರಸಿ ಪ್ರಿಯೇ ॥೨೧॥

ಅವನು ದಿವ್ಯವಾದ ತಪಸ್ಸನ್ನು ಮಾಡಲು ಪ್ರಾರಂಭಿಸಿದನು. ಎಲೌ ಪ್ರಿಯೆಯೇ, ಅವನು ಘೋರವಾದ ತಪಸ್ಸನ್ನು ಆಚರಿಸುತ್ತಿರಲು ಕಾಲಕ್ರಮದಲ್ಲಿ ಅವನ ತಲೆಯ ಮೇಲೆ ಒಂದು ಹುತ್ತವು ಬೆಳೆಯಿತು.

ವೇಣುರ್ವಲ್ಮೀಕಸಂಯೋಗಾನ್ಮೂರ್ಧ್ನಿ ತಸ್ಯ ಬಭೂವ ಹ ।
ಧರಮಾಣಶ್ಚ ತತ್ಸರ್ವಂ ತಪಶ್ಚರ್ಯಾಂ ತಥಾऽಕರೋತ್ ॥೨೨॥

ಆ ಹುತ್ತದ ಸಂಯೋಗದಿಂದ ಅವನ ತಲೆಯ ಮೇಲೆ ಒಂದು ಬಿದಿರಿನ ಪೊದೆಯು ಬೆಳೆಯಿತು. ಆ ಋಷಿಯು ಅದನ್ನು ಧರಿಸಿಕೊಂಡೇ ತಪಸ್ಸನ್ನು ಮಾಡಿದನು.

ತಸ್ಮೈ ಬ್ರಹ್ಮಾ ವರಂ ದಾತುಂ ಜಗಾಮ ತಪಸಾऽರ್ಚಿತಃ ।
ದತ್ತ್ವಾ ತಸ್ಮೈ ವರಂ ದೇವೋ ವೇಣುಂ ದೃಷ್ಟ್ವಾ ತ್ವಚಿಂತಯತ್ ॥೨೩॥

ಲೋಕಕಾರ್ಯಂ ಸಮುದ್ದಿಶ್ಯ ವೇಣುನಾऽನೇನ ಭಾಮಿನಿ ।
ಚಿಂತಯಿತ್ವಾ ತಮಾದಾಯ ಕಾರ್ಮುಕಾರ್ಥೇ ನ್ಯಯೋಜಯತ್ ॥೨೪॥

ಅವನ ತಪಸ್ಸಿಗೆ ಮೆಚ್ಚಿದ ಬ್ರಹ್ಮನು ಅವನಿಗೆ ವರವನ್ನು ಕೊಡಲು ಅಲ್ಲಿಗೆ ಬಂದನು. ಬ್ರಹ್ಮನು ಅವನಿಗೆ ವರವನ್ನು ಕೊಟ್ಟು ಅವನ ತಲೆಯ ಮೇಲೆ ಬೆಳೆದಿದ್ದ ಬಿದಿರನ್ನು ನೋಡಿ ಚಿಂತಿಸಿದನು. ಎಲೌ ಭಾಮಿನಿಯೇ, ಇದರಿಂದ ಲೋಕಕಾರ್ಯವನ್ನು

ಮಾಡುತ್ತೇನೆ ಎಂದು ಚಿಂತಿಸಿದ ಬ್ರಹ್ಮನು ಅದನ್ನು ತೆಗೆದುಕೊಂಡು ಅದರಿಂದ ಧನುಸ್ಸುಗಳನ್ನು ಮಾಡಿಸಿದನು.

ವಿಷ್ಣೋರ್ಮಮ ಚ ಸಾಮರ್ಥ್ಯಂ ಜ್ಞಾತ್ವಾ ಲೋಕಪಿತಾಮಹಃ ।
ಧನುಷೀ ದ್ವೇ ತದಾ ಪ್ರಾದಾದ್ ವಿಷ್ಣವೇ ಚ ಮಮೈವ ಚ ॥೨೫॥

ಲೋಕಪಿತಾಮಹನಾದ ಬ್ರಹ್ಮನು ನನ್ನ ಮತ್ತು ವಿಷ್ಣುವಿನ ಸಾಮರ್ಥ್ಯವನ್ನು ತಿಳಿದು ಎರಡು ಧನುಸ್ಸುಗಳನ್ನು ಮಾಡಿಸಿ ನನಗೂ ಮತ್ತು ವಿಷ್ಣುವಿಗೂ ಕೊಟ್ಟನು.

ಪಿನಾಕಂ ನಾಮ ಮೇ ಚಾಪಂ ಶಾರ್ಙ್ಗಂ ನಾಮ ಹರೇರ್ಧನುಃ ।
ತೃತೀಯಮವಶೇಷೇಣ ಗಾಂಡೀವಮಭವದ್ ಧನುಃ ॥೨೬॥

ನನ್ನ ಧನುಸ್ಸಿಗೆ ಪಿನಾಕವೆಂದೂ, ವಿಷ್ಣುವಿನ ಧನುಸ್ಸಿಗೆ ಶಾರ್ಙ್ಗವೆಂದೂ ಹೆಸರು. ಉಳಿದ ಬಿದಿರಿನ ಭಾಗದಿಂದ ಮೂರನೆಯ ಗಾಂಡೀವ ಧನುಸ್ಸು ಉಂಟಾಯಿತು.

ತಚ್ಚ ಸೋಮಾಯ ನಿರ್ದಿಶ್ಯ ಬ್ರಹ್ಮಾ ಲೋಕಂ ಗತಃ ಪುನಃ ।
ಏತತ್ತೇ ಸರ್ವಮಾಖ್ಯಾತಂ ಶಸ್ತ್ರಾಗಮಮನಿಂದಿತೇ ॥೨೭॥

ಅದನ್ನು ಚಂದ್ರನಿಗೆ ಕೊಡಬೇಕೆಂದು ತಿಳಿಸಿ ಬ್ರಹ್ಮನು ತನ್ನ ಲೋಕಕ್ಕೆ ಹೊರಟು ಹೋದನು. ಎಲೌ ಅನಿಂದಿತೆಯೇ, ಶಸ್ತ್ರಗಳು ಬಂದುದೆಲ್ಲವನ್ನೂ ನಿನಗೆ ತಿಳಿಸಿದ್ದೇನೆ.

ಉಮಾ

ಭಗವನ್ ದೇವದೇವೇಶ ಪಿನಾಕಪರಶುಪ್ರಿಯ ।
ವಾಹನೇಷು ತಥಾऽನ್ಯೇಷು ಸತ್ಸು ಭೂತಪತೇ ತವ ॥೨೮॥

ಅಯಂ ತು ವೃಷಭಃ ಕಸ್ಮಾದ್ ವಾಹನಂ ಸ ಯಥಾऽಭವತ್ ।
ಏಷ ಮೇ ಸಂಶಯೋ ದೇವ ತನ್ಮೇ ಶಂಸಿತುಮರ್ಹಸಿ ॥೨೯॥

ಉಮಾ– ಭಗವಂತನೇ, ದೇವದೇವೇಶನೆ, ಪಿನಾಕ-ಪರಶುಪ್ರಿಯನೇ, ಭೂತಪತಿಯೇ, ಅನೇಕ ವಾಹನಗಳಿದ್ದರೂ ನಿನಗೆ ಈ ವೃಷಭವು ಹೇಗೆ ವಾಹನವಾಯಿತು? ದೇವನೇ, ಇದು ನನ್ನ ಸಂಶಯ. ಇದನ್ನು ಪರಿಹರಿಸಬೇಕು.

ಮಹಾದೇವಃ

ತದಹಂ ತೇ ಪ್ರವಕ್ಷ್ಯಾಮಿ ವಾಹನಂ ಸ ಯಥಾऽಭವತ್ ॥೩೦॥

ಮಹಾದೇವ– ವೃಷಭವು ನನಗೆ ಹೇಗೆ ವಾಹನವಾಯಿತೆಂದು ನಿನಗೆ ನಾನು ಹೇಳುವೆನು.

ಆದಿಸರ್ಗೇ ಪುರಾ ಗಾವಃ ಶ್ವೇತವರ್ಣಾಃ ಶುಚಿಸ್ಮಿತೇ ।
ಬಲಸಂಹನನೋಪೇತಾ ದರ್ಪಯುಕ್ತಾಶ್ಚರಂತಿ ತಾಃ ॥೩೧॥

ಎಲೌ ಶುಚಿಸ್ಮಿತೆಯೇ, ಆದಿಸೃಷ್ಟಿಯಲ್ಲಿ ಗೋವುಗಳು ಬಿಳಿಯ ಬಣ್ಣದಿಂದ ಕೂಡಿದ್ದವು. ಅವು ಒಳ್ಳೆಯ ಬಲ ಮತ್ತು ಶರೀರದಿಂದ ಕೂಡಿ ದರ್ಪದಿಂದ ಸಂಚರಿಸುತ್ತಿದ್ದವು.

ಅಹಂ ತು ತಪ ಆತಿಷ್ಠಂ ತಸ್ಮಿನ್ ಕಾಲೇ ಶುಭಾನನೇ ।
ಏಕಪಾದಶ್ಚೋರ್ಧ್ವಬಾಹುರ್ಲೋಕಾರ್ಥಂ ಹಿಮವದ್ಗಿರೌ ॥೩೨॥

ಎಲೌ ಶುಭಾನನೆಯೇ, ಆ ಕಾಲದಲ್ಲಿ ನಾನು ಲೋಕಹಿತಕ್ಕಾಗಿ ಹಿಮಾಲಯ ಪರ್ವತದಲ್ಲಿ ಒಂದು ಪಾದದ ಮೇಲೆ ನಿಂತು, ಬಾಹುಗಳನ್ನು ಮೇಲಕ್ಕೆತ್ತಿ ತಪಸ್ಸನ್ನು ಮಾಡುತ್ತಿದ್ದೆನು.

ಗಾವೋ ಮೇ ಪಾರ್ಶ್ವಮಾವಿಶ್ಯ ದರ್ಪೋತ್ಸಿಕ್ತಾಃ ಸಮಂತತಃ ।
ಸ್ಥಾನಭ್ರಂಶಂ ತು ಮೇ ದೇವಿ ಚಕ್ರಿರೇ ಬಹುಶಸ್ತಥಾ ॥೩೩॥

ಎಲೌ ದೇವಿಯೇ, ದರ್ಪದಿಂದ ಕೂಡಿದ ಗೋವುಗಳು ಎಲ್ಲ ಕಡೆಯಿಂದಲೂ ನನ್ನ ಸಮೀಪಕ್ಕೆ ಬಂದು ನನ್ನನ್ನು ತಳ್ಳಿ ಅನೇಕ ಬಾರಿ ನನಗೆ ಸ್ಥಾನಭ್ರಂಶವನ್ನು ಉಂಟು ಮಾಡುತ್ತಿದ್ದವು.

ಅಪಚಾರೇಣ ಚೈತಾಸಾಂ ಮನಃಕ್ಷೋಭೋऽಭವನ್ಮಮ ।
ತಸ್ಮಾದ್ ದಗ್ಧಾ ಯದಾ ಗಾವೋ ರೋಷಾವಿಷ್ಟೇನ ಚೇತಸಾ ॥೩೪॥

ತಸ್ಮಿಂಸ್ತು ವ್ಯಸನೇ ಘೋರೇ ವರ್ತಮಾನೇ ಪಶೂನ್ ಪ್ರತಿ ।
ಅನೇನ ವೃಷಭೇಣಾಹಂ ಶಮಿತಃ ಸಂಪ್ರಸಾದನೈಃ ॥೩೫॥

ಅವುಗಳು ನನಗೆ ಮಾಡಿದ ಅಪಚಾರದಿಂದ ನನ್ನ ಮನಸ್ಸಿನಲ್ಲಿ ಕ್ಷೋಭೆ ಉಂಟಾಯಿತು. ಆಗ ನಾನು ರೋಷಾವಿಷ್ಟವಾದ ಮನಸ್ಸಿನಿಂದ ಗೋವುಗಳನ್ನು ದಹಿಸಿದೆನು. ಗೋವುಗಳಿಗೆ ಅಂತಹ ವ್ಯಸನವು ಪ್ರಾಪ್ತವಾಗಿರಲು ಈ ವೃಷಭವು ಬಂದು ನನ್ನನ್ನು ಸಮಾಧಾನಗೊಳಿಸಿತು.

ತದಾಪ್ರಭೃತಿ ಶಾಂತಾಶ್ಚ ವರ್ಣಭೇದತ್ವಮಾಗತಾಃ ।
ಶ್ವೇತೋಽಯಂ ವೃಷಭೋ ದೇವಿ ಪೂರ್ವಸಂಸ್ಕಾರಸಂಯುತಃ ।
ವಾಹನತ್ವೇ ಧ್ವಜತ್ವೇ ಮೇ ತದಾಪ್ರಭೃತಿ ಯೋಜಿತಃ ॥೩೬॥

ಅಲ್ಲಿಂದ ಆರಂಭಿಸಿ ಗೋವುಗಳು ಶಾಂತಸ್ವಭಾವವನ್ನೂ ಮತ್ತು ವರ್ಣಭೇದವನ್ನೂ ಹೊಂದಿದವು. ಎಲೌ ದೇವಿಯೇ, ಈ ವೃಷಭವು ಪೂರ್ವಸಂಸ್ಕಾರದಿಂದ ಬಿಳಿಯ ಬಣ್ಣದ್ದೇ ಆಗಿದೆ. ಆಗಿನಿಂದ ನಾನು ಇದನ್ನು ವಾಹನವಾಗಿಯೂ, ಧ್ವಜವಾಗಿಯೂ ಯೋಜಿಸಿದ್ದೇನೆ.

ತಸ್ಮಾನ್ಮೇ ಗೋಪತಿತ್ವಂ ಚ ದೇವೈರ್ಗೋಭಿಶ್ಚ ಕಲ್ಪಿತಮ್ ।
ಪ್ರಸನ್ನಶ್ಚಾಭವಂ ದೇವಿ ತದಾ ಗೋಪತಿತಾಂ ಗತಃ ॥೩೭॥

ದೇವತೆಗಳು ಮತ್ತು ಗೋವುಗಳು ಸೇರಿ ನನ್ನನ್ನು **ಗೋಪತಿ ಎಂದು ಕಲ್ಪಿಸಿದರು.** ದೇವಿಯೇ, ನಾನು ಗೋಪತಿತ್ವವನ್ನು ಹೊಂದಿ ಪ್ರಸನ್ನನಾದೆನು.

॥ ಇತಿ ಶ್ರೀಮನ್ಮಹಾಭಾರತೇ ಅನುಶಾಸನಪರ್ವಣಿ ದಾನಧರ್ಮಪರ್ವಣಿ
ತ್ರಿನವತ್ಯುತ್ತರಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ತೊಂಬತ್ಮೂರನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ತೊಂಬತ್ನಾಲ್ಕನೆಯ ಅಧ್ಯಾಯ

ಶಿವನಿಂದ ಸ್ಮಶಾನವಾಸ ಮಾಡುವುದಕ್ಕೆ ಮತ್ತು ಭಯಂಕರರೂಪವನ್ನು ಧರಿಸಿರುವುದಕ್ಕೆ ಕಾರಣಕಥನ.

ಉಮಾ

ಭಗವನ್ ಸರ್ವಭೂತೇಶ ಶೂಲಪಾಣೇ ವೃಷಧ್ವಜ ।
ಆವಾಸೇಷು ವಿಚಿತ್ರೇಷು ರಮ್ಯೇಷು ಚ ಶುಭೇಷು ಚ ॥೧॥

ಸತ್ಸು ಚಾನ್ಯೇಷು ದೇಶೇಷು ಶ್ಮಶಾನೇ ರಮಸೇ ಕಥಮ್ ।
ಕೇಶಾಸ್ಥಿಕಲಿಲೇ ಭೀಮೇ ಕಪಾಲಶತಸಂಕುಲೇ ॥೨॥

ಸೃಗಾಲಗೃಧ್ರಸಂಪೂರ್ಣೇ ಶವಧೂಮಸಮಾಕುಲೇ ।
ಚಿತಾಗ್ನಿವಿಷಮೇ ಘೋರೇ ಗಹನೇ ಚ ಭಯಾನಕೇ ॥೩॥

ಉಮಾ– ಭಗವಂತನೇ, ಸರ್ವಭೂತೇಶನೇ, ಶೂಲಪಾಣಿಯೇ, ವೃಷಧ್ವಜನೇ, ಶುಭವಾದ, ವಿಚಿತ್ರವಾದ, ರಮ್ಯವಾದ ಬೇರೆ ವಾಸಸ್ಥಾನಗಳು ಇರುವಾಗ ಕೇಶ-ಅಸ್ಥಿಗಳಿಂದ ಕೂಡಿದ, ಭಯಂಕರವಾದ, ತಲೆಬುರುಡೆಗಳಿಂದ ಕೂಡಿದ, ಹದ್ದು-ನರಿಗಳಿಂದ ಕೂಡಿದ, ಪ್ರೇತಧೂಮದಿಂದ ಕೂಡಿದ, ಚಿತಾಗ್ನಿಯಿಂದ ವಿಷಮವಾದ ಘೋರವೂ, ಭಯಂಕರವೂ ಆದ ಸ್ಮಶಾನದಲ್ಲಿ ಏಕೆ ಸಂತೋಷಪಡುತ್ತೀಯೆ?

ಏವಂ ಕಳೇವರಕ್ಷೇತ್ರೇ ದುರ್ದರ್ಶೇ ರಮಸೇ ಕಥಮ್ ।
ಏಷ ಮೇ ಸಂಶಯೋ ದೇವ ತನ್ಮೇ ಶಂಸಿತುಮರ್ಹಸಿ ॥೪॥

ಇಂತಹ ನೋಡಲು ಅಸಾಧ್ಯವಾದ ಶವಕ್ಷೇತ್ರದಲ್ಲಿ ಹೇಗೆ ಸಂತೋಷಪಡುವಿ? ದೇವನೇ, ಈ ನನ್ನ ಸಂಶಯವನ್ನು ಪರಿಹರಿಸಬೇಕು.

ಮಹಾದೇವಃ

ಹಂತ ತೇ ಕಥಯಿಷ್ಯಾಮಿ ಶೃಣು ದೇವಿ ಸಮಾಹಿತಾ ।
ಆವಾಸಾರ್ಥಂ ಪುರಾ ದೇವಿ ಶುದ್ಧಾನ್ವೇಷೀ ಶುಚಿಸ್ಮಿತೇ ॥೫॥

ನಾಧ್ಯಗಚ್ಛಂ ಚಿರಂ ಕಾಲಂ ದೇಶಂ ಶುಚಿತಮಂ ಶುಭೇ ।
ಏಷ ಮೇಽಭಿನಿವೇಶೋಽಭೂತ್ ತಸ್ಮಿನ್ ಕಾಲೇ ಪ್ರಜಾಃ ಪ್ರತಿ ॥೬॥

ಮಹಾದೇವ– ಎಲೌ ದೇವಿಯೇ, ಸಮಾಧಾನದಿಂದ ನಾನು ಹೇಳುವುದನ್ನು ಕೇಳು. ಎಲೌ ದೇವಿಯೇ, ಶುಭಳೇ, ಶುಚಿಸ್ಮಿತೆಯೇ, ನಾನು ವಾಸ ಮಾಡಲು ಶುದ್ಧವಾದ ಸ್ಥಳವನ್ನು ಹುಡುಕುತ್ತಿರುವಾಗ ಅತ್ಯಂತ ಶುಚಿಯಾದ ದೇಶವು ದೊರಕಲಿಲ್ಲ. ಆಗ ಆ ಕಾಲದಲ್ಲಿ ಪ್ರಜೆಗಳನ್ನು ಕುರಿತು ನನಗೆ ಚಿಂತೆಯುಂಟಾಯಿತು.

ಆಕುಲಂ ಸುಮಹಾಘೋರಂ ಪ್ರಾದುರಾಸೀತ್ ಸಮಂತತಃ ।
ಸಂಭೂತಾ ಭೂತಸೃಷ್ಟಿಶ್ಚ ಘೋರಾ ಲೋಕಭಯಾವಹಾ ॥೭॥

ಎಲ್ಲ ಕಡೆಯಲ್ಲಿಯೂ ದೃಶ್ಯವು ಘೋರತರವಾಗಿದ್ದಿತು. ಘೋರವೂ, ಲೋಕಕ್ಕೆ ಭಯವನ್ನುಂಟು ಮಾಡುವಂತಹವೂ ಆದ ಭೂತಗಳ ಸೃಷ್ಟಿಯಾಯಿತು.

ನಾನಾವರ್ಣವಿರೂಪಾಶ್ಚ ತೀಕ್ಷ್ಣದಂಷ್ಟ್ರಾಃ ಪ್ರಹಾರಿಣಃ ।
ಪಿಶಾಚರಕ್ಷೋವದನಾಃ ಪ್ರಾಣಿನಾಂ ಪ್ರಾಣಹಾರಿಣಃ ।
ಯತಸ್ತತಶ್ಚರಂತಿ ಸ್ಮ ನಿಘ್ನಂತಃ ಪ್ರಾಣಿನೋ ಭೃಶಮ್ ॥೮॥

ನಾನಾ ಬಣ್ಣಗಳನ್ನು ಹೊಂದಿದ, ವಿಕಾರ ರೂಪಗಳನ್ನು ಹೊಂದಿದ, ತೀಕ್ಷ್ಣವಾದ ದಂಷ್ಟ್ರಗಳನ್ನು ಹೊಂದಿದ, ಪ್ರಹಾರಶೀಲರಾದ, ಪಿಶಾಚ-ರಾಕ್ಷಸ ಮುಖಗಳನ್ನು ಹೊಂದಿದ, ಪ್ರಾಣಿಗಳ ಪ್ರಾಣವನ್ನು ಅಪಹರಿಸುವ ಭೂತಗಳು ಪ್ರಾಣಿಗಳನ್ನು ಕೊಲ್ಲುತ್ತಾ ಎಲ್ಲೆಂದರಲ್ಲಿ ತಿರುಗಾಡಲು ಪ್ರಾರಂಭಿಸಿದವು.

ಏವಂ ಲೋಕೇ ಕ್ಷಯಂ ಯಾತೇ ಪ್ರಾಣಿಹೀನೇ ಪಿತಾಮಹಃ ।
ಚಿಂತಯಂಸ್ತತ್ಪ್ರತೀಕಾರಂ ಮಾಂ ಚ ಶಕ್ತಂ ಹಿ ನಿಗ್ರಹೇ ॥೯॥

ಏವಂ ಜ್ಞಾತ್ವಾ ತತೋ ಬ್ರಹ್ಮಾ ತಸ್ಮಿನ್ ಕರ್ಮಣ್ಯಯೋಜಯತ್ ।
ತಚ್ಚ ಪ್ರಾಣಿದಯಾರ್ಥಂ ತು ಮಯಾಽಪ್ಯನುಮತಂ ಪ್ರಿಯೇ ॥೧೦॥

ಹೀಗೆ ಲೋಕವು ಪ್ರಾಣಿಗಳಿಲ್ಲದೆ ಕ್ಷಯವನ್ನು ಹೊಂದುತ್ತಿರಲು ಪಿತಾಮಹನಾದ ಬ್ರಹ್ಮನು ಅದಕ್ಕೆ ಪ್ರತಿಕಾರವನ್ನು ಮಾಡಲು ಬಯಸಿ ನನ್ನನ್ನು ಆ ಭೂತಗಳನ್ನು ನಿಗ್ರಹಿಸಲು

ಸಮರ್ಥನೆಂದು ತಿಳಿದು ನನ್ನನ್ನು ಆ ಕಾರ್ಯದಲ್ಲಿ ಯೋಜಿಸಿದನು. ಪ್ರಿಯೆಯೇ, ಪ್ರಾಣಿಗಳ ಮೇಲಿನ ದಯೆಯಿಂದ ನಾನು ಆ ಕಾರ್ಯವನ್ನು ಅಂಗೀಕರಿಸಿದೆ.

ತಸ್ಮಾತ್ಸಂರಕ್ಷಿತಾ ದೇವಿ ಭೂತೇಭ್ಯಃ ಪ್ರಾಣಿನೋ ಭಯಾತ್ ।
ಅಸ್ಮಾತ್ ಶ್ಮಶಾನಾನ್ಮೇಧ್ಯಂ ತು ನಾಸ್ತಿ ಕಿಂಚಿದನಿಂದಿತೇ ।
ನಿಃಸಂಪಾತಂ ಮನುಷ್ಯಾಣಾಂ ತಸ್ಮಾಚ್ಚುಚಿತಮಂ ಸ್ಮೃತಮ್ ॥೧೧॥

ಆದ್ದರಿಂದ ಎಲೌ ದೇವಿಯೇ, ಪ್ರಾಣಿಗಳನ್ನು ನಾನು ಭೂತಗಳಿಂದ ಉಂಟಾಗುವ ಭಯದಿಂದ ರಕ್ಷಿಸುತ್ತೇನೆ. ಎಲೌ ಅನಿಂದಿತೆಯೇ, ಈ ಸ್ಮಶಾನಕ್ಕಿಂತಲೂ ಮೇಧ್ಯವಾದುದು ಯಾವುದೂ ಇಲ್ಲ. ಇಲ್ಲಿ ಮನುಷ್ಯರು ಬರುವುದಿಲ್ಲ. ಆದ್ದರಿಂದ ಅತ್ಯಂತ ಶುಚಿ ಎಂದು ಹೇಳಲ್ಪಡುತ್ತದೆ.

ಭೂತಸೃಷ್ಟಿಂ ಚ ತಾಂ ಚಾಹಂ ಶ್ಮಶಾನೇ ಸನ್ನ್ಯವೇಶಯಮ್ ।
ತತ್ರಸ್ಥಃ ಸರ್ವಲೋಕಾನಾಂ ವಿನಿಹನ್ಮಿ ಪ್ರಿಯೇ ಭಯಮ್ ॥೧೨॥

ನಾನು ಆ ಭೂತಸೃಷ್ಟಿಯನ್ನೆಲ್ಲಾ ಸ್ಮಶಾನದಲ್ಲೇ ನಿಲ್ಲಿಸಿದೆನು. ಎಲೌ ಪ್ರಿಯೆಯೇ, ನಾನು ಅಲ್ಲಿದ್ದುಕೊಂಡೇ ಎಲ್ಲ ಲೋಕಗಳ ಭಯವನ್ನು ಪರಿಹರಿಸುತ್ತೇನೆ.

ನ ಚ ಭೂತಗಣೇನಾಹಂ ವಿನಾ ವಸಿತುಮುತ್ಸಹೇ ।
ತಸ್ಮಾನ್ಮೇ ಸನ್ನಿವಾಸಾಯ ಶ್ಮಶಾನೇ ರೋಚತೇ ಮನಃ ॥೧೩॥

ಭೂತಗಣಗಳನ್ನು ಬಿಟ್ಟು ನಾನು ವಾಸ ಮಾಡಲು ಇಷ್ಟಪಡುವುದಿಲ್ಲ. ಆದ್ದರಿಂದ ಅವುಗಳು ಇರುವ ಸ್ಮಶಾನದಲ್ಲಿ ವಾಸವನ್ನು ಮಾಡಲು ನನ್ನ ಮನಸ್ಸಿಗೆ ಸಂತೋಷವಾಗುತ್ತದೆ.

ಮೇಧ್ಯಕಾಮೈರ್ದ್ವಿಜೈರ್ನಿತ್ಯಂ ಮೇಧ್ಯಮಿತ್ಯಭಿಧೀಯತೇ ।
ಆಚರದ್ಭಿರ್ವ್ರತಂ ನಿತ್ಯಂ ಮೋಕ್ಷಕಾಮೈಶ್ಚ ಸೇವ್ಯತೇ ॥೧೪॥

ಪಾವಿತ್ರ್ಯವನ್ನು ಬಯಸಿದ ಬ್ರಾಹ್ಮಣರು ನಿತ್ಯವೂ ಆ ಸ್ಥಾನವನ್ನು ಪವಿತ್ರವೆಂದು ಹೇಳುತ್ತಾರೆ. ಆ ಸ್ಥಾನವು ಮುಮುಕ್ಷುಗಳಿಂದಲೂ ಮತ್ತು ವ್ರತವನ್ನು ಆಚರಿಸುವವರಿಂದಲೂ ನಿತ್ಯವೂ ಸೇವಿಸಲ್ಪಡುತ್ತದೆ.

ಸ್ಥಾನಂ ಮೇ ತತ್ರ ವಿಹಿತಂ ವೀರಸ್ಥಾನಮಿತಿ ಪ್ರಿಯೇ ।
ಕಪಾಲಶತಸಂಪೂರ್ಣಂ ಭೀಮರೂಪಂ ಭಯಾನಕಮ್ ॥೧೫॥

ಎಲೌ ಪ್ರಿಯೆಯೇ, ಅಲ್ಲಿ ನಾನು ವಾಸ ಮಾಡುವ ಪ್ರದೇಶಕ್ಕೆ ವೀರಸ್ಥಾನವೆಂದು ಹೆಸರು. ಅದು ನೂರಾರು ಶಿರಃಕಪಾಲಗಳಿಂದ ತುಂಬಿ ಭಯಂಕರವಾಗಿರುತ್ತದೆ.

ಮಧ್ಯಾಹ್ನೇ ಸಂಧ್ಯಯೋಸ್ತತ್ರ ನಕ್ಷತ್ರೇ ರುದ್ರದೈವತೇ ।
ಆಯುಷ್ಕಾಮೈರಶುದ್ಧೈರ್ವಾ ನ ಗಂತವ್ಯಮಿತಿ ಸ್ಥಿತಿಃ ॥೧೬॥

ಮಧ್ಯಾಹ್ನದಲ್ಲಿ, ಸಂಧ್ಯಾಕಾಲದಲ್ಲಿ ಮತ್ತು ರುದ್ರದೈವತಾಕ ನಕ್ಷತ್ರದಲ್ಲಿ ಆಯುಷ್ಕಾಮರಾದವರಾಗಲೀ, ಅಶುದ್ಧರಾಗಲೀ ಅಲ್ಲಿಗೆ ಹೋಗಬಾರದೆಂದು ಸ್ಥಿತಿ.

ಮದನ್ಯೇನ ನ ಶಕ್ಯಂ ಹಿ ನಿಹಂತುಂ ಭೂತಜಂ ಭಯಮ್ ।
ತತ್ರಸ್ಥೋಽಹಂ ಪ್ರಜಾಃ ಸರ್ವಾಃ ಪಾಲಯಾಮಿ ದಿನೇದಿನೇ ॥೧೭॥

ನನ್ನನ್ನು ಬಿಟ್ಟು ಬೇರೆ ಯಾವನೂ ಭೂತದಿಂದ ಉಂಟಾಗುವ ಭಯವನ್ನು ನಿವಾರಿಸಲಾರನು. ನಾನು ಅಲ್ಲಿಯೇ ಸ್ಮಶಾನದಲ್ಲಿಯೇ ಇದ್ದುಕೊಂಡು ಪ್ರಜೆಗಳನ್ನು ಪ್ರತಿದಿನವೂ ಪಾಲಿಸುತ್ತೇನೆ.

ಮನ್ನಿಯೋಗಾದ್ ಭೂತಸಂಘಾ ನ ಚ ಘ್ನಂತೀಹ ಕಿಂಚನ ।
ತಸ್ಮಾಲ್ಲೋಕಹಿತಾರ್ಥಾಯ ಶ್ಮಶಾನೇ ರಮಯಾಮ್ಯಹಮ್ ।
ಏತತ್ತೇ ಸರ್ವಮಾಖ್ಯಾತಂ ಕಿಂ ಭೂಯಃ ಶ್ರೋತುಮಿಚ್ಛಸಿ ॥೧೮॥

ನನ್ನ ಆದೇಶದಂತೆ ಭೂತಸಮೂಹಗಳು ಇಲ್ಲಿ ಯಾರನ್ನೂ ಕೊಲ್ಲುವುದಿಲ್ಲ. ಆದ್ದರಿಂದ ಲೋಕಹಿತಕ್ಕಾಗಿ ನಾನು ಸ್ಮಶಾನದಲ್ಲಿ ಸುಖವಾಗಿ ವಾಸಿಸುತ್ತೇನೆ. ನಿನಗೆ ಎಲ್ಲವನ್ನೂ ಹೇಳಿದ್ದೇನೆ. ಇನ್ನೂ ಏನನ್ನು ಕೇಳಲು ಬಯಸುತ್ತೀಯೆ?

ಉಮಾ

ಭಗವನ್ ದೇವದೇವೇಶ ತ್ರಿನೇತ್ರ ವೃಷಭಧ್ವಜ ।
ಪಿಂಗಲಂ ವಿಕೃತಂ ಭಾತಿ ರೂಪಂ ತೇ ತು ಭಯಾನಕಮ್ ॥೧೯॥

ಭಸ್ಮದಿಗ್ಧಂ ವಿರೂಪಾಕ್ಷಂ ತೀಕ್ಷ್ಣದಂಷ್ಟ್ರಂ ಜಟಾಕುಲಮ್ ।
ವ್ಯಾಘ್ರೋರಗತ್ವಕ್ಸಂವೀತಂ ಕಪಿಲಶ್ಮಶ್ರುಸಂತತಮ್ ॥೨೦॥

ರೌದ್ರಂ ಭಯಾನಕಂ ಘೋರಂ ಶೂಲಪಟ್ಟಸಸಂಯುತಮ್ ।
ಕಿಮರ್ಥಮೀದೃಶಂ ರೂಪಂ ತನ್ಮೇ ಶಂಸಿತುಮರ್ಹಸಿ ॥೨೧॥

ಉಮಾ– ಭಗವಂತನೇ, ದೇವದೇವೇಶನೇ, ತ್ರಿನೇತ್ರನೇ, ವೃಷಧ್ವಜನೇ, ವಿಕೃತವಾದ ಪಿಂಗಲದ (ಕೆಂಪು-ಕಪ್ಪು ಬಣ್ಣ ಮಿಶ್ರಿತವಾದ) ನಿನ್ನ ರೂಪವು ಭಯಂಕರವಾಗಿದೆ. ಭಸ್ಮವನ್ನು ಲೇಪಿಸಿಕೊಂಡು, ವೀರೂಪವಾದ ಕಣ್ಣುಗಳನ್ನು ಹೊಂದಿ, ತೀಕ್ಷ್ಣವಾದ ದಂಷ್ಟ್ರಗಳನ್ನು ಹೊಂದಿ, ಬಹಳ ಜಟೆಗಳನ್ನು ಧರಿಸಿ, ವ್ಯಾಘ್ರ-ಸರ್ಪಗಳ ಚರ್ಮಗಳಿಂದ ಪರಿವೃತನಾಗಿ, ಕಪಿಲವರ್ಣದ ಮೀಸೆಗಳನ್ನು ಧರಿಸಿ, ಶೂಲ-ಪಟ್ಟಸ ಆಯುಧಗಳನ್ನು ಹಿಡಿದು ರೌದ್ರವೂ, ಘೋರವೂ, ಭಯಂಕರವೂ ಆಗಿದೆ. ನೀನು ಏತಕ್ಕೆ ಇಂತಹ ರೂಪವನ್ನು ಧರಿಸಿದ್ದೀಯೆ ಎಂದು ನನಗೆ ಹೇಳು.

ಮಹೇಶ್ವರಃ

ತದಹಂ ಕಥಯಿಷ್ಯಾಮಿ ಶೃಣು ತತ್ತ್ವಂ ಸಮಾಹಿತಾ ।
ದ್ವಿವಿಧೋ ಲೌಕಿಕೋ ಭಾವಃ ಶೀತಮುಷ್ಣಮಿತಿ ಪ್ರಿಯೇ ॥೨೨॥

ತಯೋರ್ವಿಗ್ರಥಿತಂ ಸರ್ವಂ ಸೌಮ್ಯಾಗ್ನೇಯಮಿದಂ ಜಗತ್ ॥೨೩॥

ಮಹೇಶ್ವರ– ಎಲೌ ಪ್ರಿಯೆಯೇ, ನಾನು ಅದನ್ನು ಹೇಳುವೆನು. ಸಮಾಧಾನದಿಂದ ತತ್ತ್ವವನ್ನು ಕೇಳು. ಲೋಕದಲ್ಲಿ ಶೀತ, ಉಷ್ಣ ಎಂದು ಎರಡು ಭಾವಗಳಿವೆ. ಒಂದು ಚಂದ್ರನಿಗೂ ಇನ್ನೊಂದು ಅಗ್ನಿಗೂ ಸಂಬಂಧಿಸಿದುದು. ಈ ಜಗತ್ತೆಲ್ಲವೂ ಆ ಎರಡು ಭಾವಗಳಿಂದ ವ್ಯಾಪಿಸಲ್ಪಟ್ಟಿವೆ.

ಸೌಮ್ಯತ್ವಂ ಸತತಂ ವಿಷ್ಣೌ ಮಯ್ಯಾಗ್ನೇಯಂ ಪ್ರತಿಷ್ಠಿತಮ್ ।
ಅನೇನ ವಪುಷಾ ನಿತ್ಯಂ ಸರ್ವಲೋಕಾನ್ ಬಿಭರ್ಮ್ಯಹಮ್ ॥೨೪॥

ಸೌಮ್ಯತ್ವವು ಸತತವಾಗಿ ವಿಷ್ಣುವಿನಲ್ಲಿಯೂ, ಅಗ್ನಿಸ್ವಭಾವವು ನನ್ನಲ್ಲಿಯೂ ಪ್ರತಿಷ್ಠಿತವಾಗಿದೆ. ಈ ರೂಪದಿಂದ ನಾನು ಯಾವಾಗಲೂ ಎಲ್ಲ ಲೋಕಗಳನ್ನೂ ಧರಿಸುತ್ತೇನೆ.

ರೌದ್ರಾಕೃತಿಂ ವಿರೂಪಾಕ್ಷಂ ಶೂಲಪಟ್ಟಸಸಂಯುತಮ್ ।
ಆಗ್ನೇಯಮಿತಿ ಮೇ ರೂಪಂ ದೇವಿ ಲೋಕಹಿತೇ ರತಮ್ ॥೨೫॥

ಎಲೌ ದೇವಿಯೇ, ಭಯಂಕರವಾದ ವಿರೂಪಾಕ್ಷವಾದ ಶೂಲಪಟ್ಟಸ ಧಾರಿಯಾದ ಈ ನನ್ನ ಅಗ್ನಿಸಂಬಂಧಿಯಾದ ರೂಪವು ಲೋಕಹಿತದಲ್ಲಿ ರತವಾಗಿರುತ್ತದೆ.

ಯದ್ಯಹಂ ವಿಪರೀತಃ ಸ್ಯಾಮೇತತ್ತ್ಯಕ್ತ್ವಾ ಶುಭಾನನೇ ।
ತದೈವ ಸರ್ವಲೋಕಾನಾಂ ವಿಪರೀತಂ ಪ್ರವರ್ತತೇ ॥೨೬॥

ಎಲೌ ಶುಭಾನನೆಯೇ, ನಾನು ಈ ರೂಪವನ್ನು ತ್ಯಜಿಸಿ ಬೇರೆ ರೂಪವನ್ನು ಹೊಂದಿದರೆ ಆಗ ಎಲ್ಲ ಲೋಕಗಳು ತಲೆಕೆಳಗಾಗುತ್ತವೆ.

ತಸ್ಮಾನ್ಮಯೇದಂ ಧ್ರಿಯತೇ ರೂಪಂ ಲೋಕಹಿತೈಷಿಣಾ ।
ಇತಿ ತೇ ಕಥಿತಂ ದೇವಿ ಕಿಂ ಭೂಯಃ ಶ್ರೋತುಮಿಚ್ಛಸಿ ॥೨೭॥

ಆದ್ದರಿಂದ ಲೋಕಹಿತವನ್ನು ಬಯಸಿ ನಾನು ಈ ರೂಪವನ್ನು ಧರಿಸಿದ್ದೇನೆ. ಎಲೌ ದೇವಿಯೇ, ಇದನ್ನು ನಿನಗೆ ಹೇಳಿದ್ದೇನೆ. ಇನ್ನೂ ಏನನ್ನು ಕೇಳಲು ಬಯಸುವಿ?

ಉಮಾ

ಭಗವನ್ ದೇವದೇವೇಶ ಶೂಲಪಾಣೇ ವೃಷಧ್ವಜ ।
ಕಿಮರ್ಥಂ ಚಂದ್ರರೇಖಾ ತೇ ಶಿರೋಭಾಗೇ ವಿರೋಚತೇ ।
ಶ್ರೋತುಮಿಚ್ಛಾಮ್ಯಹಂ ದೇವ ತನ್ಮೇ ಶಂಸಿತುಮರ್ಹಸಿ ॥೨೮॥

ಉಮಾ– ಭಗವಂತನೇ, ದೇವದೇವೇಶನೇ, ಶೂಲಪಾಣಿಯೇ, ವೃಷಧ್ವಜನೇ, ನಿನ್ನ ಶಿರಸ್ಸಿನಲ್ಲಿ ಚಂದ್ರರೇಖೆಯು ಏಕೆ ಶೋಭಿಸುತ್ತದೆ? ದೇವನೇ, ನಾನು ಇದನ್ನು ಕೇಳಲು ಬಯಸುತ್ತೇನೆ, ಅದನ್ನು ಹೇಳು.

ಮಹೇಶ್ವರಃ

ತದಹಂ ತೇ ಪ್ರವಕ್ಷ್ಯಾಮಿ ಶೃಣು ಕಲ್ಯಾಣಿ ಕಾರಣಮ್ ।
ಪುರಾऽಹಂ ಕಾರಣಾದ್ ದೇವಿ ಕೋಪಯುಕ್ತಃ ಶುಚಿಸ್ಮಿತೇ ।
ದಕ್ಷಯಜ್ಞವಧಾರ್ಥಾಯ ಭೂತಸಂಘಸಮಾವೃತಃ ॥೨೯॥

ಮಹೇಶ್ವರ– ಎಲೌ ಕಲ್ಯಾಣಿಯೇ, ಅದಕ್ಕೆ ಕಾರಣವನ್ನು ಹೇಳುತ್ತೇನೆ, ಕೇಳು. ಎಲೌ ಶುಚಿಸ್ಮಿತೆಯೇ, ನಾನು ಹಿಂದೆ ಒಂದು ನಿಮಿತ್ತದಿಂದ ದಕ್ಷಯಜ್ಞವನ್ನು ವಿನಾಶ ಮಾಡಲು ಕೋಪದಿಂದ ಕೂಡಿದವನಾಗಿ ಭೂತಸಮೂಹಗಳಿಂದ ಪರಿವೃತನಾಗಿದ್ದೆ.

ರೌದ್ರಂ ಭಯಾನಕಂ ಘೋರಂ ಶೂಲಪಟ್ಟಸಸಂಯುತಮ್ ।
ಕಿಮರ್ಥಮೀದೃಶಂ ರೂಪಂ ತನ್ಮೇ ಶಂಸಿತುಮರ್ಹಸಿ ॥೨೧॥

ಉಮಾ– ಭಗವಂತನೇ, ದೇವದೇವೇಶನೇ, ತ್ರಿನೇತ್ರನೇ, ವೃಷಧ್ವಜನೇ, ವಿಕೃತವಾದ ಪಿಂಗಲದ (ಕೆಂಪು-ಕಪ್ಪು ಬಣ್ಣ ಮಿಶ್ರಿತವಾದ) ನಿನ್ನ ರೂಪವು ಭಯಂಕರವಾಗಿದೆ. ಭಸ್ಮವನ್ನು ಲೇಪಿಸಿಕೊಂಡು, ವೀರೂಪವಾದ ಕಣ್ಣುಗಳನ್ನು ಹೊಂದಿ, ತೀಕ್ಷ್ಣವಾದ ದಂಷ್ಟ್ರಗಳನ್ನು ಹೊಂದಿ, ಬಹಳ ಜಟೆಗಳನ್ನು ಧರಿಸಿ, ವ್ಯಾಘ್ರ-ಸರ್ಪಗಳ ಚರ್ಮಗಳಿಂದ ಪರಿವೃತನಾಗಿ, ಕಪಿಲವರ್ಣದ ಮೀಸೆಗಳನ್ನು ಧರಿಸಿ, ಶೂಲ-ಪಟ್ಟಸ ಆಯುಧಗಳನ್ನು ಹಿಡಿದು ರೌದ್ರವೂ, ಘೋರವೂ, ಭಯಂಕರವೂ ಆಗಿದೆ. ನೀನು ಏತಕ್ಕೆ ಇಂತಹ ರೂಪವನ್ನು ಧರಿಸಿದ್ದೀಯೆ ಎಂದು ನನಗೆ ಹೇಳು.

ಮಹೇಶ್ವರಃ

ತದಹಂ ಕಥಯಿಷ್ಯಾಮಿ ಶೃಣು ತತ್ತ್ವಂ ಸಮಾಹಿತಾ ।
ದ್ವಿವಿಧೋ ಲೌಕಿಕೋ ಭಾವಃ ಶೀತಮುಷ್ಣಮಿತಿ ಪ್ರಿಯೇ ॥೨೨॥

ತಯೋರ್ವಿಗ್ರಥಿತಂ ಸರ್ವಂ ಸೌಮ್ಯಾಗ್ನೇಯಮಿದಂ ಜಗತ್ ॥೨೩॥

ಮಹೇಶ್ವರ– ಎಲೌ ಪ್ರಿಯೆಯೇ, ನಾನು ಅದನ್ನು ಹೇಳುವೆನು. ಸಮಾಧಾನದಿಂದ ತತ್ತ್ವವನ್ನು ಕೇಳು. ಲೋಕದಲ್ಲಿ ಶೀತ, ಉಷ್ಣ ಎಂದು ಎರಡು ಭಾವಗಳಿವೆ. ಒಂದು ಚಂದ್ರನಿಗೂ ಇನ್ನೊಂದು ಅಗ್ನಿಗೂ ಸಂಬಂಧಿಸಿದುದು. ಈ ಜಗತ್ತೆಲ್ಲವೂ ಆ ಎರಡು ಭಾವಗಳಿಂದ ವ್ಯಾಪಿಸಲ್ಪಟ್ಟಿವೆ.

ಸೌಮ್ಯತ್ವಂ ಸತತಂ ವಿಷ್ಣೌ ಮಯ್ಯಾಗ್ನೇಯಂ ಪ್ರತಿಷ್ಠಿತಮ್ ।
ಅನೇನ ವಪುಷಾ ನಿತ್ಯಂ ಸರ್ವಲೋಕಾನ್ ಬಿಭರ್ಮ್ಯಹಮ್ ॥೨೪॥

ಸೌಮ್ಯತ್ವವು ಸತತವಾಗಿ ವಿಷ್ಣುವಿನಲ್ಲಿಯೂ, ಅಗ್ನಿಸ್ವಭಾವವು ನನ್ನಲ್ಲಿಯೂ ಪ್ರತಿಷ್ಠಿತವಾಗಿದೆ. ಈ ರೂಪದಿಂದ ನಾನು ಯಾವಾಗಲೂ ಎಲ್ಲ ಲೋಕಗಳನ್ನೂ ಧರಿಸುತ್ತೇನೆ.

ರೌದ್ರಾಕೃತಿಂ ವಿರೂಪಾಕ್ಷಂ ಶೂಲಪಟ್ಟಸಸಂಯುತಮ್ ।
ಆಗ್ನೇಯಮಿತಿ ಮೇ ರೂಪಂ ದೇವಿ ಲೋಕಹಿತೇ ರತಮ್ ॥೨೫॥

ಎಲೌ ದೇವಿಯೇ, ಭಯಂಕರವಾದ ವಿರೂಪಾಕ್ಷವಾದ ಶೂಲಪಟ್ಟಸ ಧಾರಿಯಾದ ಈ ನನ್ನ ಅಗ್ನಿಸಂಬಂಧಿಯಾದ ರೂಪವು ಲೋಕಹಿತದಲ್ಲಿ ರತವಾಗಿರುತ್ತದೆ.

ಯದ್ಯಹಂ ವಿಪರೀತಃ ಸ್ಯಾಮೇತತ್ಯಕ್ತ್ವಾ ಶುಭಾನನೇ ।
ತದೈವ ಸರ್ವಲೋಕಾನಾಂ ವಿಪರೀತಂ ಪ್ರವರ್ತತೇ ॥೨೬॥

ಎಲೌ ಶುಭಾನನೆಯೇ, ನಾನು ಈ ರೂಪವನ್ನು ತ್ಯಜಿಸಿ ಬೇರೆ ರೂಪವನ್ನು ಹೊಂದಿದರೆ ಆಗ ಎಲ್ಲ ಲೋಕಗಳು ತಲೆಕೆಳಗಾಗುತ್ತವೆ.

ತಸ್ಮಾನ್ಮಯೇದಂ ಧ್ರಿಯತೇ ರೂಪಂ ಲೋಕಹಿತೈಷಿಣಾ ।
ಇತಿ ತೇ ಕಥಿತಂ ದೇವಿ ಕಿಂ ಭೂಯಃ ಶ್ರೋತುಮಿಚ್ಛಸಿ ॥೨೭॥

ಆದ್ದರಿಂದ ಲೋಕಹಿತವನ್ನು ಬಯಸಿ ನಾನು ಈ ರೂಪವನ್ನು ಧರಿಸಿದ್ದೇನೆ. ಎಲೌ ದೇವಿಯೇ, ಇದನ್ನು ನಿನಗೆ ಹೇಳಿದ್ದೇನೆ. ಇನ್ನೂ ಏನನ್ನು ಕೇಳಲು ಬಯಸುವಿ?

ಉಮಾ

ಭಗವನ್ ದೇವದೇವೇಶ ಶೂಲಪಾಣೇ ವೃಷಧ್ವಜ ।
ಕಿಮರ್ಥಂ ಚಂದ್ರರೇಖಾ ತೇ ಶಿರೋಭಾಗೇ ವಿರೋಚತೇ ।
ಶ್ರೋತುಮಿಚ್ಛಾಮ್ಯಹಂ ದೇವ ತನ್ಮೇ ಶಂಸಿತುಮರ್ಹಸಿ ॥೨೮॥

ಉಮಾ– ಭಗವಂತನೇ, ದೇವದೇವೇಶನೇ, ಶೂಲಪಾಣಿಯೇ, ವೃಷಧ್ವಜನೇ, ನಿನ್ನ ಶಿರಸ್ಸಿನಲ್ಲಿ ಚಂದ್ರರೇಖೆಯು ಏಕೆ ಶೋಭಿಸುತ್ತದೆ? ದೇವನೇ, ನಾನು ಇದನ್ನು ಕೇಳಲು ಬಯಸುತ್ತೇನೆ, ಅದನ್ನು ಹೇಳು.

ಮಹೇಶ್ವರಃ

ತದಹಂ ತೇ ಪ್ರವಕ್ಷ್ಯಾಮಿ ಶೃಣು ಕಲ್ಯಾಣಿ ಕಾರಣಮ್ ।
ಪುರಾऽಹಂ ಕಾರಣಾದ್ ದೇವಿ ಕೋಪಯುಕ್ತಃ ಶುಚಿಸ್ಮಿತೇ ।
ದಕ್ಷಯಜ್ಞವಧಾರ್ಥಾಯ ಭೂತಸಂಘಸಮಾವೃತಃ ॥೨೯॥

ಮಹೇಶ್ವರ– ಎಲೌ ಕಲ್ಯಾಣಿಯೇ, ಅದಕ್ಕೆ ಕಾರಣವನ್ನು ಹೇಳುತ್ತೇನೆ, ಕೇಳು. ಎಲೌ ಶುಚಿಸ್ಮಿತೆಯೇ, ನಾನು ಹಿಂದೆ ಒಂದು ನಿಮಿತ್ತದಿಂದ ದಕ್ಷಯಜ್ಞವನ್ನು ವಿನಾಶ ಮಾಡಲು ಕೋಪದಿಂದ ಕೂಡಿದವನಾಗಿ ಭೂತಸಮೂಹಗಳಿಂದ ಪರಿವೃತನಾಗಿದ್ದೆ.

ತಸ್ಮಿನ್ ಕ್ರತುವಧೇ ಘೋರೇ ಯಜ್ಞಭಾಗನಿಮಿತ್ತತಃ ।
ದೇವಾ ವಿಭ್ರಂಶಿತಾಸ್ತೇ ವೈ ಯೇಷಾಂ ಭಾಗಃ ಕ್ರತೌ ಕೃತಃ ॥೩೦॥

ಯಜ್ಞಭಾಗದ ನಿಮಿತ್ತವಾಗಿ ನಡೆದ ಆ ಘೋರವಾದ ಯಜ್ಞಧ್ವಂಸದಲ್ಲಿ ಯಾವ ದೇವತೆಗಳಿಗೆ ಯಜ್ಞಭಾಗವು ಕ್ಲೃಪ್ತವಾಗಿದ್ದಿತೋ ಆ ದೇವತೆಗಳು ನನ್ನಿಂದ ಘಾಸಿಗೊಳಿಸಲ್ಪಟ್ಟರು.

ಸೋಮಸ್ತತ್ರ ಮಯಾ ದೇವಿ ಕುಪಿತೇನ ಭೃಶಾರ್ದಿತಃ ।
ಪಶ್ಯಂಶ್ಚಾನಪರಾಧೀ ಸನ್ ಪಾದಾಂಗುಷ್ಠೇನ ತಾಡಿತಃ ॥೩೧॥

ಕೋಪಗೊಂಡ ನಾನು ಅಲ್ಲಿ ಚಂದ್ರನನ್ನು ಬಹಳವಾಗಿ ಹಿಂಸೆ ಮಾಡಿದೆ. ಅವನು ನಿರಪರಾಧಿಯೆಂದು ತಿಳಿದಿದ್ದರೂ ಅವನನ್ನು ನನ್ನ ಪಾದಾಂಗುಷ್ಠದಿಂದ ಒದ್ದೆ.

ತಥಾಪಿ ವಿನಿಕೃತೇನಾಹಂ ಸಾಮಪೂರ್ವಂ ಪ್ರಸಾದಿತಃ ।
ತನ್ಮೇ ಚಿಂತಯತಶ್ಚಾಸೀತ್ ಪಶ್ಚಾತ್ತಾಪಃ ಪುರಾ ಪ್ರಿಯೇ ॥೩೨॥

ಅವನಿಗೆ ನಾನು ಹೀಗೆ ಅಪಚಾರ ಮಾಡಿದ್ದರೂ ಅವನು ಶಾಂತವಾಗಿಯೇ ನನ್ನನ್ನು ಪ್ರಸನ್ನೀಕರಿಸಿದನು. ಎಲೌ ಪ್ರಿಯೆಯೇ, ಅದನ್ನು ಯೋಚಿಸಿದ ನನಗೆ ಪಶ್ಚಾತ್ತಾಪ ಉಂಟಾಯಿತು.

ತದಾಪ್ರಭೃತಿ ಸೋಮಂ ವೈ ಶಿರಸಾ ಧಾರಯಾಮ್ಯಹಮ್ ।
ಏವಂ ಮೇ ಪಾಪಹಾನಿಸ್ತು ಭವೇದಿತಿ ಮತಿರ್ಮಮ ।
ತದಾಪ್ರಭೃತಿ ವೈ ಸೋಮೋ ಮೂರ್ಧ್ನಿ ಸಂದೃಶ್ಯತೇ ಸದಾ ॥೩೩॥

ಅಂದಿನಿಂದ ಆರಂಭಿಸಿ ನಾನು ಚಂದ್ರನನ್ನು ಶಿರಸ್ಸಿನಲ್ಲಿ ಧರಿಸಿದ್ದೇನೆ. ಹೀಗೆ ಮಾಡಿದರೆ ನನ್ನ ಪಾಪಹಾನಿಯಾದೀತು ಎಂದು ನನ್ನ ಅಭಿಪ್ರಾಯ. ಅಲ್ಲಿಂದ ಆರಂಭಿಸಿ ಚಂದ್ರನು ನನ್ನ ಶಿರಸ್ಸಿನಲ್ಲಿ ಕಾಣುತ್ತಾನೆ.

ನಾರದಃ

ಏವಂ ಬ್ರುವತಿ ದೇವೇಶೇ ವಿಸ್ಮಿತಾಃ ಪರಮರ್ಷಯಃ ।
ವಾಗ್ಭಿಃ ಸಾಂಜಲಿಮಾಲಾಭಿರಭಿತುಷ್ಟುವುರೀಶ್ವರಮ್ ॥೩೪॥

ನಾರದ– ದೇವೇಶನಾದ ಶಂಕರನು ಹೀಗೆ ಹೇಳುತ್ತಿರಲು ವಿಸ್ಮಿತರಾದ ಪರಮರ್ಷಿಗಳು ಕೈಗಳನ್ನು ಮುಗಿದು ಈಶ್ವರನನ್ನು ಸ್ತೋತ್ರ ಮಾಡಿದರು.

ನಮಃ ಶಂಕರ ಸರ್ವೇಶ ನಮಃ ಸರ್ವಜಗದ್ಗುರೋ ।
ನಮೋ ದೇವಾದಿದೇವಾಯ ನಮಃ ಶಶಿಕಲಾಧರ ॥೩೫॥

ನಮೋ ಘೋರತರಾದ್‌ಘೋರ ನಮೋ ರುದ್ರ ಭಯಂಕರ ।
ನಮಃ ಶಾಂತತರಾಚ್ಛಾಂತ ನಮಶ್ಚಂದ್ರಸ್ಯ ಪಾಲಕ ॥೩೬॥

ನಮಃ ಸೋಮಾಯ ದೇವಾಯ ನಮಸ್ತುಭ್ಯಂ ಚತುರ್ಮುಖ ।
ನಮೋ ಭೂತಪತೇ ಶಂಭೋ ಜಹ್ನುಕನ್ಯಾಂಬುಶೇಖರ ॥೩೭॥

ನಮಸ್ತ್ರಿಶೂಲಹಸ್ತಾಯ ಪನ್ನಗಾಭರಣಾಯ ಚ ।
ನಮೋಸ್ತು ವಿಷಮಾಕ್ಷಾಯ ದಕ್ಷಯಜ್ಞಪ್ರದಾಹಕ ॥೩೮॥

ನಮೋಸ್ತು ಬಹುನೇತ್ರಾಯ ಲೋಕರಕ್ಷಣತತ್ಪರ ।
ಅಹೋ ದೇವಸ್ಯ ಮಾಹಾತ್ಮ್ಯಂ ಮಹಾದೇವಸ್ಯ ವೈ ಕೃಪಾ ।
ಏವಂ ಧರ್ಮಪರತ್ವಂ ಚ ದೇವದೇವಸ್ಯ ಚಾರ್ಹತಿ ॥೩೯॥

ಶಂಕರನೇ ನಿನಗೆ ನಮಸ್ಕಾರ. ಸರ್ವೇಶನೇ, ಸರ್ವಜಗದ್ಗುರುವೇ ನಿನಗೆ ನಮಸ್ಕಾರ. ದೇವಾದಿದೇವನೇ ನಿನಗೆ ನಮಸ್ಕಾರ. ಚಂದ್ರಕಲಾಧರನೇ ನಿನಗೆ ನಮಸ್ಕಾರ. ಘೋರಕ್ಕಿಂತಲೂ ಘೋರನಾದವನೇ ನಿನಗೆ ನಮಸ್ಕಾರ. ಭಯಂಕರನೇ, ರುದ್ರನೇ ನಿನಗೆ ನಮಸ್ಕಾರ. ಶಾಂತಕ್ಕಿಂತಲೂ ಶಾಂತನಾದವನೇ ನಿನಗೆ ನಮಸ್ಕಾರ. ಚಂದ್ರನ ರಕ್ಷಕನೇ ನಿನಗೆ ನಮಸ್ಕಾರ. ಪಾರ್ವತೀ ಸಹಿತನಾದ ದೇವನೇ ನಿನಗೆ ನಮಸ್ಕಾರ. ಚತುರ್ಮುಖನೇ ನಿನಗೆ ನಮಸ್ಕಾರ. ಭೂತಪತಿಯೇ, ಶಂಭುವೇ, ಜಾಹ್ನವೀ ಜಲವನ್ನು ತಲೆಯಲ್ಲಿ ಧರಿಸಿದವನೇ ನಿನಗೆ ನಮಸ್ಕಾರ. ತ್ರಿಶೂಲವನ್ನು ಹಿಡಿದವನೇ, ಸರ್ಪಾಭರಣನೇ ನಿನಗೆ ನಮಸ್ಕಾರ. ವಿರೂಪಾಕ್ಷನೇ, ದಕ್ಷಯಜ್ಞಭಂಜಕನೇ ನಿನಗೆ ನಮಸ್ಕಾರ. ಲೋಕರಕ್ಷಣ ತತ್ಪರನೇ, ಬಹುನೇತ್ರವುಳ್ಳವನೇ ನಿನಗೆ ನಮಸ್ಕಾರ. ಮಹಾದೇವನ ಮಹಿಮೆಯು ಮತ್ತು ಕೃಪೆಯು ಎಷ್ಟು ಆಶ್ಚರ್ಯಕರವಾದುದು. ದೇವದೇವನಾದ ಅವನೇ ಇಂತಹ ಧರ್ಮಪರತ್ವಕ್ಕೆ ಅರ್ಹನಾದವನು.

ಏವಂ ಬ್ರುವತ್ಸು ಮುನಿಷು ವಚೋ ದೇವ್ಯಬ್ರವೀದ್ ಹರಮ್ ।
ಪ್ರೀತ್ಯರ್ಥಂ ಚ ಮುನೀನಾಂ ಸಾ ಕ್ಷಣಜ್ಞಾ ಪರಮಂ ಹಿತಮ್ ॥೪೦॥

ಹೀಗೆ ಋಷಿಗಳು ಹೇಳುತ್ತಿರಲು ದೇವಿಯು ಋಷಿಗಳ ಸಂತೋಷಕ್ಕಾಗಿ ಸಂದರ್ಭವನ್ನು ತಿಳಿದು ಈಶ್ವರನನ್ನು ಕುರಿತು ಪರಮಹಿತವಾದ ಮಾತನ್ನು ಹೇಳಿದಳು.

ಉಮಾ

ಭಗವನ್ ದೇವದೇವೇಶ ಸರ್ವಲೋಕನಮಸ್ಕೃತ ।
ಅಸ್ಯ ವೈ ಋಷಿಸಂಘಸ್ಯ ಮಮ ಚ ಪ್ರಿಯಕಾಮ್ಯಯಾ ॥೪೧॥

ವರ್ಣಾಶ್ರಮಕೃತಂ ಧರ್ಮಂ ವಕ್ತುಮರ್ಹಸ್ಯಶೇಷತಃ ।
ನ ತೃಪ್ತಿರಸ್ತಿ ದೇವೇಶ ಶ್ರವಣೀಯಂ ಹಿ ತೇ ವಚಃ ॥೪೨॥

ಉಮಾ– ಭಗವಂತನೇ, ದೇವದೇವೇಶನೇ, ಸರ್ವಲೋಕನಮಸ್ಕೃತನೇ, ಈ ಋಷಿಗಳ ಸಮೂಹಕ್ಕೆ ಮತ್ತು ನನಗೂ ಪ್ರಿಯವನ್ನು ಮಾಡಲು ಬಯಸಿ ವರ್ಣಾಶ್ರಮ ಧರ್ಮಗಳನ್ನು ಸಂಪೂರ್ಣವಾಗಿ ಹೇಳಬೇಕು. ದೇವೇಶನೇ, ನಿನ್ನ ಮಾತುಗಳಿಂದ ನನಗೆ ತೃಪ್ತಿಯಿಲ್ಲ. ಇನ್ನೂ ನಿನ್ನ ಮಾತುಗಳನ್ನು ಕೇಳಬೇಕಾಗಿದೆ.

ಸಧರ್ಮಚಾರಿಣೀ ಚೇಯಂ ಭಕ್ತಾ ಚೇಯಮಿತಿ ಪ್ರಭೋ ।
ವಕ್ತುಮರ್ಹಸಿ ದೇವೇಶ ಲೋಕಾನಾಂ ಹಿತಕಾಮ್ಯಯಾ ।
ಯಾಥಾತಥ್ಯೇನ ತತ್ಸರ್ವಂ ವಕ್ತುಮರ್ಹಸಿ ಶಂಕರ ॥೪೩॥

ಎಲೈ ಪ್ರಭುವೇ, ದೇವೇಶನೇ, ಶಂಕರನೇ, ನಾನು ನಿನ್ನ ಸಹಧರ್ಮಿಣಿಯೆಂದೂ, ನಿನ್ನ ಭಕ್ತಳೆಂದೂ ತಿಳಿದು ನನ್ನ ಮತ್ತು ಲೋಕದ ಹಿತವನ್ನು ಬಯಸಿ ನೀನು ವರ್ಣಾಶ್ರಮ ಧರ್ಮಗಳನ್ನು ಯಥಾರ್ಥವಾಗಿ ಹೇಳಬೇಕು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮಪರ್ವಣಿ ರುದ್ರರೂಪನಿಮಿತ್ತಕಥನಂ ನಾಮ ಚತುರ್ನವತ್ಯುತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ತೊಂಬತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ತೊಂಬತ್ತೈದನೆಯ ಅಧ್ಯಾಯ

ಉಮಾ-ಮಹೇಶ್ವರರ ಸಂವಾದ. ವರ್ಣಾಶ್ರಮಧರ್ಮ ಕಥನ.

ಮಹೇಶ್ವರಃ

ಹಂತ ತೇ ಕಥಯಿಷ್ಯಾಮಿ ಯತ್ತೇ ದೇವಿ ಮನಃಪ್ರಿಯಮ್ ।
ಶೃಣು ತತ್ಸರ್ವಮಖಿಲಂ ಧರ್ಮಂ ವರ್ಣಾಶ್ರಮಾಶ್ರಿತಮ್ ॥೧॥

ಮಹೇಶ್ವರ– ದೇವಿಯೇ ಸಂತೋಷ. ನಿನ್ನ ಮನಸ್ಸಿಗೆ ಪ್ರಿಯವಾದುದನ್ನು ಹೇಳುವೆನು. ಎಲ್ಲ ವರ್ಣಾಶ್ರಮ ಸಂಬಂಧಿ ಧರ್ಮಗಳನ್ನೂ ಕೇಳು.

ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಃ ಶುದ್ರಾಶ್ಚೇತಿ ಚತುರ್ವಿಧಮ್ ।
ಬ್ರಾಹ್ಮಣಾ ವಿಹಿತಾಃ ಪೂರ್ವಂ ಲೋಕತಂತ್ರಮಭೀಪ್ಸತಾ ।
ಕರ್ಮಾಣಿ ಚ ತದರ್ಹಾಣಿ ಶಾಸ್ತ್ರೇಷು ವಿಹಿತಾನಿ ವೈ ॥೨॥

ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂದು ವರ್ಣಗಳು ನಾಲ್ಕು ವಿಧವಾದವುಗಳು. ಲೋಕತಂತ್ರವನ್ನು ನಡೆಸುವ ಉದ್ದೇಶದಿಂದ ಬ್ರಾಹ್ಮಣರು ಮೊದಲು ವಿಹಿತರಾದರು. ಅವರಿಗೆ ಯೋಗ್ಯವಾದ ಕರ್ಮಗಳು ಶಾಸ್ತ್ರಗಳಲ್ಲಿ ವಿಹಿತವಾಗಿವೆ.

ಯದಿ ಚೇದೇಕವರ್ಣಂ ಸ್ಯಾಜ್ಜಗತ್ ಸರ್ವಂ ವಿನಶ್ಯತಿ ।
ಸಹೈವ ದೇವೈರ್ವರ್ಣಾನಿ ಚತ್ವಾರಿ ವಿಹಿತಾನ್ಯುತ ॥೩॥

ಒಂದೇ ವರ್ಣವಿದ್ದರೆ ಜಗತ್ತೆಲ್ಲವೂ ನಾಶವನ್ನು ಹೊಂದುತ್ತದೆ. ಆದ್ದರಿಂದ ದೇವತೆಗಳು ಒಂದೇ ಕಾಲದಲ್ಲಿ ನಾಲ್ಕು ವರ್ಣಗಳನ್ನು ಜೊತೆಯಲ್ಲಿಯೇ ಸೃಷ್ಟಿಸಿದರು.

ಮುಖತೋ ಬ್ರಾಹ್ಮಣಾಃ ಸೃಷ್ಟಾಸ್ತಸ್ಮಾತ್ ತೇ ವಾಗ್ವಿಶಾರದಾಃ ।
ಬಾಹುಭ್ಯಾಂ ಕ್ಷತ್ರಿಯಾಃ ಸೃಷ್ಟಾಸ್ತಸ್ಮಾತ್ ಬಾಹುಬಲಾನ್ವಿತಾಃ ॥೪॥

ಬ್ರಾಹ್ಮಣರು ಮುಖದಿಂದ ಜನಿಸಿದರು. ಆದ್ದರಿಂದ ಅವರು ವಾಗ್ವಿಶಾರದರು. ಕ್ಷತ್ರಿಯರು ಬಾಹುಗಳಿಂದ ಜನಿಸಿದರು. ಆದ್ದರಿಂದ ಅವರು ಬಾಹುಬಲಾನ್ವಿತರು.

ಉದರಾದುದ್ಗತಾ ವೈಶ್ಯಾಸ್ತಸ್ಮಾದ್ವಾರ್ತೋಪಜೀವಿನಃ ।
ಶೂದ್ರಾಶ್ಚ ಪಾದತಃ ಸೃಷ್ಟಾಸ್ತಸ್ಮಾತ್ ತೇ ಪರಿಚಾರಕಾಃ ॥೫॥

ವೈಶ್ಯರು ಉದರದಿಂದ ಹೊರಬಂದರು. ಆದ್ದರಿಂದ ಅವರು ವಾರ್ತೆಯನ್ನು (ವಾಣಿಜ್ಯವನ್ನು) ಅವಲಂಬಿಸಿರುತ್ತಾರೆ. ಶೂದ್ರರು ಪಾದಗಳಿಂದ ಜನಿಸಿದರು. ಆದ್ದರಿಂದ ಅವರು ಪರಿಚಾರಕರು.

ತೇಷಾಂ ಧರ್ಮಾಂಶ್ಚ ಕರ್ಮಾಣಿ ಶೃಣು ದೇವಿ ಸಮಾಹಿತಾ ।
ವಿಪ್ರಾಃ ಕೃತಾ ಭೂಮಿದೇವಾ ಲೋಕಾನಾಂ ಧಾರಣೇ ಕೃತಾಃ ।
ತೇ ಕೈಶ್ಚಿನ್ನಾವಮಂತವ್ಯಾ ಬ್ರಾಹ್ಮಣಾ ಹಿತಮಿಚ್ಛುಭಿಃ ॥೬॥

ದೇವಿಯೇ, ಅವರಿಗೆ ವಿಹಿತವಾದ ಕರ್ಮಗಳನ್ನು ಮತ್ತು ಧರ್ಮಗಳನ್ನು ಸಮಾಧಾನದಿಂದ ಕೇಳು. ಬ್ರಾಹ್ಮಣರು ಭೂಮಿದೇವತೆಗಳಾಗಿ ಮಾಡಲ್ಪಟ್ಟರು. ಲೋಕದ ಧಾರಣೆಗಾಗಿ ಅವರು ಹಾಗೆ ಮಾಡಲ್ಪಟ್ಟರು. ತಮ್ಮ ಹಿತವನ್ನು ಬಯಸುವ ಯಾರೂ ಬ್ರಾಹ್ಮಣರಿಗೆ ಅವಮಾನವನ್ನು ಮಾಡಬಾರದು.

ಯದಿ ತೇ ಬ್ರಾಹ್ಮಣಾ ನ ಸ್ಯುರ್ದಾನಯೋಗವಹಾಃ ಸದಾ ।
ಉಭಯೋರ್ಲೋಕಯೋರ್ದೇವಿ ಸ್ಥಿತಿರ್ನ ಸ್ಯಾತ್ಸಮಾಸತಃ ॥೭॥

ಒಂದು ಪಕ್ಷ ದಾನವನ್ನೂ, ಯೋಗವನ್ನೂ ಪ್ರವರ್ತಿಸುವ ಬ್ರಾಹ್ಮಣರು ಇಲ್ಲದಿದ್ದರೆ ಎಲೌ ದೇವಿಯೇ, ಈ ಲೋಕ ಮತ್ತು ಪರಲೋಕಗಳು ಉಳಿಯುತ್ತಿರಲೇ ಇಲ್ಲ.

ಲೋಕೇಷು ದುರ್ಲಭಂ ಕಿಂತು ಬ್ರಾಹ್ಮಣತ್ವಮಿತಿ ಸ್ಮೃತಮ್ ।
ಅಬುಧೋ ವಾ ದರಿದ್ರೋ ವಾ ಪೂಜನೀಯಃ ಸದೈವ ಸಃ ॥೮॥

ಲೋಕದಲ್ಲಿ ಬ್ರಾಹ್ಮಣತ್ವವು ಬಹಳ ದುರ್ಲಭವಾದುದೆಂದು ಹೇಳುತ್ತಾರೆ. ಅವನು ವಿದ್ಯಾವಂತನಾಗದಿದ್ದರೂ, ದರಿದ್ರನಾದರೂ ಯಾವಾಗಲೂ ಅವನನ್ನು ಪೂಜಿಸಬೇಕು.

ಬ್ರಾಹ್ಮಣಾನ್ ಯೋऽವಮನ್ಯೇತ ನಿಂದಯೇತ್ ಕ್ರೋಶಯೇಚ್ಚ ವಾ ।
ಪ್ರಹರೇತ ಹರೇದ್ವಾಪಿ ಧನಂ ತೇಷಾಂ ನರಾಧಮಃ ॥೯॥

ಕಾರಯೇದ್ದೀನಕರ್ಮಾಣಿ ಕಾಮಲೋಭವಿಮೋಹನಾತ್ ।
ಸ ಚ ಮಾಮವಮನ್ಯೇತ ಮಾಂ ಕ್ರೋಶತಿ ಚ ನಿಂದತಿ ॥೧೦॥

ಮಾಮೇವ ಪ್ರಹರೇನ್ಮೂಢೋ ಮದ್ಧನಸ್ಯಾಪಹಾರಕಃ ।
ಮಾಮೇವ ಪ್ರೇಕ್ಷಣಂ ಕೃತ್ವಾ ನಿಂದತೇ ಮೂಢಚೇತನಃ ॥೧೧॥

ಬ್ರಾಹ್ಮಣರಿಗೆ ಯಾವ ನರಾಧಮನು ಅವಮಾನ ಮಾಡುತ್ತಾನೆಯೋ, ನಿಂದಿಸುತ್ತಾನೆಯೋ ಅಥವಾ ಕಿರುಚುತ್ತಾನೆಯೋ, ಹೊಡೆಯುತ್ತಾನೆಯೋ ಅಥವಾ ಅವನ ಧನವನ್ನು ಅಪಹರಿಸುತ್ತಾನೆಯೋ ಅಥವಾ ಕಾಮಲೋಭಗಳಿಗೆ ವಶನಾಗಿ ಅವರಿಂದ ನೀಚಕರ್ಮಗಳನ್ನು ಮಾಡಿಸುತ್ತಾನೆಯೋ ಅವನು ನನ್ನನ್ನೇ ಅವಮಾನ ಮಾಡುತ್ತಾನೆ, ನನ್ನನ್ನೇ ಕುರಿತು ನಿಂದಿಸುತ್ತಾನೆ. ಮೂಢನಾದ ಅವನು ನನ್ನನ್ನೇ ಹೊಡೆಯುತ್ತಾನೆ. ನನ್ನ ಧನವನ್ನೇ ಅಪಹರಿಸುತ್ತಾನೆ. ನನ್ನನ್ನೇ ದುರುಗುಟ್ಟುಕೊಂಡು ನೋಡಿ ಮೂಢನಾದ ಅವನು ನಿಂದಿಸುತ್ತಾನೆ.

ಸ್ವಾಧ್ಯಾಯೋ ಯಜನಂ ದಾನಂ ತಸ್ಯ ಧರ್ಮ ಇತಿ ಸ್ಥಿತಿಃ ।
ಕರ್ಮಾಣ್ಯಧ್ಯಾಪನಂ ಚೈವ ಯಾಜನಂ ಚ ಪ್ರತಿಗ್ರಹಃ ।
ಸತ್ಯಂ ಶಾಂತಿಸ್ತಪಃ ಶೌಚಂ ತಸ್ಯ ಧರ್ಮಃ ಸನಾತನಃ ॥೧೨॥

ಸ್ವಾಧ್ಯಾಯ, ಯಜನ ಮತ್ತು ದಾನಗಳು ಅವನ ಧರ್ಮ, ಸತ್ಯ, ಶಾಂತಿ, ತಪಸ್ಸು, ಶೌಚ ಎಂಬುವು ಅವನ ಕರ್ಮಗಳು. ಅಧ್ಯಾಪನ, ಯಾಜನ ಮತ್ತು ಪ್ರತಿಗ್ರಹ ಇವುಗಳು ಅವನಿಗೆ ಸನಾತನವಾದ ಧರ್ಮಗಳು.

ವಿಕ್ರಯೋ ರಸಧಾನ್ಯಾನಾಂ ಬ್ರಾಹ್ಮಣಸ್ಯ ವಿಗರ್ಹಿತಃ ।
ಅನಾಪದಿ ಚ ಶೂದ್ರಾನ್ನಂ ವೃಷಲೀಸಂಗ್ರಹಸ್ತಥಾ ॥೧೩॥

ರಸಗಳ ಮತ್ತು ಧಾನ್ಯಗಳ ವಿಕ್ರಯವು ಬ್ರಾಹ್ಮಣರಿಗೆ ನಿಂದಿತವಾದುದು. ಆಪತ್ತು ಇಲ್ಲದಿರುವಾಗ ಅವನು ಶೂದ್ರಾನ್ನವನ್ನಾಗಲೀ, ಶೂದ್ರಸ್ತ್ರೀಯನ್ನಾಗಲೀ ಸೇವಿಸಬಾರದು.

ತಪ ಏವ ಸದಾ ಧರ್ಮೋ ಬ್ರಾಹ್ಮಣಸ್ಯ ನ ಸಂಶಯಃ ।
ಸ ತು ಧರ್ಮಾರ್ಥಮುತ್ಪನ್ನಃ ಪೂರ್ವಂ ಧಾತ್ರಾ ತಪೋಬಲಾತ್ ॥೧೪॥

ಬ್ರಾಹ್ಮಣನಿಗೆ ಯಾವಾಗಲೂ ತಪಸ್ಸೇ ಧರ್ಮ. ಇದರಲ್ಲಿ ಸಂಶಯವಿಲ್ಲ. ಬ್ರಹ್ಮದೇವರು ತಮ್ಮ ತಪೋಬಲದಿಂದ ಧರ್ಮವನ್ನು ಸಂಪಾದಿಸುವುದಕ್ಕಾಗಿಯೇ ಬ್ರಾಹ್ಮಣನನ್ನು ಮೊದಲು ಸೃಷ್ಟಿಸಿದ್ದಾರೆ.

ತಸ್ಯೋಪನಯನಂ ಧರ್ಮೋ ನಿತ್ಯಂ ಚೋದಕಧಾರಣಮ್ ।
ರಹಸ್ಯಶ್ರವಣಂ ಧರ್ಮೋ ದೇವವ್ರತನಿಷೇವಣಮ್ ॥೧೫॥

ಅವನಿಗೆ ಉಪನಯನ, ಜಲಸಹಿತವಾದ ಕಮಂಡಲುವಿನ ಧಾರಣ, ಉಪನಿಷತ್ ಶ್ರವಣ ಮತ್ತು ದೇವತಾವ್ರತಗಳ ಆಚರಣೆ - ಇವು ಧರ್ಮಗಳು.

ಅಗ್ನಿಕಾರ್ಯಂ ಪರೋ ಧರ್ಮೋ ನಿತ್ಯಂ ಯಜ್ಞೋಪವೀತಿತಾ ।
ಶೂದ್ರಾನ್ನವರ್ಜನಂ ಧರ್ಮೋ ಧರ್ಮಃ ಸತ್ಪಥಸೇವನಮ್ ।
ಧರ್ಮೋ ನಿತ್ಯೋಪವಾಸಿತ್ವಂ ಬ್ರಹ್ಮಚರ್ಯಂ ಪರಂ ತಥಾ ॥೧೬॥

ಅಗ್ನಿಕಾರ್ಯವು ಶ್ರೇಷ್ಠವಾದ ಧರ್ಮ. ಯಾವಾಗಲೂ ಯಜ್ಞೋಪವೀತ ಹಾಕಿಕೊಂಡಿರುವುದು, ಶೂದ್ರಾನ್ನ ಪರಿತ್ಯಾಗ, ಸನ್ಮಾರ್ಗ ಸೇವನೆ, ನಿತ್ಯೋಪವಾಸ ಮತ್ತು ಶ್ರೇಷ್ಠವಾದ ಬ್ರಹ್ಮಚರ್ಯ - ಇವು ಅವನ ಧರ್ಮಗಳು.

ಅಮೃತಾಶ್ಯಂ ಪರೋ ಧರ್ಮೋ ಗೃಹಪುಷ್ಪಬಲಿಸ್ತಥಾ ।
ಗೃಹಸಮ್ಮಾರ್ಜನಂ ಧರ್ಮ ಆಲೇಪನವಿಧಿಸ್ತಥಾ ॥೧೭॥

ಅಮೃತಾನ್ನ ಭೋಜನ ಅವನಿಗೆ ಶ್ರೇಷ್ಠವಾದ ಧರ್ಮ. ಗೃಹದಲ್ಲಿ ಪುಷ್ಪಗಳಿಂದ ಪೂಜಿಸುವುದು, ಮನೆಯನ್ನು ಸಾರಿಸಿ ಕಾರಣೆ ತೆಗೆಯುವುದು ಅವನ ಧರ್ಮ.

ಅತಿಥಿವ್ರತತಾ ಧರ್ಮೋ ಧರ್ಮಸ್ತ್ರೇತಾಗ್ನಿಧಾರಣಮ್ ।
ಇಷ್ಟಿರ್ವಾ ಪಶುಬಂಧಾಶ್ಚ ವಿಧಿಪೂರ್ವಂ ಪರಂ ತಪಃ ॥೧೮॥

ಅತಿಥಿವ್ರತ, ತ್ರೇತಾಗ್ನಿಧಾರಣ, ಇಷ್ಟಿಗಳು ಅಥವಾ ಪಶುಬಂಧಗಳು, ವಿಧಿ ಪೂರ್ವಕವಾದ ತಪಸ್ಸು ಇವೂ ಅವನ ಧರ್ಮಗಳು.

ದಂಪತ್ಯೋಃ ಸಮಶೀಲತ್ವಂ ಧರ್ಮೋ ವೈ ಗೃಹಮೇಧಿನಾಮ್ ।
ಏವಂ ದ್ವಿಜನ್ಮನೋ ಧರ್ಮೋ ಗಾರ್ಹಸ್ಥ್ಯೇ ಧರ್ಮಧಾರಣಮ್ ॥೧೯॥

ದಂಪತಿಗಳ ಸಮಶೀಲತ್ವವು ಗೃಹಸ್ಥರ ಧರ್ಮ. ಹೀಗೆ ಗಾರ್ಹಸ್ಥ್ಯದಲ್ಲಿ ಧರ್ಮವನ್ನು ಆಚರಿಸುವುದು ಬ್ರಾಹ್ಮಣನ ಧರ್ಮ.

ಯಸ್ತು ಕ್ಷತ್ರಗತೋ ಧರ್ಮಸ್ತ್ವಯಾ ದೇವಿ ಪ್ರಚೋದಿತಃ ।
ತಮಹಂ ತೇ ಪ್ರವಕ್ಷ್ಯಾಮಿ ಶೃಣು ದೇವಿ ಸಮಾಹಿತಾ ॥೨೦॥

ಎಲೌ ದೇವಿಯೇ, ನೀನು ಕ್ಷತ್ರಿಯಧರ್ಮವನ್ನು ಕುರಿತು ಕೇಳಿದೆಯಷ್ಟೆ? ಅದನ್ನು ನಾನು ಹೇಳುವೆನು, ಸಮಾಧಾನದಿಂದ ಕೇಳು.

ಕ್ಷತ್ರಿಯಾಸ್ತು ತಥಾ ದೇವಿ ಪ್ರಜಾನಾಂ ಪಾಲನೇ ಸ್ಮೃತಾಃ ।
ಯದಿ ನ ಕ್ಷತ್ರಿಯೋ ಲೋಕೇ ಜಗತ್ ಸ್ಯಾದಧರೋತ್ತರಮ್ ॥೨೧॥

ಎಲೌ ದೇವಿಯೇ, ಕ್ಷತ್ರಿಯರು ಪ್ರಜಾಪಾಲನೆಯಲ್ಲಿ ವಿಹಿತರಾಗಿದ್ದಾರೆ. ಲೋಕದಲ್ಲಿ ಕ್ಷತ್ರಿಯರಿಲ್ಲದಿದ್ದರೆ ಎಲ್ಲವೂ ತಲೆಕೆಳಗಾಗುತ್ತಿದ್ದಿತು.

ರಕ್ಷಣಾತ್ ಕ್ಷತ್ರಿಯೈರೇವ ಜಗದ್ ಭವತಿ ಶಾಶ್ವತಮ್ ।
ತಸ್ಯಾಪ್ಯಧ್ಯಯನಂ ದಾನಂ ಯಜನಂ ಧರ್ಮತಃ ಸ್ಮೃತಮ್ ॥೨೨॥

ಕ್ಷತ್ರಿಯರು ರಕ್ಷಣೆ ಮಾಡುವ ಕಾರಣದಿಂದಲೇ ಜಗತ್ತು ಸರಿಯಾಗಿ ನಡೆದುಕೊಂಡು ಹೋಗುತ್ತಿದೆ. ಅವನಿಗೂ ಅಧ್ಯಯನ, ದಾನ ಮತ್ತು ಯಜನಗಳು ಧರ್ಮಗಳು.

ದೀನಾನಾಂ ರಕ್ಷಣಂ ಚೈವ ಪಾಪಾನಾಮನುಶಾಸನಮ್ ।
ಸತಾಂ ಸಂಪೋಷಣಂ ಚೈವ ಕರಷಡ್‌ಭಾಗವರ್ಜಿತಮ್ ॥೨೩॥

ದೀನರ ರಕ್ಷಣೆ, ಅಪರಾಧಿಗಳ ಶಿಕ್ಷೆ, ಸಜ್ಜನರ ಪೋಷಣೆ, ಆದಾಯದ ಆರನೆಯ ಒಂದು ಭಾಗದಿಂದ ಜೀವನ- ಇವು ಅವನ ಧರ್ಮಗಳು.

ಉತ್ಸಾಹಃ ಶಸ್ತ್ರಜೀವಿತ್ವಂ ತಸ್ಯ ಧರ್ಮಾಃ ಸನಾತನಾಃ ।
ಭೃತ್ಯಾನಾಂ ಭರಣಂ ಧರ್ಮಃ ಕೃತೇ ಕರ್ಮಣ್ಯಮೋಘತಾ ॥೨೪॥

ಉತ್ಸಾಹ, ಶಸ್ತ್ರದಿಂದ ಜೀವಿಸುವುದು, ಸೇವಕರನ್ನು ಪೋಷಿಸುವುದು, ವ್ಯರ್ಥವಾದ ಕರ್ಮವನ್ನು ಮಾಡದಿರುವುದು - ಇವು ಅವನ ಸನಾತನ ಧರ್ಮಗಳು.

ಸಮ್ಯಗ್ ರಣಯುತೋ ಧರ್ಮೋ ಧರ್ಮಃ ಪೌರಹಿತಕ್ರಿಯಾ ।
ವ್ಯವಹಾರಸ್ಥಿತಿರ್ನಿತ್ಯಂ ಗುಣಮೇತನ್ಮಹೀಪತೇಃ ॥೨೫॥

ಚೆನ್ನಾಗಿ ಧರ್ಮಯುದ್ಧವನ್ನು ಮಾಡುವುದು. ಪೌರರಿಗೆ ಹಿತವನ್ನು ಮಾಡುವುದು. ಒಳ್ಳೆಯ ವ್ಯವಹಾರಗಳನ್ನು ಮಾಡುವುದು- ಇವು ರಾಜನ ಧರ್ಮಗಳು.

ಆರ್ತಹಸ್ತಪ್ರದೋ ರಾಜಾ ಧರ್ಮಂ ಪ್ರಾಪ್ನೋತ್ಯನುತ್ತಮಮ್ ।
ಏವಂ ತೇ ವಿಹಿತಾಃ ಪೂರ್ವೈರ್ಧರ್ಮಾಃ ಕರ್ಮವಿಧಾನತಃ ॥೨೬॥

ಆರ್ತರಿಗೆ ಕೈ ನೀಡಿ ರಕ್ಷಿಸುವರಾಜನು ಶ್ರೇಷ್ಠವಾದ ಧರ್ಮವನ್ನು ತಿಳಿಯುತ್ತಾನೆ. ಹೀಗೆ ಪೂರ್ವಜರು ಕರ್ಮಕ್ಕೆ ಅನುಗುಣವಾಗಿ ಕ್ಷತ್ರಿಯ ಧರ್ಮವನ್ನು ವಿಧಾನ ಮಾಡಿದ್ದಾರೆ.

ತಥೈವ ದೇವಿ ವೈಶ್ಯಾಶ್ಚ ಲೋಕಯಾತ್ರಾಹಿತಾಃ ಸ್ಮೃತಾಃ ।
ಅನ್ಯೇ ತಾನುಪಜೀವಂತಿ ಪ್ರತ್ಯಕ್ಷಫಲದಾ ಹಿ ತೇ ॥೨೭॥

ಎಲೌ ದೇವಿಯೇ, ಹಾಗೆಯೇ ವೈಶ್ಯರು ಲೋಕಯಾತ್ರೆಗೆ ಹಿತರು ಎಂದು ಹೇಳಲ್ಪಡುತ್ತಾರೆ. ಉಳಿದವರು ಅವರನ್ನು ಉಪಜೀವಿಸುತ್ತಾರೆ. ವೈಶ್ಯರು ಪ್ರತ್ಯಕ್ಷವಾಗಿ ಫಲವನ್ನು ಕೊಡುವವರು.

ಯದಿ ನ ಸ್ಯುಸ್ತಥಾ ವೈಶ್ಯಾ ನ ಭವೇಯುಸ್ತಥಾ ಪರೇ ।
ತೇಷಾಮಧ್ಯಯನಂ ದಾನಂ ಯಜನಂ ಧರ್ಮ ಉಚ್ಯತೇ ॥೨೮॥

ವೈಶ್ಯರು ಇಲ್ಲದಿದ್ದರೆ ಉಳಿದವರೂ ಇರಲಾರರು. ಅವರಿಗೂ ಅಧ್ಯಯನ, ದಾನ ಮತ್ತು ಯಜನಗಳು ಧರ್ಮವೆಂದು ಹೇಳಲ್ಪಡುತ್ತವೆ.

ವೈಶ್ಯಸ್ಯ ಸತತಂ ಧರ್ಮಃ ಪಾಶುಪಾಲ್ಯಂ ಕೃಷಿಸ್ತಥಾ ।
ಅಗ್ನಿಹೋತ್ರಪರಿಸ್ಪಂದಾಸ್ತ್ರಯೋ ವರ್ಣಾ ದ್ವಿಜಾತಯಃ ॥೨೯॥

ವೈಶ್ಯನಿಗೆ ಪಶುಪಾಲನೆ ಮತ್ತು ಕೃಷಿಯು ಸತತವಾದ ಧರ್ಮ. ಅಗ್ನಿಹೋತ್ರದ ಕ್ರಿಯೆಯನ್ನು ಮಾಡುವ ಮೂರು ವರ್ಣಗಳೂ ದ್ವಿಜಾತಿಗಳು ಎನಿಸಿಕೊಳ್ಳುತ್ತವೆ.

ವಾಣಿಜ್ಯಂ ಸತ್ಪಥೇ ಸ್ಥಾನಮಾತಿಥೇಯಂ ಸದಾ ಭವೇತ್ ।
ವಿಪ್ರಾಣಾಂ ಸ್ವಾಗತಂ ನ್ಯಾಯೋ ವೈಶ್ಯಧರ್ಮಃ ಸನಾತನಃ ॥೩೦॥

ವೈಶ್ಯರಿಗೆ ವಾಣಿಜ್ಯ, ಸನ್ಮಾರ್ಗದಲ್ಲಿ ಸ್ಥಿತಿ ಮತ್ತು ಅತಿಥಿ ಪೂಜೆಯು ಯಾವಾಗಲೂ ಇರಬೇಕು. ವಿಪ್ರರಿಗೆ ಸ್ವಾಗತವನ್ನು ಮಾಡುವುದು ಸನಾತನವಾದ ನ್ಯಾಯವಾದ ವೈಶ್ಯಧರ್ಮ.

ತಿಲಗಂಧರಸಾಶ್ಚೈವ ನ ವಿಕ್ರೇಯಾಃ ಕಥಂಚನ ।
ವಣಿಕ್ಪಥಮುಪಾಸದ್ಭಿರ್ವೈಶ್ಯೈರ್ವೈಶ್ಯಪಥಿ ಸ್ಥಿತೈಃ ॥೩೧॥

ತಮ್ಮ ಧರ್ಮದಲ್ಲಿದ್ದು ವ್ಯಾಪಾರಮಾರ್ಗದಲ್ಲಿರುವ ವೈಶ್ಯರು ತಿಲ-ಗಂಧ ಮತ್ತು ರಸಪದಾರ್ಥಗಳನ್ನು ಮಾರಬಾರದು.

ಸರ್ವಾತಿಥ್ಯಂ ತ್ರಿವರ್ಗಸ್ಯ ಯಥಾಶಕ್ತಿ ದಿವಾನಿಶಮ್ ।
ಏವಂ ತೇ ವಿಹಿತಾ ದೇವಿ ಲೋಕಯಾತ್ರಾ ಸ್ವಯಂಭುವಾ ॥೩೨॥

ಸರ್ವಾತಿಥ್ಯ, ಹಗಲೂ-ರಾತ್ರಿಯೂ ಧರ್ಮಾರ್ಥಕಾಮಗಳ ಯಥಾಶಕ್ತಿ ಸೇವನೆ ಇವು ಬ್ರಹ್ಮದೇವರಿಂದ ಲೋಕಯಾತ್ರೆಗೆ ಕಾರಣವಾದ ವೈಶ್ಯಧರ್ಮಗಳೆಂದು ಹೇಳಲ್ಪಡುತ್ತವೆ.

ತಥೈವ ಶೂದ್ರಾ ವಿಹಿತಾಃ ಸರ್ವಧರ್ಮಪ್ರಸಾಧಕಾಃ ।
ಶೂದ್ರಾಶ್ಚ ಯದಿ ತೇ ನ ಸ್ಯುಃ ಕರ್ಮಕರ್ತಾ ನ ವಿದ್ಯತೇ ॥೩೩॥

ಹಾಗೆಯೇ ಶೂದ್ರರು ಎಲ್ಲ ಧರ್ಮಗಳನ್ನೂ ಸಾಧಿಸುವವರೆಂದು ಹೇಳಲ್ಪಡುತ್ತಾರೆ. ಶೂದ್ರರಿಲ್ಲದಿದ್ದರೆ ಕರ್ಮವನ್ನು ಮಾಡುವವರೇ ಇರುತ್ತಿರಲಿಲ್ಲ.

ತ್ರಯಃ ಪೂರ್ವೇ ಶೂದ್ರಮೂಲಸ್ತಸ್ಮಾತ್ ಕರ್ಮಕರಾಃ ಸ್ಮೃತಾಃ ।
ಬ್ರಾಹ್ಮಣಾದಿಷು ಶುಶ್ರೂಷಾ ದಾಸಧರ್ಮ ಇತಿ ಸ್ಮೃತಃ ॥೩೪॥

ಮೊದಲಿನ ಮೂರು ವರ್ಣಗಳು ಶೂದ್ರರನ್ನು ಅವಲಂಬಿಸಿವೆ. ಆದ್ದರಿಂದ ಶೂದ್ರರು ಕರ್ಮಕರರು ಎಂದು ಹೇಳಲ್ಪಡುತ್ತಾರೆ. ಬ್ರಾಹ್ಮಣಾದಿಗಳ ಸೇವೆಯು ಅವರಿಗೆ ವಿಹಿತವಾದ ದಾಸಧರ್ಮ.

ವಾರ್ತಾ ಚ ಕಾರುಕರ್ಮಾಣಿ ಶಿಲ್ಪಂ ನಾಟ್ಯಂ ತಥೈವ ಚ ।
ಅಹಿಂಸಕಃ ಶುಭಾಚಾರೋ ದೈವತದ್ವಿಜವಂದಕಃ ॥೩೫॥

ಶೂದ್ರೋ ಧರ್ಮಫಲೈರಿಷ್ಟೈಃ ಸ್ವಧರ್ಮೇಣೋಪಪದ್ಯತೇ ।
ಏವಮಾದಿ ತಥಾऽನ್ಯಚ್ಚ ಶೂದ್ರಕರ್ಮ ಇತಿ ಸ್ಮೃತಃ ॥೩೬॥

ವ್ಯಾಪಾರ, ಕಮ್ಮಾರ ಮೊದಲಾದವರ ಕೆಲಸ, ಕುಶಲಕರ್ಮ, ನಾಟ್ಯ, ಅಹಿಂಸೆ, ಶುಭಾಚಾರ, ದೈವ-ದ್ವಿಜರ ವಂದನೆ ಇವು ಮತ್ತು ಇನ್ನೂ ಕೆಲವು ಶೂದ್ರಕರ್ಮಗಳೆಂದು ಹೇಳಲ್ಪಡುತ್ತವೆ. ಶೂದ್ರನು ತನ್ನ ಧರ್ಮವನ್ನು ಆಚರಣೆ ಮಾಡಿದರೆ ತನಗೆ ಇಷ್ಟವಾದ ಧರ್ಮಫಲವನ್ನು ಪಡೆಯುತ್ತಾನೆ.

ತೇऽಪ್ಯೇವಂ ವಿಹಿತಾ ಲೋಕೇ ಕರ್ಮಯೋಗಾಃ ಶುಭಾನನೇ ॥೩೭॥

ಎಲೌ ಶುಭಾನನೆಯೇ, ಶೂದ್ರರೂ ಸಹ ಲೋಕದಲ್ಲಿ ಕರ್ಮಯೋನಿಗಳಾಗಿ ಹೇಳಲ್ಪಟ್ಟಿದ್ದಾರೆ.

ಏವಂ ಚತುರ್ಣಾಂ ವರ್ಣಾನಾಂ ಪುಣ್ಯಲೋಕಾಃ ಪರತ್ರ ಚ ।
ವಿಹಿತಾಶ್ಚ ತಥಾ ದೃಷ್ಟಾ ಯಥಾವದ್ಧರ್ಮಚಾರಿಣಮ್ ॥೩೮॥

ಹೀಗೆ ತಮ್ಮ ಧರ್ಮವನ್ನು ಆಚರಿಸುವ ನಾಲ್ಕು ವರ್ಣದವರಿಗೂ ಪರಲೋಕದಲ್ಲಿ ಪುಣ್ಯಸ್ಥಾನಗಳು ವಿಹಿತವಾಗಿವೆ ಎಂಬುದನ್ನು ಚೆನ್ನಾಗಿ ಧರ್ಮಾಚರಣೆಯನ್ನು ಮಾಡುವವರು ತಿಳಿದಿದ್ದಾರೆ.

ಏಷ ವರ್ಣಾಶ್ರಯೋ ಧರ್ಮಃ ಕರ್ಮ ಚೈವ ತದರ್ಪಣಮ್ ।
ಕಥಿತಂ ಶ್ರೋತುಕಾಮಾಯಾಃ ಕಿಂ ಭೂಯಃ ಶ್ರೋತುಮಿಚ್ಛಸಿ ॥೩೯॥

ಕೇಳಲು ಬಯಸಿದ ನಿನಗೆ ಈ ವರ್ಣಧರ್ಮವನ್ನು ಮತ್ತು ಅದಕ್ಕೆ ಸಂಬಂಧಿಸಿದ ಕರ್ಮವನ್ನು ಹೇಳಿದ್ದೇನೆ. ಇನ್ನೂ ಏನನ್ನು ಕೇಳಲು ಬಯಸುತ್ತೀಯೆ?

ಉಮಾ

ಭಗವನ್ ದೇವದೇವೇಶ ನಮಸ್ತೇ ವೃಷಭಧ್ವಜ ।
ಶ್ರೋತುಮಿಚ್ಛಾಮ್ಯಹಂ ದೇವ ಧರ್ಮಮಾಶ್ರಮಿಣಾಂ ವಿಭೋ ॥೪೦॥

ಉಮಾ– ಭಗವಂತನೇ, ದೇವದೇವೇಶನೇ, ವೃಷಭಧ್ವಜನೇ ನಿನಗೆ ನಮಸ್ಕಾರ. ವಿಭುವೇ, ದೇವನೇ, ನಾನು ಆಶ್ರಮಿಗಳ ಧರ್ಮವನ್ನು ಕೇಳಲು ಬಯಸುತ್ತೇನೆ.

ಮಹೇಶ್ವರಃ

ಅಥಾऽऽಶ್ರಮಗತಂ ಧರ್ಮಂ ಶೃಣು ದೇವಿ ಸಮಾಹಿತಾ ।
ಆಶ್ರಮಾಣಾಂ ತು ಯೋ ಧರ್ಮಃ ಕ್ರಿಯತೇ ಬ್ರಹ್ಮವಾದಿಭಿಃ ॥೪೧॥

ಮಹೇಶ್ವರ– ದೇವಿಯೇ, ಇನ್ನು ಬ್ರಹ್ಮವಾದಿಗಳು, ಆಶ್ರಮಿಗಳಿಗೆ ಎಂತಹ ಧರ್ಮವನ್ನು ವಿಧಿಸಿದ್ದಾರೆಯೋ ಅಂತಹ ಆಶ್ರಮಧರ್ಮಗಳನ್ನು ಸಮಾಧಾನದಿಂದ ಕೇಳು.

ಗೃಹಸ್ಥಃ ಪ್ರವರಸ್ತೇಷಾಂ ಗಾರ್ಹಸ್ಥ್ಯವ್ರತಮಾಶ್ರಿತಃ ।
ಪಂಚಯಜ್ಞಕ್ರಿಯಾ ಶೌಚಂ ದಾರತುಷ್ಟಿರತಂದ್ರಿತಾ ॥೪೨॥

ಋತುಕಾಲಾಭಿಗಮನಂ ದಾನಯಜ್ಞತಪಾಂಸಿ ಚ ।
ಅವಿಪ್ರವಾಸಸ್ತಸ್ಯೇಷ್ಟಂ ಸ್ವಾಧ್ಯಾಯಶ್ಚಾಗ್ನಿಪೂಜನಮ್ ॥೪೩॥

ಆಶ್ರಮಿಗಳಲ್ಲಿ ಗಾರ್ಹಸ್ಥ್ಯವ್ರತವನ್ನು ಆಶ್ರಯಿಸಿದ ಗೃಹಸ್ಥನು ಶ್ರೇಷ್ಠನಾದವನು. ಪಂಚಯಜ್ಞಕ್ರಿಯೆಗಳು, ಶೌಚ, ತನ್ನ ಪತ್ನಿಯಲ್ಲಿ ತೃಪ್ತಿ, ಆಲಸ್ಯರಾಹಿತ್ಯ, ಋತುಕಾಲ ಗಮನ, ದಾನ-ಯಜ್ಞ-ತಪಸ್ಸುಗಳು ಮತ್ತು ಪ್ರವಾಸಕ್ಕೆ ಹೋಗದಿರುವುದು ಅವನ ಧರ್ಮಗಳು. ಸ್ವಾಧ್ಯಾಯ ಮತ್ತು ಅಗ್ನಿಪೂಜೆಗಳು ಅವನಿಗೆ ಇಷ್ಟವಾದವುಗಳು.

ಅತಿಥೀನಾಮಾಭಿಮುಖ್ಯಂ ಶಕ್ತ್ಯಾ ಚೇಷ್ಟನಿಮಂತ್ರಣಮ್ ।
ಅನುಗ್ರಹಶ್ಚ ಸರ್ವೇಷಾಂ ಮನೋವಾಕ್ಕಾಯಕರ್ಮಭಿಃ ॥೪೪॥

ಏವಮಾದಿ ಶುಭಂ ಚಾನ್ಯತ್ ಕುರ್ಯಾತ್ ತದ್ವ್ರತವಾನ್ ಗೃಹೀ ।
ಏವಂ ಸಂಚರತಸ್ತಸ್ಯ ಪುಣ್ಯಲೋಕಾ ನ ಸಂಶಯಃ ॥೪೫॥

ಅತಿಥಿಗಳಿಗೆ ಪೂಜೆ, ತನಗೆ ಶಕ್ತಿ ಇದ್ದಷ್ಟು ಇಷ್ಟರಿಗೆ ಭೋಜನಕ್ಕಾಗಿ ನಿಮಂತ್ರಣ, ಮನೋ-ವಾಕ್-ಕಾಯಕರ್ಮಗಳಿಂದ ಎಲ್ಲರಿಗೂ ಕ್ಷೇಮ ಚಿಂತನೆ - ಇವೇ ಮೊದಲಾದವುಗಳನ್ನೂ, ಇನ್ನೂ ಕೆಲವನ್ನೂ ಒಳ್ಳೆಯ ನಡತೆಯುಳ್ಳ ಗೃಹಸ್ಥಾಶ್ರಮಿಗಳು ಮಾಡಬೇಕು. ಹೀಗೆ ಅನುಷ್ಠಾನ ಮಾಡುವ ಅವನಿಗೆ ಪುಣ್ಯಲೋಕವು ದೊರೆಯುವುದರಲ್ಲಿ ಸಂಶಯವಿಲ್ಲ.

ತಥೈವ ವಾನಪ್ರಸ್ಥಸ್ಯ ಧರ್ಮಾಃ ಪ್ರೋಕ್ತಾಃ ಸನಾತನಾಃ ॥೪೬॥

ಗೃಹವಾಸಂ ಸಮುತ್ಸೃಜ್ಯ ನಿಶ್ಚಿತ್ಯೈಕಮನಾಃ ಶುಭೈಃ ।
ವನ್ಯೈರೇವ ಸದಾಹಾರೈಃ ವರ್ತಯೇದಿತಿ ಚ ಸ್ಥಿತಿಃ ॥೪೭॥

ಹಾಗೆ ವಾನಪ್ರಸ್ಥನಿಗೂ ಸನಾತನವಾದ ಧರ್ಮವು ಹೇಳಲ್ಪಟ್ಟಿದೆ. ಗೃಹವಾಸವನ್ನು ಪರಿತ್ಯಜಿಸಿ ಧೈರ್ಯದಿಂದ ವನದಲ್ಲಿ ದೊರಕುವ ಶುಭವಾದ ಆಹಾರದಿಂದಲೇ ಜೀವನವನ್ನು ನಡೆಸಬೇಕೆಂಬುದು ಅವನ ಸ್ಥಿತಿ.

ಭೂಮಿಶಯ್ಯಾ ಜಟಾಶ್ಮಶ್ರುಚರ್ಮವಲ್ಕಲಧಾರಣಮ್ ।
ದೇವತಾತಿಥಿಸತ್ಕಾರೋ ಮಹಾಕೃಚ್ಛ್ರಾಭಿಪೂಜನಮ್ ॥೪೮॥

ಅಗ್ನಿಹೋತ್ರಂ ತ್ರಿಷವಣಂ ನಿತ್ಯಂ ತಸ್ಯ ವಿಧೀಯತೇ ।
ಬ್ರಹ್ಮಚರ್ಯಂ ಕ್ಷಮಾ ಶೌಚಂ ತಸ್ಯ ಧರ್ಮಾಃ ಸನಾತನಾಃ ।
ಏವಂ ಸ ವಿಗತೇ ಪ್ರಾಣೇ ದೇವಲೋಕೇ ಮಹೀಯತೇ ॥೪೯॥

ಭೂಮಿ ಶಯನ, ಜಟಾಶ್ಮಶ್ರುಧಾರಣ, ಚರ್ಮ ವಲ್ಕಲರೂಪವಾದ ವಸ್ತ್ರಧಾರಣ, ದೇವತೆಗಳ ಮತ್ತು ಅತಿಥಿಗಳ ಸತ್ಕಾರ, ಮಹಾಕಷ್ಟದಲ್ಲಿಯೂ ಅವರ ಪೂಜೆ, ಮೂರು ಸಮಯಗಳಲ್ಲಿಯೂ ಅಗ್ನಿಹೋತ್ರವು ಅವನಿಗೆ ಹೇಳಲ್ಪಡುತ್ತದೆ. ಬ್ರಹ್ಮಚರ್ಯ, ಕ್ಷಮೆ, ಶೌಚ ಇವುಗಳು ಅವನಿಗೆ ವಿಹಿತವಾದ ಸನಾತನ ಧರ್ಮಗಳು. ಹೀಗೆ ವಾನಪ್ರಸ್ಥವನ್ನು ಆಚರಿಸುವವನು ಪ್ರಾಣತ್ಯಾಗವನ್ನು ಮಾಡಿದ ಮೇಲೆ ದೇವಲೋಕದಲ್ಲಿ ಪೂಜಿಸಲ್ಪಡುತ್ತಾನೆ.

ಯತಿಧರ್ಮಾಸ್ತಥಾ ದೇವಿ ಸಂಗಾಂಸ್ತ್ಯಕ್ತ್ವಾ ಯತಸ್ತತಃ ।
ಅಕಿಂಚನ್ಯಮನಾರಂಭಃ ಸರ್ವತಃ ಶೌಚಮಾರ್ಜವಮ್ ॥೫೦॥

ಎಲೌ ದೇವಿಯೇ, ಯತಿಧರ್ಮವೆಂದರೆ ಸರ್ವಸಂಗವನ್ನು ತ್ಯಜಿಸಬೇಕು. ಧನವನ್ನು ಹೊಂದಿರಬಾರದು. ಯಾವ ಕಾರ್ಯವನ್ನೂ ಆರಂಭಿಸಬಾರದು. ಎಲ್ಲಾ ರೀತಿಯ ಶೌಚವನ್ನು ಹೊಂದಿರಬೇಕು ಮತ್ತು ಋಜುತನವನ್ನು ಹೊಂದಿರಬೇಕು.

ಸರ್ವತ್ರ ಭೈಕ್ಷಚರ್ಯಾ ಚ ಸರ್ವತ್ರೈವ ವಿವಾಸನಮ್ ।
ಸದಾ ಧ್ಯಾನಪರತ್ವಂ ಚ ದೋಷಶುದ್ಧಿಃ ಕ್ಷಮಾ ದಯಾ ।
ತತ್ತ್ವಾನುಗತಬುದ್ಧಿತ್ವಂ ತಸ್ಯ ಧರ್ಮವಿಧಿರ್ಭವೇತ್ ॥೫೧॥

ಯಾವಾಗಲೂ ಭೈಕ್ಷಚರ್ಯೆಯನ್ನು ಮಾಡಬೇಕು. ಒಂದೇ ಕಡೆ ವಾಸಿಸಬಾರದು. ಅವನು ಧ್ಯಾನಪರನಾಗಿರಬೇಕು. ದೋಷಶುದ್ಧಿ, ಕ್ಷಮೆ, ದಯೆ, ತತ್ತ್ವಚಿಂತನೆ ಇವುಗಳು ಅವನ ಧರ್ಮವಿಧಿಗಳು.

ಬ್ರಹ್ಮಚಾರೀ ಚ ಯೋ ದೇವಿ ಜನ್ಮಪ್ರಭೃತಿ ಭಿಕ್ಷಿತಃ ।
ಬ್ರಹ್ಮಚರ್ಯಪರೋ ಭೂತ್ವಾ ಸಾಧಯೇದ್ ಗುರುಮಾತ್ಮನಃ ।
ಸರ್ವಕಾಲೇಷು ಸರ್ವತ್ರ ಗುರುಪೂಜಾಂ ಸಮಾಚರೇತ್ ॥೫೨॥

ಎಲೌ ದೇವಿಯೇ, ಬ್ರಹ್ಮಚಾರಿಯಾದವನು ಬ್ರಹ್ಮಚಾರಿಯಾದಾಗಿನಿಂದ ಭಿಕ್ಷಾನ್ನದಿಂದ ಜೀವಿಸಬೇಕು. ಬ್ರಹ್ಮಚರ್ಯವ್ರತವನ್ನು ಧರಿಸಿ, ಗುರುವನ್ನು ಸಂಪಾದಿಸಿ ಸರ್ವಕಾಲಗಳಲ್ಲಿ, ಸರ್ವದೇಶಗಳಲ್ಲಿ ಗುರುಪೂಜೆಯನ್ನು ಮಾಡಬೇಕು.

ಭೈಕ್ಷಚರ್ಯಾಗ್ನಿಕಾರ್ಯಂ ಚ ಸದಾ ಜಲನಿಷೇವಣಮ್ ।
ಸ್ವಾಧ್ಯಾಯಃ ಸತತಂ ತಸ್ಯ ಏಷ ಧರ್ಮಃ ಸನಾತನಃ ॥೫೩॥

ಭೈಕ್ಷಚರ್ಯ, ಅಗ್ನಿಕಾರ್ಯ, ಸದಾ ಸ್ನಾನ, ಸತತವಾದ ಸ್ವಾಧ್ಯಾಯ ಇವು ಅವನಿಗೆ ವಿಹಿತವಾದ ಸನಾತನ ಧರ್ಮಗಳು.

ತಸ್ಯ ಚೇಷ್ಟಾ ತು ಗುರ್ವರ್ಥಮಾಪ್ರಾಣಾಂತಮಿತಿ ಸ್ಥಿತಿಃ ।
ಗುರೋರಭಾವೇ ತತ್ಪುತ್ರೇ ಗುರುವದ್ ವೃತ್ತಿಮಾಚರೇತ್ ॥೫೪॥

ಅವನು ಪ್ರಾಣವಿರುವವರೆಗೂ ಗುರುಗಳ ಹಿತಕ್ಕಾಗಿ ಕಾರ್ಯವನ್ನು ಮಾಡಬೇಕೆಂಬುದು ಸ್ಥಿತಿ. ಗುರುವಿಲ್ಲದಿದ್ದರೆ ಗುರುಪುತ್ರನಲ್ಲಿ ಗುರುವಿನಂತೆಯೇ ನಡೆದುಕೊಳ್ಳಬೇಕು.

ಏವಂ ಸೋಽಪ್ಯಮಲಾನ್ ಲೋಕಾನ್ ಬ್ರಾಹ್ಮಣಃ ಪ್ರತಿಪದ್ಯತೇ ।
ಏಷ ತೇ ಕಥಿತೋ ದೇವಿ ಧರ್ಮಶ್ಚಾಶ್ರಮವಾಸಿನಾಮ್ ॥೫೫॥

ಹೀಗೆ ಮಾಡಿದರೆ ಬ್ರಹ್ಮಚಾರಿಯಾದ ಬ್ರಾಹ್ಮಣನು ಪರಿಶುದ್ಧವಾದ ಲೋಕಗಳನ್ನು ಹೊಂದುತ್ತಾನೆ. ಎಲೌ ದೇವಿಯೇ, ಆಶ್ರಮವಾಸಿಗಳ ಧರ್ಮವನ್ನು ನಿನಗೆ ಹೇಳಿದ್ದೇನೆ.

ಚಾತುರ್ವರ್ಣ್ಯಾಶ್ರಮೇ ಯುಕ್ತೋ ಲೋಕ ಇತ್ಯೇವ ವಿದ್ಯತೇ ।
ಕಥಿತಂ ತೇ ಸಮಾಸೇನ ಕಿಂ ಭೂಯಃ ಶ್ರೋತುಮಿಚ್ಛಸಿ ॥೫೬॥

ನಾಲ್ಕು ವರ್ಣಗಳು ಮತ್ತು ನಾಲ್ಕು ಆಶ್ರಮಗಳು ಎಂದು ಲೋಕವು ಹೀಗೆಯೇ ತಿಳಿಯುತ್ತದೆ. ನಿನಗೆ ವರ್ಣಾಶ್ರಮಧರ್ಮವನ್ನು ಸಂಕ್ಷೇಪವಾಗಿ ಹೇಳಿದ್ದೇನೆ. ಇನ್ನೂ ಏನನ್ನು ಕೇಳಲು ಬಯಸುತ್ತೀಯೆ?

॥ ಇತಿ ಶ್ರೀಮನ್ಮಹಾಭಾರತೇ ಅನುಶಾಸನಪರ್ವಣಿ ದಾನಧರ್ಮಪರ್ವಣಿ ಪಂಚನವತ್ಯುತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ತೊಂಬತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ತೊಂಬತ್ತಾರನೆಯ ಅಧ್ಯಾಯ

ಉಮಾ-ಮಹೇಶ್ವರರ ಸಂವಾದ. ಋಷಿಧರ್ಮಕಥನ.

ಉಮಾ

ಭಗವನ್ ದೇವದೇವೇಶ ತ್ರಿಪುರಾಂತಕ ಶಂಕರ ।
ಅಯಂ ತ್ವೃಷಿಗಣೋ ದೇವ ತಪಸ್ತಪ ಇತಿ ಪ್ರಭೋ ।
ತಪಸಾ ಕರ್ಶಿತಾ ನಿತ್ಯಂ ತಪೋऽರ್ಜನಪರಾಯಣಾಃ ॥೧॥

ಉಮಾ– ಭಗವಂತನೇ, ದೇವದೇವೇಶನೇ, ತ್ರಿಪುರಾಂತಕನೇ, ಶಂಕರನೇ, ಪ್ರಭುವೇ, ಈ ಋಷಿ ಸಮೂಹಗಳು ತಪಸ್ಸು, ತಪಸ್ಸು ಎಂದು ಹೇಳುತ್ತಾ ತಪಸ್ಸನ್ನು ಸಂಪಾದಿಸುವುದರಲ್ಲಿ ನಿರತವಾಗಿ ನಿತ್ಯವೂ ತಪಸ್ಸಿನಿಂದ ದೇಹದಂಡನೆಯನ್ನು ಮಾಡುತ್ತವೆ.

ಅಸ್ಯ ಕಿಂಲಕ್ಷಣೋ ಧರ್ಮಃ ಕೀದೃಶಶ್ಚಾಗಮಸ್ತಥಾ ।
ಏತದಿಚ್ಛಾಮ್ಯಹಂ ಶ್ರೋತುಂ ತನ್ಮೇ ವದ ವರಪ್ರದ ॥೨॥

ಇವರ ಧರ್ಮವು ಎಂತಹದು? ಈ ವಿಷಯದಲ್ಲಿ ಏನು ಶಾಸ್ತ್ರವಿದೆ? ಇದನ್ನು ತಿಳಿಯಲು ಬಯಸುತ್ತೇನೆ. ವರಪ್ರದನೇ ನನಗೆ ಅದನ್ನು ಹೇಳು.

ನಾರದಃ

ಏವಂ ಬ್ರುವಂತ್ಯಾಂ ರುದ್ರಾಣ್ಯಾಮೃಷಯಃ ಸಾಧುಸಾಧ್ವಿತಿ ।
ಅಬ್ರುವನ್ ಹೃಷ್ಟಮನಸಃ ಸರ್ವೇ ತದ್ಗತಮಾನಸಾಃ ॥೩॥

ಶೃಣ್ವಂತೀಮೃಷಿಧರ್ಮಾಂಸ್ತು ಋಷಯಶ್ಚಾಭ್ಯಪೂಜಯನ್ ॥೪॥

ನಾರದ– ಪಾರ್ವತಿಯು ಹೀಗೆ ಹೇಳುತ್ತಿರಲು ಋಷಿಗಳೆಲ್ಲರೂ ಸಂತೋಷದಿಂದ ಕೂಡಿದವರಾಗಿ ರುದ್ರನಲ್ಲಿಯೇ ಮನಸ್ಸಿಟ್ಟು 'ಸಾಧು-ಸಾಧು' ಎಂದು ಹೇಳಿದರು. ಋಷಿಧರ್ಮವನ್ನು ಕುರಿತು ಪ್ರಶ್ನೆಯನ್ನು ಮಾಡಿದ ಪಾರ್ವತಿಯನ್ನು ಎಲ್ಲ ಋಷಿಗಳೂ ಸತ್ಕರಿಸಿದರು.

ತ್ವತ್ಪ್ರಸಾದಾದ್ ವಯಂ ದೇವಿ ಶ್ರೋಷ್ಯಾಮಃ ಪರಮಂ ಹಿತಮ್ ।
ಧನ್ಯಾಃ ಖಲು ವಯಂ ಸರ್ವೇ ಪಾದಮೂಲಂ ತವಾಶ್ರಿತಾಃ ।
ಇತಿ ಸರ್ವೇ ತದಾ ದೇವೀಂ ವಾಚಾ ಸಮಭಿಪೂಜಯನ್ ॥೫॥

ಎಲೌ ದೇವಿಯೇ, ನಿನ್ನ ಅನುಗ್ರಹದಿಂದ ನಾವು ನಮಗೆ ಪರಮ ಹಿತವಾದುದನ್ನು ಕೇಳುವೆವು. ನಿನ್ನ ಪಾದಮೂಲವನ್ನು ಆಶ್ರಯಿಸಿದ ನಾವೆಲ್ಲರೂ ಧನ್ಯರು ಎಂದು ದೇವಿಯನ್ನು ಮಾತಿನಿಂದಲೇ ಪೂಜಿಸಿದರು.

ಮಹೇಶ್ವರಃ

ನ್ಯಾಯತಸ್ತ್ವಂ ಮಹಾಭಾಗೇ ಶ್ರೋತುಕಾಮಾ ಮನಸ್ವಿನಿ ।
ಹಂತ ತೇ ಕಥಯಿಷ್ಯಾಮಿ ಮುನಿಧರ್ಮಂ ಶುಚಿಸ್ಮಿತೇ ॥೬॥

ಮಹೇಶ್ವರ– ಎಲೌ ಮಹಾನುಭಾವಳೇ, ಧೈರ್ಯಶಾಲಿನಿಯೇ, ನೀನು ಕೇಳಲು ಬಯಸಿರುವುದು ನ್ಯಾಯವಾಗಿದೆ. ಶುಚಿಸ್ಮಿತೆಯೇ, ನಿನಗೆ ಮುನಿಧರ್ಮವನ್ನು ಹೇಳುವೆನು.

ವಾನಪ್ರಸ್ಥಂ ಸಮಾಶ್ರಿತ್ಯ ಕ್ರಿಯತೇ ಬಹುಧಾ ನರೈಃ ।
ಬಹುಶಾಖೋ ಬಹುವಿಧೋ ಋಷಿಧರ್ಮಃ ಸನಾತನಃ ॥೭॥

ವಾನಪ್ರಸ್ಥಧರ್ಮವನ್ನು ಆಶ್ರಯಿಸಿ ಋಷಿಧರ್ಮವು ಮನುಷ್ಯರಿಂದ ಬಹುವಿಧವಾಗಿ ಮಾಡಲ್ಪಡುತ್ತದೆ. ಸನಾತನವಾದ ಋಷಿಧರ್ಮವು ಅನೇಕ ವಿಧಗಳನ್ನು ಮತ್ತು ಅನೇಕ ಪ್ರಕಾರಗಳನ್ನು ಹೊಂದಿದೆ.

ಪ್ರಾಯಶಃ ಸರ್ವಭೋಗಾರ್ಥಮೃಷಿಭಿಃ ಕ್ರಿಯತೇ ತಪಃ ।
ತಥಾ ಸಂಚರತಾಂ ತೇಷಾಂ ದೇವಿ ಧರ್ಮವಿಧಿಂ ಶೃಣು ॥೮॥

ದೇವಿಯೇ, ಪ್ರಾಯಶಃ ಸರ್ವಭೋಗಗಳನ್ನು ಉದ್ದೇಶಿಸಿ ಋಷಿಗಳು ತಪಸ್ಸನ್ನು ಮಾಡುತ್ತಾರೆ. ಹಾಗೆ ತಪಸ್ಸನ್ನು ಮಾಡುವ ಅವರ ಧರ್ಮವಿಧಿಯನ್ನು ಕೇಳು.

ಭೂತ್ವಾ ಪೂರ್ವಂ ಗೃಹಸ್ಥಸ್ತು ಪುತ್ರಾನೃಣ್ಯಮವಾಪ್ಯ ಚ ।
ಕಲತ್ರಕಾರ್ಯಂ ಸಂಸ್ಥಾಪ್ಯ ಕಾರಣಾತ್ ಸಂತ್ಯಜೇದ್ ಗೃಹಮ್ ॥೯॥

ಮೊದಲು ಗೃಹಸ್ಥನಾಗಿದ್ದು ಪುತ್ರ ಋಣವನ್ನು ತೀರಿಸಿ ಪತ್ನಿಯ ಜೀವನದ ವ್ಯವಸ್ಥೆಯನ್ನು ಮಾಡಿ ಯೋಗ್ಯವಾದ ಕಾರಣದಿಂದ ಗೃಹವನ್ನು ತ್ಯಜಿಸಬೇಕು.

ಅವಸ್ಥಾಪ್ಯ ಮನೋ ಧೃತ್ಯಾ ವ್ಯವಸಾಯಪುರಃಸರಃ ।
ನಿರ್ದ್ವಂದ್ವೋ ವಾ ಸದಾರೋ ವಾ ವನವಾಸಾಯ ಸಂವ್ರಜೇತ್ ॥೧೦॥

ಮನಸ್ಸಿನಲ್ಲಿ ಧೈರ್ಯವನ್ನೂ ಮತ್ತು ನಿಶ್ಚಯವನ್ನೂ ತಂದುಕೊಂಡು ಒಬ್ಬನೇ ಆಗಲಿ ಅಥವಾ ಪತ್ನಿಯ ಜೊತೆಯಲ್ಲಾಗಲೀ ವನವಾಸಕ್ಕೆ ಹೋಗಬೇಕು.

ದೇಶಾಃ ಪರಮಪುಣ್ಯಾ ಯೇ ನದೀವನಸಮನ್ವಿತಾಃ ।
ಅಬಾಧಮುಕ್ತಾಃ ಪ್ರಾಯೇಣ ತೀರ್ಥಾಯತನಸಂಯುತಾಃ ॥೧೧॥

ತತ್ರ ಗತ್ವಾ ವಿಧಿಂ ಜ್ಞಾತ್ವಾ ದೀಕ್ಷಾಂ ಕುರ್ಯಾದ್ ಯಥಾಗಮಮ್ ।
ದೀಕ್ಷಿತೈಕಮನಾ ಭೂತ್ವಾ ಪರಿಚರ್ಯಾಂ ಸಮಾಚರೇತ್ ॥೧೨॥

ಪರಮಪವಿತ್ರವಾದ ನದಿ ಮತ್ತು ವನಗಳಿಂದ ಕೂಡಿದಂತಹ, ಬಾಧೆರಹಿತವಾದ, ತೀರ್ಥ ಗುಣಗಳಿಂದ ಸಂಯುತವಾದ ದೇಶಗಳಿಗೆ ಹೋಗಿ, ಶಾಸ್ತ್ರಕ್ಕೆ ಅನುಸಾರವಾಗಿ ಕರ್ಮವನ್ನು ತಿಳಿದು ಅಲ್ಲಿ ದೀಕ್ಷೆಯನ್ನು ವಹಿಸಬೇಕು. ದೀಕ್ಷಿತನಾದ ಮೇಲೆ ಒಂದೇ ಮನಸ್ಸಿನಿಂದ ಪರಿಚರ್ಯೆಯನ್ನು ಮಾಡಬೇಕು.

ಕಾಲ್ಯೋತ್ಥಾನಂ ಚ ಶೌಚಂ ಚ ಸರ್ವದೇವಪ್ರಣಾಮನಮ್ ।
ಶಕೃದಾಲೇಪನಂ ಕಾಯೇ ತ್ಯಕ್ತದೋಷೋऽಪ್ರಮಾದಿತಾ ॥೧೩॥

ಸಾಯಂಪ್ರಾತಶ್ಚಾಭಿಷೇಕಮಗ್ನಿಹೋತ್ರಂ ಯಥಾವಿಧಿ ।
ಕಾಯಶೌಚಂ ಚ ಕಾರ್ಯಂ ಚ ಜಟಾವಲ್ಕಲಧಾರಣಮ್ ॥೧೪॥

ಪ್ರಾತಃಕಾಲದಲ್ಲಿ ಬೇಗ ಏಳುವುದು, ಶೌಚ, ಸರ್ವದೇವತೆಗಳಿಗೆ ನಮಸ್ಕಾರ, ಗೋಮಯ-ಮೃತ್ತಿಕಾ ಲೇಪನ, ದೋಷ ಪರಿತ್ಯಾಗ, ಪ್ರಮಾದ ಪರಿತ್ಯಾಗ, ಸಾಯಂಕಾಲದಲ್ಲಿ ಮತ್ತು ಪ್ರಾತಃಕಾಲದಲ್ಲಿ ಸ್ನಾನ, ಶಾಸ್ತ್ರೋಕ್ತವಾದ ರೀತಿಯಲ್ಲಿ ಅಗ್ನಿಹೋತ್ರ, ದೇಹಶುದ್ಧಿ ಮತ್ತು ಜಟಾವಲ್ಕಲಧಾರಣೆಯನ್ನು ಮಾಡಬೇಕು.

ಸತತಂ ವನಚರ್ಯಾ ಚ ಸಮಿತ್ಕುಸುಮಕಾರಣಾತ್ ।
ನೀವಾರಗ್ರಹಣಂ ಕಾಲೇ ಶಾಕಮೂಲೋಪಚಾಯನಮ್ ।
ಸದಾಯತನಶೌಚಂ ಚ ತಸ್ಯ ಧರ್ಮಾಯ ಚೇಷ್ಯತೇ ॥೧೫॥

ಸತತವಾದ ವ್ರತಾನುಷ್ಠಾನ, ಸಮಿತ್ತು ಮತ್ತು ಪುಷ್ಪಗಳನ್ನು ತರಲು ವನದಲ್ಲಿ ಸಂಚಾರ, ಕಾಲದಲ್ಲಿ ನೀವಾರಗ್ರಹಣ ಮತ್ತು ಶಾಕ ಮತ್ತು ಮೂಲಗಳ ಸಂಗ್ರಹ, ವಾಸಸ್ಥಾನದ ಶುದ್ಧಿ- ಇವು ಅವನ ಧರ್ಮವೆಂದು ಹೇಳಲ್ಪಡುತ್ತವೆ.

ಅತಿಥೀನಾಮಾಭಿಮುಖ್ಯಂ ತತ್ಪರತ್ವಂ ಚ ಸರ್ವಶಃ ।
ಪಾದ್ಯಾಸನಾಭ್ಯಾಂ ಸಂಪೂಜ್ಯ ತಥಾऽऽಹಾರನಿಮಂತ್ರಣಮ್ ॥೧೬॥

ಅಗ್ರ್ಯಾಮ್ಯಪಚನಂ ಕಾಲೇ ಪಿತೃದೇವಾರ್ಚನಂ ತಥಾ ।
ಪಶ್ಚಾದತಿಥಿಸತ್ಕಾರಸ್ತಸ್ಯ ಧರ್ಮಾಃ ಸನಾತನಾಃ ॥೧೭॥

ಅತಿಥಿಗಳನ್ನು ಸ್ವಾಗತಿಸುವುದು, ಅವರ ಸೇವೆಯಲ್ಲಿ ಆಸಕ್ತಿ, ಪಾದ್ಯಾಸನಗಳಿಂದ ಅವರ ಪೂಜೆ, ಅವರಿಗೆ ಆಹಾರದಾನ, ಗ್ರಾಮ್ಯಧಾನ್ಯಗಳನ್ನು ಬಿಟ್ಟುವನ ಧಾನ್ಯಗಳಿಂದ ಪಾಕ, ಆಯಾ ಕಾಲದಲ್ಲಿ ಪಿತೃದೇವಾರ್ಚನೆ, ಅನಂತರ ಅತಿಥಿಯ ಅರ್ಚನೆ ಇವು ಅವನ ಸನಾತನ ಧರ್ಮಗಳು.

ಶಿಷ್ಟೈರ್ಧರ್ಮಾಸನೇ ಚೈವ ಧರ್ಮಾರ್ಥಸಹಿತಾಃ ಕಥಾಃ ॥೧೮॥

ಪ್ರತಿಶ್ರಯವಿಭಾಗಶ್ಚ ಭೂಮಿಶಯ್ಯಾ ಶಿಲಾಸು ವಾ ।
ವ್ರತೋಪವಾಸಯೋಗಶ್ಚ ಕ್ಷಮಾ ಚೇಂದ್ರಿಯನಿಗ್ರಹಃ ॥೧೯॥

ದಿವಾರಾತ್ರಂ ಯಥಾಯೋಗಂ ಶೌಚಂ ಧರ್ಮಸ್ಯ ಚಿಂತನಮ್ ।
ಏವಂ ಧರ್ಮಾಃ ಪುರಾ ದೃಷ್ಟಾಃ ಸಾಮಾನ್ಯಾ ವನವಾಸಿನಾಮ್ ॥೨೦॥

ಶಿಷ್ಟರ ಜೊತೆಯಲ್ಲಿ ಧರ್ಮಾಸನದಲ್ಲಿ ಕುಳಿತು ಧರ್ಮಾರ್ಥ ಸಹಿತವಾದ ಕಥೆಗಳ ಶ್ರವಣ, ನಿವಾಸವನ್ನು ಇನ್ನೊಬ್ಬರ ಜೊತೆ ಹಂಚಿಕೊಳ್ಳುವುದು, ಭೂಮಿಯಲ್ಲಿ ಅಥವಾ ಶಿಲೆಯಲ್ಲಿ ಮಲಗುವುದು, ವ್ರತೋಪವಾಸಯೋಗದಲ್ಲಿ ನಿರತನಾಗಿರುವುದು, ಕ್ಷಮೆ, ಇಂದ್ರಿಯನಿಗ್ರಹ, ಹಗಲು ಮತ್ತು ರಾತ್ರಿ ಸಾಧ್ಯವಾದಷ್ಟು ಶುದ್ಧಿ, ಧರ್ಮದ ಚಿಂತನೆ - ಇವು ವನವಾಸದಲ್ಲಿರುವ ಎಲ್ಲ ಋಷಿಗಳಿಗೂ ಇರುವ ಸಾಮಾನ್ಯ ಧರ್ಮಗಳು.

ಏವಂ ವೈ ಯತಮಾನಸ್ಯ ಕಾಲಧರ್ಮೋ ಯದಾ ಭವೇತ್ ।
ತದೈವ ಸೋಽಭಿಜಾಯೇತ ಸ್ವರ್ಗಲೋಕಂ ಶುಚಿಸ್ಮಿತೇ ॥೨೧॥

ಎಲೌ ಶುಚಿಸ್ಮಿತೆಯೇ, ಹೀಗೆ ಪ್ರಯತ್ನ ಪಡುವ ಋಷಿಗೆ ಯಾವಾಗ ಮರಣವುಂಟಾಗುವುದೋ ಆಗಲೇ ಅವನು ಸ್ವರ್ಗಲೋಕವನ್ನು ಹೊಂದುತ್ತಾನೆ.

ತತ್ರ ಸಂವಿಹಿತಾ ಭೋಗಾಃ ಸ್ವರ್ಗಸ್ತ್ರೀಭಿರನಿಂದಿತೇ ।
ಪರಿಭ್ರಷ್ಟೋ ಯದಾ ಸ್ವರ್ಗಾದ್ ವಿಶಿಷ್ಟಸ್ತು ಭವೇನ್ನೃಷು ॥೨೨॥

ಎಲೌ ಅನಿಂದಿತೆಯೇ, ಅಲ್ಲಿ ಅವನು ಸ್ವರ್ಗಸ್ತ್ರೀಯರ ಜೊತೆಯಲ್ಲಿ ಭೋಗವನ್ನು ಅನುಭವಿಸಿ, ಪುಣ್ಯಕ್ಷಯವಾದ ಮೇಲೆ ಸ್ವರ್ಗದಿಂದ ಭ್ರಷ್ಟನಾಗಿ ವಿಶಿಷ್ಟವಾದ ಮಾನುಷಧರ್ಮವನ್ನು ಪಡೆಯುತ್ತಾನೆ.

ಏವಂ ಧರ್ಮಃ ಸದಾ ದೇವಿ ಸರ್ವೇಷಾಂ ವನವಾಸಿನಾಮ್ ।
ಏತತ್ತೇ ಕಥಿತಂ ಸರ್ವಂ ಕಿಂ ಭೂಯಃ ಶ್ರೋತುಮಿಚ್ಛಸಿ ॥೨೩॥

ಎಲೌ ದೇವಿಯೇ, ವನವಾಸಿಗಳಾದ ಋಷಿಗಳೆಲ್ಲರಿಗೂ ಇದು ನಿತ್ಯವಾದ ಧರ್ಮ. ಇದೆಲ್ಲವನ್ನೂ ನಿನಗೆ ಹೇಳಿದ್ದೇನೆ. ಇನ್ನೂ ಏನು ಕೇಳಲು ಬಯಸುತ್ತೀಯೆ?

ಉಮಾ

ಭಗವನ್ ದೇವದೇವೇಶ ಋಷೀಣಾಂ ಚರಿತಂ ಶುಭಮ್ ।
ವಿಶೇಷಧರ್ಮಾನಿಚ್ಛಾಮಿ ಶ್ರೋತುಂ ಕೌತೂಹಲಂ ಹಿ ಮೇ ॥೨೪॥

ಉಮಾ– ಭಗವಂತನೇ, ದೇವದೇವೇಶನೇ, ಋಷಿಗಳ ವಿಶೇಷವಾದ ಶುಭ ಧರ್ಮಗಳನ್ನು ಕೇಳಲು ಬಯಸುತ್ತೇನೆ. ಅದರಲ್ಲಿ ನನಗೆ ಕುತೂಹಲವಿದೆ.

ಮಹೇಶ್ವರಃ

ತದಹಂ ತೇ ಪ್ರವಕ್ಷ್ಯಾಮಿ ಶೃಣು ದೇವಿ ಸಮಾಹಿತಾ ॥೨೫॥

ಮಹೇಶ್ವರ– ದೇವಿಯೇ, ಅದನ್ನೂ ನಾನು ನಿನಗೆ ಹೇಳುವೆನು. ಸಮಾಧಾನದಿಂದ ಕೇಳು.

ವನನಿತ್ಯೈರ್ವನರತೈರ್ವಾನಪ್ರಸ್ಥೈರ್ಮಹರ್ಷಿಭಿಃ ।
ವನಂ ಗುರುಮಿವಾಲಂಬ್ಯ ವಸ್ತವ್ಯಮಿತಿ ನಿಶ್ಚಯಃ ॥೨೬॥

ವಾನಪ್ರಸ್ಥರಾದ ಮಹರ್ಷಿಗಳು ನಿತ್ಯವೂ ವನದಲ್ಲಿ ವಾಸಿಸಿ, ವನದಲ್ಲಿಯೇ ಪ್ರೀತಿಯನ್ನು ಹೊಂದಿ, ವನವನ್ನೇ ಗುರುವಿನಂತೆ ತಿಳಿದು ವಾಸ ಮಾಡಬೇಕೆಂದು ನಿಶ್ಚಯಿಸಬೇಕು.

ವೀರಶಯ್ಯಾಮುಪಾಸದ್ಭಿರ್ವೀರಸ್ಥಾನೋಪಸೇವಿಭಿಃ ।
ವ್ರತೋಪವಾಸೈರ್ಬಹುಭಿರ್ಗ್ಲಪ್ತೈ ಪಂಚತಪೈಸ್ತಥಾ ॥೨೭॥

ಪಂಚಯಜ್ಞಪರೈರ್ನಿತ್ಯಂ ಪೌರ್ಣಮಾಸ್ಯಪರಾಯಣೈಃ ।
ಮಂಡೂಕಶಾಯ್ಯೈರ್ಹೋಮಂತೇ ಶೈವಾಲಾಂಕುರಭೋಜನೈಃ ॥೨೮॥

ಚೀರವಲ್ಕಲಸಂವೀತೈರ್ಮೃಗಾಜಿನಧರೈಸ್ತಥಾ ।
ಚಾತುರ್ಮಾಸ್ಯಪರೈಃ ಕೈಶ್ಚಿದ್ ದೇವಧರ್ಮಪರಾಯಣೈಃ ॥೨೯॥

ಏವಂವಿಧೈರ್ವನಗತೈಸ್ತಪ್ಯತೇ ಸುಮಹತ್ ತಪಃ ।
ಏವಂ ಕೃತ್ವಾ ಶುಭಂ ಕರ್ಮ ಪಶ್ಚಾದ್ ಯಾತಿ ತ್ರಿವಿಷ್ಟಪಮ್ ॥೩೦॥

ವೀರಶಯ್ಯೆಯಲ್ಲಿ ಮಲಗುವುದು, ವೀರಸ್ಥಾನದಲ್ಲಿ ನಿಲ್ಲುವುದು, ವ್ರತೋಪವಾಸವನ್ನು ಮಾಡುವುದು, ಗ್ರೀಷ್ಮದಲ್ಲಿ ಪಂಚಾಗ್ನಿ ತಪಸ್ಸು, ನಿತ್ಯವೂ ಪಂಚಯಜ್ಞಾನುಷ್ಠಾನ, `ಪೌರ್ಣಮಾಸಿಯಲ್ಲಿ ಅಗ್ನಿಹೋತ್ರಗಳು, ಹೇಮಂತ ಋತುವಿನಲ್ಲಿ ಮಂಡೂಕದಂತೆ ಶಯನ, ಪಾಚಿ ಮತ್ತು ಅಂಕುರಗಳ ಭೋಜನ, ಚೀರ-ವಲ್ಕಲ-ಮೃಗಾಜಿನಗಳ ಧಾರಣ, ಚಾತುರ್ಮಾಸ್ಯ ವ್ರತನಿಯಮ, ಕೆಲವು ದೇವಧರ್ಮಗಳ ಆಚರಣೆ -ಇಂತಹ ಪ್ರಕಾರಗಳಿಂದ ವನಗತರಾದ ಋಷಿಗಳು ದೊಡ್ಡ ತಪಸ್ಸನ್ನು ಮಾಡುತ್ತಾರೆ. ಇಂತಹ ಶುಭಕರ್ಮವನ್ನು ಮಾಡಿ ಅನಂತರ ಸ್ವರ್ಗಕ್ಕೆ ಹೋಗುತ್ತಾರೆ.

ತತ್ರಾಪಿ ಸುಮಹತ್ಕಾಲಂ ಸ ವಿಹೃತ್ಯ ಯಥಾಸುಖಮ್ ।
ಜಾಯತೇ ಮಾನುಷೇ ಲೋಕೇ ದಾನಭೋಗಸಮನ್ವಿತಃ ॥೩೧॥

ತಪೋವಿಶೇಷಸಂಯುಕ್ತಾಃ ಕಥಿತಾಸ್ತೇ ಶುಚಿಸ್ಮಿತೇ ॥೩೨॥

ಅಲ್ಲಿಯೂ ಕೂಡ ಬಹಳ ಕಾಲದವರೆಗೆ ಸುಖವನ್ನು ಅನುಭವಿಸಿ, ಮನುಷ್ಯ ಲೋಕದಲ್ಲಿ ದಾನಭೋಗ ಸಮನ್ವಿತರಾಗಿ ಜನಿಸುತ್ತಾರೆ. ಶುಚಿಸ್ಮಿತೆಯೇ, ವಿಶೇಷವಾದ ತಪಸ್ಸನ್ನು ಮಾಡಿದವರ ವಿಷಯವನ್ನು ನಾನು ನಿನಗೆ ಹೇಳಿದ್ದೇನೆ.

ಉಮಾ

ಭಗವನ್ ದೇವದೇವೇಶ ತೇಷು ಯೇ ದಾರಸಂಯುತಾಃ ।
ಕೀದೃಶಂ ಚರಿತಂ ತೇಷಾಂ ತನ್ಮೇ ಶಂಸಿತುಮರ್ಹಸಿ ॥೩೩॥

ಉಮಾ– ಭಗವಂತನೇ, ದೇವದೇವೇಶನೆ, ಅವರಲ್ಲಿ ಯಾರು ಪತ್ನೀ ಸಹಿತರಾಗಿರುತ್ತಾರೆಯೋ ಅವರ ಆಚರಣೆ ಹೇಗಿರುತ್ತದೆ ಎಂದು ನನಗೆ ಹೇಳಬೇಕು.

ಮಹೇಶ್ವರಃ

ಯ ಏಕಪತ್ನೀಧರ್ಮಾಣಶ್ಚರಂತಿ ವಿಪುಲಂ ತಪಃ ।
ವಿಂಧ್ಯಪಾದೇಷು ಯೇ ಕೇಚಿದ್ ಯೇ ಚ ನೈಮಿಶವಾಸಿನಃ ॥೩೪॥

ಪುಷ್ಕರೇಷು ಚ ಯೇ ಚಾನ್ಯೇ ನದೀವನಸಮಾಶ್ರಿತಾಃ ।
ಸರ್ವೇ ತೇ ವಿಧಿದೃಷ್ಟೇನ ಚರಂತಿ ವಿಪುಲಂ ತಪಃ ॥೩೫॥

ಮಹೇಶ್ವರ– ಕೆಲವರು ಪತ್ನೀಸಹಿತರಾಗಿ ವಿಂಧ್ಯಪಾದಗಳಲ್ಲಿಯೂ, ಕೆಲವರು ನೈಮಿಶಾರಣ್ಯದಲ್ಲಿಯೂ, ಕೆಲವರು ಪುಷ್ಕರಗಳಲ್ಲಿಯೂ, ಕೆಲವರು ನದೀ-ವನಗಳಲ್ಲಿಯೂ ತಪಸ್ಸನ್ನು ಮಾಡುತ್ತಾರೆ. ಅವರೆಲ್ಲರೂ ವಿಧಿಗೆ ಅನುಸಾರವಾಗಿ ವಿಪುಲವಾದ ತಪಸ್ಸನ್ನು ಆಚರಿಸುತ್ತಾರೆ.

ಹಿಂಸಾದ್ರೋಹವಿಮುಕ್ತಾಶ್ಚ ಸರ್ವಭೂತಾನುಕಂಪಿನಃ ।
ಶಾಂತಾ ದಾಂತಾ ಜಿತಕ್ರೋಧಾಃ ಸರ್ವಾತಿಥ್ಯಪರಾಯಣಾಃ ॥೩೬॥

ಪ್ರಾಣಿಷ್ವಾತ್ಮೋಪಮಾ ನಿತ್ಯಮೃತುಕಾಲಾಭಿಗಾಮಿನಃ ।
ಸ್ವದಾರಸಹಿತಾ ದೇವಿ ಚರಂತಿ ವ್ರತಮುತ್ತಮಮ್ ॥೩೭॥

ಹಿಂಸಾ-ದ್ರೋಹಗಳನ್ನು ತ್ಯಜಿಸಿ, ಸರ್ವಭೂತದಯೆಯನ್ನು ಹೊಂದಿ ಶಾಂತರೂ, ಇಂದ್ರಿಯನಿಗ್ರಹವುಳ್ಳವರೂ, ಕ್ರೋಧವನ್ನು ಜಯಿಸಿದವರೂ, ಸರ್ವಾತಿಥಿ ಪರಾಯಣರೂ ಆಗಿ, ಪ್ರಾಣಿಗಳನ್ನು ತಮ್ಮಂತೆಯೇ ನೋಡುತ್ತಾ, ನಿತ್ಯವೂ ಋತು ಕಾಮಗಾಮಿಗಳಾಗಿ ಪತ್ನೀ ಸಹಿತರಾಗಿ ಶ್ರೇಷ್ಠವಾದ ವ್ರತವನ್ನು ಮಾಡುತ್ತಾರೆ.

ವಸಂತಿ ಸುಖಮವ್ಯಗ್ರಾಃ ಪುತ್ರದಾರಸಮನ್ವಿತಾಃ ।
ತೇಷಾಂ ಪರಿಚ್ಛದಾರಂಭಾಃ ಕೃತೋಪಕರಣಾನಿ ಚ ॥೩೮॥

ಗೃಹಸ್ಥವದ್ ವಿಧೀಯಂತೇ ಯಥಾಯೋಗಂ ಪ್ರಮಾಣತಃ ।
ಪೋಷಣಾರ್ಥಂ ಸ್ವದಾರಾಣಾಮಗ್ನಿಕಾರ್ಯಾರ್ಥಮೇವ ಚ ।
ಗಾವಶ್ಚ ಕರ್ಷಕಾಶ್ಚೈವ ಸರ್ವಮೇತದ್ವಿಧೀಯತೇ ॥೩೯॥

ಪುತ್ರ , ಪತ್ನೀ ಸಹಿತರಾಗಿ ಅವರು ಸುಖವಾಗಿ ವನದಲ್ಲಿ ವಾಸಿಸುತ್ತಾರೆ. ಅವರ ವಸ್ತ್ರಗಳು, ಕಾರ್ಯಾರಂಭಗಳು, ಉಪಕರಣಗಳು ಎಲ್ಲವೂ ಗೃಹಸ್ಥನಿಗೆ ಹೇಳಿದಂತೆಯೇ ಯಥಾಯೋಗ್ಯವಾಗಿ ಪ್ರಮಾಣಗಳಿಂದ ವಿಧಿಸಲ್ಪಡುತ್ತವೆ. ಪತ್ನಿಯ ಪೋಷಣೆಗಾಗಿ, ಅಗ್ನಿಕಾರ್ಯಕ್ಕೋಸ್ಕರವಾಗಿ ಗೋವುಗಳು ಮತ್ತು ಧನ-ಧಾನ್ಯಾದಿಗಳನ್ನು ಪಡೆಯುತ್ತಾ, ಧಾನ್ಯಾದಿಗಳನ್ನು ಬೆಳೆಯುವ ಭೃತ್ಯರು ಅವರಿಗೆ ವಿಧಿಸಲ್ಪಡುತ್ತಾರೆ.

ಏವಂ ವನಗತೈರ್ದೇವಿ ಕರ್ತವ್ಯಂ ದಾರಸಂಯುತೈಃ ।
ತೇ ಸ್ವದಾರೈಃ ಸಮಾಯಾಂತಿ ಪುಣ್ಯಾಲ್ಲೋಕಾನ್ ದೃಢವ್ರತಾಃ ॥೪೦॥

ವನದಲ್ಲಿ ಪತ್ನೀ ಸಹಿತರಾಗಿ ಇರುವವರು ಈ ರೀತಿಯಾದ ಅನುಷ್ಠಾನವನ್ನು ಮಾಡಬೇಕು. ದೃಢವ್ರತರಾದ ಅಂತಹವರು ಪತ್ನೀ ಸಹಿತರಾಗಿ ಪುಣ್ಯಲೋಕಗಳಿಗೆ ಹೋಗುತ್ತಾರೆ.

ಪತಿಭಿಃ ಸಹ ಯೇ ದಾರಾಶ್ಚರಂತಿ ವಿಪುಲಂ ತಪಃ ।
ಅಲ್ಪಗ್ರಹಾ ವಾರಹವ್ಯಾ ತೇ ಚ ಗಚ್ಛಂತಿ ವೈ ದಿವಮ್ ।
ಏತತ್ತೇ ಕಥಿತಂ ದೇವಿ ಕಿಂ ಭೂಯಃ ಶ್ರೋತುಮಿಚ್ಛಸಿ ॥೪೧॥

ಪತಿಗಳ ಜೊತೆಯಲ್ಲಿ ಪತ್ನಿಯರೂ ಸಹ ಅಲ್ಪಪರಿಗ್ರಹಗಳನ್ನು ಹೊಂದಿ, ಏಕಭುಕ್ತವನ್ನು ಮಾಡಿ, ವಿಪುಲವಾದ ತಪಸ್ಸನ್ನು ಮಾಡಿ ಸ್ವರ್ಗಕ್ಕೆ ಹೋಗುತ್ತಾರೆ. ಎಲೌ ದೇವಿಯೇ, ಇದನ್ನು ನಿನಗೆ ಹೇಳಿದ್ದೇನೆ. ಇನ್ನೂ ಏನನ್ನು ಕೇಳಲು ಬಯಸುತ್ತೀಯೆ?

॥ ಇತಿ ಶ್ರೀಮನ್ಮಹಾಭಾರತೇ ಅನುಶಾಸನಪರ್ವಣಿ ದಾನಧರ್ಮಪರ್ವಣಿ
ವಾನಪ್ರಸ್ಥಧರ್ಮಕಥನಂ ನಾಮ ಷಣ್ಣವತ್ಯುತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ತೊಂಬತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ತೊಂಬತ್ತೇಳನೆಯ ಅಧ್ಯಾಯ

ಉಮಾ-ಮಹೇಶ್ವರರ ಸಂವಾದ. ವಾನಪ್ರಸ್ಥರ ಮತ್ತು ವಿಧವೆಯರ ಧರ್ಮಕಥನ

ಉಮಾ

ಭಗವನ್ ದೇವದೇವೇಶ ತೇಷಾಂ ಕರ್ಮಫಲಂ ಪ್ರಭೋ ।
ಶ್ರೋತುಮಿಚ್ಛಾಮ್ಯಹಂ ದೇವ ಪ್ರಸಾದಾತ್ ತೇ ವರಪ್ರದ ॥೧॥

ಉಮಾ– ಭಗವಂತನೇ, ದೇವದೇವೇಶನೇ, ಪ್ರಭುವೇ, ವರಪ್ರದನೇ, ನಿನ್ನ ಅನುಗ್ರಹದಿಂದ ವಾನಪ್ರಸ್ಥರ ಕರ್ಮದ ಫಲವನ್ನು ಕೇಳಲು ಬಯಸುತ್ತೇನೆ.

ಮಹೇಶ್ವರಃ

ವಾನಪ್ರಸ್ಥಗತಂ ಸರ್ವಂ ಫಲಪಾಕಂ ಶೃಣು ಪ್ರಿಯೇ ॥೨॥

ಮಹೇಶ್ವರ– ಪ್ರಿಯೇ, ವಾನಪ್ರಸ್ಥರು ಮಾಡುವ ಕರ್ಮಗಳ ಫಲಪಾಕವನ್ನು ಕೇಳು.

ಅಗ್ನಿಯೋಗಂ ವ್ರಜನ್ ಗ್ರೀಷ್ಮೇ ತತೋ ದ್ವಾದಶವಾರ್ಷಿಕಮ್ ।
ರುದ್ರಲೋಕೇ ಹಿ ಜಾಯೇತ ವಿಧಿದೃಷ್ಟೇನ ಕರ್ಮಣಾ ॥೩॥

ಗ್ರೀಷ್ಮ ಕಾಲದಲ್ಲಿ ಹನ್ನೆರಡು ವರ್ಷಗಳವರೆಗೆ ಅಗ್ನಿ ತಪಸ್ಸನ್ನು ವಿಧಿಗೆ ಅನುಸಾರವಾಗಿ ಮಾಡುವವನು ರುದ್ರಲೋಕವನ್ನು ಹೊಂದುತ್ತಾನೆ.

ಉಪವಾಸವ್ರತಂ ಕುರ್ವನ್ ವರ್ಷಾಕಾಲೇ ದೃಢವ್ರತಃ ।
ಸೋಮಲೋಕೇಽಭಿಜಾಯೇತ ನರೋ ದ್ವಾದಶವಾರ್ಷಿಕಮ್ ॥೪॥

ಹನ್ನೆರಡು ವರ್ಷದವರೆಗೆ ವರ್ಷಾಕಾಲದಲ್ಲಿ ದೃಢವಾದ ವ್ರತವನ್ನು ಧರಿಸಿ, ಉಪವಾಸವನ್ನು ಮಾಡುವವನು ಚಂದ್ರಲೋಕವನ್ನು ಹೊಂದುತ್ತಾನೆ.

ಕಾಷ್ಠವನ್ಮೌನಮಾಸ್ಥಾಯ ನರೋ ದ್ವಾದಶವಾರ್ಷಿಕಮ್ ।
ಮರುತಾಂ ಲೋಕಮಾಸ್ಥಾಯ ತತ್ರ ಭೋಗೈಶ್ಚ ಯುಜ್ಯತೇ ॥೫॥

ಹನ್ನೆರಡು ವರ್ಷಗಳ ಕಾಲ ಕಾಷ್ಠಮೌನವನ್ನು ಮಾಡುವ ನರನು ಮರುತ್ತುಗಳ ಲೋಕವನ್ನು ಹೊಂದಿ ಅಲ್ಲಿ ಭೋಗಗಳನ್ನು ಅನುಭವಿಸುತ್ತಾನೆ.

ಕುಶಶರ್ಕರಸಂಯುಕ್ತೇ ಸ್ಥಂಡಿಲೇ ಸಂವಿಶನ್ಮುನಿಃ ।
ಯಕ್ಷಲೋಕೇಽಭಿಜಾಯೇತ ಸಹಸ್ರಾಣಿ ಚತುರ್ದಶ ॥೬॥

ದರ್ಭೆಗಳು ಮತ್ತು ಮರಳು ಇರುವ ಭೂಮಿಯಲ್ಲಿ ಮಲಗುವ ಮುನಿಯು ಯಕ್ಷಲೋಕವನ್ನು ಹೊಂದಿ ಹದಿನಾಲ್ಕು ಸಾವಿರ ವರ್ಷಗಳ ಕಾಲ ಅಲ್ಲಿರುತ್ತಾನೆ.

ವರ್ಷಾಣಾಂ ಭೋಗಸಂಯುಕ್ತೋ ನರೋ ದ್ವಾದಶವಾರ್ಷಿಕಮ್ ।
ವೀರಾಸನಗತೋ ಯಸ್ತು ಕಂಟಕಾಫಲಕಾಶ್ರಿತಃ ।
ಗಂಧರ್ವೇಷ್ವಭಿಜಾಯೇತ ಸಹಸ್ರಾಣಿ ಚತುರ್ದಶ ॥೭॥

ಹನ್ನೆರಡು ವರ್ಷಗಳವರೆಗೆ ಮುಳ್ಳಿನ ಹಲಗೆಯ ಮೇಲೆ ವೀರಾಸನದಲ್ಲಿ ನಿಲ್ಲುವ ನರನು ಗಂಧರ್ವಲೋಕವನ್ನು ಹೊಂದಿ, ಅಲ್ಲಿ ಹದಿನಾಲ್ಕು ಸಾವಿರ ವರ್ಷಗಳ ಕಾಲ ಭೋಗಗಳನ್ನು ಅನುಭವಿಸುತ್ತಾನೆ.

ವೀರಸ್ಥಾಯೀ ಚೋರ್ಧ್ವಬಾಹುರ್ನರೋ ದ್ವಾದಶವಾರ್ಷಿಕಮ್ ।
ದೇವಲೋಕೇऽಭಿಜಾಯೇತ ದಿವ್ಯಭೋಗಸಮನ್ವಿತಃ ॥೮॥

ಹನ್ನೆರಡು ವರ್ಷಗಳ ಕಾಲ ವೀರಸ್ಥಾಯಿಯಾಗಿ ಬಾಹುಗಳನ್ನು ಎತ್ತಿ ನಿಲ್ಲುವ ನರನು ದೇವಲೋಕವನ್ನು ಹೊಂದಿ ದಿವ್ಯಭೋಗಗಳನ್ನು ಅನುಭವಿಸುತ್ತಾನೆ.

ಪಾದಾಂಗುಷ್ಠೇನ ಯಸ್ತಿಷ್ಠೇದೂರ್ಧ್ವಬಾಹುರ್ಜಿತೇಂದ್ರಿಯಃ ।
ಇಂದ್ರಲೋಕೇऽಭಿಜಾಯೇತ ಸಹಸ್ರಾಣಿ ಚತುರ್ದಶ ॥೯॥

ಬಾಹುಗಳನ್ನು ಮೇಲಕ್ಕೆತ್ತಿ ಜಿತೇಂದ್ರಿಯನಾಗಿ ಪಾದಾಂಗುಷ್ಠದ ಮೇಲೆ ನಿಲ್ಲುವವನು ಇಂದ್ರಲೋಕವನ್ನು ಹೊಂದಿ ಅಲ್ಲಿ ಹದಿನಾಲ್ಕು ಸಾವಿರ ವರ್ಷಗಳ ಕಾಲ ಇರುತ್ತಾರೆ.

ಆಹಾರನಿಯಮಂ ಕೃತ್ವಾ ಮುನಿರ್ದ್ವಾದಶವಾರ್ಷಿಕಮ್ ।
ನಾಗಲೋಕೇऽಭಿಜಾಯೇತ ಸಂವತ್ಸರಗಣಾನ್ ಬಹೂನ್ ॥೧೦॥

ಹನ್ನೆರಡು ವರ್ಷಗಳವರೆಗೆ ಆಹಾರನಿಯಮವನ್ನು ಮಾಡಿದ ಮುನಿಯು ನಾಗಲೋಕವನ್ನು ಹೊಂದಿ ಅಲ್ಲಿ ಅನೇಕ ವರ್ಷಗಳ ಕಾಲ ಇರುತ್ತಾನೆ.

ಏವಂ ದೃಢವ್ರತಾ ದೇವಿ ವಾನಪ್ರಸ್ಥಾಶ್ಚ ಕರ್ಮಭಿಃ ।
ಸ್ಥಾನೇಷು ತೇಷು ತಿಷ್ಠಂತಿ ತತ್ತದ್ಭೋಗಸಮನ್ವಿತಾಃ ॥೧೧॥

ಎಲೌ ದೇವಿಯೇ, ಹೀಗೆ ಕಠಿಣವಾದ ವ್ರತವನ್ನು ಮಾಡಿದ ವಾನಪ್ರಸ್ಥರು ತಮ್ಮ ಕರ್ಮಗಳಿಂದ ಆಯಾ ಸ್ಥಾನದಲ್ಲಿ ಭೋಗದಿಂದ ಕೂಡಿದವರಾಗಿ ಇರುತ್ತಾರೆ.

ತೇಭ್ಯೋ ಭ್ರಷ್ಟಾಃ ಪುನರ್ದೇವಿ ಜಾಯಂತೇ ನೃಷು ಭೋಗಿನಃ ।
ವರ್ಣೋತ್ತಮಕುಲೇಷ್ವೇವ ಧನಧಾನ್ಯಸಮನ್ವಿತಾಃ ॥೧೨॥

ಹೀಗೆಯೇ ಪುಣ್ಯಕ್ಷಯವಾದ ಮೇಲೆ ಆ ಸ್ಥಾನದಿಂದ ಭ್ರಷ್ಟರಾಗಿ ಉತ್ತಮ ವರ್ಣದ ಕುಲದಲ್ಲಿ ಧನ-ಧಾನ್ಯ ಸಮನ್ವಿತರಾಗಿ ಭೋಗವನ್ನು ಹೊಂದುವವರಾಗಿ ಜನಿಸುತ್ತಾರೆ.

ಏತತ್ತೇ ಕಥಿತಂ ದೇವಿ ಕಿಂ ಭೂಯಃ ಶ್ರೋತುಮಿಚ್ಛಸಿ ॥೧೩॥

ದೇವಿ, ಇದನ್ನು ನಿನಗೆ ಹೇಳಿದ್ದೇನೆ. ಇನ್ನೂ ಏನನ್ನು ಕೇಳಲು ಬಯಸುತ್ತೀಯೆ?

ಉಮಾ

ಲೋಕಾನ್ ವೈ ವಿವರಾಣಾಂ ತು ಧರ್ಮಮಿಚ್ಛಾಮಿ ಮಾನದ ।
ಕೃಪಯಾ ಪರಯಾऽऽವಿಷ್ಟಸ್ತನ್ಮೇ ಬ್ರೂಹಿ ಮಹೇಶ್ವರ ॥೧೪॥

ಉಮಾ– ಎಲೈ ಮಾನದನೇ, ವಿಧವೆಯರ ಧರ್ಮವನ್ನು ಮತ್ತು ಅವರು ಹೊಂದುವ ಲೋಕಗಳನ್ನು ಕೇಳಲು ಬಯಸುತ್ತೇನೆ. ಮಹೇಶ್ವರನೇ, ನನ್ನ ಮೇಲೆ ಬಹಳ ಕೃಪೆಯನ್ನು ಮಾಡಿ ಅದನ್ನು ಹೇಳು (ಲಕ್ಷಾಲಂಕಾರ).

ಮಹೇಶ್ವರಃ

ಧರ್ಮಂ ಚ ವಿವರಾಣಾಂ ತ್ವಂ ಶೃಣು ಭಾಮಿನಿ ತತ್ಪರಾ ॥೧೫॥

ಮಹೇಶ್ವರ– ಭಾಮಿನಿಯೇ, ವಿಧವೆಯರ ಧರ್ಮಗಳನ್ನು ಅವಧಾನದಿಂದ ಕೇಳು.

ವ್ರತೋಪವಾಸಶುದ್ಧಾಂಗಾಸ್ತೀರ್ಥಸ್ನಾನಪರಾಯಣಾಃ ।
ಧೃತಿಮಂತಃ ಕ್ಷಮಾಯುಕ್ತಾಃ ಸತ್ಯವ್ರತಪರಾಯಣಾಃ ॥೧೬॥

ಪಕ್ಷಮಾಸೋಪವಾಸೈಶ್ಚ ಕರ್ಶಿತಾ ಧರ್ಮದರ್ಶಿನಃ ।
ವರ್ಷೈಃ ಶೀತಾತಪೈರೇವ ಕುರ್ವಂತಃ ಪರಮಂ ತಪಃ ।
ಕಾಲಯೋಗೇನ ಗಚ್ಛಂತಿ ಶಕ್ರಲೋಕಂ ಶುಚಿಸ್ಮಿತೇ ॥೧೭॥

ಎಲೌ ಶುಚಿಸ್ಮಿತೆಯೇ, ಸತತ ಉಪವಾಸದಿಂದ ಶೋಭಿಸುವ, ಶರೀರವುಳ್ಳವರಾಗಿ ತೀರ್ಥಸ್ನಾನ ಪರಾಯಣರಾಗಿ, ಧೈರ್ಯವನ್ನೂ, ಕ್ಷಮೆಯನ್ನೂ ಹೊಂದಿ, ಸತ್ಯವ್ರತ ಪರಾಯಣರಾಗಿ, ಪಕ್ಷೋಪವಾಸ ಮತ್ತು ಮಾಸೋಪವಾಸಗಳಿಂದ ಶರೀರವನ್ನು ಸವೆಸಿ, ಧರ್ಮಗಳನ್ನು ಗಮನಿಸಿ, ಬಿಸಿಲು, ಮಳೆ ಮತ್ತು ಹಿಮಗಳಲ್ಲಿ ಶ್ರೇಷ್ಠವಾದ ತಪಸ್ಸನ್ನು ಮಾಡುತ್ತಾ ಮರಣವನ್ನು ಹೊಂದಿ ಇಂದ್ರಲೋಕಕ್ಕೆ ಹೋಗುತ್ತಾರೆ.

ತತ್ರ ತೇ ಭೋಗಸಂಯುಕ್ತಾ ದಿವ್ಯಗಂಧಸಮನ್ವಿತಾಃ ।
ದಿವ್ಯಭೂಷಣಸಂಯುಕ್ತಾ ವಿಮಾನವರಸಂಯುತಾಃ ॥೧೮॥

ವಿಚರಂತಿ ಯಥಾಕಾಮಂ ದಿವ್ಯಸ್ತ್ರೀಗಣಸಂಯುತಾಃ ।
ಏತತ್ತೇ ಕಥಿತಂ ದೇವಿ ಕಿಂ ಭೂಯಃ ಶ್ರೋತುಮಿಚ್ಛಸಿ ॥೧೯॥

ಅಲ್ಲಿ ಅವರು ದಿವ್ಯಗಂಧ ಸಮನ್ವಿತರೂ, ದಿವ್ಯಭೂಷಣಯುಕ್ತರೂ, ಒಳ್ಳೆಯ ವಿಮಾನವುಳ್ಳವರೂ, ಭೋಗಸಂಯುಕ್ತರೂ ಆಗಿ ದಿವ್ಯಸ್ತ್ರೀ ಸಮೂಹದ ಜೊತೆಯಲ್ಲಿ ತಮಗೆ ಇಷ್ಟಬಂದಂತೆ ಸಂಚರಿಸುತ್ತಾರೆ. ದೇವಿಯೇ, ಇದನ್ನು ಹೇಳಿದ್ದೇನೆ. ಇನ್ನೂ ಏನನ್ನು ಕೇಳಲು ಬಯಸುತ್ತೀಯೆ?

ಉಮಾ

ತೇಷಾಂ ಚಕ್ರಧರಾಣಾಂ ಚ ಧರ್ಮಮಿಚ್ಛಾಮಿ ವೈ ಪ್ರಭೋ ॥೨೦॥

ಉಮಾ– ಎಲೈ ಪ್ರಭುವೇ, ಚಕ್ರಧರರ ಧರ್ಮಗಳನ್ನು ಕೇಳಲು ಬಯಸುತ್ತೇನೆ. ಚಕ್ರಧರರೆಂದರೆ ತಮ್ಮ ವಸ್ತುಗಳ ಭಾರವನ್ನು ಹೊರಲಾರದೆ ಚಕ್ರವುಳ್ಳ ಗಾಡಿಗಳಲ್ಲಿ ತಿರುಗಾಡುವ ವಯೋವೃದ್ಧರಾದ ಕುಟುಂಬಗಳು ಎಂದು ಅರ್ಥ (ಲಕ್ಷಾಲಂಕಾರ).

ಮಹೇಶ್ವರಃ

ಹಂತ ತೇ ಕಥಯಿಷ್ಯಾಮಿ ಶೃಣು ಶಾಕಟಿಕಂ ಶುಭೇ ॥೨೧॥

ಮಹೇಶ್ವರ– ಸಂತೋಷ. ಶುಭಳಾದವಳೇ, ಗಾಡಿಯಲ್ಲಿ ಸಂಚರಿಸುವ ವೃದ್ಧರ ಧರ್ಮವನ್ನು ಹೇಳುತ್ತೇನೆ.

ಸಂವಹಂತೋ ಧುರಂ ದಾರೈಃ ಶಕಟಾನಾಂ ತು ಸರ್ವದಾ ।
ಪ್ರಾರ್ಥಯಂತೇ ಯಥಾ ಗ್ರಾಮ್ಯಾಃ ಶಕಟೈರ್ಭೈಕ್ಷಚರ್ಯಯಾ ॥೨೨॥

ಪತ್ನಿಯರ ಜೊತೆಯಲ್ಲಿ ತಮ್ಮ ವಸ್ತುಗಳನ್ನು ಶಕಟಗಳಲ್ಲಿ ಕೊಂಡೊಯ್ಯುತ್ತಾ ಶಕಟಗಳಲ್ಲಿಯೇ ಸಂಚರಿಸಿ ಗ್ರಾಮ್ಯ ಪುರುಷರು ಬೇಡುವಂತೆ ಭಿಕ್ಷೆಯನ್ನು ಬೇಡುತ್ತಾರೆ.

ತಪೋರ್ಜನಪರಾ ಧೀರಾಸ್ತಪಸಾ ಕ್ಷೀಣಕಲ್ಮಷಾಃ ।
ಪರ್ಯಟಂತೋ ದಿಶಃ ಸರ್ವಾಃ ಕಾಮಕ್ರೋಧವಿವರ್ಜಿತಾಃ ॥೨೩॥

ತಪಸ್ಸನ್ನು ಗಳಿಸುವುದರಲ್ಲಿಯೇ ತಾತ್ಪರ್ಯವುಳ್ಳವರಾಗಿ, ಧೀರರಾಗಿ, ತಪಸ್ಸಿನಿಂದ ತಮ್ಮ ದೋಷಗಳನ್ನು ಕಳೆದುಕೊಂಡು, ಕಾಮ-ಕ್ರೋಧ ವಿವರ್ಜಿತರಾಗಿ ಎಲ್ಲ ದಿಕ್ಕುಗಳಲ್ಲಿಯೂ ಸಂಚರಿಸುತ್ತಾರೆ.

ಸ್ವವಶಾದೇವ ತೇ ಮೃತ್ಯುಮಭಿಕಾಂಕ್ಷಂತಿ ನಿತ್ಯಶಃ ।
ಇಂದ್ರಲೋಕೇ ತಥಾ ತೇಷಾಂ ನಿರ್ಮಿತಾ ಭೋಗಸಂಚಯಾಃ ॥೨೪॥

ತಮ್ಮ ಇಚ್ಛೆಯಿಂದಲೇ ಅವರು ನಿತ್ಯವೂ ಮೃತ್ಯುವನ್ನು ಬಯಸುತ್ತಾರೆ. ಇಂದ್ರಲೋಕದಲ್ಲಿ ಅವರಿಗಾಗಿ ಭೋಗಸಾಮಗ್ರಿಗಳು ನಿರ್ಮಿತವಾಗಿರುತ್ತವೆ.

ಅಮರೈಃ ಸಹ ತೇ ಯಾಂತಿ ದೇವವದ್ ಭೋಗಸಂಯುತಾಃ ।
ವರಾಪ್ಸರೋಭಿಃ ಸಂಯುಕ್ತಾಶ್ಚಿರಕಾಲಮನಿಂದಿತೇ ॥೨೫॥

ಎಲೌ ಅನಿಂದಿತೆಯೇ, ಅವರು ದೇವತೆಗಳಂತೆ ಭೋಗಯುಕ್ತರಾಗಿ, ಶ್ರೇಷ್ಠರಾದ ಅಪ್ಸರೆಯರಿಂದ ಕೂಡಿ ಬಹಳ ಕಾಲದವರೆಗೆ ಸಂಚರಿಸುತ್ತಾರೆ.

ತೇನೈವ ಕಾಲಯೋಗೇನ ತ್ರಿದಿವಂ ಯಾಂತಿ ಶೋಭನೇ ।
ತತ್ರ ಪ್ರಮುದಿತಾ ಭೋಗೈರ್ವಿಚರಂತಿ ಯಥಾಸುಖಮ್ ॥೨೬॥

ಏತತ್ತೇ ಕಥಿತಂ ದೇವಿ ಕಿಂ ಭೂಯಃ ಶ್ರೋತುಮಿಚ್ಛಸಿ ॥೨೭॥

ಎಲೌ ಶೋಭನೆಯೇ, ಅವರಿಗೆ ಮರಣವು ಒದಗಿದಾಗ ಸ್ವರ್ಗಲೋಕಕ್ಕೆ ಹೋಗಿ ಸಂತೋಷದಿಂದ ಭೋಗಗಳನ್ನು ಅನುಭವಿಸುತ್ತಾ ಸಂಚರಿಸುತ್ತಾರೆ. ದೇವಿಯೇ, ಇದನ್ನು ಹೇಳಿದ್ದೇನೆ. ಇನ್ನೂ ಏನನ್ನು ಕೇಳಲು ಬಯಸುತ್ತೀಯೆ?

ಉಮಾ

ವೈಖಾನಸಾನಾಂ ವೈ ಧರ್ಮಂ ಶ್ರೋತುಮಿಚ್ಛಾಮ್ಯಹಂ ಪ್ರಭೋ ॥೨೮॥

ಉಮಾ– ಪ್ರಭುವೇ, ವೈಖಾನಸರ ಧರ್ಮವನ್ನು ಕೇಳಲು ಬಯಸುತ್ತೇನೆ.

ಮಹೇಶ್ವರಃ

ತೇ ವೈ ವೈಖಾನಸಾ ನಾಮ ವಾನಪ್ರಸ್ಥಾಃ ಶುಭೇಕ್ಷಣೇ ।
ತೀವ್ರೇಣ ತಪಸಾ ಯುಕ್ತಾ ದೀಪ್ತಿಮಂತಃ ಸ್ವತೇಜಸಾ ।
ಸತ್ಯವ್ರತಪರಾ ಧೀರಾಸ್ತೇಷಾಂ ನಿಷ್ಕಲ್ಮಷಂ ತಪಃ ॥೨೯॥

ಮಹೇಶ್ವರ– ಎಲೌ ಶುಭೇಕ್ಷಣೆಯೇ, ವೈಖಾನಸರು ವಾನಪ್ರಸ್ಥರ ಒಂದು ಪ್ರಭೇದ. ಅವರು ತೀವ್ರವಾದ ತಪಸ್ಸಿನಿಂದ ಕೂಡಿ ತಮ್ಮ ತೇಜಸ್ಸಿನಿಂದ ಕಂಗೊಳಿಸುತ್ತಾರೆ. ಅವರು ಧೀರರು ಮತ್ತು ಸತ್ಯವ್ರತ ಪರಾಯಣರು. ಅವರ ತಪಸ್ಸು ನಿಷ್ಕಲ್ಮಷವಾಗಿರುತ್ತದೆ.

ಅಶ್ಮಕುಟ್ಟಾಸ್ತಥಾಽನ್ಯೇ ಚ ದಂತೋಲೂಖಲಿನಸ್ತಥಾ ।
ಶೀರ್ಣಪರ್ಣಾಶಿನಶ್ಚಾನ್ಯೇ ಉಂಛಯಂತಿ ತಥಾ ಪರೇ ॥೨೮॥

ಅವರಲ್ಲಿ ಕೆಲವರು ಅಶ್ಮಕುಟ್ಟರು (ಕಲ್ಲಿನಿಂದ ಕುಟ್ಟಿದ ಆಹಾರವನ್ನು ಮಾತ್ರ ಸೇವಿಸುವವರು. ಪಕ್ವವಾದ ಆಹಾರವನ್ನಲ್ಲ). ಇನ್ನು ಕೆಲವರು ದಂತೋಲೂಖಲಿಗಳು (ಹಲ್ಲಿನಿಂದ ಅಗಿದು ತಿನ್ನಬಹುದಾದುದನ್ನು ಮಾತ್ರ ತಿನ್ನುತ್ತಾರೆ. ಕುಟ್ಟಿದುದನ್ನಾಗಲೀ, ಬೇಯಿಸಿದುದನ್ನಾಗಲೀ ತಿನ್ನುವುದಿಲ್ಲ). ಇನ್ನು ಕೆಲವರು ಹಣ್ಣಾಗಿ ಬಿದ್ದ ಎಲೆಗಳನ್ನು ತಿನ್ನುವವರು. ಇನ್ನು ಕೆಲವರು ಉಂಛವೃತ್ತಿಯಿಂದ (ಕಾಳು ಕಡಿಗಳಿಂದ) ಜೀವಿಸುವವರು.

ಕಪೋತವೃತ್ತಯಶ್ಚಾನ್ಯೇ ಕಾಪೋತೀಂ ವೃತ್ತಿಮಾಶ್ರಿತಾಃ ।
ಪಶುಪ್ರಚಾರನಿರತಾಃ ಫೇನಪಾಶ್ಚ ತಥಾ ಪರೇ ॥೨೯॥

ಕೆಲವರು ಕಪೋತವೃತ್ತಿಯಲ್ಲಿ ನಿರತರಾಗಿರುತ್ತಾರೆ. ಕೆಲವರು ಪಶುಗಳನ್ನು ಮೇಯಿಸುವುದರಲ್ಲಿ ನಿರತರಾಗಿರುತ್ತಾರೆ. ಇನ್ನು ಕೆಲವರು ಹಾಲು ಕುಡಿಯುವಾಗ ಕರುಗಳ ಬಾಯಿಂದ ಬಂದ ನೊರೆಯನ್ನು ಮಾತ್ರ ಕುಡಿದು ತಪಸ್ಸನ್ನು ಮಾಡುತ್ತಾರೆ.

ಮೃಗವನ್ಮೃಗಚರ್ಯಾಯಾಂ ಸಂಚರಂತಿ ತಥಾ ಪರೇ ।
ಅಬ್ಭಕ್ಷಾ ವಾಯುಭಕ್ಷಾಶ್ಚ ನಿರಾಹಾರಾಸ್ತಥೈವ ಚ ॥೩೦॥

ಕೆಲವರು ಮೃಗಗಳಂತೆ ಮೃಗಚರ್ಯೆಯನ್ನು ಮಾಡುತ್ತಾ ಸಂಚರಿಸುತ್ತಾರೆ (ಹಿಂದೆ ಮಾಧವಿಯ ಕಥೆಯಲ್ಲಿ ಇದರ ಉಲ್ಲೇಖವಿದೆ). ಕೆಲವರು ಅಬ್ಭಕ್ಷರೂ, ಕೆಲವರು ವಾಯುಭಕ್ಷರೂ, ಕೆಲವರು ನಿರಾಹಾರರೂ ಆಗಿರುತ್ತಾರೆ.

ಸಂಚರಂತಿ ತಪೋ ಘೋರಂ ವ್ಯಾಧಿಮೃತ್ಯುವಿವರ್ಜಿತಾಃ ।
ಸ್ವವಶಾದೇವ ತೇ ಮೃತ್ಯುಮಭಿಕಾಂಕ್ಷಂತಿ ನಿತ್ಯಶಃ ॥೩೧॥

ವ್ಯಾಧಿ, ಮೃತ್ಯುಗಳ ಭಯವನ್ನು ತೊರೆದು ಘೋರವಾದ ತಪಸ್ಸನ್ನು ಆಚರಿಸುತ್ತಾರೆ. ಅವರು ತಮ್ಮ ಇಚ್ಛೆಯಿಂದಲೇ ಮೃತ್ಯುವನ್ನು ಬಯಸುತ್ತಾರೆ (ಸ್ವಚ್ಛಂದ ಮೃತ್ಯುಗಳು).

ಇಂದ್ರಲೋಕೇ ತಥಾ ತೇಷಾಂ ನಿರ್ಮಿತಾ ಭೋಗಸಂಚಯಾಃ ।
ಅಮರೈಃ ಸಹ ತೇ ಯಾಂತಿ ದೇವವದ್ ಭೋಗಸಂಯುತಾಃ ॥೩೨॥

ವರಾಪ್ಸರೋಭಿಃ ಸಂಯುಕ್ತಾಶ್ಚಿರಕಾಲಮನಿಂದಿತೇ ।
ಏತತ್ತೇ ಕಥಿತಂ ದೇವಿ ಭೂಯಃ ಶ್ರೋತುಂ ಕಿಮಿಚ್ಛಸಿ ॥೩೩॥

ಇಂದ್ರಲೋಕದಲ್ಲಿ ಅವರಿಗೆ ಭೋಗದ ರಾಶಿಗಳು ನಿರ್ಮಿಸಲ್ಪಟ್ಟಿರುತ್ತವೆ. ದೇವತೆಗಳಂತೆ ಭೋಗಯುಕ್ತರಾಗಿ ಅವರು ದೇವತೆಗಳ ಜೊತೆಯಲ್ಲಿ ಎಲೌ ಅನಿಂದಿತೆಯೇ, ಶ್ರೇಷ್ಠವಾದ ಅಪ್ಸರೆಯರ ಜೊತೆಯಲ್ಲಿ ಬಹುಕಾಲ ಸಂಚರಿಸುತ್ತಾರೆ. ದೇವಿಯೇ, ನಿನಗೆ ಇದನ್ನು ಹೇಳಿದ್ದೇನೆ. ಇನ್ನೂ ಏನನ್ನು ಕೇಳಲು ಬಯಸುತ್ತೀಯೆ?

ಉಮಾ

ಭಗವನ್ ಶ್ರೋತುಮಿಚ್ಛಾಮಿ ವಾಲಖಿಲ್ಯಾಂಸ್ತಪೋಧನಾನ್ ॥೩೪॥

ಉಮಾ– ಭಗವಂತನೇ, ತಪೋಧನರಾದ ವಾಲಖಿಲ್ಯ ಋಷಿಗಳ ವಿಷಯವನ್ನು ಕೇಳಲು ಬಯಸುತ್ತೇನೆ.

ಮಹೇಶ್ವರಃ

ಧರ್ಮಚರ್ಯಾಂ ತಥಾ ದೇವಿ ವಾಲಖಿಲ್ಯಗತಾಂ ಶೃಣು ॥೩೫॥

ಮಹೇಶ್ವರ– ದೇವಿಯೇ, ವಾಲಖಿಲ್ಯರು ಮಾಡುವ ತಪಶ್ಚರ್ಯವನ್ನು ಕೇಳು.

ಮೃಗನಿರ್ಮೋಕವಸನಾ ನಿರ್ದ್ವಂದ್ವಾಸ್ತೇ ತಪೋಧನಾಃ ।
ಅಂಗುಷ್ಠಮಾತ್ರಾಃ ಸುಶ್ರೋಣಿ ಸ್ವೇಷ್ವೇವಾಂಗೇಷು ಸಂಯುತಾಃ ॥೩೬॥

ಅವರು ತಪೋಧನರಾಗಿ, ಮೃಗಚರ್ಮಧರರಾಗಿ, ಶೀತೋಷ್ಣಾದಿ ದ್ವಂದ್ವಗಳನ್ನು ಮೀರಿರುತ್ತಾರೆ. ಎಲೌ ಸುಶ್ರೋಣಿಯೇ, ಅವರು ಅಂಗುಷ್ಠ ಮಾತ್ರದಷ್ಟು ಎತ್ತರವಿದ್ದು ಎಲ್ಲಾ ಅಂಗಗಳನ್ನು ಹೊಂದಿರುತ್ತಾರೆ.

ತೇ ಮೃತ್ಯುವಿಷಯಾತೀತಾಸ್ತಪಃಸಿದ್ಧಾಸ್ತಪೋಬಲಾಃ ।
ಜಿತಾಹಾರಾಃ ಜಿತಕ್ರೋಧಾಃ ಸರ್ವಭೋಗೇಷು ನಿಃಸ್ಪೃಹಾಃ ।
ತಪಶ್ಚರಣಮಿಚ್ಛಂತೋ ಲೋಕಾರ್ಥಂ ಪರಮೋದ್ಯತಾಃ ॥೩೭॥

ಅವರು ಮೃತ್ಯುಲೋಕವನ್ನು ಮೀರಿದವರು. ತಪಸ್ಸಿದ್ಧರಾದವರು. ತಪಸ್ಸನ್ನೇ ಬಲವಾಗಿ ಉಳ್ಳವರು. ಆಹಾರ ಜಯವನ್ನೂ, ಕ್ರೋಧಜಯವನ್ನೂ ಹೊಂದಿರುತ್ತಾರೆ.

ಯಾವ ಭೋಗಗಳಲ್ಲೂ ಆಸಕ್ತರಲ್ಲ. ಲೋಕದ ಹಿತಕ್ಕಾಗಿ ಪರಮಪ್ರಯತ್ನದಿಂದ ತಪಸ್ಸನ್ನು ಮಾಡುತ್ತಾರೆ.

ಉದ್ಯಂತಂ ಸತತಂ ಸೂರ್ಯಂ ಸ್ತುವಂತೋ ವಿವಿಧೈಃ ಸ್ತವೈಃ ।
ಭಾಸ್ಕರಸ್ಯೇವ ಕಿರಣೈಃ ಸಹಸಾ ಯಾಂತಿ ನಿತ್ಯದಾ ।
ದ್ಯೋತಯಂತೋ ದಿಶಃ ಸರ್ವಾ ಧರ್ಮಜ್ಞಾಃ ಸತ್ಯವಾದಿನಃ ॥೩೮॥

ಸತತವಾಗಿ ಉದಯಿಸುವ ಸೂರ್ಯನನ್ನು ವಿವಿಧ ಸ್ತೋತ್ರಗಳಿಂದ ಸ್ತೋತ್ರ ಮಾಡುತ್ತಾ ಸೂರ್ಯನ ಕಿರಣಗಳಂತೆ ಯಾವಾಗಲೂ ಶೀಘ್ರವಾಗಿ, ಹತ್ತು ದಿಕ್ಕುಗಳನ್ನು ಬೆಳಗುತ್ತಾ ಧರ್ಮಜ್ಞರೂ, ಸತ್ಯವಾದಿಗಳೂ ಆದ ಅವರು ಸಂಚರಿಸುತ್ತಾರೆ.

ತೇಷ್ವೇವ ನಿರ್ಮಲಂ ಸತ್ಯಂ ಲೋಕಾರ್ಥಂ ತು ಪ್ರತಿಷ್ಠಿತಮ್ ।
ಲೋಕೋಯಂ ಧಾರ್ಯತೇ ದೇವಿ ತೇಷಾಮೇವ ತಪೋಬಲಾತ್ ॥

ಲೋಕದ ಹಿತಕ್ಕಾಗಿ ನಿರ್ಮಲವಾದ ಸತ್ಯವು ಅವರಲ್ಲಿಯೇ ಪ್ರತಿಷ್ಠಿತವಾಗಿದೆ. ದೇವಿಯೇ, ಈ ಲೋಕವು ಅವರ ತಪೋಬಲದಿಂದಲೇ ನಿಂತಿದೆ.

ಮಹಾತ್ಮನಾಂ ತು ತಪಸಾ ಸತ್ಯೇನ ಚ ಶುಚಿಸ್ಮಿತೇ ।
ಕ್ಷಮಯಾ ಚ ಮಹಾಭಾಗೇ ಭೂತಾನಾಂ ಸಂಸ್ಥಿತಿಂ ವಿದುಃ ॥೪೦॥

ಎಲೌ ಮಹಾನುಭಾವಳೇ, ಮಹಾತ್ಮರಾದ ಅವರ ತಪಸ್ಸಿನಿಂದ, ಸತ್ಯದಿಂದ, ಕ್ಷಮಾಗುಣದಿಂದ ಎಲ್ಲ ಪ್ರಾಣಿಗಳೂ ಬದುಕಿವೆ ಎಂದು ಹೇಳುತ್ತಾರೆ.

ಪ್ರಜಾರ್ಥಮಪಿ ಲೋಕಾರ್ಥಂ ಮಹದ್ಭಿಃ ಕ್ರಿಯತೇ ತಪಃ ।
ತಪಸಾ ಪ್ರಾಪ್ಯತೇ ಸರ್ವಂ ತಪಸಾ ಪ್ರಾಪ್ಯತೇ ಫಲಮ್ ।
ದುಷ್ಪ್ರಾಪಮಪಿ ಯಲ್ಲೋಕೇ ತಪಸಾ ಪ್ರಾಪ್ಯತೇ ಹಿ ತತ್ ॥೪೧॥

ಪ್ರಜೆಗಳ ಸಲುವಾಗಿ ಮತ್ತು ಲೋಕಗಳ ಸಲುವಾಗಿ ಮಹಾತ್ಮರಾದ ಅವರು ದೊಡ್ಡ ತಪಸ್ಸನ್ನು ಆಚರಿಸುತ್ತಾರೆ. ತಪಸ್ಸಿನಿಂದ ಎಲ್ಲ ಫಲವೂ ಪ್ರಾಪ್ತವಾಗುತ್ತದೆ. ಲೋಕದಲ್ಲಿ ಪಡೆಯಲು ಅಸಾಧ್ಯವಾದುದನ್ನೆಲ್ಲಾ ತಪಸ್ಸಿನಿಂದ ಪಡೆಯಬಹುದು.

ಪಂಚಭೂತಸ್ಥಿತಿಶ್ಚೈವ ಲೋಕಸೃಷ್ಟಿವಿವರ್ಧನಮ್ ।
ಏತತ್ಸರ್ವಂ ಸಮಾಸೇನ ತಪೋಯೋಗಾದ್ ವಿನಿರ್ಮಿತಮ್ ॥೪೨॥

ಪಂಚಭೂತಗಳ ಸ್ಥಿತಿ, ಲೋಕದಲ್ಲಿ ಸಂತತಿಯ ಬೆಳವಣಿಗೆ ಇವೆಲ್ಲವೂ ಸಂಕ್ಷೇಪವಾಗಿ ಹೇಳುವುದಾದರೆ ತಪಸ್ಸಿನ ಬಲದಿಂದಲೇ ಉಂಟಾಗಿದೆ.

ತಸ್ಮಾದಂಧ ಋಷಿಗಣಸ್ತಪಸ್ತಪ ಇತಿ ಪ್ರಿಯೇ ।
ಧರ್ಮಾನ್ವೇಷೀ ತಪಃ ಕರ್ತುಂ ಯತತೇ ಸತತಂ ಪ್ರಿಯೇ ॥೪೩॥

ಎಲೌ ಪ್ರಿಯೆಯೇ, ಆದ್ದರಿಂದ ಋಷಿಸಮೂಹವು ಬೇರೆ ಎಲ್ಲ ವಿಷಯದಲ್ಲಿಯೂ ಏನನ್ನೂ ಗಮನಿಸದೆ ಕುರುಡಾಗಿ ತಪಸ್ಸು ತಪಸ್ಸು ಎಂದು ಹೇಳುತ್ತಾ ಸತತವಾಗಿ ತಪಸ್ಸನ್ನು ಮಾಡಲು ಪ್ರಯತ್ನ ಪಡುತ್ತದೆ.

ಅಮರತ್ವಂ ವಶಿತ್ವಂ ಚ ತಪಸಾ ಪ್ರಾರ್ಥಯೇತ್ ಸದಾ ।
ಏತತ್ತೇ ಕಥಿತಂ ಸರ್ವಂ ಶೃಣ್ವಂತ್ಯಾಸ್ತೇ ಶ್ರುತಂ ಪ್ರಿಯೇ ।
ಪ್ರಿಯಾರ್ಥಮೃಷಿಸಂಘಸ್ಯ ಪ್ರಜಾನಾಂ ಹಿತಕಾಮ್ಯಯಾ ॥೪೪॥

ಅಮರತ್ವವನ್ನೂ ಮತ್ತು ವಶಿತ್ವವನ್ನೂ ಅದು ತನ್ನ ತಪಸ್ಸಿನಿಂದ ಪ್ರಾರ್ಥನೆಯನ್ನು ಮಾಡುತ್ತದೆ. ಎಲೌ ಪ್ರಿಯೆಯೇ, ಪ್ರಶ್ನೆಯನ್ನು ಕೇಳಿದ ನಿನ್ನ ಸಲುವಾಗಿ ಈ ಋಷಿ ಸಮೂಹಗಳ ಸಲುವಾಗಿ ಮತ್ತು ಪ್ರಜೆಗಳ ಹಿತವನ್ನು ಬಯಸಿ ಇವೆಲ್ಲವನ್ನೂ ಹೇಳಿದ್ದೇನೆ.

ನಾರದಃ

ಏವಂ ಬ್ರುವಂತಂ ದೇವೇಶಮೃಷಯಶ್ಚಾಪಿ ತುಷ್ಟುವುಃ ।
ಭೂಯಃ ಪರಮಕಂ ಯತ್ನಂ ತದಾಪ್ರಭೃತಿ ಚಕ್ರಿರೇ ॥೪೫॥

ನಾರದ– ದೇವೇಶನು ಹೀಗೆ ಹೇಳುತ್ತಿರಲು ಋಷಿಗಳು ಅವನನ್ನು ಸ್ತೋತ್ರ ಮಾಡಿ ಅಲ್ಲಿಂದ ಆರಂಭಿಸಿ ತಮ್ಮ ತಪಸ್ಸಿನ ವಿಷಯದಲ್ಲಿ ಇನ್ನೂ ಹೆಚ್ಚಿನ ಪ್ರಯತ್ನವನ್ನು ಮಾಡಿದರು.

॥ ಇತಿ ಶ್ರೀಮನ್ಮಹಾಭಾರತೇ ಅನುಶಾಸನಪರ್ವಣಿ ದಾನಧರ್ಮಪರ್ವಣಿ
ಸಪ್ತನವತ್ಯುತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ತೊಂಬತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ತೊಂಬತ್ತೆಂಟನೆಯ ಅಧ್ಯಾಯ

ಉಮಾ-ಮಹೇಶ್ವರರ ಸಂವಾದ. ಸಾಧಾರಣಧರ್ಮದ ಕಥನ.

ಉಮಾ

ಉಕ್ತಸ್ತ್ವಯಾ ತ್ರಿವರ್ಗಸ್ಯ ಧರ್ಮಃ ಪರಮಕಃ ಶುಭಃ ।
ಸರ್ವವ್ಯಾಪೀ ತು ಯೋ ಧರ್ಮೋ ಭಗವಂಸ್ತದ್ ಬ್ರವೀತು ಮೇ ॥೧॥

ಉಮಾ– ಪೂಜ್ಯನೇ, ನೀನು ಧರ್ಮಾರ್ಥಕಾಮಗಳಿಗೆ ಸಂಬಂಧಿಸಿದ, ಶ್ರೇಷ್ಠವಾದ, ಶುಭವಾದ ಧರ್ಮಗಳನ್ನು ಹೇಳಿದ್ದೀಯೆ. ಸರ್ವವ್ಯಾಪಿಯಾದ (ಸರ್ವ ಸಾಧಾರಣವಾದ) ಧರ್ಮಗಳನ್ನು ಹೇಳು.

ಮಹೇಶ್ವರಃ

ಬ್ರಹ್ಮಣಾ ಲೋಕಸಂಸಾರೇ ಸೃಷ್ಟಾ ಧಾತ್ರಾ ಗುಣಾರ್ಥಿನಾ ।
ಲೋಕಾಂಸ್ತಾರಯಿತುಂ ಯುಕ್ತಾ ಮರ್ತ್ಯೇಷು ಕ್ಷಿತಿದೇವತಾಃ ॥೨॥

ಮಹೇಶ್ವರ– ಲೋಕಯಾತ್ರೆಗಾಗಿ ಸದ್ಗುಣಗಳನ್ನು ಅಪೇಕ್ಷಿಸಿದ ಬ್ರಹ್ಮದೇವರು ಲೋಕಗಳನ್ನು ಸಂಕಟದಿಂದ ಪಾರು ಮಾಡಲು ಮನುಷ್ಯರಲ್ಲಿ ಬ್ರಾಹ್ಮಣರನ್ನು ಇಟ್ಟರು.

ತೇಷು ತಾವತ್ಪ್ರವಕ್ಷ್ಯಾಮಿ ಧರ್ಮಂ ಶುಭಫಲೋದಯಮ್ ।
ಬ್ರಾಹ್ಮಣೇಷ್ವಭಯೋ ಧರ್ಮಃ ಪರಮಃ ಶುಭಲಕ್ಷಣಃ ॥೩॥

ಅವರಲ್ಲಿರುವ ಶುಭಫಲವನ್ನು ಕೊಡುವ ಧರ್ಮಗಳನ್ನು ಹೇಳುವೆನು. ಬ್ರಾಹ್ಮಣರಲ್ಲಿರುವ ಅಭಯ ಧರ್ಮವು ಪರಮ ಶುಭವಾದುದು.

ಇಮೇ ಹಿ ಧರ್ಮಾ ಲೋಕಾರ್ಥಂ ಪೂರ್ವಂ ಸೃಷ್ಟಾಃ ಸ್ವಯಂಭುವಾ ।
ಪೃಥಿವ್ಯಾಂ ಸಜ್ಜನೈರ್ನಿತ್ಯಂ ಕೀರ್ತ್ಯಮಾನಂ ನಿಬೋಧ ಮೇ ॥೪॥

ಲೋಕದ ಹಿತಕ್ಕಾಗಿ ಬ್ರಹ್ಮದೇವರು ಮೊದಲು ಈ ಧರ್ಮವನ್ನು ಸೃಷ್ಟಿಸಿದರು. ಇದನ್ನು ಭೂಮಿಯಲ್ಲಿ ಸಜ್ಜನರು ಯಾವಾಗಲೂ ಹೇಳುತ್ತಾರೆ. ಅಂತಹ ಧರ್ಮಗಳನ್ನು ಕೇಳು.

ಸ್ವದಾರನಿರತಿರ್ಧರ್ಮೋ ನಿತ್ಯಂ ಜಪ್ಯಂ ತಥೈವ ಚ ।
ಸರ್ವಾತಿಥ್ಯಂ ತ್ರಿವರ್ಗಸ್ಯ ಯಥಾಶಕ್ತಿ ದಿವಾನಿಶಮ್ ॥೫॥

ತನ್ನ ಪತ್ನಿಯಲ್ಲೇ ತೃಪ್ತಿ, ನಿತ್ಯವೂ ಜಪ, ಹಗಲೂ ಮತ್ತು ರಾತ್ರಿಯೂ ಶಕ್ತಿಗೆ ಅನುಗುಣವಾಗಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರ ಆತಿಥ್ಯ (ಇವು ಬ್ರಾಹ್ಮಣರ ಧರ್ಮಗಳು).

ಶೂದ್ರೋ ಧರ್ಮಪರೋ ನಿತ್ಯಂ ಶುಶ್ರೂಷಾಭಿಮನಾ ಭವೇತ್ ॥೬॥

ಧರ್ಮಪರನಾದ ಶೂದ್ರನು ಯಾವಾಗಲೂ ಶುಶ್ರೂಷೆಯಲ್ಲಿ ರತನಾಗಿರಬೇಕು.

ತ್ರೈವಿದ್ಯೋ ಬ್ರಾಹ್ಮಣೋ ವೃದ್ಧೋ ನ ಚಾಧ್ಯಯನಜೀವಕಃ ।
ತ್ರಿವರ್ಗಂ ತು ವ್ಯತಿಕ್ರಾಂತಸ್ತಸ್ಯ ಧರ್ಮಃ ಸನಾತನಃ ॥೭॥

ವೇದವಿದ್ಯಾಸಂಪನ್ನನಾಗಿ ವೃದ್ಧನಾಗಿ ಅಧ್ಯಯನದಿಂದ ಜೀವಿಸದಿರುವ ಬ್ರಾಹ್ಮಣನು ಧರ್ಮಾರ್ಥಕಾಮಗಳನ್ನು ಮೀರಿರುತ್ತಾನೆ. ಅವನ ಧರ್ಮವು ಸನಾತನವಾದುದು (ಮೋಕ್ಷಪ್ರದವಾದುದು).

ಷಟ್ ಕರ್ಮಾಣಿ ಚ ಪ್ರೋಕ್ತಾನಿ ಸೃಷ್ಟಾನಿ ಬ್ರಹ್ಮಣಾ ಪುರಾ ।
ಧರ್ಮಿಷ್ಠಾನಿ ವರಿಷ್ಠಾನಿ ಯಾನಿ ತಾನಿ ಶೃಣೂತ್ತಮೇ ॥೮॥

ಎಲೈ ಶ್ರೇಷ್ಠಳೇ, ಬ್ರಹ್ಮದೇವರು ಹಿಂದೆ ಸೃಷ್ಟಿಮಾಡಿದ ಶ್ರೇಷ್ಠವೂ, ಧರ್ಮಿಷ್ಠವೂ ಆದ ಆರು ಕರ್ಮಗಳನ್ನು ಕೇಳು.

ಯಜನಂ ಯಾಜನಂ ಚೈವ ದಾನಂ ಪಾತ್ರೇ ಪ್ರತಿಗ್ರಹಃ ।
ಅಧ್ಯಾಪನಮಧ್ಯಯನಂ ಷಟ್‌ಕರ್ಮಾ ಧರ್ಮಭಾಗೃಜುಃ ॥೯॥

ಯಜನ, ಯಾಜನ, ಪಾತ್ರರಲ್ಲಿ ದಾನ, ಪ್ರತಿಗ್ರಹ, ಅಧ್ಯಯನ ಮತ್ತು ಅಧ್ಯಾಪನ ಈ ಆರು ಕರ್ಮಗಳು ಧರ್ಮವನ್ನು ಸಂಪಾದಿಸಿ ಕೊಡುವ ಋಜುವಾದವುಗಳು.

ನಿತ್ಯಸ್ವಾಧ್ಯಾಯತೋ ಧರ್ಮೋ ನಿತ್ಯಯಜ್ಞಃ ಸನಾತನಃ ।
ದಾನಂ ಪ್ರಶಸ್ಯತೇ ನಿತ್ಯಂ ಬ್ರಾಹ್ಮಣೇಷು ತ್ರಿಕರ್ಮಸು ॥೧೦॥

ನೂರ ತೊಂಬತ್ತೆಂಟನೆಯ ಅಧ್ಯಾಯ

ಉಮಾ-ಮಹೇಶ್ವರರ ಸಂವಾದ. ಸಾಧಾರಣಧರ್ಮದ ಕಥನ.

ಉಮಾ

ಉಕ್ತಸ್ತ್ವಯಾ ತ್ರಿವರ್ಗಸ್ಯ ಧರ್ಮಃ ಪರಮಕಃ ಶುಭಃ ।
ಸರ್ವವ್ಯಾಪೀ ತು ಯೋ ಧರ್ಮೋ ಭಗವಂಸ್ತದ್ ಬ್ರವೀತು ಮೇ ॥೧॥

ಉಮಾ- ಪೂಜ್ಯನೇ, ನೀನು ಧರ್ಮಾರ್ಥಕಾಮಗಳಿಗೆ ಸಂಬಂಧಿಸಿದ, ಶ್ರೇಷ್ಠವಾದ, ಶುಭವಾದ ಧರ್ಮಗಳನ್ನು ಹೇಳಿದ್ದೀಯೆ. ಸರ್ವವ್ಯಾಪಿಯಾದ (ಸರ್ವ ಸಾಧಾರಣವಾದ) ಧರ್ಮಗಳನ್ನು ಹೇಳು.

ಮಹೇಶ್ವರಃ

ಬ್ರಹ್ಮಣಾ ಲೋಕಸಂಸಾರೇ ಸೃಷ್ಟಾ ಧಾತ್ರಾ ಗುಣಾರ್ಥಿನಾ ।
ಲೋಕಾಂಸ್ತಾರಯಿತುಂ ಯುಕ್ತಾ ಮರ್ತ್ಯೇಷು ಕ್ಷಿತಿದೇವತಾಃ ॥೨॥

ಮಹೇಶ್ವರ- ಲೋಕಯಾತ್ರೆಗಾಗಿ ಸದ್ಗುಣಗಳನ್ನು ಅಪೇಕ್ಷಿಸಿದ ಬ್ರಹ್ಮದೇವರು ಲೋಕಗಳನ್ನು ಸಂಕಟದಿಂದ ಪಾರು ಮಾಡಲು ಮನುಷ್ಯರಲ್ಲಿ ಬ್ರಾಹ್ಮಣರನ್ನು ಇಟ್ಟರು.

ತೇಷು ತಾವತ್ಪ್ರವಕ್ಷ್ಯಾಮಿ ಧರ್ಮಂ ಶುಭಫಲೋದಯಮ್ ।
ಬ್ರಾಹ್ಮಣೇಷ್ವಭಯೋ ಧರ್ಮಃ ಪರಮಃ ಶುಭಲಕ್ಷಣಃ ॥೩॥

ಅವರಲ್ಲಿರುವ ಶುಭಫಲವನ್ನು ಕೊಡುವ ಧರ್ಮಗಳನ್ನು ಹೇಳುವೆನು. ಬ್ರಾಹ್ಮಣರಲ್ಲಿರುವ ಅಭಯ ಧರ್ಮವು ಪರಮ ಶುಭವಾದುದು.

ಇಮೇ ಹಿ ಧರ್ಮಾ ಲೋಕಾರ್ಥಂ ಪೂರ್ವಂ ಸೃಷ್ಟಾಃ ಸ್ವಯಂಭುವಾ ।
ಪೃಥಿವ್ಯಾಂ ಸಜ್ಜನೈರ್ನಿತ್ಯಂ ಕೀರ್ತ್ಯಮಾನಂ ನಿಬೋಧ ಮೇ ॥೪॥

ಲೋಕದ ಹಿತಕ್ಕಾಗಿ ಬ್ರಹ್ಮದೇವರು ಮೊದಲು ಈ ಧರ್ಮವನ್ನು ಸೃಷ್ಟಿಸಿದರು. ಇದನ್ನು ಭೂಮಿಯಲ್ಲಿ ಸಜ್ಜನರು ಯಾವಾಗಲೂ ಹೇಳುತ್ತಾರೆ. ಅಂತಹ ಧರ್ಮಗಳನ್ನು ಕೇಳು.

ಸ್ವದಾರನಿರತಿರ್ಧರ್ಮೋ ನಿತ್ಯಂ ಜಪ್ಯಂ ತಥೈವ ಚ ।
ಸರ್ವಾತಿಥ್ಯಂ ತ್ರಿವರ್ಗಸ್ಯ ಯಥಾಶಕ್ತಿ ದಿವಾನಿಶಮ್ ॥೫॥

ತನ್ನ ಪತ್ನಿಯಲ್ಲೇ ತೃಪ್ತಿ, ನಿತ್ಯವೂ ಜಪ, ಹಗಲೂ ಮತ್ತು ರಾತ್ರಿಯೂ ಶಕ್ತಿಗೆ ಅನುಗುಣವಾಗಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರ ಆತಿಥ್ಯ (ಇವು ಬ್ರಾಹ್ಮಣರ ಧರ್ಮಗಳು).

ಶೂದ್ರೋ ಧರ್ಮಪರೋ ನಿತ್ಯಂ ಶುಶ್ರೂಷಾಭಿಮನಾ ಭವೇತ್ ॥೬॥

ಧರ್ಮಪರನಾದ ಶೂದ್ರನು ಯಾವಾಗಲೂ ಶುಶ್ರೂಷೆಯಲ್ಲಿ ರತನಾಗಿರಬೇಕು.

ತ್ರೈವಿದ್ಯೋ ಬ್ರಾಹ್ಮಣೋ ವೃದ್ಧೋ ನ ಚಾಧ್ಯಯನಜೀವಕಃ ।
ತ್ರಿವರ್ಗಂ ತು ವ್ಯತಿಕ್ರಾಂತಸ್ತಸ್ಯ ಧರ್ಮಃ ಸನಾತನಃ ॥೭॥

ವೇದವಿದ್ಯಾಸಂಪನ್ನನಾಗಿ ವೃದ್ಧನಾಗಿ ಅಧ್ಯಯನದಿಂದ ಜೀವಿಸದಿರುವ ಬ್ರಾಹ್ಮಣನು ಧರ್ಮಾರ್ಥಕಾಮಗಳನ್ನು ಮೀರಿರುತ್ತಾನೆ. ಅವನ ಧರ್ಮವು ಸನಾತನವಾದುದು (ಮೋಕ್ಷಪ್ರದವಾದುದು).

ಷಟ್ ಕರ್ಮಾಣಿ ಚ ಪ್ರೋಕ್ತಾನಿ ಸೃಷ್ಟಾನಿ ಬ್ರಹ್ಮಣಾ ಪುರಾ ।
ಧರ್ಮಿಷ್ಠಾನಿ ವರಿಷ್ಠಾನಿ ಯಾನಿ ತಾನಿ ಶೃಣೂತ್ತಮೇ ॥೮॥

ಎಲೈ ಶ್ರೇಷ್ಠಳೇ, ಬ್ರಹ್ಮದೇವರು ಹಿಂದೆ ಸೃಷ್ಟಿಮಾಡಿದ ಶ್ರೇಷ್ಠವೂ, ಧರ್ಮಿಷ್ಠವೂ ಆದ ಆರು ಕರ್ಮಗಳನ್ನು ಕೇಳು.

ಯಜನಂ ಯಾಜನಂ ಚೈವ ದಾನಂ ಪಾತ್ರೇ ಪ್ರತಿಗ್ರಹಃ ।
ಅಧ್ಯಾಪನಮಧ್ಯಯನಂ ಷಟ್‌ಕರ್ಮಾ ಧರ್ಮಭಾಗೃಜುಃ ॥೯॥

ಯಜನ, ಯಾಜನ, ಪಾತ್ರರಲ್ಲಿ ದಾನ, ಪ್ರತಿಗ್ರಹ, ಅಧ್ಯಯನ ಮತ್ತು ಅಧ್ಯಾಪನ ಈ ಆರು ಕರ್ಮಗಳು ಧರ್ಮವನ್ನು ಸಂಪಾದಿಸಿ ಕೊಡುವ ಋಜುವಾದವುಗಳು.

ನಿತ್ಯಸ್ವಾಧ್ಯಾಯತೋ ಧರ್ಮೋ ನಿತ್ಯಯಜ್ಞಃ ಸನಾತನಃ ।
ದಾನಂ ಪ್ರಶಸ್ಯತೇ ನಿತ್ಯಂ ಬ್ರಾಹ್ಮಣೇಷು ತ್ರಿಕರ್ಮಸು ॥೧೦॥

ಅದರಲ್ಲಿ ಬ್ರಾಹ್ಮಣರಲ್ಲಿ ನಿತ್ಯ ಅಧ್ಯಯನ, ನಿತ್ಯಧರ್ಮ ಮತ್ತು ನಿತ್ಯದಾನ- ಈ ಮೂರು ಕರ್ಮಗಳು ಪ್ರಶಸ್ತವಾದವುಗಳು.

ಅಯಂ ಪರಮಕೋ ಧರ್ಮಃ ಸಂವೃತಃ ಸತ್ಸು ವಿದ್ಯತೇ ।
ಗರ್ಭಸ್ಥಾನೇ ವಿಶುದ್ಧಾನಾಂ ಧರ್ಮಸ್ಯ ನಿಯಮೋ ಮಹಾನ್ ॥೧೧॥

ಈ ಶ್ರೇಷ್ಠ ಧರ್ಮಗಳು ಗರ್ಭದಿಂದಲೂ ಶುದ್ಧರಾದ ಸಜ್ಜನರಲ್ಲಿ ಇರುತ್ತವೆ. ಅಂತಹವರಿಗೆ ಧರ್ಮದ ನಿಯಮವು ಬಹಳ ದೊಡ್ಡದಾಗಿರುತ್ತದೆ.

ಪಂಚಯಜ್ಞವಿಶುದ್ಧಾತ್ಮಾ ಋತುನಿತ್ಯೋಽನಸೂಯಕಃ ।
ದಾಂತೋ ಬ್ರಾಹ್ಮಣಸತ್ಕರ್ತಾ ಸುಸಮ್ಮೃಷ್ಟನಿವೇಶನಃ ॥೧೨॥

ಚಕ್ಷುರ್ದೋ ಮನದೋ ಜಿಹ್ವಾಸ್ನಿಗ್ಧವರ್ಣಪ್ರದಃ ಸದಾ ।
ಅತಿಥ್ಯಭ್ಯಾಗತರತಃ ಶೇಷಾನ್ನಕೃತಭೋಜನಃ ॥೧೩॥

ಪಾದ್ಯಮರ್ಘ್ಯಂ ಯಥಾನ್ಯಾಯಮಾಸನಂ ಶಯನಂ ತಥಾ ।
ದೀಪಂ ಪ್ರತಿಶ್ರಯಂ ಚೈವ ಯೋ ದದಾತಿ ಸ ಧಾರ್ಮಿಕಃ ॥೧೪॥

ನಿತ್ಯವೂ ಪಂಚಯಜ್ಞಗಳನ್ನು ಮಾಡಿ ವಿಶುದ್ಧನಾಗಿರುವುದು, ಋತುಕಾಲದಲ್ಲಿ ಪತ್ನೀಗಮನ, ಅಸೂಯಾ ರಾಹಿತ್ಯ, ಇಂದ್ರಿಯನಿಗ್ರಹ, ಬ್ರಾಹ್ಮಣ ಸತ್ಕಾರ, ಗೃಹವನ್ನು ಸಾರಿಸಿ ಶುದ್ಧಿ ಮಾಡುವುದು, ಅತಿಥಿ-ಅಭ್ಯಾಗತರಿಗೆ ಚಕ್ಷುಸ್ಸನ್ನೂ, ಮನಸ್ಸನ್ನೂ ನಾಲಿಗೆಯಿಂದ ಸ್ನೇಹಯುಕ್ತವಾದ ಮಾತುಗಳನ್ನೂ ಕೊಡುವುದು, ಯಜ್ಞವಾದ ಮೇಲೆ ಅತಿಥಿಗಳು ಊಟ ಮಾಡಿದ ಮೇಲೆ ಉಳಿದ ಅನ್ನವನ್ನು ಭೋಜನ ಮಾಡುವುದು, ಅತಿಥಿಗಳಿಗೆ ಪಾದ್ಯ-ಅರ್ಘ್ಯ-ಆಸನ-ಶಯನ-ದೀಪ ಮತ್ತು ವಾಸಿಸುವ ಸ್ಥಳ ಇವುಗಳನ್ನು ಕೊಡುವುದು - ಇವುಗಳನ್ನು ಮಾಡುವವನು ಧಾರ್ಮಿಕನೆನಿಸುತ್ತಾನೆ.

ಪ್ರಾತರುತ್ಥಾಯ ವೈ ಪಶ್ಚಾದ್ ಭೋಜನೇ ತು ನಿಮಂತ್ರಯೇತ್ ।
ಸತೃತ್ಯಾನುವ್ರಜೇದ್ ಯಶ್ಚ ತಸ್ಯ ಧರ್ಮಃ ಸನಾತನಃ ॥೧೫॥

ಪ್ರಾತಃಕಾಲದಲ್ಲಿ ಬ್ರಾಹ್ಮಣರನ್ನು ಭೋಜನಕ್ಕೆ ನಿಮಂತ್ರಿಸಿ ಅವರನ್ನು ಸತ್ಕರಿಸಿ ಅನಂತರ ಯಾವನು ಅವರನ್ನು ಹಿಂಬಾಲಿಸಿ ಹೋಗುತ್ತಾನೆಯೋ ಅವನ ಧರ್ಮವು ಸನಾತನವಾದುದು.

ಪ್ರವೃತ್ತಿಲಕ್ಷಣೋ ಧರ್ಮೋ ಗೃಹಸ್ಥೇಷು ವಿಧೀಯತೇ ।
ತದಹಂ ಕೀರ್ತಯಿಷ್ಯಾಮಿ ತ್ರಿವರ್ಗೇಷು ಚ ಯದ್ ಯಥಾ ॥೧೬॥

ಗೃಹಸ್ಥರಿಗೆ ಪ್ರವೃತ್ತಿರೂಪವಾದ ಧರ್ಮವು ಹೇಳಲ್ಪಡುತ್ತದೆ. ತ್ರಿವರ್ಗಗಳಲ್ಲಿ ಯಾವುದನ್ನು ಹೇಗೆ ಮಾಡಬೇಕೆಂದು ನಾನು ಹೇಳುವೆನು.

ಏಕೇನಾಂಶೇನ ಧರ್ಮಾರ್ಥಃ ಕರ್ತವ್ಯೋ ಹಿತಮಿಚ್ಛತಾ ।
ಏಕೇನಾಂಶೇನ ಕಾಮಾರ್ಥಮೇಕಮಂಶಂ ವಿವರ್ಧಯೇತ್ ॥೧೭॥

ತನ್ನ ಹಿತವನ್ನು ಬಯಸುವ ಮನುಷ್ಯನು ತಾನು ಸಂಪಾದನೆ ಮಾಡಿದುದರಲ್ಲಿ ಒಂದು ಭಾಗವನ್ನು ಧರ್ಮಕ್ಕಾಗಿ ಇಡಬೇಕು. ಒಂದು ಭಾಗವನ್ನು ಭೋಗಕ್ಕಾಗಿ ಇಡಬೇಕು. ಒಂದು ಭಾಗವನ್ನು ಧನದ ಅಭಿವೃದ್ಧಿಗಾಗಿ ಇಡಬೇಕು.

ನಿವೃತ್ತಿಲಕ್ಷಣಃ ಪುಣ್ಯೋ ಧರ್ಮೋ ಮೋಕ್ಷೇ ವಿಧೀಯತೇ ।
ತಸ್ಯ ವೃತ್ತಿಂ ಪ್ರವಕ್ಷ್ಯಾಮಿ ತಾಂ ಶೃಣುಷ್ವ ಸಮಾಹಿತಾ ॥೧೮॥

ಮೋಕ್ಷಕ್ಕಾಗಿ ನಿವೃತ್ತಿರೂಪವಾದ ಪವಿತ್ರವಾದ ಧರ್ಮವು ವಿಧಿಸಲ್ಪಡುತ್ತದೆ. ಅದರ ಸ್ವರೂಪವನ್ನು ಹೇಳುವೆನು. ಸಮಾಧಾನದಿಂದ ಕೇಳು.

ಸರ್ವಭೂತದಯಾ ಧರ್ಮೋ ನಿವೃತ್ತಿಪರಮಃ ಸದಾ ।
ಬುಭುಕ್ಷಿತಂ ಪಿಪಾಸಾರ್ತಮತಿಥಿಂ ಶ್ರಾಂತಮಾಗತಮ್ ।
ಅರ್ಚಯಂತಿ ವರಾರೋಹೇ ತೇಷಾಮಪಿ ಫಲಂ ಮಹತ್ ॥೧೯॥

ಸರ್ವಭೂತ ದಯೆಯು ಶ್ರೇಷ್ಠವಾದ ನಿವೃತ್ತಿ ಧರ್ಮ. ಎಲೌ ಸುಂದರಿಯೇ, ಹಸಿದು ಬಾಯಾರಿಕೆಯಿಂದ ಬಳಲಿ ಬಂದ ಅತಿಥಿಯನ್ನು ಯಾರು ಅರ್ಚಿಸುತ್ತಾರೋ ಅವರಿಗೆ ಮಹಾಫಲವಿದೆ.

ಪಾತ್ರಮಿತ್ಯೇವ ದಾತವ್ಯಂ ಸರ್ವಸ್ಮೈ ಧರ್ಮಕಾಂಕ್ಷಿಭಿಃ ।
ಆಗಮಿಷ್ಯತಿ ಯತ್ಪಾತ್ರಂ ತತ್ಪಾತ್ರಂ ತಾರಯಿಷ್ಯತಿ ॥೨೦॥

ಧರ್ಮವನ್ನು ಬಯಸುವವರು ಪಾತ್ರರನ್ನು ಗಮನಿಸಿಯೇ ಅವರಿಗೆ ದಾನವನ್ನು ಮಾಡಬೇಕು (ಬಂಧು-ಮಿತ್ರ ಎಂದು ಗಮನಿಸಿ ದಾನ ಮಾಡುವುದಲ್ಲ). ಯಾವ

ಸತ್ಪಾತ್ರವು ತಾನಾಗಿಯೇ ಒದಗಿ ಬರುವುದೋ ಅದು ದಾತೃವನ್ನು ಸಂಕಟದಿಂದ ಪಾರು ಮಾಡುತ್ತದೆ.

ಕಾಲೇ ಸಂಪ್ರಾಪ್ತಮತಿಥಿಂ ಭೋಕ್ತುಕಾಮಮುಪಸ್ಥಿತಮ್ ।
ವಿತ್ತಂ ಸಂಭಾವಯೇತ್ತಸ್ಯ ನ್ಯಾಸೋಽಯಮಿತಿ ನಿಶ್ಚಿತಃ ॥೨೧॥

ಯೋಗ್ಯವಾದ ಕಾಲದಲ್ಲಿ ಭೋಜನವನ್ನು ಬಯಸಿ ಬಂದ ಅತಿಥಿಯನ್ನು ನ್ಯಾಸವಾಗಿಟ್ಟಿರುವ ನಿಧಿಯೆಂದು ನಿಶ್ಚಯಿಸಿ ಪೂಜಿಸಬೇಕು (ಲಕ್ಷಾಲಂಕಾರ).

ತಸ್ಯ ಪ್ರಭಾಂ ಯಥಾಶಕ್ತ್ಯಾ ಸೌಮ್ಯಚಿತ್ತಃ ಪ್ರಯೋಜಯೇತ್ ।
ಚಿತ್ತಮೂಲೋ ಭವೇದ್ಧರ್ಮೋ ಧರ್ಮಮೂಲಂ ಭವೇದ್ ಯಶಃ ॥

ಅವನಿಗೆ ಸೌಮ್ಯವಾದ ಮನಸ್ಸಿನಿಂದ, ತನ್ನ ಶಕ್ತಿಗೆ ಅನುಗುಣವಾಗಿ ಒಳ್ಳೆಯ ಕಾಂತಿಯನ್ನು ಕೊಡುವ ಭೋಜನವನ್ನು ನೀಡಬೇಕು (ಲಕ್ಷಾಲಂಕಾರ). ಧರ್ಮದ ಮೂಲವು ಮನಸ್ಸಿನಲ್ಲಿದೆ. ಯಶಸ್ಸಿನ ಮೂಲವು ಧರ್ಮದಲ್ಲಿದೆ.

ತಸ್ಮಾತ್ ಸೌಮ್ಯೇನ ಚಿತ್ತೇನ ದಾತವ್ಯಂ ದೇವಿ ಸರ್ವಥಾ ।
ಸೌಮ್ಯಚಿತ್ತಸ್ತು ಯೋ ದದ್ಯಾತ್ ತದ್ಧಿ ದಾನಮನುತ್ತಮಮ್ ॥೨೩॥

ಎಲೌ ದೇವಿಯೇ, ಆದ್ದರಿಂದ ಸೌಮ್ಯಚಿತ್ತದಿಂದ ದಾನವನ್ನು ಮಾಡಬೇಕು. ಸೌಮ್ಯ ಚಿತ್ತದಿಂದ ಮಾಡುವ ದಾನವು ಶ್ರೇಷ್ಠವಾದುದು.

ಯಥಾಂಬುಬಿಂದುಭಿಃ ಸೂಕ್ಷ್ಮೈಃ ಪತದ್ಭಿರ್ಮೇದಿನೀತಳೇ ।
ಕೇದಾರಾಶ್ಚ ತಟಾಕಾನಿ ಸರಾಂಸಿ ಸರಿತಸ್ತಥಾ ॥೨೪॥

ತೋಯಪೂರ್ಣಾನಿ ದೃಶ್ಯಂತೇ ಅಪ್ರತರ್ಕ್ಯಾಣಿ ಶೋಭನೇ ।
ಅಲ್ಪಮಲ್ಪಮಪಿ ಹ್ಯೇತದ್ ದೀಯಮಾನಂ ವಿವರ್ಧತೇ ॥೨೫॥

ಹೇಗೆ ಮಳೆಯ ನೀರು ಭೂಮಿಯಲ್ಲಿ ಹನಿ-ಹನಿಯಾಗಿ ಬಿದ್ದರೂ ನಾವು ಯೋಚಿಸಲು ಸಾಧ್ಯವಿಲ್ಲದಂತೆ ಕೆರೆಗಳು, ಕೊಳಗಳು, ಸರೋವರಗಳು, ನದಿಗಳು ಜಲಪೂರ್ಣವಾಗಿ ಕಂಡುಬರುತ್ತವೆಯೋ ಎಲೌ ಶೋಭನೆಯೇ, ಅದರಂತೆ ಅಲ್ಪ-ಅಲ್ಪವಾಗಿ ದಾನ ಮಾಡಿದರೂ ಸಹ ವೃದ್ಧಿಯನ್ನು ಹೊಂದುತ್ತವೆ.

ಪೀಡಯಾऽಪಿ ಚ ಭೃತ್ಯಾನಾಂ ದಾನಮೇವ ವಿಶಿಷ್ಯತೇ ।
ಪುತ್ರದಾರಾ ಧನಂ ಧಾನ್ಯಂ ನ ಮೃತಾನನುಗಚ್ಛತಿ ॥೨೬॥

ಭೃತ್ಯವರ್ಗಕ್ಕೆ ಪೀಡೆಯುಂಟಾದರೂ ದಾನವನ್ನು ಕೊಡುವ ಶ್ರೇಷ್ಠವಾದುದು. ಪುತ್ರರು, ಪತ್ನಿ, ಧನ, ಧಾನ್ಯಗಳು ಮೃತರನ್ನು ಹಿಂಬಾಲಿಸುವುದಿಲ್ಲ.

ಶ್ರೇಯೋ ದಾನಂ ಚ ಭೋಗಶ್ಚ ಧನಂ ಪ್ರಾಪ್ಯ ಯಶಸ್ವಿನಿ ।
ದಾನೇನ ಹಿ ಮಹಾಭಾಗಾ ಭವಂತಿ ಮನುಜಾಧಿಪಾಃ ॥೨೭॥

ಎಲೌ ಯಶಸ್ವಿನಿಯೇ, ಧನವನ್ನು ಸಂಪಾದಿಸಿದ ಮೇಲೆ ದಾನ ಮತ್ತು ಭೋಗಗಳು ಶ್ರೇಷ್ಠವಾದವುಗಳು. ದಾನವನ್ನು ಮಾಡಿದ ಮಹಾನುಭಾವರು ರಾಜರಾಗುತ್ತಾರೆ.

ನಾಸ್ತಿ ಭೂಮಿಸಮಂ ದಾನಂ ನಾಸ್ತಿ ದಾನಸಮೋ ನಿಧಿಃ ।
ನಾಸ್ತಿ ಸತ್ಯಾತ್ ಪರೋ ಧರ್ಮೋ ನಾನೃತಾತ್ ಪಾತಕಂ ಪರಮ್ ॥

ಭೂಮಿದಾನಕ್ಕೆ ಸಮನಾದ ದಾನವಿಲ್ಲ. ದಾನಕ್ಕೆ ಸಮನಾದ ನಿಧಿ ಇಲ್ಲ. ಸತ್ಯಕ್ಕಿಂತ ಶ್ರೇಷ್ಠವಾದ ಧರ್ಮವಿಲ್ಲ. ಸುಳ್ಳಿಗಿಂತಲೂ ನೀಚವಾದ ಪಾತಕವಿಲ್ಲ.

ಆಶ್ರಮೇ ಯಸ್ತು ತಪ್ಯೇತ ತಪೋ ಮೂಲಫಲಾಶನಃ ।
ಆದಿತ್ಯಾಭಿಮುಖೋ ಭೂತ್ವಾ ಜಟಾವಲ್ಕಲಸಂವೃತಃ ॥೨೯॥

ಮಂಡೂಕಶಾಯೀ ಹೇಮಂತೇ ಗ್ರೀಷ್ಮೇ ಪಂಚತಪಾ ಭವೇತ್ ।
ಸಮ್ಯಕ್ ತಪಶ್ಚರಂತೀಹ ಶ್ರದ್ದಧಾನಾ ವನಾಶ್ರಮೇ ।
ಗೃಹಾಶ್ರಮಸ್ಯ ತೇ ದೇವಿ ಕಲಾಂ ನಾರ್ಹಂತಿ ಷೋಡಶೀಮ್ ॥೩೦॥

ವಾನಪ್ರಸ್ಥಾಶ್ರಮದಲ್ಲಿ ಆಶ್ರಮದಲ್ಲಿ ಮೂಲಫಲಗಳನ್ನು ಸೇವಿಸಿ ಯಾರು ತಪಸ್ಸನ್ನು ಮಾಡುತ್ತಾರೆಯೋ, ಜಟಾವಲ್ಕಲಧಾರಿಗಳಾಗಿ ಸೂರ್ಯನಿಗೆ ಎದುರಾಗಿ ಯಾರು ತಪಸ್ಸನ್ನು ಮಾಡುತ್ತಾರೆಯೋ, ಹೇಮಂತ ಋತುವಿನಲ್ಲಿ ಮಂಡೂಕ ಶಯನವನ್ನು ಮಾಡಿ, ಗ್ರೀಷ್ಮ ಋತುವಿನಲ್ಲಿ ಪಂಚಾಗ್ನಿ ತಪಸ್ಸನ್ನು ಮಾಡಿ ಯಾರು ಶ್ರದ್ಧೆಯಿಂದ ಸರಿಯಾಗಿ ತಪಸ್ಸನ್ನು ಮಾಡುತ್ತಾರೆಯೋ ಎಲೌ ದೇವಿಯೇ, ಆ ತಪಸ್ಸೆಲ್ಲವೂ ಗೃಹಸ್ಥಾಶ್ರಮದ ತಪಸ್ಸಿನ ಹದಿನಾರನೆಯ ಒಂದು ಭಾಗಕ್ಕೂ ಸಮನಾಗುವುದಿಲ್ಲ.

ಉಮಾ

ಗೃಹಾಶ್ರಮಸ್ಯ ಯಾ ಚರ್ಯಾ ವ್ರತಾನಿ ನಿಯಮಾಶ್ಚ ಯೇ ।
ತಥಾ ಚ ದೇವತಾಃ ಪೂಜ್ಯಾಃ ಸತತಂ ಗೃಹಮೇಧಿನಾ ॥೩೧॥

ಯದ್ಯಚ್ಚ ಪರಿಹರ್ತವ್ಯಂ ಗೃಹಿಣಾಽತಿಥಿಪರ್ವಸು ।
ತತ್ಸರ್ವಂ ಶ್ರೋತುಮಿಚ್ಛಾಮಿ ಕಥ್ಯಮಾನಂ ತ್ವಯಾ ಪ್ರಭೋ ॥೩೨॥

ಉಮಾ– ಗೃಹಸ್ಥಾಶ್ರಮದ ಚರ್ಯೆ, ವ್ರತ-ನಿಯಮಗಳು, ಗೃಹಸ್ಥಾಶ್ರಮಿಗಳು ಪೂಜಿಸಬೇಕಾದ ದೇವತೆಗಳು, ಅತಿಥಿಗಳು ಬಂದಾಗ ಮತ್ತು ಪರ್ವಕಾಲದಲ್ಲಿ ಪರಿತ್ಯಾಗ ಮಾಡಬೇಕಾದ ಕಾರ್ಯಗಳು - ಎಲೈ ಪ್ರಭುವೇ, ಅವೆಲ್ಲವನ್ನೂ ನಿನ್ನಿಂದ ಕೇಳಲು ಬಯಸುತ್ತೇನೆ.

ಮಹೇಶ್ವರಃ

ಗೃಹಾಶ್ರಮಸ್ಯ ಯನ್ಮೂಲಂ ಫಲಂ ಧರ್ಮೋಽಯಮುತ್ತಮಃ ।
ಪಾದೈಶ್ಚತುರ್ಭಿಃ ಸತತಂ ಧರ್ಮೋ ಯತ್ರ ಪ್ರತಿಷ್ಠಿತಃ ॥೩೩॥

ಸಾರಭೂತಂ ವರಾರೋಹೇ ದಧ್ನೋ ಘೃತಮಿವೋದ್ಧೃತಮ್ ।
ತದಹಂ ತೇ ಪ್ರವಕ್ಷ್ಯಾಮಿ ಶ್ರೂಯತಾಂ ಧರ್ಮಚಾರಿಣಿ ॥೩೪॥

ಮಹೇಶ್ವರ– ಗೃಹಸ್ಥಾಶ್ರಮದ ಮೂಲವಾದುದು ಮತ್ತು ಫಲವಾದುದು ಈ ಶ್ರೇಷ್ಠವಾದ ಧರ್ಮ. ಅಲ್ಲಿ ಧರ್ಮವು ನಾಲ್ಕು ಪಾದಗಳಿಂದ ಚೆನ್ನಾಗಿ ಪ್ರತಿಷ್ಠಿತವಾಗಿರುತ್ತದೆ. ಎಲೈ ವರಾರೋಹೇ, ಮೊಸರಿನಿಂದ ಸಾರವಾದ ತುಪ್ಪವನ್ನು ಪಡೆದಂತೆ ಸಾರಭೂತವಾದ ಧರ್ಮವನ್ನು ನಿನಗೆ ಹೇಳುವೆನು. ಎಲೌ ಧರ್ಮಚಾರಿಣಿಯೇ, ಅದನ್ನು ಕೇಳು.

ಶುಶ್ರೂಷತೇ ಯಃ ಪಿತರಂ ಮಾತರಂ ಚ ಗೃಹಾಶ್ರಮೇ ।
ಭರ್ತಾರಂ ಚೈವ ಯಾ ನಾರೀ ಅಗ್ನಿಹೋತ್ರಂ ಚ ಯೇ ದ್ವಿಜಾಃ ॥೩೫॥

ತೇಷು ತೇಷು ಚ ಪ್ರೀಣಂತಿ ದೇವಾ ಇಂದ್ರಪುರೋಗಮಾಃ ।
ಪಿತರಃ ಪಿತೃಲೋಕಸ್ಥಾಃ ಸ್ವಧರ್ಮೇಣ ಸ ರಜ್ಯತೇ ॥೩೬॥

ಗೃಹಸ್ಥಾಶ್ರಮದಲ್ಲಿ ಯಾವನು ತಂದೆ-ತಾಯಿಗಳ ಸೇವೆಯನ್ನು ಮಾಡುತ್ತಾನೆಯೋ, ಯಾವಳು ಪತಿ ಸೇವೆಯನ್ನು ಮಾಡುತ್ತಾಳೆಯೋ, ಯಾವ ಬ್ರಾಹ್ಮಣರು ಅಗ್ನಿಹೋತ್ರವನ್ನು ಮಾಡುತ್ತಾರೆಯೋ ಅವರಲ್ಲಿ ಇಂದ್ರ ಮೊದಲಾದ ದೇವತೆಗಳು ಸಂತೋಷವನ್ನು ಹೊಂದುತ್ತಾರೆ. ತಮ್ಮ ತಮ್ಮ ಧರ್ಮವನ್ನು ಆಚರಿಸುತ್ತಿರುವ ಅವರನ್ನು ನೋಡಿ ಪಿತೃಲೋಕದಲ್ಲಿರುವ ಪಿತೃಗಳು ಅವರಲ್ಲಿ ಅನುರಾಗ ಹೊಂದುತ್ತಾರೆ.

ಉಮಾ

ಮಾತಾಪಿತೃವಿಯುಕ್ತಾನಾಂ ಕಾ ಚರ್ಯಾ ಗೃಹಮೇಧಿನಾಮ್ ।
ವಿಧವಾನಾಂ ಚ ನಾರೀಣಾಂ ಭವಾನೇತದ್ ಬ್ರವೀತು ಮೇ ॥೩೭॥

ಉಮಾ– ಮಾತಾ-ಪಿತೃಗಳು ಇಲ್ಲದಿರುವ ಗೃಹಸ್ಥರಿಗೆ ಯಾವ ಚರ್ಯೆ? ವಿಧವೆಯರಾದ ನಾರಿಯರಿಗೆ ಯಾವ ಚರ್ಯೆ? ಇದನ್ನು ನೀನು ಹೇಳಬೇಕು.

ಮಹೇಶ್ವರಃ

ದೇವತಾತಿಥಿಶುಶ್ರೂಷಾ ಗುರುವೃದ್ಧಾಭಿವಾದನಮ್ ।
ಅಹಿಂಸಾ ಸರ್ವಭೂತಾನಾಮಲೋಭಃ ಸತ್ಯಸಂಧತಾ ॥೩೮॥

ಬ್ರಹ್ಮಚರ್ಯಂ ಶರಣ್ಯತ್ವಂ ಶೌಚಂ ಪೂರ್ವಾಭಿಭಾಷಣಮ್ ।
ಕೃತಜ್ಞತ್ವಮಪೈಶುನ್ಯಂ ಸತತಂ ಧರ್ಮಶೀಲತಾ ॥೩೯॥

ಮಹೇಶ್ವರ– ದೇವತಾತಿಥಿ ಸೇವೆ, ಗುರು-ಹಿರಿಯರಿಗೆ ನಮಸ್ಕಾರ, ಸರ್ವ ಪ್ರಾಣಿಗಳಲ್ಲಿ ಅಹಿಂಸೆ, ಅಲೋಭ, ಸತ್ಯಸಂಧತೆ, ಬ್ರಹ್ಮಚರ್ಯ, ಶರಣಾಗತ ರಕ್ಷಣೆ, ಶೌಚ, ಮೊದಲು ಮಾತನಾಡಿಸುವುದು, ಕೃತಜ್ಞತೆ, ಚಾಡಿ ಹೇಳದಿರುವುದು, ಸತತವಾದ ಧರ್ಮಶೀಲತ್ವ,

ದಿನೇ ದ್ವಿರಭಿಷೇಕಂ ಚ ಪಿತೃದೈವತಪೂಜನಮ್ ।
ಗವಾಹ್ನಿಕಪ್ರದಾನಂ ಚ ಸಂವಿಭಾಗೋಽತಿಥಿಷ್ವಪಿ ॥೪೦॥

ದೀಪಂ ಪ್ರತಿಶ್ರಯಂ ಚೈವ ದದ್ಯಾತ್ ಪಾದ್ಯಾಸನಂ ತಥಾ ।
ಪಂಚಮೇಽಹನಿ ಷಷ್ಠೇ ವಾ ದ್ವಾದಶೇ ವಾಽಪ್ಯಥಾಷ್ಟಮೇ ।
ಚತುರ್ದಶೇ ಪಂಚದಶೇ ಬ್ರಹ್ಮಚಾರೀ ಸದಾ ಭವೇತ್ ॥೪೧॥

ದಿನದಲ್ಲಿ ಎರಡು ಬಾರಿ ಸ್ನಾನ, ಪಿತೃ-ದೇವತಾ ಪೂಜೆ, ನಿತ್ಯವೂ ಗೋಗ್ರಾಸ ಪ್ರದಾನ, ಅತಿಥಿಗಳಿಗೆ ಅನ್ನದಾನ, ದೀಪ, ವಾಸಸ್ಥಾನ, ಪಾದ್ಯ ಮತ್ತು ಆಸನಗಳನ್ನು ಕೊಡುವುದು (ಇವೆಲ್ಲವೂ ಮಾತಾ-ಪಿತೃ ಹೀನರಾದವರಿಗೂ ಮತ್ತು ವಿಧವೆಯರಿಗೂ ಸಾಧಾರಣವಾದ ಧರ್ಮಗಳು). ಪಂಚಮೀ, ಷಷ್ಠೀ, ದ್ವಾದಶೀ, ಅಷ್ಟಮೀ, ಚತುರ್ದಶೀ, ಪೌರ್ಣಮಾಸಿ ಮತ್ತು ಅಮಾವಾಸ್ಯೆಗಳಲ್ಲಿ ಯಾವಾಗಲೂ ಬ್ರಹ್ಮಚರ್ಯವನ್ನು ಪಾಲಿಸಬೇಕು.

ಶ್ಮಶ್ರುಕರ್ಮ ಶಿರೋಭ್ಯಂಗಮಂಜನಂ ದಂತಧಾವನಮ್ ।
ನೈತೇಷ್ವಹಃಸು ಕುರ್ವೀತ ತೇಷ್ವಲಕ್ಷ್ಮೀಃ ಪ್ರತಿಷ್ಠಿತಾ ॥೪೨॥

ಈ ದಿವಸಗಳಲ್ಲಿ ಕ್ಷೌರಕರ್ಮವನ್ನಾಗಲೀ, ಅಭ್ಯಂಗಸ್ನಾನವನ್ನಾಗಲೀ, ಎಣ್ಣೆ ಮಜ್ಜನವನ್ನಾಗಲೀ, ದಂತಧಾವನವನ್ನಾಗಲೀ ಮಾಡಬಾರದು. ಆ ದಿನ ಅವುಗಳಲ್ಲಿ ಅಲಕ್ಷ್ಮಿಯು ಇರುತ್ತಾಳೆ.

ವ್ರತೋಪವಾಸನಿಯಮಸ್ತಪೋ ದಾನಂ ಚ ಶಕ್ತಿತಃ ।
ಭರಣಂ ಭೃತ್ಯವರ್ಗಸ್ಯ ದೀನಾನಾಮನುಕಂಪನಮ್ ।
ಪರದಾರಾನ್ನಿವೃತ್ತಿಶ್ಚ ಸ್ವದಾರೇಷು ರತಿಃ ಸದಾ ॥೪೩॥

ವ್ರತೋಪವಾಸದ ನಿಯಮಗಳು, ತಪಸ್ಸು, ಶಕ್ತಿ ಇದ್ದಷ್ಟು ದಾನ, ಭೃತ್ಯರನ್ನು ಪೂಜಿಸುವುದು, ದೀನರಲ್ಲಿ ಅನುಕಂಪ, ಪರಪತ್ನಿಯರಿಂದ ನಿವೃತ್ತನಾಗುವುದು, ತನ್ನ ಪತ್ನಿಯಲ್ಲಿಯೇ ರತನಾಗುವುದು (ಇವು ಅಂತಹ ಗೃಹಸ್ಥನ ಸಾಧಾರಣ ಧರ್ಮಗಳು).

ಶರೀರಮೇಕಂ ದಂಪತ್ಯೋರ್ವಿಧಾತ್ರಾ ಪೂರ್ವನಿರ್ಮಿತಮ್ ।
ತಸ್ಮಾತ್ಸ್ವದಾರನಿರತೋ ಬ್ರಹ್ಮಚಾರೀ ವಿಧೀಯತೇ ॥೪೪॥

ಹಿಂದೆ ಬ್ರಹ್ಮದೇವರು ಪತಿ-ಪತ್ನಿಯರಿಗೆ ಸೇರಿ ಒಂದೇ ಶರೀರವನ್ನು ನಿರ್ಮಿಸಿದರು. ಆದ್ದರಿಂದ ಸ್ವದಾರನಿರತನಾದವನು ಬ್ರಹ್ಮಚಾರಿ ಎಂದು ಹೇಳಲ್ಪಡುತ್ತಾನೆ.

ಶೀಲವೃತ್ತವಿನೀತಸ್ಯ ನಿಗೃಹೀತೇಂದ್ರಿಯಸ್ಯ ಚ ।
ಆರ್ಜವೇ ವರ್ತಮಾನಸ್ಯ ಸರ್ವಭೂತಹಿತೈಷಿಣಃ ॥೪೫॥

ಪ್ರಿಯಾತಿಥೇಶ್ಚ ಕ್ಷಾಂತಸ್ಯ ಧರ್ಮಾರ್ಜಿತಧನಸ್ಯ ಚ ।
ಗೃಹಾಶ್ರಮಪದಸ್ಥಸ್ಯ ಕಿಮನ್ಯೈಃ ಕೃತ್ಯಮಾಶ್ರಮೈಃ ॥೪೬॥

ಶೀಲ-ವೃತ್ತದಿಂದ ವಿನಯವನ್ನು ಹೊಂದಿದ, ಇಂದ್ರಿಯಜಯವನ್ನು ಹೊಂದಿದ, ಆರ್ಜವದಲ್ಲಿ ರತನಾದ, ಸರ್ವಪ್ರಾಣಿ ಹಿತವನ್ನು ಬಯಸುವ, ಅತಿಥಿ ಪ್ರಿಯನಾದ, ಕ್ಷಮಾವಂತನಾದ, ಧರ್ಮದಿಂದ ಧನವನ್ನು ಗಳಿಸಿದ ಗೃಹಸ್ಥಾಶ್ರಮಿಗೆ ಉಳಿದ ಆಶ್ರಮಗಳಿಂದ ಏನು ಪ್ರಯೋಜನ?

ಯಥಾ ಮಾತರಮಾಶ್ರಿತ್ಯ ಸರ್ವೇ ಜೀವಂತಿ ಜಂತವಃ ।
ತಥಾ ಗೃಹಾಶ್ರಮಂ ಪ್ರಾಪ್ಯ ಸರ್ವೇ ಜೀವಂತಿ ಚಾಶ್ರಮಾಃ ॥೪೭॥

ಹೇಗೆ ತಾಯಿಯನ್ನು ಆಶ್ರಯಿಸಿ ಎಲ್ಲ ಪ್ರಾಣಿಗಳೂ ಬದುಕುತ್ತವೆಯೋ ಅದರಂತೆ ಗೃಹಸ್ಥಾಶ್ರಮವನ್ನು ಆಶ್ರಯಿಸಿ ಉಳಿದೆಲ್ಲಾ ಆಶ್ರಮಗಳೂ ಬದುಕುತ್ತವೆ.

ರಾಜಾನಃ ಸರ್ವಪಾಷಂಡಾಃ ಸರ್ವೇ ರಂಗೋಪಜೀವಿನಃ ।
ವ್ಯಾಳಗ್ರಹಾಶ್ಚ ಡಂಭಾಶ್ಚ ಚೋರಾ ರಾಜಭಟಾಸ್ತಥಾ ॥೪೮॥

ಸವಿದ್ಯಾಃ ಸರ್ವಶಿಲ್ಪಜ್ಞಾಃ ಸರ್ವೇ ಚೈವ ಚಿಕಿತ್ಸಕಾಃ ।
ದೂರಾಧ್ವಾನಂ ಪ್ರಪನ್ನಾಶ್ಚ ಕ್ಷೀಣಪಥ್ಯೋದನಾ ನರಾಃ ।
ಏತೇ ಚಾನ್ಯೇ ಚ ಬಹವಸ್ತರ್ಕಯಂತಿ ಗೃಹಾಶ್ರಮಮ್ ॥೪೯॥

ರಾಜರು, ಸರ್ವಪಾಷಂಡಿಗಳು, ರಂಗಭೂಮಿಯಿಂದ ಜೀವಿಸುವವರು, ಹಾವನ್ನು ಹಿಡಿಯುವವರು, ಡಾಂಭಿಕರು, ಚೋರರು, ರಾಜಭಟರು, ಹಾಗೆಯೇ ವಿದ್ಯಾವಂತರು, ಕುಶಲಕರ್ಮಗಳಲ್ಲಿ ನುರಿತವರು, ವೈದ್ಯರು, ದೀರ್ಘವಾದ ಮಾರ್ಗದಲ್ಲಿ ಹೋಗುತ್ತಾ ಆಹಾರದ ಬುತ್ತಿಯನ್ನು ಕಳೆದುಕೊಂಡ ಮನುಷ್ಯರು - ಇವರು ಮತ್ತು ಉಳಿದವರು ಗೃಹಾಶ್ರಮವನ್ನು ಕುರಿತು ಆಸೆಯಿಂದ ಚಿಂತಿಸುತ್ತಾರೆ.

ಮಾರ್ಜಾರಾ ಮೂಷಿಕಾಃ ಶ್ವಾನಃ ಸೂಕರಾಶ್ಚ ಶುಕಾಸ್ತಥಾ ।
ಕಪೋತಕಾಕಚಟಕಾಃ ಸರೀಸೃಪನಿಷೇವಿಣಃ ।
ಅರಣ್ಯವಾಸಿನಶ್ಚಾನ್ಯೇ ಸಂಘಾ ಯೇ ಮೃಗಪಕ್ಷಿಣಾಮ್ ॥೫೦॥

ಏವಂ ಬಹುವಿಧಾ ದೇವಿ ಲೋಕೇಽಸ್ಮಿನ್ ಸಚರಾಚರಾಃ ।
ಗೃಹೇ ಕ್ಷೇತ್ರೇ ಬಲೇ ಚೈವ ಶತಶೋಽಥ ಸಹಸ್ರಶಃ ॥೫೧॥

ಗೃಹಸ್ಥೇನ ಕೃತಂ ಕರ್ಮ ಸರ್ವೈಸ್ತೈರುಪಭುಜ್ಯತೇ ।
ಉಪಯುಕ್ತಂ ಚ ಯತ್ ತೇಷಾಂ ಮತಿಮಾನ್ ನಾನುಶೋಚತಿ ॥೫೨॥

ಬೆಕ್ಕುಗಳು, ಇಲಿಗಳು, ನಾಯಿಗಳು, ಹಂದಿಗಳು, ಗಿಣಿಗಳು, ಪಾರಿವಾಳಗಳು, ಕಾಗೆಗಳು, ಗುಬ್ಬಚ್ಚಿಗಳು, ಅರಣ್ಯದಲ್ಲಿ ವಾಸಿಸುವ ಉಳಿದ ಮೃಗಪಕ್ಷಿಗಳ ಸಮೂಹಗಳು, ಸರ್ಪದಿಂದ ಜೀವಿಸುವ ಮುಂಗುಸಿಗಳು- ಎಲೌ ದೇವಿಯೇ, ಕ್ಷೇತ್ರದಲ್ಲಿ ಗೃಹದಲ್ಲಿ ವಾಸಿಸುವ ಇಂತಹ ನೂರಾರು, ಸಹಸ್ರಾರು ಚರಾಚರ ಪ್ರಾಣಿಗಳು ಈ ಲೋಕದಲ್ಲಿ ಗೃಹಸ್ಥನು ಮಾಡಿದ ಕಾರ್ಯವನ್ನೇ ಉಪಜೀವಿಸಿಕೊಂಡು ಬದುಕುತ್ತವೆ. ಬುದ್ಧಿವಂತನಾದವನು ಅವುಗಳು (ಇಲಿ ಮೊದಲಾದವುಗಳು) ತಿಂದು ಹಾಳು ಮಾಡಿದ ಪದಾರ್ಥಗಳ ವಿಷಯದಲ್ಲಿ ಶೋಕಪಡುವುದಿಲ್ಲ.

ಧರ್ಮ ಇತ್ಯೇವ ಸಂಕಲ್ಪ್ಯ ಯತ್ ತು ತಸ್ಯ ಫಲಂ ಶೃಣು ।
ಸರ್ವಯಜ್ಞಪ್ರಣೀತಸ್ಯ ಹಯಮೇಧೇನ ಯತ್ಫಲಮ್ ।
ವರ್ಷೇ ಸ ದ್ವಾದಶೇ ದೇವಿ ಫಲೇನೈತೇನ ಯುಜ್ಯತೇ ॥೫೩॥

ಎಲ್ಲವೂ ಧರ್ಮವೆಂದೇ ತಿಳಿದವನ ಫಲವನ್ನು ಕೇಳು. ಎಲೌ ದೇವಿಯೇ, ಸರ್ವಯಜ್ಞವನ್ನು ಮಾಡಿದವನಿಗೆ ಅಶ್ವಮೇಧವನ್ನು ಮಾಡಿದವನಿಗೆ ಉಂಟಾದಂಥ ಫಲವು ಅವನಿಗೆ ಈ ಧರ್ಮದಿಂದ ಹನ್ನೆರಡನೆಯ ವರ್ಷದಲ್ಲಿ ದೊರಕುತ್ತದೆ.

ಆಶಾಪಾಶವಿಮೋಕ್ಷಂ ಚ ವಿದ್ಧಿ ಧರ್ಮಮನುತ್ತಮಮ್ ।
ವೃಕ್ಷಮೂಲಚರೋ ನಿತ್ಯಂ ಶೂನ್ಯಾಗಾರನಿವೇಶನಮ್ ॥೫೪॥

(ಇನ್ನು ಸಂನ್ಯಾಸ ಧರ್ಮವು ಹೇಳಲ್ಪಡುತ್ತದೆ). ಆಶಾಪಾಶವಿಮೋಕ್ಷವನ್ನು ಶ್ರೇಷ್ಠವಾದ ಧರ್ಮವೆಂದು ತಿಳಿ. ಸಂನ್ಯಾಸಿಯು ವೃಕ್ಷದ ಬುಡದಲ್ಲಾಗಲೀ, ಶೂನ್ಯಾಗಾರದಲ್ಲಾಗಲೀ ನಿತ್ಯವೂ ವಾಸಿಸಬೇಕು.

ನದೀಪುಲಿನಶಾಯೀ ಚ ನದೀತೀರಮನುವ್ರಜನ್ ।
ವಿಮುಕ್ತಃ ಸರ್ವಸಂಗೇಭ್ಯಃ ಸ್ನೇಹಬಂಧೇನ ವೈ ದ್ವಿಜಃ ॥೫೫॥

ನದೀತೀರಕ್ಕೆ ಹೋಗಿ, ನದೀತೀರದ ಮರಳಿನಲ್ಲಿಯೇ ಮಲಗಿ, ಸರ್ವ ಸಂಗಗಳನ್ನೂ, ಸ್ನೇಹಬಂಧಗಳನ್ನೂ ತ್ಯಜಿಸಬೇಕು.

ಆತ್ಮನ್ಯೇವಾತ್ಮನಾ ಭಾವಂ ಸಮಾಯೋಜ್ಯೇಹ ತೇ ವನೇ ।
ಆತ್ಮಭೂತೋ ಯತಾಹಾರೋ ಮೋಕ್ಷದೃಷ್ಟೇನ ಕರ್ಮಣಾ ॥೫೬॥

ಪವಿತ್ರನಿತ್ಯೋ ಯುಕ್ತಶ್ಚ ತಸ್ಯ ಧರ್ಮಃ ಸನಾತನಃ ।
ನೈಕತ್ರ ರಮತೇ ಸಕ್ತೋ ನ ಚೈಕಗ್ರಾಮಗೋಚರಃ ।
ಯುಕ್ತೋಽಪ್ಯಟತಿ ಯೋಽಯುಕ್ತೋ ನ ಚೈಕಪುಲಿನೇಶಯಃ ॥೫೭॥

ಪರಮಾತ್ಮನಲ್ಲಿಯೇ ತನ್ನ ಮನಸ್ಸಿನ ಎಲ್ಲ ವೃತ್ತಿಯನ್ನೂ ಇಟ್ಟು, ಪರಮಾತ್ಮನನ್ನೇ ಚಿಂತಿಸುವವನಾಗಿ, ಕಾಡಿನಲ್ಲಿ ಆಹಾರನಿಯಮವನ್ನು ಹೊಂದಿ, ಮೋಕ್ಷೋಪಯೋಗಿಯಾದ ಕರ್ಮವನ್ನು ಮಾಡುತ್ತಾ ನಿತ್ಯವೂ ಪವಿತ್ರನೂ, ಯೋಗಯುಕ್ತನೂ ಆಗಿರುವವನ ಧರ್ಮವು ಶಾಶ್ವತವಾದುದು. ಅಂತಹವನು ಯಾವ ವಿಷಯದಲ್ಲಿಯೂ ಸಂತೋಷವನ್ನು ಹೊಂದುವುದಿಲ್ಲ. ಒಂದು ಗ್ರಾಮದಲ್ಲಿಯೇ ಕಾಣಬರುವುದಿಲ್ಲ. ಅವನು ಸಾಮಗ್ರಿಗಳಿಂದ ಯುಕ್ತನಾಗಿರಲಿ, ಇಲ್ಲದಿರಲಿ, ಯಾವಾಗಲೂ ಸಂಚಾರ ಮಾಡುತ್ತಾನೆ. ಒಂದೇ ನದಿಯ ತೀರದಲ್ಲಿಯೂ ಮಲಗುವುದಿಲ್ಲ.

ಏಷ ಮೋಕ್ಷವಿದಾಂ ಧರ್ಮೋ ವೇದೋಕ್ತಃ ಸತ್ಪಥೇ ಸ್ಥಿತಃ॥ ॥೫೮॥

ಇದು ವೇದೋಕ್ತವಾದ, ಸನ್ಮಾರ್ಗದಲ್ಲಿರುವವರ ವೇದೋಕ್ತವಾದ ಧರ್ಮ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮಪರ್ವಣಿ ಅಷ್ಟನವತ್ಯುತ್ತರಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ತೊಂಬತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ತೊಂಬತ್ತೊಂಬತ್ತನೆಯ ಅಧ್ಯಾಯ

ಉಮಾ-ಮಹೇಶ್ವರರ ಸಂವಾದ. ರಾಜಧರ್ಮಗಳು.

ಉಮಾ

ದೇವದೇವ ನಮಸ್ತುಭ್ಯಂ ತ್ರಿಯಕ್ಷ ವೃಷಭಧ್ವಜ ।
ಶ್ರುತಂ ಮೇ ಭಗವನ್ ಸರ್ವಂ ತತ್ತ್ವಪ್ರಸಾದಾನ್ಮಹೇಶ್ವರ ॥೧॥

ಉಮಾ- ದೇವದೇವನೇ, ತ್ರ್ಯಂಬಕನೇ, ವೃಷಭಧ್ವಜನೇ, ನಿನಗೆ ನಮಸ್ಕಾರ. ಪೂಜ್ಯನೇ, ಮಹೇಶ್ವರನೇ, ನಿನ್ನ ಅನುಗ್ರಹದಿಂದ ನಾನು ಎಲ್ಲವನ್ನೂ ಕೇಳಿದೆನು.

ಸಂಗೃಹೀತಂ ಮಯಾ ತಚ್ಚ ತವ ವಾಕ್ಯಮನುತ್ತಮಮ್ ।
ಇದಾನೀಮಸ್ತಿ ಸಂದೇಹೋ ಮಾನುಷೇಷ್ವಿಹ ಕಶ್ಚನ ॥೨॥

ನಿನ್ನ ಶ್ರೇಷ್ಠವಾದ ವಾಕ್ಯಗಳೆಲ್ಲವನ್ನೂ ನಾನು ಗ್ರಹಿಸಿದ್ದೇನೆ. ಈಗ ಮನುಷ್ಯರ ವಿಷಯದಲ್ಲಿ ಒಂದು ಸಂದೇಹವಿದೆ.

ತುಲ್ಯಪ್ರಾಣಶಿರಃಕಾಯೋ ರಾಜಾऽಯಮಿತಿ ದೃಶ್ಯತೇ ।
ಕೇನ ಕರ್ಮವಿಪಾಕೇನ ಸರ್ವಪ್ರಾಧಾನ್ಯಮರ್ಹತಿ ॥೩॥

ಎಲ್ಲರಿಗೂ ಸಮಾನವಾದ ಶಿರಸ್ಸು, ದೇಹ, ಪ್ರಾಣಗಳಿದ್ದರೂ ಒಬ್ಬನು ರಾಜನಾಗಿರುವುದು ಕಂಡುಬರುತ್ತದೆ. ಯಾವ ಕರ್ಮದ ವಿಪಾಕದಿಂದ ಅವನು ಅಂತಹ ಪ್ರಾಧಾನ್ಯವನ್ನು ಪಡೆಯುತ್ತಾನೆ?

ಸ ಚಾಪಿ ದಂಡಯನ್ ಮರ್ತ್ಯಾನ್ ಭರ್ತ್ಸಯನ್ ವಿಧಮನ್ನಪಿ ।
ಪ್ರೇತ್ಯಭಾವೇ ಕಥಂ ಲೋಕಾನ್ಲಭತೇ ಪುಣ್ಯಕರ್ಮಣಾ ।
ರಾಜವೃತ್ತಮಹಂ ತಸ್ಮಾಚ್ಛ್ರೋತುಮಿಚ್ಛಾಮಿ ಮಾನದ ॥೪॥

ಅವನಾದರೂ ಮನುಷ್ಯರನ್ನು ದಂಡಿಸಿ, ಗದರಿಸಿ, ವಿನಾಶಗೊಳಿಸಿ ಮರಣವನ್ನು ಹೊಂದಿದ ಮೇಲೆ ಹೇಗೆ ಪುಣ್ಯಕರ್ಮಿಗಳು ಪಡೆಯುವ ಲೋಕವನ್ನು ಪಡೆಯುತ್ತಾನೆ? ಎಲೈ ಮಾನದನೇ, ಆದ್ದರಿಂದ ನಾನು ರಾಜಧರ್ಮವನ್ನು ಕೇಳಲು ಬಯಸುತ್ತೇನೆ.

ಮಹೇಶ್ವರಃ

ತದಹಂ ತೇ ಪ್ರವಕ್ಷ್ಯಾಮಿ ರಾಜಧರ್ಮಂ ಶುಭಾನನೇ ॥೫॥

ಮಹೇಶ್ವರ– ಶುಭಾನನೆಯೇ, ನಾನು ನಿನಗೆ ರಾಜಧರ್ಮವನ್ನು ಹೇಳುವೆನು.

ರಾಜಾಯತ್ತಂ ಹಿ ತತ್ಸರ್ವಂ ಲೋಕವೃತ್ತಂ ಶುಭಾಶುಭಮ್ ।
ಮಹತಸ್ತಪಸೋ ದೇವಿ ಫಲಂ ರಾಜ್ಯಮಿತಿ ಸ್ಮೃತಮ್ ॥೬॥

ಲೋಕದಲ್ಲಿ ನಡೆಯುವ ಶುಭಾಶುಭಗಳೆಲ್ಲವೂ ರಾಜರಿಗೆ ಅಧೀನವಾಗಿದೆ. ಎಲೌ ದೇವಿಯೇ, ದೊಡ್ಡ ತಪಸ್ಸಿನ ಫಲವಾಗಿ ರಾಜ್ಯವು ದೊರೆಯುತ್ತದೆ.

ತಪೋದಾನಮಯಂ ರಾಜ್ಯಂ ಪರಂ ಸ್ಥಾನಂ ವಿಧೀಯತೇ ।
ತಸ್ಮಾದ್ ರಾಜ್ಞಃ ಸದಾ ಮರ್ತ್ಯಾಃ ಪ್ರಣಮಂತಿ ಯತಸ್ತತಃ ॥೭॥

ತಪಸ್ಸು ಮತ್ತು ದಾನಗಳಿಂದ ರಾಜ್ಯವನ್ನು ಪಡೆದವನ ಸ್ಥಾನವು ಬಹಳ ಶ್ರೇಷ್ಠವಾದುದೆಂದು ಹೇಳಲ್ಪಡುತ್ತದೆ. ಆದ್ದರಿಂದ ಮಾನವರು ರಾಜನಿಗೆ ಎಲ್ಲೆಲ್ಲಿಯೂ ನಮಸ್ಕಾರ ಮಾಡುತ್ತಾರೆ.

ನ್ಯಾಯತಸ್ತ್ವಂ ಮಹಾಭಾಗೇ ಶ್ರೋತುಕಾಮಾऽಸಿ ಭಾಮಿನಿ ।
ತಸ್ಮಾತ್ ತಸ್ಯೈವ ಚರಿತಂ ಜಗತ್ಪಥ್ಯಂ ಶೃಣು ಪ್ರಿಯೇ ॥೮॥

ಎಲೌ ಭಾಮಿನಿಯೇ, ನೀನು ರಾಜಧರ್ಮವನ್ನು ಕೇಳಲು ಬಯಸಿರುವುದು ಯೋಗ್ಯವಾಗಿದೆ. ಪ್ರಿಯೆಯೇ, ಆದ್ದರಿಂದ ಜಗತ್ತಿನ ಹಿತಕಾರಣವಾದ ರಾಜಧರ್ಮವನ್ನು ಕೇಳು.

ಅರಾಜಕೇ ಪುರಾ ತ್ವಾಸೀತ್ ಪ್ರಜಾನಾಂ ಸಂಕುಲಂ ಮಹತ್ ।
ತದ್‌ದೃಷ್ಟ್ವಾ ಸಂಕುಲಂ ಬ್ರಹ್ಮಾ ಮನುಂ ರಾಜ್ಯೇ ನ್ಯವೇಶಯತ್ ।
ತದಾಪ್ರಭೃತಿ ಸಂದೃಷ್ಟಂ ರಾಜ್ಞಾಂ ವೃತ್ತಂ ಶುಭಾಶುಭಮ್ ॥೯॥

ಹಿಂದೆ ರಾಜನಿಲ್ಲದಿದ್ದಾಗ ಪ್ರಜೆಗಳಿಗೆ ದೊಡ್ಡ ಘರ್ಷಣೆಯುಂಟಾಯಿತು. ಆ ಘರ್ಷಣೆಯನ್ನು ನೋಡಿದ ಬ್ರಹ್ಮದೇವನು ಮನುವನ್ನು ರಾಜ್ಯಾಧಿಕಾರದಲ್ಲಿ ಇರಿಸಿದನು. ಅಲ್ಲಿಂದಲೂ ರಾಜನ ಶುಭಾಶುಭ ನಡತೆಗಳು ಗಮನಿಸಲ್ಪಡುತ್ತವೆ.

ತನ್ಮೇ ಶೃಣು ವರಾರೋಹೇ ತಸ್ಯ ಪಥ್ಯಂ ಜಗದ್ಧಿತಮ್ ।
ಯಥಾ ಪ್ರೇತ್ಯ ಲಭೇತ್ ಸ್ವರ್ಗಂ ಯಥಾ ವೀರ್ಯಂ ಯಶಸ್ತಥಾ ॥೧೦॥

ಎಲೌ ವರಾರೋಹೆಯೇ, ಜಗದ್ಧಿತವಾದ, ಅವನಿಗೂ ಪಥ್ಯವಾದ ಮತ್ತು ಮರಣವನ್ನು ಹೊಂದಿದ ಮೇಲೆ ಸ್ವರ್ಗವನ್ನು, ಸಾಮರ್ಥ್ಯವನ್ನು ಮತ್ತು ಕೀರ್ತಿಯನ್ನು ದೊರಕಿಸುವ ಕೊಡುವ ಅವನ ಧರ್ಮಗಳನ್ನು ಕೇಳು.

ಪಿತ್ರ್ಯಂ ವಾ ಭೂತಪೂರ್ವಂ ವಾ ಸ್ವಯಮುತ್ಪಾದ್ಯ ವಾ ಪುನಃ ।
ರಾಜ್ಯಧರ್ಮಮನುಷ್ಠಾಯ ವಿಧಿವದ್ ಭೋಕ್ತುಮರ್ಹತಿ ॥೧೧॥

ತಂದೆಯಿಂದ ಬಂದ ರಾಜ್ಯವನ್ನು ಪಡೆದು ಅಥವಾ ಮೊದಲಿನಿಂದ ಬಂದ ರಾಜ್ಯವನ್ನು (ಜಯದಿಂದ) ಪಡೆದು ಅಥವಾ ತಾನೇ ಒಂದು ರಾಜ್ಯವನ್ನು ಕಟ್ಟಿ ರಾಜನು ಶಾಸ್ತ್ರಕ್ಕನುಗುಣವಾಗಿ ಅದನ್ನು ಭೋಗಿಸಬೇಕು.

ಆತ್ಮಾನಮೇವ ಪ್ರಥಮಂ ವಿನಯೈರುಪಪಾದಯೇತ್ ।
ಅನು ಭೃತ್ಯಾನ್ ಪ್ರಜಾಃ ಪಶ್ಚಾದಿತ್ಯೇಷ ವಿನಯಕ್ರಮಃ ॥೧೨॥

ಮೊದಲು ತನ್ನನ್ನು ವಿನೀತನನ್ನಾಗಿ ಮಾಡಿಕೊಳ್ಳಬೇಕು, ಅನಂತರ ಭೃತ್ಯರನ್ನು, ಅನಂತರ ಪ್ರಜೆಗಳನ್ನು ವಿನೀತರನ್ನಾಗಿ ಮಾಡಬೇಕು ಎಂಬುದು ವಿನಯಕ್ರಮ.

ಸ್ವಾಮಿನಂ ಚೋಪಮಾಂ ಕೃತ್ವಾ ಪ್ರಜಾಸ್ತದ್‌ವೃತ್ತಕಾಂಕ್ಷಯಾ ।
ಸ್ವಯಂ ವಿನಯಸಂಪನ್ನಾ ಭವಂತೀಹ ಶುಭೇಕ್ಷಣೇ ॥೧೩॥

ಪ್ರಜೆಗಳು ಸ್ವಾಮಿಯನ್ನು ದೃಷ್ಟಾಂತವಾಗಿಟ್ಟುಕೊಂಡು ಅವನ ನಡತೆಯನ್ನು ನೋಡಿ ಸ್ವತಃ ವೀರ್ಯಸಂಪನ್ನರಾಗುತ್ತಾರೆ.

ತಸ್ಮಾತ್ ಪೂರ್ವತರಂ ರಾಜಾ ಆತ್ಮಾನಂ ವಿನಯೇ ನಯೇತ್ ।
ಯೋ ವಿನೀತಃ ಸ್ವಯಂ ರಾಜಾ ವಿನಯತ್ಯೇವ ವೈ ಪ್ರಜಾಃ ।
ಅಪಹಾಸ್ಯೋ ಭವೇತ್ ತಾದೃಕ್ ಸ್ವದೋಷಸ್ಯಾನವೇಕ್ಷಣಾತ್ ॥೧೪॥

ಆದ್ದರಿಂದ ಮೊಟ್ಟಮೊದಲು ರಾಜನು ತನ್ನನ್ನೇ ವಿನಯದಿಂದ ನಡೆಸಿಕೊಳ್ಳಬೇಕು. ರಾಜನು ಸ್ವತಃ ವಿನೀತನಾಗಿದ್ದರೆ ಪ್ರಜೆಗಳೂ ವಿನೀತರಾಗುತ್ತಾರೆ. ಆದರೆ ತನ್ನ ದೋಷವನ್ನು ನೋಡದೆ ವಿನೀತನಾಗದ ರಾಜನು ಅಪಹಾಸಕ್ಕೆ ಗುರಿಯಾಗುತ್ತಾನೆ.

ವಿದ್ಯಾಭ್ಯಾಸೈರ್ವೃದ್ಧಯೋಗೈರಾತ್ಮಾನಂ ವಿನಯಂ ನಯೇತ್ ।
ವಿದ್ಯಾ ಧರ್ಮಾರ್ಥಫಲಿನೀ ತದ್ವಿದೋ ವೃದ್ಧಸಂಜ್ಞಿತಾಃ ॥೧೫॥

ವಿನೀತನನ್ನಾಗಿ ಮಾಡಿಕೊಳ್ಳುವುದು ಎಂದರೆ ವಿದ್ಯಾಭ್ಯಾಸದಿಂದಲೂ ಮತ್ತು ವೃದ್ಧರ ಸಹವಾಸದಿಂದಲೂ ತನ್ನ ದೋಷವನ್ನು ತಿದ್ದಿಕೊಳ್ಳುವುದು ಎಂದು ಅರ್ಥ. ವಿದ್ಯೆಯು ಧರ್ಮಾರ್ಥ ಫಲಗಳನ್ನುಂಟು ಮಾಡುತ್ತದೆ. ಅದನ್ನು ತಿಳಿದವರು ವೃದ್ಧರೆನಿಸುತ್ತಾರೆ.

ಇಂದ್ರಿಯಾಣಾಂ ಜಯೋ ದೇವಿ ಅತ ಊರ್ಧ್ವಮುದಾಹೃತಃ ।
ಅಜಯೇ ಸುಮಹಾನ್ ದೋಷೋ ರಾಜಾನಂ ವಿನಿಪಾತಯೇತ್ ॥

ಎಲೌ ದೇವಿಯೇ, ವಿನಯದ ಅನಂತರ ಇಂದ್ರಿಯಜಯವು ರಾಜಧರ್ಮವೆಂದು ಹೇಳಲ್ಪಡುತ್ತದೆ. ಇಂದ್ರಿಯಜಯವಿಲ್ಲದಿದ್ದರೆ ಆ ಮಹಾದೋಷವು ರಾಜನನ್ನು ಉರುಳಿಸುತ್ತದೆ.

ಪಂಚೈವ ಸ್ವವಶೇ ಕೃತ್ವಾ ತದರ್ಥಾನ್ ಪಂಚ ಶೋಷಯೇತ್ ।
ಷಡುತ್ಸೃಜ್ಯ ಯಥಾಯೋಗಂ ಜ್ಞಾನೇನ ವಿನಯೇನ ಚ ।
ಶಾಸ್ತ್ರಚಕ್ಷುರ್ನಯಪರೋ ಭೂತ್ವಾ ಭೃತ್ಯಾನ್ ಸಮಾಹರೇತ್ ॥೧೭॥

ಪಂಚೇಂದ್ರಿಯಗಳನ್ನು ತನ್ನ ವಶದಲ್ಲಿಟ್ಟುಕೊಂಡು ಅವುಗಳಿಗೆ ವಿಷಯವಾದ ಶಬ್ದ-ಸ್ಪರ್ಶಾದಿಗಳನ್ನು ಶೋಷಣೆಗೊಳಿಸಬೇಕು. ಜ್ಞಾನ ಮತ್ತು ವಿನಯದ ಬಲದಿಂದ ಕಾಮಾದಿ ಆರು ವೈರಿಗಳನ್ನು ಯಥಾಯೋಗ್ಯವಾಗಿ ತ್ಯಜಿಸಿ ಶಾಸ್ತ್ರದೃಷ್ಟಿಯುಳ್ಳವನಾಗಿ, ನೀತಿ ಪರನಾಗಿ ಭೃತ್ಯರನ್ನು ಆರಿಸಬೇಕು.

ವೃತ್ತಶ್ರುತಕುಲೋಪೇತಾನುಪಧಾಭಿಃ ಪರೀಕ್ಷಿತಾನ್ ।
ಅಮಾತ್ಯಾನುಪಧಾತೀತಾನ್ ಸೋಪಸರ್ಪಾನ್ ಜಿತೇಂದ್ರಿಯಾನ್ ।
ಯೋಜಯೇತ ಯಥಾಯೋಗಂ ಯಥಾರ್ಹಂ ಸ್ವೇಷು ಕರ್ಮಸು ॥೧೮॥

ಒಳ್ಳೆಯ ನಡತೆ, ವಿದ್ಯೆ ಮತ್ತು ಕುಲಗಳನ್ನು ಹೊಂದಿದ, ಕಪಟವಿಲ್ಲದಿರುವ, ಪರೀಕ್ಷಿತರಾದ, ಮೋಸ ಹೋಗದಿರುವ, ಸುಲಭವಾಗಿ ಸಮೀಪಿಸಬಹುದಾದ, ಜಿತೇಂದ್ರಿಯರಾದ ಪುರುಷರನ್ನು ಅವರವರ ಯೋಗ್ಯತೆ ಮತ್ತು ಅರ್ಹತೆಗೆ ತಕ್ಕಂತೆ ಅಮಾತ್ಯರಾಗಿ ಅವರವರ ಕರ್ಮಗಳಲ್ಲಿ ನಿಯೋಜಿಸಬೇಕು.

ಅಮಾತ್ಯಾ ಬುದ್ಧಿಸಂಪನ್ನಾ ರಾಷ್ಟ್ರಂ ಬಹುಜನಪ್ರಿಯಮ್ ।
ದುರಾಧರ್ಷಂ ಪುರಶ್ರೇಷ್ಠಂ ಕೋಶಃ ಕೃಚ್ಛ್ರಸಹಃ ಸ್ಮೃತಃ ॥೧೯॥

ಬುದ್ಧಿಸಂಪನ್ನರಾದ ಅಮಾತ್ಯರು, ಬಹುಜನಪ್ರಿಯವಾದ ರಾಷ್ಟ್ರ ಮತ್ತು ಆಕ್ರಮಿಸಲು ಅಸಾಧ್ಯವಾದ ರಾಜಧಾನಿ ಮತ್ತು ಕಷ್ಟಕಾಲದಲ್ಲಿ ಕಷ್ಟವನ್ನು ಸಹಿಸಿ ಮುಂದೆ ನಡೆಸುವ ಕೋಶ- ಇವುಗಳನ್ನು ರಾಷ್ಟ್ರವನ್ನು ರಕ್ಷಿಸುವವೆಂದು ಹೇಳಲಾಗುತ್ತದೆ.

ಅನುರಕ್ತಂ ಬಲಂ ಸಾಮ್ನಾಮದ್ವೈಧಂ ಮಂತ್ರಮೇವ ಚ ।
ಏತಾಃ ಪ್ರಕೃತಯಃ ಷಟ್ ಚ ಸ್ವಾಮೀ ಚ ನಯತತ್ತ್ವವಿತ್ ॥೨೦॥

ಪ್ರಜಾನಾಂ ರಕ್ಷಣಾರ್ಥಾಯ ಸರ್ವಮೇತದ್ ವಿನಿರ್ಮಿತಮ್ ।
ಆಭಿಃ ಕರಣಭೂತಾಭಿಃ ಕುರ್ಯಾಲ್ಲೋಕಹಿತಂ ನೃಪಃ ॥೨೧॥

ಅನುರಕ್ತವಾದ ಸೈನ್ಯ , ಮಂತ್ರಾಲೋಚನೆ, ಮಂತ್ರವನ್ನು ಭೇದಿಸದಿರುವುದು, ಅಮಾತ್ಯ , ಮಂತ್ರಿ , ದೂತ, ಅಂಗರಕ್ಷಕರು, ರಾಜಧಾನಿ ಮತ್ತು ರಾಜನೀತಿಯನ್ನು ತಿಳಿದ ಸೇನಾನಾಯಕ - ಇವರೆಲ್ಲರೂ ಪ್ರಜೆಗಳ ರಕ್ಷಣೆಗಾಗಿ ನಿರ್ಮಿತರಾಗಿದ್ದಾರೆ. ತನಗೆ ಉಪಕರಣದಂತಿರುವ ಇವರಿಂದ ರಾಜನು ಲೋಕಹಿತವನ್ನು ಮಾಡಬೇಕು.

ಆತ್ಮರಕ್ಷಾ ನೃಪೇಂದ್ರಸ್ಯ ಪ್ರಜಾರಕ್ಷಾರ್ಥಮಿಷ್ಯತೇ ।
ತಸ್ಮಾತ್ ಸತತಮಾತ್ಮಾನಂ ಸಂರಕ್ಷೇದಪ್ರಮಾದವಾನ್ ॥೨೨॥

ಲೋಕಹಿತಕ್ಕಾಗಿ ರಾಜನು ತನ್ನ ರಕ್ಷಣೆಯನ್ನು ಮಾಡಿಕೊಳ್ಳಬೇಕು. ಆದ್ದರಿಂದ ರಾಜನು ಯಾವಾಗಲೂ ಎಚ್ಚರಿಕೆಯಿಂದಿದ್ದು ತನ್ನನ್ನು ತಾನು ರಕ್ಷಿಸಿಕೊಳ್ಳಬೇಕು.

ಭೋಜನಾಚ್ಛಾದನಸ್ನಾನಾದ್ ಬಹಿರ್ನಿಷ್ಕ್ರಮಣಾದಪಿ ।
ನಿತ್ಯಂ ಸ್ತ್ರೀಗಣಸಂಯೋಗಾದ್ ರಕ್ಷೇದಾತ್ಮಾನಮಾತ್ಮವಾನ್ ॥೨೩॥

ಭೋಜನ, ಸ್ನಾನ, ವಸ್ತ್ರಾಚ್ಛಾದನ,ಬೇಟೆ ಮುಂತಾದವುಗಳು, ಬಹಿರ್ಗಮನ, ಸ್ತ್ರೀಗಣ ಸಂಯೋಗ ಇಂತಹ ಸಂದರ್ಭದಲ್ಲಿ ಧೈರ್ಯಶಾಲಿಯಾದ ರಾಜನು ತನ್ನನ್ನು ತಾನು ರಕ್ಷಿಸಿಕೊಳ್ಳಬೇಕು.

ಸ್ವೇಭ್ಯಶ್ಚೈವ ಪರೇಭ್ಯಶ್ಚ ಶಸ್ತ್ರಾದಪಿ ವಿಷಾದಪಿ ।
ಸತತಂ ಪುತ್ರದಾರೇಭ್ಯೋ ರಕ್ಷೇದಾತ್ಮಾನಮಾತ್ಮವಾನ್ ॥೨೪॥

ಧೈರ್ಯಶಾಲಿಯಾದ ರಾಜನು ತನ್ನವರಿಂದಲೂ, ಪರರಿಂದಲೂ, ಶಸ್ತ್ರದಿಂದಲೂ, ವಿಷದಿಂದಲೂ, ಪತ್ನೀ-ಪುತ್ರರಿಂದಲೂ ತನ್ನನ್ನು ರಕ್ಷಿಸಿಕೊಳ್ಳಬೇಕು.

ಸರ್ವೇಭ್ಯ ಏವ ಸ್ಥಾನೇಭ್ಯೋ ರಕ್ಷೇದಾತ್ಮಾನಮಾತ್ಮವಾನ್ ।
ಪ್ರಜಾನಾಂ ರಕ್ಷಣಾರ್ಥಾಯ ಪ್ರಜಾಹಿತಕರೋ ಭವೇತ್ ॥೨೫॥

ಎಲ್ಲಸ್ಥಾನಗಳಲ್ಲಿಯೂ ಧೈರ್ಯಶಾಲಿಯಾದ ರಾಜನು ಪ್ರಜೆಗಳ ಹಿತಕ್ಕೋಸ್ಕರವಾಗಿ ತನ್ನನ್ನು ರಕ್ಷಿಸಿಕೊಳ್ಳಬೇಕು ಮತ್ತು ಪ್ರಜೆಗಳಿಗೆ ಹಿತವನ್ನು ಮಾಡಬೇಕು.

ಪ್ರಜಾಕಾರ್ಯಂ ತು ತತ್ಕಾರ್ಯಂ ಪ್ರಜಾಸೌಖ್ಯಂ ತು ತತ್ಸುಖಮ್ ।
ಪ್ರಜಾಪ್ರಿಯಂ ಪ್ರಿಯಂ ತಸ್ಯ ಸ್ವಹಿತಂ ತು ಪ್ರಜಾಹಿತಮ್ ।
ಪ್ರಜಾರ್ಥಂ ತಸ್ಯ ಸರ್ವಸ್ವಮಾತ್ಮಾರ್ಥಂ ನ ವಿಧೀಯತೇ ॥೨೬॥

ಪ್ರಜೆಗಳ ಕಾರ್ಯವೇ ರಾಜನ ಕಾರ್ಯ. ಪ್ರಜೆಗಳ ಸೌಖ್ಯ ವೇ ರಾಜನ ಸೌಖ್ಯ. ಪ್ರಜೆಗಳ ಪ್ರಿಯವೇ ರಾಜನ ಪ್ರಿಯ. ಪ್ರಜೆಗಳ ಹಿತವೇ ರಾಜನ ಹಿತ. ಪ್ರಜೆಗಳಿಗಾಗಿಯೇ ಅವನ ಸರ್ವಸ್ವವೂ ಇದೆ. ತನ್ನ ಸಲುವಾಗಿ ಯಾವುದೂ ಇರುವುದಿಲ್ಲ.

ಪ್ರಕೃತೀನಾಂ ಹಿ ರಕ್ಷಾರ್ಥಂ ರಾಗದ್ವೇಷೌ ವ್ಯುದಸ್ಯ ಚ ।
ಉಭಯೋಃ ಪಕ್ಷಯೋರ್ವಾದಂ ಶ್ರುತ್ವಾ ಚೈವ ಯಥಾತಥಮ್ ।
ತಮರ್ಥಂ ವಿಮೃಶೇದ್ ಬುದ್ಧ್ಯಾ ಸ್ವಯಮಾತತ್ತ್ವದರ್ಶನಾತ್ ॥೨೭॥

ಪ್ರಜೆಗಳನ್ನು ರಕ್ಷಿಸುವ ಸಲುವಾಗಿ ರಾಗ-ದ್ವೇಷಗಳನ್ನು ಬಿಟ್ಟು, ವಿವಾದಗಳಲ್ಲಿ ಉಭಯ ಪಕ್ಷಗಳ ವಾದವನ್ನೂ ಸರಿಯಾಗಿ ಕೇಳಿ, ತನ್ನ ಬುದ್ಧಿಯಿಂದ ತತ್ತ್ವವು ನಿಶ್ಚಯವಾಗುವವರೆಗೆ ವಿವಾದ ವಿಷಯವನ್ನು ವಿಮರ್ಶೆ ಮಾಡಬೇಕು.

ತದ್ವಿದ್ಭಿರ್ಬಹುಭಿರ್ವೃದ್ಧೈಃ ಸಹಾಸೀನೋ ನರೋತ್ತಮೈಃ ।
ಕರ್ತಾರಮಪರಾಧಂ ಚ ದೇಶಕಾಲೌ ನಯಾನಯೌ ॥೨೮॥

ಜ್ಞಾತ್ವಾ ಸಮ್ಯಗ್ ಯಥಾಶಾಸ್ತ್ರಂ ತತೋ ದಂಡಂ ನಯೇನ್ನೃಷು ।
ಏವಂ ಕುರ್ವಂಲ್ಲಭೇದ್ ಧರ್ಮಂ ಪಕ್ಷಪಾತವಿವರ್ಜನಾತ್ ॥೨೯॥

ಅಂತಹ ವಿವಾದಗಳನ್ನು ತಿಳಿದ ವೃದ್ಧರಾದ ಅನೇಕ ಶ್ರೇಷ್ಠ ನರರ ಜೊತೆಯಲ್ಲಿ ಕುಳಿತು, ಅಪರಾಧವನ್ನು ಮಾಡಿದವನನ್ನೂ, ದೇಶ-ಕಾಲಗಳನ್ನೂ, ನೀತಿ, ಅನೀತಿಗಳನ್ನೂ ಚೆನ್ನಾಗಿ ತಿಳಿದು, ಶಾಸ್ತ್ರಕ್ಕೆ ಅನುಗುಣವಾಗಿ ಅಪರಾಧಿಗೆ ದಂಡವನ್ನು ವಿಧಿಸಬೇಕು. ಪಕ್ಷಪಾತ ರಹಿತನಾಗಿ ಹೀಗೆ ಮಾಡುವ ರಾಜನು ಧರ್ಮವನ್ನು ಸಂಪಾದಿಸುತ್ತಾನೆ.

ಪ್ರತ್ಯಕ್ಷಾಪ್ತೋಪದೇಶಾಭ್ಯಾಮನುಮಾನೇನ ವಾ ಪುನಃ ।
ಬೋದ್ಧವ್ಯಂ ಸತತಂ ರಾಜ್ಞಾ ದೇಶವೃತ್ತಂ ಶುಭಾಶುಭಮ್ ॥೩೦॥

ರಾಜನು ದೇಶದಲ್ಲಿ ನಡೆಯುವ ಶುಭಾಶುಭ ವಿಷಯಗಳನ್ನು ಪ್ರತ್ಯಕ್ಷವಾಗಿ ಅಥವಾ ಆಪ್ತರ ಉಪದೇಶದಿಂದ ಅಥವಾ ಅನುಮಾನದಿಂದ ಸತತವಾಗಿ ತಿಳಿಯಬೇಕು.

ಚಾರೈಃ ಕರ್ಮಪ್ರವೃತ್ತ್ಯಾ ಚ ತದ್ವಿಜ್ಞಾಯ ವಿಚಾರಯೇತ್ ।
ಅಶುಭಂ ನಿರ್ಹರೇತ್ ಸದ್ಯೋ ಜೋಷಯೇಚ್ಚುಭಮಾತ್ಮನಃ ॥೩೧॥

ಚಾರರ ಕರ್ಮಪ್ರವೃತ್ತಿಯಿಂದ ಅವುಗಳನ್ನು ತಿಳಿದು ವಿಚಾರ ಮಾಡಬೇಕು. ಅನಂತರ ಅಶುಭವನ್ನು ತಕ್ಷಣ ವಿನಾಶಗೊಳಿಸಬೇಕು. ತನಗೆ (ಮತ್ತು ದೇಶಕ್ಕೆ) ಶುಭವಾದುದನ್ನು ಪ್ರೋತ್ಸಾಹಿಸಬೇಕು.

ಗರ್ಹ್ಯಾನ್ ವಿಗರ್ಹಯೇದೇವ ಪೂಜ್ಯಾನ್ ಸಂಪೂಜಯೇತ್ ತಥಾ ।
ದಂಡ್ಯಾಂಶ್ಚ ದಂಡಯೇದ್ ದೇವಿ ನಾತ್ರ ಕಾರ್ಯಾ ವಿಚಾರಣಾ ॥೩೨॥

ಎಲೌ ದೇವಿಯೇ, ನಿಂದನೀಯರಾದವರನ್ನು ನಿಂದಿಸಬೇಕು. ಹಾಗೆಯೇ ಪೂಜನೀಯರಾದವರನ್ನು ಪೂಜಿಸಬೇಕು. ಶಿಕ್ಷೆಗೆ ಅರ್ಹರಾದವರಿಗೆ ಶಿಕ್ಷೆಯನ್ನು ಕೊಡಬೇಕು. ಇದರಲ್ಲಿ ಸಂಶಯ ಪಡಬೇಕಾದುದಿಲ್ಲ.

ಪಂಚಾಪೇಕ್ಷಂ ಸದಾ ಮಂತ್ರಂ ಕುರ್ಯಾದ್ ಬುದ್ಧಿಯುತೈರ್ನರೈಃ ।
ಕುಲವೃತ್ತಶ್ರುತೋಪೇತೈರ್ನಿತ್ಯಂ ಮಂತ್ರಪರೋ ಭವೇತ್ ॥೩೩॥

ಮಂತ್ರಾಲೋಚನೆಯನ್ನು ಮಾಡುವಾಗ ಬುದ್ಧಿವಂತರಾದ, ಕುಲ-ವೃತ್ತ-ಶ್ರುತ ಸಂಪನ್ನರಾದ ಐದು ಜನರ ಜೊತೆಯಲ್ಲಿ ಕುಳಿತು ಮಂತ್ರಾಲೋಚನೆಯನ್ನು ಮಾಡಬೇಕು.

ಕಾಮಕಾರೇಣ ವೈ ಮೂರ್ಖೈರ್ನೈವ ಮಂತ್ರೇಮನಾ ಭವೇತ್ ।
ರಾಜಾ ರಾಷ್ಟ್ರಹಿತಾಪೇಕ್ಷಃ ಸತ್ಯಧರ್ಮಾಣಿ ಕಾರಯೇತ್ ॥೩೪॥

ತನ್ನ ಮನಸ್ಸಿಗೆ ಬಂದಂತಾಗಲೀ ಅಥವಾ ಮೂರ್ಖರ ಜೊತೆಯಲ್ಲಿ ಕುಳಿತಾಗಲೀ ಮಂತ್ರಾಲೋಚನೆಯನ್ನು ಮಾಡಬಾರದು. ರಾಷ್ಟ್ರ ಹಿತವನ್ನು ಬಯಸುವ ರಾಜನು ಸಜ್ಜನರಿಗೆ ಹಿತವನ್ನು ಮಾಡುವ ಧರ್ಮಗಳನ್ನು ಆಚರಿಸಬೇಕು.

ಸರ್ವೋದ್ಯೋಗಂ ಸ್ವಯಂ ಕುರ್ಯಾದ್ ದುರ್ಗಾದಿಷು ಸದಾ ನೃಪಃ ।
ದೇಶವೃದ್ಧಿಕರಾನ್ ಸರ್ವಾನ್ ಸಂಪ್ರಿಯಾನಪಿ ವರ್ಜಯೇತ್ ।
ಅಹನ್ಯಹನಿ ಸಂಪಶ್ಯೇದನುಜೀವಿಗಣಂ ಸ್ವಯಮ್ ॥೩೬॥

ದುರ್ಗಾದಿಗಳಲ್ಲಿ ಕಷ್ಟಸಂದರ್ಭದಲ್ಲಿ ರಾಜನು ಮೊದಲ ಪ್ರಯತ್ನವನ್ನು ತಾನೇ ಮಾಡಬೇಕು. ದೇಶಕ್ಕೆ ದುಃಖವನ್ನುಂಟು ಮಾಡುವ ಎಲ್ಲವೂ ತನಗೆ ಅತ್ಯಂತ ಪ್ರಿಯವನ್ನುಂಟು ಮಾಡುತ್ತಿದ್ದರೂ ಅದನ್ನು ತ್ಯಜಿಸಬೇಕು. ತನ್ನನ್ನು ಉಪಜೀವಿಸಿ ಬದುಕುತ್ತಿರುವವರ ಪರಿಸ್ಥಿತಿಯನ್ನು ಪ್ರತಿನಿತ್ಯವೂ ಗಮನಿಸಬೇಕು.

ಸುಮುಖಃ ಸುಪ್ರಿಯೋ ಭೂತ್ವಾ ಸಮ್ಯಗ್‌ವೃತ್ತಂ ಸಮಾದಿಶೇತ್ ।
ಅಧರ್ಮ್ಯಂ ಪರುಷಂ ತೀಕ್ಷ್ಣಂ ವಾಕ್ಯಂ ವಕ್ತುಂ ನ ಚಾರ್ಹತಿ ॥೩೭॥

ನರೇನರೇ ಗುಣಾನ್ ದೋಷಾನ್ ಸಮ್ಯಗ್ವೇದಿತುಮರ್ಹತಿ ॥೩೮॥

ಅವನು ಪ್ರಸನ್ನಮುಖದಿಂದ ಮತ್ತು ಸಂತೋಷದಿಂದ ಕೂಡಿದವನಾಗಿ, ಸರಿಯಾದ ನಡತೆಯ ಆದೇಶವನ್ನು ಕೊಡಬೇಕು. ಧರ್ಮವಿರುದ್ಧವಾದ, ಒರಟಾದ, ತೀಕ್ಷ್ಣವಾದ ಮಾತನ್ನು ಆಡಬಾರದು. ಪ್ರತಿಯೊಬ್ಬ ಪ್ರಜೆಯಲ್ಲಿಯೂ ಇರುವ ಗುಣಗಳನ್ನೂ, ದೋಷಗಳನ್ನೂ ಸರಿಯಾಗಿ ತಿಳಿಯಬೇಕು.

ಸ್ವೇಂಗಿತಂ ವೃಣುಯಾದ್ ಧೈರ್ಯಾನ್ನ ಕುರ್ಯಾತ್ ಕ್ಷುದ್ರಸಂವಿದಮ್ ।
ಪರೇಂಗಿತಜ್ಞೋ ಲೋಕಜ್ಞೋ ಭೂತ್ವಾ ಸಂಸರ್ಗಮಾಚರೇತ್ ॥೩೯॥

ತನ್ನ ಅಭಿಪ್ರಾಯವನ್ನು ಧೈರ್ಯದಿಂದ ಮುಚ್ಚಿಟ್ಟುಕೊಳ್ಳಬೇಕು. ಕ್ಷುದ್ರರ ಜೊತೆಯಲ್ಲಿ ಸಂಭಾಷಣೆಯನ್ನು ಮಾಡಬಾರದು. ಇನ್ನೊಬ್ಬರ ಇಂಗಿತವನ್ನೂ, ಲೋಕದ ಇಂಗಿತವನ್ನೂ ತಿಳಿದು ಅವರ ಸಂಸರ್ಗವನ್ನು ಮಾಡಬೇಕು.

ಸ್ವತಶ್ಚ ಪರತಶ್ಚೈವ ಪರಸ್ಪರಭಯಾದಪಿ ।
ಅಮಾನುಷಭಯೇಭ್ಯಶ್ಚ ಸ್ವಾಃ ಪ್ರಜಾಃ ಪಾಲಯೇನ್ನೃಪಃ ॥೪೦॥

ರಾಜನು ಪ್ರಜೆಗಳಿಗೆ ತಮ್ಮಿಂದಲೂ, ಇನ್ನೊಬ್ಬರಿಂದಲೂ ಅಥವಾ ಪರಸ್ಪರವಾಗಿಯೂ ಅಥವಾ ಮನುಷ್ಯಭಿನ್ನರಾದ ಪ್ರಾಣಿಗಳಿಂದ ಉಂಟಾಗುವ ಭಯದಿಂದಲೂ ತನ್ನ ಪ್ರಜೆಗಳನ್ನು ರಕ್ಷಿಸಬೇಕು.

ಲುಬ್ಧಾಃ ಕಠೋರಾಶ್ಚಾಧ್ಯಕ್ಷಾ ಮಾನವಾ ದಸ್ಯುವೃತ್ತಯಃ ।
ನಿಗ್ರಾಹ್ಯಾ ಏವ ತೇ ರಾಜ್ಞಾ ಸಂಗೃಹೀತ್ವಾ ಯತಸ್ತತಃ ॥೪೧॥

ರಾಜನು ಅಲ್ಲಲ್ಲಿಂದ ಆರಿಸಿದ ಲುಬ್ಧರಾದ, ಕ್ರೂರಿಗಳಾದ, ಕಳ್ಳ ನಡತೆಯನ್ನು ಹೊಂದಿದ ಅಧಿಕಾರಿಗಳನ್ನು ನಿಗ್ರಹಿಸಲೇಬೇಕು.

ಕುಮಾರಾನ್ ವಿನಯೈರೇವ ಜನ್ಮಪ್ರಭೃತಿ ಯೋಜಯೇತ್ ।
ತೇಷಾಮಾತ್ಮಗುಣೋಪೇತಂ ಯೌವರಾಜ್ಯೇ ನಿಯೋಜಯೇತ್ ॥೪೨॥

ರಾಜಕುಮಾರರನ್ನು ಹುಟ್ಟಿದಾಗಿನಿಂದಲೂ ವಿದ್ಯಾದಿಗಳಲ್ಲಿ ತೊಡಗಿಸಬೇಕು. ಅವರಲ್ಲಿ ತನ್ನ ಗುಣಕ್ಕೆ ಸದೃಶವಾದ ಗುಣಗಳುಳ್ಳವನನ್ನು ಯೌವರಾಜ್ಯದಲ್ಲಿ ಸ್ಥಾಪಿಸಬೇಕು.

ಪ್ರಕೃತೀನಾಂ ಯಥಾ ನ ಸ್ಯಾದ್ ರಾಜ್ಯಭ್ರಂಶೋದ್ಭವಂ ಭಯಮ್ ।
ಏತತ್‌ಸಂಚಿಂತಯೇನ್ನಿತ್ಯಂ ತದ್ವಿಧಾನಂ ತಥಾರ್ಹತಿ ॥೪೩॥

ಪ್ರಜೆಗಳಿಗೆ ರಾಜ್ಯಭ್ರಂಶದಿಂದ ಭಯವುಂಟಾಗದಂತೆ ಯುವರಾಜನನ್ನು ನಿಯಮಿಸಬೇಕು. ಇವೆಲ್ಲವನ್ನೂ ಚಿಂತಿಸಿ ಯೋಗ್ಯವಾದ ಕಾರ್ಯವನ್ನು ಮಾಡಬೇಕು.

ಅರಾಜಕಂ ಕ್ಷಣಮಪಿ ರಾಷ್ಟ್ರಂ ನ ಸ್ಯಾದ್ಧಿ ಶೋಭನೇ ।
ಆತ್ಮನೋऽನುವಿಧಾನಾಯ ಯೌವರಾಜ್ಯಂ ಸದೇಷ್ಯತೇ ॥೪೪॥

ಎಲೌ ಶೋಭನೆಯೇ, ರಾಜನಿಲ್ಲದ ರಾಷ್ಟ್ರವು ಒಂದು ಕ್ಷಣವೂ ಉಳಿಯುವುದಿಲ್ಲ. ತನ್ನಂತೆ ರಾಜ್ಯವನ್ನು ನಡೆಸುವುದಕ್ಕಾಗಿ ಯುವರಾಜನ ಸ್ಥಾನವು ಯಾವಾಗಲೂ ಅಪೇಕ್ಷಿತವಾಗುತ್ತದೆ.

ಕುಲಜಾನಾಂ ಚ ವೈದ್ಯಾನಾಂ ಶ್ರೋತ್ರಿಯಾಣಾಂ ತಪಸ್ವಿನಾಮ್ ।
ಅನ್ಯೇಷಾಂ ವೃತ್ತಯುಕ್ತಾನಾಂ ವಿಶೇಷಂ ಕರ್ತುಮರ್ಹತಿ ॥೪೫॥

ಸತ್ಕುಲದಲ್ಲಿ ಜನಿಸಿದವರೂ, ವಿದ್ಯಾವಂತರೂ, ಶ್ರೋತ್ರಿಯರೂ, ತಪಸ್ವಿಗಳೂ, ಒಳ್ಳೆಯ ನಡತೆಯುಳ್ಳವರೂ ಆದವರನ್ನು ವಿಶೇಷವಾಗಿ ನೋಡಿಕೊಳ್ಳಬೇಕು.

ಆತ್ಮಾರ್ಥಂ ರಾಜ್ಯತಂತ್ರಾರ್ಥಂ ಕೋಶಸಂಚಯಮಾರಭೇತ್ ।
ದುರ್ಗಾದ್ರಾಷ್ಟ್ರಾತ್ಸಮುದ್ರಾಚ್ಚ ವಣಿಗ್ಭ್ಯಃ ಪುರುಷಾತ್ಯಯಾತ್ ॥೪೬॥

ತನ್ನ ಸಲುವಾಗಿ, ರಾಜ್ಯದ ನಿರ್ವಹಣೆಯ ಸಲುವಾಗಿ ಕೋಶವನ್ನು ಅಭಿವೃದ್ಧಿ ಪಡಿಸಬೇಕು. ದುರ್ಗಗಳಿಂದಲೂ, ರಾಷ್ಟ್ರದಿಂದಲೂ, ಸಮುದ್ರದಿಂದಲೂ, ವ್ಯಾಪಾರಿಗಳಿಂದಲೂ, ಅಪರಾಧಿ ಪುರುಷರಿಂದಲೂ (ಧನವನ್ನು ಸಂಗ್ರಹಿಸಿ ಕೋಶವನ್ನು ಅಭಿವೃದ್ಧಿಪಡಿಸಬೇಕು).

ಚತುರ್ಧಾ ವಿಭಜೇತ್‌ಕೋಶಂ ಧರ್ಮಭೃತ್ಯಾತ್ಮಕಾರಣಾತ್ ।
ದುರ್ಗಾದ್ ರಾಷ್ಟ್ರಾತ್ ಸಮುದ್ರಾಚ್ಚ ವಣಿಗ್ಭ್ಯಃ ಪುರುಷಾತ್ಯಯಾತ್ ।
ಪರಾತ್ಮಗುಣಸಾರಾಭ್ಯಾಂ ಭೃತ್ಯಪೋಷಣಮಾಚರೇತ್ ॥೪೭॥

ಧರ್ಮಾಚರಣೆಯ ಸಲುವಾಗಿ, ಭೃತ್ಯರ ಸಲುವಾಗಿ ಮತ್ತು ತನ್ನ ಸಲುವಾಗಿ ಕೋಶವನ್ನು ನಾಲ್ಕು ವಿಭಾಗವನ್ನಾಗಿ ಮಾಡಬೇಕು. ದುರ್ಗದಿಂದ, ರಾಷ್ಟ್ರದಿಂದ, ಸಮುದ್ರದಿಂದ, ವ್ಯಾಪಾರಗಳಿಂದ, ಅಪರಾಧಿ ಪುರುಷರಿಂದ, ಪರಾತ್ಮಗುಣ ಸಾರಗಳಿಂದ ಬಂದ ಧನದಿಂದ ಭೃತ್ಯಪೋಷಣೆಯನ್ನು ಮಾಡಬೇಕು.

ವಾಹನಾನಾಂ ವಿಧಾಯಾಗ್ರೇ ಪೋಷಣಂ ಯೌಧಕರ್ಮಸು ।
ಸಾದರಃ ಸತತಂ ಭೂತ್ವಾ ಅವೇಕ್ಷಾವ್ರತಮಾಚರೇತ್ ।
ಚತುರ್ಧಾ ವಿಭಜೇತ್ ಕೋಶಂ ಧರ್ಮಭೃತ್ಯಾತ್ಮಕಾರಣಾತ್ ॥೪೮॥

ಆಪದರ್ಥಂ ಚ ನೀತಿಜ್ಞೋ ದೇಶಕಾಲವಶೇನ ತು ।
ಅನಾಥಾನ್ ವ್ಯಥಿತಾನ್ ವೃದ್ಧಾನ್ ಸ್ವದೇಶೇ ಪೋಷಯೇನ್ನೃಪಃ ॥೪೯॥

ಅಶ್ವ ಮೊದಲಾದ ವಾಹನಗಳನ್ನು ಮುಂದಿಟ್ಟುಕೊಂಡು ಯುದ್ಧಕರ್ಮಗಳಲ್ಲಿ ಅವುಗಳನ್ನು ಪಳಗಿಸಿ ಪೋಷಿಸಬೇಕು. ಯಾವಾಗಲೂ ಆದರದಿಂದ ತಾನೇ

ಮೇಲ್ವಿಚಾರಣೆಯ ವ್ರತವನ್ನು ಕೈಗೊಳ್ಳಬೇಕು. ರಾಜನೀತಿಯನ್ನು ತಿಳಿದ ರಾಜನು ದೇಶ, ಕಾಲ ವಶನಾಗಿ ತನ್ನ ಕೋಶವನ್ನು ಧರ್ಮದ ಸಲುವಾಗಿ, ಭೃತ್ಯರ ಸಲುವಾಗಿ, ತನ್ನ ಸಲುವಾಗಿ ಮತ್ತು ಆಪತ್ತಿನ ಸಲುವಾಗಿ ಎಂದು ನಾಲ್ಕು ವಿಭಾಗವನ್ನು ಮಾಡಬೇಕು. ಅನಾಥರನ್ನೂ, ದುಃಖಿತರನ್ನೂ, ವೃದ್ಧರನ್ನೂ ತನ್ನ ದೇಶದಲ್ಲಿ ಪೋಷಿಸಬೇಕು.

ಸಂಧಿಂ ಚ ವಿಗ್ರಹಂ ಚೈವ ತದ್ವಿಶೇಷಾಂಸ್ತಥಾऽಪರಾನ್ ।
ಯಥಾವತ್ ಸಂವಿಮೃಶ್ಯೈವ ಬುದ್ಧಿಪೂರ್ವಂ ಸಮಾಚರೇತ್ ॥೫೦॥

ಸಂಧಿ, ವಿಗ್ರಹ, ಸ್ಥಾನ, ಯಾನ, ದ್ವೈಧ ಮೊದಲಾದ ರಾಜನೀತಿಯನ್ನು ಚೆನ್ನಾಗಿ ವಿಮರ್ಶೆ ಮಾಡಿ ಬುದ್ಧಿಪೂರ್ವಕವಾಗಿ ಅನುಷ್ಠಾನ ಮಾಡಬೇಕು.

ಸರ್ವೇಷಾಂ ಸ ಪ್ರಿಯೋ ಭೂತ್ವಾ ಮಂಡಲಂ ಸತತಂ ಚರೇತ್ ।
ಶುಭೇಷ್ವಪಿ ಚ ಕಾರ್ಯೇಷು ನ ಚೈಕಾಂತಃ ಸಮಾಚರೇತ್ ॥೫೧॥

ಎಲ್ಲರಿಗೂ ಪ್ರಿಯನಾಗಿದ್ದು ರಾಜ್ಯದಲ್ಲಿ ಯಾವಾಗಲೂ ಸಂಚರಿಸಬೇಕು. ಶುಭಕಾರ್ಯವನ್ನು ಮಾಡುವಾಗಲೂ ಒಬ್ಬನೇ ಮಾಡಬಾರದು.

ಸ್ವತಶ್ಚ ಪರತಶ್ಚೈವ ವ್ಯಸನಾನಿ ವಿಮೃಶ್ಯ ತು ।
ಪರೇಣ ಧಾರ್ಮಿಕಾನ್ ನ್ಯಾಯಾನ್ನಾತೀಯಾದ್ ದ್ವೇಷಲೋಭತಃ ॥೫೨॥

ತಾನು ಸ್ವತಃ ಮತ್ತು ಇನ್ನೊಬ್ಬರಿಂದಲೂ ಇನ್ನೊಬ್ಬರಿಗಿರುವ ವ್ಯಸನಗಳನ್ನು ವಿಮರ್ಶೆ ಮಾಡಿ, ಶ್ರೇಷ್ಠರಾದವರಿಂದ ಧಾರ್ಮಿಕ ಕಾರ್ಯಗಳನ್ನು ಮಾಡಿಸಬೇಕು. ದ್ವೇಷದಿಂದಾಗಲೀ ಅಥವಾ ಲೋಭದಿಂದಾಗಲೀ ಧಾರ್ಮಿಕ ಕಾರ್ಯಗಳನ್ನು ಉಲ್ಲಂಘಿಸಬಾರದು.

ರಕ್ಷ್ಯತ್ವಂ ವೈ ಪ್ರಜಾಧರ್ಮಃ ಕ್ಷತ್ರಧರ್ಮಸ್ತು ರಕ್ಷಣಮ್ ।
ಕುನೃಪೈಃ ಪೀಡಿತಾಸ್ತಸ್ಮಾತ್ ಪ್ರಜಾಃ ಸರ್ವತ್ರ ಪಾಲಯೇತ್ ॥೫೩॥

ರಕ್ಷಿಸಲ್ಪಡಬೇಕಾದುದು ಪ್ರಜೆಗಳ ಧರ್ಮ. ರಕ್ಷಣೆಯನ್ನು ಮಾಡಬೇಕಾದುದು ಕ್ಷತ್ರಿಯ ಧರ್ಮ. ಆದ್ದರಿಂದ ಕೆಟ್ಟ ರಾಜನಿಂದ ಪೀಡಿತರಾದ ಪ್ರಜೆಗಳನ್ನು ಎಲ್ಲ ಕಡೆಗಳಲ್ಲಿಯೂ ರಕ್ಷಿಸಬೇಕು.

ಯಾತ್ರಾಕಾಲಮವೇಕ್ಷ್ಯೈವ ಪಶ್ಚಾತ್ ಕೋಪಃ ಫಲೋದಯಃ ।
ತದ್ಯುಕ್ತಾಶ್ಚಾಪದಶ್ಚೈವ ಪ್ರಾಗ್ಯಾನಾದಿತಿ ಚಿಂತಯೇತ್ ॥೫೪॥

ಯುದ್ಧಕ್ಕೆ ಹೊರಡುವ ಸರಿಯಾದ ಕಾಲವನ್ನು ಗಮನಿಸಿ ಅನಂತರ ಶತ್ರುಗಳ ಮೇಲೆ ಮಾಡುವ ಕೋಪವು ಅಪೇಕ್ಷಿತವಾದ ಫಲವನ್ನುಂಟು ಮಾಡುತ್ತದೆ. ಅಂತಹ ಆಕ್ರಮಣದಲ್ಲಿ ಆಪತ್ತುಗಳೂ ಇವೆ ಎಂದು ಆಕ್ರಮಣಕ್ಕೆ ಹೊರಡುವುದಕ್ಕಿಂತ ಮೊದಲೇ ಆಪತ್ತುಗಳನ್ನೂ ಚಿಂತಿಸಬೇಕು.

ವ್ಯಸನೇಭ್ಯೋ ಬಲಂ ರಕ್ಷೇನ್ನಯತೋ ವ್ಯಯತೋಽಪಿ ವಾ ।
ಪ್ರಾಯಶೋ ವರ್ಜಯೇದ್ ಯುದ್ಧಂ ಪ್ರಾಣರಕ್ಷಣಕಾರಣಾತ್ ॥೫೫॥

ಸೈನ್ಯವು ಚಟಗಳಿಗೆ ಬಲಿಯಾಗದಂತೆ ಅದನ್ನು ರಕ್ಷಿಸಬೇಕು. ದುರ್ನೀತಿಗಳಿಗೆ ವಶವಾಗದಂತೆ ಮತ್ತು ದುರ್ವ್ಯಯಗಳನ್ನು ಮಾಡದಂತೆ ರಕ್ಷಿಸಬೇಕು. ಪ್ರಾಣ ರಕ್ಷಣೆಯನ್ನು ಮಾಡಬೇಕಾದ ಕಾರಣದಿಂದ ಸಾಧ್ಯವಾದಷ್ಟು ಮಟ್ಟಿಗೆ ಯುದ್ಧವನ್ನು ವರ್ಜಿಸಬೇಕು.

ಕಾರಣಾದೇವ ಯೋದ್ಧವ್ಯಂ ನಾತ್ಮನಃ ಪರದೋಷತಃ ।
ಸುಯುದ್ಧೇ ಪ್ರಾಣಮೋಕ್ಷಶ್ಚ ತಸ್ಯ ಧರ್ಮ್ಯಾಯ ಇಷ್ಯತೇ ॥೫೬॥

ತನ್ನ ದೋಷವಿಲ್ಲದ ರಾಜನು ಶತ್ರುಗಳ ದೋಷಗಳಿಂದ (ಪ್ರೇರಿತನಾಗಿ) ಅಪರಿಹಾರ್ಯ ಕಾರ್ಯವಿದ್ದರೆ ಮಾತ್ರ ಯುದ್ಧವನ್ನು ಮಾಡಬೇಕು. ಧರ್ಮಯುದ್ಧವನ್ನು ಮಾಡಿ ಪ್ರಾಣತ್ಯಾಗವನ್ನು ಮಾಡಿದರೆ ಅವನಿಗೆ ಧರ್ಮ ಪ್ರಾಪ್ತಿಯಾಗುತ್ತದೆ.

ಅಭಿಯುಕ್ತೋ ಬಲವತಾ ಕುರ್ಯಾದಾಪದ್ವಿಧಿಂ ನೃಪಃ ।
ಅನುನೀಯ ತಥಾ ಸರ್ವಾನ್ ಪ್ರಜಾನಾಂ ಹಿತಕಾರಣಾತ್ ॥೫೭॥

ಬಲಿಷ್ಠನಾದ ರಾಜನ ಆಕ್ರಮಣಕ್ಕೆ ಒಳಗಾದಾಗ ರಾಜನು ಆಪದ್ಧರ್ಮವನ್ನು ಅನುಸರಿಸಬೇಕು. ಪ್ರಜೆಗಳ ಹಿತಕ್ಕೋಸ್ಕರವಾಗಿ ಪ್ರಜೆಗಳನ್ನು ಸಮಾಧಾನಪಡಿಸಬೇಕು.

ಅನ್ಯಪ್ರಕೃತಿಯುಕ್ತಾನಾಂ ರಾಜ್ಞಾಂ ವೃತ್ತವಿಚಾರಿಣಾಮ್ ।
ಅನ್ಯಾಂಶ್ಚಾಪತ್ಪ್ರಪನ್ನಾನಾಂ ನ ತಾನ್ ಸಂಯೋಕ್ತುಮರ್ಹತಿ ॥೫೮॥

ಬೇರೆ ಸ್ವಭಾವವುಳ್ಳವರನ್ನೂ, ರಾಜನ ನಡತೆಯನ್ನೇ ವಿಮರ್ಶೆ ಮಾಡುವವರನ್ನೂ, ಆಪತ್ತಿಗೆ ಸಿಲುಕಿದವರನ್ನೂ ಕಾರ್ಯಗಳಲ್ಲಿ ವಿನಿಯೋಗಿಸಬಾರದು.

ಶುಭಾಶುಭಂ ಯದಾ ದೇವಿ ವೃತ್ತಂ ತೂಭಯಸಾಧನಮ್ ।
ಆತ್ಮೈವ ತಚ್ಛುಭಂ ಕುರ್ಯಾದಶುಭಂ ಯೋಜಯೇತ್ ಪರಾನ್ ॥೫೯॥

ಎಲೌ ದೇವಿಯೇ, ಶುಭಾಶುಭ ಕಾರ್ಯಗಳನ್ನು ಮಾಡಬೇಕಾಗಿ ಬಂದಾಗ ಶುಭಕಾರ್ಯವನ್ನು ತಾನೇ ಮಾಡಬೇಕು. ಅಶುಭ ಕಾರ್ಯವನ್ನು ಇನ್ನೊಬ್ಬರಿಂದ ಮಾಡಿಸಬೇಕು.

ಏವಮುದ್ದೇಶತಃ ಪ್ರೋಕ್ತಮಲೇಪತ್ವಂ ಯಥಾ ಭವೇತ್ ।
ಏತದೇವಂ ಸಮಾಸೇನ ರಾಜಧರ್ಮಃ ಪ್ರಕೀರ್ತಿತಃ ॥೬೦॥

ರಾಜನಿಗೆ ದೋಷಲೇಪವಾಗದಂತೆ ಮಾಡಬೇಕಾದ ವಿಧಿಗಳನ್ನು ಉದ್ದೇಶಿಸಿ ಹೇಳಿದ್ದೇನೆ. ಇದೇ ರಾಜಧರ್ಮದ ಸಂಕ್ಷಿಪ್ತವಾದ ಕೀರ್ತನೆ.

ಏವಂ ಸಂವರ್ತಮಾನಸ್ತು ದಂಡಯನ್ ಭರ್ತ್ಸಯನ್ ಪ್ರಜಾಃ ।
ನ ಕಿಲ್ಬಿಷಮವಾಪ್ನೋತಿ ಪದ್ಮಪತ್ರಮಿವಾಂಭಸಾ ॥೬೧॥

ಹೀಗೆ ಇದ್ದು ಪ್ರಜೆಗಳನ್ನು ಶಿಕ್ಷಿಸುತ್ತಾ, ಗದರಿಸುತ್ತಾ ಆಳುವ ರಾಜನು ಪದ್ಮಪತ್ರವು ನೀರಿನ ಲೇಪವನ್ನು ಹೊಂದದಂತೆ ದೋಷದ ಲೇಪವನ್ನು ಹೊಂದುವುದಿಲ್ಲ.

ಏವಂ ಸಂವರ್ತಮಾನಸ್ಯ ಕಾಲಧರ್ಮೋ ಯದಾ ಭವೇತ್ ।
ಸ್ವರ್ಗಲೋಕೇ ತದಾ ರಾಜಾ ತ್ರಿದಶೈಃ ಸಹ ತೋಷ್ಯತೇ ॥೬೨॥

ಹೀಗೆ ಪ್ರಜಾಪಾಲನೆಯನ್ನು ಮಾಡಿದ ರಾಜನು ಕಾಲವಶನಾದಾಗ ಅವನು ಸ್ವರ್ಗಲೋಕವನ್ನು ಹೊಂದಿ, ಅಲ್ಲಿ ದೇವತೆಗಳಿಂದ ಸಂತೋಷಗೊಳಿಸಲ್ಪಡುತ್ತಾನೆ.

ದ್ವಿವಿಧಂ ರಾಜವೃತ್ತಂ ಚ ನ್ಯಾಯಭಾಗ್ಯಸಮನ್ವಿತಮ್ ।
ಏವಂ ನ್ಯಾಯಾನುಗಂ ವೃತ್ತಂ ಕಥಿತಂ ತೇ ಶುಭೇಕ್ಷಣೇ ॥೬೩॥

ರಾಜನ ರಾಜಧರ್ಮವು ನ್ಯಾಯಾಯತ್ತವಾದುದು ಮತ್ತು ಭಾಗ್ಯಾಯತ್ತವಾದುದು ಎಂದು ಎರಡು ವಿಧ. ಎಲೌ ಶುಭೇಕ್ಷಣೆಯೇ, ನಾನು ಇದುವರೆಗೆ ನ್ಯಾಯಾಯತ್ತವಾದ ರಾಜಧರ್ಮವನ್ನು ಹೇಳಿದ್ದೇನೆ.

ರಾಜ್ಯಂ ನ್ಯಾಯಾನುಗಂ ನಾಮ ಬುದ್ಧಿಶಾಸ್ತ್ರಾನುಗಂ ಭವೇತ್ ।
ಧರ್ಮ್ಯಂ ಪಥ್ಯಂ ಯಶಸ್ಯಂ ಚ ಸ್ವರ್ಗ್ಯಂ ಚೈವ ತಥಾ ಭವೇತ್ ॥೬೪॥

ನ್ಯಾಯಾಯತ್ತವಾದ ರಾಜಧರ್ಮವೆಂದರೆ ಅದು ಬುದ್ಧಿಗೆ ಮತ್ತು ಶಾಸ್ತ್ರಕ್ಕೆ ಅನುಗುಣವಾಗಿರಬೇಕು. ಧರ್ಮಪ್ರದವೂ, ಹಿತವೂ, ಕೀರ್ತಿಪ್ರದವೂ ಮತ್ತು ಸ್ವರ್ಗಪ್ರದವೂ ಆಗಿರಬೇಕು.

ದೈವಪಕ್ಷ್ಯೇ ಸತಿ ನೃಪೇ ರಾಜ್ಯಂ ನ್ಯಾಯಾನುಗಂ ಭವೇತ್ ।
ಕ್ರಿಯಂತೇ ಯತ್ರ ಕರ್ಮಾಣಿ ಶಾಸ್ತ್ರಯುಕ್ತಿಂ ವಿಮೃಶ್ಯ ವೈ ।
ಕರ್ತಾ ದ್ವೇಷವಿಯುಕ್ತಶ್ಚ ತತ್ರ ನ್ಯಾಯಾನುಗಂ ಭವೇತ್ ॥೬೫॥

ರಾಜನು ದೇವಪಕ್ಷದವನಾಗಿದ್ದರೆ (ದೇವಭಕ್ತನಾಗಿದ್ದರೆ) ರಾಜ್ಯವು ನ್ಯಾಯಾನುಸಾರಿಯಾಗಿರುತ್ತದೆ. ಎಲ್ಲಿ ರಾಜನು ಶಾಸ್ತ್ರವನ್ನು ಮತ್ತು ಯುಕ್ತಿಗಳನ್ನು ವಿಮರ್ಶೆ ಮಾಡಿ ದ್ವೇಷವನ್ನು ತ್ಯಜಿಸಿ ಕಾರ್ಯಗಳನ್ನು ಮಾಡುತ್ತಾನೆಯೋ ಅಲ್ಲಿ ರಾಜ್ಯವು ನ್ಯಾಯಾನುಗವಾಗಿರುತ್ತದೆ.

ರಾಜ್ಯಂ ಭಾಗ್ಯಾನುಗಂ ನಾಮ ಅಯಥಾವತ್ ಪ್ರದೃಶ್ಯತೇ ।
ತತ್ತು ಶಾಸ್ತ್ರವಿನಿರ್ಮುಕ್ತಂ ಸತಾಂ ಕೋಪಕರಂ ಭವೇತ್ ।
ಅಧರ್ಮ್ಯಮಯಶಸ್ಯಂ ಚ ದುರಂತಂ ಚ ಭವೇದ್ ಧ್ರುವಮ್ ॥೬೬॥

ವಿರುದ್ಧವಾಗಿ ಕಂಡುಬರುವ ರಾಜ್ಯವು ಭಾಗ್ಯಾನುಗವೆಂದು ಹೇಳಲ್ಪಡುತ್ತದೆ. ಅದಕ್ಕೆ ಶಾಸ್ತ್ರದ ಸಮ್ಮತಿಯಿಲ್ಲ ಮತ್ತು ಸಜ್ಜನರಿಗೆ ಕೋಪವನ್ನುಂಟು ಮಾಡುತ್ತದೆ. ಅದು ದುರಂತವಾದ ಅಧರ್ಮವನ್ನೂ ಮತ್ತು ಅಕೀರ್ತಿಯನ್ನೂ ನಿಶ್ಚಿತವಾಗಿ ತಂದು ಕೊಡುತ್ತದೆ.

ಯತ್ರ ಸ್ವಚ್ಛಂದತಃ ಸರ್ವಂ ಕ್ರಿಯತೇ ಕರ್ಮ ರಾಜಭಿಃ ।
ತತ್ರ ಭಾಗ್ಯವಶಾದ್ ಭೃತ್ಯಾ ಲಭಂತೇ ನ ವಿಶೇಷತಃ ॥೬೭॥

ಎಲ್ಲಿ ರಾಜನು ಸ್ವಚ್ಛಂದವಾಗಿ ಎಲ್ಲ ಕಾರ್ಯವನ್ನು ಮಾಡುತ್ತಾನೆಯೋ ಅಲ್ಲಿ ಭೃತ್ಯರು ತಾವು ಪಡೆಯಬೇಕಾದುದನ್ನು ತಮ್ಮ ಭಾಗ್ಯದಿಂದಲೇ ಪಡೆಯುತ್ತಾರೆ ಹೊರತಾಗಿ ರಾಜನ ವಿಶೇಷ ಪ್ರಯತ್ನದಿಂದಲ್ಲ.

ಯತ್ರ ದಂಡ್ಯಾ ನ ದಂಡ್ಯಂತೇ ಪೂಜ್ಯಂತೇ ವಾ ನರಾಧಮಾಃ ।
ಯತ್ರ ಸಂತೋ ವಿಹನ್ಯಂತೇ ತತ್ರ ಭಾಗ್ಯಾನುಗಂ ಭವೇತ್ ॥೬೮॥

ಎಲ್ಲಿ ಶಿಕ್ಷಾರ್ಹರಾದವರು ಶಿಕ್ಷೆಯನ್ನು ಹೊಂದುವುದಿಲ್ಲವೋ, ನರಾಧಮರು ಪೂಜಿಸಲ್ಪಡುತ್ತಾರೆಯೋ, ಸಜ್ಜನರು ಹಿಂಸಿಸಲ್ಪಡುತ್ತಾರೆಯೋ ಅಲ್ಲಿ ರಾಜ್ಯವು ಭಾಗ್ಯಾನುಗವೆಂದು ಹೇಳಲ್ಪಡುತ್ತದೆ.

ಶುಭಾಶುಭಂ ಯದಾ ಯತ್ರ ವಿಪರೀತಂ ಪ್ರದೃಶ್ಯತೇ ।
ರಾಜ್ಞೇ ವಾऽಸುರಪಕ್ಷೇ ತು ತತ್ರ ಭಾಗ್ಯಾನುಗಂ ಭವೇತ್ ॥೬೯॥

ರಾಜನಲ್ಲಾಗಲೀ, ಅಪರಾಧಿಗಳ ಪಕ್ಷದಲ್ಲಾಗಲೀ ಶುಭಾಶುಭಗಳು ಎಲ್ಲಿ ವಿರುದ್ಧವಾಗಿ ಕಾಣುತ್ತವೆಯೋ ಅಲ್ಲಿ ರಾಜ್ಯವನ್ನು ಭಾಗ್ಯಾನುಗವೆಂದು ಹೇಳಬೇಕು.

ಭಾಗ್ಯಾನುಗೇ ತು ರಾಜಾನೋ ವರ್ತಮಾನಾ ಯಥಾತಥಾ ।
ಪ್ರಾಪ್ಯಾಕೀರ್ತಿಮನರ್ಥಂ ಚ ಇಹ ಲೋಕೇ ಶುಭೇಕ್ಷಣೇ ॥೭೦॥

ಪರತ್ರ ಸುಮಹಾಘೋರಂ ತಮಃ ಪ್ರಾಪ್ಯ ದುರತ್ಯಯಮ್ ।
ತಿಷ್ಠಂತಿ ನರಕೇ ದೇವಿ ಪ್ರಳಯಾಂತಾದಿತಿ ಸ್ಥಿತಿಃ ॥೭೧॥

ಎಲೌ ಶುಭೇಕ್ಷಣೆಯೇ, ಭಾಗ್ಯಾನುಗರಾಜ್ಯವನ್ನು ಆಳುವ, ತಮ್ಮ ಮನಸ್ಸಿಗೆ ಬಂದಂತೆ ನಡೆದುಕೊಳ್ಳುವ ರಾಜರು ಈ ಲೋಕದಲ್ಲಿ ಅಕೀರ್ತಿಯನ್ನೂ ಮತ್ತು ಅನರ್ಥವನ್ನೂ ಹೊಂದಿ, ಪರಲೋಕದಲ್ಲಿ ಮಹಾಘೋರವಾದ, ದಾಟಲು ಅಸಾಧ್ಯವಾದ, ತಮೋರೂಪವಾದ ನರಕವನ್ನು ಹೊಂದುತ್ತಾರೆ. ಎಲೌ ದೇವಿಯೇ, ಅವರು ನರಕದಲ್ಲಿ ಪ್ರಳಯ ಕಾಲದವರೆಗೂ ಇರುತ್ತಾರೆ ಎಂಬುದು ನಿಜವಾದ ಪರಿಸ್ಥಿತಿ.

ಮೋಕ್ಷಣಂ ದುಷ್ಕೃತೀನಾಂ ತು ವಿದ್ಯತೇ ಕಾಲಪರ್ಯಯಾತ್ ।
ನಾಸ್ತ್ಯೇವ ಮೋಕ್ಷಣಂ ದೇವಿ ರಾಜ್ಞಾಂ ದುಷ್ಕೃತಿಕಾರಿಣಾಮ್ ॥೭೨॥

ಎಲೌ ದೇವಿಯೇ, ಉಳಿದ ದುಷ್ಕರ್ಮಗಳಿಗೆ ಕಾಲಕ್ರಮದಲ್ಲಿ ಬಿಡುಗಡೆ ಎಂಬುದಿದೆ. ಆದರೆ ದುಷ್ಕರ್ಮವನ್ನು ಮಾಡಿದ ರಾಜರಿಗೆ ನರಕದಿಂದ ಬಿಡುಗಡೆಯು ಇಲ್ಲವೇ ಇಲ್ಲ.

ಏತತ್ಸರ್ವಂ ಸಮಾಸೇನ ರಾಜವೃತ್ತಂ ಶುಭಾಶುಭಮ್ ।
ಕಥಿತಂ ತೇ ಮಹಾಭಾಗೇ ಭೂಯಃ ಶ್ರೋತುಂ ಕಿಮಿಚ್ಛಸಿ ॥೭೩॥

ಎಲೌ ಮಹಾನುಭಾವಳೇ, ಶುಭಾಶುಭರೂಪವಾದ ರಾಜನ ನಡತೆ ಎಲ್ಲವನ್ನೂ ಸಂಕ್ಷೇಪವಾಗಿ ಹೇಳಿದ್ದೇನೆ. ಇನ್ನೂ ಏನನ್ನು ಕೇಳಲು ಬಯಸುತ್ತೀಯೆ?

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮಪರ್ವಣಿ ನವನವತ್ಯುತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ತೊಂಬತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇನ್ನೂರನೆಯ ಅಧ್ಯಾಯ

ಉಮಾ-ಮಹೇಶ್ವರರ ಸಂವಾದ. ಗೃಹಸ್ಥರ ಜೀವನೋಪಾಯ.

ಉಮಾ

ಭಗವನ್ ಸರ್ವಭೂತೇಶ ಶೂಲಪಾಣೇ ಮಹಾದ್ಯುತೇ ।
ಶ್ರೋತುಮಿಚ್ಛಾಮ್ಯಹಂ ವೃತ್ತಂ ಸರ್ವೇಷಾಂ ಗೃಹಮೇಧಿನಾಮ್ ॥೧॥

ಉಮಾ- ಭಗವಂತನೇ, ಸರ್ವಭೂತೇಶನೇ, ಶೂಲಪಾಣಿಯೇ, ಮಹಾದ್ಯುತಿಯೇ, ಎಲ್ಲಾ ಗೃಹಸ್ಥರ ವೃತ್ತಿಯನ್ನು ಕೇಳಲು ನಾನು ಬಯಸುತ್ತೇನೆ.

ಕೀದೃಶಂ ಚರಿತಂ ತೇಷಾಂ ತ್ರಿವರ್ಗಸಹಿತಂ ಪ್ರಭೋ ।
ಪ್ರತ್ಯಾಯತಿಃ ಕಥಂ ತೇಷಾಂ ಜೀವನಾರ್ಥಮುದಾಹೃತಮ್ ॥೨॥

ಎಲೈ ಪ್ರಭುವೇ, ತ್ರಿವರ್ಗಸಾಧಕವಾದ ಅವರ ಪ್ರವೃತ್ತಿಯು ಹೇಗಿರುತ್ತದೆ? ಅವರು ಜೀವನಾರ್ಥವಾಗಿ ಯಾವ ವೃತ್ತಿಯನ್ನು ಅವಲಂಬಿಸಬೇಕೆಂದು ಹೇಳಲ್ಪಡುತ್ತದೆ?

ವರ್ತಮಾನಾಃ ಕಥಂ ಸರ್ವೇ ಪ್ರಾಪ್ನುವಂತ್ಯುತ್ತಮಾಂ ಗತಿಮ್ ।
ಏತತ್ಸರ್ವಂ ಸಮಾಸೇನ ವಕ್ತುಮರ್ಹಸಿ ಮಾನದ ॥೩॥

ಹೀಗೆ ಬದುಕುವರೆಲ್ಲರೂ ಹೇಗೆ ಉತ್ತಮ ಗತಿಯನ್ನು ಪಡೆಯುತ್ತಾರೆ? ಎಲೈ ಮಾನದನೇ, ಈ ಎಲ್ಲವನ್ನೂ ನನಗೆ ಸಂಕ್ಷೇಪವಾಗಿ ಹೇಳಬೇಕು.

ಮಹೇಶ್ವರಃ

ನ್ಯಾಯತಸ್ತ್ವಂ ಮಹಾಭಾಗೇ ಶ್ರೋತುಕಾಮಾಽಸಿ ಭಾಮಿನಿ ।
ಪ್ರಾಯಶೋ ಲೋಕಸದ್ವೃತ್ತಮಿಷ್ಯತೇ ಗೃಹವಾಸಿನಾಮ್ ॥೪॥

ಮಹೇಶ್ವರ– ಎಲೌ ಮಹಾನುಭಾವಳೇ, ಭಾಮಿನಿಯೇ, ನೀನು ಕೇಳಲು ಬಯಸುತ್ತಿರುವುದು ನ್ಯಾಯವಾಗಿದೆ. ಗೃಹಸ್ಥರಿಗೆ ಲೋಕದಲ್ಲಿ ಹೆಚ್ಚಾಗಿ ಸಚ್ಚಾರಿತ್ರ್ಯವು ಹೇಳಲ್ಪಡುತ್ತದೆ.

ತೇಷಾಂ ಸಂರಕ್ಷಣಾರ್ಥಾಯ ರಾಜಾನಃ ಸಂಸೃತಾ ಭುವಿ ।
ಸರ್ವೇಷಾಮಥ ಮರ್ತ್ಯಾನಾಂ ವೃತ್ತಿಂ ಸಾಮಾನ್ಯತಃ ಶೃಣು ॥೫॥

ಅಂತಹವರ ರಕ್ಷಣೆಗಾಗಿ ಭೂಮಿಯಲ್ಲಿ ರಾಜರು ಇರುತ್ತಾರೆ. ಎಲ್ಲ ಮನುಷ್ಯರಿಗೂ ಇರುವ ಸಾಮಾನ್ಯವಾದ ವೃತ್ತಿಗಳನ್ನು ಕೇಳು.

ವಿದ್ಯಾ ವಾರ್ತಾ ಚ ಸೇವಾ ಚ ಕಾರುತ್ವಂ ನಾಟ್ಯತಾ ತಥಾ ।
ಇತ್ಯೇತೇ ಜೀವನಾರ್ಥಾಯ ಮರ್ತ್ಯಾನಾಂ ವಿಹಿತಾಃ ಪ್ರಿಯೇ ॥೬॥

ಎಲೌ ಪ್ರಿಯೆಯೇ, ವಿದ್ಯೆ, ವಾರ್ತೆ (ಕೃಷಿ-ವಾಣಿಜ್ಯ), ಸೇವೆ, ಕಮ್ಮಾರ, ಬಡಗಿ ಮುಂತಾದವರು ಮಾಡುವ ಕಾರ್ಯಗಳು ನಾಟ್ಯ ಮೊದಲಾದವುಗಳು- ಇವು ಮನುಷ್ಯರ ಜೀವನಾರ್ಥವಾಗಿ ವಿಹಿತವಾಗಿವೆ.

ಅಪಿ ಜನ್ಮಫಲಂ ತಾವನ್ಮಾನುಷಾಣಾಂ ವಿಶೇಷತಃ ।
ವಿಹಿತಂ ತತ್ಸ್ವವೃತ್ತೇನ ತನ್ಮೇ ನಿಗದತಃ ಶೃಣು ॥೭॥

ಮನುಷ್ಯರಿಗೆ ವಿಶೇಷವಾಗಿ ತಮ್ಮ ವೃತ್ತಿಯಿಂದ, ತಮ್ಮ ನಡತೆಯಿಂದ ಜನ್ಮಫಲವು ಹೇಳಲ್ಪಡುತ್ತದೆ. ನಾನು ಹೇಳುವಂತೆ ಅದನ್ನು ಕೇಳು.

ಕರ್ಮಕ್ಷೇತ್ರಂ ಹಿ ಮಾನುಷ್ಯಂ ಸುಖದುಃಖಯುತಾಃ ಪರೇ ।
ಸರ್ವೇಷಾಂ ಪ್ರಾಣಿನಾಂ ತಸ್ಮಾನ್ಮಾನುಷ್ಯೇ ವೃತ್ತಮಿಷ್ಯತೇ ॥೭॥

ಮನುಷ್ಯಜನ್ಮವು ಕರ್ಮಕ್ಷೇತ್ರ. ಉಳಿದ ಪ್ರಾಣಿಗಳು ಕೇವಲ ಸುಖ-ದುಃಖ ಯುಕ್ತಗಳಾಗಿರುತ್ತವೆ. ಕರ್ಮವನ್ನು ಮಾಡುವುದಕ್ಕಾಗಿ ಮನುಷ್ಯನಿಗೆ ಒಂದು ವೃತ್ತಿಯ ಅಪೇಕ್ಷೆ ಇದೆ.

ವಿದ್ಯಾಯೋಗಸ್ತು ಸರ್ವೇಷಾಂ ಪೂರ್ವಮೇವ ವಿಧೀಯತೇ ।
ಕಾರ್ಯಾಕಾರ್ಯಂ ವಿಜಾನಾತಿ ವಿದ್ಯಯಾ ದೇವಿ ನಾನ್ಯಥಾ ॥೮॥

ಎಲ್ಲರಿಗೂ ವಿದ್ಯಾಭ್ಯಾಸವು ಮೊದಲೇ ಹೇಳಲ್ಪಡುತ್ತದೆ. ದೇವಿಯೇ, ವಿದ್ಯೆ ಇದ್ದರೆ ಕಾರ್ಯಾಕಾರ್ಯಗಳನ್ನು ತಿಳಿಯುತ್ತಾನೆ. ಇಲ್ಲದಿದ್ದರೆ ಇಲ್ಲ.

ವಿದ್ಯಯಾ ಸ್ಫೀಯತೇ ಜ್ಞಾನಂ ಜ್ಞಾನಾತ್ ತತ್ತ್ವವಿದರ್ಶನಮ್ ।
ದೃಷ್ಟತತ್ತ್ವೋ ವಿನೀತಾತ್ಮಾ ಸರ್ವಾರ್ಥಸ್ಯ ಚ ಭಾಜನಮ್ ॥೯॥

ಶಕ್ಯಂ ವಿದ್ಯಾವಿನೀತೇನ ಲೋಕೇ ಸಂಜೀವನಂ ಸುಖಮ್ ॥೧೦॥

ವಿದ್ಯೆಯಿಂದ ಶುದ್ಧವಾದ ಜ್ಞಾನವುಂಟಾಗುತ್ತದೆ. ಜ್ಞಾನದಿಂದ ತತ್ತ್ವದರ್ಶನವಾಗುತ್ತದೆ. ತತ್ತ್ವದರ್ಶನವನ್ನು ಪಡೆದವನು ವಿನೀತನಾಗಿ ಎಲ್ಲ ಶುಭಗಳಿಗೂ ಪಾತ್ರನಾಗುತ್ತಾನೆ. ವಿದ್ಯೆಯಿಂದ ವಿನೀತನಾದವನು ಲೋಕದಲ್ಲಿ ಸುಖವಾಗಿ ಜೀವನವನ್ನು ಮಾಡಲು ಸಾಧ್ಯ.

ಆತ್ಮಾನಂ ವಿದ್ಯಯಾ ತಸ್ಮಾತ್ ಪೂರ್ವಂ ಕೃತ್ವಾ ತು ಭಾಜನಮ್ ।
ವಶ್ಯೇಂದ್ರಿಯೋ ಜಿತಕ್ರೋಧೋ ಭೂತ್ವಾऽऽತ್ಮಾನಂ ತು ಭಾವಯೇತ್ ।
ಭಾವಯಿತ್ವಾ ತಥಾऽऽತ್ಮಾನಂ ಪೂಜನೀಯಃ ಸತಾಮಪಿ ॥೧೧॥

ಮೊದಲು ಮನುಷ್ಯನು ತನ್ನನ್ನು ವಿದ್ಯೆಯಿಂದ ಯೋಜಿಸಿಕೊಳ್ಳಬೇಕು. ಅದರಿಂದ ಇಂದ್ರಿಯಗಳನ್ನು ವಶಪಡಿಸಿಕೊಂಡು, ಕ್ರೋಧವನ್ನು ಜಯಿಸಿ ತನ್ನನ್ನು ಶುದ್ಧೀಕರಿಸಿಕೊಳ್ಳಬೇಕು. ಶುದ್ಧೀಕರಿಸಿಕೊಂಡ ಮೇಲೆ ಅವನು ಸಜ್ಜನರಿಂದಲೂ ಪೂಜನೀಯನಾಗುತ್ತಾನೆ.

ಕುಲಾನುವೃತ್ತಂ ವೃತ್ತಂ ವಾ ಪೂರ್ವಮಾತ್ಮಾ ಸಮಾಶ್ರಯೇತ್ ।
ಇಷ್ಯತೇ ಗೃಹವಾಸಾಯ ದಾರಕರ್ಮ ಯಥಾಪುರಮ್ ॥೧೨॥

ಮೊದಲು ಕುಲಕ್ರಮಾಗತವಾದ ವ್ಯಕ್ತಿಯನ್ನೇ ಅವಲಂಬಿಸಬೇಕು. ಹಿಂದಿನವರ ಪದ್ಧತಿಯನ್ನು ಅನುಸರಿಸಿ ಗೃಹಸ್ಥನಾಗುವುದಕ್ಕಾಗಿ ವಿವಾಹವನ್ನು ಮಾಡಿಕೊಳ್ಳಬೇಕು.

ಯದಿ ಚೇದ್ ವಿದ್ಯಯಾ ಚೈವ ವೃತ್ತಿಂ ಕಾಂಕ್ಷೇದಥಾತ್ಮನಃ ।
ರಾಜವಿದ್ಯಾಂ ತು ವಾದೇಽಪಿ ಲೋಕವಿದ್ಯಾಮಥಾಪಿ ವಾ ।
ತೀರ್ಥತಶ್ಚಾಪಿ ಗೃಹ್ಣೀಯಾಚ್ಛುಶ್ರೂಷಾದಿಗುಣೈರ್ಯುತಃ ॥೧೩॥

ವಿದ್ಯೆಯಿಂದ ಜೀವನವನ್ನು ಮಾಡಲು ಬಯಸಿದರೆ ವಾದಕ್ಕೆ ಉಪಯೋಗಿಯಾದ ರಾಜವಿದ್ಯೆಯನ್ನಾಗಲೀ ಲೋಕವಿದ್ಯೆಯನ್ನಾಗಲೀ ಗುರುಸೇವಾದಿಗಳನ್ನು ಮಾಡಿ ಗುರುವಿನಿಂದಲೇ ಸ್ವೀಕರಿಸಬೇಕು.

ಗ್ರಂಥತಶ್ಚಾರ್ಥತಶ್ಚೈವ ದೃಢಂ ಕುರ್ಯಾತ್ಪ್ರಯತ್ನತಃ ।
ಏವಂ ವಿದ್ಯಾಫಲಂ ದೇವಿ ಪ್ರಾಪ್ನುಯಾನ್ನಾನ್ಯಥಾ ನರಃ ।
ನ್ಯಾಯಾದ್ ವಿದ್ಯಾಫಲಂ ಚೇಚ್ಛೇದಧರ್ಮಂ ತತ್ರ ವರ್ಜಯೇತ್ ॥೧೪॥

ಗ್ರಂಥಪಾಠದಿಂದಲೂ ಮತ್ತು ಅರ್ಥಾನುಸಂಧಾನದಿಂದಲೂ ದೃಢವಾಗಿ ಪ್ರಯತ್ನವನ್ನು ಮಾಡಬೇಕು. ಎಲೌ ದೇವಿಯೇ, ಹೀಗಲ್ಲದೆ ವಿದ್ಯೆಯ ಫಲವನ್ನು ಪಡೆಯಲು ಸಾಧ್ಯವಿಲ್ಲ. ನ್ಯಾಯದಿಂದ ವಿದ್ಯೆಯ ಫಲವನ್ನು ಬಯಸಬೇಕು. ವಿದ್ಯೆಯ ಸಂಪಾದನೆಯಲ್ಲಿ ಯಾವ ಅಧರ್ಮವನ್ನೂ ಮಾಡಬಾರದು.

ಯದಿ ಚೇದ್ ವಾರ್ತಯಾ ವೃತ್ತಿಂ ಕಾಂಕ್ಷೇತ ವಿಧಿಪೂರ್ವಕಮ್ ।
ಕ್ಷೇತ್ರೇ ಜಲೋಪಪನ್ನೇ ಚ ತದ್ಯೋಗ್ಯಾಂ ಕೃಷಿಮಾಚರೇತ್ ॥೧೫॥

ಒಂದು ಪಕ್ಷ ಕೃಷಿಯಿಂದ ವಿಧಿಪೂರ್ವಕವಾಗಿ ಜೀವನವನ್ನು ಮಾಡಲು ಬಯಸಿದರೆ ಜಲಸಂಪನ್ನವಾದ ಕ್ಷೇತ್ರದಲ್ಲಿ ಆ ಕ್ಷೇತ್ರಕ್ಕೆ ಯೋಗ್ಯವಾದ ಕೃಷಿಯನ್ನು ಆರಂಭಿಸಬೇಕು.

ವಾಣಿಜ್ಯಂ ವಾ ಯಥಾಕಾಲಂ ಕುರ್ಯಾತ್ ತದ್ದೇಶಯೋಗತಃ ।
ಮೂಲ್ಯಮರ್ಘಂ ಪ್ರಯಾಸಂ ಚ ವಿಚಾರ್ಯೈವ ಫಲೋದಯೌ ॥೧೬॥

ವಾಣಿಜ್ಯವನ್ನು ಮಾಡುವುದಾದರೆ ಆ ಕಾಲ ಮತ್ತು ದೇಶಗಳಿಗೆ ಅನುಗುಣವಾಗಿ ಮಾಡಬೇಕು. ವ್ಯಾಪಾರವನ್ನು ಮಾಡಲು ಬೇಕಾಗುವ ವ್ಯಯ, ಪ್ರಯಾಸ, ವ್ಯಾಪಾರದಿಂದ ಉಂಟಾಗುವ ಫಲ ಇವುಗಳನ್ನು ವಿಚಾರ ಮಾಡಿಯೇ ವ್ಯಾಪಾರವನ್ನು ಮಾಡಬೇಕು.

ಪಶುಸಂಜೀವಕಶ್ಚೈವ ದೇಶೇ ಗಾಃ ಪೋಷಯೇದ್ ಧ್ರುವಮ್ ।
ಬಹುಪ್ರಕಾರಾ ಬಹವಃ ಪಶವಸ್ತಸ್ಯ ಸಾಧಕಾಃ ॥೧೭॥

ಪಶುಸಂರಕ್ಷಣೆಯಿಂದ ಜೀವನವನ್ನು ಮಾಡುವವನು ಯೋಗ್ಯವಾದ ದೇಶದಲ್ಲಿ ಗೋವುಗಳನ್ನು ಚೆನ್ನಾಗಿ ಪೋಷಿಸಬೇಕು. ಜೀವನವನ್ನು ಸಾಧಿಸಿಕೊಡುವ ಪಶುಗಳು ಅನೇಕ ಪ್ರಕಾರವಾಗಿರುತ್ತವೆ.

ಯಃ ಕಶ್ಚಿತ್ಸೇವಯಾ ವೃತ್ತಿಂ ಕಾಂಕ್ಷೇತ ಮತಿಮಾನ್ ನರಃ ।
ಯತಾತ್ಮಾ ಶ್ರವಣೀಯಾನಾಂ ಭವೇದ್ ವೈ ಸಂಪ್ರಯೋಜಕಃ ॥೧೮॥

ಯಾವ ಮನುಷ್ಯನು ಸೇವೆಯಿಂದ ಜೀವಿಸಲು ಬಯಸುತ್ತಾನೆಯೋ ಅಂತಹ ಮೇಧಾವಿಯು ಮನೋಜಯವನ್ನು ಹೊಂದಿ ಉತ್ತಮರ ಸೇವೆಯಲ್ಲಿ ತೊಡಗಬೇಕು.

ಬುದ್ಧ್ಯಾ ವಾ ಕರ್ಮಯೋಗಾದ್ ವಾ ಬೋಧನಾದ್ ವಾ ಸಮಾಶ್ರಯೇತ್।
ಮಾರ್ಗತಸ್ತು ಸಮಾಶ್ರಿತ್ಯ ತದಾ ತತ್ ಸಂಪ್ರಿಯೋ ಭವೇತ್ ॥೧೯॥

ಬುದ್ಧಿಯಿಂದ ಮಾಡುವ ಕೆಲಸವಾಗಲೀ, ಹಸ್ತದಿಂದ ಮಾಡುವ ಕೆಲಸವಾಗಲೀ ಅಥವಾ ಬೋಧನದಿಂದ ಮಾಡುವ ಕೆಲಸವಾಗಲೀ ನ್ಯಾಯವಾಗಿ ಮಾಡಿದರೆ ಅವನು ಎಲ್ಲರಿಗೂ ಪ್ರಿಯನಾಗುತ್ತಾನೆ.

ಯಥಾಯಥಾ ಸ ತುಷ್ಯೇತ ತಥಾ ಸಂತೋಷಯೇತ ತಮ್ ।
ಅನುಜೀವಿಗುಣೋಪೇತಃ ಕುರ್ಯಾದಾತ್ಮಾರ್ಥಮಾಶ್ರಿತಃ ॥೨೦॥

ಸೇವೆಯನ್ನು ಮಾಡುವವನು ತನ್ನ ಸ್ವಾಮಿಯು ಸಂತೋಷಪಡುವಂತೆ ನಡೆದುಕೊಳ್ಳಬೇಕು. ತನ್ನ ಸಲುವಾಗಿ ಅವನನ್ನು ಆಶ್ರಯಿಸಿದವನು ಆಶ್ರಯಿಸಿದವನಲ್ಲಿ ಇರಬೇಕಾದ ಗುಣಗಳನ್ನು ಹೊಂದಿರಬೇಕು.

ವಿಪ್ರಿಯಂ ನಾಚರೇತ್ ತಸ್ಯ ಏಷಾ ಸೇವಾ ಸಮಾಸತಃ ।
ವಿಪ್ರಯೋಗಾತ್ ಪುರಾ ತೇನ ಗತಿಮನ್ಯಾಂ ನ ಲಕ್ಷಯೇತ್ ॥೨೧॥

ತನ್ನ ಸ್ವಾಮಿಗೆ ಅಪ್ರಿಯವನ್ನು ಮಾಡಬಾರದು. ಇದು ಸಂಕ್ಷೇಪವಾಗಿ ಸೇವೆಯನ್ನು ಮಾಡುವ ವಿಧಾನ. ಆ ಸ್ವಾಮಿಯನ್ನು ಬಿಡುವುದಕ್ಕಿಂತ ಮೊದಲು ಬೇರೆ ಮಾರ್ಗವನ್ನು ಅವಲಂಬಿಸಬಾರದು.

ಕಾರುಕರ್ಮ ಚ ನಾಟ್ಯಂ ಚ ಪ್ರಾಯಶೋ ನೀಚಯೋನಿಷು ।
ತಯೋರಪಿ ಯಥಾಯೋಗಂ ನ್ಯಾಯತಃ ಕರ್ಮವೇತನಮ್ ॥೨೨॥

ಮರಗೆಲಸ, ನಾಟ್ಯ ಮೊದಲಾದವು ಹೆಚ್ಚಾಗಿ ನೀಚಯೋನಿಯ ಮನುಷ್ಯರ ಕಾರ್ಯಗಳು. ಅವುಗಳನ್ನು ಮಾಡಿದರೂ ತನ್ನ ಕಾರ್ಯಕ್ಕನುಗುಣವಾಗಿ ನ್ಯಾಯದಿಂದ ಕರ್ಮವೇತನವನ್ನು ಪಡೆಯಬೇಕು.

ಆಜೀವೇಭ್ಯೋಽಪಿ ಸರ್ವೇಭ್ಯಶ್ಚಾರ್ಜವಾದ್ ವೇತನಂ ಹರೇತ್ ।
ಅನಾರ್ಜವಾದಾಹರತಸ್ತತ್ತು ಪಾಪಾಯ ಕಲ್ಪತೇ ॥೨೩॥

ಜೀವನಕ್ಕಾಗಿ ಮಾಡಿದ ಎಲ್ಲಾ ವೃತ್ತಿಗಳಿಂದಲೂ ಋಜುತನದಿಂದ ವೇತನವನ್ನು ಪಡೆಯಬೇಕು. ಋಜುತನವಿಲ್ಲದೆ (ಮೋಸ ಮಾಡಿ) ವೇತನವನ್ನು ಪಡೆದರೆ ಅಲ್ಲಿ ಪಾಪವುಂಟಾಗುತ್ತದೆ.

ಸರ್ವೇಷಾಂ ಪೂರ್ವಮಾರಂಭಾಂಶ್ಚಿಂತಯೇನ್ನಯಪೂರ್ವಕಮ್ ।
ಆತ್ಮಶಕ್ತಿಮುಪಾಯಾಂಶ್ಚ ದೇಶಕಾಲೌ ಚ ಶಕ್ತಿತಃ ।
ಕಾರಣಾನಿ ಪ್ರಯಾಸಂ ಚ ಪ್ರಕ್ಷೇಪಂ ಚ ಫಲೋದಯಮ್ ॥೨೪॥

ಎಲ್ಲಾ ಕಾರ್ಯಗಳನ್ನು ಮಾಡುವಾಗಲೂ ಮೊದಲು ತನ್ನ ಶಕ್ತಿಯನ್ನೂ, ಆ ಕಾರ್ಯವನ್ನು ಮಾಡುವ ಉಪಾಯವನ್ನೂ, ದೇಶ-ಕಾಲಗಳನ್ನೂ, ಆ ಕಾರ್ಯಕ್ಕೆ ಬೇಕಾದ ಸಲಕರಣೆಗಳನ್ನೂ, ತನಗೆ ಉಂಟಾಗುವ ಪ್ರಯಾಸವನ್ನೂ, ಸಂಚರಿಸಬೇಕಾದ ದೂರವನ್ನೂ, ಅದರಿಂದ ಉಂಟಾಗುವ ಫಲವನ್ನೂ ತನ್ನ ಶಕ್ತಿ ಇದ್ದಷ್ಟು ವಿಮರ್ಶೆ ಮಾಡಬೇಕು.

ಏವಮಾದೀನಿ ಸಂಚಿಂತ್ಯ ದೃಷ್ಟ್ವಾ ದೈವಾನುಕೂಲತಾಮ್ ।
ಅತಃ ಪರಂ ಸಮಾರಂಭೇದ್ ಯತ್ರಾತ್ಮಹಿತಮಾಹಿತಮ್ ॥೨೫॥

ಇವುಗಳನ್ನೆಲ್ಲ ಚಿಂತಿಸಿ ದೈವಾನುಕೂಲವಿದ್ದ ಮಾರ್ಗದಲ್ಲಿ ಎಲ್ಲಿ ತನ್ನ ಹಿತವು ಪ್ರತಿಷ್ಠಿತವಾಗಿದೆಯೋ ಅಂತಹ ಕಾರ್ಯವನ್ನು ಆರಂಭಿಸಬೇಕು.

ವೃತ್ತಿಮೇವ ಸಮಾಸಾದ್ಯ ತಾಂ ಸದಾ ಪರಿಪಾಲಯೇತ್ ।
ದೈವಮಾನುಷವಿಘ್ನೇಭ್ಯೋ ನ ಪುನರ್ಭ್ರಶ್ಯತೇ ಯಥಾ ॥೨೬॥

ಒಂದು ವೃತ್ತಿಯನ್ನು ಅವಲಂಬಿಸಿದವನು ದೈವವಿಘ್ನಗಳಿಂದಾಗಲೀ, ಮನುಷ್ಯ ವಿಘ್ನದಿಂದಾಗಲೀ ಅದು ಚ್ಯುತವಾಗದಂತೆ ಅದನ್ನು ರಕ್ಷಿಸಬೇಕು.

ಪಾಲಯನ್ ವರ್ಧಯನ್ ಭುಂಜನ್ ತಾಂ ಪ್ರಾಪ್ಯ ನ ವಿನಾಶಯೇತ್ ।
ಕ್ಷೀಯತೇ ಗಿರಿಸಂಕಾಶಮಶ್ನತೋ ಹ್ಯನಪೇಕ್ಷಯಾ ॥೨೭॥

ವೃತ್ತಿಯನ್ನು ಹೊಂದಿ ಆ ವೃತ್ತಿಯನ್ನು ರಕ್ಷಿಸಿ ನಡೆಸುತ್ತಾ, ಅಭಿವೃದ್ಧಿಪಡಿಸುತ್ತಾ, ಭೋಗಿಸುತ್ತಾ ಇರಬೇಕು. ಅದನ್ನು ನಾಶ ಮಾಡಬಾರದು. ಯಾವ ವೃತ್ತಿಯನ್ನೂ ಮಾಡದೆ ಭೋಗಿಸುವವನ ಧನವು ಪರ್ವತದಷ್ಟಿದ್ದರೂ ಅದು ನಾಶವನ್ನು ಹೊಂದುತ್ತದೆ.

ಆಜೀವೇಭ್ಯೋ ಧನಂ ಪ್ರಾಪ್ಯ ಚತುರ್ಧಾ ವಿಭಜೇದ್ ಬುಧಃ ।
ಧರ್ಮಾಯಾರ್ಥಾಯ ಕಾಮಾಯ ಆಪತ್ಪ್ರಶಮನಾಯ ಚ ॥೨೮॥

ಚತುರ್ಷ್ವಪಿ ವಿಭಾಗೇಷು ವಿಧಾನಂ ಶೃಣು ಶೋಭನೇ ॥೨೯॥

ವಿವೇಕಿಯಾದವನು ಜೀವನವೃತ್ತಿಗಳಿಂದ ಧನವನ್ನು ಸಂಪಾದಿಸಿ, ಧರ್ಮದ ಸಲುವಾಗಿ, ಭೋಗದ ಸಲುವಾಗಿ, ಆಪತ್ತಿನ ಪರಿಹಾರದ ಸಲುವಾಗಿ (ಮತ್ತು ತನ್ನ ಸಲುವಾಗಿ) ಎಂದು ನಾಲ್ಕು ವಿಭಾಗವನ್ನು ಮಾಡಬೇಕು. ಶೋಭನೆಯೇ, ವಿಭಾಗವನ್ನು ಮಾಡುವ ವಿಧಾನವನ್ನು ಕೇಳು.

ಯಜ್ಞಾರ್ಥಂ ಚಾನ್ನದಾನಾರ್ಥಂ ದೀನಾನುಗ್ರಹಕಾರಣಾತ್ ।
ದೇವಬ್ರಾಹ್ಮಣಪೂಜಾರ್ಥಂ ಪಿತೃಪೂಜಾರ್ಥಮೇವ ಚ ॥೩೦॥

ಕುಲಾರ್ಥಂ ಸನ್ನಿವಾಸಾರ್ಥಂ ಕ್ರಿಯಾನಿತ್ಯೈಶ್ಚ ಧಾರ್ಮಿಕೈಃ ।
ಏವಮಾದಿಷು ಚಾನ್ಯೇಷು ಧರ್ಮಾರ್ಥಂ ಸಂತ್ಯಜೇದ್ ಧನಮ್ ।
ಧರ್ಮಕಾರ್ಯೇ ಧನಂ ದದ್ಯಾದನವೇಕ್ಷ್ಯ ಫಲೋದಯಮ್ ॥

ಯಜ್ಞದ ಸಲುವಾಗಿ, ಅನ್ನದಾನದ ಸಲುವಾಗಿ, ದೀನರಿಗೆ ಸಹಾಯವನ್ನು ಮಾಡುವ ಸಲುವಾಗಿ, ದೇವ-ಬ್ರಾಹ್ಮಣ-ಪಿತೃಗಳ ಪೂಜಾರ್ಥವಾಗಿ, ಕುಲಾರ್ಥವಾಗಿ, ನಿತ್ಯ ಧಾರ್ಮಿಕ ಕ್ರಿಯೆಗಳಿಗಾಗಿ, ಇನ್ನೊಬ್ಬಯೋಗ್ಯನಾದ ವ್ಯಕ್ತಿಯನ್ನು ಮನೆಯಲ್ಲಿ ಪೋಷಿಸುವುದಕ್ಕಾಗಿ - ಇವೇ ಮೊದಲಾದ ಕಾರ್ಯಗಳಲ್ಲಿ ಧರ್ಮದ ಸಲುವಾಗಿ ತೆಗೆದಿಟ್ಟ ಭಾಗವನ್ನು ವ್ಯಯ ಮಾಡಬೇಕು. ಧರ್ಮಕಾರ್ಯಕ್ಕಾಗಿ ಧನವ್ಯಯವನ್ನು ಮಾಡುವಾಗ ಅದರ ಫಲವನ್ನು ಕುರಿತು ಚಿಂತಿಸಬಾರದು.

ಐಶ್ವರ್ಯಸ್ಥಾನಲಾಭಾರ್ಥಂ ರಾಜವಾಲ್ಲಭ್ಯಕಾರಣಾತ್ ॥೩೨॥

ವಾರ್ತ್ತಾಯಾಂ ಚ ಸಮಾರಂಭೇ ಭೃತ್ಯಮಿತ್ರಪರಿಗ್ರಹೇ ।
ಆವಾಹೇ ಚ ವಿವಾಹೇ ಚ ಪುತ್ರಾಣಾಂ ವೃತ್ತಿಕಾರಣಾತ್ ॥೩೩॥

ಅರ್ಥೋದಯಸಮಾವಾಪ್ತಾವನರ್ಥಸ್ಯ ವಿಘಾತನೇ ।
ಏವಮಾದಿಷು ಚಾನ್ಯೇಷು ಅರ್ಥಾರ್ಥಂ ವಿಭಜೇದ್ ಧನಮ್ ॥೩೪॥

ಐಶ್ವರ್ಯದ ಲಾಭಕ್ಕಾಗಿ, ಸ್ಥಾನದ ಲಾಭಕ್ಕಾಗಿ, ರಾಜನ ಪ್ರೀತಿಯನ್ನು ಸಂಪಾದಿಸುವುದಕ್ಕಾಗಿ, ವಾಣಿಜ್ಯಕ್ಕಾಗಿ, ಸಮಾರಂಭಗಳಿಗಾಗಿ, ಭೃತ್ಯ-ಮಿತ್ರ ಸ್ವೀಕಾರ ಸಂದರ್ಭದಲ್ಲಿ, ವಿವಾಹ ಸಂದರ್ಭದಲ್ಲಿ, ಪುತ್ರನಿಗೆ ಜೀವನೋಪಾಯ ಕಲ್ಪಿಸುವ ಸಂದರ್ಭದಲ್ಲಿ, ದೇವತಾ ಪ್ರತಿಷ್ಠೆಯಲ್ಲಿ ಧನವನ್ನು ಸಂಪಾದಿಸುವುದರಲ್ಲಿ, ಅನರ್ಥವನ್ನು ನಾಶ ಮಾಡುವುದರಲ್ಲಿ - ಇಂತಹ ಕಾರ್ಯಗಳಲ್ಲಿ ಧನಾರ್ಥವಾಗಿ ತೆಗೆದಿಟ್ಟ ಭಾಗವನ್ನು ವಿನಿಯೋಗಿಸಬೇಕು.

ಅನುಬಂಧಂ ಫಲಂ ಹೇತುಂ ದೃಷ್ಟ್ವಾ ವಿತ್ತಂ ಪರಿತ್ಯಜೇತ್ ।
ಅನರ್ಥಂ ಬಾಧತೇ ಹ್ಯರ್ಥೋ ಅರ್ಥಂ ಚೈವ ಫಲಾನ್ಯುತ ॥೩೫॥

ಧನವನ್ನು ವ್ಯಯ ಮಾಡಿದ ಪರಿಣಾಮಗಳನ್ನೂ, ವ್ಯಯ ಮಾಡುವುದಕ್ಕೆ ಕಾರಣವನ್ನೂ, ವ್ಯಯ ಮಾಡಿದುದರ ಫಲವನ್ನೂ ನೋಡಿ ಧನವನ್ನು ವ್ಯಯ ಮಾಡಬೇಕು. ಅರ್ಥವು ಅನರ್ಥವನ್ನು ಬಾಧಿಸಿ ಅರ್ಥವನ್ನು ತಂದುಕೊಡುತ್ತದೆ.

ನಾಧನಾಃ ಪ್ರಾಪ್ನುವಂತ್ಯರ್ಥಾನ್ನರಾ ಯತ್ನಶತೈರಪಿ ।
ತಸ್ಮಾದ್ ಧನಂ ರಕ್ಷಿತವ್ಯಂ ದಾತವ್ಯಂ ಚ ವಿಧಾನತಃ ॥೩೬॥

ನಿರ್ಧನರಾದವರು ಶತಪ್ರಯತ್ನವನ್ನು ಮಾಡಿದರೂ ಧನವನ್ನು ಸಂಪಾದಿಸುವುದಿಲ್ಲ. ಆದ್ದರಿಂದ ಧನವನ್ನು ರಕ್ಷಿಸಬೇಕು ಮತ್ತು ವಿಧಿಗೆ ಅನುಸಾರವಾಗಿ ದಾನವನ್ನು ಮಾಡಬೇಕು.

ಶರೀರಪೋಷಣಾರ್ಥಾಯ ಆಹಾರಸ್ಯ ವಿಶೇಷಣೇ ।
ನಟಗಾಂಧರ್ವಸಂಯೋಗೇ ಕಾಮಯಾತ್ರಾವಿಹಾರಯೋಃ ॥೩೭॥

ಮನಃಪ್ರಿಯಾಣಾಂ ಸಂಯೋಗೇ ಪ್ರೀತಿದಾನೇ ತಥೈವ ಚ ।
ಏವಮಾದಿಷು ಚಾನ್ಯೇಷು ಕಾಮಾರ್ಥಂ ವಿಸೃಜೇದ್ ಧನಮ್ ॥೩೮॥

ಶರೀರದ ಪೋಷಣೆಯನ್ನು ಮಾಡುವ ಸಲುವಾಗಿ, ವಿಶೇಷವಾದ ಆಹಾರಕ್ಕಾಗಿ, ಸಂಗೀತ-ನಾಟ್ಯಗಳನ್ನು ಅನುಭವಿಸುವುದಕ್ಕಾಗಿ, ವಿಹಾರ ಯಾತ್ರೆಗಳನ್ನು ಮಾಡುವುದಕ್ಕಾಗಿ, ಮನಸ್ಸಿಗೆ ಪ್ರಿಯರಾದವರ ಸಂಪರ್ಕ ಮಾಡುವುದಕ್ಕಾಗಿ, ಪ್ರೀತಿಯಿಂದ ಕೊಡುವ ಧನಕ್ಕಾಗಿ - ಇಂತಹ ಕೆಲಸಗಳಲ್ಲಿ ಕಾಮಾರ್ಥವಾಗಿ ತೆಗೆದಿಟ್ಟ ಧನದ ಭಾಗವನ್ನು ವಿನಿಯೋಗಿಸಬೇಕು.

ವಿಚಾರ್ಯ ಗುಣದೋಷೌ ತು ಮಾತ್ರಯಾ ತತ್ರ ಸಂತ್ಯಜೇತ್ ।
ಚತುರ್ಥಂ ಸನ್ನಿದಧ್ಯಾಚ್ಚ ಆಪದರ್ಥಂ ಶುಚಿಸ್ಮಿತೇ ॥೩೯॥

ಎಲೌ ಶುಚಿಸ್ಮಿತೆಯೇ, ಗುಣ-ದೋಷಗಳನ್ನು ವಿಚಾರ ಮಾಡಿ ಸ್ವಲ್ಪ ಸ್ವಲ್ಪವಾಗಿ ಧನವನ್ನು ಪರಿತ್ಯಜಿಸಬೇಕು. ನಾಲ್ಕನೆಯ ಭಾಗವನ್ನು ಆಪತ್ತಿನ ಪರಿಹಾರಕ್ಕಾಗಿ ಕೂಡಿಡಬೇಕು.

ರಾಜ್ಯಭ್ರಂಶವಿನಾಶಾರ್ಥಂ ದುರ್ಭಿಕ್ಷಾರ್ಥಂ ಚ ಶೋಭನೇ ।
ಮಹಾವ್ಯಾಧಿವಿಮೋಕ್ಷಾರ್ಥಂ ವಾರ್ದ್ಧಕಸ್ಯೈವ ಕಾರಣಾತ್ ॥೪೦॥

ಶತ್ರೂಣಾಂ ಪ್ರತಿಕಾರಾಯ ಸಾಹಸೈಶ್ಚಾಪ್ಯಮರ್ಷಣಾತ್ ।
ಪ್ರಸ್ಥಾನೇ ಚಾನ್ಯದೇಶಾರ್ಥಮಾಪದಾಂ ವಿಪ್ರಮೋಕ್ಷಣೇ ।
ಏವಮಾದಿ ಸಮುದ್ದಿಶ್ಯ ಸನ್ನಿದಧ್ಯಾತ್ ಸ್ವಕಂ ಧನಮ್ ॥೪೧॥

ಎಲೌ ಶೋಭನೆಯೇ, ರಾಜ್ಯಭ್ರಂಶದಿಂದ ಉಂಟಾಗುವ ವಿನಾಶವನ್ನು ತಪ್ಪಿಸಿಕೊಳ್ಳಲು, ದುರ್ಭಿಕ್ಷೆಯಿಂದ ತಪ್ಪಿಸಿಕೊಳ್ಳಲು, ಮಹಾವ್ಯಾಧಿಗಳಿಂದ ಬಿಡುಗಡೆಯನ್ನು ಹೊಂದಲು, ಮುಪ್ಪಿನ ಕಾರಣದಿಂದ ಶತ್ರುಗಳಿಗೆ ಪ್ರತೀಕಾರವನ್ನು ಮಾಡಲು, ಸಹಿಸದವರನ್ನು ದೂರದಲ್ಲಿಡಲು, ನಿವಾಸಕ್ಕಾಗಿ ಇನ್ನೊಂದು ದೇಶಕ್ಕೆ ಹೋಗಲು, ಆಪತ್ತುಗಳನ್ನು ತಪ್ಪಿಸಿಕೊಳ್ಳಲು - ಇಂತಹ ಕಾರ್ಯಗಳಲ್ಲಿ ಆಪತ್ತಿಗಾಗಿ ತೆಗೆದಿಟ್ಟ ಧನದ ಭಾಗವನ್ನು ವ್ಯಯ ಮಾಡಬೇಕು.

ಸುಖಮರ್ಥವತಾಂ ಲೋಕೇ ಕೃಚ್ಛ್ರಾಣಾಂ ವಿಪ್ರಮೋಕ್ಷಣಮ್ ।
ಯಸ್ಯ ನಾಸ್ತಿ ಧನಂ ಕಿಂಚಿತ್ ತಸ್ಯ ಲೋಕದ್ವಯಂ ನ ಚ ॥೪೨॥

ಲೋಕದಲ್ಲಿ ಧನವಿದ್ದವರಿಗೆ ಕಷ್ಟದಿಂದ ಬಿಡುಗಡೆ ಹೊಂದುವುದು ಸುಲಭ. ಧನವಿಲ್ಲದವನಿಗೆ ಈ ಲೋಕವೂ ಇಲ್ಲ, ಪರಲೋಕವೂ ಇಲ್ಲ.

ಅಶನಾದಿಂದ್ರಿಯಾಣೀವ ಸರ್ವಮರ್ಥಾತ್ ಪ್ರವರ್ತತೇ ।
ನಿಧಾನಂ ಮಾತ್ರಯಾ ಕುರ್ಯಾದನ್ಯಥಾ ವಿಲಯಂ ವ್ರಜೇತ್ ।
ಏವಂ ದೇವಿ ಮನುಷ್ಯಾಣಾಂ ಲೋಕೇ ತ್ವಾಜೀವನಂ ಪ್ರತಿ ॥೪೩॥

ಭೋಜನದಿಂದ ಇಂದ್ರಿಯಗಳು ಪ್ರವೃತ್ತಿ ಮಾಡುವಂತೆ ಧನದಿಂದ ಎಲ್ಲವೂ ಪ್ರವೃತ್ತವಾಗುತ್ತವೆ. ಧನವನ್ನು ಸ್ವಲ್ಪ ಸ್ವಲ್ಪವಾಗಿ ಕೂಡಿಡಬೇಕು. ಕೂಡಿಡದಿದ್ದರೆ ಎಲ್ಲವೂ ವಿನಾಶವನ್ನು ಹೊಂದುತ್ತದೆ. ದೇವಿಯೇ, ಮನುಷ್ಯರ ಜೀವನೋಪಾಯವನ್ನು ಕುರಿತು ಲೋಕದಲ್ಲಿ ಹೀಗೆ ವಿಹಿತವಾಗಿದೆ.

ಏವಂಯುಕ್ತಸ್ಯ ಲೋಕಸ್ಯ ಲೌಕ್ಯಂ ವೃತ್ತಂ ಪುನಃ ಶೃಣು ।
ಧನ್ಯಂ ಯಶಸ್ಯಮಾಯುಷ್ಯಂ ಸ್ವರ್ಗೀಯಂ ಪರಮಂ ಯಶಃ ॥೪೪॥

ಇಂತಹ ವಿಧಾನದಿಂದ ಕೂಡಿದ ಲೋಕಕ್ಕೆ ಉಂಟಾಗುವ ಫಲವನ್ನು ಕೇಳು. ಧನವೂ, ಕೀರ್ತಿಯೂ, ಆಯುಷ್ಯವೂ, ಸ್ವರ್ಗಸುಖವೂ ಮತ್ತು ಪರಮಕೀರ್ತಿಯೂ ಉಂಟಾಗುತ್ತದೆ.

ತ್ರಿವರ್ಗೇ ಚ ತಥಾ ಯುಕ್ತಂ ಸರ್ವೇಷಾಂ ಸಂವಿಧೀಯತೇ ।
ತಥಾ ಸಂವರ್ತಮಾನಾಸ್ತು ಲೋಕಯೋರ್ಹಿತಮಾಪ್ನುಯುಃ ॥೪೫॥

ಧರ್ಮಾರ್ಥ ಕಾಮಗಳ ವಿಷಯದಲ್ಲಿ ಎಲ್ಲದರಲ್ಲಿಯೂ ಹೀಗೆ ಯೋಗ್ಯವಾದುದು ವಿಹಿತವಾಗಿದೆ. ಹಾಗೆ ನಡೆದುಕೊಳ್ಳುವವರು ಎರಡು ಲೋಕಗಳಲ್ಲಿಯೂ ಸುಖವನ್ನು ಹೊಂದುತ್ತಾರೆ.

ಕಾಲ್ಯೋತ್ಥಾನಂ ಚ ಶೌಚಂ ಚ ದೇವಬ್ರಾಹ್ಮಣಭಕ್ತತಾ ।
ಗುರೂಣಾಮೇವ ಶುಶ್ರೂಷಾ ಬ್ರಾಹ್ಮಣೇಷ್ವಭಿವಾದನಮ್ ॥೪೬॥

ಪ್ರತ್ಯುತ್ಥಾನಂ ಚ ವೃದ್ಧಾನಾಂ ದೇವಸ್ಥಾನಪ್ರಣಾಮನಮ್ ।
ಅಭಿಮುಖ್ಯಂ ಪುರಸ್ಕೃತ್ಯ ಅತಿಥೀನಾಂ ಚ ಭೋಜನಮ್ ॥೪೭॥

ವೃದ್ಧೋಪದೇಶಕರಣಂ ಶ್ರವಣಂ ಹಿತಪಥ್ಯಯೋಃ ।
ಪೋಷಣಂ ಭೃತ್ಯವರ್ಗಸ್ಯ ಸಾಂತ್ವದಾನಪರಿಗ್ರಹೈಃ ॥೪೮॥

ನ್ಯಾಯತಃ ಕರ್ಮಕರಣಮನ್ಯಾಯಾಹಿತವರ್ಜಿತಮ್ ।
ಸಮ್ಯಗ್ವೃತ್ತಂ ಸ್ವದಾರೇಷು ದೋಷಾಣಾಂ ಪ್ರತಿಷೇಧನಮ್ ॥೪೯॥

ಪುತ್ರಾಣಾಂ ವಿನಯಂ ಕುರ್ಯಾತ್ ತತ್ತತ್ಕಾರ್ಯೇ ನಿಯೋಜನಮ್ ।
ವರ್ಜನಂ ಚಾಶುಭಾರ್ಥಾನಾಂ ಶುಭಾನಾಂ ಜೋಷಣಂ ತಥಾ ॥೫೦॥

ಕುಲೋಚಿತಾನಾಂ ಧರ್ಮಾಣಾಂ ಯಥಾವತ್ ಪರಿಪಾಲನಮ್ ।
ವರ್ಜನಂ ಕಲಹಾದೀನಾಂ ಭಕ್ಷ್ಯಾ ಸಂಶಮನಂ ತಥಾ ॥೫೧॥

ಸತಾಂ ವ್ಯಸನಸಂಯೋಗೇ ಸ್ವಶಕ್ತ್ಯಾಭ್ಯವಪತ್ತಿತಾ ।
ದೀನಾನಾಂ ಸಂಗ್ರಹಂ ಚೈವ ನಾನೃಶಂಸ್ಯವ್ಯಪೇಕ್ಷಯಾ ।
ಅಬದ್ಧಾನೃತಘೋರಾಣಾಂ ವಚನಾನಾಂ ವಿವರ್ಜನಮ್ ॥೫೨॥

ಕುಲಸಂಧಾರಣಂ ಚೈವ ಪೌರುಷೇಣೈವ ಸರ್ವಶಃ ।
ಏವಮಾದಿ ಶುಭಂ ಸರ್ವಂ ತಸ್ಯ ವೃತ್ತಮಿತಿ ಸ್ಮೃತಮ್ ॥೫೩॥

ಬೆಳಗಿನ ಜಾವದಲ್ಲಿ ಏಳುವುದು, ಶೌಚ, ದೇವ-ಬ್ರಾಹ್ಮಣರಲ್ಲಿ ಭಕ್ತಿ, ಗುರುಸೇವೆ, ಬ್ರಾಹ್ಮಣರಿಗೆ ನಮಸ್ಕಾರ, ಹಿರಿಯರ ಎದುರಿಗೆ ಏಳುವುದು, ದೇವಾಲಯದಲ್ಲಿ ನಮಸ್ಕಾರ ಮಾಡುವುದು, ಅತಿಥಿಗಳನ್ನು ಅಭಿಮುಖವಾಗಿ ಸ್ವೀಕರಿಸಿ ಭೋಜನವನ್ನು

ಮಾಡುವುದು, ವೃದ್ಧರು ಉಪದೇಶವನ್ನು ಮಾಡುವಂತೆ ಮಾಡುವುದು, ಹಿತವಾದ ಮತ್ತು ಪಥ್ಯವಾದ ಮಾತುಗಳನ್ನು ಕೇಳುವುದು, ಭೃತ್ಯವರ್ಗವನ್ನು ಪೋಷಿಸುವುದು, ಯಾವ ಕಾರ್ಯವನ್ನು ಮಾಡಿದರೂ ನ್ಯಾಯದಿಂದ ಮಾಡುವುದು, ಅನ್ಯಾಯದ ಸಂಪಾದನೆಯನ್ನು ವರ್ಜಿಸುವುದು, ತನ್ನ ಪತ್ನಿಯರಲ್ಲಿ ಸರಿಯಾಗಿ ನಡೆದುಕೊಳ್ಳುವುದು, ದೋಷಗಳನ್ನು ನಿಷೇಧಿಸುವುದು, ಪುತ್ರರಿಗೆ ಶಿಕ್ಷಣವನ್ನು ಕೊಟ್ಟು ಆಯಾ ಕಾರ್ಯಗಳಲ್ಲಿ ನಿಯೋಜಿಸುವುದು, ಅಶುಭವಾದ ಪದಾರ್ಥಗಳನ್ನು ಬಿಡುವುದು, ಶುಭವಾದ ಪದಾರ್ಥಗಳನ್ನು ಸೇವಿಸುವುದು, ಕುಲೋಚಿತವಾದ ಧರ್ಮಗಳನ್ನು ಸರಿಯಾಗಿ ಪಾಲಿಸುವುದು, ಕಲಹಗಳನ್ನು ಪರಿತ್ಯಜಿಸುವುದು, ಭಕ್ತಿಯಿಂದ ಶಾಂತವಾಗಿರುವುದು, ಸಜ್ಜನರಿಗೆ ವ್ಯಸನ ಉಂಟಾದಾಗ ಶಕ್ತಿ ಇದ್ದಷ್ಟು ಸಹಾಯವನ್ನು ಮಾಡುವುದು, ದೀನರನ್ನು ಫಲಾಪೇಕ್ಷೆ ಇಲ್ಲದೆ ಸಂಗ್ರಹಿಸುವುದು, ಅ(ಸಂ)ಬದ್ಧವಾದ ಸುಳ್ಳಾದ ಮತ್ತು ಘೋರವಾದ ಮಾತುಗಳನ್ನು ಆಡದಿರುವುದು, ಪ್ರಯತ್ನದಿಂದ ಕುಲವನ್ನು ಒಟ್ಟುಗೂಡಿಸುವುದು - ಇವೇ ಮೊದಲಾದ ಕಾರ್ಯಗಳು ಗೃಹಸ್ಥರಿಗೆ ಶುಭವಾದವುಗಳು ಎಂದು ಹೇಳಲ್ಪಡುತ್ತವೆ.

ವೃದ್ಧಸೇವೀ ಭವೇನ್ನಿತ್ಯಂ ಹಿತಾರ್ಥಂ ಜ್ಞಾನಕಾಂಕ್ಷಯಾ ।
ಪರಾರ್ಥಂ ನಾಹರೇದ್ ದ್ರವ್ಯಮನಾಮಂತ್ರ್ಯ ತು ಸರ್ವಥಾ ।
ನ ಯಾಚೇತ ಪರಾನ್ ಧೀರಃ ಸ್ವಬಾಹುಬಲಮಾಶ್ರಯೇತ್ ॥೫೪॥

ಹಿತವನ್ನು ಸಂಪಾದಿಸಲು ಮತ್ತು ಜ್ಞಾನವನ್ನು ಸಂಪಾದಿಸಲು ಯಾವಾಗಲೂ ವೃದ್ಧರನ್ನು ಸೇವಿಸಬೇಕು. ಪರರ ಅನುಮತಿಯಿಲ್ಲದೆ ಅವರ ವಸ್ತುಗಳನ್ನು ಸರ್ವಥಾ ತೆಗೆದುಕೊಳ್ಳಬಾರದು. ಧೀರರಾದವರು ಪರರನ್ನು ಯಾಚಿಸಬಾರದು. ತನ್ನ ಬಾಹುಬಲದಿಂದ ಸಂಪಾದಿಸಿದುದನ್ನೇ ಆಶ್ರಯಿಸಬೇಕು.

ಸ್ವಶರೀರಂ ಸದಾ ರಕ್ಷೇದಾಹಾರಾಚಾರಯೋರಪಿ ।
ಹಿತಂ ಪಥ್ಯಂ ಸದಾಹಾರಂ ಜೀರ್ಣಂ ಭುಂಜೀತ ಮಾತ್ರಯಾ ॥೫೫॥

ಆಚಾರ, ಆಹಾರ ಮತ್ತು ವಿಹಾರಗಳಲ್ಲಿ ಸದಾ ತನ್ನ ಶರೀರಗಳನ್ನು ರಕ್ಷಿಸಿಕೊಳ್ಳಬೇಕು. ಪಥ್ಯವೂ, ಹಿತವೂ ಆದ ಒಳ್ಳೆಯ ಆಹಾರವು ಜೀರ್ಣವಾದ ಮೇಲೆ ಸ್ವಲ್ಪ ಸ್ವಲ್ಪವಾಗಿ ಭೋಜನವನ್ನು ಮಾಡಬೇಕು.

ದೇವತಾತಿಥಿಸತ್ಕಾರಂ ಕೃತ್ವಾ ಸರ್ವಂ ಯಥಾವಿಧಿ ।
ಶೇಷಂ ಭುಂಜೀಚ್ಛುಚಿರ್ಭೂತ್ವಾ ನ ಚ ಭಾಷೇತ ವಿಪ್ರಿಯಮ್ ॥೫೬॥

ಮೊದಲು ವಿಧಿಗೆ ಅನುಗುಣವಾಗಿ ದೇವತಾತಿಥಿಗಳ ಸತ್ಕಾರವನ್ನು ಮಾಡಿ, ಅನಂತರ ಶುಚಿಯಾಗಿ ಶೇಷಾನ್ನವನ್ನು ಭುಂಜಿಸಬೇಕು. ಯಾರಿಗೂ ಅಪ್ರಿಯವಾದ ಮಾತನ್ನಾಡಬಾರದು.

ಪ್ರತಿಶ್ರಯಂ ಚ ಪಾನೀಯಂ ಬಲಿಂ ಭಿಕ್ಷಾಂ ಚ ಸರ್ವತಃ ।
ಗೃಹಸ್ಥಃ ಪ್ರವಹೇದ್ ದದ್ಯಾದ್ ಗಾಶ್ಚ ವತ್ಸಾಂಶ್ಚ ಪೋಷಯೇತ್ ॥೫೭॥

ಗೃಹಸ್ಥನು ನಿವಾಸವನ್ನು, ಧನವನ್ನು, ಅನ್ನವನ್ನು, ಭಿಕ್ಷೆಯನ್ನು ಕೊಡಬೇಕು. ಗೋವುಗಳನ್ನು ಮತ್ತು ಕರುಗಳನ್ನು ಪೋಷಿಸಬೇಕು.

ಬಹಿರ್ನಿಷ್ಕ್ರಮಣಂ ಚೈವ ಕುರ್ಯಾತ್ ಕಾರಣತೋ ದಿವಾ ।
ಮಧ್ಯಾಹ್ನೇ ವಾऽರ್ಧರಾತ್ರೇ ವಾ ಗಮನಂ ನೈವ ರೋಚಯೇತ್ ॥೫೮॥

ಒಂದು ಕಾರಣವಿದ್ದರೆ ಮಾತ್ರ ಹಗಲಿನಲ್ಲಿ ಹೊರಗೆ ಪ್ರಯಾಣ ಮಾಡಬೇಕು. ಮಧ್ಯಾಹ್ನದಲ್ಲಾಗಲೀ, ಅರ್ಧರಾತ್ರಿಯಲ್ಲಾಗಲೀ ಪ್ರಯಾಣವನ್ನು ಇಷ್ಟಪಡಬಾರದು.

ವಿಷಮಾನ್ನಾವಗಾಹೇತ ಸ್ವಶಕ್ಯಾ ಸಮಮಾಚರೇತ್ ।
ಯಥಾऽऽಯವ್ಯಯತಾ ಲೋಕೇ ಗೃಹಸ್ಥಾನಾಂ ಪ್ರಪೂಜಿತಾ ॥೫೯॥

ವಿಷಮವಾದ ಕಾರ್ಯಗಳನ್ನು ಆರಂಭಿಸಬಾರದು. ಶಕ್ತಿ ಇದ್ದಷ್ಟು ಸಾಧು ಕಾರ್ಯಗಳನ್ನೇ ಆರಂಭಿಸಬೇಕು. ಅಂತಹ ಆಯವ್ಯಯಗಳು ಲೋಕದಲ್ಲಿ ಗೃಹಸ್ಥರಿಗೆ ಶ್ಲಾಘಿಸಲ್ಪಡುತ್ತವೆ.

ಅಯಶಸ್ಕರಮರ್ಥಘ್ನಂ ಕರ್ಮ ಯತ್ ಪರಪೀಡನಮ್ ।
ಭಯಾದ್ವಾ ಯದಿ ಲೋಭಾದ್ವಾ ನ ಕುರ್ವೀತ ಕದಾಚನ ॥೬೦॥

ಕೀರ್ತಿನಾಶಕವೂ, ಧನನಾಶಕವೂ, ಪರಪೀಡಕವೂ ಆದ ಕಾರ್ಯವನ್ನು ಭಯದಿಂದಾಗಲೀ, ಲೋಭದಿಂದಾಗಲೀ ಎಂದೂ ಮಾಡಬಾರದು.

ಬುದ್ಧಿಪೂರ್ವಂ ಸಮಾಲೋಕ್ಯ ದೂರತೋ ಗುಣದೋಷತಃ ।
ಆರಭೇತ ತದಾ ಕರ್ಮ ಶುಭಂ ವಾ ಯದಿ ವೇತರತ್ ॥೬೧॥

ಮೊದಲೇ ಬುದ್ಧಿಯಿಂದ ಚೆನ್ನಾಗಿ ಆಲೋಚಿಸಿ ಶುಭಕಾರ್ಯವನ್ನಾಗಲೀ ಅಥವಾ ಅಶುಭಕಾರ್ಯವನ್ನಾಗಲೀ ಆರಂಭಿಸಬೇಕು ಅಥವಾ ನಿವೃತ್ತನಾಗಬೇಕು.

ಆತ್ಮಾ ಸಾಕ್ಷೀ ಭವೇನ್ನಿತ್ಯಮಾತ್ಮನಸ್ತು ಶುಭಾಶುಭೇ ।
ಮನಸಾ ಕರ್ಮಣಾ ವಾಚಾ ನ ಚ ಕಾಂಕ್ಷೇತ ಪಾತಕಮ್ ॥೬೨॥

ತಾನು ಮಾಡುವ ಶುಭಾಶುಭ ಕರ್ಮಗಳಿಗೆ ಯಾವಾಗಲೂ ತಾನೇ ಸಾಕ್ಷಿಯಾಗುತ್ತಾನೆ. ಆದ್ದರಿಂದ ಮನಸ್ಸಿನಿಂದಾಗಲೀ, ಮಾತಿನಿಂದಾಗಲೀ, ಕರ್ಮದಿಂದಾಗಲೀ ಪಾಪವನ್ನು ಬಯಸಬಾರದು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮಪರ್ವಣಿ ಗೃಹಸ್ಥಾನಾಂ ವೃತ್ತಿನಿರೂಪಣಂ ನಾಮ ದ್ವಿಶತತಮೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಯಥೋಷರೇ ಬೀಜಮುಪ್ತಂ ನ ರೋಹೇತ್
ನ ಚಾಸ್ಯೋಪ್ತಾ ಪ್ರಾಪ್ನುಯಾದ್ ಬೀಜಭಾಗಮ್ ।
ಏವಂ ಶ್ರಾದ್ಧಂ ಭುಕ್ತಮನರ್ಹಮಾಣೈಃ
ನ ಚೇಹ ನಾಮುತ್ರ ಫಲಂದದಾತಿ ॥

ಮರುಭೂಮಿಯಲ್ಲಿ ಬಿತ್ತಿದ ಬೀಜವು ಹೇಗೆ
ಬೆಳೆಯುವುದಿಲ್ಲವೋ, ಬೀಜವನ್ನು ಬಿತ್ತಿದವನು
ಬೀಜದಷ್ಟು ಫಲವನ್ನು ಪಡೆಯುವುದಿಲ್ಲವೋ ಹಾಗೆ
ಅನರ್ಹರಾದವರು ಭೋಜನವನ್ನು ಮಾಡಿದರೆ
ಶ್ರಾದ್ಧವು ಈ ಲೋಕದಲ್ಲಾಗಲೀ, ಪರಲೋಕ
ದಲ್ಲಾಗಲೀ ಫಲವನ್ನು ಕೊಡುವುದಿಲ್ಲ.

ISBN: 978-93-88813-37-2